ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ–31

ಅನುಶಾಸನಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೩೧

ಅನುಶಾಸನಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಅನುಶಾಸನಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಅನುಶಾಸನಪರ್ವ - ಭಾಗ ೩೧

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-35-8

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XXII + 569 = 591
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 500/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ, ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	**ಪವನ್ ಪ್ರಿಂಟರ್ಸ್**, ಚಾಮರಾಜಪೇಟೆ, ಬೆಂಗಳೂರು ಮೊ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ಮುಮಃ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

ಅನುಗ್ರಹ ಸಂದೇಶ

ಬ್ರಹ್ಮಮೀಮಾಂಸೆ ಅತ್ಯಂತ ಶ್ರೇಷ್ಠವಾದುದು. ಧರ್ಮರಾಜನು ತನ್ನ ಸಹೋದರರ ಬಳಿ, ವಿದುರನ ಬಳಿ ಪುರುಷಾರ್ಥಗಳಲ್ಲಿ ಯಾವುದು ಶ್ರೇಷ್ಠ ಎಂದು ಪ್ರಶ್ನಿಸುತ್ತಾನೆ. ವಿದುರನು ಧರ್ಮವನ್ನೇ ಶ್ರೇಷ್ಠವೆಂದೂ, ಅರ್ಥವು ಮಧ್ಯಮ, ಕಾಮವು ಅಧಮ ಎಂದು ಹೇಳುತ್ತಾನೆ. ಅರ್ಜುನನು ಅರ್ಥವೇ ಶ್ರೇಷ್ಠವೆಂದೂ; ಅರ್ಥವು ದೈವ-ಮಾನುಷ ಎಂಬುದಾಗಿ ವಿಭಾಗವನ್ನು ಹೊಂದಿದ್ದು, ತತ್ತ್ವಜ್ಞಾನವು ದೈವೀ ಸಂಪತ್ತು ಎನಿಸಿವೆ. ಹಿರಣ್ಯ ಮೊದಲಾದವು ಮಾನುಷ ಸಂಪತ್ತು ಎನಿಸಿದೆ. ಧರ್ಮವು ಮಧ್ಯಮವು ಆಗಿದ್ದು, ಅದು ಸಾಧ್ಯ ಮತ್ತು ಸಾಧನ ಎರಡೂ ಆಗಿದೆ. ಧರ್ಮಕ್ಕೆ ಪ್ರಯೋಜನ ವಿದ್ಯೆ. ವಿದ್ಯೆಯಿಂದ ಮೋಕ್ಷ ಲಭಿಸುತ್ತದೆ. ಸರಿಯಾಗಿ ವಿನಿಯೋಗಿಸಿದ ಮಾನುಷ ಸಂಪತ್ತು ವಿದ್ಯೆಗೆ ಕಾರಣವಾಗುತ್ತದೆ. ಅರ್ಥದಿಂದ ಸಂತುಷ್ಟನಾದ ಗುರುವು ಮೋಕ್ಷವನ್ನು ಕೊಡಲು ಸಮರ್ಥನಾಗುತ್ತಾನೆ. ಕೆಲವೊಮ್ಮೆ ಧರ್ಮದ ಉದ್ದೇಶವಿಲ್ಲದಿದ್ದಾಗಲೂ ಧನದಿಂದ ಗುರುಗಳು, ದೇವತೆಗಳು ತೃಪ್ತರಾಗುತ್ತಾರೆ. ಹಾಗಾಗಿ ಧರ್ಮವು ಅರ್ಥವನ್ನೇ ಅನುಸರಿಸಿರುವುದರಿಂದ ಎಲ್ಲವೂ ಅರ್ಥವನ್ನೇ ಅವಲಂಬಿಸಿದೆ. ಕಾಮವು ನಿಷ್ಫಲವಾದುದರಿಂದ ನಿಷ್ಫಲವೆನಿಸಿದೆ ಎಂದು ಅರ್ಜುನನು ಹೇಳುತ್ತಾನೆ. ಅರ್ಜುನನು ಹೀಗೆ ಪ್ರತಿಪಾದಿಸಿದಾಗ ನಕುಲ-ಸಹದೇವರೂ ಅರ್ಜುನನ ಮಾತನ್ನೇ ಅನುಮೋದಿಸುತ್ತಾರೆ. ಆದರೆ ತತ್ತ್ವಜ್ಞಾನಿಗಳಲ್ಲಿ ಶ್ರೇಷ್ಠನಾದ ಭೀಮಸೇನನು ಇವರೆಲ್ಲರ ವಾದವನ್ನು ನಿರಾಕರಿಸುತ್ತಾ, ಕಾಮಕ್ಕಿಂತ ಶ್ರೇಷ್ಠವಾದ ಪುರುಷಾರ್ಥವೇ ಇಲ್ಲ ಎಂದು ಸಮರ್ಥವಾಗಿ ಪ್ರತಿಪಾದಿಸುತ್ತಾನೆ. ಕಾಮ್ಯವಾದುದನ್ನು ಕಾಮ ಎಂದು ಜ್ಞಾನಿಗಳು ವ್ಯವಹರಿಸುತ್ತಾರೆ. ಪುರುಷಾರ್ಥಗಳೆಲ್ಲವೂ ಕಾಮ್ಯವೆನಿಸಿವೆ. ಪುರುಷಾರ್ಥಗಳನ್ನು ಕಾಮಿಸದಿದ್ದಲ್ಲಿ ಅವುಗಳು ಪುರುಷಾರ್ಥವೇ ಆಗಲಾರವು. ಪುರುಷರು ಬಯಸುವುದರಿಂದಲೇ ಪುರುಷಾರ್ಥ ಎನಿಸಿದೆ. ಈ ಬಯಕೆಯೇ ಕಾಮ ಎನಿಸಿದೆ. ಪುರುಷಾರ್ಥವಲ್ಲದ್ದು ಅಕಾಮ್ಯವೆನಿಸಿದೆ.

ವಿಜ್ಞಾನ, ಭಕ್ತಿ, ಇವೆಲ್ಲವೂ ಪುರುಷಾರ್ಥ ಸಾಧನವಾಗಿವೆ. ಇವುಗಳು ಕಾಮ್ಯವಾಗದಿದ್ದಲ್ಲಿ ಸಾಧನವೆನಿಸಲಾರವು. ಮೋಕ್ಷವು ಸಹ ಕಾಮವಿಲ್ಲದೆ ಹೋದಾಗ ಸಾಧ್ಯ ಎನಿಸುವುದಿಲ್ಲ. ಸರ್ವೋತ್ತಮನಾದ ಶ್ರೀಹರಿಯು ಜಗತ್ತಿನಿಂದ ಕಾಮ್ಯನೇ ಎನಿಸಿದ್ದಾನೆ. ಅವನನ್ನು ಕಾಮಿಸದಿದ್ದಲ್ಲಿ ಅಧೋಗತಿಯನ್ನೇ ಹೊಂದುತ್ತೇವೆ. ಆದ್ದರಿಂದ ಇಚ್ಛೆ ಎನಿಸಿದ ಕಾಮವನ್ನೇ ಶ್ರೇಷ್ಠವಾದ ಪುರುಷಾರ್ಥ ಎನ್ನಬೇಕು. ಆತ್ಮನ ಜೊತೆಗೆ ನಿತ್ಯಸಂಬಂಧ ಹೊಂದಿದ ಪ್ರತಿ ಚೇಷ್ಟೆಗಳಲ್ಲಿಯೂ ಅನುಕೂಲವಾಗುವ ಪುರುಷಾರ್ಥ ಕಾಮ ಎನಿಸಿದೆ. ಲೌಕಿಕ, ಅಲೌಕಿಕ ಪ್ರವೃತ್ತಿಗಳಲ್ಲಿ ಇಚ್ಛೆ ಹುಟ್ಟದೆ ಯಾವ ವ್ಯಾಪಾರವೂ ನಡೆಯದು. ಈ ಇಚ್ಛಾರೂಪವಾದ ಕಾಮವಿಲ್ಲದಿದ್ದಲ್ಲಿ ಚೈತನ್ಯ ಸ್ವರೂಪಿಯಾದ ಜೀವನು ಜಡತುಲ್ಯನಾಗುವ ಅಪಾಯವಿದೆ. ಆದ್ದರಿಂದ ಧರ್ಮ-ಅರ್ಥಗಳಿಂದ ಸಮ್ಮಿಲಿತವಾದ ಕಾಮವೇ ಶ್ರೇಷ್ಠವಾಗಿದೆ. ಈ ಧರ್ಮ-ಅರ್ಥಗಳಲ್ಲಿ ಕಾಮವು ಒಂದಕ್ಕೆ ವಿರೋಧ ಮಾಡಿದಲ್ಲಿ ಮಧ್ಯಮವೆನಿಸುತ್ತದೆ. ಎರಡಕ್ಕೂ ಮಾಡಿದಲ್ಲಿ ಅಧಮವೆನಿಸುತ್ತದೆ. ಎರಡಕ್ಕೂ ಪೂರಕವಾಗಿದ್ದಲ್ಲಿ ಉತ್ತಮವೆನಿಸುತ್ತದೆ. ಸಾಧಕನು ಇದನ್ನು ಅರ್ಥೈಸಿಕೊಂಡು ವ್ಯವಹರಿಸಬೇಕು.

ಶ್ರೀಹರಿಯೇ ಮುಖ್ಯಕಾಮ ಎನಿಸಿದ್ದಾನೆ. ಶ್ರೀಹರಿಯನ್ನು ಬಯಸುವುದೇ ಬದುಕಿನ ಪರಮಪುರುಷಾರ್ಥ ಎಂದು ಭೀಮಸೇನನು ಅತ್ಯಂತ ಶ್ರೇಷ್ಠವಾದ ವಿಚಾರವನ್ನು ಅನುಶಾಸನ ಪರ್ವದ ಕೊನೆಯಲ್ಲಿ ತಿಳಿಸಿರುತ್ತಾನೆ. ಈ ಭೀಮಸೇನನ ವಿಚಾರ ಸಾರ್ವಕಾಲಿಕವಾಗಿ ಶ್ರೇಷ್ಠವೆನಿಸಿದೆ. ಇಂದಿನ ಕಲಿಯುಗದಲ್ಲಿ ನಮ್ಮ ಕಾಮನೆಗಳಲ್ಲಿ ಧರ್ಮ ಮತ್ತು ಅರ್ಥಗಳಿಗೆ ಹೊಂದಿಕೊಳ್ಳದಿದ್ದಾಗ ಅನರ್ಥಗಳುಂಟಾಗುತ್ತವೆ. ಧರ್ಮ, ಅರ್ಥಗಳಿಗೆ ಪೂರಕವಾದ ಕಾಮನೆಯನ್ನು ಸಮಗ್ರ ಜಗತ್ತು ಹೊಂದಬೇಕು ಎಂಬುದು ಭೀಮಸೇನನ ಸಂದೇಶ. ಇಂತಹ ಸಂದೇಶವನ್ನೇ ಕಲಿಯುಗದಲ್ಲಿಯೂ ಆನಂದತೀರ್ಥರಾಗಿ ಹೊತ್ತು ತಂದ ಮಹಾನುಭಾವ ಭೀಮಸೇನ. ಅನುಶಾಸನ ಪರ್ವದಲ್ಲಿ ಸಹಸ್ರಾರು ನೀತಿಗಳು, ಉಪದೇಶಗಳು ಸಮ್ಮಿಲಿತವಾಗಿದ್ದರೂ ಭೀಮಸೇನನ ಈ ಪುರುಷಾರ್ಥ ಮೀಮಾಂಸೆಯು ಎಲ್ಲ ಉಪದೇಶಗಳಿಗಿಂತಲೂ, ನೀತಿಗಳಿಗಿಂತಲೂ ಪ್ರಬಲವೆನಿಸಿದೆ. ಆದ್ದರಿಂದಲೇ ಅನುಶಾಸನಪರ್ವದ ಕೊನೆಯ ಭಾಗದಲ್ಲಿ ಎಲ್ಲರೂ ನೆನಪಿಟ್ಟುಕೊಳ್ಳುವಂತೆ ಭೀಮಸೇನನ ಪುರುಷಾರ್ಥ ಮೀಮಾಂಸೆಯನ್ನು ವ್ಯಾಸರು ಪ್ರತಿಪಾದಿಸಿರುತ್ತಾರೆ.

ಇಂತಹ ಮೌಲಿಕವಾದ ಉಪದೇಶಗಳಿಂದ ಕೂಡಿದ ಅನುಶಾಸನ ಪರ್ವವನ್ನು ನಾಡಿನ ಶ್ರೇಷ್ಠ ವಿದ್ವಾಂಸರಾದ ಪಿ.ಎಸ್. ಶೇಷಗಿರಿ ಆಚಾರ್ಯರು ಅತ್ಯಂತ ಶ್ರದ್ಧಾಭಕ್ತಿಗಳಿಂದ ಮಾಡಿರುತ್ತಾರೆ. ಇವರಿಗೆ ಭಗವಂತನು ಶ್ರೇಯಸ್ಸನ್ನುಂಟು ಮಾಡಲಿ. ಈ ಗ್ರಂಥವನ್ನು ಅಧ್ಯಯನವನ್ನು ಮಾಡುವ ತಮ್ಮೆಲ್ಲರಿಗೂ ಶ್ರೀಹರಿ-ವಾಯು-ಗುರುಗಳ ಅನುಗ್ರಹವಾಗಲಿ ಎಂದು ಆಶಿಸುತ್ತೇವೆ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಪ್ರಕಾಶಕರ ನುಡಿ

ರಾಜಧರ್ಮ, ಪುರುಷಧರ್ಮಗಳ ಬಗ್ಗೆ ವಿಸ್ತಾರವಾದ, ನೀತಿಬೋಧಕವಾದ ಉಪದೇಶಗಳಿಂದ ಕೂಡಿದ ಪರ್ವ ಅನುಶಾಸನ ಪರ್ವ. ಹೆಸರೇ ಹೇಳುವಂತೆ ಕರ್ತವ್ಯಗಳನ್ನು ವಿಸ್ತಾರವಾಗಿ ಭೀಷ್ಮರು ಜಗತ್ತಿಗೆ ಶಾಸನ ಮಾಡಿರುತ್ತಾರೆ. ಧರ್ಮರಾಜನ ನೂರಾರು ಸಂಶಯಗಳನ್ನು ಕೃಷ್ಣನ ಅನುಗ್ರಹದಿಂದ ಪರಿಹರಿಸಿದ ಮಹಾನುಭಾವರು ಭೀಷ್ಮರು. ಶರಶಯ್ಯೆಯಲ್ಲಿ ಪವಡಿಸಿದಾಗಲೂ ತಮ್ಮ ರಣವೇದನೆಗಳನ್ನು ಲೆಕ್ಕಿಸದೇ ಧರ್ಮವನ್ನು ಸ್ಥಾಪಿಸಿದ ಪಿತಾಮಹ ಭೀಷ್ಮರು. ಅವರ ನೀತಿ ಬೋಧಕಗಳಾದ ಉಪದೇಶಗಳನ್ನು ಸ್ವಸ್ಥಕಾಯರಾದ ನಾವು ಕಿಂಚಿತ್ತಾದರೂ ಅನುಷ್ಠಾನ ಮಾಡಿದಲ್ಲಿ ಆತ್ಮೋನ್ನತಿಯನ್ನು ಸಾಧಿಸಬಹುದು. ಅನುಶಾಸನಪರ್ವದಲ್ಲಿ ಶಿಖರ ಪ್ರಾಯವಾಗಿ ಮೂಡಿಬಂದ ಉಪದೇಶ ಉಮಾ-ಮಹೇಶ್ವರರ ಸಂವಾದ. ಮಹಾರುದ್ರದೇವರು ಪಾರ್ವತಿಯನ್ನು ನೆಪಮಾಡಿಕೊಂಡು ಜಗತ್ತಿಗೆ ಕರ್ಮದ ಮರ್ಮವನ್ನು, ಕರ್ಮದಿಂದ ಆಗುವ ಸತ್ಪರಿಣಾಮವನ್ನು, ದುಷ್ಪರಿಣಾಮವನ್ನು ಅತ್ಯಂತ ಸೂಕ್ಷ್ಮವಾಗಿ ವಿಷದವಾಗಿ ವಿವರಿಸಿರುತ್ತಾರೆ. ಆತ್ಮವಿಮರ್ಶೆ ಮಾಡಿಕೊಳ್ಳುವ ಸಜ್ಜನರಿಗೆ ಇದಕ್ಕಿಂತ ಉಪಯುಕ್ತವಾದ ಮಾರ್ಗದರ್ಶನ ಮತ್ತೊಂದು ಇರುವುದಿಲ್ಲ. ಇನ್ನೂರ ಐವತ್ತಕ್ಕೂ ಮೀರಿದ ಅಧ್ಯಾಯಗಳಿಂದ ಒಳಗೊಂಡ ಅನುಶಾಸನ ಪರ್ವವನ್ನು ಅತ್ಯಂತ ಸಮರ್ಥವಾಗಿ ಅನುವಾದಿಸಿಕೊಟ್ಟ ವಿದ್ವಾಂಸರು ಪಿ.ಎಸ್. ಶೇಷಗಿರಿ ಆಚಾರ್ಯರು. ಇವರನ್ನು ತತ್ವಸಂಶೋಧನಾ ಸಂಸತ್ ವತಿಯಿಂದ ಅಭಿನಂದಿಸುತ್ತೇವೆ.

ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಪರಮಾನುಗ್ರಹದಿಂದ ಶ್ರೀಮನ್ಮಹಾಭಾರತದ ಶುದ್ಧಪಾಠದ ಮುದ್ರಣವೆಂಬ ಮಹತ್ಕಾರ್ಯವನ್ನು ಕೈಗೆತ್ತಿಕೊಂಡು, ಅದಕ್ಕೆ ಸಂಬಂಧಪಟ್ಟ ವಿದ್ವಾಂಸರನ್ನು ಒಟ್ಟುಗೂಡಿಸಿ, ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಮಾಡಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ನೀಡುತ್ತಿದ್ದಾರೆ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು. ಆ ನಿಟ್ಟಿನಲ್ಲಿ ಈಗ ಅನುಶಾಸನಪರ್ವದ ಭಾಗವನ್ನು ಅರ್ಥಸಹಿತ ನಾಲ್ಕು ಸಂಪುಟದಲ್ಲಿ ಲೋಕಾರ್ಪಣೆ ಮಾಡುತ್ತಿದ್ದೇವೆ. ಪ್ರಾತಃಸ್ಮರಣೀಯರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಮಹತ್ಸಂಕಲ್ಪವಾದ ಶ್ರೀಮಹಾಭಾರತ

ಮುದ್ರಣವು ಅವರೇ ಹುಟ್ಟುಹಾಕಿದ ತತ್ವಸಂಶೋಧನ ಸಂಸತ್ತಿನಿಂದ ಆಗಬೇಕೆಂದು ಶ್ರೀಪಾದರು ಸಂಕಲ್ಪಿಸಿದ್ದಾರೆ. ಅದು ಕೂಡ ಶ್ರೀಪಾದರ ದ್ವಿತೀಯ ಶ್ರೀಕೃಷ್ಣಪೂಜಾ ಪರ್ಯಾಯದ ಶುಭಾವಸರದಲ್ಲಿ ಬಿಡುಗಡೆಗೊಳ್ಳುತ್ತಿರುವುದು ಯೋಗವೇ ಸರಿ. ಈ ನಮ್ಮ ಸಂಸ್ಥೆಯ ಎಲ್ಲಾ ವಿಷಯಗಳಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ಧಾರೆಯೆರೆದ ನಮ್ಮ ಸಂಸ್ಥೆಯ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಗೆ ಹೃತ್ಪೂರ್ವಕ ಅನಂತ ನಮೋವಾಕ್ಯಗಳನ್ನು ಸಮರ್ಪಿಸುತ್ತಿದ್ದೇನೆ.

ಅದೇ ರೀತಿಯಲ್ಲಿ ಇಂತಹ ಅದ್ಭುತವಾದ ಈ ಕೃತಿ ಹೊರಬರಲು ಆರ್ಥಿಕವಾಗಿ ಎಲ್ಲ ರೀತಿಯ ಸಹಕಾರ ನೀಡಿರುವಂತಹ ನಮ್ಮ ಘನವೆತ್ತ ಕರ್ನಾಟಕ ಸರ್ಕಾರಕ್ಕೆ, ಅದರ ಎಲ್ಲ ಪದಾಧಿಕಾರಿಗಳಿಗೆ ಸಂಶೋಧನ ಸಂಸತ್‌ನ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅದೇ ರೀತಿಯಲ್ಲಿ ಈ ಶ್ರೀಮಹಾಭಾರತ ಶುದ್ಧಪಾಠದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು, ಸಮರ್ಥವಾಗಿ ಆ ಯೋಜನೆ ಕಾರ್ಯಗತ ಆಗುವಲ್ಲಿ ಪೂರ್ಣಪ್ರಮಾಣದಲ್ಲಿ ಶ್ರಮಿಸುತ್ತಿರುವ ನಮ್ಮ ನಾಡಿನ ಖ್ಯಾತ ಪ್ರವಚನಕಾರರೂ, ವಿದ್ವಾಂಸರೂ ಆಗಿರುವಂತಹ ಡಾ॥ ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಮತ್ತು ಇದಕ್ಕಾಗಿ ಶ್ರಮವಹಿಸಿದ ಎಲ್ಲಾ ವಿದ್ವನ್ಮಣಿಗಳಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಶ್ರೀಮಹಾಭಾರತದ ಮುದ್ರಣದ ಬೃಹತ್ ಯೋಜನೆಯಲ್ಲಿ ಈ ಇಳಿ ವಯಸ್ಸಿನಲ್ಲಿಯೂ ನಮ್ಮ ಜೊತೆಗೇ ಇದ್ದುಕೊಂಡು ಸಂಪೂರ್ಣ ಸಹಕಾರವನ್ನು ನೀಡುತ್ತಿರುವ ಶ್ರೀಯುತ ರಘುಪತಿ ತಂತ್ರಿ ಇವರಿಗೂ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ಮೂಲ ಸಂಸ್ಕೃತ ಶ್ಲೋಕಗಳನ್ನು ದೋಷರಹಿತವಾಗಿ ಕನ್ನಡಕ್ಕೆ ಲಿಪ್ಯಂತರವನ್ನು ಮಾಡಿಕೊಟ್ಟು ಹಾಗೂ ಪುಟ ಸಂಯೋಜನೆಯನ್ನು ಮಾಡಿದ ಶ್ರೀಯುತ ಶರತ್‌ಚಂದ್ರ ಎಂ., ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಅವರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳು. ಹಾಗೆಯೇ ತಿದ್ದುಪಡಿಯಲ್ಲಿ ಸಹಕಾರ ಮಾಡಿಕೊಟ್ಟಿರುವ ಶ್ರೀಯುತ ಶ್ರೀವತ್ಸ ಆಚಾರ್ಯ (ಸಿದ್ಧಾಂತಿ) ಇವರಿಗೂ ಧನ್ಯವಾದಗಳು. ಹಾಗೆಯೇ ನಮಗೆ ಬೇಕಾದ ಕ್ಲಪ್ತ ಸಮಯದಲ್ಲಿ ಸುಂದರವಾಗಿ ಮುದ್ರಣವನ್ನು ಮಾಡಿಕೊಟ್ಟಿರುವ ಪವನ್ ಪ್ರಿಂಟರ್ಸ್‌ನ ಮಂಜುನಾಥ್‌ರವರಿಗೂ ನಮ್ಮ ಸಂಸ್ಥೆಯ ಪರವಾಗಿ ವಿಶೇಷ

ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ. ಈ ಕಾರ್ಯದಲ್ಲಿ ಶ್ರಮಿಸಿದ ಸಂಶೋಧನ ಮಂದಿರದ ಎಲ್ಲಾ ಕಾರ್ಯಕಾರಿಣಿ ವರ್ಗಕ್ಕೂ ಈ ಮೂಲಕ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಅನುಶಾಸನಪರ್ವದ ಅಧ್ಯಯನವನ್ನು ಮಾಡಿ ತನ್ಮೂಲಕ ಸಾಧನೆ ಮಾರ್ಗವನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಭಗವಂತನನ್ನು ಒಲಿಸಿಕೊಳ್ಳುವುದರ ಬಗ್ಗೆ ಅವನ ಸಂಕಲ್ಪಕ್ಕೆ ಅನುಗುಣವಾಗಿ ಅವನ ಪ್ರೇರಣೆಯಂತೆ ಎಲ್ಲರೂ ಕೈ ಜೋಡಿಸುವ ಮೂಲಕ ಶ್ರೀಕೃಷ್ಣನ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ ಎಂದು ಅಪೇಕ್ಷಿಸುತ್ತಿದ್ದೇನೆ.

ಪ್ರಕಾಶಕರು

ಡಾ. ವಂಶೀಕೃಷ್ಣಾಚಾರ್ಯ ಪುರೋಹಿತ್

ನಿರ್ದೇಶಕರು, ತತ್ತ್ವಸಂಶೋಧನಸಂಸತ್,

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಅನುಶಾಸನ ಪರ್ವವನ್ನು ಕುರಿತು

ಅನುಶಾಸನ ಪರ್ವವು ಮಹಾಭಾರತದ ಹದಿಮೂರೆಯ ಪರ್ವ. ಇದನ್ನು ಆನುಶಾಸನಿಕ ಪರ್ವವೆಂದೂ ಕರೆಯುತ್ತಾರೆ. ಇದರಲ್ಲಿ ನಮಗೆ ದೊರೆತಂತೆ 257 ಅಧ್ಯಾಯಗಳಿವೆ. ಕೆಲವು ಮುದ್ರಿತ ಮತ್ತು ಹಸ್ತಪ್ರತಿಗಳಲ್ಲಿ ಅಧ್ಯಾಯಗಳ ಸಂಖ್ಯೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದ್ದರೂ ಶ್ಲೋಕಗಳು ಸಮವಾಗಿವೆ. ಒಂದು ಪುಸ್ತಕದಲ್ಲಿರುವ ಒಂದೇ ಅಧ್ಯಾಯವು ಇನ್ನೊಂದು ಪ್ರತಿಯಲ್ಲಿ ಎರಡು ಅಧ್ಯಾಯಗಳಾಗಿರುತ್ತವೆ. ಕುಂಭಕೋಣ ಪ್ರತಿಯಲ್ಲಿ ಮಾತ್ರ ಉಳಿದೆಲ್ಲ ಪ್ರತಿಗಳಿಗಿಂತ ಹೆಚ್ಚಿನ ಸಂಖ್ಯೆಯ ಶ್ಲೋಕಗಳಿವೆ. ಈ ಪರ್ವದಲ್ಲಿ ದಾನ-ಧರ್ಮಪರ್ವ ಮತ್ತು ಭೀಷ್ಮ ಸ್ವರ್ಗಾರೋಹಣ ಪರ್ವ ಎಂದು ಎರಡನೇ ಅವಾಂತರ ಪರ್ವಗಳು. ಅದರಲ್ಲಿಯೂ ದಾನ-ಧರ್ಮಪರ್ವವು 255 ಅಧ್ಯಾಯಗಳಲ್ಲಿ ವ್ಯಾಪಿಸಿದೆ. ಕೊನೆಯ ಎರಡು ಅಧ್ಯಾಯಗಳು ಮಾತ್ರ ಭೀಷ್ಮಸ್ವರ್ಗಾರೋಹಣ ಪರ್ವಕ್ಕೆ ಸೇರುತ್ತವೆ.

ದಾನ-ಧರ್ಮಪರ್ವದಲ್ಲಿ ಹೆಸರೇ ತಿಳಿಸುವಂತೆ ದಾನಕ್ಕೆ ಮತ್ತು ಧರ್ಮಕ್ಕೆ ಸಂಬಂಧಿಸಿದ ಅನೇಕಾನೇಕ ವಿಷಯಗಳು ನಿರೂಪಿಸಲ್ಪಡುತ್ತವೆ. ವರ್ಣಧರ್ಮ, ಆಶ್ರಮ ಧರ್ಮ, ರಾಜಧರ್ಮ, ಸ್ತ್ರೀಧರ್ಮ ಎಲ್ಲವೂ ಇದರಲ್ಲಿ ಒಳಗೊಂಡಿವೆ. ಅದರಲ್ಲಿಯೂ ಈ ಪರ್ವದ ಉತ್ತರಭಾಗದಲ್ಲಿ ಬರುವ ಉಮಾ-ಮಹೇಶ್ವರ ಸಂವಾದವಂತೂ ನಮ್ಮಂತಹ ಸಾಮಾನ್ಯ ಜನರಿಗೆ ಬರುವ ಎಲ್ಲಾ ಸಂಶಯಗಳಿಗೂ ಪರಿಹಾರವನ್ನು ನೀಡುತ್ತದೆ.

ಆಚಾರ್ಯರು ತಮ್ಮ ಗ್ರಂಥಗಳಲ್ಲಿ ಅಲ್ಲಲ್ಲಿ ಉದಾಹರಿಸಿರುವ ಶ್ಲೋಕಗಳು ಈ ಪರ್ವದಲ್ಲಿ ಕಂಡುಬರುತ್ತವೆ. '**ಕೃಷ್ಣೋ ಯಜ್ಞೈರಿಜ್ಯತೇ ವೀತಮೋಹೈಃ**' ಎಂಬ ತಾತ್ಪರ್ಯ ನಿರ್ಣಯದಲ್ಲಿ ಉದಾಹರಿಸಿದ ಶ್ಲೋಕವು ಇಲ್ಲಿ 15-11ರಲ್ಲಿದೆ. ಇದೇ ಶ್ಲೋಕವು ಆದಿಪರ್ವದ ಪ್ರಾರಂಭದಲ್ಲಿಯೂ ಇದೆ. '**ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯೇಽವಿಜಾನತಃ । ಉತ್ಪಥಂ ಪ್ರತಿಪನ್ನಸ್ಯ ಕಾರ್ಯಂ ಭವತಿ ಶಾಸನಮ್॥** ಎಂಬ ಶ್ಲೋಕವು ಹತ್ತೊಂಬತ್ತನೆಯ ಅಧ್ಯಾಯದಲ್ಲಿದೆ. '**ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ**' ಎಂಬ ಶ್ಲೋಕ 69-53 ರಲ್ಲಿದೆ. '**ಆನ್ವೀಕ್ಷಿಕೀಂ ತರ್ಕವಿದ್ಯಾಮನುರಕ್ತೋ ನಿರರ್ಥಿಕಾಂ**' ಎಂಬ ಸೂತ್ರಭಾಷ್ಯೋದಾಹೃತ ಶ್ಲೋಕವು 66-12 ರಲ್ಲಿ ದೊರೆಯುತ್ತದೆ. ಹಾಗೆಯೇ ಸೂತ್ರಭಾಷ್ಯದಲ್ಲಿ ಉದಾಹೃತವಾದ '**ಅಲ್ಪಮಾತ್ರಂ ಕೃತೋ ಧರ್ಮಃ ಭವೇದ್ ಜ್ಞಾನವತೋ ಮಹಾನ್ । ಮಹಾನಪಿ ಕೃತೋ ಧರ್ಮೋ ಹ್ಯಜ್ಞಾನಾಂ ನಿಷ್ಫಲೋ ಭವೇತ್**' ಎಂಬ ಶ್ಲೋಕವು

211-28ರಲ್ಲಿ ದೊರೆಯುತ್ತದೆ. **'ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ । ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ'** ಎಂಬ ಶ್ಲೋಕವು 175-11 ಆಗಿದೆ. ಹಾಗೆಯೇ ಭಾಗವತತಾತ್ಪರ್ಯದಲ್ಲಿ ಉದಾಹೃತವಾದ **'ಊರ್ಧ್ವಂ ಪ್ರಾಣಾ ಹ್ಯುತ್ಕ್ರಾಮಂತಿ ಯೂನಃ ಸ್ಥವಿರ ಆಗತೇ । ಪ್ರತ್ಯುತ್ಥಾನಾಭಿವಾದಾಭ್ಯಾಂ ಪುನಸ್ತಾನ್ ಪ್ರತಿಪದ್ಯತೇ'** ಎಂಬ ಶ್ಲೋಕವು 157-32ರಲ್ಲಿ ದೊರೆಯುತ್ತದೆ. ಹೀಗೆ ಅನೇಕ ಶ್ಲೋಕಗಳು ಅಲ್ಲಲ್ಲಿ ದೊರೆಯುತ್ತದೆ.

ಅನುಶಾಸನ ಪರ್ವದ ಬಹುಮುಖ್ಯಭಾಗವೆಂದರೆ ವಿಷ್ಣುಸಹಸ್ರನಾಮಸ್ತೋತ್ರ. **'ಭಾರತಂ ಸರ್ವಶಾಸ್ತ್ರೇಷು ಭಾರತೇ ಗೀತಿಕಾ ವರಾ । ವಿಷ್ಣೋಃ ಸಹಸ್ರನಾಮಾಪಿ ಜ್ಞೇಯಂ ಪಾಠ್ಯಂ ಚ ತದ್ ದ್ವಯಮ್'** ಎಂಬ ಪುರಾಣ ಪ್ರಸಿದ್ಧವಾದ ಎಲ್ಲಾ ಮತಾಚಾರ್ಯರಿಗೂ ಸಮ್ಮತವಾದ ವಚನವು ಸಹಸ್ರನಾಮದ ಮಹತ್ವವನ್ನು ತಿಳಿಸುತ್ತದೆ. **'ತ್ರಯೋऽರ್ಥಾಃ ಸರ್ವವೇದೇಷು ದಶಾರ್ಥಾಃ ಸರ್ವಭಾರತೇ । ವಿಷ್ಣೋಃ ಸಹಸ್ರನಾಮಾಪಿ ನಿರಂತರಶತಾರ್ಥಕಮ್'** ಎಂಬ ಪ್ರಮಾಣವಚನವು ವಿಷ್ಣು ಸಹಸ್ರನಾಮದಲ್ಲಿ ಬರುವ ಪ್ರತಿಯೊಂದು ನಾಮಕ್ಕೂ ನೂರು ಅರ್ಥಗಳಿವೆಯೆಂದು ಹೇಳುತ್ತದೆ. ವಿಶ್ವಶಬ್ದಕ್ಕೆ ಪ್ರಕೃತಿ ಪ್ರತ್ಯಯಗಳ ವಿಶ್ಲೇಷಣೆಯಿಂದ ಶ್ರೀಮದಾಚಾರ್ಯರು ನೂರು ಅರ್ಥಗಳನ್ನು ಹೇಳಿದ ಪ್ರಸಂಗವು ಮಧ್ವವಿಜಯದಲ್ಲಿ ಉಲ್ಲೇಖಗೊಂಡಿದೆ. ಕೇವಲ ವಿಷ್ಣುಸಹಸ್ರನಾಮಕ್ಕೇ ಅನೇಕ ವ್ಯಾಖ್ಯಾನಗಳಿವೆ. ಬೇರೆ ಬೇರೆ ವ್ಯಾಖ್ಯಾನಕಾರರು ಬೇರೆ ಬೇರೆ ರೀತಿಯಲ್ಲಿ ಪದಚ್ಛೇದವನ್ನು ಮಾಡಿದರೂ ಕೊನೆಯಲ್ಲಿ ಸಾವಿರಸಂಖ್ಯೆಗೆ ಸರಿಮಾಡಿದ್ದಾರೆ. ಮಾಧ್ವಸಂಪ್ರದಾಯದಲ್ಲಿಯೇ ವಿದ್ಯಾಧಿರಾಜರ, ಸತ್ಯಸಂಧರ, ರಘುನಾಥತೀರ್ಥರ ವ್ಯಾಖ್ಯಾನಗಳು ಪ್ರಸಿದ್ಧವಾಗಿವೆ. ಇವಲ್ಲದೆ ಅಪ್ರಕಟಿತವಾದ ಇನ್ನೂ ಅನೇಕ ವ್ಯಾಖ್ಯಾನಗಳಿವೆ. ಇವುಗಳಲ್ಲಿ ರಘುನಾಥ ತೀರ್ಥರ (ಶಿಷ್ಟತಾತ್ಪರ್ಯಚಂದ್ರಿಕಾಚಾರ್ಯರ) ವ್ಯಾಖ್ಯಾನವು ವಿಶಿಷ್ಟವಾದುದು. ಉಳಿದವರು ಕೋಶ, ವ್ಯಾಕರಣಗಳಿಗೆ ಅನುಸಾರ ಹಾಗೂ ಅರ್ಥವನ್ನು ಮಾಡಿದರೆ ರಘುನಾಥತೀರ್ಥರ ಕ್ರಮವೇ ಬೇರೆ ವಿಷ್ಣುಸಹಸ್ರನಾಮದ ಪ್ರತಿನಾಮಕ್ಕೂ ಮತ್ತು ಬೃಹತೀಸಹಸ್ರದ ಪ್ರತಿ ಬೃಹತಿಗೂ ಇರುವ ವ್ಯಾಖ್ಯಾನ-ವ್ಯಾಖ್ಯೇಯಭಾವರೂಪವಾದ ಸಂಗತಿಯನ್ನು ಆಚಾರ್ಯರು ಐತರೇಯ ಭಾಷ್ಯದಲ್ಲಿ ಹೇಳಿದ್ದಾರೆ. ರಘುನಾಥ ತೀರ್ಥರು ಪ್ರತಿಯೊಂದು ಬೃಹತಿಗೂ ವ್ಯಾಖ್ಯಾನವನ್ನು ಮಾಡಿ ಅದರಿಂದ ಪ್ರತಿಪಾದ್ಯವಾದ ಸಹಸ್ರನಾಮ ಪ್ರತಿಪಾದ್ಯವಾದ ಮೂರ್ತಿಯನ್ನು ಸಹಸ್ರನಾಮದ ಆಯಾ ನಾಮದ ನಿರ್ವಚನಲಭ್ಯವಾದ ಅರ್ಥವು ಬೃಹತೀಸಹಸ್ರದ ವಿಹೃತವಾದ ಮಂತ್ರದ ಯಾವ ಪದದಿಂದ ಅಥವಾ ಪದಗಳಿಂದ ದೊರೆಯುತ್ತದೆ ಎಂದು ತೋರಿಸಿ ಅಪೂರ್ವವಾದ ವ್ಯಾಖ್ಯಾನವನ್ನು ಮಾಡಿದ್ದಾರೆ.

ವಿಷ್ಣುಸಹಸ್ರನಾಮದಲ್ಲಿ ಪ್ರಾಣ, ವಸುಪ್ರದ, ಅಕ್ಷೋಭ್ಯ ಮೊದಲಾದ ಅನೇಕ ನಾಮಗಳು ಪುನರುಕ್ತವಾಗಿವೆ. ಕೆಲವು ವ್ಯಾಖ್ಯಾನಗಳಲ್ಲಿ ಒಂದೇ ಅರ್ಥವನ್ನು ಬರೆದಿದ್ದರೂ ಪುನರುಕ್ತಿದೋಷವಿಲ್ಲ. ಏಕೆಂದರೆ ಅದನ್ನು ಬಿಟ್ಟು ಇನ್ನೂ ತೊಂಬತ್ತೊಂಬತ್ತು ಬೇರೆ ಅರ್ಥಗಳಿವೆ. ರಘುನಾಥತೀರ್ಥರ ವ್ಯಾಖ್ಯಾನದಲ್ಲಿಯೂ ಒಂದೇ ನಾಮಕ್ಕೆ ಬೇರೆ ಬೇರೆ ಕಡೆ ಬೇರೆ ಬೇರೆ ಬೃಹತಿಗಳೇ ದೊರೆಯುವುದರಿಂದ ಪುನರುಕ್ತಿದೋಷಕ್ಕೆ ಅವಕಾಶವೇ ಇಲ್ಲದಂತಾಗಿದೆ. ಸಾವಿರ ನಾಮಗಳಲ್ಲಿ ವಾದಿರಾಜರು ಲಕ್ಷಾಲಂಕಾರದಲ್ಲಿ ಸುಮಾರು 380 ನಾಮಗಳಿಗೆ ವ್ಯಾಖ್ಯಾನವನ್ನು ಮಾಡಿದ್ದಾರೆ. ಅಷ್ಟರಲ್ಲಿಯೇ ಪುನರುಕ್ತವಾದ ನಾಮಗಳಿಗೆ ಬೇರೆ ಬೇರೆ ಸ್ಥಳದಲ್ಲಿ ಬೇರೆ ಬೇರೆ ಅರ್ಥವನ್ನು ಬರೆದಿದ್ದಾರೆ ಎಂಬುದು ಗಮನಿಸಬೇಕಾದ ಅಂಶ.

ವಿಷ್ಣುಸಹಸ್ರನಾಮದ ಇನ್ನೊಂದು ವೈಶಿಷ್ಟ್ಯವೆಂದರೆ ಅದರ ಪ್ರಾರಂಭ. ಕೃಷ್ಣಾಷ್ಟೋತ್ತರಶತನಾಮಸ್ತೋತ್ರವು ಕೃಷ್ಣನಾಮದಿಂದ ಪ್ರಾರಂಭವಾಗುತ್ತದೆ. ವೇಂಕಟೇಶ ಸ್ತೋತ್ರವು ವೆಂಕಟೇಶನಾಮದಿಂದ ಪ್ರಾರಂಭವಾಗುತ್ತದೆ. ವಾಸುದೇವ ಸಹಸ್ರನಾಮ ಸ್ತೋತ್ರವು ವಾಸುದೇವ ನಾಮದಿಂದ ಪ್ರಾರಂಭವಾಗುತ್ತದೆ. ವಿಷ್ಣುಸಹಸ್ರ ನಾಮಸ್ತೋತ್ರವು ಮಾತ್ರ ನಪುಂಸಕಲಿಂಗದ ವಿಶ್ವಂ ಎಂಬ ನಾಮದಿಂದ ಪ್ರಾರಂಭವಾಗುತ್ತದೆ. ಇದಕ್ಕೆ ವ್ಯಾಖ್ಯಾನ ಮಾಡುವವರು ಶಾಸ್ತ್ರ ಮತ್ತು ತಮ್ಮ ಪ್ರತಿಭೆಗೆ ಅನುಸಾರವಾಗಿ ಬೇರೆ ಬೇರೆ ಸಮರ್ಥನೆಗಳನ್ನು ನೀಡಿದ್ದಾನೆ. 'ವಿಶ್ವೋ ವಾಯುಃ' ಎಂಬ ಶ್ರುತಿ ಇರುವುದರಿಂದ ವಾಯುದೇವರ ಪ್ರತೀಕದಲ್ಲಿಯೇ ವಿಷ್ಣುವಿನ ಉಪಾಸನೆ- ಯನ್ನು ಮಾಡಬೇಕೆಂಬುದು ಉಪನಿಷತ್ತುಗಳ ಸಾರವಾದುದರಿಂದ ವಿಶ್ವಶಬ್ದವು ಮೊದಲಿನಲ್ಲಿ ಬಂದಿದೆ ಎಂಬುದು ಒಂದು ಸಮರ್ಥನೆ. ಬೃಹತೀಸಹಸ್ರದ ಮೊದಲನೆಯ ಮಂತ್ರವಾದ **'ತದಿದಾಸ ಭುವನೇಷು ಜ್ಯೇಷ್ಠ ಪ್ರ ನದಂ ವ ಓದತೀನಾಮ್'** ಎಂಬಲ್ಲಿ 'ಪ್ರಾಣೋ ವೈ ನದಃ' ಎಂಬ ಶ್ರುತಿಗೆ ಅನುಸಾರವಾಗಿ ಪ್ರಾಣನಿಗೆ ಜ್ಞಾನಾದಿಗಳನ್ನು ನೀಡಿ ಪೂರಣ ಮಾಡುತ್ತಾನೆ ಎಂದು ಅರ್ಥವು ದೊರೆಯುವುದರಿಂದ **'ವಿಶ್ವಂ ವಾಯುಂ ವಾತಿ ಗಂಧಯತಿ, ಜ್ಞಾಪಯತಿ'** ಎಂಬ ವ್ಯುತ್ಪತ್ತಿಯಿಂದ ಅದೇ ಅರ್ಥವು ದೊರೆಯುವುದರಿಂದ ವಿಶ್ವ ಶಬ್ದವು ಮೊದಲಿನಲ್ಲಿದೆ ಎಂದು ರಘುನಾಥತೀರ್ಥರ ಸಮರ್ಥನೆ. ವಿಶ್ವಶಬ್ದದ ನಪುಂಸಕಲಿಂಗವು ವಿಶ್ವಶಬ್ದ ವಾಚ್ಯನಾದ ವಿಷ್ಣುವೇ ನಪುಂಸಕ ಲಿಂಗಾಂತವಾದ ಬ್ರಹ್ಮಶಬ್ದದಿಂದ ವಾಚ್ಯನಾದವನು ಎಂದು ಸೂಚಿಸುವುದಕ್ಕಾಗಿ ಎಂದು ವಾದಿರಾಜರು ಹೇಳಿದ್ದಾರೆ. ಈ ವಿಶ್ವಶಬ್ದವು ಸರ್ವನಾಮವಲ್ಲ. ವಿಷ್ಣುವಿನ ನಾಮ ಮಾತ್ರ **'ವಿಷ್ಣೋರ್ನಾಮಸಹಸ್ರಂ ಮೇ ಶೃಣು ಪಾಪಭಯಾಪಹಮ್'** ಎಂದು ಉಪಕ್ರಮದಲ್ಲಿ ವಿಷ್ಣುವಿನ ನಾಮವನ್ನೇ ಹೇಳುತ್ತೇನೆ

ಎಂದು ಭೀಷ್ಮರ ಪ್ರತಿಜ್ಞೆ ಇದೆ. ವಿಶ್ವಶಬ್ದವು ಸರ್ವನಾಮವಾದರೆ ಅದು ಮಂಗಳಾಮಂಗಳಾತ್ಮಕವಾದ ಸಮಸ್ತವಾದ ಜಗತ್ತನ್ನೂ ಹೇಳುವುದರಿಂದ ಅಮಂಗಳವಾಚಿಯೂ ಆದ ಒಂದು ನಾಮವು ಮಂಗಳಮಯವಾದ ಈ ಸ್ತೋತ್ರದ ಆದಿಯಲ್ಲಿ ಇರಲು ಸಾಧ್ಯವೇ ಇಲ್ಲ ಎಂಬುದು ವಾದಿರಾಜರ ಸಮರ್ಥನೆ. ಆದ್ದರಿಂದ ಸಹಸ್ರನಾಮದಿಂದ ಅರ್ಚನೆಯನ್ನು ಮಾಡುವಾಗ ವಿಶ್ವಾಯ ನಮಃ ಎಂದು ಹೇಳಬೇಕೇ ಹೊರತು ವಿಶ್ವಸ್ಮೈ ನಮಃ ಎಂದು ಹೇಳಬಾರದು ಎಂದು ನಿಶ್ಚಿತವಾಗುತ್ತದೆ.

ವಿಷ್ಣುಸಹಸ್ರನಾಮಗಳ ಅರ್ಥವನ್ನು ಬರೆಯುತ್ತಾ ಈ ನಮ್ಮ ಪುಸ್ತಕದಲ್ಲಿ ಲಕ್ಷಾಲಂಕಾರವು ಇರುವ ಸ್ಥಳಗಳಲ್ಲಿ ಅದಕ್ಕೆ ಅನುಗುಣವಾಗಿಯೇ ಅರ್ಥವನ್ನು ಕೊಟ್ಟಿದ್ದೇವೆ. ಲಕ್ಷಾಲಂಕಾರವಿಲ್ಲದ ಸ್ಥಳಗಳಲ್ಲಿ ಸಗ್ರಿ ರಾಘವೇಂದ್ರ ಉಪಾಧ್ಯಾಯರು ಸರ್ವಮೂಲಾದಿ ಗ್ರಂಥಗಳನ್ನು ಪರಿಶೀಲಿಸಿ ವಿಸ್ತಾರವಾಗಿ ಅರ್ಥಗಳನ್ನು ಬರೆದಿರುವ ಅವರ 'ವಿಷ್ಣುಸಹಸ್ರನಾಮ' ಪುಸ್ತಕದಿಂದ ಒಂದೊಂದು ಅರ್ಥವನ್ನು ಮಾತ್ರ ಸಂಗ್ರಹಿಸಿ ಬರೆದಿದ್ದೇವೆ. ವಿಶೇಷವಾಗಿ ವಿಷ್ಣುಸಹಸ್ರನಾಮವನ್ನು ಅಧ್ಯಯನ ಮಾಡುವವರು ಸಗ್ರಿ ರಾಘವೇಂದ್ರ ಉಪಾಧ್ಯಾಯರ ಪುಸ್ತಕವನ್ನೇ ಅವಲೋಕನ ಮಾಡಬೇಕು.

ಅನುಶಾಸನಪರ್ವದಲ್ಲಿ ವಿಷ್ಣುಸಹಸ್ರನಾಮ ಸ್ತೋತ್ರವು ಬರುವುದಕ್ಕಿಂತ ಸ್ವಲ್ಪ ಮೊದಲಿನ ಭಾಗದಲ್ಲಿ ಶಿವಸಹಸ್ರನಾಮ ಸ್ತೋತ್ರವು ಬರುತ್ತದೆ. ಅಲ್ಲಿ ಅದರ ಹಿಂದಿನ ಮತ್ತು ಮುಂದಿನ ಭಾಗಗಳಲ್ಲಿ ಶಿವನೇ ಸರ್ವೋತ್ತಮನೆಂದೂ ಜಗತ್ತಿನ ಸೃಷ್ಟ್ಯಾದಿ ಕರ್ತನೆಂದೂ ಹೇಳಲ್ಪಟ್ಟಿದೆ. ಅದು ಶ್ರೀಕೃಷ್ಣನು ಕೈಲಾಸಯಾತ್ರೆಯನ್ನು ಕೈಗೊಂಡ ಸಂದರ್ಭವನ್ನು ವರ್ಣಿಸುವ ಪ್ರಕರಣ. ಪ್ರದ್ಯುಮ್ನನನ್ನು ಪುತ್ರನನ್ನಾಗಿ ಪಡೆಯಲು ಶ್ರೀಕೃಷ್ಣನು ಕೈಲಾಸಯಾತ್ರೆಯನ್ನು ಮಾಡಿ ಶಿವನ ಅನುಗ್ರಹವನ್ನು ಪಡೆದನು ಎಂಬುದು ಲೋಕದಲ್ಲಿರುವ ಅಪಪ್ರಚಾರ. ಮೊದಲೇ ಜನಿಸಿದ್ದ ಪ್ರದ್ಯುಮ್ನನನ್ನು ತನ್ನ ಉದರದಲ್ಲಿ ಧರಿಸಿ ಕೈಲಾಸಯಾತ್ರೆಯನ್ನು ಮಾಡಿದನೆಂದು ಮಹಾಭಾರತ ಮೂಲಶ್ಲೋಕ-ಗಳಿಂದಲೇ ತಿಳಿದುಬರುತ್ತದೆ. ವಾದಿರಾಜರು ಈ ಸಂದರ್ಭದಲ್ಲಿ ವಿಶೇಷವಾಗಿ ವ್ಯಾಖ್ಯಾನ ಮಾಡಿ ಮಹಾಭಾರತದಲ್ಲಿ ಮೊದಲಿನಿಂದ ಕೊನೆಯವರೆಗೆ '**ನಾರಾಯಣಂ ಸುರಗುರುಂ ಜಗದೇಕನಾಥಂ**', '**ನಾಸ್ತಿ ನಾರಾಯಣ ಸಮಂ ನ ಭೂತಂ ನ ಭವಿಷ್ಯತಿ**' '**ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ । ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ**', '**ಯಸ್ಯ ಪ್ರಸಾದಜೋ ಬ್ರಹ್ಮಾ ರುದ್ರಶ್ಚ ಕ್ರೋಧ ಸಂಭವಃ**', '**ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ**', '**ಅಹಂ ಸರ್ವಸ್ಯ ಪ್ರಭವಃ ಪ್ರಲಯಸ್ತಥಾ**', '**ಯೋ ಮಾಮೇವಮಸಮ್ಮೂಢೋ ಜಾನಾತಿ**

ಪುರುಷೋತ್ತಮಮ್ । ಸ ಸರ್ವವಿದ್ ಭಜತಿ ಮಾಂ ಸರ್ವಭಾವೇನ ಭಾರತ' ಇತ್ಯಾದಿ ನೂರಾರು ವಾಕ್ಯಗಳಲ್ಲಿ ನಾರಾಯಣನ ಸರ್ವೋತ್ತಮತ್ವವನ್ನು ಸಾರಿರುವುದರಿಂದ ಅದಕ್ಕೆ ವಿರುದ್ಧವಾದ ಶಿವಸರ್ವೋತ್ತಮತ್ವವು ಮಹಾಭಾರತಕ್ಕೆ ಸಮ್ಮತವಾದುದಲ್ಲ. ಅದು ಕೇವಲ ದರ್ಶನ ಭಾಷೆಯಿಂದ ಪ್ರವೃತ್ತವಾಗಿದೆ. ಇದು ದರ್ಶನ ಭಾಷೆಯಿಂದ ಪ್ರವೃತ್ತವಾಗಿದೆ ಎಂಬ ಸೂಚನೆಯು ಪಾಶುಪತಾದಿ ಶಬ್ದಪ್ರಯೋಗಗಳಿಂದ ಮೂಲದಿಂದಲೇ ತಿಳಿದು ಬರುತ್ತದೆ. ಅದೂ ಅಲ್ಲಿಗೆ ಉಪಮನ್ಯುವೆಂಬ ಅತಿ ಪ್ರಸಿದ್ಧನಲ್ಲದ ಒಬ್ಬ ಋಷಿಯು ಇವೆಲ್ಲವನ್ನು ಕೃಷ್ಣದೇವರಿಗೇ ಉಪದೇಶ ಮಾಡುತ್ತಾನೆ! ಆದ್ದರಿಂದ ಶ್ರೋತೃವಿನ ಜ್ಞಾನ ಸಂಪಾದನೆಗಾಗಿ ಈ ಪ್ರಕರಣವು ಹೊರಟಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇತಿಹಾಸ ಪುರಾಣಗಳಲ್ಲಿ ಸಮಾಧಿ ಭಾಷೆ, ದರ್ಶನಭಾಷೆ ಮತ್ತು ಗುಹ್ಯಭಾಷೆ ಎಂಬ ಮೂರು ಭಾಷೆಗಳನ್ನು ಪ್ರಧಾನವಾಗಿ ಬಳಸಿದ್ದಾರೆ. ಇವುಗಳ ವಿವರವನ್ನು ಆಚಾರ್ಯರು ಮಹಾಭಾರತತಾತ್ಪರ್ಯ ನಿರ್ಣಯದಲ್ಲಿಯೂ ಮತ್ತು ಭಾಗವತತಾತ್ಪರ್ಯದಲ್ಲಿಯೂ ನೀಡಿದ್ದಾರೆ. ಪ್ರಕೃತ, ದರ್ಶನಭಾಷೆ ಎಂದರೆ ತಮಗೆ ಸಮ್ಮತವಲ್ಲದ ಇನ್ನೊಂದು ದರ್ಶನದಲ್ಲಿ ಅಂಗೀಕೃತವಾದ ಪ್ರಮೇಯಗಳನ್ನು ಇದು ಇನ್ನೊಂದು ದರ್ಶನದ ಅನುವಾದ ಎಂದು ಹೇಳದೆ ನಿರೂಪಿಸುವುದು. ಈ ಶಿವಸರ್ವೋತ್ತಮತ್ವ ಪ್ರತಿಪಾದಕ ಪ್ರಕರಣವೂ ಸಹ ಅಂತಹ ದರ್ಶನಭಾಷೆಯಿಂದಲೇ ಪ್ರವೃತ್ತವಾದ ಪ್ರಕರಣವಾಗಿರುವುದರಿಂದ ವಿಷ್ಣುಸರ್ವೋತ್ತಮತ್ವದ ವಿಷಯದಲ್ಲಾಗಲೀ ವಾಯು ಜೀವೋತ್ತಮತ್ವದ ವಿಷಯದಲ್ಲಾಗಲೀ ಸಜ್ಜನರು ಸಂಶಯಪಡಬೇಕಾದ ಅವಶ್ಯಕತೆ ಇಲ್ಲವೆಂದು ವಾದಿರಾಜರು ಚೆನ್ನಾಗಿ ಪ್ರತಿಪಾದಿಸಿದ್ದಾರೆ.

ಪರಮಪೂಜ್ಯರಾದ ಶ್ರೀಪೇಜಾವರ ಸ್ವಾಮಿಗಳ ಅನುಗ್ರಹದಿಂದ ಅವರ ಗುರುಗಳಾದ ಕೀರ್ತಿಶೇಷರಾದ ಪ್ರಾತಃಸ್ಮರಣೀಯರಾದ ಶ್ರೀವಿದ್ಯಾಮಾನ್ಯತೀರ್ಥರ ಅನುಗ್ರಹದಿಂದ ಮತ್ತು ಪ್ರಕೃತ ಪಲಿಮಾರು ಮಠದ ಅಧಿಪತಿಗಳೂ ಪರ್ಯಾಪೀಠಸ್ಥರೂ ಆದ ಶ್ರೀವಿದ್ಯಾಧೀಶತೀರ್ಥರ ಪರಮಾನುಗ್ರಹಬಲದಿಂದ ಮಹಾಭಾರತ ಗ್ರಂಥಶೋಧನೆ ಮತ್ತು ಅನುವಾದದ ಕಾರ್ಯವು ಇಲ್ಲಿಯವರೆಗೆ ನಡೆದು ಬಂದಿದೆ. ಮುಖ್ಯವಾಗಿ ಶ್ರೀವಿದ್ಯಾಧೀಶತೀರ್ಥರ ಸದಾಗ್ರಹ ಮತ್ತು ಅದಮ್ಯವಾದ ಉತ್ಸಾಹಗಳು ಈ ಕಾರ್ಯದಲ್ಲಿ ಪ್ರೇರಕಶಕ್ತಿಯಾಗಿದೆ. ಅನುಶಾಸನಪರ್ವವು ಮಹಾಭಾರತದ ಕಠಿನವಾದ ಭಾಗಗಳಲ್ಲಿ ಒಂದಾಗಿದೆ. ಅರ್ಥವನ್ನು ತಿಳಿದುಕೊಳ್ಳುವುದು ಕೆಲವು ಕಡೆಗಳಲ್ಲಂತೂ ಬಹಳ ಕಷ್ಟಸಾಧ್ಯವಾಗಿದೆ. ಅರ್ಥವನ್ನು ತಿಳಿಯದೆ ಪಾಠಗಳನ್ನು ಶೋಧಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ನಮ್ಮ

ಇತಿಮಿತಿಗಳನ್ನು ಅನುಸರಿಸಿ ಸಂಶೋಧನೆ ಮತ್ತು ಅನುವಾದ ಕಾರ್ಯವನ್ನು ಮಾಡಿದ್ದೇನೆ. ಇದರಲ್ಲಿರುವ ಗುಣಾಂಶವೆಲ್ಲವೂ ಗುರುಗಳಿಗೇ ಸೇರಿದುದು. ದೋಷಗಳು ಇದ್ದೇ ಇರುತ್ತವೆ. ಅದಕ್ಕೆ ನಾನೇ ಹೊಣೆ. ಸಜ್ಜನರಾದ ಅಧ್ಯೇತೃಗಳು ನನ್ನ ದೋಷಗಳನ್ನು ಕ್ಷಮಿಸಿ ಅವುಗಳನ್ನು ತಿದ್ದಿಕೊಂಡು ನನಗೂ ತಿಳಿಸಿ ಅಧ್ಯಯನವನ್ನು ಮಾಡಬೇಕಾಗಿ ಸವಿನಯ ಪ್ರಾರ್ಥನೆಗಳನ್ನೂ ಸಲ್ಲಿಸುತ್ತೇನೆ.

ಈ ಕಾರ್ಯದಲ್ಲಿ ನನ್ನ ಸಹಾಯಕ್ಕೆ ನಿಂತ ನಮ್ಮ ಅಣ್ಣನ ಸುಪುತ್ರನಾದ ಚಿ॥ ವಿಜಯೀಂದ್ರನಿಗೆ (ಡಾ. ಬೆ.ನಾ. ವಿಜಯೀಂದ್ರಾಚಾರ್ಯ) ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಗುರುಗಳ ಅಂತರ್ಯಾಮಿಯಾದ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಕೃಷ್ಣಾಭಿನ್ನನಾದ ವೇದವ್ಯಾಸಮೂರ್ತಿಯು ನಮಗೆಲ್ಲರಿಗೂ ಮಂಗಳವನ್ನು ಮಾಡಲಿ ಎಂದು ಪ್ರಾರ್ಥಿಸಿ ಈ ಮುನ್ನುಡಿಯನ್ನು ಮುಗಿಸುತ್ತಿದ್ದೇನೆ.

ಗುರುಗಳ ಚರಣಸೇವಕ
ಶೇಷಗಿರಿ ಆಚಾರ್ಯ
ಮೈಸೂರು

★ ★ ★ ★ ★

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ- ೩೧

ಅನುಶಾಸನ ಪರ್ವ

		ಪುಟ ಸಂ.
1.	ಮೃತ್ಯು-ಗೌತಮ್ಯಾದಿ ಸಂವಾದ	1
2.	ಸುದರ್ಶನೋಪಾಖ್ಯಾನ	20
3.	ಯುಧಿಷ್ಠಿರನಿಂದ ಭೀಷ್ಮರನ್ನು ಕುರಿತು ವಿಶ್ವಾಮಿತ್ರರ ಬ್ರಾಹ್ಮಣ ಪ್ರಾಪ್ತಿ ಪ್ರಕಾರದ ಪ್ರಶ್ನೆ	43
4.	ಭೀಷ್ಮರಿಂದ ವಿಶ್ವಾಮಿತ್ರರ ಬ್ರಾಹ್ಮಣ್ಯಪ್ರಾಪ್ತಿ ಪ್ರಕಾರದ ಕಥನ	47
5.	ವೀತಹವ್ಯನು ಬ್ರಾಹ್ಮಣ್ಯವನ್ನು ಹೊಂದಿದ ಪ್ರಕಾರದ ಕಥನ	59
6.	ಅದೃಷ್ಟ ಮತ್ತು ಪುರುಷ ಪ್ರಯತ್ನಗಳಲ್ಲಿ ಪ್ರಾಬಲ್ಯವಿಚಾರ	72
7.	ದಯಾಗುಣದ ಮಹಿಮೆ - ಇಂದ್ರ-ಶುಕರ ಸಂವಾದ	83
8.	ವಿವಿಧ ಶುಭಕರ್ಮಗಳ ಫಲ ವರ್ಣನೆ	90
9.	ಪೂಜ್ಯರ ವರ್ಣನೆ	97
10.	ದಾನ-ಧರ್ಮ ವಿಷಯದಲ್ಲಿ ವೇದಗಳ ಸಂವಾದ	104
11.	ದೇವತೆಗಳ ಸಂವಾದ	105
12.	ವ್ಯಾಸ ಮತ್ತು ಮದ್ರರಾಜರ ಸಂವಾದ	107
13.	ಮದ್ರರಾಜನ ಪ್ರಶ್ನೆಗಳಿಗೆ ಉತ್ತರ	111
14.	ಮದ್ರರಾಜನಿಗೆ ವ್ಯಾಸರ ಉಪದೇಶ	114
15.	ಗರುಡಾಖ್ಯಾನದ ಪ್ರಾರಂಭ	120
16.	ಅರುಣನ ಜನ್ಮ ಮತ್ತು ತಾಯಿಗೆ ಶಾಪ	122
17.	ಕದ್ರು-ವಿನತೆಯ ಪಣ	127
18.	ತನ್ನ ಪುತ್ರರ ಜೊತೆಯಲ್ಲಿ ಕದ್ರುವಿನ ಸಂವಾದ	130

19. ವಿನತೆಯ ಪರಾಜಯ 135

20. ಕದ್ರು-ಗರುಡ ಸಂವಾದ 138

21. ಗಜ-ಕೂರ್ಮಗಳ ವರ್ಣನೆ 143

22. ಗರುಡನಿಂದ ವೃಕ್ಷಶಾಖೆಯ ಮೋಕ್ಷ 149

23. ಬ್ರಹ್ಮದೇವರಿಂದ ಗರುಡನನ್ನು ಕುರಿತು ಅಗ್ನಿಶಮನೋಪಾಯ ಕಥನ 157

24. ಗರುಡನ ಮೇಲೆ ಇಂದ್ರನು ಪ್ರಯೋಗಿಸಿದ ವಜ್ರಾಯುಧ ವೈಫಲ್ಯ 160

25. ಕದ್ರುವನ್ನು ಮೆಚ್ಚಿಸಿ ಇಂದ್ರನಿಗೆ ಪುನಃ ಅಮೃತದ ಕಲಶವನ್ನು ಕೊಟ್ಟು ಇಂದ್ರನಿಂದ ಗರುಡನು ವರಪ್ರಾಪ್ತಿ 165

26. ವಾಗ್ದಾನವನ್ನು ಮಾಡಿದುದನ್ನು ಕೊಡಲೇಬೇಕೆಂಬ ನಿಯಮ 170

27. ನೀಚನಿಗೆ ಉಪದೇಶನಿಷೇಧ 176

28. ಲಕ್ಷ್ಮೀ ನಿವಾಸಸ್ಥಾನಗಳು. ಶ್ರೀದೇವಿ-ರುಗ್ಮಿಣಿಯ ಸಂವಾದ 191

29. ವತ್ಸನಾಭೋಪಾಖ್ಯಾನ 198

30. ಗಂಗಾಶ್ವನೋಪಾಖ್ಯಾನ 203

31. ಶುಭಾಶುಭ ಕರ್ಮಫಲ ಕಥನ 214

32. ಶಿವ ಮಹಿಮೆ 216

33. ದರ್ಶನ ಭಾಷೆಯಿಂದ ಶಿವಮಹಿಮೆಯ ನಿರೂಪಣೆ 219

34. ತಪಸ್ಸನ್ನು ಆಚರಿಸಿ ಕೃಷ್ಣನಿಂದ ಶಿವ-ಪಾರ್ವತಿಯರ ದರ್ಶನ 290

35. ಕೃಷ್ಣನಿಗೆ ಶಿವನಿಂದ ವರಪ್ರಾಪ್ತಿ ಮತ್ತು ಶಿವಸಹಸ್ರನಾಮ 301

36. ಶಿವಸಹಸ್ರನಾಮಾವಳಿ 320

37. ಶಿವಸ್ತುತಿಮಾಹಾತ್ಮೆ 367

38. ಗರುಡ-ನಾರಾಯಣ ಸಂವಾದದ ವಿಷಯದಲ್ಲಿ ಯುಧಿಷ್ಠಿರನ ಪ್ರಶ್ನೆ 385

39. ಗರುಡ-ನಾರಾಯಣರ ಸಮಾಗಮ 401

40. ಗರುಡನಿಂದ ನಾರಾಯಣನ ಮಹಿಮೆಯ ವರ್ಣನೆ 410

41.	ನಾರಾಯಣನಿಂದ ಗರುಡನಿಗೆ ತನ್ನ ಸ್ವರೂಪದ ಉಪದೇಶ	424
42.	ಅಷ್ಟಾವಕ್ರನೋಪಾಖ್ಯಾನ ಪ್ರಾರಂಭ. ಅಷ್ಟಾವಕ್ರ-ವದಾನ್ಯರ ಸಂವಾದ	442
43.	ಅಷ್ಟಾವಕ್ರ-ದಿಕ್ ಸಂವಾದ	448
44.	ವೃದ್ಧೆಯಿಂದ ಕನ್ಯಾರೂಪ ಸ್ವೀಕಾರ	464
45.	ಅಷ್ಟಾವಕ್ರನ ವಿವಾಹ	469
46.	ಅನ್ಯ ಜಾತಿಯಲ್ಲಿ ಉತ್ಪನ್ನರಾದ ಋಷಿಗಳ ಮಹಿಮೆ	474
47.	ನಾರದ-ಮಾರ್ಕಂಡೇಯ ಸಂವಾದ. ಹವ್ಯ-ಕವ್ಯಾದಿ ಸ್ವೀಕಾರ ವಿಚಾರ	482
48.	ಕನ್ಯಾವಸ್ಥೆಯಲ್ಲಿ ಜನಿಸಿದ ಪುತ್ರರ ವಿಚಾರ	488
49.	ವಿವಿಧ ಭಾರ್ಯೆಯರ ಪ್ರಕಾರಗಳು	494
50.	ಪುರುಷ ಚಾಪಲ್ಯದ ಫಲ ಕಥನ	496
51.	ಸ್ತ್ರೀಯರ ಚಾಪಲ್ಯದ ಫಲಕಥನ	502
52.	ಪತಿ-ಪತ್ನಿಯರ ಶುದ್ಧ್ಯಶುದ್ಧಿ ಕಥನ	505
53.	ದಾನಗಳಲ್ಲಿ ಪಾತ್ರ ಪರೀಕ್ಷೆ	517
54	ದೈವ-ಪಿತೃಕರ್ಮಗಳಲ್ಲಿ ಮಾಡಿದ ದಾನದ ಫಲಕಥನ	527
55.	ಹಿಂಸೆ ಮಾಡದೆ ಬ್ರಹ್ಮಹತ್ಯಾ ದೋಷದ ಘಟನೆ ಪ್ರಕಾರ	552
56.	ತೀರ್ಥ ಪ್ರಶಂಸಾ	555

★ ★ ★ ★ ★

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಅನುಶಾಸನ ಪರ್ವ

೧. ದಾನ-ಧರ್ಮ ಪರ್ವ

ಒಂದನೆಯ ಅಧ್ಯಾಯ

ಮೃತ್ಯು-ಗೌತಮ್ಯಾದಿ ಸಂವಾದ

ಯುಧಿಷ್ಠಿರಃ

ಶಮೋ ಬಹುವಿಧಾಕಾರಃ ಸೂಕ್ಷ್ಮ ಉಕ್ತಃ ಪಿತಾಮಹ ।
ನ ತು ಮೇ ಹೃದಯೇ ಶಾಂತಿರಸ್ತಿ ಕೃತ್ವೇದಮೀದೃಶಮ್ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ನೀನು ಅನೇಕ ರೀತಿಯಾದ ಸೂಕ್ಷ್ಮವಾದ ಮನಶ್ಶಾಂತಿಯ ಸಾಧನಗಳನ್ನು ಹೇಳಿದ್ದೀಯೆ. ಆದರೆ ಇಂತಹ ಅಪರಾಧವನ್ನು ಮಾಡಿದ ನನ್ನ ಮನಸ್ಸಿಗೆ ಶಾಂತಿಯುಂಟಾಗುತ್ತಿಲ್ಲ.

ಅಸ್ಮಿನ್ನರ್ಥೇ ಬಹುವಿಧಾ ಶಾಂತಿರುಕ್ತಾ ತ್ವಯಾऽನಘ ।
ಸ್ಕೃತಸ್ಯ ನ ಶಾಂತಿಃ ಸ್ಯಾಚ್ಚಮಾದ್ ಬಹುವಿಧಾದಪಿ ॥೨॥

ಎಲೈ ಅನಘನೇ, ಈ ವಿಷಯದಲ್ಲಿ ನೀನು ಅನೇಕ ವಿಧವಾದ ಶಾಂತಿ ಪ್ರಕಾರಗಳನ್ನು ಹೇಳಿದ್ದೀಯೆ. ಇಷ್ಟು ವಿಧವಾದ ಶಾಂತಿಸಾಧನ ಪ್ರಕಾರಗಳನ್ನು ಹೇಳಿದ್ದರೂ ನಾನು ಮಾಡಿದ ಕಾರ್ಯದ ನಿಮಿತ್ತದಿಂದಾಗಿ ನನಗೆ ಶಾಂತಿ ಉಂಟಾಗುತ್ತಿಲ್ಲ.

ಶರಾಚಿತಶರೀರಂ ಹಿ ತೀವ್ರವ್ರಣಮುದೀಕ್ಷ್ಯ ಚ ।
ಶರ್ಮ ನೋಪಲಭೇ ವೀರ ದುಷ್ಕೃತಾನ್ಯೇವ ಚಿಂತಯನ್ ॥೩॥

ಎಲೈ ವೀರನೇ, ಬಾಣಗಳು ನೆಟ್ಟ ಶರೀರವನ್ನು ಹೊಂದಿ, ಎಲ್ಲ ಕಡೆಯಲ್ಲಿಯೂ ಗಾಯಗೊಂಡಿರುವ ನಿನ್ನನ್ನು ನೋಡಿ, ನನ್ನ ದುಷ್ಕರ್ಮವನ್ನೇ ಸ್ಮರಿಸುತ್ತಾ ನಾನು ಸಮಾಧಾನವನ್ನೇ ಹೊಂದುತ್ತಿಲ್ಲ.

ರುಧಿರೇಣಾವಸಿಕ್ತಾಂಗಂ ಪ್ರಸ್ರವಂತಂ ಯಥಾऽಚಲಮ್ ।
ತ್ವಾಂ ದೃಷ್ಟ್ವಾ ಪುರುಷವ್ಯಾಘ್ರ ಸೀದೇ ವರ್ಷಾಸ್ವಿವಾಂಬುಜಮ್ ॥೪॥

ಎಲೈ ಪುರುಷವ್ಯಾಘ್ರನೇ, ಗೈರಿಕಾದಿ ಧಾತುವನ್ನು ಸ್ರವಿಸುವ ಪರ್ವತದಂತೆ ರಕ್ತವನ್ನು ಸ್ರವಿಸುತ್ತಿರುವ ಅವಯವವುಳ್ಳ ನಿನ್ನನ್ನು ನೋಡಿ ಮಳೆಗಾಲದಲ್ಲಿ ಕಮಲವು ಮುದುಡಿ ಹೋಗುವಂತೆ ನನ್ನ ಮನಸ್ಸು ಮುದುಡಿ ಹೋಗುತ್ತಿದೆ.

ಇತಃ ಕಷ್ಟತರಂ ಕಿಂ ನು ಮತ್ಕೃತೇ ಯತ್ ಪಿತಾಮಹಃ ।
ಇಮಾಮವಸ್ಥಾಂ ಗಮಿತಃ ಪ್ರತ್ಯಮಿತ್ರೈ ರಣಾಜಿರೇ ।
ತಥೈವಾನ್ಯೇ ನೃಪತಯಃ ಸಹಪುತ್ರಾಃ ಸಬಾಂಧವಾಃ ॥೫॥

ನನ್ನ ನಿಮಿತ್ತದಿಂದಾಗಿ ನಮ್ಮ ಪಿತಾಮಹನಾದ ನೀನು ರಣರಂಗದಲ್ಲಿ ಶತ್ರುಗಳಿಂದ ಇಂತಹ ಅವಸ್ಥೆಯನ್ನು ಹೊಂದುವಂತೆ ಮಾಡಲ್ಪಟ್ಟುದುದಕ್ಕಿಂತ ಕಷ್ಟತರವಾದುದು ಇನ್ನು ಯಾವುದಿದೆ? ಹಾಗೆಯೇ, ಇನ್ನೂ ಅನೇಕ ರಾಜರು ತಮ್ಮ ಪುತ್ರರು ಮತ್ತು ಬಂಧುಗಳೊಡನೆ ಇಂತಹ ಅವಸ್ಥೆಯನ್ನೇ ಹೊಂದಿದ್ದಾರೆ.

ವಯಂ ಹಿ ಧಾರ್ತರಾಷ್ಟ್ರಾಶ್ಚ ಕಾಲಮನ್ಯುವಶಾನುಗಾಃ ।
ಕೃತ್ವಾ ಚ ನಿಂದಿತಂ ಕರ್ಮ ಪ್ರಾಪ್ಸ್ಯಾಮಃ ಕಾಂ ಗತಿಂ ಪುನಃ ॥೬॥

ಕಾಲಕ್ಕೆ ಮತ್ತು ಕೋಪಕ್ಕೆ ವಶರಾದ ನಾವು ಮತ್ತು ದುರ್ಯೋಧನಾದಿಗಳು ಇಂತಹ ನಿಂದಿತವಾದ ಕರ್ಮವನ್ನು ಮಾಡಿ ಯಾವ ಗತಿಯನ್ನು ಹೊಂದುವೆವು?

ಅಹಂ ತವ ಹ್ಯಂತಕರಃ ಸುಹೃದ್ವಧಕರಸ್ತಥಾ ।
ನ ಶಾಂತಿಮಧಿಗಚ್ಛಾಮಿ ಪಶ್ಯಂಸ್ತ್ವಾಂ ದುಃಖಿತಂ ಕ್ಷಿತೌ ॥೭॥

ನಿಮಗೆ ಇಂತಹ ವಿನಾಶವನ್ನು ತಂದುಕೊಟ್ಟವನೂ, ಸುಹೃದರ ವಧೆಯನ್ನು ಮಾಡಿದ ನಾನು ಭೂಮಿಯ ಮೇಲೆ ದುಃಖಪಡುತ್ತಿರುವ ನಿನ್ನನ್ನು ನೋಡಿ ಸಮಾಧಾನವನ್ನೇ ಹೊಂದುತ್ತಿಲ್ಲ.

ದುರ್ಯೋಧನೋ ಹಿ ಸಮರೇ ಸಹಸೈನ್ಯಃ ಸಹಾನುಜಃ ।
ನಿಹತಃ ಕ್ಷತ್ರಧರ್ಮೇಽಸ್ಮಿನ್ ದುರಾತ್ಮಾ ಕುಲಪಾಂಸನಃ ॥೮॥

ದುಷ್ಟನೂ ಮತ್ತು ಕುಲನಾಶಕನೂ ಆದ ದುರ್ಯೋಧನನು ತನ್ನ ತಮ್ಮಂದಿರಿಂದಲೂ ಮತ್ತು ಸೈನ್ಯದಿಂದಲೂ ಸಹಿತನಾಗಿ ಕ್ಷತ್ರಿಯಧರ್ಮವನ್ನು ಅನುಸರಿಸಿದ ನಮ್ಮಿಂದ ಯುದ್ಧದಲ್ಲಿ ಕೊಲ್ಲಲ್ಪಟ್ಟನು.

ನ ಸ ಪಶ್ಯತಿ ದುಷ್ಟಾತ್ಮಾ ತ್ವಾಮದ್ಯ ಪತಿತಂ ಕ್ಷಿತೌ ।
ಅತಃ ಶ್ರೇಯೋ ಮೃತಂ ಮನ್ಯೇ ನೇಹ ಜೀವಿತಮಾತ್ಮನಃ ॥೯॥

ದುಷ್ಟಾತ್ಮನಾದ ಅವನು ನೀನು ಈ ದಿನ ಭೂಮಿಯ ಮೇಲೆ ಮಲಗಿರುವುದನ್ನು ನೋಡುತ್ತಿಲ್ಲ. ಆದ್ದರಿಂದ ನಾನು ಬದುಕಿರುವುದಕ್ಕಿಂತಲೂ ನನಗೆ ಮರಣವೇ ಶ್ರೇಷ್ಠವಾಗಿರುತ್ತಿದ್ದಿತೆಂದು ಭಾವಿಸುತ್ತೇನೆ.

ಅಹಂ ಹಿ ಸಮರೇ ವೀರ ಗಮಿತಃ ಶತ್ರುಭಿಃ ಕ್ಷಯಮ್ ।
ಅಭವಿಷ್ಯಂ ಯದಿ ಪುರಾ ಸಹ ಭ್ರಾತೃಭಿರಚ್ಯುತ ॥೧೦॥

ನ ತ್ವಾಮೇವಂ ಸುದುಃಖಾರ್ತಮದ್ರಾಕ್ಷಂ ಸಾಯಕಾರ್ದಿತಮ್ ।
ನೂನಂ ಹಿ ಪಾಪಕರ್ಮಾಣೋ ಧಾತ್ರಾ ಸೃಷ್ಟಾಃ ವಯಂ ನೃಪ ॥೧೧॥

ಎಲೈ ವೀರನೇ, ನನ್ನನ್ನು ಮತ್ತು ನನ್ನ ತಮ್ಮಂದಿರನ್ನು ಯುದ್ಧದಲ್ಲಿ ಶತ್ರುಗಳು ಮೊದಲೇ ವಿನಾಶಗೊಳಿಸಿದ್ದರೆ ಬಾಣಗಳಿಂದ ಪೀಡಿತರಾಗಿ ಈ ರೀತಿಯಲ್ಲಿ ಬಹಳ ದುಃಖಪಡುತ್ತಿರುವ ನಿನ್ನನ್ನು ನೋಡುತ್ತಿರಲಿಲ್ಲ. ಎಲೈ ರಾಜನೇ, ಪಾಪಕರ್ಮವನ್ನು ಮಾಡುವುದಕ್ಕಾಗಿಯೇ ಬ್ರಹ್ಮನು ನಮ್ಮನ್ನು ಸೃಷ್ಟಿಸಿದ್ದಾನೆ.

ಅನ್ಯಸ್ಮಿನ್ನಪಿ ಲೋಕೇ ಹಿ ಯಥಾ ಮುಚ್ಯೇಮ ಕಿಲ್ಬಿಷಾತ್ ।
ತಥಾ ಪ್ರಶಾಧಿ ಮಾಂ ರಾಜನ್ ಮಮ ಚೇದಿಚ್ಛಸಿ ಪ್ರಿಯಮ್ ॥೧೨॥

ಎಲೈ ರಾಜನೇ, ನನಗೆ ಪ್ರಿಯವನ್ನು ಮಾಡಲು ಬಯಸುವುದಾದರೆ ಪರಲೋಕದಲ್ಲಾದರೂ ನಾವು ಈ ಕಿಲ್ಬಿಷದಿಂದ ಪಾರಾಗುವ ಉಪಾಯವನ್ನು ಹೇಳು.

ಭೀಷ್ಮಃ

ಪರತಂತ್ರಂ ಕಥಂ ಹೇತುಮಾತ್ಮಾನಮನುಪಶ್ಯಸಿ ।
ಕರ್ಮಣ್ಯಸ್ಮಿನ್ ಮಹಾಭಾಗ ಸೂಕ್ಷ್ಮಂ ಹ್ಯೇತದತೀಂದ್ರಿಯಮ್ ॥೧೩॥

ಭೀಷ್ಮರು– ಎಲೈ ಮಹಾಭಾಗನೇ, ಸೂಕ್ಷ್ಮವೂ ಮತ್ತು ಅತೀಂದ್ರಿಯವೂ ಆದ ಈ ಕರ್ಮದ ವಿಷಯದಲ್ಲಿ (ಕ್ಷತ್ರಿಯಧರ್ಮದ ವಿಷಯದಲ್ಲಿ) ಪರತಂತ್ರನಾದ ನೀನು ನಿನ್ನನ್ನು ಹೇಗೆ ಕಾರಣನೆಂದು ತಿಳಿಯುತ್ತೀಯೆ?

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಸಂವಾದಂ ಮೃತ್ಯುಗೌತಮ್ಯೋಃ ಕಾಲಲುಬ್ಧಕಪನ್ನಗೈಃ ॥೧೪॥

ಈ ವಿಷಯದಲ್ಲಿ ಹಿಂದೆ ನಡೆದ ಮೃತ್ಯು-ಗೌತಮೀ-ಕಾಲ-ವ್ಯಾಧ ಮತ್ತು ಸರ್ಪಗಳ ಸಂವಾದರೂಪದ ಈ ಒಂದು ಇತಿಹಾಸವನ್ನು ಜ್ಞಾನಿಗಳು ಹೇಳುತ್ತಾರೆ.

ಗೌತಮೀ ನಾಮ ಕೌಂತೇಯ ಸ್ಥವಿರಾ ಶಮಸಂಯುತಾ ।
ಸರ್ಪೇಣ ದಷ್ಟಂ ಸ್ವಂ ಪುತ್ರಮಪಶ್ಯದ್ ಗತಚೇತನಮ್ ॥೧೫॥

ಎಲೈ ಕೌಂತೇಯನೇ, ವೃದ್ಧಳೂ, ಶಾಂತಿಯುಕ್ತಳೂ ಆದ ಗೌತಮಿಯೆಂಬ ವನಿತೆಯು ಸರ್ಪದಿಂದ ಕಡಿಯಲ್ಪಟ್ಟು ಮೃತನಾದ ತನ್ನ ಪುತ್ರನನ್ನು ನೋಡಿದಳು.

ಅಥ ತಂ ಸ್ನಾಯುಪಾಶೇನ ಬದ್ಧ್ವಾ ಸರ್ಪಮಮರ್ಷಿತಃ ।
ಲುಬ್ಧಕೋಽರ್ಜುನಕೋ ನಾಮ ಗೌತಮ್ಯಾಃ ಸಮುಪಾನಯತ್ ॥೧೬॥

ಅನಂತರ ಅರ್ಜುನಕನೆಂಬ ಬೇಡನು ಕೋಪಗೊಂಡು ಆ ಸರ್ಪವನ್ನು ಹಗ್ಗದ ಬಲೆಯಿಂದ ಕಟ್ಟಿ ಗೌತಮಿಯ ಬಳಿಗೆ ತೆಗೆದುಕೊಂಡು ಬಂದನು.

ತಾಂ ಚಾಬ್ರವೀದಯಂ ತೇ ಸ ಪುತ್ರಹಾ ಪನ್ನಗಾಧಮಃ ।
ಬ್ರೂಹಿ ಕ್ಷಿಪ್ರಂ ಮಹಾಭಾಗೇ ವಧ್ಯತಾಂ ಕೇನ ಹೇತುನಾ ॥೧೭॥

ಅಗ್ನೌ ಪ್ರಕ್ಷಿಪ್ಯತಾಮೇಷ ಛಿದ್ಯತಾಂ ಖಂಡಶೋ ಯಥಾ ।
ನ ಹ್ಯಯಂ ಬಾಲಹಾ ಪಾಪಶ್ಚಿರಂ ಜೀವಿತುಮರ್ಹತಿ ॥೧೮॥

ಅವನು ಅವಳನ್ನು ಕುರಿತು- 'ಈ ಸರ್ಪಾಧಮನೇ ನಿನ್ನ ಪುತ್ರನನ್ನು ಕೊಂದವನು. ಎಲೈ ಮಹಾನುಭಾವಳೇ, ಇವನನ್ನು ಯಾವ ರೀತಿಯಲ್ಲಿ ಕೊಲ್ಲಬೇಕೆಂದು ಹೇಳು. ಅಗ್ನಿಯಲ್ಲಿ ಹಾಕಲೇ ಅಥವಾ ಕಣಕಣವಾಗಿ ಕತ್ತರಿಸಲೇ? ಬಾಲಹತ್ಯೆಯನ್ನು ಮಾಡಿದ ಈ ಪಾಪಿಯು ಬಹುಕಾಲ ಬದುಕಿರಬಾರದು'.

ಗೌತಮೀ

ವಿಸೃಜೈನಮಬುದ್ಧಿಸ್ತ್ವಂ ನ ವಧ್ಯೋಽರ್ಜುನಕ ತ್ವಯಾ ।
ಕೋ ಹ್ಯಾತ್ಮಾನಂ ಗುರುಂ ಕುರ್ಯಾತ್ ಪ್ರಾಪ್ತವ್ಯೇ ಸತಿ ಚಿಂತಯನ್ ॥

ಗೌತಮಿ– ಎಲೈ ಅರ್ಜುನಕನೇ, ನಿನಗೆ ಬುದ್ಧಿಯಿಲ್ಲ. ಈ ಸರ್ಪವನ್ನು ಬಿಟ್ಟುಬಿಡು. ನಡೆಯಬೇಕಾದ ಕಾರ್ಯವು ನಡೆದಾಗ ಇಂತಹ ಸಂದರ್ಭದಲ್ಲಿ ಯಾರು ಇವನನ್ನು ಕೊಲ್ಲುವಂತೆ ಉಪದೇಶ ಮಾಡುತ್ತಾರೆ? (ಲಕ್ಷಾಲಂಕಾರ)

ಪ್ಲವಂತೇ ಧರ್ಮಲಘವೋ ಲೋಕೇಽಂಭಸಿ ಯಥಾ ಪ್ಲವಾಃ ।
ಮಜ್ಜಂತಿ ಪಾಪಗುರವಃ ಶಸ್ತ್ರಂ ಸ್ಕನ್ನಮಿವೋದಕೇ ॥೨೦॥

ಧರ್ಮವನ್ನು ಆಚರಿಸಿ ಲಘುವಾದವರು (ಹಗುರವಾದವರು) ನೀರಿನಲ್ಲಿ ನೌಕೆಗಳಂತೆ ತೇಲಿ ಸಂಸಾರವನ್ನು ದಾಟುತ್ತಾರೆ. ಪಾಪವನ್ನು ಮಾಡಿ ಭಾರಭೂತರಾದವರು ನೀರಿನಲ್ಲಿ ಹಾಕಿದ ಕಬ್ಬಿಣದ ಶಸ್ತ್ರದಂತೆ ಮುಳುಗುತ್ತಾರೆ.

ನ ಚಾಮೃತ್ಯುರ್ಭವಿತಾ ವೈ ಹತೇಽಸ್ಮಿನ್
ಕೋ ವಾತ್ಯಯಃ ಸ್ಯಾದಹತೇಽಸ್ಮಿನ್ ಜನಸ್ಯ ।
ಅಸ್ಯೋತ್ಸಂಗೇ ಪ್ರಾಣಮುಕ್ತಸ್ಯ ಜಂತೋಃ
ಮೃತ್ಯೋರ್ಲೋಕಂ ಕೋ ನು ಗಚ್ಛೇದನಂತಃ ॥೨೧॥

ಈ ಸರ್ಪವನ್ನು ಕೊಂದರೆ ನನ್ನ ಪುತ್ರನು ಜೀವಸಹಿತನಾಗಿ ಬರುವುದಿಲ್ಲ. ಇವನನ್ನು (ಈ ಸರ್ಪವನ್ನು) ಕೊಲ್ಲದಿದ್ದರೆ ಆಗುವ ಹಾನಿ ಏನು? ಪ್ರಾಣವನ್ನು ಕಳೆದುಕೊಂಡು ನನ್ನ ತೊಡೆಯ ಮೇಲೆ ಮಲಗಿರುವ ಈ ನನ್ನ ಪುತ್ರನನ್ನು ಜೀವ ಸಹಿತವಾಗಿ ಮೃತ್ಯುಲೋಕಕ್ಕೆ ಹೋಗಿ ಯಾವನು ಹಿಂದಕ್ಕೆ ತರುತ್ತಾನೆ?

ಲುಬ್ಧಕಃ

ಜಾನಾಮ್ಯೇವಂ ನೇಹ ಗುಣಾಗುಣಜ್ಞಾಃ
ಸರ್ವೇರ್ತಿಯುಕ್ತಾ ಗುರವೋ ವೈ ಭವಂತಿ ।
ಸ್ವಸ್ಥಸ್ಯೈತೇ ತೂಪದೇಶಾ ಭವಂತಿ
ತಸ್ಮಾತ್ ಕ್ಷುದ್ರಂ ಸರ್ಪಮೇನಂ ಹನಿಷ್ಯೇ ॥೨೨॥

ವ್ಯಾಧ– ಈ ವಿಷಯವನ್ನು ನಾನು ತಿಳಿದಿದ್ದೇನೆ. ದುಃಖದಿಂದ ಕೂಡಿದವರು ಗುಣ-ದೋಷಗಳನ್ನು ಎಣಿಸುವುದಿಲ್ಲ. ಅವರು ತಮ್ಮ ದುಃಖಕ್ಕೆ ಕಾರಣನಾದವನನ್ನು ಕೊಲ್ಲು ಎಂದೇ ಉಪದೇಶ ಮಾಡುತ್ತಾರೆ. ದುಃಖವನ್ನು ಅನುಭವಿಸದವರು ನಿನ್ನಂತೆ ಉಪದೇಶ ಮಾಡುತ್ತಾರೆ. ಆದ್ದರಿಂದ ಕ್ಷುದ್ರವಾದ ಈ ಸರ್ಪವನ್ನು ಕೊಲ್ಲುವೆನು.

ಸಮೀಪ್ಸಂತಃ ಕಾಲಯೋಗಂ ತ್ಯಜಂತಿ
ಸದ್ಯಃ ಶುಚಂ ತ್ವರ್ಥವಿದಸ್ಯಜಂತಿ ।
ಶ್ರೇಯಃಕ್ಷಯಃ ಶೋಚತಾಂ ನಿತ್ಯಶೋ ಹಿ
ತಸ್ಮಾತ್ಯಾಜ್ಯಂ ಜಹಿ ಶೋಕಂ ಹತೇಽಸ್ಮಿನ್ ॥೨೩॥

ಕೆಲವರು ಮುಂದೆ ಶುಭವನ್ನು ಬಯಸಿ ಯೋಗ್ಯವಾದ ಕಾಲದಲ್ಲಿ ಮಾಡಬೇಕಾದ ಇಂತಹ ವಧೆ ಮೊದಲಾದ ಕಾರ್ಯವನ್ನು ಪರಿತ್ಯಜಿಸುತ್ತಾರೆ. ಇನ್ನು ಕೆಲವರು ತಮ್ಮ ಅರ್ಥದ ಲಾಭವನ್ನು ಹೊಂದಿ (ಉದ್ದೇಶವನ್ನು ಪೂರೈಸಿಕೊಂಡು) ತಕ್ಷಣ ತಮ್ಮ

ದುಃಖವನ್ನು ಕಳೆದುಕೊಳ್ಳುತ್ತಾರೆ. ಯಾವಾಗಲೂ ಶೋಕವನ್ನು ಪಡುವವರಿಗೆ ಶ್ರೇಯಸ್ಸಿನ ಹಾನಿಯುಂಟಾಗುತ್ತದೆ. ಆದ್ದರಿಂದ ಈ ಸರ್ಪವನ್ನು ಕೊಂದರೆ ನಿನಗೆ ಉಂಟಾಗುವ ಶೋಕವನ್ನು ಪರಿತ್ಯಜಿಸು.

ಗೌತಮೀ

ನ ಚೈವಾರ್ತಿರ್ವಿದ್ಯತೇಽಸ್ಮದ್ವಿಧಾನಾಂ
ಧರ್ಮಾರಾಮಃ ಸತತಂ ಸಜ್ಜನೋ ಹಿ ।
ನಿತ್ಯಾಯಸ್ತೋ ಬಾಲಜನೋ ನ ಚಾನ್ಯೋ
ಧರ್ಮೋ ಹ್ಯೇಷ ಪ್ರಭವಾಮ್ಯಸ್ಯ ನಾಹಮ್ ॥೨೪॥

ಗೌತಮೀ– ನಮ್ಮಂತಹವರಿಗೆ ದುಃಖವಿರುವುದಿಲ್ಲ. ಸಜ್ಜನನಾದವನು ಧರ್ಮವನ್ನು ಆಚರಿಸಿ ಯಾವಾಗಲೂ ಸುಖದಿಂದಲೇ ಇರುತ್ತಾನೆ. ಉಳಿದ ಬಾಲಕರಂತಹ ಜನರು ಯಾವಾಗಲೂ ಕೋಪಗೊಳ್ಳುತ್ತಾರೆ. ಇದು ಸನಾತನವಾದ ಧರ್ಮ. ಆದ್ದರಿಂದ ಸರ್ಪವನ್ನು ಕೊಲ್ಲು ಎಂದು ನಾನು ಹೇಳುವುದಿಲ್ಲ.

ನ ಬ್ರಾಹ್ಮಣಾನಾಂ ಕೋಪೋಽಸ್ತಿ ಕುತಃ ಕೋಪಾಚ್ಚ ಯಾತನಾ ।
ಮಾರ್ದವಾತ್ ಕ್ಷಮ್ಯತಾಂ ಸಾಧೋ ಮುಚ್ಯತಾಮೇಷ ಪನ್ನಗಃ ॥೨೫॥

ಬ್ರಾಹ್ಮಣರಿಗೆ ಕೋಪವಿರುವುದಿಲ್ಲ. ಇನ್ನು ಕೋಪವಿಲ್ಲದಿರುವುದರಿಂದ ಕೋಪದಿಂದ ಇನ್ನೊಬ್ಬರಿಗೆ ಕೊಡುವ ಯಾತನೆಯು ಎಲ್ಲಿಂದ ಬರಬೇಕು? ಎಲೈ ಸಜ್ಜನನೇ, ಮನಸ್ಸಿನಲ್ಲಿ ಮಾರ್ದವವನ್ನು ತಂದುಕೊಂಡು ಈ ಸರ್ಪವನ್ನು ಕ್ಷಮಿಸು. ಈ ಸರ್ಪವನ್ನು ಬಿಟ್ಟುಬಿಡು.

ಲುಬ್ಧಕಃ

ಹಿತ್ವಾ ಲಾಭಂ ಶ್ರೇಯ ಏವಾವ್ಯಯಂ ಸ್ಯಾತ್
ಸದ್ಯೋ ಲಾಭೋ ಬಲವದ್ಭಿಃ ಪ್ರಶಸ್ತಃ ।
ಕಾಲಾಲ್ಲಾಭೋ ಯಸ್ತು ಸದ್ಯೋ ಭವೇತ
ಹತೇ ಶ್ರೇಯಃ ಕುತ್ಸಿತೇ ತ್ವೀದೃಶೇ ಸ್ಯಾತ್ ॥೨೬॥

ವ್ಯಾಧ– ದುರ್ಬಲನಾದವನು ಸದ್ಯದಲ್ಲಿ ದೊರೆಯುವ ಲಾಭವನ್ನು ಬಿಟ್ಟು ಅವ್ಯಯವಾದ ಶ್ರೇಯಸ್ಸನ್ನು ಹೊಂದುತ್ತಾನೆ. ಈ ಲೋಕದ ಸುಖವನ್ನು ಅವನು

ಪಡೆಯುವುದಿಲ್ಲ. ತಕ್ಷಣದಲ್ಲಿ ದೊರೆಯುವ ಲಾಭವು ಬಲಿಷ್ಠರಿಂದ ಪ್ರಶಂಸಿಸಲ್ಪಡುತ್ತಿಲ್ಲ. ವಿಳಂಬದಿಂದ ಉಂಟಾಗುವ ಲಾಭವು ತಕ್ಷಣದಲ್ಲಿಯೇ ದೊರೆಯುತ್ತದೆ. ಅದು ಸಜ್ಜನರ ಲಾಭ. ಇಂತಹ ಕೆಟ್ಟ ಸರ್ಪವು ಕೊಲ್ಲಲ್ಪಟ್ಟರೆ ಶ್ರೇಯಸ್ಸೇ ಉಂಟಾಗುತ್ತದೆ.

ಗೌತಮೀ

ಕಾऽರ್ಥಪ್ರಾಪ್ತಿರ್ಗ್ರಹ್ಯ ಶತ್ರುಂ ನಿಹತ್ಯ
ಕಾ ವಾ ಶಾಂತಿಃ ಪ್ರಾಪ್ಯ ಶತ್ರುಂ ನಮುಕ್ತ್ವಾ ।
ಕಸ್ಮಾತ್ಸೌಮ್ಯ ಭುಜಗೇ ನ ಕ್ಷಮೇಯಂ
ಮೋಕ್ಷಂ ವಾ ಕಿಂ ಕಾರಣಂ ನಾಸ್ಯ ಕುರ್ಯಾಮ್ ॥೨೭॥

ಗೌತಮೀ– ಶತ್ರುವನ್ನು ಹಿಡಿದು ಅವನನ್ನು ಕೊಂದರೆ ಉಂಟಾಗುವ ಲಾಭವೇನು? ಅಂತಹ ಶತ್ರುವನ್ನು ಬಿಡುಗಡೆಗೊಳಿಸದಿದ್ದರೆ ಯಾವ ಶಾಂತಿಯು ಉಂಟಾದೀತು? ಎಲೈ ಸೌಮ್ಯನೇ, ಈ ಸರ್ಪವನ್ನು ನಾನು ಕ್ಷಮಿಸದಿರುವುದಕ್ಕೆ ಏನು ಕಾರಣವಿದೆ? ಅಥವಾ ಬಿಡುಗಡೆ ಮಾಡದಿರುವುದಕ್ಕೂ ಏನು ಕಾರಣವಿದೆ?

ಲುಬ್ಧಕಃ

ಅಸ್ಮಾದೇಕಸ್ಮಾದ್ ಬಹವೋ ರಕ್ಷಿತವ್ಯಾ
ನೈಕೋ ಬಹುಭ್ಯೋ ಗೌತಮಿ ರಕ್ಷಿತವ್ಯಃ ।
ಕೃತಾಗಸಂ ಧರ್ಮವಿದಸ್ತ್ಯಜಂತಿ
ಸರೀಸೃಪಂ ಪಾಪಮಿಮಂ ಜಹಿ ತ್ವಮ್ ॥೨೮॥

ವ್ಯಾಧ– ಎಲೌ ಗೌತಮಿಯೇ, ಈ ಸರ್ಪದಿಂದ ಅನೇಕ ಜನರನ್ನು ರಕ್ಷಿಸಬೇಕಾಗಿದೆ. ಅನೇಕ ಜನರಿಗೆ ಪ್ರಾಣಾಪಾಯವನ್ನುಂಟು ಮಾಡುವ ಈ ಒಂದು ಸರ್ಪವನ್ನು ರಕ್ಷಿಸಬಾರದು. ಧರ್ಮವನ್ನು ತಿಳಿದವರು ಪಾಪವನ್ನು ಮಾಡಿದವನನ್ನು ಪರಿತ್ಯಜಿಸುತ್ತಾರೆ. ಆದ್ದರಿಂದ ಈ ಪಾಪಿಯಾದ ಸರ್ಪವನ್ನು ಕೊಲ್ಲುತ್ತೇನೆ.

ಗೌತಮೀ

ನಾಸ್ಮಿನ್ ಹತೇ ಪನ್ನಗೇ ಪುತ್ರಕೋ ಮೇ
ಸಂಪ್ರಾಪ್ಸ್ಯತೇ ಲುಬ್ಧಕ ಜೀವಿತಂ ವೈ ।

ಗುಣಂ ಚಾನ್ಯಂ ನಾಸ್ಯ ವಧೇ ಪ್ರಪಶ್ಯೇ
ತಸ್ಮಾತ್ ಸರ್ಪಂ ಲುಬ್ಧಕ ಮುಂಚ ಚೈನಮ್ ॥೨೯॥

ಗೌತಮೀ– ಎಲೈ ಬೇಡನೇ, ಈ ಸರ್ಪವನ್ನು ಕೊಂದರೆ ನನ್ನ ಪುತ್ರನು ಹಿಂದಿರುಗಿ ಬರುವುದಿಲ್ಲ. ಈ ಸರ್ಪವನ್ನು ಕೊಲ್ಲುವುದರಲ್ಲಿ ನಾನು ಯಾವ ಗುಣವನ್ನೂ ಕಾಣುವುದಿಲ್ಲ. ಆದ್ದರಿಂದ ಈ ಸರ್ಪವನ್ನು ಬಿಟ್ಟುಬಿಡು.

ಲುಬ್ಧಕಃ

ವೃತ್ರಂ ಹತ್ವಾ ದೇವರಾಟ್ ಸ್ವರ್ಗಭಾಗ್ ವೈ
ಯಜ್ಞಂ ಹತ್ವಾ ಭಾಗಮವಾಪ ಚೈವ ।
ಶೂಲೀ ದೇವೋ ದೇವವೃತ್ತಂ ಕುರು ತ್ವಂ
ತಸ್ಮಾತ್ ಸರ್ಪಂ ಜಹಿ ಮಾ ಭೂದ್ ವಿಶಂಕಾ ॥೩೦॥

ವ್ಯಾಧ– ದೇವರಾಜನಾದ ಇಂದ್ರನು ವೃತ್ರನನ್ನು ಕೊಂದು ಸ್ವರ್ಗಾಧಿಪತಿಯಾದನು. ತ್ರಿಶೂಲಿಯಾದ ದೇವನಾದ ಶಿವನೂ ದಕ್ಷಯಜ್ಞವನ್ನು ಭಗ್ನಗೊಳಿಸಿ ಯಜ್ಞಭಾಗವನ್ನು ಸಂಪಾದಿಸಿದನು. ನೀನು ದೇವತೆಗಳ ನಡತೆಯನ್ನು ಅನುಸರಿಸುವವಳಾಗು. ಆದ್ದರಿಂದ ಈ ಸರ್ಪವನ್ನು ಕೊಲ್ಲು (ಕೊಲ್ಲು ಎಂದು ನನಗೆ ಆಜ್ಞೆ ಮಾಡು). ಯಾವ ಸಂಶಯವನ್ನೂ ಪಡಬೇಡ.

ಭೀಷ್ಮಃ

ಅಸಕೃತ್ ಪ್ರೋಚ್ಯಮಾನಾಪಿ ಗೌತಮೀ ಭುಜಗಂ ಪ್ರತಿ ।
ಲುಬ್ಧಕೇನ ಮಹಾಭಾಗಾ ಪಾಪೇ ನೈವಾಕರೋನ್ಮತಿಮ್ ॥೩೧॥

ಭೀಷ್ಮರು– ಮಹಾನುಭಾವಳಾದ ಗೌತಮಿಯು ಸರ್ಪದ ವಿಷಯದಲ್ಲಿ ವ್ಯಾಧನು ಹೀಗೆ ಅನೇಕ ಬಾರಿ ಹೇಳಿದರೂ ಅದನ್ನು ಕೊಲ್ಲುವ ಪಾಪದ ಬುದ್ಧಿಯನ್ನು ಮಾಡಲಿಲ್ಲ.

ಈಷದುಚ್ಛ್ವಸಮಾನಸ್ತು ಕೃಚ್ಛ್ರಾತ್ ಸಂಸ್ತಭ್ಯ ಪನ್ನಗಃ ।
ಉತ್ಸಸರ್ಜ ಗಿರಂ ಮಂದಾಂ ಮಾನುಷೀಂ ಪಾಶಪೀಡಿತಃ ॥೩೨॥

ಆ ಸರ್ಪವು ಸ್ವಲ್ಪ ಸಮಾಧಾನದ ನಿಟ್ಟುಸಿರನ್ನು ಬಿಟ್ಟು, ಹಗ್ಗದಿಂದ ಬಿಗಿದ ಕಾರಣದಿಂದ ಕಷ್ಟಪಡುತ್ತಾ ಹಾಗೆಯೇ ಸುಧಾರಿಸಿಕೊಂಡು ಮನುಷ್ಯರ ವಾಣಿಯಲ್ಲಿ ನಿಧಾನವಾಗಿ ಮಾತನಾಡಿತು.

ಕೋ ನ್ವರ್ಜುನಕ ದೋಷೋಽತ್ರ ವಿದ್ಯತೇ ಮಮ ಬಾಲಕೇ ।
ಅಸ್ವತಂತ್ರಂ ಹಿ ಮಾಂ ಮೃತ್ಯುರ್ವಿವಶಂ ಸಮಚೂಚುದತ್ ॥೩೩॥

ಎಲೈ ಅರ್ಜುನಕನೇ, ಈ ಬಾಲಕನ ವಿಷಯದಲ್ಲಿ ನನ್ನ ಅಪರಾಧವು ಏನಿದೆ? ಅಸ್ವತಂತ್ರನಾಗಿ ವಿವಶನಾದ ನನ್ನನ್ನು ಮೃತ್ಯುವು ಆ ರೀತಿಯಲ್ಲಿ ಪ್ರೇರಿಸಿತು.

ತಸ್ಯಾಹಂ ವಚನಾದ್ ದಷ್ಟೋ ನ ಕೋಪೇನ ನ ಕಾಮ್ಯಯಾ ।
ನ ತತ್ರ ಕಿಲ್ಬಿಷಂ ಲುಬ್ಧ ವಿದ್ಯತೇ ಮಮ ಬಾಲಿಶ ॥೩೪॥

ಮೃತ್ಯುವಿನ ವಚನದಂತೆ ನಾನು ಈ ಬಾಲಕನನ್ನು ಕಡಿದೆ. ಕೋಪದಿಂದಾಗಲೀ ಅಥವಾ ನನ್ನ ಸ್ವಂತ ಇಚ್ಛೆಯಿಂದಾಗಲೀ ಕಡಿಯಲಿಲ್ಲ. ಎಲೈ ಬೇಡನೇ, ಬಾಲಿಶನೇ, ಇದರಲ್ಲಿ ನನ್ನ ಅಪರಾಧವು ಏನಿದೆ?

ಲುಬ್ಧಕಃ

ಯದ್ಯನ್ಯವಶಗೇನೇದಂ ಕೃತಂ ತೇ ಪನ್ನಗಾಶುಭಮ್ ।
ಕಾರಣಂ ವೈ ತ್ವಮಪ್ಯತ್ರ ತಸ್ಮಾತ್ ತ್ವಮಪಿ ಕಿಲ್ಬಿಷೀ ॥೩೫॥

ವ್ಯಾಧ– ಎಲೈ ಸರ್ಪವೇ, ಇನ್ನೊಬ್ಬರಿಗೆ ವಶವಾಗಿ ನೀನು ಈ ಕಾರ್ಯವನ್ನು ಮಾಡಿದ್ದರೆ ಈ ಕಾರ್ಯವನ್ನು ಎಸಗಲು ನೀನೂ ಕಾರಣನಾದವನು. ಆದ್ದರಿಂದ ನೀನೂ ಅಪರಾಧಿಯಾಗುವಿ.

ಮೃತ್ಪಾತ್ರಸ್ಯ ಕ್ರಿಯಾಯಾಂ ಹಿ ದಂಡಚಕ್ರಾದಯೋ ಯಥಾ ।
ಕಾರಣತ್ವೇ ಪ್ರಕಲ್ಪ್ಯಂತೇ ತಥಾ ತ್ವಮಪಿ ಪನ್ನಗ ॥೩೬॥

ಮಣ್ಣಿನ ಪಾತ್ರೆಯನ್ನು ಮಾಡುವಾಗ ಕುಂಬಾರನಲ್ಲದೆ ದಂಡಚಕ್ರಾದಿಗಳು ಹೇಗೆ ಕಾರಣವಾಗುತ್ತವೆಯೋ, ಎಲೈ ಸರ್ಪವೇ, ಅದರಂತೆ ನೀನೂ ಕಾರಣನಾಗಿದ್ದೀಯೆ.

ಕಿಲ್ಬಿಷೀ ಚಾಪಿ ಮೇ ವಧ್ಯಃ ಕಿಲ್ಬಿಷೀ ಚಾಸಿ ಪನ್ನಗ ।
ಆತ್ಮಾನಂ ಕಾರಣಂ ಹ್ಯತ್ರ ಸಮಾಖ್ಯಾಸಿ ಭುಜಂಗಮ ॥೩೭॥

ಎಲೈ ಸರ್ಪವೇ, ಅಪರಾಧವನ್ನು ಮಾಡಿದವನು ನನ್ನಿಂದ ವಧ್ಯನಾಗುತ್ತಾನೆ. ನೀನಾದರೂ ಅಪರಾಧವನ್ನು ಮಾಡಿದವನು. ಏಕೆಂದರೆ ಎಲೈ ಸರ್ಪವೇ, ನಾನು ಕಡಿದೆನು ಎಂದು ನೀನು ಹೇಳುತ್ತಿದ್ದೀಯಷ್ಟೆ?

ಸರ್ಪಃ

ಸರ್ವ ಏತೇ ಹ್ಯಸ್ವವಶಾ ದಂಡಚಕ್ರಾದಯೋ ಯಥಾ ।
ತಥಾಹಮಪಿ ತಸ್ಮಾನ್ಮೇ ನೈಷ ಹೇತುರ್ಮತಸ್ತವ ॥೩೮॥

ಸರ್ಪ– ಈ ದಂಡ-ಚಕ್ರಾದಿಗಳೆಲ್ಲವೂ ಅಸ್ವತಂತ್ರವಾದವುಗಳು. ಆದ್ದರಿಂದ ಅವುಗಳಿಗೆ ಹೇಗೆ ದೋಷವಿಲ್ಲವೋ, ಅದರಂತೆ ನನಗೂ ಸಹ ಈ ವಿಷಯದಲ್ಲಿ ದೋಷವಿಲ್ಲ.

ಅಥ ವಾ ಮತಮೇತತ್ ತೇ ತೇಽಪ್ಯನ್ಯೋನ್ಯಪ್ರಯೋಜಕಾಃ ।
ಕಾರ್ಯಕಾರಣಸಂದೇಹೋ ಭವತ್ಯನ್ಯೋನ್ಯಚೋದನಾತ್ ॥೩೯॥

ಅಥವಾ ದಂಡ-ಚಕ್ರಾದಿಗಳು ಪರಸ್ಪರವಾಗಿ ಕಾರ್ಯವನ್ನು ಕುರಿತು ಪ್ರಯೋಜಕಗಳಾಗುತ್ತವೆ ಎಂದು ನೀನು ಹೇಳುವುದಾದರೆ ಪರಸ್ಪರ ಪ್ರೇರಣೆ ಮಾಡಿದುದರಿಂದ ಯಾವುದು ಕಾರಣ, ಯಾವುದು ಕಾರಣವಲ್ಲ ಎಂಬ ಸಂದೇಹ ಉಂಟಾಗುತ್ತದೆ.

ಏವಂ ಸತಿ ನ ದೋಷೋ ಮೇ ನಾಸ್ಮಿ ವಧ್ಯೋ ನ ಕಿಲ್ಬಿಷೀ ।
ಕಿಲ್ಬಿಷಂ ಮನ್ಯಸೇ ಹಿ ತ್ವಂ ವಧ್ಯಮೇವಂ ಪ್ರಭಾಷಸೇ ॥೪೦॥

ಆದ್ದರಿಂದ ನನಗೆ ದೋಷವಿಲ್ಲ. ನಾನು ಅಪರಾಧವನ್ನು ಮಾಡಿಲ್ಲ. ನೀನು ಮಾತ್ರ ನಾನು ಅಪರಾಧವನ್ನು ಮಾಡಿದ್ದೇನೆ, ಆದ್ದರಿಂದ ವಧ್ಯನಾಗುತ್ತೇನೆ ಎಂದು ಹೇಳುತ್ತಿದ್ದೀಯೆ.

ಲುಬ್ಧಕಃ

ಕಾರಣಂ ಯದಿ ನ ಸ್ಯಾದ್ವೈ ನ ಕರ್ತಾ ಸ್ಯಾತ್ತ್ವಮಪ್ಯುತ ।
ವಿನಾಶೇ ಕಾರಣಂ ತ್ವಂ ಚ ತಸ್ಮಾದ್ ವಧ್ಯೋಽಸಿ ಮೇ ಮತಃ ॥೪೧॥

ವ್ಯಾಧ– ಒಂದು ಕ್ರಿಯೆಯನ್ನು ಕುರಿತು ಸ್ವತಂತ್ರವಾದ ಕಾರಣವು ಇಲ್ಲವೆಂದಾದರೆ ಆಗ ನೀನು ಕರ್ತೃವಾಗುತ್ತಿರಲಿಲ್ಲ. 'ಸ್ವತಂತ್ರಃ ಕರ್ತಾ' ಎಂದು ಸ್ಮೃತಿಯಿದೆಯಷ್ಟೆ? ಆದ್ದರಿಂದ ನೀನೂ ಸಹ ವಿಶೇಷ ಕಾರಣನಲ್ಲದಿದ್ದರೂ ದಂಡ-ಚಕ್ರಾದಿಗಳಂತೆ

ಸಾಮಾನ್ಯಕಾರಣನಾದವನು. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ವಧ್ಯನಾದವನು. (ಲಕ್ಷಾಲಂಕಾರ).

ಅಸತ್ಯವಿಕೃತೇ ಕಾರ್ಯೇ ನೇಹ ಪನ್ನಗ ಲಿಪ್ಯತೇ ।
ತಸ್ಮಾತ್ತ್ವಂ ನಾತ್ರ ಹೇತುಃ ಸ್ಯಾದ್ ವಧ್ಯಃ ಕಿಂ ಬಹು ಭಾಷಸೇ ॥೪೨॥

ಎಲೈ ಸರ್ಪವೇ, ನೀನೊಬ್ಬನೇ ಮಾಡಿದ ದಂಶನರೂಪವಾದ ಕಾರ್ಯವಿಲ್ಲದಿದ್ದರೆ ನೀನೂ ಅಪರಾಧಿಯಾಗುತ್ತಿರಲಿಲ್ಲ. ಆಗ ನೀನು ಈ ಮರಣಕ್ಕೆ ಕಾರಣನೂ ಆಗುತ್ತಿರಲಿಲ್ಲ. ವಧ್ಯನಾದ ನೀನು ಏಕೆ ಬಹಳವಾಗಿ ಮಾತನಾಡುತ್ತಿದ್ದೀಯೆ?

ಕಾರ್ಯಾಭಾವೇ ಕ್ರಿಯಾ ನ ಸ್ಯಾತ್ತತ್ಸತ್ಯಸತ್ಯಪಿ ಕಾರಣೇ ।
ಸ ಮೇ ತ್ವಮತ್ರ ಹೇತೌ ಮೇ ವಾಚ್ಯೋ ಹೇತುರ್ವಿಶೇಷತಃ ॥೪೩॥

ಕಾರಣವು ಇದ್ದರೂ ಅಥವಾ ಇಲ್ಲದಿದ್ದರೂ ಕಾರಣದ ವ್ಯಾಪಾರವಿಲ್ಲದಿದ್ದರೆ ಕಾರ್ಯವು ಉಂಟಾಗುವುದಿಲ್ಲ. ಅನೇಕ ಕಾರಣವಿರುವ ಈ ಬ್ರಹ್ಮವಧೆ ರೂಪ ಕಾರ್ಯದಲ್ಲಿ ನೀನು ಪ್ರತ್ಯಕ್ಷವಾಗಿ ದಂಶನವನ್ನು ಮಾಡಿರುವುದರಿಂದ ವಿಶೇಷ ಕಾರಣನಾಗಿದ್ದೀಯೆ.

ಸರ್ಪಃ

ಯದ್ಯಹಂ ಕಾರಣತ್ವೇನ ಮತೋ ಲುಬ್ಧಕ ತತ್ತ್ವತಃ ।
ಅನ್ಯಃ ಪ್ರಯೋಕ್ತಾ ಸ್ಯಾದತ್ರ ಕಿಲ್ಬಿಷೀ ಜಂತುನಾಶನೇ ॥೪೪॥

ಸರ್ಪ– ಎಲೈ ವ್ಯಾಧನೇ, ನೀನು ನನ್ನನ್ನು ಬ್ರಹ್ಮವಧೆಗೆ ಕಾರಣವೆಂದು ಹೇಳುವುದಾದರೆ ಅಲ್ಲಲ್ಲಿ ಪ್ರಾಣಿಗಳು ಸಹಜವಾಗಿ ಮರಣವನ್ನು ಹೊಂದುವಾಗ ಬೇರೆ ಇನ್ನೊಬ್ಬನನ್ನು ಕಾರಣನೆಂದು ಹೇಳಬೇಕಾದೀತು.

ಲುಬ್ಧಕಃ

ವಧ್ಯಸ್ತ್ವಂ ಮಮ ದುರ್ಬುದ್ಧೇ ಬಾಲಘಾತೀ ನೃಶಂಸಕೃತ್ ।
ಭಾಷಸೇ ಕಿಂ ಪುನಸ್ತ್ವಂ ತು ವಧ್ಯಃ ಸನ್ ಪನ್ನಗಾಧಮ ॥೪೫॥

ವ್ಯಾಧ– ಎಲೈ ದುರ್ಬುದ್ಧಿಯೇ, ಬಾಲಹತ್ಯೆ ರೂಪವಾದ ಕ್ರೂರಕರ್ಮವನ್ನು

ಮಾಡಿದ ನೀನು ನನ್ನಿಂದ ವಧ್ಯನಾದವನು. ಎಲೈ ಪನ್ನಗಾಧಮನೇ, ವಧ್ಯನಾದ ನೀನು ಏಕೆ ಬಹಳ ಮಾತನಾಡುತ್ತಿದ್ದೀಯೆ?

ಸರ್ಪಃ

ಯಥಾ ಹವೀಂಷಿ ಜುಹ್ವಾನಾ ಅಗ್ನೌ ವೈ ಲುಬ್ಧಕರ್ತ್ವಿಜಃ ।
ನ ಫಲಂ ಪ್ರಾಪ್ನುವಂತ್ಯತ್ರ ಫಲಯೋಗಾತ್ ತಥಾ ಹ್ಯಹಮ್ ॥೪೬॥

ಸರ್ಪ– ಎಲೈ ಬೇಡನೇ, ಅಗ್ನಿಯಲ್ಲಿ ಹೋಮವನ್ನು ಮಾಡುವ ಋತ್ವಿಜರು ಸ್ವರ್ಗರೂಪವಾದ ಫಲವನ್ನು ಪಡೆಯುವುದಿಲ್ಲ. ಯಜಮಾನನು ಸ್ವರ್ಗವನ್ನು ಪಡೆಯುತ್ತಾನೆ. ನಾನೂ ಸಹ ಅವನಂತೆ.

ಭೀಷ್ಮಃ

ತಥಾ ಬ್ರುವತಿ ತಸ್ಮಿಂಸ್ತು ಪನ್ನಗೇ ಮೃತ್ಯುಚೋದಿತೇ ।
ಆಜಗಾಮ ತತೋ ಮೃತ್ಯುಃ ಪನ್ನಗಂ ಚಾಬ್ರವೀದಿದಮ್ ॥೪೭॥

ಭೀಷ್ಮರು– ಮೃತ್ಯುಚೋದಿತವಾದ ಆ ಸರ್ಪವು ಹಾಗೆ ಮಾತನಾಡುತ್ತಿರಲು ಆಗ ಅಲ್ಲಿಗೆ ಮೃತ್ಯುವು (ಮೃತ್ಯುದೇವತೆ) ಬಂದು ಸರ್ಪವನ್ನು ಕುರಿತು ಮಾತನಾಡಿದನು.

ಕಾಲೇನಾಹಂ ಪ್ರಣುದಿತಃ ಪನ್ನಗ ತ್ವಾಮಚೂಚುದಮ್ ।
ವಿನಾಶಹೇತುರ್ನಾಸ್ಯ ತ್ವಮಹಂ ವಾ ಪ್ರಾಣಿನಃ ಶಿಶೋಃ ॥೪೮॥

ಎಲೈ ಸರ್ಪವೇ, ಕಾಲದಿಂದ ಪ್ರೇರಿತನಾಗಿ ನಾನು ನಿನಗೆ ಪ್ರಚೋದನೆಯನ್ನು ಮಾಡಿದೆ. ಈ ಶಿಶುವಿನ ಮರಣವನ್ನು ಕುರಿತು ನಾನಾಗಲೀ ಅಥವಾ ನೀನಾಗಲೀ ಕಾರಣರಲ್ಲ.

ಯಥಾ ವಾಯುರ್ಬಲೋಪೇತೋ ವಿಕರ್ಷತಿ ಜಲಪ್ರದಾನ್ ।
ತದ್ವಜ್ಜಲದವಚ್ಚಾಹಂ ಕಾಲಸ್ಯಾಹಂ ವಶಾನುಗಃ ॥೪೯॥

ಹೇಗೆ ಪ್ರಬಲವಾದ ವಾಯುವು ಮೋಡಗಳನ್ನು ಎಳೆದುಕೊಂಡು ಹೋಗುತ್ತದೆಯೋ ಅದರಂತೆ ನಾನು ಆ ಮೋಡದಂತೆ ಕಾಲಕ್ಕೆ ವಶನಾದವನು.

ಸಾತ್ತ್ವಿಕಾ ರಾಜಸಾಶ್ಚೈವ ತಾಮಸಾಶ್ಚೈವ ಕೇಚನ ।
ಭಾವಾಃ ಕಾಲಾತ್ಮಕಾಃ ಸರ್ವೇ ಪ್ರವರ್ತಂತೇ ಹಿ ಜಂತುಷು ॥೫೦॥

ಪ್ರಾಣಿಗಳಲ್ಲಿ ಉಂಟಾಗುವ ಸಾತ್ವಿಕ, ರಾಜಸ, ತಾಮಸ ಅಭಿಪ್ರಾಯಗಳು ಏನಿವೆಯೋ ಅವೆಲ್ಲವೂ ಕಾಲಕ್ಕೆ ಅಧೀನವಾದವುಗಳು.

ಜಂಗಮಾಃ ಸ್ಥಾವರಾಶ್ಚೈವ ದಿವಿ ವಾ ಯದಿ ವಾ ಭುವಿ ।
ಸರ್ವೇ ಕಾಲಾತ್ಮಕಾಃ ಸರ್ಪ ಕಾಲಾತ್ಮಕಮಿದಂ ಜಗತ್ ॥೫೧॥

ಎಲೈ ಸರ್ಪವೇ, ದೇವಲೋಕದಲ್ಲಿ ಅಥವಾ ಭೂಲೋಕದಲ್ಲಿ ಇರುವ ಸ್ಥಾವರ-ಜಂಗಮ ಪ್ರಾಣಿಗಳು ಎಲ್ಲವೂ ಕಾಲಕ್ಕೆ ವಶವಾದವುಗಳು. ಈ ಜಗತ್ತೇ ಕಾಲಕ್ಕೆ ವಶವಾಗಿದೆ.

ಪ್ರವೃತ್ತಯಶ್ಚ ಯಾ ಲೋಕೇ ತಥೈವ ಚ ನಿವೃತ್ತಯಃ ।
ತಾಸಾಂ ಪ್ರಕೃತಯೋ ಯಾಶ್ಚ ಸರ್ವಂ ಕಾಲಾತ್ಮಕಂ ಸ್ಮೃತಮ್ ॥೫೨॥

ಈ ಜಗತ್ತಿನಲ್ಲಿರುವ ಪ್ರವೃತ್ತಿಗಳು, ನಿವೃತ್ತಿಗಳು ಮತ್ತು ಅವುಗಳ ಸ್ವಭಾವಗಳು ಎಲ್ಲವೂ ಕಾಲಕ್ಕೆ ಅಧೀನವೆಂದು ಹೇಳಲ್ಪಡುತ್ತವೆ.

ಆದಿತ್ಯಶ್ಚಂದ್ರಮಾ ವಿಷ್ಣುರಾಪೋ ವಾಯುಃ ಶತಕ್ರತುಃ ।
ಅಗ್ನಿಃ ಖಂ ಪೃಥಿವೀ ಮಿತ್ರ ಓಷಧ್ಯೋ ಮರುತೋ ದಿಶಃ ॥೫೩॥

ಸರಿತಃ ಸಾಗರಾಶ್ಚೈವ ಭಾವಾಭಾವೌ ಚ ಪನ್ನಗ ।
ಸರ್ವೇ ಕಾಲೇನ ಸೃಜ್ಯಂತೇ ಹ್ರಿಯಂತೇ ಚ ತಥಾ ಪುನಃ ॥೫೪॥

ಸೂರ್ಯ, ಚಂದ್ರ, ವಿಷ್ಣು, ಜಲ, ವಾಯು, ಇಂದ್ರ, ಅಗ್ನಿ, ಆಕಾಶ, ಪೃಥಿವಿ, ಮಿತ್ರ, ಓಷಧಿಗಳು, ಮರುತ್ತುಗಳು, ದಿಕ್ಕುಗಳು, ನದಿಗಳು, ಸಾಗರಗಳು, ಶುಭಾಶುಭಗಳು- ಎಲೈ ಸರ್ಪವೇ, ಎಲ್ಲವೂ ಕಾಲದಿಂದ ಸೃಷ್ಟಿಸಲ್ಪಡುತ್ತವೆ, ಕಾಲದಿಂದಲೇ ವಿನಾಶಗೊಳಿಸಲ್ಪಡುತ್ತವೆ.

ಏವಂ ಜ್ಞಾತ್ವಾ ಕಥಂ ಮಾಂ ತ್ವಂ ಸದೋಷಂ ಸರ್ಪ ಮನ್ಯಸೇ ।
ಅಥ ಚೈವಂಗತೇ ದೋಷೋ ಮಯಿ ತ್ವಮಪಿ ದೋಷವಾನ್ ॥೫೫॥

ಎಲೈ ಸರ್ಪವೇ, ಹೀಗಿರುವಾಗ ನೀನು ನನ್ನಲ್ಲಿ ಹೇಗೆ ದೋಷವನ್ನು ಎಣಿಸುತ್ತೀಯೆ? ಹೀಗಿದ್ದರೂ ನಾನು ದೋಷಿಯಾಗುವುದಾದರೆ ನೀನೂ ಸಹ ದೋಷಿಯಾಗುವಿ.

ಸರ್ಪಃ

ನಿರ್ದೋಷಂ ದೋಷವಂತಂ ವಾ ನ ತ್ವಾ ಮೃತ್ಯೋ ಬ್ರವೀಮ್ಯಹಮ್ ।
ತ್ವಯಾಹಂ ಚೋದಿತ ಇತಿ ಬ್ರವೀಮ್ಯೇತಾವದೇವ ತು ॥೫೬॥

ಸರ್ಪ– ಎಲೈ ಮೃತ್ಯುವೇ, ನಾನು ನಿನ್ನನ್ನು ನಿರ್ದೋಷಿ ಎಂದಾಗಲೀ ಅಥವಾ ದೋಷಿ ಎಂದಾಗಲೀ ಹೇಳುತ್ತಿಲ್ಲ. ನಾನು ನಿನ್ನಿಂದ ಪ್ರೇರಿಸಲ್ಪಟ್ಟೆನು ಎಂದಿಷ್ಟು ಮಾತ್ರ ಹೇಳುತ್ತಿದ್ದೇನೆ.

ಯದಿ ಕಾಲೇ ತು ದೋಷೋಽಸ್ತಿ ಯದಿ ತತ್ರಾಪಿ ನೇಷ್ಯತೇ ।
ದೋಷೋ ನೈವ ಪರೀಕ್ಷ್ಯೋ ಮೇ ನ ಹ್ಯತ್ರಾಧಿಕೃತಾ ವಯಮ್ ॥೫೭॥

ಕಾಲದಲ್ಲಿಯೂ ದೋಷವಿದ್ದರೆ ಅಥವಾ ಇಲ್ಲದಿದ್ದರೆ ಆಗ ದೋಷಪರೀಕ್ಷೆಗೆ ಹೋಗಬಾರದು.ದೋಷದ ಚಿಂತೆಯನ್ನು ಮಾಡಲು ನಾವು ಅಧಿಕಾರಿಗಳಲ್ಲ.

ನಿರ್ಮೋಕ್ಷಸ್ತ ಸ್ಯ ದೋಷಸ್ಯ ಮಯಾ ಕಾರ್ಯೋ ಯಥಾ ತಥಾ ।
ಮೃತ್ಯೋ ವಿದೋಷಃ ಸ್ಯಾಮೇವ ಯಥಾ ತನ್ಮೇ ಪ್ರಯೋಜನಮ್ ॥

ಎಲೈ ಮೃತ್ಯುವೇ, ನಾನು ಈ ದೋಷದಿಂದ ಹೇಗಾದರೂ ನಿವೃತ್ತಿಯನ್ನು ಹೊಂದಬೇಕು. ಅದು ನನಗೆ ಪ್ರಯೋಜನ.

ಭೀಷ್ಮಃ

ಸರ್ಪೋಽಥಾರ್ಜುನಕಂ ಪ್ರಾಹ ಶ್ರುತಂ ತೇ ಮೃತ್ಯುಭಾಷಿತಮ್ ।
ನಾನಾಗಸಂ ಮಾಂ ಪಾಶೇನ ಸಂತಾಪಯಿತುಮರ್ಹಸಿ ॥೫೯॥

ಭೀಷ್ಮರು– ಆಗ ಸರ್ಪವು ಅರ್ಜುನಕನನ್ನು ಕುರಿತು, ಮೃತ್ಯುವಿನ ಮಾತನ್ನು ನೀನು ಕೇಳಿದೆ. ನಿರಪರಾಧಿಯಾದ ನನ್ನನ್ನು ಹಗ್ಗದಿಂದ ಬಿಗಿದು ಪೀಡಿಸಬೇಡ ಎಂದು ಹೇಳಿತು.

ಲುಬ್ಧಕಃ

ಮೃತ್ಯೋಃ ಶ್ರುತಂ ಮೇ ವಚನಂ ತವ ಚೈವ ಭುಜಂಗಮ ।
ನೈವ ತಾವದ್ ವಿದೋಷತ್ವಂ ಭವತಿ ತ್ವಯಿ ಪನ್ನಗ ॥೬೦॥

ವ್ಯಾಧ– ಎಲೈ ಸರ್ಪವೇ, ನಾನು ಮೃತ್ಯುವಿನ ಮಾತುಗಳನ್ನು ಮತ್ತು ನಿನ್ನ ಮಾತನ್ನು ಕೇಳಿದೆ. ಎಲೈ ಸರ್ಪವೇ, ಆದರೂ ನೀನು ನಿರಪರಾಧಿಯಾಗುವುದಿಲ್ಲ.

ಮೃತ್ಯುಸ್ತ್ವಂ ಚೈವ ಹೇತುರ್ಹಿ ಜಂತೋರಸ್ಯ ವಿನಾಶನೇ ।
ಉಭಯಂ ಕಾರಣಂ ಮನ್ಯೇ ನ ಕಾರಣಮಕಾರಣಮ್ ॥೬೧॥

ಈ ಬಾಲಕನ ಮರಣವನ್ನು ಕುರಿತು ಮೃತ್ಯು ಮತ್ತು ನೀನು ಇಬ್ಬರೂ ಕಾರಣರಾದವರು ಎಂದು ನಾನು ತಿಳಿಯುತ್ತೇನೆ. ಕಾರಣವಿಲ್ಲದೆ ಒಂದು ಕಾರ್ಯವು ಉಂಟಾಗುವುದಿಲ್ಲ. ಕಾರಣವನ್ನು ಕಾರಣವಲ್ಲ ಎಂದು ಹೇಳಲು ಆಗುವುದಿಲ್ಲ.

ಮೃತ್ಯುಂ ತ್ವದ್ಧಿಗಮಿಷ್ಯಾಮಿ ಧ್ರುವಂ ದುಃಖಕರಂ ಸತಾಮ್ ।
ತ್ವಾಂ ಚೈವಾಹಂ ವಧಿಷ್ಯಾಮಿ ಪಾಪಂ ಪಾಪಸ್ಯ ಕಾರಣಮ್ ॥೬೨॥

ಮೃತ್ಯುವನ್ನು ಸಜ್ಜನರಿಗೆ ನಿಶ್ಚಿತವಾಗಿ ದುಃಖವನ್ನು ಕೊಡುವವನು ಎಂದು ತಿಳಿಯುತ್ತೇನೆ. ಈ ಪಾಪಕಾರ್ಯಕ್ಕೆ ಕಾರಣನಾದ ನಿನ್ನನ್ನು ಮಾತ್ರ ನಾನು ಕೊಲ್ಲುತ್ತೇನೆ.

ಮೃತ್ಯುಃ

ವಿವಶೌ ಕಾಲವಶಗಾವಾವಾಂ ತದ್ದಿಷ್ಟಕಾರಿಣೌ ।
ನಾವಾಂ ದೋಷೇಣ ಮಂತವ್ಯೌ ಯದಿ ಸಮ್ಯಕ್ ಪ್ರಪಶ್ಯಸಿ ॥೬೩॥

ಮೃತ್ಯು– ಕಾಲವಶರಾದ ನಾವಿಬ್ಬರೂ ಅದೃಷ್ಟಪ್ರೇರಿತರಾದವರು. ನಿನಗೆ ಸರಿಯಾದ ಜ್ಞಾನವಿದ್ದರೆ ನಮ್ಮನ್ನು ದೋಷಿಗಳೆಂದು ಎಣಿಸಬಾರದು.

ಲುಬ್ಧಕಃ

ಯುವಾಮುಭೌ ಕಾಲವಶೌ ಯದಿ ವೈ ಮೃತ್ಯುಪನ್ನಗೌ ।
ಹರ್ಷಕ್ರೋಧೌ ಕಥಂ ಸ್ಯಾತಾಮೇತದಿಚ್ಛಾಮಿ ವೇದಿತುಮ್ ॥೬೪॥

ವ್ಯಾಧ– ಎಲೈ ಮೃತ್ಯು-ಸರ್ಪಗಳೇ, ನೀವಿಬ್ಬರೂ ಕಾಲವಶರಾದರೆ ಪ್ರಾಣಿಗಳಿಗೆ ಉಂಟಾಗುವ ಹರ್ಷ-ಕ್ರೋಧಗಳಿಗೆ ಏನು ಕಾರಣವೆಂದು ತಿಳಿಯಲು ಬಯಸುತ್ತೇನೆ.

ಮೃತ್ಯುಃ

ಯಾಃ ಕಾಶ್ಚಿದಿಹ ಚೇಷ್ಟಾಃ ಸ್ಯುಃ ಸರ್ವಾಃ ಕಾಲವಶಾನುಗಾಃ ।
ಪೂರ್ವಮೇವೈತದುಕ್ತಂ ಹಿ ಮಯಾ ಲುಬ್ಧಕ ಕಾಲತಃ ॥೬೫॥

ಮೃತ್ಯು– ಎಲೈ ಬೇಡನೇ, ಪ್ರಾಣಿಗಳಿಗೆ ಇಲ್ಲಿ ಯಾವ ಭಾವವುಂಟಾಗುತ್ತದೆಯೋ ಅವೆಲ್ಲವೂ ಕಾಲವಶವಾದವುಗಳು ಎಂದು ನಾನು ಮೊದಲೇ ಈ ವಿಷಯವನ್ನು ಹೇಳಿದ್ದೇನೆ.

ತಸ್ಮಾದುಭೌ ಕಾಲವಶಾವಾವಾಂ ತದ್ದಿಷ್ಟಕಾರಿಣೌ ।
ನಾವಾಂ ದೋಷೇಣ ಗಂತವ್ಯೌ ತ್ವಯಾ ಲುಬ್ಧಕ ಕರ್ಹಿಚಿತ್ ॥೬೬॥

ಆದ್ದರಿಂದ ಕಾಲಕ್ಕೆ ವಶರಾದ, ಕಾಲದ ಪ್ರೇರಣೆಯಂತೆ ಕಾರ್ಯವನ್ನು ಮಾಡುವ ನಮ್ಮಿಬ್ಬರನ್ನೂ ಎಲೈ ಅರ್ಜುನಕನೇ, ನೀನು ಯಾವ ಕಾರಣದಿಂದಲೂ ಅಪರಾಧಿಗಳೆಂದು ಎಣಿಸಬಾರದು.

ಭೀಷ್ಮಃ

ಅಥೋಪಗಮ್ಯ ಕಾಲಸ್ತು ತಸ್ಮಿನ್ ಧರ್ಮಾರ್ಥಸಂಶಯೇ ।
ಅಬ್ರವೀತ್ ಪನ್ನಗಂ ಮೃತ್ಯುಂ ಲುಬ್ಧಮರ್ಜುನಕಂ ಚ ತಮ್ ॥೬೭॥

ಭೀಷ್ಮರು– ಆಗ ಧರ್ಮಾರ್ಥಗಳ ಸಂಶಯವು ಉಂಟಾಗುತ್ತಿರುವಾಗ ಕಾಲದೇವತೆಯು ಸ್ವತಃ ಬಂದು ಸರ್ಪವನ್ನೂ, ಮೃತ್ಯುವನ್ನೂ ಮತ್ತು ಬೇಡನಾದ ಅರ್ಜುನಕನನ್ನೂ ಕುರಿತು ಮಾತನಾಡಿದನು.

ಕಾಲಃ

ನೈವಾಹಂ ನಾಪ್ಯಯಂ ಮೃತ್ಯುರ್ನಾಯಂ ಲುಬ್ಧಕ ಪನ್ನಗಃ ।
ಕಿಲ್ಬಿಷೀ ಜಂತುಮರಣೇ ನ ವಯಂ ಹಿ ಪ್ರಯೋಜಕಾಃ ॥೬೮॥

ಕಾಲ– ಎಲೈ ಬೇಡನೇ, ನಾನಾಗಲೀ, ಈ ಮೃತ್ಯುವಾಗಲೀ, ಈ ಬೇಡನಾಗಲೀ ಅಥವಾ ಈ ಸರ್ಪವಾಗಲೀ, ಈ ಬಾಲಕನ ಮರಣವನ್ನು ಕುರಿತು ಅಪರಾಧಿಗಳಲ್ಲ. ಏಕೆಂದರೆ ನಾವು ಈ ಮರಣಕ್ಕೆ ಪ್ರಯೋಜಕರಲ್ಲ.

ಅಕರೋದ್ ಯದಯಂ ಕರ್ಮ ತನ್ನೋಽರ್ಜುನಕ ಚೋದಕಮ್ ।
ಪ್ರಣಾಶಹೇತುರ್ನಾನ್ಯೋಽಸ್ಯ ವಧ್ಯತೇಽಯಂ ಸ್ವಕರ್ಮಣಾ ॥೬೯॥

ಎಲೈ ಅರ್ಜುನಕನೇ, ಈ ಬಾಲಕನು ಹಿಂದೆ ಯಾವ ಕರ್ಮವನ್ನು ಮಾಡಿದ್ದಾನೆಯೋ ಅದು ನಮಗೆ ಪ್ರಚೋದಕವಾದುದು. ಅದನ್ನು ಬಿಟ್ಟು ಅವನ

ಮರಣಕ್ಕೆ ಬೇರೆ ಕಾರಣವಿಲ್ಲ. ಬಾಲಕನು ತನ್ನ ಕರ್ಮದಿಂದಲೇ ಮರಣವನ್ನು ಹೊಂದಿದ್ದಾನೆ.

ಯದನೇನ ಕೃತಂ ಕರ್ಮ ತೇನಾಯಂ ನಿಧನಂ ಗತಃ ।
ವಿನಾಶಹೇತುಃ ಕರ್ಮಾಸ್ಯ ಸರ್ವೇ ಕರ್ಮವಶಾ ವಯಮ್ ॥೭೦॥

ಇವನು ಮಾಡಿದ ಕರ್ಮದಿಂದ ನಿಧನವನ್ನು ಹೊಂದಿದನು. ಇವನ ವಿನಾಶವನ್ನು ಕುರಿತು ಕರ್ಮವೇ ಕಾರಣ. ಎಲ್ಲರೂ ಕರ್ಮವಶರಾದವರು.

ಕರ್ಮದಾಯಾದವಾಲ್ಲೋಕಃ ಕರ್ಮಸಂಬಂಧಲಕ್ಷಣಃ ।
ಕರ್ಮಾಣಿ ಚೋದಯಂತೀಹ ಯಥಾನ್ಯೋನ್ಯಂ ತಥಾ ವಯಮ್ ॥

ಪ್ರಾಣಿಯು ಜನಿಸುವಾಗ ಕರ್ಮಗಳನ್ನು ತೆಗೆದುಕೊಂಡೇ ಹುಟ್ಟುತ್ತಾನೆ. ಕರ್ಮಸಂಬಂಧವು ಯಾವಾಗಲೂ ಅವನಿಗೆ ಇದ್ದೇ ಇದೆ. ಆ ಕರ್ಮಗಳು ಅವನಿಗೆ ಪರಸ್ಪರವಾಗಿ ಪ್ರಚೋದಿಸುತ್ತವೆ. ಅದರಂತೆ ನಾವೂ ಸಹ.

ಯಥಾ ಮೃತ್ಪಿಂಡತಃ ಕರ್ತಾ ಕುರುತೇ ಯದ್ಯದಿಚ್ಛತಿ ।
ಏವಮಾತ್ಮಕೃತಂ ಕರ್ಮ ಮಾನವಃ ಪ್ರತಿಪದ್ಯತೇ ॥೭೨॥

ಹೇಗೆ ಕುಂಬಾರನು ಮಣ್ಣಿನ ಮುದ್ದೆಯಿಂದ ತನಗಿಷ್ಟವಾದ ಬೇರೆ ಬೇರೆ ಆಕಾರಗಳನ್ನು ಸೃಷ್ಟಿಸುತ್ತಾನೆಯೋ ಅದರಂತೆ ಮನುಷ್ಯನೂ ಸಹ ತಾನು ಮಾಡಿದ ಕರ್ಮಗಳಿಂದ ಬೇರೆ ಬೇರೆ ಆಕಾರಗಳನ್ನು ತಾಳುತ್ತಾನೆ.

ಯಥಾ ಛಾಯಾತಪೌ ನಿತ್ಯಂ ಸುಸಂಬದ್ಧೌ ನಿರಂತರಮ್ ।
ತಥಾ ಕರ್ಮ ಚ ಕರ್ತಾ ಚ ಸಂಬದ್ಧಾವಾತ್ಮಕರ್ಮಭಿಃ ॥೭೩॥

ಹೇಗೆ ನೆರಳು ಮತ್ತು ಬಿಸಿಲು ನಿರಂತರವಾಗಿ ಸಂಬಂಧವನ್ನು ಹೊಂದಿರುತ್ತವೆಯೋ ಹಾಗೆಯೇ ಕರ್ತೃವಾದ ಜೀವನೂ ಮತ್ತು ಅವನ ಕರ್ಮವೂ ನಿರಂತರವಾಗಿ ಸಂಬಂಧವನ್ನು ಹೊಂದಿರುತ್ತವೆ.

ಏವಂ ನಾಹಂ ನ ವೈ ಮೃತ್ಯುರ್ನ ಸರ್ಪೋ ನ ತಥಾ ಭವಾನ್ ।
ನ ಚೇಯಂ ಬ್ರಾಹ್ಮಣೀ ವೃದ್ಧಾ ಶಿಶುರೇವಾತ್ರ ಕಾರಣಮ್ ॥೭೪॥

ಆದ್ದರಿಂದ ನಾನಾಗಲೀ, ಮೃತ್ಯುವಾಗಲೀ, ಸರ್ಪವಾಗಲೀ, ನೀನಾಗಲೀ ಅಥವಾ ವೃದ್ಧಬ್ರಾಹ್ಮಣಿಯಾಗಲೀ ಕಾರಣರಲ್ಲ. ತನ್ನ ಮರಣವನ್ನು ಕುರಿತು ಈ ಶಿಶುವೇ ಕಾರಣ.

ತಸ್ಮಿಂಸ್ತಥಾ ಬ್ರುವಾಣೇ ತು ಬ್ರಾಹ್ಮಣೇ ಗೌತಮೀ ನೃಪ ।
ಸ್ವಕರ್ಮಪ್ರತ್ಯಯಾಲ್ಲೋಕಾನ್ ಮತ್ವಾಽರ್ಜುನಕಮಬ್ರವೀತ್ ॥೭೫॥

ಎಲೈ ರಾಜನೇ, ಕಾಲದೇವತೆಯು ಹಾಗೆ ಹೇಳುತ್ತಿರಲು ಬ್ರಾಹ್ಮಣಿಯಾದ ಗೌತಮಿಯು, ಪ್ರಾಣಿಗಳು ತಮ್ಮ ಕರ್ಮಗಳಿಂದ ಸಂಪಾದಿಸಿದ ಸುಖ-ದುಃಖಗಳನ್ನು ಹೊಂದುತ್ತಾರೆಂದು ತಿಳಿದು, ಅರ್ಜುನಕನನ್ನು ಕುರಿತು ಹೇಳಿದಳು.

ನೈವ ಕಾಲೋ ನ ಭುಜಗೋ ನ ಮೃತ್ಯುರಿಹ ಕಾರಣಮ್ ।
ಸ್ವಕರ್ಮಭಿರಯಂ ಬಾಲಃ ಕಾಲೇನ ನಿಧನಂ ಗತಃ ॥೭೬॥

ಕಾಲವಾಗಲೀ, ಸರ್ಪವಾಗಲೀ, ಮೃತ್ಯುವಾಗಲೀ ಈ ಮರಣವನ್ನು ಕುರಿತು ಕಾರಣರಲ್ಲ. ಈ ಬಾಲಕನು ತಾನು ಮಾಡಿದ ಕರ್ಮದಿಂದಾಗಿ ಅನುರೂಪವಾದ ಕಾಲದಲ್ಲಿ ನಿಧನವನ್ನು ಹೊಂದಿದ್ದಾನೆ.

ಮಯಾ ಚ ತತ್ಕೃತಂ ಕರ್ಮ ಯೇನಾಯಂ ಮೇ ಸುತೋ ಹತಃ ।
ಯಾತು ಕಾಲಸ್ತಥಾ ಮೃತ್ಯುರ್ಮಾಂಚಾರ್ಜುನಕ ಪನ್ನಗಮ್ ॥೭೭॥

ನಾನೂ ಸಹ ಪುತ್ರನನ್ನು ಕಳೆದುಕೊಳ್ಳುವಂತಹ ದುಷ್ಕರ್ಮವನ್ನು ಮಾಡಿದ್ದೇನೆ. ಈ ಕಾಲವೂ ಮತ್ತು ಮೃತ್ಯುವೂ ತಮ್ಮ ಮಾರ್ಗವನ್ನು ಹಿಡಿದು ಹೋಗಲಿ. ಎಲೈ ಅರ್ಜುನಕನೇ, ಸರ್ಪವನ್ನು ಬಿಟ್ಟುಬಿಡು.

ಭೀಷ್ಮಃ

ತತೋ ಯಥಾಗತಂ ಜಗ್ಮುರ್ಮೃತ್ಯುಃ ಕಾಲೋಽಥ ಪನ್ನಗಃ ।
ಅಭೂದ್ ವಿರೋಷೋಽರ್ಜುನಕೋ ವಿಶೋಕಾ ಚೈವ ಗೌತಮೀ॥೭೮॥

ಭೀಷ್ಮರು– ಆಗ ಮೃತ್ಯು-ಕಾಲ ಮತ್ತು ಸರ್ಪಗಳು ಬಂದಂತೆಯೇ ಹೊರಟು ಹೋದವು. ಅರ್ಜುನಕನು ರೋಷವನ್ನು ಕಳೆದುಕೊಂಡು ಶಾಂತನಾದನು. ಗೌತಮಿಯೂ ಶೋಕರಹಿತಳಾದಳು.

ಏತಚ್ಛ್ರುತ್ವಾ ಶಮಂ ಗಚ್ಛ ಮಾ ಭೂಶ್ಚಿಂತಾಪರೋ ನೃಪ ।
ಸ್ವಕರ್ಮಪ್ರತ್ಯಯಾಲ್ಲೋಕಾಂಸ್ತ್ರೀನ್ ವಿದ್ಧಿ ಮನುಜರ್ಷಭ ॥೭೯॥

ಎಲೈ ರಾಜನೇ, ಇದನ್ನು ಕೇಳಿ ಶಾಂತಿಯನ್ನು ಹೊಂದು. ಚಿಂತೆಯನ್ನು ಮಾಡಬೇಡ. ಎಲೈ ಮನುಜರ್ಷಭನೇ, ಮೂರುಲೋಕಗಳೂ ಸಹ ಜೀವರು ತಮ್ಮ ಕರ್ಮಗಳಿಂದ ಸಂಪಾದನೆ ಮಾಡಿದವುಗಳು ಎಂದು ತಿಳಿ.

ನ ತು ತ್ವಯಾ ಕೃತಂ ಪಾರ್ಥ ನಾಪಿ ದುರ್ಯೋಧನೇನ ವೈ ।
ಕಾಲೇನ ತತ್ಕೃತಂ ವಿದ್ಧಿ ವಿಹತಾ ಯೇನ ಪಾರ್ಥಿವಾಃ ॥೮೦॥

ಎಲೈ ಪಾರ್ಥನೇ, ಇಷ್ಟುಮಂದಿ ರಾಜರು ಮೃತರಾದುದಕ್ಕೆ ನೀನಾಗಲೀ ಅಥವಾ ದುರ್ಯೋಧನನಾಗಲೀ ಕಾರಣರಲ್ಲ. ಅದು ಕಾಲದಿಂದ ಉಂಟಾದುದೆಂದು ತಿಳಿ.

ವೈಶಂಪಾಯನಃ

ಇತ್ಯೇತದ್ವಚನಂ ಶ್ರುತ್ವಾ ಬಭೂವ ವಿಗತಜ್ವರಃ ।
ಯುಧಿಷ್ಠಿರೋ ಮಹಾತೇಜಾಃ ಪಪ್ರಚ್ಛೇದಂ ಸ್ವಧರ್ಮವಿತ್ ॥೮೧॥

ವೈಶಂಪಾಯನ– ಮಹಾತೇಜಸ್ವಿಯಾದ ಯುಧಿಷ್ಠಿರನು ಈ ಮಾತುಗಳನ್ನು ಕೇಳಿ, ತನ್ನ ಧರ್ಮವನ್ನು ತಿಳಿದು, ಚಿಂತೆಯನ್ನು ಬಿಟ್ಟು ಈ ಪ್ರಶ್ನೆಯನ್ನು ಮಾಡಿದನು.

॥ ಇತಿ ಶ್ರೀಮಹಾಭಾರತೇ ಅನುಶಾಸನಿಕಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೊದಲನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎರಡನೆಯ ಅಧ್ಯಾಯ

ಸುದರ್ಶನೋಪಾಖ್ಯಾನ

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಶ್ರುತಂ ಮೇ ಮಹದಾಖ್ಯಾನಮಿದಂ ಮತಿಮತಾಂ ವರ ॥೧॥

ಯುಧಿಷ್ಠಿರ– ಮಹಾಪ್ರಾಜ್ಞನಾದ, ಸರ್ವಶಾಸ್ತ್ರವಿಶಾರದನಾದ, ಮೇಧಾವಿಗಳಲ್ಲಿ ಶ್ರೇಷ್ಠನಾದ ಪಿತಾಮಹನೇ, ಈ ಶ್ರೇಷ್ಠವಾದ ಆಖ್ಯಾನವನ್ನು ನಾನು ತಿಳಿದೆನು.

ಭೂಯಸ್ತು ಶ್ರೋತುಮಿಚ್ಛಾಮಿ ಧರ್ಮಾರ್ಥಸಹಿತಂ ನೃಪ ।
ಕಥ್ಯಮಾನಂ ತ್ವಯಾ ಕಿಂಚಿತ್ ತನ್ಮೇ ವ್ಯಾಖ್ಯಾತುಮರ್ಹಸಿ ॥೨॥

ಎಲೈ ರಾಜನೇ, ಪುನಃ ನಿನ್ನಿಂದ ಧರ್ಮಾರ್ಥಸಹಿತವಾದ ಒಂದು ಪ್ರಶ್ನೆಯನ್ನು ಕೇಳಲು ಬಯಸುತ್ತೇನೆ. ಅದಕ್ಕೆ ನೀನು ನನಗೆ ಉತ್ತರವನ್ನು ಹೇಳಬೇಕು.

ಕೇನ ಮೃತ್ಯುರ್ಗೃಹಸ್ಥೇನ ಧರ್ಮಮಾಶ್ರಿತ್ಯ ನಿರ್ಜಿತಃ ।
ಇತ್ಯೇತತ್ ಸರ್ವಮಾಚಕ್ಷ್ವ ತಥ್ಯೇನ ಭರತರ್ಷಭ ॥೩॥

ಎಲೈ ಭರತಶ್ರೇಷ್ಠರೇ, ಯಾವ ಗೃಹಸ್ಥನಿಂದ ಗೃಹಸ್ಥಾಶ್ರಮ ಧರ್ಮವನ್ನು ಆಶ್ರಯಿಸಿ ಮೃತ್ಯುವು ಗೆಲ್ಲಲ್ಪಟ್ಟಿತು ಎಂಬುದೆಲ್ಲವನ್ನೂ ನನಗೆ ಹೇಳಿ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಯಥಾ ಮೃತ್ಯುರ್ಗೃಹಸ್ಥೇನ ಧರ್ಮಮಾಶ್ರಿತ್ಯ ನಿರ್ಜಿತಃ ॥೪॥

ಭೀಷ್ಮ- ಗೃಹಸ್ಥನು ಧರ್ಮವನ್ನು ಆಶ್ರಯಿಸಿ, ಮೃತ್ಯುವನ್ನು ಜಯಿಸಿದ ವಿಷಯದಲ್ಲಿ ಈ ಪುರಾತನವಾದ ಇತಿಹಾಸವನ್ನು ಜ್ಞಾನಿಗಳು ಹೇಳುತ್ತಾರೆ.

ಮನೋಃ ಪ್ರಜಾಪತೇ ರಾಜನ್ನಿಕ್ಷ್ವಾಕುರಭವತ್ ಸುತಃ ।
ತಸ್ಯ ಪುತ್ರಶತಂ ಜಜ್ಞೇ ನೃಪತೇಃ ಸೂರ್ಯವರ್ಚಸಃ ॥೫॥

ಎಲೈ ರಾಜನೇ, ಪ್ರಜಾಪತಿಯಾದ ಮನುವಿಗೆ ಇಕ್ಷ್ವಾಕುವು ಪುತ್ರನಾಗಿ ಜನಿಸಿದನು. ಸೂರ್ಯನ ವರ್ಚಸ್ಸನ್ನು ಹೊಂದಿದ ರಾಜನಿಗೆ ನೂರುಪುತ್ರರು ಜನಿಸಿದರು.

ದಶಮಸ್ತಸ್ಯ ಪುತ್ರಸ್ತು ದಶಾಶ್ವೋ ನಾಮ ಭಾರತ ।
ಮಾಹಿಷ್ಮತ್ಯಾಮಭೂದ್ ರಾಜಾ ಧರ್ಮಾತ್ಮಾ ಸತ್ಯವಿಕ್ರಮಃ ॥೬॥

ಎಲೈ ಭಾರತನೇ, ಆ ರಾಜನ ಹತ್ತನೆಯ ಪುತ್ರನಾದ ದಶಾಶ್ವನು ಧರ್ಮಾತ್ಮನೂ, ಒಳ್ಳೆಯ ಪರಾಕ್ರಮಿಯೂ ಆಗಿದ್ದು ಮಾಹಿಷ್ಮತಿಯಲ್ಲಿ ರಾಜನಾದನು.

ದಶಾಶ್ವಸ್ಯ ಸುತಸ್ತ್ವಾಸೀದ್ ರಾಜಾ ಪರಮಧಾರ್ಮಿಕಃ ।
ಸತ್ಯೇ ತಪಸಿ ದಾನೇ ಚ ಯಸ್ಯ ನಿತ್ಯಂ ರತಂ ಮನಃ ॥೭॥

ಮದಿರಾಶ್ವ ಇತಿ ಖ್ಯಾತಃ ಪೃಥಿವ್ಯಾಂ ಪೃಥಿವೀಪತಿಃ ।
ಧನುರ್ವೇದೇ ಚ ವೇದೇ ಚ ಯಸ್ಯ ನಿತ್ಯಂ ರತಂ ಮನಃ ॥೮॥

ದಶಾಶ್ವನಿಗೆ ಪರಮಧಾರ್ಮಿಕನಾದ ಮದಿರಾಶ್ವನೆಂಬ ಪುತ್ರನು ಜನಿಸಿ, ಅವನು ರಾಜನಾದನು. ಅವನ ಮನಸ್ಸು ಯಾವಾಗಲೂ ಸತ್ಯದಲ್ಲಿಯೂ, ತಪಸ್ಸಿನಲ್ಲಿಯೂ ಮತ್ತು ದಾನದಲ್ಲಿಯೂ ರತವಾಗಿರುತ್ತಿದ್ದಿತು. ಮದಿರಾಶ್ವನೆಂದು ಪ್ರಖ್ಯಾತನಾದ ಆ ರಾಜನು ಧನುರ್ವೇದದಲ್ಲಿಯೂ ಮತ್ತು ವೇದದಲ್ಲಿಯೂ ಯಾವಾಗಲೂ ನಿರತನಾಗಿರುತ್ತಿದ್ದನು.

ಮದಿರಾಶ್ವಸ್ಯ ಪುತ್ರಸ್ತು ದ್ಯುತಿಮಾನ್ನಾಮ ಪಾರ್ಥಿವಃ ।
ಮಹಾಭಾಗೋ ಮಹಾತೇಜಾ ಮಹಾಸತ್ತ್ವೋ ಮಹಾಬಲಃ ॥೯॥

ಪುತ್ರೋ ದ್ಯುತಿಮತಸ್ತ್ವಾಸೀತ್ ಸುವೀರೋ ನಾಮ ಪಾರ್ಥಿವಃ ।
ಧರ್ಮಾತ್ಮಾ ಕೋಶವಾಂಶ್ಚಾಪಿ ದೇವರಾಜ ಇವಾಪರಃ ॥೧೦॥

ಮದಿರಾಶ್ವನ ಪುತ್ರನಾದರೂ ದ್ಯುತಿಮಾನ್ ಎಂಬ ರಾಜ. ಅವನು ಮಹಾನುಭಾವ, ಮಹಾತೇಜಸ್ವಿ, ಮಹಾಧೈರ್ಯ ಮತ್ತು ಮಹಾಬಲಗಳನ್ನು ಹೊಂದಿದವನು. ದ್ಯುತಿಮಂತನಿಗೆ ಸುವೀರನೆಂಬ ಪುತ್ರನು ಜನಿಸಿ ರಾಜನಾದನು. ಅವನು ಧರ್ಮಾತ್ಮನೂ, ಸಂಪದ್ಭರಿತನೂ ಆಗಿದ್ದು ಎರಡನೆಯ ಇಂದ್ರನಂತೆ ಇದ್ದನು.

ಸುವೀರಸ್ಯ ತು ಪುತ್ರೋಽಭೂತ್ ಸರ್ವಯುದ್ಧೇಷು ದುರ್ಜಯಃ ।
ದುರ್ಜಯೇತ್ಯಭಿವಿಖ್ಯಾತಃ ಸರ್ವಶಾಸ್ತ್ರವಿಶಾರದಃ ॥೧೧॥

ಸುವೀರನಿಗೆ ಎಲ್ಲ ಯುದ್ಧಗಳಲ್ಲಿಯೂ ದುರ್ಜಯನಾದ ದುರ್ಜಯನೆಂಬ ಹೆಸರಿನಿಂದಲೇ ಪ್ರಸಿದ್ಧನಾದ ಪುತ್ರನು ಜನಿಸಿದನು. ಅವನು ಸರ್ವಶಾಸ್ತ್ರಗಳಲ್ಲಿ ವಿಶಾರದನಾಗಿದ್ದನು.

ದುರ್ಜಯಸ್ಯೇಂದ್ರವಪುಷಃ ಪುತ್ರೋಽಗ್ನಿಸದೃಶದ್ಯುತಿಃ ।
ದುರ್ಯೋಧನೋ ನಾಮ ಮಹಾನ್ ರಾಜಾಽಽಸೀದ್ ರಾಜಸತ್ತಮ ॥

ಎಲೈ ರಾಜಶ್ರೇಷ್ಠನೇ, ಇಂದ್ರನಿಗೆ ಸಮಾನವಾದ ಕಾಂತಿಯುಳ್ಳ ದುರ್ಜಯನಿಗೆ ಅಗ್ನಿಗೆ ಸದೃಶವಾದ ವರ್ಚಸ್ಸನ್ನು ಹೊಂದಿದ ದುರ್ಯೋಧನನೆಂಬ ದೊಡ್ಡ ರಾಜನು ಪುತ್ರನಾಗಿ ಜನಿಸಿದನು.

ತಸ್ಯೇಂದ್ರಸಮವೀರ್ಯಸ್ಯ ಸಂಗ್ರಾಮೇಷ್ವನಿವರ್ತಿನಃ ।
ವಿಷಯಶ್ಚ ಪ್ರತಾಪಶ್ಚ ತುಲ್ಯಮೇವಾಭ್ಯವರ್ತತ ॥೧೩॥

ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ಯುದ್ಧದಲ್ಲಿ ಹಿಮ್ಮೆಟ್ಟದಿರುವ ಅವನ ರಾಜ್ಯವೂ ಮತ್ತು ಪ್ರತಾಪವೂ ಸಮಾನವಾಗಿ ಉಜ್ವಲವಾಗಿಯೇ ಇದ್ದಿತು.

ಅಂತರ್ಧನೈಶ್ಚ ಬಹುಭಿಃ ಸರತ್ನೈಶ್ಚ ಪೃಥಗ್ವಿಧೈಃ ।
ನಗರಂ ವಿಷಯಶ್ಚಾಸ್ಯ ಪ್ರತಿಪೂರ್ಣಂ ತದಾಽಭವತ್ ॥೧೪॥

ಭೂಮಿಯೊಳಗಿರುವ ನಾನಾ ವಿಧವಾದ ರತ್ನಸಹಿತವಾದ ಧನಗಳಿಂದ ಅವನ ರಾಜ್ಯವೂ ಮತ್ತು ರಾಜಧಾನಿಯೂ ಪರಿಪೂರ್ಣವಾಗಿದ್ದಿತು.

ನ ತಸ್ಯ ವಿಷಯೇ ಚಾಭೂತ್ ಕೃಪಣೋ ನಾಪಿ ದುರ್ಗತಃ ।
ವ್ಯಾಧಿತೋ ವಾ ಕೃಶೋ ವಾಪಿ ತಸ್ಮಿನ್ನಾಭೂನ್ನರಃ ಕ್ವಚಿತ್ ॥೧೫॥

ಅವನ ರಾಜ್ಯದಲ್ಲಿ ಜಿಪುಣನಾಗಲೀ, ದರಿದ್ರನಾಗಲೀ, ವ್ಯಾಧಿಗ್ರಸ್ಥನಾಗಲೀ, ಕೃಶನಾಗಲೀ ಆದ ಒಬ್ಬ ಮನುಷ್ಯನೂ ಇರಲಿಲ್ಲ.

ಸುದಕ್ಷಿಣೋ ಮಧುರವಾಗನಸೂಯುರ್ಜಿತೇಂದ್ರಿಯಃ ।
ಧರ್ಮಾತ್ಮಾ ಚಾನೃಶಂಸಶ್ಚ ವಿಕ್ರಾಂತೋಽಥಾವಿಕತ್ಥನಃ ॥೧೬॥

ದುರ್ಯೋಧನ ರಾಜನು ಒಳ್ಳೆಯ ದಕ್ಷಿಣೆಯನ್ನು ಕೊಡುವವನೂ, ಮಧುರವಾಗಿ ಮಾತನಾಡುವವನೂ, ಅಸೂಯಾ ರಹಿತನೂ, ಜಿತೇಂದ್ರಿಯನೂ, ಧರ್ಮಾತ್ಮನೂ, ಮೃದುಸ್ವಭಾವದವನೂ, ಪರಾಕ್ರಮಿಯೂ ಮತ್ತು ತನ್ನನ್ನು ಹೊಗಳಿಕೊಳ್ಳದವನೂ ಆಗಿದ್ದನು.

ಯಜ್ವಾ ವದಾನ್ಯೋ ಮೇಧಾವೀ ಬ್ರಹ್ಮಣ್ಯಃ ಸತ್ಯಸಂಗರಃ ।
ನ ಚಾವಮಂತಾ ದಾತಾ ಚ ವೇದವೇದಾಂಗಪಾರಗಃ ॥೧೭॥

ಅವನು ಯಾಗವನ್ನು ಮಾಡುವವನೂ, ಉದಾರಿಯೂ, ಮೇಧಾವಿಯೂ, ಬ್ರಾಹ್ಮಣ ವತ್ಸಲನೂ, ಸತ್ಯಸಂಧನೂ, ವೇದವೇದಾಂಗ ಪಾರಂಗತನೂ, ದಾತೃವೂ ಆಗಿದ್ದನು. ಯಾರಿಗೂ ಅವಮಾನವನ್ನು ಮಾಡುತ್ತಿರಲಿಲ್ಲ.

ತಂ ನರ್ಮದಾ ದೇವನದೀ ಪುಣ್ಯಾ ಶೀತಜಲಾ ಶಿವಾ ।
ಚಕಮೇ ಪುರುಷಶ್ರೇಷ್ಠಂ ಸ್ವೇನ ಭಾವೇನ ಭಾರತ ॥೧೮॥

ಎಲೈ ಭಾರತನೇ, ಪುರುಷಶ್ರೇಷ್ಠನಾದ ಅವನನ್ನು ಮಂಗಳವಾದ ಮತ್ತು ಶೀತಲವಾದ, ಪವಿತ್ರವಾದ ಜಲವನ್ನು ಹೊಂದಿದ ದೇವನದಿಯಾದ ನರ್ಮದೆಯು ಪ್ರೀತಿಯಿಂದ ವರಿಸಿದಳು.

ತಸ್ಯ ಜಜ್ಞೇ ತದಾ ನದ್ಯಾಂ ಕನ್ಯಾ ರಾಜೀವಲೋಚನಾ ।
ನಾಮ್ನಾ ಸುದರ್ಶನಾ ರಾಜನ್ ರೂಪೇಣ ಚ ಸುದರ್ಶನಾ ॥೧೯॥

ಎಲೈ ರಾಜನೇ, ಅವನಿಗೆ ಆ ನದಿಯಲ್ಲಿ ಕಮಲನೇತ್ರೆಯಾದ ಸುದರ್ಶನೆ ಎಂಬ ಕನ್ಯೆಯು ಜನಿಸಿದಳು. ಎಲೈ ರಾಜನೇ, ಹೆಸರಿಗೆ ತಕ್ಕಂತೆ ಅವಳು ರೂಪದಿಂದಲೂ ಸುದರ್ಶನಳಾಗಿದ್ದಳು.

ತಾದೃಗ್ರೂಪಾ ನ ನಾರೀಷು ಭೂತಪೂರ್ವಾ ಯುಧಿಷ್ಠಿರ ।
ದುರ್ಯೋಧನಸುತಾ ಯಾದೃಗಭವದ್ ವರವರ್ಣಿನೀ ॥೨೦॥

ತಾಮಗ್ನಿಶ್ಚಕಮೇ ಸಾಕ್ಷಾದ್ ರಾಜಕನ್ಯಾಂ ಸುದರ್ಶನಾಮ್ ॥೨೧॥

ಎಲೈ ಯುಧಿಷ್ಠಿರನೇ, ದುರ್ಯೋಧನಪುತ್ರಿಯಾದ ಅವಳು ಎಂತಹ ಸುಂದರಿಯಾಗಿದ್ದಳೋ ಅಂತಹ ಸೌಂದರ್ಯಭರಿತಳಾದ ವನಿತೆಯು ಹಿಂದೆ ಯಾರೂ ಇರಲಿಲ್ಲ. ಸುಂದರಿಯಾದ ಆ ರಾಜಕನ್ಯೆಯನ್ನು ಸಾಕ್ಷಾತ್ ಅಗ್ನಿಯು ಬಯಸಿದನು.

ಸಾ ಚಾಗ್ನಿಶರಣೇ ರಾಜ್ಞಃ ಶಿಶ್ರೂಷಾಕೃತನಿಶ್ಚಯಾ ।
ನಿಯುಕ್ತಾ ಪಿತೃಸಂದೇಶಾದಾರಿರಾಧಯಿಷುಃ ಶಿಖಿಮ್ ॥೨೨॥

ತಂದೆಯಾದ ರಾಜನ ಅಪ್ಪಣೆಯಂತೆ ಅವಳು ಅಗ್ನಿಗೃಹದಲ್ಲಿ ಅಗ್ನಿಯ ಸೇವೆಯನ್ನು ಮಾಡಲು ನಿಯುಕ್ತಳಾಗಿ ಅಗ್ನಿಯನ್ನು ಸಂತೋಷಪಡಿಸಲು ಬಯಸಿದಳು.

ತಸ್ಯಾ ಮನೋರಮಂ ರೂಪಂ ದೃಷ್ಟ್ವಾ ದೇವೋ ಹುತಾಶನಃ ।
ಮನ್ಮಥೇನ ಸಮಾವಿಷ್ಟಃ ಪತ್ನೀತ್ವೇ ಯತತೇ ಮಿಥಃ ॥೨೩॥

ಅವಳ ಮನೋರಮವಾದ ರೂಪವನ್ನು ನೋಡಿದ ಅಗ್ನಿದೇವನು ಕಾಮದಿಂದ ಆವಿಷ್ಟನಾಗಿ ಅವಳನ್ನು ಪತ್ನಿಯಾಗಿ ಪಡೆಯಲು ಪ್ರಯತ್ನಿಸಿದನು.

ಅಗ್ನಿಃ

ಭಜ ಮಾಮನವದ್ಯಾಂಗೇ ಕಾಮಾತ್ ಕಮಲಲೋಚನೇ ।
ರಂಭೋರು ಮೃಗಶಾಬಾಕ್ಷಿ ಪೂರ್ಣಚಂದ್ರನಿಭಾನನೇ ॥೨೪॥

ಎಲೈ ನಿರ್ದುಷ್ಟವಾದ ಅವಯವವುಳ್ಳವಳೇ, ಕಮಲಲೋಚನೆಯೇ, ಬಾಳೆಯ ಗಿಡದಂತಹ ತೊಡೆಯುಳ್ಳವಳೇ, ಜಿಂಕೆಯ ಕಣ್ಣುಗಳಂತಹ ಕಣ್ಣುಳ್ಳವಳೇ, ಪೂರ್ಣಚಂದ್ರನಂತಹ ಮುಖವುಳ್ಳವಳೇ ಕಾಮದಿಂದ ನನ್ನನ್ನು ಸೇವಿಸುವವಳಾಗು.

ತವೇದಂ ಪದ್ಮಪತ್ರಾಕ್ಷಂ ಮುಖಂ ದೃಷ್ಟ್ವಾ ಮನೋಹರಮ್ ।
ಭ್ರೂಲತಾಲಲಿತಂ ಕಾಂತಮನಂಗೋ ಬಾಧತೇ ಹಿ ಮಾಮ್ ॥೨೫॥

ಪದ್ಮದಳದಂತಿರುವ ಕಣ್ಣುಗಳಿಂದ ಕೂಡಿದ ನಿನ್ನ ಈ ಮುಖವನ್ನು ನೋಡಿ ಮನೋಹರವಾದ ಭ್ರೂಲತೆಗಳನ್ನು ನೋಡಿ ನನಗೆ ಮನ್ಮಥನ ಬಾಧೆಯುಂಟಾಗುತ್ತಿದೆ.

ಲಲಾಟಂ ಚಂದ್ರಲೇಖಾಭಂ ಶಿರೋರುಹವಿಭೂಷಿತಮ್ ।
ದೃಷ್ಟ್ವಾ ತೇ ಪತ್ರಲೇಖಾಂಕಮನಂಗೋ ಬಾಧತೇ ಭೃಶಮ್ ॥೨೬॥

ಚಂದ್ರಲೇಖೆಯಂತಿರುವ ಶಿರಸ್ಸಿನ ಕೇಶಗಳಿಂದ ವಿಭೂಷಿತವಾದ, ಪತ್ರಲೇಖದ ಚಿಹ್ನೆಯನ್ನು ಧರಿಸಿರುವ ನಿನ್ನ ಲಲಾಟವನ್ನು (ಹಣೆ) ನೋಡಿದ ನನ್ನನ್ನು ಮನ್ಮಥನು ಬಾಧಿಸುತ್ತಿದ್ದಾನೆ.

ಬಾಲಾತಪೇನಾಕುಲಿತಂ ಸಸ್ವೇದಪುಲಕೋದ್ಗಮಮ್ ।
ಬಿಂಬಾಧರೋಷ್ಠಂ ವದನಂ ವಿಬುದ್ಧಮಿವ ಪಂಕಜಮ್ ॥೨೭॥

ಅತೀವ ಚಾರುವಿಭ್ರಾಂತಂ ಮುದಮಾವಹತೇ ಮಮ ।
ದಂತಪ್ರಾಕಾರನಿಯತಾ ವಾಣೀ ತವ ಸುರಕ್ಷಿತಾ ॥೨೮॥

ಎಳೆಯ ಸೂರ್ಯನ ಕಿರಣಗಳಿಂದ ವ್ಯಾಕುಲಗೊಂಡ ಬೆವರಿನ ಹನಿಗಳಿಂದ ಮತ್ತು ರೋಮಾಂಚನಗಳಿಂದ ಕೂಡಿದ, ತೊಂಡೆಯಂತಿರುವ ತುಟಿಯಿಂದ ಕೂಡಿದ ನಿನ್ನ

ಮುಖವು ಅರಳಿದ ಪದ್ಮದಂತಿದೆ. ಅತ್ಯಂತ ಸುಂದರವಾಗಿ ಚಲಿಸುತ್ತಿರುವ ಈ ನಿನ್ನ ಮುಖವು ನನಗೆ ಸಂತೋಷವನ್ನುಂಟು ಮಾಡುತ್ತಿದೆ. ದಂತಪಂಕ್ತಿಯಿಂದ ನಿಯಮಿಸಲ್ಪಟ್ಟ ನಿನ್ನ ಮಾತುಗಳು ಸುರಕ್ಷಿತವಾಗಿವೆ.

ತಾಮ್ರಪಲ್ಲವಸಂಕಾಶಾ ಜಿಹ್ವೇಯಂ ತೇ ಮನೋಹರಾ ।
ಸಮಾಃ ಸ್ನಿಗ್ಧಾಃ ಸುಜಾತಾಶ್ಚ ಸಹಿತಾಶ್ಚ ದ್ವಿಜಾಸ್ತವ ॥೨೯॥

ನಿನ್ನ ಈ ನಾಲಿಗೆಯು ತಾಮ್ರದ ಚಿಗುರಿನಂತೆ ಮನೋಹರವಾಗಿದೆ. ನಿನ್ನ ದಂತಗಳು ಚೆನ್ನಾಗಿ ಬೆಳೆದು ಸಮವಾಗಿ ಒಂದಕ್ಕೊಂದು ಸೇರಿಕೊಂಡಿವೆ.

ದ್ವಿಜಪ್ರಿಯೇ ಪ್ರಸೀದಸ್ವ ಭಜ ಮಾಂ ಸುಭಗಾ ಹ್ಯಸಿ ।
ಮನೋಜ್ಞಂ ಸುಕೃತಾಪಾಂಗಂ ಮುಖಂ ತವ ಮನೋಹರಮ್ ॥೩೦॥

ಎಲೌ ದ್ವಿಜಪ್ರಿಯೆಯೇ, ಪ್ರಸನ್ನಳಾಗು. ನೀನು ಸುಂದರಿಯಾಗಿದ್ದೀಯೆ. ನನ್ನನ್ನು ಭಜಿಸು. ಮನೋಹರವೂ, ಒಳ್ಳೆಯ ಕಡೆಗಣ್ಣಿನ ನೋಟವುಳ್ಳದೂ ಆದ ನಿನ್ನ ಮುಖವು ಮನೋಜ್ಞವಾಗಿದೆ.

ಸ್ತನೌ ತೇ ಸಹಿತೌ ಭೀರು ಹಾರಾಭರಣಭೂಷಿತೌ ।
ಪಕ್ವಬಿಲ್ವಪ್ರತೀಕಾಶೌ ಕರ್ಕಶೌ ಸಂಗಮಕ್ಷಮೌ ।
ಗಂಭೀರನಾಭಿಸುಭಗೇ ಭಜ ಮಾಂ ವರವರ್ಣಿನಿ ॥೩೧॥

ಎಲೌ ಭೀರುವೇ, ಹಾರಾಭರಣ ಭೂಷಿತವಾದ ನಿನ್ನ ಸ್ತನಗಳು ಜೊತೆಗೂಡಿ ಪಕ್ವವಾದ ಬಿಲ್ವಫಲದಂತೆ ಗಟ್ಟಿಯಾಗಿದ್ದು ಸಂಗಮವನ್ನು ಸಹಿಸುವವುಗಳಾಗಿವೆ. ಎಲೌ ಗಂಭೀರ ನಾಭಿಯುಳ್ಳ ಸುಂದರಿಯೇ ನನ್ನನ್ನು ಭಜಿಸು.

ಭೀಷ್ಮಃ

ಸೈವಮುಕ್ತಾ ವಿರಹಿತೇ ಪಾವಕೇನ ಮಹಾತ್ಮನಾ ।
ಈಷದಾಕಂಪಿತಹೃದಯಾ ವ್ರೀಡಿತಾ ವಾಕ್ಯಮಬ್ರವೀತ್ ॥೩೨॥

ಭೀಷ್ಮ– ಏಕಾಂತದಲ್ಲಿ ಮಹಾತ್ಮನಾದ ಅಗ್ನಿಯಿಂದ ಹೀಗೆ ಹೇಳಲ್ಪಟ್ಟ ಅವಳು ಮನಸ್ಸಿನಲ್ಲಿ ಸ್ವಲ್ಪ ನಡುಗುತ್ತಾ ನಾಚಿಕೆಯಿಂದ ಮಾತನಾಡಿದಳು.

ನನು ನಾಮ ಕುಲೀನಾನಾಂ ಕನ್ಯಕಾನಾಂ ವಿಶೇಷತಃ ।
ಮಾತಾ ಪಿತಾ ಪ್ರಭವತಃ ಪ್ರದಾನೇ ಬಾಂಧವಾಶ್ಚ ಯೇ ॥೩೩॥

ಕುಲೀನಳಾದ ಕನ್ಯೆಯರಿಗೆ ವಿಶೇಷವಾಗಿ ತಂದೆ-ತಾಯಿಗಳು ಮತ್ತು ಬಂಧುಗಳು ದಾನವನ್ನು ಮಾಡುವುದರಲ್ಲಿ ಅಧಿಕಾರವುಳ್ಳವರಷ್ಟೆ?

ಪಾಣಿಗ್ರಹಣಮಂತ್ರೈಶ್ಚ ಹುತೇ ಚೈವ ವಿಭಾವಸೌ ।
ಸತಾಂ ಮಧ್ಯೇ ನಿವಿಷ್ಟಾಯಾಃ ಕನ್ಯಾಯಾಃ ಶರಣಂ ಪತಿಃ ।
ಸಾಹಂ ನಾತ್ಮವಶಾ ದೇವ ಪಿತರಂ ವರಯಸ್ವ ಮೇ ॥೩೪॥

ಪಾಣಿಗ್ರಹಣ ಮಂತ್ರಗಳಿಂದ ಅಗ್ನಿಯಲ್ಲಿ ಹೋಮವನ್ನು ಮಾಡಿ, ಸಜ್ಜನರ ಮಧ್ಯದಲ್ಲಿ ಧಾರೆಯೆರೆದು ಕೊಡಲ್ಪಟ್ಟ ಕನ್ಯೆಗೆ ಪತಿಯೇ ಸರ್ವಾಶ್ರಯನಾದವನು. ಎಲೈ ದೇವನೇ, ನಾನು ಸ್ವತಂತ್ರಳಲ್ಲ. ನನಗಾಗಿ ನನ್ನ ತಂದೆಯನ್ನು ಕೇಳು.

ಅಥ ನಾತಿಚಿರಾತ್ ಕಾಲಾದ್ ರಾಜಾ ದುರ್ಯೋಧನಃ ಕಿಲ ।
ಯಜ್ಞಸಂಭಾರನಿಪುಣಾನ್ ಮಂತ್ರೀನಾಹೂಯ ಚೋಕ್ತವಾನ್ ।
ಯಜ್ಞಂ ಯಕ್ಷ್ಯೇऽಹಮಿತಿ ವೈ ಸಂಭಾರಾಃ ಸಂಭ್ರಿಯಂತು ಮೇ ॥೩೫॥

ಅನಂತರ ಸ್ವಲ್ಪ ಕಾಲದಲ್ಲಿಯೇ ರಾಜನಾದ ದುರ್ಯೋಧನನು ಯಜ್ಞವನ್ನು ಮಾಡಲು ಬಯಸಿ ಯಜ್ಞಸಾಮಗ್ರಿಗಳನ್ನು ಸಂಪಾದಿಸುವುದರಲ್ಲಿ ನಿಪುಣರಾದ ಮಂತ್ರಿಗಳನ್ನು ಕರೆಸಿ, ನಾನು ಯಜ್ಞವನ್ನು ಮಾಡುವೆನು ನೀವು ಎಲ್ಲಾ ಸಾಮಗ್ರಿಗಳನ್ನೂ ಸಂಪಾದಿಸಿ ಎಂದು ಹೇಳಿದನು.

ತತಃ ಸಮಾಹಿತಸ್ತಸ್ಯ ಯಜ್ಞೋ ಬ್ರಾಹ್ಮಣಸತ್ತಮೈಃ ।
ವಿಪ್ರರೂಪೀ ಹುತವಹೋ ನೃಪಂ ಕನ್ಯಾಮಯಾಚತ ।
ನ ತು ರಾಜಾ ಪ್ರದಾನಾಯ ತಸ್ಮೈ ಭಾವಮಕಲ್ಪಯತ್ ॥೩೬॥

ಆಗ ಶ್ರೇಷ್ಠರಾದ ಬ್ರಾಹ್ಮಣರು ಅವನ ಯಜ್ಞವನ್ನು ನೆರವೇರಿಸುತ್ತಿರಲು ಅಗ್ನಿಯು ಬ್ರಾಹ್ಮಣರೂಪವನ್ನು ಧರಿಸಿ ಬಂದು, ರಾಜನ ಹತ್ತಿರ ಕನ್ಯೆಯ ಯಾಚನೆಯನ್ನು ಮಾಡಿದನು. ಆಗ ರಾಜನು ಅವನಿಗೆ ಕನ್ಯೆಯನ್ನು ಕೊಡಲು ಮನಸ್ಸು ಮಾಡಲಿಲ್ಲ.

ದರಿದ್ರಶ್ಚಾಸವರ್ಣಶ್ಚ ಮಮಾಯಮಿತಿ ಪಾರ್ಥಿವಃ ।
ನ ದಿತ್ಸತಿ ಸುತಾಂ ತಸ್ಮೈ ತಾಂ ವಿಪ್ರಾಯ ಸುದರ್ಶನಾಮ್ ॥೩೭॥

ಇವನು ದರಿದ್ರನಾದವನು ಮತ್ತು ನಮ್ಮ ವರ್ಣದವನಲ್ಲ ಎಂದು ಭಾವಿಸಿ ರಾಜನು ಆ ಬ್ರಾಹ್ಮಣನಿಗೆ ತನ್ನ ಮಗಳಾದ ಸುದರ್ಶನೆಯನ್ನು ಕೊಡಲು ಬಯಸಲಿಲ್ಲ.

ಅಥ ದೀಕ್ಷಾಮುಪೇತಸ್ಯ ಯಜ್ಞಂ ತಸ್ಯ ಮಹಾತ್ಮನಃ ।
ಆಹಿತೋ ಹವನಾರ್ಥಾಯ ವೇದ್ಯಾಮಗ್ನಿಃ ಪ್ರಣಶ್ಯತ ॥೩೮॥

ಅನಂತರ ಆ ಮಹಾತ್ಮನಾದ ರಾಜನು ಯಜ್ಞದೀಕ್ಷೆಯನ್ನು ಹೊಂದಿ, ಹವನವನ್ನು ಮಾಡಲು ವೇದಿಯಲ್ಲಿ ಸ್ಥಾಪಿಸಿದ ಅಗ್ನಿಯು ನಾಶವನ್ನು ಹೊಂದಿದನು (ಹೊಂದಿತು).

ತತಃ ಸ ಭೀತೋ ನೃಪತಿರ್ಭೃಶಂ ಪ್ರವ್ಯಥಿತೇಂದ್ರಿಯಃ ।
ಮಂತ್ರಿಣೋ ಬ್ರಾಹ್ಮಣಾಂಶ್ಚೈವ ಪಪ್ರಚ್ಛ ಕಿಮಿದಂ ಭವೇತ್ ।
ಯಜ್ಞೇ ಸಮಿದ್ಧೋ ಭಗವಾನ್ ನಷ್ಟೋ ಮೇ ಹವ್ಯವಾಹನಃ ॥೩೯॥

ಆಗ ಬಹಳ ಭಯಗೊಂಡ ರಾಜನು ಬಹಳ ವ್ಯಥೆಯಿಂದ ಕೂಡಿದವನಾಗಿ ಮಂತ್ರಿಗಳನ್ನು ಮತ್ತು ಬ್ರಾಹ್ಮಣರನ್ನು ಕುರಿತು, ಇದೇನು, ನನ್ನ ಯಜ್ಞದಲ್ಲಿ ಜ್ವಲಿಸುತ್ತಿದ್ದ ಪೂಜ್ಯನಾದ ಅಗ್ನಿಯು ನಷ್ಟನಾಗಿದ್ದಾನೆ ಎಂದು ಕೇಳಿದನು.

ಸಮ್ಮಂತ್ರಕುಶಲೈಸ್ತೈಸ್ತು ಬ್ರಾಹ್ಮಣೈರ್ವೇದಪಾರಗೈಃ ।
ಅಮಾನುಷೋ ವಿಕಾರೋಽಯಮಿತಿ ತೈರೇವ ಬೋಧಿತಮ್ ॥೪೦॥

ಮಂತ್ರಕುಶಲರೂ, ವೇದಪಾರಂಗತರೂ ಆದ ಆ ಬ್ರಾಹ್ಮಣರು ಇದು ಮನುಷ್ಯರ ಕಲ್ಪನೆಯನ್ನು ಮೀರಿದ ಘಟನೆ ಎಂದು ಅವನಿಗೆ ತಿಳಿಸಿದರು.

ಧರ್ಮವಿಘ್ನಕರಂ ವೀರ ನೈತತ್ ತ್ವಯ್ಯುಪಪದ್ಯತೇ ।
ಸ್ತೂಯತಾಂ ಭಗವಾನ್ ವಹ್ನಿಃ ಬ್ರಾಹ್ಮಣೈರ್ವೇದಪಾರಗೈಃ ॥೪೧॥

ಋತ್ವಿಗ್ಭಿರ್ಮಂತ್ರಕುಶಲೈರ್ಗೀಯತಾಂ ವೈ ಹುತಾಶನಃ ।
ಅಥ ಋಕ್ಸಾಮಯಜುಷಾಂ ಬ್ರಾಹ್ಮಣೈರ್ವೇದಪಾರಗೈಃ ॥೪೨॥

ಎಲೈ ವೀರನೇ, ಅಗ್ನಿಯ ಅದರ್ಶನವು ಧರ್ಮವಿಘ್ನವನ್ನು ಮಾಡುವಂತಹದು. ನಿನ್ನಂತಹವನಿಗೆ ಹೀಗೆ ಆಗಬಾರದು. ವೇದಪಾರಂಗತರಾದ ಬ್ರಾಹ್ಮಣರಿಂದ ಪೂಜ್ಯನಾದ ಅಗ್ನಿಯನ್ನು ಸ್ತೋತ್ರ ಮಾಡಿಸು ಅಥವಾ ಮಂತ್ರಕುಶಲರಾದ ಋತ್ವಿಜರು ಅಗ್ನಿಯನ್ನು ಕರೆತರಲಿ.

ವೇದತತ್ತ್ವಾರ್ಥಕುಶಲೈಸ್ತತಃ ಸೋಮಪುರಸ್ಕೃತೈಃ ।
ಗುಹ್ಯೇಷು ನಾಮಧೇಯೇಷು ಕೀರ್ತ್ಯಮಾನೇಷು ಪಾವಕಃ ॥೪೩॥

ಅನಂತರ ಋಗ್-ಯಜುಸ್-ಸಾಮ ವೇದಪಾರಂಗತರಾದ ವೇದಾರ್ಥವನ್ನು ತಿಳಿದವರಲ್ಲಿ ಕುಶಲರಾದ ಬ್ರಾಹ್ಮಣಶ್ರೇಷ್ಠರು ಸೋಮರಸವನ್ನು ಮುಂದೆ ಮಾಡಿಕೊಂಡು ಅಗ್ನಿಯ ಗುಹ್ಯನಾಮಗಳಿಂದ ಅಗ್ನಿಯನ್ನು ಆಹ್ವಾನಿಸಿದರು.

ತತೋ ದುರ್ಯೋಧನೋ ರಾಜಾ ವಾಕ್ಯಮಾಹರ್ತ್ವಿಜಸ್ತದಾ ।
ದುಷ್ಕೃತಂ ಮಮ ಕಿಂ ನು ಸ್ಯಾದ್ ಭವತಾಂ ವಾ ದ್ವಿಜರ್ಷಭಾಃ ।
ಯೇನ ನಾಶಂ ಜಗಾಮಾಗ್ನಿಃ ಕೃತಂ ಕುಪುರುಷೇಷ್ವಿವ ॥೪೪॥

ನ ಹ್ಯಲ್ಪಂ ದುಷ್ಕೃತಂ ನೋಽಸ್ತಿ ಯೇನಾಗ್ನಿರ್ನಾಶಮಾಗತಃ ।
ಭವತಾಂ ವಾಥ ವಾ ಮಹ್ಯಂ ತತ್ತ್ವೇನೈತದ್ ವಿಮೃಶ್ಯತಾಮ್ ॥೪೫॥

ಆಗ ರಾಜನಾದ ದುರ್ಯೋಧನನು ಋತ್ವಿಜರನ್ನು ಕುರಿತು ಕೆಟ್ಟ ಪುರುಷನು ಆಹ್ವಾನಿಸಿದ ಅಗ್ನಿಯು ನಾಶಹೊಂದುವಂತೆ ನಾನು ಆಹ್ವಾನಿಸಿದ ಅಗ್ನಿಯು ನಾಶವನ್ನು ಹೊಂದುವುದಕ್ಕೆ ನನ್ನ ಅಥವಾ ನಿಮ್ಮ ಅಪರಾಧವು ಕೇವಲ ಅಲ್ಪವಾಗಿರಲಾರದು. ಇದನ್ನು ಸರಿಯಾಗಿ ವಿಮರ್ಶೆ ಮಾಡಿ (ಎಂದು ಹೇಳಿದನು).

ಏತದ್ ರಾಜ್ಞೋ ವಚಃ ಶ್ರುತ್ವಾ ವಿಪ್ರಾಸ್ತೇ ಭರತರ್ಷಭ ।
ನಿಯತಾ ವಾಗ್ಯತಾಶ್ಚೈವ ಪಾವಕಂ ಶರಣಂ ಯಯುಃ ॥೪೬॥

ಎಲೈ ಭರತಶ್ರೇಷ್ಠನೇ, ರಾಜನ ಈ ಮಾತುಗಳನ್ನು ಕೇಳಿ ಆ ಬ್ರಾಹ್ಮಣರು ಮೌನವನ್ನು ವಹಿಸಿ, ಮನೋನಿಗ್ರಹವನ್ನು ಹೊಂದಿದವರಾಗಿ ಅಗ್ನಿಗೆ ಶರಣಾಗತರಾದರು.

ತಾನ್ ದರ್ಶಯಾಮಾಸ ತದಾ ಭಗವಾನ್ ಹವ್ಯವಾಹನಃ ।
ಸ್ವಂ ರೂಪಂ ದೀಪ್ತಿಮತ್ ಕೃತ್ವಾ ಶರದರ್ಕಸಮದ್ಯುತಿಃ ॥೪೭॥

ಆಗ ಶರತ್ಕಾಲದ ಸೂರ್ಯನಂತೆ ಪ್ರಭೆಯುಳ್ಳ ಪೂಜ್ಯನಾದ ಅಗ್ನಿಯು ಪ್ರಕಾಶಮಾನವಾದ ತನ್ನ ರೂಪವನ್ನು ಅವರಿಗೆ ತೋರಿಸಿದನು.

ತತೋ ಮಹಾತ್ಮಾ ತಾನಾಹ ದಹನೋ ಬ್ರಾಹ್ಮಣರ್ಷಭಾನ್ ।
ವರಯಾಮ್ಯಾತ್ಮನೋಽರ್ಥಾಯ ದುರ್ಯೋಧನಸುತಾಮಿತಿ ॥೪೮॥

ಅನಂತರ ಮಹಾತ್ಮನಾದ ಅಗ್ನಿಯು ಆ ಬ್ರಾಹ್ಮಣಶ್ರೇಷ್ಠರನ್ನು ಕುರಿತು ದುರ್ಯೋಧನನ ಪುತ್ರಿಯನ್ನು ನಾನು ನನಗಾಗಿ ವರಿಸುತ್ತೇನೆ ಎಂದು ಹೇಳಿದನು.

ತತಸ್ತೇ ಕಾಲ್ಯಮುತ್ಥಾಯ ತಸ್ಮೈ ರಾಜ್ಞೇ ನ್ಯವೇದಯನ್ ।
ಬ್ರಾಹ್ಮಣಾ ವಿಸ್ಮಿತಾಃ ಸರ್ವೇ ಯದುಕ್ತಂ ಚಿತ್ರಭಾನುನಾ ॥೪೯॥

ಅನಂತರ ಆ ಬ್ರಾಹ್ಮಣರು ವಿಸ್ಮಿತರಾಗಿ ಪ್ರಾತಃಕಾಲದಲ್ಲಿ ಎದ್ದು ರಾಜನಿಗೆ ಅಗ್ನಿಯ ಮಾತನ್ನು ನಿವೇದಿಸಿದರು.

ತತಃ ಸ ರಾಜಾ ತಚ್ಛ್ರುತ್ವಾ ವಚನಂ ಬ್ರಹ್ಮವಾದಿನಾಮ್ ।
ಅವಾಪ್ಯ ಪರಮಂ ಹರ್ಷಂ ತಥೇತಿ ಪ್ರಾಹ ಬುದ್ಧಿಮಾನ್ ॥೫೦॥

ಆಗ ಆ ಮೇಧಾವಿಯಾದ ರಾಜನು ಬ್ರಾಹ್ಮಣರ ಆ ಮಾತನ್ನು ಕೇಳಿ ಬಹಳ ಸಂತೋಷಗೊಂಡು ಹಾಗೆಯೇ ಆಗಲಿ ಎಂದು ಹೇಳಿದನು.

ಪ್ರಾಯಾಚತ ನೃಪಃ ಶುಲ್ಕಂ ಭಗವಂತಂ ವಿಭಾವಸುಮ್ ।
ನಿತ್ಯಂ ಸಾನ್ನಿಧ್ಯಮಿಹ ತೇ ಚಿತ್ರಭಾನೋ ಭವೇದಿತಿ ।
ತಮಾಹ ಭಗವಾನಗ್ನಿರೇವಮಸ್ತ್ವಿತಿ ಪಾರ್ಥಿವಮ್ ॥೫೧॥

ರಾಜನು ಪೂಜ್ಯನಾದ ಅಗ್ನಿಯನ್ನು ಕುರಿತು– 'ಎಲೈ ಅಗ್ನಿಯೇ, ನೀನು ಈ ಮಾಹಿಷ್ಮತೀ ನಗರದಲ್ಲಿ ನಿತ್ಯವೂ ಸನ್ನಿಹಿತನಾಗಿರಬೇಕು. ಇದನ್ನು ನಾನು ಕನ್ಯಾಶುಲ್ಕವಾಗಿ ಬೇಡುತ್ತೇನೆ' ಎಂದು ಹೇಳಿದನು. ಪೂಜ್ಯನಾದ ಅಗ್ನಿಯು ರಾಜನನ್ನು ಕುರಿತು– 'ಹಾಗೆಯೇ ಆಗಲಿ' ಎಂದು ಹೇಳಿದನು.

ತತಃ ಸಾನ್ನಿಧ್ಯಮದ್ಯಾಪಿ ಮಾಹಿಷ್ಮತ್ಯಾಂ ವಿಭಾವಸೋಃ ।
ದೃಷ್ಟಂ ಹಿ ಸಹದೇವೇನ ದಿಶೋ ವಿಜಯತಾ ತದಾ ॥೫೨॥

ಆದ್ದರಿಂದ ಈಗಲೂ ಸಹ ಮಾಹಿಷ್ಮತೀ ನಗರದಲ್ಲಿ ಅಗ್ನಿದೇವನ ಸನ್ನಿಧಾನವಿದೆ. ದಿಗ್ವಿಜಯಕ್ಕೆ ಹೋದಾಗ ಸಹದೇವನು ಅಗ್ನಿಯನ್ನು ನೋಡಿದನಷ್ಟೆ?

ತತಸ್ತಾಂ ಸಮಲಂಕೃತ್ಯ ಕನ್ಯಾಮಹತವಾಸಸಮ್ ।
ದದೌ ದುರ್ಯೋಧನೋ ರಾಜಾ ಪಾವಕಾಯ ಮಹಾತ್ಮನೇ ॥೫೩॥

ಅನಂತರ ಆ ಕನ್ಯೆಗೆ ಖಂಡಿಸದ ವಸ್ತ್ರಗಳನ್ನು ಉಡಿಸಿ, ಆಭರಣಗಳಿಂದ ಅಲಂಕರಿಸಿ, ರಾಜನಾದ ದುರ್ಯೋಧನನು ಅವಳನ್ನು ಮಹಾತ್ಮನಾದ ಅಗ್ನಿಗೆ ದಾನ ಮಾಡಿದನು.

ಪ್ರತಿಜಗ್ರಾಹ ಚಾಗ್ನಿಸ್ತಾಂ ರಾಜಪುತ್ರೀಂ ಸುದರ್ಶನಾಮ್ ।
ವಿಧಿನಾ ವೇದದೃಷ್ಟೇನ ವಸೋರ್ಧಾರಾಮಿವಾಧ್ವರೇ ॥೫೪॥

ಅಗ್ನಿಯು ಯಜ್ಞದಲ್ಲಿ ಘೃತದ ಧಾರೆಯನ್ನು ಸ್ವೀಕರಿಸುವಂತೆ, ವೇದವಿಧಿಗೆ ಅನುಗುಣವಾಗಿ ಸುಂದರಿಯಾದ, ರಾಜಕುಮಾರಿಯಾದ ಸುದರ್ಶನೆಯನ್ನು ಸ್ವೀಕರಿಸಿದನು.

ತಸ್ಯಾ ರೂಪೇಣ ಶೀಲೇನ ಕುಲೇನ ವಪುಷಾ ಶ್ರಿಯಾ ।
ಅಭವತ್ ಪ್ರೀತಿಮಾನಗ್ನಿರ್ಗರ್ಭಂ ತಸ್ಯಾಂ ಸಮಾದಧೇ ॥೫೫॥

ಅವಳ ರೂಪದಿಂದಲೂ, ಶೀಲದಿಂದಲೂ, ಕುಲದಿಂದಲೂ, ದೇಹದ ಕಾಂತಿಯಿಂದಲೂ ಸಂತೋಷಗೊಂಡ ಅಗ್ನಿಯು ಅವಳಲ್ಲಿ ಗರ್ಭಾಧಾನವನ್ನು ಮಾಡಿದನು.

ತಸ್ಯಾಂ ಸಮಭವತ್ ಪುತ್ರೋ ನಾಮ್ನಾಗ್ನೇಯಃ ಸುದರ್ಶನಃ ।
ಶಿಶುರೇವಾಧ್ಯಗಾತ್ ಸರ್ವಂ ಸ ಚ ಬ್ರಹ್ಮ ಸನಾತನಮ್ ।
ಸುದರ್ಶನಸ್ತು ರೂಪೇಣ ಪೂರ್ಣೇಂದುಸದೃಶೋಪಮಃ ॥೫೬॥

ಅವಳಲ್ಲಿ ಅಗ್ನಿಪುತ್ರನಾದ ಸುದರ್ಶನನೆಂಬ ಕುಮಾರನು ಜನಿಸಿದನು. ಅವನು ಶಿಶುವಾಗಿದ್ದಾಗಲೇ ಸಮಗ್ರವಾದ ಸನಾತನವಾದ ವೇದವನ್ನು ಅಧ್ಯಯನ ಮಾಡಿದನು ಮತ್ತು ಅವನು ರೂಪದಲ್ಲಿ ಪೂರ್ಣಚಂದ್ರನಂತೆ ಇದ್ದನು.

ಅಥೌಘವಾನ್ ನಾಮ ನೃಪೋ ನೃಗಸ್ಯಾಸೀತ್ ಪಿತಾಮಹಃ ।
ತಸ್ಯಾಪ್ಯೌಘವತೀ ಕನ್ಯಾ ಪುತ್ರಶ್ಚೌಘರಥೋಽಭವತ್ ॥೫೭॥

ಇನ್ನು ನೃಗ ಮಹಾರಾಜನಿಗೆ ಓಘವಾನ್ ಎಂಬ ಪಿತಾಮಹನಿದ್ದನು. ಅವನಿಗೂ ಸಹ ಓಘವತಿ ಎಂಬ ಕನ್ಯೆಯೂ ಓಘರಥನೆಂಬ ಪುತ್ರನೂ ಜನಿಸಿದನು.

ತಾಮೌಘವಾನ್ ದದೌ ತಸ್ಮೈ ಸ್ವಯಮೌಘವತೀಂ ಸುತಾಮ್ ।
ಸುದರ್ಶನಾಯ ವಿದುಷೇ ಭಾರ್ಯಾರ್ಥೇ ದೇವರೂಪಿಣೀಮ್ ॥೫೮॥

ಓಘವಾನ್ ರಾಜನು ಸ್ವತಃ ಓಘವತೀ ಎಂಬ ದೇವತೆಗಳ ಸೌಂದರ್ಯವನ್ನು ಹೊಂದಿದ್ದ ತನ್ನ ಪುತ್ರಿಯನ್ನು ಸುದರ್ಶನನಿಗೆ ತಾನಾಗಿಯೇ (ಸ್ವಯಂವರವಿಲ್ಲದೆ) ಪತ್ನಿಯಾಗಿ ನೀಡಿದನು.

ಸ ಗೃಹಸ್ಥಾಶ್ರಮರತಸ್ತಯಾ ಸಹ ಸುದರ್ಶನಃ ।
ಕುರುಕ್ಷೇತ್ರೇಽವಸದ್ ರಾಜನ್ನೌಘವತ್ಯಾ ಸಮನ್ವಿತಃ ॥೫೯॥

ಎಲೈ ರಾಜನೇ, ಸುದರ್ಶನನಾದರೂ ಗೃಹಸ್ಥಾಶ್ರಮಧರ್ಮದಲ್ಲಿ ನಿರತನಾಗಿ, ಓಘವತಿಯ ಜೊತೆಯಲ್ಲಿ ಕುರುಕ್ಷೇತ್ರದಲ್ಲಿ ವಾಸಮಾಡಿದನು.

ಗೃಹಸ್ಥಶ್ಚಾವಜೇಷ್ಯಾಮಿ ಮೃತ್ಯುಮಿತ್ಯೇವ ಸ ಪ್ರಭೋ ।
ಪ್ರತಿಜ್ಞಾಮಕರೋದ್ ಧೀಮಾನ್ ದೀಪ್ತತೇಜಾ ವಿಶಾಂಪತೇ ॥೬೦॥

ಎಲೈ ಪ್ರಭುವೇ, ರಾಜನೇ, ಪ್ರಕಾಶಮಾನವಾದ ತೇಜಸ್ಸನ್ನು ಹೊಂದಿದ, ಮೇಧಾವಿಯಾದ ಅವನು, ನಾನು ಗೃಹಸ್ಥಾಶ್ರಮದಲ್ಲಿಯೇ ಇದ್ದು ಮೃತ್ಯುವನ್ನು ಗೆಲ್ಲುವೆನು ಎಂದು ಪ್ರತಿಜ್ಞೆಯನ್ನು ಮಾಡಿದನು.

ತಾಮಥೌಘವತೀಂ ರಾಜನ್ ಸ ಪಾವಕಸುತೋಽಬ್ರವೀತ್ ।
ಅತಿಥೇಃ ಪ್ರತಿಕೂಲಂ ತೇ ನ ಕರ್ತವ್ಯಂ ಕಥಂಚನ ॥೬೧॥

ಎಲೈ ರಾಜನೇ, ಅನಂತರ ಅಗ್ನಿಪುತ್ರನಾದ ಅವನು ಓಘವತಿಯನ್ನು ಕುರಿತು– 'ನೀನು ಎಂದೂ ಯಾವ ಕಾರಣದಿಂದಲೂ ಅತಿಥಿಗಳಿಗೆ ಪ್ರತಿಕೂಲವಾಗಿ ನಡೆದುಕೊಳ್ಳಬಾರದು.

ಯೇನ ಯೇನ ಚ ತುಷ್ಯೇತ ನಿತ್ಯಮೇವ ಸದಾऽತಿಥಿಃ ।
ಅಪ್ಯಾತ್ಮನಃ ಪ್ರದಾನೇನ ನ ತೇ ಕಾರ್ಯಾ ವಿಚಾರಣಾ ॥೬೨॥

ಅತಿಥಿಯು ಯಾವುದರಿಂದ ಸಂತೋಷಪಡುತ್ತಾನೆಯೋ, ಅದು ಬೇಕಾದರೆ ನಿನ್ನನ್ನೇ ಕೊಟ್ಟುಕೊಳ್ಳುವುದಾಗಲಿ, ಅದನ್ನು ನೀನು ಮಾಡಬೇಕು. ಈ ವಿಷಯದಲ್ಲಿ ಸಂಶಯಪಡಬಾರದು.

ಏತದ್ ವ್ರತಂ ಮಮ ಸದಾ ಹೃದಿ ಸಂಪರಿವರ್ತತೇ ।
ಗೃಹಸ್ಥಾನಾಂ ಹಿ ಸುಶ್ರೋಣಿ ನಾತಿಥೇರ್ವಿದ್ಯತೇ ಪರಮ್ ॥೬೩॥

ಇದು ನನ್ನ ಮನಸ್ಸಿನಲ್ಲಿ ಯಾವಾಗಲೂ ನೆಲೆಸಿರುವ ವ್ರತ. ಎಲೌ ಸುಂದರಿಯೇ, ಗೃಹಸ್ಥರಿಗೆ ಅತಿಥಿಗಳಿಗಿಂತಲೂ ದೊಡ್ಡ ವಸ್ತುವು ಯಾವುದೂ ಇಲ್ಲ.

ಪ್ರಮಾಣಂ ಯದಿ ವಾಮೋರು ವಚನಂ ಮಮ ಶೋಭನೇ ।
ಇದಂ ವಚನಮವ್ಯಗ್ರಾ ಹೃದಿ ತ್ವಂ ಧಾರಯೇಃ ಸದಾ ॥೬೪॥

ಎಲೌ ವಾಮೋರುವೇ, ಶುಭಳಾದವಳೇ, ನನ್ನ ಮಾತು ನಿನಗೆ ಪ್ರಮಾಣ ಆಗುವುದಾದರೆ ಈ ಮಾತನ್ನು ನೀನು ಎಚ್ಚರಿಕೆಯಿಂದ ಯಾವಾಗಲೂ ಮನಸ್ಸಿನಲ್ಲಿ ಧರಿಸಬೇಕು.

ನಿಷ್ಕ್ರಾಂತೇ ಮಯಿ ಕಲ್ಯಾಣಿ ತಥಾ ಸನ್ನಿಹಿತೇऽನಘೇ ।
ಅತಿಥಿರ್ನಾವಮಂತವ್ಯಃ ಪ್ರಮಾಣಂ ಯದ್ಯಹಂ ತವ ॥೬೫॥

ಎಲೌ ಕಲ್ಯಾಣಿಯೇ, ನನ್ನ ಮಾತಿನಲ್ಲಿ ನಿನಗೆ ಗೌರವವಿದ್ದರೆ ನಾನು ಮನೆಯಿಂದ ಹೊರಗೆ ಹೋದಾಗ ಪೂಜ್ಯನಾದ ಅತಿಥಿಯು ಬಂದರೆ ಎಲೌ ನಿರ್ದುಷ್ಟಳಾದವಳೇ, ಅವನಿಗೆ ಎಂದೂ ಅವಮಾನವನ್ನು ಮಾಡಬಾರದು' ಎಂದು ಹೇಳಿದನು.

ತಮಬ್ರವೀದೋಘವತೀ ಯತಾ ಮೂರ್ಧ್ನಿ ಕೃತಾಂಜಲಿಃ ।
ನ ಮೇ ತ್ವದ್ವಚನಾತ್ ಕಿಂಚಿದಕರ್ತವ್ಯಂ ಕಥಂಚನ ॥೬೬॥

ಓಘವತಿಯು ತಲೆಯ ಮೇಲೆ ಕೈಗಳನ್ನು ಜೋಡಿಸಿ, ಸಂಯಮವುಳ್ಳವಳಾಗಿ, 'ನಿನ್ನ ಮಾತಿನಂತೆ ನಾನು ಮಾಡಬಾರದುದು ಯಾವುದೂ ಇಲ್ಲ' ಎಂದು ಹೇಳಿದಳು.

ಜಿಗೀಷಮಾಣಂ ತು ಗೃಹೇ ತದಾ ಮೃತ್ಯುಃ ಸುದರ್ಶನಮ್ ।
ಪೃಷ್ಠತೋಽನ್ವಗಮದ್ ರಾಜನ್ ರಂಧ್ರಾನ್ವೇಷೀ ತದಾ ಸದಾ ॥೬೭॥

ಎಲೈ ರಾಜನೇ, ಗೃಹಸ್ಥಾಶ್ರಮದಲ್ಲಿಯೇ ಇದ್ದು ಮೃತ್ಯುವನ್ನು ಜಯಿಸಲು ಬಯಸಿದ ಸುದರ್ಶನನನ್ನು ನೋಡಿ ಮೃತ್ಯುವು, ಅವನಲ್ಲಿ ಒಂದು ದೋಷವನ್ನು ಹುಡುಕಲು ಬಯಸಿ ಅವನನ್ನು ಯಾವಾಗಲೂ ಹಿಂಬಾಲಿಸಿದನು.

ಇಧ್ಮಾರ್ಥಂ ತು ಗತೇ ತಸ್ಮಿನ್ನಗ್ನಿಪುತ್ರೇ ಸುದರ್ಶನೇ ।
ಅತಿಥಿರ್ಬ್ರಾಹ್ಮಣಃ ಶ್ರೀಮಾಂಸ್ತಾಮಾಹೌಘವತೀಂ ತದಾ ॥೬೮॥

ಅಗ್ನಿಪುತ್ರನಾದ ಸುದರ್ಶನನು ಕಟ್ಟಿಗೆಯನ್ನು ತರಲು ಕಾಡಿಗೆ ಹೋದಾಗ ಕಾಂತಿಯುಕ್ತನಾದ ಬ್ರಾಹ್ಮಣನಾದ ಅತಿಥಿಯಾಗಿ ಬಂದು ಓಘವತಿಯನ್ನು ಕುರಿತು ಹೇಳಿದನು.

ಆತಿಥ್ಯಂ ದತ್ತಮಿಚ್ಛಾಮಿ ತ್ವಯಾಽದ್ಯ ವರವರ್ಣಿನಿ ।
ಪ್ರಮಾಣಂ ಯದಿ ಧರ್ಮಸ್ತೇ ಗೃಹಸ್ಥಾಶ್ರಮಸಮ್ಮತಃ ॥೬೯॥

ಎಲೌ ಸುಂದರಿಯೇ, ಗೃಹಸ್ಥಾಶ್ರಮಧರ್ಮವು ನಿನ್ನಿಂದ ಗೌರವಿಸಲ್ಪಡುವುದಾದರೆ ನಾನು ನಿನ್ನಿಂದ ಆತಿಥ್ಯವನ್ನು ಸ್ವೀಕರಿಸಲು ಬಯಸುತ್ತೇನೆ ಎಂದು ಹೇಳಿದನು.

ಇತ್ಯುಕ್ತಾ ತೇನ ವಿಪ್ರೇಣ ರಾಜಪುತ್ರೀ ಯಶಸ್ವಿನೀ ।
ವಿಧಿನಾ ಪ್ರತಿಜಗ್ರಾಹ ವೇದೋಕ್ತೇನ ವಿಶಾಂಪತೇ ॥೭೦॥

ಎಲೈ ರಾಜನೇ, ಆ ಬ್ರಾಹ್ಮಣನಿಂದ ಹೀಗೆ ಹೇಳಲ್ಪಟ್ಟ, ಕೀರ್ತಿವಂತಳಾದ ಆ ರಾಜಕುಮಾರಿಯು ವೇದೋಕ್ತವಿಧಿಯಿಂದ ಅವನನ್ನು ಸ್ವೀಕರಿಸಿದಳು.

ಆಸನಂ ಚೈವ ಪಾದ್ಯಂ ಚ ತಸ್ಮೈ ದತ್ತ್ವಾ ದ್ವಿಜಾತಯೇ ।
ಪ್ರೋವಾಚೌಘವತೀ ವಿಪ್ರಂ ಕೇನಾರ್ಥಃ ಕಿಂ ದದಾಮಿ ತೇ ॥೭೧॥

ಓಘವತಿಯು ಆ ಬ್ರಾಹ್ಮಣನಿಗೆ ಆಸನವನ್ನೂ ಮತ್ತು ಪಾದ್ಯವನ್ನೂ ನೀಡಿ, ಯಾವ ಉದ್ದೇಶದಿಂದ ಬಂದಿದ್ದೀರಿ, ನಿಮಗೇನು ಕೊಡಲಿ ಎಂದು ಕೇಳಿದಳು.

ತಾಮಬ್ರವೀತ್ ತತೋ ವಿಪ್ರೋ ರಾಜಪುತ್ರೀಂ ಸುದರ್ಶನಾಮ್ ।
ತ್ವಯಾ ಮಮಾರ್ಥಃ ಕಲ್ಯಾಣಿ ನಿರ್ವಿಶಂಕೈತದಾಚರ ॥೭೨॥

ಆಗ ಆ ಬ್ರಾಹ್ಮಣನು ರಾಜಪುತ್ರಿಯಾದ ಸುದರ್ಶನೆಯನ್ನು ಕುರಿತು, ಎಲೌ ಕಲ್ಯಾಣಿಯೇ, ನನಗೆ ನಿನ್ನಿಂದಲೇ ಕಾರ್ಯವಾಗಬೇಕಾಗಿದೆ. ಯಾವ ಸಂಕೋಚವೂ ಇಲ್ಲದೆ ಅದನ್ನು ನಡೆಸಿಕೊಡು ಎಂದು ಹೇಳಿದನು.

ಯದಿ ಪ್ರಮಾಣಂ ಧರ್ಮಸ್ತೇ ಗೃಹಸ್ಥಾಶ್ರಮಸಮ್ಮತಃ ।
ಪ್ರದಾನೇನಾತ್ಮನೋ ರಾಜ್ಞಿ ಕರ್ತುಮರ್ಹಸಿ ಮೇ ಪ್ರಿಯಮ್ ॥೭೩॥

ಎಲೌ ರಾಜಕುಮಾರಿಯೇ, ಗೃಹಸ್ಥಾಶ್ರಮಧರ್ಮವು ನಿನಗೆ ಪ್ರಮಾಣ ಆಗುವುದಾದರೆ ನಿನ್ನನ್ನೇ ನನಗೆ ನೀಡಿ ನನಗೆ ಪ್ರಿಯವನ್ನುಂಟು ಮಾಡಬೇಕು (ಎಂದು ಹೇಳಿದನು).

ತಯಾ ಸಂಭಂದ್ಯಮಾನೋಽನ್ಯೈರೀಪ್ಸಿತೈರ್ನೃಪಕನ್ಯಯಾ ।
ನಾನ್ಯಮಾತ್ಮಪ್ರದಾನಾತ್ ಸ ತಸ್ಯಾ ವವ್ರೇ ವರಂ ದ್ವಿಜಃ ॥೭೪॥

ರಾಜಕುಮಾರಿಯು ಬೇರೆ ಬೇರೆ ಅಭೀಷ್ಟವಾದ ವರಗಳನ್ನು ಸೂಚಿಸಿದರೂ ಆ ಬ್ರಾಹ್ಮಣನು ಅವಳ ಆತ್ಮಪ್ರದಾನವನ್ನು ಬಿಟ್ಟು ಬೇರೆ ಯಾವುದನ್ನೂ ಸ್ವೀಕರಿಸಲು ಒಪ್ಪಲಿಲ್ಲ.

ಸಾ ತು ರಾಜಸುತಾ ಸ್ಮೃತ್ವಾ ಭರ್ತುರ್ವಚನಮಾದಿತಃ ।
ತಥೇತಿ ಲಜ್ಜಮಾನಾ ಸಾ ತಮುವಾಚ ದ್ವಿಜರ್ಷಭಮ್ ॥೭೫॥

ಆ ರಾಜಕುಮಾರಿಯಾದರೂ ಪತಿಯು ಮೊದಲೇ ಆಡಿದ ಮಾತುಗಳನ್ನು ಸ್ಮರಿಸಿ ಆ ಬ್ರಾಹ್ಮಣಶ್ರೇಷ್ಠನನ್ನು ಕುರಿತು ನಾಚಿಕೆಯಿಂದ 'ಹಾಗೆಯೇ ಆಗಲಿ' ಎಂದು ಹೇಳಿದಳು.

ತತೋ ರಹಸಿ ವಿಪ್ರರ್ಷಿಃ ಸಾ ಚೈವೋಪವಿವೇಶ ಹ ।
ಸಂಸ್ಮೃತ್ಯ ಭರ್ತುರ್ವಚನಂ ಗೃಹಸ್ಥಾಶ್ರಮಕಾಂಕ್ಷಿಣಃ ॥೭೬॥

ಗೃಹಸ್ಥಾಶ್ರಮಧರ್ಮದ ಅನುಷ್ಠಾನವನ್ನು ಬಯಸಿದ ತನ್ನ ಪತಿಯ ಮಾತುಗಳನ್ನು ಸ್ಮರಿಸಿ, ಅವಳು ಆ ವಿಪ್ರರ್ಷಿಯ ಜೊತೆಯಲ್ಲಿ ಏಕಾಂತದಲ್ಲಿ ಕುಳಿತಳು.

ಅಥೇಧ್ಮಾನ್ ಸಮುಪಾದಾಯ ಸ ಪಾವಕಿರುಪಾಗಮತ್ ।
ಮೃತ್ಯುನಾ ರೌದ್ರಭಾವೇನ ನಿತ್ಯಂ ಬಂಧುರಿವಾನ್ವಿತಃ ॥೭೭॥

ಆ ವೇಳೆಗೆ ಅಗ್ನಿಪುತ್ರನಾದ ಸುದರ್ಶನನು ಕಟ್ಟಿಗೆಗಳನ್ನು ತೆಗೆದುಕೊಂಡು ರೌದ್ರಭಾವವನ್ನು ತಾಳಿದ ಮೃತ್ಯುವಿನಿಂದ ಯಾವಾಗಲೂ ಹಿಂಬಾಲಿಸಲ್ಪಟ್ಟವನಾಗಿ ಆಶ್ರಮಕ್ಕೆ ಬಂದನು.

ತತಸ್ತಾ ಶ್ರಮಮಾಗಮ್ಯ ಸ ಪಾವಕಸುತಸ್ತದಾ ।
ತಾಮಾಜುಹಾವೌಘವತೀಂ ಕ್ವಾಸಿ ಯಾತೇತಿ ಚಾಸಕೃತ್ ॥೭೮॥

ಆಶ್ರಮಕ್ಕೆ ಹಿಂದಿರುಗಿದ ಆ ಅಗ್ನಿಪುತ್ರನು ಆಗ ಆ ಓಘವತಿಯನ್ನು ಕುರಿತು ಎಲ್ಲಿದ್ದೀಯೆ? ಎಲ್ಲಿಗೆ ಹೋಗಿದ್ದೀಯೆ? ಎಂದು ಅನೇಕ ಬಾರಿ ಕರೆದನು.

ತಸ್ಮೈ ಪ್ರತಿವಚಃ ಸಾ ತು ಭರ್ತ್ರೇ ನ ಪ್ರದದೌ ತದಾ ।
ಕರಾಭ್ಯಾಂ ತೇನ ವಿಪ್ರೇಣ ಸ್ಪೃಷ್ಟಾ ಭರ್ತೃವ್ರತಾ ಸತೀ ॥೭೯॥

ವಿಪ್ರನು ಹಸ್ತವನ್ನು ಸ್ಪರ್ಶ ಮಾಡಿದ ಕಾರಣದಿಂದ ಪತಿವ್ರತೆಯಾದ ಆ ಓಘವತಿಯು ಆಗ ತನ್ನ ಪತಿಗೆ ಪ್ರತ್ಯುತ್ತರವನ್ನು ನೀಡಲಿಲ್ಲ.

ಉಚ್ಛಿಷ್ಟಾಸ್ಮೀತಿ ಮನ್ವಾನಾ ಲಜ್ಜಿತಾ ಭರ್ತುರೇವ ಚ ।
ತೂಷ್ಣೀಂಭೂತಾಭವತ್ ಸಾಧ್ವೀ ನ ಚೋವಾಚಾಥ ಕಿಂಚನ ॥೮೦॥

ತಾನು ಮೈಲಿಗೆಯಾಗಿದ್ದೇನೆ ಎಂದು ತಿಳಿದ ಆ ಸಾಧ್ವಿಯು ನಾಚಿಕೆಯಿಂದ ಕೂಡಿದವಳಾಗಿ ಪತಿಯು ಕರೆದರೂ ಮೌನವನ್ನು ವಹಿಸಿದಳು.

ಅಥ ತಾಂ ಪುನರೇವೇದಂ ಪ್ರೋವಾಚ ಸ ಸುದರ್ಶನಃ ।
ಕ್ವ ಸಾ ಸಾಧ್ವೀ ಕ್ವ ಸಾ ಯಾತಾ ಗರೀಯಃ ಕಿಮತೋ ಮಮ ॥೮೧॥

ಅನಂತರ ಸುದರ್ಶನನು ಪುನಃ ಆ ಸಾಧ್ವಿಯನ್ನು ಕುರಿತು ಆ ಸಾಧ್ವಿಯು ಎಲ್ಲಿದ್ದಾಳೆ? ಎಲ್ಲಿಹೋಗಿದ್ದಾಳೆ? ಇದಕ್ಕಿಂತ ದೊಡ್ಡಕಾರ್ಯವು ನನಗೆ ಏನಿದೆ? ಎಂದು ಹೇಳಿದನು.

ಪತಿವ್ರತಾ ಸತ್ಯಶೀಲಾ ನಿತ್ಯಂ ಚೈವಾರ್ಜವೇ ರತಾ ।
ಕಥಂ ನ ಪ್ರತ್ಯುದೇತ್ಯದ್ಯ ಸ್ಮಯಮಾನಾ ಯಥಾ ಪುರಾ ॥೮೨॥

ಪತಿವ್ರತೆಯಾದವಳೂ, ಸತ್ಯಶೀಲಳಾದವಳೂ, ಯಾವಾಗಲೂ ನೇರವಾದ ಸ್ವಭಾವವನ್ನು ಹೊಂದಿದವಳೂ ಆದ ಅವಳು ಮೊದಲಿನಂತೆ ಏಕೆ ಎದುರಿಗೆ ಬರುತ್ತಿಲ್ಲ? ಎಂದು ಹೇಳಿದನು.

ಉಟಜಸ್ಥಸ್ತು ತಂ ವಿಪ್ರಃ ಪ್ರತ್ಯುವಾಚ ಸುದರ್ಶನಮ್ ।
ಅತಿಥಿಂ ವಿದ್ಧಿ ಸಂಪ್ರಾಪ್ತಂ ಪಾವಕೇ ಬ್ರಾಹ್ಮಣಂ ಚ ಮಾಮ್ ॥೮೩॥

ಪರ್ಣಶಾಲೆಯಲ್ಲಿದ್ದ ಆ ವಿಪ್ರನು ಆಗ ಸುದರ್ಶನನನ್ನು ಕುರಿತು– 'ಎಲೈ ಅಗ್ನಿಪುತ್ರನೇ, ನನ್ನನ್ನು ಅತಿಥಿಯಾಗಿ ಬಂದಿರುವ ಬ್ರಾಹ್ಮಣನೆಂದು ತಿಳಿ' ಎಂದು ಹೇಳಿದನು.

ಅನಯಾ ಧಂದ್ಯಮಾನೋಽಹಂ ಭಾರ್ಯಯಾ ತವ ಸತ್ತಮ ।
ತೈಸ್ತೈರತಿಥಿಸತ್ಕಾರೈರಾರ್ಜವೇಽಸ್ಯಾ ಶ್ರಿತಂ ಮನಃ ॥೮೪॥

ಎಲೈ ಸಜ್ಜನರಲ್ಲಿ ಶ್ರೇಷ್ಠನಾದವನೇ, ಈ ನಿನ್ನ ಪತ್ನಿಯು ಅನೇಕ ರೀತಿಯ ಅತಿಥಿ ಸತ್ಕಾರಗಳಿಂದ ನನ್ನನ್ನು ಸಂತೋಷಪಡಿಸುತ್ತಿದ್ದುದನ್ನು ನೋಡಿ ಅವಳ ಆರ್ಜವದಲ್ಲಿ (ಸರಳತೆ) ನನ್ನ ಮನಸ್ಸು ನೆಲೆಸಿತು.

ಅನೇನ ವಿಧಿನಾ ಸೇಯಂ ಮಾಮರ್ಚತಿ ಶುಭಾನನಾ ।
ಅನುರೂಪಂ ಯದತ್ರಾದ್ಯ ತದ್ ಭವಾನ್ ವಕ್ತುಮರ್ಹತಿ ॥೮೫॥

ಶುಭಮುಖವುಳ್ಳ ಈ ಸುಂದರಿಯು ಈ ಪ್ರಕಾರದಿಂದ ನನ್ನನ್ನು ಪೂಜಿಸುತ್ತಿದ್ದಾಳೆ. ಈ ವಿಷಯದಲ್ಲಿ ಯಾವುದು ಅನುಗುಣವಾದುದು ಎಂದು ನೀನು ಹೇಳಬೇಕು.

ಕೂಟಮುದ್ಗರಹಸ್ತಸ್ತು ಮೃತ್ಯುಸ್ತಂ ವೈ ಸಮನ್ವಯಾತ್ ।
ಜೀರ್ಣಪ್ರತಿಜ್ಞಮತ್ಯೈನಂ ವಧಿಷ್ಯಾಮೀತಿ ಚಿಂತಯನ್ ॥೮೬॥

ಮೃತ್ಯುವು ಕೈಯಲ್ಲಿ ಹಾರೆ, ಶೂಲಗಳನ್ನು ಹಿಡಿದುಕೊಂಡು, ಈಗ ಇವನ ಪ್ರತಿಜ್ಞೆಯು ಭಗ್ನವಾಗುವುದು, ಇವನನ್ನು ಕೊಲ್ಲುವೆನು ಎಂದು ಚಿಂತಿಸುತ್ತಾ ಸುದರ್ಶನನನ್ನು ಹಿಂಬಾಲಿಸಿದನು.

ಸುದರ್ಶನಸ್ತು ಮನಸಾ ಕರ್ಮಣಾ ಚಕ್ಷುಷಾ ಗಿರಾ ।
ತ್ಯಕ್ತೇರ್ಷ್ಯಸ್ಯಕ್ತಮನ್ಯುಶ್ಚ ಸ್ಮಯಮಾನೋಽಬ್ರವೀದಿದಮ್ ॥೮೭॥

ತನ್ನ ಮನಸ್ಸಿನಿಂದಲೂ, ಕ್ರಿಯೆಯಿಂದಲೂ, ದೃಷ್ಟಿಯಿಂದಲೂ, ಮಾತಿನಿಂದಲೂ ಅಸೂಯೆಯನ್ನು ತ್ಯಜಿಸಿದ್ದ ಸುದರ್ಶನನು ಕೋಪಗೊಳ್ಳದೆ, ನಗುತ್ತಾ ಈ ಮಾತನ್ನು ಆಡಿದನು.

ಸುರತಂ ತೇऽಸ್ತು ವಿಪ್ರಾಗ್ರ್ಯ ಪ್ರೀತಿರ್ಹಿ ಪರಮಾ ಮಮ ।
ಗೃಹಸ್ಥಸ್ಯ ಹಿ ಧರ್ಮೋ೯ऽಗ್ರ್ಯಃ ಸಂಪ್ರಾಪ್ತಾತಿಥಿಪೂಜನಮ್ ॥೮೮॥

ಎಲೈ ಬ್ರಾಹ್ಮಣಶ್ರೇಷ್ಠನೇ, ನನ್ನ ಪತ್ನಿಯ ಜೊತೆಯಲ್ಲಿ ನಿನಗೆ ಒಳ್ಳೆಯ ಸಮಾಗಮವಾಗಲಿ. ಅದು ನನಗೆ ಬಹಳ ಪ್ರೀತಿಕರವಾದುದು. ಮನೆಗೆ ಬಂದ ಅತಿಥಿಯನ್ನು ಪೂಜಿಸುವುದು ಗೃಹಸ್ಥನ ಶ್ರೇಷ್ಠವಾದ ಧರ್ಮ.

ಅತಿಥಿಃ ಪೂಜಿತೋ ಯಸ್ಯ ಗೃಹಸ್ಥಸ್ಯ ತು ಗಚ್ಛತಿ ।
ನಾನ್ಯಸ್ತಸ್ಮಾತ್ ಪರೋ ಧರ್ಮ ಇತಿ ಪ್ರಾಹುರ್ಮನೀಷಿಣಃ ॥೮೯॥

ಯಾವ ಗೃಹಸ್ಥನ ಮನೆಗೆ ಅತಿಥಿಯು ಬಂದು ಪೂಜಿತನಾಗಿ ಹೋಗುತ್ತಾನೆಯೋ ಅಂತಹ ಅತಿಥಿಪೂಜೆಗಿಂತ ಶ್ರೇಷ್ಠವಾದ ಧರ್ಮವು ಇನ್ನೊಂದು ಇಲ್ಲವೆಂದು ಜ್ಞಾನಿಗಳು ಹೇಳುತ್ತಾರೆ.

ಪ್ರಾಣಾ ಹಿ ಮಮ ದಾರಾಶ್ಚ ಯಚ್ಚಾನ್ಯದ್ ವಿದ್ಯತೇ ವಸು ।
ಅತಿಥಿಭ್ಯೋ ಮಯಾ ದೇಯಮಿತಿ ಮೇ ವ್ರತಮಾಹಿತಮ್ ॥೯೦॥

ನನ್ನ ಪ್ರಾಣಗಳು, ನನ್ನ ಪತ್ನಿ ಮತ್ತು ಈ ಮನೆಯಲ್ಲಿರುವ ಯಾವುದೇ ವಸ್ತು ಇವನ್ನು ಅತಿಥಿಗಳಿಗೆ ಕೊಡಬೇಕೆಂಬುದು ನಾನು ಧರಿಸಿರುವ ವ್ರತ.

ನಿಃಸಂದಿಗ್ಧಂ ಮಯಾ ವಾಕ್ಯಮೇತತ್ ತೇ ಸಮುದಾಹೃತಮ್ ।
ತೇನಾಹಂ ವಿಪ್ರ ಸತ್ಯೇನ ಸ್ವಯಮಾತ್ಮಾನಮಾಲಭೇ ॥೯೧॥

ಎಲೈ ಬ್ರಾಹ್ಮಣನೇ, ಯಾವ ಸಂಶಯವೂ ಇಲ್ಲದೆ ನಾನು ನಿನಗೆ ಈ ಮಾತನ್ನು ಆಡುತ್ತಿದ್ದೇನೆ. ನನ್ನ ಮೇಲೆ ಆಣೆಯನ್ನು ಮಾಡಿ ಶಪಥವನ್ನು ಮಾಡಿ ಹೇಳುತ್ತಿದ್ದೇನೆ.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ।
ಬುದ್ಧಿರಾತ್ಮಾ ಮನಃ ಕಾಲೋ ದಿಶಶ್ಚೈವ ತಥಾ ದಶ ॥೯೨॥

ನಿತ್ಯಮೇತೇ ಹಿ ಪಶ್ಯಂತಿ ದೇಹಿನಾಂ ದೇಹಸಂಶ್ರಯಾತ್ ।
ಸುಕೃತಂ ದುಷ್ಕೃತಂ ವಾಪಿ ಕರ್ಮ ಧರ್ಮಭೃತಾಂ ವರ ॥೯೩॥

ಎಲೈ ಧರ್ಮಿಷ್ಠರಲ್ಲಿಶ್ರೇಷ್ಠನೇ, ಪೃಥಿವಿ, ವಾಯು, ಆಕಾಶ, ಜಲ, ಜ್ಯೋತಿಸ್ಸು, ಬುದ್ಧಿ, ಆತ್ಮ, ಮನಸ್ಸು, ಕಾಲ ಮತ್ತು ದಿಕ್ಕುಗಳು - ಈ ಹತ್ತು ಜೀವರ ದೇಹವನ್ನು ಆಶ್ರಯಿಸಿಕೊಂಡು, ನಿತ್ಯವೂ ಅವರು ಮಾಡುವ ಶುಭಾಶುಭ ಕರ್ಮಗಳನ್ನು ನೋಡುತ್ತವೆ.

ಯಥೈಷಾ ನಾನೃತಾ ವಾಣೀ ಮಯಾऽऽದ್ಯ ಸಮುದಾಹೃತಾ ।
ತೇನ ಸತ್ಯೇನ ಮಾಂ ದೇವಾಃ ಪಾಲಯಂತು ದಹಂತು ವಾ ॥೯೪॥

ನಾನು ಆಡಿದ ಈ ಮಾತು ಸತ್ಯವಾಗಿದ್ದರೆ ಆ ಸತ್ಯದಿಂದ ದೇವತೆಗಳು ನನ್ನನ್ನು ಪಾಲಿಸಲಿ ಅಥವಾ ಮಿಥ್ಯೆಯಾಗಿದ್ದರೆ ನನ್ನನ್ನು ದಹಿಸಲಿ.

ತತೋ ನಾದಃ ಸಮಭವದ್ ದಿಕ್ಷು ಸರ್ವಾಸು ಭಾರತ ।
ಅಸಕೃತ್ ಸತ್ಯಮಿತ್ಯೇವ ನೈತನ್ಮಿಥ್ಯೇತಿ ಸರ್ವಶಃ ॥೯೫॥

ಎಲೈ ಭಾರತನೇ, ಆಗ ಎಲ್ಲ ದಿಕ್ಕುಗಳಿಂದಲೂ ಈ ಮಾತು ಸತ್ಯವಾದುದು, ಸುಳ್ಳಲ್ಲ ಎಂಬ ಶಬ್ದವು ಅನೇಕ ಬಾರಿ ಕೇಳಿಬಂದಿತು.

ಉಟಜಾತ್ ತು ತತಸ್ತಸ್ಮಾನ್ನಿಶ್ಚಕ್ರಾಮ ಸ ವೈ ದ್ವಿಜಃ ।
ವಪುಷಾ ಖಂ ಚ ಭೂಮಿಂ ಚ ವ್ಯಾಪ್ಯ ವಾಯುರಿವೋದ್ಯತಃ ॥೯೬॥

ಆಗ ಆ ಬ್ರಾಹ್ಮಣನು ತನ್ನ ದೇಹದ ಕಾಂತಿಯಿಂದ ಉದ್ಯತವಾಯುವಿನಂತೆ ಭೂಮಿ ಮತ್ತು ಅಂತರಿಕ್ಷಗಳನ್ನು ವ್ಯಾಪಿಸುತ್ತಾ ಪರ್ಣಶಾಲೆಯಿಂದ ಹೊರಬಂದನು.

ಸ್ವರೇಣ ವಿಪ್ರಃ ಶೈಕ್ಷೇಣ ತ್ರೀನ್‌ಲೋಕಾನನುನಾದಯನ್ ।
ಉವಾಚ ಚೈನಂ ಧರ್ಮಜ್ಞಂ ಪೂರ್ವಮಾಮಂತ್ರ್ಯ ನಾಮತಃ ॥೯೭॥

ಆ ಬ್ರಾಹ್ಮಣನು ಶಿಕ್ಷಾಶಾಸ್ತ್ರಕ್ಕೆ ಅನುಗುಣವಾದ ತನ್ನ ಸ್ವರದಿಂದ ಮೂರು ಲೋಕಗಳನ್ನೂ ಪ್ರತಿಧ್ವನಿಸುತ್ತಾ ಧರ್ಮಜ್ಞನಾದ ಸುದರ್ಶನನನ್ನು ಮೊದಲು ಹೆಸರಿನಿಂದ ಕರೆದು ಮಾತನಾಡಿದನು.

ಧರ್ಮೋಽಹಮಸ್ಮಿ ಭದ್ರಂ ತೇ ಜಿಜ್ಞಾಸಾರ್ಥಂ ತವಾನಘ ।
ಪ್ರಾಪ್ತಃ ಸತ್ಯಂ ಚ ತೇ ಜ್ಞಾತ್ವಾ ಪ್ರೀತಿರ್ಮೇ ಪರಮಾ ತ್ವಯಿ ॥೯೮॥

ಎಲೈ ನಿರ್ದುಷ್ಪನಾದವನೇ, ನಿನಗೆ ಮಂಗಳವಾಗಲಿ. ನಾನು ಧರ್ಮ. ನಿನ್ನನ್ನು ಪರೀಕ್ಷಿಸಲು ಬಂದಿದ್ದೆನು. ನಿನ್ನ ಸತ್ಯವನ್ನು ನೋಡಿ ನನಗೆ ನಿನ್ನಲ್ಲಿ ಬಹಳ ಪ್ರೀತಿ ಉಂಟಾಗಿದೆ.

ವಿಜಿತಶ್ಚ ತ್ವಯಾ ಮೃತ್ಯುರ್ಯೋಽಯಂ ತ್ವಾಮನುಗಚ್ಛತಿ ।
ರಂಧ್ರಾನ್ವೇಷೀ ತವ ಸದಾ ತ್ವಯಾ ಧೃತ್ಯಾ ವಶೀಕೃತಃ ॥೯೯॥

ನಿನ್ನನ್ನು ಯಾವಾಗಲೂ ಹಿಂಬಾಲಿಸುವ ಈ ಮೃತ್ಯುವನ್ನು ನೀನು ಗೆದ್ದಿದ್ದೀಯೆ. ನಿನ್ನ ಧೈರ್ಯದಿಂದ ಮೃತ್ಯುವನ್ನು ವಶಪಡಿಸಿಕೊಂಡಿದ್ದೀಯೆ.

ನ ಚಾಸ್ತಿ ಶಕ್ತಿಸ್ತ್ರಿಲೋಕ್ಯೇ ಕಸ್ಯಚಿತ್ ಪುರುಷೋತ್ತಮ ।
ಪತಿವ್ರತಾಮಿಮಾಂ ಸಾಧ್ವೀಂ ತವೋದ್ವೀಕ್ಷಿತುಮಪ್ಯುತ ॥೧೦೦॥

ಎಲೈ ಪುರುಷಶ್ರೇಷ್ಠನೇ, ಪತಿವ್ರತೆಯಾದ ಈ ನಿನ್ನ ಭಾರ್ಯೆಯನ್ನು ಕಣ್ಣಿನಿಂದ ನೋಡಲೂ ಸಹ ಮೂರುಲೋಕಗಳಲ್ಲಿ ಯಾರಿಗೂ ಶಕ್ತಿಯಿಲ್ಲ.

ರಕ್ಷಿತಾ ತ್ವದ್ಗುಣೈರೇಷಾ ಪತಿವ್ರತಗುಣೈಸ್ತಥಾ ।
ಅಧೃಷ್ಯಾ ಯದಿಯಂ ಬ್ರೂಯಾತ್ ತಥಾ ತನ್ನಾನ್ಯಥಾ ಭವೇತ್॥೧೦೧॥

ನಿನ್ನ ಗುಣಗಳಿಂದಲೂ ಮತ್ತು ಪತಿವ್ರತೆಯಾದ ಅವಳ ಗುಣಗಳಿಂದಲೂ ರಕ್ಷಿತಳಾದ ಅವಳು ಯಾರಿಂದಲೂ ಘಾಸಿಗೊಳಿಸಲ್ಪಡಲಾರಳು. ಅವಳು ಏನು ನುಡಿಯುತ್ತಾಳೆಯೋ ಅದು ಬೇರೆ ರೀತಿಯಾಗಲಾರದು.

ಏಷಾ ಹಿ ತಪಸಾ ಸ್ವೇನ ಸಂಯುಕ್ತಾ ಬ್ರಹ್ಮವಾದಿನೀ ।
ಪಾವನಾರ್ಥಂ ಚ ಲೋಕಸ್ಯ ಸರಿಚ್ಛ್ರೇಷ್ಠಾ ಭವಿಷ್ಯತಿ ॥೧೦೨॥

ಬ್ರಹ್ಮಜ್ಞಾನಿಯಾದ ಇವಳು ತನ್ನ ತಪಸ್ಸಿನಿಂದ ಕೂಡಿದವಳಾಗಿ ಈ ಲೋಕವನ್ನು ಪವಿತ್ರೀಕರಿಸಲು ಶ್ರೇಷ್ಠವಾದ ನದಿಯಾಗುವಳು.

ಅರ್ಧೇನೌಘವತೀ ನಾಮ ತ್ವಾಮರ್ಧೇನಾನುಯಾಸ್ಯತಿ ।
ಶರೀರೇಣ ಮಹಾಭಾಗಾ ಯೋಗೋ ಹ್ಯಸ್ಯಾ ವಶೇ ಸ್ಥಿತಃ ॥೧೦೩॥

ಈ ಮಹಾನುಭಾವಳು ತನ್ನ ಶರೀರದ ಅರ್ಧಭಾಗದಿಂದ ಓಘವತೀ ಎಂಬ ನದಿಯಾಗಿ, ಉಳಿದ ಅರ್ಧಭಾಗದಿಂದ ನಿನ್ನನ್ನು ಹಿಂಬಾಲಿಸುವಳು. ಅಂತಹ ಯೋಗವು ಅವಳಿಗೆ ವಶವಾಗಿದೆ.

ಅನಯಾ ಸಹ ಲೋಕಾಂಶ್ಚ ಗಂತಾಸಿ ತಪಸಾऽರ್ಜಿತಾನ್ ।
ಯತ್ರ ನಾವೃತ್ತಿಮಭ್ಯೇತಿ ಶಾಶ್ವತಾನ್ ತಾನ್ ಸನಾತನಾನ್ ॥೧೦೪॥

ನೀನು ನಿನ್ನ ತಪಸ್ಸಿನಿಂದ ಸಂಪಾದಿಸಿದ, ಪುನರಾವರ್ತಿ ಇಲ್ಲದ ಶಾಶ್ವತವಾದ ಸನಾತನ ಲೋಕಗಳಿಗೆ ಇವಳ ಜೊತೆಯಲ್ಲಿಯೇ ಹೋಗುವಿ.

ಅನೇನೈವ ಚ ದೇಹೇನ ಲೋಕಾಂಸ್ತ್ವಮಭಿಪತ್ಸ್ಯಸೇ ।
ನಿರ್ಜಿತಶ್ಚ ತ್ವಯಾ ಮೃತ್ಯುರೈಶ್ವರ್ಯಂ ಚ ತವೋತ್ತಮಮ್ ॥೧೦೫॥

ಈ ದೇಹದಿಂದಲೇ ನೀನು ಅಂತಹ ಲೋಕಗಳನ್ನು ಹೊಂದುವಿ. ನೀನು ಮೃತ್ಯುವನ್ನು ಗೆದ್ದಿದ್ದೀಯೆ. ನಿನ್ನ ಸಾಮರ್ಥ್ಯವು ಅತ್ಯಂತ ಶ್ರೇಷ್ಠವಾದುದು.

ಪಂಚ ಭೂತಾನ್ಯತಿಕ್ರಾಂತಃ ಸ್ವವೀರ್ಯಾಚ್ಚ ಮನೋಭವಃ ।
ಗೃಹಸ್ಥಧರ್ಮೇಣಾನೇನ ಕಾಮಕ್ರೋಧೌ ತ್ವಯಾ ಜಿತೌ ॥೧೦೬॥

ನೀನು ನಿನ್ನ ಈ ಗೃಹಸ್ಥಧರ್ಮದಿಂದ ಪಂಚಭೂತಗಳನ್ನು ಮೀರಿದ್ದೀಯೆ. ನಿನ್ನ ಸಾಮರ್ಥ್ಯದಿಂದ ಮನ್ಮಥನನ್ನು ಜಯಿಸಿದ್ದೀಯೆ. ಕಾಮ-ಕ್ರೋಧಗಳು ನಿನ್ನಿಂದ ಜಿತವಾಗಿವೆ.

ಸ್ನೇಹೋ ರಾಗಶ್ಚ ತಂದ್ರೀ ಚ ಮೋಹೋ ದ್ರೋಹಶ್ಚ ಪಂಚಮಃ ।
ತವ ಶುಶ್ರೂಷಯಾ ರಾಜನ್ ರಾಜಪುತ್ರ್ಯಾ ವಿನಿರ್ಜಿತಾಃ ॥೧೦೭॥

ಎಲೈ ರಾಜನೇ, ನಿನ್ನ ಸೇವೆಯನ್ನು ಮಾಡಿ ಈ ರಾಜಕುಮಾರಿಯು ಉಳಿದ ವಿಷಯಗಳಲ್ಲಿ ಸ್ನೇಹವನ್ನು ಮತ್ತು ಒಳ್ಳೆಯ ವಿಷಯಗಳಲ್ಲಿ ಆಲಸ್ಯ-ಮೋಹ-ದ್ರೋಹಗಳನ್ನು ತೊರೆದಿದ್ದಾಳೆ.

ಭೀಷ್ಮಃ

ಶುಕ್ಲಾನಾಂ ತು ಸಹಸ್ರೇಣ ವಾಜಿನಾಂ ರಥಮುತ್ತಮಮ್ ।
ಯುಕ್ತಂ ಪ್ರಗೃಹ್ಯ ಭಗವಾನ್ ಯಮಃ ಸದ್ಯೋ ಜಗಾಮ ತಮ್ ॥

ಮೃತ್ಯುರಾತ್ಮಾ ಚ ಲೋಕಾಶ್ಚ ಜಿತಾ ಭೂತಾನಿ ಪಂಚ ಚ ।
ಬುದ್ಧಿಃ ಕಾಲೋ ಮನೋ ವ್ಯೋಮ ಕಾಮಕ್ರೋಧೌ ತಥೈವ ಚ ॥೧೦೯॥

ಭೀಷ್ಮ– ಆಗ ಯಮದೇವರು ಶ್ವೇತವರ್ಣದ ಸಹಸ್ರ ಅಶ್ವಗಳಿಂದ ಕೂಡಿದ ರಥವನ್ನು ತೆಗೆದುಕೊಂಡು ತಕ್ಷಣ ಅಲ್ಲಿಗೆ ಬಂದರು. ಮೃತ್ಯು-ಆತ್ಮ-ಲೋಕಗಳು-ಪಂಚಭೂತಗಳು ಎಲ್ಲವೂ ಸುದರ್ಶನನಿಂದ ಜಿತವಾದವು. ಬುದ್ಧಿ, ಕಾಲ, ಮನಸ್ಸು, ಆಕಾಶ, ಕಾಮ-ಕ್ರೋಧಗಳು ಹಾಗೆಯೇ ಜಿತವಾದವು.

ತಸ್ಮಾದ್ ಗೃಹಾಶ್ರಮಸ್ಥಸ್ಯ ನಾನ್ಯದ್ ದೈವತಮಸ್ತಿ ವೈ ।
ಋತೇऽತಿಥಿಂ ನರವ್ಯಾಘ್ರ ಮನಸೈತದ್ ವಿಚಾರಯ ॥೧೧೦॥

ಎಲೈ ನರಶ್ರೇಷ್ಠನೇ, ಆದ್ದರಿಂದ ಗೃಹಸ್ಥನಾದವನಿಗೆ ಅತಿಥಿಯನ್ನು ಬಿಟ್ಟು ಬೇರೆ ದೇವತೆ ಇಲ್ಲ. ಇದನ್ನು ಮನಸ್ಸಿನಲ್ಲಿ ಧರಿಸುವವನಾಗು.

ಅತಿಥಿಃ ಪೂಜಿತೋ ಯಸ್ಯ ಧ್ಯಾಯತೇ ಮನಸಾ ಶುಭಮ್ ।
ನ ತತ್ ಕ್ರತುಶತೇನಾಪಿ ತುಲ್ಯಮಾಹುರ್ಮನೀಷಿಣಃ ॥೧೧೧॥

ಅತಿಥಿಯು ಪೂಜಿತನಾಗಿ, ಪ್ರಸನ್ನನಾಗಿ ಯಾವ ಶುಭವನ್ನು ಹಾರೈಸುತ್ತಾನೆಯೋ ಅದನ್ನು ನೂರು ಯಾಗಗಳಿಂದಲೂ ಸಂಪಾದಿಸಲು ಸಾಧ್ಯವಿಲ್ಲವೆಂದು ಜ್ಞಾನಿಗಳು ಹೇಳುತ್ತಾರೆ.

ಪಾತ್ರಂ ತ್ವತಿಥಿಮಾಸಾದ್ಯ ಶೀಲಾಢ್ಯಂ ಯೋ ನ ಪೂಜಯೇತ್ ।
ಸ ದತ್ತ್ವಾ ಸುಕೃತಂ ತಸ್ಯ ಕ್ಷಪಯೇತ ಹ್ಯನರ್ಚಿತಃ ॥೧೧೨॥

ಗುಣವಂತನಾದ, ಸತ್ಪಾತ್ರನಾದ ಅತಿಥಿಯು ಮನೆಗೆ ಬಂದರೂ ಯಾವನು ಪೂಜಿಸುವುದಿಲ್ಲವೋ ಅವನು ತನ್ನ ಪುಣ್ಯವನ್ನೆಲ್ಲಾ ಅತಿಥಿಗೆ ಕೊಟ್ಟು ಎಲ್ಲವನ್ನೂ ಕಳೆದುಕೊಳ್ಳುತ್ತಾನೆ.

ಏತತ್ ತೇ ಕಥಿತಂ ಪುತ್ರ ಮಯಾऽಖ್ಯಾನಮನುತ್ತಮಮ್ ।
ಯಥಾ ಹಿ ವಿಜಿತೋ ಮೃತ್ಯುರ್ಗೃಹಸ್ಥೇನ ಪುರಾऽಭವತ್ ॥೧೧೩॥

ಎಲೈ ಪುತ್ರನೇ, ಹಿಂದೆ ಗೃಹಸ್ಥನಾದವನು ಮೃತ್ಯುವನ್ನು ಹೇಗೆ ಜಯಿಸಿದನು ಎಂಬ ವಿಷಯದಲ್ಲಿ ಶ್ರೇಷ್ಠವಾದ ಈ ಆಖ್ಯಾನವನ್ನು ನಿನಗೆ ಹೇಳಿದ್ದೇನೆ.

ಧನ್ಯಂ ಯಶಸ್ಯಮಾಯುಷ್ಯಮಿದಮಾಖ್ಯಾನಮುತ್ತಮಮ್ ।
ಬುಭೂಷತಾऽಭಿಮಂತವ್ಯಂ ಸರ್ವದುಶ್ಚರಿತಾಪಹಮ್ ॥೧೧೪॥

ಈ ಶ್ರೇಷ್ಠವಾದ ಆಖ್ಯಾನವು ಧನಪ್ರದವಾದುದು, ಕೀರ್ತಿಕರವಾದುದು, ಆಯುರ್ವೃದ್ಧಿಕರವಾದುದು. ಸರ್ವಪಾಪಗಳನ್ನು ಪರಿಹಾರ ಮಾಡುವಂತಹದು. ತಮಗೆ ಶುಭವನ್ನು ಬಯಸುವವರು ಇದನ್ನು ಮನನ ಮಾಡಬೇಕು.

ಯ ಇದಂ ಕಥಯೇದ್ ವಿದ್ವಾನಹನ್ಯಹನಿ ಭಾರತ ।
ಸುದರ್ಶನಸ್ಯ ಚರಿತಂ ಪುಣ್ಯಾನ್‌ಲೋಕಾನವಾಪ್ನುಯಾತ್ ॥೧೧೫॥

ಎಲೈ ಭಾರತನೇ, ಯಾವ ವಿದ್ವಾಂಸನು ಸುದರ್ಶನನ ಈ ಪವಿತ್ರವಾದ ಆಖ್ಯಾನವನ್ನು ಹೇಳುತ್ತಾನೆಯೋ ಅವನು ಪುಣ್ಯಲೋಕಗಳನ್ನು ಹೊಂದುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ಯುಧಿಷ್ಠಿರನಿಂದ ಭೀಷ್ಮರನ್ನು ಕುರಿತು ವಿಶ್ವಾಮಿತ್ರರ
ಬ್ರಾಹ್ಮಣಪ್ರಾಪ್ತಿ ಪ್ರಕಾರದ ಪ್ರಶ್ನೆ.

ಯುಧಿಷ್ಠಿರಃ

ಬ್ರಾಹ್ಮಣ್ಯಂ ಯದಿ ದುಷ್ಪ್ರಾಪಂ ತ್ರಿಭಿರ್ವರ್ಣೈರ್ನರಾಧಿಪ ।
ಕಥಂ ಪ್ರಾಪ್ತಂ ಮಹಾರಾಜ ಕ್ಷತ್ರಿಯೇಣ ಮಹಾತ್ಮನಾ ॥೧॥

ವಿಶ್ವಾಮಿತ್ರೇಣ ಧರ್ಮಾತ್ಮನ್ ಬ್ರಾಹ್ಮಣತ್ವಂ ನರರ್ಷಭ ।
ಶ್ರೋತುಮಿಚ್ಛಾಮಿ ತತ್ತ್ವೇನ ತನ್ಮೇ ಬ್ರೂಹಿ ಪಿತಾಮಹ ॥೨॥

ಯುಧಿಷ್ಠಿರ– ಎಲೈ ನರಾಧಿಪನೇ, ಉಳಿದ ಮೂರುವರ್ಣದವರಿಂದ ಬ್ರಾಹ್ಮಣ್ಯವನ್ನು ಹೊಂದುವುದು ಅಸಾಧ್ಯವಾದರೆ, ಎಲೈ ಮಹಾರಾಜನೇ, ಕ್ಷತ್ರಿಯನಾದ ಮಹಾತ್ಮನಾದ ವಿಶ್ವಾಮಿತ್ರನು ಹೇಗೆ ಬ್ರಾಹ್ಮಣ್ಯವನ್ನು ಹೊಂದಿದನು? ಎಲೈ ಧರ್ಮಾತ್ಮನೇ, ನರಶ್ರೇಷ್ಠನೇ, ಪಿತಾಮಹನೇ, ಈ ವಿಷಯವನ್ನು ನಾನು ಸರಿಯಾಗಿ ತಿಳಿಯಲು ಬಯಸುತ್ತೇನೆ. ಅದನ್ನು ನನಗೆ ಹೇಳು.

ತೇನ ಹ್ಯಮಿತವೀರ್ಯೇಣ ವಸಿಷ್ಠಸ್ಯ ಮಹಾತ್ಮನಃ ।
ಹತಂ ಪುತ್ರಶತಂ ಸದ್ಯಸ್ತಪಸಾ ಪ್ರಪಿತಾಮಹ ॥೩॥

ಎಲೈ ಪ್ರಪಿತಾಮಹನೇ, ಅಮಿತಪರಾಕ್ರಮಿಗಳಾದ ವಿಶ್ವಾಮಿತ್ರರು ಮಹಾತ್ಮರಾದ ವಸಿಷ್ಠರ ನೂರು ಪುತ್ರರನ್ನು ತಮ್ಮ ತಪಸ್ಸಿನ ಪ್ರಭಾವದಿಂದ ತಕ್ಷಣದಲ್ಲಿಯೇ ಕೊಂದರು.

ಯಾತುಧಾನಾಶ್ಚ ಬಹವೋ ರಾಕ್ಷಸಾಸ್ತಿಗ್ಮತೇಜಸಃ ।
ಮನ್ಯುನಾವಿಷ್ಟದೇಹೇನ ಸೃಷ್ಟಾಃ ಕಾಲಾಂತಕೋಪಮಾಃ ॥೪॥

ವಿಶ್ವಾಮಿತ್ರರು ಕೋಪಕ್ಕೆ ವಶರಾಗಿ ತಮ್ಮ ದೇಹದಿಂದ ಕಾಲಾಂತಕನಿಗೆ ಸದೃಶವಾದ ಕ್ರೂರ ಪರಾಕ್ರಮಿಗಳಾದ ಅನೇಕ ರಾಕ್ಷಸರನ್ನೂ ಮತ್ತು ಯಾತುಧಾನರನ್ನೂ ಸೃಷ್ಟಿಸಿದರು.

ಮಹಾನ್ ಕುಶಿಕವಂಶಶ್ಚ ಬ್ರಹ್ಮರ್ಷಿಶತಸಂಕುಲಃ ।
ಸ್ಥಾಪಿತೋ ನರಲೋಕೇಽಸ್ಮಿನ್ ವಿದ್ವಾನ್ ಬ್ರಾಹ್ಮಣಸತ್ಕೃತಃ ॥೫॥

ಕುಶಿಕವಂಶವು ನೂರಾರು ಬ್ರಹ್ಮರ್ಷಿಗಳಿಂದ ಕೂಡಿದ ದೊಡ್ಡ ವಂಶ. ಜ್ಞಾನಪೂರ್ಣವಾದ ಬ್ರಾಹ್ಮಣರಿಂದ ಸತ್ಕೃತವಾದ ಅಂತಹ ವಂಶವನ್ನು ವಿಶ್ವಾಮಿತ್ರರು ಭೂಲೋಕದಲ್ಲಿ ಸ್ಥಾಪಿಸಿದರು.

ಋಚೀಕಸ್ಯಾತ್ಮಜಶ್ಚೈವ ಶುನಃಶೇಪೋ ಮಹಾತಪಾಃ ।
ವಿಮೋಕ್ಷಿತೋ ಮಹಾಸತ್ರಾತ್ ಪಶುತಾಮಭ್ಯುಪಾಗತಃ ॥೬॥

ಋಚೀಕರ ಪುತ್ರರಾದ, ಮಹಾತಪಸ್ವಿಗಳಾದ ಶುನಶ್ಶೇಪರು ಹರಿಶ್ಚಂದ್ರನ ಮಹಾಯಾಗದಲ್ಲಿ ಪುತ್ರತ್ವವನ್ನು ಹೊಂದಿ ವಿಶ್ವಾಮಿತ್ರರಿಂದ ಬಿಡುಗಡೆಗೊಳಿಸಲ್ಪಟ್ಟರು.

ಹರಿಶ್ಚಂದ್ರಕ್ರತೌ ದೇವಾಂಸ್ತೋಷಯಿತ್ವಾऽऽತ್ಮತೇಜಸಾ ।
ಪುತ್ರತಾಮನುಸಂಪ್ರಾಪ್ತೋ ವಿಶ್ವಾಮಿತ್ರಸ್ಯ ಧೀಮತಃ ॥೭॥

ಹರಿಶ್ಚಂದ್ರನ ಯಾಗದಲ್ಲಿ ಶುನಶ್ಶೇಪರು ತಮ್ಮ ಸಾಮರ್ಥ್ಯದಿಂದ ದೇವತೆಗಳನ್ನು ಸ್ತೋತ್ರ ಮಾಡಿ, ಸಂತೋಷಪಡಿಸಿ ಮೇಧಾವಿಗಳಾದ ವಿಶ್ವಾಮಿತ್ರರ ಪುತ್ರತ್ವವನ್ನು ಹೊಂದಿದರು.

ನಾಭಿವಾದಯತೇ ಜ್ಯೇಷ್ಠಂ ದೇವರಾತಂ ನರಾಧಿಪ ।
ಪುತ್ರಾಃ ಪಂಚಾಶತಶ್ಚಾಪಿ ಶಪ್ತಾಃ ಶ್ವಪಚತಾಂ ಗತಾಃ ॥೮॥

ಎಲೈ ನರಾಧಿಪನೇ, ವಿಶ್ವಾಮಿತ್ರರ ಜ್ಯೇಷ್ಠಪುತ್ರನು ದೇವರಾತನಾದ ಶುನಶ್ಶೇಪನನ್ನು ಅಣ್ಣನೆಂದು ಅಂಗೀಕರಿಸದೆ ನಮಸ್ಕರಿಸದಿದ್ದಾಗ ಅವನು ತನ್ನ ಉಳಿದ ನಲವತ್ತೊಂಬತ್ತು ತಮ್ಮಂದಿರ ಜೊತೆಯಲ್ಲಿ ವಿಶ್ವಾಮಿತ್ರರ ಶಾಪಕ್ಕೆ ಒಳಗಾಗಿ ಚಂಡಾಲನಾದನು.

ತ್ರಿಶಂಕುರ್ಬಂಧುಸಂತ್ಯಕ್ತ ಐಕ್ಷ್ವಾಕಃ ಪ್ರೀತಿಪೂರ್ವಕಮ್ ।
ಅವಾಕ್ಶಿರಾ ದಿವಂ ನೀತೋ ದಕ್ಷಿಣಾಮಾಶ್ರಿತೋ ದಿಶಮ್ ॥೯॥

ಇಕ್ಷ್ವಾಕು ವಂಶದಲ್ಲಿ ಜನಿಸಿದ ತ್ರಿಶಂಕುವು ಬಂಧುಗಳಿಂದ ಪರಿತ್ಯಜಿಸಲ್ಪಟ್ಟರೂ ವಿಶ್ವಾಮಿತ್ರರಿಂದ ಪ್ರೀತಿಪೂರ್ವಕವಾಗಿ ಸ್ವರ್ಗಕ್ಕೆ ಕಳುಹಿಸಲ್ಪಟ್ಟು, ಅವನು ಈಗಲೂ ದಕ್ಷಿಣದಿಕ್ಕಿನಲ್ಲಿ ಆಕಾಶದಲ್ಲಿ ತಲೆಕೆಳಗಾಗಿ ನಿಂತಿದ್ದಾನೆ.

ವಿಶ್ವಾಮಿತ್ರಸ್ಯ ವಿಪುಲಾ ನದೀ ರಾಜರ್ಷಿಸೇವಿತಾ ।
ಕೌಶಿಕೀತಿ ಶಿವಾ ಪುಣ್ಯಾ ಬ್ರಹ್ಮರ್ಷಿಗಣಸೇವಿತಾ ॥೧೦॥

ವಿಶ್ವಾಮಿತ್ರರು ಸೃಷ್ಟಿಸಿದ, ರಾಜರ್ಷಿಗಳಿಂದ ಸೇವಿತವಾದ ಕೌಶಿಕೇ ಎಂಬ ವಿಸ್ತಾರವಾದ ನದಿಯು ಪವಿತ್ರವಾದ ಜಲದಿಂದ ಕೂಡಿ ಪುಣ್ಯಪ್ರದವಾಗಿ ಬ್ರಹ್ಮರ್ಷಿ ಗಣದಿಂದಲೂ ಸೇವಿತವಾಗಿದೆ.

ತಪೋವಿಘ್ನಕರೀ ಚೈವ ಪಂಚಚೂಡಾ ಸುಸಮ್ಮತಾ ।
ರಂಭಾ ನಾಮಾಪ್ಸರಾಃ ಶಾಪಾದ್ ಯಸ್ಯ ಶೈಲತ್ವಮಾಗತಾ ॥೧೧॥

ಅವರ ತಪಸ್ಸಿಗೆ ವಿಘ್ನವನ್ನು ಮಾಡಲು ಬಂದ ಪಂಚಚೂಡಗಳುಳ್ಳ, ಪ್ರಸಿದ್ಧಳಾದ ರಂಭೆ ಎಂಬ ಅಪ್ಸರೆಯು ಅವರ ಶಾಪಕ್ಕೆ ಒಳಗಾಗಿ ಪರ್ವತವಾದಳು.

ತಥೈವಾಸ್ಯ ಭಯಾದ್ ಬದ್ಧ್ವಾ ವಸಿಷ್ಠಃ ಸಲಿಲೇ ಪುರಾ ।
ಆತ್ಮಾನಂ ಮಜ್ಜಯಾಮಾಸ ವಿಪಾಶಃ ಪುನರುತ್ಥಿತಃ ॥೧೨॥

ಹಾಗೆಯೇ ಅವರಿಗೆ ಹೆದರಿದ ವಸಿಷ್ಠರು ತಮ್ಮನ್ನು ಪಾಶಗಳಿಂದ ಕಟ್ಟಿಕೊಂಡು ನದಿಯಲ್ಲಿ ಮುಳುಗಿ ಪಾಶಗಳನ್ನು ಕಳೆದುಕೊಂಡು ಮೇಲೆದ್ದರು.

ತದಾಪ್ರಭೃತಿ ಪುಣ್ಯಾ ಹಿ ವಿಪಾಶಾऽಭೂನ್ಮಹಾನದೀ ।
ವಿಖ್ಯಾತಾ ಕರ್ಮಣಾ ತೇನ ವಸಿಷ್ಠಸ್ಯ ಮಹಾತ್ಮನಃ ॥೧೩॥

ಆಗಿನಿಂದಲೂ ಪ್ರಾರಂಭಿಸಿ ಆ ಮಹಾನದಿಯು ಮಹಾತ್ಮರಾದ ವಸಿಷ್ಠರ ಆ ಕರ್ಮದಿಂದ ವಿಪಾಶಾ ಎಂಬ ಹೆಸರಿನಿಂದ ಪ್ರಸಿದ್ಧವಾಗಿ ಪುಣ್ಯಪ್ರದವಾಗಿದೆ.

ವಾಗ್ಭಿಶ್ಚ ಭಗವಾನ್ ಯೇನ ದೇವಸೇನಾಗ್ರಗಃ ಪ್ರಭುಃ ।
ಸ್ತುತಃ ಪ್ರೀತಮನಾಶ್ಚಾಸೀಚ್ಛಾಪಾಚ್ಚೈನಮಮೋಚಯತ್ ॥೧೪॥

ಅವರು ತಮ್ಮ ಶ್ರೇಷ್ಠವಾದ ಸ್ತೋತ್ರಗಳಿಂದ ದೇವಸೇನಾನಾಯಕನಾದ ಇಂದ್ರನನ್ನು ಸ್ತೋತ್ರ ಮಾಡಿ ಅವನ ಅನುಗ್ರಹದಿಂದ ವಸಿಷ್ಠರ ಪುತ್ರರ ಶಾಪದಿಂದ ತಮಗೆ ಬಂದಿದ್ದ ಚಂಡಾಲತ್ವವನ್ನು ಪರಿಹರಿಸಿಕೊಂಡರು.

ಧ್ರುವಸ್ಯೋತ್ತಾನಪಾದಸ್ಯ ಬ್ರಹ್ಮರ್ಷೀಣಾಂ ತಥೈವ ಚ ।
ಮಧ್ಯೇ ಜ್ವಲತಿ ಯೋ ನಿತ್ಯಮುದೀಚೀಮಾಶ್ರಿತೋ ದಿಶಮ್ ॥೧೫॥

ಅವರು ಉತ್ತರದಿಕ್ಕಿನಲ್ಲಿ ಧ್ರುವನಕ್ಷತ್ರದ ಸಮೀಪದಲ್ಲಿ ಬ್ರಹ್ಮರ್ಷಿಗಳ ಗಣವಾದ ಸಪ್ತರ್ಷಿಗಣಗಳ ಮಧ್ಯದಲ್ಲಿ ಯಾವಾಗಲೂ ಜ್ವಲಿಸುತ್ತಿದ್ದಾರೆ.

ತಸ್ಯೈತಾನಿ ಚ ಕರ್ಮಾಣಿ ತಥಾನ್ಯಾನಿ ಚ ಕೌರವ ।
ಬ್ರಾಹ್ಮಣತ್ವಂ ಕುತೋ ಜಾತಮಿದಂ ಕೌತೂಹಲಂ ಮಮ ॥೧೬॥

ಎಲೈ ಕೌರವನೇ, ಅವರ ಕರ್ಮಗಳು ಇಂತಹವು ಮತ್ತು ಇದಕ್ಕೆ ಸದೃಶವಾದವುಗಳು. ಅಂತಹವರಿಗೆ ಹೇಗೆ ಬ್ರಾಹ್ಮಣತ್ವವು ಉಂಟಾಯಿತು ಎಂದು ತಿಳಿಯಲು ನನಗೆ ಕುತೂಹಲವಿದೆ.

ಕಿಮೇತದಿತಿ ತತ್ತ್ವೇನ ಪ್ರಬ್ರೂಹಿ ಭರತರ್ಷಭ ।
ದೇಹಾಂತರಮನಾಸಾದ್ಯ ಕಥಂ ಸ ಬ್ರಾಹ್ಮಣೋಽಭವತ್ ॥೧೭॥

ಎಲೈ ಭರತಶ್ರೇಷ್ಠನೇ, ಇದು ಏನು ಎಂದು, ಇದರ ತತ್ತ್ವವನ್ನು ಸರಿಯಾಗಿ ಹೇಳು. ವಿಶ್ವಾಮಿತ್ರರು ದೇಹಾಂತರವನ್ನು ಪಡೆಯದೆ ಹೇಗೆ ಬ್ರಾಹ್ಮಣರಾದರು?

ಏತತ್ ತತ್ತ್ವೇನ ಮೇ ರಾಜನ್ ಸರ್ವಮಾಖ್ಯಾತುಮರ್ಹಸಿ ।
ಮತಂಗಸ್ಯ ಯಥಾ ತತ್ತ್ವಂ ತಥೈವೈತದ್ ಬ್ರವೀಹಿ ಮೇ ॥೧೮॥

ಎಲೈ ರಾಜನೇ, ಇದರ ತತ್ತ್ವವೆಲ್ಲವನ್ನೂ ನನಗೆ ಚೆನ್ನಾಗಿ ಹೇಳಬೇಕು. ಮತಂಗ ಋಷಿಗಳ ಕಥೆಯನ್ನು ಹೇಳಿದಂತೆ ಈ ಕಥೆಯನ್ನೂ ನನಗೆ ಹೇಳು.

ಸ್ಥಾನೇ ಮತಂಗೋ ಬ್ರಾಹ್ಮಣ್ಯಂ ನಾಲಭದ್ ಭರತರ್ಷಭ ।
ಚಂಡಾಲಯೋನೌ ಜಾತೋ ಹಿ ಕಥಂ ಬ್ರಾಹ್ಮಣ್ಯಮಾಪ್ನುಯಾತ್ ॥೧೯॥

ಎಲೈ ಭರತರ್ಷಭನೇ, ಮತಂಗರು ಬ್ರಾಹ್ಮಣ್ಯವನ್ನು ಪಡೆಯಲಿಲ್ಲ ಎಂಬುದು ಯುಕ್ತವಾದುದು. ಚಂಡಾಲಯೋನಿಯಲ್ಲಿ ಜನಿಸಿದವನು ಹೇಗೆ ಬ್ರಾಹ್ಮಣ್ಯವನ್ನು ಪಡೆದಾನು?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಅನುಶಾಸನಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ಭೀಷ್ಮರಿಂದ ವಿಶ್ವಾಮಿತ್ರರ ಬ್ರಾಹ್ಮಣ್ಯಪ್ರಾಪ್ತಿಪ್ರಕಾರದ ಕಥನ

ಭೀಷ್ಮಃ

ಶ್ರೂಯತಾಂ ಪಾರ್ಥ ತತ್ತ್ವೇನ ವಿಶ್ವಾಮಿತ್ರೋ ಯಥಾ ಪುರಾ ।
ಬ್ರಾಹ್ಮಣತ್ವಂ ಗತಸ್ತಾತ ರಾಜರ್ಷಿತ್ವಂ ತಥೈವ ಚ ॥೧॥

ಭೀಷ್ಮರು– ಎಲೈ ಪಾರ್ಥನೇ, ಪ್ರೀತಿಪಾತ್ರನೇ, ಹಿಂದೆ ವಿಶ್ವಾಮಿತ್ರರು ಹೇಗೆ ರಾಜರ್ಷಿಗಳೂ ಮತ್ತು ಬ್ರಾಹ್ಮಣರೂ ಆದರೆಂಬುದನ್ನು ಸರಿಯಾಗಿ ಕೇಳುವವನಾಗು.

ಭರತಸ್ಯಾನ್ವಯೇ ಚೈವಾಜಮೀಢೋ ನಾಮ ಪಾರ್ಥಿವಃ ।
ಬಭೂವ ಭರತಶ್ರೇಷ್ಠ ಯಜ್ವಾ ಧರ್ಮಭೃತಾಂ ವರಃ ॥೨॥

ಎಲೈ ಭರತಶ್ರೇಷ್ಠನೇ, ಭರತವಂಶದಲ್ಲಿ ಅಜಮೀಢನೆಂಬ ರಾಜನಿದ್ದನು. ಅವನು ಯಾಗವನ್ನು ಮಾಡುವವನೂ ಮತ್ತು ಧರ್ಮಿಷ್ಠರಲ್ಲಿ ಶ್ರೇಷ್ಠನೂ ಆಗಿದ್ದನು.

ತಸ್ಯ ಪುತ್ರೋ ಮಹಾನಾಸೀಜ್ಜಹ್ನುರ್ನಾಮ ಜನೇಶ್ವರಃ ।
ದುಹಿತೃತ್ವಮನುಪ್ರಾಪ್ತಾ ಗಂಗಾ ಯಸ್ಯ ಮಹಾತ್ಮನಃ ॥೩॥

ಅವನಿಗೆ ಶ್ರೇಷ್ಠನಾದ ಜಹ್ನುರಾಜನು ಪುತ್ರನಾದನು. ಗಂಗೆಯು ಆ ಮಹಾತ್ಮನ ಮಗಳಾದಳು.

ತಸ್ಯಾತ್ಮಜಸ್ತುಲ್ಯಗುಣಃ ಸಿಂಧುದ್ವೀಪೋ ಮಹಾಯಶಾಃ ।
ಸಿಂಧುದ್ವೀಪಾಚ್ಚ ರಾಜರ್ಷಿರ್ವಿಪಾಶಾಶ್ವೋ ಮಹಾಬಲಃ ॥೪॥

ಅವನ ಪುತ್ರನೆಂದರೆ ಅವನಿಗೆ ಸಮಾನವಾದ ಗುಣವುಳ್ಳ, ಮಹಾಕೀರ್ತಿವಂತನಾದ ಸಿಂಧುದ್ವೀಪ. ಸಿಂಧುದ್ವೀಪನಿಂದ ರಾಜರ್ಷಿಯಾದ, ಮಹಾಬಲನಾದ, ವಿಪಾಶಾಶ್ವನು (ಬಲಾಕಾಶ್ವನು) ಜನಿಸಿದನು.

ಪಲ್ಲವಸ್ತಸ್ಯ ತನಯಃ ಸಾಕ್ಷಾದ್ ಧರ್ಮ ಇವಾಪರಃ ।
ಕುಶಿಕಸ್ತಸ್ಯ ತನಯಃ ಸಹಸ್ರಾಕ್ಷಸಮದ್ಯುತಿಃ ॥೫॥

ಪಲ್ಲವನು ಅವನ ಪುತ್ರ. ಅವನು ಸಾಕ್ಷಾತ್ ಇನ್ನೊಬ್ಬ ಧರ್ಮನಂತೆ ಇದ್ದನು. ಇಂದ್ರನಿಗೆ ಸಮಾನವಾದ ದ್ಯುತಿಯುಳ್ಳ ಕುಶಿಕನು ಅವನ ಪುತ್ರ.

ಕುಶಿಕಸ್ಯಾತ್ಮಜಃ ಶ್ರೀಮಾನ್ ಗಾಧಿರ್ನಾಮ ಜನೇಶ್ವರಃ ।
ಅಪುತ್ರಃ ಸ ಮಹಾಬಾಹುರ್ವನವಾಸಮುದಾವಸತ್ ॥೬॥

ಕಾಂತಿಯುಕ್ತನಾದ ಗಾಧಿರಾಜನು ಕುಶಿಕನ ಪುತ್ರ. ಮಹಾಬಾಹುವಾದ ಅವನು ಪುತ್ರನಿಲ್ಲದೆ ವನವಾಸವನ್ನು ಮಾಡಿದನು.

ಕನ್ಯಾ ಜಜ್ಞೇ ಶುಭಾತ್ ತಸ್ಯ ವನೇ ನಿವಸತಃ ಸತಃ ।
ನಾಮ್ನಾ ಸತ್ಯವತೀ ನಾಮ ರೂಪೇಣಾಪ್ರತಿಮಾ ಭುವಿ ॥೭॥

ಕಾಡಿನಲ್ಲಿ ವಾಸಿಸುವ ಅವನಿಗೆ ಅವನ ಪುಣ್ಯದಿಂದ ಸತ್ಯವತಿ ಎಂಬ ಕನ್ಯೆಯು ಜನಿಸಿದಳು. ಅವಳು ಭೂಮಿಯಲ್ಲಿ ತನ್ನ ಸೌಂದರ್ಯದಿಂದ ಅಸದೃಶಳಾಗಿದ್ದಳು.

ತಾಂ ವವ್ರೇ ಭಾರ್ಗವಃ ಶ್ರೀಮಾಂಶ್ಚ್ಯವನಸ್ಯಾತ್ಮಜಃ ಪ್ರಭುಃ ।
ಋಚೀಕ ಇತಿ ವಿಖ್ಯಾತೋ ವಿಪುಲೇ ತಪಸಿ ಸ್ಥಿತಃ ॥೮॥

ಚ್ಯವನರ ಪುತ್ರರೂ, ಸಮರ್ಥರೂ, ಭೃಗುವಂಶದಲ್ಲಿ ಜನಿಸಿದವರೂ, ವಿಪುಲವಾದ ತಪಸ್ಸಿನಲ್ಲಿ ರತರಾದವರೂ ಆದ ಋಚೀಕ ಋಷಿಗಳು ಅವಳನ್ನು ಬೇಡಿದರು.

ಸ ತಾಂ ನ ಪ್ರದದೌ ತಸ್ಮೈ ಋಚೀಕಾಯ ಮಹಾತ್ಮನೇ ।
ದರಿದ್ರ ಇತಿ ಮತ್ವಾ ವೈ ಗಾಧಿಃ ಶತ್ರುನಿಬರ್ಹಣಃ ॥೯॥

ಶತ್ರುಸಂಹಾರಕನಾದ ಗಾಧಿಯು ಇವರು ದರಿದ್ರರು ಎಂದು ತಿಳಿದು ಮಹಾತ್ಮರಾದ ಋಚೀಕರಿಗೆ ತನ್ನ ಪುತ್ರಿಯನ್ನು ಕೊಡಲಿಲ್ಲ.

ಪ್ರತ್ಯಾಖ್ಯಾಯ ಪುನರ್ಯಾಂತಮಬ್ರವೀದ್ ರಾಜಸತ್ತಮಃ ।
ಶುಲ್ಕಂ ಪ್ರದೀಯತಾಂ ಬ್ರಹ್ಮನ್ ತತೋ ವೇತ್ಸ್ಯಸಿ ಮೇ ಸುತಾಮ್ ॥

ಅವರನ್ನು ನಿರಾಕರಿಸಿದ ಆ ರಾಜಶ್ರೇಷ್ಠನು ಅವರು ಹೋಗುತ್ತಿದ್ದಂತೆ ಅವರನ್ನು ಕುರಿತು ಬ್ರಾಹ್ಮಣರೇ, ಕನ್ಯಾಶುಲ್ಕವನ್ನು ಕೊಡಿ, ಅನಂತರ ನನ್ನ ಪುತ್ರಿಯನ್ನು ಪಡೆಯುವಿರಿ ಎಂದು ಹೇಳಿದನು.

ಋಚೀಕಃ

ಕಿಂ ಪ್ರಯಚ್ಛಾಮಿ ರಾಜೇಂದ್ರ ತುಭ್ಯಂ ಶುಲ್ಕಮಹಂ ನೃಪ ।
ದುಹಿತುರ್ಭ್ಯಾಹ್ಯಸಂಸಕ್ತೋ ಮಾಽತ್ರಾಭೂತ್ ತೇ ವಿಚಾರಣಾ ॥೧೧॥

ಋಚೀಕ– ಎಲೈ ರಾಜೇಂದ್ರನೇ, ಭಗವದ್ಧ್ಯಾನಪರನಾದ ನಾನು ನಿನ್ನ ಮಗಳಿಗೆ ಅಥವಾ ನಿನಗೆ ಪುತ್ರಿಯ ಸಲುವಾಗಿ ಏನು ಶುಲ್ಕವನ್ನು ಕೊಡಲಿ ಎಂದು ಹೇಳು. ಈ ವಿಷಯದಲ್ಲಿ ಸಂಶಯಪಡಬೇಡ.

ಗಾಧಿಃ

ಚಂದ್ರರಶ್ಮಿಪ್ರಕಾಶಾನಾಂ ಹಯಾನಾಂ ವಾತರಂಹಸಾಮ್ ।
ಏಕತಃ ಶ್ಯಾಮಕರ್ಣಾನಾಂ ಸಹಸ್ರಂ ದೇಹಿ ಭಾರ್ಗವ ॥೧೨॥

ಗಾಧಿ– ಎಲೈ ಭಾರ್ಗವರೇ, ಚಂದ್ರಕಿರಣಗಳಂತೆ ಶ್ವೇತವರ್ಣದಿಂದ ಕೂಡಿದ, ವಾಯುವೇಗವುಳ್ಳ, ಒಂದು ಕಿವಿ ಮಾತ್ರ ಕಪ್ಪಾಗಿರುವ ಸಹಸ್ರ ಅಶ್ವಗಳನ್ನು ಕೊಡಿ.

ಭೀಷ್ಮಃ

ತತಃ ಸ ಭೃಗುಶಾರ್ದೂಲಶ್ಚ್ಯವನಸ್ಯಾತ್ಮಜಃ ಪ್ರಭುಃ ।
ಅಬ್ರವೀದ್ ವರುಣಂ ದೇವಮಾದಿತ್ಯಂ ಪತಿಮಂಭಸಾಮ್ ॥೧೩॥

ಭೀಷ್ಮ– ಅನಂತರ ಚ್ಯವನಪುತ್ರರಾದ, ಭೃಗುಕುಲೋತ್ಪನ್ನರಲ್ಲಿ ಶ್ರೇಷ್ಠರಾದ, ಸಮರ್ಥರಾದ ಋಚೀಕರು ಅದಿತಿಯ ಪುತ್ರನಾದ, ಜಲೇಶ್ವರನಾದ ವರುಣದೇವನನ್ನು ಕುರಿತು ಕೇಳಿದರು.

ಏಕತಃ ಶ್ಯಾಮಕರ್ಣಾನಾಂ ಹಯಾನಾಂ ಚಂದ್ರವರ್ಚಸಾಮ್ ।
ಸಹಸ್ರಂ ವಾತವೇಗಾನಾಂ ಭಿಕ್ಷೇ ತ್ವಾಂ ದೇವಸತ್ತಮ ॥೧೪॥

ಎಲೈ ದೇವಶ್ರೇಷ್ಠನೇ, ಒಂದು ಕಿವಿ ಮಾತ್ರ ಕಪ್ಪಾಗಿರುವ, ಚಂದ್ರನ ಕಾಂತಿಯನ್ನು ಹೊಂದಿದ, ವಾಯುವೇಗವನ್ನು ಹೊಂದಿದ ಸಹಸ್ರ ಅಶ್ವಗಳನ್ನು ನಾನು ನಿನ್ನನ್ನು ಬೇಡುತ್ತಿದ್ದೇನೆ (ಎಂದು ಹೇಳಿದರು).

ತಥೇತಿ ವರುಣೋ ದೇವ ಆದಿತ್ಯೋ ಭೃಗುಸತ್ತಮಮ್ ।
ಉವಾಚ ಯತ್ರ ತೇ ಛಂದಸ್ತತ್ರೋತ್ಥಾಸ್ಯಂತಿ ವಾಜಿನಃ ॥೧೫॥

ಅದಿತಿಯ ಪುತ್ರನಾದ ವರುಣದೇವನು ಭೃಗುಶ್ರೇಷ್ಠರನ್ನು ಕುರಿತು, ಹಾಗೆಯೇ ಆಗಲಿ ಎಂದು ಹೇಳಿ, ನೀವು ಬಯಸಿದ ಕಡೆಯಲ್ಲಿ ಆ ಅಶ್ವಗಳು ಮೇಲೆದ್ದು ಬರುತ್ತವೆ ಎಂದು ಹೇಳಿದನು.

ಧ್ಯಾತಮಾತ್ರೇ ಋಚೀಕೇನ ಹಯಾನಾಂ ಚಂದ್ರವರ್ಚಸಾಮ್ ।
ಗಂಗಾಜಲಾತ್ ಸಮುತ್ತಸ್ಥೌ ಸಹಸ್ರಂ ವಿಪುಲೌಜಸಾಮ್ ॥೧೬॥

ಋಚೀಕರು ಆ ಚಂದ್ರಕಾಂತಿಯುಳ್ಳ ಅಶ್ವಗಳನ್ನು ಧ್ಯಾನ ಮಾಡಿದ ತಕ್ಷಣವೇ ವಿಪುಲ ಸಾಮರ್ಥ್ಯವುಳ್ಳ ಆ ಸಹಸ್ರ ಅಶ್ವಗಳು ಗಂಗಾಜಲದಿಂದ ಮೇಲೆದ್ದವು.

ಅದೂರೇ ಕನ್ಯಾಕುಬ್ಜಸ್ಯ ಗಂಗಾಯಾಸ್ತೀರಮುತ್ತಮಮ್ ।
ಅಶ್ವತೀರ್ಥಂ ತದದ್ಯಾಪಿ ಮಾನವಾಃ ಪರಿಚಕ್ಷತೇ ॥೧೭॥

ಕಾನ್ಯಕುಬ್ಜದ ಸಮೀಪದಲ್ಲಿ ಗಂಗಾನದಿಯ ಶ್ರೇಷ್ಠವಾದ ತೀರದಿಂದ ಆ ಅಶ್ವಗಳು ಎದ್ದುಬಂದವು. ಆ ಸ್ಥಳವನ್ನು ಈಗಲೂ ಮನುಷ್ಯರು ಅಶ್ವತೀರ್ಥವೆಂದು ಕರೆಯುತ್ತಾರೆ.

ತತ್ ತದಾ ಗಾಧಯೇ ತಾತ ಸಹಸ್ರಂ ವಾಜಿನಾಂ ಶುಭಮ್ ।
ಋಚೀಕಃ ಪ್ರದದೌ ಪ್ರೀತಃ ಶುಲ್ಕಾರ್ಥಂ ಜಪತಾಂ ವರಃ ॥೧೮॥

ಎಲೈ ಪ್ರೀತಿಪಾತ್ರನೇ, ಆಗ ಜಪ ಮಾಡುವವರಲ್ಲಿ ಶ್ರೇಷ್ಠರಾದ ಋಚೀಕರು ಸಂತೋಷದಿಂದ ಕನ್ಯಾಶುಲ್ಕದ ರೂಪದಲ್ಲಿ ಆ ಶುಭವಾದ ಸಹಸ್ರ ಅಶ್ವಗಳನ್ನು ಗಾಧಿಗೆ ನೀಡಿದರು.

ತತಃ ಸ ವಿಸ್ಮಿತೋ ರಾಜಾ ಗಾಧಿಃ ಶಾಪಭಯೇನ ಚ ।
ದದೌ ತಾಂ ಸಮಲಂಕೃತ್ಯ ಕನ್ಯಾಂ ಭೃಗುಸುತಾಯ ವೈ ॥೧೯॥

ಆಗ ವಿಸ್ಮಯಗೊಂಡ ರಾಜನು ಕನ್ಯೆಯನ್ನು ಕೊಡದಿದ್ದರೆ ಅವರು ಕೊಡಬಹುದಾದ ಶಾಪದಿಂದಲೂ ಹೆದರಿ, ಅಲಂಕೃತಳಾದ ಕನ್ಯೆಯನ್ನು ಭೃಗುಕುಲೋತ್ಪನ್ನರಾದ ಅವರಿಗೆ ಕೊಟ್ಟನು.

ಜಗ್ರಾಹ ಪಾಣಿಂ ವಿಧಿನಾ ತಸ್ಯಾ ಬ್ರಹ್ಮರ್ಷಿಸತ್ತಮಃ ।
ಸಾ ಚ ತಂ ಪತಿಮಾಸಾದ್ಯ ಪರಂ ಹರ್ಷಮವಾಪ ಹ ॥೨೦॥

ಬ್ರಹ್ಮರ್ಷಿಗಳಲ್ಲಿ ಶ್ರೇಷ್ಠರಾದ ಅವರು ವೇದವಿಧಿಗೆ ಅನುಸಾರವಾಗಿ ಅವಳ ಪಾಣಿಗ್ರಹಣವನ್ನು ಮಾಡಿದರು. ಅವಳಾದರೂ ಋಚೀಕರನ್ನು ಪತಿಯಾಗಿ ಹೊಂದಿ ಬಹಳ ಸಂತೋಷಪಟ್ಟಳು.

ಸ ತುತೋಷ ಚ ವಿಪ್ರರ್ಷಿಸ್ತಸ್ಯಾ ವೃತ್ತೇನ ಭಾರತ ।
ಛಂದಯಾಮಾಸ ಚೈವೈನಾಂ ವರೇಣ ವರವರ್ಣಿನೀಮ್ ॥೨೧॥

ಎಲೈ ಭಾರತನೇ, ಆ ಬ್ರಹ್ಮರ್ಷಿಗಳು ಅವಳ ಶೀಲದಿಂದ ಬಹಳ ಸಂತೋಷಪಟ್ಟು ಆ ಸುಂದರಿಯನ್ನು ಕುರಿತು, ಬೇಕಾದ ವರವನ್ನು ಕೇಳು ಎಂದು ಹೇಳಿದರು.

ಮಾತ್ರೇ ತತ್ಸರ್ವಮಾಚಖ್ಯೌ ಸಾ ಕನ್ಯಾ ರಾಜಸತ್ತಮಮ್ ।
ಅಥ ತಾಮಬ್ರವೀದ್ ಮಾತಾ ಸುತಾಂ ಕಿಂಚಿದವಾಙ್ಮುಖೀಮ್ ॥೨೨॥

ಎಲೈ ರಾಜಶ್ರೇಷ್ಠನೇ, ಆ ಕನ್ಯೆಯು ತನ್ನ ತಾಯಿಗೆ ಎಲ್ಲ ವಿಷಯವನ್ನೂ ಹೇಳಿದಳು. ಅನಂತರದಲ್ಲಿ ಸ್ವಲ್ಪ ತಲೆ ತಗ್ಗಿಸಿದ ತನ್ನ ಪುತ್ರಿಯನ್ನು ಕುರಿತು ತಾಯಿಯು ಹೇಳಿದಳು.

ಮಮಾಪಿ ಪುತ್ರಿ ಭರ್ತಾ ತೇ ಪ್ರಸಾದಂ ಕರ್ತುಮರ್ಹತಿ ।
ಅಪತ್ಯಸ್ಯ ಪ್ರದಾನೇನ ಸಮರ್ಥಃ ಸ ಮಹಾತಪಾಃ ॥೨೩॥

ಪುತ್ರಿಯೇ, ಮಹಾತಪಸ್ವಿಯಾದ ನಿನ್ನ ಪತಿಯು ನನಗೂ ಸಹ ಒಬ್ಬ ಪುತ್ರನನ್ನು ಕರುಣಿಸಿ ನನಗೆ ಅನುಗ್ರಹವನ್ನು ಮಾಡಬೇಕು (ಎಂದು ಹೇಳಿದಳು).

ತತಃ ಸಾ ತ್ವರಿತಂ ಗತ್ವಾ ತತ್ಸರ್ವಂ ಪ್ರತ್ಯವೇದಯತ್ ।
ಮಾತುಶ್ಚಿಕೀರ್ಷಿತಂ ರಾಜನ್ ಋಚೀಕಸ್ತಾಮಥಾಬ್ರವೀತ್ ॥೨೪॥

ಎಲೈ ರಾಜನೇ, ಅನಂತರ ಸತ್ಯವತಿಯು ಶೀಘ್ರವಾಗಿ ಋಚೀಕರ ಬಳಿಗೆ ಹೋಗಿ, ತಾಯಿಯ ಅಭಿಪ್ರಾಯವೆಲ್ಲವನ್ನೂ ತಿಳಿಸಿದಳು. ಋಚೀಕರು ಅವಳನ್ನು ಕುರಿತು ಹೇಳಿದರು.

ಗುಣವಂತಮಪತ್ಯಂ ವೈ ತ್ವಂ ಚ ಸಾ ಜನಯಿಷ್ಯಥಃ ।
ಜನನ್ಯಾಸ್ತವ ಕಲ್ಯಾಣಿ ಮಾ ಭೂದ್ವೈ ಪ್ರಣಯೋಽನ್ಯಥಾ ॥೨೫॥

ನೀನೂ ಮತ್ತು ನಿನ್ನ ತಾಯಿಯೂ ಶ್ರೇಷ್ಠರಾದ ಪುತ್ರರನ್ನು ಪಡೆಯುವಿರಿ. ಎಲೌ ಕಲ್ಯಾಣಿಯೇ, ನಿನ್ನ ತಾಯಿಯು ನನ್ನಲ್ಲಿ ತೋರಿಸಿದ ಪ್ರೀತಿ-ವಿಶ್ವಾಸಗಳು ವ್ಯರ್ಥವಾಗದಿರಲಿ.

ತವ ಚೈವ ಗುಣಶ್ಲಾಘೀ ಪುತ್ರ ಉತ್ಪತ್ಸ್ಯತೇ ಶುಭೇ ।
ಅಸ್ಮದ್ವಂಶಕರಃ ಶ್ರೀಮಾಂಸ್ತವ ಮಾತುಶ್ಚ ವಂಶಕೃತ್ ॥೨೬॥

ಎಲೌ ಶುಭಳೇ, ನಿನಗೂ ಸಹ ನಮ್ಮ ವಂಶವನ್ನು ಬೆಳೆಸುವ ಕಾಂತಿಯುಕ್ತನಾದ, ಗುಣವಂತನಾದ ಒಬ್ಬ ಪುತ್ರನು ಜನಿಸುವನು. ನಿನ್ನ ತಾಯಿಗೂ ಸಹ ವಂಶಕರನಾದ ಒಬ್ಬ ಪುತ್ರನು ಜನಿಸುವನು.

ಋತುಸ್ನಾತಾ ಚ ಸಾऽಶ್ವತ್ಥಂ ತ್ವಂ ಚ ವೃಕ್ಷಮುದುಂಬರಮ್ ।
ಪರಿಷ್ವಜೇಥಾಃ ಕಲ್ಯಾಣಿ ತತ ಇಷ್ಟಮವಾಪ್ಸ್ಯಥಃ ॥೨೭॥

ಎಲೌ ಕಲ್ಯಾಣಿಯೇ, ಋತುಸ್ನಾತಳಾದ ನೀನು ಅಶ್ವತ್ಥವೃಕ್ಷವನ್ನೂ, ನಿನ್ನ ತಾಯಿಯು ಔದುಂಬರ (ಅತ್ತಿ) ವೃಕ್ಷವನ್ನು ಆಲಿಂಗಿಸಿ. ಅದರಿಂದ ನಿಮ್ಮ ಅಭೀಷ್ಟವು ಸಿದ್ಧಿಸುವವು.

ಚರುದ್ವಯಮಿದಂ ಚೈವ ಮಂತ್ರಯುಕ್ತಂ ಶುಚಿಸ್ಮಿತೇ ।
ತ್ವಂ ಚ ಸಾ ಚೋಪಯುಂಜೇಥಾಂ ತತಃ ಪುತ್ರಾವವಾಪ್ಸ್ಯಥಃ ॥೨೮॥

ಎಲೌ ಶುಚಿಸ್ಮಿತೆಯೇ, ಮಂತ್ರದಿಂದ ಅಭಿಮಂತ್ರಿತವಾದ ಈ ಎರಡು ಚರುಗಳು ಇಲ್ಲಿವೆ. ಇವುಗಳನ್ನು ನೀನೂ ಮತ್ತು ನಿನ್ನ ತಾಯಿಯೂ ಉಪಯೋಗಿಸಿ. ಅನಂತರ ಪುತ್ರರನ್ನು ಪಡೆಯುವಿರಿ (ಎಂದು ಹೇಳಿದರು).

ತತಃ ಸತ್ಯವತೀ ಹೃಷ್ಟಾ ಮಾತರಂ ಪ್ರತ್ಯಭಾಷತ ।
ಯದ್ ಋಚೀಕೇನ ಕಥಿತಂ ತಚ್ಚಾಚಖ್ಯೌ ಚರುದ್ವಯಮ್ ॥೨೯॥

ಅನಂತರ ಸತ್ಯವತಿಯು ಸಂತೋಷದಿಂದ ಕೂಡಿದವಳಾಗಿ ತಾಯಿಗೆ ಋಚೀಕರು ಹೇಳಿದ ವೃಕ್ಷದ ವಿಷಯವೆಲ್ಲವನ್ನೂ ಮತ್ತು ಆ ಚರುದ್ವಯಗಳನ್ನೂ ಹೇಳಿದಳು.

ತಾಮುವಾಚ ತತೋ ಮಾತಾ ಸುತಾಂ ಸತ್ಯವತೀಂ ತದಾ ।
ಪುತ್ರಿ ಮೂರ್ಧ್ನಾ ಪ್ರಪನ್ನಾಯಾಃ ಕುರುಷ್ವ ವಚನಂ ಮಮ ॥೩೦॥

ಆಗ ಸತ್ಯವತಿಯ ತಾಯಿಯು ಅವಳನ್ನು ಕುರಿತು, 'ಪುತ್ರಿಯೇ, ಶಿರಸ್ಸಿನಿಂದ ಶರಣಾಗತಳಾಗಿ ಹೇಳುತ್ತಿರುವ ನನ್ನ ಮಾತನ್ನು ನಡೆಸಿಕೊಡು'.

ಭರ್ತ್ರಾ ಯ ಏಷ ದತ್ತಸ್ತೇ ಚರುರ್ಮಂತ್ರಪುರಸ್ಕೃತಃ ।
ಏತಂ ಪ್ರಯಚ್ಛ ಮಹ್ಯಂ ತ್ವಂ ಮದೀಯಂ ತ್ವಂ ಗೃಹಾಣ ಚ ॥೩೧॥

ನಿನ್ನ ಪತಿಯು ಮಂತ್ರಪೂರಿತವಾದ ಯಾವ ಚರುವನ್ನು ನಿನಗೆ ಕೊಟ್ಟಿದ್ದಾರೆಯೋ ಅದನ್ನು ನನಗೆ ಕೊಡು. ನನ್ನ ಚರುವನ್ನು ನೀನು ಸ್ವೀಕರಿಸು.

ವ್ಯತ್ಯಾಸಂ ವೃಕ್ಷಯೋಶ್ಚಾಪಿ ಕರವಾವ ಶುಚಿಸ್ಮಿತೇ ।
ಯದಿ ಪ್ರಮಾಣಂ ವಚನಂ ಮಮ ಮಾತುರನಿಂದಿತೇ ।
ಸ್ವಮಪತ್ಯಂ ವಿಶಿಷ್ಟಂ ಹಿ ಸರ್ವ ಇಚ್ಛತ್ಯನಾವಿಲಮ್ ॥೩೨॥

ಎಲೌ ಶುಚಿಸ್ಮಿತೆಯೇ, ನಾವು ವೃಕ್ಷಗಳಲ್ಲಿಯೂ ವ್ಯತ್ಯಾಸವನ್ನು ಮಾಡಿಕೊಳ್ಳೋಣ. ಅನಿಂದಿತಳೇ, ನನ್ನ ಮಾತು ನಿನಗೆ ಪ್ರಮಾಣವಾದರೆ ಹೀಗೆ ಮಾಡು. ಎಲ್ಲರೂ ಶ್ರೇಷ್ಠರಾದ, ನಿರ್ದುಷ್ಟರಾದ ಒಳ್ಳೆಯ ಪುತ್ರರನ್ನು ಅಪೇಕ್ಷಿಸುತ್ತಾರಷ್ಟೆ?

ವ್ಯಕ್ತಂ ಭಗವತಾ ಚಾತ್ರ ಕೃತಮೇವಂ ಭವಿಷ್ಯತಿ ।
ತತೋ ಮೇ ತ್ವಚ್ಚರೌ ಭಾವಃ ಪಾದಪೇ ಚ ಸುಮಧ್ಯಮೇ ।
ಕಥಂ ವಿಶಿಷ್ಟೋ ಭ್ರಾತಾ ತೇ ಭವೇದಿತ್ಯೇವ ಚಿಂತಯ ॥೩೩॥

ಖಂಡಿತವಾಗಿ ಪೂಜ್ಯನಾದ ನಿನ್ನ ಪತಿಯು ಹೀಗೆಯೇ ಯೋಚಿಸುತ್ತಾನೆ. ಆದ್ದರಿಂದ ಎಲೌ ಸುಮಧ್ಯಮೆಯೇ, ನಿನ್ನ ಚರುವಿನಲ್ಲಿಯೂ ಮತ್ತು ವೃಕ್ಷದಲ್ಲಿಯೂ ನನಗೆ ಆಸೆಯುಂಟಾಗಿದೆ. ನಿನಗೆ ಹೇಗೆ ಒಬ್ಬ ಶ್ರೇಷ್ಠವಾದ ಒಬ್ಬ ತಮ್ಮನು ಜನಿಸುವನೋ ಎಂದು ಇಷ್ಟೇ ವಿಚಾರವನ್ನು ಮಾಡು (ಎಂದು ಹೇಳಿದಳು).

ತಥಾ ಚ ಕೃತವತ್ಯೌ ತೇ ಮಾತಾ ಸತ್ಯವತೀ ಚ ಸಾ ।
ಅಥ ಗರ್ಭಾವನುಪ್ರಾಪ್ತೇ ಉಭೇ ತೇ ವೈ ಯುಧಿಷ್ಠಿರ ॥೩೪॥

ತಾಯಿ ಮತ್ತು ಸತ್ಯವತಿ ಇಬ್ಬರೂ ಹಾಗೆಯೇ ಮಾಡಿದರು. ಎಲೈ ಯುಧಿಷ್ಠಿರನೇ, ಅನಂತರ ಅವರಿಬ್ಬರೂ ಗರ್ಭವನ್ನು ಧರಿಸಿದರು.

ದೃಷ್ಟ್ವಾ ಗರ್ಭಮನುಪ್ರಾಪ್ತಾಂ ಭಾರ್ಯಾಂ ಸ ಚ ಮಹಾನೃಷಿಃ ।
ಉವಾಚ ತಾಂ ಸತ್ಯವತೀಂ ದುರ್ಮನಾ ಭೃಗುಸತ್ತಮಃ ॥೩೫॥

ತನ್ನ ಪತ್ನಿಯು ಗರ್ಭವತಿಯಾದುದನ್ನು ನೋಡಿ, ಭೃಗುಶ್ರೇಷ್ಠರಾದ ಮಹರ್ಷಿಗಳಾದ ಋಚೀಕರು ಮನಸ್ಸಿನಲ್ಲಿ ಬೇಸರಗೊಂಡು ಪತ್ನಿಯಾದ ಸತ್ಯವತಿಯನ್ನು ಕುರಿತು ಹೇಳಿದರು.

ವ್ಯತ್ಯಾಸೇನೋಪಯುಕ್ತಸ್ತೇ ಚರುರ್ವ್ಯಕ್ತಂ ಭವಿಷ್ಯತಿ ।
ವ್ಯತ್ಯಾಸಃ ಪಾದಪೇ ಚಾಪಿ ಸುವ್ಯಕ್ತಂ ತೇ ಕೃತಃ ಶುಭೇ ॥೩೬॥

ಎಲೌ ಶುಭಳಾದವಳೇ, ನೀನು ಸ್ಪಷ್ಟವಾಗಿ ಚರುವಿನಲ್ಲಿ ವ್ಯತ್ಯಾಸ ಮಾಡಿದ್ದೀಯೆ. ಅದಕ್ಕಿಂತಲೂ ಸ್ಪಷ್ಟವಾಗಿ ವೃಕ್ಷಗಳಲ್ಲಿ ವ್ಯತ್ಯಾಸ ಮಾಡಿದ್ದೀಯೆ ಎಂದು ಕಾಣುತ್ತಿದೆ.

ಮಯಾ ಹಿ ವಿಧಿವದ್ ಬ್ರಹ್ಮ ತಚ್ಚರೌ ಸನ್ನಿವೇಶಿತಮ್ ।
ಕ್ಷತ್ರವೀರ್ಯಂ ಚ ಸಕಲಂ ಚರೌ ತಸ್ಯಾ ನಿವೇಶಿತಮ್ ॥೩೭॥

ನಾನು ನಿನ್ನ ಚರುವಿನಲ್ಲಿ ವಿಧಿವತ್ತಾಗಿ ಬ್ರಾಹ್ಮಣ ತೇಜಸ್ಸನ್ನು ಅಭಿಮಂತ್ರಿಸಿದ್ದೆನು. ನಿನ್ನ ತಾಯಿಯ ಚರುವಿನಲ್ಲಿ ಸಕಲವಾದ ಕ್ಷತ್ರತೇಜಸ್ಸನ್ನು ಅಭಿಮಂತ್ರಿಸಿ ಇಟ್ಟಿದ್ದೆನು.

ತ್ರಿಲೋಕವಿಖ್ಯಾತಗುಣಂ ತ್ವಂ ವಿಪ್ರಂ ಜನಯಿಷ್ಯಸಿ ।
ಸಾ ಚ ಕ್ಷತ್ರಂ ವಿಶಿಷ್ಟಂ ವೈ ತತ ಏತತ್ ಕೃತಂ ಮಯಾ ॥೩೮॥

ನೀನು ಮೂರುಲೋಕಗಳಲ್ಲಿಯೂ ವಿಖ್ಯಾತವಾದ ಗುಣವುಳ್ಳ ಬ್ರಾಹ್ಮಣನನ್ನು ಪಡೆಯುವಿ. ನಿನ್ನ ತಾಯಿಯು ಅಂಥ ವಿಶಿಷ್ಟನಾದ ಕ್ಷತ್ರಿಯ ಪುತ್ರನನ್ನು ಪಡೆಯುವಳು ಎಂದು ಯೋಚಿಸಿ ನಾನು ಹೀಗೆ ಮಾಡಿದೆನು.

ವ್ಯತ್ಯಾಸಸ್ತು ಕೃತೋ ಯಸ್ಮಾತ್ ತ್ವಯಾ ಮಾತ್ರಾ ತಥೈವ ಚ ।
ತಸ್ಮಾತ್ ಸಾ ಬ್ರಾಹ್ಮಣಶ್ರೇಷ್ಠಂ ಮಾತಾ ತೇ ಜನಯಿಷ್ಯತಿ ॥೩೯॥

ನೀನೂ ಮತ್ತು ನಿನ್ನ ತಾಯಿಯೂ ವ್ಯತ್ಯಾಸವನ್ನು ಮಾಡಿದ ಕಾರಣದಿಂದ ಆ ನಿನ್ನ ತಾಯಿಯು ಶ್ರೇಷ್ಠನಾದ ಬ್ರಾಹ್ಮಣನನ್ನು ಪುತ್ರನನ್ನಾಗಿ ಪಡೆಯುವಳು.

ಕ್ಷತ್ರಿಯಂ ತೂಗ್ರಕರ್ಮಾಣಂ ತ್ವಂ ಭದ್ರೇ ಜನಯಿಷ್ಯಸಿ ।
ನ ಹಿ ತೇ ತತ್ಕೃತಂ ಸಾಧು ಮಾತೃಸ್ನೇಹೇನ ಭಾಮಿನಿ ॥೪೦॥

ಎಲೌ ಭದ್ರೆಯೇ, ನೀನಾದರೂ ಕ್ರೂರಕರ್ಮವನ್ನು ಮಾಡುವ ಕ್ಷತ್ರಿಯನನ್ನು ಪುತ್ರನನ್ನಾಗಿ ಪಡೆಯುವಿ. ಎಲೌ ಭಾಮಿನಿಯೇ, ತಾಯಿಯ ಮೇಲಿನ ಪ್ರೀತಿಯಿಂದ ನೀನು ಮಾಡಿದ ವ್ಯತ್ಯಾಸವು ಸರಿಯಾದುದಲ್ಲ (ಎಂದು ಹೇಳಿದರು).

ನಿನ್ನ ಪತಿಯು ಮಂತ್ರಪೂರಿತವಾದ ಯಾವ ಚರುವನ್ನು ನಿನಗೆ ಕೊಟ್ಟಿದ್ದಾರೆಯೋ ಅದನ್ನು ನನಗೆ ಕೊಡು. ನನ್ನ ಚರುವನ್ನು ನೀನು ಸ್ವೀಕರಿಸು.

ವ್ಯತ್ಯಾಸಂ ವೃಕ್ಷಯೋಶ್ಚಾಪಿ ಕರವಾವ ಶುಚಿಸ್ಮಿತೇ ।
ಯದಿ ಪ್ರಮಾಣಂ ವಚನಂ ಮಮ ಮಾತುರನಿಂದಿತೇ ।
ಸ್ವಮಪತ್ಯಂ ವಿಶಿಷ್ಟಂ ಹಿ ಸರ್ವ ಇಚ್ಛತ್ಯನಾವಿಲಮ್ ॥೩೨॥

ಎಲೌ ಶುಚಿಸ್ಮಿತೆಯೇ, ನಾವು ವೃಕ್ಷಗಳಲ್ಲಿಯೂ ವ್ಯತ್ಯಾಸವನ್ನು ಮಾಡಿಕೊಳ್ಳೋಣ. ಅನಿಂದಿತಳೇ, ನನ್ನ ಮಾತು ನಿನಗೆ ಪ್ರಮಾಣವಾದರೆ ಹೀಗೆ ಮಾಡು. ಎಲ್ಲರೂ ಶ್ರೇಷ್ಠರಾದ, ನಿರ್ದುಷ್ಟರಾದ ಒಳ್ಳೆಯ ಪುತ್ರರನ್ನು ಅಪೇಕ್ಷಿಸುತ್ತಾರಷ್ಟೆ?

ವ್ಯಕ್ತಂ ಭಗವತಾ ಚಾತ್ರ ಕೃತಮೇವಂ ಭವಿಷ್ಯತಿ ।
ತತೋ ಮೇ ತ್ವಚ್ಚರೌ ಭಾವಃ ಪಾದಪೇ ಚ ಸುಮಧ್ಯಮೇ ।
ಕಥಂ ವಿಶಿಷ್ಟೋ ಭ್ರಾತಾ ತೇ ಭವೇದಿತ್ಯೇವ ಚಿಂತಯ ॥೩೩॥

ಖಂಡಿತವಾಗಿ ಪೂಜ್ಯನಾದ ನಿನ್ನ ಪತಿಯು ಹೀಗೆಯೇ ಯೋಚಿಸುತ್ತಾನೆ. ಆದ್ದರಿಂದ ಎಲೌ ಸುಮಧ್ಯಮೆಯೇ, ನಿನ್ನ ಚರುವಿನಲ್ಲಿಯೂ ಮತ್ತು ವೃಕ್ಷದಲ್ಲಿಯೂ ನನಗೆ ಆಸೆಯುಂಟಾಗಿದೆ. ನಿನಗೆ ಹೇಗೆ ಒಬ್ಬ ಶ್ರೇಷ್ಠವಾದ ಒಬ್ಬ ತಮ್ಮನು ಜನಿಸುವನೋ ಎಂದು ಇಷ್ಟೇ ವಿಚಾರವನ್ನು ಮಾಡು (ಎಂದು ಹೇಳಿದಳು).

ತಥಾ ಚ ಕೃತವತ್ಯೌ ತೇ ಮಾತಾ ಸತ್ಯವತೀ ಚ ಸಾ ।
ಅಥ ಗರ್ಭಾವನುಪ್ರಾಪ್ತೇ ಉಭೇ ತೇ ವೈ ಯುಧಿಷ್ಠಿರ ॥೩೪॥

ತಾಯಿ ಮತ್ತು ಸತ್ಯವತಿ ಇಬ್ಬರೂ ಹಾಗೆಯೇ ಮಾಡಿದರು. ಎಲೈ ಯುಧಿಷ್ಠಿರನೇ, ಅನಂತರ ಅವರಿಬ್ಬರೂ ಗರ್ಭವನ್ನು ಧರಿಸಿದರು.

ದೃಷ್ಟ್ವಾ ಗರ್ಭಮನುಪ್ರಾಪ್ತಾಂ ಭಾರ್ಯಾಂ ಸ ಚ ಮಹಾನೃಷಿಃ ।
ಉವಾಚ ತಾಂ ಸತ್ಯವತೀಂ ದುರ್ಮನಾ ಭೃಗುಸತ್ತಮಃ ॥೩೫॥

ತನ್ನ ಪತ್ನಿಯು ಗರ್ಭವತಿಯಾದುದನ್ನು ನೋಡಿ, ಭೃಗುಶ್ರೇಷ್ಠರಾದ ಮಹರ್ಷಿಗಳಾದ ಋಚೀಕರು ಮನಸ್ಸಿನಲ್ಲಿ ಬೇಸರಗೊಂಡು ಪತ್ನಿಯಾದ ಸತ್ಯವತಿಯನ್ನು ಕುರಿತು ಹೇಳಿದರು.

ವ್ಯತ್ಯಾಸೇನೋಪಯುಕ್ತಸ್ತೇ ಚರುರ್ವ್ಯಕ್ತಂ ಭವಿಷ್ಯತಿ ।
ವ್ಯತ್ಯಾಸಃ ಪಾದಪೇ ಚಾಪಿ ಸುವ್ಯಕ್ತಂ ತೇ ಕೃತಃ ಶುಭೇ ॥೩೬॥

ಎಲೌ ಶುಭಳಾದವಳೇ, ನೀನು ಸ್ಪಷ್ಟವಾಗಿ ಚರುವಿನಲ್ಲಿ ವ್ಯತ್ಯಾಸ ಮಾಡಿದ್ದೀಯೆ. ಅದಕ್ಕಿಂತಲೂ ಸ್ಪಷ್ಟವಾಗಿ ವೃಕ್ಷಗಳಲ್ಲಿ ವ್ಯತ್ಯಾಸ ಮಾಡಿದ್ದೀಯೆ ಎಂದು ಕಾಣುತ್ತಿದೆ.

ಮಯಾ ಹಿ ವಿಧಿವದ್ ಬ್ರಹ್ಮ ತ್ವಚ್ಚರೌ ಸನ್ನಿವೇಶಿತಮ್ ।
ಕ್ಷತ್ರವೀರ್ಯಂ ಚ ಸಕಲಂ ಚರೌ ತಸ್ಯಾ ನಿವೇಶಿತಮ್ ॥೩೭॥

ನಾನು ನಿನ್ನ ಚರುವಿನಲ್ಲಿ ವಿಧಿವತ್ತಾಗಿ ಬ್ರಾಹ್ಮಣ ತೇಜಸ್ಸನ್ನು ಅಭಿಮಂತ್ರಿಸಿದ್ದೆನು. ನಿನ್ನ ತಾಯಿಯ ಚರುವಿನಲ್ಲಿ ಸಕಲವಾದ ಕ್ಷತ್ರತೇಜಸ್ಸನ್ನು ಅಭಿಮಂತ್ರಿಸಿ ಇಟ್ಟಿದ್ದೆನು.

ತ್ರಿಲೋಕವಿಖ್ಯಾತಗುಣಂ ತ್ವಂ ವಿಪ್ರಂ ಜನಯಿಷ್ಯಸಿ ।
ಸಾ ಚ ಕ್ಷತ್ರಂ ವಿಶಿಷ್ಟಂ ವೈ ತತ ಏತತ್ ಕೃತಂ ಮಯಾ ॥೩೮॥

ನೀನು ಮೂರುಲೋಕಗಳಲ್ಲಿಯೂ ವಿಖ್ಯಾತವಾದ ಗುಣವುಳ್ಳ ಬ್ರಾಹ್ಮಣನನ್ನು ಪಡೆಯುವಿ. ನಿನ್ನ ತಾಯಿಯು ಅಂಥ ವಿಶಿಷ್ಟನಾದ ಕ್ಷತ್ರಿಯ ಪುತ್ರನನ್ನು ಪಡೆಯುವಳು ಎಂದು ಯೋಚಿಸಿ ನಾನು ಹೀಗೆ ಮಾಡಿದೆನು.

ವ್ಯತ್ಯಾಸಸ್ತು ಕೃತೋ ಯಸ್ಮಾತ್ ತ್ವಯಾ ಮಾತ್ರಾ ತಥೈವ ಚ ।
ತಸ್ಮಾತ್ ಸಾ ಬ್ರಾಹ್ಮಣಶ್ರೇಷ್ಠಂ ಮಾತಾ ತೇ ಜನಯಿಷ್ಯತಿ ॥೩೯॥

ನೀನೂ ಮತ್ತು ನಿನ್ನ ತಾಯಿಯೂ ವ್ಯತ್ಯಾಸವನ್ನು ಮಾಡಿದ ಕಾರಣದಿಂದ ಆ ನಿನ್ನ ತಾಯಿಯು ಶ್ರೇಷ್ಠನಾದ ಬ್ರಾಹ್ಮಣನನ್ನು ಪುತ್ರನನ್ನಾಗಿ ಪಡೆಯುವಳು.

ಕ್ಷತ್ರಿಯಂ ತೂಗ್ರಕರ್ಮಾಣಂ ತ್ವಂ ಭದ್ರೇ ಜನಯಿಷ್ಯಸಿ ।
ನ ಹಿ ತೇ ತತ್ಕೃತಂ ಸಾಧು ಮಾತೃಸ್ನೇಹೇನ ಭಾಮಿನಿ ॥೪೦॥

ಎಲೌ ಭದ್ರೆಯೇ, ನೀನಾದರೂ ಕ್ರೂರಕರ್ಮವನ್ನು ಮಾಡುವ ಕ್ಷತ್ರಿಯನನ್ನು ಪುತ್ರನನ್ನಾಗಿ ಪಡೆಯುವಿ. ಎಲೌ ಭಾಮಿನಿಯೇ, ತಾಯಿಯ ಮೇಲಿನ ಪ್ರೀತಿಯಿಂದ ನೀನು ಮಾಡಿದ ವ್ಯತ್ಯಾಸವು ಸರಿಯಾದುದಲ್ಲ (ಎಂದು ಹೇಳಿದರು).

ಸಾ ಶ್ರುತ್ವಾ ಶೋಕಸಂತಪ್ತಾ ಪಪಾತ ವರವರ್ಣಿನೀ ।
ಭೂಮೌ ಸತ್ಯವತೀ ರಾಜಂಶ್ಛಿನ್ನೇವ ರುಚಿರಾ ಲತಾ ॥೪೧॥

ಆ ಮಾತುಗಳನ್ನು ಕೇಳಿ, ಸುಂದರಿಯಾದ ಸತ್ಯವತಿಯು ಶೋಕಸಂತಪ್ತಳಾಗಿ ಕತ್ತರಿಸಿ ಭೂಮಿಯ ಮೇಲೆ ಬಿದ್ದ ಸುಂದರವಾದ ಲತೆಯಂತೆ ಕೆಳಗೆ ಬಿದ್ದಳು.

ಪ್ರತಿಲಭ್ಯ ಚ ಸಾ ಸಂಜ್ಞಂ ಶಿರಸಾ ಪ್ರಣಿಪತ್ಯ ಚ ।
ಉವಾಚ ಭಾರ್ಯಾ ಭರ್ತಾರಂ ಗಾಧೇಯೀ ಬ್ರಾಹ್ಮಣರ್ಷಭಮ್ ॥

ಅವಳು ಪ್ರಜ್ಞೆಯನ್ನು ಪಡೆದು ತನ್ನ ಪತಿಗೆ ಶಿರಸಾ ನಮಸ್ಕರಿಸಿ, ಪತ್ನಿಯಾದ, ಗಾಧಿಪುತ್ರಿಯಾದ ಅವಳು ಪತಿಯಾದ, ಬ್ರಾಹ್ಮಣಶ್ರೇಷ್ಠರಾದ ಅವರನ್ನು ಕುರಿತು ಮಾತನಾಡಿದಳು.

ಪ್ರಸಾದಯಂತ್ಯಾಂ ಭಾರ್ಯಾಯಾಂ ಮಯಿ ಬ್ರಹ್ಮವಿದಾಂ ವರ ।
ಪ್ರಸಾದಂ ಕುರು ವಿಪ್ರರ್ಷೇ ನ ಮೇ ಸ್ಯಾತ್ ಕ್ಷತ್ರಿಯಃ ಸುತಃ ॥೪೩॥

ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರೇ, ಭಾರ್ಯೆಯಾಗಿ ನಾನು ಅನುಗ್ರಹವನ್ನು ಬೇಡುತ್ತಿರುವಾಗ ನನಗೆ ಅನುಗ್ರಹವನ್ನು ಮಾಡಿ. ಎಲೈ ವಿಪ್ರರ್ಷಿಗಳೇ, ನನಗೆ ಕ್ಷತ್ರಿಯನಾದ ಪುತ್ರನು ಜನಿಸುವುದು ಬೇಡ.

ಕಾಮಂ ಮಮೋಗ್ರಕರ್ಮಾ ವೈ ಪೌತ್ರೋ ಭವಿತುಮರ್ಹತಿ ।
ನ ತು ಮೇ ಸ್ಯಾತ್ ಸುತೋ ಬ್ರಹ್ಮನ್ನೇಷ ಮೇ ದೀಯತಾಂ ವರಃ ॥

ನನ್ನ ಪೌತ್ರನು ಕ್ರೂರಕರ್ಮವನ್ನು ಮಾಡುವ ಕ್ಷತ್ರಿಯನಾದರೂ ಆಗಲಿ. ಆದರೆ ಅಂತಹ ಪುತ್ರನು ಮಾತ್ರ ಬೇಡ. ಪೂಜ್ಯರೇ, ನನಗೆ ಈ ವರವನ್ನು ಕೊಡಿ (ಎಂದು ಹೇಳಿದಳು).

ಏವಮಸ್ತ್ವಿತಿ ಹೋವಾಚ ಸ್ವಾಂ ಭಾರ್ಯಾಂ ಸುಮಹಾತಪಾಃ ।
ತತಃ ಸಾ ಜನಯಾಮಾಸ ಜಮದಗ್ನಿಂ ಸುತಂ ಶುಭಮ್ ॥೪೫॥

ಮಹಾರಥರಾದ ಋಚೀಕರು- ಹಾಗೇ ಆಗಲಿ ಎಂದು ಹೇಳಿದರು. ಅನಂತರ ಅವಳು ಶ್ರೇಷ್ಠರಾದ ಜಮದಗ್ನಿಗಳನ್ನು ಪುತ್ರನನ್ನಾಗಿ ಪಡೆದಳು.

ವಿಶ್ವಾಮಿತ್ರಂ ಚಾಜನಯದ್ ಗಾಧೇರ್ಭಾರ್ಯಾ ಯಶಸ್ವಿನೀ ।
ಋಷೇಃ ಪ್ರಭಾವಾದ್ ರಾಜೇಂದ್ರ ಬ್ರಹ್ಮರ್ಷಿಂ ಬ್ರಹ್ಮವಾದಿನಮ್ ॥೪೬॥

ಎಲೈ ರಾಜೇಂದ್ರನೇ, ಋಚೀಕ ಋಷಿಗಳ ಪ್ರಭಾವದಿಂದ ಕೀರ್ತಿವಂತಳಾದ ಗಾಧಿಯ ಭಾರ್ಯೆಯು ಬ್ರಹ್ಮರ್ಷಿಗಳೂ, ಬ್ರಹ್ಮವಾದಿಗಳೂ ಆದ ವಿಶ್ವಾಮಿತ್ರರನ್ನು ಪಡೆದಳು.

ತತೋ ಬ್ರಾಹ್ಮಣತಾಂ ಯಾತೋ ವಿಶ್ವಾಮಿತ್ರೋ ಮಹಾತಪಾಃ ।
ಕ್ಷತ್ರಿಯಃ ಸೋಽಪಿ ಹಿ ತಥಾ ಬ್ರಹ್ಮವಂಶಸ್ಯ ಕಾರಕಃ ॥೪೭॥

ಆ ಕಾರಣದಿಂದ ಮಹಾತಪಸ್ವಿಗಳಾದ ವಿಶ್ವಾಮಿತ್ರರು ಬ್ರಾಹ್ಮಣರಾದರು. ಅವರು ಕ್ಷತ್ರಿಯರಾಗಿ ಜನಿಸಿದರೂ ಬ್ರಾಹ್ಮಣವಂಶಕ್ಕೆ ಕಾರಕರಾದರು.

ತಸ್ಯ ಪುತ್ರಾ ಮಹಾತ್ಮಾನೋ ಬ್ರಹ್ಮವಂಶವಿವರ್ಧನಾಃ ।
ತಪಸ್ವಿನೋ ಬ್ರಹ್ಮವಿದೋ ಗೋತ್ರಕರ್ತಾರ ಏವ ಚ ॥೪೮॥

ಅವರ ಪುತ್ರರು ಮಹಾತ್ಮರೂ, ಬ್ರಾಹ್ಮಣವಂಶ ವಿವರ್ಧನರೂ, ತಪಸ್ವಿಗಳೂ, ಬ್ರಹ್ಮಜ್ಞಾನಿಗಳೂ ಮತ್ತು ಗೋತ್ರಾಭಿವರ್ಧಕರೂ ಆದರು.

ಮಧುಚ್ಛಂದಶ್ಚ ಭಗವಾನ್ ದೇವರಾತಶ್ಚ ವೀರ್ಯವಾನ್ ।
ಅಕ್ಷೀಣಶ್ಚ ಶಕುಂಭಶ್ಚ ಬಭ್ರುಃ ಕಾಲಪಥಸ್ತಥಾ ॥೪೯॥

ಯಾಜ್ಞವಲ್ಕ್ಯಶ್ಚ ವಿಖ್ಯಾತಸ್ತಥಾ ಸ್ಥೂಣೋ ಮಹಾವ್ರತಃ ।
ಉಲೂಕೋ ಯಮದೂತಶ್ಚ ತಥರ್ಷಿಃ ಸೈಂಧವಾಯನಃ ॥೫೦॥

ವಲ್ಗುಜಂಘಶ್ಚ ಭಗವಾನ್ ಗಾಲವಶ್ಚ ಮಹಾನೃಷಿಃ ।
ಋಷಿರ್ವಜ್ರಸ್ತಥಾಖ್ಯಾತಃ ಶಾಲಂಕಾಯನ ಏವ ಚ ॥೫೧॥

ಲಾಲಾಟ್ಯೋ ನಾರದಶ್ಚೈವ ತಥಾ ಕೂರ್ಚಮುಖಃ ಸ್ಮೃತಃ ।
ಬಾಷ್ಕಲಿರ್ಮುಸಲಶ್ಚೈವ ರಕ್ಷೋಗ್ರೀವಸ್ತಥೈವ ಚ ॥೫೨॥

ಅಂಫ್ರೀಕೋ ನೈಕಬೃಚ್ಚೈವ ಶಿಲಾಯೂಪಃ ಸಿತಃ ಶುಚಿಃ ।
ಚಕ್ರಕೋ ಮಾರುತಂತವ್ಯೋ ವಾತಘ್ನೋಽಥಾಶ್ವಲಾಯನಃ ॥೫೩॥

ಶ್ಯಾಮಾಯನೋಽಥ ಗಾರ್ಗ್ಯಶ್ಚ ಜಾಬಾಲಿಃ ಸುಶ್ರುತಸ್ತಥಾ ।
ಕಾರೀಷಿರಥ ಸಂಶ್ರುತ್ಯಃ ಪರಪೌರವತಕ್ಷಕಃ ॥೫೪॥

ಮಹಾನೃಷಿಶ್ಚ ಕಪಿಲಸ್ತಥರ್ಷಿಸ್ತಾರಕಾಯನಃ ।
ತಥೈವ ಚೋಪಗಹನಸ್ತಥರ್ಷಿಶ್ಚಾರ್ಜುನಾಯನಃ ॥೫೫॥

ಮಾರ್ಗಮಿತ್ರಿರ್ಹಿರಣ್ಯಾಕ್ಷೋ ಜಂಘಾರಿರ್ಬಭ್ರುವಾಹನಃ ।
ಉಜ್ಜಯೋ ನಿರದಾಪೇಕ್ಷೀ ನಾರದೀ ಚ ಮಹಾನೃಷಿಃ ।
ವಿಶ್ವಾಮಿತ್ರಾತ್ಮಜಾಃ ಸರ್ವೇ ಮುನಯೋ ಬ್ರಹ್ಮವಾದಿನಃ ॥೫೬॥

ಪೂಜ್ಯರಾದ ಮಧುಛಂದರು, ಸಾಮರ್ಥ್ಯಪೂರ್ಣರಾದ ದೇವರಾತರಾದ ಶುನಃಶೇಪರು, ಅಕ್ಷೀಣ, ಶಕುಂತ (ಶಕುಂಭ), ಬಭ್ರು, ಕಾಲಪಥ, ಪ್ರಖ್ಯಾತರಾದ ಯಾಜ್ಞವಲ್ಕ್ಯ, ಮಹಾವ್ರತರಾದ ಸ್ಥೂಣ, ಉಲೂಕ, ಯಮದೂತ, ಸೈಂಧವ ಎಂಬ ಋಷಿ ವಲ್ಗುಜಂಘ, (ಕರ್ಣಜಂಘ), ಮಹಾತ್ಮರಾದ ಗಾಲವರೂ, ವಜ್ರಋಷಿ, ಶಾಲಂಕಾಯನ, ಲಾಲಾಟ್ಯ (ಲಲಾಟ), ನಾರದ, ಕೂರ್ಚಮುಖ (ಕೂರ್ಮಮುಖ), ಬಾಷ್ಕಲಿ, ಮುಸಲ, ರಕ್ಷೋಗ್ರೀವ (ವಕ್ಷೋಗ್ರೀವ), ಅಂಘ್ರಿಕ, ನೈಕಭೃತ್, ಶಿಲಾಯೂಪ, ಸಿತ, ಶುಚಿ, ಚಕ್ರಕ, ಮಾರುತಂತವ್ಯ, ವಾತಘ್ನ, ಆಶ್ವಲಾಯನ, ಶ್ಯಾಮಾಯನ, ಗಾರ್ಗ್ಯ, ಜಾಬಾಲಿ, ಸುಶ್ರುತ, ಕಾರೀಷಿ, ಸಂಶ್ರುತ್ಯ, ಪರಪೌರವ, ತಕ್ಷಕ, ಮಹರ್ಷಿಗಳಾದ ಕಪಿಲರು, ತಾರಕಾಯನ, ಉಪಗಹನ, ಅರ್ಜುನಾಯನ, ಮಾರ್ಗಮಿತ್ರಿ, ಹಿರಣ್ಯಾಕ್ಷ, ಜಂಘಾರಿ, ಬಭ್ರುವಾಹನ, ಉಜ್ಜಯ, ನಿರದಾಪೇಕ್ಷಿ, ನಾರದಿ - ಇವರೆಲ್ಲರೂ ವಿಶ್ವಾಮಿತ್ರರ ಪುತ್ರರು. ಇವರೆಲ್ಲರೂ ಋಷಿಗಳು ಮತ್ತು ಬ್ರಹ್ಮವಾದಿಗಳು.

ತನ್ನೈಷ ಕ್ಷತ್ರಿಯೋ ರಾಜನ್ ವಿಶ್ವಾಮಿತ್ರೋ ಮಹಾತಪಾಃ ।
ಋಚೀಕೇನಾಹಿತಂ ಬ್ರಹ್ಮ ಪರಮೇತದ್ ಯುಧಿಷ್ಠಿರ ॥೫೭॥

ಎಲೈ ರಾಜನೇ, ಆದ್ದರಿಂದ ಮಹಾತಪಸ್ವಿಗಳಾದ ವಿಶ್ವಾಮಿತ್ರರು ಕ್ಷತ್ರಿಯರಲ್ಲ. ಎಲೈ ಯುಧಿಷ್ಠಿರನೇ, ಅವರು ಋಚೀಕರಿಂದ ಸಮಾಹಿತವಾದ ಶ್ರೇಷ್ಠವಾದ ಬ್ರಹ್ಮತೇಜೋರೂಪರಾದವರು.

ಏತತ್ ತೇ ಸರ್ವಮಾಖ್ಯಾತಂ ತತ್ತ್ವೇನ ಭರತರ್ಷಭ ।
ವಿಶ್ವಾಮಿತ್ರಸ್ಯ ವೈ ಜನ್ಮ ಸೋಮಸೂರ್ಯಾಗ್ನಿತೇಜಸಃ ॥೫೮॥

ಎಲೈ ಭರತಶ್ರೇಷ್ಠನೇ, ಸೋಮ-ಸೂರ್ಯಾಗ್ನಿಗಳಿಗೆ ಸಮಾನವಾದ ತೇಜಸ್ಸುಳ್ಳ ವಿಶ್ವಾಮಿತ್ರರ ಈ ಜನ್ಮವೃತ್ತಾಂತವೆಲ್ಲವನ್ನೂ ನಿನಗೆ ನಾನು ಯಥಾರ್ಥವಾಗಿ ಹೇಳಿದ್ದೇನೆ.

ಯತ್ರ ಯತ್ರ ಚ ಸಂದೇಹೋ ಭೂಯಸ್ತೇ ರಾಜಸತ್ತಮ ।
ತತ್ರ ತತ್ರ ಚ ಮಾಂ ಬ್ರೂಹಿ ಚ್ಛೇತ್ತಾಸ್ಮಿ ತವ ಸಂಶಯಾನ್ ॥೫೯॥

ಎಲೈ ರಾಜಶ್ರೇಷ್ಠನೇ, ನಿನಗೆ ಎಲ್ಲೆಲ್ಲಿ ಸಂಶಯವಿದೆಯೋ ಅದನ್ನು ಪುನಃ ನನ್ನ ಬಳಿ ಕೇಳು. ನಾನು ನಿನ್ನ ಸಂಶಯಗಳನ್ನು ಪರಿಹರಿಸುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಅನುಶಾಸನಪರ್ವಣಿ ಚತುರ್ಥೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐದನೆಯ ಅಧ್ಯಾಯ

ವೀತಹವ್ಯನು ಬ್ರಾಹ್ಮಣ್ಯವನ್ನು ಹೊಂದಿದ ಪ್ರಕಾರದ ಕಥನ.

ಯುಧಿಷ್ಠಿರಃ

ಶ್ರುತಂ ಮೇ ಮಹದಾಖ್ಯಾನಮೇತತ್ ಕುರುಕುಲೋದ್ವಹ ।
ಸುದುಷ್ಪ್ರಾಪ್ಯಂ ಯದ್ ಬ್ರವೀಷಿ ಬ್ರಾಹ್ಮಣ್ಯಂ ವದತಾಂವರ ॥೧॥

ಯುಧಿಷ್ಠಿರ– ಎಲೈ ಕುರುಕುಲೋದ್ವಹನೇ, ನೀನು ಬ್ರಾಹ್ಮಣ್ಯವು ಸಂಪಾದಿಸಲು ಬಹಳ ಕಷ್ಟಸಾಧ್ಯವೆಂದು ಏನು ಹೇಳುತ್ತಿದ್ದೀಯೋ, ಎಲೈ ಮಾತನಾಡುವವರಲ್ಲಿ ಶ್ರೇಷ್ಠನೇ, ಅಂತಹ ಈ ದೊಡ್ಡ ಆಖ್ಯಾನವನ್ನು ಕೇಳಿದೆನು.

ವಿಶ್ವಾಮಿತ್ರೋ ಮಹಾರಾಜ ರಾಜಾ ಬ್ರಾಹ್ಮಣತಾಂ ಗತಃ ।
ಕಥಿತಂ ಭವತಾ ಸರ್ವಂ ವಿಸ್ತರೇಣ ಪಿತಾಮಹ ॥೨॥

ಎಲೈ ಮಹಾರಾಜನೇ, ಪಿತಾಮಹನೇ, ರಾಜನಾದ ವಿಶ್ವಾಮಿತ್ರನು ಹೇಗೆ ಬ್ರಾಹ್ಮಣನಾದನು ಎಂಬ ಕಥೆಯನ್ನು ನೀವು ವಿಸ್ತಾರವಾಗಿ ಹೇಳಿದ್ದೀರಿ.

ತಚ್ಚ ರಾಜನ್ ಮಯಾ ಸರ್ವಂ ಶ್ರುತಂ ಬುದ್ಧಿಮತಾಂವರ ।
ಆಗಮೋ ಹಿ ವರೋಽಸ್ಮಾಕಂ ತ್ವತ್ತಃ ಕೌರವನಂದನ ॥೩॥

ಎಲೈ ರಾಜನೇ, ಬುದ್ಧಿವಂತರಲ್ಲಿ ಶ್ರೇಷ್ಠರಾದವನೇ, ಅವೆಲ್ಲವನ್ನೂ ನಾನು ಕೇಳಿದೆನು. ಎಲೈ ಕೌರವನಂದನನೇ, ನಿನ್ನ ಜ್ಞಾನೋಪದೇಶವೇ ನಾವು ನಿಮ್ಮಿಂದ ಪಡೆದಿರುವ ವರ.

ವೀತಹವ್ಯಶ್ಚ ರಾಜರ್ಷಿಃ ಶ್ರುತೋ ಮೇ ವೈ ಪಿತಾಮಹ ।
ಬ್ರಾಹ್ಮಣತ್ವಮನುಪ್ರಾಪ್ತ ಇತಿ ರಾಜನ್ ಮಹಾಯಶಾಃ ।
ತದೇವ ತಾವದ್ ಗಾಂಗೇಯ ಶ್ರೋತುಮಿಚ್ಛಾಮ್ಯಹಂ ವಿಭೋ ॥೪॥

ಎಲೈ ಪಿತಾಮಹನೇ, ರಾಜರ್ಷಿಯಾದ ವೀತಹವ್ಯನ ವಿಷಯವನ್ನು ನಾನು ಕೇಳಿದ್ದೇನೆ. ಮಹಾಕೀರ್ತಿವಂತನಾದ ಅವನು ಬ್ರಾಹ್ಮಣತ್ವವನ್ನು ಹೊಂದಿದನು ಎಂದು ಕೇಳಿದ್ದೇನೆ. ಎಲೈ ಸಮರ್ಥನಾದವನೇ, ಗಂಗಾಪುತ್ರನೇ, ಅದನ್ನೇ ನಾನು ನಿನ್ನಿಂದ ಕೇಳಲು ಬಯಸುತ್ತೇನೆ.

ಸ ಕೇನ ಕರ್ಮಣಾ ಪ್ರಾಪ್ತೋ ಬ್ರಾಹ್ಮಣ್ಯಂ ರಾಜಸತ್ತಮಃ ।
ವರೇಣ ತಪಸಾ ವಾಽಪಿ ತನ್ಮೇ ಬ್ರೂಹಿ ಪಿತಾಮಹ ॥೫॥

ಎಲೈ ಪಿತಾಮಹನೇ, ಆ ರಾಜಶ್ರೇಷ್ಠನು ಯಾವ ವರದಿಂದ ಅಥವಾ ತಪಸ್ಸಿನಿಂದ ಅಥವಾ ಕರ್ಮದಿಂದ ಬ್ರಾಹ್ಮಣತ್ವವನ್ನು ಹೊಂದಿದನು ಎಂಬುದನ್ನು ನನಗೆ ಹೇಳಿ.

ಭೀಷ್ಮಃ

ಶೃಣು ರಾಜನ್ ಯಥಾ ವೃತ್ತಂ ವೀತಹವ್ಯೋ ಮಹಾಯಶಾಃ ।
ಕ್ಷತ್ರಿಯಃ ಸನ್ ಪುನಃ ಪ್ರಾಪ ಬ್ರಾಹ್ಮಣ್ಯಂ ಲೋಕಸತ್ಕೃತಮ್ ॥೬॥

ಭೀಷ್ಮರು– ಎಲೈ ರಾಜನೇ, ಮಹಾಕೀರ್ತಿವಂತನಾದ ವೀತಹವ್ಯನು ಕ್ಷತ್ರಿಯನಾಗಿದ್ದು ಪುನಃ ಲೋಕಸತ್ಕೃತವಾದ ಬ್ರಾಹ್ಮಣ್ಯವನ್ನು ಹೇಗೆ ಹೊಂದಿದನು ಎಂಬುದನ್ನು ಕೇಳು.

ಮನೋರ್ಮಹಾತ್ಮನಸ್ತಸ್ಯ ಪ್ರಜೇಶಸ್ಯ ಪ್ರಜಾಪತೇಃ ।
ಬಭೂವ ಪುತ್ರೋ ಧರ್ಮಾತ್ಮಾ ಶರ್ಯಾತಿರಿತಿ ವಿಶ್ರುತಃ ॥೭॥

ಮಹಾತ್ಮನೂ, ಪ್ರಜಾಧ್ಯಕ್ಷನೂ, ಪ್ರಜಾಪತಿಯೂ ಆದ ಅವನಿಗೆ ಶರ್ಯಾತಿ ಎಂದು ಪ್ರಖ್ಯಾತನಾದ ಧರ್ಮಾತ್ಮನಾದ ಪುತ್ರನು ಜನಿಸಿದನು.

ತಸ್ಯಾನ್ವವಾಯೇ ದ್ವೌ ರಾಜನ್ ರಾಜಾನೌ ಧರ್ಮದರ್ಶಿನೌ ।
ಹೇಹಯಸ್ತಾಳಜಂಘಶ್ಚ ವತ್ಸೇಷು ನೃಪತೀ ಪುರಾ ॥೮॥

ಅವನ ವಂಶದಲ್ಲಿ ಧರ್ಮದರ್ಶಿಗಳಾದ ಹೇಹಯ ಮತ್ತು ತಾಳಜಂಘ ಎಂಬ ಇಬ್ಬರು ರಾಜರು ಜನಿಸಿ ವತ್ಸದೇಶದಲ್ಲಿ ರಾಜರಾದರು.

ಹೇಹಯಸ್ಯ ತು ರಾಜೇಂದ್ರ ದಶಸು ಸ್ತ್ರೀಷು ಭಾರತ ।
ಶತಂ ಬಭೂವ ಪುತ್ರಾಣಾಂ ಶೂರಾಣಾಮನಿವರ್ತಿನಾಮ್ ॥೯॥

ಎಲೈ ರಾಜೇಂದ್ರನೇ, ಭಾರತನೇ, ಹೇಹಯನಿಗೆ ತನ್ನ ಹತ್ತುಜನ ಪತ್ನಿಯರಲ್ಲಿ ಶೂರರೂ, ಯುದ್ಧದಿಂದ ಹಿಮ್ಮೆಟ್ಟದವರೂ ಆದ ನೂರು ಪುತ್ರರು ಜನಿಸಿದರು.

ತುಲ್ಯರೂಪಪ್ರಭಾವಾಣಾಂ ವಿದುಷಾಂ ಬುದ್ಧಿಶಾಲಿನಾಮ್ ।
ಧನುರ್ವೇದೇ ಚ ವೇದೇ ಚ ಸರ್ವತ್ರೈವ ಕೃತಶ್ರಮಾಃ ॥೧೦॥

ಅವರು ಸಮಾನವಾದ ರೂಪ ಮತ್ತು ಸಾಮರ್ಥ್ಯವನ್ನು ಹೊಂದಿದವರೂ, ವಿದ್ವಾಂಸರೂ, ಮೇಧಾವಿಗಳೂ, ಧನುರ್ವೇದದಲ್ಲಿ ಮತ್ತು ವೇದದಲ್ಲಿಯೂ ಎಲ್ಲ ರೀತಿಯ ಪರಿಶ್ರಮವುಳ್ಳವರೂ ಆಗಿದ್ದರು.

ಕಾಶಿಷ್ವಪಿ ನೃಪೋ ರಾಜನ್ ದಿವೋದಾಸಪಿತಾಮಹಃ ।
ಹರ್ಯಶ್ವ ಇತಿ ವಿಖ್ಯಾತೋ ರಾಜರಾಜ ಇವಾಪರಃ ॥೧೧॥

ಎಲೈ ರಾಜನೇ, ಆಗ ಕಾಶಿಯಲ್ಲಿ ದಿವೋದಾಸನ ಪಿತಾಮಹನಾದ ಹರ್ಯಶ್ವ ಎಂಬ ಪ್ರಖ್ಯಾತನಾದ ರಾಜನಿದ್ದನು. ಅವನು ಇನ್ನೊಬ್ಬ ಕುಬೇರನಂತೆ ಇದ್ದನು.

ಸ ವೀತಹವ್ಯದಾಯಾದೈರಾಗತ್ಯ ಪುರುಷರ್ಷಭ ।
ಗಂಗಾಯಮುನಯೋರ್ಮಧ್ಯೇ ಸಂಗ್ರಾಮೇ ವಿನಿಪಾತಿತಃ ॥೧೨॥

ಎಲೈ ಪುರುಷಶ್ರೇಷ್ಠನೇ, ವೀತಹವ್ಯನ ಪುತ್ರರು ಅವನ ಮೇಲೆ ದಂಡೆತ್ತಿ ಬಂದು ಗಂಗಾ-ಯಮುನೆಗಳ ಮಧ್ಯದಲ್ಲಿ ಯುದ್ಧದಲ್ಲಿ ಅವನನ್ನು ಕೊಂದರು.

ತಂ ತು ಹತ್ವಾ ನರವರಂ ಹೈಹಯಾಸ್ತೇ ಮಹಾರಥಾಃ ।
ಪ್ರತಿಜಗ್ಮುಃ ಪುರೀಂ ರಮ್ಯಾಂ ವತ್ಸಾನಾಮಕುತೋಭಯಾಃ ॥೧೩॥

ಮಹಾರಥರಾದ ಹೈಹಯರಾದ ಅವರು ಆ ರಾಜನನ್ನು ಕೊಂದು ನಿರ್ಭಯವಾಗಿ ಮನೋಹರವಾದ ತಮ್ಮ ವತ್ಸದೇಶಕ್ಕೆ ಹಿಂದಿರುಗಿದರು.

ಹರ್ಯಶ್ವಸ್ಯ ಚ ದಾಯಾದಃ ಕಾಶಿರಾಜ್ಯೇऽಭಿಷೇಚಿತಃ ।
ಸುದೇವೋ ದೇವಸಂಕಾಶಃ ಸಾಕ್ಷಾದ್ಧರ್ಮ ಇವಾಪರಃ ॥೧೪॥

ಹರ್ಯಶ್ವನ ಪುತ್ರನಾದ ಸುದೇವನು ಕಾಶಿರಾಜ್ಯದಲ್ಲಿ ಅಭಿಷೇಕ ಮಾಡಲ್ಪಟ್ಟನು. ದೇವತೆಗಳ ಕಾಂತಿಯನ್ನು ಹೊಂದಿದ್ದ ಅವನು ದೇಹವನ್ನು ಧರಿಸಿದ ಧರ್ಮದಂತಿದ್ದನು.

ಸ ಪಾಲಯನ್ನೇವ ಮಹೀಂ ಧರ್ಮಾತ್ಮಾ ಕಾಶಿನಂದನಃ ।
ತೈರ್ವೀತಹವ್ಯೈರಾಗತ್ಯ ಯುಧಿ ಸರ್ವೈರ್ವಿನಿರ್ಜಿತಃ ॥೧೫॥

ಧರ್ಮಾತ್ಮನೂ, ಕಾಶಿರಾಜನಂದನನೂ ಆದ ಅವನು ಭೂಮಿಯನ್ನು ಪಾಲಿಸುತ್ತಿರುವಾಗಲೇ ಆ ವೀತಹವ್ಯನ ಪುತ್ರರು ಎಲ್ಲರೂ ಬಂದು ಯುದ್ಧದಲ್ಲಿ ಅವನನ್ನು ಸೋಲಿಸಿದರು (ಕೊಂದರು).

ತಮಥಾऽಜೌ ವಿನಿರ್ಜಿತ್ಯ ಪ್ರತಿಜಗ್ಮುರ್ಯಥಾಗತಮ್ ।
ಸೌದೇವಿಸ್ತ್ವಥ ಕಾಶೀಶೋ ದಿವೋದಾಸೋऽಭ್ಯಷಿಚ್ಯತ ॥೧೬॥

ಅವರು ಅವನನ್ನು ಯುದ್ಧದಲ್ಲಿ ಕೊಂದು ಬಂದ ದಾರಿಯಲ್ಲೇ ಹಿಂದಿರುಗಿದರು. ಅನಂತರ ಸುದೇವನ ಪುತ್ರನಾದ ದಿವೋದಾಸನು ಕಾಶಿಯಲ್ಲಿ ರಾಜನಾದನು.

ದಿವೋದಾಸಸ್ತು ವಿಜ್ಞಾಯ ವೀರ್ಯಂ ತೇಷಾಂ ಮಹಾತ್ಮನಾಮ್ ।
ವಾರಾಣಸೀಮುಪಾದಾಯ ದಿವೋದಾಸೋ ನಿರ್ಮಮೇ ॥೧೭॥

ದಿವೋದಾಸನಾದರೂ ಮಹಾತ್ಮರಾದ ವೀತಹವ್ಯರ ಪರಾಕ್ರಮವನ್ನು ತಿಳಿದು ಕಾಶಿಯನ್ನು ಬಿಟ್ಟು ವಾರಣಾಸಿಗೆ ಹೋಗಿ ಅಲ್ಲಿ ಪಟ್ಟಣವನ್ನು ನಿರ್ಮಾಣ ಮಾಡಿದನು.

ವಿಪ್ರಕ್ಷತ್ರಿಯಸಂಬಾಧಾಂ ವೈಶ್ಯಶೂದ್ರಸಮಾಕುಲಾಮ್ ।
ನೈಕದ್ರವ್ಯೋಚ್ಚಯವತೀಂ ಸಮೃದ್ಧವಿಪಣಾಪಣಾಮ್ ॥೧೮॥

ಅದು ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರಿಂದ ನಿಬಿಡವಾಗಿ ಅನೇಕ ದ್ರವ್ಯ ರಾಶಿಗಳಿಂದ ಕೂಡಿ ಸಮೃದ್ಧವಾದ ಅಂಗಡಿಪೇಟೆಗಳಿಂದ ಕೂಡಿದ್ದಿತು.

ಗಂಗಾಯಾ ಉತ್ತರೇ ತೀರೇ ವಪ್ರಾಂತೇ ರಾಜಸತ್ತಮ ।
ಗೋಮತ್ಯಾ ದಕ್ಷಿಣೇ ಚೈವ ರಮ್ಯಾಂ ದೇವಪುರೀಮಿವ ॥೧೯॥

ಎಲೈ ರಾಜಶ್ರೇಷ್ಠನೇ, ಗಂಗೆಯ ಉತ್ತರ ಭಾಗದಲ್ಲಿ ಕೋಟೆಯಿಂದಾಚೆಗೆ ಗೋಮತಿಯ ದಕ್ಷಿಣಭಾಗದಲ್ಲಿ ದೇವಪುರದಂತೆ ಮನೋಹರವಾದ ಆ ಪಟ್ಟಣವನ್ನು ನಿರ್ಮಿಸಿದನು.

ತತ್ರ ತಂ ರಾಜಶಾರ್ದೂಲಂ ನಿವಸಂತಂ ಮಹೀಪತಿಮ್ ।
ಆಗತ್ಯ ಹೈಹಯಾ ಭೂಯಃ ಪ್ರಬಾಧಂತೇ ಪುನಃ ಪುನಃ ॥೨೦॥

ಆ ರಾಜಶಾರ್ದೂಲನು ಆ ಪಟ್ಟಣದಲ್ಲಿ ವಾಸಿಸುತ್ತಿದ್ದಾಗ ಹೈಹಯರು ಬಂದು ಪುನಃ ಪುನಃ ಅವನನ್ನು ಬಾಧಿಸಿದರು.

ಸನ್ನಿಪತ್ಯ ದದೌ ಯುದ್ಧಂ ತೇಷಾಂ ರಾಜಾ ಮಹಾಬಲಃ ।
ದೇವಾಸುರಸಮಂ ಭೀಮಂ ದಿವೋದಾಸೋ ಮಹಾಯಶಾಃ ॥೨೧॥

ಮಹಾಕೀರ್ತಿವಂತನೂ, ಮಹಾಬಲನೂ ಆದ ದಿವೋದಾಸ ರಾಜನು ಅವರ ಮೇಲೆ ಎರಗಿ ಅವರಿಗೆ ದೇವಾಸುರ ಯುದ್ಧಕ್ಕೆ ಸಮವಾದ ಯುದ್ಧವನ್ನು ನೀಡಿದನು.

ಸ ತು ಯುದ್ಧೇ ಮಹಾರಾಜ ದಿನಾನಾಂ ದಶ ವೈ ದಶ ।
ಹತವಾಹನಭೂಯಿಷ್ಠೋ ರಾಜಾ ದೈನ್ಯಮುಪಾಗಮತ್ ॥೨೨॥

ಎಲೈ ಮಹಾರಾಜನೇ, ಅವನು ನೂರು ದಿನಗಳವರೆಗೆ ಯುದ್ಧವನ್ನು ಮಾಡಿ ತನ್ನ ವಾಹನಗಳನ್ನೆಲ್ಲಾ ಕಳೆದುಕೊಂಡು ದೈನ್ಯವನ್ನು ಹೊಂದಿದನು.

ಹತಯೋಧಃ ಸ ರಾಜರ್ಷಿಃ ಕ್ಷೀಣಕೋಶಶ್ಚ ಭಾರತ ।
ದಿವೋದಾಸಃ ಪುರೀಂ ತ್ಯಕ್ತ್ವಾ ಪಲಾಯನಪರೋಽಭವತ್ ॥೨೩॥

ಎಲೈ ಭಾರತನೇ, ತನ್ನ ಯೋಧರನ್ನು ಕಳೆದುಕೊಂಡು, ಕೋಶವು ಬರಿದಾದ, ಆ ರಾಜರ್ಷಿಯಾದ ದಿವೋದಾಸನು ತನ್ನ ಪಟ್ಟಣವನ್ನು ಬಿಟ್ಟು ಪಲಾಯನ ಮಾಡಿದನು.

ಸ ಚಾಶ್ರಮಮುಪಾಗಮ್ಯ ಭರದ್ವಾಜಸ್ಯ ಧೀಮತಃ ।
ಪ್ರಣಮ್ಯ ಚರಣೌ ತಸ್ಯ ಮೂರ್ಧ್ನಾ ಚ ನಿಪಪಾತ ಹ ।
ಉವಾಚ ಭಗವಂತಂ ತಂ ಮಾನ್ಯಂ ಪುತ್ರಂ ಬೃಹಸ್ಪತೇಃ ॥೨೪॥

ಅವನು ಮೇಧಾವಿಗಳಾದ ಭರದ್ವಾಜರ ಆಶ್ರಮಕ್ಕೆ ಬಂದು, ಅವರ ಪಾದಗಳ ಮೇಲೆ ಶಿರಸಾ ಬಿದ್ದು, ಬೃಹಸ್ಪತಿಯ ಪುತ್ರರಾದ, ಮಾನ್ಯರಾದ, ಪೂಜ್ಯರಾದ ಅವರನ್ನು ಕುರಿತು ಹೇಳಿದನು.

ಭಗವನ್ ವೈತಹವ್ಯೈರ್ಮೇ ಯುದ್ಧೇ ವಂಶಃ ಪ್ರಣಾಶಿತಃ ।
ಅಹಮೇಕಃ ಪರಿದ್ಯೂನೋ ಭವಂತಂ ಶರಣಂ ಗತಃ ॥೨೫॥

ಪೂಜ್ಯರೇ, ವೀತಹವ್ಯನ ಪುತ್ರರಿಂದ ನನ್ನ ವಂಶವು ಯುದ್ಧದಲ್ಲಿ ನಾಶಗೊಳಿಸಲ್ಪಟ್ಟಿದೆ. ನಾನೊಬ್ಬನು ಉಳಿದ ಎಲ್ಲವನ್ನೂ ಕಳೆದುಕೊಂಡು ನಿಮಗೆ ಶರಣಾಗತನಾಗಿದ್ದೇನೆ.

ಶಿಷ್ಯಸ್ನೇಹೇನ ಭಗವಂಸ್ತ್ವಂ ಮಾಂ ರಕ್ಷಿತುಮರ್ಹಸಿ ।
ನಿಃಶೇಷೋ ಹಿ ಕೃತೋ ವಂಶೋ ಮಮ ತೈಃ ಪಾಪಕರ್ಮಭಿಃ ॥೨೬॥

ಪೂಜ್ಯರೇ, ಶಿಷ್ಯನ ಮೇಲಿನ ಸ್ನೇಹದಿಂದ ನನ್ನನ್ನು ತಾವು ರಕ್ಷಿಸಬೇಕು. ಆ ಪಾಪಕರ್ಮಿಗಳು ನನ್ನ ವಂಶವನ್ನು ನಿಶ್ಶೇಷವಾಗಿ ನಾಶ ಮಾಡಿದ್ದಾರೆ (ಎಂದು ಹೇಳಿದನು).

ತಮುವಾಚ ಮಹಾತೇಜಾ ಭರದ್ವಾಜಃ ಪ್ರತಾಪವಾನ್ ।
ನ ಭೇತವ್ಯಂ ನ ಭೇತವ್ಯಂ ಸೌದೇವ ವ್ಯೇತು ತೇ ಭಯಮ್ ॥೨೭॥

ಅಹಮಿಷ್ಟಿಂ ಚ ತೇ ರಾಜನ್ ಕರೋಮಿ ಸುತಕಾರಿಕಾಮ್ ।
ವೈತಹವ್ಯಸಹಸ್ರಾಣಿ ಯಥಾ ತ್ವಂ ವಿಷಹಿಷ್ಯಸೇ ॥೨೮॥

ಪ್ರತಾಪಶಾಲಿಗಳಾದ, ಮಹಾತೇಜಸ್ವಿಗಳಾದ ಭರದ್ವಾಜರು ಅವನನ್ನು ಕುರಿತು 'ಎಲೈ ಸುದೇವಪುತ್ರನೇ, ಹೆದರಬೇಡ, ಹೆದರಬೇಡ. ನಿನ್ನ ಭಯವು ದೂರವಾಗಲಿ.

ಎಲೈ ರಾಜನೇ, ನಾನು ನಿನಗೆ ಪುತ್ರರನ್ನು ಕೊಡುವ ಇಷ್ಟಿಯನ್ನು ಮಾಡಿಸುತ್ತೇನೆ. ವೀತಹವ್ಯನ ಸಹಸ್ರಪುತ್ರರು ಬಂದರೂ ನೀನು ಅವರನ್ನು ಸಹಿಸುವಿ' ಎಂದು ಹೇಳಿದರು.

ತತ ಇಷ್ಟಿಂ ಚಕಾರರ್ಷಿಸ್ತಸ್ಯ ವೈ ಪುತ್ರಕಾಮಿಕೀಮ್ ।
ಅಥಾಸ್ಯ ತನಯೋ ಜಜ್ಞೇ ದೈವೋದಾಸಃ ಪ್ರತರ್ದನಃ ॥೨೯॥

ಅನಂತರ ಆ ಋಷಿಗಳು ಅವನಿಂದ ಪುತ್ರಕಾಮೇಷ್ಟಿಯನ್ನು ಮಾಡಿಸಿದರು. ಅನಂತರ ದಿವೋದಾಸನಿಗೆ ಪ್ರತರ್ದನನು ಪುತ್ರನಾಗಿ ಜನಿಸಿದನು.

ಸ ಜಾತಮಾತ್ರೋ ವವೃಧೇ ಸಮಾಃ ಸದ್ಯಸ್ತ್ರಯೋದಶ ।
ವೇದಮಧ್ಯಗಮತ್ ಕೃತ್ಸ್ನಂ ಧನುರ್ವೇದಂ ಚ ಕೃತ್ಸ್ನಶಃ ॥೩೦॥

ಅವನು ಹುಟ್ಟಿದ ತಕ್ಷಣವೇ ಹದಿಮೂರು ವರ್ಷದ ಪ್ರಾಯದವನಾಗಿ ಅಭಿವೃದ್ಧಿಯನ್ನು ಹೊಂದಿ, ಸಮಗ್ರವಾದ ವೇದವನ್ನೂ ಮತ್ತು ಧನುರ್ವೇದವನ್ನೂ ಅಧ್ಯಯನ ಮಾಡಿದನು.

ಯೋಗೇನ ತು ಸಮಾವಿಷ್ಟೋ ಭರದ್ವಾಜೇನ ಧೀಮತಾ ।
ಕೃತ್ಸ್ನಂ ಹಿ ಲೋಕೇ ಯತ್ತೇಜಃ ತದೇತದ್ ದೇಹಮಾವಿಶತ್ ॥೩೧॥

ಮೇಧಾವಿಗಳಾದ ಭರದ್ವಾಜರ ಅನುಗ್ರಹದಿಂದ, ಯೋಗಶಕ್ತಿಯಿಂದ ಕೂಡಿದವನಾದನು ಮತ್ತು ಲೋಕದಲ್ಲಿ ಇರುವ ತೇಜಸ್ಸೆಲ್ಲವೂ ಅವನ ದೇಹದಲ್ಲಿ ಬಂದು ನೆಲೆಸಿತು.

ತತಃ ಸ ಕವಚೀ ಧನ್ವೀ ಬಾಣೀ ದೀಪ್ತ ಇವಾನಲಃ ।
ಪ್ರಯಯೌ ಸ ಧನುರ್ಧುನ್ವನ್ ವಿವರ್ಷಿಷುರಿವಾಂಬುದಃ ॥೩೨॥

ಅನಂತರ ಅವನು ಕವಚವನ್ನು ಧರಿಸಿ ಧನುರ್ಬಾಣಗಳನ್ನು ಹಿಡಿದು ಜ್ವಲಿಸುವ ಅಗ್ನಿಯಂತೆ ಧನುಸ್ಸನ್ನು ತೂಗಾಡಿಸುತ್ತಾ ಮಳೆಯನ್ನು ಸುರಿಸಲಿರುವ ಮೋಡದಂತೆ ದಿಗ್ವಿಜಯಕ್ಕಾಗಿ ಹೊರಟನು.

ತಂ ದೃಷ್ಟ್ವಾ ಪರಮಂ ಹರ್ಷಂ ಸೌದೇವಿರುಪಪದ್ಯತ ।
ಮೇನೇ ಚ ಮನಸಾ ದಗ್ಧಾನ್ ವೈಹತವ್ಯಾನ್ ಸ ಪಾರ್ಥಿವಃ ॥೩೩॥

ಅವನನ್ನು ನೋಡಿ ಸುದೇವನ ಪುತ್ರನಾದ ದಿವೋದಾಸನು ಬಹಳ ಸಂತೋಷವನ್ನು ಹೊಂದಿ, ವೀತಹವ್ಯನ ಪುತ್ರರೆಲ್ಲರೂ ದಗ್ಧರಾಗಿದ್ದಾರೆಂದು ಮನಸ್ಸಿನಲ್ಲಿ ಭಾವಿಸಿದನು.

ತತೋ ವೈ ಯೌವರಾಜ್ಯೇನ ಸ್ಥಾಪಯಿತ್ವಾ ಪ್ರತರ್ದನಮ್ ।
ಕೃತಕೃತ್ಯಂ ತದಾऽऽತ್ಮಾನಂ ಸ ರಾಜಾ ಪ್ರತ್ಯಪದ್ಯತ ॥೩೪॥

ಆಗ ಅವನು ಪ್ರತರ್ದನನನ್ನು ಯೌವರಾಜ್ಯದಲ್ಲಿ ಸ್ಥಾಪಿಸಿ ತಾನು ಕೃತಕೃತ್ಯನೆಂದು ಭಾವಿಸಿದನು.

ತತಸ್ತು ವೈತಹವ್ಯಾನಾಂ ವಧಾಯ ಸ ಮಹೀಪತಿಃ ।
ಪುತ್ರಂ ಪ್ರಸ್ಥಾಪಯಾಮಾಸ ಪ್ರತರ್ದನಮರಿಂದಮಮ್ ॥೩೫॥

ಅನಂತರ ರಾಜನಾದ ದಿವೋದಾಸನು ಅರಿಂದಮನಾದ ತನ್ನ ಪುತ್ರನಾದ ಪ್ರತರ್ದನನನ್ನು ವೀತಹವ್ಯನ ಪುತ್ರರ ವಧೆಗಾಗಿ ಕಳುಹಿಸಿಕೊಟ್ಟನು.

ಸರಥಃ ಸ ಸಮುತ್ತೀರ್ಯ ಗಂಗಾಂ ಗಂಗಾಸಮಾನಧೀಃ ।
ಪ್ರಯಯೌ ವೈತಹವ್ಯಾನಾಂ ಪುರೀಂ ಪರಪುರಂಜಯಃ ॥೩೬॥

ಗಂಗೆಗೆ ಸಮಾನವಾದ ವಿಸ್ತಾರವಾದ ಬುದ್ಧಿಯುಳ್ಳ ಪ್ರತರ್ದನನು ರಥಾದಿ ಸಹಿತನಾಗಿ ಗಂಗೆಯನ್ನು ದಾಟಿ ಪರಪುರಂಜಯನಾದ ಅವನು ವೀತಹವ್ಯನ ಪುತ್ರರ ಪಟ್ಟಣಕ್ಕೆ ಬಂದನು.

ವೈತಹವ್ಯಾಸ್ತು ತಂ ಶ್ರುತ್ವ ರಥಘೋಷಂ ಸಮುದ್ಧತಮ್ ।
ನಿರ್ಯಯುರ್ನಗರಾಚ್ಚೀಘ್ರಂ ರಥೈರ್ನಗರೋಪಮೈಃ ॥೩೭॥

ವೀತಹವ್ಯನ ಪುತ್ರರು ಆ ಉನ್ನತವಾದ ರಥಘೋಷವನ್ನು ಕೇಳಿ ಶೀಘ್ರವಾಗಿ ನಗರಾಕಾರದ ತಮ್ಮ ರಥಗಳಿಂದ ಹೊರಗೆ ಬಂದರು.

ನಿಷ್ಕಮ್ಯ ತೇ ನರವ್ಯಾಘ್ರಾ ದಂಸಿತಾಶ್ಚಿತ್ರಯೋಧಿನಃ ।
ಪ್ರತರ್ದನಂ ಸಮಾಜಗ್ಮುಃ ಶರವರ್ಷೈರುದಾಯುಧಾಃ ॥೩೮॥

ಯುದ್ಧಸನ್ನದ್ಧರಾದ, ವಿಚಿತ್ರಯೋಧಿಗಳಾದ ಆ ನರವ್ಯಾಘ್ರರು ಅನೇಕ ಆಯುಧಗಳನ್ನು ಹಿಡಿದು, ಬಾಣಗಳ ಮಳೆಯನ್ನು ಸುರಿಸುತ್ತಾ ನಗರದಿಂದ ಹೊರಟು ಪ್ರತರ್ದನನ ಸಮೀಪಕ್ಕೆ ಬಂದರು.

ಅಸ್ತ್ರೈಶ್ಚ ವಿವಿಧೈರ್ವೀರಾಃ ಶಸ್ತ್ರೈಶ್ಚ ಭರತರ್ಷಭ ।
ಪ್ರಾವಪನ್ ವೈತಹವ್ಯಸ್ತೇ ಶೀಘ್ರಂ ಶೈಲಮಿವಾಂಬುದಾಃ ॥೩೯॥

ಎಲೈ ಭರತಶ್ರೇಷ್ಠನೇ, ವೀತಹವ್ಯನ ಪುತ್ರರಾದ ವೀರರಾದ ಅವರು, ಮೋಡವು ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ಶೀಘ್ರವಾಗಿ ಪ್ರತರ್ದನನ ಮೇಲೆ ಶಸ್ತ್ರಾಸ್ತ್ರಗಳ ಮಳೆಯನ್ನು ಸುರಿಸಿದರು.

ಅಸ್ತ್ರೈರಸ್ತ್ರಾಣಿ ಸಂವಾರ್ಯ ತೇಷಾಂ ರಾಜಾ ಪ್ರತರ್ದನಃ ।
ಜಘಾನ ತಾನ್ ಮಹಾತೇಜಾ ವಜ್ರವೇಗಸಮೈಃ ಶರೈಃ ॥೪೦॥

ರಾಜನಾದ ಮಹಾತೇಜಸ್ವಿಯಾದ ಪ್ರತರ್ದನನು ಅವರ ಅಸ್ತ್ರಗಳನ್ನು ತನ್ನ ಅಸ್ತ್ರಗಳಿಂದ ನಿವಾರಿಸಿ, ವಜ್ರಸದೃಶವಾದ ತನ್ನ ಬಾಣಗಳಿಂದ ಅವರನ್ನು ಸಂಹರಿಸಿದನು.

ಹೃತೋತ್ತಮಾಂಗಾಸ್ತೇ ರಾಜನ್ ಭಲ್ಲೈಃ ಶತಸಹಸ್ರಶಃ ।
ಪತಿತಾ ರುಧಿರಾಕ್ತಾಸ್ತೇ ಪುಷ್ಪಿತಾ ಇವ ಕಿಂಶುಕಾಃ ॥೪೧॥

ಎಲೈ ರಾಜನೇ, ಭಲ್ಲಗಳಿಂದ ನೂರಾರು ಸಾವಿರಾರು ಸಂಖ್ಯೆಯಲ್ಲಿ ಶಿರಸ್ಸು ಕತ್ತರಿಸಲ್ಪಟ್ಟ ವೀತಹವ್ಯನ ಪುತ್ರರು ಮತ್ತು ಸೈನಿಕರು, ಅವರ ಶರೀರಗಳು ರಕ್ತದಿಂದ ತೊಯ್ದು ಹೂವರಳಿದ ಕಿಂಶುಕ ವೃಕ್ಷದಂತೆ ತೋರಿದರು.

ಹತೇಷು ತೇಷು ಸರ್ವೇಷು ವೀತಹವ್ಯಃ ಸುತೇಷ್ವಥ ।
ಪ್ರಾದ್ರವನ್ನಗರಂ ಹಿತ್ವಾ ಭೃಗೋರಾಶ್ರಮಮಪ್ಯುತ ॥೪೨॥

ತನ್ನ ಪುತ್ರರೆಲ್ಲರೂ ಹತರಾದ ಮೇಲೆ ವೀತಹವ್ಯನು ತನ್ನ ನಗರವನ್ನು ಬಿಟ್ಟು ಭೃಗುಗಳ ಆಶ್ರಮಕ್ಕೆ ಓಡಿಹೋದನು.

ಯಯೌ ಭೃಗುಂ ಸ ಶರಣಂ ವೀತಹವ್ಯೋ ನರಾಧಿಪ ।
ಅಭಯಂ ಚ ದದೌ ತಸ್ಮೈ ವೀತಹವ್ಯಾಯ ವೈ ಭೃಗುಃ ।
ಆಸನಂ ಶಿಷ್ಯಮಧ್ಯೇ ತು ಪುನರನ್ಯತ್ ಸಮಾದಿಶತ್ ॥೪೩॥

ಎಲೈ ನರಾಧಿಪನೇ, ವೀತಹವ್ಯನು ಭೃಗುಗಳಿಗೆ ಶರಣಾಗತನಾದನು. ಭೃಗುಗಳು

ವೀತಹವ್ಯನಿಗೆ ಅಭಯವನ್ನು ನೀಡಿ ತಮ್ಮ ಶಿಷ್ಯರ ಮಧ್ಯದಲ್ಲಿ ಅವನಿಗೆ ಇನ್ನೊಂದು ಆಸನವನ್ನೂ ನೀಡಿದರು.

ಅಥಾನುಪದಮೇವಾಶು ತತ್ರಾಗಚ್ಛತ್ ಪ್ರತರ್ದನಃ ।
ಸ ಪ್ರಾಪ್ಯ ಚಾಶ್ರಮಪದಂ ದಿವೋದಾಸಾತ್ಮಜೋಽಬ್ರವೀತ್ ॥೪೪॥

ಭೋಭೋ ಕೇಽತ್ರಾಶ್ರಮೇ ಸಂತಿ ಭೃಗೋಃ ಶಿಷ್ಯಾ ಮಹಾತ್ಮನಃ ।
ದ್ರಷ್ಟುಮಿಚ್ಛೇ ಮುನಿಮಹಂ ತಸ್ಯಾಚಕ್ಷತ ಮಾಮಿತಿ ॥೪೫॥

ಅನಂತರ ತಕ್ಷಣದಲ್ಲಿಯೇ ಪ್ರತರ್ದನನೂ ಅಲ್ಲಿಗೆ ಬಂದನು. ದಿವೋದಾಸನ ಪುತ್ರನಾದ ಅವನು ಆಶ್ರಮಕ್ಕೆ ಬಂದು– 'ಮಹಾತ್ಮರಾದ ಭೃಗುಗಳ ಶಿಷ್ಯರೇ, ಇಲ್ಲಿ ಆಶ್ರಮದಲ್ಲಿ ಯಾರಿದ್ದೀರಿ? ನಾನು ಭೃಗು ಋಷಿಗಳನ್ನು ನೋಡಲು ಬಯಸುತ್ತೇನೆ. ನಾನು ಬಂದಿದ್ದೇನೆಂದು ಅವರಿಗೆ ತಿಳಿಸಿ' ಎಂದು ಹೇಳಿದನು.

ಸ ತಂ ವಿದಿತ್ವಾ ತು ಭೃಗುರ್ನಿಶ್ಚಕ್ರಾಮಾಶ್ರಮಾತ್ ತದಾ ।
ಪೂಜಯಾಮಾಸ ಚ ತತೋ ವಿಧಿನಾ ನೃಪಸತ್ತಮಮ್ ॥೪೬॥

ಆ ವಚನವನ್ನು ಕೇಳಿದ ಭೃಗುಗಳು ಅವನನ್ನು ತಿಳಿದು ತಾವೇ ಆಶ್ರಮದಿಂದ ಹೊರಗೆ ಬಂದು ಆ ರಾಜನಿಗೆ ವಿಧಿಪ್ರಕಾರವಾಗಿ ಪೂಜೆಯನ್ನು ಮಾಡಿದರು.

ಉವಾಚ ಚೈನಂ ರಾಜೇಂದ್ರ ಕಿಂ ಕಾರ್ಯಂ ಬ್ರೂಹಿ ಪಾರ್ಥಿವ ।
ಸ ಚೋವಾಚ ನೃಪಸ್ತಸ್ಮೈ ಯದಾಗಮನಕಾರಣಮ್ ॥೪೭॥

ಅವರು ಅವನನ್ನು ಕುರಿತು– 'ರಾಜೇಂದ್ರನೇ, ಇಲ್ಲಿಗೆ ಬಂದ ಉದ್ದೇಶವೇನು?' ಎಂದು ಕೇಳಿದರು. ರಾಜನು ಅವರಿಗೆ ತನ್ನ ಆಗಮನದ ಕಾರಣವನ್ನು ಹೇಳಿದನು.

ಅಯಂ ಬ್ರಹ್ಮನ್ನಿತೋ ರಾಜಾ ವೀತಹವ್ಯೋ ವಿಸರ್ಜ್ಯತಾಮ್ ।
ಅಸ್ಯ ಪುತ್ರೈರ್ಹಿ ಮೇ ಕೃತ್ಸ್ನೋ ಬ್ರಹ್ಮನ್ ವಂಶಃ ಪ್ರಣಾಶಿತಃ ॥೪೮॥

'ಪೂಜ್ಯರೇ, ಇಲ್ಲಿಗೆ ಬಂದಿರುವ ವೀತಹವ್ಯನನ್ನು ಬಿಟ್ಟುಬಿಡಿ. ಎಲೈ ಬ್ರಾಹ್ಮಣರೇ, ಅವನ ಮಕ್ಕಳಿಂದ ನನ್ನ ವಂಶವೆಲ್ಲವೂ ನಾಶಗೊಳಿಸಲ್ಪಟ್ಟಿದೆ'.

ಉತ್ಸಾದಿತಶ್ಚ ವಿಷಯಃ ಕಾಶೀನಾಂ ರತ್ನಸಂಚಯಃ ।
ಏತಸ್ಯ ವೀರ್ಯದೃಪ್ತಸ್ಯ ಹತಂ ಪುತ್ರಶತಂ ಮಯಾ ।
ಅಸ್ಯೇದಾನೀಂ ವಧಾದದ್ಯ ಭವಿಷ್ಯಾಮ್ಯನೃಣಃ ಪಿತುಃ ॥೪೯॥

'ರತ್ನರಾಶಿಯಿದ್ದ ಕಾಶೀಪಟ್ಟಣವೂ ಸಹ ಧ್ವಂಸಗೊಳಿಸಲ್ಪಟ್ಟಿದೆ. ಸಾಮರ್ಥ್ಯದ ಅಹಂಕಾರದಿಂದ ಕೂಡಿದ ಅವನ ನೂರು ಮಕ್ಕಳನ್ನು ನಾನು ಕೊಂದಿದ್ದೇನೆ. ಈಗ ಅವನನ್ನು ಕೊಂದು ಈ ದಿನ ನಾನು ನನ್ನ ತಂದೆಯ ಋಣವನ್ನು ತೀರಿಸುವೆನು' (ಎಂದು ಹೇಳಿದನು).

ತಮುವಾಚ ಕೃಪಾವಿಷ್ಟೋ ಭೃಗುರ್ಧರ್ಮಭೃತಾಂವರಃ ।
ನೇಹಾಸ್ತಿ ಕ್ಷತ್ರಿಯಃ ಕಶ್ಚಿತ್ ಸರ್ವೇ ಹ್ಯೇತೇ ದ್ವಿಜೋತ್ತಮಾಃ ॥೫೦॥

ಧರ್ಮಿಷ್ಠರಲ್ಲಿ ಶ್ರೇಷ್ಠರಾದ ಭೃಗುಗಳು ಕೃಪೆಯಿಂದ ಕೂಡಿದವರಾಗಿ ಅವನನ್ನು ಕುರಿತು 'ಇಲ್ಲಿ ಯಾವ ಕ್ಷತ್ರಿಯನೂ ಇಲ್ಲ. ಇಲ್ಲಿರುವವರೆಲ್ಲರೂ ಬ್ರಾಹ್ಮಣಶ್ರೇಷ್ಠರು' ಎಂದು ಹೇಳಿದರು.

ಏವಮೇತದ್ ವಚಃ ಶ್ರುತ್ವಾ ಭೃಗೋಸ್ತಸ್ಯ ಪ್ರತರ್ದನಃ ।
ಪಾದಾವುಪಸ್ಪೃಶ್ಯ ಶನೈಃ ಪ್ರಹೃಷ್ಟೋ ವಾಕ್ಯಮಬ್ರವೀತ್ ॥೫೧॥

ಭೃಗುಗಳ ಈ ಮಾತುಗಳನ್ನು ಕೇಳಿದ ಪ್ರತರ್ದನನು ಅವರ ಪಾದಗಳಿಗೆ ನಮಸ್ಕರಿಸಿ ಸಂತೋಷಗೊಂಡು ಮೆಲ್ಲನೆ ಮಾತನಾಡಿದನು.

ಏವಮಪ್ಯಸ್ಮಿ ಭಗವನ್ ಕೃತಕೃತ್ಯೋ ನ ಸಂಶಯಃ ।
ಯ ಏಷ ರಾಜಾ ವೀರ್ಯೇಣ ಸ್ವಜಾತಿಂ ತ್ಯಾಜಿತೋ ಮಯಾ ॥೫೨॥

'ಪೂಜ್ಯರೇ, ಹಾಗಾದರೆ ನಾನು ಕೃತಕೃತ್ಯನಾಗಿದ್ದೇನೆ. ಇದರಲ್ಲಿ ಸಂಶಯವಿಲ್ಲ. ತನ್ನ ವೀರ್ಯದಿಂದ ದರ್ಪ ಹೊಂದಿದ್ದ ವೀತಹವ್ಯನನ್ನು ನಾನು ಅವನ ಜಾತಿಯಿಂದ ಬಿಡಿಸಿದ್ದೇನೆ.

ಅನುಜಾನೀಹಿ ಮಾಂ ಬ್ರಹ್ಮನ್ ಧ್ಯಾಯಸ್ವ ಚ ಶಿವೇನ ಮಾಮ್ ।
ತ್ಯಾಜಿತೋ ಹಿ ಮಯಾ ಜಾತಿಮೇಷ ರಾಜಾ ಭೃಗೂದ್ವಹ ॥೫೩॥

ಪೂಜ್ಯರೇ, ನನಗೆ ಅನುಮತಿಯನ್ನು ಕೊಡಿ, ನನಗೆ ಶುಭವನ್ನು ಹಾರೈಸಿ. ಎಲೈ ಭೃಗೂದ್ವಹರೇ, ಈ ರಾಜನನ್ನು ನಾನು ಅವನ ಜಾತಿಯಿಂದ ಬಿಡಿಸಿದ್ದೇನೆ' ಎಂದು ಹೇಳಿದನು.

ತತಸ್ತೇನಾಭ್ಯನುಜ್ಞಾತೋ ಯಯೌ ರಾಜಾ ಪ್ರತರ್ದನಃ ।
ಯಥಾಗತಂ ಮಹಾರಾಜ ಮುಕ್ತ್ವಾ ವಿಷಮಿವೋರಗಃ ॥೫೪॥

ಎಲೈ ಮಹಾರಾಜನೇ, ಆಗ ಅವರಿಂದ ಅನುಮತಿಯನ್ನು ಪಡೆದು ಪ್ರತರ್ದನ ರಾಜನು ವಿಷವನ್ನು ತ್ಯಜಿಸಿದ ಸರ್ಪದಂತೆ ಕೋಪವನ್ನು ಬಿಟ್ಟು ಬಂದ ದಾರಿಯಲ್ಲಿ ಹಿಂದಿರುಗಿದನು.

ಭೃಗೋರ್ವಚನಮಾತ್ರೇಣ ಸೋಽಪಿ ಬ್ರಾಹ್ಮಣತಾಂ ಗತಃ ।
ವೀತಹವ್ಯೋ ಮಹಾರಾಜ ಬ್ರಹ್ಮವಾದಿತ್ವಮೇವ ಚ ॥೫೫॥

ಎಲೈ ಮಹಾರಾಜನೇ, ಕೇವಲ ಭೃಗುಋಷಿಗಳ ವಚನದಿಂದ ವೀತಹವ್ಯನೂ ಸಹ ಬ್ರಾಹ್ಮಣ್ಯವನ್ನು ಪಡೆದು ಬ್ರಹ್ಮವಾದಿಯಾದನು.

ತಸ್ಯ ಗೃತ್ಸಮದಃ ಪುತ್ರೋ ರೂಪೇಣೇಂದ್ರ ಇವಾಪರಃ ।
ಶಕ್ರಸ್ತ್ವಮಿತಿ ಯೋ ದೈತ್ಯೈರ್ನಿಗೃಹೀತಃ ಕಿಲಾಭವತ್ ॥೫೬॥

ವೀತಹವ್ಯನ ಪುತ್ರನು ಗೃತ್ಸಮದ. ಅವನು ರೂಪದಲ್ಲಿ ಇಂದ್ರನಂತೆ ಇದ್ದನು. ಅವನನ್ನು ದೈತ್ಯರು ನೀನೇ ಇಂದ್ರನೆಂದು ಹೇಳಿ ನಿಗ್ರಹಿಸಿದ್ದರು.

ಋಗ್ವೇದೇ ವರ್ತತೇ ಚಾನ್ಯಾ ಶ್ರುತಿರತ್ರ ವಿಶಾಂಪತೇ ।
ಯತ್ರ ಗೃತ್ಸಮದೋ ಬ್ರಹ್ಮನ್ ಬ್ರಾಹ್ಮಣೈಃ ಸಮುದಾಹೃತಃ ॥೫೭॥

ಋಗ್ವೇದದಲ್ಲಿ ಗೃತ್ಸಮದರನ್ನು ಬ್ರಾಹ್ಮಣರು ಪ್ರಶಂಸೆ ಮಾಡುವ ವೇದಭಾಗಗಳಿವೆ.

ಬ್ರಹ್ಮವಾದೀ ಸ ವಿಪ್ರರ್ಷಿಃ ಶ್ರೀಮಾನ್ ಗೃತ್ಸಮದೋಽಭವತ್ ।
ಪುತ್ರೋ ಗೃತ್ಸಮದಸ್ಯಾಪಿ ವಿಪ್ರಃ ಸಾವತಸೋಽಭವತ್ ॥೫೮॥

ಕಾಂತಿಯುಕ್ತರಾದ ಗೃತ್ಸಮದರು ಬ್ರಹ್ಮರ್ಷಿಯೂ, ಬ್ರಹ್ಮವಾದಿಗಳೂ ಆದರು. ಗೃತ್ಸಮದರಿಗೆ ಸಾವತಸನೆಂಬ ಬ್ರಾಹ್ಮಣ ಪುತ್ರನು ಜನಿಸಿದನು.

ಸಾವತಸಸ್ಯ ಪುತ್ರೋ ವೈ ವಿತಸ್ಯಸ್ತಸ್ಯ ಚಾತ್ಮಜಃ ।
ವಿತಸ್ಯಸ್ಯ ಸುತಸ್ತಸ್ಯ ಶಿವಸ್ತಸ್ಯಾತ್ಮಜಃ ಸುತಃ ॥೫೯॥

ಸಾವತಸನೆಂಬವನಿಗೆ ವಿತಸ್ಯನೆಂಬುವನು ಪುತ್ರ. ವಿತಸ್ಯನಿಗೆ ಶಿವನೆಂಬುವನು ಔರಸ ಪುತ್ರನಾದನು.

ಶ್ರವಸ್ತಸ್ಯಾತ್ಮಜಸ್ಯಾಪಿ ಶ್ರವಸಶ್ಚಾಭವತ್ತಮಃ ।
ತಮಸಶ್ಚ ಪ್ರಕಾಶೋಽಭೂತ್ ತನಯೋ ದ್ವಿಜಸತ್ತಮಃ ॥೬೦॥

ಶ್ರವನು ಶಿವನ ಪುತ್ರ. ಶ್ರವನಿಗೆ ತಮಸ್ಸೆಂಬ ಪುತ್ರನು ಜನಿಸಿದನು. ತಮಸ್ಸಿಗೆ ಪ್ರಕಾಶನೆಂಬ ದ್ವಿಜಶ್ರೇಷ್ಠನು ಪುತ್ರನಾಗಿ ಜನಿಸಿದನು.

ಪ್ರಕಾಶಸ್ಯ ತು ವಾಗಿಂದ್ರೋ ವಾಗಿಂದ್ರಾದ್ ಬ್ರಹ್ಮವಾಹನಃ ।
ತಸ್ಯಾತ್ಮಜಶ್ಚ ಪ್ರಮಿತಿರ್ವೇದವೇದಾಂಗಪಾರಗಃ ॥೬೧॥

ಪ್ರಕಾಶನ ಪುತ್ರ ವಾಗಿಂದ್ರ. ವಾಗಿಂದ್ರನ ಪುತ್ರ ಬ್ರಹ್ಮವಾಹನ. ಬ್ರಹ್ಮವಾಹನನ ಪುತ್ರ ವೇದವೇದಾಂಗ ಪಾರಾಂಗತನಾದ ಪ್ರಮಿತಿ.

ಬಭೂವಾಪ್ರತಿಮಸ್ತಸ್ಯ ಪುತ್ರೋ ವೇದವಿದಾಂವರಃ ।
ಘೃತಾಚ್ಯಾಂ ತಸ್ಯ ಪುತ್ರಶ್ಚ ರುರುರ್ನಾಮೋದಪದ್ಯತ ।
ಶುನಕೋ ನಾಮ ವಿಪ್ರರ್ಷಿರ್ಯಸ್ಯ ಪುತ್ರೋಽಥ ಶೌನಕಃ ॥೬೨॥

ಪ್ರಮಿತಿಗೆ ವೇದಜ್ಞರಲ್ಲಿ ಶ್ರೇಷ್ಠನಾದ ಅಪ್ರತಿಮನು ಪುತ್ರನಾಗಿ ಜನಿಸಿದನು. ಅಪ್ರತಿಮನಿಗೆ ಘೃತಾಚಿಯಲ್ಲಿ ರುರು ಎಂಬ ಪುತ್ರನು ಜನಿಸಿದನು. ವಿಪ್ರರ್ಷಿಯಾದ ಶುನಕನು ರುರುವಿನ ಪುತ್ರ. ಶುನಕನ ಪುತ್ರ ಶೌನಕ.

ಏವಂ ಬ್ರಾಹ್ಮಣತಾಂ ಪ್ರಾಪ್ತೋ ವೀತಹವ್ಯೋ ಮಹಾತಪಾಃ ।
ಭೃಗೋಃ ಪ್ರಸಾದಾದ್ ರಾಜೇಂದ್ರ ಕ್ಷತ್ರಿಯಃ ಕ್ಷತ್ರಿಯರ್ಷಭ ॥೬೩॥

ಎಲೈ ರಾಜೇಂದ್ರನೇ, ಕ್ಷತ್ರಿಯರ್ಷಭನೇ, ಹೀಗೆ ಕ್ಷತ್ರಿಯನಾದ ವೀತಹವ್ಯನು ಭೃಗುಗಳ ಅನುಗ್ರಹದಿಂದ ಬ್ರಾಹ್ಮಣ್ಯ ಪಡೆದು ಮಹಾತಪಸ್ವಿಯಾದನು.

ಏಷ ತೇ ಕಥಿತೋ ರಾಜನ್ ವಂಶೋ ಗಾರ್ತ್ಸಮದೋ ಮಯಾ ।
ವಿಸ್ತರೇಣ ಕುರುಶ್ರೇಷ್ಠ ಕಿಮನ್ಯದನುಪೃಚ್ಛಸಿ ॥೬೪॥

ಎಲೈ ರಾಜನೇ, ಕುರುಶ್ರೇಷ್ಠನೇ, ಗೃತ್ಸಮದರ ಈ ವಂಶವನ್ನು ನಿನಗೆ ವಿಸ್ತಾರವಾಗಿ ಹೇಳಿದ್ದೇನೆ. ಬೇರೆ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಅನುಶಾಸನಪರ್ವಣಿ ದಾನಧರ್ಮೇ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಆರನೆಯ ಅಧ್ಯಾಯ

ಅದೃಷ್ಟ ಮತ್ತು ಪುರುಷ ಪ್ರಯತ್ನಗಳಲ್ಲಿ ಪ್ರಾಬಲ್ಯವಿಚಾರ.

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ದೈವೇ ಪುರುಷಕಾರೇ ಚ ಕಿಂವಾ ಶ್ರೇಷ್ಠತಮಂ ಮತಮ್ ॥೧॥

ಯುಧಿಷ್ಠಿರ– ಸರ್ವಶಾಸ್ತ್ರವಿಶಾರದನೇ, ಮಹಾಪ್ರಾಜ್ಞನೇ, ಪಿತಾಮಹನೇ, ದೈವಬಲ ಮತ್ತು ಪುರುಷಪ್ರಯತ್ನದಲ್ಲಿ ಯಾವುದು ಶ್ರೇಷ್ಠವೆಂದು ನಿನ್ನ ಅಭಿಪ್ರಾಯ?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ವಸಿಷ್ಠಸ್ಯ ಚ ಸಂವಾದಂ ಬ್ರಹ್ಮಣಶ್ಚ ಯುಧಿಷ್ಠಿರ ॥೨॥

ಭೀಷ್ಮ– ಎಲೈ ಯುಧಿಷ್ಠಿರನೇ, ಈ ವಿಷಯದಲ್ಲಿಯೂ ವಸಿಷ್ಠರಿಗೂ, ಬ್ರಹ್ಮದೇವರಿಗೂ ನಡೆದ ಸಂವಾದರೂಪವಾದ ಪುರಾತನವಾದ ಈ ಇತಿಹಾಸವನ್ನು ಜ್ಞಾನಿಗಳು ಹೇಳುತ್ತಾರೆ.

ದೈವಮಾನುಷಯೋಃ ಕಿಂಸ್ವಿತ್ ಕರ್ಮಣೋಃ ಶ್ರೇಷ್ಠಮಿತ್ಯುತ ।
ಪುರಾ ವಸಿಷ್ಠೋ ಭಗವಾನ್ ಪಿತಾಮಹಮಪೃಚ್ಛತ ॥೩॥

ದೈವಪ್ರೇರಣೆ ಮತ್ತು ಮನುಷ್ಯ ಪ್ರಯತ್ನ ಇವೆರಡರಲ್ಲಿ ಯಾವುದು ಶ್ರೇಷ್ಠವಾದುದೆಂದು ಹಿಂದೆ ಪೂಜ್ಯರಾದ ವಸಿಷ್ಠರು ಪಿತಾಮಹರಾದ ಬ್ರಹ್ಮದೇವರನ್ನು ಕೇಳಿದರು.

ತತಃ ಪದ್ಮೋದ್ಭವೋ ರಾಜನ್ ದೇವದೇವಃ ಪಿತಾಮಹಃ ।
ಉವಾಚ ಸುಶುಭಾಂ ವಾಣೀಂ ಶುಭಾರ್ಥಾಂ ಹೇತುಭಿರ್ಯುತಾಮ್ ॥

ಎಲೈ ರಾಜನೇ, ಆಗ ಪದ್ಮಸಂಭವರೂ, ದೇವದೇವರೂ, ಪಿತಾಮಹರೂ ಆದ ಬ್ರಹ್ಮದೇವರು ಶುಭವಾದ ಅರ್ಥವನ್ನು ಒಳಗೊಂಡು ಹೇತುಗಳಿಂದ ಯುಕ್ತವಾದ ಶುಭವಾದ ಮಾತುಗಳನ್ನು ಆಡಿದರು.

ಬೀಜತೋ ಹ್ಯಂಕುರೋತ್ಪತ್ತಿರಂಕುರಾತ್ ಪರ್ಣಸಂಭವಃ ।
ಪರ್ಣಾನ್ನಾಳಾಃ ಪ್ರಸೂಯಂತೇ ನಾಳಾತ್ ಸ್ಕಂಧಃ ಪ್ರವರ್ತತೇ ॥೫॥

ಬೀಜದಿಂದ ಮೊಳಕೆಯು ಒಡೆಯುತ್ತದೆ. ಮೊಳಕೆಯಿಂದ ಎಲೆಗಳು ಉಂಟಾಗುತ್ತವೆ. ಎಲೆಗಳಿಂದ ನಾಳಗಳು ಉದ್ಭವಿಸುತ್ತವೆ. ನಾಳಗಳು ಕೊಂಬೆ ರೆಂಬೆಗಳಾಗುತ್ತವೆ.

ಸ್ಕಂಧಾತ್ ಪ್ರವರ್ತತೇ ಪುಷ್ಪಂ ಪುಷ್ಪಾನ್ನಿರ್ವರ್ತತೇ ಫಲಮ್ ।
ಫಲಾನ್ನಿರ್ವರ್ತತೇ ಬೀಜಂ ಬೀಜಾತ್ ಸ್ಯಾತ್ ಸಂಭವಃ ಪುನಃ ॥೬॥

ಕೊಂಬೆ-ರೆಂಬೆಗಳಿಂದ ಹೂವುಗಳಾಗುತ್ತವೆ. ಹೂವುಗಳಿಂದ ಹಣ್ಣುಗಳಾಗುತ್ತವೆ. ಹಣ್ಣುಗಳಿಂದ ಪುನಃ ಬೀಜವೂ, ಬೀಜದಿಂದ ಪುನಃ ಸಸ್ಯದ ಉತ್ಪತ್ತಿಯೂ ಉಂಟಾಗುತ್ತದೆ.

ನಾಬೀಜಂ ಜಾಯತೇ ಕಿಂಚಿನ್ನ ಬೀಜೇನ ವಿನಾ ಫಲಮ್ ।
ಬೀಜಾದ್ ಬೀಜಂ ಭವತ್ಯೇವ ನಾಬೀಜಂ ವಿದ್ಯತೇ ಫಲಮ್ ॥೭॥

ಬೀಜವಿಲ್ಲದಿದ್ದರೆ ಯಾವುದೂ ಹುಟ್ಟುವುದಿಲ್ಲ. ಬೀಜವಿಲ್ಲದಿದ್ದರೆ ಫಲವೂ ದೊರೆಯುವುದಿಲ್ಲ. ಬೀಜದಿಂದ ಬೀಜ ಉಂಟಾಗುತ್ತದೆ. ಬೀಜವಿಲ್ಲದಿರುವ ಫಲವಿರುವುದಿಲ್ಲ.

ಯಾದೃಶಂ ವಪತೇ ಬೀಜಂ ಕ್ಷೇತ್ರಮಾಸಾದ್ಯ ಕರ್ಷಕಃ ।
ಸುಕೃತೇ ದುಷ್ಕೃತೇ ವಾऽಪಿ ತಾದೃಶಂ ಫಲಮಶ್ನುತೇ ॥೮॥

ಕೃಷಿಕನಾದವನು ತನ್ನ ಕ್ಷೇತ್ರದಲ್ಲಿ ಎಂತಹ ಬೀಜವನ್ನು ಬಿತ್ತುತ್ತಾನೆಯೋ ಅದಕ್ಕೆ ಅನುಗುಣವಾದ ಫಲವನ್ನು ಪಡೆಯುತ್ತಾನೆ. ಸುಕೃತ, ದುಷ್ಕೃತವನ್ನು ಮಾಡಿದವನೂ ಸಹ ಅದರಂತೆ ಅದಕ್ಕೆ ಅನುಗುಣವಾದ ಫಲಗಳನ್ನು ಪಡೆಯುತ್ತಾನೆ.

ಯಥಾ ಬೀಜಂ ವಿನಾ ಕ್ಷೇತ್ರಂ ವಂಧ್ಯಂ ಭವತಿ ನಿಷ್ಫಲಮ್ ।
ತಥಾ ಪುರುಷಕಾರೇಣ ವಿನಾ ದೈವಂ ನ ಸಿದ್ಧ್ಯತಿ ॥೯॥

ಕ್ಷೇತ್ರಂ ಪುರುಷಕಾರಸ್ತು ದೈವಂ ಬೀಜಮುದಾಹೃತಮ್ ।
ಕ್ಷೇತ್ರಬೀಜಸಮಾಯೋಗಾತ್ ತತಃ ಸಸ್ಯಂ ಸಮೃದ್ಧ್ಯತೇ ॥೧೦॥

ಬೀಜವಿಲ್ಲದ ಕ್ಷೇತ್ರವು ಹೇಗೆ ಬಂಜೆಯಾಗಿ ಫಲರಹಿತವಾಗುತ್ತದೆಯೋ ಅದರಂತೆ ಪುರುಷಪ್ರಯತ್ನವಿಲ್ಲದಿದ್ದರೆ ದೈವಬಲವು ಫಲವನ್ನು ಕೊಡುವುದಿಲ್ಲ ಮತ್ತು ಪುರುಷ ಪ್ರಯತ್ನವು ಫಲವಿದ್ದಂತೆ, ದೈವಬಲವು ಬೀಜವೆಂದು ಹೇಳಲ್ಪಡುತ್ತದೆ. ಕ್ಷೇತ್ರ ಮತ್ತು ಬೀಜಗಳೆರಡೂ ಸೇರಿದರೆ ಆಗ ಸಸ್ಯವು ಸಮೃದ್ಧಿಯನ್ನು ಹೊಂದುತ್ತದೆ.

ಕರ್ಮಣಃ ಫಲನಿರ್ವೃತ್ತಿಂ ಸ್ವಯಮಶ್ನಾತಿ ಕಾರಕಃ ।
ಪ್ರತ್ಯಕ್ಷಂ ದೃಶ್ಯತೇ ಲೋಕೇ ಕೃತಸ್ಯಾಪ್ಯಕೃತಸ್ಯ ವಾ ॥೧೧॥

ಆಗ ತಾನು ಮಾಡಿದ ಕರ್ಮದ ಫಲವನ್ನು ಜೀವನು ತಾನೇ ಅನುಭವಿಸುತ್ತಾನೆ. ಮಾಡಿದ ಅಥವಾ ಮಾಡದಿದ್ದ ಕರ್ಮದ ಫಲಗಳು ಲೋಕದಲ್ಲಿ ಪ್ರತ್ಯಕ್ಷವಾಗಿ ಕಂಡು ಬರುತ್ತವೆ.

ಶುಭೇನ ಕರ್ಮಣಾ ಸೌಖ್ಯಂ ದುಃಖಂ ಪಾಪೇನ ಕರ್ಮಣಾ ।
ಕೃತಂ ಸರ್ವಸ್ಯ ಫಲತಿ ನಾಕೃತಂ ಭುಜ್ಯತೇ ಕ್ವಚಿತ್ ॥೧೨॥

ಶುಭಕರ್ಮದಿಂದ ಸೌಖ್ಯ ಉಂಟಾಗುತ್ತದೆ. ಪಾಪಕರ್ಮದಿಂದ ದುಃಖ ಉಂಟಾಗುತ್ತದೆ. ಮಾಡಿದ ಕರ್ಮವು ಎಲ್ಲರಿಗೂ ಫಲವನ್ನು ಕೊಟ್ಟೇ ಕೊಡುತ್ತದೆ. ಹಿಂದೆ ಮಾಡದಿದ್ದ ಕರ್ಮದ ಫಲವನ್ನು ಯಾರೂ ಭೋಗಿಸುವುದಿಲ್ಲ.

ಕೃತೀ ಸರ್ವತ್ರ ಲಭತೇ ಪ್ರತಿಷ್ಠಾಂ ಭಾಗ್ಯಸಂಯುತಾಮ್ ।
ಅಕೃತೀ ಲಭತೇ ಭ್ರಷ್ಟಃ ಕ್ಷತೇ ಕ್ಷಾರಾವಸೇಚನಮ್ ॥೧೩॥

ಪ್ರಯತ್ನಶೀಲನಾದವನು ಎಲ್ಲ ಕಡೆಗಳಲ್ಲಿಯೂ ಭಾಗ್ಯಯುಕ್ತವಾದ ಪ್ರತಿಷ್ಠೆಯನ್ನು ಪಡೆಯುತ್ತಾನೆ. ಪ್ರಯತ್ನರಹಿತನಾದವನು ಭ್ರಷ್ಟನಾಗಿ ಗಾಯಕ್ಕೆ ಉಪ್ಪನ್ನು ಎರೆಯುವವನಾಗುತ್ತಾನೆ.

ತಪಸಾ ರೂಪಸೌಭಾಗ್ಯಂ ರತ್ನಾನಿ ವಿವಿಧಾನಿ ಚ ।
ಪ್ರಾಪ್ಯತೇ ಕರ್ಮಣಾ ಸರ್ವಂ ನ ದೈವಾದಕೃತಾತ್ಮನಾ ॥೧೪॥

ತಪಸ್ಸಿನಿಂದ ರೂಪ-ಸೌಭಾಗ್ಯವೂ, ವಿವಿಧವಾದ ರತ್ನಗಳೂ ದೊರೆಯುತ್ತವೆ. ಕರ್ಮವನ್ನು ಮಾಡುವುದರಿಂದ ಎಲ್ಲವೂ ದೊರೆಯುತ್ತವೆ. ಕರ್ಮವನ್ನು ಮಾಡದೆ ಸುಮ್ಮನಿದ್ದರೆ ಕೇವಲ ದೈವದಿಂದ ಯಾವ ಫಲವೂ ದೊರೆಯುವುದಿಲ್ಲ.

ತಥಾ ಸ್ವರ್ಗಶ್ಚ ಭೋಗಶ್ಚ ನಿಷ್ಠಾ ಯಾ ಚ ಮನೀಷಿತಾ ।
ಸರ್ವೇ ಪುರುಷಕಾರೇಣ ಮಾನುಷ್ಯಾದ್ ದೇವತಾಂ ಗತಾಃ ॥೧೫॥

ಹಾಗೆ ಸ್ವರ್ಗ, ಭೋಗಗಳು, ನಿಷ್ಠೆ, ಮೇಧಾಶಕ್ತಿ ಎಲ್ಲವೂ ಪ್ರಯತ್ನಪೂರ್ವಕವಾದ ಕರ್ಮದಿಂದ ಉಂಟಾಗುತ್ತದೆ. ಎಲ್ಲರೂ ಮನುಷ್ಯರಾಗಿ ಪ್ರಯತ್ನಶೀಲರಾಗಿ ದೈವತ್ವವನ್ನು ಸಂಪಾದಿಸಿದರು.

ಅರ್ಥೋ ವಾ ಮಿತ್ರವರ್ಗೋ ವಾ ಐಶ್ವರ್ಯಂ ವಾ ಗುಣಾನ್ವಿತಮ್ ।
ಶ್ರೀಶ್ಚಾಪಿ ದುರ್ಲಭಾ ಭೋಕ್ತುಂ ತಥೈವಾಕೃತಕರ್ಮಭಿಃ ॥೧೬॥

ಪ್ರಯತ್ನಶೀಲನಾಗದ ಪುರುಷನಿಂದ ಅರ್ಥವಾಗಲೀ, ಸ್ನೇಹಿತವರ್ಗವಾಗಲೀ, ಐಶ್ವರ್ಯವಾಗಲೀ, ಸಂಪತ್ತಾಗಲೀ ಭೋಗಿಸಲ್ಪಡಲು ಸಾಧ್ಯವಿಲ್ಲ.

ಶೌಚೇನ ಲಭತೇ ವಿಪ್ರಃ ಕ್ಷತ್ರಿಯೋ ವಿಕ್ರಮೇಣ ಹಿ ।
ವೈಶ್ಯಃ ಪುರುಷಕಾರೇಣ ಶೂದ್ರಃ ಶಿಶ್ರೂಷಯಾ ಶ್ರಿಯಮ್ ॥೧೭॥

ಬ್ರಾಹ್ಮಣನು ಶೌಚದಿಂದ ಸಂಪತ್ತನ್ನು ಪಡೆಯುತ್ತಾನೆ. ಕ್ಷತ್ರಿಯನು ಪರಾಕ್ರಮದಿಂದ ಪಡೆಯುತ್ತಾನೆ. ವೈಶ್ಯನು ಪ್ರಯತ್ನಪೂರ್ವಕವಾದ ಕೌಶಲದಿಂದ ಪಡೆಯುತ್ತಾನೆ. ಶೂದ್ರನು ಸೇವೆಯಿಂದ ಸಂಪತ್ತನ್ನು ಪಡೆಯುತ್ತಾನೆ.

ನಾದಾತಾರಂ ಭಜಂತ್ಯರ್ಥಾ ನ ಕ್ಲೀಬಂ ನಾಪಿ ನಿಷ್ಕ್ರಿಯಮ್ ।
ನಾಕರ್ಮಶೀಲಂ ನಾಶೂರಂ ತಥಾ ನೈವಾತಪಸ್ವಿನಮ್ ॥೧೮॥

ಹಿಂದೆ ದಾನವನ್ನು ಮಾಡದಿದ್ದವನ ಬಳಿಗೆ ಸಂಪತ್ತು ಬರುವುದಿಲ್ಲ. ಹಾಗೆ ನಪುಂಸಕನಾದವನಿಗೂ (ಹೇಡಿಯಾದವನಿಗೂ), ನಿಷ್ಕ್ರಿಯನಾದವನಿಗೂ, ಆಲಸ್ಯ ಪೂರ್ಣನಾದವನಿಗೂ, ಶೂರನಲ್ಲದವನಿಗೂ, ತಪಸ್ವಿಯಲ್ಲದವನಿಗೂ ಸಂಪತ್ತು ಉಂಟಾಗುವುದಿಲ್ಲ.

ಯೇನ ಲೋಕಾಸ್ತ್ರಯಃ ಸೃಷ್ಟಾ ದೈತ್ಯಾಃ ಸರ್ವಾಶ್ಚ ದೇವತಾಃ ।
ಸ ಏಷ ಭಗವಾನ್ ವಿಷ್ಣುಃ ಸಮುದ್ರೇ ತಪ್ಯತೇ ತಪಃ ॥೧೯॥

ಯಾವ ಈ ಭಗವಂತನಾದ ವಿಷ್ಣುವು ಮೂರುಲೋಕಗಳನ್ನೂ ದೇವ-ದಾನವರೆಲ್ಲರನ್ನೂ ಸೃಷ್ಟಿಸಿದನೋ ಅವನೂ ಸಮುದ್ರದಲ್ಲಿ ತಪಸ್ಸನ್ನು ಮಾಡುತ್ತಾನೆ.

ಸ್ವಂ ಚೇತ್ ಕರ್ಮಫಲಂ ನ ಸ್ಯಾತ್ ಸರ್ವಮೇವಾಫಲಂ ಭವೇತ್ ।
ಲೋಕೋ ದೈವಂ ಸಮಾಸಾದ್ಯ ಉದಾಸೀನೋ ಭವೇನ್ನ ತು ॥೨೦॥

ತಾನು ಮಾಡಿದ ಕರ್ಮದ ಫಲವು ತನಗೆ ಬರದಿದ್ದರೆ ಎಲ್ಲವೂ ನಿಷ್ಫಲವಾದೀತು! ಪುರುಷರು ದೈವದ ಮೇಲೆ ಭಾರವನ್ನು ಹಾಕಿ ಉದಾಸೀನರಾಗಿರಬಾರದಷ್ಟೆ!

ಅಕೃತ್ವಾ ಮಾನುಷಂ ಕರ್ಮ ಯೋ ದೈವಮನುವರ್ತತೇ ।
ವೃಥಾ ಶ್ರಾಮ್ಯತಿ ಸಂಪ್ರಾಪ್ಯ ಪತಿಂ ಕ್ಲೀಬಮಿವಾಂಗನಾ ॥೨೧॥

ಯಾವನು ಮನುಷ್ಯಪ್ರಯತ್ನವನ್ನು ಮಾಡದೆ ಕೇವಲ ದೈವಬಲವನ್ನು ನಿರೀಕ್ಷಿಸುತ್ತಾನೆಯೋ ಅವನು ನಪುಂಸಕನನ್ನು ಮದುವೆಯಾದ ಅಂಗನೆಯಂತೆ ವ್ಯರ್ಥವಾಗಿ ಶ್ರಮವನ್ನು ಪಡುತ್ತಾನೆ.

ನ ತಥಾ ಮಾನುಷೇ ಲೋಕೇ ಫಲಮಸ್ತಿ ಶುಭಾಶುಭೇ ।
ಯಥಾ ತ್ರಿದಶಲೋಕೇ ವೈ ಫಲಮಲ್ಪೇನ ಜಾಯತೇ ॥೨೨॥

ಸ್ವರ್ಗಲೋಕದಲ್ಲಿ ಅಲ್ಪ ಪ್ರಯತ್ನದಿಂದಲೂ ಫಲವು ದೊರಕುವಂತೆ ಮನುಷ್ಯ ಲೋಕದಲ್ಲಿ ಅಲ್ಪ ಪ್ರಯತ್ನದಿಂದ ಶುಭಾಶುಭ ಫಲಗಳು ದೊರೆಯುವುದಿಲ್ಲ.

ಕೃತಃ ಪುರುಷಕಾರಸ್ತು ದೈವಮೇವಾನುವರ್ತತೇ ।
ನ ದೈವಂ ವಾऽಕೃತಂ ಕಿಂಚಿತ್ ಕಸ್ಯಚಿದ್ ದಾತುಮರ್ಹತಿ ॥೨೩॥

ಮನುಷ್ಯ ಪ್ರಯತ್ನವನ್ನು ಮಾಡಿದರೂ ಫಲವು ದೈವವನ್ನೇ ಅವಲಂಬಿಸಿರುತ್ತದೆ. ದೈವವಾಗಲೀ, ಮಾಡದಿದ್ದ ಕರ್ಮವಾಗಲೀ ಯಾರಿಗೂ ಫಲವನ್ನು ಕೊಡಲು ಸಮರ್ಥವಲ್ಲ.

ಯಥಾ ಸ್ಥಾನಾನ್ಯನಿತ್ಯಾನಿ ದೃಶ್ಯಂತೇ ದೈವತೇಷ್ವಪಿ ।
ಕಥಂ ಕರ್ಮ ವಿನಾ ದೈವಂ ಸ್ಥಾಪ್ಯತೇ ಸ್ಥಾಪಯಿಷ್ಯತಿ ॥೨೪॥

ದೇವತೆಗಳ ಸ್ಥಾನವು ಅನಿತ್ಯವಾಗಿರುವುದನ್ನು ನೋಡಿದರೆ ಕರ್ಮವಿಲ್ಲದೆ ಹೇಗೆ ದೇವತಾಪದವು ಪ್ರಾಪ್ತವಾಗುತ್ತದೆ ಮತ್ತು ಉಳಿಯುವುದು?

ನ ದೈವತಾನಿ ಲೋಕೇऽಸ್ಮಿನ್ ವ್ಯಾಪಾರಂ ಯಾಂತಿ ಕಸ್ಯಚಿತ್ ।
ಭಯಂ ಸಂಜನಯನ್ತ್ಯುಗ್ರಮಾತ್ಮಾಭಿಭವಶಂಕಯಾ ॥೨೫॥

ದೇವತೆಗಳು ಈ ಲೋಕಕ್ಕೆ ಬಂದು ಯಾರ ಪರವಾಗಿಯೂ ಕರ್ಮಗಳನ್ನು ಮಾಡುವುದಿಲ್ಲ. ತಮಗೆ ಪರಾಭವ ಉಂಟಾಗುವುದೆಂಬ ಹೆದರಿಕೆಯಿಂದ ಅವರು ಮುನಿಗಳು ಮಾಡುವ ತಪಸ್ಸುಗಳಿಗೆ ವಿಘ್ನಗಳನ್ನು ತಂದೊಡ್ಡುತ್ತಾರೆ.

ಋಷೀಣಾಂ ದೇವತಾನಾಂ ಚ ಸದಾ ಭವತಿ ವಿಗ್ರಹಃ ।
ಕಸ್ಯ ವಾಚಾ ಹ್ಯದೈವಂ ಸ್ಯಾದ್ ಯತೋ ದೈವಂ ಪ್ರವರ್ತತೇ ॥೨೬॥

ಋಷಿಗಳಿಗೂ ಮತ್ತು ದೇವತೆಗಳಿಗೂ ಯಾವಾಗಲೂ ವಿರೋಧ ಉಂಟಾಗುತ್ತದೆ. ಯಾವಾತನ ಮಾತಿನಿಂದ ದೈವವು ನಿಷ್ಫಲವಾಗುತ್ತದೆ?

ಕಥಂ ಚಾಸ್ಯ ಸಮುತ್ಪತ್ತಿರ್ಯತೋ ದೈವಂ ಪ್ರವರ್ತತೇ ।
ಏವಂ ತ್ರಿದಶಲೋಕೇऽಪಿ ಕರ್ಮಣಃ ಪ್ರಾಪ್ಯತೇ ಫಲಮ್ ॥೨೭॥

ದೈವವು ಯಾವಾಗ ಪ್ರವೃತ್ತಿಯನ್ನು ಮಾಡುತ್ತದೆ? ಆ ದೈವದ ಉತ್ಪತ್ತಿಯು ಹೇಗೆ? ಈ ರೀತಿಯಲ್ಲಿ ದೇವಲೋಕದಲ್ಲಿ ಕೂಡ ಕರ್ಮದ ಫಲದ ವಿಷಯದಲ್ಲಿ ವಿಚಾರವು ನಡೆಯುತ್ತಲೇ ಇರುತ್ತದೆ.

ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ।
ಆತ್ಮೈವ ಹ್ಯಾತ್ಮನಃ ಸಾಕ್ಷೀ ಕೃತಸ್ಯಾಪ್ಯಕೃತಸ್ಯ ಚ ॥೨೮॥

ತಾನು ಮಾಡಿದ ಅಥವಾ ಮಾಡದಿದ್ದ ಕರ್ಮಕ್ಕೆ ತಾನೇ ಸಾಕ್ಷಿ. ತನಗೆ ತಾನೇ ಬಂಧು ಮತ್ತು ಪುರುಷನು ತನಗೆ ತಾನೇ ಶತ್ರು (ಸತ್ಕರ್ಮವನ್ನು ಮಾಡಿದರೆ ಬಂಧುವಾಗುತ್ತಾನೆ, ದುಷ್ಕರ್ಮವನ್ನು ಮಾಡಿದರೆ ದುಃಖಫಲವನ್ನು ಅನುಭವಿಸ ಬೇಕಾಗುವುದರಿಂದ ಶತ್ರುವಾಗುತ್ತಾನೆ).

ಕೃತಂ ಚ ವಿಕೃತಂ ಕರ್ಮ ಅಕೃತಾರ್ಥಂ ಕೃತಕರ್ಮಣಾ ।
ಸುಕೃತಂ ದುಷ್ಕೃತಂ ಕರ್ಮ ಅಕೃತಾರ್ಥಂ ವಿಪದ್ಯತೇ ॥೨೯॥

ಕರ್ಮವನ್ನು ಮಾಡಿದರೂ ಅದನ್ನು ಸರಿಯಾಗಿ ಮಾಡದಿದ್ದರೆ ಅದನ್ನು ಮಾಡದಿದ್ದಂತೆಯೇ. ಅಂತಹ ವ್ಯಕ್ತಿಯು ಸತ್ಕರ್ಮವನ್ನು ಮಾಡಲಿ ಅಥವಾ ದುಷ್ಕರ್ಮವನ್ನು ಮಾಡಲಿ, ಅದು ಮಾಡದಿದ್ದಂತೆಯೇ ಆಗಿ ವಿನಾಶವನ್ನು ಹೊಂದುತ್ತದೆ (ಅವನಿಗೆ ಸತ್ಕರ್ಮವು ಒಳ್ಳೆಯ ಫಲವನ್ನು ಕೊಡುವುದಿಲ್ಲ, ದುಷ್ಕರ್ಮವು ತಪ್ಪಾಗಿ ಮಾಡಿದರೂ ದುಃಖವನ್ನು ಕೊಟ್ಟು ವಿನಾಶದ ಕಡೆಗೇ ಕರೆದೊಯ್ಯುತ್ತದೆ).

ದೇವಾನಾಂ ಶರಣಂ ಪುಣ್ಯಂ ಸರ್ವಂ ಪುಣ್ಯೈರವಾಪ್ಯತೇ ।
ಪುಣ್ಯಹೀನಂ ನರಂ ಪ್ರಾಪ್ಯ ಕಿಂ ದೈವಂ ಪ್ರಕರಿಷ್ಯತಿ ॥೩೦॥

ದೇವತೆಗಳಿಗೆ ಪುಣ್ಯವು ದೊಡ್ಡ ಆಶ್ರಯ. ಅವರು ಪುಣ್ಯದಿಂದ ಎಲ್ಲವನ್ನೂ ಪಡೆಯುತ್ತಾರೆ. ಪುರುಷನಿಗೆ ಪುಣ್ಯವಿರದಿದ್ದರೆ ದೈವವು ಅವನಿಗೆ ಏನು ಮಾಡುವುದು?

ಪುರಾ ಯಯಾತಿರ್ವಿಭ್ರಷ್ಟಶ್ಚ್ಯವಿತಃ ಪತಿತಃ ಕ್ಷಿತೌ ।
ಪುನರಾರೋಹಿತಃ ಸ್ವರ್ಗಂ ದೌಹಿತ್ರೈಃ ಪುಣ್ಯಕರ್ಮಭಿಃ ॥೩೧॥

ಹಿಂದೆ ಧರ್ಮಭ್ರಷ್ಟನಾಗಿ ಯಯಾತಿಯು ಸ್ವರ್ಗದಿಂದ ಕೆಡವಲ್ಪಟ್ಟು ಭೂಮಿಯಲ್ಲಿ ಬೀಳುತ್ತಿರುವಾಗ ಅವನ ದೌಹಿತ್ರರು ಮಾಡಿದ ಪುಣ್ಯಕರ್ಮಗಳಿಂದ ಅವನು ಪುನಃ ಸ್ವರ್ಗವನ್ನು ಏರಿದನು.

ಪುರೂರವಾ ವೈ ರಾಜರ್ಷಿರ್ದ್ವಿಜೈರಭಿಹಿತಃ ಪುರಾ ।
ಐಲ ಇತ್ಯಭಿವಿಖ್ಯಾತಃ ಸ್ವರ್ಗಂ ಪ್ರಾಪ್ತೋ ಮಹೀಪತಿಃ ॥೩೨॥

ಐಲ ಎಂದು ವಿಖ್ಯಾತನಾದ ರಾಜರ್ಷಿಯಾದ ಪುರೂರವನೂ ಸಹ ಹಿಂದೆ ಬ್ರಾಹ್ಮಣರ ಮಾತಿನಂತೆ ನಡೆದುಕೊಂಡು ಸ್ವರ್ಗವನ್ನು ಪಡೆದನು.

ಅಶ್ವಮೇಧಾದಿಭಿರ್ಯಜ್ಞೈಃ ಸತ್ಕೃತಃ ಕೋಸಲಾಧಿಪಃ ।
ಮಹರ್ಷಿಶಾಪಾತ್ ಸೌದಾಸಃ ಪುರುಷಾದತ್ವಮಾಗತಃ ॥೩೩॥

ಕೋಸಲಾಧಿಪತಿಯಾದ ಸೌದಾಸನು ಅಶ್ವಮೇಧಾದಿ ಯಾಗಗಳನ್ನು ಮಾಡಿ ಪುಣ್ಯವನ್ನು ಸಂಪಾದಿಸಿದ್ದರೂ ಮಹರ್ಷಿಗಳಾದ ವಸಿಷ್ಠರ ಶಾಪದಿಂದ ಅವನು ರಾಕ್ಷಸನಾದನು (ಸತ್ಕರ್ಮವನ್ನು ಮಾಡಿ ಪುಣ್ಯವನ್ನು ಸಂಪಾದಿಸಿದರೂ ಮಹದಪಚಾರದಿಂದ ಆ ಪುಣ್ಯವು ನಾಶವನ್ನು ಹೊಂದುತ್ತದೆ. ಫಲವನ್ನು ಕೊಡುವುದಿಲ್ಲ).

ಅಶ್ವತ್ಥಾಮಾ ಚ ರಾಮಶ್ಚ ಮುನಿಪುತ್ರೌ ಧನುರ್ಧರೌ ।
ನ ಗಚ್ಛತಃ ಸ್ವರ್ಗಲೋಕಂ ಸ್ವಕೃತೇನೇಹ ಕರ್ಮಣಾ ॥೩೪॥

ಧನುರ್ಧಾರಿಗಳಾದ ಅಶ್ವತ್ಥಾಮ ಮತ್ತು ಪರಶುರಾಮರಿಬ್ಬರೂ ಋಷಿ ಪುತ್ರರಾದವರು. ಅವರು ತಾವು ಮಾಡಿದ ಕರ್ಮಗಳಿಂದಾಗಿ ಸ್ವರ್ಗಕ್ಕೆ ಹೋಗಲಿಲ್ಲ (ಮನುಷ್ಯಲೋಕದಲ್ಲಿಯೇ ಚಿರಂಜೀವಿಗಳಾಗಿದ್ದಾರೆ).

ವಸುರ್ಯಜ್ಞಶತೈರಿಷ್ಟ್ವಾ ದ್ವಿತೀಯ ಇವ ವಾಸವಃ ।
ಮಿಥ್ಯಾಭಿಧಾನೇನೈಕೇನ ರಸಾತಳತಳಂ ಗತಃ ॥೩೫॥

ಉಪಚರವಸುವು ನೂರು ಯಜ್ಞಗಳನ್ನು ಮಾಡಿ ಎರಡನೆಯ ಇಂದ್ರನಂತೆ ಇದ್ದವನು ಒಂದು ಸುಳ್ಳನ್ನು ಹೇಳಿದ ಕಾರಣದಿಂದಾಗಿ ರಸಾತಳದ ಬುಡಕ್ಕೆ ಹೊರಟು ಹೋದನು (ಸಂಪಾದಿಸಿದ ಪುಣ್ಯವನ್ನು ಜಾಗರೂಕವಾಗಿ ರಕ್ಷಿಸದಿದ್ದರೆ ಅದು ನಾಶವಾಗುತ್ತದೆ).

ಬಲಿರ್ವೈರೋಚನಿರ್ಬದ್ಧೋ ಧರ್ಮಪಾಶೇನ ದೈವತೈಃ ।
ವಿಷ್ಣೋಃ ಪುರುಷಕಾರೇಣ ಪಾತಾಲಸದನಃ ಕೃತಃ ॥೩೬॥

ವಿರೋಚನ ಪುತ್ರನಾದ ಬಲಿಯು ದೇವತೆಗಳಿಂದ ಧರ್ಮಪಾಶದಿಂದ ಕಟ್ಟಲ್ಪಟ್ಟನು. ವಿಷ್ಣುವಿನ ಪ್ರಯತ್ನದಿಂದಾಗಿ ಅವನು ಪಾತಾಳದಲ್ಲಿ ವಾಸಿಸಬೇಕಾಯಿತು.

ಶಕ್ರಸ್ಯಾಥ ರಥೋಪಸ್ಥೇ ವಿಷ್ಟಿತೋ ಜನಮೇಜಯಃ ।
ದ್ವಿಜಸ್ತ್ರೀಣಾಂ ವಧಂ ಕೃತ್ವಾ ಕಿಂ ದೈವೇನ ನ (ನಿ)ವಾರಿತಃ ॥೩೭॥

ಇಂದ್ರನ ರಥಪೀಠದಲ್ಲಿ ನಿಂತು ಜನಮೇಜಯನು ಬ್ರಾಹ್ಮಣ ಸ್ತ್ರೀಯರ ವಧೆಯನ್ನು ಮಾಡಿದರೂ ಅವನ ಸ್ವರ್ಗಗಮನವನ್ನು ದೈವವು ತಡೆಯಲಿಲ್ಲ (ವಿಶೇಷ ಪುಣ್ಯ ಮತ್ತು ದೇವತಾನುಗ್ರಹದಿಂದ ಸ್ವಲ್ಪ ಪಾಪವು ನಾಶವನ್ನು ಹೊಂದುತ್ತದೆ).

ಅಜ್ಞಾನಾದ್ ಬ್ರಾಹ್ಮಣಂ ಹತ್ವಾ ಸ್ಪೃಷ್ಟೋ ಬಾಲವಧೇನ ಚ ।
ವೈಶಂಪಾಯನವಿಪ್ರರ್ಷಿಃ ಕಿಂ ದೈವೇನ ನ (ನಿ)ವಾರಿತಃ ॥೩೮॥

ಅಜ್ಞಾನದಿಂದ ಬ್ರಾಹ್ಮಣಪುತ್ರರನ್ನು ಕೊಂದು, ಬಾಲವಧೆಯ ದೋಷವನ್ನು ಹೊಂದಿದ ವಿಪ್ರರ್ಷಿಗಳಾದ ವೈಶಂಪಾಯನರು ದೈವದಿಂದ ತಡೆಯಲ್ಪಡಲಿಲ್ಲವೆ?

ಗೋಪ್ರದಾನೇನ ಮಿಥ್ಯಾ ಚ ಬ್ರಾಹ್ಮಣೇಭ್ಯೋ ಮಹಾಮಖೇ ।
ನೃಗಶ್ಚೈವ ಮಹಾರಾಜ ಕೃಕಲಾಸತ್ವಮಾಗತಃ ॥೩೯॥

ಭೃಗು ಮಹಾರಾಜನು ದೊಡ್ಡ ಯಜ್ಞದಲ್ಲಿ ಬ್ರಾಹ್ಮಣರಿಗೆ ಸುಳ್ಳಾಗಿ ಗೋದಾನ ಮಾಡಿದುದರಿಂದ ಕೃಕಲಾಸ (ಓತಿಕೇತ) ಜನ್ಮವನ್ನು ಪಡೆದನು (ಕೆಲವೊಮ್ಮೆ ಸಣ್ಣ ಪಾಪವೂ ಸಹ ದೊಡ್ಡ ಪುಣ್ಯವನ್ನು ನಾಶಮಾಡುತ್ತದೆ).

ಧುಂಧುಮಾರಶ್ಚ ರಾಜರ್ಷಿಃ ಸತ್ರೇಷ್ವೇವ ಜರಾಂ ಗತಃ ।
ಪ್ರೀತಿದಾಯಂ ಪರಿತ್ಯಜ್ಯ ಸುಷ್ಟಾಪ ಸ ಗಿರಿವ್ರಜೇ ॥೪೦॥

ಧುಂಧುಮಾರನೆಂಬ ರಾಜರ್ಷಿಯು ಸತ್ರಯಾಗಗಳಲ್ಲಿಯೇ ಜೀವನವನ್ನು ಕಳೆದು ಮುಪ್ಪನ್ನು ಹೊಂದಿದನು. ದೇವತೆಗಳು ಕೊಟ್ಟ ಸೌಭಾಗ್ಯವನ್ನು ಪರಿತ್ಯಜಿಸಿ ಅವನು ಪರ್ವತದ ತಪ್ಪಲಿನಲ್ಲಿ ಮಲಗಿದನು (ಅಂತಹದೂ ಒಂದು ಪುಣ್ಯಕರ್ಮ).

ಪಾಂಡವಾನಾಂ ಹೃತಂ ರಾಜ್ಯಂ ಧಾರ್ತರಾಷ್ಟ್ರೈರ್ಮಹಾಬಲೈಃ ।
ಪುನಃ ಪ್ರತ್ಯಾಹೃತಂ ಚೈವ ನ ದೈವಾದ್ ಭುಜಸಂಶ್ರಯಾತ್ ॥೪೧॥

ಮಹಾಬಲರಾದ ದುರ್ಯೋಧನಾದಿಗಳು ಪಾಂಡವರ ರಾಜ್ಯವನ್ನು ಅಪಹರಿಸಿದರು. ಪಾಂಡವರು ತಮ್ಮ ಭುಜಬಲದಿಂದಲೇ ಅದನ್ನು ಪುನಃ ಸಂಪಾದಿಸಿದರು. ಪ್ರಯತ್ನರಹಿತವಾದ ದೈವಬಲದಿಂದಲ್ಲ.

ತಪೋನಿಯಮಸಂಯುಕ್ತಾ ಮುನಯಃ ಶಂಸಿತವ್ರತಾಃ ।
ಕಿಂ ತೇ ದೈವಬಲಾಚ್ಚಾಪಮುತ್ಸೃಜಂತೇ ನ ಕರ್ಮಣಾ ॥೪೨॥

ತಪೋನಿಯಮಗಳಿಂದ ಕೂಡಿದವರೂ, ಶ್ರೇಷ್ಠ ವ್ರತಗಳನ್ನು ಆಚರಿಸುವವರೂ ಆದ ಋಷಿಗಳು ದೈವಬಲದಿಂದ ಶಾಪವನ್ನು ಕೊಡುತ್ತಾರೆಯೋ ಅಥವಾ ತಾವು ಆಚರಿಸಿದ ತಪಸ್ಸಿನ ಬಲದಿಂದ ಶಾಪವನ್ನು ಕೊಡುತ್ತಾರೆಯೋ? (ತಾವು ಆಚರಿಸಿದ ತಪಸ್ಸಿನ ಬಲದಿಂದಲೇ ಶಾಪವನ್ನು ಕೊಡುತ್ತಾರೆ).

ಪಾಪಮುತ್ಸೃಜತೇ ಲೋಕೇ ಸರ್ವಂ ಪ್ರಾಪ್ಯ ಸುದುರ್ಲಭಮ್ ।
ಲೋಭಮೋಹಸಮಾಪನ್ನಂ ನ ದೈವಂ ತ್ರಾಯತೇ ನರಮ್ ॥೪೩॥

ಸತ್ಪುರುಷನಾದವನು ದುರ್ಲಭವಾದ ಎಲ್ಲವನ್ನೂ ಪಡೆದು ಲೋಕದಲ್ಲಿ ಪಾಪವನ್ನು ತ್ಯಜಿಸಿ, ಸತ್ಕರ್ಮಗಳನ್ನು ಆಚರಿಸುತ್ತಾನೆ. ಲೋಭ-ಮೋಹಗಳಿಗೆ ವಶನಾದ ಮನುಷ್ಯನನ್ನು ಯಾವ ದೈವವೂ ಕಾಪಾಡುವುದಿಲ್ಲ.

ಯಥಾऽऽಗ್ನೇಃ ಪವನೋದ್ಧೂತಃ ಸುಸೂಕ್ಷ್ಮೋऽಪಿ ಮಹಾನ್ ಭವೇತ್ ।
ತಥಾ ಕರ್ಮಸಮಾಯುಕ್ತಂ ದೈವಂ ಸಾಧು ವಿವರ್ಧತೇ ॥೪೪॥

ಹೇಗೆ ಅಗ್ನಿಯ ಕಿಡಿಯು ಸಣ್ಣದಾಗಿದ್ದರೂ ಗಾಳಿಯಿಂದ ಎಬ್ಬಿಸಲ್ಪಟ್ಟು ದೊಡ್ಡದಾಗಿ ಬೆಳೆಯುತ್ತದೆಯೋ ಅದರಂತೆ ಕರ್ಮದ ಫಲದಿಂದ ಕೂಡಿದ ದೈವವು ಚೆನ್ನಾಗಿ ಅಭಿವೃದ್ಧಿಯನ್ನು ಹೊಂದುತ್ತದೆ.

ಯಥಾ ತೈಲಕ್ಷಯಾದ್ ದೀಪಃ ಪ್ರಮ್ಲಾನಿಮುಪಗಚ್ಛತಿ ।
ತಥಾ ಕರ್ಮಕ್ಷಯಾದ್ ದೈವಂ ಪ್ರಮ್ಲಾನಿಮುಪಗಚ್ಛತಿ ॥೪೫॥

ಎಣ್ಣೆಯು ಮುಗಿದರೆ ದೀಪವು ಆರಿ ಹೋಗುವಂತೆ ಕರ್ಮವು ಕ್ಷಯವನ್ನು ಹೊಂದಿದರೆ ದೈವವೂ ಕೂಡ ಶಕ್ತಿಹೀನವಾಗುತ್ತದೆ.

ವಿಪುಲಮಪಿ ಧನೌಘಂ ಪ್ರಾಪ್ಯ ಭೋಗಾನ್ ಸ್ತ್ರಿಯೋ ವಾ
ಪುರುಷ ಇಹ ನ ಶಕ್ತಃ ಕರ್ಮಹೀನೋ ಹಿ ಭೋಕ್ತುಮ್ ।
ಸುವಿಹಿತಮಪಿ ಚಾರ್ಥಂ ದೈವತೈ ರಕ್ಷ್ಯಮಾಣಂ
ಪುರುಷ ಇಹ ಮಹಾತ್ಮಾ ಪ್ರಾಪ್ನುತೇ ನಿತ್ಯಯುಕ್ತಃ ॥೪೬॥

ಸತ್ಕರ್ಮಹೀನನಾದ ಪುರುಷನು ಯಾವುದೋ ಪೂರ್ವಪುಣ್ಯ ಕಾರಣದಿಂದ ವಿಪುಲವಾದ ಧನರಾಶಿಯನ್ನೂ, ಭೋಗಸಾಮಗ್ರಿಗಳನ್ನೂ, ಸ್ತ್ರೀಯರನ್ನೂ ಪಡೆದರೂ ಅದನ್ನು ಭೋಗಿಸಲು ಸಮರ್ಥನಾಗುವುದಿಲ್ಲ. ಮಹಾತ್ಮನಾದ, ನಿತ್ಯವೂ ಎಚ್ಚರಿಕೆಯಿಂದ ಸತ್ಕರ್ಮಗಳನ್ನು ಮಾಡುವ ಪುರುಷನು ದೇವತೆಗಳಿಂದ ರಕ್ಷಿಸಲ್ಪಟ್ಟು ಹೂತಿಟ್ಟಿದ್ದರೂ ಸಹ ಅಂತಹ ಐಶ್ವರ್ಯವನ್ನು ಪಡೆಯುತ್ತಾನೆ.

ವ್ಯಯಗುಣಮಪಿ ಸಾಧುಂ ಕರ್ಮಣಾ ಸಂಶ್ರಯಂತೇ
ಭವತಿ ಮನುಜಲೋಕಾದ್ ದೈವಲೋಕೋ ವಿಶಿಷ್ಟಃ ।
ಬಹುತರಸುಸಮೃದ್ಧ್ಯಾ ಮಾನುಷಾಣಾಂ ಗೃಹಾಣಿ
ಪಿತೃವನಭವನಾಭಂ ದೃಶ್ಯತೇ ಚಾಮರಾಣಾಮ್ ॥೪೭॥

ಸತ್ಪಾತ್ರರಲ್ಲಿ ದಾನ ಮಾಡುವ ಪುರುಷನನ್ನು ಅವನು ಮಾಡುವ ಕರ್ಮಗಳ ಕಾರಣದಿಂದಾಗಿ ದೇವತೆಗಳು ಆಶ್ರಯಿಸುತ್ತಾರೆ. ಅವನಿಗೆ ಮನುಷ್ಯಲೋಕಕ್ಕಿಂತ ಶ್ರೇಷ್ಠವಾದ ದೇವಲೋಕದ ಸೌಭಾಗ್ಯವು ಉಂಟಾಗುತ್ತದೆ. ದಾನಹೀನನಾದ ಮನುಷ್ಯನ ಗೃಹವು ಬಹುತರವಾದ ಸಮೃದ್ಧಿಯಿಂದ ಕೂಡಿದ್ದರೂ ದೇವತೆಗಳ ದೃಷ್ಟಿಯಲ್ಲಿ ಅದು ಶ್ಮಶಾನದಲ್ಲಿರುವ ಮನೆಯಂತೆ.

ನ ಚ ಫಲತಿ ವಿಕರ್ಮಾ ಜೀವಲೋಕೇ ನ ದೈವಂ
ವ್ಯಪನಯತಿ ವಿಮಾರ್ಗಂ ನಾಸ್ತಿ ದೈವೇ ಪ್ರಭುತ್ವಮ್ ।
ಗುರುಮಿವ ಕೃತಮಗ್ರ್ಯಂ ಕರ್ಮ ಸಂಯಾತಿ ದೈವಂ
ನಯತಿ ಪುರುಷಕಾರಃ ಸಂಚಿತಸ್ತತ್ರ ತತ್ರ ॥೪೮॥

ಸತ್ಕರ್ಮವನ್ನು ಮಾಡದವನು ಈ ಜೀವಲೋಕದಲ್ಲಿ ಯಾವ ಫಲವನ್ನೂ ಹೊಂದುವುದಿಲ್ಲ. ದೈವವೂ ಅವನಿಗೆ ಯಾವ ಫಲವನ್ನೂ ಕೊಡುವುದಿಲ್ಲ. ದುರ್ಮಾರ್ಗದಲ್ಲಿ ಹೋಗುವ ಅವನನ್ನು ದೈವವು ತಡೆಯುವುದಿಲ್ಲ. ದೈವವು ಸ್ವತಂತ್ರವಾಗಿ ಏನನ್ನೂ ಮಾಡುವುದಿಲ್ಲ. ಗುರುವನ್ನು ಮುಂದೆ ಮಾಡಿಕೊಂಡು ಶಿಷ್ಯನು

ನಡೆದಂತೆ ದೈವವು ಪುರುಷನು ಮಾಡಿದ ಕರ್ಮವನ್ನೇ ಮುಂದೆ ಮಾಡಿಕೊಂಡು ಫಲವನ್ನು ಕೊಡುತ್ತದೆ. ಆ ಪುರುಷಜ ಪ್ರಯತ್ನವು ಅದಕ್ಕೆ ಅನುಗುಣವಾಗಿ ಅಲ್ಲಲ್ಲಿಗೆ ಪುರುಷನನ್ನು ಕೊಂಡೊಯ್ಯುತ್ತದೆ.

ಏತತ್ ತೇ ಸರ್ವಮಾಖ್ಯಾತಂ ಮಯಾ ವೈ ಮುನಿಸತ್ತಮ ।
ಫಲಂ ಪುರುಷಕಾರಸ್ಯ ಸದಾ ಸಂದೃಶ್ಯ ತತ್ತ್ವತಃ ॥೪೯॥

ಎಲೈ ಮುನಿಶ್ರೇಷ್ಠರಾದ ವಸಿಷ್ಠರೇ, ನಾನು ಪುರುಷಪ್ರಯತ್ನದ ಫಲವನ್ನು ಯಾವಾಗಲೂ ಯಥಾರ್ಥವಾಗಿ ನೋಡಿ ಎಲ್ಲ ವಿಷಯವನ್ನೂ ನಿಮಗೆ ಹೇಳಿದ್ದೇನೆ.

ಅಭ್ಯುತ್ಥಾನೇನ ದೈವಸ್ಯ ಸಮಾರಬ್ಧೇನ ಕೇನಚಿತ್ ।
ವಿಧಿನಾ ಕರ್ಮಣಾ ಚೈವ ಸ್ವರ್ಗಮಾರ್ಗಮವಾಪ್ನುಯಾತ್ ॥೫೦॥

ದೈವದ ಅನುಗ್ರಹದಿಂದ ವಿಧಿಪ್ರಕಾರವಾಗಿ ಚೆನ್ನಾಗಿ ಆರಂಭಿಸಿ, ಪೂರೈಸಿದ ಕರ್ಮದಿಂದ ಮನುಷ್ಯನು ಸ್ವರ್ಗಮಾರ್ಗವನ್ನು ಹೊಂದುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಅನುಶಾಸನಪರ್ವಣಿ ದಾನಧರ್ಮೇ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಏಳನೆಯ ಅಧ್ಯಾಯ

ದಯಾಗುಣದ ಮಹಿಮೆ - ಇಂದ್ರ-ಶುಕರ ಸಂವಾದ

ಯುಧಿಷ್ಠಿರಃ

ಆನೃಶಂಸ್ಯಸ್ಯ ಧರ್ಮಸ್ಯ ಗುಣಾನ್ ಭಕ್ತಜನಸ್ಯ ಚ ।
ಶ್ರೋತುಮಿಚ್ಛಾಮಿ ಕಾರ್ತ್ಸ್ನ್ಯೇನ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ದಯಾರೂಪವಾದ ಧರ್ಮದ ಗುಣಗಳನ್ನು ಮತ್ತು ಭಕ್ತಿ (ನಿಷ್ಠೆ)ಯ ಗುಣಗಳನ್ನು ಸಮಗ್ರವಾಗಿ ಕೇಳಲು ಬಯಸುತ್ತೇನೆ. ಅದನ್ನು ನನಗೆ ಹೇಳು.

ಭೀಷ್ಮಃ

ವಿಷಯೇ ಕಾಶಿರಾಜಸ್ಯ ಗ್ರಾಮಾನ್ನಿಷ್ಕ್ರಮ್ಯ ಲುಬ್ಧಕಃ ।
ಸವಿಷಂ ಕಾಂಡಮಾದಾಯ ಮೃಗಯಾಮಾಸ ವೈ ಮೃಗಮ್ ॥೨॥

ಭೀಷ್ಮ- ಕಾಶಿರಾಜನ ರಾಜ್ಯದಲ್ಲಿ ಒಬ್ಬ ಬೇಡನು ತನ್ನ ಗ್ರಾಮದಿಂದ ಹೊರಟು ವಿಷಪೂರಿತವಾದ ಬಾಣವನ್ನು ತೆಗೆದುಕೊಂಡು ಮೃಗಗಳನ್ನು ಹುಡುಕುತ್ತಿದ್ದನು.

ತತ್ರ ಚಾಮಿಷಲುಬ್ಧೇನ ಲುಬ್ಧಕೇನ ಮಹಾವನೇ ।
ಅವಿದೂರೇ ಮೃಗಂ ದೃಷ್ಟ್ವಾ ಬಾಣಃ ಪ್ರತಿಸಮಾಹಿತಃ ॥೩॥

ಮಾಂಸದ ಆಸೆಯುಳ್ಳ ಆ ಬೇಡನು ಆ ಕಾಡಿನಲ್ಲಿ ಅಲ್ಪದೂರದಲ್ಲಿಯೇ ಒಂದು ಮೃಗವನ್ನು ನೋಡಿ ಬಾಣವನ್ನು ಹೂಡಿದನು.

ತೇನ ದುರ್ವಾರಿತಾಸ್ತ್ರೇಣ ನಿಮಿತ್ತಚಪಲೇಷುಣಾ ।
ಮಹಾವನತರುರ್ವಿದ್ಧೋ ಮೃಗಂ ತತ್ರ ಜಿಘಾಂಸತಾ ॥೪॥

ಮೃಗವನ್ನು ಹೊಡೆಯಲು ಇಚ್ಛಿಸಿದ, ಗುರಿಯನ್ನು ತಪ್ಪದ ಆ ಬೇಡನಿಂದ ಪ್ರಯೋಗಿಸಲ್ಪಟ್ಟ ಆ ಬಾಣವು ಸ್ವಲ್ಪ ಚಲಿಸಿ ಒಂದು ದೊಡ್ಡ ವೃಕ್ಷಕ್ಕೆ ಹೊಡೆಯಿತು.

ಸ ತೀಕ್ಷ್ಣವಿಷದಿಗ್ಧೇನ ಶರೇಣಾತಿಬಲಾತ್ಕೃತಃ ।
ಉತ್ಸೃಜ್ಯ ಫಲಪತ್ರಾಣಿ ಪಾದಪಃ ಶೋಷಮಾಗತಃ ॥೫॥

ತೀಕ್ಷ್ಣವಾದ ವಿಷದಿಂದ ಲೇಪಿಸಲ್ಪಟ್ಟ ಆ ಬಾಣದಿಂದ ಬಲವಾಗಿ ಹೊಡೆಯಲ್ಪಟ್ಟ ಆ ವೃಕ್ಷವು ಎಲೆಗಳನ್ನು, ಹಣ್ಣುಗಳನ್ನು ಉದುರಿಸಿ ಒಣಗಿ ಹೋಯಿತು.

ತಸ್ಮಿನ್ ವೃಕ್ಷೇ ತಥಾಭೂತೇ ಕೋಟರೇಷು ಚಿರೋಷಿತಃ ।
ನ ಜಹಾತಿ ಶುಕೋ ವಾಸಂ ತಸ್ಯ ಭಕ್ತ್ಯಾ ವನಸ್ಪತೇಃ ॥೬॥

ಆ ವೃಕ್ಷದ ಮೇಲಿನ ಪ್ರೀತಿಯಿಂದ ಆ ವೃಕ್ಷದ ಪೊಟರೆಗಳಲ್ಲಿ ಬಹುಕಾಲದಿಂದ ವಾಸವಾಗಿದ್ದ ಒಂದು ಗಿಣಿಯು ಆ ವೃಕ್ಷವು ಒಣಗಿ ಹೋದರೂ ಅದರಲ್ಲಿ ವಾಸ ಮಾಡುವುದನ್ನು ಬಿಡಲಿಲ್ಲ.

ನಿಷ್ಚಚಾರೋ ನಿರಾಹಾರೋ ಗ್ಲಾನಃ ಶಿಥಿಲವಾಗಪಿ ।
ಕೃತಜ್ಞಃ ಸಹ ವೃಕ್ಷೇಣ ಧರ್ಮಾತ್ಮಾ ಸ ವ್ಯಶುಷ್ಯತ ॥೭॥

ಚಲಿಸುವುದಕ್ಕೆ ಶಕ್ತಿಯಿಲ್ಲದೆ, ಆಹಾರವಿಲ್ಲದೆ, ಹುದುಗಿಹೋಗಿ ಶಿಥಿಲವಾದ ಸ್ವರದಿಂದ ಕೂಡಿದ್ದರೂ ಧರ್ಮಾತ್ಮವೂ ಮತ್ತು ಕೃತಜ್ಞವೂ ಆದ ಗಿಣಿಯು ಆ ವೃಕ್ಷದ ಜೊತೆಯಲ್ಲಿಯೇ ಒಣಗಲು ಪ್ರಾರಂಭಿಸಿತು.

ತಮುದಾರಂ ಮಹಾಸತ್ತ್ವಮತಿಮಾನುಷಚೇಷ್ಟಿತಮ್ ।
ಸಮದುಃಖಸುಖಂ ಜ್ಞಾತ್ವಾ ವಿಸ್ಮಿತಃ ಪಾಕಶಾಸನಃ ॥೮॥

ಮನುಷ್ಯರನ್ನು ಮೀರಿದ ಚೇಷ್ಟೆಯುಳ್ಳ, ಮಹಾಧೈರ್ಯಶಾಲಿಯಾದ, ಔದಾರ್ಯದಿಂದ ಕೂಡಿದ ವೃಕ್ಷದ ಜೊತೆಯಲ್ಲಿ ಸುಖ-ದುಃಖಗಳನ್ನು ಸಮವಾಗಿ ಹಂಚಿಕೊಂಡ ಆ ಗಿಣಿಯನ್ನು ನೋಡಿ ಇಂದ್ರನು ವಿಸ್ಮಿತನಾದನು.

ತತಶ್ಚಿಂತಾಮುಪಗತಃ ಶಕ್ರಃ ಕಥಮಯಂ ದ್ವಿಜಃ ।
ತಿರ್ಯಗ್ಯೋನಾವಸಂಭಾವ್ಯಮಾನೃಶಂಸ್ಯಂ ಸಮಾಸ್ಥಿತಃ ॥೯॥

ಆಗ ಇಂದ್ರನು ತಿರ್ಯಗ್ಯೋನಿಯಲ್ಲಿ ಜನಿಸಿದ್ದರೂ ಅಲ್ಲಿ ಅಸಂಭಾವಿತವಾದ ಇಂತಹ ದಯೆಯನ್ನು ಈ ಪಕ್ಷಿಯು ಹೇಗೆ ಹೊಂದಿದೆ ಎಂದು ಚಿಂತಿಸಿದನು.

ಅಥ ವಾ ನಾತ್ರ ಚಿತ್ರಂ ಹೀತ್ಯಭವದ್ ವಾಸವಸ್ಯ ತು ।
ಪ್ರಾಣಿನಾಮಪಿ ಸರ್ವೇಷಾಂ ಸರ್ವಂ ಸರ್ವತ್ರ ದೃಶ್ಯತೇ ॥೧೦॥

ಅಥವಾ ಇದರಲ್ಲಿ ಆಶ್ಚರ್ಯವಾದುದೇನೂ ಇಲ್ಲ. ಎಲ್ಲ ಪ್ರಾಣಿಗಳಿಗೂ, ಎಲ್ಲ ಕಡೆಗಳಲ್ಲಿಯೂ, ಎಲ್ಲ ವಿಧವಾದ ಭಾವನೆಗಳೂ ಇರುತ್ತವೆ ಎಂದು ಇಂದ್ರನು ಚಿಂತಿಸಿದನು.

ತತೋ ಬ್ರಾಹ್ಮಣವೇಷೇಣ ಮಾನುಷಂ ರೂಪಮಾಸ್ಥಿತಃ ।
ಅವತೀರ್ಯ ಮಹೀಂ ಶಕ್ರಸ್ತಂ ಪಕ್ಷಿಣಮುವಾಚ ಹ ॥೧೧॥

ಅನಂತರ ಇಂದ್ರನು ಮನುಷ್ಯರೂಪವನ್ನು ಧರಿಸಿ ಬ್ರಾಹ್ಮಣ ವೇಷವನ್ನು ಹೊಂದಿ ಸ್ವರ್ಗದಿಂದ ಭೂಮಿಗೆ ಇಳಿದು ಆ ಪಕ್ಷಿಯನ್ನು ಕುರಿತು ಮಾತನಾಡಿದನು.

ಶುಕ ಭೋಃ ಪಕ್ಷಿಣಾಂ ಶ್ರೇಷ್ಠ ದಾಕ್ಷೇಯೀ ಸುಪ್ರಜಾಸ್ತ್ವಯಾ ।
ಪೃಚ್ಛೇ ತ್ವಾ ಶುಷ್ಕಮೇತಂ ವೈ ಕಸ್ಮಾನ್ನ ತ್ಯಜಸಿ ದ್ರುಮಮ್ ॥೧೨॥

ಎಲೈ ಗಿಣಿಯೇ, ಪಕ್ಷಿಗಳಲ್ಲಿ ಶ್ರೇಷ್ಠನಾದವನೇ, ದಕ್ಷಕುಮಾರಿಯಾದ ನಿನ್ನ ತಾಯಿಯು ನಿನ್ನಂತಹ ಪ್ರಜೆಯನ್ನು ಹೊಂದಿ ಸುಪ್ರಜಳಾಗಿದ್ದಾಳೆ. ನೀನು ಒಣಗಿ ಹೋದ ಈ ವೃಕ್ಷವನ್ನು ಏಕೆ ಬಿಡುತ್ತಿಲ್ಲ ಎಂದು ನಿನ್ನನ್ನು ಕೇಳುತ್ತಿದ್ದೇನೆ.

ಅಥ ಪೃಷ್ಟಃ ಶುಕಃ ಪ್ರಾಹ ಮೂರ್ಧ್ನಾ ಸಮಭಿವಾದ್ಯ ತಮ್ ।
ಸ್ವಾಗತಂ ದೇವರಾಜಾಯ ವಿಜ್ಞಾತಸ್ತಪಸಾ ಮಯಾ ॥೧೩॥

ಹೀಗೆ ಕೇಳಲ್ಪಟ್ಟ ಆ ಗಿಣಿಯು ಅವನಿಗೆ ಶಿರಸಾ ನಮಸ್ಕಾರವನ್ನು ಮಾಡಿ ದೇವರಾಜನಾದ ನಿನಗೆ ಸ್ವಾಗತ. ಇದನ್ನು ನಾನು ನನ್ನ ತಪಸ್ಸಿನ ಬಲದಿಂದ ತಿಳಿದಿದ್ದೇನೆ ಎಂದು ಹೇಳಿತು.

ತತೋ ದಶಶತಾಕ್ಷೇಣ ಸಾಧು ಸಾಧ್ವಿತಿ ಭಾಷಿತಮ್ ।
ಅಹೋ ವಿಜ್ಞಾನಮಿತ್ಯೇವಂ ತಪಸಾ ಪೂಜಿತಸ್ತತಃ ॥೧೪॥

ಆಗ ಸಹಸ್ರಾಕ್ಷನಾದ ಇಂದ್ರನು ಸಾಧು-ಸಾಧು ಎಂದು ಹೇಳಿದನು. ವಿಜ್ಞಾನಬಲವು ಎಂತಹದು ಎಂದು ಚಿಂತಿಸಿದನು. ಅವನು ತಪೋಯುಕ್ತವಾದ ಆ ಗಿಣಿಯಿಂದ ಪೂಜಿಸಲ್ಪಟ್ಟನು.

ತಮೇವಂ ಶುಭಕರ್ಮಾಣಂ ಶುಕಂ ಪರಮಧಾರ್ಮಿಕಮ್ ।
ವಿಜಾನನ್ನಪಿ ತಾಂ ಪ್ರಾಪ್ತಿಂ ಪಪ್ರಚ್ಛ ಬಲಸೂದನಃ ॥೧೫॥

ಬಲಸೂದನನಾದ ಇಂದ್ರನು ಆ ಗಿಣಿಗೆ ಅಂತಹ ಜ್ಞಾನವು ಪ್ರಾಪ್ತವಾದ ಪ್ರಕಾರವನ್ನು ತಿಳಿದಿದ್ದರೂ ಶುಭಕರ್ಮವುಳ್ಳ, ಪರಮ ಧಾರ್ಮಿಕವಾದ ಆ ಗಿಣಿಯನ್ನು ಕುರಿತು ಪ್ರಶ್ನೆ ಮಾಡಿದನು.

ನಿಷ್ಪತ್ರಮಫಲಂ ಶುಷ್ಕಮಶರಣ್ಯಂ ಪತತ್ರಿಣಾಮ್ ।
ಕಿಮರ್ಥಂ ಸೇವಸೇ ವೃಕ್ಷಂ ಯದಾ ಮಹದಿದಂ ವನಮ್ ॥೧೬॥

ಈ ವೃಕ್ಷದಲ್ಲಿ ಪತ್ರವೂ, ಫಲವೂ ಇಲ್ಲ, ಒಣಗಿ ಹೋಗಿದೆ. ಪಕ್ಷಿಗಳ ವಾಸಕ್ಕೆ

ಯೋಗ್ಯವಾಗಿಲ್ಲ. ಈ ವನವು ದೊಡ್ಡದಾಗಿದೆ. ಹೀಗಿರುವಾಗ ಈ ವೃಕ್ಷವನ್ನೇ ಏಕೆ ಸೇವಿಸುತ್ತಿದ್ದೀಯೆ?

ಅನ್ಯೇಽಪಿ ಬಹವೋ ವೃಕ್ಷಾಃ ಪತ್ರಸಂಛನ್ನಕೋಟರಾಃ ।
ಶುಭಾಃ ಪರ್ಯಾಪ್ತಸಂಚಾರಾ ವಿದ್ಯಂತೇಽಸ್ಮಿನ್ ಮಹಾವನೇ ॥೧೭॥

ಎಲೆಗಳಿಂದ ಮರೆಮಾಡಲ್ಪಟ್ಟ ಪೊಟರೆಗಳುಳ್ಳ ಇನ್ನೂ ಅನೇಕ ಶುಭವೃಕ್ಷಗಳು ಈ ಮಹಾವನದಲ್ಲಿ ಇವೆ. ಅವುಗಳಲ್ಲಿ ಸಂಚಾರ ಮಾಡಲು ಸಾಕಷ್ಟು ಅವಕಾಶವಿದೆ.

ಗತಾಯುಷಮಸಾಮರ್ಥ್ಯಂ ಕ್ಷೀಣಸಾರಂ ಹತಶ್ರಿಯಮ್ ।
ವಿಮೃಶ್ಯ ಪ್ರಜ್ಞಯಾ ಧೀರ ಜಹೀಮಂ ಹ್ಯಸ್ಥಿರಂ ದ್ರುಮಮ್ ॥೧೮॥

ಎಲೈ ಧೀರನೇ, ಆಯುಸ್ಸನ್ನು ಕಳೆದುಕೊಂಡು, ಬಲವನ್ನೂ, ಕಾಂತಿಯನ್ನೂ ಕಳೆದುಕೊಂಡು ಈ ಮರವು ಸಾಮರ್ಥ್ಯಹೀನವಾಗಿರುವುದನ್ನು ನಿನ್ನ ಬುದ್ಧಿಯಿಂದ ವಿಮರ್ಶೆ ಮಾಡಿ, ಅಲುಗಾಡುತ್ತಿರುವ ಈ ಮರವನ್ನು ಪರಿತ್ಯಜಿಸು (ಎಂದು ಹೇಳಿದನು).

ತದುಪಶ್ರುತ್ಯ ಧರ್ಮಾತ್ಮಾ ಶುಕಃ ಶಕ್ರೇಣ ಭಾಷಿತಮ್ ।
ಸುದೀರ್ಘಮಭಿನಿಃಶ್ವಸ್ಯ ದೀನೋ ವಾಕ್ಯಮುವಾಚ ಹ ॥೧೯॥

ಇಂದ್ರನ ಮಾತುಗಳನ್ನು ಕೇಳಿದ, ಧರ್ಮಾತ್ಮವಾದ ಆ ಗಿಣಿಯು ದೀರ್ಘವಾದ ನಿಟ್ಟುಸಿರನ್ನು ಬಿಟ್ಟು, ದೈನ್ಯವನ್ನು ಹೊಂದಿ ಈ ಮಾತನ್ನಾಡಿತಷ್ಟೆ.

ಅನತಿಕ್ರಮಣೀಯಾನಿ ದೈವತಾನಿ ಶಚೀಪತೇ ।
ಯತ್ರಾಭವತ್ ತವ ಪ್ರಶ್ನಸ್ತನ್ನಿಬೋಧ ಸುರಾಧಿಪ ॥೨೦॥

ಎಲೈ ಶಚೀಪತಿಯೇ, ದೇವತೆಗಳ ಮಾತುಗಳನ್ನು ಉಲ್ಲಂಘಿಸಬಾರದು. ಎಲೈ ಸುರಾಧಿಪನೇ, ನೀನು ಯಾವ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿದೆಯೋ ಅದಕ್ಕೆ ಉತ್ತರವನ್ನು ಕೇಳು.

ಅಸ್ಮಿನ್ನಹಂ ದ್ರುಮೇ ಜಾತಃ ಸಾಧುಭಿಶ್ಚ ಗುಣೈರ್ಯುತಃ ।
ಬಾಲಭಾವೇ ಚ ಸಂಗುಪ್ತಃ ಶತ್ರುಭಿಶ್ಚ ನ ಧರ್ಷಿತಃ ॥೨೧॥

ನಾನು ಈ ವೃಕ್ಷದಲ್ಲೇ ಜನಿಸಿದೆ. ಅನೇಕ ಸದ್ಗುಣಗಳನ್ನು ಸಂಪಾದಿಸಿದೆ. ನಾನು ಚಿಕ್ಕದಿದ್ದಾಗಿನಿಂದ ಈ ವೃಕ್ಷವು ನನಗೆ ರಕ್ಷಣೆಯನ್ನು ಕೊಟ್ಟಿದೆ. ಆದ್ದರಿಂದ ನಾನು ಶತ್ರುಗಳಿಂದ ಘಾಸಿಗೊಳಿಸಲ್ಪಡಲಿಲ್ಲ.

ಕಿಮನುಕ್ರೋಶವೈಫಲ್ಯಮುತ್ಪಾದಯಸಿ ಮೇಽನಘ ।
ಆನೃಶಂಸ್ಯೇಽನುರಕ್ತಸ್ಯ ಭಕ್ತಸ್ಯಾನುಗತಸ್ಯ ಚ ॥೨೨॥

ಎಲೈ ಅನಘನೇ, ನನಗೆ ಏಕೆ ನೀನು ಇಂತಹ ದಯಾಗುಣದ ವೈಫಲ್ಯವನ್ನು ಉಂಟುಮಾಡುತ್ತಿದ್ದೀಯೆ? ನಾನು ದಯಾಗುಣದಲ್ಲಿ ರತನಾದವನು. ಈ ವೃಕ್ಷದಲ್ಲಿ ಪ್ರೀತಿ ಮತ್ತು ನಿಷ್ಠೆಯುಳ್ಳವನು ಮತ್ತು ಈ ವೃಕ್ಷವನ್ನು ಅನುಸರಿಸುವವನು.

ಅನುಕ್ರೋಶೋ ಹಿ ಸಾಧೂನಾಂ ಸುಮಹದ್ಧರ್ಮಲಕ್ಷಣಮ್ ।
ಅನುಕ್ರೋಶಶ್ಚ ಸಾಧೂನಾಂ ಸದಾ ಪ್ರೀತಿಂ ಪ್ರಯಚ್ಛತಿ ॥೨೩॥

ದಯಾಗುಣವು ಸಜ್ಜನರಿಗೆ ದೊಡ್ಡ ಧರ್ಮದ ಲಕ್ಷಣವಾಗಿದೆ. ದಯಾಗುಣವು ಸಜ್ಜನರಿಗೆ ಯಾವಾಗಲೂ ಪ್ರೀತಿಯನ್ನುಂಟು ಮಾಡುತ್ತದೆ.

ತ್ವಮೇವ ದೈವತೈಃ ಸರ್ವೈಃ ಪೃಚ್ಛ್ಯಸೇ ಧರ್ಮಸಂಶಯಾನ್ ।
ಅತಸ್ತ್ವಂ ದೇವ ದೇವಾನಾಮಾಧಿಪತ್ಯೇ ಪ್ರತಿಷ್ಠಿತಃ ॥೨೪॥

ಎಲ್ಲ ದೇವತೆಗಳು ಧರ್ಮಸಂಶಯವುಂಟಾದಾಗ ನಿನ್ನನ್ನೇ ಪ್ರಶ್ನೆ ಮಾಡುತ್ತಾರೆ. ಆ ಕಾರಣದಿಂದ ಎಲೈ ದೇವನೇ, ನೀನು ದೇವತೆಗಳ ಅಧಿಪತಿಯಾಗಿ ಪ್ರತಿಷ್ಠಿತನಾಗಿದ್ದೀಯೆ.

ನಾರ್ಹಸಿ ತ್ವಂ ಸಹಸ್ರಾಕ್ಷ ತ್ಯಾಜಯಿತ್ವೇಹ ಭಕ್ತಿತಃ ।
ಸಮರ್ಥಮುಪಜೀವ್ಯೇಮಂ ತ್ಯಜೇಯಂ ಕಥಮದ್ಯ ವೈ ॥೨೫॥

ಎಲೈ ಸಹಸ್ರಾಕ್ಷನೇ, ಈ ವೃಕ್ಷದಲ್ಲಿ ಭಕ್ತಿಯುಳ್ಳ ನನಗೆ ನೀನು ಇದನ್ನು ಪರಿತ್ಯಾಗ ಮಾಡು ಎಂದು ಹೇಳುವುದು ಸರಿಯಲ್ಲ. ಸಮರ್ಥವಾದ ಈ ವೃಕ್ಷವನ್ನು ಇಷ್ಟು ದಿನ ಉಪಜೀವಿಸಿ ಈ ದಿನ ನಾನು ಹೇಗೆ ತ್ಯಜಿಸಲಿ?

ತಸ್ಯ ವಾಕ್ಯೇನ ಸೌಮ್ಯೇನ ಹರ್ಷಿತಃ ಪಾಕಶಾಸನಃ ।
ಶುಕಂ ಪ್ರೋವಾಚ ಧರ್ಮಾತ್ಮಾSSನೃಶಂಸ್ಯೇನ ತೋಷಿತಃ ॥೨೬॥

ವರಂ ವೃಣೀಷ್ವೇತಿ ತದಾ ಸ ಚ ವವ್ರೇ ವರಂ ಶುಕಃ ।
ಆನೃಶಂಸ್ಯಪರೋ ನಿತ್ಯಂ ತಸ್ಯ ವೃಕ್ಷಸ್ಯ ಸಂಭವಮ್ ॥೨೭॥

ಇಂದ್ರನು ಗಿಣಿಯ ಸೌಮ್ಯವಾದ ಮಾತುಗಳಿಂದ ಸಂತೋಷಗೊಂಡನು. ಅದರ ದಯಾಗುಣದಿಂದ ಸಂತೋಷಗೊಂಡ ಇಂದ್ರನು ಗಿಣಿಯನ್ನು ಕುರಿತು– 'ವರವನ್ನು ಬೇಡು' ಎಂದು ಹೇಳಿದನು. ದಯಾಪರವಾದ ಆ ಗಿಣಿಯು ಆ ವೃಕ್ಷದ ಪುನರುತ್ಪತ್ತಿಯನ್ನು ವರವಾಗಿ ಬೇಡಿತು.

ವಿದಿತ್ವಾ ಚ ದೃಢಾಂ ಭಕ್ತಿಂ ತಾಂ ಶುಕೇ ಶೀಲಸಂಪದಮ್ ।
ಪ್ರೀತಃ ಕ್ಷಿಪ್ರಮಥೋ ವೃಕ್ಷಮಮೃತೇನಾವಸಿಕ್ತವಾನ್ ॥೨೮॥

ಆ ಗಿಣಿಯ ದೃಢವಾದ ಭಕ್ತಿಯನ್ನು ಮತ್ತು ಶೀಲಸಂಪತ್ತನ್ನು ನೋಡಿ ಸಂತೋಷಗೊಂಡ ಇಂದ್ರನು ಶೀಘ್ರವಾಗಿ ಆ ವೃಕ್ಷವನ್ನು ಅಮೃತದಿಂದ ಸಿಂಪಡಿಸಿದನು.

ತತಃ ಫಲಾನಿ ಪತ್ರಾಣಿ ಶಾಖಾಶ್ಚಾಪಿ ಮನೋರಮಾಃ ।
ಶುಕಸ್ಯ ದೃಢಭಕ್ತಿತ್ವಾಚ್ಛ್ರೀಮತ್ತ್ವಂ ಚಾಪ ಸ ದ್ರುಮಃ ॥೨೯॥

ಗಿಣಿಯ ದೃಢಭಕ್ತಿಯ ಕಾರಣದಿಂದ ಆಗ ಆ ವೃಕ್ಷವು ಪತ್ರಗಳನ್ನೂ, ಫಲಗಳನ್ನೂ, ಮನೋಹರವಾದ ಶಾಖೆಗಳನ್ನೂ ಮತ್ತು ಕಾಂತಿಯನ್ನೂ ಪಡೆಯಿತು.

ಶುಕಶ್ಚ ಕರ್ಮಣಾ ತೇನ ಆನೃಶಂಸ್ಯಕೃತೇನ ಹ ।
ಆಯುಷೋSಂತೇ ಮಹಾರಾಜ ಪ್ರಾಪ ಶಕ್ರಸಲೋಕತಾಮ್ ॥೩೦॥

ಎಲೈ ಮಹಾರಾಜನೇ, ಆ ಗಿಣಿಯಾದರೂ ಅಂತಹ ದಯಾಗುಣದಿಂದ ಕೂಡಿದ ಕಾರಣದಿಂದ ತನ್ನ ಆಯುಸ್ಸು ಮುಗಿದ ಮೇಲೆ ಇಂದ್ರಲೋಕಕ್ಕೆ ಹೋಯಿತು.

ಏವಮೇವ ಮನುಷ್ಯೇಂದ್ರ ಭಕ್ತಿಮಂತಂ ಸಮಾಶ್ರಿತಃ ।
ಸರ್ವಾರ್ಥಸಿದ್ಧಿಂ ಲಭತೇ ಶುಕಂ ಪ್ರಾಪ್ಯ ಯಥಾ ದ್ರುಮಃ ॥೩೧॥

ಎಲೈ ಮನುಷ್ಯೇಂದ್ರನೇ, ಹೀಗೆ ಭಕ್ತಿಯುಳ್ಳವನನ್ನು ಆಶ್ರಯಿಸಿದ ವ್ಯಕ್ತಿಯು, ವೃಕ್ಷವು ಗಿಣಿಯಿಂದ ಪಡೆದಂತೆ ಎಲ್ಲ ಅರ್ಥಸಿದ್ಧಿಯನ್ನೂ ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮನುಶಾಸನಪರ್ವಣಿ ದಾನಧರ್ಮೇ ಶುಕವಾಸವಸಂವಾದೇ
ಆನೃಶಂಸ್ಯಶಿಕ್ಷಣಕಥನಂ ನಾಮ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ವಿವಿಧ ಶುಭಕರ್ಮಗಳ ಫಲ ವರ್ಣನೆ

ಯುಧಿಷ್ಠಿರಃ

ಕರ್ಮಣಾಂ ಮೇ ಸಮಸ್ತಾನಾಂ ಶುಭಾನಾಂ ಭರತರ್ಷಭ ।
ಫಲಾನಿ ವದತಾಂ ಶ್ರೇಷ್ಠ ಪ್ರಬ್ರೂಹಿ ಪರಿಪೃಚ್ಛತಃ ॥೧॥

ಯುಧಿಷ್ಠಿರ– ಎಲೈ ಭರತಶ್ರೇಷ್ಠನೇ, ಮಾತನಾಡುವವರಲ್ಲಿ ಶ್ರೇಷ್ಠರಾದವನೇ, ನಿನ್ನನ್ನು ಪ್ರಶ್ನಿಸುತ್ತಿರುವ ನನಗೆ ಎಲ್ಲ ಶುಭಕರ್ಮಗಳ ಫಲಗಳನ್ನು ಚೆನ್ನಾಗಿ ಹೇಳು.

ಭೀಷ್ಮಃ

ರಹಸ್ಯಂ ಯದೃಷೀಣಾಂ ತು ತಚ್ಛೃಣುಷ್ವ ಯುಧಿಷ್ಠಿರ ।
ಯಾ ಗತಿಃ ಪ್ರಾಪ್ಯತೇ ಯೇನ ಪ್ರೇತ್ಯಭಾವೇ ಚಿರೇಪ್ಸಿತಾ ॥೨॥

ಭೀಷ್ಮರು– ಎಲೈ ಯುಧಿಷ್ಠಿರನೇ, ಮರಣವನ್ನು ಹೊಂದಿದ ಮೇಲೆ ಬಹಳ ಕಾಲದಿಂದ ಬಯಸಿದ ಎಂತಹ ಗತಿಯು ಪ್ರಾಪ್ತವಾಗುತ್ತದೆ ಎಂಬ ಋಷಿಗಳಿಗೆ ಸಮ್ಮತವಾದ, ರಹಸ್ಯವಾದ ವಿಷಯವನ್ನು ಕೇಳುವವನಾಗು.

ಯೇನ ಯೇನ ಶರೀರೇಣ ಯದ್ಯತ್ಕರ್ಮ ಕರೋತಿ ಯಃ ।
ತೇನ ತೇನ ಶರೀರೇಣ ತತ್ತತ್ಫಲಮುಪಾಶ್ನುತೇ ॥೩॥

ಯಾವ ಯಾವ ಶರೀರಗಳಿಂದ ಜೀವನು ಯಾವ ಯಾವ ಕರ್ಮಗಳನ್ನು

ಮಾಡುತ್ತಾನೆಯೋ ಅಂತಹದೇ ಶರೀರಗಳಿಂದ ಆಯಾ ಕರ್ಮಗಳ ಫಲವನ್ನು ಅನುಭವಿಸುತ್ತಾನೆ.

ಯಸ್ಯಾಂ ಯಸ್ಯಾಮವಸ್ಥಾಯಾಂ ಯತ್ಕರೋತಿ ಶುಭಾಶುಭಮ್ ।
ತಸ್ಯಾಂ ತಸ್ಯಾಮವಸ್ಥಾಯಾಂ ತತ್ಫಲಂ ಪ್ರತಿಪದ್ಯತೇ ॥೪॥

ಬಾಲ್ಯ, ಕೌಮಾರ ಮೊದಲಾದ ಯಾವ ಯಾವ ಅವಸ್ಥೆಯಲ್ಲಿ ಜೀವನು ಶುಭಾಶುಭಕರ್ಮಗಳನ್ನು ಮಾಡುತ್ತಾನೆಯೋ ಅದೇ ಅವಸ್ಥೆಯಲ್ಲಿ ಅದರ ಫಲವನ್ನು ಹೊಂದುತ್ತಾನೆ.

ನ ನಶ್ಯತಿ ಕೃತಂ ಕರ್ಮ ಸದಾ ಪಂಚೇಂದ್ರಿಯೈರಿಹ ।
ತೇ ಹ್ಯಸ್ಯ ಸಾಕ್ಷಿಣೋ ನಿತ್ಯಂ ಷಷ್ಠ ಆತ್ಮಾ ತಥೈವ ಚ ॥೫॥

ಪಂಚೇಂದ್ರಿಯಗಳಿಂದ ಮಾಡಿದ ಯಾವ ಕರ್ಮವೂ ನಾಶವನ್ನು ಹೊಂದುವುದಿಲ್ಲ. ಪಂಚೇಂದ್ರಿಯಗಳು ಎಲ್ಲ ಕರ್ಮಗಳಿಗೂ ಯಾವಾಗಲೂ ಸಾಕ್ಷಿಗಳಾಗಿವೆ. ಜೀವನೇ ಆರನೆಯ ಸಾಕ್ಷಿ.

ಚಕ್ಷುರ್ದದ್ಯಾನ್ಮನೋ ದದ್ಯಾದ್ ವಾಚಂ ದದ್ಯಾಚ್ಚ ಸೂನೃತಾಮ್ ।
ಅನುವ್ರಜೇದುಪಾಸೀತ ಸ ಯಜ್ಞಃ ಪಂಚದಕ್ಷಿಣಃ ॥೬॥

ಅತಿಥಿಗಳು ಅಥವಾ ದೊಡ್ಡವರು ಬಂದಾಗ ಮೊದಲು ದೃಷ್ಟಿಯನ್ನು ಕೊಡಬೇಕು, ಅನಂತರ ಮನಸ್ಸನ್ನು ಕೊಡಬೇಕು, ಅನಂತರ ಪ್ರೀತಿಪೂರ್ವಕವಾದ ಮಾತುಗಳನ್ನು ಆಡಬೇಕು, ಅವರ ಸಮೀಪಕ್ಕೆ ಹೋಗಬೇಕು, ಒಳಗೆ ಕರೆದು ಅವರ ಸಮೀಪದಲ್ಲಿ ಕುಳಿತುಕೊಳ್ಳಬೇಕು. ಇದೊಂದು ಪಂಚದಕ್ಷಿಣೆಯುಳ್ಳ ಯಜ್ಞ.

ಯೋ ದದ್ಯಾದಪರಿಕ್ಲಿಷ್ಟಮನ್ನಮಧ್ವನಿ ವರ್ತತೇ ।
ಶ್ರಾಂತಾಯಾದೃಷ್ಟಪೂರ್ವಾಯ ತಸ್ಯ ಪುಣ್ಯಫಲಂ ಮಹತ್ ॥೭॥

ಯಾವನು ಹಿಂದೆ ನೋಡದಿರುವ ದಣಿದ ದಾರಿಹೋಕನಿಗೆ ಒಳ್ಳೆಯ ಅನ್ನವನ್ನು ದಾನ ಮಾಡುತ್ತಾನೆಯೋ ಅವನ ಪುಣ್ಯಫಲವು ಬಹಳ ದೊಡ್ಡದು.

ಸ್ಥಂಡಿಲೇಷು ಶಯಾನಾನಾಂ ಗೃಹಾಣಿ ಶಯನಾನಿ ಚ ।
ಚೀರವಲ್ಕಲಸಂವೀತೇ ವಾಸಾಂಸ್ಯಾಭರಣಾನಿ ಚ ॥೮॥

ವಾಹನಾಸನಯಾನಾನಿ ಯೋಗಾತ್ಮನಿ ತಪೋಧನೇ ।
ಅಗ್ನೀನುಪಶಯಾನಸ್ಯ ರಾಜ್ಞಃ ಪೌರುಷಮುಚ್ಯತೇ ॥೯॥

ನೆಲದ ಮೇಲೆ ಮಲಗುವವನಿಗೆ ಗೃಹವನ್ನೂ ಮತ್ತು ಹಾಸಿಗೆಗಳನ್ನೂ, ನಾರುಮಡಿಗಳನ್ನು ಉಡುವವನಿಗೆ ವಸ್ತ್ರಾಭರಣಗಳನ್ನೂ, ಯೋಗನಿಷ್ಠನಾದ ತಪಸ್ವಿಗೆ ವಾಹನ, ಆಸನ, ಯಾನಗಳನ್ನೂ ಕೊಟ್ಟು ಅಗ್ನಿಗಳನ್ನು ಸೇವಿಸುವ ರಾಜನಿಗೆ ಶೌರ್ಯವು ಫಲವೆಂದು ಹೇಳಲ್ಪಡುತ್ತದೆ.

ರಸಾನಾಂ ಪ್ರತಿಸಂಹಾರೇ ಸೌಭಾಗ್ಯಮನುಗಚ್ಛತಿ ।
ಆಮಿಷಪ್ರತಿಸಂಹಾರೇ ಪಶೂನ್ ಪುತ್ರಾಂಶ್ಚ ವಿಂದತಿ ॥೧೦॥

ರಸಪದಾರ್ಥಗಳನ್ನು ದಾನ ಮಾಡುವುದರಿಂದ ಸೌಭಾಗ್ಯ ಉಂಟಾಗುತ್ತದೆ. ಮಾಂಸವನ್ನು ದಾನ ಮಾಡುವುದರಿಂದ ಪಶು-ಪುತ್ರರನ್ನು ಪಡೆಯುತ್ತಾನೆ.

ಅವಾಕ್ ಶಿರಾಸ್ತು ಯೋ ಲಂಬೇದುದವಾಸಂ ಚ ಯೋ ವಸೇತ್ ।
ಸತತಂ ಚೈಕಶಾಯೀ ಯಃ ಸ ಲಭೇತೇಪ್ಸಿತಾಂ ಗತಿಮ್ ॥೧೧॥

ತಲೆಕೆಳಗಾಗಿ ನಿಂತು ತಪಸ್ಸನ್ನು ಮಾಡುವವನೂ, ನೀರಿನಲ್ಲಿ ನಿಂತು ತಪಸ್ಸನ್ನು ಮಾಡುವವನೂ, ಸತತವಾಗಿ ಒಬ್ಬನೇ ಮಲಗುವವನೂ ಆದ ತಪಸ್ವಿಯು ತನಗೆ ಇಷ್ಟವಾದ ಗತಿಯನ್ನು ಪಡೆಯುತ್ತಾನೆ.

ಪಾದ್ಯಮಾಸನಮೇವಾಥ ದೀಪಮನ್ನಂ ಪ್ರತಿಶ್ರಯಮ್ ।
ದದ್ಯಾದತಿಥಿಪೂಜಾರ್ಥಂ ಸ ಯಜ್ಞಃ ಪಂಚದಕ್ಷಿಣಃ ॥೧೨॥

ಅತಿಥಿಯ ಪೂಜೆಯ ಸಲುವಾಗಿ ಪಾದ್ಯ, ಆಸನ, ಅನ್ನ, ದೀಪ ಮತ್ತು ವಿಶ್ರಾಂತಿಗೆ ಸ್ಥಳವನ್ನು ಕೊಡುವುದು ಪಂಚದಕ್ಷಿಣೆಯುಳ್ಳ ಯಜ್ಞವೆಂದು ಕರೆಯಲ್ಪಡುತ್ತದೆ.

ವೀರಾಸನಂ ವೀರಶಯ್ಯಾಂ ವೀರಸ್ಥಾನಮುಪಾಸತಃ ।
ಅಕ್ಷಯಾಸ್ತಸ್ಯ ವೈ ಲೋಕಾಃ ಸರ್ವಕಾಮಗಮಾಸ್ತಥಾ ॥೧೩॥

ವೀರಾಸನ (ಲಕ್ಷ್ಮಣನಂತೆ ಅಲುಗಾಡದೆ ನಿಂತು ಇನ್ನೊಬ್ಬರನ್ನು ರಕ್ಷಿಸುವುದು), ವೀರಶಯ್ಯೆ (ಭೀಷ್ಮರಂತೆ ರಣರಂಗದಲ್ಲಿ ಮಲಗುವುದು), ವೀರಸ್ಥಾನ (ಯುದ್ಧದಿಂದ

ಹಿಮ್ಮೆಟ್ಟದಿರುವುದು) ಇವುಗಳನ್ನು ಪಾಲಿಸುವವನಿಗೆ ಎಲ್ಲ ಕಾಮಗಳಿಂದಲೂ ತುಂಬಿದ ಅಕ್ಷಯಲೋಕಗಳು ಪ್ರಾಪ್ತವಾಗುತ್ತವೆ.

ಧನಂ ಲಭೇತ ದಾನೇನ ಮೌನೇನಾಜ್ಞಾಂ ವಿಶಾಂಪತೇ ।
ಉಪಭೋಗಾಂಶ್ಚ ತಪಸಾ ಜೀವಿತಂ ಬ್ರಹ್ಮಚರ್ಯಯಾ ॥೧೪॥

ಎಲೈ ರಾಜನೇ, ದಾನದಿಂದ ಧನವು ಉಂಟಾಗುತ್ತದೆ. ಮೌನದಿಂದ ಪ್ರಭುಶಕ್ತಿಯು ಉಂಟಾಗುತ್ತದೆ. ತಪಸ್ಸಿನಿಂದ ಉಪಭೋಗಗಳೂ, ಬ್ರಹ್ಮಚರ್ಯದಿಂದ ಜೀವನವೂ ಉಂಟಾಗುತ್ತವೆ.

ರೂಪಮೈಶ್ವರ್ಯಮಾರೋಗ್ಯಮಹಿಂಸಾಫಲಮಶ್ನುತೇ ।
ಫಲಮೂಲಾಶಿನಾಂ ರಾಜ್ಯಂ ಸ್ವರ್ಗಃ ಪರ್ಣಾಶಿನಾಂ ತಥಾ ॥೧೫॥

ಅಹಿಂಸೆಯ ಫಲವಾಗಿ ರೂಪ, ಐಶ್ವರ್ಯ ಮತ್ತು ಆರೋಗ್ಯಗಳನ್ನು ಪಡೆಯುತ್ತಾನೆ. ಫಲ-ಮೂಲಗಳ ಆಹಾರವನ್ನು ಹೊಂದಿದವರಿಗೆ ರಾಜ್ಯವು ದೊರೆಯುತ್ತದೆ. ಎಲೆಗಳನ್ನು ತಿಂದು ತಪಸ್ಸು ಮಾಡುವವರಿಗೆ ಸ್ವರ್ಗವು ಲಭಿಸುತ್ತದೆ.

ಪ್ರಾಯೋಪವೇಶನಾದ್ ರಾಜ್ಯಂ ಸರ್ವತ್ರ ಸುಖಮುಚ್ಯತೇ ।
ಸ್ವರ್ಗಂ ಸತ್ಯೇನ ಲಭತೇ ದೀಕ್ಷಯಾ ಕುಲಮುತ್ತಮಮ್ ॥೧೬॥

ಪ್ರಾಯೋಪವೇಶದಿಂದ ರಾಜ್ಯವೂ, ಸರ್ವತ್ರ ಸುಖವೂ ಉಂಟಾಗುತ್ತದೆ. ಸತ್ಯದಿಂದ ಸ್ವರ್ಗವು ಉಂಟಾಗುತ್ತದೆ. ದೀಕ್ಷೆಯಿಂದ ಉತ್ತಮ ಕುಲಪ್ರಾಪ್ತಿಯಾಗುತ್ತದೆ.

ಗವಾಢ್ಯಃ ಶಾಕದೀಕ್ಷಾಯಾಂ ಸ್ವರ್ಗಗಾಮೀ ತೃಣಾಶನಃ ।
ಸ್ತ್ರಿಯಸ್ತ್ರಿಷವಣಂ ಸ್ನಾತ್ವಾ ವಾಯುಂ ಪೀತ್ವಾ ಕ್ರತುಂ ಲಭೇತ್ ॥೧೭॥

ಕೇವಲ ಶಾಕಗಳನ್ನು (ತರಕಾರಿ) ಸ್ವೀಕರಿಸಿದರೆ ಗೋಸಂಪತ್ತು ಉಂಟಾಗುತ್ತದೆ. ಫಲವನ್ನು ತಿಂದು ತಪಸ್ಸನ್ನು ಮಾಡುವವನು ಸ್ವರ್ಗಕ್ಕೆ ಹೋಗುತ್ತಾನೆ. ಮೂರುಕಾಲಗಳಲ್ಲಿಯೂ ಸ್ನಾನವನ್ನು ಮಾಡುವವನು ಒಳ್ಳೆಯ ಭಾರ್ಯೆಯನ್ನು ಪಡೆಯುತ್ತಾನೆ. ವಾಯುಭಕ್ಷನಾಗಿ ತಪಸ್ಸನ್ನು ಮಾಡುವವನು ಯಜ್ಞಗಳನ್ನು ಆಚರಿಸುತ್ತಾನೆ.

ಸಲಿಲಾಶೀ ಭವೇದ್ಯಸ್ತು ಸದಾಗ್ನಿಃ ಸಂಸೃತೋ ದ್ವಿಜಃ ।
ಮನುಂ ಸಾಧಯತೋ ರಾಜ್ಯಂ ನಾಕಪೃಷ್ಠಮನಾಶಕೇ ॥೧೮॥

ಯಾವ ಬ್ರಾಹ್ಮಣನು ಕೇವಲ ಜಲಪಾನವನ್ನು ಮಾಡಿ, ಅಗ್ನಿಯನ್ನು ಉಪಚರಿಸಿ ಮಂತ್ರಸಿದ್ಧಿಯನ್ನು ಪಡೆಯುತ್ತಾನೆಯೋ ಅವನು ರಾಜ್ಯವನ್ನು ಹೊಂದುತ್ತಾನೆ. ಅನಶನ (ಉಪವಾಸ)ವ್ರತದಿಂದ ತಪಸ್ಸನ್ನು ಮಾಡುವವನು ಸ್ವರ್ಗಲೋಕವನ್ನು ಪಡೆಯುತ್ತಾನೆ.

ಉಪವಾಸಂ ಚ ದೀಕ್ಷಾಂ ಚ ಅಭಿಷೇಕಂ ಚ ಪಾರ್ಥಿವ ।
ಕೃತ್ವಾ ದ್ವಾದಶವರ್ಷಾಣಿ ವೀರಸ್ಥಾನಾದ್ ವಿಶಿಷ್ಯತೇ ॥೧೯॥

ಎಲೈ ರಾಜನೇ, ಉಪವಾಸ, ದೀಕ್ಷೆ ಮತ್ತು ಅಭಿಷೇಕ ಇವುಗಳನ್ನು ಹನ್ನೆರಡು ವರ್ಷಗಳ ಕಾಲ ಮಾಡಿದರೆ ಅದು ವೀರಸ್ಥಾನಕ್ಕಿಂತಲೂ ಶ್ರೇಷ್ಠವಾದುದು.

ಅಧೀತ್ಯ ಸರ್ವವೇದಾನ್ ವೈ ಸದ್ಯೋ ದುಃಖಾತ್ ಪ್ರಮುಚ್ಯತೇ ।
ಮಾನಸಂ ಹಿ ಚರನ್ ಧರ್ಮಂ ಸ್ವರ್ಗಲೋಕಮವಾಪ್ನುತೇ ॥೨೦॥

ಸರ್ವವೇದಗಳನ್ನು ಅಧ್ಯಯನ ಮಾಡಿದರೆ ದುಃಖದ ನಿವೃತ್ತಿಯುಂಟಾಗುತ್ತದೆ. ಮನಸ್ಸಿನಲ್ಲಿಯೇ ಧರ್ಮಾಚರಣೆಯನ್ನು ಮಾಡುವವನು ಸ್ವರ್ಗಲೋಕವನ್ನು ಹೊಂದುತ್ತಾನೆ.

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾಂತಕೋ ರೋಗಸ್ತಾಂ ತೃಷ್ಣಾಂ ತ್ಯಜತಃ ಸುಖಮ್ ॥

ಯಾವ ಆಸೆಯನ್ನು ದುರ್ಜನರು ತ್ಯಜಿಸಲು ಸಾಧ್ಯವಿಲ್ಲವೋ, ಯಾವುದು ಪುರುಷನು ಮುಪ್ಪನ್ನು ಹೊಂದಿದರೂ ಮುಪ್ಪನ್ನು ಹೊಂದುವುದಿಲ್ಲವೋ, ಯಾವುದು ಪ್ರಾಣಾಂತಕವಾದ ರೋಗವೋ ಅಂತಹ ಆಸೆಯನ್ನು ತೊರೆದವನು ಸುಖವನ್ನು ಹೊಂದುತ್ತಾನೆ.

ಯಥಾ ಧೇನುಸಹಸ್ರೇಷು ವತ್ಸೋ ವಿಂದತಿ ಮಾತರಮ್ ।
ಏವಂ ಪೂರ್ವಕೃತಂ ಕರ್ಮ ಕರ್ತಾರಮನುಗಚ್ಛತಿ ॥೨೨॥

ಸಹಸ್ರಧೇನುಗಳ ಮಧ್ಯದಲ್ಲಿ ಕರುವು ಹೇಗೆ ತನ್ನ ತಾಯಿಯ ಸಮೀಪಕ್ಕೇ

ಹೋಗುತ್ತದೆಯೋ ಅದರಂತೆ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮದ ಫಲವು ಕರ್ಮವನ್ನು ಮಾಡಿದವನನ್ನೇ ಬೆನ್ನಟ್ಟಿ ಬರುತ್ತದೆ.

ಅಚೋದ್ಯಮಾನಾನಿ ಯಥಾ ಪುಷ್ಪಾಣಿ ಚ ಫಲಾನಿ ಚ ।
ಸ್ವಕಾಲಂ ನಾತಿವರ್ತಂತೇ ತಥಾ ಕರ್ಮ ಪುರಾಕೃತಮ್ ॥೨೩॥

ವೃಕ್ಷಗಳು ಬೇರೆ ಯಾವ ಪ್ರೇರಣೆ ಇಲ್ಲದಿದ್ದರೂ ಆಯಾ ಕಾಲದಲ್ಲಿ ಪುಷ್ಪ ಫಲಗಳನ್ನು ಕೊಡುವುದನ್ನು ಅತಿಕ್ರಮಿಸದಂತೆ ಪುರುಷನು ಹಿಂದೆ ಮಾಡಿದ ಕರ್ಮವು ಅದಕ್ಕೆ ಅನುಗುಣವಾದ ಫಲಗಳನ್ನು ಕೊಡುವುದನ್ನು ಅತಿಕ್ರಮಿಸುವುದಿಲ್ಲ.

ಜೀರ್ಯಂತಿ ಜೀರ್ಯತಃ ಕೇಶಾ ದಂತಾ ಜೀರ್ಯಂತಿ ಜೀರ್ಯತಃ ।
ಚಕ್ಷುಃಶ್ರೋತ್ರೇ ಚ ಜೀರ್ಯೇತೇ ತೃಷ್ಣೈಕಾ ತು ನ ಜೀರ್ಯತೇ ॥೨೪॥

ಪುರುಷನು ವೃದ್ಧನಾದಂತೆ ಅವನ ಕೇಶಗಳು ಮುಪ್ಪನ್ನು ಹೊಂದುತ್ತವೆ. ದಂತಗಳು ಮುಪ್ಪನ್ನು ಹೊಂದುತ್ತವೆ. ಚಕ್ಷುಃಶ್ರೋತ್ರಗಳು ಮುಪ್ಪನ್ನು ಹೊಂದುತ್ತವೆ. ಆದರೆ ಆಸೆಯು ಮಾತ್ರ ಮುಪ್ಪನ್ನು ಹೊಂದುವುದಿಲ್ಲ.

ಯೇನ ಪ್ರೀಣಾತಿ ಪಿತರಂ ತೇನ ಪ್ರೀತಃ ಪಿತಾಮಹಃ ।
ಪ್ರೀಣಾತಿ ಮಾತರಂ ಯೇನ ಪೃಥಿವೀ ತೇನ ಪೂಜಿತಾ ॥೨೫॥

ಯಾವನು ತಂದೆಯನ್ನು, ತಾಯಿಯನ್ನು ಮತ್ತು ಪಿತಾಮಹನನ್ನು ಸಂತೋಷ ಪಡಿಸುತ್ತಾನೆಯೋ ಅವನು ಭೂಮಿಯನ್ನೇ ಸಂತೋಷಪಡಿಸುತ್ತಾನೆ.

ಯೇನ ಪ್ರೀಣಾತ್ಯುಪಾಧ್ಯಾಯಂ ತೇನ ಸ್ಯಾದ್ ಬ್ರಹ್ಮ ಪೂಜಿತಮ್ ।
ಯಜ್ಞವಚ್ಚರತೇ ಧರ್ಮಂ ಸ್ವರ್ಗಲೋಕಮವಾಪ್ನುಯಾತ್ ।
ಅತಿಥಿಃ ಪೂಜಿತೋ ಯೇನ ತೇನ ದೇವಾಶ್ಚ ಪೂಜಿತಾಃ ॥೨೫॥

ಯಾವನು ಗುರುವನ್ನು ಸಂತೋಷಪಡಿಸುತ್ತಾನೆಯೋ ಅವನು ವೇದವನ್ನೇ ಸಂತೋಷಪಡಿಸುತ್ತಾನೆ. ಯಾವನು ಯಜ್ಞದಂತೆ ಧರ್ಮವನ್ನು ಆಚರಿಸುತ್ತಾನೆಯೋ ಅವನು ಸ್ವರ್ಗಲೋಕವನ್ನು ಹೊಂದುತ್ತಾನೆ. ಅತಿಥಿಗಳನ್ನು ಪೂಜಿಸುವವನು ದೇವತೆಗಳನ್ನೇ ಪೂಜಿಸುತ್ತಾನೆ.

ಸರ್ವೇ ತಸ್ಯಾದೃತಾ ಧರ್ಮಾ ಯಸ್ಯೈತೇ ತ್ರಯ ಆದೃತಾಃ ।
ಅನಾದೃತಾಸ್ತು ಯಸ್ಯೈತೇ ಸರ್ವಾಸ್ತಸ್ಯಾಫಲಾಃ ಕ್ರಿಯಾಃ ॥೨೬॥

ಯಾವನು ತಂದೆ-ತಾಯಿಗಳು, ಪಿತಾಮಹರು ಮತ್ತು ಉಪಾಧ್ಯಾಯರು - ಈ ಮೂವರನ್ನು ಆದರಿಸುತ್ತಾನೆಯೋ ಅವನು ಎಲ್ಲ ಧರ್ಮವನ್ನೂ ಆದರಿಸಿದವನಾಗುತ್ತಾನೆ. ಈ ಮೂವರನ್ನು ಆದರಿಸದಿದ್ದವನು ಮಾಡುವ ಎಲ್ಲ ಕ್ರಿಯೆಗಳೂ ನಿಷ್ಫಲವಾಗುತ್ತವೆ.

ವೈಶಂಪಾಯನಃ

ಭೀಷ್ಮಸ್ಯ ತದ್ವಚಃ ಶ್ರುತ್ವಾ ವಿಸ್ಮಿತಾಃ ಕುರುಪುಂಗವಾಃ ।
ಆಸನ್ ಪ್ರಹೃಷ್ಟಮನಸಃ ಪ್ರೀತಿಮಂತೋऽಭವಂಸ್ತದಾ ॥೨೭॥

ವೈಶಂಪಾಯನ– ಭೀಷ್ಮರ ಆ ಮಾತುಗಳನ್ನು ಕೇಳಿ ಎಲ್ಲ ಕುರುಶ್ರೇಷ್ಠರೂ ವಿಸ್ಮಿತರೂ, ಸಂತೋಷಗೊಂಡ ಮನಸ್ಸುಳ್ಳವರೂ ಆಗಿ ಪರಸ್ಪರ ಪ್ರೀತಿಯುಳ್ಳವರಾದರು.

ಯನ್ಮಂತ್ರೇ ಭವತಿ ವೃಥಾ ಪ್ರಯುಜ್ಯಮಾನೇ
ಯತ್ಸೋಮೇ ಭವತಿ ವೃಥಾಭಿಷೂಯಮಾಣೇ ।
ಯಚ್ಚಾಗ್ನೌ ಭವತಿ ವೃಥಾಭಿಹೂಯಮಾನೇ
ತತ್ಸರ್ವಂ ಭವತಿ ವೃಥಾऽಭಿಧೀಯಮಾನೇ ॥೨೮॥

ಮಂತ್ರವನ್ನು ವ್ಯರ್ಥವಾಗಿ ಪ್ರಯೋಗಿಸುವುದರಿಂದ ಯಾವ ದುಷ್ಫಲ ಉಂಟಾಗುತ್ತದೆಯೋ, ಸೋಮರಸವನ್ನು ವ್ಯರ್ಥವಾಗಿ ಹಿಂಡುವುದರಿಂದ ಯಾವ ದುಷ್ಫಲವು ಉಂಟಾಗುತ್ತದೆಯೋ, ಅಗ್ನಿಯಲ್ಲಿ ವ್ಯರ್ಥವಾಗಿ ಹೋಮ ಮಾಡುವುದರಿಂದ ಯಾವ ದುಷ್ಫಲವು ಉಂಟಾಗುತ್ತದೆಯೋ ಅವೆಲ್ಲವೂ ಆಚರಿಸಿದ ಧರ್ಮವನ್ನು ಕೀರ್ತನೆ ಮಾಡುವುದರಿಂದ ಒಟ್ಟಿಗೆ ಉಂಟಾಗುತ್ತವೆ.

ಮೊದಲು ಹೇಳಿದ ಮೂರರಲ್ಲಿ ಒಂದೊಂದನ್ನು ವ್ಯರ್ಥವಾಗಿ ಮಾಡಿದರೆ ಒಂದೊಂದರ ಫಲವು ಮಾತ್ರ ವ್ಯರ್ಥವಾಗುತ್ತದೆ. ಆದರೆ ಮಾಡಿದ ಧರ್ಮದಲ್ಲಿ ಒಂದನ್ನು ಕೂಡ ಸಭೆಯಲ್ಲಿ ಕೀರ್ತನೆಯನ್ನು ಮಾಡಿದರೆ ಮಾಡಿದ ಎಲ್ಲ ಕರ್ಮಗಳೂ ವ್ಯರ್ಥವಾಗುತ್ತವೆ ಎಂದು ಅಭಿಪ್ರಾಯ – ಲಕ್ಷ್ಮಣಂಕಾರ.

ಇತ್ಯೇತದೃಷಿಣಾ ಪ್ರೋಕ್ತಮುಕ್ತವಾನಸ್ಮಿ ಯದ್ ವಿಭೋ ।
ಶುಭಾಶುಭಫಲಪ್ರಾಪ್ತೌ ಕಿಮತಃ ಶ್ರೋತುಮಿಚ್ಛಸಿ ॥೨೯॥

ಎಲೈ ವಿಭುವೇ, ಋಷಿಗಳು ಹೇಳಿದಂತೆ ಶುಭಾಶುಭ ಫಲಪ್ರಾಪ್ತಿಗೆ ಕಾರಣವಾದ ಕರ್ಮಗಳನ್ನು ನಾನು ನಿನಗೆ ಹೇಳಿದ್ದೇನೆ. ಬೇರೆ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಕರ್ಮಫಲಪ್ರಶಂಸನಂ ನಾಮ ಅಷ್ಟಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಪೂಜ್ಯರ ವರ್ಣನೆ.

ಯುಧಿಷ್ಠಿರಃ

ಕೇ ಪೂಜ್ಯಾಃ ಕೇ ನಮಸ್ಕಾರ್ಯಾಃ ಕಾನ್ ನಮಸ್ಯಸಿ ಭಾರತ ।
ಏತನ್ಮೇ ಸರ್ವಮಾಚಕ್ಷ್ವ ಯೇಷಾಂ ಸ್ಪೃಹಯಸೇ ನೃಪ ॥೧॥

ಯುಧಿಷ್ಠಿರ– ಎಲೈ ಭಾರತನೇ, ಯಾರು ಪೂಜ್ಯರು? ಯಾರು ನಮಸ್ಕಾರಕ್ಕೆ ಅರ್ಹರಾದವರು? ನೀನು ಯಾರನ್ನು ನಮಸ್ಕರಿಸುವಿ? ಎಲೈ ರಾಜನೇ, ನೀನು ಯಾರನ್ನು ಬಯಸುತ್ತೀಯೆ? ಇದೆಲ್ಲವನ್ನೂ ನನಗೆ ತಿಳಿಸು.

ಯಥೈವ ತೇ ನಮಸ್ಕಾರ್ಯಾ ಪ್ರೋಕ್ತಾ ಶಕ್ರೇಣ ಮಾನದ ।
ತತ್ಸರ್ವಂ ಮಯಿ ಚಾಚಕ್ಷ್ವ ಯೇಷಾಂ ಸ್ಪೃಹಯಸೇ ನೃಪ ॥೨॥

ಎಲೈ ಮಾನದನೇ, ಇಂದ್ರನು ಯಾರಿಗೆ ನಮಸ್ಕಾರ ಮಾಡಬೇಕೆಂದು ಉಪದೇಶಿಸಿದ್ದಾನೆಯೋ ಅದೇ ರೀತಿಯಲ್ಲಿ ನನಗೆ ತಿಳಿಸು. ರಾಜನೇ, ನೀನು ಮನಸ್ಸಿನಲ್ಲಿ ಯಾರನ್ನು ಬಯಸುತ್ತೀಯೆ?

ಉತ್ತಮಾಪದ್ಗತಸ್ಯಾಪಿ ಯತ್ರ ತೇ ವರ್ತತೇ ಮನಃ ।
ಮನುಷ್ಯಲೋಕೇ ಸರ್ವಸ್ಮಿನ್ ಯದಮುತ್ರೇಹ ಚಾಪ್ಯುತ ॥೩॥

ಇಂತಹ ಕಷ್ಟಕ್ಕೆ ಸಿಲುಕಿದ್ದರೂ ಈ ಮನುಷ್ಯಲೋಕದಲ್ಲಿ ಮತ್ತು ಪರಲೋಕದಲ್ಲಿ ನಿನ್ನ ಮನಸ್ಸು ಯಾವುದನ್ನು ಕುರಿತು ಚಿಂತಿಸುತ್ತಿದೆ ಎಂದು ಹೇಳು.

ಭೀಷ್ಮಃ

ಸ್ಪೃಹಯಾಮಿ ದ್ವಿಜಾತೀನಾಂ ಯೇಷಾಂ ಬ್ರಹ್ಮ ಪರಂ ಧನಮ್ ।
ಯೇಷಾಂ ಸ್ವಪ್ರತ್ಯಯಃ ಸ್ವರ್ಗಸ್ತಪಃಸ್ವಾಧ್ಯಾಯಸಾಧನಃ ॥೪॥

ಭೀಷ್ಮ– ಯಾರಿಗೆ ವೇದವೇ ಶ್ರೇಷ್ಠವಾದ ಧನವಾಗಿದೆಯೋ, ಯಾರ ಜ್ಞಾನವು ಸ್ವರ್ಗಸಾಧನವಾಗಿದೆಯೋ, ಯಾರ ತಪಸ್ಸು ಅಧ್ಯಯನ ಸಾಧನವಾಗಿದೆಯೋ ಅಂತಹ ಬ್ರಾಹ್ಮಣರನ್ನು ನಾನು ಬಯಸುತ್ತೇನೆ.

ಯೇಷಾಂ ವೃದ್ಧಾಶ್ಚ ಬಾಲಾಶ್ಚ ಪಿತೃಪೈತಾಮಹೀಂ ಧುರಮ್ ।
ಉದ್ವಹಂತಿ ನ ಸೀದಂತಿ ತೇಷಾಂ ವೈ ಸ್ಪೃಹಯಾಮ್ಯಹಮ್ ॥೫॥

ಯಾವ ಬ್ರಾಹ್ಮಣಕುಲದಲ್ಲಿ ಬಾಲಕರು ಮತ್ತು ವೃದ್ಧರು ಪಿತೃ-ಪಿತಾಮಹರ ಜ್ಞಾನ-ತಪಸ್ಸುಗಳ ಭಾರವನ್ನೇ ಹೊರುತ್ತಾರೆಯೋ ಮತ್ತು ಅದರಿಂದ ಕುಸಿದು ಬೀಳುವುದಿಲ್ಲವೋ ಅಂತಹ ಬ್ರಾಹ್ಮಣರನ್ನು ಬಯಸುತ್ತೇನೆ.

ವಿದ್ಯಾಸ್ವಭಿವಿನೀತಾನಾಂ ದಾಂತಾನಾಂ ಮೃದುಭಾಷಿಣಾಮ್ ।
ಶ್ರುತವೃತ್ತೋಪಪನ್ನಾನಾಂ ಪದಾಕ್ಷರವಿದಾಂ ಸತಾಮ್ ॥೬॥

ಸಂಸತ್ಸು ವದತಾಂ ಯೇಷಾಂ ಹಂಸಾನಾಮಿವ ಸಂಘಶಃ ।
ಮಂಗಲ್ಯರೂಪಾ ರುಚಿರಾ ದಿವ್ಯಜೇಮೂತನಿಸ್ವನಾಃ ॥೭॥

ಸಮ್ಯಗುಚ್ಚಾರಿತಾ ವಾಚಃ ಶ್ರೂಯಂತೇ ಹಿ ಯುಧಿಷ್ಠಿರ ।
ಶ(ಶು)ಶ್ರೂಷಮಾಣೇ ನೃಪತೌ ಪ್ರೇತ್ಯ ಚೇಹ ಸುಖಾವಹಾಃ ॥೮॥

ಯಾವ ಬ್ರಾಹ್ಮಣರು ಅನೇಕ ವಿದ್ಯೆಗಳಲ್ಲಿ ಶಿಕ್ಷಿತರಾಗಿ ಇಂದ್ರಿಯನಿಗ್ರಹವನ್ನೂ, ಮೃದುವಾದ ಮಾತುಗಳನ್ನೂ ಹೊಂದಿದವರಾಗಿ ಶೀಲವೃತ್ತಗಳನ್ನು ಹೊಂದಿ, ವ್ಯಾಕರಣ ಶಾಸ್ತ್ರಗಳನ್ನು ತಿಳಿದು ಸಜ್ಜನರಾಗಿರುತ್ತಾರೆಯೋ, ಯಾರು ಸಭೆಗಳಲ್ಲಿ ಹಂಸಗಳ ಸಮೂಹದಂತೆ ಮಂಗಳವೂ ಮತ್ತು ಮನೋಹರವೂ ಆದ ಮಾತುಗಳನ್ನು ತಮ್ಮ

ಮೇಘಗಂಭೀರವಾದ ವಾಣಿಯಿಂದ ಆಡುತ್ತಾರೆಯೋ, ಎಲೈ ಯುಧಿಷ್ಠಿರನೇ, ರಾಜನು ಸಭೆಯಲ್ಲಿ ಕುಳಿತಿರುವಾಗ ಯಾರು ಚೆನ್ನಾಗಿ ಆಡಿದ ಮಾತುಗಳು ಕೇಳಿಬರುತ್ತವೆಯೋ ಅಂತಹ ಮಾತುಗಳು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸುಖಪ್ರದವಾದವುಗಳು.

ಯೇ ಚಾಪಿ ತೇಷಾಂ ಶ್ರೋತಾರಃ ಸದಾ ಸದಸಿ ಸಮ್ಮತಾಃ ।
ವಿಜ್ಞಾನಗುಣಸಂಪನ್ನಾಸ್ತೇಷಾಂ ಚ ಸ್ಪೃಹಯಾಮ್ಯಹಮ್ ॥೯॥

ಸಭೆಯಲ್ಲಿ ಗೌರವಾನ್ವಿತರಾಗಿದ್ದು ಯಾರು ಅಂತಹ ಮಾತುಗಳನ್ನು ಕೇಳುತ್ತಾರೆಯೋ, ವಿಜ್ಞಾನಗುಣಸಂಪನ್ನರಾದ ಅಂತಹ ಬ್ರಾಹ್ಮಣರನ್ನು ನಾನು ಬಯಸುತ್ತೇನೆ.

ಸುಸಂಸ್ಕೃತಾನಿ ಶುಭ್ರಾಣಿ ಶುಚೀನಿ ಗುಣವಂತಿ ಚ ।
ದದತ್ಯನ್ನಾನಿ ತೃಪ್ತ್ಯರ್ಥಂ ಬ್ರಾಹ್ಮಣೇಭ್ಯೋ ಯುಧಿಷ್ಠಿರ ।
ಯೇ ಚಾಪಿ ತೇಷಾಂ ದಾತಾರಃ ತೇಷಾಂ ಚ ಸ್ಪೃಹಯಾಮ್ಯಹಮ್ ॥

ಎಲೈ ಯುಧಿಷ್ಠಿರನೇ, ಯಾರು ಬ್ರಾಹ್ಮಣರ ತೃಪ್ತಿಗಾಗಿ ಸುಸಂಸ್ಕೃತವಾದ, ಶುಚಿಯಾದ, ಗುಣಪೂರ್ಣವಾದ ಅನ್ನವನ್ನು ವಿನಯದಿಂದ ಕೊಡುತ್ತಾರೆಯೋ ಅಂತಹವರನ್ನು ನಾನು ಬಯಸುತ್ತೇನೆ.

ಶಕ್ಯಂ ಹ್ಯೇವಾಹವೇ ಯೋದ್ಧುಂ ನ ದಾತುಮನಸೂಯಿತಮ್ ।
ಶೂರಾ ವೀರಾಶ್ಚ ಶತಶಃ ಸಂತಿ ಲೋಕೇ ಯುಧಿಷ್ಠಿರ ।
ತೇಷಾಂ ಸಂಖ್ಯಾಯಮಾನಾನಾಂ ದಾನಶೂರೋ ವಿಶಿಷ್ಯತೇ ॥೧೧॥

ರಣರಂಗದಲ್ಲಿ ಯುದ್ಧವನ್ನು ಮಾಡುವುದು ಸಾಧ್ಯವಾಗುತ್ತದೆ (ಸುಲಭ). ಆದರೆ ಅಸೂಯೆ ಇಲ್ಲದೆ ದಾನವನ್ನು ಕೊಡುವುದು ಕಷ್ಟ. ಎಲೈ ಯುಧಿಷ್ಠಿರನೇ, ಲೋಕದಲ್ಲಿ ಶೂರರೂ, ವೀರರೂ ನೂರಾರು ಸಂಖ್ಯೆಯಲ್ಲಿ ಇದ್ದಾರೆ. ಅವರನ್ನು ಎಣಿಸುವಾಗ ದಾನಶೂರನೇ ಶ್ರೇಷ್ಠನಾದವನು.

ಧನ್ಯಃ ಸ್ಯಾಂ ಯದ್ಯಹಂ ಭೂಯಃ ಸೌಮ್ಯ ಬ್ರಾಹ್ಮಣಕೋಽಪಿ ವಾ ।
ಕುಲೇ ಜಾತೋ ಧರ್ಮಮತಿಸ್ತಪೋವಿದ್ಯಾಪರಾಯಣಃ ॥೧೨॥

ನಾನು ಒಂದು ಒಳ್ಳೆಯ ಕುಲದಲ್ಲಿ ಅಲ್ಪಬ್ರಾಹ್ಮಣನಾಗಿಯಾದರೂ ಜನಿಸಿ, ಧರ್ಮದಲ್ಲಿ ಬುದ್ಧಿಯನ್ನು ಹೊಂದಿ, ತಪೋ-ವಿದ್ಯಾಪರಾಯಣನಾದರೆ, ಎಲೈ ಸೌಮ್ಯನೇ, ನಾನು ಧನ್ಯನೆಂದು ಭಾವಿಸುತ್ತೇನೆ.

ಭದ್ರಂ ತು ಜನ್ಮ ಸಂಪ್ರಾಪ್ಯ ಭೂಯೋ ಬ್ರಾಹ್ಮಣಕೋ ಭವೇತ್ ।
ಬಂಧುಮಧ್ಯೇ ಕುಲೇ ಜಾತಃ ಸುದುರಾಪಮವಾಪ್ನುಯಾತ್ ॥೧೩॥

ಒಳ್ಳೆಯ ಜನ್ಮವನ್ನು ಪಡೆಯುವುದಿದ್ದರೆ ಪುನಃ ಅಲ್ಪನಾದ ಬ್ರಾಹ್ಮಣನಾದರೂ ಆಗಬೇಕು. ಒಳ್ಳೆಯ ಕುಲದಲ್ಲಿ ಅಂತಹ ಬ್ರಾಹ್ಮಣರ ಮಧ್ಯದಲ್ಲಿ ಜನಿಸಿದವನು ಪಡೆಯಲು ಅಸಾಧ್ಯವಾದುದನ್ನೆಲ್ಲಾ ಪಡೆಯುತ್ತಾನೆ.

ನ ಮೇ ತ್ವತ್ತಃ ಪ್ರಿಯತರೋ ಲೋಕೇऽಸ್ಮಿನ್ ಪಾಂಡುನಂದನ ।
ತ್ವತ್ತಶ್ಚ ಮೇ ಪ್ರಿಯತರಾ ಬ್ರಾಹ್ಮಣಾ ಭರತರ್ಷಭ ॥೧೪॥

ಎಲೈ ಪಾಂಡುನಂದನನೇ, ಈ ಲೋಕದಲ್ಲಿ ನನಗೆ ನಿನಗಿಂತಲೂ ಪ್ರಿಯರಾದವರು ಯಾರೂ ಇಲ್ಲ. ಆದರೆ ಭರತರ್ಷಭನೇ, ಬ್ರಾಹ್ಮಣರು ಮಾತ್ರ ನಿನಗಿಂತ ಹೆಚ್ಚು ಪ್ರಿಯರಾದವರು.

ಯಥಾ ಮಮ ಪ್ರಿಯತರಾಸ್ತ್ವತ್ತೋ ವಿಪ್ರಾಃ ಕುರೂದ್ವಹ ।
ತೇನ ಸತ್ಯೇನ ಗಚ್ಛೇಯಂ ಲೋಕಾನ್ ಯತ್ರ ಸ ಶಂತನುಃ ॥೧೫॥

ಎಲೈ ಕುರೂದ್ವಹನೇ, ನನಗೆ ಬ್ರಾಹ್ಮಣರು ನಿನಗಿಂತ ಹೆಚ್ಚು ಪ್ರಿಯರಾದವರು ಎಂಬ ಸತ್ಯವಚನದಿಂದ ನಾನು ಶಂತನು ಇರುವ ಲೋಕಗಳಿಗೆ ಹೋದೇನು.

ನ ಮೇ ಪಿತಾ ಪ್ರಿಯತರೋ ಬ್ರಾಹ್ಮಣೇಭ್ಯಸ್ತಥಾऽಭವತ್ ।
ನ ಮೇ ಪಿತುಃ ಪಿತಾ ವಾಪಿ ಯೇ ಚಾನ್ಯೇऽಪಿ ಸುಹೃಜ್ಜನಾಃ ॥೧೬॥

ನನಗೆ ಬ್ರಾಹ್ಮಣರು ಎಷ್ಟು ಪ್ರಿಯರೋ ನನ್ನ ತಂದೆಯಾಗಲೀ, ನನ್ನ ತಂದೆಯ ತಂದೆಯಾಗಲೀ ಅಥವಾ ಉಳಿದ ಸುಹೃಜ್ಜನರಾಗಲೀ ಅಷ್ಟು ಪ್ರಿಯರಲ್ಲ.

ನ ಚ ಮೇ ವೃಜಿನಂ ಕಿಂಚಿದ್ ವಿದ್ಯತೇ ಬ್ರಾಹ್ಮಣೇಷ್ವಿಹ ।
ಅಣು ವಾ ಯದಿ ವಾ ಸ್ಥೂಲಂ ವಿದಿತಂ ಸಾಧುಕರ್ಮಭಿಃ ॥೧೭॥

ನಾನು ಈ ಲೋಕದಲ್ಲಿ ಬ್ರಾಹ್ಮಣರಿಗೆ ಅಲ್ಪವಾದ ಅಪರಾಧವನ್ನೂ ಮಾಡಿಲ್ಲ. ನಾನು ಅಲ್ಪವಾದ ಅಥವಾ ದೊಡ್ಡದಾದ ಅಪರಾಧವನ್ನು ಮಾಡಿಲ್ಲವೆಂಬುದನ್ನು ಸತ್ಕರ್ಮ ಮಾಡುವ ಜನರು ತಿಳಿದಿದ್ದಾರೆ.

ಕರ್ಮಣಾ ಮನಸಾ ವಾಪಿ ವಾಚಾ ವಾಪಿ ಪರಂತಪ ।
ಯನ್ಮೇ ಕೃತಂ ಬ್ರಾಹ್ಮಣೇಷು ತೇನಾದ್ಯ ನ ತಪಾಮ್ಯಹಮ್ ॥೧೮॥

ಎಲೈ ಪರಂತಪನೇ, ನಾನು ಕರ್ಮದಿಂದ, ಮನಸ್ಸಿನಿಂದ ಮತ್ತು ಮಾತಿನಿಂದ ಬ್ರಾಹ್ಮಣರಿಗೆ ಏನು ಹಿತವನ್ನು ಮಾಡಿದ್ದೇನೆಯೋ ಅದರ ಬಲದಿಂದ ಈ ದಿನ ತಾಪರಹಿತನಾಗಿದ್ದೇನೆ.

ಬ್ರಹ್ಮಣ್ಯ ಇತಿ ಮಾಮಾಹುಸ್ತಯಾ ವಾಚಾऽಸ್ಮಿ ತೋಷಿತಃ ।
ಏತದೇವ ಹಿ ಪುತ್ರೇಭ್ಯಃ ಸರ್ವೇಭ್ಯಃ ಪರಮಂ ಸ್ಮೃತಮ್ ॥೧೯॥

ನನ್ನನ್ನು ಬ್ರಾಹ್ಮಣವತ್ಸಲನೆಂದು ಕರೆಯುತ್ತಾರೆ. ಆ ಮಾತಿನಿಂದ ಬಹಳ ಸಂತೋಷಗೊಂಡಿದ್ದೇನೆ. ಸತ್ಪುತ್ರರನ್ನು ಪಡೆಯುವುದಕ್ಕಿಂತ ಇಂತಹ ಮಾತನ್ನು ಕೇಳುವುದು ಶ್ರೇಷ್ಠವಾದುದೆಂದು ಹೇಳಲ್ಪಡುತ್ತದೆ.

ಪಶ್ಯಾಮಿ ಲೋಕಾನಮಲಾನ್ ಶುಚೀನ್ ಬ್ರಾಹ್ಮಣಯಾಯಿನಃ ।
ತೇಷು ಮೇ ತಾತ ಗಂತವ್ಯಮಹ್ನಾಯ ಚ ಚಿರಾಯ ಚ ॥೨೦॥

ಬ್ರಾಹ್ಮಣರು ಹೋಗುವ ನಿರ್ದುಷ್ಟವಾದ, ಶುಭ್ರವಾದ ಲೋಕಗಳನ್ನು ನಾನು ನೋಡುತ್ತಿದ್ದೇನೆ. ಎಲೈ ಪ್ರೀತಿಪಾತ್ರನೇ, ನಾನು ಅಲ್ಲಿಗೆ ಶೀಘ್ರವಾಗಿ ಮತ್ತು ಚಿರಕಾಲ ವಾಸಿಸುವಂತೆ ಹೋಗಬೇಕು.

ಯಥಾ ಪತ್ಯಾಶ್ರಯೋ ಧರ್ಮಃ ಸ್ತ್ರೀಣಾಂ ಲೋಕೇ ಯುಧಿಷ್ಠಿರ ।
ಸ ದೇವಃ ಸಾ ಗತಿರ್ನಾನ್ಯಾ ಕ್ಷತ್ರಿಯಸ್ಯ ತಥಾ ದ್ವಿಜಾಃ ॥೨೧॥

ಎಲೈ ಯುಧಿಷ್ಠಿರನೇ, ಸ್ತ್ರೀಯರಿಗೆ ಲೋಕದಲ್ಲಿ ಪತಿಯನ್ನು ಆಶ್ರಯಿಸುವುದೇ ಹೇಗೆ ಧರ್ಮವೋ, ಏಕೆಂದರೆ ಅವನೇ ಅವಳಿಗೆ ದೇವತೆ ಮತ್ತು ಗತಿ, ಅದರಂತೆ ಬ್ರಾಹ್ಮಣರು ಕ್ಷತ್ರಿಯರಿಗೆ ದೇವತೆಗಳು ಮತ್ತು ಗತಿಯಾದವರು.

ಕ್ಷತ್ರಿಯಃ ಶತವರ್ಷೀ ಚ ದಶವರ್ಷೀ ಚ ಬ್ರಾಹ್ಮಣಃ ।
ಪಿತಾಪುತ್ರೌ ಚ ವಿಜ್ಞೇಯೌ ತಯೋರ್ಹಿ ಬ್ರಾಹ್ಮಣಃ ಪಿತಾ ॥೨೨॥

ನೂರು ವರ್ಷದ ಕ್ಷತ್ರಿಯ ಮತ್ತು ಹತ್ತು ವರ್ಷದ ಬ್ರಾಹ್ಮಣರನ್ನು ಪಿತಾ-ಪುತ್ರರೆಂದು ತಿಳಿಯಬೇಕು. ಅವರಲ್ಲಿ ಬ್ರಾಹ್ಮಣನೇ ಪಿತೃವಾಗುತ್ತಾನೆ.

ನಾರೀ ತು ಪತ್ಯಭಾವೇ ವೈ ದೇವರಂ ಕುರುತೇ ಪತಿಮ್ ।
ಪೃಥಿವೀ ಬ್ರಾಹ್ಮಣಾಲಾಭೇ ಕ್ಷತ್ರಿಯಂ ಕುರುತೇ ಪತಿಮ್ ॥೨೩॥

ಸ್ತ್ರೀಯು ಪತಿ ಇಲ್ಲದಿದ್ದರೆ ಮೈದುನನನ್ನು ಪತಿಯಾಗಿ ಮಾಡಿಕೊಳ್ಳುತ್ತಾಳೆ. ಬ್ರಾಹ್ಮಣರು ದೊರೆಯದಿದ್ದರೆ ಭೂಮಿಯು ಕ್ಷತ್ರಿಯನನ್ನು ಪತಿಯಾಗಿ ಮಾಡಿಕೊಳ್ಳುತ್ತದೆ.

ತೇ ಪುತ್ರವಚ್ಚ ರಕ್ಷ್ಯಾ ವೈ ಉಪಾಸ್ಯಾ ಗುರುವಚ್ಚ ನಃ ।
ಅಗ್ನಿವಚ್ಚೋಪಚರ್ಯಾ ವೈ ಬ್ರಾಹ್ಮಣಾಃ ಕುರುಸತ್ತಮ ॥೨೪॥

ಎಲೈ ಕುರುಶ್ರೇಷ್ಠನೇ, ಬ್ರಾಹ್ಮಣರನ್ನು ಪುತ್ರರಂತೆ ರಕ್ಷಿಸಬೇಕು. ಗುರುಗಳಂತೆ ಉಪಾಸನೆ ಮಾಡಬೇಕು. ಅಗ್ನಿಯಂತೆ ಉಪಚರಿಸಬೇಕು.

ಋಜೂನ್ ಸತಃ ಸತ್ಯಶೀಲಾನ್ ಸರ್ವಭೂತಹಿತೇ ರತಾನ್ ।
ಆಶೀವಿಷಾನಿವ ಕ್ರುದ್ಧಾನ್ ದ್ವಿಜಾನುಪಚರೇತ್ ಸದಾ ॥೨೫॥

ಆರ್ಜವವನ್ನು ಹೊಂದಿದ, ಸತ್ಯಶೀಲರಾದ, ಸರ್ವಪ್ರಾಣಿಗಳ ಹಿತದಲ್ಲಿ ನಿರತರಾದ ಬ್ರಾಹ್ಮಣರನ್ನು, ಕೋಪಗೊಂಡ ಸರ್ಪವನ್ನು ಉಪಚರಿಸುವಂತೆ ಯಾವಾಗಲೂ ಉಪಚರಿಸಬೇಕು.

ತೇಜಸಸ್ತಪಸಶ್ಚೈವ ನಿತ್ಯಂ ಬಿಭ್ಯೇದ್ ಯುಧಿಷ್ಠಿರ ।
ಉಭೇ ನೈತೇ ಪರಿತ್ಯಾಜ್ಯೇ ತೇಜಶ್ಚೈವ ತಪಸ್ತಥಾ ॥೨೬॥

ಎಲೈ ಯುಧಿಷ್ಠಿರನೇ, ಬ್ರಾಹ್ಮಣರ ತೇಜಸ್ಸು ಮತ್ತು ತಪಸ್ಸುಗಳಿಗೆ ಯಾವಾಗಲೂ ಹೆದರಬೇಕು. ಅವರ ತೇಜಸ್ಸು ಮತ್ತು ತಪಸ್ಸು ಇನ್ನೊಬ್ಬರ ಮೇಲೆ ಬೀಳದಂತೆ ರಕ್ಷಿಸಬೇಕು.

ವ್ಯವಸಾಯಸ್ತಯೋಃ ಶೀಘ್ರಮುಭಯೋರೇವ ವಿದ್ಯತೇ ।
ಹನ್ಯುಃ ಕ್ರುದ್ಧಾ ಮಹಾರಾಜ ಬ್ರಾಹ್ಮಣಾ ಯೇ ತಪಸ್ವಿನಃ ॥೨೭॥

ಬ್ರಾಹ್ಮಣರ ತೇಜಸ್ಸು ಮತ್ತು ತಪಸ್ಸುಗಳ ಪರಿಣಾಮವು ಶೀಘ್ರ ಮತ್ತು ತೀವ್ರವಾದುದು. ಎಲೈ ಮಹಾರಾಜನೇ, ತಪಸ್ವಿಗಳಾದ ಬ್ರಾಹ್ಮಣರು ಕೋಪಗೊಂಡರೆ ತಮ್ಮ ಕೋಪದಿಂದಲೇ ಕೊಂದಾರು!

ಭೂಯಃ ಸ್ಯಾದುಭಯಂ ದತ್ತಂ ಬ್ರಾಹ್ಮಣಾದ್ ಯದಕೋಪನಾತ್ ।
ಕುರ್ಯಾದುಭಯತಃಶೇಷಂ ದತ್ತಶೇಷಂ ನ ಶೇಷಯೇತ್ ॥೨೮॥

ಕೋಪರಹಿತನಾದ ಬ್ರಾಹ್ಮಣನಿಂದ ಕೊಡಲ್ಪಟ್ಟ ತೇಜಸ್ಸು ಮತ್ತು ತಪಸ್ಸುಗಳು ಬಹಳ ಪರಿಣಾಮವನ್ನು ಉಂಟುಮಾಡುತ್ತವೆ. ಅವೆರಡೂ ಅವನಲ್ಲಿಯೇ ಉಳಿಯುವಂತೆ ಮಾಡಬೇಕು. ಒಂದು ಪಕ್ಷ ಇನ್ನೊಬ್ಬರ ಮೇಲೆ ಪ್ರಯೋಗಿಸಿದರೆ ಬ್ರಾಹ್ಮಣನಲ್ಲಿ ಆ ಕೋಪದ ಶೇಷವು ಉಳಿಯದಂತೆ ನೋಡಿಕೊಳ್ಳಬೇಕು.

ದಂಡಪಾಣಿರ್ಯಥಾ ಗೋಷು ಪಾಲೋ ನಿತ್ಯಂ ಸ್ಥಿರೋ ಭವೇತ್ ।
ಬ್ರಾಹ್ಮಣಾನ್ ಬ್ರಹ್ಮನಿರತಾನ್ ಕ್ಷತ್ರಿಯಃ ಪರಿಪಾಲಯೇತ್ ॥೨೯॥

ಗೋಪಾಲನು ಕೈಯಲ್ಲಿ ದಂಡವನ್ನು ಹಿಡಿದು ಯಾವಾಗಲೂ ಗೋವುಗಳ ಮಧ್ಯದಲ್ಲಿ ನಿಂತಿರುವಂತೆ ಕ್ಷತ್ರಿಯನಾದವನು ವೇದ ಮತ್ತು ಪರಬ್ರಹ್ಮನಿರತರಾದ ಬ್ರಾಹ್ಮಣರನ್ನು ರಕ್ಷಿಸಬೇಕು.

ಪಿತೇವ ಪುತ್ರಾನ್ ರಕ್ಷೇಥಾ ಬ್ರಾಹ್ಮಣಾನ್ ಬ್ರಹ್ಮತೇಜಸಃ ।
ಗೃಹೇ ಚೈಷಾಮವೇಕ್ಷೇಥಾಃ ಕಚ್ಚಿದಸ್ತೀಹ ಜೀವನಮ್ ॥೩೦॥

ಬ್ರಹ್ಮತೇಜಸ್ಸನ್ನು ಹೊಂದಿದ ಬ್ರಾಹ್ಮಣರನ್ನು ತಂದೆಯು ಪುತ್ರರನ್ನು ರಕ್ಷಿಸುವಂತೆ ರಕ್ಷಿಸುವವನಾಗು. ಅವರ ಮನೆಯಲ್ಲಿ ಜೀವನಕ್ಕೆ ಬೇಕಾದ ವಸ್ತುಗಳು ಇವೆಯೇ, ಇಲ್ಲವೇ ಎಂದು ನೋಡಿಕೊಳ್ಳುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಭೀಷ್ಮನಿಶ್ಚಯಕಥನಂ ನಾಮ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತನೆಯ ಅಧ್ಯಾಯ

ದಾನ-ಧರ್ಮ ವಿಷಯದಲ್ಲಿ ವೇದಗಳ ಸಂವಾದ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಚತುರ್ಣಾಮಪಿ ವೇದಾನಾಂ ಸಂವಾದಂ ಪುತ್ರ ತಚ್ಛೃಣು ॥೧॥

ಭೀಷ್ಮ- ಎಲೈ ಪ್ರೀತಿಪಾತ್ರನಾದ ಪುತ್ರನೇ, ಈ ವಿಷಯದಲ್ಲಿ ನಾಲ್ಕು ವೇದಗಳಿಗೆ ಉಂಟಾದ ಸಂವಾದರೂಪವಾದ ಪ್ರಾಚೀನವಾದ ಈ ಇತಿಹಾಸವನ್ನು ಜ್ಞಾನಿಗಳು ಹೇಳುತ್ತಾರೆ.

ಋಗ್ವೇದಃ

ಗೃಹಾನಾಶ್ರಯಮಾಣಸ್ಯ ಅಗ್ನಿಹೋತ್ರಂ ಚ ಜುಹ್ವತಃ ।
ಸರ್ವಂ ಸುಕೃತಮಾದತ್ತೇ ಯಃ ಸಾಯೇ ನುದ್ಯತೇऽತಿಥಿಃ ॥೨॥

ಋಗ್ವೇದ- ಗೃಹಸ್ಥಾಶ್ರಮವನ್ನು ಹೊಂದಿ, ಅಗ್ನಿಹೋತ್ರವನ್ನು ಮಾಡುವವನ ಮನೆಯಿಂದ ಸಾಯಂಕಾಲದಲ್ಲಿ ಅತಿಥಿಯು ಹೊರಗೆ ಕಳುಹಿಸಲ್ಪಟ್ಟರೆ ಅವನು ಆ ಬ್ರಾಹ್ಮಣನ ಪುಣ್ಯವನ್ನೆಲ್ಲ ತೆಗೆದುಕೊಂಡು ಹೋಗುವನು.

ಯಜುರ್ವೇದಃ

ನ ಸ್ಕಂದತೇ ನ ವ್ಯಥತೇ ನಾಸ್ಯೋರ್ಧ್ವಂ ಸರ್ಪತೇ ರಜಃ ।
ವರಿಷ್ಠಮಗ್ನಿಹೋತ್ರಾಚ್ಚ ಬ್ರಾಹ್ಮಣಸ್ಯ ಮುಖೇ ಹುತಮ್ ॥೩॥

ಯಜುರ್ವೇದ- ಬ್ರಾಹ್ಮಣನ ಮುಖದಲ್ಲಿ ಹಾಕಿದ ಆಹುತಿಯು ಜಾರಿ ಹೋಗುವುದಿಲ್ಲ, ವ್ಯಥೆಯನ್ನುಂಟು ಮಾಡುವುದಿಲ್ಲ. ಅದರಿಂದ ಧೂಳು ಮೇಲಕ್ಕೆ ಏಳುವುದಿಲ್ಲ. ಆದ್ದರಿಂದ ಅದು ಅಗ್ನಿಹೋತ್ರಕ್ಕಿಂತಲೂ ಶ್ರೇಷ್ಠವಾದುದು (ಅಗ್ನಿಹೋತ್ರದಲ್ಲಿ ಹಾಕಿದ ಹವಿಸ್ಸು ಜಾರುತ್ತದೆ, ವ್ಯಥೆಯನ್ನುಂಟು ಮಾಡುತ್ತದೆ ಮತ್ತು ಹೊಗೆಯ ಜೊತೆಯಲ್ಲಿ ಧೂಳು ಮೇಲೇಳುತ್ತದೆ).

ಸಾಮವೇದಃ

ನ ಚೇದ್ದಂತಿ ಪಿತರಂ ಮಾತರಂ ವಾ
ನ ಬ್ರಾಹ್ಮಣಂ ನೋऽಪವಾದಂ ಕರೋತಿ ।

ಯತ್ ಕಿಂಚಾನ್ಯದ್ ವೃಜಿನಂ ಕರೋತಿ
ಪ್ರೀತೋಽತಿಥಿಸ್ತದುಪಹಂತಿ ಪಾಪಮ್ ॥೪॥

ಸಾಮವೇದ– ತಂದೆ-ತಾಯಿಗಳನ್ನು ಹೊಡೆಯದೆ, ಬ್ರಾಹ್ಮಣನನ್ನು ದೂಷಿಸದೆ ಉಳಿದ ಯಾವ ಅಪರಾಧವನ್ನು ಮಾಡಿದರೂ ಸಂತುಷ್ಟನಾದ ಅತಿಥಿಯು ಅದರಿಂದ ಉಂಟಾದ ಪಾಪವನ್ನು ನಾಶಪಡಿಸುತ್ತಾನೆ.

ಅಥರ್ವವೇದಃ

ಯತ್ಕ್ರೋಧನೋ ಯಜತೇ ಯದ್ ದದಾತಿ
ಯದ್ವಾ ತಪಸ್ತಪ್ಯತಿ ಯಜ್ಜುಹೋತಿ ।
ವೈವಸ್ವತೋ ಹರತೇ ಸರ್ವಮಸ್ಯ
ಮೋಘಂ ಚೇಷ್ಟಂ ಭವತಿ ಕ್ರೋಧನಸ್ಯ ॥೫॥

ಅಥರ್ವವೇದ– ಕ್ರೋಧಶೀಲನಾದ ಪುರುಷನು ಮಾಡಿದ ಪೂಜೆ, ಕೊಟ್ಟ ದಾನ, ಆಚರಿಸಿದ ತಪಸ್ಸು, ಮಾಡಿದ ಹೋಮ ಎಲ್ಲವನ್ನೂ ಯಮನು ನಾಶಗೊಳಿಸುತ್ತಾನೆ. ಕ್ರೋಧಶೀಲನಾದ ಮನುಷ್ಯನ ಇಷ್ಟವೆಲ್ಲವೂ ವ್ಯರ್ಥವಾಗುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಚತುರ್ವೇದಸಂವಾದೋ ನಾಮ
ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೊಂದನೆಯ ಅಧ್ಯಾಯ

ದೇವತೆಗಳ ಸಂವಾದ

ಭೀಷ್ಮಃ

ಭೂಯಸ್ತು ಶೃಣು ರಾಜೇಂದ್ರ ಧರ್ಮಾನ್ ಧರ್ಮಭೃತಾಂವರ ।
ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಇಂದ್ರಾಗ್ನ್ಯೋಃ ಸೂರ್ಯಶಕ್ರ್ಯೋಶ್ಚ ತನ್ಮೇ ನಿಗದತಃ ಶೃಣು ॥೧॥

ಭೀಷ್ಮ– ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಎಲೈ ರಾಜೇಂದ್ರನೇ, ಇನ್ನೂ ಧರ್ಮಗಳನ್ನು ಕೇಳು. ಈ ವಿಷಯದಲ್ಲಿ ಇಂದ್ರಾಗ್ನಿ, ಸೂರ್ಯ, ಶಚೀ ದೇವತೆಗಳ ಸಂವಾದರೂಪವಾದ ಪ್ರಾಚೀನವಾದ ಇತಿಹಾಸವನ್ನು ಹೇಳುತ್ತಾರೆ.

ಇಂದ್ರಃ

ಯಥಾ ರಾಜ್ಯಂ ಪ್ರಪಾಸ್ಯಾಮಿ ಕಾಮಕ್ರೋಧವಿವರ್ಜಿತಾನ್ ।
ಏತೇನ ಸತ್ಯವಾಕ್ಯೇನ ಪಾದಃ ಕುಂಭಸ್ಯ ಪೂರ್ಯತಾಮ್ ॥೨॥

ಇಂದ್ರ– ನಾನು ಕಾಮ-ಕ್ರೋಧರಹಿತನಾಗಿ ದೇವರಾಜ್ಯವನ್ನು ರಕ್ಷಣೆ ಮಾಡುವೆನು. ಈ ಸತ್ಯವಚನದಿಂದ ಮೂರು ಭಾಗ ನೀರಿನಿಂದ ತುಂಬಿರುವ ಈ ಕುಂಭದ ಇನ್ನೊಂದು ಭಾಗವು ನೀರಿನಿಂದ ತುಂಬಲಿ. (ಸತ್ಯವಚನ ಬಲದಿಂದ ಹೇಗೆ ಅಗ್ನಿಯು ಉಷ್ಣವನ್ನು ಕಳೆದುಕೊಳ್ಳುತ್ತಾನೆಯೋ ಅದರಂತೆ - ಲಕ್ಷಾಲಂಕಾರ).

ಅಗ್ನಿಃ

ಯಥಾಹಂ ತತ್ರ ನಾಶ್ನಾಮಿ ಯತ್ರ ನಾಶ್ನಂತಿ ವೈ ದ್ವಿಜಾಃ ।
ಏತೇನ ಸತ್ಯವಾಕ್ಯೇನ ಪಾದಃ ಕುಂಭಸ್ಯ ಪೂರ್ಯತಾಮ್ ॥೩॥

ಅಗ್ನಿ– ಎಲ್ಲಿ ಬ್ರಾಹ್ಮಣರು ಭೋಜನ ಮಾಡುವುದಿಲ್ಲವೋ ಅಲ್ಲಿ ನಾನೂ ಭೋಜನ ಮಾಡುವುದಿಲ್ಲ. ಈ ಸತ್ಯವಾಕ್ಯದಿಂದ ಕುಂಭದ ನಾಲ್ಕನೆಯ ಒಂದು ಭಾಗವು ನೀರಿನಿಂದ ತುಂಬಲಿ.

ಸೂರ್ಯಃ

ಯಥಾ ಗೋಬ್ರಾಹ್ಮಣಸ್ಯಾರ್ಥೇ ನ ತಪಾಮಿ ಯಥಾಬಲಮ್ ।
ಏತೇನ ಸತ್ಯವಾಕ್ಯೇನ ಪಾದಃ ಕುಂಭಸ್ಯ ಪೂರ್ಯತಾಮ್ ॥೪॥

ಸೂರ್ಯ– ಗೋ-ಬ್ರಾಹ್ಮಣರ ಹಿತದ ಸಲುವಾಗಿ ನಾನು ನನ್ನ ಪೂರ್ಣಶಕ್ತಿಯಿಂದ ತಾಪವನ್ನುಂಟು ಮಾಡುವುದಿಲ್ಲ. ಈ ಸತ್ಯವಚನದಿಂದ ಕುಂಭದ ಇನ್ನೊಂದು ಭಾಗವು ನೀರಿನಿಂದ ತುಂಬಲಿ.

ಶಚೀ

ಕರ್ಮಣಾ ಮನಸಾ ವಾಚಾ ನಾವಮನ್ಯೇ ಪುರಂದರಮ್ ।
ಏತೇನ ಸತ್ಯವಾಕ್ಯೇನ ಪಾದಃ ಕುಂಭಸ್ಯ ಪೂರ್ಯತಾಮ್ ॥೫॥

ಶಚೀ– ನಾನು ಕರ್ಮದಿಂದಾಗಲೀ, ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ ಪತಿಯಾದ ಪುರಂದರನಿಗೆ ಅವಮಾನವನ್ನು ಮಾಡುವುದಿಲ್ಲ. ಈ ಸತ್ಯವಚನದಿಂದ ಕುಂಭದ ಇನ್ನೊಂದು ಭಾಗವು ನೀರಿನಿಂದ ಪೂರ್ಣವಾಗಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಇಂದ್ರಾಗ್ನಿಸಂವಾದೇ ಸತ್ಯಪ್ರತಿಜ್ಞಾಕಥನೇ ಶಪಥೋಕ್ತಿರ್ನಾಮ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೆರಡನೆಯ ಅಧ್ಯಾಯ

ವ್ಯಾಸ ಮತ್ತು ಮದ್ರರಾಜರ ಸಂವಾದ

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಮದ್ರರಾಜಸ್ಯ ಸಂವಾದಂ ವ್ಯಾಸಸ್ಯ ಚ ಮಹಾತ್ಮನಃ ॥೧॥

ಭೀಷ್ಮ– ಈ ವಿಷಯದಲ್ಲಿ ಮಹಾತ್ಮರಾದ ವ್ಯಾಸರ ಮತ್ತು ಮದ್ರರಾಜನ ಸಂವಾದ ರೂಪವಾದ ಈ ಪುರಾತನವಾದ ಇತಿಹಾಸವನ್ನು ಜ್ಞಾನಿಗಳು ಹೇಳುತ್ತಾರೆ.

ವೈತಾನೇ ಕರ್ಮಣಿ ತತೇ ಕುಂತೀಪುತ್ರಸ್ಯ ಯತ್ ಪುರಾ ।
ಉಕ್ತೋ ಭಗವಾನ್ ಯಜ್ಞಾರ್ಥೇ ತೇನ ತತ್ರಾನೃಣೋऽಭವತ್ ॥೨॥

ಹಿಂದೆ ಕುಂತೀಪುತ್ರನಾದ ಯುಧಿಷ್ಠಿರನ ವಿಸ್ತಾರವಾದ ಯಜ್ಞದಲ್ಲಿ ಯಜ್ಞದ ಪ್ರಯೋಜನದ ಕಾಲವು ಪ್ರಾಪ್ತವಾದಾಗ, ಅವನು ಕೃಷ್ಣನನ್ನು ಕುರಿತು ಯಜ್ಞವನ್ನು ಮಾಡುವವನು, ಯಜ್ಞದ ಫಲವನ್ನು ಭುಂಜಿಸುವವನು ನೀನೇ ಎಂದು ಹೇಳಿದನು. ಆ ಕಾರಣದಿಂದ ಯುಧಿಷ್ಠಿರನು ಯಜ್ಞದಲ್ಲಿ ದೇವ-ಋಷಿ-ಪಿತೃಋಣಗಳಿಂದ ಮುಕ್ತನಾದನು - ಲಕ್ಷ್ಮಣಂಕಾರ.

ಮದ್ರರಾಜಃ

ಕಾನಿ ತೀರ್ಥಾನಿ ಭಗವನ್ ಫಲಾರ್ಥಾಶ್ಚೇಹ ಕೇಽಶ್ರಮಾಃ ।
ಕ ಇಜ್ಯತೇ ಕಶ್ಚ ಯಜ್ಞಃ ಕೋ ಯೂಪಃ ಕ್ರಮತೇ ಚ ಕಃ ॥೩॥

ಮದ್ರರಾಜ– ಪೂಜ್ಯರೇ, ತೀರ್ಥಗಳು ಯಾವುವು? ಶ್ರಮರಹಿತವಾಗಿ ಫಲವನ್ನು ಉಂಟುಮಾಡುವವು ಯಾವುವು? ಶ್ರಮರಹಿತರಾದವರು ಯಾರು? ಪೂಜಿಸಲ್ಪಡುವವನು ಯಾವನು? ಯಜ್ಞವೆಂದರೆ ಏನು? ಯೂಪವು ಏನು? ಯಜ್ಞದಲ್ಲಿ ಕ್ರಮಣ ಮಾಡುವವನು ಯಾವನು?

ಕಶ್ಚಾಧ್ವರೇ ಶಸ್ಯತೇ ಗೀತಿಶಬ್ದೈಃ
ಕಶ್ಚಾಧ್ವರೇ ಗೀಯತೇ ವಲ್ಗುಭಾಷ್ಯೈಃ ।
ಕೋ ಬ್ರಹ್ಮಶಬ್ದೈಃ ಸ್ತುತಿಭಿಃ ಸ್ತೂಯತೇ ಚ
ಕಸ್ಯೇಹ ವೈ ಹವಿರಧ್ವರ್ಯವಃ ಕಲ್ಪಯಂತಿ ॥೪॥

ಯಜ್ಞದಲ್ಲಿ ಗೀತಿಶಬ್ದಗಳಿಂದ ಯಾವನು ಶಸ್ತ್ರಮಂತ್ರಗಳಿಂದ ಸ್ತೋತ್ರ ಮಾಡಲ್ಪಡುತ್ತಾನೆ? ಯಜ್ಞದಲ್ಲಿ ಯಾವನು ಸುಂದರವಾದ ವಾಕ್ಯಗಳಿಂದ ಧ್ಯಾನ ಮಾಡಲ್ಪಡುತ್ತಾನೆ? ವೇದಶಬ್ದಗಳಿಂದಲೂ, ಸ್ತೋತ್ರಗಳಿಂದಲೂ ಯಾವನು ಸ್ತೋತ್ರ ಮಾಡಲ್ಪಡುತ್ತಾನೆ? ಅಧ್ವರ್ಯಗಳು ಯಜ್ಞದಲ್ಲಿ ಯಾರಿಗೆ ಹವಿಸ್ಸನ್ನು ಕೊಡುತ್ತಾರೆ?

ವಣ್ಯೋ ಗ್ರಾಮೇ ಗೋಫಲೇ ಯಶ್ಚ ಸೋಮೇ
ಕಶ್ಚೋಂಕಾರಃ ಕಶ್ಚ ವೇದಾರ್ಥಮಾರ್ಗಃ ।
ಪೃಷ್ಟಸ್ತನ್ಮೇ ಬ್ರೂಹಿ ಸರ್ವಂ ಮಹರ್ಷೇ
ಲೋಕಜ್ಯೇಷ್ಠಂ ಕಸ್ಯ ವಿಜ್ಞಾನಮಾಹುಃ ॥೫॥

ಗೋಫಲ ಗ್ರಾಮದಲ್ಲಿ ಯಾವನು ವರ್ಣಿಸಲ್ಪಡುತ್ತಾನೆ? ಸೋಮ ಯಾಗದಲ್ಲಿ ಯಾವನು ವರ್ಣಿಸಲ್ಪಡುತ್ತಾನೆ? ಓಂಕಾರ ಪ್ರತಿಪಾದ್ಯನು ಯಾರು? ವೇದಾರ್ಥ ಮಾರ್ಗವು ಯಾವುದು? ಯಾರ ವಿಜ್ಞಾನವನ್ನು ಲೋಕದಲ್ಲಿ ಸರ್ವಶ್ರೇಷ್ಠವೆಂದು ಹೇಳುತ್ತಾರೆ? ಎಲೈ ಮಹರ್ಷಿಗಳೇ, ನನ್ನ ಎಲ್ಲ ಪ್ರಶ್ನೆಗಳಿಗೂ ಉತ್ತರವನ್ನು ಹೇಳಿ.

ದ್ವೈಪಾಯನಃ

ಲೋಕಜ್ಯೇಷ್ಠಂ ಯಸ್ಯ ವಿಜ್ಞಾನಮಾಹು-
ರ್ಯೋನಿಜ್ಯೇಷ್ಠಂ ಯಸ್ಯ ವದಂತಿ ಜನ್ಮ ।
ಪೂತಾತ್ಮಾನೋ ಬ್ರಾಹ್ಮಣಾ ವೇದಮುಖ್ಯಾ
ಅಸ್ಮಿನ್ ಪ್ರಶ್ನೋ ದೀಯತಾಂ ಕೇಶವಾಯ ॥೬॥

ದ್ವೈಪಾಯನ– ಪವಿತ್ರನಾದ, ವೇದಪ್ರಧಾನರಾದ ಬ್ರಾಹ್ಮಣರು ಯಾವ ಕೃಷ್ಣನ ಜ್ಞಾನವನ್ನು ಲೋಕದಲ್ಲಿ ಸರ್ವಶ್ರೇಷ್ಠವಾದುದೆಂದು ಹೇಳುತ್ತಾರೆಯೋ, ಯಾವ ಕೃಷ್ಣನ ಅವತಾರವನ್ನು ಎಲ್ಲ ಯೋನಿಗಳಲ್ಲಿ ಜನಿಸಿದವರಲ್ಲಿ ಶ್ರೇಷ್ಠವೆಂದು ಹೇಳುತ್ತಾರೆಯೋ, ಅಂತಹ ಕೃಷ್ಣನಿಗೆ ಈ ಪ್ರಶ್ನೆಯು ಕೊಡಲ್ಪಡಲಿ (ಅವನಿಂದ ಉತ್ತರವನ್ನು ಕೇಳು).

ಬ್ರಾಹ್ಮಣಾಃ

ಬಾಲೋ ಜಾತ್ಯಾ ಕ್ಷತ್ರಧರ್ಮಾರ್ಥಶೀಲೋ
ಜಾತೋ ದೇವಕ್ಯಾಂ ಶೂರಪುತ್ರೇಣ ವೀರಃ ।
ವೇತ್ತುಂ ವೇದಾನರ್ಹತೇ ಕ್ಷತ್ರಿಯೋ ವೈ
ದಾಶಾರ್ಹಾಣಾಮುತ್ತಮಃ ಪುಷ್ಕರಾಕ್ಷಃ ॥೭॥

ಬ್ರಾಹ್ಮಣರು– ಯಾವಾಗಲೂ ಬಾಲಕನಾಗಿಯೇ ಇರುವವನೂ (ಮುಪ್ಪಿಲ್ಲದವನೂ), ಅವತಾರ ಮಾಡಿದ ಜಾತಿಯಿಂದ ಕ್ಷತ್ರಿಯಧರ್ಮವನ್ನು ಅನುಸರಿಸುವವನು, ದೇವಕಿಯಲ್ಲಿ ವಸುದೇವನಿಂದ ಜನಿಸಿದ ವೀರನೂ, ಕ್ಷತ್ರಿಯನೂ, ದಾಶಾರ್ಹರಲ್ಲಿ ಶ್ರೇಷ್ಠನೂ, ಪುಂಡರೀಕಾಕ್ಷನೂ ಆದ ಕೃಷ್ಣನು ವೇದಗಳ ಅರ್ಥವನ್ನು ಸರಿಯಾಗಿ ತಿಳಿಯುವುದಕ್ಕೆ ಅರ್ಹನಾದವನು.

ವಾಸುದೇವಃ

ಪಾರಾಶರ್ಯ ಬ್ರೂಹಿ ಯದ್ ಬ್ರಾಹ್ಮಣೇಭ್ಯಃ
ಪ್ರೀತಾತ್ಮಾ ವೈ ಬ್ರಹ್ಮಕಲ್ಪಃ ಸುಮೇಧಾಃ ।
ಪೃಷ್ಟೋ ಯಜ್ಞಾರ್ಥಂ ಪಾಂಡವಸ್ಯಾತಿತೇಜಾ
ಏತಚ್ಛ್ರೇಯಸ್ತಸ್ಯ ಲೋಕಸ್ಯ ಚೈವ ॥೮॥

ವಾಸುದೇವ– ಎಲೈ ಪರಾಶರಪುತ್ರರಾದ ವೇದವ್ಯಾಸರೇ, ನೀವು ಬ್ರಹ್ಮನಿಗೆ ಸಮಾನರಾಗಿ ಒಳ್ಳೆಯ ಮೇಧಾಶಕ್ತಿಯನ್ನೂ, ಸಂತುಷ್ಟವಾದ ಮನಸ್ಸನ್ನೂ ಹೊಂದಿದ್ದೀರಿ. ಪಾಂಡವನಾದ ಯುಧಿಷ್ಠಿರನ ಯಜ್ಞದ ವಿಷಯದಲ್ಲಿ ಈ ಪ್ರಶ್ನೆಗಳನ್ನು ಕೇಳಲ್ಪಟ್ಟ ಅತಿತೇಜಸ್ವಿಗಳಾದ ನೀವು ಬ್ರಾಹ್ಮಣರಿಗೂ ಮತ್ತು ಯಜಮಾನನಾದ ಯುಧಿಷ್ಠಿರನಿಗೂ ಶ್ರೇಯಸ್ಕರವಾದುದನ್ನು ಹೇಳಿ.

ವ್ಯಾಸಃ

ಉಕ್ತಂ ವಾಕ್ಯಂ ಯದ್ ಭವಾನ್ ಮಾಮವೋಚತ್
ಪ್ರಶ್ನಂ ಚಿತ್ರಂ ನಾಹಮತ್ರೋತ್ಸಹೇಽದ್ಯ ।
ಛೇತ್ತುಂ ವಿಸ್ಪಷ್ಟಂ ತಿಷ್ಠತಿ ತ್ವದ್ವಿಧೇ ವೈ
ಲೋಕಜ್ಯೇಷ್ಠೇ ವಿಶ್ವರೂಪೇ ಸುನಾಭೇ ॥೯॥

ವ್ಯಾಸರು– ನೀನು ನನಗೆ ಏನನ್ನು ಹೇಳಬೇಕೆಂದಿದ್ದೀಯೋ ಅದನ್ನು ಮೊದಲೇ ಹೇಳಿದ್ದೇನೆ. ಲೋಕಗಳಲ್ಲಿ ಸರ್ವಶ್ರೇಷ್ಠನಾದ, ವಿಶ್ವರೂಪನಾದ, ಬ್ರಹ್ಮನನ್ನು ಪಡೆದ ನಾಭಿಯುಳ್ಳ, ಚೆನ್ನಾಗಿ ಸಂಶಯವನ್ನು ಪರಿಹಾರ ಮಾಡುವ ನಿನ್ನಂತಹವನು ಇರುವಾಗ ಇಂತಹ ಚಿತ್ರವಾದ ಪ್ರಶ್ನೆಗೆ ಉತ್ತರವನ್ನು ಹೇಳಲು ನಾನು ಬಯಸುವುದಿಲ್ಲ.

ವಾಸುದೇವಃ

ತತ್ತ್ವಂ ವಾಕ್ಯಂ ಬ್ರೂಹಿ ಯತ್ ತ್ವಂ ಮಹರ್ಷೇ
ಯಸ್ಮಿನ್ ಕೃಷ್ಣಃ ಪ್ರೋಚ್ಯತೇ ವೈ ಯಥಾವತ್ ।
ಪ್ರೀತಸ್ತೇಽಹಂ ಜ್ಞಾನಶಕ್ತ್ಯಾ ಯಥಾವತ್
ತಸ್ಮಾನ್ನಿರ್ದೇಶೇ ಕರ್ಮಣಾಂ ಬ್ರೂಹಿ ಸಿದ್ಧಮ್ ॥೧೦॥

ವಾಸುದೇವ– ಎಲೈ ಮಹರ್ಷಿಗಳೇ, ನೀವು ಎಲ್ಲಿ ಕೃಷ್ಣನ ಮಹಿಮೆ ಹೇಳಲ್ಪಡುತ್ತದೆಯೋ ಅಂತಹ ಯಥಾರ್ಥವಾದ ಮಾತುಗಳನ್ನು ಹೇಳಿ. ನಿಮ್ಮ ಜ್ಞಾನಶಕ್ತಿಯಿಂದ ನಾನು ಸಂತೋಷಗೊಂಡಿದ್ದೇನೆ. ಆದ್ದರಿಂದ ನಾನು ನಿರ್ದೇಶ ಮಾಡಿದಂತೆ ಕರ್ಮದ ವಿಷಯದಲ್ಲಿ ಕೇಳಿದ ಈ ಪ್ರಶ್ನೆಗಳಿಗೆ ಶಾಸ್ತ್ರದಲ್ಲಿ ಸಿದ್ಧವಾದ ಉತ್ತರವನ್ನು ಹೇಳಿ.

ವೈಶಂಪಾಯನಃ

ಉಕ್ತವಾಕ್ಯೇ ಸತ್ತಮೇ ಯಾದವಾನಾಂ
ಕೃಷ್ಣೇ ವ್ಯಾಸಃ ಪ್ರಾಂಜಲಿರ್ವಾಸುದೇವಮ್ ।
ವಿಪ್ರೈಃ ಸಾರ್ಧಂ ಪೂಜಯನ್ ದೇವದೇವಂ
ಕೃಷ್ಣಂ ವಿಷ್ಣುಂ ವಾಸುದೇವಂ ಬಭಾಷೇ ॥೧೧॥

ವೈಶಂಪಾಯನ– ಯಾದವಶ್ರೇಷ್ಠನಾದ ಕೃಷ್ಣನು ಈ ಮಾತನ್ನು ಆಡುತ್ತಿರಲು ವ್ಯಾಸರು ವಾಸುದೇವನಿಗೆ ಕೈಗಳನ್ನು ಮುಗಿದು, ಬ್ರಾಹ್ಮಣರ ಜೊತೆಯಲ್ಲಿ ಅವನನ್ನು ಪೂಜಿಸುತ್ತಾ ಕೃಷ್ಣನೂ, ವಿಷ್ಣುವೂ, ವಾಸುದೇವನೂ ಆದ ಅವನನ್ನು ಕುರಿತು ಹೇಳಿದರು.

ವ್ಯಾಸಃ

ಆನಂತ್ಯಂ ತೇ ವಿಶ್ವಕರ್ಮಂಸ್ತವೈವಂ
ರೂಪಂ ಪೌರಾಣಂ ಶಾಶ್ವತಂ ಚ ಧ್ರುವಂ ಚ ।
ಕಸ್ತೇ ಬುದ್ಧ್ಯೇದ್ ವೇದವಾದೇಷು ಚೈತ-
ಲ್ಲೋಕೇ ಹ್ಯಸ್ಮಿನ್ ಶಾಸಕಸ್ತ್ವಂ ಪಿತೇವ ॥೧೨॥

ವ್ಯಾಸರು– ಎಲೈ ವಿಶ್ವಕರ್ಮನೇ, ನಿನ್ನ ರೂಪವು ಪ್ರಾಚೀನವೂ, ಶಾಶ್ವತವೂ, ನಿತ್ಯವೂ ಮತ್ತು ಅನಂತವೂ ಆದುದು. ನಿನ್ನ ವಿಪುಲಮಹಿಮೆಯನ್ನು ವೇದವಾದಿಗಳಲ್ಲಿ ಯಾವನು ತಿಳಿಯುತ್ತಾನೆ? ನೀನು ಲೋಕವನ್ನು ತಂದೆಯಂತೆ ಶಾಸನ ಮಾಡುವವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ವೇದವ್ಯಾಸೋದಾಹರಣಂ ನಾಮ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿಮೂರನೆಯ ಅಧ್ಯಾಯ

ಮದ್ರರಾಜನ ಪ್ರಶ್ನೆಗಳಿಗೆ ಉತ್ತರ

ಭೀಷ್ಮಃ

ದ್ವಾರಕಾಯಾಂ ಯಥಾ ಪ್ರಾಹ ಪುರಾऽಯಂ ಮುನಿಸತ್ತಮಃ ।
ವೇದವಿಪ್ರಮಯತ್ವಂ ತು ವಾಸುದೇವಸ್ಯ ತಚ್ಛೃಣು ॥೧॥

ಭೀಷ್ಮರು– ಮುನಿಶ್ರೇಷ್ಠರಾದ ಈ ಮುನಿವ್ಯಾಸರು ಹಿಂದೆ ದ್ವಾರಕೆಯಲ್ಲಿ ವಾಸುದೇವನು ವೇದಪ್ರತಿಪಾದ್ಯನೆಂದು, ವಿಪ್ರ ಪ್ರಧಾನನೆಂದು ಎಂದು ಏನು ಹೇಳಿದರೋ ಅದನ್ನು ಕೇಳು.

ಯೋಽಯಂ ವಿಷ್ಣುಂ ವಾಸುದೇವಂ ವಿಜಾನನ್
ಸರ್ವಾನ್ ವಿಪ್ರಾನ್ ಬೋಧತೇ ತತ್ವದರ್ಶೀ ।
ವಿಷ್ಣುಂ ಕ್ರಾಂತಂ ವಾಸುದೇವಂ ವಿಜಾನನ್
ವಿಪ್ರೋ ವಿಪ್ರತ್ವಂ ಗಚ್ಛತೇ ತತ್ತ್ವದರ್ಶೀ ॥೨॥

ತತ್ತ್ವಜ್ಞಾನಿಗಳಾದ ಈ ವ್ಯಾಸರು ವಾಸುದೇವನನ್ನು ವಿಷ್ಣುವೆಂದು ತಿಳಿದು ಎಲ್ಲರಿಗೂ ಬೋಧಿಸುತ್ತಾರೆ. ಬಲಿಯ ಯಜ್ಞದಲ್ಲಿ ಮೂರುಲೋಕವನ್ನು ಕ್ರಮಣ ಮಾಡಿದ ವಿಷ್ಣುವು ವಾಸುದೇವನೆಂದು ತಿಳಿದ ಬ್ರಾಹ್ಮಣನು ತತ್ತ್ವಜ್ಞಾನಿಯಾಗಿ ಬ್ರಾಹ್ಮಣತ್ವವನ್ನು ಹೊಂದುತ್ತಾನೆ.

ವಿಷ್ಣುರ್ಯಜ್ಞಸ್ತ್ವಿಜ್ಯತೇ ಚಾಪಿ ವಿಷ್ಣುಃ
ಕೃಷ್ಣೋ ವಿಷ್ಣುರ್ಯಶ್ಚ ಕೃತ್ಸ್ನಃ ಪ್ರಭುಶ್ಚ ।
ಕೃಷ್ಣೋ ವೇದಾಂಗಂ ವೇದವಾದಾಶ್ಚ ಕೃಷ್ಣ
ಏವಂ ಜಾನನ್ ಬ್ರಾಹ್ಮಣೋ ಬ್ರಹ್ಮ ಏತಿ ॥೩॥

ಯಜ್ಞವೆಂದರೆ ವಿಷ್ಣುವೇ (ಯಜ್ಞವೆಂಬುದು ವಿಷ್ಣುವಿನ ನಾಮ). ಯಜ್ಞದಲ್ಲಿ ಪೂಜಿಸಲ್ಪಡುವವನೂ ವಿಷ್ಣುವೇ. ಕೃಷ್ಣನೇ ವಿಷ್ಣು. ಅವನೇ ಪೂರ್ಣನಾದವನು ಮತ್ತು ಪ್ರಭುವಾದವನು. ವೇದ-ವೇದಾಂಗಗಳು ವೇದವಾದಗಳು ಎಲ್ಲವೂ ಕೃಷ್ಣನೇ (ಎಲ್ಲವೂ ಕೃಷ್ಣನನ್ನೇ ಪ್ರತಿಪಾದಿಸುತ್ತವೆ). ಹೀಗೆ ತಿಳಿದ ಬ್ರಾಹ್ಮಣನು ಪರಬ್ರಹ್ಮನನ್ನು ಹೊಂದುತ್ತಾನೆ.

ಸ್ಥಾನಂ ಸರ್ವಂ ವೈಷ್ಣವಂ ಯಜ್ಞಮಾರ್ಗೇ
ಚಾತುರ್ಹೋತ್ರಂ ವೈಷ್ಣವಂ ತತ್ರ ಕೃಷ್ಣಃ ।
ಸರ್ವೈರ್ಭಾವೈರಿಜ್ಯತೇ ಸರ್ವಕಾಮೈಃ
ಪುಣ್ಯಾನ್ ಲೋಕಾನ್ ಬ್ರಾಹ್ಮಣಾಃ ಪ್ರಾಪ್ನುವಂತಿ ॥೪॥

ಯಜ್ಞಮಾರ್ಗದಲ್ಲಿರುವ ಸ್ಥಾನಗಳೆಲ್ಲವೂ ವಿಷ್ಣುಸಂಬಂಧಿಯಾದವುಗಳು. ನಾಲ್ಕು ಜನ ಹೋತೃಗಳುಳ್ಳ ಯಜ್ಞವು ವಿಷ್ಣುಸಂಬಂಧಿಯಾದುದು. ಅಲ್ಲಿ ಕೃಷ್ಣನು

ಸನ್ನಿಹಿತನಾಗಿದ್ದಾನೆ. ಕೃಷ್ಣನನ್ನು ಸರ್ವಕಾಮಗಳಿಂದ, ಸರ್ವಭಾವಗಳಿಂದ ಪೂಜಿಸಿದ ಬ್ರಾಹ್ಮಣರು ಪುಣ್ಯಲೋಕಗಳನ್ನು ಹೊಂದುತ್ತಾರೆ.

ಸೋಮಂ ಸದ್ಭಾವಾದ್ ಯೇ ಚ ಜಾತಂ ಪಿಬಂತಿ
ದೀಪ್ತಂ ಕರ್ಮ ಯೇ ವಿದಾನಾಶ್ಚರಂತಿ ।
ಏಕಾಂತಮಿಷ್ಟೌ ಚಿಂತಯಂತೋ ದಿವಿಸ್ಥಾ-
ಸ್ತೇ ವೈ ತ್ಯಾಗಂ ಪ್ರಾಪ್ನುವಂತಿ ಪ್ರತಿಜ್ಞಾಃ ॥೫॥

ಯಾವ ದೇವತೆಗಳು ಸದ್ಭಾವನೆಯಿಂದ (ವಿಷ್ಣುಪ್ರೀತ್ಯರ್ಥವಾಗಿ) ತುಂಬಿದ ಸೋಮವನ್ನು ಪಾನ ಮಾಡುತ್ತಾರೆಯೋ, ದೀಪ್ತವಾದ ಕರ್ಮಗಳನ್ನು ಆಚರಿಸುತ್ತಾರೆಯೋ, ಏಕಾಂತದಲ್ಲಿ ಕೃಷ್ಣನಾದ ವಿಷ್ಣುವನ್ನು ಧ್ಯಾನ ಮಾಡುತ್ತಾರೆಯೋ ಅಂತಹ ಪ್ರತಿಸ್ಥಳದಲ್ಲಿಯೂ ವಿಷ್ಣುವನ್ನು ತಿಳಿಯುವಂತಹ ದೇವತೆಗಳು ಭವಬಂಧನವನ್ನು ಪರಿತ್ಯಾಗ ಮಾಡುತ್ತಾರೆ - ಲಕ್ಷಾಲಂಕಾರ.

ಓಮಿತ್ಯೇತದ್ ಧ್ಯಾಯಮಾನೋ ನ ಗಚ್ಛೇದ್
ದುರ್ಗಂ ಪಂಥಾನಂ ಪಾಪಕರ್ಮಾಪಿ ವಿಪ್ರಃ ।
ಸರ್ವಂ ಕೃಷ್ಣಂ ವಾಸುದೇವಂ ಹಿ ವಿಪ್ರಾಃ
ಕೃತ್ವಾ ಧ್ಯಾನಂ ದುರ್ಗತಿಂ ನ ಪ್ರಯಾಂತಿ ॥೬॥

ಬ್ರಾಹ್ಮಣನು ಪಾಪಕರ್ಮವನ್ನು ಮಾಡಿದರೂ ಓಂಕಾರಪ್ರತಿಪಾದ್ಯನಾದ ವಿಷ್ಣುವನ್ನು ಧ್ಯಾನ ಮಾಡುವವನು ದುಃಖದಾಯಕವಾದ ಮಾರ್ಗದಲ್ಲಿ ಹೋಗುವುದಿಲ್ಲ. ವಾಸುದೇವನಾದ ಕೃಷ್ಣನನ್ನು ಪೂರ್ಣನೆಂದು ಧ್ಯಾನವನ್ನು ಮಾಡುವ ಬ್ರಾಹ್ಮಣರು ದುರ್ಗತಿಯನ್ನು ಹೊಂದುವುದಿಲ್ಲ.

ಆಜ್ಯಂ ಯಜ್ಞಃ ಸ್ರುಕ್‌ಸ್ರವೌ ಯಜ್ಞದಾತಾ
ಇಚ್ಛಾ ಪತ್ನೀ ಪತ್ನಿಶಾಲಾ ಹವೀಂಷಿ ।
ಇಧ್ಮಾಃ ಪುರೋಡಾಶಃ ಸರ್ವದಾ ಹೋತೃಕರ್ತಾ
ಕೃತ್ಸ್ನಂ ವಿಷ್ಣುಂ ಸಂವಿಜಾನಂಸ್ತಮೇತಿ ॥೭॥

ಆಜ್ಯ, ದೇವತೆಗಳಿಗಾಗಿ ದ್ರವ್ಯತ್ಯಾಗ, ಸ್ರುಕ್-ಸ್ರುವಗಳು, ಯಜಮಾನ, ಸಂಕಲ್ಪ, ಪತ್ನೀ, ಪತ್ನೀಶಾಲೆ, ಹವಿಸ್ಸುಗಳು, ಕಟ್ಟಿಗೆಗಳು, ಪುರೋಡಾಶ, ಹೋತೃ ಮೊದಲಾದ

ಋತ್ವಿಜರು ಎಲ್ಲವೂ ವಿಷ್ಣುವೆಂದು ಚೆನ್ನಾಗಿ ತಿಳಿಯುವವನು (ಎಲ್ಲರಲ್ಲಿಯೂ ವಿಷ್ಣುವು ಸನ್ನಿಹಿತನಾಗಿದ್ದಾನೆಂದು ತಿಳಿಯುವವನು) ವಿಷ್ಣುವನ್ನು ಹೊಂದುತ್ತಾನೆ.

ಯೋಗೇ ಯೋಗೇ ಕರ್ಮಣಾಂ ಚಾಭಿಹಾರೇ
ಯುಕ್ತೇ ವೈತಾನೇ ಕರ್ಮಣಿ ಬ್ರಾಹ್ಮಣಸ್ಯ ।
ಪುಷ್ಟ್ಯರ್ಥೇಷು ಪ್ರಾಪ್ನುಯಾತ್ ಕರ್ಮಸಿದ್ಧಿಂ
ಶಾಂತ್ಯರ್ಥೇಷು ಪ್ರಾಪ್ನುಯಾತ್ ಸರ್ವಶಾಂತಿಮ್ ॥೮॥

ಬ್ರಾಹ್ಮಣನು ತಾನು ಮಾಡುವ ಪ್ರತಿಯೊಂದು ಕರ್ಮಗಳಲ್ಲಿಯೂ, ಯಜ್ಞಾದಿಗಳಲ್ಲಿಯೂ ಹೀಗೆ ಚಿಂತಿಸಿದರೆ ಪೌಷ್ಟಿಕಕರ್ಮಗಳಲ್ಲಿ ಕರ್ಮಸಿದ್ಧಿಯನ್ನು ಪಡೆಯುತ್ತಾನೆ. ಶಾಂತಿಕರ್ಮದಲ್ಲಿ ಸರ್ವಶಾಂತಿಯನ್ನು ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಕೃಷ್ಣಪ್ರಶಂಸಾ ನಾಮ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾಲ್ಕನೆಯ ಅಧ್ಯಾಯ

ಮದ್ರರಾಜನಿಗೆ ವ್ಯಾಸರ ಉಪದೇಶ

ದ್ವೈಪಾಯನಃ

ಶ್ರದ್ಧಾ ತ್ಯಾಗಂ ನಿರ್ವೃತಿಂ ಚಾಪಿ ಪೂಜಾಂ
ಸತ್ಯಂ ಧರ್ಮಂ ಯಃ ಕೃತಂ ಚಾಭ್ಯುಪೈತಿ ।
ಕಾಮದ್ವೇಷೌ ತ್ಯಜತಾಂ ಸರ್ವತುಲ್ಯಃ
ಶ್ರದ್ಧಾಪೂತಃ ಸರ್ವಯಜ್ಞೇಷು ಯೋಗ್ಯಃ ॥೧॥

ಶ್ರದ್ಧೆ, ತ್ಯಾಗ (ದಾನ), ಸಂತೋಷ, ಪೂಜೆ, ಸತ್ಯ, ಧರ್ಮ, ಉಪಕಾರ ಸ್ಮರಣೆ, ಕಾಮ- ದ್ವೇಷ ತ್ಯಾಗ, ಸರ್ವಾತ್ಮನಾ ಸಮನಾಗಿರುವಿಕೆ, ಶ್ರದ್ಧೆಯಿಂದ ಉಂಟಾದ ಪಾವಿತ್ರ್ಯ -ಇವುಗಳನ್ನು ಹೊಂದಿದವನು ಎಲ್ಲ ಯಜ್ಞಗಳಲ್ಲಿಯೂ ಯೋಗ್ಯನಾಗುತ್ತಾನೆ.

ಯಸ್ಮಿನ್ ಯಜ್ಞೇ ಸರ್ವಭೂತಾಃ ಪ್ರಹೃಷ್ಟಾಃ
ಸರ್ವೇ ಚಾರಂಭಾಃ ಶಾಸ್ತ್ರದೃಷ್ಟಾಃ ಪ್ರವೃತ್ತಾಃ ।
ಧರ್ಮ್ಯೈರರ್ಥೈರ್ಯೈರ್ಯೇ ಯಜಂತೇ ಧ್ರುವಂ ತೇ
ಪೂತಾತ್ಮಾನೋ ಧರ್ಮಮೇಕಂ ಭಜಂತೇ ॥೨॥

ಯಾವ ಯಜ್ಞದಲ್ಲಿ ಎಲ್ಲ ಪ್ರಾಣಿಗಳೂ ಸಂತೋಷಪಡುತ್ತವೆಯೋ, ಯಾವ ಎಲ್ಲ ಉಪಕ್ರಮಗಳು ಶಾಸ್ತ್ರವಿಧಿಯಂತೆಯೇ ಉಂಟಾಗುತ್ತವೆಯೋ, ಧರ್ಮದಿಂದ ಸಂಪಾದಿಸಿದ ಅರ್ಥದಿಂದ ಯಾರು ಯಾಗವನ್ನು ಮಾಡುತ್ತಾರೆಯೋ ಅಂತಹವರು ಪರಮಪವಿತ್ರರಾಗಿ ನಿಶ್ಚಯವಾಗಿ ಶ್ರೇಷ್ಠವಾದ ಧರ್ಮವನ್ನೇ ಹೊಂದುತ್ತಾರೆ.

ಏಕಾಕ್ಷರಂ ದ್ವ್ಯಕ್ಷರಮೇಕಮೇವ
ಸದಾ ಯಜಂತೇ ನಿಯತಾಃ ಪ್ರತೀತಾಃ ।
ದೃಷ್ಟ್ವಾ ಮನಾಗರ್ಚಯಿತ್ವಾ ಸ್ಮ ವಿಪ್ರಾಃ
ಸತಾಂ ಮಾರ್ಗಂ ತಂ ಧ್ರುವಂ ಸಂಭಜಂತೇ ॥೩॥

ಏಕಾಕ್ಷರದ ಓಂಕಾರವೂ, ಎರಡು ಅಕ್ಷರಗಳ ಹರಿ ಶಬ್ದವೂ ಒಂದೇ ಅರ್ಥವನ್ನು ಹೇಳುತ್ತವೆ. ಸಜ್ಜನರು 'ಹರಿಃ ಓಂ' ಎಂದು ಹೇಳಿ ನಿಯಮದಿಂದ ಕೂಡಿದವರಾಗಿ ಸಂತೋಷದಿಂದ ಯಾವಾಗಲೂ ಯಾಗವನ್ನು ಮಾಡುತ್ತಾರೆ. ಬ್ರಾಹ್ಮಣರು ಅವನನ್ನು ಅರ್ಚಿಸಿ, ಯಾವಾಗಲಾದರೂ ಒಮ್ಮೆ ನೋಡಿ, ಸಜ್ಜನರ ಮಾರ್ಗದಲ್ಲಿ ಖಂಡಿತವಾಗಿ ನಡೆಯುತ್ತಾರೆ (ಲಕ್ಷಾಲಂಕಾರ).

ಪಾಪಾತ್ಮಾನಃ ಕ್ರೋಧರಾಗಾಭಿಭೂತಾಃ
ಕೃಷ್ಣೇ ಭಕ್ತಾ ನಾಮ ಸಂಕೀರ್ತಯಂತಃ ।
ಪೂತಾತ್ಮಾನೋ ಯಜ್ಞಶೀಲಾಃ ಸುಮೇಧಾ
ಯಜ್ಞಸ್ಯಾಂತೇ ಕೀರ್ತಿಲೋಕಾನ್ ಭಜಂತೇ ॥೪॥

ಪಾಪವನ್ನು ಮಾಡುವವರೂ, ಕ್ರೋಧ-ರಾಗಗಳಿಗೆ ವಶರಾದವರೂ ಆದವರು ಭಕ್ತಿಯಿಂದ ಕೃಷ್ಣನ ನಾಮವನ್ನು ಸಂಕೀರ್ತನೆ ಮಾಡಿದರೆ ಪವಿತ್ರರಾಗಿ, ಯಜ್ಞಶೀಲರೂ, ಒಳ್ಳೆಯ ವಿವೇಕವುಳ್ಳವರೂ ಆಗಿ ಯಜ್ಞದ ಕೊನೆಯಲ್ಲಿ ಕೀರ್ತಿಯುಂಟಾಗುವ ಲೋಕಗಳನ್ನು ಹೊಂದುತ್ತಾರೆ.

ಋತ್ವಿಜರು ಎಲ್ಲವೂ ವಿಷ್ಣುವೆಂದು ಚೆನ್ನಾಗಿ ತಿಳಿಯುವವನು (ಎಲ್ಲರಲ್ಲಿಯೂ ವಿಷ್ಣುವು ಸನ್ನಿಹಿತನಾಗಿದ್ದಾನೆಂದು ತಿಳಿಯುವವನು) ವಿಷ್ಣುವನ್ನು ಹೊಂದುತ್ತಾನೆ.

ಯೋಗೇ ಯೋಗೇ ಕರ್ಮಣಾಂ ಚಾಭಿಹಾರೇ
ಯುಕ್ತೇ ವೈತಾನೇ ಕರ್ಮಣಿ ಬ್ರಾಹ್ಮಣಸ್ಯ ।
ಪುಷ್ಟ್ಯರ್ಥೇಷು ಪ್ರಾಪ್ನುಯಾತ್ ಕರ್ಮಸಿದ್ಧಿಂ
ಶಾಂತ್ಯರ್ಥೇಷು ಪ್ರಾಪ್ನುಯಾತ್ ಸರ್ವಶಾಂತಿಮ್ ॥೮॥

ಬ್ರಾಹ್ಮಣನು ತಾನು ಮಾಡುವ ಪ್ರತಿಯೊಂದು ಕರ್ಮಗಳಲ್ಲಿಯೂ, ಯಜ್ಞಾದಿಗಳಲ್ಲಿಯೂ ಹೀಗೆ ಚಿಂತಿಸಿದರೆ ಪೌಷ್ಟಿಕಕರ್ಮಗಳಲ್ಲಿ ಕರ್ಮಸಿದ್ಧಿಯನ್ನು ಪಡೆಯುತ್ತಾನೆ. ಶಾಂತಿಕರ್ಮದಲ್ಲಿ ಸರ್ವಶಾಂತಿಯನ್ನು ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಕೃಷ್ಣಪ್ರಶಂಸಾ ನಾಮ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾಲ್ಕನೆಯ ಅಧ್ಯಾಯ

ಮದ್ರರಾಜನಿಗೆ ವ್ಯಾಸರ ಉಪದೇಶ

ದ್ವೈಪಾಯನಃ

ಶ್ರದ್ಧಾ ತ್ಯಾಗಂ ನಿರ್ವೃತಿಂ ಚಾಪಿ ಪೂಜಾಂ
ಸತ್ಯಂ ಧರ್ಮಂ ಯಃ ಕೃತಂ ಚಾಭ್ಯುಪೈತಿ ।
ಕಾಮದ್ವೇಷೌ ತ್ಯಜತಾಂ ಸರ್ವತುಲ್ಯಃ
ಶ್ರದ್ಧಾಪೂತಃ ಸರ್ವಯಜ್ಞೇಷು ಯೋಗ್ಯಃ ॥೧॥

ಶ್ರದ್ಧೆ, ತ್ಯಾಗ (ದಾನ), ಸಂತೋಷ, ಪೂಜೆ, ಸತ್ಯ, ಧರ್ಮ, ಉಪಕಾರ ಸ್ಮರಣೆ, ಕಾಮ- ದ್ವೇಷ ತ್ಯಾಗ, ಸರ್ವಾತ್ಮನಾ ಸಮನಾಗಿರುವಿಕೆ, ಶ್ರದ್ಧೆಯಿಂದ ಉಂಟಾದ ಪಾವಿತ್ರ್ಯ -ಇವುಗಳನ್ನು ಹೊಂದಿದವನು ಎಲ್ಲ ಯಜ್ಞಗಳಲ್ಲಿಯೂ ಯೋಗ್ಯನಾಗುತ್ತಾನೆ.

ಯಸ್ಮಿನ್ ಯಜ್ಞೇ ಸರ್ವಭೂತಾಃ ಪ್ರಹೃಷ್ಟಾಃ
ಸರ್ವೇ ಚಾರಂಭಾಃ ಶಾಸ್ತ್ರದೃಷ್ಟಾಃ ಪ್ರವೃತ್ತಾಃ ।
ಧರ್ಮ್ಯೈರರ್ಥ್ಯೈರ್ಯೇ ಯಜಂತೇ ಧ್ರುವಂ ತೇ
ಪೂತಾತ್ಮಾನೋ ಧರ್ಮಮೇಕಂ ಭಜಂತೇ ॥೨॥

ಯಾವ ಯಜ್ಞದಲ್ಲಿ ಎಲ್ಲ ಪ್ರಾಣಿಗಳೂ ಸಂತೋಷಪಡುತ್ತವೆಯೋ, ಯಾವ ಎಲ್ಲ ಉಪಕ್ರಮಗಳು ಶಾಸ್ತ್ರವಿಧಿಯಂತೆಯೇ ಉಂಟಾಗುತ್ತವೆಯೋ, ಧರ್ಮದಿಂದ ಸಂಪಾದಿಸಿದ ಅರ್ಥದಿಂದ ಯಾರು ಯಾಗವನ್ನು ಮಾಡುತ್ತಾರೆಯೋ ಅಂತಹವರು ಪರಮಪವಿತ್ರರಾಗಿ ನಿಶ್ಚಯವಾಗಿ ಶ್ರೇಷ್ಠವಾದ ಧರ್ಮವನ್ನೇ ಹೊಂದುತ್ತಾರೆ.

ಏಕಾಕ್ಷರಂ ದ್ವ್ಯಕ್ಷರಮೇಕಮೇವ
ಸದಾ ಯಜಂತೇ ನಿಯತಾಃ ಪ್ರತೀತಾಃ ।
ದೃಷ್ಟ್ವಾ ಮನಾಗರ್ಚಯಿತ್ವಾ ಸ್ಮ ವಿಪ್ರಾಃ
ಸತಾಂ ಮಾರ್ಗಂ ತಂ ಧ್ರುವಂ ಸಂಭಜಂತೇ ॥೩॥

ಏಕಾಕ್ಷರದ ಓಂಕಾರವೂ, ಎರಡು ಅಕ್ಷರಗಳ ಹರಿ ಶಬ್ದವೂ ಒಂದೇ ಅರ್ಥವನ್ನು ಹೇಳುತ್ತವೆ. ಸಜ್ಜನರು 'ಹರಿಃ ಓಂ' ಎಂದು ಹೇಳಿ ನಿಯಮದಿಂದ ಕೂಡಿದವರಾಗಿ ಸಂತೋಷದಿಂದ ಯಾವಾಗಲೂ ಯಾಗವನ್ನು ಮಾಡುತ್ತಾರೆ. ಬ್ರಾಹ್ಮಣರು ಅವನನ್ನು ಅರ್ಚಿಸಿ, ಯಾವಾಗಲಾದರೂ ಒಮ್ಮೆ ನೋಡಿ, ಸಜ್ಜನರ ಮಾರ್ಗದಲ್ಲಿ ಖಂಡಿತವಾಗಿ ನಡೆಯುತ್ತಾರೆ (ಲಕ್ಷಾಲಂಕಾರ).

ಪಾಪಾತ್ಮಾನಃ ಕ್ರೋಧರಾಗಾಭಿಭೂತಾಃ
ಕೃಷ್ಣೇ ಭಕ್ತಾ ನಾಮ ಸಂಕೀರ್ತಯಂತಃ ।
ಪೂತಾತ್ಮಾನೋ ಯಜ್ಞಶೀಲಾಃ ಸುಮೇಧಾ
ಯಜ್ಞಸ್ಯಾಂತೇ ಕೀರ್ತಿಲೋಕಾನ್ ಭಜಂತೇ ॥೪॥

ಪಾಪವನ್ನು ಮಾಡುವವರೂ, ಕ್ರೋಧ-ರಾಗಗಳಿಗೆ ವಶರಾದವರೂ ಆದವರು ಭಕ್ತಿಯಿಂದ ಕೃಷ್ಣನ ನಾಮವನ್ನು ಸಂಕೀರ್ತನೆ ಮಾಡಿದರೆ ಪವಿತ್ರರಾಗಿ, ಯಜ್ಞಶೀಲರೂ, ಒಳ್ಳೆಯ ವಿವೇಕವುಳ್ಳವರೂ ಆಗಿ ಯಜ್ಞದ ಕೊನೆಯಲ್ಲಿ ಕೀರ್ತಿಯುಂಟಾಗುವ ಲೋಕಗಳನ್ನು ಹೊಂದುತ್ತಾರೆ.

ಏಕೋ ದೇವೋ ಬ್ರಾಹ್ಮಣಾನಾಂ ಬಭೂವ
ಚತುಷ್ಪಾದೋ ವೈ ಸಗುಣೋ ಬ್ರಹ್ಮಶೀರ್ಷೇ ।
ಪಾದಂಪಾದಂ ಬ್ರಾಹ್ಮಣಾ ವೇದ್ಯಮಾಹುಃ
ತ್ರೇತಾಕಾಲೇಽಂತಿಮೇ ವಿದ್ಧಿ ಶೇಷಮ್ ॥೫॥

ಬ್ರಾಹ್ಮಣರಿಗೆ ನಾರಾಯಣನೊಬ್ಬನೇ ದೇವನಾಗಿದ್ದಾನೆ. ಉಪನಿಷತ್ತುಗಳಲ್ಲಿ ಗುಣಭರಿತನಾದ ಅನಿರುದ್ಧ-ಪ್ರದ್ಯುಮ್ನ-ಸಂಕರ್ಷಣ-ವಾಸುದೇವ ಎಂಬ ನಾಲ್ಕು ಅಂಶಗಳುಳ್ಳವನಾದ ನಾರಾಯಣನ ತ್ರೇತಾಯುಗದಿಂದ ಆರಂಭಿಸಿ ಕಲಿಯುಗದ ಕೊನೆಯವರೆಗೆ ಬ್ರಾಹ್ಮಣರು ಒಂದೊಂದನ್ನು ಮಾತ್ರ ತಿಳಿಯುತ್ತಾರೆ. ಕಲಿಯುಗವು ಮುಗಿದು ಕೃತಯುಗವು ಪ್ರಾಪ್ತವಾದಾಗ ಉಳಿದ ಅಂಶಗಳನ್ನೂ ತಿಳಿಯುತ್ತಾರೆ (ಲಕ್ಷಾಲಂಕಾರ).

ದ್ವೈಪಾಯನಃ

ಸರ್ವೇ ವೇದಾಃ ಸರ್ವವೇದ್ಯಾಃ ಸಶಾಸ್ತ್ರಾ
ಸರ್ವೇ ಯಜ್ಞಾಃ ಸರ್ವ ಇಜ್ಯಾಶ್ಚ ಕೃಷ್ಣಃ ।
ವಿದುಃ ಕೃಷ್ಣಂ ಬ್ರಾಹ್ಮಣಸ್ತತ್ತ್ವತೋ ಯೇ
ತೇಷಾಂ ರಾಜನ್ ಸರ್ವಯಜ್ಞಾಃ ಸಮಾಪ್ತಾಃ ॥೬॥

ಜ್ಞೇಯೋ ಯೋಗೀ ಬ್ರಾಹ್ಮಣೈರ್ವೇದತತ್ತ್ವೈ-
ರಾರಣ್ಯಕೈಃ ಸೈಷ ಕೃಷ್ಣಃ ಪ್ರಭುತ್ವಾತ್ ।
ಸರ್ವಾನ್ ಯಜ್ಞಾನ್ ಬ್ರಾಹ್ಮಣಾನ್ ಬ್ರಹ್ಮ ಚೈವ
ವ್ಯಾಪ್ಯಾತಿಷ್ಠದ್ ದೇವದೇವಸ್ತ್ರಿಲೋಕೇ ॥೭॥

ಎಲ್ಲ ವೇದಗಳು, ಎಲ್ಲ ವೇದಾಂಗಗಳು ಮತ್ತು ಶಾಸ್ತ್ರಗಳು, ಸರ್ವಯಜ್ಞಗಳು, ಎಲ್ಲದರಿಂದಲೂ ಕೃಷ್ಣನೇ ಅರ್ಚ್ಯನಾದವನು ಮತ್ತು ಪೂಜ್ಯನಾದವನು. ಎಲೈ ರಾಜನೇ, ಯಾವ ಬ್ರಾಹ್ಮಣರು ಕೃಷ್ಣನನ್ನು ಚೆನ್ನಾಗಿ ತಿಳಿಯುತ್ತಾರೋ ಅವರು ಎಲ್ಲ ಯಜ್ಞಗಳನ್ನೂ ಮಾಡಿದಂತೆಯೇ ಸರಿ. ಬ್ರಾಹ್ಮಣರು ವೇದತತ್ತ್ವಗಳಿಂದಲೂ, ಆರಣ್ಯಕಗಳಿಂದಲೂ ಯೋಗೀಶ್ವರನಾದ ಕೃಷ್ಣನನ್ನೇ ತಿಳಿಯಬೇಕು. ಅಂತಹ ದೇವದೇವನಾದ ಈ ಕೃಷ್ಣನು ಪ್ರಭುವಾದ್ದರಿಂದ ಮೂರುಲೋಕಗಳನ್ನೂ, ಎಲ್ಲ ಯಜ್ಞಗಳನ್ನೂ, ಬ್ರಾಹ್ಮಣರನ್ನೂ, ವೇದಗಳನ್ನೂ ವ್ಯಾಪಿಸಿಕೊಂಡಿದ್ದಾನೆ.

ಸ ಏಷ ದೇವಃ ಶಕ್ರಮೀಶಂ ಯಜಾನಂ
ಪ್ರೀತ್ಯಾ ಪ್ರಾಹ ಕ್ರತುಯಷ್ಟಾರಮಗ್ರ್ಯಮ್ ।
ನ ಮಾ ಶಕ್ರೋ ವೇದ ವೇದಾರ್ಥತತ್ತ್ವಾದ್
ಭಕ್ತೋ ಭಕ್ತ್ಯಾ ಶುದ್ಧಭಾವಪ್ರಧಾನಃ ॥೮॥

ಈ ದೇವನು ಯಾಗವನ್ನು ಮಾಡುತ್ತಿದ್ದ ಶ್ರೇಷ್ಠನಾದ ಇಂದ್ರನನ್ನು ಕುರಿತು – 'ಭಕ್ತಿಯಿಂದ ಶುದ್ಧಮನಸ್ಸುಳ್ಳ ನನ್ನ ಭಕ್ತನಾದ ಇಂದ್ರನೂ ಸಹ ವೇದಾರ್ಥಗಳಿಂದ ನನ್ನನ್ನು ಸರಿಯಾಗಿ ತಿಳಿಯುವುದಿಲ್ಲ' ಎಂದು ಹೇಳಿದನು.

ಮಾಂ ಜಾನಂತೇ ಬ್ರಹ್ಮಶೀರ್ಷಂ ವರಿಷ್ಠಂ
ವಿಶ್ವೇ ವಿಶ್ವಂ ಬ್ರಹ್ಮಯೋನಿಂ ಹ್ಯಯೋನಿಮ್ ।
ಸರ್ವತ್ರಾಹಂ ಶಾಶ್ವತಃ ಶಾಶ್ವತೇಶಃ
ಕೃತ್ಸ್ನೋ ವೇದೋ ದಿಗ್ಭುಜೋಽನಂತತೇಜಾಃ ॥೯॥

ನನ್ನನ್ನು ಉಪನಿಷತ್‌ಪ್ರತಿಪಾದ್ಯನೆಂದೂ, ಸರ್ವೋತ್ತಮನೆಂದೂ, ವಿಶ್ವವ್ಯಾಪಕನೆಂದೂ, ಬ್ರಹ್ಮನಿಗೆ ಕಾರಣನೆಂದೂ, ಸ್ವತಃ ಕಾರಣವಿಲ್ಲದವನೆಂದೂ ಎಲ್ಲ ಸಜ್ಜನರೂ ತಿಳಿಯುತ್ತಾರೆ. ನಾನು ಎಲ್ಲ ಸ್ಥಳಗಳಲ್ಲಿಯೂ, ಎಲ್ಲ ರೂಪಗಳಲ್ಲಿಯೂ ನಿತ್ಯನಾದವನು. ನಿತ್ಯವಾದ ಪದಾರ್ಥಗಳಿಗೂ ಒಡೆಯನಾದವನು. ಸಮಗ್ರ ವೇದಗಳಿಂದ ಪ್ರತಿಪಾದ್ಯನಾದವನು. ಅಷ್ಟದಿಕ್ಕುಗಳಲ್ಲಿ ಭುಜಗಳನ್ನು ಹೊಂದಿದವನು. ಅನಂತವಾದ ತೇಜಸ್ಸುಳ್ಳವನು (ಲಕ್ಷಾಲಂಕಾರ).

ಸರ್ವೇ ವೇದಾ ವಾಸುದೇವಂ ಯಜಂತೇ
ತತೋ ಬುದ್ಧ್ಯಾ ಮಾರ್ಗಮಾಣಸ್ತನೂನಾಮ್ ।
ಸರ್ವಾನ್ ಕಾಮಾನ್ ಪ್ರಾಪ್ನುವಂತೇ ವಿಶಾಲಾಂ-
ಸ್ತ್ರೈಲೋಕ್ಯೇಽಸ್ಮಿನ್ ಕೃಷ್ಣನಾಮಾಭಿಧಾನಾತ್ ॥೧೦॥

ಎಲ್ಲ ವೇದಗಳೂ ವಾಸುದೇವನನ್ನು ಪೂಜಿಸುತ್ತವೆ. ಆದ್ದರಿಂದ ಬ್ರಹ್ಮಾದಿ ಸುರೋತ್ತಮ ಶರೀರಗಳಲ್ಲಿ ಅವನನ್ನು ಹುಡುಕುವವರು ಈ ಮೂರುಲೋಕಗಳಲ್ಲಿಯೂ ಕೃಷ್ಣನಾಮವನ್ನು ಸಂಕೀರ್ತನೆಯನ್ನು ಮಾಡುವುದರಿಂದ ಎಲ್ಲ ಕಾಮನೆಗಳನ್ನೂ ಪಡೆಯುತ್ತಾರೆ.

ಕೃಷ್ಣೋ ಯಜ್ಞೈರಿಜ್ಯತೇ ಯಾಯಜೂಕೈಃ
ಕೃಷ್ಣೋ ವೀರೈರಿಜ್ಯತೇ ವಿಕ್ರಮದ್ಭಿಃ ।
ಕೃಷ್ಣೋ ವಾಕ್ಯೈರಿಜ್ಯತೇ ಸಂಮೃಶಾನೈಃ
ಕೃಷ್ಣೋ ಮುಕ್ತೈರಿಜ್ಯತೇ ವೀತಮೋಹೈಃ ॥೧೧॥

ಯಜ್ಞವನ್ನು ಮಾಡುವವರು ಕೃಷ್ಣನನ್ನೇ ಯಜ್ಞದಿಂದ ಪೂಜಿಸುತ್ತಾರೆ. ವೀರರಾದವರು ತಮ್ಮ ಪರಾಕ್ರಮದಿಂದ ಕೃಷ್ಣನನ್ನು ಪೂಜಿಸುತ್ತಾರೆ. ವಿಚಾರಶೀಲರಾದವರು ವೇದವಾಕ್ಯಗಳನ್ನು ವಿಮರ್ಶೆ ಮಾಡಿ ಕೃಷ್ಣನನ್ನು ಪೂಜಿಸುತ್ತಾರೆ. ಮೋಹಾದಿಗಳಿಂದ ರಹಿತರಾದ ಮುಕ್ತರು ಕೃಷ್ಣನನ್ನೇ ಅರ್ಚಿಸುತ್ತಾರೆ.

ವಿದ್ಯಾವಂತಃ ಸೋಮಪಾ ಯೇ ವಿಪಾಪಾ
ಇಷ್ಟ್ವಾ ಯಜ್ಞೈರ್ಗೋಚರಂ ಪ್ರಾರ್ಥಯಂತೇ ।
ಸರ್ವಂ ಕ್ರಾಂತಂ ದೇವಲೋಕಂ ವಿಶಾಲಮ್
ಅಂತೇ ಗತ್ವಾ ಮರ್ತ್ಯಲೋಕಂ ಭಜಂತೇ ॥೧೨॥

ವಿದ್ಯಾವಂತರಾಗಿ, ಸೋಮಪಾನವನ್ನು ಮಾಡಿ ಪಾಪರಹಿತರಾದ ಪುರುಷರು ಯಜ್ಞಗಳಿಂದ ಕೃಷ್ಣನನ್ನು ಪೂಜಿಸಿ, ಕೃಷ್ಣನ ಸಾಕ್ಷಾತ್ಕಾರವನ್ನು ಬಯಸುತ್ತಾರೆ. ಅವರು ವಿಶಾಲವಾದ ದೇವಲೋಕವನ್ನೆಲ್ಲ ದಾಟಿ ಕೊನೆಯಲ್ಲಿ ಮುಕ್ತಿಲೋಕಕ್ಕೆ ಹೋಗುತ್ತಾರೆ.

ಶ್ರೀಭಗವಾನ್

ಏವಂ ಸರ್ವೇ ತ್ವಾಶ್ರಮಾಃ ಸುವ್ರತಾ ಯೇ
ಮಾಂ ಜ್ಞಾನಂತೋ ಯಾಂತಿ ಲೋಕಾನದೀನಾನ್ ।
ಯಾಂ ಯಾಂ ದೀಕ್ಷಾಮುದ್ವಹಂತೇ ವಿಪಾಪಾ
ಜ್ಯೋತಿರ್ಭೂತ್ವಾ ದೇವಲೋಕಂ ಭಜಂತೇ ॥೧೩॥

ವಾಸುದೇವ– ಹೀಗೆ ಎಲ್ಲ ಆಶ್ರಮದವರೂ ಒಳ್ಳೆಯ ವ್ರತವನ್ನು ಮಾಡಿ, ನನ್ನ ಜ್ಞಾನವನ್ನು ಸಂಪಾದಿಸಿ, ಸಮೃದ್ಧವಾದ ಲೋಕಗಳನ್ನು ಹೊಂದುತ್ತಾರೆ. ಧ್ಯಾನದೀಕ್ಷೆಯನ್ನು ಧರಿಸಿದ ಪಾಪರಹಿತರಾದವರು ಜ್ಯೋತಿರ್ಮಯ ಶರೀರಿಗಳಾಗಿ ನನ್ನ ಲೋಕವನ್ನು ಹೊಂದುತ್ತಾರೆ.

ಪೂಜ್ಯಂತೇ ಮಾಂ ಪೂಜಯಂತಃ ಪ್ರಹೃಷ್ಟಾ
ಮಾಂ ಜಾನಂತಃ ಶ್ರದ್ಧಯಾ ವಾಸುದೇವಮ್ ।
ಭಕ್ತ್ಯಾ ತುಷ್ಟೋಽಹಂ ತಸ್ಯ ಸತ್ತ್ವಂ ಪ್ರಯಚ್ಛೇ
ಸತ್ತ್ವಸ್ಥೋ ವೀತಮೋಹೋಽಯಮೇತಿ ॥೧೪॥

ಶ್ರದ್ಧೆಯಿಂದ ನನ್ನನ್ನು ತಿಳಿದು ವಾಸುದೇವನಾದ ನನ್ನನ್ನು ಸಂತೋಷದಿಂದ ಪೂಜಿಸುವವರು ತಾವೂ ಪೂಜಿಸಲ್ಪಡುತ್ತಾರೆ. ಭಕ್ತಿಯಿಂದ ಪ್ರಸನ್ನನಾದ ನಾನು ಅವರಿಗೆ ಶುದ್ಧವಾದ ಅಂತಃಕರಣವನ್ನು ಕೊಡುತ್ತೇನೆ. ಶುದ್ಧಾಂತಃಕರಣರಾದವರು ಮೋಹಾದಿಗಳನ್ನು ತೊರೆದು ನನ್ನನ್ನು ಹೊಂದುತ್ತಾರೆ.

ದ್ವೈಪಾಯನಃ

ಜ್ಯೋತೀಂಷಿ ಶುಕ್ಲಾನಿ ಚ ಯಾನಿ ಲೋಕೇ
ತ್ರಯೋ ಲೋಕಾ ಲೋಕಪಾಲಾಸ್ತ್ರಯೀ ಚ ।
ತ್ರಯೋಽಗ್ನಯಶ್ಚಾಹುತಯಶ್ಚ ಪಂಚ
ಸರ್ವೇ ದೇವಾ ದೇವಕೀಪುತ್ರ ಏವ ॥೧೫॥

ದ್ವೈಪಾಯನ– ಲೋಕದಲ್ಲಿ ಯಾವ ಶುದ್ಧವಾದ ಜ್ಯೋತಿಸ್ಸು ಇದೆಯೋ, ಮೂರುಲೋಕಗಳು ಇವೆಯೋ, ಮೂರುಲೋಕಪಾಲಕರು ಯಾರಿದ್ದಾರೆಯೋ, ಮೂರು ಅಗ್ನಿಗಳು ಏನಿವೆಯೋ, ಐದು ಆಹುತಿಗಳು ಏನಿವೆಯೋ, ಎಲ್ಲ ದೇವತೆಗಳು ಯಾರಿದ್ದಾರೆಯೋ ಅವರೆಲ್ಲರೂ ಕೃಷ್ಣನೇ (ಕೃಷ್ಣನಿಗೆ ಅಧೀನರಾದವರು).

ಭೀಷ್ಮಃ

ವ್ಯಾಸಸ್ಯೈತದ್ ವಚಃ ಶ್ರುತ್ವಾ ಮದ್ರರಾಜೋ ಮಹರ್ಷಿಭಿಃ ।
ವ್ಯಾಸಂ ಕೃಷ್ಣಂ ಚ ವಿಧಿವತ್ ಪ್ರೀತಾತ್ಮಾ ಪ್ರತ್ಯಪೂಜಯತ್ ॥೧೬॥

ಭೀಷ್ಮರು– ವ್ಯಾಸರ ಈ ಮಾತುಗಳನ್ನು ಕೇಳಿ ಮದ್ರರಾಜನು ಸಂತೋಷಗೊಂಡು ಮಹರ್ಷಿಗಳ ಜೊತೆಯಲ್ಲಿ ವ್ಯಾಸರನ್ನು ಮತ್ತು ಕೃಷ್ಣನನ್ನು ವಿಧಿಪೂರ್ವಕವಾಗಿ ಸಂತೋಷದಿಂದ ಪೂಜಿಸಿದನು.

ವೈಶಂಪಾಯನಃ

ಕವಿಪ್ರಧಾನಸ್ತು ಮಹರ್ಷಿಪುತ್ರೋ
ದ್ವೈಪಾಯನಸ್ತದ್ವಚನಂ ನಿಶಮ್ಯ ।
ಜಗಾಮ ಪೃಥ್ವೀಂ ಶಿರಸಾ ಮಹಾತ್ಮಾ
ನಮಶ್ಚ ಕೃಷ್ಣಾಯ ಚಕಾರ ಭೀಷ್ಮಃ ॥೧೭॥

ವೈಶಂಪಾಯನ– ಮಹರ್ಷಿಗಳಾದ, ಪರಾಶರಪುತ್ರರಾದ ದ್ವೈಪಾಯನರು ಹೊರಟು ಹೋದರು. ಅವರು ಮಾತುಗಳನ್ನು ಕೇಳಿದ ಮಹಾತ್ಮನಾದ ಮದ್ರರಾಜನು ಶಿರಸ್ಸನ್ನು ಭೂಮಿಯ ಮೇಲಿಟ್ಟು ನಮಸ್ಕಾರ ಮಾಡಿದನು. ಭೀಷ್ಮರೂ ಸಹ ಕೃಷ್ಣನಿಗೆ ನಮಸ್ಕಾರವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೈದನೆಯ ಅಧ್ಯಾಯ

ಗರುಡಾಖ್ಯಾನದ ಪ್ರಾರಂಭ

ಯುಧಿಷ್ಠಿರಃ

ಗರುಡಃ ಪಕ್ಷಿಣಾಂ ಶ್ರೇಷ್ಠ ಇತಿ ಪೂರ್ವಂ ಪಿತಾಮಹ ।
ಉಕ್ತಸ್ತ್ವಯಾ ಮಹಾಬಾಹೋ ಶ್ವೇತವಾಹಂ ಪ್ರಶಂಸತಾ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಮಹಾಬಾಹುವೇ, ನೀನು ಹಿಂದೆ ಶ್ವೇತವಾಹನನಾದ ಅರ್ಜುನನನ್ನು ಹೊಗಳುತ್ತಾ, ಗರುಡನು ಪಕ್ಷಿಗಳಲ್ಲಿ ಶ್ರೇಷ್ಠನೆಂದು ಹೇಳಿದ್ದೀಯೆ.

ಅತ್ರ ಕೌತೂಹಲಂ ಮೇಽಸ್ತಿ ಶ್ರವಣೇ ಜಾಯತೇ ಮತಿಃ ।
ಕಥಂ ಗರುತ್ಮಾನ್ ಪಕ್ಷೀಣಾಂ ಶ್ರೈಷ್ಠ್ಯಂ ಪ್ರಾಪ ಪರಂತಪ ॥೨॥

ಇದು ಕುತೂಹಲಕಾರಿ ಎಂಬ ಕಾರಣದಿಂದ ನನಗೆ ಅದನ್ನು ಕೇಳಲು ಮನಸ್ಸಾಗುತ್ತಿದೆ. ಎಲೈ ಪರಂತಪನೇ, ಗರುಡನು ಹೇಗೆ ಪಕ್ಷಿಗಳಲ್ಲಿ ಶ್ರೇಷ್ಠನಾದನು?

ಸುಪರ್ಣೋ ವೈನತೇಯಶ್ಚ ಕೇನ ಶತ್ರುಶ್ಚ ಭೋಗಿನಾಮ್ ।
ಕಿಂವೀರ್ಯಃ ಕಿಂಬಲಶ್ಚಾಸೌ ವಕ್ತುಮರ್ಹಸಿ ಭಾರತ ॥೩॥

ಎಲೈ ಭಾರತನೇ, ವಿನತಾಪುತ್ರನಾದ ಸುಪರ್ಣನು ಯಾವ ಕಾರಣದಿಂದ ಸರ್ಪಗಳಿಗೆ ಶತ್ರುವಾದನು? ಅವನ ವೀರ್ಯ-ಪರಾಕ್ರಮಗಳೆಂತಹವು? ಅವನ ಬಲವೆಂತಹದು ಎಂಬುದನ್ನು ನನಗೆ ಹೇಳು.

ಭೀಷ್ಮಃ

ವಾಸುದೇವ ಮಹಾಬಾಹೋ ದೇವಕೀ ಸುಪ್ರಜಾಸ್ತ್ವಯಾ ।
ಶ್ರುತಂ ತೇ ಧರ್ಮರಾಜಸ್ಯ ಯದುಹರ್ಷವಿವರ್ಧನ ॥೪॥

ಭೀಷ್ಮರು– ಎಲೈ ಮಹಾಬಾಹುವಾದ ವಾಸುದೇವನೇ, ಯದುಗಳ ಸಂತೋಷವನ್ನು ಹೆಚ್ಚಿಸುವವನೇ, ದೇವಕಿಯು ನಿನ್ನನ್ನು ಮಗನಾಗಿ ಪಡೆದು ಒಳ್ಳೆಯ ಪುತ್ರವಂತಳಾಗಿದ್ದಾಳೆ. ಧರ್ಮರಾಜನ ಮಾತುಗಳನ್ನು ನೀನು ಕೇಳಿದ್ದೀಯೆ.

ಸುಪರ್ಣಂ ಶಂಸ ಇತ್ಯೇವ ಮಾಮಾಹ ಕುರುನಂದನಃ ।
ಅಸ್ಯ ಪ್ರವಕ್ತುಮಿಚ್ಛಾಮಿ ತ್ವಯಾऽऽಜ್ಞಪ್ತೋ ಮಹಾದ್ಯುತೇ ॥೫॥

ಕುರುನಂದನನಾದ ಯುಧಿಷ್ಠಿರನು ಗರುಡನ ವಿಷಯವಾಗಿ ನನಗೆ ಹೇಳಿ ಎಂದು ನನ್ನನ್ನು ಕೇಳಿದ್ದಾನೆ. ಎಲೈ ಮಹಾದ್ಯುತಿಯೇ, ನಿನ್ನಿಂದ ಆಜ್ಞಪ್ತನಾಗಿ ಅವನಿಗೆ ನಾನು ಅದನ್ನು ಹೇಳಲು ಬಯಸುತ್ತೇನೆ.

ತ್ವಂ ಹಿ ಶೌರೇ ಮಹಾಬಾಹೋ ಸುಪರ್ಣಃ ಪ್ರೋಚ್ಯಸೇ ಪುರಾ ।
ಅನಾದಿನಿಧನೇ ಕಾಲೇ ಗರುಡಶ್ಚಾಸಿ ಕೇಶವ ॥೬॥

ಮಹಾಬಾಹುವೇ, ನೀನೇ ಮೊದಲು ಸುಪರ್ಣನೆಂದು ಕರೆಸಿಕೊಳ್ಳಲ್ಪಡುತ್ತಿದ್ದೆ. 'ಅತೋ ದಿವ್ಯಃ ಸ ಸುಪರ್ಣೋ.....' ಎಂಬ ವೇದವು ನಿನಗೆ ಸುಪರ್ಣನೆಂಬ ಹೆಸರನ್ನು ಹೇಳುತ್ತದೆ. ಎಲೈ ಕೇಶವನೇ, ಅನಾದ್ಯನಂತ ಕಾಲದಲ್ಲಿ ನೀನೇ ಗರುಡ ಎಂಬ ಶಬ್ದದಿಂದಲೂ ವಾಚ್ಯನಾಗಿದ್ದೀಯೆ (ಲಕ್ಷಾಲಂಕಾರ).

ತಸ್ಮಾತ್ ಪೂರ್ವಂ ಪ್ರಸಾದ್ಯ ತ್ವಾಂ ಧರ್ಮಪುತ್ರಾಯ ಧೀಮತೇ ।
ಗರುಡಂ ಪತತಾಂ ಶ್ರೇಷ್ಠಂ ವಕ್ತುಮಿಚ್ಛಾಮಿ ಮಾಧವ ॥೭॥

ಆದ್ದರಿಂದ ಮೊದಲು ನಿನ್ನ ಅನುಮತಿಯನ್ನು ಪಡೆದು, ಅನಂತರ ಎಲೈ ಮಾಧವನೇ, ಮೇಧಾವಿಯಾದ ಯುಧಿಷ್ಠಿರನಿಗೆ ಪಕ್ಷಿಶ್ರೇಷ್ಠನಾದ ಗರುಡನ ಕಥೆಯನ್ನು ಹೇಳಲು ಬಯಸುತ್ತೇನೆ.

ವಾಸುದೇವಃ

ಯಥೈವ ಮಾಂ ಭವಾನ್ ವೇದ ತಥಾ ವೇದ ಯುಧಿಷ್ಠಿರಃ ।
ಯಥಾ ಚ ಗರುಡೋ ರಾಜಂಸ್ತಥಾऽಸ್ಮೈ ಬ್ರೂಹಿ ತತ್ತ್ವತಃ ॥೮॥

ವಾಸುದೇವ– ನೀನು ನನ್ನನ್ನು ಹೇಗೆ ತಿಳಿದಿದ್ದೀಯೋ ಹಾಗೆಯೇ ಯುಧಿಷ್ಠಿರನೂ ತಿಳಿದಿದ್ದಾನೆ. ಗರುಡನು ಹೇಗೆ ಜನ್ಮ ತಾಳಿದನೆಂದು ಅವನಿಗೆ ಸರಿಯಾಗಿ ಹೇಳುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನಂ ನಾಮ
ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾರನೆಯ ಅಧ್ಯಾಯ

ಅರುಣನ ಜನ್ಮ ಮತ್ತು ತಾಯಿಗೆ ಶಾಪ

ಭೀಷ್ಮಃ

ಯುಧಿಷ್ಠಿರ ಮಹಾಬಾಹೋ ಶೃಣು ರಾಜನ್ ಯಥಾತಥಮ್ ।
ಗರುಡಂ ಪಕ್ಷಿಣಾಂ ಶ್ರೇಷ್ಠಂ ವೈನತೇಯಂ ಮಹಾಬಲಮ್ ॥೧॥

ತಥಾ ಚ ಗರುಡೋ ರಾಜನ್ ಸುಪರ್ಣಶ್ಚ ಯಥಾऽಭವತ್ ।
ಯಥಾ ಚ ಭುಜಗಾನ್ ಹಂತಿ ತಥಾ ಮೇ ಬ್ರುವತಃ ಶೃಣು ॥೨॥

ಭೀಷ್ಮರು– ಮಹಾಬಾಹುವಾದ ಯುಧಿಷ್ಠಿರನೇ, ರಾಜನೇ, ಮಹಾಬಲನೂ, ವಿನತಾ ಸುತನೂ, ಪಕ್ಷಿಗಳಲ್ಲಿ ಶ್ರೇಷ್ಠನೂ ಆದ ಗರುಡನ ವಿಷಯವನ್ನು ಯಥಾರ್ಥವಾಗಿ ಕೇಳು. ಹಾಗೆಯೇ ಎಲೈ ರಾಜನೇ, ಗರುಡನು ಹೇಗೆ ಸುಪರ್ಣನಾದನು? ಏಕೆ ಸರ್ಪವನ್ನು ಕೊಲ್ಲುತ್ತಾನೆ? ಎಂಬುದನ್ನೂ ನನ್ನ ಮಾತಿನಂತೆ ಕೇಳು.

ಪುರಾऽಹಂ ತಾತ ರಾಮೇಣ ಜಾಮದಗ್ನ್ಯೇನ ಧೀಮತಾ ।
ಕೈಲಾಸಶಿಖರೇ ರಮ್ಯೇ ಮೃಗಾನ್ ನಿಘ್ನನ್ ಸಹಸ್ರಶಃ ॥೩॥

ಎಲೈ ಪ್ರೀತಿಪಾತ್ರನೇ, ಹಿಂದೆ ನಾನು ಕೈಲಾಸ ಶಿಖರದಲ್ಲಿ ಜಮದಗ್ನಿ ಪುತ್ರರಾದ, ಮೇಧಾವಿಯಾದ, ಸಹಸ್ರಾರು ಮೃಗಗಳನ್ನು ಕೊಲ್ಲುತ್ತಿದ್ದ ಪರಶುರಾಮರನ್ನು ನೋಡಿದೆನು.

ತಮಹಂ ತಾತ ದೃಷ್ಟ್ವೈವ ಶಸ್ತ್ರಾಣ್ಯುತ್ಸೃಜ್ಯ ಸರ್ವಶಃ ।
ಅಭಿವಾದ್ಯ ಪೂರ್ವಂ ರಾಮಾಯ ವಿನಯೇನೋಪತಸ್ಥಿವಾನ್ ॥೪॥

ನಾನು ಅವರನ್ನು ನೋಡಿದ ಕೂಡಲೇ ಎಲ್ಲ ಶಸ್ತ್ರಗಳನ್ನೂ ಬಿಸುಟು ಮೊದಲು ಅವರಿಗೆ ನಮಸ್ಕಾರವನ್ನು ಮಾಡಿ, ವಿನಯದಿಂದ ಅವರ ಹತ್ತಿರ ನಿಂತೆನು.

ತಮಹಂ ಕಥಾಂತೇ ವರದಂ ಸುಪರ್ಣಸ್ಯ ಬಲೌಜಸೀ ।
ಅಪೃಚ್ಛಂ ಸ ಚ ಮಾಂ ಪ್ರೀತಃ ಪ್ರತ್ಯುವಾಚ ಯುಧಿಷ್ಠಿರ ॥೫॥

ಎಲೈ ಯುಧಿಷ್ಠಿರನೇ, ಕುಶಲವಾರ್ತೆಗಳಾದ ಮೇಲೆ ನಾನು ಅವರನ್ನು ಗರುಡನ ಬಲ ಮತ್ತು ಅವಷ್ಟಂಭ ಶಕ್ತಿಯನ್ನು ಕುರಿತು ಪ್ರಶ್ನೆ ಮಾಡಿದೆನು. ಅವರು ಸಂತೋಷದಿಂದ ನನಗೆ ಉತ್ತರವನ್ನು ಕೊಟ್ಟರು.

ಕದ್ರೂಶ್ಚ ವಿನತಾ ಚಾಸ್ತಾಂ ಪ್ರಜಾಪತಿಸುತೇ ಉಭೇ ।
ತೇ ಧರ್ಮೇಣೋಪಮೇಯೇऽಥ ಮಾರೀಚಃ ಕಶ್ಯಪಃ ಪ್ರಭುಃ ॥೬॥

ಪ್ರಾದಾತ್ ತಾಭ್ಯಾಂ ವರಂ ಪ್ರೀತೋ ಭಾರ್ಯಾಭ್ಯಾಂ ಸುಮಹಾತಪಾಃ ॥

ದಕ್ಷಪ್ರಜಾಪತಿಗೆ ಕದ್ರು-ವಿನತೆ ಎಂಬ ಇಬ್ಬರು ಹೆಣ್ಣುಮಕ್ಕಳಿದ್ದರು. ಮರೀಚಿ ಋಷಿಗಳ ಪುತ್ರರೂ, ಸಮರ್ಥರೂ ಆದ ಕಶ್ಯಪರು ಅವರನ್ನು ಧರ್ಮದಿಂದ ವಿವಾಹ ಮಾಡಿಕೊಂಡರು. ಮಹಾತಪಸ್ವಿಗಳಾದ ಅವರು ಸಂತೋಷಗೊಂಡು ತಮ್ಮ ಇಬ್ಬರು ಪತ್ನಿಯರಿಗೂ ವರವನ್ನು ಕೊಟ್ಟರು.

ತತ್ರ ಕದ್ರೂರ್ವರಂ ವವ್ರೇ ಪುತ್ರಾಣಾಂ ದಶತಃ ಶತಮ್ ।
ತುಲ್ಯತೇಜಃಪ್ರಭಾವಾನಾಂ ಸರ್ವೇಷಾಂ ತುಲ್ಯಜನ್ಮನಾಮ್ ॥೮॥

ಅವರಲ್ಲಿ ಕದ್ರುವು ಸಮಾನವಾದ ತೇಜಸ್ಸು ಮತ್ತು ಪ್ರಭಾವವುಳ್ಳ, ಸಮಾನ ಕಾಲದಲ್ಲಿ ಜನಿಸುವ ಸಹಸ್ರಪುತ್ರರನ್ನು ಬೇಡಿದಳು.

ವಿನತಾ ತು ವವ್ರೇ ದ್ವೌ ಪುತ್ರೌ ವೀರೌ ಭರತಸತ್ತಮ ।
ಕದ್ರೂಪುತ್ರಸಹಸ್ರೇಣ ತುಲ್ಯವೇಗಪರಾಕ್ರಮೌ ॥೯॥

ಎಲೈ ಭರತಶ್ರೇಷ್ಠನೇ, ವಿನತೆಯಾದರೂ ಕದ್ರುವಿನ ಸಹಸ್ರಪುತ್ರರಿಗೆ ಸಮಾನವಾದ ವೀರ್ಯ ಮತ್ತು ಪರಾಕ್ರಮಗಳುಳ್ಳ ವೀರರಾದ ಇಬ್ಬರು ಪುತ್ರರನ್ನು ಬೇಡಿದಳು.

ಸ ತು ತಾಭ್ಯಾಂ ವರಂ ಪ್ರಾದಾತ್ ತಥೇತ್ಯುಕ್ತ್ವಾ ಮಹಾತಪಾಃ ।
ಜನಯಾಮಾಸ ತಾನ್ ಪುತ್ರಾಂಸ್ತಾಭ್ಯಾಮಾಸೀದ್ ಯಥಾ ಪುರಾ ॥೧೦॥

ಮಹಾತಪಸ್ವಿಗಳಾದ ಕಶ್ಯಪರು ಹಾಗೆಯೇ ಆಗಲಿ ಎಂದು ಹೇಳಿ, ಅವರಿಗೆ ವರಗಳನ್ನು ನೀಡಿದರು ಮತ್ತು ಮೊದಲು ಮಾತನಾಡಿದ್ದಂತೆ ಅವರಿಗೆ ಪುತ್ರರನ್ನೂ ದಯಪಾಲಿಸಿದರು.

ಕದ್ರೂಃ ಪ್ರಜಜ್ಞೇ ತ್ವಂಡಾನಾಂ ತಥೈವ ದಶತಃ ಶತಮ್ ।
ಅಂಡೇ ದ್ವೇ ವಿನತಾ ಚೈವ ದರ್ಶನೀಯತರೇ ಶುಭೇ ॥೧೧॥

ಕದ್ರುವು ಒಂದು ಸಹಸ್ರ ಮೊಟ್ಟೆಗಳನ್ನು ಪ್ರಸವಿಸಿದಳು. ಹಾಗೆಯೇ ವಿನತೆಯು ಮನೋಹರವಾದ ಶುಭವಾದ ಎರಡು ಮೊಟ್ಟೆಗಳನ್ನು ಪ್ರಸವಿಸಿದಳು.

ತಾನಿ ತ್ವಂಡಾನಿ ತು ತಯೋಃ ಕದ್ರೂವಿನತಯೋರ್ದ್ವಯೋಃ ।
ಸೋಪಸ್ವೇದೇಷು ಪಾತ್ರೇಷು ನಿದಧುಃ ಪರಿಚಾರಿಣಃ ॥೧೨॥

ಅವರ ಪರಿಚಾರಕರು ಕದ್ರುವು ಹೆತ್ತ ಆ ಮೊಟ್ಟೆಗಳನ್ನು ನೀರಾದ ಘೃತದಿಂದ ಕೂಡಿದ ಪಾತ್ರೆಗಳಲ್ಲಿ ರಕ್ಷಣೆ ಮಾಡಿದರು.

ನಿಃಸರಂತಿ ತದಾಽಂಡೇಭ್ಯಃ ಕದ್ರೂಪುತ್ರಾ ಭುಜಂಗಮಾಃ ।
ಪಂಚವರ್ಷಶತೇ ಕಾಲೇ ದೃಷ್ಟಿಶ್ವಾಸಾಮಲೌಜಸಃ ॥೧೩॥

ಐದುನೂರು ವರ್ಷಗಳು ಕಳೆದ ಮೇಲೆ ಆ ಮೊಟ್ಟೆಗಳಿಂದ ದೃಷ್ಟಿಯಲ್ಲಿಯೂ ಮತ್ತು ಶ್ವಾಸದಲ್ಲಿಯೂ ತೀವ್ರವಾದ ಶಕ್ತಿಯುಳ್ಳ ಕದ್ರುಪುತ್ರರಾದ ಸರ್ಪಗಳು ಜನಿಸಿದವು.

ವಿನತಾ ತೇಷು ಜಾತೇಷು ಪನ್ನಗೇಷು ಮಹಾತ್ಮಸು ।
ವಿಪುತ್ರಾ ಪುತ್ರಸಂತಾಪಾದಂಡಮೇಕಂ ಬಿಭೇದ ಹ ॥೧೪॥

ಮಹಾತ್ಮರಾದ ಆ ಸರ್ಪಗಳು ಜನಿಸಿದ ಮೇಲೆ ವಿನತೆಯು ಪುತ್ರರಿಲ್ಲದೆ ಪುತ್ರಸಂತಾಪಕ್ಕೆ ಒಳಗಾಗಿ ಒಂದು ಅಂಡವನ್ನು ಒಡೆದಳು.

ಕಿಮನೇನ ಕರಿಷ್ಯೇಽಹಮಿತಿ ವಾಕ್ಯಮಭಾಷತ ।
ನ ಹಿ ಪಂಚಶತೇ ಕಾಲೇ ಪುರಾ ಪುತ್ರೌ ದದರ್ಶ ಸಾ ॥೧೫॥

ಸಾಪಶ್ಯದಂಡಾನ್ನಿಷ್ಕ್ರಾಂತಂ ನತಾ ಪುತ್ರಂ ಮನಸ್ವಿನಮ್ ।
ಪೂರ್ವಕಾಯೋಪಸಂಪನ್ನಂ ವಿಯುಕ್ತಮಿತರೇಣ ಹ ॥೧೬॥

ನಾನು ಇದರಿಂದ ಏನು ಮಾಡಲಿ? ಎಂದು ಹೇಳುತ್ತಾ ಅದನ್ನು ಒಡೆದಳು. ಏಕೆಂದರೆ ಅವಳು ಅಲ್ಲಿಯವರೆಗೆ ಐದುನೂರು ವರ್ಷಗಳು ಕಳೆದರೂ ಪುತ್ರರನ್ನು ಕಂಡಿರಲಿಲ್ಲ. ಆ ಪಾತ್ರೆಯ ಒಳಗೆ ಇರುವುದನ್ನು ನೋಡಲು ಬಗ್ಗಿದ ವಿನತೆಯು ಆ ಅಂಡದಿಂದ ಹೊರಬರುವ, ಧೈರ್ಯಶಾಲಿಯಾದ ದೇಹದ ಮೇಲ್ಭಾಗವನ್ನು ಮಾತ್ರ ಹೊಂದಿದ್ದ, ಇತರ ಭಾಗದಿಂದ ರಹಿತವಾದ ಶಿಶುವನ್ನು ನೋಡಿದಳು.

ದೃಷ್ಟ್ವಾ ತು ತಂ ತಥಾರೂಪಮಸಮಗ್ರಶರೀರಿಣಮ್ ।
ಪುತ್ರದುಃಖಾನ್ವಿತಾऽऽಶೋಚತ್ಸ ಚ ಪಕ್ಷೀ ತಥಾ ಗತಃ ॥೧೭॥

ಪೂರ್ಣಶರೀರವಿಲ್ಲದ ಅಂತಹ ಆಕಾರವುಳ್ಳ ಅವನನ್ನು ನೋಡಿ, ಅವಳು ಪುತ್ರಶೋಕಾನ್ವಿತಳಾಗಿ ವ್ಯಥೆಪಟ್ಟಳು. ಅವನು ಅದೇ ರೂಪದಲ್ಲಿ ಪಕ್ಷಿಯಾದನು.

ಅಬ್ರವೀಚ್ಚ ಮುದಾऽಯುಕ್ತಃ ಪರ್ಯಶ್ರುನಯನಸ್ತದಾ ।
ಮಾತರಂ ಚಪಲಾಸೀತಿ ಹತೋऽಹಮಿತಿ ಚಾಸಕೃತ್ ॥೧೮॥

ಅವನು ಸಂತೋಷರಹಿತನಾಗಿ, ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು, ತಾಯಿಯನ್ನು ಕುರಿತು, ನೀನು ಬಹಳ ಚಪಲಸ್ವಭಾವದವಳು. ನನ್ನನ್ನು ಕೊಂದಿದ್ದೀಯೆ ಎಂದು ಅನೇಕ ಬಾರಿ ಹೇಳಿದನು.

ನ ಮಯಾ ಕಾಂಕ್ಷಿತಃ ಯೋ ವಾ ನೇಷ್ಯೋಽಭ್ಯಗಾತ್ ಪುರಾ ।
ಆವಾಂ ಭವಾವ ಪುತ್ರೌ ತೇ ಶ್ವಸನಾದ್ ಬಲವತ್ತರೌ ॥೧೯॥

ನಾನು ಮುಂದೆ ಕಳೆಯಬೇಕಾಗಿದ್ದ ನನಗಿಷ್ಟವಾದ ಇನ್ನೂ ಐದುನೂರು ವರ್ಷಗಳು ಇನ್ನು ಪೂರ್ಣವಾಗಿರಲಿಲ್ಲ (ಅಕಾಲದಲ್ಲಿ ನೀನು ನನ್ನನ್ನು ನೋಡಿದೆ). ನಾವಿಬ್ಬರೂ ನಿನಗೆ ವಾಯುವಿಗಿಂತ ಬಲಿಷ್ಠರಾದ ಪುತ್ರರಾಗುವೆವು.

ಈರ್ಷ್ಯಾಕ್ರೋಧಾಭಿಭೂತತ್ವಾದ್ ಯೋಽಹಮೇವಂ ಕೃತಸ್ತ್ವಯಾ ।
ತಸ್ಮಾತ್ ತ್ವಮಪಿ ಮೇ ಮಾತರ್ದಾಸೀಭಾವಂ ಗಮಿಷ್ಯಸಿ ॥೨೦॥

ಎಲೌ ನನ್ನ ತಾಯಿಯೇ, ಅಸೂಯೆ ಮತ್ತು ಕ್ರೋಧಗಳಿಂದ ಕೂಡಿದವಳಾಗಿ ನೀನು ನನ್ನನ್ನು ಹೀಗೆ ಮಾಡಿದುದರಿಂದ ನೀನೂ ಸಹ ದಾಸೀಭಾವವನ್ನು ಹೊಂದುವಿ.

ಪಂಚವರ್ಷಶತಾನಿ ತ್ವಂ ಸ್ಪರ್ಧಸೇ ವೈ ಯಯಾ ಸಹ ।
ದಾಸೀ ತಸ್ಯಾ ಭವಿತ್ರೀತಿ ಸಾಶ್ರುಪಾತಮುವಾಚ ಹ ॥೨೧॥

ನೀನು ಯಾರ ಜೊತೆಯಲ್ಲಿ ಸ್ಪರ್ಧೆ ಮಾಡುತ್ತೀಯೋ ಅಂತಹ ಕದ್ರುವಿಗೆ ಐದುನೂರು ವರ್ಷಗಳ ಕಾಲ ದಾಸಿಯಾಗುವಿ ಎಂದು ಕಣ್ಣೀರಿನಿಂದ ಸಹಿತನಾಗಿ ಹೇಳಿದನು.

ಏಷ ಚೈವ ಮಹಾಭಾಗೇ ಬಲೀ ಬಲವತಾಂವರಃ ।
ಮೋಕ್ಷಯಿಷ್ಯತಿ ತೇ ಮಾತರ್ದಾಸೀಭಾವಾನ್ಮಮಾನುಜಃ ॥೨೨॥

ಎಲೌ ಮಹಾನುಭಾವಳೇ, ಈ ನನ್ನ ತಮ್ಮನು ಮಾತ್ರ ಬಲಿಷ್ಠರಲ್ಲಿ ಶ್ರೇಷ್ಠನಾಗಿ ಎಲೌ ತಾಯಿಯೇ, ನಿನ್ನನ್ನು ದಾಸ್ಯದಿಂದ ವಿಮೋಚನೆಗೊಳಿಸುವನು (ಎಂದು ಹೇಳಿದನು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನೇ ಅರುಣೋತ್ಪತ್ತಿರ್ನಾಮ ಷೋಡಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೇಳನೆಯ ಅಧ್ಯಾಯ

ಕದ್ರೂ-ವಿನತೆಯರ ಪಣ.

ಭೀಷ್ಮಃ

ವಿನತಾ ಪುತ್ರಶೋಕಾರ್ತಾ ಶಾಪಾದ್ ಭೀತಾ ಚ ಭಾರತ ।
ಪ್ರತೀಕ್ಷತೇ ಸ್ಮ ತಂ ಕಾಲಂ ಯಃ ಪುತ್ರೋಕ್ತಸ್ತದಾऽಭವತ್ ॥೧॥

ಭೀಷ್ಮ- ಎಲೈ ಭಾರತನೇ, ವಿನತೆಯು ಪುತ್ರಶೋಕದಿಂದ ಪೀಡಿತಳಾಗಿ, ಅರುಣನ ಶಾಪಕ್ಕೂ ಹೆದರಿ, ಪುತ್ರನಾದ ಅರುಣನು ಹೇಳಿದ ಕಾಲವನ್ನು ನಿರೀಕ್ಷಣೆ ಮಾಡಿಕೊಂಡಿದ್ದಳು.

ತತೋऽಪ್ಯತೀತೇ ಪಂಚಶತೇ ವರ್ಷಾಣಾಂ ಕಾಲಸಂಯುಗೇ ।
ಗರುಡೋऽಥ ಮಹಾವೀರ್ಯೋ ಜಜ್ಞೇ ಭುಜಗಭುಗ್ ಬಲೀ ॥೨॥

ಅನಂತರ ಐದುನೂರು ವರ್ಷಗಳ ಸಮುದಾಯವು ಕಳೆಯುತ್ತಿರಲು ಮಹಾಪರಾಕ್ರಮಿಯೂ ಬಲಿಷ್ಠನೂ, ಸರ್ಪಭೋಜನನೂ ಆದ ಗರುಡನು ಜನಿಸಿದನು.

ಬಂಧುರಾಸ್ಯಃ ಶಿಖೀ ಪತ್ರಕೋಶಃ ಕೂರ್ಮನಖೋ ಮಹಾನ್ ।
ರಕ್ತಾಕ್ಷಃ ಸಂಹತಗ್ರೀವೋ ಹ್ರಸ್ವಪಾದೋ ಮಹಾಶಿರಾಃ ॥೩॥

ಸುಂದರವಾದ ಮುಖ, ತಲೆಯ ಮೇಲೆ ಶಿಖೆ, ತುಂಬಿಕೊಂಡ ಎದೆಗಳು, ಆಮೆಯ ನಖದಂತಹ ನಖಗಳು, ದೊಡ್ಡ ಆಕೃತಿ, ಕೆಂಪು ಕಣ್ಣುಗಳು, ಪುಷ್ಟವಾದ ಕತ್ತು, ಚಿಕ್ಕಪಾದಗಳು, ದೊಡ್ಡ ತಲೆ - ಇವುಗಳಿಂದ ಕೂಡಿ ಜನಿಸಿದನು.

ಯಸ್ತ್ವಂಡಾತ್ ಸ ವಿನಿರ್ಭಿನ್ನೋ ನಿಷ್ಕ್ರಾಂತೋ ಭರತರ್ಷಭ ।
ವಿನತಾಪೂರ್ವಜಃ ಪುತ್ರಃ ಸೋऽರುಣೋ ದೃಶ್ಯತೇ ದಿವಿ ॥೪॥

ಎಲೈ ಭರತಶ್ರೇಷ್ಠನೇ, ಯಾವ ಅರುಣನು ಅಂಡವನ್ನು ಭೇದಿಸಿಕೊಂಡು ಹೊರಗೆ ಬಂದು, ವಿನತೆಯ ಪ್ರಥಮ ಪುತ್ರನೆನಿಸಿದನೋ ಅವನು ಅರುಣನಾಗಿ ಆಕಾಶದಲ್ಲಿ ಕಾಣುತ್ತಾನೆ.

ಪೂರ್ವಾಂ ದಿಶಮಭಿಪ್ರೇತ್ಯ ಸೂರ್ಯಸ್ಯೋದಯನಂ ಪ್ರತಿ ।
ಅರುಣೋರುಣಸಂಕಾಶೋ ನಾಮ್ನಾ ಚೈವಾರುಣಃ ಸ್ಮೃತಃ ॥೫॥

ಸೂರ್ಯೋದಯಕ್ಕಿಂತ ಸ್ವಲ್ಪ ಮುಂಚೆ ಪೂರ್ವ ದಿಕ್ಕಿನಲ್ಲಿ ಹೆಸರಿನಿಂದಲೂ ಮತ್ತು ಬಣ್ಣದಿಂದಲೂ ಅರುಣನಾಗಿ ಕಾಣಿಸಿಕೊಳ್ಳುತ್ತಾನೆ.

ಜಾತಮಾತ್ರಸ್ತು ವಿಹಗೋ ಗರುಡಃ ಪನ್ನಗಾಶನಃ ।
ವಿಹಾಯ ಮಾತರಂ ಕ್ಷಿಪ್ರಮಗಮತ್ ಸರ್ವತೋ ದಿಶಃ ॥೬॥

ಪನ್ನಗಾಶನನಾದ ಗರುಡನು ಪಕ್ಷಿಯಾಗಿ ಜನಿಸಿದ ಕೂಡಲೇ ತಾಯಿಯನ್ನು ಬಿಟ್ಟು ಶೀಘ್ರವಾಗಿ ಎಲ್ಲ ದಿಕ್ಕುಗಳಲ್ಲಿಯೂ ಹಾರಾಡಿದನು.

ಸ ತಥಾ ಚಾತಿವವೃಧೇ ಸರ್ವಕಾಮೈರಥಾರ್ಚಿತಃ ।
ಪಿತಾಮಹವಿಸೃಷ್ಟೇನ ಭೋಜನೇನ ವಿಶಾಂಪತೇ ॥೭॥

ಎಲೈ ರಾಜನೇ, ಬ್ರಹ್ಮದೇವರು ವ್ಯವಸ್ಥೆಗೊಳಿಸಿದ ಆಹಾರದಿಂದ ಮತ್ತು ಎಲ್ಲ ಕಾಮಗಳಿಂದಲೂ ಪೂಜಿತನಾದ ಅವನು ಬಹಳ ದೊಡ್ಡದಾಗಿ ಬೆಳೆದನು.

ತಸ್ಮಿಂಶ್ಚ ವಿಹಗೇ ತತ್ರ ಯಥಾಕಾಮಂ ವಿವರ್ಧತಿ ।
ಕದ್ರೂಶ್ಚ ವಿನತಾ ಚೈವ ಗಚ್ಛೇತಾಂ ಸಾಗರಂ ಪ್ರತಿ ॥೮॥

ಗರುಡನು ಆ ರೀತಿಯಲ್ಲಿ ತನ್ನ ಇಚ್ಛೆಯಂತೆ ಬೆಳೆಯುತ್ತಿರಲು ಕದ್ರೂ ಮತ್ತು ವಿನತೆಯರು ಸಾಗರದ ಸಮೀಪಕ್ಕೆ ಹೋದರು.

ದದೃಶಾತೇ ತು ತೇ ಯಾಂತಮುಚ್ಚೈಃಶ್ರವಸಮಂತಿಕಾತ್ ।
ಸ್ನಾತ್ವೋಪವೃತ್ತಂ ತ್ವರಿತಂ ಪೀತವಂತಂ ಚ ವಾಜಿನಮ್ ॥೯॥

ತತಃ ಕದ್ರೂರ್ಹಸಂತ್ಯೇವ ವಿನತಾಮಿದಮಬ್ರವೀತ್ ।
ಹಯಸ್ಯ ವರ್ಣಃ ಕೋ ನ್ವತ್ರ ಬ್ರೂಹಿ ಯಸ್ತೇ ಮನಃ ಶುಭೇ ॥೧೦॥

ಅವರು ಸ್ನಾನವನ್ನು ಮಾಡಿ, ಜಲಪಾನವನ್ನು ಮಾಡಿ, ಶೀಘ್ರವಾಗಿ ಹಿಂದಿರುಗುತ್ತಿರುವಾಗ ಉಚ್ಚೈಶ್ರವಸ್ ಅಶ್ವವನ್ನು ಸಮೀಪದಲ್ಲಿ ನೋಡಿದರು. ಆಗ

ಕದ್ರುವು ನೋಡುತ್ತಲೇ ವಿನತೆಯನ್ನು ಕುರಿತು, ಶುಭಳೇ, ಅಶ್ವದ ಬಣ್ಣವು ಯಾವುದು ಎಂದು ನಿನ್ನ ಅಭಿಪ್ರಾಯ ಎಂದು ಹೇಳು ಎಂದು ಕೇಳಿದಳು.

ವಿನತಾ

ಏಕವರ್ಣೋ ಹಯೋ ರಾಜ್ಞಿ ಸರ್ವಶ್ವೇತೋ ಮತೋ ಮಮ ।
ವರ್ಣಂ ವಾ ಕೀದೃಶಂ ತಸ್ಯ ಮನ್ಯಸೇ ತ್ವಂ ಮನಸ್ವಿನಿ ॥೧೧॥

ವಿನತೆ– ರಾಣಿಯೇ, ಅಶ್ವವು ಒಂದೇ ವರ್ಣವುಳ್ಳದ್ದು. ಅದು ಸರ್ವಶ್ವೇತವಾಗಿದೆ ಎಂದು ನನ್ನ ಅಭಿಪ್ರಾಯ. ಧೈರ್ಯಶಾಲಿನಿಯೇ, ನಿನ್ನ ಅಭಿಪ್ರಾಯದಲ್ಲಿ ಅಶ್ವದ ಬಣ್ಣವೇನು?

ಕದ್ರೂಃ

ಯದ್ಯಾಯೇ್ಯ (ಸ) ಮತಸ್ತುಭ್ಯಂ ಯ ಏಷ ಹಯಸತ್ತಮಃ ।
ಬ್ರೂಹಿ ಕಲ್ಯಾಣಿ ದೀವ್ಯಾವೋ ವರ್ಣಾನ್ಯತ್ವೇನ ಭಾಮಿನಿ ॥೧೨॥

ಕದ್ರೂ– ಪೂಜ್ಯಳೇ, ಈ ಶ್ರೇಷ್ಠವಾದ ಹಯವು ಅಂತಹ ಬಣ್ಣವುಳ್ಳದ್ದೆಂದು ನಿನ್ನ ಅಭಿಪ್ರಾಯವಾದರೆ, ಭಾಮಿನಿಯೇ ಹೇಳು. ನಾವಿಬ್ಬರೂ ಅದರ ಬಣ್ಣದ ವಿಷಯದಲ್ಲಿ ಪಣ (ಬಾಜಿಯನ್ನು) ಕಟ್ಟೋಣ.

ವಿನತಾ

ಯದ್ಯಾಯೇ್ಯ ದೀವ್ಯಸಿ ತ್ವಂ ಮೇ ಕಃ ಪಣೋ ನೋ ಭವಿಷ್ಯತಿ ।
ಸಾ ತಜ್ಞಾತ್ವಾ ಪಣೇಯಂ ವೈ ಜ್ಞಾತ್ವಾ ತು ವಿಪಣೇ ತ್ವಯಾ ॥೧೩॥

ವಿನತೆ– ಪೂಜ್ಯಳೇ, ನೀನು ನನ್ನ ಜೊತೆ ದ್ಯೂತವನ್ನು ಆಡುವುದಾದರೆ ಪಣವು ಯಾವುದಾಗುವುದು? ಪಣವನ್ನು ತಿಳಿದು ನಾನು ನಿನ್ನ ಜೊತೆಗೆ ದ್ಯೂತವಾಡುವೆನು (ಬಾಜಿಯನ್ನು ಕಟ್ಟುವೆನು).

ಕದ್ರೂಃ

ಜಿತಾ ದಾಸೀ ಭವೇಮೇರ್ ತ್ವಮಹಂ ಚಾಪ್ಯಸಿತೇಕ್ಷಣೇ ।
ನೈಕವರ್ಣ್ಯೈಕವರ್ಣತ್ವೇ ವಿನತೇ ರೋಚತೇ ಚ ತೇ ॥೧೪॥

ಕದ್ರು– ನೀನು ಜಿತಳಾದರೆ ನನಗೆ ದಾಸಿಯಾಗಬೇಕು. ಎಲೌ ಕೃಷ್ಣನೇತ್ರೆಯೇ, ನಾನು ಜಿತಳಾದರೆ ನಿನ್ನ ದಾಸಿಯಾಗುವೆನು. ಎಲೌ ವಿನತೆಯೇ, ಅಶ್ವದ ವರ್ಣವು ಏಕ ಮತ್ತು ಅನೇಕ ಎಂಬ ವಿಷಯದಲ್ಲಿ ನಿನಗೆ ಯಾವುದು ರುಚಿಸುತ್ತದೆ?

ರೋಚತೇ ಮೇ ಪಣೇ ರಾಜ್ಞಿ ದಾಸೀತೇನ ನ ಸಂಶಯಃ ।
ಸತ್ಯಮಾತಿಷ್ಠ ಭದ್ರಂ ತೇ ಸತ್ಯೇ ಸ್ಥಾಸ್ಯಾಮಿ ಚಾಪ್ಯಹಮ್ ॥೧೫॥

ವಿನತೆ– ಎಲೌ ರಾಣಿಯೇ, ಸೋತವರು ದಾಸಿಯಾಗಬೇಕೆಂಬ ಪಣವು ನನಗೆ ರುಚಿಸುತ್ತದೆ. ಇದರಲ್ಲಿ ಸಂಶಯವಿಲ್ಲ. ನೀನು ಸತ್ಯವನ್ನು ಆಶ್ರಯಿಸುವವಳಾಗು. ನಿನಗೆ ಶುಭವಾಗಲಿ. ನಾನೂ ಸಹ ಸತ್ಯದಲ್ಲಿಯೇ ನಿಲ್ಲುವೆನು (ಅಶ್ವದ ವರ್ಣವು ನಾನು ಮೊದಲು ಹೇಳಿದಂತೆ ಸರ್ವಶ್ವೇತವಾದುದು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನೇ
ಗರುಡೋತ್ಪತ್ತಿರ್ನಾಮ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೆಂಟನೆಯ ಅಧ್ಯಾಯ

ತನ್ನ ಪುತ್ರರ ಜೊತೆಯಲ್ಲಿ ಕದ್ರುವಿನ ಸಂವಾದ

ಭೀಷ್ಮಃ

ವಿನತಾ ತು ತಥೇತ್ಯುಕ್ತ್ವಾ ಕೃತಸಂಶಪಥಾ ಪಣೇ ।
ಕದ್ರೂರಪಿ ತಥೇತ್ಯುಕ್ತ್ವಾ ಪುತ್ರಾನಿದಮುವಾಚ ಹ ॥೧॥

ಭೀಷ್ಮ– ವಿನತೆಯು 'ಹಾಗೆಯೇ ಆಗಲಿ' ಎಂದು ಹೇಳಿ ಪಣದ ವಿಷಯದಲ್ಲಿ ಶಪಥವನ್ನು ಮಾಡಿದಳು. ಕದ್ರುವೂ ಸಹ 'ಹಾಗೆಯೇ ಆಗಲಿ' ಎಂದು ಹೇಳಿ ತನ್ನ ಪುತ್ರರನ್ನುಕುರಿತು ಹೀಗೆ ಮಾತನಾಡಿದಳು.

ಕದ್ರೂಃ

ಮಯಾ ಕೃತಃ ಪಣಃ ಪುತ್ರಾ ಮಿಥೋ ವಿನತಯಾ ಸಹ ।
ಉಚ್ಚೈಃಶ್ರವಸಿ ಗಾಂಧರ್ವೇ ತಚ್ಛೃಣುಧ್ವಂ ಭುಜಂಗಮಾಃ ॥೨॥

ಕದ್ರೂ– ಎಲೈ ಪುತ್ರರೇ, ಸರ್ಪಗಳೇ, ನಾನು ವಿನತೆಯ ಜೊತೆಯಲ್ಲಿ ಉಚ್ಚೈಶ್ರವಸ್ ಅಶ್ವದ ವಿಷಯದಲ್ಲಿ ಪರಸ್ಪರವಾಗಿ ಪಣವನ್ನು ಮಾಡಿಕೊಂಡಿದ್ದೇನೆ. ನೀವು ಅದನ್ನು ಕೇಳಿ.

ಅಬ್ರವಂ ನೈಕವರ್ಣಂ ತಂ ಸೈಕವರ್ಣಮಥಾಬ್ರವೀತ್ ।
ಜಿತಾ ದಾಸೀ ಭವೇತ್ ಪುತ್ರಾಃ ಸಾ ವಾಹಂ ವಾ ನ ಸಂಶಯಃ ॥೩॥

ನಾನು ಅದಕ್ಕೆ ಒಂದೇ ಬಣ್ಣವಿಲ್ಲ ಎಂದು ಹೇಳಿದ್ದೇನೆ. ಅವಳು ಒಂದೇ ಬಣ್ಣ ಉಳ್ಳದ್ದು ಎಂದು ಹೇಳಿದ್ದಾಳೆ. ಎಲೈ ಪುತ್ರರೇ, ನಾನಾಗಲೀ ಅಥವಾ ಅವಳಾಗಲೀ ಪರಾಜಿತರಾದವರು ದಾಸಿಯಾಗುವರು. ಇದರಲ್ಲಿ ಸಂಶಯವಿಲ್ಲ.

ಏಕವರ್ಣಶ್ಚ ವಾಜೀ ಸ ಚಂದ್ರಕೋಕನದಪ್ರಭಃ ।
ಸಾಹಂ ದಾಸೀ ಭವಿಷ್ಯಾಮಿ ಜಿತಾ ಪುತ್ರಾ ನ ಸಂಶಯಃ ॥೪॥

ಆ ಅಶ್ವವು ಚಂದ್ರನಂತೆ, ಕೋಕನದ (ಕೆಂದಾವರೆ) ಪುಷ್ಪದಂತೆ ಒಂದೇ ಬಣ್ಣವುಳ್ಳದ್ದು. ಎಲೈ ಪುತ್ರರೇ, ನಾನು ಪರಾಜಿತಳಾಗಿ ದಾಸಿಯಾಗುವೆನು. ಇದರಲ್ಲಿ ಸಂಶಯವಿಲ್ಲ.

ತೇ ಯೂಯಮಶ್ವಪ್ರವರಮಾವಿಶಧ್ವಮತಂದ್ರಿತಾಃ ।
ಸರ್ವೇ ತ್ವೇಕಂ ಬಾಲಧಿಗಾ ಬಾಲಾ ಭೂತ್ವಾಂಜನಪ್ರಭಾಃ ॥೫॥

ಆದ್ದರಿಂದ ನೀವು ಆ ಶ್ರೇಷ್ಠವಾದ ಅಶ್ವವನ್ನು ಸಮೀಪಿಸಿ, 'ಕಾಡಿಗೆಯಂತಹ ಕಪ್ಪು ಬಣ್ಣವುಳ್ಳವುಗಳಾಗಿ ಅದರ ಬಾಲದ ಒಂದೊಂದು ಕೂದಲನ್ನೂ ಆಶ್ರಯಿಸಿ'.

ಸರ್ಪಾಃ

ನಿಕೃತ್ಯಾ ನ ಜಯಃ ಶ್ರೇಯಾನ್ ಮಾತಃ ಸತ್ಯಾ ಗಿರಃ ಶೃಣು ।
ಆಯತ್ಯಾಂ ಚ ತದಾತ್ವೇ ಚ ನ ಚ ಧರ್ಮೋऽತ್ರ ವಿದ್ಯತೇ ॥೬॥

ಸರ್ಪಗಳು– 'ತಾಯಿಯೇ, ಮೋಸದಿಂದ ಜಯವನ್ನು ಗಳಿಸುವುದು ಒಳ್ಳೆಯದಲ್ಲ. ನಮ್ಮ ಸತ್ಯವಾದ ಮಾತನ್ನು ಕೇಳು. ಹೀಗೆ ಮಾಡಿದರೆ ವರ್ತಮಾನ ಕಾಲದಲ್ಲಾಗಲೀ ಅಥವಾ ಭವಿಷ್ಯತ್ಕಾಲದಲ್ಲಾಗಲೀ ಇದರಲ್ಲಿ ಧರ್ಮವಿಲ್ಲ.

ಸಾ ತ್ವಂ ಧರ್ಮಾದಪೇತಂ ವೈ ಕಾಲಸ್ಯೈವ ಹಿತಂ ವಚಃ ।
ನಿಕೃತ್ಯಾ ವಿಜಯಂ ಮಾತರ್ಮಾ ಸ್ಮ ಕಾರ್ಷೀಃ ಕಥಂಚನ ॥೭॥

ನೀನು ಧರ್ಮದಿಂದ ಚ್ಯುತಳಾದ ವರ್ತಮಾನಕಾಲದಲ್ಲಿ ಮಾತ್ರ ಹಿತವಾದ ಮಾತನ್ನು ಆಡುತ್ತಿದ್ದೀಯೆ. ತಾಯಿಯೇ, ಮೋಸದಿಂದ ಎಂದೂ ಜಯವನ್ನು ಸಂಪಾದಿಸಬೇಡ.

ಯದ್ಯಧರ್ಮೇಣ ವಿಜಯಂ ವಯಂ ಕಾಂಕ್ಷಾಮಹೇ ಕ್ವಚಿತ್ ।
ತ್ವಯಾ ನಾಮ ನಿವಾರ್ಯಾಃ ಸ್ಮ ಮಾ ಕುರುಧ್ವಮಿತಿ ಬ್ರುವಃ ॥೮॥

ನಾವೇ ಒಂದು ಪಕ್ಷ ಅಧರ್ಮದಿಂದ ವಿಜಯವನ್ನು ಆಶಿಸಿದರೆ ನೀನು ನಮಗೆ ಹಾಗೆ ಮಾಡಬೇಡಿ ಎಂದು ಹೇಳಬೇಕಷ್ಟೆ?

ಸಾ ತ್ವಮಸ್ಮಾನಪಿ ಸತೋ ವಿಪಾಪಾನೃಜುಬುದ್ಧಿನಃ ।
ಕಲ್ಮಷೇಣಾಭಿಸಂಯೋಕ್ತುಂ ಕಾಂಕ್ಷಸೇ ಲೋಭಮೋಹಿತಾ ॥೯॥

ಅಂತಹ ನೀನು ಸಜ್ಜನರಾದ, ಪಾಪರಹಿತರಾದ, ಋಜು ಬುದ್ಧಿಯುಳ್ಳ ನಮ್ಮನ್ನೂ ಸಹ ಲೋಭದಿಂದ ಮೋಹಿತಳಾಗಿ, ಪಾಪದ ಜೊತೆಯಲ್ಲಿ ಸಂಯೋಗವನ್ನು ಮಾಡಲು ಬಯಸುತ್ತಿದ್ದೀಯೆ.

ತೇ ವಯಂ ತ್ವಾಂ ಪರಿತ್ಯಜ್ಯ ದ್ರವಿಷ್ಯಾಮ ದಿಶೋ ದಶ ।
ಯತ್ರ ವಾಕ್ಯಂ ನ ತೇ ಮಾತಃ ಪುನಃ ಶ್ರೋಷ್ಯಾಮ ಈದೃಶಮ್ ॥೧೦॥

ಅಂತಹ ನಾವು ನಿನ್ನನ್ನು ಬಿಟ್ಟು ಇನ್ನೊಮ್ಮೆ ನಿನ್ನ ಇಂತಹ ಮಾತುಗಳು ಕೇಳದಿರುವ ಹತ್ತುದಿಕ್ಕುಗಳಿಗೆ ಓಡಿ ಹೋಗುವೆವು.

ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ ।
ಉತ್ಪಥಂ ಪ್ರತಿಪನ್ನಸ್ಯ ಪರಿತ್ಯಾಗೋ ವಿಧೀಯತೇ ॥೧೧॥

ಹಿರಿಯನಾದವನೂ ಸಹ ಗರ್ವಕ್ಕೆ ಒಳಗಾಗಿ ಕಾರ್ಯಾಕಾರ್ಯವನ್ನು ತಿಳಿಯದೆ ದುರ್ಮಾರ್ಗಗಾಮಿಯಾದರೆ ಅವನ ಪರಿತ್ಯಾಗವು ಶಾಸ್ತ್ರದಲ್ಲಿ ವಿಧಿಸಲ್ಪಡುತ್ತದೆ'.

ಕದ್ರೂಃ

ಶೃಣೋಮಿ ವಿವಿಧಾ ವಾಚೋ ಹೇತುಮತ್ಯಃ ಸಮೀರಿತಾಃ ।
ವಕ್ರಗಾ ಮನ್ನಿಕೃತ್ಯರ್ಥಂ ತದಹಂ ವೋ ನ ರೋಚಯೇ ॥೧೨॥

ಕದ್ರೂ– 'ಎಲೈ ಸರ್ಪಗಳೇ, ನನ್ನನ್ನು ವಂಚನೆ ಮಾಡುವ ಸಲುವಾಗಿ ನೀವು ಆಡುತ್ತಿರುವ, ಯುಕ್ತಿಯುಕ್ತವಾದ ವಿವಿಧವಾದ ಮಾತುಗಳನ್ನು ನಾನು ಕೇಳುತ್ತಿದ್ದೇನೆ. ನಿಮ್ಮ ಮಾತುಗಳನ್ನು ನಾನು ಇಷ್ಟಪಡುವುದಿಲ್ಲ.

ನ ಚ ತತ್ಪಣಿತಂ ಮಂದಾಃ ಶಕ್ಯಂ ಜೇತುಮತೋಽನ್ಯಥಾ ।
ಜಿತೇ ನಿಕೃತ್ಯಾ ಶ್ರುತ್ವೈತತ್ಕ್ಷೇಮಂ ಕುರುತ ಪುತ್ರಕಾಃ ॥೧೩॥

ಎಲೈ ಮಂದರೇ, ಹೀಗೆ ಮಾಡದಿದ್ದರೆ ಬೇರೆ ರೀತಿಯಲ್ಲಿ ಪಣವನ್ನು ಗೆಲ್ಲಲು ಸಾಧ್ಯವಿಲ್ಲ. ನನ್ನ ಮಾತನ್ನು ಕೇಳಿ ಮೋಸದಿಂದ ಜಯವನ್ನು ಗಳಿಸಿ. ಎಲೈ ಪುತ್ರರೇ, ನನಗೆ ಕ್ಷೇಮವನ್ನುಂಟು ಮಾಡಿ.

ಶ್ವೋಽಹಂ ಪ್ರಭಾತಸಮಯೇ ಜಿತಾ ಧರ್ಮೇಣ ಪುತ್ರಕಾಃ ।
ಶೈಲೂಷಿಣೀ ಭವಿಷ್ಯಾಮಿ ವಿನತಾಯಾ ನ ಸಂಶಯಃ ॥೧೪॥

ಎಲೈ ಪುತ್ರರೇ, ಇಲ್ಲದಿದ್ದರೆ ನಾಳೆ ಪ್ರಾತಃಕಾಲದಲ್ಲಿ ನಾನು ಧರ್ಮದಿಂದ ಪರಾಜಿತಳಾಗಿ ವಿನತೆಯ ದಾಸಿಯಾಗುವುದರಲ್ಲಿ ಸಂಶಯವಿಲ್ಲ.

ಇಹ ಚಾಮುತ್ರ ಚಾರ್ಥಾಯ ಪುತ್ರಾನಿಚ್ಛಂತಿ ಮಾತರಃ ।
ಸೇಯಮೀಹಾ ವಿಪನ್ನಾ ಮೇ ಯುಷ್ಮಾನಾಸಾದ್ಯ ಸಂಗತಾನ್ ॥೧೫॥

ತಾಯಿಯರು ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಸುಖವನ್ನು ಸಂಪಾದಿಸಿಕೊಳ್ಳಲು ಪುತ್ರರನ್ನು ಬಯಸುತ್ತಾರೆ. ಒಂದೇ ಅಭಿಪ್ರಾಯವಿರುವ ನಿಮ್ಮನ್ನು ಮಕ್ಕಳಾಗಿ ಪಡೆದು ನನ್ನ ಅಂತಹ ಸಂಕಲ್ಪವು ನಾಶವನ್ನು ಹೊಂದಿದೆ.

ಇಹ ವಾ ತಾರಯೇತ್ ಪುತ್ರಃ ಪ್ರೇತ್ಯ ವಾ ತಾರಯೇತ್ ಪಿತ್ರ್ಯಾನ್ ।
ನಾತ್ರ ಚಿತ್ರಂ ಭವೇತ್ ಕಿಂಚಿತ್ ಪುನಾತೀತಿ ಚ ಪುತ್ರತಾ ॥೧೬॥

ಪುತ್ರನಾದವನು ಪಿತೃಗಳನ್ನು ಈ ಲೋಕದಲ್ಲಾಗಲೀ ಅಥವಾ ಪರಲೋಕದಲ್ಲಾಗಲೀ ದಾಟಿಸಬೇಕು. ಇದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಪವಿತ್ರೀಕರಿಸುವುದರಿಂದ ಪುತ್ರನೆನಿಸುತ್ತಾನೆ.

ತೇ ಯೂಯಂ ತಾರಣಾರ್ಥಾಯ ಮಮ ಪುತ್ರಾ ಮನೋಜವಾಃ ।
ಆವಿಶಧ್ವಂ ಹಯಶ್ರೇಷ್ಠಂ ಬಾಲಾ ಭೂತ್ವಾಽಂಜನಪ್ರಭಾಃ ॥೧೭॥

ಅಂತಹ ನನ್ನ ಪುತ್ರರಾದ, ಮನೋಜವವುಳ್ಳ ನೀವು ನನ್ನನ್ನು ಈ ವಿಪತ್ತಿನಿಂದ ದಾಟಿಸಲು ಕಾಡಿಗೆಯ ಕಪ್ಪುಬಣ್ಣದ ಸರ್ಪಗಳಾಗಿ ಆ ಶ್ರೇಷ್ಠವಾದ ಅಶ್ವದ ಬಾಲವನ್ನು ಆಶ್ರಯಿಸಿ.

ಜಾನಾಮ್ಯಧರ್ಮಂ ಸಕಲಂ ವಿಜಿತಾ ವಿನತಾ ಭವೇತ್ ।
ನಿಕೃತ್ಯಾ ದಾಸಭಾವಸ್ತು ಯುಷ್ಮಾನಪ್ಯವಪೀಡಯೇತ್ ॥೧೮॥

ನಾನು ಧರ್ಮವೆಲ್ಲವನ್ನೂ ತಿಳಿದಿದ್ದೇನೆ. ವಿನತೆಯು ಮೋಸದಿಂದಲಾದರೂ ಪರಾಜಿತಳಾಗಬೇಕು. ನಾನು ದಾಸ್ಯವನ್ನು ಹೊಂದಿದರೆ ಅದು ನಿಮಗೂ ಪೀಡೆಯನ್ನುಂಟು ಮಾಡೀತು.

ನಿಕೃತ್ಯಾ ವಿಜಯೋ ವೇತಿ ದಾಸತ್ವಂ ವಾ ಪರಾಭವೇ ।
ಉಭಯಂ ನಿಶ್ಚಯಂ ಕೃತ್ವಾ ಜಯೋ ವೈ ಧಾರ್ಮಿಕೋ ವರಃ ॥೧೯॥

ಮೋಸದಿಂದ ವಿಜಯ ಅಥವಾ ಪರಾಜಿತಳಾಗಿ ದಾಸ್ಯ, ಇವೆರಡನ್ನೂ ವಿಚಾರ ಮಾಡಿದರೆ ನನಗೆ ಜಯವೇ ಶ್ರೇಷ್ಠವೆಂದು ತೋರುತ್ತದೆ.

ಯದ್ಯಪ್ಯಧರ್ಮೋ ವಿಜಯೋ ಯುಷ್ಮಾನೇವ ಸ್ಪೃಶೇತ್ ಪುನಃ ।
ಗುರೋರ್ವಚನಮಾಸ್ಥಾಯ ಧರ್ಮೋ ವಾ ಸಂಭವಿಷ್ಯತಿ ॥೨೦॥

ಯದ್ಯಪಿ ಹೀಗೆ ವಿಜಯವನ್ನು ಸಂಪಾದಿಸಿದರೆ ಉಂಟಾಗುವ ಅಧರ್ಮವು ನಿಮ್ಮನ್ನೂ ಮುಟ್ಟೀತು. ಆದರೆ ಹಿರಿಯರ ಮಾತನ್ನು ಕೇಳುವುದರಿಂದ ನಿಮಗೆ ಧರ್ಮವೇ ಉಂಟಾಗುವುದು'.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನೇ ಕದ್ರೂ-ಸರ್ಪಸಂವಾದೋ ನಾಮ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

ಹತ್ತೊಂಬತ್ತನೆಯ ಅಧ್ಯಾಯ

ವಿನತೆಯ ಪರಾಜಯ

ಭೀಷ್ಮಃ

ಶ್ರುತ್ವಾ ತು ವಚನಂ ಮಾತುಃ ಕ್ರುದ್ಧಾಯಾಸ್ತೇ ಭುಜಂಗಮಾಃ ।
ಕೃಚ್ಛ್ರೇಣೈವಾನ್ವಮೋದಂತ ಕೇಚಿದ್ದಿತ್ವಾ ದಿಶೋ ಗತಾಃ ॥೧॥

ಭೀಷ್ಮ– ತಾಯಿಯ ಮಾತನ್ನು ಕೇಳಿ ಕೋಪಗೊಂಡ ಆ ಸರ್ಪಗಳು ಬಹಳ ಕಷ್ಟದಿಂದಲೇ ಅನುಮತಿಯನ್ನು ನೀಡಿದವು. ಇನ್ನು ಕೆಲವು ಸರ್ಪಗಳು ತಾಯಿಯ ಮಾತನ್ನು ಒಪ್ಪದೆ ಅವಳನ್ನು ಬಿಟ್ಟು ದಿಕ್ಕು ದಿಕ್ಕುಗಳಿಗೆ ಹೊರಟು ಹೋದವು.

ಯೇ ಪ್ರತಸ್ಥುರ್ದಿಶಸ್ತತ್ರ ಕ್ರುದ್ಧಾ ತಾನಶಪದ್ ಭೃಶಮ್ ।
ಭುಜಂಗಮಾನಾಂ ಮಾತಾಽಸೌ ಕದ್ರೂರ್ವೈರಕರೀ ತದಾ ॥೨॥

ಯಾವ ಸರ್ಪಗಳು ತನ್ನನ್ನು ಬಿಟ್ಟು ಹೊರಟು ಹೋದವೋ ಅಂತಹ ಸರ್ಪಗಳನ್ನು ಕುರಿತು ಸರ್ಪಗಳ ತಾಯಿಯಾದ ಕದ್ರುವು ಅವರಲ್ಲಿ ವೈರವನ್ನು ಮಾಡಿ ಕೋಪದಿಂದ ಶಾಪವನ್ನು ನೀಡಿದಳು.

ಉತ್ಪತ್ಸ್ಯತಿ ಹಿ ರಾಜನ್ಯಃ ಪಾಂಡವೋ ಜನಮೇಜಯಃ ।
ಚತುರ್ಥೋ ಧನ್ವಿನಾಂ ಶ್ರೇಷ್ಠಾತ್ ಕುಂತೀಪುತ್ರಾತ್ ಧನಂಜಯಾತ್ ॥

'ಧನುರ್ಧಾರಿಗಳಲ್ಲಿ ಶ್ರೇಷ್ಠನಾದ, ಕುಂತೀಪುತ್ರನಾದ ಧನಂಜಯನಿಂದ ಪಾಂಡವ ವಂಶದಲ್ಲಿ ನಾಲ್ಕನೆಯವನಾಗಿ ಜನಮೇಜಯನೆಂಬ ರಾಜನು ಆಗುತ್ತಾನೆ.

ಸ ಸರ್ಪಸತ್ರಮಾಹರ್ತಾ ಕ್ರುದ್ಧಃ ಕುರುಕುಲೋದ್ವಹಃ ।
ತಸ್ಮಿನ್ ಸತ್ರೇಽಗ್ನಿನಾ ಯುಷ್ಮಾನ್ ಪಂಚತ್ವಮುಪನೇಷ್ಯತಿ ॥೪॥

ಕುರುಕುಲೋದ್ವಹನಾದ ಅವನು ಕೋಪಗೊಂಡು ಸರ್ಪಸತ್ರವನ್ನು ಮಾಡುವನು. ಆ ಸತ್ರದಲ್ಲಿ ನಿಮ್ಮನ್ನು ಅಗ್ನಿಯಲ್ಲಿ ಹೋಮ ಮಾಡುವನು' (ಎಂದು ಶಾಪವನ್ನು ನೀಡಿದಳು).

ಏವಂ ಕ್ರುದ್ಧಾಽಶಪನ್ಮಾತಾ ಪನ್ನಗಾನ್ ಧರ್ಮಚಾರಿಣಃ ।
ಗುರೋಃ ಪರಿತ್ಯಾಗಕೃತಂ ನೈತದನ್ಯದ್ ಭವಿಷ್ಯತಿ ॥೫॥

ಹೀಗೆ ತಾಯಿಯು ಕ್ರುದ್ಧಳಾಗಿ ಧರ್ಮಾಚರಣೆಯನ್ನು ಮಾಡುವ ಆ ಸರ್ಪಗಳನ್ನು 'ಹಿರಿಯರ ಮಾತನ್ನು ಪರಿತ್ಯಾಗ ಮಾಡಿರುವುದರಿಂದ ಇದು ಬೇರೆ ರೀತಿಯಾಗಲು ಸಾಧ್ಯವಿಲ್ಲ' ಎಂದು ಶಾಪ ನೀಡಿದಳು.

ಏವಂ ಶಪ್ತಾ ದಿಶಃ ಪ್ರಾಪ್ತಾಃ ಪನ್ನಗಾ ಧರ್ಮಚಾರಿಣಃ ।
ವಿಹಾಯ ಮಾತರಂ ಕ್ರುದ್ಧಾ ಗತಾ ವೈರಕರೀಂ ತದಾ ॥೬॥

ಹೀಗೆ ಧರ್ಮಚಾರಿಗಳಾದ ಸರ್ಪಗಳು ಶಾಪವನ್ನು ಪಡೆದು, ವೈರವನ್ನು ಮಾಡಿದ ತಾಯಿಯನ್ನು ಬಿಟ್ಟು ಕ್ರೋಧದಿಂದ ಹೊರಟು ಹೋದವು.

ತತ್ರ ಯೇ ವೃಜಿನಂ ತಸ್ಯಾ ಅನಾಪನ್ನಾ ಭುಜಂಗಮಾಃ ।
ತೇ ತಸ್ಯ ವಾಜಿನೋ ವಾಲಾ ಬಭೂವುರಸಿತಪ್ರಭಾಃ ॥೭॥

ತಾಯಿಗೆ ವಿರೋಧವನ್ನು ಮಾಡದಿದ್ದ ಸರ್ಪಗಳು ಹೋಗಿ, ಆ ಅಶ್ವದ ಬಾಲದಲ್ಲಿ ಕಪ್ಪಾದ ಕೂದಲುಗಳ ಬಣ್ಣವನ್ನು ಹೊಂದಿ ಸೇರಿಕೊಂಡವು.

ತಾನ್ ದೃಷ್ಟ್ವಾ ವಾಲಧಿಸ್ಥಾಂಶ್ಚ ಪುತ್ರಾನ್ ಕದ್ರೂರಥಾಬ್ರವೀತ್ ।
ವಿನತಾಮಥ ಸಂಹೃಷ್ಟಾ ಹಯೋಽಸೌ ದೃಶ್ಯತಾಮಿತಿ ॥೮॥

ಬಾಲವನ್ನು ಆಶ್ರಯಿಸಿದ ತನ್ನ ಪುತ್ರರಾದ ಸರ್ಪಗಳನ್ನು ನೋಡಿ ಸಂತೋಷಗೊಂಡ ಆ ಕದ್ರುವು ವಿನತೆಯನ್ನು ಕುರಿತು ಆ ಕುದುರೆಯನ್ನು ನೋಡೋಣ ಎಂದು ಹೇಳಿದಳು.

ಏಕವರ್ಣೋ ನ ವಾ ಭದ್ರೇ ಪಣೋ ನೌ ಸುವ್ಯವಸ್ಥಿತಃ ।
ಉದಕಾದುತ್ತರಂತಂ ತಂ ಹಯಂ ಚೈವ ಚ ಭಾಮಿನಿ ॥೯॥

'ಎಲೌ ಭಾಮಿನಿಯೇ, ನೀರಿನಿಂದ ಎದ್ದುಬರುವ ಆ ಅಶ್ವವನ್ನು ನೋಡೋಣ. ಎಲೌ ಶುಭಳೇ, ಅದು ಏಕವರ್ಣವುಳ್ಳದ್ದು ಎಂದು ನೀನು, ಅನೇಕ ವರ್ಣವುಳ್ಳದ್ದು ಎಂದು ನಾನು ಮಾಡಿರುವ ಪಣವು ಸ್ಥಿರವಾಗಿದೆ'.

ಸಾ ತ್ವವಕ್ರಮತಿರ್ದೇವೀ ವಿನತಾ ಜಿಹ್ಮಗಾಮಿನೀಮ್ ।
ಅಬ್ರವೀದ್ ಭಗಿನೀಂ ಕಿಂಚಿದ್ ವಿಹಸಂತೀವ ಭಾರತ ॥೧೦॥

ಎಲೈ ಭಾರತನೇ, ನೇರವಾದ ಬುದ್ಧಿಯುಳ್ಳ ವಿನತೆಯು ಕುಟಿಲ ಬುದ್ಧಿಯುಳ್ಳ ಕದ್ರುವನ್ನು ಕುರಿತು ಸ್ವಲ್ಪ ನಕ್ಕು ಮಾತನಾಡಿದಳು.

ಹಂತ ಪಶ್ಯಾವ ಗಚ್ಛಾವಃ ಸುಕೃತೋ ನೌ ಪಣಃ ಶುಭೇ ।
ದಾಸೀ ವಾ ತೇ ಭವಿಷ್ಯಾಮಿ ತ್ವಂ ವಾ ದಾಸೀ ಭವಿಷ್ಯಸಿ ॥೧೧॥

'ಸಂತೋಷ, ಹೋಗಿ ನೋಡೋಣ. ಎಲೌ ಶುಭಳೇ, ನಾವು ಪಣವನ್ನು ಚೆನ್ನಾಗಿ ಕಟ್ಟಿದ್ದೇವೆ. ನಾನು ನಿನಗೆ ದಾಸಿಯಾಗುವೆನು ಅಥವಾ ನೀನು ನನಗೆ ದಾಸಿಯಾಗುವಿ'.

ಏವಂ ಸ್ಥಿರಂ ಪಣಂ ಕೃತ್ವಾ ಹಯಂ ತೇ ತು ದದರ್ಶತುಃ ।
ಕೃತ್ವಾ ಸಾಕ್ಷಿಣಮಾತ್ಮಾನಂ ಭಗಿನ್ಯೌ ಕುರುಸತ್ತಮ ॥೧೨॥

ಎಲೈ ಕುರುಶ್ರೇಷ್ಠನೇ, ಹೀಗೆ ಸ್ಥಿರವಾದ ಪಣವನ್ನು ಮಾಡಿ, ಅದಕ್ಕೆ ತಮ್ಮನ್ನೇ ಸಾಕ್ಷಿಗಳನ್ನಾಗಿ ಮಾಡಿಕೊಂಡು, ಸಹೋದರಿಯರಾದ ಅವರು ಆ ಅಶ್ವವನ್ನು ನೋಡಿದರು.

ಸಾ ದೃಷ್ಟ್ವೈವ ಹಯಂ ಮಂದಂ ವಿನತಾ ಶೋಕಕರ್ಶಿತಾ ।
ಶ್ವೇತಂ ಚಂದ್ರಾಂಶುವಾಲಂ ತಂ ಕಾಳವಾಲಂ ಮನೋಜವಮ್ ॥೧೩॥

ಆ ಕುದುರೆಯನ್ನು ಅಸ್ಪಷ್ಟವಾಗಿ ನೋಡಿದ ತಕ್ಷಣವೇ ಶುದ್ಧ ಚಂದ್ರವರ್ಣದ ಬಾಲವನ್ನು ಹೊಂದಿದ್ದ ಮನೋವೇಗವುಳ್ಳ ಆ ಕುದುರೆಯು ಕಪ್ಪಾದ ಬಾಲವನ್ನು ಹೊಂದಿರುವುದನ್ನು ನೋಡಿ ವಿನತೆಯು ಶೋಕಪೀಡಿತಳಾದಳು.

ತತ್ರ ಸಾ ವ್ರೀಳಿತಾ ವಾಕ್ಯಂ ವಿನತಾ ಸಾಶ್ರುಬಿಂದುಕಾ ।
ಉವಾಚ ಕಾಳವಾಲೋಽಯಂ ತುರಗೋ ವಿಜಿತಂ ತ್ವಯಾ ॥೧೪॥

ವಿನತೆಯು ನಾಚಿಕೆಯಿಂದ ಕೂಡಿ, ಕಣ್ಣಿನಲ್ಲಿ ನೀರು ತುಂಬಿಕೊಂಡು 'ಈ ಅಶ್ವವು ಕಪ್ಪಾದ ಬಾಲವುಳ್ಳದ್ದಾಗಿದೆ. ಪಣದಲ್ಲಿ ನೀನೇ ಗೆದ್ದಿದ್ದೀಯೆ' ಎಂದು ಹೇಳಿದಳು.

ಏವಂ ಕ್ರುದ್ಧಾ ಶಪನ್ಮಾತಾ ಪನ್ನಗಾನ್ ಧರ್ಮಚಾರಿಣಃ ।
ಗುರೋಃ ಪರಿತ್ಯಾಗಕೃತಂ ನೈತದನ್ಯದ್ ಭವಿಷ್ಯತಿ ॥೫॥

ಹೀಗೆ ತಾಯಿಯು ಕ್ರುದ್ಧಳಾಗಿ ಧರ್ಮಾಚರಣೆಯನ್ನು ಮಾಡುವ ಆ ಸರ್ಪಗಳನ್ನು 'ಹಿರಿಯರ ಮಾತನ್ನು ಪರಿತ್ಯಾಗ ಮಾಡಿರುವುದರಿಂದ ಇದು ಬೇರೆ ರೀತಿಯಾಗಲು ಸಾಧ್ಯವಿಲ್ಲ' ಎಂದು ಶಾಪ ನೀಡಿದಳು.

ಏವಂ ಶಪ್ತಾ ದಿಶಃ ಪ್ರಾಪ್ತಾಃ ಪನ್ನಗಾ ಧರ್ಮಚಾರಿಣಃ ।
ವಿಹಾಯ ಮಾತರಂ ಕ್ರುದ್ಧಾ ಗತಾ ವೈರಕರೀಂ ತದಾ ॥೬॥

ಹೀಗೆ ಧರ್ಮಚಾರಿಗಳಾದ ಸರ್ಪಗಳು ಶಾಪವನ್ನು ಪಡೆದು, ವೈರವನ್ನು ಮಾಡಿದ ತಾಯಿಯನ್ನು ಬಿಟ್ಟು ಕ್ರೋಧದಿಂದ ಹೊರಟು ಹೋದವು.

ತತ್ರ ಯೇ ವೃಜಿನಂ ತಸ್ಯಾ ಅನಾಪನ್ನಾ ಭುಜಂಗಮಾಃ ।
ತೇ ತಸ್ಯ ವಾಜಿನೋ ವಾಲಾ ಬಭೂವುರಸಿತಪ್ರಭಾಃ ॥೭॥

ತಾಯಿಗೆ ವಿರೋಧವನ್ನು ಮಾಡದಿದ್ದ ಸರ್ಪಗಳು ಹೋಗಿ, ಆ ಅಶ್ವದ ಬಾಲದಲ್ಲಿ ಕಪ್ಪಾದ ಕೂದಲುಗಳ ಬಣ್ಣವನ್ನು ಹೊಂದಿ ಸೇರಿಕೊಂಡವು.

ತಾನ್ ದೃಷ್ಟ್ವಾ ವಾಲಧಿಸ್ಥಾಂಶ್ಚ ಪುತ್ರಾನ್ ಕದ್ರೂರಥಾಬ್ರವೀತ್ ।
ವಿನತಾಮಥ ಸಂಹೃಷ್ಟಾ ಹಯೋಽಸೌ ದೃಶ್ಯತಾಮಿತಿ ॥೮॥

ಬಾಲವನ್ನು ಆಶ್ರಯಿಸಿದ ತನ್ನ ಪುತ್ರರಾದ ಸರ್ಪಗಳನ್ನು ನೋಡಿ ಸಂತೋಷಗೊಂಡ ಆ ಕದ್ರುವು ವಿನತೆಯನ್ನು ಕುರಿತು ಆ ಕುದುರೆಯನ್ನು ನೋಡೋಣ ಎಂದು ಹೇಳಿದಳು.

ಏಕವರ್ಣೋ ನ ವಾ ಭದ್ರೇ ಪಣೋ ನೌ ಸುವ್ಯವಸ್ಥಿತಃ ।
ಉದಕಾದುತ್ತರಂತಂ ತಂ ಹಯಂ ಚೈವ ಚ ಭಾಮಿನಿ ॥೯॥

'ಎಲೌ ಭಾಮಿನಿಯೇ, ನೀರಿನಿಂದ ಎದ್ದುಬರುವ ಆ ಅಶ್ವವನ್ನು ನೋಡೋಣ. ಎಲೌ ಶುಭಳೇ, ಅದು ಏಕವರ್ಣವುಳ್ಳದ್ದು ಎಂದು ನೀನು, ಅನೇಕ ವರ್ಣವುಳ್ಳದ್ದು ಎಂದು ನಾನು ಮಾಡಿರುವ ಪಣವು ಸ್ಥಿರವಾಗಿದೆ'.

ಸಾ ತ್ವವಕ್ರಮತಿರ್ದೇವೀ ವಿನತಾ ಜಿಹ್ಮಗಾಮಿನೀಮ್ ।
ಅಬ್ರವೀದ್ ಭಗಿನೀಂ ಕಿಂಚಿದ್ ವಿಹಸಂತೀವ ಭಾರತ ॥೧೦॥

ಎಲೈ ಭಾರತನೇ, ನೇರವಾದ ಬುದ್ಧಿಯುಳ್ಳ ವಿನತೆಯು ಕುಟಿಲ ಬುದ್ಧಿಯುಳ್ಳ ಕದ್ರುವನ್ನು ಕುರಿತು ಸ್ವಲ್ಪ ನಕ್ಕು ಮಾತನಾಡಿದಳು.

ಹಂತ ಪಶ್ಯಾವ ಗಚ್ಛಾವಃ ಸುಕೃತೋ ನೌ ಪಣಃ ಶುಭೇ ।
ದಾಸೀ ವಾ ತೇ ಭವಿಷ್ಯಾಮಿ ತ್ವಂ ವಾ ದಾಸೀ ಭವಿಷ್ಯಸಿ ॥೧೧॥

'ಸಂತೋಷ, ಹೋಗಿ ನೋಡೋಣ. ಎಲೌ ಶುಭಳೇ, ನಾವು ಪಣವನ್ನು ಚೆನ್ನಾಗಿ ಕಟ್ಟಿದ್ದೇವೆ. ನಾನು ನಿನಗೆ ದಾಸಿಯಾಗುವೆನು ಅಥವಾ ನೀನು ನನಗೆ ದಾಸಿಯಾಗುವಿ'.

ಏವಂ ಸ್ಥಿರಂ ಪಣಂ ಕೃತ್ವಾ ಹಯಂ ತೇ ತು ದದರ್ಶತುಃ ।
ಕೃತ್ವಾ ಸಾಕ್ಷಿಣಮಾತ್ಮಾನಂ ಭಗಿನ್ಯೌ ಕುರುಸತ್ತಮ ॥೧೨॥

ಎಲೈ ಕುರುಶ್ರೇಷ್ಠನೇ, ಹೀಗೆ ಸ್ಥಿರವಾದ ಪಣವನ್ನು ಮಾಡಿ, ಅದಕ್ಕೆ ತಮ್ಮನ್ನೇ ಸಾಕ್ಷಿಗಳನ್ನಾಗಿ ಮಾಡಿಕೊಂಡು, ಸಹೋದರಿಯರಾದ ಅವರು ಆ ಅಶ್ವವನ್ನು ನೋಡಿದರು.

ಸಾ ದೃಷ್ಟ್ವೈವ ಹಯಂ ಮಂದಂ ವಿನತಾ ಶೋಕಕರ್ಶಿತಾ ।
ಶ್ವೇತಂ ಚಂದ್ರಾಂಶುವಾಲಂ ತಂ ಕಾಳವಾಲಂ ಮನೋಜವಮ್ ॥೧೩॥

ಆ ಕುದುರೆಯನ್ನು ಅಸ್ಪಷ್ಟವಾಗಿ ನೋಡಿದ ತಕ್ಷಣವೇ ಶುದ್ಧ ಚಂದ್ರವರ್ಣದ ಬಾಲವನ್ನು ಹೊಂದಿದ್ದ ಮನೋವೇಗವುಳ್ಳ ಆ ಕುದುರೆಯು ಕಪ್ಪಾದ ಬಾಲವನ್ನು ಹೊಂದಿರುವುದನ್ನು ನೋಡಿ ವಿನತೆಯು ಶೋಕಪೀಡಿತಳಾದಳು.

ತತ್ರ ಸಾ ವ್ರೀಡಿತಾ ವಾಕ್ಯಂ ವಿನತಾ ಸಾಶ್ರುಬಿಂದುಕಾ ।
ಉವಾಚ ಕಾಳವಾಲೋಽಯಂ ತುರಗೋ ವಿಜಿತಂ ತ್ವಯಾ ॥೧೪॥

ವಿನತೆಯು ನಾಚಿಕೆಯಿಂದ ಕೂಡಿ, ಕಣ್ಣಿನಲ್ಲಿ ನೀರು ತುಂಬಿಕೊಂಡು 'ಈ ಅಶ್ವವು ಕಪ್ಪಾದ ಬಾಲವುಳ್ಳದ್ದಾಗಿದೆ. ಪಣದಲ್ಲಿ ನೀನೇ ಗೆದ್ದಿದ್ದೀಯೆ' ಎಂದು ಹೇಳಿದಳು.

ದಾಸೀಂ ಮಾಂ ಪ್ರೇಷಯ ಸ್ವಾರ್ಥೇ ಯಥಾ ಕಾಮವಶಾಂ ಶುಭೇ ।
ದಾಸ್ಯಶ್ಚ ಕಾಮಕಾರಾ ಹಿ ಭರ್ತೃಣಾಂ ನಾತ್ರ ಸಂಶಯಃ ॥೧೫॥

'ಎಲೌ ಶುಭಳೇ, ನಿನ್ನ ಮನಸ್ಸಿಗೆ ಬಂದಂತೆ ನಿನ್ನ ದಾಸಿಯಾದ ನನ್ನನ್ನು ನಿನ್ನ ಇಷ್ಟಬಂದ ಕಡೆ ನಿನ್ನ ಕಾರ್ಯಕ್ಕಾಗಿ ಕಳುಹಿಸು. ದಾಸಿಯರು ಸ್ವಾಮಿಯ ಕಾರ್ಯವನ್ನು ಮಾಡುವರು ಎಂಬ ವಿಷಯದಲ್ಲಿ ಸಂಶಯವಿಲ್ಲ' (ಎಂದು ಹೇಳಿದಳು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನೇ ವಿನತಾಪರಾಜಯೋ ನಾಮ ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತನೆಯ ಅಧ್ಯಾಯ

ಕದ್ರೂ-ಗರುಡರ ಸಂವಾದ

ಭೀಷ್ಮಃ

ತಾತ ಕದ್ರೂರ್ಹಸಂತೀವ ವಿನತಾಂ ಧರ್ಮಚಾರಿಣೀಮ್ ।
ದಾಸೀವತ್ ಪ್ರೇಷಯಾಮಾಸ ಸಾ ಚ ಸರ್ವಂ ಚಕಾರ ತತ್ ॥೧॥

ಭೀಷ್ಮ– ಎಲೈ ಪ್ರೀತಿಪಾತ್ರನೇ, ಕದ್ರುವು ನಗುತ್ತಾ, ಧರ್ಮಚಾರಣಿಯಾದ ವಿನತೆಯನ್ನು ದಾಸಿಯಂತೆ ಎಲ್ಲ ಕಡೆಗಳಲ್ಲಿಯೂ ಕಳುಹಿಸಿದಳು. ವಿನತೆಯಾದರೂ ಅವಳ ಎಲ್ಲ ಕಾರ್ಯವನ್ನೂ ಮಾಡಿದಳು.

ನ ವಿವರ್ಣಾ ನ ಸಂಕ್ಷುಬ್ಧಾ ನ ಚ ಕ್ರುದ್ಧಾ ನ ದುಃಖಿತಾ ।
ಪ್ರೇಷ್ಯಕರ್ಮ ಚಕಾರಾಸ್ಯಾ ವಿನತಾ ಕಮಲೇಕ್ಷಣಾ ॥೨॥

ಕಮಲನೇತ್ರೆಯಾದ ವಿನತೆಯು ಮುಖದ ಕಾಂತಿಯನ್ನು ಕಡಿಮೆ ಮಾಡದೆ, ಮನಸ್ಸಿನಲ್ಲಿ ಕ್ಷೋಭೆಗೊಳ್ಳದೆ, ಕೋಪಗೊಳ್ಳದೆ, ಶೋಕಪಡದೆ ಕದ್ರುವಿನ ದಾಸಿಯ ಕರ್ಮವೆಲ್ಲವನ್ನೂ ಮಾಡಿದಳು.

ಇಮಾ ದಿಶಶ್ಚತಸ್ರೋಽಸ್ಯಾಃ ಪ್ರೇಷ್ಯಭಾವೇನ ವರ್ತಿತಾಃ ।
ಅಥ ಸ್ಮ ವೈನತೇಯಂ ವೈ ಬಲದರ್ಪೌ ಸಮೀಯತುಃ ॥೩॥

ಕದ್ರುವು ವಿನತೆಯನ್ನು ದಾಸಿಯಾಗಿ ನಾಲ್ಕು ದಿಕ್ಕುಗಳಿಗೂ ಕಳುಹಿಸಿದಳು. ಅನಂತರ ಕಾಲಕ್ರಮದಲ್ಲಿ ಗರುಡನಿಗೆ ಬಲ-ದರ್ಪಗಳು ಉಂಟಾದವು.

ತಂ ದರ್ಪವಶಮಾಪನ್ನಂ ಪರಿಧಾವಂತಮಂತಿಕಾತ್ ।
ದದರ್ಶ ನಾರದೋ ರಾಜನ್ ದೇವರ್ಷಿರ್ದರ್ಪಸಂಯುತಮ್ ॥೪॥

ಎಲೈ ರಾಜನೇ, ದರ್ಪಸಮನ್ವಿತನಾಗಿ ಹತ್ತಿರದಲ್ಲಿ ಓಡಾಡುತ್ತಿದ್ದ ಗರುಡನನ್ನು ದೇವರ್ಷಿಗಳಾದ ನಾರದರು ನೋಡಿದರು.

ತಮಬ್ರವೀಚ್ಚ ದೇವರ್ಷಿರ್ನಾರದಃ ಪ್ರಹಸನ್ನಿವ ।
ಕಿಂ ದರ್ಪವಶಮಾಪನ್ನೋ ನ ವೈ ಪಶ್ಯಸಿ ಮಾತರಮ್ ॥೫॥

ದೇವರ್ಷಿಗಳಾದ ನಾರದರು ನಗುತ್ತಾ, ಅವನನ್ನು ಕುರಿತು ಇಷ್ಟೊಂದು ದರ್ಪವಶನಾಗಿದ್ದೀಯೆ. ನಿನ್ನ ತಾಯಿಯನ್ನು ನೋಡಿಕೊಳ್ಳುತ್ತಿಲ್ಲ ಎಂದು ಹೇಳಿದರು.

ಬಲೇನ ಚ ಪುನಃ ಸ್ತಬ್ಧೋ ಯೋಽಹಂಮಾನಕೃತಾ ಸದಾ ।
ದಾಸೀಂ ಪನ್ನಗರಾಜಸ್ಯ ಮಾತುರಂತರ್ಗೃಹೇ ಸತೀಮ್ ॥೬॥

'ನೀನು ಬಹಳ ಬಲ ಮತ್ತು ಅಹಂಕಾರದಿಂದ ಕೂಡಿದ್ದೀಯೆ. ಸರ್ಪರಾಜನ ತಾಯಿಯಾದ ಕದ್ರುವಿನ ಅಂತಃಪುರದಲ್ಲಿ ದಾಸಿಯಾಗಿರುವ ನಿನ್ನ ತಾಯಿಯನ್ನು ನೋಡಿಕೊಳ್ಳುತ್ತಿಲ್ಲ' ಎಂದು ಹೇಳಿದರು.

ತಮಬ್ರವೀದ್ ವೈನತೇಯೋ ಕರ್ಮ ಕಿಂ ತನ್ಮಹಾಮತೇ ।
ಜನಯಿತ್ರೀ ಮಯಿ ಸುತೇ ಜಾತಾ ದಾಸೀ ತಪಸ್ವಿನೀ ॥೭॥

ಗರುಡನು ನಾರದರನ್ನು ಕುರಿತು– 'ಎಲೈ ಮಹಾಮತಿಗಳೇ, ನಾನು ಪುತ್ರನಾಗಿರುವಾಗ ದಯಾಪಾತ್ರಳಾದ ನನ್ನ ತಾಯಿಯು ದಾಸಿಯಾಗುವಂತಹ ಕರ್ಮವು ಏನಾಯಿತು?' ಎಂದು ಕೇಳಿದನು.

ಅಥಾಬ್ರವೀದೃಷಿರ್ವಾಕ್ಯಂ ದೀವ್ಯತೀ ವಿಜಿತಾ ಖಗ ।
ನಿಕೃತ್ಯಾ ಪನ್ನಗೇಂದ್ರಸ್ಯ ಮಾತ್ರಾ ಪುತ್ರೈಃ ಪುರಾ ಸಹ ॥೮॥

ಆಗ ನಾರದರು 'ಪನ್ನಗಗಳ (ಸರ್ಪಗಳ) ತಾಯಿಯಾದ ಕದ್ರುವು ನಿನ್ನ ತಾಯಿಯ ಜೊತೆಯಲ್ಲಿ ಪಣವನ್ನು ಕಟ್ಟಿ ಹಿಂದೆ ತನ್ನ ಪುತ್ರರ ಸಹಾಯದಿಂದ ಮೋಸದಿಂದ ನಿನ್ನ ತಾಯಿಯನ್ನು ಪರಾಭವಗೊಳಿಸಿದಳು' ಎಂದು ಹೇಳಿದರು.

ಗರುಡಃ

ಕಥಂ ಜಿತಾ ನಿಕೃತ್ಯಾ ಸಾ ಭಗವನ್ ಜನನೀ ಮಮ ।
ಬ್ರೂಹಿ ತನ್ಮೇ ಯಥಾವೃತ್ತಂ ಶ್ರುತ್ವಾ ವೇತ್ಸ್ಯೇ ತತಃ ಪರಮ್ ॥೯॥

ಗರುಡ– 'ಪೂಜ್ಯರೇ, ನನ್ನ ತಾಯಿಯು ಹೇಗೆ ಮೋಸದಿಂದ ಪರಾಜಿತಳಾದಳು ಎಂಬುದನ್ನು ಸರಿಯಾಗಿ ಹೇಳಿ. ಅದನ್ನು ಕೇಳಿ ನಾನು ಮುಂದೆ ಏನು ಮಾಡಬೇಕೆಂದು ತಿಳಿಯುವೆನು'.

ತತಸ್ತಸ್ಯ ಯಥಾವೃತ್ತಂ ಸರ್ವಂ ತನ್ನಾರದಸ್ತದಾ ।
ಆಚಖ್ಯೌ ಭರತಶ್ರೇಷ್ಠ ಯಥಾವೃತ್ತಂ ಪತತ್ರಿಣಃ ॥೧೦॥

ಎಲೈ ಭರತಶ್ರೇಷ್ಠನೇ, ಆಗ ನಾರದರು ಪಕ್ಷಿಯಾದ ಆ ಗರುಡನಿಗೆ ಹಿಂದೆ ನಡೆದ ವೃತ್ತಾಂತವನ್ನೆಲ್ಲಾ ಯಥಾರ್ಥವಾಗಿ ತಿಳಿಸಿದರು.

ತಚ್ಚ್ರುತ್ವಾ ವೈನತೇಯಸ್ಯ ಕೋಪೋ ಹೃದಿ ಸಮಾವಿಶತ್ ।
ಜಗರ್ಹೇ ಪನ್ನಗಾನ್ ಸರ್ವಾನ್ ಮಾತ್ರಾ ಸಹ ಪರಂತಪಃ ॥೧೧॥

ಅದನ್ನು ಕೇಳಿದ ಗರುಡನಿಗೆ ಮನಸ್ಸಿನಲ್ಲಿ ಕೋಪವುಂಟಾಯಿತು. ಸರ್ಪಗಳನ್ನೂ ಮತ್ತು ಅವುಗಳ ತಾಯಿಯಾದ ಕದ್ರೂವನ್ನೂ ಪರಂತಪನಾದ ಅವನು ನಿಂದಿಸಿದನು.

ತತಸ್ತು ರೋಷಾದ್ ದುಃಖಾಚ್ಚ ತೂರ್ಣಮುತ್ಪತ್ಯ ಪಕ್ಷಿರಾಟ್ ।
ಜಗಾಮ ಯತ್ರ ಮಾತಾಽಸ್ಯ ಕೃಚ್ಛ್ರೇ ಮಹತಿ ವರ್ತತೇ ॥೧೨॥

ಆಗ ಪಕ್ಷಿರಾಜನಾದ ಗರುಡನು ರೋಷ ಮತ್ತು ದುಃಖಗಳಿಂದ ಶೀಘ್ರವಾಗಿ ಹಾರಿಕೊಂಡು ತನ್ನ ತಾಯಿಯು ದೊಡ್ಡ ಕಷ್ಟವನ್ನು ಅನುಭವಿಸುತ್ತಿದ್ದ ಸ್ಥಳಕ್ಕೆ ಹೋದನು.

ತತ್ರಾಪಶ್ಯತ್ ತತೋ ದೀನಾಂ ಜಟಿಲಾಂ ಮಲಿನಾಂ ಕೃಶಾಮ್ ।
ತೋಯದೇನ ಪ್ರತಿಚ್ಛನ್ನಾಂ ಸೂರ್ಯಾಭಾಮಿವ ಮಾತರಮ್ ॥೧೩॥

ಅಲ್ಲಿ ದೀನಳೂ, ಜಟಿಲಳೂ, ಕೃಶಳೂ ಆಗಿ ಮೋಡದಿಂದ ಮುಚ್ಚಲ್ಪಟ್ಟ ಸೂರ್ಯನ ಪ್ರಭೆಯಂತಿದ್ದ ತನ್ನ ತಾಯಿಯನ್ನು ನೋಡಿದನು.

ತಸ್ಯ ದುಃಖಾಚ್ಚ ರೋಷಾಚ್ಚ ನೇತ್ರಾಭ್ಯಾಮಶ್ರು ಚಾಸ್ರವತ್ ।
ಪ್ರವೃತ್ತಿಂ ಚ ನಿವೃತ್ತಿಂ ಚ ಪೌರುಷೇ ಪಥಿ ತಸ್ಥುಷಃ ॥೧೪॥

ಒಂದು ಕಾರ್ಯದಲ್ಲಿ ಪ್ರವೃತ್ತಿಯನ್ನಾಗಲಿ ಅಥವಾ ಅದರಿಂದ ನಿವೃತ್ತಿಯನ್ನಾಗಲಿ ಪೌರುಷದ ಮಾರ್ಗದಲ್ಲಿಯೇ ಆಚರಿಸುವ ಅವನ ಕಣ್ಣುಗಳಿಂದ ದುಃಖ ಮತ್ತು ರೋಷಗಳಿಂದ ಶೋಕಬಿಂದುಗಳು ಹರಿದವು.

ಅನುಕ್ತ್ವಾ ಮಾತರಂ ಕಿಂಚಿತ್ ಪತತ್ರಿವರಪುಂಗವಃ ।
ಕದ್ರೂಮೇವ ಸ ಧರ್ಮಾತ್ಮಾ ವಚನಂ ಪ್ರತ್ಯಭಾಷತ ॥೧೫॥

ಪಕ್ಷಿಶ್ರೇಷ್ಠನೂ, ಧರ್ಮಾತ್ಮನೂ ಆದ ಗರುಡನು ತಾಯಿಯ ಜೊತೆಯಲ್ಲಿ ಏನನ್ನೂ ಮಾತನಾಡದೆ, ಕದ್ರುವಿನ ಜೊತೆಯಲ್ಲಿಯೇ ಮಾತನಾಡಿದನು.

ಯದಿ ಧರ್ಮೇಣ ಮೇ ಮಾತಾ ಜಿತಾ ಯದ್ಯಪ್ಯಧರ್ಮತಃ ।
ಜ್ಯೇಷ್ಠಾ ತ್ವಮಸಿ ಮೇ ಮಾತಾ ಧರ್ಮಃ ಸರ್ವಃ ಸ ಮೇ ಮತಃ ॥೧೬॥

'ಎಲೌ ತಾಯಿಯೇ, ನೀನು ನನ್ನ ತಾಯಿಯನ್ನು ಧರ್ಮದಿಂದಾಗಲೀ, ಅಧರ್ಮದಿಂದಾಗಲೀ ಜಯಿಸಿದ್ದರೂ ಸಹ ನೀನು ನನಗೆ ಹಿರಿಯಳಾಗಿ ತಾಯಿಯಾಗಿರುವುದರಿಂದ ನೀನು ಮಾಡಿದ ಎಲ್ಲವನ್ನೂ ಧರ್ಮವೆಂದೇ ನಾನು ತಿಳಿಯುತ್ತೇನೆ.

ಇಯಂ ತು ಮೇ ಸ್ಯಾತ್ ಕೃಪಣಾ ಮಯಿ ಪುತ್ರೇಽಂಬ ದುಃಖಿತಾ ।
ಅನುಜಾನೀಹಿ ತಾಂ ಸಾಧು ಮತ್ಕೃತೇ ಧರ್ಮದರ್ಶಿನಿ ॥೧೭॥

ಈ ನನ್ನ ತಾಯಿಯು ನಾನು ಪುತ್ರನಾಗಿರುವಾಗ ಕೃಪಣಳಾಗಿ ದುಃಖದಿಂದ ಕೂಡಿದ್ದಾಳೆ. ಧರ್ಮದರ್ಶಿನಿಯಾದ ನೀನು ನನ್ನ ಸಲುವಾಗಿ ಅವಳನ್ನು ಬಿಟ್ಟುಕೊಡು (ಎಂದು ಹೇಳಿದನು).

ಕದ್ರೂಃ ಶ್ರುತ್ವಾಽಸ್ಯ ತದ್ವಾಕ್ಯಂ ವೈನತೇಯಸ್ಯ ಧೀಮತಃ ।
ಉವಾಚ ವಾಕ್ಯಂ ದುಷ್ಪ್ರಜ್ಞಾ ಪರೀತಾ ದುಃಖಮೂರ್ಛಿತಾ ॥೧೮॥

ಮೇಧಾವಿಯಾದ ಗರುಡನ ಮಾತುಗಳನ್ನು ಕೇಳಿ, ದುರ್ಬುದ್ಧಿಯಿಂದ ಕೂಡಿದವಳೂ, ದುಃಖಮೂರ್ಛಿತಳೂ ಆದ ಕದ್ರುವು ಮಾತನಾಡಿದಳು.

ನಾಹಂ ತವ ನ ತೇ ಮಾತುರ್ವೈನತೇಯ ಕಥಂಚನ ।
ಕುರ್ಯಾಂ ಪ್ರಿಯಮನಿಷ್ಟಾತ್ಮಾ ಮಾಂ ಬ್ರವೀಷಿ ಖಗ ದ್ವಿಜ ॥೧೯॥

'ಎಲೈ ಆಕಾಶದಲ್ಲಿ ಸಂಚರಿಸುವ ಅನಿಷ್ಟವಾದ ಪಕ್ಷಿಯೇ, ಗರುಡನೇ, ನಾನು ನಿನ್ನ ತಾಯಿಗೆ ನೀನು ಹೇಳುವಂತೆ ಎಂದೂ ಪ್ರಿಯವನ್ನು ಮಾಡುವುದಿಲ್ಲ'.

ತಾಂ ತದಾ ಬ್ರುವತೀಂ ವಾಕ್ಯಮನಿಷ್ಟಾಂ ಕ್ರೂರಭಾಷಿಣೀಮ್ ।
ದಾರುಣಾಂ ಸೂನೃತಾಭಿಸ್ತಾಮನುನೇತುಂ ಪ್ರಚಕ್ರಮೇ ॥೨೦॥

ಹೀಗೆ ದಾರುಣವಾದ, ಕ್ರೂರವಾದ, ಅನಿಷ್ಟವಾದ ಮಾತುಗಳನ್ನು ಆಡುತ್ತಿದ್ದ ಕದ್ರುವನ್ನು ಕುರಿತು ಗರುಡನು ಒಳ್ಳೆಯ ಮಾತುಗಳಿಂದ ಅವಳನ್ನು ಸಮಾಧಾನ ಪಡಿಸಲು ಉಪಕ್ರಮಿಸಿದನು.

ಗರುಡಃ

ಜ್ಯೇಷ್ಠಾ ತ್ವಮಸಿ ಕಲ್ಯಾಣೀ ಮಾತುರ್ಮೇ ಭಾಮಿನಿ ಪ್ರಿಯಾ ।
ಸೋದರ್ಯೇ ಮಮ ಚಾಸಿ ತ್ವಂ ಜ್ಯೇಷ್ಠಾ ಮಾತಾ ನ ಸಂಶಯಃ॥೨೧॥

ಗರುಡ– ಎಲೌ ಕಲ್ಯಾಣಿಯೇ, ನೀನು ಹಿರಿಯಳಾಗಿದ್ದೀಯೆ. ಎಲೌ ಭಾಮಿನಿಯೇ, ನನ್ನ ತಾಯಿಗೆ ಪ್ರಿಯಳಾಗಿದ್ದೀಯೆ. ನನ್ನ ಸೋದರರಿಗೆ ತಾಯಿಯಾಗಿದ್ದೀಯೆ. ನೀನು ನನ್ನ ಹಿರಿಯ ತಾಯಿ ಎಂಬುದರಲ್ಲಿ ಸಂಶಯವಿಲ್ಲ.

ಕದ್ರೂಃ

ವಿಹಂಗಮ ಯಥಾಕಾಮಂ ಗಚ್ಛ ಕಾಮಗಮ ದ್ವಿಜ ।
ಸೂನೃತಾಭಿಸ್ತ್ವಯಾ ಮಾತಾ ನಾದಾಸೀ ಶಕ್ಯಮಂಡಜ ॥೨೨॥

ಕದ್ರೂ– 'ಎಲೈ ಮನಸ್ಸಿಗೆ ಬಂದ ಕಡೆ ಹೋಗುವ ಪಕ್ಷಿಯೇ, ನಿನಗೆ ಇಷ್ಟ ಬಂದ

ಕಡೆ ಹೊರಟು ಹೋಗು. ಎಲೈ ಪಕ್ಷಿಯೇ, ನಿನ್ನ ಒಳ್ಳೆಯ ಮಾತುಗಳಿಂದ ನಿನ್ನ ತಾಯಿಯನ್ನು ದಾಸ್ಯದಿಂದ ವಿಮೋಚನೆಗೊಳಿಸುವುದಿಲ್ಲ'.

ಅಮೃತಂ ಯದ್ಯಾಹರೇಸ್ತ್ವಂ ವಿಹಂಗ ಜನನೀಂ ತವ ।
ಅದಾಸೀಂ ಮಮ ಪಶ್ಯೇಮಾಂ ವೈನತೇಯ ನ ಸಂಶಯಃ ॥೨೩॥

ಎಲೈ ಪಕ್ಷಿಯೇ, ವಿನತಾಪುತ್ರನೇ, ನೀನು ಒಂದು ಪಕ್ಷ ನನಗೆ ಅಮೃತವನ್ನು ತಂದುಕೊಟ್ಟರೆ ಆಗ ನಿನ್ನ ತಾಯಿಯನ್ನು ದಾಸ್ಯದಿಂದ ವಿಮೋಚನೆಗೊಳಿಸುವೆನು. ಇದರಲ್ಲಿ ಸಂಶಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನೇ
ಕದ್ರೂಗರುಡಸಂವಾದೋ ನಾಮ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂದನೆಯ ಅಧ್ಯಾಯ

ಗಜ-ಕೂರ್ಮಗಳ ವರ್ಣನೆ

ಭೀಷ್ಮಃ

ತಥೇತ್ಯುಕ್ತ್ವಾ ತು ವಿಹಗಃ ಪ್ರತಿಜ್ಞಾಯ ಮಹಾದ್ಯುತಿಃ ।
ಅಮೃತಾಹರಣೇ ವಾಚಂ ತತಃ ಪಿತರಮಬ್ರವೀತ್ ॥೧॥

ಭೀಷ್ಮ– ಮಹಾದ್ಯುತಿಯೂ, ಪಕ್ಷಿಯೂ ಆದ ಗರುಡನು ಅಮೃತವನ್ನು ತರುವ ವಿಷಯದಲ್ಲಿ 'ಹಾಗೆಯೇ ಆಗಲಿ' ಎಂದು ಹೇಳಿ, ಅನಂತರ ತಂದೆಯನ್ನು ಕುರಿತು ಮಾತನಾಡಿದನು.

ಕಾಮಂ ವೈ ಸೂನೃತಾ ವಾಚೋ ವಿಸೃಜ್ಯ ಚ ಮುಹುರ್ಮುಹುಃ ।
ಯಚ್ಚಾಪ್ಯನುಜ್ಞಾಂ ಮಾತುರ್ವೈ ನ ಚ ಸಾ ಹ್ಯನುಮನ್ಯತೇ ॥೨॥

'ನಾನು ಸಾಧ್ಯವಿದ್ದಷ್ಟು ಒಳ್ಳೆಯ ಮಾತುಗಳನ್ನು ಪುನಃ ಪುನಃ ಕದ್ರುವಿಗೆ ಹೇಳಿದರೂ ಅವಳು ನನ್ನ ತಾಯಿಯನ್ನು ಬಿಟ್ಟುಕೊಡುವುದಕ್ಕೆ ಸಮ್ಮತಿಸುವುದಿಲ್ಲ.

ಭಗವನ್ ವಿನತಾ ದಾಸೀ ಮಮ ಮಾತಾ ಮಹಾದ್ಯುತೇ ।
ಸಾ ಮಾ ಬಹುವಿಧಾ ವಾಚೋ ವಜ್ರಕಲ್ಪಾ ವಿಸೃಜ್ಯ ವೈ ॥೩॥

ಕದ್ರೂಃ ಪ್ರೇಷಯತೇ ಚೈವ ದಾಸೀಯಮಿತಿ ಚಾಬ್ರವೀತ್ ।
ಆಹರಾಮೃತಮಿತ್ಯೇವ ಮೋಕ್ಷ್ಯತೇ ವಿನತಾ ತತಃ ॥೪॥

ಪೂಜ್ಯರೇ, ಮಹಾದ್ಯುತಿಗಳೇ, ನನ್ನ ತಾಯಿಯಾದ ವಿನತೆಯು ದಾಸಿಯಾಗಿದ್ದಾಳೆ. ಕದ್ರುವು ನನ್ನನ್ನು ಕುರಿತು ವಜ್ರದಂತಹ ಕಠೋರವಾದ ಮಾತುಗಳನ್ನು ಆಡಿ, ಇವಳು ನನ್ನ ದಾಸಿ ಎಂದು ಹೇಳಿ, ವಿನತೆಯನ್ನು ಎಲ್ಲ ಕೆಲಸಗಳಿಗೂ ಕಳುಹಿಸುತ್ತಾಳೆ. ಅಮೃತವನ್ನು ತೆಗೆದುಕೊಂಡು ಬಂದು ಕೊಡು' ಆಗ ವಿನತೆಯನ್ನು ದಾಸ್ಯದಿಂದ ಬಿಡುಗಡೆಗೊಳಿಸುತ್ತೇನೆ ಎಂದು ಹೇಳಿದಳು.

ಸೋಽಹಂ ಮಾತೃವಿಮೋಕ್ಷಾರ್ಥಮಾಹರಿಷ್ಯ ಇತಿ ಬ್ರುವನ್ ।
ಅಮೃತಂ ಪ್ರಾರ್ಥಿತಸ್ತೂರ್ಣಮಾಹರ್ತುಂ ಪ್ರತಿನಂದ್ಯ ವೈ ॥೫॥

ಅಂತಹ ನಾನು ತಾಯಿಯನ್ನು ದಾಸ್ಯದಿಂದ ಬಿಡಿಸುವ ಸಲುವಾಗಿ ಅಮೃತವನ್ನು ತರುವೆನು ಎಂದು ಹೇಳಿದ್ದೇನೆ. ನೀವು ನನ್ನ ಮಾತನ್ನು ಅಭಿನಂದಿಸಿ. ಶೀಘ್ರವಾಗಿ ಅಮೃತವನ್ನು ತರಲು ನಿಮ್ಮನ್ನು ಪ್ರಾರ್ಥಿಸುತ್ತಿದ್ದೇನೆ'.

ಪಿತಾ

ಅಮೃತಂ ತಾತ ದುಷ್ಪ್ರಾಪಂ ದೇವೈರಪಿ ಕುತಸ್ತ್ವಯಾ ।
ರಕ್ಷ್ಯತೇ ಹಿ ಭೃಶಂ ಪುತ್ರ ರಕ್ಷಿಭಿಸ್ತನ್ನಿಬೋಧ ಮೇ ॥೬॥

ಪಿತಾ– 'ಪ್ರೀತಿಪಾತ್ರನೇ, ಅಮೃತವು ದೇವತೆಗಳಿಂದಲೂ ಪಡೆಯಲು ಕಷ್ಟಸಾಧ್ಯವಾದುದು. ನೀನು ಹೇಗೆ ಅದನ್ನು ತರುವಿ? ಎಲೈ ಪುತ್ರನೇ, ಅನೇಕ ಕಾವಲುಗಾರರು ಅದನ್ನು ಬಹಳವಾಗಿ ರಕ್ಷಿಸುತ್ತಿದ್ದಾರೆ.

ಗುಪ್ತಮದ್ಭಿರ್ಭೃಶಂ ಸಾಧು ಸರ್ವತಃ ಪರಿವಾರಿತಮ್ ।
ಅನಂತರಮಥೋ ಗುಪ್ತಂ ಜ್ವಲತಾ ಜಾತವೇದಸಾ ॥೭॥

ಮೊದಲು ಅದಕ್ಕೆ ಒಂದು ಮಂಡಲಾಕಾರವಿರುವ ಜಲದ ಕೋಟೆ ಇದೆ. ಅನಂತರದಲ್ಲಿ ಜ್ವಲಿಸುವ ಅಗ್ನಿಯ ಇನ್ನೊಂದು ಕೋಟೆಯಿಂದ ಅಮೃತವು ರಕ್ಷಿತವಾಗಿದೆ.

ತತಃ ಶತಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ರಕ್ಷಂತ್ಯಮೃತಮತ್ಯರ್ಥಂ ಕಿಂಕರಾ ನಾಮ ರಾಕ್ಷಸಾಃ ॥೮೪॥

ಅನಂತರ ಕಿಂಕರ ಎಂಬ ಹೆಸರಿನ ರಾಕ್ಷಸರು ಶತಸಹಸ್ರ ಅಯುತ ಸಂಖ್ಯೆಯಲ್ಲಿ ಒಟ್ಟುಗೂಡಿ ಅಮೃತವನ್ನು ಅತ್ಯಂತವಾಗಿ ರಕ್ಷಿಸುತ್ತಿರುತ್ತಾರೆ.

ತೇಷಾಂ ಶಕ್ತ್ಯೃಷ್ಟಿಶೂಲಾಶ್ಚ ಶತಘ್ನ್ಯಃ ಪಟ್ಟಸಾಸ್ತಥಾ ।
ಆಯುಧಾ ರಕ್ಷಿಣಾಂ ತಾತ ವಜ್ರಕಲ್ಪಾಃ ಶಿಲಾಸ್ತಥಾ ॥೮೯॥

ಎಲೈ ಪ್ರೀತಿಪಾತ್ರನೇ, ಆ ಕಾವಲುಗಾರರ ಶಕ್ತಿ, ಋಷ್ಟಿ, ಶೂಲ, ಶತಘ್ನೀ, ಪಟ್ಟಸ, ಶಿಲೆ ಮೊದಲಾದ ಆಯುಧಗಳು ವಜ್ರದಂತಿವೆ.

ತತೋ ಜಾಲೇನ ಮಹತಾ ಆವನದ್ಧಂ ಸಮಂತತಃ ।
ಆಯಸ್ಮಯೇನ ವೈ ತಾತ ವೃತ್ರಹಂತುಃ ಸ್ಮ ಶಾಸನಾತ್ ॥೯೦॥

ಎಲೈ ಪ್ರೀತಿಪಾತ್ರನೇ, ಅನಂತರ ಇಂದ್ರನ ಶಾಸನದಂತೆ ಅದಕ್ಕೆ ಸುತ್ತಲೂ ಕಬ್ಬಿಣದ ಒಂದು ಪಂಜರವಿದೆ.

ತತ್ ತ್ವಮೇವಂವಿಧಂ ತಾತ ಕಥಂ ಪ್ರಾರ್ಥಯಸೇऽಮೃತಮ್ ।
ಸುರಕ್ಷಿತಂ ವಜ್ರಭೃತಾ ವೈನತೇಯ ವಿಹಂಗಮ ।
ಇಂದ್ರೇಣ ದೇವೈರ್ನಾಗೈಶ್ಚ ಖಡ್ಗೈರ್ಗಿರಿಜಲಾದಿಭಿಃ ॥೯೧॥

ಎಲೈ ಪ್ರೀತಿಪಾತ್ರನೇ, ಇಂದ್ರನಿಂದಲೂ, ದೇವತೆಗಳಿಂದಲೂ, ಸರ್ಪಗಳಿಂದಲೂ, ಖಡ್ಗಗಳಿಂದಲೂ, ಪರ್ವತ-ಜಲಾದಿಗಳಿಂದಲೂ ಅತ್ಯಂತ ರಕ್ಷಿತವಾದ ಅಮೃತವನ್ನು ತರಲು ನೀನು ಹೇಗೆ ಆಶಿಸುತ್ತೀಯೆ?

ಗರುಡಃ

ಪುತ್ರಗೃದ್ಧ್ಯಾ ಬ್ರವೀಷ್ಯೇ ತಚ್ಛೃಣು ತಾತ ವಿನಿಶ್ಚಯಮ್ ।
ಬಲವಾನುಪಾಯವಾನಸ್ಮಿ ಭೂಯಃ ಕಿಂ ಕರವಾಣಿ ತೇ ॥೯೨॥

ಗರುಡ– 'ಎಲೈ ತಂದೆಯೇ, ಪುತ್ರನ ಮೇಲಿನ ಪ್ರೀತಿಯಿಂದ ಈ ಮಾತನ್ನು ಹೇಳುತ್ತಿದ್ದೀಯೆ. ನಾನು ಬಲಿಷ್ಠನೂ, ಉಪಾಯವನ್ನು ತಿಳಿದವನೂ ಆಗಿದ್ದೇನೆ. ನಿನಗೆ ಇನ್ನೂ ಏನು ಮಾಡಲಿ ಎಂದು ಹೇಳು'.

ತಮಬ್ರವೀತ್ ಪಿತಾ ಹೃಷ್ಟಃ ಪ್ರಹಸನ್ ವೈ ಪುನಃ ಪುನಃ ।
ಯದಿ ತೌ ಭಕ್ಷಯೇಸ್ತಾತ ಕ್ರೂರೌ ಕಚ್ಛಪವಾರಣೌ ॥೧೩॥

ತಥಾ ಬಲಮಮೇಯಂ ತೇ ಭವಿತಾ ತನ್ನ ಸಂಶಯಃ ।
ಅಮೃತಸ್ಯೈವ ಚಾಹರ್ತಾ ಭವಿಷ್ಯಸಿ ನ ಸಂಶಯಃ ॥೧೪॥

ಆಗ ತಂದೆಯು ಸಂತೋಷಗೊಂಡು ಪುನಃ ಪುನಃ ನಗುತ್ತಾ ಅವನನ್ನು ಕುರಿತು 'ಪ್ರೀತಿಪಾತ್ರನೇ, ಆ ಕ್ರೂರವಾದ ಗಜ-ಕೂರ್ಮಗಳನ್ನು ನೀನು ತಿಂದರೆ ಆಗ ನಿನಗೆ ಅಪರಿಮಿತವಾದ ಬಲವು ಬರುತ್ತದೆ. ಆಗ ನೀನು ಅಮೃತವನ್ನು ತರುವುದರಲ್ಲಿ ಸಂಶಯವಿಲ್ಲ' ಎಂದು ಹೇಳಿದನು.

ಗರುಡಃ

ಕ್ವ ತೌ ಕ್ರೂರೌ ಮಹಾಭಾಗ ವರ್ತೇತೇ ಹಸ್ತಿಕಚ್ಛಪೌ ।
ಭಕ್ಷಯಿಷ್ಯಾಮ್ಯಹಂ ತಾತ ಬಲಸ್ಯಾಪ್ಯಾಯನಂ ಪ್ರತಿ ॥೧೫॥

ಗರುಡ– 'ಎಲೈ ಮಹಾನುಭಾವನೇ, ಆ ಕ್ರೂರವಾದ ಗಜ-ಕೂರ್ಮಗಳು ಎಲ್ಲಿವೆ? ತಂದೆಯೇ, ನನ್ನ ಬಲವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಅವೆರಡನ್ನೂ ಭಕ್ಷಿಸುವೆನು'.

ಕಶ್ಯಪಃ

ಪರ್ವತೋ ವೈ ಸಮುದ್ರಾಂತೇ ನಭಃ ಸ್ತಬ್ಧ್ವೇವ ತಿಷ್ಠತಿ ।
ಉರಗೋ ನಾಮ ದುಷ್ಪ್ರಾಪಃ ಪುರಾ ದೇವಗಣೈರಪಿ ॥೧೬॥

'ಸಮುದ್ರದ ಅಂಚಿನಲ್ಲಿ ಆಕಾಶವನ್ನು ವ್ಯಾಪಿಸಿ ನಿಂತಿರುವಂತಹ ಉರಗ ಎಂಬ ಪರ್ವತವಿದೆ. ದೇವತೆಗಳ ಸಮೂಹವೂ ಸಹ ಅಲ್ಲಿಗೆ ಹೋಗುವುದು ಕಷ್ಟ ಸಾಧ್ಯವಾಗಿದೆ.

ಗೋರುತಂ ತು ಸವಿಸ್ತೀರ್ಣಃ ಪುಷ್ಪಿತದ್ರುಮಸಾನುಮಾನ್ ।
ತತ್ರ ಪಂಥಾಃ ಕೃತಸ್ತಾತ ಕುಂಜರೇಣ ಬಲೀಯಸಾ ॥೧೭॥

ಒಂದು ವೃಷಭದ ಧ್ವನಿಯು ಸಂಚರಿಸುವಷ್ಟು ಪ್ರದೇಶದ ವಿಸ್ತಾರವನ್ನು ಹೊಂದಿದೆ.

ಆ ಪರ್ವತ ಶಿಖರಗಳಲ್ಲಿ ಪುಷ್ಪಸಹಿತವಾದ ವೃಕ್ಷಗಳಿವೆ. ಎಲೈ ಪ್ರೀತಿಪಾತ್ರನೇ, ಅಲ್ಲಿ ಆ ಬಲಿಷ್ಠವಾದ ಗಜವು ಓಡಾಡಿ ಒಂದು ಮಾರ್ಗವನ್ನು ಮಾಡಿದೆ.

ಗೋರುತಾನ್ಯುದಯಸ್ತಸ್ಯ ನವ ಸಪ್ತ ಚ ಪುತ್ರಕ ।
ಗಚ್ಛತಾऽऽಗಚ್ಛತಾ ಚೈವ ಕ್ಷಪಿತಃ ಸ ಮಹಾಗಿರಿಃ ॥೧೮॥

ಎಲೈ ಪುತ್ರನೇ, ಅದು ಹದಿನಾರು ಗೋರುತದಷ್ಟು ಎತ್ತರವಾಗಿದೆ. ಆ ಗಜವು ಹಿಂದೆ ಮುಂದೆ ನಡೆದಾಡುತ್ತಾ ಆ ದೊಡ್ಡ ಪರ್ವತವು ವಿನಾಶವನ್ನು ಹೊಂದಿದೆ.

ತಾವಾನ್ ಭೂಮಿಸಮಸ್ತಾತ ಕೃತಃ ಪಂಥಾಃ ಸಮುತ್ಥಿತಃ ।
ತೇನ ಗತ್ವಾ ಸ ಮಾತಂಗಃ ಪಿಪಾಸುರ್ಯುದ್ಧಮಿಚ್ಛತಿ ॥೧೯॥

ಎಲೈ ಪ್ರೀತಿಪಾತ್ರನೇ, ಅಷ್ಟು ಭೂಮಿಯನ್ನು ಸಮತಟ್ಟಾಗಿ ಮಾಡಿ ಆ ಗಜವು ಮಾರ್ಗವನ್ನು ಮಾಡಿದೆ. ಆ ಮಾರ್ಗದಲ್ಲಿ ಅದು ನಡೆದು ನೀರನ್ನು ಕುಡಿಯಲು ಬಯಸಿ ಯುದ್ಧವನ್ನು ಮಾಡುತ್ತದೆ.

ತಮತೀತ್ಯ ತು ಶೈಲೇಂದ್ರಂ ಹ್ರದಃ ಕೋಕನದಾಯುತಃ ।
ಕನಕೇತಿ ಚ ವಿಖ್ಯಾತಸ್ತತ್ರ ಕೂರ್ಮೋ ಮಹಾಬಲಃ ॥೨೦॥

ಆ ಪರ್ವತರಾಜನಿಂದ ಆಚೆಗೆ ಕೋಕನದ ಪುಷ್ಪಗಳಿಂದ ಕೂಡಿದ ಕನಕ ಎಂದು ವಿಖ್ಯಾತವಾದ ಒಂದು ಸರೋವರವಿದೆ. ಆ ಸರೋವರದಲ್ಲಿ ಮಹಾಬಲವುಳ್ಳ ಕೂರ್ಮವು ವಾಸಿಸುತ್ತದೆ.

ಗೋರುತಾನಿ ಸ ವಿಸ್ತೀರ್ಣಃ ಕಚ್ಛಪಃ ಕುಂಜರಶ್ಚ ಸಃ ।
ಆಯಾಮತಶ್ಚಾಪಿ ಸಮೌ ತೇಜೋಬಲಸಮನ್ವಿತೌ ॥೨೧॥

ಆ ಗಜ-ಕೂರ್ಮಗಳೆರಡೂ ಅನೇಕ ಗೋರುತದಷ್ಟು ವಿಸ್ತಾರವನ್ನು ಹೊಂದಿ ಎತ್ತರದಲ್ಲಿಯೂ ಅಷ್ಟೇ ಎತ್ತರವನ್ನು ಹೊಂದಿ ತೇಜೋ-ಬಲಗಳಿಂದ ಕೂಡಿವೆ.

ಪುನರಾವೃತ್ತಿಮಾಪನ್ನೌ ತಾವೇತೌ ಮಧುಕೈಟಭೌ ।
ಜನ್ಮಾಂತರೇ ವಿಪ್ರಮೂಢೌ ಪರಸ್ಪರವಧೈಷಿಣೌ ॥೨೨॥

ಈ ಗಜ-ಕೂರ್ಮಗಳು ಜನ್ಮಾಂತರದಲ್ಲಿ ಮಧು-ಕೈಟಭರಾಗಿದ್ದು, ಪುನಃ ಜನ್ಮವನ್ನು ತಾಳಿ, ಭ್ರಾಂತಿಗೆ ಒಳಗಾಗಿ ಒಬ್ಬರನ್ನೊಬ್ಬರು ಕೊಲ್ಲಲು ಬಯಸುತ್ತಾರೆ.

ಯದಾ ಸ ನಾಗೋ ಬೃಂಹತಿ ಪಿಪಾಸುಸ್ತಂ ಜಲಾಶಯಮ್ ।
ತದೈನಂ ಕಚ್ಛಪೋ ರೋಷಾತ್ ಪ್ರತಿಯಾತಿ ಮಹಾಬಲಃ ॥೨೩॥

ಆ ಗಜವು ನೀರನ್ನು ಕುಡಿಯಲು ಬಯಸಿ, ಜಲಾಶಯದ ಸಮೀಪದಲ್ಲಿ ಬೃಂಹಣವನ್ನು ಮಾಡಿದಾಗ, ಮಹಾಬಲವುಳ್ಳ ಕೂರ್ಮವು ರೋಷಗೊಂಡು ಅದಕ್ಕೆ ಎದುರಾಗಿ ಬರುತ್ತದೆ.

ನಖೈಶ್ಚ ದಶನೈಶ್ಚಾಪಿ ನಿಮಜ್ಯೋನ್ಮಜ್ಯ ವಾऽಸಕೃತ್ ।
ವಿದದಾರಾಗ್ರಹಸ್ತೇನ ಕುಂಜರಂ ತಂ ಜಲೇಚರಃ ॥೨೪॥

ಅದು ನೀರಿನಲ್ಲಿ ಗಜವನ್ನು ಅನೇಕ ಬಾರಿ ಮುಳುಗಿಸಿ ಎದ್ದು ತನ್ನ ನಖಗಳಿಂದಲೂ, ಹಲ್ಲುಗಳಿಂದಲೂ, ಉಗ್ರಹಸ್ತದಿಂದಲೂ ಅದನ್ನು ಗಾಯಗೊಳಿಸುತ್ತದೆ.

ನಾಗರಾಡಪಿ ತೋಯಾರ್ಥೀ ಪಿಪಾಸುಶ್ಚರಣೈರಪಿ ।
ಅಗ್ರಹಸ್ತೇನ ದಂತಾಭ್ಯಾಂ ನಿವಾರಯತಿ ವಾರಿಜಮ್ ॥೨೫॥

ಆ ಗಜರಾಜನೂ ಸಹ ಬಾಯಾರಿ ನೀರನ್ನು ಕುಡಿಯಲು ಬಯಸಿ, ತನ್ನ ಪಾದಗಳಿಂದಲೂ, ಸೊಂಡಿಲಿನಿಂದಲೂ ಮತ್ತು ಎರಡು ದಂತಗಳಿಂದಲೂ ಆ ಕೂರ್ಮವನ್ನು ನಿವಾರಿಸುತ್ತದೆ.

ಸ ತು ತೋಯಾದನುತ್ತಿಷ್ಠನ್ ವಾರಿಜೋ ಗಜಯೂಥಪಮ್ ।
ನಖೈಶ್ಚ ದಶನೈಶ್ಚೈವ ದ್ವಿರದಂ ಪ್ರತಿಷೇಧತಿ ॥೨೬॥

ಆ ಕೂರ್ಮವಾದರೂ ನೀರಿನಿಂದ ಹೊರಗೆ ಬರದೆ, ಆ ಗಜರಾಜನನ್ನು ತನ್ನ ನಖಗಳಿಂದಲೂ ಮತ್ತು ದಂತಗಳಿಂದಲೂ ನಿವಾರಿಸುತ್ತದೆ.

ನಿವಾರಿತೋ ಗಜಶ್ರೇಷ್ಠಃ ಪುನರ್ಗಚ್ಛತಿ ಸ್ವಂ ವನಮ್ ।
ಪಿಪಾಸುಃ ಕ್ಲಿನ್ನಹಸ್ತಾಗ್ರೋ ರುಧಿರೇಣ ಸಮುಕ್ಷಿತಃ ॥೨೭॥

ಹೀಗೆ ನಿವಾರಿಸಲ್ಪಟ್ಟ ಆ ಶ್ರೇಷ್ಠವಾದ ಗಜವು ಬಾಯಾರಿಕೆಯಿಂದ ಕೂಡಿದುದಾಗಿ ಸೊಂಡಿಲ ತುದಿಯು ಮಾತ್ರ ಒದ್ದೆಯಾಗಿ, ಮೈಯೆಲ್ಲ ರಕ್ತವು ಸೋರುತ್ತಾ ಪುನಃ ತನ್ನ ಕಾಡಿಗೆ ಹಿಂದಿರುಗುತ್ತದೆ.

ತೌ ಗಚ್ಛ ಸಹಿತೌ ಪುತ್ರ ಯದಿ ಶಕ್ತೋಽಪಿ ಭಕ್ಷಯ ।
ನ ತೌ ಪೃಥಕ್ಕೃಯಾ ಶಕ್ಯಾವಪ್ರಮತ್ತೌ ಬಲೇ ಸ್ಥಿತೌ ॥೨೮॥

ಎಲೈ ಪುತ್ರನೇ, ನೀನು ಅಲ್ಲಿಗೆ ಹೋಗಿ ಸಾಧ್ಯವಾದರೆ ಅವುಗಳನ್ನು ಭಕ್ಷಿಸು. ಬಹಳ ಎಚ್ಚರಿಕೆಯಿಂದ ಕೂಡಿದ ಮತ್ತು ಬಲಿಷ್ಠವಾದ ಆ ಗಜ-ಕೂರ್ಮಗಳನ್ನು ಬೇರೆ ಬೇರೆಯಾಗಿ ಬಗ್ಗಿಸಲು (ಪರಾಭವಗೊಳಿಸಲು) ಸಾಧ್ಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನೇ
ಗಜಕಚ್ಛಪವರ್ಣನಂ ನಾಮ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

ಗರುಡನಿಂದ ವೃಕ್ಷಶಾಖೆಯ ಮೋಕ್ಷ.

ಗರುಡಃ

ಕಥಂ ತೌ ಭಗವನ್ ಶಕ್ಯೌ ಮಯಾ ವಾರಣಕಚ್ಛಪೌ ।
ಯುಗಪದ್ ಗ್ರಹೀತುಂ ತನ್ಮೇ ತ್ವಮುಪಾಯಂ ವಕ್ತುಮರ್ಹಸಿ ॥೧॥

ಗರುಡ– 'ಎಲೈ ಪೂಜ್ಯರೇ, ಆ ಗಜ-ಕೂರ್ಮಗಳನ್ನು ನಾನು ಒಟ್ಟಿಗೆ ಹಿಡಿಯಲು ಹೇಗೆ ಸಾಧ್ಯ ಎಂದು ನೀವು ನನಗೆ ಹೇಳಬೇಕು'.

ಕಶ್ಯಪಃ

ಯೋದ್ಧುಕಾಮೇ ಗಜೇ ತಸ್ಮಿನ್ ಮುಹೂರ್ತಂ ಸ ಜಲೇಚರಃ ।
ಉತ್ತಿಷ್ಠತಿ ಜಲಾತ್ ತೂರ್ಣಂ ಯೋದ್ಧುಕಾಮಃ ಪುನಃ ಪುನಃ ॥೨॥

ಕಶ್ಯಪ– ಆ ಗಜವು ಯುದ್ಧ ಮಾಡಲು ಬಯಸಿದಾಗ ಒಂದು ಮುಹೂರ್ತ ಕಳೆದ ಮೇಲೆ ಜಲಚರವಾದ ಆ ಕೂರ್ಮವು ಪುನಃ ಪುನಃ ತಾನೂ ಯುದ್ಧಮಾಡಲು ಬಯಸಿ ನೀರಿನಿಂದ ಮೇಲೆ ಎದ್ದು ಬರುತ್ತದೆ.

ಜಲಜಂ ನಿರ್ಜಲಂ ತಾತ ಪ್ರಮತ್ತಂ ಚೈವ ವಾರಣಮ್ ।
ಗ್ರಹೀಷ್ಯಸಿ ಪತಂಗೇಶ ನಾನ್ಯೋ ಯೋಗೋऽತ್ರ ವಿದ್ಯತೇ ॥೩॥

ಎಲೈ ಪ್ರೀತಿಪಾತ್ರನೇ, ನೀರಿನಿಂದ ಹೊರಬಂದ ಕೂರ್ಮವನ್ನು ಮತ್ತು ಪ್ರಮತ್ತವಾದ (ಎಚ್ಚರ ತಪ್ಪಿದ) ಗಜವನ್ನು ನೀನು ಒಟ್ಟಿಗೆ ಹಿಡಿಯುವಿ. ಎಲೈ ಪಕ್ಷಿರಾಜನೇ, ಇದನ್ನು ಬಿಟ್ಟು ಬೇರೆ ಉಪಾಯವಿಲ್ಲ.

ಭೀಷ್ಮಃ

ಇತ್ಯೇವಮುಕ್ತೋ ವಿಹಗಸ್ತದ್ ಗತ್ವಾ ವನಮುತ್ತಮಮ್ ।
ದದರ್ಶ ವಾರಣೇಂದ್ರಂ ತಂ ಮೇಘಾಚಲಸಮಪ್ರಭಮ್ ॥೪॥

ಭೀಷ್ಮ– ಹೀಗೆ ಹೇಳಲ್ಪಟ್ಟ ಗರುಡನು ಆ ಶ್ರೇಷ್ಠ ವನದ ಸಮೀಪಕ್ಕೆ ಹೋಗಿ, ಮೋಡಗಳ ಪರ್ವತದ ಕಾಂತಿಯನ್ನು ಹೊಂದಿದ್ದ ಆ ಗಜರಾಜನನ್ನು ನೋಡಿದನು.

ತಾಂ ಸ ನಾಗೋ ಗಿರೇರ್ಮಧ್ಯಂ ಸಂಪ್ರಾಪ್ತ ಇವ ಭಾರತ ।
ಸ ತಂ ದೃಷ್ಟ್ವಾ ಮಹಾಭಾಗಃ ಸಂಪ್ರಹೃಷ್ಟತನೂರುಹಃ ॥೫॥

ಎಲೈ ಭಾರತನೇ, ಆ ಗಜರಾಜನು ಆ ಪರ್ವತದ ಮಾರ್ಗವನ್ನು ಹೊಂದಿರುವುದನ್ನು ನೋಡಿ, ಮಹಾಭಾಗನಾದ ಗರುಡನು ರೋಮಾಂಚಗೊಂಡನು.

ಬಿಭಕ್ಷಯಿಷತೋ ರಾಜನ್ ದಾರುಣಸ್ಯ ಮಹಾತ್ಮನಃ ।
ಮಾತಂಗಂ ಕಚ್ಛಪಂ ಚೈವ ಪ್ರಹರ್ಷಃ ಸುಮಹಾನಭೂತ್ ॥೬॥

ಎಲೈ ರಾಜನೇ, ಕೂರ್ಮವನ್ನು ಮತ್ತು ಗಜವನ್ನು ಭಕ್ಷಿಸಲು ಬಯಸಿದ ದಾರುಣನೂ, ಮಹಾತ್ಮನೂ ಆದ ಗರುಡನಿಗೆ ಬಹಳ ಸಂತೋಷವುಂಟಾಯಿತು.

ಅಥ ವೇಗೇನ ಮಹತಾ ಖೇಚರಃ ಸ ಮಹಾಬಲಃ ।
ಸಂಕುಚ್ಯ ಸರ್ವಗಾತ್ರಾಣಿ ಕೃಚ್ಛ್ರೇಣೈವಾನ್ವಪದ್ಯತ ॥೭॥

ಆಗ ಮಹಾಬಲನೂ, ಗಗನಸಂಚಾರಿಯೂ ಆದ ಆ ಗರುಡನು ಶೀಘ್ರವಾಗಿ ತನ್ನ ದೇಹವನ್ನು ಸಂಕೋಚಗೊಳಿಸಿ ಕಷ್ಟದಿಂದ ಮುಂದೆ ಬಂದನು.

ತಥಾ ಗತ್ವಾ ತಮಧ್ವಾನಂ ವಾರಣಪ್ರವರೋ ಬಲೀ ।
ನಿಶಸ್ವಾಸ ಮಹಾಶ್ವಾಸಃ ಶ್ರಮಾದ್ ವಿಶ್ರಮಣಾಯ ಚ ॥೮॥

ಬಲಿಷ್ಠವಾದ ಆ ಶ್ರೇಷ್ಠ ಗಜವೂ ಕೂಡ ಪರ್ವತದ ಮಾರ್ಗವನ್ನು ಹೊಂದಿದಣಿದು ವಿಶ್ರಾಂತಿಯನ್ನು ಪಡೆಯಲು ಮಹಾಶ್ವಾಸವುಳ್ಳ ಅದು ದೊಡ್ಡ ನಿಶ್ವಾಸವನ್ನು ಬಿಟ್ಟಿತು.

ತಸ್ಯ ನಿಶ್ವಾಸವಾತೇನ ಮದಗನ್ಧೇನ ಚೈವ ಹ ।
ಉದತಿಷ್ಠತ್ ಮಹಾಕೂರ್ಮೋ ವಾರಣಪ್ರತಿಷೇಧಕಃ ॥೯॥

ಗಜರಾಜನ ನಿಟ್ಟುಸಿರಿನ ವಾಯುವಿನಿಂದಲೂ ಮತ್ತು ಮದಧಾರೆಯ ಗಂಧದಿಂದಲೂ ಯಾವಾಗಲೂ ತಡೆಯಲು ಬಯಸುವ ಆ ಮಹಾಕೂರ್ಮವು ನೀರಿನಿಂದ ಮೇಲೆದ್ದಿತು.

ತಯೋಃ ಸುತುಮುಲಂ ಯುದ್ಧಂ ದದರ್ಶ ಪತಗೇಶ್ವರಃ ।
ಕಚ್ಛಪೇಂದ್ರದ್ವಿರದಯೋರಿಂದ್ರಪ್ರಹ್ಲಾದಯೋರಿವ ॥೧೦॥

ಪತಗೇಶ್ವರನಾದ ಗರುಡನು, ಇಂದ್ರ-ಪ್ರಹ್ಲಾದರಿಗೆ ನಡೆದಂತೆ ಆ ಗಜ-ಕೂರ್ಮಗಳಿಗೆ ನಡೆದ ತೀವ್ರವಾದ ಯುದ್ಧವನ್ನು ನೋಡಿದನು.

ಸ್ಪೃಶಂತಮಗ್ರಹಸ್ತೇನ ತೋಯಂ ವಾರಣಯೂಥಪಮ್ ।
ದಂತೈರ್ನಖೈಶ್ಚ ಜಲಜೋ ವಾರಯಾಮಾಸ ಭಾರತ ॥೧೧॥

ಜಲಜಂ ವಾರಣೋಽಪ್ಯೇವಂ ಚರಣೈಃ ಪುಷ್ಕರೇಣ ಚ ।
ಪ್ರತ್ಯಷೇಧನ್ನಿಮಜ್ಜಂತಮುನ್ಮಜ್ಜಂತಂ ತಥೈವ ಚ ॥೧೨॥

ಎಲೈ ಭಾರತನೇ, ಗಜರಾಜನು ಜಲಾಶಯದ ನೀರನ್ನು ತನ್ನ ಸೊಂಡಿಲಿನ ತುದಿಯಿಂದ ಮುಟ್ಟಿದ ಕೂಡಲೇ ಕೂರ್ಮವು ತನ್ನ ದಂತ-ನಖಗಳಿಂದ ಗಾಯಗೊಳಿಸಿ ತಡೆಯುತ್ತಿದ್ದಿತು. ಆ ಗಜವೂ ಸಹ ತನ್ನ ಪಾದಗಳಿಂದಲೂ ಮತ್ತು ಸೊಂಡಿಲಿನಿಂದಲೂ ನೀರಿನಲ್ಲಿ ಮುಳುಗಿ ಏಳುತ್ತಿದ್ದ ಆ ಕೂರ್ಮವನ್ನು ನಿವಾರಿಸುತ್ತಿದ್ದಿತು.

ಮುಹೂರ್ತಮಭವದ್ ಯುದ್ಧಂ ತಯೋರ್ಭೀಮಪ್ರದರ್ಶನಮ್ ।
ಅಥ ತಸ್ಮಾಜ್ಜಲಾದ್ ರಾಜನ್ ಕಚ್ಛಪಃ ಸ್ಥಲಮಾಸ್ಥಿತಃ ॥೧೩॥

ಒಂದು ಮುಹೂರ್ತದವರೆಗೆ ಅವುಗಳಿಗೆ ಭಯಂಕರವಾಗಿ ಕಾಣುವ ಹೋರಾಟವು ನಡೆಯಿತು. ಅನಂತರ ಎಲೈ ರಾಜನೇ, ಆ ಕೂರ್ಮವು ನೀರನ್ನು ಬಿಟ್ಟು ಭೂಮಿಯ ಮೇಲೆ ಬಂದಿತು.

ಸ ತು ನಾಗಃ ಪ್ರಭಗ್ನೋಽಪಿ ಪಿಪಾಸುರ್ನ ನ್ಯವರ್ತತ ।
ತೋಯಗೃಧ್ನುಃ ಶನೈಸ್ತಸ್ಯಾದಪಾಸರ್ಪತ ಪೃಷ್ಠತಃ ॥೧೪॥

ಆ ಗಜವು ಗಾಯಗೊಂಡಿದ್ದರೂ ಬಾಯಾರಿದುದರಿಂದ ಹಿಂದೆ ಸರಿಯಲಿಲ್ಲ. ನೀರನ್ನು ಪಡೆಯಲು ಬಯಸಿ, ನಿಧಾನವಾಗಿ ಕೂರ್ಮದ ಹಿಂಭಾಗದಿಂದ ಜಲಾಶಯದ ಕಡೆಗೆ ಹೊರಟಿತು.

ತಂ ದೃಷ್ಟ್ವಾ ಜಲಜಸ್ಯೂರ್ಣಮಪಸರ್ಪಂತಮಾಹವಾತ್ ।
ಅಭಿದುದ್ರಾವ ವೇಗೇನ ವಜ್ರಪಾಣಿರಿವಾಸುರಮ್ ॥೧೫॥

ಹೋರಾಟವನ್ನು ಬಿಟ್ಟು ಹಿಂದೆ ಸರಿಯುತ್ತಿರುವ ಆ ಗಜವನ್ನು ನೋಡಿ ಕೂರ್ಮವು ಇಂದ್ರನು ಅಸುರನ ಮೇಲೆ ಬಿದ್ದಂತೆ ವೇಗದಿಂದ ಅದರ ಕಡೆಗೆ ಧಾವಿಸಿತು.

ತಂ ರೋಷಾತ್ ಸ್ಥಲಮುತ್ತೀರ್ಣಮಸಂಪ್ರಾಪ್ತಂ ಗಜೋತ್ತಮಮ್ ।
ಉಭಾವೇವ ಸಮಸ್ತೌ ತು ಜಗ್ರಾಹ ವಿನತಾಸುತಃ ॥೧೬॥

ರೋಷದಿಂದ ಭೂಮಿಯ ಮೇಲೆ ಬಂದು, ಇನ್ನೂ ಗಜವನ್ನು ತಲುಪದಿದ್ದ ಆ ಕೂರ್ಮವನ್ನೂ ಮತ್ತು ಗಜವನ್ನೂ ವಿನತಾ ಪುತ್ರನಾದ ಗರುಡನು ಒಟ್ಟಿಗೆ ಹಿಡಿದುಕೊಂಡನು.

ಚರಣೇನ ತು ಸವ್ಯೇನ ಜಗ್ರಾಹ ಸ ಗಜೋತ್ತಮಮ್ ।
ಪ್ರಸ್ಪಂದಮಾನಂ ಬಲವಾನ್ ದಕ್ಷಿಣೇನ ತು ಕಚ್ಛಪಮ್ ॥೧೭॥

ಬಲಿಷ್ಠನಾದ ಅವನು ಎಡಗಾಲಿನಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುವ ಗಜವನ್ನೂ ಮತ್ತು ಬಲಗಾಲಿನಿಂದ ಕೂರ್ಮವನ್ನೂ ಹಿಡಿದನು.

ಉತ್ಪಪಾತ ತತಸ್ತೂರ್ಣಂ ಪನ್ನಗೇಂದ್ರನಿಷೂದನಃ ।
ದಿವಂ ಖಂ ಚ ಸಮುತ್ಪತ್ಯ ಪಕ್ಷಾಭ್ಯಾಮಪರಾಜಿತಃ ॥೧೮॥

ಶ್ರೇಷ್ಠಸರ್ಪಸಂಹಾರಕನಾದ ಅವನು ದಣಿವಿಲ್ಲದವನಾಗಿ ಆಕಾಶಕ್ಕೆ ಹಾರಿ ತನ್ನ ರೆಕ್ಕೆಗಳ ಬಲದಿಂದ ಮೇಲಕ್ಕೆ ಹೋದನು.

ತೇನ ಚೋತ್ಪತತಾ ತೂರ್ಣಂ ಸಂಗೃಹೀತೋ ನಖೈರ್ಭೃಶಮ್ ।
ವಜ್ರಗರ್ಭೈಃ ಸುನಿಶಿತೈಃ ಪ್ರಾಣಾಂಸ್ತೂರ್ಣಂ ಮುಮೋಚತುಃ ॥೧೯॥

ಅವನು ಹಾಗೆ ಮೇಲಕ್ಕೆ ಹಾರುವಾಗ ವಜ್ರಗರ್ಭವಾದ ತೀಕ್ಷ್ಣವಾದ ನಖಗಳುಳ್ಳ ಪಾದಗಳಲ್ಲಿ ಹಿಡಿಯಲ್ಪಟ್ಟ ಕೂರ್ಮ-ಗಜಗಳು ಪ್ರಾಣವನ್ನು ಬಿಟ್ಟವು.

ತೌ ಗೃಹ್ಯ ಬಲವಾಂಸ್ತೂರ್ಣಂ ಸ್ರಸ್ತಪಾದಶಿರೋಧರೌ ।
ವಿವಲ್ಗನ್ನಿವ ಖೇ ಕ್ರೀಡನ್ ಖೇಚರೋಽಭಿಜಗಾಮ ಹ ॥೨೦॥

ಬಲಿಷ್ಠನಾದ ಗರುಡನು ಪಾದ ಮತ್ತು ಕತ್ತುಗಳನ್ನು ಕೆಳಗೆ ಹಾಕಿದ ಅವೆರಡನ್ನೂ ತೆಗೆದುಕೊಂಡು ಆಕಾಶದಲ್ಲಿ ಕ್ರೀಡೆ ಮಾಡುತ್ತ ಸಂಚರಿಸುವವನಂತೆ ಹೊರಟನು.

ಅತ್ತುಕಾಮಸ್ತತೋ ವೀರಃ ಪೃಥಿವ್ಯಾಂ ಪೃಥಿವೀಪತೇ ।
ನಿರೈಕ್ಷತ ನ ಚಾಪಶ್ಯದ್ ದ್ರುಮಂ ಪರ್ಯಾಪ್ತಮಾಸಿತುಮ್ ॥೨೧॥

ಎಲೈ ರಾಜನೇ, ಭೂಮಿಯ ಮೇಲೆ ಎಲ್ಲಾದರೂ ಅವುಗಳನ್ನು ತಿನ್ನಲು ಬಯಸಿದ ವೀರನಾದ ಅವನು ಎಲ್ಲ ಕಡೆಯಲ್ಲಿಯೂ ನೋಡಿದನು. ಆದರೆ ತಾನು ಇಳಿದು ಕುಳಿತುಕೊಳ್ಳಬಹುದಾದ ವೃಕ್ಷವು ಅವನಿಗೆ ಕಾಣಲಿಲ್ಲ.

ನೈಮಿಶಂ ತ್ವಥ ಸಂಪ್ರಾಪ್ಯ ದೇವಾರಣ್ಯಂ ಮಹಾದ್ಯುತಿಃ ।
ಅಪಶ್ಯತ ದ್ರುಮಂ ಕಂಚಿಚ್ಛಾಖಾಸ್ಕಂಧಸಮಾವೃತಮ್ ॥೨೨॥

ಅನಂತರ ಮಹಾದ್ಯುತಿಯುಳ್ಳ ಅವನು ದೇವಾರಣ್ಯವಾದ ನೈಮಿಶ ಕ್ಷೇತ್ರಕ್ಕೆ ಬಂದು ಅನೇಕ ಕೊಂಬೆಗಳನ್ನು ಹೊಂದಿದ್ದ ಒಂದು ದೊಡ್ಡ ವೃಕ್ಷವನ್ನು ನೋಡಿದನು.

ಹಿಮವಚ್ಛಿಖರಪ್ರಖ್ಯಂ ಯೋಜನದ್ವಯಮುಚ್ಛ್ರಿತಮ್ ।
ಪರಿಣಾಹೇನ ರಾಜೇಂದ್ರ ನಲ್ವಮಾತ್ರಂ ಸಮಂತತಃ ॥೨೩॥

ಎಲೈ ರಾಜೇಂದ್ರನೇ, ಆ ವೃಕ್ಷವು ಹಿಮಾಲಯದ ಶಿಖರದಂತೆ ಎರಡು ಯೋಜನ ಎತ್ತರವೂ ಮತ್ತು ಒಂದು ನಲ್ವಪರಿಮಾಣದಷ್ಟು ಸುತ್ತಳತೆಯನ್ನು ಹೊಂದಿರುವುದೂ ಆಗಿದ್ದಿತು.

ತಸ್ಯ ಶಾಖಾऽಭವತ್ ಕಾಚಿದಾಯತಾ ಪಂಚಯೋಜನಮ್ ।
ದೃಢಮೂಲಾ ದೃಢಸ್ಕಂಧಾ ವಜ್ರಪತ್ರಸಮಾಚಿತಾ ॥೨೪॥

ಆ ವೃಕ್ಷದಲ್ಲಿ ಐದು ಯೋಜನ ವಿಸ್ತಾರವಾದ ಒಂದು ದೊಡ್ಡ ಕೊಂಬೆ ಇದ್ದಿತು. ಅದು ದೃಢವಾದ ಆಧಾರವನ್ನೂ, ದೃಢವಾದ ಸಣ್ಣ ಕೊಂಬೆಗಳನ್ನೂ ಹೊಂದಿ ವಜ್ರದಂತಹ ಎಲೆಗಳಿಂದ ಕೂಡಿದ್ದಿತು.

ತತ್ರೋಪವಿಷ್ಟಃ ಸಹಸಾ ವೈನತೇಯೋ ನಿಗೃಹ್ಯ ತೌ ।
ಅತ್ತುಕಾಮಸ್ತತಃ ಶಾಖಾ ತಸ್ಯ ವೇಗಾದವಾಪತತ್ ॥೨೫॥

ಗಜ-ಕೂರ್ಮಗಳನ್ನು ಹಿಡಿದಿದ್ದ ಗರುಡನು ಅವುಗಳನ್ನು ತಿನ್ನಲು ಬಯಸಿ ತಕ್ಷಣ ಆ ಕೊಂಬೆಯ ಮೇಲೆ ಕುಳಿತನು. ಆದರೆ ಅವನ ವೇಗದಿಂದ ಆ ಕೊಂಬೆಯು ಮುರಿಯಿತು.

ತಾಂ ಪತಂತೀಮಭಿಪ್ರೇಕ್ಷ್ಯ ಪ್ರೇಕ್ಷ್ಯ ಚಾರ್ಷಿಗಣಾನಥ ।
ಆಸೀನಾನ್ ವಸುಭಿಃ ಸಾರ್ಧಂ ಸತ್ರೇಣ ಜಗತೀಪತೇ ॥೨೬॥

ವೈಖಾನಸಾನ್ನಾಮ ಯತೀನ್ ವಾಲಖಿಲ್ಯಗಣಾನಪಿ ।
ತಸ್ಯ ಭೀರಾವಿಶತ್ ತತ್ರ ಪತಗೇಂದ್ರಸ್ಯ ಭಾರತ ॥೨೭॥

ಎಲೈ ಭಾರತನೇ, ರಾಜನೇ, ಮುರಿದು ಕೆಳಗೆ ಬೀಳಲಿರುವ ಕೊಂಬೆಯನ್ನು ನೋಡಿ, ಆ ಕೊಂಬೆಯ ಕೆಳಗೆ ಭೂಮಿಯ ಮೇಲೆ ವಸುಗಳ ಜೊತೆಯಲ್ಲಿ ಸತ್ರಯಾಗದಲ್ಲಿ ಕುಳಿತಿರುವ ವೈಖಾನಸ ನಾಮಕ ಯತಿಗಳನ್ನೂ, ವಾಲಖಿಲ್ಯ ಋಷಿಗಳ ಗಣಗಳನ್ನೂ ನೋಡಿ ಚಕಿತನಾದ ಅವನಿಗೆ ಭಯವುಂಟಾಯಿತು.

ತಾನ್ ದೃಷ್ಟ್ವಾ ಸ ಯತೀಂಸ್ತತ್ರ ಸಮಾಸೀನಾನ್ ಸುರೈಃ ಸಹ ।
ತುಂಡೇನ ಗೃಹ್ಯ ತಾಂ ಶಾಖಾಮುತ್ಪಪಾತ ಖಿಗೇಶ್ವರಃ ।
ತೌ ಚ ಪಕ್ಷೀ ಭುಜಂಗಾಶೋ ವ್ಯೋಮ್ನಿ ಕ್ರೀಡನ್ನಿವಾವ್ರಜತ್ ॥೨೮॥

ದೇವತೆಗಳ ಜೊತೆಯಲ್ಲಿ ಕೆಳಗೆ ಕುಳಿತಿರುವ ಆ ಯತಿಗಳನ್ನು ನೋಡಿದ, ಗಗನ ಸಂಚಾರಿಯಾದ, ಪಕ್ಷಿರಾಜನಾದ ಗರುಡನು ತನ್ನ ಕೊಕ್ಕಿನಿಂದ ಆ ಕೊಂಬೆಯನ್ನು ಹಿಡಿದು ಪುನಃ ಆಕಾಶದಲ್ಲಿ ಕ್ರೀಡಿಸುವವನಂತೆ ಮೇಲೆ ಹಾರಿದನು.

ತಂ ದೃಷ್ಟ್ವಾ ಗುರುಸಂಭಾರಂ ಪ್ರಗೃಹ್ಯೋತ್ಪತಿತಂ ಖಿಗಮ್ ।
ಋಷಯಸ್ತೇಽಬ್ರುವನ್ ಸರ್ವೇ ಗರುಡೋಽಯಮಿತಿ ಸ್ಮ ಹ ।
ನ ತ್ವನ್ಯಃ ಕ್ಷಮತೇ ಕಶ್ಚಿದ್ ಯಥಾಽಯಂ ವೀರ್ಯವಾನ್ ಖಗಃ ॥೨೯॥

ಅಷ್ಟು ದೊಡ್ಡ ಭಾರವನ್ನು ಎತ್ತಿಕೊಂಡು ಮೇಲಕ್ಕೆ ಹಾರಿದ ಆ ಪಕ್ಷಿಯನ್ನು ನೋಡಿ ಆ ಋಷಿಗಳೆಲ್ಲರೂ 'ಇವನು ಗರುಡನೇ ಆಗಿರಬೇಕು. ಇಂತಹ ಪರಾಕ್ರಮವು ಇನ್ನೊಂದು ಪಕ್ಷಿಯಲ್ಲಿ ಕಂಡುಬರುವುದಿಲ್ಲ' ಎಂದು ಹೇಳಿದರು.

ಅಸೌ ಗಚ್ಛತಿ ಧರ್ಮಾತ್ಮಾ ಗುರುಭಾರಸಮನ್ವಿತಃ ।
ಅಯಂ ಕ್ರೀಡನ್ನಿವಾಕಾಶೇ ತಸ್ಮಾದ್ ಗರುಡ ಏವ ಸಃ ॥೩೦॥

'ಈ ಧರ್ಮಾತ್ಮನಾದ ಪಕ್ಷಿಯು ದೊಡ್ಡ ಭಾರವನ್ನು ಹೊತ್ತುಕೊಂಡು ಆಕಾಶದಲ್ಲಿ ಲೀಲೆಯಿಂದ ಸಂಚರಿಸುತ್ತಿದ್ದಾನೆ. ಆದ್ದರಿಂದ ಅವನು ಗರುಡನೇ ಸರಿ'.

ಏವಂ ತೇ ಸಮಯಂ ಸರ್ವೇ ವಸವಶ್ಚ ದಿವೌಕಸಃ ।
ಅಕಾರ್ಷುಃ ಪಕ್ಷಿರಾಜಸ್ಯ ಗರುಡೇತ್ಯೇವ ನಾಮ ಹ ॥೩೧॥

ಹೀಗೆ ಆ ಯತಿಗಳು ಮತ್ತು ವಸ್ವಾದಿ ದೇವತೆಗಳು ನಿಶ್ಚಯವನ್ನು ಮಾಡಿ, ಪಕ್ಷಿರಾಜನಿಗೆ ಗರುಡನೆಂದೇ ಹೆಸರಿಟ್ಟರು (ಇಲ್ಲಿಯವರೆಗೆ ಪಕ್ಷಿರಾಜನೆಂದೇ ವ್ಯವಹಾರವಿತ್ತು).

ಸ ಪಕ್ಷೀ ಪೃಥಿವೀಂ ಸರ್ವಾಂ ಪರಿಧಾವಂಸ್ತತಸ್ತತಃ ।
ಮುಮುಕ್ಷುಃ ಶಾಖಿನಃ ಶಾಖಾಂ ನ ಸ್ಮ ದೇಶಮಪಶ್ಯತ ॥೩೨॥

ಆ ಪಕ್ಷಿಯು ಆ ಕೊಂಬೆಯನ್ನು ಎಲ್ಲಾದರೂ ಕೆಳಗೆ ಹಾಕುವುದಕ್ಕೆ ಬಯಸಿ, ಭೂಮಿಯ ಮೇಲೆ, ಆಕಾಶದಲ್ಲಿ, ಎಲ್ಲ ಕಡೆಗಳಲ್ಲಿಯೂ ಸಂಚರಿಸಿದರೂ ಯೋಗ್ಯವಾದ ಒಂದು ಪ್ರದೇಶವನ್ನೂ ಕಾಣಲಿಲ್ಲ.

ಸ ವಾಚಮಶೃಣೋದ್ ದಿವ್ಯಾಮುಪರ್ಯುಪರಿ ಜಲ್ಪತಃ ।
ದೇವದೂತಸ್ಯ ವಿಸ್ಪಷ್ಟಾಮಾಭಾಷ್ಯ ಗರುಡೇತಿ ಚ ॥೩೩॥

ಅವನು ತನ್ನ ಮೇಲ್ಭಾಗದಿಂದ ಕೇಳಿಬರುವ ಗರುಡ ಎಂದು ಸಂಬೋಧನೆ ಮಾಡಿ ಮಾತನಾಡುವ ಒಬ್ಬ ದೇವದೂತನ ವಿಸ್ಪಷ್ಟವಾದ, ದಿವ್ಯವಾದ ವಾಣಿಯನ್ನು ಕೇಳಿದನು.

ವೈನತೇಯ ಕುವಿಂದೇಷು ಸಮುದ್ರಾಂತೇ ಮಹಾಬಲ ।
ಪಾತ್ಯತಾಂ ಶಾಖಿನಃ ಶಾಖಾ ನ ಹಿ ತೇ ಧರ್ಮನಿಶ್ಚಯಾಃ ॥೩೪॥

'ಎಲೈ ವಿನತಾಪುತ್ರನೇ, ಮಹಾಬಲನೇ, ಸಮುದ್ರದ ಅಂಚಿನಲ್ಲಿ, ಕುಳಿಂದ ದೇಶದಲ್ಲಿ ಈ ಶಾಖೆಯನ್ನು ಕೆಳಗೆ ಬಿಡು. ಕುಳಿಂದ ದೇಶದವರು ಧರ್ಮಾಚರಣೆಯನ್ನು ಮಾಡುವವರಲ್ಲ'.

ತಚ್ಛ್ರುತ್ವಾ ಗರುಡಸ್ತೂರ್ಣಂ ಜಗಾಮ ಲವಣಾಂಭಸಃ ।
ಉದ್ದೇಶಂ ಯತ್ರ ತೇ ಮಂದಾಃ ಕುವಿಂದಾಃ ಪಾಪಕರ್ಮಿಣಃ ॥೩೫॥

ಆ ಮಾತುಗಳನ್ನು ಕೇಳಿ, ಗರುಡನು ಶೀಘ್ರವಾಗಿ ಲವಣ ಸಮುದ್ರದ ಅಂಚಿನಲ್ಲಿ ಪಾಪಕರ್ಮನಿರತರೂ, ಮೂರ್ಖರೂ ಆದ ಕುಳಿಂದರು ವಾಸಿಸುವ ದೇಶವನ್ನು ತಲುಪಿದನು.

ತತೋ ಗತ್ವಾ ತತಃ ಶಾಖಾಂ ಮುಮೋಚ ಪತತಾಂವರಃ ।
ತಯಾ ಹತಾ ಜನಪದಾಸ್ತದಾ ಷಟ್‌ತ್ರಿಂಶತೋ ನೃಪ ॥೩೬॥

ಆ ಪಕ್ಷಿಶ್ರೇಷ್ಠನು ಅಲ್ಲಿಗೆ ಹೋಗಿ ಆ ಶಾಖೆಯನ್ನು ಕೆಳಗೆ ಬಿಟ್ಟನು. ಎಲೈ ರಾಜನೇ, ಅದರಿಂದ ಆ ಪ್ರದೇಶದಲ್ಲಿದ್ದ ಮೂವತ್ತಾರು ದೇಶದ ಜನರು ಹತರಾದರು.

ಸ ದೇಶೋ ರಾಜಶಾರ್ದೂಲ ಖ್ಯಾತಃ ಪರಮದಾರುಣಃ ।
ಶಾಖಾಪತನ ಇತ್ಯೇವ ಕುವಿಂದಾನಾಂ ದುರಾತ್ಮನಾಮ್ ॥೩೭॥

ಎಲೈ ರಾಜಶಾರ್ದೂಲನೇ, ಮಹಾಪ್ರಯತ್ನಶೀಲರಾದ ಕುಳಿಂದರ ಆ ಪರಮದಾರುಣವಾದ ದೇಶವು ಶಾಖಾಪತನ ಎಂಬ ಹೆಸರಿನಿಂದಲೇ ಪ್ರಸಿದ್ಧವಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನೇ
ಶಾಖಾಮೋಕ್ಷೋ ನಾಮ ದ್ವಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ಮೂರನೆಯ ಅಧ್ಯಾಯ

ಬ್ರಹ್ಮದೇವರಿಂದ ಗರುಡನನ್ನು ಕುರಿತು ಅಗ್ನಿಶಮನೋಪಾಯದ ಕಥನ.

ಭೀಷ್ಮಃ

ಗತ್ವಾ ತಂ ಪಕ್ಷಿಶಾರ್ದೂಲಃ ಕುವಿಂದಾನಾಂ ಜನವ್ರಜಮ್ ।
ಉಪೋಪವಿಶ್ಯ ಶೈಲಾಗ್ರೇ ಭಕ್ಷಯಾಮಾಸ ತಾವುಭೌ ।
ವಾರಣಂ ಕಚ್ಛಪಂ ಚೈವ ಸಂಹೃಷ್ಟಃ ಸ ಪತತ್ರಿರಾಟ್ ॥೧॥

ಭೀಷ್ಮ– ಪಕ್ಷಿಶ್ರೇಷ್ಠನಾದ ಆ ಗರುಡನು ಕುಳಿಂದ ದೇಶಕ್ಕೆ ಹೋಗಿ, ಒಂದು ಪರ್ವತದ ಶಿಖರದ ಮೇಲೆ ಕುಳಿತು ಸಂತೋಷಗೊಂಡು ಆ ಗಜ-ಕೂರ್ಮಗಳನ್ನು ಭಕ್ಷಿಸಿದನು.

ತಯೋಃ ಸ ರುಧಿರಂ ಪೀತ್ವಾ ಮೇದಸೌ ಚ ಪರಂತಪ ।
ಸಂಹೃಷ್ಟಃ ಪತತಾಂಶ್ರೇಷ್ಠೋ ಲಬ್ಧ್ವಾ ಬಲಮನುತ್ತಮಮ್ ।
ಜಗಾಮ ದೇವರಾಜಸ್ಯ ಭವನಂ ಪನ್ನಗಾಶನಃ ॥೨॥

ಎಲೈ ಪರಂತಪನೇ, ಅವನು ಅವುಗಳ ರಕ್ತವನ್ನು ಪಾನ ಮಾಡಿ, ಮೇದಸ್ಸನ್ನು ಭಕ್ಷಿಸಿ, ಶ್ರೇಷ್ಠವಾದ ಬಲವನ್ನು ಪಡೆದು, ಸಂತೋಷಗೊಂಡು ಪನ್ನಗಾಶನನೂ, ಪಕ್ಷಿಶ್ರೇಷ್ಠನೂ ಆದ ಅವನು ದೇವರಾಜನಾದ ಇಂದ್ರನ ಮನೆಗೆ ಹೋದನು.

ತಂ ಪ್ರಣಮ್ಯ ಮಹಾತ್ಮಾನಂ ಪಾವಕಂ ವಿಷ್ಣುಲಿಂಗಿನಮ್ ।
ರಾತ್ರಿಂ ದಿವಂ ಪ್ರಜ್ವಲಿತಂ ರಕ್ಷಾರ್ಥಮಮೃತಸ್ಯ ಹ ॥೩॥

ತಂ ದೃಷ್ಟ್ವಾ ವಿಹಗೇಂದ್ರಸ್ಯ ಭಯಂ ತೀವ್ರಮುಪಾವಿಶತ್ ।
ನತು ತೋಯಾನ್ನ ರಕ್ಷಿಭ್ಯೋ ಭಯಮಸ್ಯೋಪಪದ್ಯತೇ ॥೪॥

ಅಲ್ಲಿ ಕಿಡಿಗಳಿಂದ ಕೂಡಿದ ಮಹಾತ್ಮನಾದ ಅಗ್ನಿಯು ಹಗಲೂ-ರಾತ್ರಿಯೂ ಅಮೃತದ ರಕ್ಷಣೆಗಾಗಿ ಪ್ರಜ್ವಲಿಸುತ್ತಿರುವುದನ್ನು ನೋಡಿ, ಪಕ್ಷಿರಾಜನಾದ ಅವನಿಗೆ ತೀವ್ರವಾದ ಭಯವುಂಟಾಯಿತು. ಗರುಡನಿಗೆ ಜಲದಿಂದಾಗಲೀ ಅಥವಾ ಕಾವಲುಗಾರನಿಂದಾಗಲೀ ಭಯವಿಲ್ಲ.

ಪಕ್ಷಿತ್ವಮಾತ್ಮನೋ ದೃಷ್ಟ್ವಾ ಜ್ವಲಂತಂ ಚ ಹುತಾಶನಮ್ ।
ಪಿತಾಮಹಮಥೋ ಗತ್ವಾ ದದರ್ಶ ಭುಜಗಾಶನಃ ॥೫॥

ತಾನು ಪಕ್ಷಿ ಎಂಬುದನ್ನೂ, ಅಗ್ನಿಯು ಪ್ರಜ್ವಲಿಸುತ್ತಿದೆ ಎಂಬುದನ್ನೂ ಗಮನಿಸಿದ, ಸರ್ಪಭಕ್ಷಕನಾದ ಅವನು ಬ್ರಹ್ಮದೇವರ ಬಳಿಗೆ ಹೋಗಿ ಅವರನ್ನು ನೋಡಿದನು.

ತಂ ಪ್ರಣಮ್ಯ ಮಹಾತ್ಮಾನಂ ಗರುಡಃ ಪ್ರಯತಾಂಜಲಿಃ ।
ಪ್ರೋವಾಚ ತದಸಂದಿಗ್ಧಂ ವಚನಂ ಪತಗೇಶ್ವರಃ ॥೬॥

ಪಕ್ಷಿರಾಜನಾದ ಗರುಡನು ಮಹಾತ್ಮರಾದ ಬ್ರಹ್ಮದೇವರ ಬಳಿಗೆ ಹೋಗಿ, ಕೈಗಳನ್ನು ಮುಗಿದು ನಮಸ್ಕರಿಸಿ ಸ್ಪಷ್ಟವಾಗಿ ಮಾತನಾಡಿದನು.

ಉದ್ಯತಂ ಗುರುಕೃತ್ಯೇ ಮಾಂ ಭಗವನ್ ಧರ್ಮನಿಶ್ಚಿತಮ್ ।
ವಿಮೋಕ್ಷಣಾರ್ಥಂ ಮಾತುರ್ಹಿ ದಾಸಭಾವಾದನಿಂದಿತಮ್ ॥೭॥

ಕದ್ರೂಸಕಾಶಮಮೃತಂ ಮಯಾ ಹರ್ತವ್ಯಮೀಶ್ವರ ।
ತದಾ ಮೇ ಜನನೀ ದೇವ ದಾಸಭಾವಾತ್ ಪ್ರಮೋಕ್ಷ್ಯತೇ ॥೮॥

'ಪೂಜ್ಯರೇ, ಧರ್ಮನಿಶ್ಚಯವುಳ್ಳ ನಾನು ನನಗೆ ಹಿರಿಯಳಾದ ಅನಿಂದಿತಳಾದ ನನ್ನ ತಾಯಿಯ ದಾಸ್ಯಭಾವವನ್ನು ವಿಮೋಚನೆಗೊಳಿಸಲು ಉದ್ಯುಕ್ತನಾಗಿದ್ದೇನೆ. ಎಲೈ ಪ್ರಭುವೇ, ನಾನು ಕದ್ರುವಿಗೆ ಅಮೃತವನ್ನು ತೆಗೆದುಕೊಂಡು ಹೋಗಿ ಕೊಡಬೇಕು. ಎಲೈ ದೇವನೇ, ಆಗ ನನ್ನ ತಾಯಿಯು ದಾಸ್ಯದಿಂದ ಬಿಡುಗಡೆಯನ್ನು ಹೊಂದುವಳು.

ತತ್ರಾಮೃತಂ ಪ್ರಜ್ವಲಿತೋ ನಿತ್ಯಮೀಶ್ವರ ರಕ್ಷತಿ ।
ಹಿರಣ್ಯರೇತಾ ಭಗವಾನ್ ಪಾಕಶಾಸನಶಾಸನಾತ್ ॥೯॥

ಪೂಜ್ಯರೇ, ಪ್ರಭುಗಳೇ, ಆದರೆ ಅಲ್ಲಿ ಇಂದ್ರನ ಶಾಸನದಂತೆ ಪೂಜ್ಯನಾದ ಅಗ್ನಿಯು ಜ್ವಲಿಸುತ್ತಾ ಅಮೃತವನ್ನು ರಕ್ಷಿಸುತ್ತಿದ್ದಾನೆ.

ತತ್ರ ಮೇ ದೇವದೇವೇಶ ಭಯಂ ತೀವ್ರಮಥಾವಿಶತ್ ।
ಜ್ವಲಂತಂ ಪಾವಕಂ ದೃಷ್ಟ್ವಾ ಪಕ್ಷಿತ್ವಂ ಚಾತ್ಮನಃ ಪ್ರಭೋ ॥೧೦॥

ದೇವದೇವೇಶನೇ, ಪ್ರಭುವೇ, ನಾನು ಪಕ್ಷಿಎಂಬುದನ್ನೂ, ಅಗ್ನಿಯು ಜ್ವಲಿಸುತ್ತಿದೆ ಎಂಬುದನ್ನೂ ಗಮನಿಸಿದ ನನಗೆ ಅಲ್ಲಿ ತೀವ್ರವಾದ ಭಯವುಂಟಾಯಿತು.

ಸಮತಿಕ್ರಮಿತುಂ ಶಕ್ಯಃ ಕಥಂ ಸ್ಯಾತ್ಪಾವಕೋ ಮಯಾ ।
ತಸ್ಯಾಭ್ಯುಪಾಯಂ ವರದ ವಕ್ತುಮೀಶೋಽಸಿ ಮೇ ಪ್ರಭೋ ॥೧೧॥

ನಾನು ಅಗ್ನಿಯನ್ನು ದಾಟಲು ಹೇಗೆ ಸಾಧ್ಯ ? ಎಲೈ ವರದರೇ, ಪ್ರಭುಗಳೇ, ಇದರ ಉಪಾಯವನ್ನು ನನಗೆ ತಿಳಿಸಲು ನೀವು ಸಮರ್ಥರಾಗಿದ್ದೀರಿ' (ಎಂದು ಹೇಳಿದನು).

ತಮಬ್ರವೀನ್ಮಹಾಭಾಗ ತಪ್ಯಮಾನಂ ವಿಹಂಗಮಮ್ ।
ಅಗ್ನೇಃ ಸಂಶಮನೋಪಾಯಮುತ್ಸ್ಮಯನ್ ಸ ಪುನಃ ಪುನಃ ॥೧೨॥

ಎಲೈ ಮಹಾನುಭಾವನೇ, ಹೀಗೆ ಸಂತಾಪ ಪಡುತ್ತಿದ್ದ, ಗಗನಸಂಚಾರಿಯಾದ ಗರುಡನನ್ನುಕುರಿತು ಪುನಃ ಪುನಃ ನಗುತ್ತಾ ಬ್ರಹ್ಮದೇವರು ಅಗ್ನಿಯನ್ನು ಶಾಂತಗೊಳಿಸುವ ಉಪಾಯವನ್ನು ಹೇಳಿದರು.

ಪಯಸಾ ಶಾಮ್ಯತೇ ವತ್ಸ ಸರ್ಪಿಷಾ ಚ ಹುತಾಶನಃ ।
ಶರೀರಸ್ಥೋಽಪಿ ಭೂತಾನಾಂ ಕಿಂ ಪುನಃ ಪ್ರಜ್ವಲನ್ ಭುವಿ ॥೧೩॥

ಎಲೈ ವತ್ಸನೇ, ಅಗ್ನಿಯು ನೀರಿನಿಂದಲಾಗಲೀ ಅಥವಾ ತುಪ್ಪದಿಂದಲಾಗಲೀ ಶಾಂತಿಯನ್ನು ಹೊಂದುತ್ತದೆ. ಪ್ರಾಣಿಗಳ ಶರೀರದಲ್ಲಿದ್ದ ಅಗ್ನಿಯೂ ಅದರಿಂದ ಉಪಶಮನವನ್ನು ಹೊಂದುತ್ತದೆ. ಇನ್ನು ಭೂಮಿಯಲ್ಲಿ ಜ್ವಲಿಸುವ ಅಗ್ನಿಯು ಏಕೆ ಉಪಶಮನವನ್ನು ಹೊಂದುವುದಿಲ್ಲ?

ನವನೀತಂ ಪಯೋ ವಾಽಪಿ ಪಾವಕೇ ತ್ವಂ ಸಮಾದಧೇಃ ।
ತತೋ ಗಚ್ಛ ಯಥಾಕಾಮಂ ನ ತ್ವಾ ಧಕ್ಷ್ಯತಿ ಪಾವಕಃ ॥೧೪॥

ನೀನು ನವನೀತವನ್ನಾಗಲೀ ಅಥವಾ ಜಲವನ್ನಾಗಲೀ ಅಗ್ನಿಯ ಮೇಲೆ ಹಾಕಿ, ಅನಂತರ ನಿನ್ನ ಮನಸ್ಸಿಗೆ ಬಂದಂತೆ ಮುಂದೆ ಹೋಗು. ಅಗ್ನಿಯು ನಿನ್ನನ್ನು ದಹಿಸುವುದಿಲ್ಲ (ಎಂದು ಹೇಳಿದರು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನೇ
ಪಿತಾಮಹವಚನಂ ನಾಮ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ನಾಲ್ಕನೆಯ ಅಧ್ಯಾಯ

ಗರುಡನ ಮೇಲೆ ಇಂದ್ರನು ಪ್ರಯೋಗಿಸಿದ ವಜ್ರಾಯುಧದ ವೈಫಲ್ಯ.

ಭೀಷ್ಮಃ

ಪಿತಾಮಹವಚಃ ಶ್ರುತ್ವಾ ಗರುಡಃ ಪತತಾಂವರಃ ।
ಜಗಾಮ ಗೋಕುಲಂ ಕಿಂಚಿನ್ನವನೀತಜಿಹೀರ್ಷಯಾ ॥೧॥

ಭೀಷ್ಮ– ಪಕ್ಷಿಶ್ರೇಷ್ಠನಾದ ಗರುಡನು ಬ್ರಹ್ಮದೇವನ ಮಾತುಗಳನ್ನು ಕೇಳಿ ಸ್ವಲ್ಪ ನವನೀತವನ್ನು (ಬೆಣ್ಣೆ) ತರಲು ಗೋಕುಲಕ್ಕೆ ಹೋದನು.

ನವನೀತಂ ತಥಾಽಪಶ್ಯನ್ಮಥಿತಂ ಕಲಶೇ ಸ್ಥಿತಮ್ ।
ತದಾದಾಯ ತತೋಽಗಚ್ಛದ್ ಯತಸ್ತದ್ ರಕ್ಷ್ಯತೇಽಮೃತಮ್ ॥೨॥

ಅವನು ಅಲ್ಲಿ ಮೊಸರನ್ನು ಕಡೆದು ಒಂದು ಕಲಶದಲ್ಲಿದ್ದ ನವನೀತವನ್ನು ನೋಡಿ ಅದನ್ನು ತೆಗೆದುಕೊಂಡು ಅಮೃತವು ರಕ್ಷಿಸಲ್ಪಡುತ್ತಿದ್ದ ಸ್ಥಳಕ್ಕೆ ಬಂದನು.

ಸ ತತ್ರ ಗತ್ವಾ ಪತಗಸ್ತಿರ್ಯಕ್ಕೋಯಂ ಮಹಾಬಲಃ ।
ಹುತಾಶನಮಪಕ್ರಮ್ಯ ನವನೀತಮಪಾತಯತ್ ॥೩॥

ಮಹಾಬಲನಾದ ಗರುಡನು ಜಲದುರ್ಗವನ್ನು ಅಡ್ಡವಾಗಿ ದಾಟಿ, ಅಗ್ನಿಯ ಸಮೀಪಕ್ಕೆ ಬಂದು ಅಗ್ನಿಯ ಮೇಲೆ ನವನೀತವನ್ನು ಹಾಕಿದನು.

ಸೋಽರ್ಚಿಷ್ಮಾನ್ ಮಂದವೇಗೋಽಭೂತ್ ಸರ್ಪಿಷಾ ತೇನ ತರ್ಪಿತಃ ।
ಧೂಮಕೇತುರ್ನ ಜಜ್ವಾಲ ಧೂಮಮೇವ ಸಸರ್ಜ ಹ ॥೪॥

ಆ ನವನೀತದಿಂದ ತೃಪ್ತಿಗೊಂಡ ಅಗ್ನಿಯು ಮಂದವೇಗವುಳ್ಳವನಾದನು. ಧೂಮಕೇತುವಾದ ಅವನು ಜ್ವಲಿಸಲಿಲ್ಲ. ಧೂಮವನ್ನೇ ಸೃಷ್ಟಿಮಾಡಿದನು.

ತಮತೀತ್ಯಾಶು ಗರುಡೋ ಹೃಷ್ಟಾತ್ಮಾ ಜಾತವೇದಸಮ್ ।
ರಕ್ಷಾಂಸಿ ಸಮತಿಕ್ರಾಮತ್ ಪಕ್ಷವಾತೇನ ಪಾತಯನ್ ॥೫॥

ಸಂತೋಷಗೊಂಡ ಗರುಡನು ಶೀಘ್ರವಾಗಿ ಅಗ್ನಿಯನ್ನು ದಾಟಿ ತನ್ನ ರೆಕ್ಕೆಗಳಿಂದ ಉಂಟಾದ ವಾಯುವಿನಿಂದ ಕಾವಲುಗಾರರಾದ ರಾಕ್ಷಸರನ್ನು ಬೀಳಿಸುತ್ತಾ ಅವರನ್ನೂ ದಾಟಿದನು.

ತೇ ಪತಂತಿ ಶಿರೋಭಿಶ್ಚ ಜಾನುಭಿಶ್ಚರಣೈಸ್ತಥಾ ।
ಉತ್ಸೃಜ್ಯ ಶಸ್ತ್ರಾವರಣಂ ಪಕ್ಷಿಪಕ್ಷಸಮಾಹತಾಃ ॥೬॥

ಗರುಡನ ಪಕ್ಷವಾಯುವಿನಿಂದ ಹೊಡೆಯಲ್ಪಟ್ಟ ಆ ರಾಕ್ಷಸರು ತಮ್ಮ ಶಸ್ತ್ರಗಳನ್ನು ಬಿಟ್ಟು ತಮ್ಮ ತಲೆಯ ಮೇಲೆ, ಮಂಡಿಗಳ ಮೇಲೆ ಮತ್ತು ಪಾದಗಳ ಮೇಲೆ ಬಿದ್ದರು.

ಉತ್ಪ್ಲುತ್ಯ ಚಾವೃತಾನ್ನಾಗಾನ್ ಹತ್ವಾ ಚಕ್ರಂ ವ್ಯತೀತ್ಯ ಚ ।
ಅರಾಂತರೇಣ ಶಿರಸಾ ಭಿತ್ತ್ವಾ ಜಾಲಂ ಸಮಾದ್ರವತ್ ॥೭॥

ಗರುಡನು ಅಲ್ಲಿಂದ ಹಾರಿ ಸರ್ಪಗಳನ್ನು ಕೊಂದು ಚಕ್ರದ, ಅರಗಳ ಮಧ್ಯದಲ್ಲಿ ತೂರಿ ಮುಂದೆ ಹೋಗಿ, ಕಬ್ಬಿಣದ ಬಲೆಯನ್ನು ಭೇದಿಸಿ ಮುಂದೆ ಸಾಗಿದನು.

ಸ ಭಿತ್ತ್ವಾ ಶಿರಸಾ ಜಾಲಂ ವಜ್ರವೇಗಸಮೋ ಬಲೀ ।
ಉಜ್ಜಹಾರ ತತಃ ಶೀಘ್ರಮಮೃತಂ ಭುಜಗಾಶನಃ ॥೮॥

ಬಲಿಷ್ಠನೂ, ವಜ್ರವೇಗಕ್ಕೆ ಸಮನಾದ ವೇಗವುಳ್ಳವನೂ ಆದ, ಸರ್ಪಭಕ್ಷಕನಾದ ಗರುಡನು ಆ ಕಬ್ಬಿಣದ ಬಲೆಯನ್ನು ತನ್ನ ಶಿರಸ್ಸಿನಿಂದ ಭೇದಿಸಿ, ಶೀಘ್ರವಾಗಿ ಅಮೃತದ ಕಲಶವನ್ನು ಎತ್ತಿಕೊಂಡನು.

ತದಾದಾಯಾದ್ರವಚ್ಛೀಘ್ರಂ ಗರುಡಃ ಶ್ವಸನೋ ಯಥಾ ।
ಅಥ ಸನ್ನಾಹಮಕರೋದ್ ವೃತ್ರಹಾ ಏಬುಧೈಃ ಸಹ ॥೯॥

ಗರುಡನು ಅಮೃತಕಲಶವನ್ನು ತೆಗೆದುಕೊಂಡು ವಾಯುವಿನಂತೆ ಶೀಘ್ರಗಾಮಿಯಾಗಿ ಹೊರಟನು. ಆಗ ಇಂದ್ರನು ದೇವತೆಗಳ ಜೊತೆಯಲ್ಲಿ ಯುದ್ಧ ಸನ್ನಾಹವನ್ನು ಮಾಡಿದನು.

ತತೋ ಮಾತಲಿಸಂಯುಕ್ತಂ ಹರಿಭಿಃ ಸ್ವರ್ಣಮಾಲಿಭಿಃ ।
ಆರುರೋಹ ರಥಂ ಶೀಘ್ರಂ ಸೂರ್ಯಾಗ್ನಿಸಮತೇಜಸಮ್ ॥೧೦॥

ಆಗ ಸ್ವರ್ಣಮಾಲೆಗಳನ್ನು ಧರಿಸಿದ ಅಶ್ವಗಳಿಂದ, ಮಾತಲಿಯಿಂದ ಹೂಡಲ್ಪಟ್ಟ ಸೂರ್ಯಾಗ್ನಿಗೆ ಸಮಾನವಾದ ತೇಜಸ್ಸನ್ನು ಹೊಂದಿದ ರಥವನ್ನು ಇಂದ್ರನು ಶೀಘ್ರವಾಗಿ ಏರಿದನು.

ಸೋಽಭ್ಯದ್ರವತ್ ಪಕ್ಷಿರಾಜಂ ವೃತ್ರಹಾ ಪಾಕಶಾಸನಃ ।
ಉದ್ಯಮ್ಯ ನಿಶಿತಂ ವಜ್ರಂ ವಜ್ರಹಸ್ತೋ ಮಹಾಬಲಃ ॥೧೧॥

ಮಹಾಬಲನಾದ ಪಾಕಶಾಸನನೂ, ವೃತ್ರಹಂತಕನೂ ಆದ ಇಂದ್ರನು ಕೈಯಲ್ಲಿ ತೀಕ್ಷ್ಣವಾದ ವಜ್ರಾಯುಧವನ್ನು ಎತ್ತಿಹಿಡಿದು, ಪಕ್ಷಿರಾಜನಾದ ಗರುಡನ ಬಳಿಗೆ ಓಡಿಬಂದನು.

ತಥೈವ ಗರುಡೋ ರಾಜನ್ ವಜ್ರಹಸ್ತಂ ಸಮಾದ್ರವತ್ ।
ತತೋ ವೈ ಮಾತಲಿಂ ಪ್ರಾಹ ಶೀಘ್ರಂ ವಾಹಯ ವಾಜಿನಃ ॥೧೨॥

ಎಲೈ ರಾಜನೇ, ಹಾಗೆಯೇ ಗರುಡನೂ ಸಹ ಇಂದ್ರನ ಮೇಲೆ ಧಾವಿಸಿದನು. ಆಗ ಇಂದ್ರನು ಮಾತಲಿಯನ್ನು ಕುರಿತು ಅಶ್ವಗಳನ್ನು ಶೀಘ್ರವಾಗಿ ಪ್ರಚೋದಿಸು ಎಂದು ಹೇಳಿದನು.

ಅಥ ದಿವ್ಯಂ ಮಹಾಘೋರಂ ಗರುಡಾಯ ಸಸರ್ಜ ಹ ।
ವಜ್ರಂ ಸಹಸ್ರನಯನಸ್ತಿಗ್ಮವೇಗಪರಾಕ್ರಮಃ ॥೧೩॥

ಅನಂತರ ಸಹಸ್ರಾಕ್ಷನೂ, ತೀಕ್ಷ್ಣವಾದ ವೇಗ ಮತ್ತು ಪರಾಕ್ರಮವುಳ್ಳವನೂ ಆದ ಇಂದ್ರನು ಮಹಾಘೋರವಾದ, ದಿವ್ಯವಾದ ವಜ್ರಾಯುಧವನ್ನು ಗರುಡನ ಮೇಲೆ ಪ್ರಯೋಗಿಸಿದನು.

ಉತ್ಸಿಸೃಕ್ಷಂತಮಾಜ್ಞಾಯ ವಜ್ರಂ ವೈ ತ್ರಿದಶೇಶ್ವರಮ್ ।
ತೂರ್ಣಂ ವೇಗತರೋ ಭೂತ್ವಾ ಜಗಾಮ ಪತತಾಂವರಃ ॥೧೪॥

ದೇವಪತಿಯಾದ ಇಂದ್ರನು ವಜ್ರಾಯುಧವನ್ನು ಪ್ರಯೋಗಿಸಿದ ವೇಗವನ್ನು ನೋಡಿದ ಪಕ್ಷಿಶ್ರೇಷ್ಠನಾದ ಗರುಡನು ತನ್ನ ವೇಗವನ್ನು ಶೀಘ್ರವಾಗಿ ಹೆಚ್ಚಿಸಿ ಮುಂದೆ ಹೊರಟನು.

ಪಿತಾಮಹನಿಸರ್ಗೇಣ ಜ್ಞಾತ್ವಾ ಲಬ್ಧವರಃ ಖಗಃ ।
ಆಯುಧಾನಾಂ ವರಂ ವಜ್ರಮಥ ಶಕ್ರಮುವಾಚ ಹ ॥೧೫॥

ಬ್ರಹ್ಮದೇವರಿಂದ ಎಂದೂ ನಿಷ್ಫಲವಾಗುವುದಿಲ್ಲವೆಂಬ ವರವನ್ನು ಪಡೆದ ವಜ್ರಾಯುಧವನ್ನು ತಿಳಿದು ಗರುಡನು ಇಂದ್ರನನ್ನು ಕುರಿತು ಮಾತನಾಡಿದನು.

ವೃತ್ರಹನ್ನೇಷ ವಜ್ರಸ್ತೇ ವರೋ ಲಬ್ಧಃ ಪಿತಾಮಹಾತ್ ।
ಅತಃ ಸಮ್ಮಾನಮಾಕಾಂಕ್ಷನ್ ಮುಂಚಾಮ್ಯೇಕಂ ತನೂರುಹಮ್ ॥೧೬॥

'ಎಲೈ ವೃತ್ರಹಂತಕನಾದ ಇಂದ್ರನೇ, ಈ ನಿನ್ನ ವಜ್ರಾಯುಧವು ಬ್ರಹ್ಮದೇವರಿಂದ ವರವನ್ನು ಪಡೆದಿದೆ. ಆದ್ದರಿಂದ ಅದನ್ನು ಸಮ್ಮಾನಿಸಲು ನಾನೇ ಒಂದು ಗರಿಯನ್ನು ಉದುರಿಸುತ್ತೇನೆ.

ಏತೇನಾಯುಧರಾಜೇನ ಯದಿ ಶಕ್ತೋಸಿ ವೃತ್ರಹನ್ ।
ಹನ್ಯಾಸ್ತ್ವಂ ಪರಯಾ ಶಕ್ತ್ಯಾ ಗಚ್ಛಾಮ್ಯಹಮನಾಮಯಃ ॥೧೭॥

ಎಲೈ ವೃತ್ರನಾಶಕನೇ, ಈ ಶ್ರೇಷ್ಠವಾದ ಆಯುಧದಿಂದ ನೀನು ನಿನ್ನ ಪೂರ್ಣಶಕ್ತಿಯಿಂದ ಆ ಗರಿಯನ್ನು ಕತ್ತರಿಸಿದರೆ ನಾನು ಕ್ಷೇಮದಿಂದ ಮುಂದೆ ಸಾಗುವೆನು' (ಎಂದು ಹೇಳಿದನು).

ತತ್ತು ತೂರ್ಣಂ ತದಾ ವಜ್ರಂ ಸ್ವೇನ ವೇಗೇನ ಭಾರತ ।
ಜಘಾನ ಪರಯಾ ಶಕ್ಯಾ ನ ಚೈನಮದಹದ್ ಭೃಶಮ್ ॥೧೮॥

ತತೋ ದೇವರ್ಷಯೋ ರಾಜನ್ ಗಚ್ಛಂತೋ ವೈ ವಿಹಾಯಸಾ ।
ದೃಷ್ಟ್ವಾ ವಜ್ರಂ ವಿಷಕ್ತಂ ತಂ ಪಕ್ಷಿಪರ್ಣೇऽಬ್ರುವನ್ ವಚಃ ॥೧೯॥

ಎಲೈ ಭಾರತನೇ, ಇಂದ್ರನು ಆ ವಜ್ರಾಯುಧವನ್ನು ತನ್ನ ಪೂರ್ಣಶಕ್ತಿಯಿಂದ ಗರುಡನ ಮೇಲೆ ಪ್ರಯೋಗಿಸಿದನು. ಆದರೆ ವಜ್ರಾಯುಧವು ಗರುಡನ ಗರಿಯನ್ನು ದಹಿಸಲಿಲ್ಲ. ಆಗ ಎಲೈ ರಾಜನೇ, ಆಕಾಶಮಾರ್ಗದಲ್ಲಿ ಸಂಚರಿಸುವ ದೇವರ್ಷಿಗಳು ವಜ್ರವು ಗರುಡನ ಗರಿಯಲ್ಲಿ ಸಿಲುಕಿಕೊಂಡುದನ್ನು ನೋಡಿ ಮಾತನಾಡಿದರು.

ಸುಪರ್ಣಃ ಪಕ್ಷಿಗರುಡೋ ಯಸ್ಯ ಪರ್ಣೇ ವರಾಯುಧಮ್ ।
ವಿಷಕ್ತಂ ದೇವರಾಜಸ್ಯ ವೃತ್ರಹಂತುಃ ಸನಾತನಮ್ ॥೨೦॥

'ಪಕ್ಷಿಶ್ರೇಷ್ಠನಾದ ಗರುಡನು ಒಳ್ಳೆಯ ಪುಚ್ಛವನ್ನು ಹೊಂದಿದವನು. ಅವನ ಪುಚ್ಛದ ಒಂದು ಗರಿಯಲ್ಲಿ ದೇವರಾಜನಾದ, ವೃತ್ರಹಂತಕನಾದ ಇಂದ್ರನ ಸನಾತನವಾದ, ಶ್ರೇಷ್ಠವಾದ ಆಯುಧವು ಸಿಲುಕಿಕೊಂಡಿದೆ'.

ಭೀಷ್ಮಃ

ಏವಂ ಸುಪರ್ಣೋ ವಿಹಗೋ ವೈನತೇಯಃ ಪ್ರತಾಪವಾನ್ ।
ಋಷಯಸ್ತಂ ವಿಜಾನಂತಿ ಚಾಗ್ನೇಯಂ ವೈಷ್ಣವಂ ಪುನಃ ॥೨೧॥

ಭೀಷ್ಮರು– ಹೀಗೆ ಪಕ್ಷಿಯಾದ ಗರುಡನು ಪ್ರತಾಪಶಾಲಿಯಾದವನು ಮತ್ತು ಒಳ್ಳೆಯ ಪುಚ್ಛವನ್ನು ಹೊಂದಿದವನು. ಋಷಿಗಳು ಅವನನ್ನು ಅಗ್ನಿಸಂಬಂಧಿಯೆಂದೂ, ವಿಷ್ಣುಸಂಬಂಧಿಯೆಂದೂ ತಿಳಿಯುತ್ತಾರೆ.

ವೇದಾಭಿಷ್ಟುತಮತ್ಯರ್ಥಂ ಸ್ವರ್ಗಮಾರ್ಗಫಲಪ್ರದಮ್ ।
ತನುಪರ್ಣಂ ಸುಪರ್ಣಸ್ಯ ಜಗೃಹುರ್ಬರ್ಹಿಣಸ್ತಥಾ ॥೨೨॥

ಮಯೂರಾ ವಿಸ್ಮಿತಾಃ ಸರ್ವೇ ಆದ್ರವಂತಿ ಸ್ಮ ವಜ್ರಿಣಮ್ ॥೨೩॥

ಅವನು ವೇದಗಳಿಂದ ಬಹಳವಾಗಿ ಸ್ತೋತ್ರ ಮಾಡಲ್ಪಟ್ಟವನು ಮತ್ತು ಸ್ವರ್ಗ ಮಾರ್ಗದಲ್ಲಿ ಫಲಪ್ರದನಾದವನು (ಮೋಕ್ಷಮಾರ್ಗದಲ್ಲಿಯೂ ಫಲಪ್ರದನಾದವನು). ಗರುಡನ ಆ ಸಣ್ಣಗರಿಯನ್ನು ನವಿಲುಗಳು ತೆಗೆದುಕೊಂಡವು. ನವಿಲುಗಳೆಲ್ಲವೂ ವಿಸ್ಮಯ ಹೊಂದಿ ಇಂದ್ರನ ಕಡೆ ಓಡಿದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನೇ ಸುಪರ್ಣಸ್ಯ
ಸುಪರ್ಣತ್ವಂ ನಾಮ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೈದನೆಯ ಅಧ್ಯಾಯ

ಕದ್ರುವನ್ನು ಮೆಚ್ಚಿಸಿ ಇಂದ್ರನಿಗೆ ಪುನಃ ಅಮೃತದ ಕಲಶವನ್ನು ಕೊಟ್ಟು ಇಂದ್ರನಿಂದ ಗರುಡನು ವರಪ್ರಾಪ್ತಿ.

ಭೀಷ್ಮಃ

ತತೋ ವಜ್ರಂ ಸಹಸ್ರಾಕ್ಷೋ ದೃಷ್ಟ್ವಾ ಸಕ್ತಂ ವರಾಯುಧಮ್ ।
ಋಷೀಂಶ್ಚ ದೃಷ್ಟ್ವಾ ಸಹಸಾ ಸುಪರ್ಣಮಿದಮಬ್ರವೀತ್ ॥೧॥

ಭೀಷ್ಮ– ಆಗ ಸಹಸ್ರಾಕ್ಷನಾದ ಇಂದ್ರನು ಶ್ರೇಷ್ಠವಾದ ತನ್ನ ಆಯುಧವಾದ ವಜ್ರವು ಗರುಡನ ಗರಿಯಲ್ಲಿ ಸಿಲುಕಿಕೊಂಡಿರುವುದನ್ನೂ ಮತ್ತು ಋಷಿಗಳನ್ನೂ ನೋಡಿ ಗರುಡನನ್ನು ಕುರಿತು ತಕ್ಷಣ ಮಾತನಾಡಿದನು.

ನ ತೇ ಸುಪರ್ಣ ಪಶ್ಯಾಮಿ ಪ್ರಭಾವಂ ತೇನ ಯೋಧಯೇ ।
ಇತ್ಯುಕ್ತೇ ನ ಮಯಾ ರಕ್ಷಾ ಶಕ್ಯಾ ಕರ್ತುಮತೋಽನ್ಯಥಾ ।
ಇದಂ ವಜ್ರಂ ಮಯಾ ಸಾರ್ಧಂ ನಿವೃತ್ತಂ ಹಿ ಯಥಾಗತಮ್ ॥೨॥

'ಎಲೈ ಗರುಡನೇ, ನಿನ್ನ ಪ್ರಭಾವವನ್ನು ನಾನು ತಿಳಿದಿಲ್ಲ. ಆದ್ದರಿಂದ ನಿನ್ನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದೇನೆ. ನಾನು ಬೇರೆ ಯಾವ ರೀತಿಯಲ್ಲಿಯೂ ಅಮೃತವನ್ನು ರಕ್ಷಿಸಲು ಸಾಧ್ಯವಿಲ್ಲ. ನಾನು ಮತ್ತು ವಜ್ರಾಯುಧವು ಬಂದಂತೆಯೇ ನಿವೃತ್ತಿಯನ್ನು ಹೊಂದುತ್ತಿದ್ದೇವೆ' (ಎಂದು ಹೇಳಿದನು).

ತತಃ ಸಹಸ್ರನಯನೇ ನಿವೃತ್ತೇ ಗರುಡಸ್ತಥಾ ।
ಕದ್ರೂಮಭ್ಯಗಮತ್ ತೂರ್ಣಮಮೃತಂ ಗೃಹ್ಯ ಭಾರತ ॥೩॥

ಎಲೈ ಭಾರತನೇ, ಇಂದ್ರನು ಹಿಂದಿರುಗುತ್ತಿರಲು, ಆಗ ಗರುಡನು ಅಮೃತ ಕಲಶವನ್ನು ತೆಗೆದುಕೊಂಡು ಶೀಘ್ರವಾಗಿ ಕದ್ರುವಿನ ಬಳಿಗೆ ಬಂದನು.

ಗರುಡಃ

ತದಾಹೃತಂ ಮಯಾ ಶೀಘ್ರಮಮೃತಂ ಜನನೀಕೃತೇ ।
ಅದಾಸೀ ಸಾ ಭವತ್ವದ್ಯ ವಿನತಾ ಧರ್ಮಚಾರಿಣೀ ॥೪॥

ಗರುಡ– 'ನಾನು ತಾಯಿಯ ಸಲುವಾಗಿ ಶೀಘ್ರವಾಗಿ ಅಮೃತವನ್ನು ತಂದಿದ್ದೇನೆ. ಧರ್ಮಚಾರಿಣಿಯಾದ, ನನ್ನ ತಾಯಿಯಾದ ವಿನತೆಯು ಈ ದಿನ ದಾಸ್ಯದಿಂದ ಬಿಡುಗಡೆಯನ್ನು ಹೊಂದಲಿ'.

ಕದ್ರೂಃ

ಸ್ವಾಗತಂ ಸ್ವಾಹೃತಂ ಚೇದಮಮೃತಂ ವಿನತಾತ್ಮಜ ।
ಅದಾಸೀ ಜನನೀ ತೇऽದ್ಯ ಪುತ್ರ ಕಾಮವಶಾ ಶುಭಾ ।
ಏವಮುಕ್ತೇ ತದಾ ಸಾ ಚ ಸಂಪ್ರಾಪ್ತಾ ವಿನತಾ ಗೃಹಮ್ ॥೫॥

ಕದ್ರೂ– 'ಎಲೈ ವಿನತೆಯ ಪುತ್ರನೇ, ನಿನಗೆ ಸ್ವಾಗತ. ಈ ಅಮೃತವನ್ನು ಚೆನ್ನಾಗಿ ತಂದಿದ್ದೀಯೆ. ಶುಭಳಾದ ನಿನ್ನ ತಾಯಿಯು ಈ ದಿನ ದಾಸ್ಯದಿಂದ ವಿಮೋಚನೆಯನ್ನು ಹೊಂದಿ, ತನ್ನ ಇಚ್ಛೆಯಂತೆ ನಡೆದುಕೊಳ್ಳುವಳು ಎಂದು ಕದ್ರುವು ಹೀಗೆ ಹೇಳುತ್ತಿರಲು ಆಗ ವಿನತೆಯು ತನ್ನ ಮನೆಗೆ ಹಿಂದಿರುಗಿದಳು.

ಉಪನೀಯ ಯಥಾನ್ಯಾಯಂ ವಿಹಗೋ ಬಲಿನಾಂವರಃ ।
ಸ್ಮೃತ್ವಾ ನಿಕೃತ್ಯಾ ವಿಜಯಂ ಮಾತುಃ ಸಂಪ್ರತಿಪದ್ಯ ಚ ॥೬॥

ವಧಂ ಚ ಭುಜಗೇಂದ್ರಾಣಾಂ ಯೇ ವಾಲಾಸ್ತಸ್ಯ ವಾಜಿನಃ ।
ಬಭೂವುರಸಿತಪ್ರಖ್ಯಾ ನಿಕೃತ್ಯಾ ವೈ ಜಿತಂ ತಯಾ ॥೭॥

ತಾಮುವಾಚ ತತೋ ನ್ಯಾಯ್ಯಂ ವಿಹಗೋ ಬಲಿನಾಂವರಃ ।
ಉಜ್ಜಹಾರಾಮೃತಂ ತೂರ್ಣಮುತ್ಪಪಾತ ಚ ರಂಹಸಾ ॥೮॥

ಬಲಿಷ್ಠರಲ್ಲಿ ಶ್ರೇಷ್ಠನಾದ ಗರುಡನು ನ್ಯಾಯದಂತೆಯೇ ಅಮೃತವನ್ನು ತಂದು, ತನ್ನ ತಾಯಿಯು ಮೋಸದಿಂದ ಪರಾಜಿತಳಾದುದನ್ನು ಕೇಳಿ, ಕಪ್ಪು ಬಣ್ಣವನ್ನು ಹೊಂದಿ ಕುದುರೆಯ ಬಾಲವನ್ನು ಸೇರಿದ ಸರ್ಪಗಳಿಗೆ ವಧೆಯ ಶಾಪವು ಬಂದಿರುವುದನ್ನು ಸ್ಮರಿಸಿ, ಕದ್ರುವನ್ನು ಕುರಿತು ಇಷ್ಟು ಮಾತುಗಳನ್ನು ಹೇಳಿ, ಪುನಃ ಅಮೃತದ ಕಲಶವನ್ನು ತೆಗೆದುಕೊಂಡು ಶೀಘ್ರವಾಗಿ ಮೇಲೆ ಹಾರಿದನು.

ತದ್ಗೃಹೀತ್ವಾऽಮೃತಂ ತೂರ್ಣಂ ಪ್ರಯಾಂತಮಪರಾಜಿತಮ್ ।
ಕದ್ರೂರ್ಭುಜಂಗಜನನೀ ಸುಪರ್ಣಮಿದಮಬ್ರವೀತ್ ॥೯॥

ಕಿಮರ್ಥಂ ವೈನತೇಯ ತ್ವಮಾಹೃತ್ಯಾಮೃತಮುತ್ತಮಮ್ ।
ಪುನರ್ಹರಸಿ ದುರ್ಬುದ್ಧೇ ಮಾ ಜಾತು ವೃಜಿನಂ ಕೃಥಾಃ ॥೧೦॥

ಅಮೃತಕಲಶವನ್ನು ತೆಗೆದುಕೊಂಡು ಶೀಘ್ರವಾಗಿ ಮೇಲೆ ಹಾರುತ್ತಿದ್ದ, ಅಪರಾಜಿತನಾದ ಗರುಡನನ್ನು ನೋಡಿ, ಸರ್ಪಮಾತೆಯಾದ ಕದ್ರುವು ಅವನನ್ನು ಕುರಿತು- 'ಎಲೈ ವಿನತಾ ಪುತ್ರನೇ, ದುರ್ಬುದ್ಧಿಯುಳ್ಳವನೇ, ತಂದಿರುವ ಅಮೃತವನ್ನು ಪುನಃ ಏಕೆ ತೆಗೆದುಕೊಂಡು ಹೋಗುತ್ತಿದ್ದೀಯೆ? ಎಂದೂ ಅಪರಾಧವನ್ನು ಮಾಡಬೇಡ' ಎಂದು ಹೇಳಿದಳು.

ಸುಪರ್ಣಃ

ಅಮೃತಾಹರಣಂ ಮೇऽದ್ಯ ಯತ್ಕೃತಂ ಜನನೀಕೃತೇ ।
ಭವತ್ಯಾ ವಚನಾದೇತದಾಹರಾಮೃತಮಿತ್ಯುತ ॥೧೧॥

ಗರುಡ– 'ನಾನು ಅಮೃತವನ್ನು ತೆಗೆದುಕೊಂಡು ಬಾ ಎಂಬ ನಿನ್ನ ಮಾತಿಗೆ ಅನುಸಾರವಾಗಿ ತಾಯಿಯ ಸಲುವಾಗಿ ಈ ದಿನ ಅಮೃತವನ್ನು ತಂದೆನು.

ಆಹೃತಂ ತದಿದಂ ಶೀಘ್ರಂ ಮುಕ್ತಾ ಚ ಜನನೀ ಮಮ ।
ಹರಾಮ್ಯೇಷ ಪುನಸ್ತತ್ರ ಯತ ಏತನ್ಮಯಾऽऽಹೃತಮ್ ॥೧೨॥

ಈ ಅಮೃತವನ್ನು ಶೀಘ್ರವಾಗಿ ತಂದಿದ್ದಾಯಿತು. ನನ್ನ ತಾಯಿಯೂ ದಾಸ್ಯದಿಂದ ಬಿಡುಗಡೆಯನ್ನು ಹೊಂದಿದಳು. ಈ ಅಮೃತವನ್ನು ನಾನು ಎಲ್ಲಿಂದ ತಂದೆನೋ ಅಲ್ಲಿಗೇ ಪುನಃ ತೆಗೆದುಕೊಂಡು ಹೋಗುತ್ತೇನೆ.

ಯದಿ ಮಾಂ ಭವತೀ ಬ್ರೂಯಾದಮೃತಂ ಮೇ ಚ ದೀಯತಾಮ್ ।
ತಥಾ ಕುರ್ಯಾಂ ನ ವಾ ಕುರ್ಯಾಂ ನ ಹಿ ತ್ವಮಮೃತಕ್ಷಮಾ ।
ಮಯಾ ಧರ್ಮೇಣ ಸತ್ಯೇನ ವಿನತಾ ಚ ಸಮುದ್ಧೃತಾ ॥೧೩॥

ನೀನು ಒಂದು ಪಕ್ಷ ನನಗೇ ಅಮೃತವನ್ನು ಕೊಡು ಎಂದು ಹೇಳಿದ್ದರೆ ಆಗ ಕೊಡುತ್ತಿದ್ದೆ ಅಥವಾ ಕೊಡುತ್ತಿರಲಿಲ್ಲ. ಏಕೆಂದರೆ ನೀನು ಅಮೃತಕ್ಕೆ ಯೋಗ್ಯಳಾದವಳಲ್ಲ. ನಾನು ಧರ್ಮದಿಂದಲೂ ಮತ್ತು ಸತ್ಯದಿಂದಲೂ ತಾಯಿಯನ್ನು ಬಿಡುಗಡೆಗೊಳಿಸಿದ್ದೇನೆ' (ಎಂದು ಹೇಳಿದನು).

ಭೀಷ್ಮಃ

ತತೋ ಗತ್ವಾಽಥ ಗರುಡಃ ಪುರಂದರಮುವಾಚ ಹ ।
ಇದಂ ಮಯಾ ವೃತ್ರಹಂತರ್ಹ್ಯತಂ ತೇಽಮೃತಮುತ್ತಮಮ್ ।
ಮಾತ್ರರ್ಥೇ ಹಿ ತಥೈವೇದಂ ಗೃಹಾಣಾಮೃತಮಾಹೃತಮ್ ॥೧೪॥

ಭೀಷ್ಮ– ಆಗ ಗರುಡನು ಪುರಂದರನ ಬಳಿಗೆ ಹೋಗಿ 'ಎಲೈ ವೃತ್ರಹಂತಕನೇ, ನಾನು ತಾಯಿಯ ಸಲುವಾಗಿ ತೆಗೆದುಕೊಂಡು ಹೋದ ಈ ಶ್ರೇಷ್ಠವಾದ ಅಮೃತವನ್ನು ಪುನಃ ಹಾಗೆಯೇ ತಂದಿದ್ದೇನೆ. ಇದನ್ನು ಸ್ವೀಕರಿಸು' ಎಂದು ಹೇಳಿದನು.

ಮಾತಾ ಚ ಮಮ ದೇವೇಶ ದಾಸೀತ್ವಮುಪಜಗ್ಮುಷೀ ।
ಭುಜಂಗಮಾನಾಂ ಮಾತುರ್ವೈ ಸಾ ಮುಕ್ತಾಽಮೃತದರ್ಶನಾತ್ ॥೧೫॥

'ಎಲೈ ದೇವೇಶನೇ, ನನ್ನ ತಾಯಿಯು ಸರ್ಪಮಾತೆಯಾದ ಕದ್ರುವಿಗೆ ದಾಸಿಯಾಗಿದ್ದಳು. ಕದ್ರುವಿನ ಅಮೃತದರ್ಶನದಿಂದ ಅವಳು ಬಿಡುಗಡೆಯನ್ನು ಹೊಂದಿದಳು' (ಎಂದು ಹೇಳಿದನು).

ಏತಚ್ಛ್ರುತ್ವಾ ಸಹಸ್ರಾಕ್ಷಃ ಸುಪರ್ಣಮನುಮನ್ಯತೇ ।
ಉವಾಚ ಚ ಮುದಾ ಯುಕ್ತೋ ದಿಷ್ಟ್ಯಾ ದಿಷ್ಟ್ಯೇತಿ ವಾಸವಃ ॥೧೬॥

ಇದನ್ನು ಕೇಳಿದ ಇಂದ್ರನು ಗರುಡನನ್ನು ಗೌರವಿಸಿ ಸಂತೋಷಗೊಂಡವನಾಗಿ 'ದೇವರ ದಯದಿಂದ ಅಮೃತವು ಹಿಂದೆ ಬಂದಿತು' ಎಂದು ಹೇಳಿದನು.

ಋಷಯೋ ಯೇ ಸಹಸ್ರಾಕ್ಷಮುಪಾಸಂತಿ ಸುರೈಃ ಸಹ ।
ತೇ ಸರ್ವೇ ಚ ಮುದಾ ಯುಕ್ತಾ ವಿಶ್ವೇದೇವಾಸ್ತಥೈವ ಚ ॥೧೭॥

ಋಷಿಗಳು ದೇವತೆಗಳ ಜೊತೆಯಲ್ಲಿ ಇಂದ್ರನನ್ನು ಸ್ತೋತ್ರ ಮಾಡಿದರು. ಅವರೆಲ್ಲರೂ ಮತ್ತು ವಿಶ್ವೇದೇವತೆಗಳೂ ಸಂತೋಷಗೊಂಡರು.

ತತಸ್ತಮೃಷಯಃ ಸರ್ವೇ ದೇವಾಶ್ಚ ಭರತರ್ಷಭ ।
ಊಚುಃ ಪುರಂದರಂ ಹೃಷ್ಟಾ ಗರುಡೋ ಲಭತಾಂ ವರಮ್ ॥೧೮॥

ಎಲೈ ಭರತಶ್ರೇಷ್ಠನೇ, ಆಗ ಎಲ್ಲ ದೇವತೆಗಳು ಮತ್ತು ಋಷಿಗಳು ಸಂತೋಷಗೊಂಡು ಇಂದ್ರನನ್ನು ಕುರಿತು 'ಗರುಡನಿಗೆ ವರವನ್ನು ಕೊಡು' ಎಂದು ಹೇಳಿದರು.

ತತಃ ಶಚೀಪತಿರ್ವಾಕ್ಯಮುವಾಚ ಪ್ರಹಸನ್ನಿವ ।
ಜನಿಷ್ಯತಿ ಹೃಷೀಕೇಶಃ ಸ್ವಯಮೇವೈಷ ಪಕ್ಷಿರಾಟ್ ॥೧೯॥

ಕೇಶವಃ ಪುಂಡರೀಕಾಕ್ಷಃ ಶೂರಪುತ್ರಸ್ಯ ವೇಶ್ಮನಿ ।
ಸ್ವಯಂ ಧರ್ಮಸ್ಯ ರಕ್ಷಾರ್ಥಂ ವಿಭಜ್ಯ ಭುಜಗಾಶನ ॥೨೦॥

ಆಗ ಶಚೀಪತಿಯು ನಗುತ್ತಾ ಅವನನ್ನು ಕುರಿತು– 'ಹೃಷೀಕೇಶನು ಸ್ವತಃ ಈ ಪಕ್ಷಿರಾಜನಾಗಿ ಜನಿಸುತ್ತಾನೆ (ಗರುಡನಲ್ಲಿ ಸನ್ನಿಹಿತನಾದ ವಿಷ್ಣುವು ಸ್ವತಃ ಅವತರಿಸುತ್ತಾನೆ). ಪುಂಡರೀಕಾಕ್ಷನಾದ ಕೇಶವನು ಶೂರಪುತ್ರನಾದ ವಸುದೇವನ ಪತ್ನಿಯಲ್ಲಿ ಧರ್ಮದ ರಕ್ಷಣೆಗಾಗಿ ಸ್ವತಃ ಅವತಾರವನ್ನು ಮಾಡುವನು (ಎಂದು ಹೇಳಿದನು) (ಲಕ್ಷಾಲಂಕಾರ).

ಭೀಷ್ಮಃ

ಏಷ ತೇ ಪಾಂಡವಶ್ರೇಷ್ಠ ಗರುಡೋऽಥ ಪತತ್ರಿರಾಟ್ ।
ಸುಪರ್ಣೋ ವೈನತೇಯಶ್ಚ ಕೀರ್ತಿತೋ ಭದ್ರಮಸ್ತು ತೇ ॥೨೧॥

ಭೀಷ್ಮ– 'ಎಲೈ ಪಾಂಡವಶ್ರೇಷ್ಠನೇ, ಪಕ್ಷಿರಾಜನಾದ ವಿನತಾಪುತ್ರನಾದ ಗರುಡನು ಹೇಗೆ ಒಳ್ಳೆಯ ರೆಕ್ಕೆಯುಳ್ಳವನಾದನು ಎಂದು ನಿನಗೆ ಹೇಳಿದ್ದೇನೆ. ನಿನಗೆ ಮಂಗಳವಾಗಲಿ'.

ತದೇತದ್ ದದತಾಂ ಶ್ರೇಷ್ಠ ಮಯಾSSಖ್ಯಾನಂ ಪ್ರಕೀರ್ತಿತಮ್ ।
ಸುಪರ್ಣಸ್ಯ ಮಹಾಬಾಹೋ ಕಿಂ ಭೂಯಃ ಕಥಯಾಮಿ ತೇ ॥೨೨॥

ಎಲೈ ದಾನಿಶ್ರೇಷ್ಠನೇ, ನಿನಗೆ ಗರುಡನ ಈ ಉಪಾಖ್ಯಾನವನ್ನು ಹೇಳಿದ್ದೇನೆ. ಎಲೈ ಮಹಾಬಾಹುವೇ, ಪುನಃ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನೇ
ಸುಪರ್ಣವರಾಭೋ ನಾಮ ಪಂಚವಿಂಶೋSಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

॥ ಸೌಪರ್ಣಂ ಸಮಾಪ್ತಮ್ ॥

★ ★ ★ ★ ★

ಇಪ್ಪತ್ತಾರನೆಯ ಅಧ್ಯಾಯ

ವಾಗ್ದಾನವನ್ನು ಮಾಡಿದುದನ್ನು ಕೊಡಲೇಬೇಕೆಂಬ ನಿಯಮ

ಯುಧಿಷ್ಠಿರಃ

ಬ್ರಾಹ್ಮಣಾನಾಂ ತು ಯೇ ಲೋಕೇ ಪ್ರತಿಶ್ರುತ್ಯ ಪಿತಾಮಹ ।
ನ ಪ್ರಯಚ್ಛಂತಿ ಮೋಹಾತ್ ತೇ ಕೇ ಭವಂತಿ ಮಹಾಮತೇ ॥೧॥

ಏತನ್ಮೇ ತತ್ತ್ವತೋ ಬ್ರೂಹಿ ಧರ್ಮಂ ಧರ್ಮಭೃತಾಂ ವರ ।
ಪ್ರತಿಶ್ರುತ್ಯ ದುರಾತ್ಮಾನೋ ನ ಪ್ರಯಚ್ಛಂತಿ ಯೇ ನರಾಃ ॥೨॥

ಯುಧಿಷ್ಠಿರ– ಪಿತಾಮಹನೇ, ಮಹಾಮತಿಯೇ, ಧರ್ಮಿಷ್ಠರಲ್ಲಿ ಶ್ರೇಷ್ಠರಾದವನೇ, ಲೋಕದಲ್ಲಿ ದುರಾತ್ಮರಾದ ಯಾರು ಬ್ರಾಹ್ಮಣರಿಗೆ ದಾನ ಮಾಡುತ್ತೇವೆಂದು ಪ್ರತಿಜ್ಞೆಯನ್ನು ಮಾಡಿ ಮೋಹದಿಂದ ದಾನ ಮಾಡುವುದಿಲ್ಲವೋ ಅವರಿಗೆ ಮುಂದೆ ಏನಾಗುತ್ತದೆ? ಇದನ್ನು ನನಗೆ ಯಥಾರ್ಥವಾಗಿ ತಿಳಿಸಿ.

ಭೀಷ್ಮಃ

ಯೋ ನ ದದ್ಯಾತ್ ಪ್ರತಿಶ್ರುತ್ಯ ಸ್ವಲ್ಪಂ ವಾ ಯದಿ ವಾ ಬಹು ।
ಆಶಾಸ್ತಸ್ಯ ಹತಾಃ ಸರ್ವಾಃ ಕ್ಲೀಬಸ್ಯೇವ ಪ್ರಜಾಫಲಮ್ ॥೩॥

ಭೀಷ್ಮ– ಯಾವನು ಅಲ್ಪವನ್ನಾಗಲೀ, ಬಹಳವನ್ನಾಗಲೀ ದಾನ ಮಾಡುವೆನೆಂದು ಪ್ರತಿಜ್ಞೆಯನ್ನು ಮಾಡಿ ದಾನ ಮಾಡುವುದಿಲ್ಲವೋ ಅವನ ಎಲ್ಲ ಆಸೆಗಳೂ ನಪುಂಸಕನ ಪುತ್ರಾಸೆಯಂತೆ ನಾಶವನ್ನು ಹೊಂದುತ್ತವೆ.

ಯಾಂ ರಾತ್ರಿಂ ಜಾಯತೇ ಪಾಪೋ ಯಾಂ ಚ ರಾತ್ರಿಂ ವಿನಶ್ಯತಿ ।
ಏತಸ್ಮಿನ್ನಂತರೇ ಯದ್ಯತ್ಸುಕೃತಂ ತಸ್ಯ ಭಾರತ ।
ಯಚ್ಚ ತಸ್ಯ ಹುತಂ ಕಿಂಚಿತ್ ಸರ್ವಂ ತಸ್ಯೋಪಹನ್ಯತೇ ॥೪॥

ಮನುಷ್ಯನು ಯಾವ ದಿವಸದಲ್ಲಿ ಜನಿಸಿ, ಯಾವ ದಿವಸದಲ್ಲಿ ಮರಣವನ್ನು ಹೊಂದುತ್ತಾನೋ, ಎಲೈ ಭಾರತನೇ, ಈ ಮಧ್ಯದಲ್ಲಿ ಅವನು ಮಾಡಿದ ಹೋಮ ಮೊದಲಾದ ಸುಕೃತವೆಲ್ಲವೂ ನಾಶವನ್ನು ಹೊಂದುತ್ತವೆ.

ತಪಸ್ತಪ್ತಮಥೋ ವಾಪಿ ಪ್ರಾಹುರ್ಧರ್ಮಶಾಸ್ತ್ರವಿದೋ ಜನಾಃ ।
ನಿಶಮ್ಯ ಭರತಶ್ರೇಷ್ಠ ಬುದ್ಧ್ಯಾ ಪರಮಯುಕ್ತಯಾ ॥೫॥

ಮಾಡಿದ ತಪಸ್ಸೂ ಸಹ ನಾಶವನ್ನು ಹೊಂದುವುದೆಂದು ಧರ್ಮಶಾಸ್ತ್ರವನ್ನು ತಿಳಿದ ಜನರು ಹೇಳುತ್ತಾರೆ. ಎಲೈ ಭರತಶ್ರೇಷ್ಠನೇ, ಇದನ್ನು ಕೇಳಿ ಶ್ರೇಷ್ಠವಾದ ಬುದ್ಧಿಯನ್ನು ಹೊಂದಿ ವಾಗ್ದಾನ ಮಾಡಿದುದನ್ನು ದಾನ ಮಾಡಬೇಕು.

ಅಪಿ ಚೋದಾಹರಂತೀಮಂ ಧರ್ಮಶಾಸ್ತ್ರವಿದೋ ಜನಾಃ ।
ಅಶ್ವಾನಾಂ ಶ್ಯಾಮಕರ್ಣಾನಾಂ ಸಹಸ್ರೇಣ ಸ ಮುಚ್ಯತೇ ॥೬॥

ಧರ್ಮಶಾಸ್ತ್ರವನ್ನು ತಿಳಿದ ಜನರು ಈ ವಿಷಯದಲ್ಲಿ ಕಪ್ಪು ಕಿವಿಯನ್ನು ಹೊಂದಿರುವ ಸಹಸ್ರ ಅಶ್ವಗಳನ್ನು ದಾನ ಮಾಡಿದರೆ ಆ ಪಾಪದಿಂದ ಬಿಡುಗಡೆಯನ್ನು ಹೊಂದುತ್ತಾನೆ ಎಂದು ಹೇಳುತ್ತಾರೆ.

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ಸೃಗಾಲಸ್ಯ ಚ ಸಂವಾದಂ ವಾನರಸ್ಯ ಚ ಭಾರತ ॥೭॥

ಎಲೈ ಭಾರತನೇ, ಇದೇ ವಿಷಯದಲ್ಲಿ ಹಿಂದೆ ಒಂದು ನರಿಗೂ ಮತ್ತು ಕಪಿಗೂ ನಡೆದ ಸಂವಾದ ರೂಪವಾದ ಈ ಇತಿಹಾಸವನ್ನು ಜ್ಞಾನಿಗಳು ಹೇಳುತ್ತಾರೆ.

ತದೇತದ್ ದದತಾಂ ಶ್ರೇಷ್ಠ ಮಯಾऽऽಖ್ಯಾನಂ ಪ್ರಕೀರ್ತಿತಮ್ ।
ಸುಪರ್ಣಸ್ಯ ಮಹಾಬಾಹೋ ಕಿಂ ಭೂಯಃ ಕಥಯಾಮಿ ತೇ ॥೨೨॥

ಎಲೈ ದಾನಿಶ್ರೇಷ್ಠನೇ, ನಿನಗೆ ಗರುಡನ ಈ ಉಪಾಖ್ಯಾನವನ್ನು ಹೇಳಿದ್ದೇನೆ. ಎಲೈ ಮಹಾಬಾಹುವೇ, ಪುನಃ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಗರುಡೋಪಾಖ್ಯಾನೇ
ಸುಪರ್ಣವರಾಭೋ ನಾಮ ಪಂಚವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

॥ ಸೌಪರ್ಣಂ ಸಮಾಪ್ತಮ್ ॥

★ ★ ★ ★ ★

ಇಪ್ಪತ್ತಾರನೆಯ ಅಧ್ಯಾಯ

ವಾಗ್ದಾನವನ್ನು ಮಾಡಿದುದನ್ನು ಕೊಡಲೇಬೇಕೆಂಬ ನಿಯಮ

ಯುಧಿಷ್ಠಿರಃ

ಬ್ರಾಹ್ಮಣಾನಾಂ ತು ಯೇ ಲೋಕೇ ಪ್ರತಿಶ್ರುತ್ಯ ಪಿತಾಮಹ ।
ನ ಪ್ರಯಚ್ಛಂತಿ ಮೋಹಾತ್ ತೇ ಕೇ ಭವಂತಿ ಮಹಾಮತೇ ॥೧॥

ಏತನ್ಮೇ ತತ್ತ್ವತೋ ಬ್ರೂಹಿ ಧರ್ಮಂ ಧರ್ಮಭೃತಾಂ ವರ ।
ಪ್ರತಿಶ್ರುತ್ಯ ದುರಾತ್ಮಾನೋ ನ ಪ್ರಯಚ್ಛಂತಿ ಯೇ ನರಾಃ ॥೨॥

ಯುಧಿಷ್ಠಿರ– ಪಿತಾಮಹನೇ, ಮಹಾಮತಿಯೇ, ಧರ್ಮಿಷ್ಠರಲ್ಲಿ ಶ್ರೇಷ್ಠರಾದವನೇ, ಲೋಕದಲ್ಲಿ ದುರಾತ್ಮರಾದ ಯಾರು ಬ್ರಾಹ್ಮಣರಿಗೆ ದಾನ ಮಾಡುತ್ತೇವೆಂದು ಪ್ರತಿಜ್ಞೆಯನ್ನು ಮಾಡಿ ಮೋಹದಿಂದ ದಾನ ಮಾಡುವುದಿಲ್ಲವೋ ಅವರಿಗೆ ಮುಂದೆ ಏನಾಗುತ್ತದೆ? ಇದನ್ನು ನನಗೆ ಯಥಾರ್ಥವಾಗಿ ತಿಳಿಸಿ.

ಭೀಷ್ಮಃ

ಯೋ ನ ದದ್ಯಾತ್ ಪ್ರತಿಶ್ರುತ್ಯ ಸ್ವಲ್ಪಂ ವಾ ಯದಿ ವಾ ಬಹು ।
ಆಶಾಸ್ತಸ್ಯ ಹತಾಃ ಸರ್ವಾಃ ಕ್ಲೀಬಸ್ಯೇವ ಪ್ರಜಾಫಲಮ್ ॥೩॥

ಭೀಷ್ಮ– ಯಾವನು ಅಲ್ಪವನ್ನಾಗಲೀ, ಬಹಳವನ್ನಾಗಲೀ ದಾನ ಮಾಡುವೆನೆಂದು ಪ್ರತಿಜ್ಞೆಯನ್ನು ಮಾಡಿ ದಾನ ಮಾಡುವುದಿಲ್ಲವೋ ಅವನ ಎಲ್ಲ ಆಸೆಗಳೂ ನಪುಂಸಕನ ಪುತ್ರಾಸೆಯಂತೆ ನಾಶವನ್ನು ಹೊಂದುತ್ತವೆ.

ಯಾಂ ರಾತ್ರಿಂ ಜಾಯತೇ ಪಾಪೋ ಯಾಂ ಚ ರಾತ್ರಿಂ ವಿನಶ್ಯತಿ ।
ಏತಸ್ಮಿನ್ನಂತರೇ ಯದ್ಯತ್ಸುಕೃತಂ ತಸ್ಯ ಭಾರತ ।
ಯಚ್ಚ ತಸ್ಯ ಹುತಂ ಕಿಂಚಿತ್ ಸರ್ವಂ ತಸ್ಯೋಪಹನ್ಯತೇ ॥೪॥

ಮನುಷ್ಯನು ಯಾವ ದಿವಸದಲ್ಲಿ ಜನಿಸಿ, ಯಾವ ದಿವಸದಲ್ಲಿ ಮರಣವನ್ನು ಹೊಂದುತ್ತಾನೋ, ಎಲೈ ಭಾರತನೇ, ಈ ಮಧ್ಯದಲ್ಲಿ ಅವನು ಮಾಡಿದ ಹೋಮ ಮೊದಲಾದ ಸುಕೃತವೆಲ್ಲವೂ ನಾಶವನ್ನು ಹೊಂದುತ್ತವೆ.

ತಪಸ್ತಪ್ತಮಥೋ ವಾಪಿ ಪ್ರಾಹುರ್ಧರ್ಮಶಾಸ್ತ್ರವಿದೋ ಜನಾಃ ।
ನಿಶಮ್ಯ ಭರತಶ್ರೇಷ್ಠ ಬುದ್ಧ್ಯಾ ಪರಮಯುಕ್ತಯಾ ॥೫॥

ಮಾಡಿದ ತಪಸ್ಸೂ ಸಹ ನಾಶವನ್ನು ಹೊಂದುವುದೆಂದು ಧರ್ಮಶಾಸ್ತ್ರವನ್ನು ತಿಳಿದ ಜನರು ಹೇಳುತ್ತಾರೆ. ಎಲೈ ಭರತಶ್ರೇಷ್ಠನೇ, ಇದನ್ನು ಕೇಳಿ ಶ್ರೇಷ್ಠವಾದ ಬುದ್ಧಿಯನ್ನು ಹೊಂದಿ ವಾಗ್ದಾನ ಮಾಡಿದುದನ್ನು ದಾನ ಮಾಡಬೇಕು.

ಅಪಿ ಚೋದಾಹರಂತೀಮಂ ಧರ್ಮಶಾಸ್ತ್ರವಿದೋ ಜನಾಃ ।
ಅಶ್ವಾನಾಂ ಶ್ಯಾಮಕರ್ಣಾನಾಂ ಸಹಸ್ರೇಣ ಸ ಮುಚ್ಯತೇ ॥೬॥

ಧರ್ಮಶಾಸ್ತ್ರವನ್ನು ತಿಳಿದ ಜನರು ಈ ವಿಷಯದಲ್ಲಿ ಕಪ್ಪು ಕಿವಿಯನ್ನು ಹೊಂದಿರುವ ಸಹಸ್ರ ಅಶ್ವಗಳನ್ನು ದಾನ ಮಾಡಿದರೆ ಆ ಪಾಪದಿಂದ ಬಿಡುಗಡೆಯನ್ನು ಹೊಂದುತ್ತಾನೆ ಎಂದು ಹೇಳುತ್ತಾರೆ.

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ಸೃಗಾಲಸ್ಯ ಚ ಸಂವಾದಂ ವಾನರಸ್ಯ ಚ ಭಾರತ ॥೭॥

ಎಲೈ ಭಾರತನೇ, ಇದೇ ವಿಷಯದಲ್ಲಿ ಹಿಂದೆ ಒಂದು ನರಿಗೂ ಮತ್ತು ಕಪಿಗೂ ನಡೆದ ಸಂವಾದ ರೂಪವಾದ ಈ ಇತಿಹಾಸವನ್ನು ಜ್ಞಾನಿಗಳು ಹೇಳುತ್ತಾರೆ.

ತೌ ಸಖಾಯೌ ಪುರಾ ಹ್ಯಾಸ್ತಾಂ ಮಾನುಷತ್ವೇ ಪರಂತಪ ।
ಅನ್ಯಾಂ ಯೋನಿಂ ಸಮಾಪನ್ನೌ ಸಾರ್ಗಾಲೀಂ ವಾನರೀಂ ತಥಾ ॥೮॥

ಪುರಾಸಖಾಯಂ ಖಾದಂತಂ ಸೃಗಾಲಂ ವಾನರೋಽಬ್ರವೀತ್ ।
ಶ್ಮಶಾನಮಧ್ಯೇ ಸಂಪ್ರೇಕ್ಷ್ಯ ಪೂರ್ವಜಾತಿಮನುಸ್ಮರನ್ ॥೯॥

ಎಲೈ ಪರಂತಪನೇ, ಅವೆರಡೂ ಹಿಂದಿನ ಜನ್ಮದಲ್ಲಿ ಮನುಷ್ಯರಾಗಿ ಸ್ನೇಹಿತರಾಗಿದ್ದವು. ಅನಂತರ ಒಬ್ಬನು ನರಿಯೋನಿಯನ್ನು, ಇನ್ನೊಬ್ಬನು ಕಪಿ ಯೋನಿಯನ್ನು ಹೊಂದಿದರು. ಕಪಿಯು ತನ್ನ ಪೂರ್ವಜನ್ಮ ಸ್ನೇಹಿತನಾದ ನರಿಯು ಸ್ಮಶಾನದ ಮಧ್ಯದಲ್ಲಿ ತಿನ್ನುತ್ತಿರುವುದನ್ನು ನೋಡಿ ಹಿಂದಿನ ಜನ್ಮವನ್ನು ಸ್ಮರಿಸಿ ಮಾತನಾಡಿತು.

ಕಿಂ ತ್ವಯಾ ಪಾಪ(ತ)ಕಂ ಕರ್ಮ ಕೃತಂ ಪೂರ್ವಂ ಸುದಾರುಣಮ್ ।
ಯಸ್ತ್ವಂ ಶ್ಮಶಾನೇ ಮೃತಕಾನ್ ಪೂತಿಕಾನತ್ಸಿ ಕುತ್ಸಿತಾನ್ ॥೧೦॥

ನೀನು ಸ್ಮಶಾನದಲ್ಲಿ ಸತ್ತು, ಕೊಳೆತು ಕೆಟ್ಟದಾದ ಶವಗಳನ್ನು ತಿನ್ನುತ್ತಿದ್ದೀಯೆ. ನೀನು ಪೂರ್ವಜನ್ಮದಲ್ಲಿ ಅಂತಹ ಅತ್ಯಂತ ದಾರುಣವಾದ ಯಾವ ಪಾಪವನ್ನು ಮಾಡಿದೆ?

ಏವಮುಕ್ತಃ ಪ್ರತ್ಯುವಾಚ ಸೃಗಾಲೋ ವಾನರಂ ತದಾ ।
ಬ್ರಾಹ್ಮಣಸ್ಯ ಪ್ರತಿಶ್ರುತ್ಯ ನ ಮಯಾ ತದುಪಾಕೃತಮ್ ॥೧೧॥

ಹೀಗೆ ಹೇಳಲ್ಪಟ್ಟ ನರಿಯು ಆ ಕಪಿಯನ್ನು ಕುರಿತು 'ನಾನು ಬ್ರಾಹ್ಮಣನಿಗೆ ವಾಗ್ದಾನವನ್ನು ಮಾಡಿ ಅದನ್ನು ಕೊಡಲಿಲ್ಲ' ಎಂದು ಹೇಳಿತು.

ತತ್ಕೃತೇ ಪಾಪಿಕಾಂ ಯೋನಿಮಾಪನ್ನೋಽಸ್ಮಿ ಪ್ಲವಂಗಮ ।
ತಸ್ಮಾದೇವಂವಿಧಂ ಭಕ್ಷ್ಯಂ ಭಕ್ಷಯಾಮಿ ಬುಭುಕ್ಷಿತಃ ॥೧೨॥

'ಎಲೈ ಕಪಿಯೇ, ಆ ಕಾರಣದಿಂದ ನಾನು ಈ ಪಾಪಯೋನಿಯಲ್ಲಿ ಜನಿಸಿದ್ದೇನೆ. ಆದ್ದರಿಂದ ಹಸಿವಿನಿಂದ ಬಳಲಿ, ಇಂತಹ ಕೆಟ್ಟ ಆಹಾರವನ್ನು ತಿನ್ನುತ್ತಿದ್ದೇನೆ' (ಎಂದು ಹೇಳಿತು).

ಭೀಷ್ಮಃ

ಸೃಗಾಲೋ ವಾನರಂ ಪ್ರಾಹ ಪುನರೇವ ನೃಪೋತ್ತಮ ।
ಕಿಂ ತ್ವಯಾ ಪಾತಕಂ ಕರ್ಮ ಕೃತಂ ಯೇನಾಸಿ ವಾನರಃ ॥೧೩॥

ಭೀಷ್ಮ– ಎಲೈ ರಾಜನೇ, ನರಿಯು ಪುನಃ ಕಪಿಯನ್ನು ಕುರಿತು 'ನೀನು ಕಪಿಯಾಗುವಂತಹ ಯಾವ ಪಾಪವನ್ನು ಮಾಡಿದೆ' ಎಂದು ಕೇಳಿತು.

ಸ ಚಾಪ್ಯಾಹ ಬ್ರಾಹ್ಮಣಾನಾಂ ಫಲಾಹಾರಂ ಪ್ಲವಂಗಮಃ ।
ತಸ್ಮಾನ್ನ ಬ್ರಾಹ್ಮಣಸ್ವಂ ತು ಹರ್ತವ್ಯಂ ವಿದುಷಾ ಸದಾ ।
ಸೀಮಾವಿವಾದೇ ಮೋಕ್ತವ್ಯಂ ದಾತವ್ಯಂ ಚ ಪ್ರತಿಶ್ರುತಮ್ ॥೧೪॥

ಆ ಕಪಿಯಾದರೂ 'ನಾನು ಬ್ರಾಹ್ಮಣರ ಹಣ್ಣುಗಳನ್ನು ಅಪಹರಿಸಿದೆ' ಎಂದು ಹೇಳಿತು. ಆದ್ದರಿಂದ ವಿವೇಕಿಯಾದವನು ಬ್ರಾಹ್ಮಣರ ಸ್ವತ್ತನ್ನು ಎಂದೂ ಅಪಹರಿಸಬಾರದು. ಭೂಮಿಯ ಗಡಿಯ ವಿವಾದವು ಬಂದರೆ ಬ್ರಾಹ್ಮಣನಿಗೆ ಬಿಟ್ಟುಕೊಡಬೇಕು ಮತ್ತು ವಾಗ್ದಾನ ಮಾಡಿದುದನ್ನು ಕೊಡಬೇಕು.

ಇತ್ಯೇತದ್ ಬ್ರುವತೋ ರಾಜನ್ ಬ್ರಾಹ್ಮಣಸ್ಯ ಮಯಾ ಶ್ರುತಮ್ ।
ಕಥಾಂ ಕಥಯತಃ ಪುಣ್ಯಾಂ ಧರ್ಮಜ್ಞಸ್ಯ ಪುರಾತನೀಮ್ ॥೧೫॥

ಎಲೈ ರಾಜನೇ, ಹಿಂದೆ ಧರ್ಮಜ್ಞನಾದ ಬ್ರಾಹ್ಮಣನೊಬ್ಬನು ಪವಿತ್ರವಾದ ಕಥೆಗಳನ್ನು ಹೇಳುತ್ತಿದ್ದಾಗ ನಾನು ಈ ವಿಷಯವನ್ನು ಕೇಳಿದೆನು.

ಶ್ರುತಂ ಚಾಪಿ ಮಯಾ ಭೂಯಃ ಕೃಷ್ಣಸ್ಯಾಪಿ ವಿಶಾಂಪತೇ ।
ಕಥಾಂ ಕಥಯತಃ ಪೂರ್ವಂ ಬ್ರಾಹ್ಮಣಂ ಪ್ರತಿ ಪಾಂಡವ ॥೧೬॥

ಎಲೈ ಪಾಂಡವನೇ, ಮತ್ತು ಪುನಃ ಕೃಷ್ಣನ ಕಥೆಯನ್ನು ಕೇಳುವಾಗಲೂ ನಾನು ಬ್ರಾಹ್ಮಣರ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂದು ತಿಳಿದೆನು.

ಏವಮೇವ ಚ ಮಾಂ ನಿತ್ಯಂ ಬ್ರಾಹ್ಮಣಾಃ ಸಂದಿಶಂತಿ ವೈ ।
ಪ್ರತಿಶ್ರುತ್ಯ ಭವೇದ್ ದೇಯಂ ನಾಶಾ ಕಾರ್ಯಾ ಹಿ ಬ್ರಾಹ್ಮಣೈಃ ॥೧೭॥

ಬ್ರಾಹ್ಮಣರಿಗೆ ಆಸೆಯನ್ನು ಉಂಟುಮಾಡಿದ ಮೇಲೆ ಅದನ್ನು ಅವರಿಗೆ ಕೊಡಲೇಬೇಕು. ಕೇವಲ ಆಸೆಯನ್ನು ಹುಟ್ಟಿಸಬಾರದು ಎಂದು ಬ್ರಾಹ್ಮಣರು ನನಗೆ ಯಾವಾಗಲೂ ಸಂದೇಶವನ್ನು ಕೊಡುತ್ತಾರೆ.

ಬ್ರಾಹ್ಮಣೋ ಹ್ಯಾಶಯಾ ಪೂರ್ವಂ ಕೃತಯಾ ಪೃಥಿವೀಪತೇ ।
ಸುಸಮಿದ್ಧೋ ಯಥಾ ದೀಪ್ತಃ ಪಾವಕಸ್ತದ್ವಿಧಃ ಸ್ಮೃತಃ ॥೧೮॥

ಮೊದಲು ವಾಗ್ದಾನವನ್ನು ಮಾಡಿ ಬ್ರಾಹ್ಮಣನಿಗೆ ಆಸೆಯನ್ನು ಹುಟ್ಟಿಸಿದರೆ ಅಂತಹ ಬ್ರಾಹ್ಮಣನು ಜ್ವಲಿಸುವ ಅಗ್ನಿ ಇದ್ದಂತೆ.

ಯಂ ನಿರೀಕ್ಷೇತ ಸಂಕ್ರುದ್ಧ ಆಶಯಾ ಪೂರ್ವಜಾತಯಾ ।
ಪ್ರದಹೇತ ಹಿ ತಂ ರಾಜನ್ ಕಕ್ಷಮಕ್ಷಯ್ಯಭುಗ್ಯಥಾ ॥೧೯॥

ಮೊದಲು ಉಂಟುಮಾಡಿದ ಆಸೆಯಿಂದ ಬ್ರಾಹ್ಮಣನು ಯಾವ ವಸ್ತುವನ್ನು ನೋಡುತ್ತಾನೆಯೋ ಎಲೈ ರಾಜನೇ, ಅವನು ಅದನ್ನು ಅಗ್ನಿಯು ಹುಲ್ಲುಗಾವಲನ್ನು ಸುಡುವಂತೆ ಸುಡುತ್ತಾನೆ.

ಸ ಏವ ಹಿ ಯದಾ ತುಷ್ಟೋ ವಚಸಾ ಪ್ರತಿನಂದತಿ ।
ಭವತ್ಯಗದಸಂಕಾಶೋ ವಿಷಯೇ ತಸ್ಯ ಭಾರತ ॥೨೦॥

ಎಲೈ ಭಾರತನೇ, ಅದೇ ಬ್ರಾಹ್ಮಣನು ವಾಗ್ದಾನ ಮಾಡಿದ ದಾನವನ್ನು ಪಡೆದು, ಸಂತುಷ್ಟನಾಗಿ ಒಳ್ಳೆಯ ಮಾತುಗಳನ್ನಾಡಿದರೆ ಆ ರಾಜನ ರಾಜ್ಯದಲ್ಲಿ ಅವನು ದೊಡ್ಡ ಔಷಧಿಯಂತೆ ಆಗುತ್ತಾನೆ.

ಪುತ್ರಾನ್ ಪೌತ್ರಾನ್ ಪಶೂಂಶ್ಚೈವ ಬಾಂಧವಾನ್ ಸಚಿವಾಂಸ್ತಥಾ ।
ಪುರಂ ಜನಪದಂ ಚೈವ ಶಾಂತಿರಿಷ್ಟೇವ ಪುಷ್ಯತಿ ॥೨೧॥

ಅವನು ಶಾಂತಿಕರ್ಮವನ್ನು ಮಾಡಿದವನಂತೆ ಆ ರಾಜನ ಪುತ್ರರನ್ನೂ, ಪೌತ್ರರನ್ನೂ, ಬಾಂಧವರನ್ನೂ, ಸಚಿವರನ್ನೂ, ರಾಜಧಾನಿಯನ್ನೂ, ದೇಶವನ್ನೂ ಅಭಿವೃದ್ಧಿಗೊಳಿಸುತ್ತಾನೆ.

ಏತದ್ಧಿ ಪರಮಂ ತೇಜೋ ಬ್ರಾಹ್ಮಣಸ್ಯೇಹ ದೃಶ್ಯತೇ ।
ಸಹಸ್ರಕಿರಣಸ್ಯೇವ ಸವಿತುರ್ಧರಣೀತಳೇ ॥೨೨॥

ಸಹಸ್ರ ಕಿರಣನಾದ ಸೂರ್ಯನ ತೇಜಸ್ಸು ಭೂತಳದಲ್ಲಿ ಕಂಡುಬರುವಂತೆ ಬ್ರಾಹ್ಮಣನ ಶ್ರೇಷ್ಠವಾದ ಈ ತೇಜಸ್ಸು ಕಂಡುಬರುತ್ತದೆ.

ತಸ್ಮಾದ್ ದಾತವ್ಯಮೇವೇಹ ಪ್ರತಿಶ್ರುತ್ಯ ಯುಧಿಷ್ಠಿರ ।
ಯದೀಚ್ಛೇಚ್ಛ್ರೇಭನಾಂ ಜಾತಿಂ ಪ್ರಾಪ್ತುಂ ಭರತಸತ್ತಮ ॥೨೩॥

ಎಲೈ ಯುಧಿಷ್ಠಿರನೇ, ಭರತಶ್ರೇಷ್ಠನೇ, ಆದ್ದರಿಂದ ಮುಂದೆ ಒಳ್ಳೆಯ ಜಾತಿಯನ್ನು ಪಡೆಯಲು ಬಯಸುವವನು ವಾಗ್ದಾನ ಮಾಡಿದುದನ್ನು ಇಲ್ಲಿ ದಾನವನ್ನು ಮಾಡಲೇಬೇಕು.

ಬ್ರಾಹ್ಮಣಸ್ಯ ಹಿ ದತ್ತೇನ ಧ್ರುವಂ ಸ್ವರ್ಗೋ ಹ್ಯನುತ್ತಮಃ ।
ಶಕ್ಯಂ ಪ್ರಾಪ್ತುಂ ವಿಶೇಷೇಣ ದಾನಂ ಹಿ ಮಹತೀ ಕ್ರಿಯಾ ॥೨೪॥

ಬ್ರಾಹ್ಮಣರಿಗೆ ಮಾಡಿದ ಶ್ರೇಷ್ಠವಾದ ದಾನದಿಂದ ವಿಶೇಷವಾದ ಸ್ವರ್ಗವನ್ನು ಪಡೆಯಲು ಸಾಧ್ಯ. ಏಕೆಂದರೆ ದಾನವು ಭಗವತ್ ಪ್ರೀತಿಕರವಾದ ದೊಡ್ಡ ಕರ್ಮ.

ಇತೋ ದತ್ತೇನ ಜೀವಂತಿ ದೇವತಾಃ ಪಿತರಸ್ತಥಾ ।
ತಸ್ಮಾದ್ ದಾನಾನಿ ದೇಯಾನಿ ಬ್ರಾಹ್ಮಣೇಭ್ಯೋ ವಿಜಾನತಾ ॥೨೫॥

ಇಲ್ಲಿ ದಾನಮಾಡುವುದರಿಂದ ದೇವತೆಗಳು ಮತ್ತು ಪಿತೃಗಳು ಜೀವಿಸಿದ್ದಾರೆ. ಆದ್ದರಿಂದ ವಿವೇಕಿಯಾದವನು ಬ್ರಾಹ್ಮಣರಿಗೆ ದಾನವನ್ನು ಮಾಡಬೇಕು.

ಮಹದ್ಧಿ ಭರತಶ್ರೇಷ್ಠ ಬ್ರಾಹ್ಮಣಸ್ತೀರ್ಥಮುಚ್ಯತೇ ।
ವೇಲಾಯಾಂ ನ ತು ಕಸ್ಯಾಂಚಿದ್ ಗಚ್ಛೇದ್ ವಿಪ್ರೋ ಹ್ಯಪೂಜಿತಃ॥೨೬॥

ಎಲೈ ಭರತಶ್ರೇಷ್ಠನೇ, ಬ್ರಾಹ್ಮಣನು ಸತ್ಪಾತ್ರರಲ್ಲಿ ದೊಡ್ಡವನೆಂದು ಹೇಳಲ್ಪಡುತ್ತದೆ. ಯಾವುದೇ ಶುಭಕಾಲದಲ್ಲಿ ಬ್ರಾಹ್ಮಣನು ಅಪೂಜಿತನಾಗಿ ಹೋಗಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ವಾನರ-ಸೃಗಾಲ ಸಂವಾದೋ ನಾಮ
ಷಟ್‌ವಿಂಶತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೇಳನೆಯಅಧ್ಯಾಯ

ನೀಚನಿಗೆ ಉಪದೇಶನಿಷೇಧ

ಯುಧಿಷ್ಠಿರಃ

ಮಿತ್ರಸೌಹೃದಭಾವೇನ ಉಪದೇಶಂ ಕರೋತಿ ಯಃ ।
ಜಾತ್ಯಾऽವರಸ್ಯ ರಾಜರ್ಷೇ ದೋಷಸ್ತಸ್ಯ ಭವೇನ್ನ ವಾ ॥೧॥

ಯುಧಿಷ್ಠಿರ– ಎಲೈ ರಾಜರ್ಷಿಯೇ, ಯಾವನು ಮಿತ್ರಭಾವದಿಂದ ಜಾತಿಯಿಂದ ಕೆಳಗಿನವನಿಗೆ ಉಪದೇಶವನ್ನು ಮಾಡುತ್ತಾನೆಯೋ ಅವನಿಗೆ ದೋಷ ಉಂಟಾಗುತ್ತದೆಯೇ, ಇಲ್ಲವೆ?

ಏತದಿಚ್ಛಾಮಿ ತತ್ತ್ವೇನ ವ್ಯಾಖ್ಯಾತುಂ ವೈ ಪಿತಾಮಹ ।
ಸೂಕ್ಷ್ಮಾ ಗತಿರ್ಹಿ ಧರ್ಮಸ್ಯ ಯತ್ರ ಮುಹ್ಯಂತಿ ಮಾನವಾಃ ॥೨॥

ಪಿತಾಮಹನೇ, ಇದನ್ನು ಸರಿಯಾಗಿ ತಿಳಿಯಲು ಬಯಸುತ್ತೇನೆ. ಧರ್ಮದ ಗತಿಯು ಸೂಕ್ಷ್ಮವಾದುದು. ಆದ್ದರಿಂದ ಅದರಲ್ಲಿ ಮನುಷ್ಯರು ಭ್ರಾಂತಿಗೆ ಒಳಗಾಗುತ್ತಾರೆ.

ಭೀಷ್ಮಃ

ಅತ್ರ ತೇ ವರ್ತಯಿಷ್ಯಾಮಿ ಶೃಣು ರಾಜನ್ ಯಥಾಗಮಮ್ ।
ಋಷೀಣಾಂ ವದತಾಂ ಶ್ರೇಷ್ಠ ಶ್ರುತಮಾಸೀದ್ ಯಥಾ ಮಯಾ ॥೩॥

ಭೀಷ್ಮ– ಎಲೈ ರಾಜನೇ, ಈ ವಿಷಯದಲ್ಲಿ ಪರಂಪರಾಗತವಾಗಿ ಬಂದ ವಿಷಯವನ್ನು ನಾನು ನಿನಗೆ ಹೇಳುವೆನು. ಎಲೈ ಮಾತನಾಡುವವರಲ್ಲಿ ಶ್ರೇಷ್ಠನೇ, ನಾನು ಹಿಂದೆ ಋಷಿಗಳಿಂದ ಕೇಳಿದಂತೆ ಈ ವಿಷಯವನ್ನು ಹೇಳುತ್ತೇನೆ.

ಉಪದೇಶೋ ನ ಕರ್ತವ್ಯೋ ಜಾತಿಹೀನಸ್ಯ ಕಸ್ಯಚಿತ್ ।
ಉಪದೇಶೇ ಮಹಾನ್ ದೋಷ ಉಪಾಧ್ಯಾಯಸ್ಯ ಭಾಷ್ಯತೇ ॥೪॥

ಜಾತಿಯಿಂದ ಹೀನನಾದ ಯಾವನಿಗೂ ಉಪದೇಶವನ್ನು ಮಾಡಬಾರದು. ಉಪದೇಶವನ್ನು ಮಾಡಿದರೆ ಉಪದೇಶವನ್ನು ಮಾಡಿದ ಗುರುವಿಗೆ ದೊಡ್ಡ ದೋಷವು ಹೇಳಲ್ಪಡುತ್ತದೆ.

ನಿದರ್ಶನಮಿದಂ ರಾಜನ್ ಶೃಣು ಮೇ ಭರತರ್ಷಭ ।
ದುರುಕ್ತವಚನೇ ರಾಜನ್ ಯಥಾ ಪೂರ್ವಂ ಯುಧಿಷ್ಠಿರ ।
ಬ್ರಹ್ಮಾಶ್ರಮಪದೇ ವೃತ್ತಂ ಪಾರ್ಶ್ವೇ ಹಿಮವತಃ ಶುಭೇ ॥೫॥

ಎಲೈ ಭರತರ್ಷಭನೇ, ಈ ಒಂದು ದೃಷ್ಟಾಂತವನ್ನು ಕೇಳು. ಎಲೈ ರಾಜನೇ, ಯುಧಿಷ್ಠಿರನೇ, ಹಿಂದೆ ಹಿಮಾಲಯ ಪರ್ವತದ ಪಾರ್ಶ್ವದಲ್ಲಿ ಬ್ರಹ್ಮಾಶ್ರಮ ಸ್ಥಾನದಲ್ಲಿ ಹೀಗೆ ಉಪದೇಶ ಮಾಡಿದವರ ವಿಷಯದಲ್ಲಿ ಯಾವ ಸಂವಾದ ಉಂಟಾಯಿತೋ ಅದನ್ನು ಕೇಳುವವನಾಗು.

ತತ್ರಾಶ್ರಮಪದಂ ಪುಣ್ಯಂ ನಾನಾವೃಕ್ಷಗಣಾಯುತಮ್ ।
ಬಹುಗುಲ್ಮಲತಾಕೀರ್ಣಂ ಮೃಗದ್ವಿಜನಿಷೇವಿತಮ್ ॥೬॥

ಹಿಮಾಲಯ ಪಾರ್ಶ್ವದಲ್ಲಿ ನಾನಾ ವೃಕ್ಷಸಮೂಹಗಳಿಂದ ಯುಕ್ತವಾದ, ಪವಿತ್ರವಾದ ಒಂದು ಆಶ್ರಮವಿದೆ. ಅದು ಅನೇಕ ಲತೆಗಳಿಂದ ಕೂಡಿ, ಮೃಗ-ಪಕ್ಷಿಗಳಿಂದ ಆಶ್ರಿತವಾಗಿದೆ.

ಸಿದ್ಧಚಾರಣಸಂಘುಷ್ಟಂ ರಮ್ಯಂ ಪುಷ್ಪಿತಕಾನನಮ್ ।
ವ್ರತಿಭಿರ್ಬಹುಭಿಃ ಕೀರ್ಣಂ ತಾಪಸೈರುಪಶೋಭಿತಮ್ ॥೭॥

ಸಿದ್ಧ-ಚಾರಣರ ಘೋಷದಿಂದ ಕೂಡಿರುವ, ಪುಷ್ಪಭರಿತವಾದ ವೃಕ್ಷಗಳಿಂದ ಕೂಡಿರುವ ಆ ಮನೋಹರವಾದ ಆಶ್ರಮವು ಅನೇಕ ವ್ರತಶೀಲರಿಂದಲೂ, ತಾಪಸರಿಂದಲೂ ಕೂಡಿದುದಾಗಿ ಶೋಭಿಸುತ್ತದೆ.

ಬ್ರಾಹ್ಮಣೈಶ್ಚ ಮಹಾಭಾಗೈಃ ಸೂರ್ಯಜ್ವಲನಸನ್ನಿಭೈಃ ।
ನಿಯಮವ್ರತಸಂಪನ್ನೈಃ ಸಮಾಕೀರ್ಣಂ ತಪಸ್ವಿಭಿಃ ।
ದೀಕ್ಷಿತೈರ್ಭರತಶ್ರೇಷ್ಠ ಯತಾಹಾರೈಃ ಕೃತಾತ್ಮಭಿಃ ॥೮॥

ಸೂರ್ಯಾಗ್ನಿ ಸದೃಶರಾದ, ಮಹಾನುಭಾವರಾದ, ನಿಯಮವ್ರತಸಂಪನ್ನರಾದ, ತಪಸ್ವಿಗಳಾದ ಬ್ರಾಹ್ಮಣರಿಂದ ತುಂಬಿದೆ. ಎಲೈ ಭರತಶ್ರೇಷ್ಠನೇ, ದೀಕ್ಷೆಯನ್ನು ಹೊಂದಿದ ಆಹಾರನಿಯಮವನ್ನು ಹೊಂದಿದ, ಮನೋಜಯವನ್ನು ಹೊಂದಿದ ತಪಸ್ವಿಗಳಿಂದ ಕೂಡಿದುದಾಗಿದೆ.

ವೇದಾಧ್ಯಯನಘೋಷೈಶ್ಚ ನಾದಿತಂ ಭರತರ್ಷಭ ।
ವಾಲಖಿಲ್ಯೈ ಶ್ಚ ಬಹುಭಿರ್ಯತಿಭಿಶ್ಚ ನಿಷೇವಿತಮ್ ॥೯॥

ಎಲೈ ಭರತಶ್ರೇಷ್ಠನೇ, ವೇದಾಧ್ಯಯನ ಘೋಷದಿಂದ ಅದು ನಾದಪೂರ್ಣವಾಗಿದೆ. ಅಲ್ಲಿ ಅನೇಕ ವಾಲಖಿಲ್ಯರು ಮತ್ತು ಯತಿಗಳು ವಾಸಿಸುತ್ತಾರೆ.

ತತ್ರ ಕಶ್ಚಿತ್ ಸಮುತ್ಸಾಹಂ ಕೃತ್ವಾ ಶೂದ್ರೋ ದಯಾನ್ವಿತಃ ।
ಆಗತೋ ಹ್ಯಾಶ್ರಮಪದಂ ಪೂಜಿತಶ್ಚ ತಪಸ್ವಿಭಿಃ ॥೧೦॥

ಅಲ್ಲಿ ಒಮ್ಮೆ ದಯಾನ್ವಿತನಾದ ಒಬ್ಬ ಶೂದ್ರನು ಉತ್ಸಾಹದಿಂದ ಆಶ್ರಮಕ್ಕೆ ಬಂದು ಆ ತಪಸ್ವಿಗಳಿಂದ ಪೂಜಿಸಲ್ಪಟ್ಟನು.

ತಾಂಸ್ತು ದೃಷ್ಟ್ವಾ ಮುನಿಗಣಾನ್ ದೇವಕಲ್ಪಾನ್ ಮಹೌಜಸಃ ।
ವಹತೋ ವಿವಿಧಾ ದೀಕ್ಷಾಃ ಸಂಪ್ರಹೃಷ್ಯತ ಭಾರತ ॥೧೧॥

ಎಲೈ ಭಾರತನೇ, ದೇವತೆಗಳಿಗೆ ಸಮಾನನಾಗಿದ್ದ, ಮಹಾಸಾಮರ್ಥ್ಯವುಳ್ಳ, ಅನೇಕ ದೀಕ್ಷೆಗಳನ್ನು ಧರಿಸಿದ್ದ ಆ ಋಷಿಸಮೂಹವನ್ನು ನೋಡಿ ಅವನು ಬಹಳ ಸಂತೋಷಪಟ್ಟನು.

ಅಥಾಸ್ಯ ಬುದ್ಧಿರಭವತ್ ತಪಸ್ಯೇ ಭರತರ್ಷಭ ।
ತತೋಽಬ್ರವೀತ್ ಕುಲಪತಿಂ ಪಾದೌ ಸಂಗೃಹ್ಯ ಭಾರತ ॥೧೨॥

ಎಲೈ ಭರತಶ್ರೇಷ್ಠನೇ, ಆಗ ಅವನಿಗೆ ತಾನೂ ತಪಸ್ಸನ್ನು ಮಾಡಬೇಕೆಂಬ ಬುದ್ಧಿಯುಂಟಾಯಿತು. ಎಲೈ ಭಾರತನೇ, ಆಗ ಅವನು ಅಲ್ಲಿನ ಕುಲಪತಿಗಳ ಪಾದವನ್ನು ಹಿಡಿದು ಮಾತನಾಡಿದನು.

ಭವತ್ಪ್ರಸಾದಾದಿಚ್ಛಾಮಿ ಧರ್ಮಂ ಚರ್ತುಂ ದ್ವಿಜರ್ಷಭ ।
ತನ್ಮಾಂ ತ್ವಂ ಭಗವನ್ ವಕ್ತುಂ ಪ್ರವ್ರಾಜಯಿತುಮರ್ಹಸಿ ॥೧೩॥

ಎಲೈ ದ್ವಿಜಶ್ರೇಷ್ಠನೇ, ನಿನ್ನ ಅನುಗ್ರಹದಿಂದ ನಾನು ಧರ್ಮವನ್ನು ಆಚರಿಸಲು ಬಯಸುತ್ತೇನೆ. ಪೂಜ್ಯರಾದ ನೀವು ನನಗೆ ಸಂನ್ಯಾಸದೀಕ್ಷೆಯನ್ನು ಕೊಟ್ಟು ಉಪದೇಶವನ್ನು ಮಾಡಬೇಕು.

ವರ್ಣಾವರೋಽಹಂ ಭಗವನ್ ಶೂದ್ರೋ ಜಾತ್ಯಾಸ್ಮಿ ಸತ್ತಮ ।
ಶಿಶ್ರೂಷಾಂ ಕರ್ತುಮಿಚ್ಛಾಮಿ ಪ್ರಪನ್ನಾಯ ಪ್ರಸೀದ ಮೇ ॥೧೪॥

ಎಲೈ ಸಜ್ಜನರಲ್ಲಿ ಶ್ರೇಷ್ಠರೇ, ನಾನು ಜಾತಿಯಿಂದ ವರ್ಣಾವರನಾದ ಶೂದ್ರನಾಗಿದ್ದೇನೆ. ನಿಮಗೆ ಶರಣಾಗತನಾಗಿ ನಿಮ್ಮ ಶುಶ್ರೂಷೆಯನ್ನು ಮಾಡಲು ಬಯಸುತ್ತೇನೆ. ನನಗೆ ಅನುಗ್ರಹವನ್ನು ಮಾಡಿ (ಎಂದು ಹೇಳಿದನು).

ಕುಲಪತಿಃ

ನ ಶಕ್ಯಮಿಹ ಶೂದ್ರೇಣ ಲಿಂಗಮಾಶ್ರಿತ್ಯ ವರ್ತಿತುಮ್ ।
ರಮ್ಯತಾಂ ಯದಿ ತೇ ಬುದ್ಧಿಃ ಶಿಶ್ರೂಷಾನಿರತೋ ಭವ ॥೧೫॥

ಕುಲಪತಿ– ಶೂದ್ರನಾದವನು ಸಂನ್ಯಾಸದೀಕ್ಷೆಯನ್ನು ಪಡೆದು ಪ್ರವರ್ತಿಸಲು ಸಾಧ್ಯವಿಲ್ಲ. ನಿನ್ನ ಬುದ್ಧಿಯು ನಿನ್ನ ಧರ್ಮದಲ್ಲಿ ನಿರತವಾಗುವುದಾದರೆ ಶುಶ್ರೂಷಾ ಪರನಾಗಿರು.

ಭೀಷ್ಮಃ

ಏವಮುಕ್ತಸ್ತು ಮುನಿನಾ ಸ ಶೂದ್ರೋಽಚಿಂತಯನ್ನೃಪ ।
ಕಥಮತ್ರ ಮಯಾ ಕಾರ್ಯಂ ಶ್ರದ್ಧಾ ಧರ್ಮೇ ಪರಾ ಚ ಮೇ ।
ವಿಜ್ಞಾತಮೇವಂ ಭವತು ಕರಿಷ್ಯೇ ಪ್ರಿಯಮಾತ್ಮನಃ ॥೧೬॥

ಭೀಷ್ಮ– ಕುಲಪತಿಗಳಿಂದ ಹೀಗೆ ಹೇಳಲ್ಪಟ್ಟ ಆ ಶೂದ್ರನು ಎಲೈ ನೃಪನೇ, ಹೀಗೆ ಚಿಂತಿಸಿದನು- ನಾನು ಈಗ ಏನು ಮಾಡಬೇಕು? ನನಗಾದರೂ ಧರ್ಮದಲ್ಲಿ ಬಹಳ ಶ್ರದ್ಧೆಯಿದೆ. ಇದು ಎಲ್ಲರಿಗೂ ತಿಳಿಯಲಿ. ನಾನು ನನಗೇ ಪ್ರಿಯವನ್ನು ಉಂಟುಮಾಡಿಕೊಳ್ಳುವೆನು (ಎಂದು ಚಿಂತಿಸಿದನು).

ಗತ್ವಾಽಶ್ರಮಪದಾದ್ ದೂರಮುಟಜಂ ಕೃತವಾಂಸ್ತು ಸಃ ।
ತತ್ರ ವೇದಿಂ ಚ ಭೂಮಿಂ ಚ ದೇವತಾಯತನಾನಿ ಚ ।
ನಿವೇಶ್ಯ ಭರತಶ್ರೇಷ್ಠ ನಿಯಮಸ್ಥೋಽಭವತ್ ಸುಖಿಮ್ ॥೧೭॥

ಅವನು ಆ ಆಶ್ರಮಸ್ಥಾನದಿಂದ ದೂರಹೋಗಿ ಒಂದು ಪರ್ಣಶಾಲೆಯನ್ನು ನಿರ್ಮಿಸಿದನು. ಅಲ್ಲಿ ವೇದಿಯನ್ನೂ, ಶುದ್ಧವಾದ ಭೂಮಿಯನ್ನೂ ಮತ್ತು

ದೇವಾಲಯಗಳನ್ನೂ ನಿರ್ಮಿಸಿ, ಎಲೈ ಭರತಶ್ರೇಷ್ಠನೇ, ನಿಯಮಕರ್ಮಗಳನ್ನು ಧರಿಸಿದವನಾಗಿ ಸುಖವಾಗಿ ವಾಸಿಸಿದನು.

ಅಭಿಷೇಕಾಂಶ್ಚ ನಿಯಮಾನ್ ದೇವತಾಯತನೇಷು ಚ ।
ಬಲಿಂ ಚ ಕೃತ್ವಾ ಹುತ್ವಾ ಚ ದೇವತಾಂ ಚಾಪ್ಯಪೂಜಯತ್ ॥೧೮॥

ಅವನು ದೇವಾಲಯಗಳಲ್ಲಿ ನಿಯಮದಂತೆ ಅಭಿಷೇಕವನ್ನು ಮಾಡಿ, ನೈವೇದ್ಯವನ್ನು ಮಾಡಿ, ಹೋಮವನ್ನು ಮಾಡಿ ದೇವತೆಗಳನ್ನು ಪೂಜಿಸಿದನು.

ಸಂಕಲ್ಪನಿಯಮೋಪೇತಃ ಫಲಾಹಾರೋ ಜಿತೇಂದ್ರಿಯಃ ।
ನಿತ್ಯಂ ಸನ್ನಿಹಿತಾಭಿಶ್ಚ ಓಷಧೀಭಿಃ ಫಲೈಸ್ತಥಾ ॥೧೯॥

ಅತಿಥೀನ್ ಪೂಜಯಾಮಾಸ ಯಥಾವತ್ ಸಮುಪಾಗತಾನ್ ।
ಏವಂ ಹಿ ಸುಮಹಾನ್ ಕಾಲೋ ವ್ಯತ್ಯಕ್ರಾಮತ್ ಸ ತಸ್ಯ ವೈ ॥೨೦॥

ಸಂಕಲ್ಪ ನಿಯಮಗಳಿಂದ ಕೂಡಿದವನಾಗಿ, ನಿತ್ಯವೂ ಜಿತೇಂದ್ರಿಯನೂ ಮತ್ತು ಫಲಾಹಾರಿಯೂ ಆಗಿ, ಅಲ್ಲಿ ಸನ್ನಿಹಿತವಾದ ಓಷಧಿ ಮತ್ತು ಫಲಗಳಿಂದ ಆಶ್ರಮಕ್ಕೆ ಬಂದ ಅತಿಥಿಗಳನ್ನು ಚೆನ್ನಾಗಿ ಪೂಜಿಸಿದನು. ಹೀಗೆ ಅವನಿಗೆ ಬಹುಕಾಲವು ಕಳೆಯಿತು.

ಅಥಾಸ್ಯ ಮುನಿರಾಗಚ್ಛತ್ ಸಂಗತ್ಯಾ ವೈ ತಮಾಶ್ರಮಮ್ ।
ಸಂಪೂಜ್ಯ ಸ್ವಾಗತೇನರ್ಷಿಂ ವಿಧಿವತ್ ಪರ್ಯತೋಷಯತ್ ॥೨೧॥

ಅನಂತರ ಒಮ್ಮೆ ಒಬ್ಬ ಋಷಿಯು ಆ ಆಶ್ರಮಕ್ಕೆ ಬಂದನು. ಈ ಶೂದ್ರತಪಸ್ವಿಯು ಅವನಿಗೆ ಸ್ವಾಗತವನ್ನು ಕೋರಿ, ವಿಧಿಪ್ರಕಾರವಾಗಿ ಅವನನ್ನು ಸಂತೋಷಪಡಿಸಿದನು.

ಅನುಕೂಲಾಃ ಕಥಾಃ ಕೃತ್ವಾ ಯಥಾವತ್ ಪರ್ಯಪೃಚ್ಛತ ।
ಋಷಿಃ ಪರಮತೇಜಸ್ವೀ ಧರ್ಮಾತ್ಮಾ ಸಂಯತೇಂದ್ರಿಯಃ ॥೨೨॥

ಅನುಕೂಲವಾದ ವಿಷಯಗಳನ್ನು ಕುರಿತು ಮಾತನಾಡಿ, ಪರಮತೇಜಸ್ವಿಯೂ, ಧರ್ಮಾತ್ಮನೂ, ಜಿತೇಂದ್ರಿಯನೂ ಆದ ಋಷಿಯು ಅವನನ್ನು ಸರಿಯಾಗಿ ಪ್ರಶ್ನೆ ಮಾಡಿದನು.

ಏವಂ ಸ ಬಹುಶಸ್ತಸ್ಯ ಶೂದ್ರಸ್ಯ ಭರತರ್ಷಭ ।
ಸೋಽಗಚ್ಛದಾಶ್ರಮಮೃಷಿಃ ಶೂದ್ರಂ ದ್ರಷ್ಟುಂ ನರರ್ಷಭ ॥೨೩॥

ಎಲೈ ಭರತರ್ಷಭನೇ, ಈ ರೀತಿಯಲ್ಲಿ ಆ ಋಷಿಯು ಆ ಶೂದ್ರನನ್ನು ನೋಡಲು ಅನೇಕ ಬಾರಿ ಅವನ ಆಶ್ರಮಕ್ಕೆ ಹೋದನು.

ಅಥ ತಂ ತಾಪಸಂ ಶೂದ್ರಃ ಸೋಽಬ್ರವೀದ್ ಭರತರ್ಷಭ ।
ಪಿತೃಕಾರ್ಯಂ ಕರಿಷ್ಯಾಮಿ ತತ್ರ ಮೇಽನುಗ್ರಹಂ ಕುರು ॥೨೪॥

ಎಲೈ ಭರತರ್ಷಭನೇ, ಅನಂತರ ಒಮ್ಮೆ ಆ ಶೂದ್ರನು ಋಷಿಯನ್ನು ಕುರಿತು 'ನಾನು ಪಿತೃಕಾರ್ಯವನ್ನು ಮಾಡುವೆನು. ಅದರಲ್ಲಿ ನನಗೆ ಅನುಗ್ರಹವನ್ನು ಮಾಡು' ಎಂದು ಕೇಳಿದನು.

ಬಾಢಮಿತ್ಯೇವ ತಂ ವಿಪ್ರ ಉವಾಚ ಭರತರ್ಷಭ ।
ಮುನಿರ್ಭೂತ್ವಾ ಸ ಶೂದ್ರಸ್ತು ತಸ್ಯರ್ಷೇಃ ಪಾದ್ಯಮಾನಯತ್ ॥೨೫॥

ಎಲೈ ಭರತರ್ಷಭನೇ, ಆ ಬ್ರಾಹ್ಮಣನು ಹಾಗೆಯೇ ಆಗಲಿ ಎಂದು ಹೇಳಿದನು. ಶೂದ್ರನಾದರೂ ಶುಚಿಯಾಗಿ ಆ ಋಷಿಗೆ ಪಾದ್ಯವನ್ನು ತೆಗೆದುಕೊಂಡು ಬಂದನು.

ಅಥ ದರ್ಭಾಂಶ್ಚ ವನ್ಯಾಶ್ಚ ಓಷಧೀರ್ಭರತರ್ಷಭ ।
ಪವಿತ್ರಮಾಸನಂ ಚೈವ ಬೃಸೀಂ ಚ ಸಮುಪಾನಯತ್ ॥೨೬॥

ಎಲೈ ಭರತರ್ಷಭನೇ, ಅನಂತರ ದರ್ಭೆಗಳನ್ನೂ, ವನದಲ್ಲಿ ಸಿಗುವ ಓಷಧಿಗಳನ್ನೂ, ಪವಿತ್ರವಾದ ಆಸನವನ್ನೂ ಮತ್ತು ದರ್ಭೆಯ ಚಾಪೆಯನ್ನೂ ತಂದನು.

ಅಥ ದಕ್ಷಿಣಮಾಶ್ರಿತ್ಯ ಬೃಸೀಂ ಪಶ್ಚಿಮಶೀರ್ಷಿಕಾಮ್ ।
ಕೃತಾಮನ್ಯಾಯತೋ ದೃಷ್ಟ್ವಾ ತತಸ್ತಮೃಷಿರಬ್ರವೀತ್ ॥೨೭॥

ಕುರುಷ್ವೈತಾಂ ಪೂರ್ವಶೀರ್ಷಾಂ ಭವ ಚೋದಙ್ಮುಖಃ ಶುಚಿಃ ।
ಸ ಚ ತತ್ಕೃತವಾನ್ ಶೂದ್ರಃ ಸರ್ವಂ ಯದೃಷಿರಬ್ರವೀತ್ ॥೨೮॥

ಅನಂತರ ಪಿಂಡಗಳನ್ನು ಇಡಲು ಸೂಕ್ಷ್ಮವಾದ ಚಾಪೆಯಂತೆ ಮಾಡಿದ ದರ್ಭಪಂಕ್ತಿಗಳ ರೂಪವಾದ ಬೃಸಿಯನ್ನು ದಕ್ಷಿಣದಿಕ್ಕಿನಲ್ಲಿ ಪಶ್ಚಿಮಕ್ಕೆ ಅಗ್ರಭಾಗವನ್ನು

ಮಾಡಿ ಇಟ್ಟನು. ಅದನ್ನು ತಪ್ಪಾಗಿ ಮಾಡಿದುದನ್ನು ನೋಡಿ ಆ ಋಷಿಯು ಅವನಿಗೆ ಹೇಳಿದನು: ನೀನು ದಕ್ಷಿಣಕ್ಕೆ ಅಭಿಮುಖವಾಗಿ ಕುಳಿತು ಶುಚಿಯಾಗಿ ಈ ದರ್ಭೆಯ ಚಾಪೆಯನ್ನು ಪೂರ್ವಕ್ಕೆ ಅಗ್ರಭಾಗವು ಬರುವಂತೆ ಮಾಡು (ಎಂದು ಹೇಳಿದನು). ಆ ಶೂದ್ರನಾದರೂ ಋಷಿಯು ಹೇಳಿದುದೆಲ್ಲವನ್ನೂ ಮಾಡಿದನು.

ಯಥೋಪದಿಷ್ಟಂ ಮೇಧಾವೀ ದರ್ಭಾದೀಂಸ್ತಾನ್ಯಥಾತಥಮ್ ।
ಹವ್ಯಕವ್ಯವಿಧಿಂ ಕೃತ್ಸ್ನಮುಕ್ತಂ ತೇನ ತಪಸ್ವಿನಾ ॥೨೯॥

ಮೇಧಾವಿಯಾದ ಆ ಶೂದ್ರನು ಋಷಿಯು ಉಪದೇಶ ಮಾಡಿದಂತೆ ದರ್ಭೆ ಮೊದಲಾದವುಗಳನ್ನು ಸರಿಯಾಗಿಟ್ಟು ಹವ್ಯ-ಕವ್ಯ ವಿಧಿಯನ್ನು ಸಮಗ್ರವಾಗಿ ಋಷಿಯು ಹೇಳಿದಂತೆಯೇ ಮಾಡಿದನು.

ಋಷಿಣಾ ಪಿತೃಕಾರ್ಯೇ ಚ ಯಥಾ ಧರ್ಮಪಥಿ ಸ್ಥಿತಃ ।
ಪಿತೃಕಾರ್ಯೇ ಕೃತೇ ಚಾಪಿ ವಿಸೃಷ್ಟಃ ಸ ಜಗಾಮ ಹ ॥೩೦॥

ಧರ್ಮಮಾರ್ಗದಲ್ಲಿ ಸ್ಥಿರನಾದವನು ಹೇಗೆ ಪಿತೃಕಾರ್ಯವನ್ನು ಮಾಡಬೇಕೋ ಅದರಂತೆ ಋಷಿಯು ಹೇಳಿದಂತೆ ಪಿತೃಕಾರ್ಯವನ್ನು ಮಾಡಿದನು. ಪಿತೃಕಾರ್ಯವು ಮುಗಿದ ಮೇಲೆ ಶೂದ್ರನಿಂದ ಬೀಳ್ಕೊಡಲ್ಪಟ್ಟು ಅವನು ತನ್ನ ಆಶ್ರಮಕ್ಕೆ ಹೋದನು.

ಅಥ ದೀರ್ಘಸ್ಯ ಕಾಲಸ್ಯ ಸ ತಪ್ಯನ್ ಶೂದ್ರತಾಪಸಃ ।
ವನೇ ಪಂಚತ್ವಮಗಮತ್ ಸುಕೃತೇನ ಚ ತೇನ ವೈ ।
ಅಜಾಯತ ಮಹಾರಾಜ ರಾಜವಂಶೇ ಮಹಾದ್ಯುತಿಃ ॥೩೧॥

ಅನಂತರ ಬಹುಕಾಲದ ಮೇಲೆ ಆ ಶೂದ್ರತಾಪಸನು ಅಲ್ಲಿಯೇ ತಪಸ್ಸನ್ನು ಮಾಡುತ್ತಾ ಮರಣವನ್ನು ಹೊಂದಿದನು. ಎಲೈ ಮಹಾರಾಜನೇ, ಆ ತಪಸ್ಸಿನ ಪುಣ್ಯದಿಂದ ಅವನು ಮುಂದಿನ ಜನ್ಮದಲ್ಲಿ ಬಹಳ ಕಾಂತಿಯುಕ್ತನಾಗಿ ರಾಜವಂಶದಲ್ಲಿ ಜನಿಸಿದನು.

ತಥೈವ ಸ ಋಷಿಸ್ತಾತ ಕಾಲಧರ್ಮಮವಾಪ್ಯ ಹ ।
ಪುರೋಹಿತಕುಲೇ ವಿಪ್ರಃ ಸ ಜಾತೋ ಭರತರ್ಷಭ ॥೩೨॥

ಎಲೈ ಪ್ರೀತಿಪಾತ್ರನೇ, ಭರತಶ್ರೇಷ್ಠನೇ, ಅದರಂತೆಯೇ ಆ ಋಷಿಯೂ ಸಹ ಮರಣವನ್ನು ಹೊಂದಿ ಪುರೋಹಿತ ವಂಶದಲ್ಲಿ ಒಬ್ಬ ಬ್ರಾಹ್ಮಣನಾಗಿ ಜನಿಸಿದನು.

ಏವಂ ತೌ ತತ್ರ ಸಂಭೂತಾವುಭೌ ಶೂದ್ರಮುನೀ ತದಾ ।
ಕ್ರಮೇಣ ವರ್ಧಿತೌ ಚಾಪಿ ವಿದ್ಯಾಸು ಕುಶಲಾವುಭೌ ॥೩೩॥

ಅಥರ್ವವೇದೇ ವೇದೇ ಚ ಬಭೂವರ್ಷಿಃ ಸುನಿಶ್ಚಿತಃ ।
ಕಲ್ಪಪ್ರಯೋಗೇ ಚೋತ್ಪನ್ನೇ ಜ್ಯೋತಿಷೇ ಚ ಪರಂ ಗತಃ ।
ಸಖ್ಯೇ ಚಾಪಿ ಪರಾ ಪ್ರೀತಿಸ್ತಯೋಶ್ಚಾಪಿ ವ್ಯವರ್ಧತ ॥೩೪॥

ಈ ರೀತಿಯಲ್ಲಿ ಆ ಶೂದ್ರ ಮತ್ತು ಋಷಿಗಳಿಬ್ಬರೂ ಪುನಃ ಜನಿಸಿ, ಕ್ರಮೇಣ ಬೆಳೆದು ಇಬ್ಬರೂ ವಿದ್ಯೆಗಳಲ್ಲಿ ಪಾರಂಗತರಾದರು. ಋಷಿಯು ಅಥರ್ವವೇದದಲ್ಲಿಯೂ ಮತ್ತು ಉಳಿದ ವೇದಗಳಲ್ಲಿಯೂ ಕಲ್ಪಪ್ರಯೋಗದಲ್ಲಿಯೂ ಜ್ಯೌತಿಷ ಶಾಸ್ತ್ರದಲ್ಲಿಯೂ ಸುಶಿಕ್ಷಿತನಾಗಿ ಪಾರಂಗತನಾದನು. ಅವರಿಬ್ಬರಿಗೂ ಸ್ನೇಹದಲ್ಲಿ ಬಹಳ ಸಂತೋಷವು ಅಭಿವೃದ್ಧಿಯನ್ನು ಹೊಂದಿತು.

ಪಿತರ್ಯುಪರತೇ ಚಾಪಿ ಕೃತಶೌಚಃ ಸ ಭಾರತ ।
ಅಭಿಷಿಕ್ತಃ ಪ್ರಕೃತಿಭೀ ರಾಜಪುತ್ರಃ ಸ ಪಾರ್ಥಿವಃ ।
ಅಭಿಷಿಕ್ತೇನ ಸ ಋಷಿರಭಿಷಿಕ್ತಃ ಪುರೋಹಿತಃ ॥೩೫॥

ಎಲೈ ಭಾರತನೇ, ರಾಜವಂಶದಲ್ಲಿ ಜನಿಸಿದ ಆ ಶೂದ್ರನಾಗಿದ್ದ ರಾಜಪುತ್ರನು ಅವನ ತಂದೆಯು ಮೃತನಾದ ಮೇಲೆ, ಶುಚಿಯಾಗಿ ಪ್ರಜೆಗಳಿಂದ ರಾಜನಾಗಿ ಅಭಿಷೇಕ ಮಾಡಲ್ಪಟ್ಟನು. ಅಭಿಷೇಕವನ್ನು ಹೊಂದಿದ ಆ ರಾಜಕುಮಾರನು ಋಷಿಯನ್ನು ರಾಜಪುರೋಹಿತನನ್ನಾಗಿ ಅಭಿಷೇಕ ಮಾಡಿದನು.

ಸ ತಂ ಪುರೋಧಾಯ ಸುಖಮವಸದ್ ಭರತರ್ಷಭ ।
ರಾಜ್ಯಂ ಶಶಾಸ ಧರ್ಮೇಣ ಪ್ರಜಾಶ್ಚ ಪರಿಪಾಲಯನ್ ॥೩೬॥

ಎಲೈ ಭರತಶ್ರೇಷ್ಠನೇ, ಆ ರಾಜಪುತ್ರನು ಪುರೋಹಿತನನ್ನು ಮುಂದೆ ಮಾಡಿಕೊಂಡು ಸುಖವಾಗಿ ವಾಸಮಾಡಿ, ಪ್ರಜೆಗಳನ್ನು ಧರ್ಮದಿಂದ ಪಾಲಿಸುತ್ತಾ ರಾಜ್ಯವನ್ನು ಆಳಿದನು.

ಪುಣ್ಯಾಹವಾಚನೇ ನಿತ್ಯಂ ಧರ್ಮಕಾರ್ಯೇಷು ಚಾಸಕೃತ್ ।
ಉತ್ಸ್ಮಯನ್ ಪ್ರಾಹಸಚ್ಚಾಪಿ ದೃಷ್ಟ್ವಾ ರಾಜಾ ಪುರೋಧಸಮ್ ।
ಏವಂ ಸ ಬಹುಶೋ ರಾಜನ್ ಪುರೋಧಸಮುಪಾಹಸತ್ ॥೩೭॥

ಧರ್ಮಕಾರ್ಯವನ್ನು ಮಾಡುವಾಗ ಯಾವಾಗಲೂ ಪುಣ್ಯಾಹವಾಚನ ಸಂದರ್ಭದಲ್ಲಿ ರಾಜನು ಪುರೋಹಿತನನ್ನು ನೋಡಿ ಅನೇಕ ಬಾರಿ ನಗುತ್ತಿದ್ದನು. ಎಲೈ ರಾಜನೇ, ಹೀಗೆ ಅವನು ಪುರೋಹಿತನನ್ನು ಅನೇಕ ಬಾರಿ ಉಪಹಾಸವನ್ನು ಮಾಡಿದನು.

ಲಕ್ಷಯಿತ್ವಾ ಪುರೋಧಾಸ್ತು ಬಹುಶಸ್ತಂ ನರಾಧಿಪಮ್ ।
ಉತ್ಸ್ಮಯಂತಂ ಚ ಸತತಂ ದೃಷ್ಟ್ವಾಸೌ ಮನ್ಯುಮಾನಭೂತ್ ॥೩೮॥

ಆ ಪುರೋಹಿತನು, ರಾಜನು ತನ್ನನ್ನು ನೋಡಿ ಅನೇಕ ಬಾರಿ ಸತತವಾಗಿ ನಗುವುದನ್ನು ಗಮನಿಸಿ ಕೋಪದಿಂದ ಕೂಡಿದವನಾದನು.

ಅಥ ಶೂನ್ಯೇ ಪುರೋಧಾಸ್ತು ಸಹ ರಾಜ್ಞಾ ಸಮಾಗತಃ ।
ಕಥಾಭಿರನುಕೂಲಾಭೀ ರಾಜಾನಮಭಿರಾಮಯತ್ ॥೩೯॥

ಅನಂತರ ಪುರೋಹಿತನು ಏಕಾಂತದಲ್ಲಿ ರಾಜನ ಜೊತೆಯಲ್ಲಿ ಸೇರಿ ಅನುಕೂಲವಾದ ಅನೇಕ ಕಥೆಗಳಿಂದ ರಾಜನನ್ನು ಸಂತೋಷಪಡಿಸಿದನು.

ತತೋಽಬ್ರವೀನ್ನರೇಂದ್ರಂ ಸ ಪುರೋಧಾ ಭರತರ್ಷಭ ।
ವರಮಿಚ್ಛಾಮ್ಯಹಂ ತ್ವೇಕಂ ತ್ವಯಾ ದತ್ತಂ ಮಹಾದ್ಯುತೇ ॥೪೦॥

ಅನಂತರ ಎಲೈ ಭರತರ್ಷಭನೇ, ಆ ಪುರೋಹಿತನು ರಾಜನನ್ನುಕುರಿತು– 'ಎಲೈ ಮಹಾದ್ಯುತಿಯೇ, ನಾನು ನಿನ್ನಿಂದ ಒಂದು ವರವನ್ನು ಪಡೆಯಲು ಇಚ್ಛಿಸುತ್ತೇನೆ' ಎಂದು ಹೇಳಿದನು.

ರಾಜಾ

ವರಾಣಾಂ ತೇ ಶತಂ ದದ್ಯಾಂ ಕಿಮುತೈಕಂ ದ್ವಿಜೋತ್ತಮ ।
ಸ್ನೇಹಾಚ್ಚ ಬಹುಮಾನಾಚ್ಚ ನಾಸ್ತ್ಯದೇಯಂ ಹಿ ಮೇ ತವ ॥೪೧॥

ರಾಜ– ನಿನಗೆ ನೂರು ವರಗಳನ್ನು ಕೊಟ್ಟೇನು. ಎಲೈ ಬ್ರಾಹ್ಮಣಶ್ರೇಷ್ಠನೇ, ಏಕೆ ಒಂದು ವರವನ್ನು ಕೇಳುತ್ತಿದ್ದೀಯೆ? ನನಗೆ ನಿನ್ನ ಮೇಲಿರುವ ಸ್ನೇಹದಿಂದಲೂ ಮತ್ತು ಗೌರವದಿಂದಲೂ ನಿನಗೆ ಕೊಡಲಾರದುದು ನನ್ನ ಬಳಿ ಯಾವುದೂ ಇಲ್ಲ.

ಪುರೋಹಿತಃ

ಏಕಂ ವೈ ವರಮಿಚ್ಛಾಮಿ ಯದಿ ತುಷ್ಟೋಽಸಿ ಪಾರ್ಥಿವ ।
ಯದ್ ದದಾಸಿ ಮಹಾರಾಜ ಸತ್ಯಂ ತದ್ ವದ ಮಾನೃತಮ್ ॥೪೨॥

ಪುರೋಹಿತ– ಎಲೈ ಮಹಾರಾಜನೇ, ನೀನು ನನಗೆ ಕೊಡುತ್ತೇನೆಂದು ಸತ್ಯವನ್ನು ನುಡಿದು ಸುಳ್ಳು ಮಾತನಾಡದಿದ್ದರೆ, ನನ್ನ ಮೇಲೆ ಸಂತೋಷಗೊಂಡಿದ್ದರೆ ಒಂದು ವರವನ್ನು ಮಾತ್ರ ಕೇಳುತ್ತೇನೆ.

ಭೀಷ್ಮಃ

ಬಾಢಮಿತ್ಯೇವ ತಂ ರಾಜಾ ಪ್ರತ್ಯುವಾಚ ಯುಧಿಷ್ಠಿರ ।
ಯದಿ ಜ್ಞಾಸ್ಯಾಮಿ ವಕ್ಷ್ಯಾಮಿ ಅಜಾನನ್ನ ತು ಸಂವದೇ ॥೪೩॥

ಭೀಷ್ಮ– ಎಲೈ ಯುಧಿಷ್ಠಿರನೇ, ಆ ರಾಜನು ಅವನನ್ನು ಕುರಿತು ಹಾಗೆಯೇ ಆಗಲಿ. ನೀನು ಬೇಡುವ ವರವು ನನಗೆ ತಿಳಿದರೆ ಅನಂತರ ಕೊಡುವ ವಿಷಯದಲ್ಲಿ ಹೇಳುತ್ತೇನೆ. ಅದನ್ನು ತಿಳಿಯದೆ ಯಾವುದನ್ನೂ ಒಪ್ಪುವುದಿಲ್ಲ.

ಪುರೋಹಿತಃ

ಪುಣ್ಯಾಹವಾಚನೇ ನಿತ್ಯಂ ಧರ್ಮಕೃತ್ಯೇಷು ಚಾಸಕೃತ್ ।
ಶಾಂತಿಹೋಮೇಷು ಚ ಸದಾ ಕಿಂ ತ್ವಂ ಹಸಸಿ ವೀಕ್ಷ್ಯ ಮಾಮ್ ॥೪೪॥

ಪುರೋಹಿತ– ಧರ್ಮಕಾರ್ಯಗಳಲ್ಲಿ ಪುಣ್ಯಾಹವಾಚನ ಮಾಡುವಾಗ ಮತ್ತು ಶಾಂತಿಕಾರ್ಯಗಳಲ್ಲಿ ನೀನು ಯಾವಾಗಲೂ ನನ್ನನ್ನು ನೋಡಿ ಏಕೆ ನಗುತ್ತೀಯೆ?

ಸವ್ರೀಡಂ ವೈ ಭವತಿ ಹಿ ಮನೋ ಮೇ ಹಸತಾ ತ್ವಯಾ ।
ಕಾಮಯಾ ಶಾಪಿತೋ ರಾಜನ್ ನಾನ್ಯಥಾ ವಕ್ತುಮರ್ಹಸಿ ॥೪೫॥

ಪುಣ್ಯಾಹವಾಚನೇ ನಿತ್ಯಂ ಧರ್ಮಕಾರ್ಯೇಷು ಚಾಸಕೃತ್ ।
ಉತ್ಸ್ಮಯನ್ ಪ್ರಾಹಸಚ್ಚಾಪಿ ದೃಷ್ಟ್ವಾ ರಾಜಾ ಪುರೋಧಸಮ್ ।
ಏವಂ ಸ ಬಹುಶೋ ರಾಜನ್ ಪುರೋಧಸಮುಪಾಹಸತ್ ॥೩೭॥

ಧರ್ಮಕಾರ್ಯವನ್ನು ಮಾಡುವಾಗ ಯಾವಾಗಲೂ ಪುಣ್ಯಾಹವಾಚನ ಸಂದರ್ಭದಲ್ಲಿ ರಾಜನು ಪುರೋಹಿತನನ್ನು ನೋಡಿ ಅನೇಕ ಬಾರಿ ನಗುತ್ತಿದ್ದನು. ಎಲೈ ರಾಜನೇ, ಹೀಗೆ ಅವನು ಪುರೋಹಿತನನ್ನು ಅನೇಕ ಬಾರಿ ಉಪಹಾಸವನ್ನು ಮಾಡಿದನು.

ಲಕ್ಷಯಿತ್ವಾ ಪುರೋಧಾಸ್ತು ಬಹುಶಸ್ತಂ ನರಾಧಿಪಮ್ ।
ಉತ್ಸ್ಮಯಂತಂ ಚ ಸತತಂ ದೃಷ್ಟ್ವಾಸೌ ಮನ್ಯುಮಾನಭೂತ್ ॥೩೮॥

ಆ ಪುರೋಹಿತನು, ರಾಜನು ತನ್ನನ್ನು ನೋಡಿ ಅನೇಕ ಬಾರಿ ಸತತವಾಗಿ ನಗುವುದನ್ನು ಗಮನಿಸಿ ಕೋಪದಿಂದ ಕೂಡಿದವನಾದನು.

ಅಥ ಶೂನ್ಯೇ ಪುರೋಧಾಸ್ತು ಸಹ ರಾಜ್ಞಾ ಸಮಾಗತಃ ।
ಕಥಾಭಿರನುಕೂಲಾಭೀ ರಾಜಾನಮಭಿರಾಮಯತ್ ॥೩೯॥

ಅನಂತರ ಪುರೋಹಿತನು ಏಕಾಂತದಲ್ಲಿ ರಾಜನ ಜೊತೆಯಲ್ಲಿ ಸೇರಿ ಅನುಕೂಲವಾದ ಅನೇಕ ಕಥೆಗಳಿಂದ ರಾಜನನ್ನು ಸಂತೋಷಪಡಿಸಿದನು.

ತತೋಽಬ್ರವೀನ್ನರೇಂದ್ರಂ ಸ ಪುರೋಧಾ ಭರತರ್ಷಭ ।
ವರಮಿಚ್ಛಾಮ್ಯಹಂ ತ್ವೇಕಂ ತ್ವಯಾ ದತ್ತಂ ಮಹಾದ್ಯುತೇ ॥೪೦॥

ಅನಂತರ ಎಲೈ ಭರತರ್ಷಭನೇ, ಆ ಪುರೋಹಿತನು ರಾಜನನ್ನು ಕುರಿತು– 'ಎಲೈ ಮಹಾದ್ಯುತಿಯೇ, ನಾನು ನಿನ್ನಿಂದ ಒಂದು ವರವನ್ನು ಪಡೆಯಲು ಇಚ್ಛಿಸುತ್ತೇನೆ' ಎಂದು ಹೇಳಿದನು.

ರಾಜಾ

ವರಾಣಾಂ ತೇ ಶತಂ ದದ್ಯಾಂ ಕಿಮುತೈಕಂ ದ್ವಿಜೋತ್ತಮ ।
ಸ್ನೇಹಾಚ್ಚ ಬಹುಮಾನಾಚ್ಚ ನಾಸ್ತ್ಯದೇಯಂ ಹಿ ಮೇ ತವ ॥೪೧॥

ರಾಜ– ನಿನಗೆ ನೂರು ವರಗಳನ್ನು ಕೊಟ್ಟೇನು. ಎಲೈ ಬ್ರಾಹ್ಮಣಶ್ರೇಷ್ಠನೇ, ಏಕೆ ಒಂದು ವರವನ್ನು ಕೇಳುತ್ತಿದ್ದೀಯೆ? ನನಗೆ ನಿನ್ನ ಮೇಲಿರುವ ಸ್ನೇಹದಿಂದಲೂ ಮತ್ತು ಗೌರವದಿಂದಲೂ ನಿನಗೆ ಕೊಡಲಾರದುದು ನನ್ನ ಬಳಿ ಯಾವುದೂ ಇಲ್ಲ.

ಪುರೋಹಿತಃ

ಏಕಂ ವೈ ವರಮಿಚ್ಛಾಮಿ ಯದಿ ತುಷ್ಟೋಽಸಿ ಪಾರ್ಥಿವ ।
ಯದ್ ದದಾಸಿ ಮಹಾರಾಜ ಸತ್ಯಂ ತದ್ ವದ ಮಾನೃತಮ್ ॥೪೨॥

ಪುರೋಹಿತ– ಎಲೈ ಮಹಾರಾಜನೇ, ನೀನು ನನಗೆ ಕೊಡುತ್ತೇನೆಂದು ಸತ್ಯವನ್ನು ನುಡಿದು ಸುಳ್ಳು ಮಾತನಾಡದಿದ್ದರೆ, ನನ್ನ ಮೇಲೆ ಸಂತೋಷಗೊಂಡಿದ್ದರೆ ಒಂದು ವರವನ್ನು ಮಾತ್ರ ಕೇಳುತ್ತೇನೆ.

ಭೀಷ್ಮಃ

ಬಾಢಮಿತ್ಯೇವ ತಂ ರಾಜಾ ಪ್ರತ್ಯುವಾಚ ಯುಧಿಷ್ಠಿರ ।
ಯದಿ ಜ್ಞಾಸ್ಯಾಮಿ ವಕ್ಷ್ಯಾಮಿ ಅಜಾನನ್ನ ತು ಸಂವದೇ ॥೪೩॥

ಭೀಷ್ಮ– ಎಲೈ ಯುಧಿಷ್ಠಿರನೇ, ಆ ರಾಜನು ಅವನನ್ನು ಕುರಿತು ಹಾಗೆಯೇ ಆಗಲಿ. ನೀನು ಬೇಡುವ ವರವು ನನಗೆ ತಿಳಿದರೆ ಅನಂತರ ಕೊಡುವ ವಿಷಯದಲ್ಲಿ ಹೇಳುತ್ತೇನೆ. ಅದನ್ನು ತಿಳಿಯದೆ ಯಾವುದನ್ನೂ ಒಪ್ಪುವುದಿಲ್ಲ.

ಪುರೋಹಿತಃ

ಪುಣ್ಯಾಹವಾಚನೇ ನಿತ್ಯಂ ಧರ್ಮಕೃತ್ಯೇಷು ಚಾಸಕೃತ್ ।
ಶಾಂತಿಹೋಮೇಷು ಚ ಸದಾ ಕಿಂ ತ್ವಂ ಹಸಸಿ ವೀಕ್ಷ್ಯ ಮಾಮ್ ॥೪೪॥

ಪುರೋಹಿತ– ಧರ್ಮಕಾರ್ಯಗಳಲ್ಲಿ ಪುಣ್ಯಾಹವಾಚನ ಮಾಡುವಾಗ ಮತ್ತು ಶಾಂತಿಕಾರ್ಯಗಳಲ್ಲಿ ನೀನು ಯಾವಾಗಲೂ ನನ್ನನ್ನು ನೋಡಿ ಏಕೆ ನಗುತ್ತೀಯೆ?

ಸವ್ರೀಡಂ ವೈ ಭವತಿ ಹಿ ಮನೋ ಮೇ ಹಸತಾ ತ್ವಯಾ ।
ಕಾಮಯಾ ಶಾಪಿತೋ ರಾಜನ್ ನಾನ್ಯಥಾ ವಕ್ತುಮರ್ಹಸಿ ॥೪೫॥

ನೀನು ನಕ್ಕಾಗಲೆಲ್ಲ ನನ್ನ ಮನಸ್ಸಿಗೆ ಬಹಳ ನಾಚಿಕೆಯಾಗುತ್ತದೆ. ನಿನಗೆ ಇಷ್ಟವಾದ ಪದಾರ್ಥಗಳ ಮೇಲೆ ಆಣೆಯನ್ನು ಮಾಡಿ ಕೇಳುತ್ತಿದ್ದೇನೆ ಎಲೈ ರಾಜನೇ, ಈ ಪ್ರಶ್ನೆಗೆ ತಪ್ಪಾದ ಉತ್ತರವನ್ನು ಹೇಳಬಾರದು.

ಭಾವ್ಯಂ ಹಿ ಕಾರಣೇನಾತ್ರ ನ ತೇ ಹಾಸ್ಯಮಕಾರಣಮ್ ।
ಕೌತೂಹಲಂ ಮೇ ಸುಭೃಶಂ ತತ್ತ್ವೇನ ಕಥಯಸ್ವ ಮೇ ॥೪೬॥

ಇದರಲ್ಲಿ ಏನೋ ಕಾರಣವಿರಬೇಕು. ಕಾರಣವಿಲ್ಲದೆ ಹಾಸ್ಯವುಂಟಾಗುವುದಿಲ್ಲ. ಈ ವಿಷಯದಲ್ಲಿ ನನಗೆ ಬಹಳ ಕುತೂಹಲವಿದೆ. ಅದನ್ನು ನಿಜವಾಗಿ ಹೇಳು.

ರಾಜಾ

ಏವಮುಕ್ತೇ ತ್ವಯಾ ವಿಪ್ರ ಯದವಾಚ್ಯಂ ಭವೇದಪಿ ।
ಅವಶ್ಯಮೇವ ವಕ್ತವ್ಯಂ ಶೃಣುಷ್ವೈಕಮನಾ ದ್ವಿಜ ॥೪೭॥

ರಾಜ– ಎಲೈ ಬ್ರಾಹ್ಮಣನೇ, ನೀನು ಹೀಗೆ ಕೇಳಿದ ಮೇಲೆ ಹೇಳಬಾರದುದನ್ನೂ ಸಹ ಅವಶ್ಯವಾಗಿ ಹೇಳಲೇಬೇಕಾಗುತ್ತದೆ. ಎಲೈ ಬ್ರಾಹ್ಮಣನೇ, ಒಂದೇ ಮನಸ್ಸಿನಿಂದ ಕೇಳುವವನಾಗು.

ಪೂರ್ವದೇಹೇ ಯಥಾ ವೃತ್ತಂ ತನ್ನಿಬೋಧ ದ್ವಿಜೋತ್ತಮ ।
ಜಾತಿಂ ಸ್ಮರಾಮ್ಯಹಂ ಬ್ರಹ್ಮನ್ನವಧಾನೇನ ಮೇ ಶೃಣು ॥೪೮॥

ಎಲೈ ಬ್ರಾಹ್ಮಣಶ್ರೇಷ್ಠನೇ, ನಮ್ಮ ಪೂರ್ವದೇಹದಲ್ಲಿ ಏನು ನಡೆಯಿತೆಂದು ತಿಳಿಯುವವನಾಗು. ಎಲೈ ಬ್ರಾಹ್ಮಣನೇ, ನನಗೆ ಪೂರ್ವಜನ್ಮದ ಸ್ಮರಣೆಯಿದೆ. ಅದನ್ನು ಅವಧಾನದಿಂದ ಕೇಳು.

ಶೂದ್ರೋಽಹಮಭವಂ ಪೂರ್ವಂ ತಾಪಸೇ ಕೃತನಿಶ್ಚಯಃ ।
ಋಷಿರುಗ್ರತಪಾಸ್ತ್ವಂ ಚ ತದಾಽಭೂರ್ದ್ವಿಜಸತ್ತಮ ॥೪೯॥

ಎಲೈ ದ್ವಿಜಶ್ರೇಷ್ಠನೇ, ಹಿಂದಿನ ಜನ್ಮದಲ್ಲಿ ನಾನು ತಪಸ್ಸಿನಲ್ಲಿ ಇಚ್ಛೆಯುಳ್ಳ ಒಬ್ಬ ಶೂದ್ರನಾಗಿದ್ದೆನು. ನೀನಾದರೂ ಉಗ್ರ ತಪಸ್ಸನ್ನು ಮಾಡುವ ಋಷಿಯಾಗಿದ್ದೆ.

ಪ್ರೀಯತಾ ಹಿ ತದಾ ಬ್ರಹ್ಮನ್ ಮಮಾನುಗ್ರಹಬುದ್ಧಿನಾ ।
ಪಿತೃಕಾರ್ಯೇ ತ್ವಯಾ ಪೂರ್ವಮುಪದೇಶಃ ಕೃತೋಽನಘ ।
ಬೃಸ್ಯಾಂ ದರ್ಭೇಷು ಹವ್ಯೇ ಚ ಕವ್ಯೇ ಚ ಮುನಿಸತ್ತಮ ॥೫೦॥

ಎಲೈ ಬ್ರಾಹ್ಮಣನೇ, ಅನಘನೇ, ನನಗೆ ಅನುಗ್ರಹವನ್ನು ಮಾಡುವ ಬುದ್ಧಿಯಿಂದ ನೀನು ಸಂತೋಷಗೊಂಡು ಪಿತೃಕಾರ್ಯದಲ್ಲಿ ಬೃಸಿಯ ವಿಷಯದಲ್ಲಿಯೂ, ದರ್ಭೆಯ ವಿಷಯದಲ್ಲಿಯೂ, ಹವ್ಯ-ಕವ್ಯಗಳ ವಿಷಯದಲ್ಲಿಯೂ ನನಗೆ ಉಪದೇಶವನ್ನು ಮಾಡಿದೆ.

ಏತೇನ ಕರ್ಮದೋಷೇಣ ಪುರೋಧಾಸ್ತ್ವಮಜಾಯಥಾಃ ।
ಅಹಂ ರಾಜಾ ಚ ವಿಪ್ರೇಂದ್ರ ಪಶ್ಯ ಕಾಲಸ್ಯ ಪರ್ಯಯಮ್ ।
ಮತ್ಕೃತೇ ಹ್ಯುಪದೇಶೇನ ತ್ವಯಾ ಪ್ರಾಪ್ತಮಿದಂ ಫಲಮ್ ॥೫೧॥

ಈ ಕರ್ಮದೋಷದಿಂದ ನೀನು ಪುರೋಹಿತನಾಗಿ ಜನಿಸಿದೆ. ಎಲೈ ವಿಪ್ರೋತ್ತಮನೇ, ನಾನು ರಾಜನಾಗಿ ಜನಿಸಿದೆ. ಕಾಲದಿಂದ ಉಂಟಾದ ವಿಪರ್ಯಯವನ್ನು ನೋಡು. ನನಗೆ ಉಪದೇಶ ಮಾಡಿದ ಕಾರಣದಿಂದ ನಿನಗೆ ಈ ಫಲವು ಪ್ರಾಪ್ತವಾಗಿದೆ.

ಏತಸ್ಮಾತ್ ಕಾರಣಾದ್ ಬ್ರಹ್ಮನ್ ಪ್ರಹಸೇ ತ್ವಾಂ ದ್ವಿಜೋತ್ತಮ ।
ನ ತ್ವಾಂ ಪರಿಭವನ್ ಬ್ರಹ್ಮನ್ ಪ್ರಹಸಾಮಿ ಗುರುರ್ಭವಾನ್ ॥೫೨॥

ಎಲೈ ದ್ವಿಜಶ್ರೇಷ್ಠನೇ, ಈ ಕಾರಣದಿಂದ ನಾನು ನಗುತ್ತೇನೆ. ಎಲೈ ಬ್ರಾಹ್ಮಣನೇ, ನಿನ್ನನ್ನು ಅವಮಾನಗೊಳಿಸುವ ಅಭಿಪ್ರಾಯವಿಲ್ಲ. ನೀನು ನನಗೆ ಗುರುವಾದವನು.

ವಿಪರ್ಯಯೇಣ ಮೇ ಮನ್ಯುಸ್ತೇನ ಸಂತಪ್ಯತೇ ಮನಃ ।
ಜಾತಿಂ ಸ್ಮರಾಮ್ಯಹಂ ತುಭ್ಯಮತಸ್ತ್ವಾಂ ಪ್ರಹಸಾಮಿ ವೈ ॥೫೩॥

ಈ ವಿಪರ್ಯಾಸದಿಂದ ನನಗೆ ತಾಪವುಂಟಾಗಿ ಮನಸ್ಸಿಗೆ ನಿನ್ನ ಪೂರ್ವಜನ್ಮದ ಸ್ಮರಣೆಯು ಉಂಟಾಗುತ್ತದೆ. ಆದ್ದರಿಂದ ನಾನು ನಿನ್ನನ್ನು ನೋಡಿ ನಗುತ್ತೇನೆ.

ಏವಂ ತಪೋಗ್ರಂ ಹಿ ತಪ ಉಪದೇಶೇನ ನಾಶಿತಮ್ ।
ಪುರೋಹಿತತ್ವಮುತ್ಸೃಜ್ಯ ಯತಸ್ವ ತ್ವಂ ಪುನರ್ಭವೇ ॥೫೪॥

ಈ ರೀತಿಯಲ್ಲಿ ನೀನು ಮಾಡಿದ ಉಗ್ರವಾದ ತಪಸ್ಸು ನೀನು ನನಗೆ ಮಾಡಿದ ಉಪದೇಶದಿಂದ ನಾಶವನ್ನು ಹೊಂದಿತು. ಪೌರೋಹಿತ್ಯವನ್ನು ಬಿಟ್ಟು ಪುನಃ ಒಳ್ಳೆಯ ಜನ್ಮವನ್ನು ಪಡೆಯಲು ನೀನು ಪ್ರಯತ್ನವನ್ನು ಪಡು.

ಇತಸ್ತ್ವಮಧಮಾಮನ್ಯಾಂ ಮಾ ಯೋನಿಂ ಪ್ರಾಪ್ಸ್ಯಸೇ ದ್ವಿಜ ।
ಗೃಹ್ಯತಾಂ ದ್ರವಿಣಂ ವಿಪ್ರ ಪೂತಾತ್ಮಾ ಭವ ಸತ್ತಮ ॥೫೫॥

ಎಲೈ ಬ್ರಾಹ್ಮಣನೇ, ಹಾಗೆ ಮಾಡಿದರೆ ನೀನು ಇದಕ್ಕಿಂತ ನೀಚ ಯೋನಿಯನ್ನು ಹೊಂದುವುದಿಲ್ಲ. ಎಲೈ ಬ್ರಾಹ್ಮಣನೇ, ಬೇಕಾದಷ್ಟು ದ್ರವ್ಯವನ್ನು ತೆಗೆದುಕೊ. ಸಜ್ಜನರಲ್ಲಿ ಶ್ರೇಷ್ಠನೇ, ಪವಿತ್ರನಾಗು.

ಭೀಷ್ಮಃ

ತತೋ ವಿಸೃಷ್ಟೋ ರಾಜ್ಞಾ ತು ವಿಪ್ರೋ ದಾನಾನ್ಯನೇಕಶಃ ।
ಬ್ರಾಹ್ಮಣೇಭ್ಯೋ ದದೌ ವಿತ್ತಂ ಭೂಮಿಂ ಗ್ರಾಮಾಂಶ್ಚ ಸರ್ವಶಃ ॥೫೬॥

ಭೀಷ್ಮ– ಆಗ ರಾಜನಿಂದ ಬೀಳ್ಕೊಡಲ್ಪಟ್ಟ ಆ ಬ್ರಾಹ್ಮಣನು ಬ್ರಾಹ್ಮಣರಿಗೆ ಅನೇಕ ದಾನಗಳನ್ನೂ, ದ್ರವ್ಯವನ್ನೂ, ಭೂಮಿಯನ್ನೂ, ಗ್ರಾಮಗಳನ್ನೂ ಎಲ್ಲವನ್ನೂ ದಾನವಾಗಿ ಕೊಟ್ಟನು.

ಕೃಚ್ಛ್ರಾಣಿ ಚೀರ್ತ್ವಾ ಚ ತತೋ ಯಥೋಕ್ತಾನಿ ದ್ವಿಜೋತ್ತಮಃ ।
ತೀರ್ಥಾನಿ ಚಾಭಿಗತ್ವಾ ವೈ ದಾನಾನಿ ವಿವಿಧಾನಿ ಚ ॥೫೭॥

ಆ ಬ್ರಾಹ್ಮಣಶ್ರೇಷ್ಠನು ಶಾಸ್ತ್ರನಿಯಮದಂತೆ ಕೃಚ್ಛ್ರಗಳನ್ನು ಆಚರಿಸಿ, ತೀರ್ಥಯಾತ್ರೆಯನ್ನು ಮಾಡಿ, ವಿವಿಧ ದಾನಗಳನ್ನು ಮಾಡಿದನು.

ದತ್ತ್ವಾ ಗಾಶ್ಚೈವ ಸರ್ವೇಭ್ಯಃ ಪೂತಾತ್ಮಾಽಭವದಾತ್ಮವಾನ್ ।
ತಮೇವ ಚಾಶ್ರಮಂ ಗತ್ವಾ ಚಚಾರ ವಿಪುಲಂ ತಪಃ ॥೫೮॥

ಎಲ್ಲರಿಗೂ ಗೋದಾನವನ್ನು ಮಾಡಿ, ಅವನು ಮನೋಜಯವನ್ನು ಹೊಂದಿ ಪವಿತ್ರನಾದನು. ಪುನಃ ತನ್ನ ಹಿಂದಿನ ಜನ್ಮದ ಅದೇ ಆಶ್ರಮಕ್ಕೆ ಹೋಗಿ ವಿಪುಲವಾದ ತಪಸ್ಸನ್ನು ಮಾಡಿದನು.

ತತಃ ಸಿದ್ಧಿಂ ಪರಾಂ ಪ್ರಾಪ್ತೋ ಬ್ರಾಹ್ಮಣೋ ರಾಜಸತ್ತಮ ।
ಸಮ್ಮತಶ್ಚಾಭವತ್ ತೇಷಾಮಾಶ್ರಮೇಽಶ್ರಮವಾಸಿನಾಮ್ ॥೫೯॥

ಎಲೈ ರಾಜಶ್ರೇಷ್ಠನೇ, ಆ ಬ್ರಾಹ್ಮಣನು ಶ್ರೇಷ್ಠವಾದ ಸಿದ್ಧಿಯನ್ನು ಪಡೆದನು ಮತ್ತು ಆ ಆಶ್ರಮದ ನಿವಾಸಿಗಳೆಲ್ಲರಿಗೂ ಸಮ್ಮತನಾದನು.

ಏವಂ ಪ್ರಾಪ್ತೋ ಮಹತ್ಕಷ್ಟಮೃಷಿಃ ಸ ನೃಪಸತ್ತಮ ।
ಬ್ರಾಹ್ಮಣೇನ ನ ವಕ್ತವ್ಯಂ ತಸ್ಮಾದ್ ವರ್ಣಾವರೇ ಜನೇ ॥೬೦॥

ಎಲೈ ರಾಜಶ್ರೇಷ್ಠನೇ, ಆ ಋಷಿಯು ಹೀಗೆ ದೊಡ್ಡ ಕಷ್ಟಕ್ಕೆ ಸಿಲುಕಿದನು. ಆದ್ದರಿಂದ ಬ್ರಾಹ್ಮಣನಾದವನು ವರ್ಣದಿಂದ ಅಧಮನಾದವನಿಗೆ ಉಪದೇಶವನ್ನು ಮಾಡಬಾರದು.

ವರ್ಜಯೇದುಪದೇಶಂ ಚ ಸದೈವ ಬ್ರಾಹ್ಮಣೋ ನೃಪ ।
ಉಪದೇಶಂ ಹಿ ಕುರ್ವಾಣೋ ದ್ವಿಜಃ ಕೃಚ್ಛ್ರಮವಾಪ್ನುಯಾತ್ ॥೬೧॥

ಎಲೈ ರಾಜನೇ, ಬ್ರಾಹ್ಮಣನು ಯಾವಾಗಲೂ ಉಪದೇಶವನ್ನು ಮಾಡುವುದನ್ನು ವರ್ಜಿಸಬೇಕು. ಉಪದೇಶ ಮಾಡುವ ಬ್ರಾಹ್ಮಣನು ಕಷ್ಟಕ್ಕೆ ಸಿಲುಕುತ್ತಾನೆ.

ಏಷಿತವ್ಯಂ ಸದಾ ವಾಚಾ ನೃಪೇಣ ದ್ವಿಜಸತ್ತಮಾತ್ ।
ನ ಪ್ರವಕ್ತವ್ಯಮಿಹ ಹಿ ಕಿಂಚಿದ್ ವರ್ಣಾವರೇ ಜನೇ ॥೬೨॥

ರಾಜನಾದವನು ತನ್ನ ರಾಜ್ಯದಲ್ಲಿ ಬ್ರಾಹ್ಮಣನಾದವನು ವರ್ಣಾಧಮನಾದವನಿಗೆ ಏನನ್ನೂ ಉಪದೇಶ ಮಾಡಬಾರದೆಂದು ಆಶಿಸಬೇಕು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಸ್ತ್ರಯೋ ವರ್ಣಾ ದ್ವಿಜಾತಯಃ ।
ಏತೇಷು ಕಥಯನ್ ರಾಜನ್ ಬ್ರಾಹ್ಮಣೋ ನ ಪ್ರದುಷ್ಯತಿ ॥೬೩॥

ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂರು ವರ್ಣದವರು ದ್ವಿಜನ್ಮವುಳ್ಳವರು (ದ್ವಿಜರು). ಎಲೈ ರಾಜನೇ, ಅವರಿಗೆ ಉಪದೇಶವನ್ನು ಮಾಡಿದರೆ ಬ್ರಾಹ್ಮಣನಿಗೆ ದೋಷ ಉಂಟಾಗುವುದಿಲ್ಲ.

ತಸ್ಮಾತ್ ಸದ್ಭಿರ್ನ ವಕ್ತವ್ಯಂ ಕಸ್ಯಚಿತ್ ಕಿಂಚಿದಗ್ರತಃ ।
ಸೂಕ್ಷ್ಮಾ ಗತಿರ್ಹಿ ಧರ್ಮಸ್ಯ ದುರ್ಜ್ಞೇಯಾ ಹ್ಯಕೃತಾತ್ಮಭಿಃ ॥೬೪॥

ಆದ್ದರಿಂದ ಸಜ್ಜನನಾದವನು ಯಾವನಿಗಾದರೂ, ಯಾವಾಗಲಾದರೂ ಉಪದೇಶವನ್ನು ಮಾಡಬಾರದು. ಧರ್ಮದ ಮಾರ್ಗವು ಬಹಳ ಸೂಕ್ಷ್ಮವಾದುದು. ವಿವೇಕವಿಲ್ಲದವರು ಅದನ್ನು ತಿಳಿಯಲಾರರು.

ತಸ್ಮಾನ್ಮೌನಾನಿ ಮುನಯೋ ದೀಕ್ಷಾಂ ಕುರ್ವಂತಿ ಚಾದೃತಾಃ ।
ದುರುಕ್ತಸ್ಯ ಭಯಾದ್ ರಾಜನ್ ನಾನುಭಾಷಂತಿ ಕಿಂಚನ ॥೬೫॥

ಆದ್ದರಿಂದ ಋಷಿಗಳು ಆದರದಿಂದ ಮೌನದೀಕ್ಷೆಯನ್ನು ವಹಿಸುತ್ತಾರೆ. ಎಲೈ ರಾಜನೇ, ಎಲ್ಲಿ ಅಯೋಗ್ಯರಿಗೆ ಉಪದೇಶ ಮಾಡುವೆವೋ ಎಂಬ ಭಯದಿಂದ ಅವರು ಏನನ್ನೂ ಮಾತನಾಡುವುದಿಲ್ಲ.

ಧಾರ್ಮಿಕಾ ಗುಣಸಂಪನ್ನಾಃ ಸತ್ಯಾರ್ಜವಪರಾಯಣಾಃ ।
ದುರುಕ್ತವಾಚಾऽಭಿಹತಾಃ ಪ್ರಾಪ್ನುವಂತೀಹ ದುಷ್ಕೃತಮ್ ॥೬೬॥

ಧಾರ್ಮಿಕರೂ, ಗುಣಸಂಪನ್ನರೂ, ಸತ್ಯ ಮತ್ತು ಋಜುತನದಲ್ಲಿ ನಿರತರಾದವರೂ ಸಹ ಇಂತಹ ದುಷ್ಟ ಉಪದೇಶಗಳನ್ನು ಕೊಡುವುದಾದರೆ ಪಾಪವನ್ನು ವರಿಸುತ್ತಾರೆ.

ಉಪದೇಶೋ ನ ಕರ್ತವ್ಯಃ ಕದಾಚಿದಪಿ ಕಸ್ಯಚಿತ್ ।
ಉಪದೇಶಾದ್ಧಿ ತತ್ಪಾಪಂ ಬ್ರಾಹ್ಮಣಃ ಸಮವಾಪ್ನುಯಾತ್ ॥೬೭॥

ಯಾವಾಗಲಾದರೂ, ಯಾವನಿಗಾದರೂ ಉಪದೇಶವನ್ನು ಕೊಡಬಾರದು. ಉಪದೇಶವನ್ನು ನೀಡಿದರೆ ಬ್ರಾಹ್ಮಣನು ಆ ಉಪದೇಶವನ್ನು ಪಡೆದವನ ಪಾಪವನ್ನು ತೆಗೆದುಕೊಳ್ಳುತ್ತಾನೆ.

ವಿಮೃಶ್ಯ ತಸ್ಮಾತ್ ಪ್ರಾಜ್ಞೇನ ವಕ್ತವ್ಯಂ ಧರ್ಮಮಿಚ್ಛತಾ ।
ಸತ್ಯಾನೃತೇನ ಹಿ ಕೃತ ಉಪದೇಶೋ ಹಿನಸ್ತಿ ವೈ ॥೬೮॥

ಆದ್ದರಿಂದ ವಿವೇಕಿಯಾದವನು, ಧರ್ಮವನ್ನು ಸಂಪಾದಿಸಲು ಬಯಸುವವನು ವಿಚಾರವನ್ನು ಮಾಡಿ ಮಾತನಾಡಬೇಕು. ಸತ್ಯ ಮತ್ತು ಅನೃತದಿಂದ ಕೂಡಿದ ಉಪದೇಶವು ಉಪದೇಶಕನನ್ನು ನಾಶಗೊಳಿಸುತ್ತದೆ.

ವಕ್ತವ್ಯಮಿಹ ಪೃಷ್ಟೇನ ವಿನಿಶ್ಚಿತ್ಯ ವಿಪರ್ಯಯಮ್ ।
ಸ ಚೋಪದೇಶಃ ಕರ್ತವ್ಯೋ ಯೇನ ಧರ್ಮಮವಾಪ್ನುಯಾತ್ ॥೬೯॥

ಪ್ರಶ್ನೆಯನ್ನು ಮಾಡಿದಾಗ ಮಾತ್ರ ಉಪದೇಶವನ್ನು ಮಾಡದಿದ್ದರೆ ಉಂಟಾಗುವ ಅನರ್ಥವನ್ನು ತಿಳಿದು ಉಪದೇಶವನ್ನು ಮಾಡಬೇಕು. ಯಾವ ಉಪದೇಶವನ್ನು ಮಾಡಿದರೆ ತನಗೆ ಧರ್ಮವು ಉಂಟಾಗುವುದೋ ಅಂತಹ ಉಪದೇಶವನ್ನು ಮಾಡಬೇಕು.

ಏತತ್ ತೇ ಸರ್ವಮಾಖ್ಯಾತಮುಪದೇಶೇ ಕೃತೇ ಸತಿ ।
ಮಹಾನ್ ಕ್ಲೇಶೋ ಹಿ ಭವತಿ ತಸ್ಮಾನ್ನೋಪದಿಶೇತ್ ಕ್ವಚಿತ್ ॥೭೦॥

ನಾನು ನಿನಗೆ ಇದೆಲ್ಲವನ್ನೂ ಹೇಳಿದ್ದೇನೆ. ಸಾರ್ವಜನಿಕವಾಗಿ ಉಪದೇಶ ಮಾಡಿದರೆ ದೊಡ್ಡ ಕ್ಲೇಶವು ಉಂಟಾಗುತ್ತದೆ. ಆದ್ದರಿಂದ ಅಂತಹ ಉಪದೇಶವನ್ನು ಮಾಡಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ವರ್ಣಾವರೇ
ಉಪದೇಶೋಪಾಖ್ಯಾನಂ ನಾಮ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆಂಟನೆಯ ಅಧ್ಯಾಯ

ಲಕ್ಷ್ಮೀನಿವಾಸಸ್ಥಾನಗಳು, ಶ್ರೀದೇವಿ-ರುಗ್ಮಿಣಿಯರ ಸಂವಾದ

ಯುಧಿಷ್ಠಿರಃ

ಕೀದೃಶೇ ಪುರುಷೇ ತಾತ ಸ್ತ್ರೀಷು ವಾ ಭರತರ್ಷಭ ।
ಶ್ರೀಃ ಪದ್ಮಾ ವಸತೇ ನಿತ್ಯಂ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಭರತಶ್ರೇಷ್ಠನೇ, ಪಿತಾಮಹನೇ, ಎಂತಹ ಪುರುಷನಲ್ಲಿ ಅಥವಾ ಸ್ತ್ರೀಯಲ್ಲಿ ಲಕ್ಷ್ಮೀದೇವಿಯು ಸತತವಾಗಿ ವಾಸಿಸುತ್ತಾಳೆ ಎಂದು ನನಗೆ ಹೇಳು.

ಭೀಷ್ಮಃ

ಅತ್ರ ತೇ ವರ್ತಯಿಷ್ಯಾಮಿ ಯಥಾದೃಷ್ಟಂ ಯಥಾಶ್ರುತಮ್ ।
ರುಗ್ಮಿಣೀ ದೇವಕೀಪುತ್ರಸನ್ನಿಧೌ ಪರ್ಯಪೃಚ್ಛತ ॥೨॥

ಭೀಷ್ಮ– ಈ ವಿಷಯದಲ್ಲಿ ನಾನು ಕೇಳಿದಂತೆ ಮತ್ತು ನೋಡಿದಂತೆ ನಿನಗೆ ಹೇಳುತ್ತೇನೆ. ರುಗ್ಮಿಣಿಯು ದೇವಕೀಪುತ್ರನ ಸನ್ನಿಧಿಯಲ್ಲಿ ಪ್ರಶ್ನೆ ಮಾಡಿದಳು.

ನಾರಾಯಣಸ್ಯಾಂಕಗತಾಂ ಜ್ವಲಂತೀಂ
ದೃಷ್ಟ್ವಾ ಶ್ರಿಯಂ ಪದ್ಮಸಮಾನವಕ್ತ್ರಾಮ್ ।
ಕೌತೂಹಲಾದ್ ವಿಸ್ಮಿತಚಾರುನೇತ್ರಾ
ಪಪ್ರಚ್ಛ ಮಾತಾ ಮಕರಧ್ವಜಸ್ಯ ॥೩॥

ನಾರಾಯಣನ ತೊಡೆಯಲ್ಲಿ ಕುಳಿತ ಪದ್ಮಸಮಾನವಾದ ಮುಖವುಳ್ಳ, ಕಾಂತಿಯಿಂದ ಜ್ವಲಿಸುವ ಶ್ರೀದೇವಿಯನ್ನು ನೋಡಿ ವಿಸ್ಮಯಗೊಂಡ ಸುಂದರನೇತ್ರೆಯಾದ, ಮಕರ ಧ್ವಜನಾದ ಮನ್ಮಥನ ತಾಯಿಯಾದ ರುಗ್ಮಿಣಿಯು ಕುತೂಹಲದಿಂದ ಪ್ರಶ್ನೆ ಮಾಡಿದಳು.

ಕಾನೀಹ ಭೂತಾನ್ಯುಪಸೇವಸೇ ತ್ವಂ
ಸಂತಿಷ್ಠತೀ ಕಾನಿ ನ ಸೇವಸೇ ತ್ವಮ್ ।
ತಾನಿ ತ್ರಿಲೋಕೇಶ್ವರಭೂತಕಾಂತೇ
ತತ್ತ್ವೇನ ಮೇ ಬ್ರೂಹಿ ಮಹರ್ಷಿಕನ್ಯೇ ॥೪॥

ನೀನು ಯಾವ ಜೀವರನ್ನು ಆಶ್ರಯಿಸಿಕೊಂಡಿರುತ್ತೀಯೆ? ನೆಲೆಸಿದವಳು ಯಾವ ಪುರುಷರನ್ನು ಬಿಟ್ಟು ಹೋಗುತ್ತೀಯೆ? ಎಲೈ ತ್ರಿಲೋಕೇಶ್ವರನಾದ ನಾರಾಯಣನ ಪತ್ನಿಯೇ, ಮಹರ್ಷಿಗಳಾದ ಭೃಗುಗಳ ಪುತ್ರಿಯೇ, ಆ ಸ್ಥಾನಗಳನ್ನು ನನಗೆ ಸರಿಯಾಗಿ ಹೇಳು.

ಏವಂ ತದಾ ಶ್ರೀರಭಿಭಾಷ್ಯಮಾಣಾ
ದೇವ್ಯಾ ಸಮಕ್ಷಂ ಗರುಡಧ್ವಜಸ್ಯ ।
ಉವಾಚ ವಾಕ್ಯಂ ಮಧುರಾಭಿಧಾನಂ
ಮನೋಹರಂ ಚಂದ್ರಮುಖೀ ಪ್ರಸನ್ನಾ ॥೫॥

ಹೀಗೆ ಲಕ್ಷ್ಮೀದೇವಿಯು ಗರುಡಧ್ವಜನಾದ ನಾರಾಯಣನ ಸಮಕ್ಷಮದಲ್ಲಿ ರುಗ್ಮಿಣಿಯಿಂದ ಮಾತನಾಡಿಸಲ್ಪಟ್ಟಾಗ ಚಂದ್ರಮುಖಿಯೂ, ಪ್ರಸನ್ನಚಿತ್ತಳೂ ಆದ ಅವಳು ಮಧುರವೂ, ಮನೋಹರವೂ ಆದ ಮಾತುಗಳನ್ನು ಆಡಿದಳು.

ವಸಾಮಿ ಸತ್ಯೇ ಸುಭಗೇ ಪ್ರಗಲ್ಭೇ
ದಕ್ಷೇ ನರೇ ಕರ್ಮಣಿ ವರ್ತಮಾನೇ ।
ನಾಕರ್ಮಶೀಲೇ ಪುರುಷೇ ವಸಾಮಿ
ನ ನಾಸ್ತಿಕೇ ಸಾಂಕರಿಕೇ ಕೃತಘ್ನೇ ।
ನ ಭಿನ್ನವೃತ್ತೇ ನ ನೃಶಂಸವೃತ್ತೇ
ನ ಚಾಪಿ ಚೋರೇ ನ ಗುರುಷ್ವಸೂಯೇ ॥೬॥

ಸತ್ಯವಂತನಾದ ಪುರುಷನಲ್ಲಿ, ಸುಬಲನಲ್ಲಿ, ವಿದ್ವಾಂಸನಲ್ಲಿ, ದಕ್ಷನಾದ ಮನುಷ್ಯನಲ್ಲಿ, ಯಾವಾಗಲೂ ಕ್ರಿಯಾಶೀಲನಾದ ಮನುಷ್ಯನಲ್ಲಿ ವಾಸ ಮಾಡುತ್ತೇನೆ. ಕ್ರಿಯಾಶೀಲನಲ್ಲದ ಮನುಷ್ಯನಲ್ಲಿ, ನಾಸ್ತಿಕನಲ್ಲಿ, ಸಂಕರವನ್ನು ಮಾಡಿದವನಲ್ಲಿ ಮತ್ತು ಕೃತಘ್ನನಲ್ಲಿ ವಾಸ ಮಾಡುವುದಿಲ್ಲ. ಒಳಗಿನಿಂದ ಒಂದು, ಹೊರಗಿನಿಂದ ಇನ್ನೊಂದು ನಡತೆಯನ್ನು ಹೊಂದಿರುವವನಲ್ಲಿ, ಕ್ರೂರವಾದ ನಡತೆಯನ್ನು ಹೊಂದಿರುವವನಲ್ಲಿ, ಚೋರನಲ್ಲಿ, ಗುರುವನ್ನು ನೋಡಿ ಅಸೂಯೆ ಪಡುವವನಲ್ಲಿ ನಾನು ವಾಸ ಮಾಡುವುದಿಲ್ಲ.

ಯೇ ಚಾಲ್ಪತೇಜೋಬಲಸತ್ತ್ವಸಾರಾ
ಹೃಷ್ಯಂತಿ ತರ್ಪ್ಯಂತಿ ಚ ಯತ್ರ ತತ್ರ ।
ನ ದೇವಿ ತಿಷ್ಠಾಮಿ ತಥಾವಿಧೇಷು
ನರೇಷು ಸಂಸುಪ್ತಮನೋರಥೇಷು ॥೭॥

ಎಲೌ ದೇವಿಯೇ, ಯಾರು ಅಲ್ಪ ತೇಜೋಬಲ-ಧೈರ್ಯ-ಶಕ್ತಿಗಳಿಂದ ಕೂಡಿದವರಾಗಿ ಅಲ್ಲಲ್ಲಿ ಸಣ್ಣಪುಟ್ಟ ವಿಷಯಗಳಲ್ಲಿ ಸಂತೋಷಗೊಂಡು ತೃಪ್ತಿಯನ್ನು ಹೊಂದುತ್ತಾರೆಯೋ, ಎಲೌ ದೇವಿಯೇ, ಅಂತಹವರಲ್ಲಿ ನಾನು ಇರುವುದಿಲ್ಲ. ಮನೋರಥಗಳು ನಶಿಸಿಹೋದ ಪುರುಷನಲ್ಲಿಯೂ ನಾನು ಇರುವುದಿಲ್ಲ.

ಯಶ್ಚಾತ್ಮನಿ ಪ್ರಾರ್ಥಯತೇ ನ ಕಿಂಚಿದ್
ಯಶ್ಚ ಸ್ವಭಾವೋಪಹತಾಂತರಾತ್ಮಾ ।
ತೇಷ್ವಲ್ಪಸಂತೋಷರತೇಷು ನಿತ್ಯಂ
ನರೇಷು ನಾಹಂ ನಿವಸಾಮಿ ದೇವಿ ॥೮॥

ಯಾವನು ಮನಸ್ಸಿನಿಂದ ಏನನ್ನೂ ಆಶಿಸುವುದಿಲ್ಲವೋ, ಯಾವನ ಮನಸ್ಸು ಸ್ವಾಭಾವಿಕವಾಗಿ ಮಲಿನವಾಗಿದೆಯೋ, ಎಲೌ ದೇವಿಯೇ, ಅಂತಹ ಅಲ್ಪ ಸಂತೋಷದಲ್ಲೇ ನಿರತನಾದ ನರರಲ್ಲಿ ನಾನು ಎಂದೂ ವಾಸಮಾಡುವುದಿಲ್ಲ.

ವಸಾಮಿ ಧರ್ಮಶೀಲೇಷು ಧರ್ಮಜ್ಞೇಷು ಮಹಾತ್ಮಸು ।
ವೃದ್ಧಸೇವಿಷು ದಾಂತೇಷು ಸತ್ತ್ವಜ್ಞೇಷು ಮಹಾತ್ಮಸು ॥೯॥

ಧರ್ಮಶೀಲರಲ್ಲಿ, ಧರ್ಮವನ್ನು ತಿಳಿದವರಲ್ಲಿ, ಮಹಾತ್ಮರಲ್ಲಿ, ಹಿರಿಯರ ಸೇವೆಯನ್ನು ಮಾಡುವವರಲ್ಲಿ, ಇಂದ್ರಿಯನಿಗ್ರಹವುಳ್ಳವರಲ್ಲಿ, ಸತ್ವಗುಣವನ್ನು ತಿಳಿದ ಮಹಾತ್ಮರಲ್ಲಿ ವಾಸ ಮಾಡುತ್ತೇನೆ.

ಸ್ತ್ರೀಷು ಕ್ಷಾಂತಾಸು ದಾಂತಾಸು ದೇವದ್ವಿಜಪರಾಸು ಚ ।
ವಸಾಮಿ ಸತ್ಯಶೀಲಾಸು ಸ್ವಭಾವನಿರತಾಸು ಚ ॥೧೦॥

ಕ್ಷಮೆಯನ್ನು ಹೊಂದಿದ, ಇಂದ್ರಿಯನಿಗ್ರಹವುಳ್ಳ, ದೇವಪರಾಯಣರಾದ, ಸತ್ಯಶೀಲರಾದ, ತಮ್ಮ ಸ್ವಭಾವದಂತೆ ನಡೆದುಕೊಳ್ಳುವ ಸ್ತ್ರೀಯರಲ್ಲಿ ನಾನು ವಾಸಿಸುತ್ತೇನೆ.

ಪ್ರಕೀರ್ಣಭಾಂಡಾಮನವೇಕ್ಷ್ಯಕಾರಿಣೀಂ
ಸದಾ ಚ ಭರ್ತುಃ ಪ್ರತಿಕೂಲವಾದಿನೀಮ್ ।
ಪರಸ್ಯ ವೇಶ್ಮಾಭಿರತಾಮಲಜ್ಜಾಮ್
ಏವಂವಿಧಾಂ ಸ್ತ್ರೀಂ ಪರಿವರ್ಜಯಾಮಿ ॥೧೧॥

ಮನೆಯಲ್ಲಿ ಪಾತ್ರೆಗಳನ್ನು ಚೆಲ್ಲಾಡುವಂತಹ, ವಿಚಾರ ಮಾಡದೆ ಕೆಲಸವನ್ನು ಮಾಡುವ, ಗಂಡನಿಗೆ ಯಾವಾಗಲೂ ಎದುರಾಗಿ ಮಾತನಾಡುವ, ಇನ್ನೊಬ್ಬರ ಮನೆಯಲ್ಲೇ ಕಾಲವನ್ನು ಕಳೆಯುವ, ಲಜ್ಜಾಹೀನಳಾದ ಸ್ತ್ರೀಯನ್ನು ನಾನು ಪರಿತ್ಯಜಿಸುತ್ತೇನೆ.

ಲೋಲಾಂ ಮತಾಕ್ಷಾಮವಲೇಪಿನೀಂ ಚ
ವ್ಯಪೇತಧೈರ್ಯಾಂ ಕಲಹಪ್ರಿಯಾಂ ಚ ।
ನಿದ್ರಾಭಿಭೂತಾಂ ಸತತಂ ಶಯಾನಾಮ್
ಏವಂವಿಧಾಂ ಸ್ತ್ರೀಂ ಪರಿವರ್ಜಯಾಮಿ ॥೧೨॥

ಚಂಚಲಳಾದವಳನ್ನು, ಪಗಡೆಯಾಟದಲ್ಲಿ ನಿಪುಣಳಾದವಳನ್ನು, ಅಹಂಕಾರ ಉಳ್ಳವಳನ್ನು, ಧೈರ್ಯವಿಲ್ಲದವಳನ್ನು, ಕಲಹಪ್ರಿಯಳಾದವಳನ್ನು, ಹೆಚ್ಚಾಗಿ ನಿದ್ರೆ ಮಾಡುವವಳನ್ನು, ಯಾವಾಗಲೂ ಮಲಗಿರುವವಳನ್ನು - ಇಂತಹ ಸ್ತ್ರೀಯರನ್ನು ನಾನು ಪರಿತ್ಯಜಿಸುತ್ತೇನೆ.

ಸತ್ಯಾಸು ನಿತ್ಯಂ ಪ್ರಿಯದರ್ಶನಾಸು
ಸೌಭಾಗ್ಯಯುಕ್ತಾಸು ಗುಣಾನ್ವಿತಾಸು ।
ವಸಾಮಿ ನಾರೀಷು ಪತಿವ್ರತಾಸು
ಕಲ್ಯಾಣಶೀಲಾಸು ವಿಭೂಷಿತಾಸು ॥೧೩॥

ಸತ್ಯವಂತರಾದ, ನಿತ್ಯವೂ ನೋಡಲು ಪ್ರಿಯರಾದ, ಸೌಭಾಗ್ಯ ದ್ರವ್ಯಗಳಿಂದ ಕೂಡಿದ, ಗುಣವಂತರಾದ, ಕಲ್ಯಾಣವಾದ ನಡತೆಯುಳ್ಳ, ಅಲಂಕೃತಳಾದ ಪತಿವ್ರತೆಯರಲ್ಲಿ ನಾನು ವಾಸಿಸುತ್ತೇನೆ.

ಯಾನೇಷು ಕನ್ಯಾಸು ವಿಭೂಷಣೇಷು
ಯಜ್ಞೇಷು ಮೇಘೇಷು ಚ ವೃಷ್ಟಿಮತ್ಸು ।
ವಸಾಮಿ ಫುಲ್ಲಾಸು ಚ ಪದ್ಮಿನೀಷು
ನಕ್ಷತ್ರವೀಥೀಷು ಚ ಶಾರದೀಷು ॥೧೪॥

ಶೈಲೇಷು ಗೋಷ್ಠೇಷು ತಥಾ ವನೇಷು
ಸರಃಸು ಫುಲ್ಲೋತ್ಪಲಪಂಕಜೇಷು ।
ನದೀಷು ಹಂಸಸ್ವನನಾದಿತಾಸು
ಕ್ರೌಂಚಿವಘುಷ್ಟಸ್ವರಭೂಷಿತಾಸು ॥೧೫॥

ಯಾನಗಳಲ್ಲಿ, ಕನ್ಯೆಯರಲ್ಲಿ, ಆಭರಣಗಳಲ್ಲಿ, ಯಜ್ಞಗಳಲ್ಲಿ, ನೀರು ತುಂಬಿದ ಮೋಡಗಳಲ್ಲಿ, ಅರಳಿದ ಕಮಲ ಸರೋವರಗಳಲ್ಲಿ, ಶರತ್ಕಾಲದ ರಾತ್ರಿಯ ನಕ್ಷತ್ರಗಳಲ್ಲಿ

ನಾನು ವಾಸಿಸುತ್ತೇನೆ. ಪರ್ವತಗಳಲ್ಲಿ, ಗೋಶಾಲೆಗಳಲ್ಲಿ, ಅರಣ್ಯಗಳಲ್ಲಿ, ಸರೋವರಗಳಲ್ಲಿ, ಉತ್ಪಲ ಮತ್ತು ಪದ್ಮಗಳು ಅರಳಿರುವ ಸರೋವರಗಳಲ್ಲಿ, ಹಂಸಸ್ವನಗಳಿಂದಲೂ ಮತ್ತು ಕ್ರೌಂಚಪಕ್ಷಿಗಳ ಸ್ವರಗಳಿಂದಲೂ ಕೂಡಿದ ನದಿಗಳಲ್ಲಿ ನಾನು ವಾಸಿಸುತ್ತೇನೆ.

ವಿಸ್ತೀರ್ಣಕೂಲಹ್ರದಶೋಭಿತಾಸು
ತಪಸ್ವಿಸಿದ್ಧದ್ವಿಜಸೇವಿತಾಸು ।
ವಸಾಮಿ ನಿತ್ಯಂ ಸುಬಹೂದಕಾಸು
ಸಿಂಹೈರ್ಗಜೈಶ್ಚಾಕುಲಿತೋದಕಾಸು ।
ಮತ್ತೇ ಗಜೇ ಗೋವೃಷಭೇ ನರೇಂದ್ರೇ
ಸಿಂಹಾಸನೇ ಸತ್ಪುರುಷೇ ಚ ನಿತ್ಯಮ್ ॥೧೬॥

ವಿಸ್ತಾರವಾದ ದಡವನ್ನು ಹೊಂದಿದ, ವ್ಯಗಗಳಿಂದ ಶೋಭಿಸುವ, ತಪಸ್ವಿಗಳಿಂದಲೂ, ಬ್ರಾಹ್ಮಣರಿಂದಲೂ, ಸಿದ್ಧರಿಂದಲೂ ಸೇವಿತವಾದ, ಬಹಳ ಜಲವುಳ್ಳ, ಸಿಂಹ-ಗಜಗಳಿಂದ ಕಲಕಲ್ಪಡುವ ಜಲವುಳ್ಳ ಸರೋವರಗಳಲ್ಲಿ ನಾನು ಯಾವಾಗಲೂ ವಾಸಿಸುತ್ತೇನೆ. ಮದಿಸಿದ ಆನೆಯಲ್ಲಿಯೂ, ಗೋ-ವೃಷಭದಲ್ಲಿಯೂ, ರಾಜನಲ್ಲಿಯೂ, ಸಿಂಹಾಸನದಲ್ಲಿಯೂ ಮತ್ತು ಸತ್ಪುರುಷನಲ್ಲಿಯೂ ನಿತ್ಯವೂ ವಾಸಿಸುತ್ತೇನೆ.

ಯಸ್ಮಿನ್ ಯಜ್ಞೇ ಹೂಯತಿ ಹವ್ಯವಾಹೇ
ಗೋಬ್ರಾಹ್ಮಣಾಭ್ಯರ್ಚಿತದೇವತಾಸು ।
ಕಾಲೇ ಚ ಪುಷ್ಪೈರ್ಬಲಯಃ ಕ್ರಿಯಂತೇ
ತಸ್ಮಿನ್ ಗೃಹೇ ನಿತ್ಯಮುಪೈಮಿ ವಾಸಮ್ ॥೧೭॥

ಯಾವ ಗೃಹದಲ್ಲಿ ಗೋ-ಬ್ರಾಹ್ಮಣರಿಂದ ಪೂಜಿಸಲ್ಪಡುವ ದೇವತೆಗಳಿಗೆ ಅಗ್ನಿ ಮುಖದಲ್ಲಿ ಆಹುತಿಯು ಕೊಡಲ್ಪಡುತ್ತದೆಯೋ, ಯೋಗ್ಯವಾದ ಕಾಲದಲ್ಲಿ ಪುಷ್ಪಗಳಿಂದ ಪೂಜೆಯು ಮಾಡಲ್ಪಡುತ್ತದೆಯೋ ಅಂತಹ ಗೃಹದಲ್ಲಿ ನಿತ್ಯವೂ ವಾಸವಾಗಿರುತ್ತೇನೆ.

ಸ್ವಾಧ್ಯಾಯನಿತ್ಯೇಷು ದ್ವಿಜೇಷು ನಿತ್ಯಂ
ಕ್ಷತ್ರೇ ಚ ಧರ್ಮಾಭಿರತೇ ಸದೈವ ।

ವೈಶ್ಯೇ ಚ ಕೃಷ್ಯಾಭಿರತೇ ವಸಾಮಿ
ಶೂದ್ರೇ ಚ ಶಿ(ಶು)ಶ್ರೂಷಣನಿತ್ಯಯತ್ನೇ ॥೧೮॥

ಸ್ವಾಧ್ಯಾಯನಿರತರಾದ ದ್ವಿಜರಲ್ಲಿ ಯಾವಾಗಲೂ ವಾಸಿಸುತ್ತೇನೆ. ಧರ್ಮಾಭಿರುಚಿಯುಳ್ಳ ಕ್ಷತ್ರಿಯನಲ್ಲಿ, ಕೃಷಿನಿರತನಾದ ವೈಶ್ಯನಲ್ಲಿಮತ್ತು ಶುಶ್ರೂಷಾ ಪರನಾದ ಶೂದ್ರನಲ್ಲಿಯಾವಾಗಲೂ ನೆಲೆಸಿರುತ್ತೇನೆ.

ನಾರಾಯಣೇ ತ್ವೇಕಮನಾ ವಸಾಮಿ
ಸರ್ವೇಣ ಭಾವೇನ ಶರೀರಭೂತಾ ।
ತಸ್ಮಿನ್ ಹಿ ಧರ್ಮಃ ಸುಮಹಾನ್ ನಿವಿಷ್ಟೋ
ಬ್ರಹ್ಮಣ್ಯತಾ ಚಾತ್ರ ತಥಾ ಪ್ರಿಯತ್ವಮ್ ॥೧೯॥

ನಾರಾಯಣನಲ್ಲಿಯೇ ಮನಸ್ಸುಳ್ಳವಳಾಗಿ ಎಲ್ಲ ಭಾವಗಳಿಂದಲೂ ಅವನಿಗೆ ಶರೀರಳೆಂದೆನಿಸಿ ಅವನಲ್ಲಿ ನೆಲೆಸಿದ್ದೇನೆ. ಏಕೆಂದರೆ ಅವನಲ್ಲಿ ದೊಡ್ಡ ಧರ್ಮವೂ, ಬ್ರಾಹ್ಮಣ ವಾತ್ಸಲ್ಯವೂ ಮತ್ತು ಬ್ರಾಹ್ಮಣರಿಗೆ ಪ್ರಿಯವಾಗಿರುವಿಕೆಯೂ ದೊಡ್ಡ ಪ್ರಮಾಣದಲ್ಲಿಸೇರಿಕೊಂಡಿವೆ.

ನಾಹಂ ಶರೀರೇಣ ವಸಾಮಿ ದೇವಿ
ನೈವಂ ಮಯಾ ಶಕ್ಯಮಿಹಾಭಿಧಾತುಮ್ ।
ಯಸ್ಮಿಂಸ್ತು ಭಾವೇನ ವಸಾಮಿ ಪುಂಸಿ
ಸ ವರ್ಧತೇ ಧರ್ಮಯಶೋರ್ಥಕಾಮೈಃ ॥೨೦॥

ಎಲೌ ದೇವಿಯೇ, ನಾನು ದೇಹದಿಂದ ವಾಸ ಮಾಡುವುದಿಲ್ಲ. ಉಳಿದ ವಿಷಯವನ್ನು ನಾನು ಹೇಳಲಾರೆ. ನಾನು ಯಾವ ಪುರುಷನಲ್ಲಿ ನನ್ನ ಮನಸ್ಸಿನಿಂದ ನೆಲೆಸುತ್ತೇನೆಯೋ ಅವನು ಧರ್ಮ-ಯಶಸ್ಸು ಮತ್ತು ಅರ್ಥ-ಕಾಮಗಳಿಂದ ಅಭಿವೃದ್ಧಿಯನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಶ್ರಿಯಾ ಸಹ ರುಗ್ಮಿಣೀಸಂವಾದೋ ನಾಮ ಅಷ್ಟಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂಬತ್ತನೆಯ ಅಧ್ಯಾಯ

ವತ್ಸನಾಭೋಪಾಖ್ಯಾನ

ಯುಧಿಷ್ಠಿರಃ

ಪ್ರಾಯಶ್ಚಿತ್ತಂ ಕೃತಘ್ನಾನಾಂ ಪ್ರತಿಬ್ರೂಹಿ ಪಿತಾಮಹ ।
ಮಾತೃಃ ಪಿತೄನ್ ಗುರೂಂಶ್ಚೈವ ಯೇಽವಮನ್ಯಂತಿ ಮೋಹಿತಾಃ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಭ್ರಾಂತಿಗೆ ಒಳಗಾಗಿ ತಂದೆ-ತಾಯಿಯರನ್ನೂ, ಗುರುಗಳನ್ನೂ ಅವಮಾನ ಮಾಡುವ ಕೃತಘ್ನರಿಗೆ ಏನು ಪ್ರಾಯಶ್ಚಿತ್ತವಿದೆ ಎಂದು ಹೇಳು.

ಯೇ ಚಾಪ್ಯನ್ಯೇ ಪರೇ ತಾತ ಕೃತಘ್ನಾ ನಿರಪತ್ರಪಾಃ ।
ತೇಷಾಂ ಗತಿಂ ಮಹಾಬಾಹೋ ಶ್ರೋತುಮಿಚ್ಛಾಮಿ ತತ್ತ್ವತಃ ॥೨॥

ಎಲೈ ಪ್ರೀತಿಪಾತ್ರನೇ, ಎಲೈ ಮಹಾಬಾಹುವೇ, ನಾಚಿಕೆಯಿಲ್ಲದ ಬೇರೆ ರೀತಿಯ ಕೃತಘ್ನರಿಗೂ ಸಹ ಯಾವ ಗತಿಯಿದೆ ಎಂದು ಕೇಳಲು ಬಯಸುತ್ತೇನೆ.

ಭೀಷ್ಮಃ

ಕೃತಘ್ನಾನಾಂ ಗತಿಸ್ತಾತ ನರಕೇ ಶಾಶ್ವತೀಃ ಸಮಾಃ ।
ಮಾತಾಪಿತೃಗುರೂಣಾಂ ಚ ಯೇ ನ ತಿಷ್ಠಂತಿ ಶಾಸನೇ ।
ಕೃ(ಕೃ)ಮಿಕೀಟಪಿಪೀಲೇಷು ಜಾಯಂತೇ ಸ್ಥಾವರೇಷು ಚ ॥೩॥

ಭೀಷ್ಮ– ಪ್ರೀತಿಪಾತ್ರನೇ, ಕೃತಘ್ನರಿಗೆ ನರಕದಲ್ಲಿ ಶಾಶ್ವತವಾಸವೇ ಗತಿ. ತಂದೆ-ತಾಯಿಗಳ ಮತ್ತು ಗುರುಗಳ ಮಾತುಗಳನ್ನು ಯಾರು ಕೇಳುವುದಿಲ್ಲವೋ ಅವರು ಪಿಪೀಲಿಕಾದಿ (ಇರುವೆ ಮುಂತಾದ) ಯೋನಿಯಲ್ಲಿಯೂ, ಗಿಡ-ಮರಗಳ ಯೋನಿಯಲ್ಲಿಯೂ ಜನಿಸುತ್ತಾರೆ.

ದುರ್ಲಭೋ ಹಿ ಪುನಸ್ತೇಷಾಂ ಮಾನುಷ್ಯೇ ಪುನರುದ್ಭವಃ ।
ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ॥೪॥

ಅವರು ಪುರುಷರಾಗಿ ಪುನಃ ಮನುಷ್ಯಜನ್ಮವನ್ನು ತಾಳುವುದು ದುರ್ಲಭವಾದುದು. ಈ ವಿಷಯದಲ್ಲಿ ಒಂದು ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ವತ್ಸನಾಭೋ ಮಹಾಪ್ರಾಜ್ಞೋ ಮಹರ್ಷಿಃ ಸಂಶಿತವ್ರತಃ ।
ವಲ್ಮೀಕಭೂತೋ ಬ್ರಹ್ಮರ್ಷಿಸ್ತಪ್ಯತೇ ಸುಮಹತ್ತಪಃ ॥೫॥

ವತ್ಸನಾಭನೆಂಬ ಮಹಾಪ್ರಾಜ್ಞನೂ, ಮಹರ್ಷಿಯೂ, ಒಳ್ಳೆಯ ವ್ರತಧಾರಿಯೂ ಆದ ಬ್ರಹ್ಮರ್ಷಿಯು ದೊಡ್ಡ ತಪಸ್ಸನ್ನು ಆಚರಿಸುತ್ತಿದ್ದಾಗ ಅವನ ಸುತ್ತಲೂ ಒಂದು ಹುತ್ತವು ಬೆಳೆಯಿತು.

ತಸ್ಮಿಂಶ್ಚ ತಪ್ಯತಿ ತಪೋ ವಾಸವೋ ಭರತರ್ಷಭ ।
ವವರ್ಷ ಸುಮಹದ್ ವರ್ಷಂ ಸವಿದ್ಯುತ್‌ಸ್ತನಯಿತ್ನುಮಾನ್ ॥೬॥

ಎಲೈ ಭರತಶ್ರೇಷ್ಠನೇ, ಅವನು ಆ ಹುತ್ತದಲ್ಲಿ ತಪಸ್ಸನ್ನು ಮಾಡುತ್ತಿರಲು ಇಂದ್ರನು ಗುಡುಗು-ಮಿಂಚುಗಳಿಂದ ಕೂಡಿದ ದೊಡ್ಡ ಮಳೆಯನ್ನು ಅವನ ಮೇಲೆ ಸುರಿಸಿದನು.

ತತ್ರ ಸಪ್ತಾಹವರ್ಷಂ ತು ಮುಮುಚೇ ಪಾಕಶಾಸನಃ ।
ನಿಮೀಲಿತಾಕ್ಷಸ್ತದ್ವರ್ಷಂ ಪ್ರತ್ಯಗೃಹ್ಣತ ವೈ ದ್ವಿಜಃ ॥೭॥

ಪಾಕಶಾಸನನಾದ ಇಂದ್ರನು ಏಳು ದಿನಗಳ ಕಾಲ ಮಳೆಯನ್ನು ಸುರಿಸಿದನು. ಆ ಬ್ರಾಹ್ಮಣನಾದರೂ ಕಣ್ಣುಗಳನ್ನು ಮುಚ್ಚಿ ಆ ಮಳೆಯನ್ನು ಹಾಗೆಯೇ ಧರಿಸಿದನು.

ತಸ್ಮಿನ್ ಪತತಿ ವರ್ಷೇ ತು ಶೀತವಾತಸಮನ್ವಿತೇ ।
ವಿಶೀರ್ಣಧ್ವಸ್ತಶಿಖರೋ ವಲ್ಮೀಕೋಽಶನಿತಾಡಿತಃ ॥೮॥

ಶೀತ, ವಾತಗಳಿಂದ ಕೂಡಿದ ಆ ಮಳೆಯು ಹಾಗೆ ಬರುತ್ತಿರಲು ಮೇಲ್ಭಾಗವು ಕರಗಿ ಹೋದ ಆ ವಲ್ಮೀಕಕ್ಕೆ ಒಂದು ಸಿಡಿಲು ಬಡಿಯಿತು.

ತಾಡ್ಯಮಾನೇ ತತಸ್ತಸ್ಮಿನ್ ವತ್ಸನಾಭೇ ಮಹಾತ್ಮನಿ ।
ಕಾರುಣ್ಯಾತ್ ತಸ್ಯ ಧರ್ಮಸ್ತು ಸ್ವಮಾನೃಶಂಸ್ಯಮಥಾಕರೋತ್ ॥೯॥

ಮಹಾತ್ಮನಾದ ವತ್ಸನಾಭನು ಸಿಡಿಲಿನ ಏಟನ್ನು ತೆಗೆದುಕೊಳ್ಳುವಷ್ಟರಲ್ಲಿ ಧರ್ಮದೇವತೆಯಾದ ಯಮನು ಅವನ ಮೇಲೆ ಕರುಣೆಯನ್ನು ಹೊಂದಿ ದಯೆಯನ್ನು ತೋರಿಸಿದನು (ಲಕ್ಷಾಲಂಕಾರ).

ಚಿಂತಯಾನಸ್ಯ ಬ್ರಹ್ಮರ್ಷಿಂ ತಪಂತಮತಿಧಾರ್ಮಿಕಮ್ ।
ಅನುರೂಪಾ ಮತಿಃ ಕ್ಷಿಪ್ರಮುಪಜಾತಾ ಸ್ವಭಾವಜಾ ॥೧೦॥

ತಪಸ್ಸನ್ನು ಮಾಡುತ್ತಿದ್ದ ಪರಮಧಾರ್ಮಿಕನಾದ ಆ ಬ್ರಹ್ಮರ್ಷಿಯನ್ನು ಚಿಂತಿಸುತ್ತಿದ್ದ ಯಮನಿಗೆ ಅವನ ಸ್ವಭಾವಕ್ಕೆ ಅನುಗುಣವಾದ ಬುದ್ಧಿಯು ಶೀಘ್ರವಾಗಿ ಉಂಟಾಯಿತು.

ಸ್ವಂ ರೂಪಂ ಮಾಹಿಷಂ ಕೃತ್ವಾ ಸುಮಹಾಂತಂ ಮನೋಹರಮ್ ।
ರಕ್ಷಾರ್ಥಂ ವತ್ಸನಾಭಸ್ಯ ಚತುಷ್ಪಾದುಪರಿ ಸ್ಥಿತಃ ॥೧೧॥

ಅವನು ಮನೋಹರವಾದ ಒಂದು ದೊಡ್ಡ ಎಮ್ಮೆಯ ರೂಪವನ್ನು ತೆಗೆದುಕೊಂಡು ವತ್ಸನಾಭನನ್ನು ರಕ್ಷಿಸಲು ನಾಲ್ಕು ಪಾದವುಳ್ಳವನಾಗಿ ಅವನ ಮೇಲ್ಭಾಗದಲ್ಲಿ ನಿಂತನು.

ಯದಾ ತ್ವಪಗತಂ ವರ್ಷಂ ವೃಷ್ಟಿವಾತಸಮನ್ವಿತಮ್ ।
ತತೋ ಮಹಿಷರೂಪೇಣ ಧರ್ಮೋ ಧರ್ಮಭೃತಾಂವರ ।
ಶನೈರ್ವಲ್ಮೀಕಮುತ್ಸೃಜ್ಯ ಪ್ರಾದ್ರವದ್ ಭರತರ್ಷಭ ॥೧೨॥

ಭರತರ್ಷಭನೇ, ಶೀತ-ವಾತ ಸಮನ್ವಿತವಾದ ಮಳೆಯು ನಿಂತಮೇಲೆ, ಧರ್ಮ ವಿಷಯದಲ್ಲಿ ಶ್ರೇಷ್ಠನಾದ, ಮಹಿಷರೂಪನಾದ ಧರ್ಮನು ನಿಧಾನವಾಗಿ ವಲ್ಮೀಕವನ್ನು ಬಿಟ್ಟು ಓಡಿ ಹೋಗಿ ದೂರ ನಿಂತನು.

ಸ್ಥಿತೇಽಸ್ಮಿನ್ ವೃಷ್ಟಿಸಂಪಾತೇ ವೀಕ್ಷತೇ ಸ್ಮ ಮಹಾತಪಾಃ ।
ದಿಶಶ್ಚ ವಿಪುಲಾಸ್ತತ್ರ ಗಿರೀಣಾಂ ಶಿಖಿರಾಣಿ ಚ ॥೧೩॥

ಮಳೆಯು ನಿಂತ ಮೇಲೆ ಮಹಾತಪಸ್ವಿಯಾದ ವತ್ಸನಾಭನಾದರೂ ವಿಪುಲವಾದ ದಿಕ್ಕುಗಳನ್ನೂ, ಪರ್ವತಶಿಖರಗಳನ್ನೂ ನೋಡಿದನು.

ದೃಷ್ಟ್ವಾ ಚ ಪೃಥಿವೀಂ ಸರ್ವಾಂ ಸಲಿಲೇನ ಪರಿಪ್ಲುತಾಮ್ ।
ಜಲಾಶಯಾನ್ ಸ ತಾನ್ ದೃಷ್ಟ್ವಾ ವಿಪ್ರಃ ಪ್ರಮುದಿತೋಽಭವತ್ ॥

ಭೂಮಿಯೆಲ್ಲವೂ ನೀರಿನಿಂದ ತುಂಬಿರುವುದನ್ನೂ, ಜಲಾಶಯಗಳು ನೀರಿನಿಂದ ತುಂಬಿರುವುದನ್ನೂ ನೋಡಿ ಆ ಬ್ರಾಹ್ಮಣನು ಬಹಳ ಸಂತೋಷಗೊಂಡನು.

ಅಚಿಂತಯದ್ ವಿಸ್ಮಿತಶ್ಚ ವರ್ಷಾತ್ ಕೇನಾಸ್ಮಿ ರಕ್ಷಿತಃ ।
ತತೋಽಪಶ್ಯತ್ ತತ್ರ ಮಹಿಷಮವಸ್ಥಿತಮದೂರತಃ ॥೧೫॥

ವಿಸ್ಮಯಗೊಂಡ ಅವನು ಮಳೆಯಲ್ಲಿ ತನ್ನನ್ನು ಯಾರು ರಕ್ಷಿಸಿದರು ಎಂದು ಚಿಂತಿಸಿದನು. ಅನಂತರ ಸ್ವಲ್ಪ ದೂರದಲ್ಲಿ ನಿಂತಿದ್ದ ಆ ಎಮ್ಮೆಯನ್ನು ನೋಡಿದನು.

ತಿರ್ಯಗ್ಯೋನಾವಪಿ ಕಥಂ ದೃಶ್ಯತೇ ಧರ್ಮವತ್ಸಲಃ ॥೧೬॥

ಅತೋ ನು ಭದ್ರಂ ಮಹಿಷಃ ಶಿಲಾಪಟ್ಟ ಇವ ಸ್ಥಿತಃ ।
ಪೀವರಶ್ಚೈವ ಬಲ್ಯಶ್ಚ ಬಹುಮಾಂಸೋ ಭವೇದಯಮ್ ॥೧೭॥

ಪ್ರಾಣಿಯೋನಿಯಲ್ಲಿ ಜನಿಸಿದ್ದರೂ ಈ ಮಹಿಷವು ಹೇಗೆ ಧರ್ಮವತ್ಸಲವಾಗಿದೆ? ಆದ್ದರಿಂದಲೇ ಇದು ಮಂಗಳವಾಗಿದೆ ಮತ್ತು ಕಲ್ಲು ಬಂಡೆಯಂತೆ ನಿಂತಿದೆ. ಇದು ಬಹಳ ಪುಷ್ಟವಾಗಿದೆ. ಆಹಾರಕ್ಕಾಗಿ ಉಪಯೋಗಿಸಿದರೆ ಬಹಳ ಮಾಂಸವು ದೊರೆಯಬಹುದು (ಎಂದು ಚಿಂತಿಸಿದನು).

ತಸ್ಯ ಬುದ್ಧಿರಿಯಂ ಜಾತಾ ಧರ್ಮಸಂಸಕ್ತಜಾ ಮುನೇಃ ।
ಕೃತಘ್ನಾ ನರಕಂ ಯಾಂತಿ ಯೇ ಚ ವಿಶ್ವಸ್ತಘಾತಿನಃ ॥೧೮॥

ನಿಷ್ಕೃತಿಂ ನೈವ ಪಶ್ಯಾಮಿ ಕೃತಘ್ನಾನಾಂ ಕಥಂಚನ ।
ಋತೇ ಪ್ರಾಣಪರಿತ್ಯಾಗಾದ್ ಧರ್ಮಜ್ಞಾನಾಂ ವಚೋ ಯಥಾ ॥೧೯॥

ಅನಂತರ ಆ ಋಷಿಗೆ ಧರ್ಮಾನುಗುಣವಾದ ಈ ಬುದ್ಧಿಯು ಉಂಟಾಯಿತು. ಕೃತಘ್ನರೂ, ವಿಶ್ವಾಸಘಾತಕರೂ ಆದ ಜನರು ನರಕಕ್ಕೆ ಹೋಗುತ್ತಾರೆ. ಧರ್ಮವನ್ನು ತಿಳಿದವರ ಮಾತನ್ನು ಕೇಳಿದರೆ ಕೃತಘ್ನರಾದವರಿಗೆ ಪ್ರಾಣಪರಿತ್ಯಾಗವನ್ನು ಬಿಟ್ಟು ಬೇರೆ ಯಾವ ಪ್ರಾಯಶ್ಚಿತ್ತವೂ ಇಲ್ಲ.

ಅಕೃತ್ವಾ ಭರಣಂ ಪಿತ್ರೋರದತ್ತ್ವಾ ಗುರುದಕ್ಷಿಣಾಮ್ ।
ಕೃತಘ್ನತಾಂ ಚ ಸಂಪ್ರಾಪ್ಯ ಮರಣಾಂತಾ ಚ ನಿಷ್ಕೃತಿಃ ॥೨೦॥

ತಂದೆ-ತಾಯಿಗಳ ಪೋಷಣೆಯನ್ನು ಮಾಡದೆ, ಗುರುದಕ್ಷಿಣೆಯನ್ನು ಕೊಡದೆ ಕೃತಘ್ನರಾದವರಿಗೆ ಮರಣವೇ ಪ್ರಾಯಶ್ಚಿತ್ತ ರೂಪವಾದುದು.

ಆಕಾಂಕ್ಷಾಯಾಮುಪೇಕ್ಷಾಯಾಂ ಚೋಪಪಾತಕಮುತ್ತಮಮ್ ।
ತಸ್ಮಾತ್ ಪ್ರಾಣಾನ್ ಪರಿತ್ಯಕ್ಷ್ಯೇ ಪ್ರಾಯಶ್ಚಿತ್ತಾರ್ಥಮಿತ್ಯುತ ॥೨೧॥

ಪಾಪಕಾರ್ಯವನ್ನು ಮನಸ್ಸಿನಲ್ಲಿ ಬಯಸಿದರೂ ಅಥವಾ ಗುರು-ಹಿರಿಯರ ಮಾತನ್ನು ಉಪೇಕ್ಷೆ ಮಾಡಿದರೂ ದೊಡ್ಡ ಉಪಪಾತಕವು ಉಂಟಾಗುತ್ತದೆ (ನಾನು ಈ ಎಮ್ಮೆಯನ್ನು ಶೂಲಕ್ಕೇರಿಸಿ ಆಹಾರವನ್ನಾಗಿ ಮಾಡಿದರೆ ಬಹಳ ಮಾಂಸವು ದೊರೆಕೀತು ಎಂದು ಮನಸ್ಸಿನಲ್ಲಿ ವಿಚಾರ ಮಾಡಿದುದೇ ದೊಡ್ಡ ಅಪರಾಧ. ಅದು ಕೃತಘ್ನತಾ ರೂಪವಾದುದು). ಆದ್ದರಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವ ಸಲುವಾಗಿ ನಾನು ಪ್ರಾಣವನ್ನು ಬಿಡುವೆನು (ಎಂಬ ಬುದ್ಧಿಯು ಉಂಟಾಯಿತು).

ಸ ಮೇರುಶಿಖರಂ ಗತ್ವಾ ನಿಃಸಂಗೇನಾಂತರಾತ್ಮನಾ ।
ಪ್ರಾಯಶ್ಚಿತ್ತಂ ಕರ್ತುಕಾಮಃ ಶರೀರಂ ತ್ಯಕ್ತುಮುದ್ಯತಃ ।
ನಿಗೃಹೀತಶ್ಚ ಧರ್ಮಾತ್ಮಾ ಹಸ್ತೇ ಧರ್ಮೇಣ ಧರ್ಮವಿತ್ ॥೨೨॥

ಅವನು ಮೇರುಪರ್ವತದ ಶಿಖರಕ್ಕೆ ಹೋಗಿ ಮನಸ್ಸಿನಲ್ಲಿನ ಎಲ್ಲ ಸ್ನೇಹಗಳನ್ನೂ ತೊರೆದು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವ ಸಲುವಾಗಿ ಶರೀರ ತ್ಯಾಗವನ್ನು ಮಾಡಲು ಸಿದ್ಧನಾದನು. ಆ ವೇಳೆಗೆ ಧರ್ಮಾತ್ಮನೂ, ಧರ್ಮವನ್ನು ತಿಳಿದವನೂ ಆದ ಅವನು ಯಮದೇವನಿಂದ ತಡೆಯಲ್ಪಟ್ಟನು.

ಧರ್ಮಃ

ವತ್ಸನಾಭ ಮಹಾಪ್ರಾಜ್ಞ ಬಹುವರ್ಷಶತಾಯುಷ ।
ಪರಿತುಷ್ಟೋಽಸ್ಮಿ ತ್ಯಾಗೇನ ನಿಃಸಂಗೇನ ತಥಾऽऽತ್ಮನಃ ॥೨೩॥

ಧರ್ಮ– ಮಹಾಪ್ರಾಜ್ಞನೇ, ಅನೇಕ ಶತವರ್ಷಗಳ ಆಯುಸ್ಸುಳ್ಳ ವತ್ಸನಾಭನೇ, ನಿನ್ನ ತ್ಯಾಗದಿಂದಲೂ, ನಿನ್ನ ನಿಸ್ಸಂಗತೆಯಿಂದಲೂ ನಾನು ಸಂತೋಷಗೊಂಡಿದ್ದೇನೆ.

ಏವಂ ಧರ್ಮಭೃತಃ ಸರ್ವೇ ವಿಮೃಶಂತಿ ಕೃತಾಕೃತಮ್ ।
ನ ಕಶ್ಚಿದ್ ವತ್ಸನಾಭಸ್ಯ ಯಸ್ಯ ನೋಪಹತಂ ಮನಃ ॥೨೪॥

ಧರ್ಮಿಷ್ಠರಾದವರು ಹೀಗೆ ತಾವು ಮಾಡಿದ ಅಥವಾ ಮಾಡದಿದ್ದ ಪ್ರತಿಯೊಂದು ಕಾರ್ಯವನ್ನು ವಿಮರ್ಶೆ ಮಾಡುತ್ತಾರೆ. ಯಾವ ವತ್ಸನಾಭನ ಮನಸ್ಸು ಆಸೆಗಳಿಂದ

ಅಥವಾ ಸ್ನೇಹದಿಂದ ಪೀಡಿಸಲ್ಪಡಲಿಲ್ಲವೋ ಅಂತಹ ವತ್ಸನಾಭನಾದ ನಿನಗೆ ಯಾರೂ ಸಮರಲ್ಲ.

ಯಶ್ಚಾನವದ್ಯಶ್ಚರತಿ ಶಕ್ತೋ ಧರ್ಮಂ ಚ ಸರ್ವಶಃ ।
ನಿವರ್ತಸ್ವ ಮಹಾಪ್ರಾಜ್ಞ ಪೂತಾತ್ಮಾ ಹ್ಯಸಿ ಶಾಶ್ವತಃ ॥೨೫॥

ನೀನು ಯಾವ ದೋಷವೂ ಇಲ್ಲದವನಾಗಿ ನಿನ್ನ ಶಕ್ತಿಯಿದ್ದಷ್ಟು ಎಲ್ಲ ಧರ್ಮಗಳನ್ನೂ ಆಚರಿಸುತ್ತೀಯೆ. ಎಲೈ ಮಹಾಪ್ರಾಜ್ಞನೇ, ಹಿಂದಿರುಗು. ನೀನು ಶಾಶ್ವತನೂ, ಪವಿತ್ರಾತ್ಮನೂ ಆಗಿದ್ದೀಯೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ವತ್ಸನಾಭೋಪಾಖ್ಯಾನಂ
ನಾಮ ಏಕೋನತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇಪ್ಪತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತನೆಯ ಅಧ್ಯಾಯ

ಭಂಗಾಶ್ವನೋಪಾಖ್ಯಾನ

ಯುಧಿಷ್ಠಿರಃ

ಸ್ತ್ರೀಪುಂಸಯೋಃ ಸಂಪ್ರಯೋಗೇ ಸ್ಪರ್ಶಃ ಕಸ್ಯಾಧಿಕೋ ಭವೇತ್ ।
ಏತನ್ಮೇ ಸಂಶಯಂ ರಾಜನ್ ಯಥಾವದ್ ವಕ್ತುಮರ್ಹಸಿ ॥೧॥

ಯುಧಿಷ್ಠಿರ– ಸ್ತ್ರೀ-ಪುರುಷರು ಸಂಯೋಗವನ್ನು ಹೊಂದಿದಾಗ ಯಾರಿಗೆ ಸುಖವು ಅಧಿಕವಾಗಿರುತ್ತದೆ? ಎಲೈ ರಾಜನೇ, ಈ ನನ್ನ ಸಂಶಯವನ್ನು ಪರಿಹರಿಸಬೇಕು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಭಂಗಾಶ್ವನೇನ ಶಕ್ರಸ್ಯ ಯಥಾ ವೈರಮಭೂತ್ ಪುರಾ ॥೨॥

ಭೀಷ್ಮ- ಈ ವಿಷಯದಲ್ಲಿ ಕೂಡ ಭಂಗಾಶ್ವನ ಎಂಬ ರಾಜರ್ಷಿಗೂ ಮತ್ತು ಇಂದ್ರನಿಗೂ ವೈರ ಉಂಟಾದ ಒಂದು ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ಪುರಾ ಭಂಗಾಶ್ವನೋ ನಾಮ ರಾಜರ್ಷಿರತಿಧಾರ್ಮಿಕಃ ।
ಅಪುತ್ರಃ ಸ ನರವ್ಯಾಘ್ರ ಪುತ್ರಾರ್ಥಂ ಯಜ್ಞಮಾಹರತ್ ॥೩॥

ಎಲೈ ನರವ್ಯಾಘ್ರನೇ, ಹಿಂದೆ ಭಂಗಾಶ್ವನನೆಂಬ ಅತ್ಯಂತ ಧಾರ್ಮಿಕನಾದ ರಾಜರ್ಷಿಯು ಪುತ್ರರಿಲ್ಲದೆ, ಪುತ್ರರನ್ನು ಪಡೆಯುವ ಸಲುವಾಗಿ ಯಜ್ಞವನ್ನು ಆಚರಿಸಿದನು.

ಆಗ್ನಿಷ್ಟುನ್ನಾಮ ರಾಜರ್ಷಿರಿಂದ್ರದ್ವಿಷ್ಟಂ ಮಹಾಬಲಃ ।
ಪ್ರಾಯಶ್ಚಿತ್ತೇಷು ಮರ್ತ್ಯಾನಾಂ ಪುತ್ರಕಾಮಸ್ಯ ಚೇಷ್ಯತೇ ॥೪॥

ಮಹಾಬಲನಾದ ರಾಜರ್ಷಿಯು ಇಂದ್ರನ ದ್ವೇಷಕ್ಕೆ ಪಾತ್ರವಾದ (ಇಂದ್ರನಿಗೆ ಇಷ್ಟವಿಲ್ಲದ) ಆಗ್ನಿಷ್ಟೋಮ ಎಂಬ ಯಾಗವನ್ನು ಮಾಡಿದನು. ಈ ಯಾಗವು ಮನುಷ್ಯರಿಗೆ ಪ್ರಾಯಶ್ಚಿತ್ತಾರ್ಥವಾಗಿಯೂ ಮತ್ತು ಪುತ್ರಕಾಮನೆಯುಳ್ಳವರಿಗೂ ಹೇಳಲ್ಪಡುತ್ತದೆ.

ಇಂದ್ರೋ ಜ್ಞಾತ್ವಾ ತು ತಂ ಯಜ್ಞಂ ತಥಾಗಮ್ಯ ಸುರೇಶ್ವರಃ ।
ಅಂತರಂ ತಸ್ಯ ರಾಜರ್ಷೇರನ್ವಿಚ್ಛನ್ ನಿಯತಾತ್ಮನಃ ॥೫॥

ಸುರೇಶ್ವರನಾದ ಇಂದ್ರನು ಆ ಯಜ್ಞಾಚರಣೆಯನ್ನು ನೋಡಿ, ಅಲ್ಲಿಗೆ ಬಂದು ವ್ರತಶೀಲನಾದ ಆ ರಾಜರ್ಷಿಯಲ್ಲಿ ಯಾವುದಾದರೂ ಒಂದು ದೋಷವನ್ನು ಹುಡುಕಲು ಪ್ರಾರಂಭಿಸಿದನು.

ಕಸ್ಯಚಿತ್ತ್ವಥ ಕಾಲಸ್ಯ ಮೃಗಯಾಮಟತೋ ನೃಪ ।
ಇದಮಂತರಮಿತ್ಯೇವ ಶಕ್ರೋ ನೃಪಮಮೋಹಯತ್ ॥೬॥

ಎಲೈ ರಾಜನೇ, ಎಷ್ಟೋ ಕಾಲವು ಕಳೆದ ಮೇಲೆ ಆ ರಾಜನು ಬೇಟೆಗಾಗಿ ತಿರುಗಾಡುತ್ತಿದ್ದಾಗ, ಇದೇ ಸಮಯವೆಂದು ತಿಳಿದು ಇಂದ್ರನು ಅವನಿಗೆ ಮೋಹವನ್ನುಂಟು ಮಾಡಿದನು.

ಏಕಾಶ್ವೇನ ಚ ರಾಜರ್ಷಿರ್ಭ್ರಾಂತ ಇಂದ್ರೇಣ ಮೋಹಿತಃ ।
ನ ದಿಶೋಽವಿಂದತ ನೃಪಃ ಕ್ಷುತ್ತಿಪಾಸಾರ್ದಿತಸ್ತದಾ ॥೭॥

ಇಂದ್ರನಿಂದ ಮೋಹಕ್ಕೆ ಒಳಗಾದ ಆ ರಾಜರ್ಷಿಯು ಒಂದೇ ಅಶ್ವದ ಜೊತೆಯಲ್ಲಿ ತಿರುಗುತ್ತಾ, ದಿಕ್ಕುಗಳನ್ನು ಕಳೆದುಕೊಂಡು ಹಸಿವೆ-ನೀರಡಿಕೆಗಳಿಂದ ಬಳಲಿದನು.

ಇತಶ್ಚೇತಶ್ಚ ವೈ ಧಾವನ್ ಶ್ರಮತೃಷ್ಣಾರ್ದಿತೋ ನೃಪಃ ।
ಸರೋಽಪಶ್ಯತ್ ಸುರುಚಿರಂ ಪೂರ್ಣಂ ಪರಮವಾರಿಣಾ ।
ಸೋಽವಗಾಹ್ಯ ಸರಸ್ತತ ಪಾಯಯಾಮಾಸ ವಾಜಿನಮ್ ॥೮॥

ಶ್ರಮದಿಂದಲೂ, ಬಾಯಾರಿಕೆಯಿಂದಲೂ ಬಳಲಿದ ಆ ರಾಜನು ಇಲ್ಲಿಂದಲ್ಲಿಗೆ ಓಡಾಡುತ್ತಾ, ಒಳ್ಳೆಯ ನೀರಿನಿಂದ ತುಂಬಿದ ಮನೋಹರವಾದ ಸರೋವರವನ್ನು ನೋಡಿದನು. ಎಲೈ ಪ್ರೀತಿಪಾತ್ರನೇ, ಅವನು ನೀರಿನಲ್ಲಿ ಇಳಿದು ಕುದುರೆಗೆ ನೀರನ್ನು ಕುಡಿಸಿದನು.

ಅಥ ಪೀತೋದಕಂ ಸೋಽಶ್ವಂ ವೃಕ್ಷೇ ಬದ್ಧ್ವಾ ನೃಪೋತ್ತಮಃ ।
ಅವಗಾಹ್ಯ ತತಃ ಸ್ನಾತೋ ರಾಜಾ ಸ್ತ್ರೀತ್ವಮವಾಪ ಹ ॥೯॥

ಅಶ್ವವು ನೀರನ್ನು ಕುಡಿದಾದ ಮೇಲೆ ಆ ನೃಪಶ್ರೇಷ್ಠನು ಅದನ್ನು ಒಂದು ಮರಕ್ಕೆ ಕಟ್ಟಿ, ನೀರಿನಲ್ಲಿ ಇಳಿದು ಸ್ನಾನವನ್ನು ಮಾಡಿ ಸ್ತ್ರೀಯಾದನು.

ಆತ್ಮಾನಂ ಸ್ತ್ರೀಕೃತಂ ದೃಷ್ಟ್ವಾ ವ್ರೀಳಿತೋ ನೃಪಸತ್ತಮಃ ।
ಚಿಂತಾನುಗತಸರ್ವಾತ್ಮಾ ವ್ಯಾಕುಲೇಂದ್ರಿಯಚೇತನಃ ॥೧೦॥

ತಾನು ಸ್ತ್ರೀಯಾದುದನ್ನು ನೋಡಿ ಆ ರಾಜಶ್ರೇಷ್ಠನು ನಾಚಿಕೆಗೊಂಡು, ಎಲ್ಲ ಇಂದ್ರಿಯಗಳು, ಮನಸ್ಸು ವ್ಯಾಕುಲಗೊಂಡು ಪೂರ್ಣವಾಗಿ ಚಿಂತಾಕ್ರಾಂತನಾದನು.

ಅರೋಹಿಷ್ಯೇ ಕಥಂ ತ್ವಶ್ವಂ ಕಥಂ ಯಾಸ್ಯಾಮಿ ವೈ ಪುರಮ್ ।
ಅಗ್ನಿಷ್ಟುನ್ನಾಮ ಇಷ್ಟಂ ಮೇ ಪುತ್ರಾಣಾಂ ಶತಮೌರಸಮ್ ॥೧೧॥

ಜಾತಂ ಮಹಾಬಲಾನಾಂ ವೈ ತಾನ್ ಪ್ರವಕ್ಷ್ಯಾಮಿ ಕಿಂ ನ್ವಹಮ್ ।
ದಾರೇಷು ಚಾಸ್ಮದೀಯೇಷು ಪೌರಜಾನಪದೇಷು ಚ ॥೧೨॥

ನಾನು ಹೇಗೆ ಅಶ್ವವನ್ನು ಏರಲಿ? ಹೇಗೆ ರಾಜಧಾನಿಗೆ ಹಿಂದಿರುಗಲಿ? ನಾನು ಅಗ್ನಿಷ್ಟೋಮನಾಮಕವಾದ ಇಷ್ಟಿಯನ್ನು ಮಾಡಿದೆ. ಮಹಾಬಲರಾದ ನೂರು ಔರಸ ಪುತ್ರರು ಜನಿಸಿದರು. ಅವರಿಗೆ ನಾನು ಏನು ಹೇಳಲಿ? ನನ್ನ ಪತ್ನಿಯರಿಗೆ ಮತ್ತು ಪೌರಜನರಿಗೆ ಏನು ಹೇಳಲಿ?

ಮೃದುತ್ವಂ ಚ ತನುತ್ವಂ ಚ ವಿಕ್ಲವತ್ವಂ ತಥೈವ ಚ ।
ಸ್ತ್ರೀಗುಣಾ ಋಷಿಭಿಃ ಪ್ರೋಕ್ತಾ ಧರ್ಮತತ್ತ್ವಾರ್ಥದರ್ಶಿಭಿಃ ।
ವ್ಯಾಯಾಮಃ ಕರ್ಕಶತ್ವಂ ಚ ವೀರ್ಯಂ ಚ ಪುರುಷೇ ಗುಣಾಃ ॥೧೩॥

ಮೃದುತ್ವ, ಕೃಶತ್ವ ಮತ್ತು ಚಂಚಲತೆ - ಇವುಗಳು ಸ್ತ್ರೀಗುಣಗಳೆಂದು ಧರ್ಮ ತತ್ತ್ವಾರ್ಥಗಳನ್ನು ತಿಳಿದ ಋಷಿಗಳು ಹೇಳುತ್ತಾರೆ. ಕಷ್ಟದ ಕೆಲಸ, ಕರ್ಕಶತೆ ಮತ್ತು ಪರಾಕ್ರಮಗಳು ಪುರುಷ ಗುಣಗಳು.

ಪೌರುಷಂ ವಿಪ್ರನಷ್ಟಂ ಮೇ ಸ್ತ್ರೀತ್ವಂ ಕೇನಾಪಿ ಮೇಽಭವತ್ ।
ಸ್ತ್ರೀಭಾವಾತ್ ಕಥಮಶ್ವಂ ತಂ ಪುನರಾರೋಢುಮುತ್ಸಹೇ ॥೧೪॥

ನನ್ನ ಪೌರುಷವು ನಷ್ಟವಾಯಿತು. ಯಾವುದೋ ಕಾರಣದಿಂದ ಸ್ತ್ರೀಭಾವವು ಉಂಟಾಯಿತು. ಸ್ತ್ರೀಯಾದ ಕಾರಣದಿಂದ ಪುನಃ ಹೇಗೆ ಅಶ್ವವನ್ನು ಏರಲಿ? (ಎಂದು ಚಿಂತಿಸಿದನು).

ಮಹತಾ ತ್ವಥ ಖೇದೇನ ಆರುಹ್ಯಾಶ್ವಂ ನರಾಧಿಪಃ ।
ಪುನರಾಯಾತ್ಪುರಂ ತಾತ ಸ್ತ್ರೀಭೂತೋ ನೃಪಸತ್ತಮ ॥೧೫॥

ಎಲೈ ನೃಪಶ್ರೇಷ್ಠನೇ, ಆ ರಾಜನು ಬಹಳ ದುಃಖದಿಂದ ಅಶ್ವವನ್ನು ಏರಿ ಪುನಃ ತನ್ನ ಪಟ್ಟಣಕ್ಕೆ ಸ್ತ್ರೀಯಾಗಿ ಹಿಂದಿರುಗಿದನು.

ಪುತ್ರಾ ದಾರಾಶ್ಚ ಭೃತ್ಯಾಶ್ಚ ಪೌರಜಾನಪದಾಶ್ಚ ತೇ ।
ಕಿಂ ನ್ವಿದಂ ತ್ವಿತಿ ವಿಜ್ಞಾಯ ವಿಸ್ಮಯಂ ಪರಮಂ ಗತಾಃ ॥೧೬॥

ಪುತ್ರರೂ, ಪತ್ನಿಯರೂ, ಭೃತ್ಯರೂ ಮತ್ತು ಪೌರಜನಪದರೆಲ್ಲರೂ ಇದೇನು ವಿಚಿತ್ರ ಎಂದು ತಿಳಿದು ಪರಮ ವಿಸ್ಮಿತರಾದರು.

ಅಥೋವಾಚ ಸ ರಾಜರ್ಷಿಃ ಸ್ತ್ರೀಭೂತೋ ವದತಾಂ ವರಃ ।
ಮೃಗಯಾಮಸ್ಮಿ ನಿಯತೋ ಬಲೈಃ ಪರಿವೃತೋ ದೃಢಮ್ ।
ಉದ್ಭ್ರಾಂತಃ ಪ್ರಾವಿಶಂ ಘೋರಾಮಟವೀಂ ದೈವಮೋಹಿತಃ ॥೧೭॥

ಆಗ ಸ್ತ್ರೀಯಾಗಿದ್ದ ಮಾತನಾಡುವವರಲ್ಲಿ ಶ್ರೇಷ್ಠನಾದ ಆ ರಾಜರ್ಷಿಯು ಅವರನ್ನು ಕುರಿತು ಮಾತನಾಡಿದನು: ನಾನು ಸೈನ್ಯದಿಂದ ಚೆನ್ನಾಗಿ ಪರಿವೃತನಾಗಿ ಬೇಟೆಯಾಡುವುದರಲ್ಲಿ ನಿರತನಾಗಿದ್ದೆ. ದೈವಮೋಹಿತನಾಗಿ, ಭ್ರಾಂತಿಗೆ ಒಳಗಾಗಿ ಒಂದು ಘೋರವಾದ ಅರಣ್ಯವನ್ನು ಪ್ರವೇಶಿಸಿದೆ.

ಅಟವ್ಯಾಂ ಚ ಸುಘೋರಾಯಾಂ ತೃಷ್ಣಾರ್ತೋ ನಷ್ಟಚೇತನಃ ।
ಸರಃ ಸುರುಚಿರಪ್ರಖ್ಯಮಪಶ್ಯಂ ಪಕ್ಷಿಭಿರ್ವೃತಮ್ ॥೧೮॥

ತತ್ರಾವಗಾಢಃ ಸ್ತ್ರೀಭೂತೋ ವ್ಯಕ್ತಂ ದೈವಾನ್ನ ಸಂಶಯಃ ।
ಅತೃಪ್ತ ಇವ ಪುತ್ರಾಣಾಂ ದಾರಾಣಾಂ ಚ ಧನಸ್ಯ ಚ ॥೧೯॥

ನಷ್ಟಚೇತನನಾದ ನಾನು ಬಾಯಾರಿಕೆಯಿಂದ ಬಳಲಿ, ಘೋರವಾದ ಆ ಅರಣ್ಯದಲ್ಲಿ ಪಕ್ಷಿಗಳಿಂದ ಸಮಾವೃತವಾಗಿದ್ದ ಅತ್ಯಂತ ಮನೋಹರವಾದ ಒಂದು ಸರೋವರವನ್ನು ನೋಡಿದೆನು. ಅಲ್ಲಿ ಸ್ನಾನ ಮಾಡಿ ದೈವೇಚ್ಛೆಯಂತೆ ನಾನು ಸ್ತ್ರೀಯಾದೆನು. ಇದು ಸ್ಪಷ್ಟವಾಗಿ ದೈವೇಚ್ಛೆ. ಇದರಲ್ಲಿ ಸಂಶಯವಿಲ್ಲ. ನಾನು ನನ್ನ ಪುತ್ರರಲ್ಲಿಯೂ, ಪತ್ನಿಯರಲ್ಲಿಯೂ ಮತ್ತು ಧನದಲ್ಲಿಯೂ ಇನ್ನೂ ತೃಪ್ತಿಯನ್ನು ಹೊಂದಿಲ್ಲ (ಎಂದು ಹೇಳಿದನು).

ಉವಾಚ ಪುತ್ರಾಂಶ್ಚ ತತಃ ಸ್ತ್ರೀಭೂತಃ ಪಾರ್ಥಿವೋತ್ತಮಃ ।
ಸಂಪ್ರೀತ್ಯಾ ಭುಜ್ಯತಾಂ ರಾಜ್ಯಂ ವನಂ ಯಾಸ್ಯಾಮಿ ಪುತ್ರಕಾಃ ।
ಸ ಪುತ್ರಾಣಾಂ ಶತಂ ರಾಜಾ ಅಭಿಷಿಚ್ಯ ವನಂ ಗತಃ ॥೨೦॥

ಸ್ತ್ರೀಯಾದ ಆ ರಾಜಶ್ರೇಷ್ಠನು ಅನಂತರ ಪುತ್ರರನ್ನು ಕುರಿತು– 'ಮಕ್ಕಳೇ, ಸೌಹಾರ್ದದಿಂದ ರಾಜ್ಯವನ್ನು ಭೋಗಿಸಿ. ನಾನು ಕಾಡಿಗೆ ಹೋಗುವೆನು' ಎಂದು ಹೇಳಿದನು. ಆ ರಾಜನು ನೂರು ಪುತ್ರರಿಗೆ ಪಟ್ಟಾಭಿಷೇಕ ಮಾಡಿ ಕಾಡಿಗೆ ಹೋದನು.

ತಾಮಾಶ್ರಮೇ ಸ್ಥಿಯಂ ತಾತ ತಾಪಸೋಽಭ್ಯವಪದ್ಯತ ।
ತಾಪಸೇನಾಸ್ಯ ಪುತ್ರಾಣಾಮಾಶ್ರಮೇಪ್ಯಭವಚ್ಛತಮ್ ॥೨೧॥

ಎಲೈ ಪ್ರೀತಿಪಾತ್ರನೇ, ಕಾಡಿನಲ್ಲಿ ಒಬ್ಬ ತಾಪಸನು ಅವಳಲ್ಲಿ ಅನುರಕ್ತನಾದನು. ಆ ತಾಪಸನಿಂದ ಆಶ್ರಮದಲ್ಲಿ ಅವಳಿಗೆ ಅರಣ್ಯದಲ್ಲಿಯೂ ನೂರು ಪುತ್ರರು ಜನಿಸಿದರು.

ಅಥ ಸಾ ತಾನ್ ಸುತಾನ್ ಗೃಹ್ಯ ಪೂರ್ವಪುತ್ರಾನಭಾಷತ ।
ಪುರುಷತ್ವೇ ಸುತಾ ಯೂಯಂ ಸ್ತ್ರೀತ್ವೇ ಚೇಮೇ ಶತಂ ಸುತಾಃ ॥೨೨॥

ಏಕತ್ರ ಭುಜ್ಯತಾಂ ರಾಜ್ಯಂ ಭ್ರಾತೃಭಾವೇನ ಪುತ್ರಕಾಃ ।
ಸಹಿತಾ ಭ್ರಾತರಸ್ತೇಽಥ ರಾಜ್ಯಂ ಬುಭುಜಿರೇ ತದಾ ॥೨೩॥

ಅನಂತರ ಅವನು ಆ ಮಕ್ಕಳನ್ನು ಕರೆದುಕೊಂಡು ಬಂದು ಮೊದಲಿನ ನೂರು ಮಕ್ಕಳನ್ನುಕುರಿತು– 'ನೀವೆಲ್ಲವೂ ನಾನು ಪುರುಷನಾಗಿದ್ದಾಗ ಜನಿಸಿದ ಮಕ್ಕಳು. ಇವರು ನನ್ನ ಸ್ತ್ರೀಭಾವದಲ್ಲಿ ಜನಿಸಿದ ಪುತ್ರರು. ಎಲೈ ಪುತ್ರರೇ, ನೀವೆಲ್ಲರೂ ಒಳ್ಳೆಯ ಭ್ರಾತೃಭಾವದಿಂದ ಕೂಡಿದವರಾಗಿ ರಾಜ್ಯವನ್ನು ಭೋಗಿಸಿ' ಎಂದು ಹೇಳಿದನು. ಅನಂತರ ಆ ಸಹೋದರರೆಲ್ಲರೂ ಒಟ್ಟಿಗೆ ರಾಜ್ಯವನ್ನು ಭೋಗಿಸಿದರು.

ತಾನ್ ದೃಷ್ಟ್ವಾ ಭ್ರಾತೃಭಾವೇನ ಭುಂಜಾನಾನ್ ರಾಜ್ಯಮುತ್ತಮಮ್ ।
ಚಿಂತಯಾಮಾಸ ದೇವೇಂದ್ರೋ ಮನ್ಯುನಾಽಭಿಪರಿಪ್ಲುತಃ ।
ಉಪಕಾರೋಽಸ್ಯ ರಾಜರ್ಷೇಃ ಕೃತೋ ನಾಪಕೃತಂ ಮಯಾ ॥೨೪॥

ಸೌಹಾರ್ದದಿಂದ ಶ್ರೇಷ್ಠವಾದ ರಾಜ್ಯವನ್ನು ಭೋಗಿಸುವ ಅವರನ್ನು ನೋಡಿ ದೇವೇಂದ್ರನು ಸಿಟ್ಟಿನಿಂದ ಕೂಡಿದವನಾಗಿ, ನಾನು ರಾಜರ್ಷಿಗೆ ಮಾಡಿದ ಅಪಕಾರವು ಅಪಕಾರವೇ ಆಗಲಿಲ್ಲ, ಉಪಕಾರವೇ ಆಯಿತು ಎಂದು ಚಿಂತಿಸಿದನು.

ತತೋ ಬ್ರಾಹ್ಮಣವೇಷೇಣ ದೇವರಾಜಃ ಶತಕ್ರತುಃ ।
ಭೇದಯಾಮಾಸ ತಾನ್ ಗತ್ವಾ ನಗರಂ ವೈ ನೃಪಾತ್ಮಜಾನ್ ॥೨೫॥

ಅನಂತರ ದೇವರಾಜನಾದ ಇಂದ್ರನು ಬ್ರಾಹ್ಮಣವೇಷದಿಂದ ನಗರಕ್ಕೆ ಹೋಗಿ ಆ ರಾಜಪುತ್ರರನ್ನು ಭೇದಿಸಿದನು (ಒಡಕು ಹುಟ್ಟಿಸಿದನು).

ಭ್ರಾತೄಣಾಂ ನಾಸ್ತಿ ಸೌಭ್ರಾತ್ರಂ ಯೇಽಪ್ಯೇಕಸ್ಯ ಪಿತುಃ ಸುತಾಃ ।
ಕಾಶ್ಯಪಸ್ಯ ಸುರಾಶ್ಚೈವ ಅಸುರಾಶ್ಚ ಸುತಾಸ್ತಥಾ ।
ರಾಜ್ಯಹೇತೋರ್ವಿವದಿತಾಃ ಕಾಶ್ಯಪಸ್ಯ ಸುರಾಸುರಾಃ ॥೨೬॥

ಒಬ್ಬನೇ ತಂದೆಯ ಮಕ್ಕಳಾದರೂ ಅವರಿಗೆ ಸೌಹಾರ್ದವಿರುವುದಿಲ್ಲ. ದೇವತೆಗಳು ಮತ್ತು ಅಸುರರು ಒಬ್ಬರೇ ಕಾಶ್ಯಪರ ಪುತ್ರರು. ಆದರೂ ದೇವಾಸುರರು ರಾಜ್ಯದ ಸಲುವಾಗಿ ಹೊಡೆದಾಡಿದರು.

ಯೂಯಂ ಭಂಗಾಶ್ವನಾಪತ್ಯಾಸ್ತಾಪಸಸ್ಯೇತರೇ ಸುತಾಃ ।
ಯುಷ್ಮಾಕಂ ಪೈತೃಕಂ ರಾಜ್ಯಂ ಭುಜ್ಯತೇ ತಾಪಸಾತ್ಮಜೈಃ ॥೨೭॥

ನೀವು ಭಂಗಾಶ್ವನನ ಪುತ್ರರು, ಉಳಿದವರು ಒಬ್ಬ ತಾಪಸನ ಪುತ್ರರು. ನಿಮಗೆ ಪಿತೃವಿನಿಂದ ಬಂದ ರಾಜ್ಯವು ತಾಪಸನ ಮಕ್ಕಳಿಂದ ಭೋಗಿಸಲ್ಪಡುತ್ತಿದೆ (ಎಂದು ಭೇದಿಸಿದನು) (ಒಡಕು ಹುಟ್ಟಿಸಿದನು).

ಇಂದ್ರೇಣ ಭೇದಿತಾಸ್ತೇ ತು ಯುದ್ಧೇಽನ್ಯೋನ್ಯಮಪಾತಯನ್ ।
ತಚ್ಛ್ರುತ್ವಾ ತಾಪಸೀ ಚಾಪಿ ಸಂತಪ್ತಾ ಪ್ರರುರೋದ ಹ ॥೨೮॥

ಇಂದ್ರನಿಂದ ಹೀಗೆ ಭೇದಿಸಲ್ಪಟ್ಟ ಅವರು ಯುದ್ಧವನ್ನು ಮಾಡಿ, ಪರಸ್ಪರವಾಗಿ ನಾಶ ಮಾಡಿಕೊಂಡರು. ಅದನ್ನು ಕೇಳಿ ತಾಪಸಿಯು ಸಂತಾಪದಿಂದ ಬಹಳ ಅತ್ತಳು.

ಬ್ರಾಹ್ಮಣಚ್ಛದ್ಮನಾಭ್ಯೇತ್ಯ ತಾಮಿಂದ್ರೋಽಥಾನ್ವಪೃಚ್ಛತ ।
ಕೇನ ದುಃಖೇನ ಸಂತಪ್ತಾ ರೋದಿಷಿ ತ್ವಂ ವರಾನನೇ ॥೨೯॥

ಆಗ ಇಂದ್ರನು ಬ್ರಾಹ್ಮಣ ವೇಷದಿಂದ ಅವಳ ಬಳಿಗೆ ಬಂದು, ಎಲೌ ಸುಂದರಿಯೇ, ಯಾವ ದುಃಖದಿಂದ ಪೀಡಿಸಲ್ಪಟ್ಟು ಹೀಗೆ ಅಳುತ್ತಿದ್ದೀಯೆ ಎಂದು ಕೇಳಿದನು.

ಬ್ರಾಹ್ಮಣಂ ತು ತತೋ ದೃಷ್ಟ್ವಾ ಸಾ ಸ್ತ್ರೀ ಕರುಣಮಬ್ರವೀತ್ ।
ಪುತ್ರಾಣಾಂ ದ್ವೇ ಶತೇ ಬ್ರಹ್ಮನ್ ಕಾಲೇನ ವಿನಿಪಾತಿತೇ ॥೩೦॥

ಆಗ ಬ್ರಾಹ್ಮಣನನ್ನು ನೋಡಿ ಆ ಸ್ತ್ರೀಯು ಕರುಣಾಜನಕವಾಗಿ ಮಾತನಾಡಿದಳು: ಎಲೈ ಬ್ರಾಹ್ಮಣನೇ, ನನ್ನ ಇನ್ನೂರು ಪುತ್ರರು ಕಾಲದಿಂದ ನಾಶವನ್ನು ಹೊಂದಿದ್ದಾರೆ.

ಅಹಂ ರಾಜಾऽಭವಂ ಪೂರ್ವಂ ತತ್ರ ಪುತ್ರಶತಂ ಮಯಾ ।
ಸಮುತ್ಪನ್ನಂ ಸುರೂಪಾಣಾಂ ಏಕ್ರಾಂತಾನಾಂ ದ್ವಿಜೋತ್ತಮ ॥೩೧॥

ಎಲೈ ದ್ವಿಜಶ್ರೇಷ್ಠನೇ, ನಾನು ಹಿಂದೆ ರಾಜನಾಗಿದ್ದೆನು. ಆಗ ನನಗೆ ಒಳ್ಳೆಯ ರೂಪವನ್ನು ಹೊಂದಿದ ಪರಾಕ್ರಮಶಾಲಿಗಳಾದ ನೂರು ಪುತ್ರರು ಜನಿಸಿದರು.

ಕದಾಚಿನ್ಮೃಗಯಾಂ ಯಾತ ಉದ್ಭ್ರಾಂತೋ ಗಹನೇ ವನೇ ।
ಅವಗಾಢಶ್ಚ ಸರಸಿ ಸ್ತ್ರೀಭೂತೋ ಬ್ರಾಹ್ಮಣೋತ್ತಮ ।
ಪುತ್ರಾನ್ ರಾಜ್ಯೇ ಪ್ರತಿಷ್ಠಾಪ್ಯ ವನಮಸ್ಮಿ ತತೋ ಗತಃ ॥೩೨॥

ಒಮ್ಮೆ ಕಾಡಿಗೆ ಬೇಟೆಗಾಗಿ ಹೋಗಿ, ಭ್ರಾಂತಿಗೆ ಸಿಲುಕಿ, ಒಂದು ಸರೋವರದಲ್ಲಿ ಅವಗಾಹನವನ್ನು ಮಾಡಿ ಸ್ತ್ರೀಯಾದೆ. ಎಲೈ ಬ್ರಾಹ್ಮಣಶ್ರೇಷ್ಠನೇ, ಅನಂತರ ನಾನು ಪುತ್ರರನ್ನು ರಾಜ್ಯದಲ್ಲಿ ಪ್ರತಿಷ್ಠಾಪಿಸಿ ಅರಣ್ಯಕ್ಕೆ ಹೋದೆನು.

ಸ್ತ್ರಿಯಾಶ್ಚ ಮೇ ಪುತ್ರಶತಂ ತಾಪಸೇನ ಮಹಾತ್ಮನಾ ।
ಆಶ್ರಮೇ ಜನಿತಂ ಬ್ರಹ್ಮನ್ನೀತಾಸ್ತೇ ನಗರಂ ಮಯಾ ॥೩೩॥

ಎಲೈ ಬ್ರಾಹ್ಮಣನೇ, ಅಲ್ಲಿಯೂ ಸಹ ಮಹಾತ್ಮನಾದ ಒಬ್ಬ ತಪಸ್ವಿಯು ಸ್ತ್ರೀಯಾದ ನನ್ನಲ್ಲಿ ನೂರು ಪುತ್ರರನ್ನು ಪಡೆದನು. ನಾನು ಅವರನ್ನು ನಗರಕ್ಕೆ ಕರೆದುಕೊಂಡು ಹೋದೆನು.

ತೇಷಾಂ ಚ ವೈರಮುತ್ಪನ್ನಂ ಕಾಲಯೋಗೇನ ವೈ ದ್ವಿಜ ।
ಏತಚ್ಛೋಚಾಮಿ ವಿಪ್ರೇಂದ್ರ ದೈವೇನಾಭಿಪರಿಪ್ಲುತಾ ॥೩೪॥

ಎಲೈ ಬ್ರಾಹ್ಮಣನೇ, ಕಾಲಯೋಗದಿಂದ ಅವರಿಗೆ ಪರಸ್ಪರ ವೈರ ಉಂಟಾಯಿತು. ಎಲೈ ವಿಪ್ರೇಂದ್ರನೇ, ಹೀಗೆ ದೈವದಿಂದ ಉಪದ್ರವಕ್ಕೆ ಒಳಗಾಗಿ ನಾನು ಶೋಕಪಡುತ್ತಿದ್ದೇನೆ (ಎಂದು ಹೇಳಿದಳು).

ಇಂದ್ರಸ್ತಾಂ ದುಃಖಿತಾಂ ದೃಷ್ಟ್ವಾ ಅಬ್ರವೀತ್ ಪರುಷಂ ವಚಃ ।
ಪುರಾ ಸುದುಃಸಹಂ ಭದ್ರೇ ಮಮ ದುಃಖಂ ತ್ವಯಾ ಕೃತಮ್ ॥೩೫॥

ಇಂದ್ರದಿಷ್ಟೇನ ಯಜತಾ ಮಾಮನಾದೃತ್ಯ ದುರ್ಮತೇ ।
ಇಂದ್ರೋಽಹಮಸ್ಮಿ ದುರ್ಬುದ್ಧೇ ವೈರಂ ತೇ ಯಾತಿತಂ ಮಯಾ ॥೩೬॥

ಭೀಷ್ಮ- ದುಃಖಿತಳಾದ ಅವಳನ್ನು ನೋಡಿ ಇಂದ್ರನು- 'ಎಲೌ ದುರ್ಮತಿಯೇ, ನೀನು ಹಿಂದೆ ನನ್ನನ್ನು ತಿರಸ್ಕರಿಸಿ, ನನ್ನ ದ್ವೇಷಕ್ಕೆ ವಿಷಯವಾದ ಯಾಗವನ್ನು ಮಾಡಿ, ನನಗೆ ಸಹಿಸಲಾರದಷ್ಟು ದುಃಖವನ್ನುಂಟು ಮಾಡಿದೆ. ಎಲೌ ದುರ್ಬುದ್ಧಿಯೇ, ನಾನು ಇಂದ್ರ. ಆ ವೈರವನ್ನು ನಾನು ತೀರಿಸಿಕೊಂಡಿದ್ದೇನೆ' ಎಂದು ಒರಟಾಗಿಯೇ ಹೇಳಿದನು.

ಇಂದ್ರಂ ತು ದೃಷ್ಟ್ವಾ ರಾಜರ್ಷಿಃ ಪಾದಯೋಃ ಶಿರಸಾ ಗತಃ ।
ಪ್ರಸೀದ ತ್ರಿದಶಶ್ರೇಷ್ಠ ಪುತ್ರಕಾಮೇನ ಸ ಕ್ರತುಃ ।
ಇಷ್ಟಸ್ತ್ರಿದಶಶಾರ್ದೂಲ ತತ್ರ ಮೇ ಕ್ಷಂತುಮರ್ಹಸಿ ॥೩೭॥

ಇಂದ್ರನನ್ನು ನೋಡಿದ ಆ ರಾಜರ್ಷಿಯು ಅವನ ಪಾದಗಳಿಗೆ ಶಿರಸಾ ನಮಸ್ಕರಿಸಿ, 'ಎಲೈ ದೇವಶ್ರೇಷ್ಠನೇ, ಪ್ರಸನ್ನನಾಗು. ಮಕ್ಕಳನ್ನು ಪಡೆಯುವ ಉದ್ದೇಶದಿಂದ ನಾನು ಯಾಗವನ್ನು ಮಾಡಿದೆ. ಎಲೈ ತ್ರಿದಶೇಶ್ವರನೇ, ನನ್ನ ಅಪರಾಧವನ್ನು ನೀನು ಕ್ಷಮಿಸಬೇಕು' ಎಂದು ಹೇಳಿದಳು.

ಪ್ರಣಿಪಾತೇನ ತಸ್ಯೇಂದ್ರಃ ಪರಿತುಷ್ಟೋ ವರಂ ದದೌ ।
ಪುತ್ರಾ ವೈ ಕತಮೇ ರಾಜನ್ ಜೀವಂತು ತವ ಶಂಸ ಮೇ ।
ಸ್ತ್ರೀಭೂತಸ್ಯ ಹಿ ಯೇ ಜಾತಾಃ ಪುರುಷಸ್ಯಾಥ ಯೇಽಭವನ್ ॥೩೮॥

ಇಂದ್ರನು ಅವಳ ಪ್ರಣಾಮದಿಂದ ಸಂತುಷ್ಟನಾಗಿ ವರವನ್ನು ನೀಡಿದನು: ಎಲೈ ರಾಜನೇ, ನೀನು ಸ್ತ್ರೀಯಾಗಿದ್ದಾಗ ಜನಿಸಿದ್ದ ಪುತ್ರರು ಜೀವಿಸಬೇಕೋ ಅಥವಾ ಪುರುಷನಾಗಿದ್ದಾಗ ಜನಿಸಿದ ಪುತ್ರರು ಜೀವಿಸಬೇಕೋ ಎಂದು ನನಗೆ ಹೇಳು ಎಂದು ಹೇಳಿದನು.

ತಾಪಸೀ ತು ತತಃ ಶಕ್ರಮುವಾಚ ಪ್ರಯತಾಂಜಲಿಃ ।
ಸ್ತ್ರೀಭೂತಸ್ಯ ಹಿ ಯೇ ಜಾತಾಸ್ತೇ ಮೇ ಜೀವಂತು ವಾಸವ ॥೩೯॥

ತಾಪಸಿಯು ಕೈಗಳನ್ನು ಮುಗಿದು, ಇಂದ್ರನನ್ನು ಕುರಿತು- 'ಎಲೈ ಇಂದ್ರನೇ, ನಾನು ಸ್ತ್ರೀಯಾಗಿದ್ದಾಗ ಜನಿಸಿದ ಪುತ್ರರು ಜೀವಿಸಲಿ' ಎಂದು ಹೇಳಿದಳು.

ಇಂದ್ರಸ್ತು ವಿಸ್ಮಿತೋ ದೃಷ್ಟ್ವಾ ಸ್ತ್ರಿಯಂ ಪಪ್ರಚ್ಛ ತಾಂ ಪುನಃ ।
ಪುರುಷೋತ್ಪಾದಿತಾ ಯೇ ತೇ ಕಥಂ ದ್ವೇಷ್ಯಾಃ ಸುತಾಸ್ತವ ॥೪೦॥

ಇಂದ್ರನಾದರೂ ಅದನ್ನು ನೋಡಿ ಪುನಃ ವಿಸ್ಮಿತನಾಗಿ ಆ ಸ್ತ್ರೀಯನ್ನು ಕುರಿತು- 'ನೀನು ಪುರುಷನಾಗಿದ್ದಾಗ ಜನಿಸಿದ್ದ ಪುತ್ರರು ಏಕೆ ನಿನ್ನ ದ್ವೇಷಪಾತ್ರರು?' ಎಂದು ಪುನಃ ಅವಳನ್ನು ಕೇಳಿದನು.

ಸ್ತ್ರೀಭೂತಸ್ಯ ಹಿ ಯೇ ಜಾತಾಃ ಸ್ನೇಹಸ್ತೇಭ್ಯೋಽಧಿಕಃ ಕಥಮ್ ।
ಕಾರಣಂ ಶ್ರೋತುಮಿಚ್ಛಾಮಿ ತನ್ಮೇ ವಕ್ತುಮಿಹಾರ್ಹಸಿ ॥೪೧॥

'ನೀನು ಸ್ತ್ರೀಯಾಗಿದ್ದಾಗ ಜನಿಸಿದ ಮಕ್ಕಳಲ್ಲಿ ನಿನಗೆ ಅಧಿಕ ಸ್ನೇಹವಿರುವುದಕ್ಕೆ ನಾನು ಕಾರಣವನ್ನು ತಿಳಿಯಲು ಇಚ್ಛಿಸುತ್ತೇನೆ. ಅದನ್ನು ನೀನು ನನಗೆ ಹೇಳಬೇಕು' ಎಂದು ಹೇಳಿದನು.

ಸ್ತ್ರೀ

ಸ್ತ್ರಿಯಾಸ್ತ ಭ್ಯಧಿಕಃ ಸ್ನೇಹೋ ನ ತಥಾ ಪುರುಷಸ್ಯ ವೈ ।
ತಸ್ಮಾತ್ ತೇ ಶಕ್ರ ಜೀವಂತು ಯೇ ಜಾತಾಃ ಸ್ತ್ರೀಕೃತಸ್ಯ ವೈ ॥೪೨॥

ಸ್ತ್ರೀ– ಸ್ತ್ರೀಗೆ ಪುತ್ರರಲ್ಲಿ ಅಧಿಕವಾದ ಸ್ನೇಹವಿರುತ್ತದೆ, ಪುರುಷನಿಗೆ ಇರುವುದಿಲ್ಲ. ಎಲೈ ಇಂದ್ರನೇ, ಆ ಕಾರಣದಿಂದ ನಾನು ಸ್ತ್ರೀಯಾಗಿದ್ದಾಗ ಜನಿಸಿದ ಮಕ್ಕಳು ಜೀವಿಸಲಿ.

ಭೀಷ್ಮಃ

ಏವಮುಕ್ತೇ ತತಸ್ತ್ವಿಂದ್ರಃ ಪ್ರೀತೋ ವಾಕ್ಯಮುವಾಚ ಹ ।
ಸರ್ವ ಏವೇಹ ಜೀವಂತು ಪುತ್ರಾಸ್ತೇ ಸತ್ಯವಾದಿನಿ ॥೪೩॥

ವರಂ ಚ ವೃಣು ರಾಜೇಂದ್ರ ಯಂ ತ್ವಮಿಚ್ಛಸಿ ಸುವ್ರತ ।
ಪುರುಷತ್ವಮಥ ಸ್ತ್ರೀತ್ವಂ ಮತ್ತೋ ಯದಭಿಕಾಂಕ್ಷ್ಯಸೇ ॥೪೪॥

ಭೀಷ್ಮ– ಆ ಸ್ತ್ರೀಯು ಹೀಗೆ ಹೇಳುತ್ತಿರಲು ಇಂದ್ರನು ಸಂತೋಷಗೊಂಡು ಅವಳನ್ನು ಕುರಿತು- 'ಎಲೌ ಸತ್ಯವಾದಿನಿಯೇ, ನಿನ್ನ ಎಲ್ಲ ಮಕ್ಕಳೂ ಬದುಕಲಿ. ಎಲೈ ರಾಜೇಂದ್ರನೇ, ಸುವ್ರತನೇ, ನೀನು ಬಯಸಿದ ವರವನ್ನು ಕೇಳು. ನೀನು ನನ್ನಿಂದ

ಪುರುಷತ್ವವನ್ನು ಬಯಸುತ್ತೀಯೋ ಅಥವಾ ಸ್ತ್ರೀತ್ವವನ್ನು ಬಯಸುತ್ತೀಯೋ? ಎಂದು ಹೇಳು'.

ಸ್ತ್ರೀ

ಸ್ತ್ರೀತ್ವಮೇವ ವೃಣೇ ಶಕ್ರ ಪ್ರಸನ್ನೇ ತ್ವಯಿ ವಾಸವ ।
ಏವಮುಕ್ತಸ್ತು ದೇವೇಂದ್ರಸ್ತಾಂ ಸ್ತ್ರಿಯಂ ಪ್ರತ್ಯುವಾಚ ಹ ।
ಪುರುಷತ್ವಂ ಕಥಂ ತ್ಯಕ್ತ್ವಾ ಸ್ತ್ರೀತ್ವಂ ರೋಚಯಸೇ ವಿಭೋ ॥೪೬॥

'ಎಲೈ ಇಂದ್ರನೇ, ವಾಸವನೇ, ನೀನು ಪ್ರಸನ್ನನಾದರೆ ಸ್ತ್ರೀತ್ವವನ್ನೇ ನಾನು ಬೇಡುತ್ತೇನೆ'. ಹೀಗೆ ಹೇಳಲ್ಪಟ್ಟ ದೇವೇಂದ್ರನು ಆ ಸ್ತ್ರೀಯನ್ನು ಕುರಿತು ಪುನಃ 'ಎಲೈ ವಿಭುವೇ, ಪುರುಷತ್ವವನ್ನು ಬಿಟ್ಟು ನೀನು ಸ್ತ್ರೀತ್ವವನ್ನು ಏಕೆ ಬಯಸುತ್ತೀಯೆ?' ಎಂದು ಕೇಳಿದನು.

ಏವಮುಕ್ತಃ ಪ್ರತ್ಯುವಾಚ ಸ್ತ್ರೀಭೂತೋ ರಾಜಸತ್ತಮಃ ।
ಸ್ತ್ರಿಯಾಃ ಪುರುಷಸಂಯೋಗೇ ಪ್ರೀತಿರಭ್ಯಧಿಕಾ ಸದಾ ।
ಏತಸ್ಮಾತ್ ಕಾರಣಾಚ್ಛಕ್ರ ಸ್ತ್ರೀತ್ವಮೇವ ವೃಣೋಮ್ಯಹಮ್ ॥೪೭॥

ಹೀಗೆ ಕೇಳಲ್ಪಟ್ಟ ಸ್ತ್ರೀಯಾಗಿದ್ದ ಆ ರಾಜಶ್ರೇಷ್ಠನು 'ಸ್ತ್ರೀ-ಪುರುಷ ಸಂಯೋಗ ಉಂಟಾದಾಗ ಸ್ತ್ರೀಗೆ ಹೆಚ್ಚಿನ ಸುಖವುಂಟಾಗುತ್ತದೆ. ಎಲೈ ಇಂದ್ರನೇ, ಈ ಕಾರಣದಿಂದ ನಾನು ಸ್ತ್ರೀತ್ವವನ್ನೇ ಬೇಡುತ್ತೇನೆ' ಎಂದು ಹೇಳಿದನು.

ರಮೇ ಚೈವಾಧಿಕಂ ಸ್ತ್ರೀತ್ವೇ ಸತ್ಯಂ ವೈ ದೇವಸತ್ತಮ ।
ಸ್ತ್ರೀಭಾವೇನ ಹಿ ತುಷ್ಯಾಮಿ ಗಮ್ಯತಾಂ ತ್ರಿದಶಾಧಿಪ ॥೪೮॥

'ಎಲೈ ದೇವಶ್ರೇಷ್ಠನೇ, ನಾನು ನನ್ನ ಸ್ತ್ರೀತ್ವದಲ್ಲಿಯೇ ಸತ್ಯವಾಗಿ ಹೆಚ್ಚು ಸುಖ ಪಡುತ್ತೇನೆ. ಸ್ತ್ರೀಭಾವದಿಂದ ಸಂತೋಷಪಡುತ್ತೇನೆ. ಎಲೈ ಸ್ವರ್ಗಾಧಿಪನೇ, ನೀನು ಹೋಗಬಹುದು' (ಎಂದು ಹೇಳಿದಳು).

ಏವಮಸ್ತ್ವಿತಿ ಚೋಕ್ತ್ವಾ ತಾಮಾಪೃಚ್ಛ್ಯ ತ್ರಿದಿವಂ ಗತಃ ।
ಏವಂ ಸ್ತ್ರಿಯಾ ಮಹಾರಾಜ ಅಧಿಕಾ ಪ್ರೀತಿರುಚ್ಯತೇ ॥೪೯॥

ಹಾಗೆಯೇ ಆಗಲಿ ಎಂದು ಅವಳಿಗೆ ಹೇಳಿ ಇಂದ್ರನು ಸ್ವರ್ಗಲೋಕಕ್ಕೆ ಹೋದನು. ಎಲೈ ಮಹಾರಾಜನೇ, ಹೀಗೆ ಸ್ತ್ರೀಯ ಸುಖವು ಪುರುಷನ ಸುಖಕ್ಕಿಂತ ಅಧಿಕವಾದುದೆಂದು ಹೇಳಲ್ಪಡುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಸ್ತ್ರೀಪುಂಸಂಯೋಗೇ ಸ್ತ್ರಿಯಃ ಪ್ರೀತ್ಯಾಧಿಕ್ಯಕಥನೇ ಭಂಗಾಶ್ವನೋಪಾಖ್ಯಾನಂ ನಾಮ ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂದನೆಯ ಅಧ್ಯಾಯ

ಶುಭಾಶುಭ ಕರ್ಮಫಲ ಕಥನ

ಯುಧಿಷ್ಠಿರಃ

ಕಿಂ ಕರ್ತವ್ಯಂ ಮನುಷ್ಯೇಣ ಲೋಕಯಾತ್ರಾಹಿತಾರ್ಥಿನಾ ।
ಕಥಂ ಹಿ ಲೋಕಯಾತ್ರಾಂ ತು ಕಿಂಶೀಲಶ್ಚ ಸಮಾಚರೇತ್ ॥೧॥

ಯುಧಿಷ್ಠಿರ– ಲೋಕಯಾತ್ರೆಯಲ್ಲಿ ಹಿತವನ್ನು ಬಯಸುವ ಮನುಷ್ಯನು ಏನು ಮಾಡಬೇಕು? ಎಂತಹ ನಡತೆಯುಳ್ಳವನಾಗಿ ಲೋಕಯಾತ್ರೆಯನ್ನು ಆಚರಿಸಬೇಕು?

ಭೀಷ್ಮಃ

ದೇವೇ ನಾರಾಯಣೇ ಭಕ್ತಿಃ ಶಂಕರೇ ಸಾಧುಪೂಜ್ಯತಾ ।
ಧ್ಯಾನೇನಾಥ ಜಪಃ ಕಾರ್ಯಃ ಸ್ವಧರ್ಮೇ ಶುಚಿಚೇತಸಾ ॥೨॥

ಭೀಷ್ಮ– ದೇವನಾದ ನಾರಾಯಣನಲ್ಲಿ ಭಕ್ತಿ, ಶಂಕರನಲ್ಲಿ ಒಳ್ಳೆಯ ಪೂಜ್ಯತಾ ಬುದ್ಧಿ, ಧ್ಯಾನಪೂರ್ವಕವಾದ ಜಪ ಈ ಸ್ವಧರ್ಮಗಳನ್ನು ಶುದ್ಧವಾದ ಮನಸ್ಸಿನಿಂದ ಮಾಡಬೇಕು.

ಕಾಯೇನ ತ್ರಿವಿಧಂ ಕರ್ಮ ವಾಚಾ ಚಾಪಿ ಚತುರ್ವಿಧಮ್ ।
ಮನಸಾ ತ್ರಿವಿಧಂ ಚೈವ ದಶ ಕರ್ಮಪಥಾಂಸ್ತ್ಯಜೇತ್ ॥೩॥

ದೇಹದಿಂದ ಮೂರುವಿಧವಾದ ಕರ್ಮಗಳನ್ನೂ, ಮಾತಿನಿಂದ ನಾಲ್ಕುವಿಧವಾದ ಕರ್ಮಗಳನ್ನೂ, ಮನಸ್ಸಿನಿಂದ ಮೂರು ವಿಧವಾದ ಕರ್ಮಗಳನ್ನೂ ಒಟ್ಟು ಹತ್ತು ಕರ್ಮಗಳನ್ನು ತ್ಯಜಿಸಬೇಕು.

ಪ್ರಾಣಾತಿಪಾತಂ ಸ್ತೈನ್ಯಂ ಚ ಪರದಾರಮಥಾಪಿ ಚ ।
ತ್ರೀಣಿ ಪಾಪಾನಿ ಕಾಯೇನ ಸರ್ವತಃ ಪರಿವರ್ಜಯೇತ್ ॥೪॥

ವಧೆ, ಕಳ್ಳತನ, ಪರಪತ್ನೀಸ್ಪರ್ಶ - ದೇಹದಿಂದ ಈ ಮೂರು ಕರ್ಮಗಳನ್ನು ಸರ್ವಥಾ ತ್ಯಾಗ ಮಾಡಬೇಕು.

ಅಸತ್ಪ್ರಲಾಪಂ ಪಾರುಷ್ಯಂ ಪೈಶುನ್ಯಮನೃತಂ ತಥಾ ।
ಏತಾನಿ ವಾಚಾ ರಾಜೇಂದ್ರ ನ ಜಲ್ಪೇನ್ನಾನುಚಿಂತಯೇತ್ ॥೫॥

ಕೆಟ್ಟಮಾತುಗಳು, ಒರಟಾದ ಮಾತುಗಳು, ಚಾಡಿಯ ಮಾತುಗಳು ಮತ್ತು ಸುಳ್ಳು ಮಾತುಗಳು - ಎಲೈ ರಾಜೇಂದ್ರನೇ, ಈ ನಾಲ್ಕು ಪಾಪಕಾರ್ಯಗಳನ್ನು ಮಾಡಬಾರದು. ಮನಸ್ಸಿನಿಂದಲೂ ಚಿಂತಿಸಬಾರದು.

ಅನಭಿಧ್ಯಾ ಪರಸ್ವೇಷು ಸರ್ವಸತ್ತ್ವೇಷು ಸೌಹೃದಮ್ ।
ಕರ್ಮಣಾಂ ಫಲಮಸ್ತೀತಿ ತ್ರಿವಿಧಂ ಮನಸಾ ಚರೇತ್ ॥೬॥

ಇನ್ನೊಬ್ಬರ ಸ್ವತ್ತನ್ನು ಅಪೇಕ್ಷಿಸದಿರುವುದು, ಸರ್ವಪ್ರಾಣಿಗಳಲ್ಲಿ ಸ್ನೇಹ, ಕರ್ಮಕ್ಕೆ ಫಲವಿದೆ ಎಂಬ ಶ್ರದ್ಧೆ - ಈ ಮೂರನ್ನು ಮನಸ್ಸಿನಿಂದ ಆಚರಿಸಬೇಕು.

ತಸ್ಮಾದ್ ವಾಕ್ಕಾಯಮನಸಾ ನಾಚರೇದಶುಭಂ ನರಃ ।
ಶುಭಾಶುಭಾನ್ಯಾಚರನ್ ಹಿ ತಸ್ಯ ತಸ್ಯಾಶ್ನುತೇ ಫಲಮ್ ॥೭॥

ಆದ್ದರಿಂದ ಮನುಷ್ಯನಾದವನು ವಾಕ್-ಕಾಯ-ಮನಸ್ಸುಗಳಿಂದ ಅಶುಭವನ್ನು ಆಚರಿಸಬಾರದು. ಶುಭಾಶುಭಕರ್ಮಗಳನ್ನು ಆಚರಿಸುವ ಮನುಷ್ಯನು ಅವುಗಳಿಗೆ ಅನುಗುಣವಾದ ಫಲಗಳನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ತ್ರಿವಿಧಪಾಪತ್ಯಾಗಕಥನಂ
ನಾಮ ಏಕತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಉಪಮನ್ಯೂಪಾಖ್ಯಾನಮ್

ಮೂವತ್ತೆರಡನೆಯ ಅಧ್ಯಾಯ

ಶಿವ ಮಹಿಮೆ

ಯುಧಿಷ್ಠಿರಃ

ತ್ವಯಾಪಗೇಯ ನಾಮಾನಿ ಶ್ರುತಾನೀಹ ಜಗತ್ಪತೇಃ ।
ಪಿತಾಮಹೇಶಾಯ ವಿಭೋ ನಾಮಾನ್ಯಾಚಕ್ಷ್ವ ಶಂಭವೇ ।
ಬಭ್ರವೇ ವಿಶ್ವಮಾಯಾಯ ಮಹಾಭಾಗ್ಯಂ ಚ ತತ್ತ್ವತಃ ॥೧॥

ಸುರಾಸುರಗುರೌ ದೇವೇ ಶಂಕರೇಽವ್ಯಕ್ತಯೋನಯೇ ॥೨॥

ಯುಧಿಷ್ಠಿರ– ಗಂಗಾಪುತ್ರನೇ, ಜಗತ್ಪತಿಯೇ, ಪಿತಾಮಹನೇ, ನೀನು ಜಗತ್ಪತಿಯಾದ ಮಹೇಶನ ನಾಮಗಳನ್ನು ಕೇಳಿದ್ದೀಯೆ (ತಿಳಿದಿದ್ದೀಯೆ). ಸುರಾಸುರಗುರುವಾದ, ಅವ್ಯಕ್ತ ಯೋನಿಯಾದ ಬಭ್ರುವೂ, ವಿಶ್ವಮಾಯನೂ ಆದ ಶಂಕರನ ನಾಮಗಳನ್ನು ಹೇಳು. ಶಂಕರನ ಮಹಾಭಾಗ್ಯಗಳನ್ನು ಸರಿಯಾಗಿ ಹೇಳು.

ಭೀಷ್ಮಃ

ಅಶಕ್ತೋಽಹಂ ಗುಣಾನ್ ವಕ್ತುಂ ಮಹಾದೇವಸ್ಯ ಧೀಮತಃ ।
ಯೋ ಹಿ ಸರ್ವಗತೋ ದೇವೋ ನ ಚ ಸರ್ವತ್ರ ದೃಶ್ಯತೇ ॥೩॥

ಭೀಷ್ಮ– ಯಾವ ಶಂಕರನು ಸರ್ವಗತನಾದರೂ ಎಲ್ಲಿಯೂ ಕಾಣುವುದಿಲ್ಲವೋ ಅಂತಹ ಮೇಧಾವಿಯಾದ ಮಹಾದೇವನ ಗುಣಗಳನ್ನು ಹೇಳಲು ನಾನು ಅಸಮರ್ಥನಾದವನು.

ಬ್ರಹ್ಮವಿಷ್ಣುಸುರೇಶಾನಾಂ ಸ್ರಷ್ಟಾ ಯಃ ಪ್ರಭುರೇವ ಚ ।
ಬ್ರಹ್ಮಾದಯಃ ಪಿಶಾಚಾಂತಾ ಯಂ ಹಿ ದೇವಾ ಉಪಾಸತೇ ॥೪॥

ಅವನು ಬ್ರಹ್ಮ-ವಿಷ್ಣು-ಸುರೇಶ್ವರರ ಸೃಷ್ಟಿಯನ್ನು ಮಾಡುವವನು, ಪ್ರಭುವಾದವನು. ಬ್ರಹ್ಮನಿಂದ ಹಿಡಿದು ಪಿಶಾಚಗಳ ವರೆಗೆ ಅವನನ್ನು ಉಪಾಸನೆ ಮಾಡುತ್ತಾರೆ.

ಪ್ರಕೃತೀನಾಂ ಪರತ್ವೇನ ಪುರುಷಸ್ಯ ಚ ಯಃ ಪರಃ ।
ಚಿಂತ್ಯತೇ ಯೋ ಯೋಗವಿದ್ಭಿರ್ಋಷಿಭಿಸ್ತತ್ತ್ವದರ್ಶಿಭಿಃ ॥೫॥

ಯೋಗವನ್ನು ತಿಳಿದ, ತತ್ತ್ವದರ್ಶಿಗಳಾದ ಋಷಿಗಳು ಅವನನ್ನು ಪ್ರಕೃತಿಗಿಂತಲೂ ಪುರುಷನಿಗಿಂತಲೂ ಪರನಾದವನೆಂದು ತಿಳಿಯುತ್ತಾರೆ.

ಅಕ್ಷರಂ ಪರಮಂ ಪ್ರಾಹುರಸಚ್ಚ ಸದಸಚ್ಚ ಯಃ ।
ಪ್ರಕೃತಿಂ ಪುರುಷಂ ಚೈವ ಕ್ಷೋಭಯಿತ್ವಾ ಸ್ವತೇಜಸಾ ॥೬॥

ಬ್ರಹ್ಮಾಣಮಸೃಜತ್ ತಸ್ಮಾದ್ ದೇವದೇವಃ ಪ್ರಜಾಪತಿಃ ।
ಕೋ ಹಿ ಶಕ್ತೋ ಗುಣಾನ್ ವಕ್ತುಂ ದೇವದೇವಸ್ಯ ಧೀಮತಃ ॥೭॥

ಅವನನ್ನು ಪರಮಾಕ್ಷರ ಎಂದು ಹೇಳುತ್ತಾರೆ. ಕಾರ್ಯ-ಕಾರಣಗಳೆಂದು ಹೇಳುತ್ತಾರೆ. ಅವನು ಪ್ರಕೃತಿ-ಪುರುಷಗಳಲ್ಲಿ ಕ್ಷೋಭೆಯನ್ನುಂಟು ಮಾಡಿ ಬ್ರಹ್ಮದೇವರನ್ನು ಸೃಷ್ಟಿಸಿದನು. ಆದ್ದರಿಂದ ಅವನನ್ನು ದೇವದೇವನಾದ ಪ್ರಜಾಪತಿ ಎನ್ನುತ್ತಾರೆ. ದೇವದೇವನೂ ಮೇಧಾವಿಯೂ ಆದ ಅವನ ಗುಣಗಳನ್ನು ಹೇಳಲು ಯಾವನು ಸಮರ್ಥನಾಗುತ್ತಾನೆ?

ಗರ್ಭಜನ್ಮಜರಾಯುಕ್ತೋ ಮರ್ತ್ಯೋ ಮೃತ್ಯುಸಮನ್ವಿತಃ ।
ಕೋ ಹಿ ಶಕ್ತೋ ಭವಂ ಜ್ಞಾತುಂ ಮದ್ವಿಧಃ ಪರಮೇಶ್ವರಮ್ ॥೮॥

ಗರ್ಭವಾಸ, ಜನನ, ಮುಪ್ಪು, ಮರಣಗಳನ್ನು ಹೊಂದಿದ ನನ್ನಂತಹ ಯಾವ ಮರ್ತ್ಯನು ತಾನೇ ಪರಮೇಶ್ವರನಾದ ಅವನನ್ನು ತಿಳಿಯಲು ಸಮರ್ಥನಾಗುತ್ತಾನೆ?

ಋತೇ ನಾರಾಯಣಾತ್ ಪುತ್ರ ಶಂಖಚಕ್ರಗದಾಧರಾತ್ ।
ಏಷ ವಿದ್ವಾನ್ ಯದುಶ್ರೇಷ್ಠೋ ವಿಷ್ಣುಃ ಪರಮದುರ್ಜಯಃ ॥೯॥

ಎಲೈ ಪುತ್ರನೇ, ಶಂಖ-ಚಕ್ರ-ಗದಾಧರನಾದ ನಾರಾಯಣನನ್ನು ಬಿಟ್ಟು ಯಾರೂ ಅವನನ್ನು ತಿಳಿಯಲಾರರು. ಪರಮದುರ್ಜಯನೂ, ವಿಷ್ಣುವೂ ಆದ ಯದುಶ್ರೇಷ್ಠನಾದ ಕೃಷ್ಣನು ಅವನನ್ನು ತಿಳಿದಿದ್ದಾನೆ.

ದಿವ್ಯಚಕ್ಷುರ್ಮಹಾತೇಜಾ ಏಕ್ಷ್ಯತೇ ಯೋಗಚಕ್ಷುಷಾ ।
ರುದ್ರಭಕ್ತ್ಯಾ ತು ಕೃಷ್ಣೇನ ಜಗದ್ವ್ಯಾಪ್ತಂ ಮಹಾತ್ಮನಾ ॥೧೦॥

ದಿವ್ಯದೃಷ್ಟಿಯುಳ್ಳವನೂ, ಮಹಾತೇಜಸ್ವಿಯೂ, ಯೋಗದೃಷ್ಟಿಯುಳ್ಳವನೂ ಆದ ಕೃಷ್ಣನು ಅವನನ್ನು ನೋಡುತ್ತಾನೆ. ರುದ್ರಭಕ್ತಿಯಿಂದ ಮಹಾತ್ಮನಾದ ಕೃಷ್ಣನು ಜಗತ್ತನ್ನು ವ್ಯಾಪಿಸಿದ್ದಾನೆ.

ತಂ ಪ್ರಸಾದ್ಯ ತದಾ ದೇವಂ ಬದರ್ಯಾಂ ಕಿಲ ಭಾರತ ।
ಅರ್ಥಾತ್ ಪ್ರಿಯತರತ್ವಂ ಚ ಸರ್ವಲೋಕೇಷು ವೈ ತದಾ ॥೧೧॥

ಎಲೈ ಭಾರತನೇ, ಬದರಿಯಲ್ಲಿ ಅವನು ಆ ದೇವನನ್ನು ಪ್ರಸನ್ನಗೊಳಿಸಿ ಎಲ್ಲ ಲೋಕಗಳಲ್ಲಿಯೂ ಅರ್ಥಕ್ಕಿಂತಲೂ ಪ್ರಿಯನಾಗಿದ್ದಾನೆ.

ಪ್ರಾಪ್ತವಾನೇವ ರಾಜೇಂದ್ರ ಸುವರ್ಣಾಕ್ಷಾನ್ಮಹೇಶ್ವರಾತ್ ।
ಪೂರ್ಣಂ ವರ್ಷಸಹಸ್ರಂ ತು ತಪ್ತವಾನೇಷ ಮಾಧವಃ ॥೧೨॥

ಎಲೈ ರಾಜೇಂದ್ರನೇ, ಮಾಧವನು ಪೂರ್ಣವಾಗಿ ಒಂದು ಸಹಸ್ರವರ್ಷ ತಪಸ್ಸನ್ನು ಮಾಡಿ, ಮಹೇಶ್ವರನಿಂದ ಸುವರ್ಣಮಯವಾದ ಚಕ್ಷುಸ್ಸನ್ನು ಪಡೆದಿದ್ದಾನೆ.

ಪ್ರಸಾದ್ಯ ವರದಂ ದೇವಂ ಚರಾಚರಗುರುಂ ಶಿವಮ್ ।
ಯುಗೇ ಯುಗೇ ತು ಕೃಷ್ಣೇನ ತೋಷಿತೋ ವೈ ಮಹೇಶ್ವರಃ ॥೧೩॥

ಚರಾಚರ ಗುರುವಾದ ವರಪ್ರದನಾದ ಶಿವನನ್ನು ಪ್ರಸನ್ನಗೊಳಿಸುತ್ತಾನೆ. ಕೃಷ್ಣನು ಪ್ರತಿಯುಗದಲ್ಲಿಯೂ ಮಹೇಶ್ವರನನ್ನು ತೃಪ್ತಿಗೊಳಿಸುತ್ತಾನೆ.

ಭಕ್ತ್ಯಾ ಪರಮಯಾ ರಾಜನ್ ಪ್ರೀತಶ್ಚೈವ ಮಹಾತ್ಮನಃ ।
ಐಶ್ವರ್ಯಂ ಯಾದೃಶಂ ತಸ್ಯ ಜಗದ್ಯೋನೇರ್ಮಹಾತ್ಮನಃ ॥೧೪॥

ತದಯಂ ದೃಷ್ಟವಾನ್ ಸಾಕ್ಷಾತ್ ಪುತ್ರಾರ್ಥೇ ಹರಿರಚ್ಯುತ ।
ಯಸ್ಮಾತ್ ಪರತರಂ ಚೈವ ನಾನ್ಯಂ ಪಶ್ಯಾಮಿ ಭಾರತ ॥೧೫॥

ಎಲೈ ರಾಜನೇ, ಶಿವನಲ್ಲಿ ಪರಮಭಕ್ತಿಯಿಂದ ಕೂಡಿದವನಾಗಿ, ಸಂತೋಷಗೊಂಡು, ಜಗದ್ಯೋನಿಯೂ, ಮಹಾತ್ಮನೂ ಆದ ಶಿವನ ಐಶ್ವರ್ಯವು ಎಂಥದಿದೆಯೋ ಅಂತಹ ಐಶ್ವರ್ಯವನ್ನು ಪುತ್ರಾರ್ಥವಾಗಿ ಅವನ ಬಳಿಗೆ ಹೋದ ಹರಿಯು ಸಾಕ್ಷಾತ್ತಾಗಿ ನೋಡಿದ್ದಾನೆ. ಎಲೈ ಭಾರತನೇ, ಅವನಿಗಿಂತ ಶ್ರೇಷ್ಠವಾದವರನ್ನು ನಾನು ಯಾವನನ್ನೂ ಕಾಣುವುದಿಲ್ಲ.

ವ್ಯಾಖ್ಯಾತುಂ ದೇವದೇವಸ್ಯ ಶಕ್ತೋ ನಾಮಾನ್ಯಶೇಷತಃ ।
ಏಷ ಶಕ್ತೋ ಮಹಾಬಾಹುರ್ವಕ್ತುಂ ಭಗವತೋ ಗುಣಾನ್ ।
ವಿಭೂತಿಂ ಚೈವ ಕಾರ್ತ್ಸ್ನ್ಯೇನ ಸತ್ಯಾಂ ಮಾಹೇಶ್ವರೀಂ ನೃಪ ॥೧೬॥

ಈ ಮಹಾಬಾಹುವೇ, ಭಗವಂತನಾದ ದೇವದೇವನಾದ ಶಿವನ ಎಲ್ಲ ನಾಮಗಳನ್ನೂ ಮತ್ತು ಸತ್ಯವಾದ ಮಹೇಶ್ವರ ಸಂಬಂಧಿಯಾದ ಐಶ್ವರ್ಯವನ್ನೂ ವ್ಯಾಖ್ಯಾನ ಮಾಡಲು ಸಮರ್ಥನಾದವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ದ್ವಾತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ಮೂರನೆಯ ಅಧ್ಯಾಯ

ದರ್ಶನ ಭಾಷೆಯಿಂದ ಶಿವಮಹಿಮೆಯ ನಿರೂಪಣೆ.

ವೈಶಂಪಾಯನಃ

ಏವಮುಕ್ತ್ವಾ ತದಾ ಭೀಷ್ಮೋ ವಾಸುದೇವಂ ಮಹಾಯಶಾಃ ।
ಭವಮಾಹಾತ್ಮ್ಯಸಂಯುಕ್ತಮಿದಮಾಹ ಪಿತಾಮಹಃ ॥೧॥

ವೈಶಂಪಾಯನ– ಮಹಾಕೀರ್ತಿವಂತರಾದ, ಪಿತಾಮಹರಾದ ಭೀಷ್ಮರು ವಾಸುದೇವನನ್ನು ಕುರಿತು ಹೇಳಿ, ಶಿವಮಹಿಮೆಯ ವಿಷಯದಲ್ಲಿ ಈ ಮಾತನ್ನು ಆಡಿದರು.

ಸುರಾಸುರಗುರೋ ದೇವ ವಿಷ್ಣೋ ತ್ವಂ ವಕ್ತುಮರ್ಹಸಿ ।
ಶಿವಾಯ ವಿಶ್ವರೂಪಾಯ ಯನ್ಮಾಂ ಪೃಚ್ಛದ್ಯುಧಿಷ್ಠಿರಃ ॥೨॥

ಎಲೈ ಸುರಾಸುರಗುರುವೇ, ದೇವನೇ, ವಿಷ್ಣುವೇ, ಯುಧಿಷ್ಠಿರನು ನನ್ನನ್ನು ಕುರಿತು ವಿಶ್ವರೂಪನಾದ ಶಿವನ ವಿಷಯದಲ್ಲಿ ಕೇಳಿದ ಪ್ರಶ್ನೆಗೆ ನೀನು ಉತ್ತರವನ್ನು ಹೇಳಬೇಕು.

ವ್ಯಾಖ್ಯಾನ ವಿಶೇಷ– ಇದುವರೆಗೆ ಭೀಷ್ಮರು ಮೋಕ್ಷದಾಯಕವಾದ ಸಕಲ ವಿಷ್ಣುಧರ್ಮವನ್ನು ವಿಸ್ತಾರವಾಗಿ ನಿರೂಪಿಸಿ, ಈಗ ವ್ಯಾಸರಿಗೆ ತ್ರಿಭಾಷಾಂ ಯೋ ನಜಾನಾತಿ ರೀತೀನಾಂ ಶತಮೇವ ಚ (ಯಾವನು ಪುರಾಣಗಳ ಮೂರು ಭಾಷೆಗಳನ್ನು ಮತ್ತು ನೂರು ರೀತಿಗಳನ್ನು ತಿಳಿಯದೆ ಪುರಾಣಾದಿ ಪ್ರವಚನ ಮಾಡುತ್ತಾನೆಯೋ ಅವನಿಗೆ ಅನರ್ಥ ಉಂಟಾಗುತ್ತದೆ) ಎಂದು ಮುಂತಾಗಿ ಹೇಳಿದ ಪ್ರಕಾರದಲ್ಲಿ ಭಾರತವು ತ್ರಿಭಾಷೆಗಳಿಂದ ಕೂಡಿದೆ ಎಂದು ಸ್ಫುಟ ಪಡಿಸುವುದಕ್ಕಾಗಿ ಕೇವಲ ಶೈವದರ್ಶನಸಮ್ಮತವಾದ, ಶಿವಸಂಬಂಧಿಯಾದ ಕಥೆಯನ್ನು ತಮ್ಮ ಮರಣಕಾಲದಲ್ಲಿ ತಮ್ಮ ಮುಖದಿಂದಲೇ ಹೇಳಲು ನಾಚಿಕೆಗೊಂಡು ಅಸುರಜನ ಮೋಹನಾರ್ಥವಾಗಿಯೂ ಅವತಾರ ಮಾಡಿದ ಕೃಷ್ಣನನ್ನೇ ನೀನೇ ಹೇಳು ಎಂದು ಸುರಾಸುರ ಗುರೋ ದೇವ ಇತ್ಯಾದಿ ಶ್ಲೋಕದಿಂದ ಹೇಳುತ್ತಾರೆ.

ಮುಂದೆ ಹೇಳಲಿರುವ ಶಿವಸರ್ವೋತ್ತಮತ್ವಾದಿಗಳು ಅಪ್ರಾಮಾಣಿಕವೆಂದು ಸೂಚಿಸಲು ಸುರರ ಮತ್ತು ಅಸುರರ ಗುರುವೇ ಎಂದು ಸಂಬೋಧನೆ ಇದೆ. ಬುದ್ಧಾದಿ ರೂಪದಿಂದ ಅವತರಿಸಿ, ವಿರುದ್ಧವಾದ ಕಥೆಯನ್ನು ಪ್ರಸಾರ ಮಾಡಿ, ಅಸುರ ಜನರನ್ನು ಮೋಹನಗೊಳಿಸಲು ನೀನೇ ಕುಶಲನಾದವನು ಎಂದು ಸೂಚಿಸಲು ಎಲೈ ಅಸುರರ ಗುರುವೇ ಎಂಬ ಸಂಬೋಧನೆ ಇದೆ. ಭಾರತವು ತ್ರಿಭಾಷಾ ಭರಿತವಾಗಿರಲಿ, ಆದರೆ ಮುಂದೆ ಹೇಳಿರುವ ಶಿವಸಂಬಂಧಿಯಾದ ಕಥೆಯು ಶೈವದರ್ಶನವು ಮಾತ್ರ ಅವಲಂಬಿಸಿ ಹೇಳಿದ ಕಥೆ ಎಂದು ಹೇಗೆ ತಿಳಿಯುತ್ತದೆ ಎಂಬ ಪ್ರಶ್ನೆಗೆ ಉತ್ತರವು ಈ ರೀತಿಯಾಗಿದೆ. **'ಆದ್ಯಂತಯೋರ್ವಿರುದ್ಧಂ ಯದ್ದರ್ಶನಂ ತದುದಾಹೃತಮ್'** (ಒಂದು ಗ್ರಂಥದಲ್ಲಿ ಯಾವುದು ಆದಿ ಮತ್ತು ಅಂತ್ಯದಲ್ಲಿ ಹೇಳುವ ವಿಷಯಗಳಿಗೆ ವಿರುದ್ಧವಾದುದೋ ಅದನ್ನು ದರ್ಶನ ಭಾಷೆ ಎಂದು ಕರೆಯುತ್ತಾರೆ) ಎಂಬ ಪ್ರಮಾಣವಿದೆ. ಭಾರತದಲ್ಲಿಯಾದರೂ **'ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ'** (ನಾರಾಯಣನಿಗೆ ಸಮನಾದ ಚೇತನನು ಹಿಂದೆ ಇರಲಿಲ್ಲ, ಮುಂದೆ ಇರುವುದಿಲ್ಲ ಎಂದು ಆದಿಯಲ್ಲಿರುವ ವಚನ. ಹಾಗೆ **'ನ ಹಿ ಮೇ ಕೇನಚಿದ್ದೇಯೋ ವರಃ ಪಾಂಡವನಂದನ । ಇತಿ ಸಂಚಿಂತ್ಯ ಮನಸಾ ಪುರಾಣಂ ವಿಶ್ವಮೀಶ್ವರಮ್ । ಪುತ್ರಾರ್ಥಮಾರಾಧಿತವಾನಹಮಾತ್ಮಾನಮಾತ್ಮನಾ'** (ಎಲೈ ಪಾಂಡುನಂದನನೇ, ನಾನು ಯಾರಿಂದಲೂ ವರವನ್ನು ಪಡೆಯಬೇಕಾಗಿಲ್ಲ ಎಂದು ಮನಸ್ಸಿನಲ್ಲಿ ಚಿಂತಿಸಿ, ಪುರಾಣ

ಪುರುಷನಾದ ವಿಶ್ವೇಶ್ವರನನ್ನು ಪುತ್ರಾರ್ಥವಾಗಿ ಆರಾಧಿಸಿದೆನು. ಅವನ ಅಂತರ್ಯಾಮಿಯಾದ ನನ್ನನ್ನೇ ಆರಾಧಿಸಿದನು ಎಂದೂ, **'ನ ಹಿ ವಿಷ್ಣುಃ ಪ್ರಣಮತಿ ಕಸ್ಮೈಚಿದ್ವಿಬುಧಾಯ ತು। ಋತ ಆತ್ಮಾನಮೇವೇತಿ ತತೋ ರುದ್ರಂ ನಮಾಮ್ಯಹಮ್।'** (ವಿಷ್ಣುವು ತನ್ನನ್ನು ಬಿಟ್ಟು ಬೇರೆ ಯಾವ ದೇವತೆಗೂ ನಮಸ್ಕರಿಸುವುದಿಲ್ಲ ಹಾಗೆ ನಾನು ರುದ್ರನಿಗೆ ನಮಸ್ಕರಿಸುತ್ತೇನೆ) ಎಂದೂ **'ನ ಸ ಶಕ್ಯಸ್ತ್ವಯಾ ದ್ರಷ್ಟುಂ ಮಯಾಽನ್ಯೈರಪಿ ಸತ್ತಮ। ಸಗುಣೋ ನಿರ್ಗುಣೋ ವಿಶ್ವೋ ಜ್ಞಾನದೃಶ್ಯೋ ಹ್ಯಸೌ ಸ್ಮೃತಃ। ಅಹಂ ಬ್ರಹ್ಮಾ ಆದ್ಯ ಈಶಃ ಪ್ರಜಾನಾಂ ತಸ್ಮಾಜ್ಜಾತಸ್ತ್ವಂ ಚ ಮತ್ತಃ ಪ್ರಸೂತಃ। ಮತ್ತೋ ಜಗತ್ ಸ್ಥಾವರಂ ಜಂಗಮಂ ಚ ಸರ್ವೇ ವೇದಾಃ ಸರಹಸ್ಯಾಶ್ಚ ಪುತ್ರ'** (ಎಲೈ ಸಜ್ಜನರಲ್ಲಿ ಶ್ರೇಷ್ಠನಾದವನೇ, ನನ್ನಿಂದಲಾಗಲೀ, ನಿನ್ನಿಂದಲಾಗಲೀ ಅಥವಾ ಬೇರೆಯವರಿಂದಾಗಲೀ ಅವನನ್ನು ನೋಡಲು ಸಾಧ್ಯವಿಲ್ಲ. ಅಪ್ರಾಕೃತಗುಣಭರಿತನೂ, ಪ್ರಾಕೃತಗುಣರಹಿತನೂ, ವ್ಯಾಪ್ತನೂ ಆದ ಅವನು ಜ್ಞಾನದೃಷ್ಟಿಯಿಂದ ಮಾತ್ರ ಕಾಣುತ್ತಾನೆ. ಬ್ರಹ್ಮನಾದ ನಾನು ಪ್ರಜೆಗಳಿಗೆ ಮೊದಲನೆಯ ಒಡೆಯನಾದವನು ಅವನಿಂದ ಜನಿಸಿದ್ದೇನೆ. ನೀನಾದರೂ ನನ್ನಿಂದ ಜನಿಸಿದ್ದೀಯೆ. ಎಲೈ ಪುತ್ರನೇ, ಸ್ಥಾವರ ಜಂಗಮಾತ್ಮಕವಾದ ಸಮಸ್ತವಾದ ಜಗತ್ತೂ, ರಹಸ್ಯ ಸಹಿತವಾದ ಎಲ್ಲ ವೇದಗಳೂ, ನನ್ನಿಂದ ಜನಿಸಿವೆ (ಇದು ರುದ್ರನನ್ನು ಕುರಿತು ಬ್ರಹ್ಮದೇವರ ವಾಕ್ಯ). **'ಯತ್ತತ್ ಪದ್ಮಮಭೂತ್ಪರ್ವಂ ಯತೋ ಬ್ರಹ್ಮಾ ವ್ಯಜಾಯತ। ಬ್ರಹ್ಮಣಶ್ಚಾಪಿ ಸಂಭೂತಃ ಶಿವ ಇತ್ಯವಧಾರ್ಯತಾಮ್। ಶಿವಾತ್ ಸ್ಕಂದಃ ಸಂಬಭೂವ ಏತತ್ ಸೃಷ್ಟಿಚತುಷ್ಟಯಮ್। ಅನಾಶ್ರಿತ್ಯೋಚ್ಚ್ರಯೋ ನಾಸ್ತಿ ಮುಖ್ಯಮಾಶ್ರಯಮಾಶ್ರಯೇತ್। ರುದ್ರಂ ಸಮಾಶ್ರಿತಾ ದೇವಾ ರುದ್ರೋ ಬ್ರಹ್ಮಾಣಮಾಶ್ರಿತಃ। ಬಹ್ಮಾ ಮಾಮಾಶ್ರಿತೋ ನಿತ್ಯಂ ನಾಹಂ ಕಂಚಿದುಪಾಶ್ರಿತಃ।'** (ಮೊದಲು ಯಾವ ಪದ್ಮವು ಜನಿಸಿತೋ ಬ್ರಹ್ಮನು ಅದರಲ್ಲಿ ಜನಿಸಿದನು, ಶಿವನು ಬ್ರಹ್ಮನಿಂದ ಜನಿಸಿದನು. ಶಿವನಿಂದ ಸ್ಕಂದನು ಜನಿಸಿದನು. ಈ ನಾಲ್ಕು ಸೃಷ್ಟಿಯನ್ನು ತಿಳಿಯದೆ ಯಾವನೂ ಶ್ರೇಯಸ್ಸನ್ನು ಹೊಂದುವುದಿಲ್ಲ. ಮುಖ್ಯವಾದ ಶ್ರೇಯಸ್ಸನ್ನು ಆಶ್ರಯಿಸಬೇಕು. ದೇವತೆಗಳು ರುದ್ರನನ್ನು ಆಶ್ರಯಿಸಿರುತ್ತಾರೆ. ರುದ್ರನು ಬ್ರಹ್ಮನನ್ನು ಆಶ್ರಯಿಸಿರುತ್ತಾನೆ. ಬ್ರಹ್ಮನು ಯಾವಾಗಲೂ ನನ್ನನ್ನು ಆಶ್ರಯಿಸಿರುತ್ತಾನೆ. ನಾನು ಯಾರನ್ನೂ ಆಶ್ರಯಿಸಿರುವುದಿಲ್ಲ - ಇವು ದೇವರ ವಾಕ್ಯಗಳು). ಇವು ಮಹಾಭಾರತದಲ್ಲಿ ಮಧ್ಯಭಾಗದಲ್ಲಿರುವ ವಚನಗಳು. 'ಸತ್ಯಂ

ಸತ್ಯಂ ಪುನಃ ಸತ್ಯಮ್ ಉದ್ಧೃತ್ಯ ಭುಜಮುಚ್ಯತೇ । ವೇದಶಾಸ್ತ್ರಾತ್ ಪರಂ ನಾಸ್ತಿ ನ ದೈವಂ ಕೇಶವಾತ್ ಪರಮ್' (ಇದು ಸತ್ಯ ಸತ್ಯ ಸತ್ಯ. ಭುಜವನ್ನು ಎತ್ತಿ ಹೇಳುತ್ತಿದ್ದೇನೆ. ವೇದಶಾಸ್ತ್ರಕ್ಕಿಂತ ಉತ್ತಮವಾದ ಶಾಸ್ತ್ರವಿಲ್ಲ, ಕೇಶವನಿಗಿಂತ ಉತ್ತಮವಾದ ದೈವವಿಲ್ಲ). ಇದು ಮಹಾಭಾರತದಲ್ಲಿ ಕೊನೆಯಲ್ಲಿ ಬರುವ ವಚನಗಳು. ಅದಕ್ಕೆ ವಿರುದ್ಧವಾದ ಶಿವನ ಶ್ರೇಷ್ಠತೆಯನ್ನು ಹೇಳುವ ಮಧ್ಯದಲ್ಲಿ ಬರುವ ಈ ಕಥೆಗಳು ಆ ಕಾರಣದಿಂದ ದರ್ಶನಭಾಷೆಯನ್ನು ಆಶ್ರಯಿಸಿ ಪ್ರವೃತ್ತಗಳಾದವುಗಳು ಎಂದು ವಿವೇಕಿಗಳಾದವರು ತಿಳಿಯಬೇಕು. ಇದು ಉತ್ತರ.

ಅಲ್ಲದೇ, 'ನ ಹಿ ಮೇ ಕೇನಚಿದ್ದೇಯೋ ವರಃ ಪಾಂಡವನಂದನ । ಇತಿ ಸಂಚಿಂತ್ಯ ಮನಸಾ ಪುರಾಣಂ ವಿಶ್ವಮೀಶ್ವರಮ್ । ಪುತ್ರಾರ್ಥಮಾರಾಧಿತವಾನಹಮಾತ್ಮಾನಮಾತ್ಮನಾ । ನ ಹಿ ವಿಷ್ಣುಃ ಪ್ರಣಮತಿ ಕಸ್ಮೈಚಿದ್ವಿಬುಧಾಯ ತು' (ಎಂಬ ವಚನವೂ ಇದಕ್ಕೆ ಹತ್ತಿರದಲ್ಲೇ ಹಿಂದೆ ಮೋಕ್ಷಧರ್ಮಪರ್ವದಲ್ಲಿ ಇರುವ ವಚನ) ಇದರಲ್ಲಿ ಕೃಷ್ಣನ ಕೈಲಾಸಯಾತ್ರೆಯ ತೋರಿಕೆಯ ಕಥೆಯು ದೂಷಿಸಲ್ಪಟ್ಟಿದೆ. ಆದ್ದರಿಂದ ಮುಂದೆ ಹೇಳಿರುವ ಕೃಷ್ಣಕೈಲಾಸ ಯಾತ್ರೆಯೆಲ್ಲವೂ ಅಪ್ರಾಮಾಣಿಕವೆಂದು ತಿಳಿಯಬೇಕು. ಆದ್ದರಿಂದಲೂ ಇದು ಶೈವದರ್ಶನ ಭಾಷೆಯಿಂದಲೇ ಪ್ರವೃತ್ತವಾಗಿದೆ ಎಂದು ವಿಮರ್ಶೆಯುಳ್ಳವರು ಹೇಗೆ ತಿಳಿಯದೇ ಇರಲು ಸಾಧ್ಯ?

ಮತ್ತು 'ಕುಮಾರಶ್ಚಿತ್ ಪಿತರಂ ವಂದಮಾನಂ ಪ್ರತಿ ನನಾಮ ರುದ್ರೋಪಯಂತಮ್ ।', 'ಸ್ತುಹಿ ಶ್ರುತಂ ಗರ್ತ್ಯಸದಂ ಯುವಾನಂ ಮೃಗಂ ನ ಭೀಮಮುಪಹತ್ನುಮುಗ್ರಮ್ ।', 'ತವ ಶ್ರಿಯೇ ಮರುತೋ ಮರ್ಜಯಂತ ರುದ್ರ ಯತ್ತೇ ಜನಿಮ ಚಾರುಚಿತ್ರಮ್ । ಪದಂ ಯದ್ವಿಷ್ಣೋರುಪಮಂ ನಿಧಾಯಿ ತೇನ ಪಾಸಿ ಗುಹ್ಯಂ ನಾಮ ಗೋನಾಮ್', 'ಅಸ್ಯ ದೇವಸ್ಯ ಮೀಳ್ಹುಷೋ ವಯಾ ವಿಷ್ಣೋರೇಷಸ್ಯ ಪ್ರಭೃಥೇ ಹವಿರ್ಭಿಃ । ವಿದೇ ಹಿ ರುದ್ರೋ ರುದ್ರಿಯಂ ಮಹಿತ್ವಂ ಯಾಸಿಷ್ಟಂ ವರ್ತಿರಶ್ವಿನಾವಿರಾವತ್।', 'ಸೋರೋದೀದ್ಯದರೋದೀತ್ತದ್ರುದ್ರಸ್ಯ ರುದ್ರತ್ವಮ್।', 'ರುದ್ರಸ್ಯೈವ ಧನುರಾರ್ತಿಃ ಶಿರ ಉತ್ಪಿಪೇಷ ।', 'ಯಂ ಕಾಮಯೇ ತಂ ತಮುಗ್ರಂ ಕೃಣೋಮಿ । ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಮ್ । ಅಹಂ ರುದ್ರಾಯ ಧನುರಾತನೋಮಿ ಬ್ರಹ್ಮದ್ವಿಷೇ ಶರವೇ ಹಂತವಾ ಉ ।', 'ಉಚ್ಚೇಷಣಭಾಗೋ ವೈ ರುದ್ರಃ ತಾಭಿರೇನಂ

ರುದ್ರೋನ್ವಾಯತ್ತಃ।', 'ಈಶಾನಾಸಃ ಶವಸಾಕ್ರಂತಸೂರಯಃ।' (ಇವೇ ಮೊದಲಾದ ವೇದವಾಕ್ಯಗಳಲ್ಲಿ ರುದ್ರನು ಅಧಮನಾದವನೆಂದು ಹೇಳಿರುವುದರಿಂದ ರುದ್ರನ ಸರ್ವೋತ್ತಮತ್ವವು ವೇದವ್ಯಾಸರಿಗೆ ಸಮ್ಮತವಾದುದಲ್ಲ. ಆದ್ದರಿಂದಲೂ ಈ ಪ್ರಮೇಯವು ದರ್ಶನ ಭಾಷೆಯನ್ನು ಆಶ್ರಯಿಸಿ ಹೇಳಲ್ಪಟ್ಟಿದೆ ಎಂದು ತಿಳಿಯುತ್ತದೆ ಮತ್ತು 'ಅಗ್ನಿರ್ವೈದೇವಾನಾಮವಮೋ ವಿಷ್ಣುಃ ಪರಮಃ ತದಂತರೇ ಸರ್ವಾ ಅನ್ಯಾ ದೇವತಾಃ' (ಎಂಬ ಶ್ರುತಿಯೂ ಅಗ್ನಿಯನ್ನು ಕೆಳಭಾಗದಲ್ಲಿಟ್ಟು, ಇತರ ಎಲ್ಲಾ ದೇವತೆಗಳನ್ನೂ ಮಧ್ಯಭಾಗದಲ್ಲಿಟ್ಟು ವಿಷ್ಣುವಿಗೇ ಸರ್ವೋತ್ತಮತ್ವವನ್ನು ಪ್ರತಿಪಾದನೆ ಮಾಡಿರುವುದರಿಂದ ಇಂತಹ ನಿರವಕಾಶಶ್ರುತಿಗೆ ವಿರುದ್ಧವಾದ ಸ್ಮೃತಿಗಳು ನೂರು ಇದ್ದರೂ ಅವುಗಳಿಗೆ 'ವಿರೋಧೇ ತ್ವನಪೇಕ್ಷಂ ಸ್ಯಾತ್' ಎಂಬ ಮೀಮಾಂಸಾ ನ್ಯಾಯದಿಂದ ಅವಶ್ಯವಾಗಿ ಅಪ್ರಾಮಾಣ್ಯವೇ ಉಂಟಾಗುತ್ತದೆ. ಆದರೆ 'ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ' ಎಂದು ಛಾಂದೋಗ್ಯ ಉಪನಿಷತ್ತಿನಲ್ಲಿ ಮಹಾಭಾರತವನ್ನು ಐದನೆಯ ವೇದ ಎಂದು ಹೇಳಿರುವುದರಿಂದ ಪೂರ್ಣವಾದ ಅಪ್ರಾಮಾಣ್ಯವು ಅಸಂಭಾವಿತವಾದುದು. ಆದುದರಿಂದ ಇದನ್ನು ಇನ್ನೊಂದು ದರ್ಶನದ ಅನುವಾದ ಎಂದು ಹೇಳಬೇಕು. ಈ ಪ್ರಕರಣವನ್ನು ಶಿವನ ಅಂತರ್ಯಾಮಿಯ ವಿಷಯದಲ್ಲಿ ಯೋಜನೆ ಮಾಡಬಹುದು. ಆದರೂ ಮಹಾಭಾರತದಲ್ಲಿ ಇಂತಹ ದರ್ಶನ ಭಾಷೆಯ ಭಾಗಗಳು ಇವೆ ಎಂದು ತಿಳಿಯಬೇಕು. ಆದ್ದರಿಂದ ಎಲ್ಲವೂ ನಿರ್ದುಷ್ಟವಾಗಿದೆ - **ಲಕ್ಷಾಲಂಕಾರ**

ನಾಮ್ನಾಂ ಸಹಸ್ರಂ ದೇವಸ್ಯ ತಂಡಿನಾ ಬ್ರಹ್ಮಯೋನಿನಾ।
ನಿವೇದಿತಂ ಬ್ರಹ್ಮಲೋಕೇ ಬ್ರಹ್ಮಣೋ ಯತ್ಪುರಾಭವತ್ ॥೩॥

ಶಿವನ ಸಹಸ್ರನಾಮಗಳು ಬ್ರಹ್ಮಪುತ್ರರಾದ ತಂಡಿ ಋಷಿಗಳಿಂದ ಹಿಂದೆ ಬ್ರಹ್ಮದೇವರ ಎದುರಿಗೆ ಬ್ರಹ್ಮಲೋಕದಲ್ಲಿ ನಿವೇದಿಸಲ್ಪಟ್ಟಿತು.

ದ್ವೈಪಾಯನಪ್ರಭೃತಯಸ್ತಥೈವೇಮೇ ತಪೋಧನಾಃ।
ಋಷಯಃ ಸುವ್ರತಾ ದಾಂತಾಃ ಶೃಣ್ವಂತು ಗದತಸ್ತವ ॥೪॥

ದ್ವೈಪಾಯನರೇ ಮೊದಲಾದ ಈ ತಪಸ್ವಿಗಳೂ ಒಳ್ಳೆಯ ವ್ರತವನ್ನು ಧರಿಸಿ, ಇಂದ್ರಿಯನಿಗ್ರಹವುಳ್ಳ ಋಷಿಗಳೂ ಸಹ ನಿನ್ನಿಂದ ಶಿವನ ಮಹಿಮೆಯನ್ನು ಕೇಳಲಿ.

ಧ್ರುವಾಯ ನಂದಿನೇ ಹೋತ್ರೇ ಗೋಪ್ತ್ರೇ ವಿಶ್ವಸೃಜೇऽಗ್ನಯೇ ।
ಮಹಾಭಾಗ್ಯಂ ವಿಭೋ ಬ್ರೂಹಿ ಮುಂಡಿನೇಥ ಕಪರ್ದಿನೇ ॥೫॥

ಎಲೈ ವಿಭುವೇ, ಧ್ರುವನೂ, ಆನಂದಭರಿತನೂ, ಯಜಮಾನನಲ್ಲಿ ಇರುವವನೂ, ರಕ್ಷಕನಾದವನೂ, ವಿಶ್ವಕರ್ತೃವೂ, ಅಗ್ನಿಯೂ, ಮುಂಡನೂ, ಕಪರ್ದನೂ ಆದ ಶಿವನ ಮಹಾಭಾಗ್ಯವನ್ನು ಹೇಳು.

ವಾಸುದೇವಃ

ನ ಗತಿಃ ಕರ್ಮಣಾಂ ಶಕ್ಯಾ ವೇತ್ತುಮೀಶಸ್ಯ ತತ್ತ್ವತಃ ॥೬॥

ಹಿರಣ್ಯಗರ್ಭಪ್ರಮುಖಾ ದೇವಾಃ ಸೇಂದ್ರಾ ಮಹರ್ಷಯಃ ।
ನ ವಿದುರ್ಯಸ್ಯ ನಿಧನಮಾದಿಂ ವಾ ಸೂಕ್ಷ್ಮದರ್ಶಿನಃ ।
ಸ ಕಥಂ ನರಮಾತ್ರೇಣ ಶಕ್ಯೋ ಜ್ಞಾತುಂ ಸತಾಂ ಗತಿಃ ॥೭॥

ವಾಸುದೇವ- ಶಿವನ ಕರ್ಮದ ಗತಿಯನ್ನು ಸರಿಯಾಗಿ ತಿಳಿಯಲು ಸಾಧ್ಯವಿಲ್ಲ. ಇಂದ್ರಸಹಿತರಾದ ಬ್ರಹ್ಮಾದಿ ದೇವತೆಗಳೂ ಮತ್ತು ಮಹರ್ಷಿಗಳೂ ಸೂಕ್ಷ್ಮದರ್ಶನವನ್ನು ಹೊಂದಿದರೂ ಯಾವನ ಆದಿ, ಅಂತ್ಯಗಳನ್ನು ತಿಳಿದಿಲ್ಲವೋ ಅಂತಹ ಸಜ್ಜನರಿಗೆ ಗತಿಯಾದ ಶಿವನನ್ನು ಒಬ್ಬ ಮನುಷ್ಯಮಾತ್ರನಾದವನು ಹೇಗೆ ತಿಳಿಯಲು ಸಾಧ್ಯ?

ತಸ್ಯಾಹಮಸುರಘ್ನಸ್ಯ ಕಾಂಶ್ಚಿದ್ ಭಗವತೋ ಗುಣಾನ್ ।
ಭವತಾಂ ಕೀರ್ತಯಿಷ್ಯಾಮಿ ವ್ರತೇಶಾಯ ಯಥಾತಥಮ್ ॥೮॥

ನಾನು ಅಸುರಸಂಹಾರಕನಾದ, ವ್ರತಪತಿಯಾದ ಶಿವನ ಕೆಲವು ಗುಣಗಳನ್ನು ಯಥಾರ್ಥವಾಗಿ ನಿಮ್ಮ ಮುಂದೆ ಹೇಳುವೆನು.

ವೈಶಂಪಾಯನಃ

ಏವಮುಕ್ತ್ವಾ ತು ಭಗವಾನ್ ಗುಣಾಂಸ್ತಸ್ಯ ಮಹಾತ್ಮನಃ ।
ಉಪಸ್ಪೃಶ್ಯ ಶುಚಿರ್ಭೂತ್ವಾ ಕಥಯಾಮಾಸ ಧೀಮತಃ ॥೯॥

ವೈಶಂಪಾಯನ– ಹೀಗೆ ಹೇಳಿ ಭಗವಂತನಾದ ಕೃಷ್ಣನು ನೀರನ್ನು ಸ್ಪರ್ಶಿಸಿ, ಶುಚಿಯಾಗಿ ಮೇಧಾವಿಯಾದ ಶಿವನ ಗುಣಗಳನ್ನು ಹೇಳಿದನು.

ವಾಸುದೇವಃ

ಶುಶ್ರೂಷಧ್ವಂ ಬ್ರಾಹ್ಮಣೇಂದ್ರಾಸ್ತ್ವಂ ಚ ತಾತ ಯುಧಿಷ್ಠಿರ ।
ತ್ವಂ ಚಾಪಗೇಯ ನಾಮಾನಿ ನಿಶಾಮಯ ಜಗತ್ಪತೇಃ ॥೧೦॥

ವಾಸುದೇವ– ಎಲೈ ಬ್ರಾಹ್ಮಣಶ್ರೇಷ್ಠರೇ ಕೇಳಿ, ಪ್ರೀತಿಪಾತ್ರನಾದ ಯುಧಿಷ್ಠಿರನೇ, ಗಂಗಾಪುತ್ರನಾದ ಭೀಷ್ಮನೇ, ಜಗತ್ಪತಿಯಾದ ಶಿವನ ನಾಮಗಳನ್ನು ಕೇಳುವವರಾಗಿ.

ಯದವಾಪ್ತಂ ಚ ಮೇ ಪೂರ್ವಂ ಸಾಂಬಹೇತೋಃ ಸುದುಷ್ಕರಮ್ ।
ಯಥಾ ಚ ಭಗವಾನ್ ದೃಷ್ಟೋ ಮಯಾ ಪೂರ್ವಂ ಸಮಾಧಿನಾ ॥೧೧॥

ನಾನು ಸಾಂಬನನ್ನು ಪಡೆಯುವ ಸಲುವಾಗಿ ದುಷ್ಕರವಾದ ಯಾವ ಶಿವನ ನಾಮಗಳನ್ನು ಸಂಪಾದಿಸಿದೆನೋ ಮತ್ತು ಸಮಾಧಿಸ್ಥನಾಗಿ ಪೂಜ್ಯನಾದ ಅವನನ್ನು ಹಿಂದೆ ಹೇಗೆ ನೋಡಿದೆನೋ ಅದಕ್ಕೆ ಅನುಗುಣವಾಗಿ ಹೇಳುವೆನು.

ಶಂಬರೇ ನಿಹತೇ ಪೂರ್ವಂ ರೌಕ್ಮಿಣೇಯೇನ ಧೀಮತಾ ।
ಅತೀತೇ ದ್ವಾದಶೇ ವರ್ಷೇ ಜಾಂಬವತ್ಯಬ್ರವೀದ್ಧಿ ಮಾಮ್ ॥೧೨॥

ಮೇಧಾವಿಯಾದ ಪ್ರದ್ಯುಮ್ನನಿಂದ ಹಿಂದೆ ಶಂಬರಾಸುರನು ಹತನಾಗಿ ಹನ್ನೆರಡು ವರ್ಷಗಳು ಕಳೆಯುತ್ತಿರಲು ಜಾಂಬವತಿಯು ನನ್ನನ್ನು ಕುರಿತು ಹೇಳಿದಳು.

ಪ್ರದ್ಯುಮ್ನಚಾರುದೇಷ್ಣಾದೀನ್ ರುಕ್ಮಿಣ್ಯಾ ವೀಕ್ಷ್ಯ ಪುತ್ರಕಾನ್ ।
ಪುತ್ರಾರ್ಥಿನೀ ಮಾಮುಪೇತ್ಯ ವಾಕ್ಯಮಾಹ ಯುಧಿಷ್ಠಿರ ॥೧೩॥

ಪ್ರದ್ಯುಮ್ನ, ಚಾರುದೇಷ್ಣ ಮೊದಲಾದ ರುಕ್ಮಿಣಿಯ ಪುತ್ರರನ್ನು ನೋಡಿ ಎಲೈ ಯುಧಿಷ್ಠಿರನೇ, ತಾನೂ ಪುತ್ರರನ್ನು ಬಯಸಿದ ಅವಳು ನನ್ನನ್ನು ಸಮೀಪಿಸಿ ಮಾತನಾಡಿದಳು.

ಶೂರಂ ಬಲವತಾಂ ಶ್ರೇಷ್ಠಂ ಕಾಂತರೂಪಮಕಲ್ಮಷಮ್ ।
ಆತ್ಮತುಲ್ಯಂ ಮಮ ಸುತಂ ಪ್ರಯಚ್ಛಾಚ್ಯುತ ಮಾಚಿರಮ್ ॥೧೪॥

ಎಲೈ ಅಚ್ಯುತನೇ, ಶೂರನೂ, ಬಲಿಷ್ಠನೂ, ಗುಣವಂತನೂ, ದೋಷವಿಲ್ಲದವನೂ, ಸುಂದರವಾದ ರೂಪವುಳ್ಳವನೂ, ನಿನಗೆ ಸಮಾನನಾದವನೂ ಆದ ಪುತ್ರನನ್ನು ನನಗೆ ಬೇಗ ಕೊಡು.

ನ ಹಿ ತೇಽಪ್ರಾಪ್ಯಮಸ್ತೀಹ ತ್ರಿಷು ಲೋಕೇಷು ಕಿಂಚನ ।
ಲೋಕಾನ್ ಸೃಜೇಸ್ತ್ವಮಪರಾನಿಚ್ಛನ್ ಯದುಕುಲೋದ್ವಹ ॥೧೫॥

ಎಲೈ ಯದುಕುಲೋದ್ವಹನೇ, ಮೂರುಲೋಕದಲ್ಲಿ ನೀನು ಪಡೆಯಲಾರದುದು ಯಾವುದೂ ಇಲ್ಲ. ನೀನು ಇಚ್ಛಿಸಿದರೆ ಬೇರೆ ಲೋಕಗಳನ್ನೇ ಸೃಷ್ಟಿಸುವಿ.

ತ್ವಯಾ ದ್ವಾದಶ ವರ್ಷಾಣಿ ವಾಯುಭೂತೇನ ಶುಷ್ಯತಾ ।
ಆರಾಧ್ಯ ಪಶುಭರ್ತಾರಂ ರುಗ್ಮಿಣ್ಯಾಂ ಜನಿತಾಃ ಸುತಾಃ ॥೧೬॥

ನೀನು ಹನ್ನೆರಡು ವರ್ಷಗಳ ಕಾಲ ವಾಯುವಿನಿಂದ ದೇಹವನ್ನು ಒಣಗಿಸಿ, ಪಶುಪತಿಯಾದ ಶಿವನನ್ನು ಆರಾಧಿಸಿ ರುಗ್ಮಿಣಿಯಲ್ಲಿ ಮಕ್ಕಳನ್ನು ಪಡೆವೆ.

ಚಾರುದೇಷ್ಣಃ ಸುಚಾರುಶ್ಚ ಚಾರುವೇಷೋ ಯಶೋಧರಃ ।
ಚಾರುಶ್ರವಾಶ್ಚಾರುಯಶಾಃ ಪ್ರದ್ಯುಮ್ನಃ ಶಂಭುರೇವ ಚ ॥೧೭॥

ಚಾರುದೇಷ್ಣ ಸುಚಾರು, ಚಾರುವೇಷ, ಯಶೋಧರ, ಚಾರುಶ್ರವ, ಚಾರುಯಶ, ಪ್ರದ್ಯುಮ್ನ, ಶಂಭು ಎಂಬುವರು ನಿನ್ನ ಆ ಪುತ್ರರು.

ಯಥಾ ತೇ ಜನಿತಾಃ ಪುತ್ರಾ ರುಗ್ಮಿಣ್ಯಾಶ್ಚಾರುವಿಕ್ರಮಾಃ ।
ತಥಾ ಮಮಾಪಿ ತನಯಂ ಪ್ರಯಚ್ಛ ಬಲಶಾಲಿನಮ್ ॥೧೮॥

ರುಗ್ಮಿಣಿಯಲ್ಲಿ ಸುಂದರರೂ, ಪರಾಕ್ರಮಶಾಲಿಗಳೂ ಆದ ಪುತ್ರರನ್ನು ಪಡೆದಂತೆ ನನಗೂ ಬಲಶಾಲಿಯಾದ ಒಬ್ಬ ಪುತ್ರನನ್ನು ಕೊಡು.

ಇತ್ಯೇವಂ ಚೋದಿತೋ ದೇವ್ಯಾ ತಾಮವೋಚಂ ಸುಮಧ್ಯಮಾಮ್ ।
ಅನುಜಾನೀಹಿ ಮಾಂ ರಾಜ್ಞಿ ಕರಿಷ್ಯೇ ವಚನಂ ತವ ।
ಸಾ ಚ ಮಾಮಬ್ರವೀದ್ ಗಚ್ಛ ವಿಜಯಾಯ ಶಿವಾಯ ಚ ॥೧೯॥

ಹೀಗೆ ಅವಳಿಂದ ಹೇಳಲ್ಪಟ್ಟ ನಾನು ರಾಣಿಯೇ ನಿನ್ನ ಮಾತನ್ನು ನಡೆಸುತ್ತೇನೆ. ನನಗೆ ಅನುಮತಿಯನ್ನು ಕೊಡು ಎಂದು ಕೇಳಿದೆನು. ಆಗ ಅವಳು ಮಂಗಳಕ್ಕಾಗಿ ಮತ್ತು ವಿಜಯಕ್ಕಾಗಿ ಹೋಗಿ ಬಾ ಎಂದು ಹೇಳಿದಳು.

ಬ್ರಹ್ಮಾ ಶಿವಃ ಕಾಶ್ಯಪಶ್ಚ ನದ್ಯೋ ದೇವಾ ಮನೋನುಗಾಃ ।
ಕ್ಷೇತ್ರೌಷಧ್ಯೋ ಯಜ್ಞವಾಹಾಶ್ಛಂದಾಂಸ್ಯೃಷಿಗಣಾ ಧರಾ ॥೨೦॥

ಸಮುದ್ರಾ ದಕ್ಷಿಣಾಃ ಸ್ತೋಭಾ ಋಕ್ಷಾಣಿ ಪಿತರೋ ಗ್ರಹಾಃ ।
ದೇವಪತ್ನ್ಯೋ ದೇವಕನ್ಯಾ ದೇವಮಾತರ ಏವ ಚ ॥೨೧॥

ಮನ್ವಂತರಾಣಿ ಗಾವಶ್ಚ ಚಂದ್ರಮಾಃ ಸವಿತಾ ಹವಿಃ ।
ಸಾವಿತ್ರೀ ಬ್ರಹ್ಮವಿದ್ಯಾ ಚ ಋತವೋ ವತ್ಸರಾಃ ಕ್ಷಪಾಃ ॥೨೨॥

ಕ್ಷಣಾ ಲವಾ ಮುಹೂರ್ತಾಶ್ಚ ನಿಮೇಷಾ ಯುಗಪರ್ಯಯಾಃ ।
ರಕ್ಷಂತು ಸರ್ವತ್ರ ಗತಂ ತ್ವಾಂ ಯಾದವ ಸುಖಾವಹಮ್ ।
ಅರಿಷ್ಟಂ ಗಚ್ಛ ಪಂಥಾನಮಪ್ರಮತ್ತೋ ಭವಾನಘ ॥೨೩॥

ಬ್ರಹ್ಮದೇವ, ಶಿವ, ಕಶ್ಯಪ, ನದಿಗಳು, ಮನೋನುಸಾರಿಗಳಾದ ದೇವತೆಗಳು, ಕ್ಷೇತ್ರೌಷಧಿಗಳು, ಯಜ್ಞವನ್ನು ನಡೆಸುವ ಛಂದಸ್ಸುಗಳು, ಋಷಿಸಮೂಹಗಳು, ಭೂಮಿ, ಸಮುದ್ರ, ದಕ್ಷಿಣೆ, ಸ್ತೋಭಾಕ್ಷರಗಳು, ನಕ್ಷತ್ರಗಳು, ಪಿತೃದೇವತೆಗಳು, ಗ್ರಹಗಳು, ದೇವಪತ್ನಿಯರು, ದೇವಕನ್ಯೆಯರು, ದೇವಮಾತೆಗಯರು, ಮನ್ವಂತರಗಳು, ಗೋವುಗಳು, ಚಂದ್ರ, ಸೂರ್ಯ, ಹವಿಸ್ಸು, ಸಾವಿತ್ರಿ, ಬ್ರಹ್ಮವಿದ್ಯಾ, ಋತುಗಳು, ಸಂವತ್ಸರಗಳು, ರಾತ್ರಿಗಳು, ಕ್ಷಣ-ಲವ-ಮುಹೂರ್ತಗಳು, ನಿಮಿಷಗಳು, ಯುಗಚಕ್ರ ಎಲ್ಲವೂ ಎಲೈ ಯಾದವನೇ, ಕಾರ್ಯಸಿದ್ಧಿಗಾಗಿ ಹೊರಟ ನಿನಗೆ ಸುಖವನ್ನುಂಟು ಮಾಡಲಿ. ಎಲೈ ಅನಘನೇ, ಜಾಗರೂಕನಾಗಿ ಮಾರ್ಗದಲ್ಲಿ ಹೋಗು. ನಿನಗೆ ಯಾವುದೂ ಅನಿಷ್ಟವಾಗದಿರಲಿ.

ಏವಂ ಕೃತಸ್ವಸ್ತ್ಯಯನಸ್ತಯಾऽಹಂ
ತಾಮಭ್ಯನುಜ್ಞಾಯ ಕಪೀಂದ್ರಪುತ್ರೀಮ್ ।
ಪಿತುಃ ಸಮೀಪೇ ನರಸತ್ತಮಸ್ಯ
ಮಾತುಶ್ಚ ರಾಜ್ಞಶ್ಚ ತಥಾಹುಕಸ್ಯ ।
ತಮರ್ಥಮಾವೇದ್ಯ ಯದಬ್ರವೀನ್ಮಾಂ
ವಿದ್ಯಾಧರೇಂದ್ರಸ್ಯ ಸುತಾ ಭೃಶಾರ್ತಾ ॥೨೪॥

ಹೀಗೆ ಅವಳಿಂದ ಶುಭಾಶಂಸನೆಯನ್ನು ಮಾಡಿಸಿಕೊಂಡು ಕಪೀಂದ್ರನಾದ ಜಾಂಬವಂತನ ಪುತ್ರಿಯಾದ ಅವಳಿಂದ ಅನುಮತಿಯನ್ನು ಪಡೆದು , ನರಶ್ರೇಷ್ಠನಾದ ತಂದೆಯ, ತಾಯಿಯ ಮತ್ತು ಆಹುಕ ರಾಜನ ಬಳಿಯಲ್ಲಿ ಶ್ರೇಷ್ಠನಾದ ವಿದ್ಯಾಧರನ ಪುತ್ರಿಯಾದ ದುಃಖಭರಿತಳಾದ ಜಾಂಬವತಿಯು ನನಗೆ ಹೇಳಿದ ವಿಷಯವನ್ನು ನಿರೂಪಿಸಿ ಹೊರಟೆನು.

ತಾನಭ್ಯನುಜ್ಞಾಯ ತದಾತಿದುಃಖಾದ್
ಗದಂ ತಥೈವಾತಿಬಲಂ ಚ ರಾಮಮ್ ।
ಅಥೋಚತುಃ ಪ್ರೀತಿಯುಕ್ತೌ ತದಾನೀಂ
ತಪಃಸಮೃದ್ಧಿರ್ಭವತೋಽಸ್ತ್ವವಿಘ್ನಮ್ ॥೨೫॥

ಅತ್ಯಂತ ದುಃಖದಿಂದ ಅವಳಿಂದ ಅನುಮತಿಯನ್ನು ಪಡೆದು ಅನಂತರ ಗದನನ್ನು ಮತ್ತು ದೊಡ್ಡಣ್ಣನೂ, ಅತಿಬಲಿಷ್ಠನೂ ಆದ ಬಲರಾಮನನ್ನು ನೋಡಿದೆನು. ಅವರಿಬ್ಬರೂ ಆಗ ನಿರ್ವಿಘ್ನವಾಗಿ ನಿನ್ನ ತಪಸ್ಸಿನ ಸಮೃದ್ಧಿಯುಂಟಾಗಲಿ ಎಂದು ಪ್ರೀತಿಯುಕ್ತರಾಗಿ ಹೇಳಿದರು.

ಪ್ರಾಪ್ಯಾನುಜ್ಞಾಂ ಗುರುಜನಾದಹಂ ತಾರ್ಕ್ಷ್ಯಮಚಿಂತಯಮ್ ।
ಸೋಽವಹದ್ದಿಮವಂತಂ ಮಾಂ ಪ್ರಾಪ್ಯ ಚೈನಂ ವ್ಯಸರ್ಜಯಮ್ ॥೨೬॥

ಹಿರಿಯರ ಅನುಮತಿಯನ್ನು ಪಡೆದು ನಾನು ಗರುಡನನ್ನು ಚಿಂತಿಸಿದೆನು. ಅವನು ಬಂದು ನನ್ನನ್ನು ಹಿಮಾಲಯ ಪರ್ವತದವರೆಗೆ ಹೊತ್ತುಕೊಂಡು ಹೋದನು. ಅಲ್ಲಿ ಅವನನ್ನು ನಾನು ಕಳುಹಿಸಿಕೊಟ್ಟೆನು.

ತತ್ರಾಹಮದ್ಭುತಾನ್ ಭಾವಾನಪಶ್ಯಂ ಗಿರಿಸತ್ತಮೇ ।
ಕ್ಷೇತ್ರಂ ಚ ತಪಸಾಂ ಶ್ರೇಷ್ಠಂ ಪಶ್ಯಾಮ್ಯಾಶ್ರಮಮುತ್ತಮಮ್ ॥೨೭॥

ಆ ಶ್ರೇಷ್ಠವಾದ ಪರ್ವತದಲ್ಲಿ ನಾನು ಅದ್ಭುತವಾದ ವಿಷಯಗಳನ್ನು ನೋಡಿದೆನು. ತಪಸ್ಸುಗಳಿಗೆ ಅತ್ಯಂತ ಶ್ರೇಷ್ಠವಾದ ಕ್ಷೇತ್ರವನ್ನು ಮತ್ತು ಆಶ್ರಮವನ್ನು ನೋಡಿದೆನು.

ದಿವ್ಯಂ ವೈಯಾಘ್ರಪದ್ಯಸ್ಯ ಉಪಮನ್ಯೋರ್ಮಹಾತ್ಮನಃ ।
ಪೂಜಿತಂ ದೇವಗಂಧರ್ವೈರ್ಬ್ರಾಹ್ಮ್ಯಾ ಲಕ್ಷ್ಮ್ಯಾ ಸಮನ್ವಿತಮ್ ॥೨೮॥

ವೈಯಾಘ್ರಪಾದಗೋತ್ರದ ಮಹಾತ್ಮನಾದ ಉಪಮನ್ಯುವಿನ ದಿವ್ಯವೂ, ದಿವ್ಯಗಂಧಗಳಿಂದ ಪೂಜಿತವೂ, ವೇದಸಂಪತ್ತಿನಿಂದ ಕೂಡಿದುದೂ ಆದ ಆಶ್ರಮವನ್ನು ನೋಡಿದೆನು.

ಧವಕಕುಭಕದಂಬನಾರಿಕೇಲೈಃ
ಕುರಬಕಕೇತಕಜಂಬುಪಾಟಲಾಭಿಃ ।
ವಟವರುಣಕವತ್ಸನಾಭಬಿಲ್ವೈಃ
ಸರಲಕಪಿತ್ಥಪ್ರಿಯಾಲಸಾಲತಾಳೈಃ ॥೨೯॥

ಬದರೀಕುಂದಪುನ್ನಾಗೈರಶೋಕಾಮ್ರಾತಿಮುಕ್ತಕೈಃ ।
ಭಲ್ಲಾತಕೈರ್ಮಧೂಕೈಶ್ಚ ಚಂಪಕೈಃ ಪನಸೈಸ್ತಥಾ ॥೩೦॥

ಅನ್ಯೈರ್ಬಹುವಿಧೈರ್ವೃಕ್ಷೈಃ ಫಲಪುಷ್ಪಪ್ರದೈರ್ಯುತಮ್ ।
ಪುಷ್ಪಗುಲ್ಮಲತಾಕೀರ್ಣಂ ಕದಳೀಷಂಡಶೋಭಿತಮ್ ॥೩೧॥

ಆ ಆಶ್ರಮವು ಧವ-ಕಕುಭ (ಅರ್ಜುನ ವೃಕ್ಷ)-ಕದಂಬ-ನಾರಿಕೇಲ-ಕುರಬಕ-ಕೇತಕ- ಜಂಬು- ಪಾಟಲ-ವಟ-ವರುಣ-ವತ್ಸನಾಭ-ಬಿಲ್ವ-ಸರಳ-ಕಪಿತ್ಥ-ಪ್ರಿಯಾಲ-ಸಾಲ ತಾಳವೃಕ್ಷಗಳಿಂದಲೂ, ಬದರಿ-ಕುಂದ-ಪುನ್ನಾಗಗಳಿಂದಲೂ, ಅಶೋಕ-ಆಮ್ರ- ಅತಿಮುಕ್ತಕ-ಮಧೂಕ-ಚಂಪಕ ಪನಸ (ಹಲಸು)ಗಳಿಂದಲೂ ಇನ್ನೂ ಅನೇಕ ವಿಧವಾದ ಫಲ-ಪುಷ್ಪಭರಿತವಾದ ವೃಕ್ಷಗಳಿಂದಲೂ ಕೂಡಿದ್ದು, ಪುಷ್ಪಿತವಾದ ಗುಲ್ಮಲತೆಗಳಿಂದ ಕೂಡಿ ಕದಳೀ ವೃಕ್ಷಗಳಿಂದ ಶೋಭಿತವಾಗಿದ್ದಿತು.

ನಾನಾಶಕುನಿಸಂಘೋಜ್ಯೈಃ ಫಲೈರ್ವೃಕ್ಷೈರಲಂಕೃತಮ್ ।
ಯಥಾಸ್ಥಾನವಿನಿಕ್ಷಿಪ್ತೈರ್ಭೂಷಿತಂ ವನರಾಜಿಭಿಃ ॥೩೨॥

ಅನೇಕ ಪಕ್ಷಿಗಳಿಗೆ ಪ್ರೀತಿಯ ಆಹಾರವಾದ ಹಣ್ಣುಗಳಿಂದ ಕೂಡಿದ ವೃಕ್ಷಗಳಿಂದ ಅಲಂಕೃತವಾಗಿದ್ದಿತು. ವನರಾಜಿಗಳು ತಾವು ಇರಬೇಕಾದ ಸ್ಥಾನದಲ್ಲಿ ಆಶ್ರಮಕ್ಕೆ ಭೂಷಣಪ್ರಾಯವಾಗಿದ್ದವು.

ರುರುವಾರಣಶಾರ್ದೂಲಸಿಂಹದ್ವೀಪಿಸಮಾಕುಲಮ್ ।
ಕುರಂಗಬರ್ಹಿಣಾಕೀರ್ಣಂ ಮಾರ್ಜಾರಭುಜಗಾವೃತಮ್ ।
ಪೂಗೈಶ್ಚ ಮೃಗಜಾತೀನಾಂ ಮಹಿಷರ್ಷ್ಯನಿಷೇವಿತಮ್ ॥೩೩॥

ರುರು (ಜಿಂಕೆ)-ವಾರಣ (ಆನೆ)-ಶಾರ್ದೂಲ-ಸಿಂಹ-ದ್ವೀಪಿ ಮೃಗಗಳಿಂದ ನಿಬಿಡವಾಗಿದ್ದಿತು. ಕುರಂಗ-ಬರ್ಹಿ-ಕಸ್ತೂರಿಮೃಗ ಮತ್ತು ಸರ್ಪಗಳಿಂದ ಆವೃತವಾಗಿದ್ದಿತು. ಪೂಗ ವೃಕ್ಷಗಳಿಂದಲೂ, ಅನೇಕ ಜಾತಿಯ ಮೃಗಗಳಿಂದಲೂ, ಮಹಿಷ ಕರಡಿಗಳಿಂದಲೂ ಸೇವಿತವಾಗಿದ್ದಿತು.

ನಾನಾಪುಷ್ಪರಜೋಮಿಶ್ರೋ ಗಜದಾನಾಧಿವಾಸಿತಃ ।
ದಿವ್ಯಸ್ತ್ರೀಗೀತಬಹುಲೋ ಮಾರುತೋಽತ್ರ ಸುಖೋ ವವೌ ॥೩೪॥

ನಾನಾ ಪುಷ್ಪ-ಗರಜೋ ಮಿಶ್ರಿತವಾದ, ಗಜಗಳ ಮದೋದಕದ ಸುವಾಸನೆಯಿಂದ ಕೂಡಿದ, ದಿವ್ಯಸ್ತ್ರೀಯರ ಸಂಗೀತಮಿಶ್ರಿತವಾದ ವಾಯುವು ಅಲ್ಲಿ ಶುಭವಾಗಿ ಬೀಸುತ್ತಿದ್ದಿತು.

ಧಾರಾನಿನಾದೈರ್ವಿಹಗಪ್ರಣಾದೈಃ
ಶುಭೈಸ್ತಥಾ ಬೃಂಹಿತೈಃ ಕುಂಜರಾಣಾಮ್ ।
ಗೀತೈಸ್ತಥಾ ಕಿನ್ನರಾಣಾಮುದಾರೈಃ
ಶುಭೈಃ ಸ್ವನೈಃ ಸಾಮಗಾನಾಂ ಚ ವೀರ ॥೩೫॥

ಎಲೈ ವೀರನೇ, ಜಲಧಾರೆಗಳ ನಾದದಿಂದಲೂ, ಪಕ್ಷಿಗಳ ಶುಭವಾದ ಶಬ್ದಗಳಿಂದಲೂ, ಗಜಗಳ ಬೃಂಹಿತಗಳಿಂದಲೂ, ಕಿನ್ನರರ ಉದಾರವಾದ ಗಾನ ಶಬ್ದದಿಂದಲೂ, ಸಾಮವೇದಗಾಯಕರ ಶುಭವಾದ ಸ್ವರದಿಂದಲೂ ಕೂಡಿದ್ದಿತು.

ಅಚಿಂತ್ಯಂ ಮನಸಾಪ್ಯನ್ಯೈಃ ಸರೋಭಿಃ ಸಮಲಂಕೃತಮ್ ।
ವಿಶಾಲೈಶ್ಚಾಗ್ನಿಶರಣೈರ್ಭೂಷಿತಂ ಕುಶಸಂವೃತಮ್ ॥೩೬॥

ಉಳಿದವರು ಮನಸ್ಸಿನಿಂದಲೂ ಚಿಂತಿಸಲು ಸಾಧ್ಯವಿಲ್ಲದ ಸರೋವರಗಳಿಂದ ಅಲಂಕೃತವಾಗಿದ್ದಿತು. ವಿಶಾಲವಾದ ಅಗ್ನಿಗೃಹಗಳಿಂದ ಭೂಷಿತವಾಗಿ ಹೇರಳವಾದ ದರ್ಭೆಗಳಿಂದ ಕೂಡಿದ್ದಿತು.

ವಿಭೂಷಿತಂ ಪುಣ್ಯಪವಿತ್ರತೋಯಯಾ
ಸದಾ ಚ ಜುಷ್ಟಂ ನೃಪ ಜಹ್ನುಕನ್ಯಯಾ ।

ಮಹಾತ್ಮಭಿರ್ಧರ್ಮಭೃತಾಂ ವರಿಷ್ಠೈ-
ರ್ಮಹರ್ಷಿಭಿರ್ಭೂಷಿತಮಗ್ನಿಕಲ್ಪೈಃ ॥೩೭॥

ಎಲೈ ರಾಜನೇ, ಪವಿತ್ರಜಲವುಳ್ಳ ಜಾಹ್ನವೀ ನದಿಯಿಂದ ಅದು ಸೇವಿತವಾಗಿದ್ದಿತು ಮತ್ತು ವಿಭೂಷಿತವಾಗಿದ್ದಿತು. ಮಹಾತ್ಮರೂ, ಧರ್ಮಿಷ್ಠರಲ್ಲಿ ಶ್ರೇಷ್ಠರೂ, ಅಗ್ನಿಕಲ್ಪರೂ ಆದ ಮಹರ್ಷಿಗಳಿಂದ ಭೂಷಿತವಾಗಿದ್ದಿತು.

ವಾಯ್ವಾಹಾರೈರಂಬುಪೈರ್ಜಪ್ಯನಿತ್ಯೈಃ
ಸಂಪ್ರಕ್ಷಾಲ್ಯೈರ್ಯತಿಭಿರ್ಧ್ಯಾನನಿತ್ಯೈಃ ।
ಧೂಮಾಶನೈರೂಷ್ಮಪೈಃ ಕ್ಷೀರಪೈಶ್ಚ
ವಿಭೂಷಿತಂ ಬ್ರಾಹ್ಮಣೇಂದ್ರೈಃ ಸಮಂತಾತ್ ॥೩೮॥

ವಾಯುಭಕ್ಷರಾದ, ಅಬ್ಭಕ್ಷರಾದ, ನಿತ್ಯಜಪಶೀಲರಾದ, ಸ್ನಾನಶೀಲರಾದ ಯತಿಗಳಾದ, ಸದಾ ಧ್ಯಾನ ನಿರತರಾದ, ಧೂಮಾಹಾರವುಳ್ಳ, ಹವೆಯನ್ನು ಪಾನ ಮಾಡುವವರಾದ, ಕ್ಷೀರವನ್ನು ಪಾನ ಮಾಡುವವರಾದ ಬ್ರಾಹ್ಮಣಶ್ರೇಷ್ಠರಿಂದ ಎಲ್ಲ ಕಡೆಗಳಲ್ಲಿಯೂ ವಿಭೂಷಿತವಾಗಿದ್ದಿತು.

ಗೋಚಾರಿಣೋऽಥಾಶ್ಮಕುಟ್ಟಾ ದಂತೋಲೂಖಲಿನಸ್ತಥಾ ।
ಮರೀಚಿಪಾಃ ಫೇನಪಾಶ್ಚ ತಥೈವ ಮೃಗಚಾರಿಣಃ ।
ಅಶ್ವತ್ಥಫಲಭಕ್ಷಾಶ್ಚ ತಥಾ ಹ್ಯುದಕಶಾಯಿನಃ ।
ಚೀರಚರ್ಮಾಂಬರಧರಾಸ್ತಥಾ ವಲ್ಕಲಧಾರಿಣಃ ॥೩೯॥

ಅಲ್ಲಿ ಗೋವ್ರತಧಾರಿಗಳೂ, ಅಶ್ಮಕುಟ್ಟನರೂ, ದಂತೋಲೂಬಲಿಗಳೂ, ಸೂರ್ಯಕಿರಣಗಳನ್ನು ಪಾನ ಮಾಡುವವರೂ, ಕೇವಲ ನೊರೆಯನ್ನು ಪಾನ ಮಾಡುವವರೂ, ದೃಢವ್ರತವನ್ನು ಆಚರಿಸುವವರೂ ಇದ್ದರು. ಅಶ್ವತ್ಥ ಫಲವನ್ನು ಭಕ್ಷಿಸುವವರು, ನೀರಿನಲ್ಲಿ ಮಲಗುವವರು, ಕೃಷ್ಣಾಜಿನ ಮತ್ತು ನಾರು ಮಡಿಯನ್ನು ಉಡುವವರು ಇದ್ದರು.

ಸುದುಃಖಾನ್ನಿಯಮಾಂಸ್ತಾಂಸ್ತಾನ್ ವಹತಃ ಸುತಪೋನ್ವಿತಾನ್ ।
ಪಶ್ಯನ್ನುತ್ಫುಲ್ಲನಯನಃ ಪ್ರವೇಷ್ಟುಮುಪಚಕ್ರಮೇ ॥೪೦॥

ಕಷ್ಟಕರವಾದ ಆಯಾ ನಿಯಮಗಳನ್ನು ಧರಿಸಿ, ಒಳ್ಳೆಯ ತಪಸ್ಸಿನಿಂದ ಕೂಡಿದ ಆ ಋಷಿಗಳನ್ನು ಅರಳಿದ ಕಣ್ಣುಗಳಿಂದ ನೋಡಿ, ನಾನು ಆ ಆಶ್ರಮವನ್ನು ಪ್ರವೇಶಿಸಲು ಉಪಕ್ರಮಿಸಿದೆನು.

ಸುಪೂಜಿತಂ ದೇವಗಣೈರ್ಮಹಾತ್ಮಭಿಃ
ಶಿವಾದಿಭಿರ್ಭಾರತ ಪುಣ್ಯಕರ್ಮಭಿಃ ।
ರರಾಜ ತಚ್ಚಾಶ್ರಮಮಂಡಲಂ ಸದಾ
ದಿವೀವ ರಾಜನ್ ರವಿಮಂಡಲಂ ಯಥಾ ॥೪೧॥

ಎಲೈ ರಾಜನೇ, ಮಹಾತ್ಮರಾದ, ಪುಣ್ಯಕರ್ಮಿಗಳಾದ ಶಿವಾದಿ ದೇವತೆಗಳ ಸಮೂಹದಿಂದ ಪೂಜಿಸಲ್ಪಟ್ಟ ಆ ಆಶ್ರಮಪ್ರದೇಶವು ಆಕಾಶದಲ್ಲಿ ಸೂರ್ಯಮಂಡಲದಂತೆ ಶೋಭಿಸುತ್ತಿದ್ದಿತು.

ಕ್ರೀಡಂತಿ ಸರ್ಪೈರ್ನಕುಲಾ ಮೃಗಾ ವ್ಯಾಘ್ರೈಶ್ಚ ಯತ್ರ ವೈ ।
ಪ್ರಭಾವಾದ್ ದೀಪ್ತತಪಸಃ ಸನ್ನಿಕರ್ಷಗುಣಾನ್ವಿತಾಃ ॥೪೨॥

ಉಜ್ವಲವಾದ ತಪಸ್ಸಿನ ಪ್ರಭಾವದಿಂದ, ಆ ತಪಸ್ಸಿನ ಗುಣಗಳಿಂದ ಕೂಡಿದವುಗಳಾಗಿ ಅಲ್ಲಿ ಮುಂಗುಸಿಗಳು ಸರ್ಪಗಳ ಜೊತೆಯಲ್ಲಿಯೂ, ಜಿಂಕೆಗಳು ವ್ಯಾಘ್ರಗಳ ಜೊತೆಯಲ್ಲಿಯೂ ಆಡುತ್ತಿದ್ದವು.

ತತ್ರಾಶ್ರಮಪದೇ ಶ್ರೇಷ್ಠೇ ಸರ್ವಭೂತಮನೋರಮೇ ।
ಸೇವಿತೇ ದ್ವಿಜಶಾರ್ದೂಲೈರ್ವೇದವೇದಾಂಗಪಾರಗೈಃ ॥೪೩॥

ನಾನಾನಿಯಮವಿಖ್ಯಾತೈರ್ಋಷಿಭಿಶ್ಚ ಮಹಾತ್ಮಭಿಃ ।
ಪ್ರವಿಶನ್ನೇವ ಚಾಪಶ್ಯಂ ಜಟಾಚೀರಧರಂ ಪ್ರಭುಮ್ ॥೪೪॥

ಸರ್ವಪ್ರಾಣಿಗಳ ಮನಸ್ಸಿಗೂ ಸಂತೋಷವನ್ನು ಕೊಡುವ, ವೇದ-ವೇದಾಂಗ ಪಾರಂಗತರಾದ ಶ್ರೇಷ್ಠ ಬ್ರಾಹ್ಮಣರಿಂದ ಸೇವಿತವಾದ, ನಾನಾ ನಿಯಮಗಳಿಂದ ಒಡಗೂಡಿದ ಮಹಾತ್ಮರಾದ ಋಷಿಗಳಿಂದ ಸೇವಿತವಾದ ಆ ಆಶ್ರಮವನ್ನು ಪ್ರವೇಶಿಸುತ್ತಲೇ ನಾನು ಜಟಾವಲ್ಕಲಧರನಾದ ಪ್ರಭುವನ್ನು ನೋಡಿದೆನು.

ತೇಜಸಾ ತಪಸಾ ಚೈವ ದೀಪ್ಯಮಾನಂ ಯಥಾನಲಮ್ ।
ಶಿಷ್ಯಮಧ್ಯಗತಂ ಶಾಂತಂ ಯುವಾನಂ ಬ್ರಾಹ್ಮಣರ್ಷಭಮ್ ।
ಶಿರಸಾ ವಂದಮಾನಂ ಮಾಮುಪಮನ್ಯುರಭಾಷತ ॥೪೫॥

ತೇಜಸ್ಸಿನಿಂದಲೂ ಮತ್ತು ತಪಸ್ಸಿನಿಂದಲೂ ಅಗ್ನಿಯಂತೆ ಜ್ವಲಿಸುವ, ಶಿಷ್ಯರ ಮಧ್ಯದಲ್ಲಿ ಇದ್ದು ಶಾಂತನಾದ, ಯುವಕನಾದ, ಬ್ರಾಹ್ಮಣಶ್ರೇಷ್ಠನನ್ನು ಶಿರಸಾ ವಂದಿಸುವ ಪ್ರಭುವಾದ ಉಪಮನ್ಯುವನ್ನು ನೋಡಿದೆನು. ಅವನು ನನ್ನನ್ನು ಕುರಿತು ಹೇಳಿದನು.

ಸ್ವಾಗತಂ ಪುಂಡರೀಕಾಕ್ಷ ಸಫಲಾನಿ ತಪಾಂಸಿ ನಃ ।
ಯತ್ಪೂಜ್ಯಃ ಪೂಜಯಸಿ ನೋ ದ್ರಷ್ಟವ್ಯೋ ದ್ರಷ್ಟುಮಿಚ್ಛಸಿ ॥೪೬॥

ಪುಂಡರೀಕಾಕ್ಷನೇ ನಿನಗೆ ಸ್ವಾಗತ. ಪೂಜ್ಯನಾದ ನೀನು ನಮ್ಮನ್ನು ಪೂಜಿಸುತ್ತಿರುವುದರಿಂದ, ದ್ರಷ್ಟವ್ಯನಾದ ನೀನು ನಮ್ಮನ್ನು ನೋಡಲು ಇಚ್ಛಿಸುವುದರಿಂದ ನಮ್ಮ ತಪಸ್ಸುಗಳು ಸಫಲವಾಗಿವೆ ಎಂದು ಉಪಮನ್ಯುವು ಹೇಳಿದನು.

ತಮಹಂ ಪ್ರಾಂಜಲಿರ್ಭೂತ್ವಾ ಮೃಗಪಕ್ಷಿಷ್ವಥಾಗ್ನಿಷು ।
ಧರ್ಮೇ ಚ ಶಿಷ್ಯವರ್ಗೇ ಚ ಸಮಪೃಚ್ಛಮನಾಮಯಮ್ ॥೪೭॥

ತತೋ ಮಾಂ ಭಗವಾನಾಹ ಸಾಮ್ನಾ ಪರಮಮಧುರ್ಗಾ ।
ಲಪ್ಸ್ಯಸೇ ತನಯಂ ಕೃಷ್ಣ ಆತ್ಮತುಲ್ಯಮಸಂಶಯಮ್ ॥೪೮॥

ನಾನು ಅವನಿಗೆ ಕೈಗಳನ್ನು ಮುಗಿದು ಮೃಗಪಕ್ಷಿಗಳಲ್ಲಿ, ಅಗ್ನಿಗಳಲ್ಲಿ, ಧರ್ಮಗಳಲ್ಲಿ, ಶಿಷ್ಯವರ್ಗದಲ್ಲಿ ಕುಶಲವನ್ನು ವಿಚಾರಿಸಿದೆನು. ಅನಂತರ ಪೂಜ್ಯನಾದ ಉಪಮನ್ಯುವು ಪರಮ ಮಧುರವಾದ ಮಾತುಗಳಿಂದ ನನ್ನನ್ನು ಕುರಿತು- ಕೃಷ್ಣನೇ, ನೀನು ನಿನಗೆ ಸಮಾನನಾದ ಪುತ್ರನನ್ನು ಪಡೆಯುವಿ ಎಂದು ಹೇಳಿದನು.

ತಪಃ ಸುಮಹದಾಸ್ಥಾಯ ತೋಷಯೇಶಾನಮೀಶ್ವರಮ್ ।
ಇಹ ದೇವಃ ಸಪತ್ನೀಕಃ ಸಮಾಕ್ರೀಡತ್ಯಧೋಕ್ಷಜ ॥೪೯॥

ದೊಡ್ಡ ತಪಸ್ಸನ್ನು ಮಾಡಿ ಈಶಾನನಾದ ಈಶ್ವರನನ್ನು ಸಂತೋಷಗೊಳಿಸು. ಎಲೈ ಅಧೋಕ್ಷಜನೇ, ಇಲ್ಲಿ ಶಿವನು ಪತ್ನಿಯ ಜೊತೆಯಲ್ಲಿ ಆಟವಾಡುತ್ತಾನೆ.

ಇಹೈವ ದೇವತಾಶ್ರೇಷ್ಠಂ ದೇವಾಃ ಸರ್ಷಿಗಣಾಃ ಪುರಾ ।
ತಪಸಾ ಬ್ರಹ್ಮಚರ್ಯೇಣ ಸತ್ಯೇನ ಚ ದಮೇನ ಚ ।
ತೋಷಯಿತ್ವಾ ಶುಭಾನ್ ಕಾಮಾನ್ ಪ್ರಾಪ್ನುವಂಸ್ತೇ ಜನಾರ್ದನ ॥೫೦॥

ಎಲೈ ಜನಾರ್ದನನೇ, ಇಲ್ಲಿಯೇ ದೇವತೆಗಳು, ಋಷಿಗಳು ಹಿಂದೆ ಬ್ರಹ್ಮಚರ್ಯದಿಂದಲೂ, ತಪಸ್ಸಿನಿಂದಲೂ, ಸತ್ಯದಮಗಳಿಂದಲೂ ದೇವಶ್ರೇಷ್ಠನಾದ ಶಿವನನ್ನು ಒಲಿಸಿ ಶುಭವಾದ ಕಾಮಗಳನ್ನು ಪಡೆದರು.

ತೇಜಸಾಂ ತಪಸಾಂ ಚೈವ ನಿಧಿಃ ಸ ಭಗವಾನಿಹ ।
ಶುಭಾಶುಭಾನ್ವಿತಾನ್ ಭಾವಾನ್ ವಿಸೃಜನ್ ಸಂಕ್ಷಿಪನ್ನಪಿ ।
ಆಸ್ತೇ ದೇವ್ಯಾ ಸಹಾಚಿಂತ್ಯೋ ಯಂ ಪ್ರಾರ್ಥಯಸಿ ಶತ್ರುಹನ್ ॥೫೧॥

ತೇಜಸ್ಸು ಮತ್ತು ತಪಸ್ಸುಗಳ ನಿಧಿಯಾದ, ಪೂಜ್ಯನಾದ ಶಿವನು ಶುಭಾಶುಭ ಪದಾರ್ಥಗಳನ್ನು ಸೃಷ್ಟಿಸುತ್ತಾ, ಸಂಹಾರ ಮಾಡುತ್ತಾ ದೇವಿ ಪಾರ್ವತಿಯ ಜೊತೆಯಲ್ಲಿ ಇರುತ್ತಾನೆ. ಎಲೈ ಶತ್ರುಘಾತಕನೇ, ಯಾವನನ್ನು ನೋಡಲು ಬಯಸುವಿಯೋ ಅವನು ಅಚಿಂತ್ಯನಾದವನು.

ಹಿರಣ್ಯಕಶಿಪುರ್ಯೋಽಭೂದ್ ದಾನವೋ ಮೇರುಕಂಪನಃ ।
ತೇನ ಸರ್ವಾಮರೈಶ್ವರ್ಯಂ ಶರ್ವಾತ್ ಪ್ರಾಪ್ತಂ ಸಮಾರ್ಬುದಮ್ ॥

ಮೇರುಪರ್ವತವನ್ನೇ ಅಲ್ಲಾಡಿಸಿ, ಹಿರಣ್ಯಕಶಿಪು ಎಂಬ ದಾನವನು ಶಿವನಿಂದ ವರವನ್ನು ಪಡೆದು ಒಂದು ಅರ್ಬುದ ವರ್ಷಗಳವರೆಗೆ ಎಲ್ಲ ದೇವತೆಗಳ ಐಶ್ವರ್ಯವನ್ನು ಪಡೆದನು.

ತಸ್ಯೈವ ಪುತ್ರಪ್ರವರೋ ಮಂದರೋ ನಾಮ ವಿಶ್ರುತಃ ।
ಮಹಾದೇವವರಾಚ್ಚಕ್ರಂ ವರ್ಷಾರ್ಬುದಮಯೋಧಯತ್ ॥೫೩॥

ಅವನ ಪುತ್ರಶ್ರೇಷ್ಠನಾದ ಪ್ರಖ್ಯಾತನಾದ ಮಂದರನೆಂಬುವನು ಶಿವನ ವರದಿಂದ ಇಂದ್ರನ ಜೊತೆಯಲ್ಲಿ ಅರ್ಬುದ ವರ್ಷಗಳ ಕಾಲ ಯುದ್ಧವನ್ನು ಮಾಡಿದನು.

ವಿಷ್ಣೋಶ್ಚಕ್ರಂ ಚ ತದ್ಘೋರಂ ವಜ್ರಮಾಖಂಡಲಸ್ಯ ಚ ।
ಶೀರ್ಣಂ ಪುರಾಽಭವತ್ ತಾತ ಗ್ರಹಸ್ಯಾಂಗೇಷು ಕೇಶವ ॥೫೪॥

ಎಲೈ ಕೇಶವನೇ, ಹಿಂದೆ ಘೋರವಾದ ವಿಷ್ಣುಚಕ್ರವು ಮತ್ತು ಇಂದ್ರನ ವಜ್ರಾಯುಧವು ಗ್ರಹಗಳ ಅಂಗಗಳಲ್ಲಿ ಚೂರಾಯಿತು.

ಯತ್ ತದ್ ಭಗವತಾ ಪೂರ್ವಂ ದತ್ತಂ ಚಕ್ರಂ ತವಾನಘ ।
ಜಲಾಂತರಚರಂ ಹತ್ವಾ ದೈತ್ಯಂ ಚ ಬಲಗರ್ವಿತಮ್ ॥೫೪.೧॥

ಉತ್ಪಾದಿತಂ ವೃಷಾಂಕೇನ ದೀಪ್ತಜ್ವಲನಸನ್ನಿಭಮ್ ।
ದತ್ತಂ ಭಗವತಾ ತುಭ್ಯಂ ದುರ್ದರ್ಶಂ ತೇಜಸಾದ್ಭುತಮ್ ॥೫೪.೨॥

ಎಲೈ ಅನಘನೇ, ಪೂಜ್ಯನಾದ ಶಿವನು ಜಕಾಣ್ತರಚಾರಿಯೂ, ಬಲದರ್ಪಿತನೂ ಆದ ದೈತ್ಯನನ್ನು ಕೊಂದು ಜ್ವಲಿಸುವ ಅಗ್ನಿಗೆ ಸಮಾನವಾದ ಯಾವ ಚಕ್ರವನ್ನು ಸೃಷ್ಟಿ ಮಾಡಿ ನಿನಗೆ ಕೊಟ್ಟಿದ್ದನೋ ಅದರ ಅದ್ಭುತವಾದ ತೇಜಸ್ಸಿನಿಂದಾಗಿ ಅದನ್ನು ಯಾರೂ ನೋಡಲು ಸಾಧ್ಯವಾಗುತ್ತಿರಲಿಲ್ಲ.

ನ ಶಕ್ಯಂ ದ್ರಷ್ಟುಮನ್ಯೇನ ವರ್ಜಯಿತ್ವಾ ಪಿನಾಕಿನಮ್ ।
ಸುದರ್ಶನಂ ಭವೇತ್ಯೇವಂ ಭವೇನೋಕ್ತಂ ತದಾ ತು ತತ್ ॥೫೪.೩॥

ಸುದರ್ಶನಂ ತದಾ ತಸ್ಯ ಲೋಕೇ ನಾಮ ಪ್ರತಿಷ್ಠಿತಮ್ ।
ತಜ್ಜೀರ್ಣಮಭವತ್ ತಾತ ಗ್ರಹಸ್ಯಾಂಗೇಷು ಕೇಶವ ॥೫೪.೪॥

ಶಿವನನ್ನು ಬಿಟ್ಟು ಬೇರೆ ಯಾವನೂ ಅದನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಆಗ ಶಿವನು ಅದನ್ನು ಕುರಿತು ನೀನು ಸುದರ್ಶನನಾಗು (ನೋಡಲು ಸಾಧ್ಯವಾಗುವುದಾಗಿ ಆಗು) ಎಂದು ಹೇಳಿದನು. ಆಗಿನಿಂದಲೂ ಅದಕ್ಕೆ ಲೋಕದಲ್ಲಿ ಸುದರ್ಶನನೆಂದೇ ನಾಮವು ರೂಢವಾಯಿತು. ಎಲೈ ಕೇಶವನೇ, ಪ್ರೀತಿಪಾತ್ರನೇ, ಆ ಸುದರ್ಶನವು ಗ್ರಹದ ಅಂಗಗಳಲ್ಲಿ ಜೀರ್ಣವಾಯಿತು.

ಗ್ರಹಸ್ಯಾತಿಬಲಸ್ಯಾಂಗೇ ವರದತ್ತಸ್ಯ ಧೀಮತಃ ।
ನ ಶಸ್ತ್ರಾಣಿ ವಹಂತ್ಯಂಗೇ ಚಕ್ರವಜ್ರಶತಾನ್ಯಪಿ ॥೫೪.೫॥

ಮೇಧಾವಿಯಾದ ವರವನ್ನು ಪಡೆದ ಅತಿಬಲಿಷ್ಠವಾದ ಆ ಗ್ರಹದ ಅಂಗದಲ್ಲಿ ಸುದರ್ಶವೂ ನೂರು ವಜ್ರಾಯುಧಗಳೂ ಮತ್ತು ಉಳಿದ ಶಸ್ತ್ರಗಳೂ ಯಾವ ಪರಿಣಾಮವನ್ನೂ ಮಾಡುವುದಿಲ್ಲ.

ಅರ್ದ್ಯಮಾನಾಶ್ಚ ವಿಬುಧಾ ಗ್ರಹೇಣ ಸುಬಲೀಯಸಾ ।
ಶಿವದತ್ತವರಾನ್ ಜಘ್ನುರಸುರೇಂದ್ರಾನ್ ಸುರಾ ಭೃಶಮ್ ॥೫೫॥

ತುಷ್ಟೋ ವಿದ್ಯುತ್ಪ್ರಭಸ್ಯಾಪಿ ತ್ರಿಲೋಕೇಶ್ವರತಾಮದಾತ್ ।
ಶತಂ ವರ್ಷಸಹಸ್ರಾಣಾಂ ಸರ್ವಲೋಕೇಶ್ವರೋಽಭವತ್ ।
ಮಮೈವಾನುಚರೋ ನಿತ್ಯಂ ಭವಿತಾಸೀತಿ ಚಾಬ್ರವೀತ್ ॥೫೬॥

ಬಲಿಷ್ಠವಾದ ಗ್ರಹದಿಂದ ಪೀಡೆಗೆ ಒಳಗಾದ ದೇವತೆಗಳು ಶಿವನಿಂದ ವರವನ್ನು ಪಡೆದು ಅಸುರೇಂದ್ರರನ್ನು ಚೆನ್ನಾಗಿ ಘಾಸಿಗೊಳಿಸಿದರು. ಶಿವನು ವಿದ್ಯುತ್ಪ್ರಭನಿಗೆ ಸಂತೋಷದಿಂದ ತ್ರಿಲೋಕೇಶ್ವರ ಪದವಿಯನ್ನು ಕೊಟ್ಟನು. ಅವನು ನೂರು ಸಾವಿರ ವರ್ಷಗಳ ಕಾಲ ಸರ್ವಲೋಕೇಶ್ವರನಾದನು. ಶಿವನು ಅವನನ್ನು ಕುರಿತು ನಿತ್ಯವೂ ನನ್ನ ಅನುಚರನಾಗುವಿ ಎಂದು ಹೇಳಿದನು.

ತಥಾ ಪುತ್ರಸಹಸ್ರಾಣಾಮಯುತಂ ಚ ದದೌ ಪ್ರಭುಃ ।
ಕುಶದ್ವೀಪಂ ಚ ಸ ದದೌ ರಾಜ್ಯೇನ ಭಗವಾನಜಃ ॥೫೭॥

ಹಾಗೆಯೇ ಐದುಸಹಸ್ರ ಪುತ್ರರನ್ನೂ ಶಿವನು ಕೊಟ್ಟನು. ಭಗವಂತನಾದ ಅಜನಾದ ಅವನು ಅವನ ರಾಜ್ಯವಾಗಿ ಕುಶದ್ವೀಪವನ್ನು ಕೊಟ್ಟನು.

ತಥಾ ಶತಮುಖೋ ನಾಮ ಧಾತ್ರಾ ಸೃಷ್ಟೋ ಮಹಾಭುಜಃ ।
ಯೇನ ವರ್ಷಶತಂ ಸಾಗ್ರಮಾತ್ಮಮಾಂಸೈರ್ಹುತೋಽನಲಃ ।
ತಂ ಪ್ರಾಹ ಭಗವಾಂಸ್ತುಷ್ಟಃ ಕಿಂ ಕರೋಮೀತಿ ಶಂಕರಃ ॥೫೮॥

ಶತಮುಖನೆಂಬ ಬ್ರಹ್ಮದೇವನಿಂದ ಸೃಷ್ಟನಾದ ಮಹಾಸುರನು ಆತ್ಮಮಾಂಸದಿಂದ ನೂರು ವರ್ಷಗಳಿಂತಲೂ ಹೆಚ್ಚು ಕಾಲ ಅಗ್ನಿಯಲ್ಲಿ ಹೋಮ ಮಾಡಿದನು. ಸಂತುಷ್ಟನಾದ ಭಗವಂತನಾದ ಶಂಕರನು ಅವನನ್ನು ಕುರಿತು ನಿನಗೆ ಏನು ಬೇಕು ಎಂದು ಕೇಳಿದನು.

ತಂ ವೈ ಶತಮುಖಃ ಪ್ರಾಹ ಯೋಗೋ ಭವತು ಮೇಽದ್ಭುತಃ ।
ಬಲಂ ಚ ದೈವತಶ್ರೇಷ್ಠ ಶಾಶ್ವತಂ ಸಂಪ್ರಯಚ್ಛ ಮೇ ॥೫೯॥

ಆಗ ಶತಮುಖನು ಅವನನ್ನು ಕುರಿತು- ಎಲೈ ದೇವಶ್ರೇಷ್ಠನೇ, ನನಗೆ ಅದ್ಭುತವಾದ ಯೋಗಶಕ್ತಿಯನ್ನು ಕೊಡು ಮತ್ತು ಶಾಶ್ವತವಾದ ಬಲವನ್ನೂ ಕೊಡು ಎಂದು ಕೇಳಿದನು.

ಸ್ವಾಯಂಭುವಃ ಕ್ರತುಶ್ಚಾಪಿ ಪುತ್ರಾರ್ಥಮಭವತ್ಪುರಾ ।
ಆವಿಶ್ಯ ಯೋಗೇನಾತ್ಮಾನಂ ತ್ರೀಣಿ ವರ್ಷಶತಾನ್ಯಪಿ ॥೬೦॥

ತಸ್ಯ ದೇವೋಽದದತ್ ಪುತ್ರಾನ್ ಸಹಸ್ರಂ ಕ್ರತುಸಮ್ಮಿತಾನ್ ।
ಯೋಗೇಶ್ವರಂ ದೇವಗೀತಂ ವೇತ್ಥ ಕೃಷ್ಣ ನ ಸಂಶಯಃ ॥೬೧॥

ಹಿಂದೆ ಪುತ್ರಾರ್ಥವಾಗಿ ಅವನಿಂದ ಸ್ವಾಯಂಭುವ ಕ್ರತುವು ನಡೆಯಿತು. ಶಿವನು ಮೂರು ನೂರು ವರ್ಷಗಳ ಕಾಲ ಯೋಗಶಕ್ತಿಯಿಂದ ಅವನಲ್ಲಿ ಆವೇಶಗೊಂಡು ಅವನಿಗೆ ಕ್ರತುವನ್ನು ಮಾಡಲು ಅರ್ಹರಾದ ಸಹಸ್ರ ಪುತ್ರರನ್ನು ಕಳುಹಿಸಿದನು. ದೇವಗೀತನಾದ ಯೋಗೇಶ್ವರನಾದ ಶಿವನನ್ನು ನೀನು ತಿಳಿದಿದ್ದೀಯೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಯಾಜ್ಞವಲ್ಕ್ಯ ಇತಿ ಖ್ಯಾತ ಋಷಿಃ ಪರಮಧಾರ್ಮಿಕಃ ।
ಆರಾಧ್ಯ ಸ ಮಹಾದೇವಂ ಪ್ರಾಪ್ತವಾನ್ ಜ್ಞಾನಮುತ್ತಮಮ್ ॥೬೧.೧॥

ವೇದವ್ಯಾಸಶ್ಚ ಯೋಗಾತ್ಮಾ ಪರಾಶರಸುತೋ ಮುನಿಃ ।
ಸೋಽಪಿ ಶಂಕರಮಾರಾಧ್ಯ ಪ್ರಾಪ್ತವಾನತುಲಂ ಯಶಃ ॥೬೧.೨॥

ಪರಮಧಾರ್ಮಿಕನಾದ ಯಾಜ್ಞವಲ್ಕ್ಯನೆಂಬ ಋಷಿಯು ಮಹಾದೇವನನ್ನು ಆರಾಧಿಸಿ, ಶ್ರೇಷ್ಠವಾದ ಜ್ಞಾನವನ್ನು ಪಡೆದನು. ಪರಾಶರಪುತ್ರನೂ, ಯೋಗಶರೀರವುಳ್ಳವನೂ ಆದ ವೇದವ್ಯಾಸ ಋಷಿಯು ಶಂಕರನನ್ನು ಆರಾಧಿಸಿ, ಅತುಲವಾದ ಯಶಸ್ಸನ್ನು ಪಡೆದನು.

ವಾಲಖಿಲ್ಯಾ ಮಘವತಾ ಅವಜ್ಞಾತಾಃ ಪುರಾ ಕಿಲ ।
ತೈಃ ಕ್ರುದ್ಧೈರ್ಭಗವಾನ್ ರುದ್ರಸ್ತಪಸಾ ತೋಷಿತೋ ಹ್ಯಭೂತ್ ॥೬೨॥

ತಾಂಶ್ಚಾಪಿ ದೈವತಶ್ರೇಷ್ಠಃ ಪ್ರಾಹ ಪ್ರೀತೋ ಜಗತ್ಪತಿಃ ।
ಸುಪರ್ಣಂ ಸೋಮಹರ್ತಾರಂ ತಪಸೋತ್ಪಾದಯಿಷ್ಯಥ ॥೬೩॥

ಹಿಂದೆ ವಾಲಖಿಲ್ಯ ಋಷಿಗಳು ಇಂದ್ರನಿಂದ ಅವಮಾನಗೊಳಿಸಲ್ಪಟ್ಟಿದ್ದರಷ್ಟೆ? ಅವರು ಕೋಪಗೊಂಡು ಭಗವಂತನಾದ ರುದ್ರನನ್ನು ತಪಸ್ಸಿನಿಂದ ಸಂತೋಷಪಡಿಸಿದರು. ಜಗತ್ಪತಿಯೂ, ದೇವಶ್ರೇಷ್ಠನೂ ಆದ ಶಿವನು ಸಂತುಷ್ಟನಾಗಿ ಅವರನ್ನು ಕುರಿತು, ನೀವು ಸೋಮವನ್ನು ತರುವ ಸುಪರ್ಣನನ್ನು ನಿಮ್ಮ ತಪಸ್ಸಿನಿಂದ ಪಡೆಯುವಿರಿ ಎಂದು ಹೇಳಿದನು.

ಮಹಾದೇವಸ್ಯ ರೋಷಾಚ್ಚ ಆಪೋ ನಷ್ಟಾಃ ಪುರಾಭವನ್ ।
ತಾಶ್ಚ ಸಪ್ತಕಪಾಲೇನ ದೇವೈರನ್ಯಾಃ ಪ್ರವರ್ತಿತಾಃ ॥೬೪॥

ಮಹಾದೇವನ ಕೋಪದಿಂದ ಹಿಂದೆ ಜಲವು ನಷ್ಟವಾಯಿತು. ಆಗ ದೇವತೆಗಳು ಸಪ್ತಕಪಾಲದಿಂದ ಬೇರೆ ಜಲವನ್ನು ಪ್ರವರ್ತಿಸಿದರು.

ಅತ್ರೇರ್ಭಾರ್ಯಾಪಿ ಭರ್ತಾರಂ ಸಂತ್ಯಜ್ಯ ಬ್ರಹ್ಮವಾದಿನೀ ।
ನಾಹಂ ತಸ್ಯ ಮುನೇರ್ಭೂಯೋ ವಶಗಾ ಸ್ಯಾಂ ಕಥಂಚನ ।
ಇತ್ಯುಕ್ತ್ವಾ ಸಾ ಮಹಾದೇವಮಗಚ್ಛಚ್ಚರಣಂ ಕಿಲ ॥೬೫॥

ಬ್ರಹ್ಮವಾದಿನಿಯಾದ ಅತ್ರಿಯ ಪತ್ನಿಯೂ ಸಹ, ನಾನು ಪುನಃ ಈ ಋಷಿಯ ವಶವಾಗಿರುವುದಿಲ್ಲ ಎಂದು ಹೇಳಿ, ಪತಿಯನ್ನು ತ್ಯಜಿಸಿ ಮಹಾದೇವನಿಗೆ ಶರಣಾಗತಳಾದಳು.

ನಿರಾಹಾರಾ ಭಯಾದತ್ರೇಸ್ತ್ರೀಣಿ ವರ್ಷಶತಾನ್ಯಪಿ ।
ಅಶೇತ ಮುಸಲೇಷ್ವೇವ ಪ್ರಸಾದಾರ್ಥಂ ಭವಸ್ಯ ಸಾ ॥೬೬॥

ಅತ್ರಿಗಳ ಭಯದಿಂದ ಅವಳು ಮುನ್ನೂರು ವರ್ಷಗಳ ಕಾಲ ನಿರಾಹಾರಳಾಗಿ ಶಿವನನ್ನು ಒಲಿಸಲು ಒನಕೆಯ ಮೇಲೆ ಮಲಗಿದಳು.

ತಾಮಬ್ರವೀದ್ಭವಸನ್ ದೇವೋ ಭವಿತಾ ವೈ ಸುತಸ್ತವ ।
ವಂಶೇ ತವೈವ ನಾಮ್ನಾ ತು ಖ್ಯಾತಿಂ ಯಾಸ್ಯತಿ ಚೇಪ್ಸಿತಾಮ್ ॥೬೭॥

ದೇವನಾದ ಶಿವನು ನಗುತ್ತಾ ಅವಳನ್ನು ಕುರಿತು ನಿನ್ನ ವಂಶದಲ್ಲಿ ನಿನಗೆ ಇಷ್ಟವಾದ ಖ್ಯಾತಿಯನ್ನು ಸಂಪಾದಿಸಿಕೊಳ್ಳುವ ನಿನ್ನ ಹೆಸರಿನ ಪುತ್ರನು ಜನಿಸುವನು ಎಂದು ಹೇಳಿದನು.

ಶಾಕಲ್ಯಃ ಸಂಶಿತಾತ್ಮಾ ವೈ ನವ ವರ್ಷಶತಾನ್ಯಪಿ ।
ಆರಾಧಯಾಮಾಸ ಭವಂ ಮನೋಯಜ್ಞೇನ ಕೇಶವ ॥೬೮॥

ಎಲೈ ಕೇಶವನೇ, ಜಿತಾತ್ಮನಾದ ಶಾಕಲ್ಯನು ಒಂಬೈನೂರು ವರ್ಷಗಳ ಕಾಲ ಮನೋಯಜ್ಞದಿಂದ ಶಿವನನ್ನು ಆರಾಧಿಸಿದನು.

ತಂ ಚಾಹ ಭಗವಾಂಸ್ತುಷ್ಟೋ ಗ್ರಂಥಕಾರೋ ಭವಿಷ್ಯಸಿ ।
ವತ್ಸಾಕ್ಷಯಾ ಚ ತೇ ಕೀರ್ತಿಸ್ತ್ರಿಷು ಲೋಕೇಷು ಯಾಸ್ಯತಿ ।
ಅಕ್ಷಯಂ ಚ ಕುಲಂ ತೇಽಸ್ತು ಮಹರ್ಷಿಭಿರಲಂಕೃತಮ್ ॥೬೯॥

ಅವನನ್ನು ಕುರಿತು ಸಂತುಷ್ಟನಾದ ಶಿವನು ನೀನು ಗ್ರಂಥಕಾರನಾಗುವಿ. ವತ್ಸಾಕ್ಷಯಾ (ಕ್ಷಯವನ್ನು ಹೊಂದದಿರುವ ಸಂತತಿಯುಳ್ಳವನು) ಎಂಬ ನಿನ್ನ ಕೀರ್ತಿಯು ಮೂರು ಲೋಕಗಳಲ್ಲಿಯೂ ಹರಡುವುದು. ನಿನ್ನ ಕುಲವು ಮಹರ್ಷಿಗಳಿಂದ ಅಲಂಕೃತವಾಗಿ ಅಕ್ಷಯವಾಗಲಿ ಎಂದು ಹೇಳಿದನು.

ಸಾವರ್ಣಿಶ್ಚಾಪಿ ವಿಖ್ಯಾತ ಋಷಿರಾಸೀತ್‌ಕೃತೇ ಯುಗೇ ।
ಇಹ ತೇನ ತಪಸ್ತಪ್ತಂ ಷಷ್ಟಿ ವರ್ಷಶತಾನ್ಯಥ ॥೭೦॥

ಕೃತಯುಗದಲ್ಲಿ ಸಾವರ್ಣಿ ಎಂಬ ವಿಖ್ಯಾತವಾದ ಋಷಿ ಇದ್ದನು. ಅವನು ಈ ಸ್ಥಳದಲ್ಲಿ ಆರುನೂರು ವರ್ಷಗಳ ಕಾಲ ತಪಸ್ಸನ್ನು ಮಾಡಿದನು.

ತಮಾಹ ಭಗವಾನ್ ರುದ್ರಃ ಸಾಕ್ಷಾತ್ ತುಷ್ಟೋಽಸ್ಮಿ ತೇಽನಘ ।
ಗ್ರಂಥಕೃಲ್ಲೋಕವಿಖ್ಯಾತೋ ಭವಿತಾಸ್ಯಜರಾಮರಃ ॥೭೧॥

ಆಗ ಭಗವಂತನಾದ ರುದ್ರನು ಅವನನ್ನು ಕುರಿತು ಎಲೈ ಅನಘನೇ, ನಾನು ನಿನಗೆ ಬಹಳ ಪ್ರಸನ್ನನಾಗಿದ್ದೇನೆ. ನೀನು ಗ್ರಂಥಕಾರನೂ, ಲೋಕವಿಖ್ಯಾತನೂ, ಅಜರಾಮರನೂ ಆಗುವಿ ಎಂದು ಹೇಳಿದನು.

ಮಯಾಪಿ ಚ ಯಥಾ ದೃಷ್ಟೋ ದೇವದೇವಃ ಪುರಾ ವಿಭುಃ ।
ಸಾಕ್ಷಾತ್ಪಶುಪತಿಸ್ತಾತ ತಚ್ಚಾಪಿ ಶೃಣು ಮಾಧವ ॥೭೨॥

ಎಲೈ ಮಾಧವನೇ, ನಾನೂ ಸಹ ಪಶುಪತಿಯಾದ, ದೇವದೇವನಾದ, ವಿಭುವಾದ ಅವನನ್ನು ಸಾಕ್ಷಾತ್ತಾಗಿ ಹೇಗೆ ನೋಡಿದೆನೋ, ಎಲೈ ಪ್ರೀತಿಪಾತ್ರನೇ, ಅದನ್ನು ಕೇಳು.

ಯದರ್ಥಂ ಚ ಮಹಾದೇವಃ ಪ್ರಯತೇನ ಮಯಾ ಪುರಾ ।
ಆರಾಧಿತೋ ಮಹಾತೇಜಾಸ್ತಚ್ಚಾಪಿ ಶೃಣು ವಿಸ್ತರಮ್ ॥೭೩॥

ನಾನು ಯಾವ ಉದ್ದೇಶದಿಂದ ನಿಯಮಬದ್ಧನಾಗಿ ಹಿಂದೆ ಮಹಾತೇಜಸ್ವಿಯಾದ ಅವನನ್ನು ಆರಾಧಿಸಿದೆನೋ ಅದನ್ನೂ ವಿಸ್ತಾರವಾಗಿ ಕೇಳು.

ಯದವಾಪ್ತಂ ಚ ಮೇ ಪೂರ್ವಂ ದೇವದೇವಾನ್ಮಹೇಶ್ವರಾತ್ ।
ತತ್ಸರ್ವಮಖಿಲೇನಾದ್ಯ ಕಥಯಿಷ್ಯಾಮಿ ತೇಽನಘ ॥೭೪॥

ಎಲೈ ಅನಘನೇ, ನಾನು ಪ್ರಸನ್ನನಾದ, ದೇವದೇವನಾದ ಮಹೇಶ್ವರನಿಂದ ಏನನ್ನು ಪಡೆದೆನೋ ಅದೆಲ್ಲವನ್ನೂ ನಿನಗೆ ಸಮಗ್ರವಾಗಿ ಹೇಳುವೆನು.

ಪುರಾ ಕೃತಯುಗೇ ತಾತ ಋಷಿರಾಸೀತ್ ಮಹಾತಪಾಃ ।
ವ್ಯಾಘ್ರಪಾದ ಇತಿ ಖ್ಯಾತೋ ವೇದವೇದಾಂಗಪಾರಗಃ ।
ತಸ್ಯಾಹಮಭವಂ ಪುತ್ರೋ ಧೌಮ್ಯಶ್ಚಾಪಿ ಮಮಾನುಜಃ ॥೭೫॥

ಎಲೈ ಪ್ರೀತಿಪಾತ್ರನೇ, ಹಿಂದೆ ಕೃತಯುಗದಲ್ಲಿ ಮಹಾತಪಸ್ವಿಯಾದ, ವೇದವೇದಾಂಗಪಾರಂಗತನಾದ ವ್ಯಾಘ್ರಪಾದನೆಂಬ ಋಷಿ ಇದ್ದನು. ನಾನು ಅವನ ಪುತ್ರನಾಗಿದ್ದೆನು. ಧೌಮ್ಯನು ನನ್ನ ತಮ್ಮ.

ಕಸ್ಯಚಿತ್ತ್ವಥ ಕಾಲಸ್ಯ ಧೌಮ್ಯೇನ ಸಹ ಮಾಧವ ।
ಗತವಾನಾಶ್ರಮಾನ್ ಕ್ರೀಡನ್ ಮುನೀನಾಂ ಭಾವಿತಾತ್ಮನಾಮ್ ॥೭೬॥

ಎಲೈ ಮಾಧವನೇ, ಸ್ವಲ್ಪಕಾಲವು ಕಳೆದ ಮೇಲೆ ನಾನು ಆಟವಾಡುತ್ತಾ ಧೌಮ್ಯನ ಜೊತೆಯಲ್ಲಿ ಶುದ್ಧ ಮನಸ್ಸುಳ್ಳ ಋಷಿಗಳ ಆಶ್ರಮಕ್ಕೆ ಹೋದೆನು.

ತತ್ರಾಪಿ ಚ ಮಯಾ ದೃಷ್ಟಾ ದುಹ್ಯಮಾನಾ ಪಯಸ್ವಿನೀ ।
ಲಕ್ಷಿತಂ ಚ ಮಯಾ ಕ್ಷೀರಂ ಸ್ವಾದುತೋ ಹ್ಯಮೃತೋಪಮಮ್ ॥೭೭॥

ನಾನು ಅಲ್ಲಿ ಹಾಲು ಕರೆಯುತ್ತಿದ್ದ ಹಸುವನ್ನು ನೋಡಿದೆನು. ಅದರ ಕ್ಷೀರವು ರುಚಿಯಲ್ಲಿ ಅಮೃತದಂತಿದ್ದುದನ್ನೂ ನೋಡಿದೆನು.

ಪಿತ್ರಾऽಹಂ ಯಜ್ಞಕಾಲೇ ಹಿ ನೀತೋ ಜ್ಞಾತಿಕುಲಂ ಮಹತ್ ।
ತತ್ರ ಸಾ ಕ್ಷರತೇ ದೇವೀ ದಿವ್ಯಾ ಗೌಃ ಸುರನಂದಿನೀ ॥೭೮॥

ಯಜ್ಞಕಾಲದಲ್ಲಿ ನನ್ನ ತಂದೆಯು ನನ್ನನ್ನು ಬಂಧುಗಳ ಮನೆಗೆ ಕರೆದುಕೊಂಡು ಹೋದನು. ಅಲ್ಲಿ ದೇವತೆಗಳ ಧೇನುವಾದ ದಿವ್ಯಳಾದ ನಂದಿನಿ ಧೇನುವು ಹಾಲನ್ನು ಕೊಡುತ್ತಿದ್ದಳು.

ತಸ್ಯಾಹಂ ತತ್ಪಯಃ ಪೀತ್ವಾ ರಸೇನ ಹ್ಯಮೃತೋಪಮಮ್ ।
ಜ್ಞಾತ್ವಾ ಕ್ಷೀರಗುಣಂ ಚೈವ ಉಪಲಭ್ಯ ಹಿ ಸಂಭವಮ್ ॥೭೯॥

ಅಲ್ಲಿ ನಾನು ರುಚಿಯಲ್ಲಿ ಅಮೃತದಂತಿದ್ದ ಅದರ ಕ್ಷೀರವನ್ನು ಪಾನ ಮಾಡಿ, ಕ್ಷೀರಗುಣವನ್ನೂ, ಅದು ದೊರೆಯುವ ರೀತಿಯನ್ನೂ ತಿಳಿದೆನು.

ಸ ತು ಪಿಷ್ಟರಸಸ್ತಾತ ನ ಮೇ ಪ್ರೀತಿಮುದಾವಹತ್ ।
ತತೋऽಹಮಬ್ರುವಂ ಬಾಲ್ಯಾತ್ ಜನನೀಮಾತ್ಮನಸ್ತದಾ ।
ನೇದಂ ಕ್ಷೀರೋದನಂ ಮಾತರ್ಯತ್ ತ್ವಂ ಮೇ ದತ್ತವತ್ಯಸಿ ॥೮೦॥

ತಾಯಿಯು ಕೊಡುತ್ತಿದ್ದ ಪಿಷ್ಟರಸವು ನನಗೆ ಸಂತೋಷವನ್ನು ಉಂಟುಮಾಡಲಿಲ್ಲ. ಆಗ ನಾನು ಬಾಲ್ಯಸಹಜವಾಗಿ ನನ್ನ ತಾಯಿಯನ್ನು ಕುರಿತು ತಾಯಿಯೇ, ನೀನು ನನಗೆ ಕೊಟ್ಟಿರುವುದು ಕ್ಷೀರಾನ್ನವಲ್ಲ ಎಂದು ಹೇಳಿದೆನು.

ಅಭಾವಾಚ್ಚೈವ ದುಗ್ಧಸ್ಯ ದುಃಖಿತಾ ಜನನೀ ತದಾ ।
ತತೋ ಮಾಮಬ್ರವೀನ್ಮಾತಾ ದುಃಖಶೋಕಸಮನ್ವಿತಾ ।
ಪುತ್ರಸ್ನೇಹಾತ್ಪರಿಷ್ವಜ್ಯ ಮೂರ್ಧ್ನಿ ಚಾಘ್ರಾಯ ಮಾಧವ ॥೮೧॥

ಕುತಃ ಕ್ಷೀರೋದನಂ ವತ್ಸ ಮುನೀನಾಂ ಭಾವಿತಾತ್ಮನಾಮ್ ।
ವನೇ ನಿವಸತಾಂ ನಿತ್ಯಂ ಕಂದಮೂಲಫಲಾಶಿನಾಮ್ ॥೮೨॥

ಕ್ಷೀರವು ಇಲ್ಲದಿದ್ದ ಕಾರಣ ತಾಯಿಯು ದುಃಖಿತಳಾದಳು. ದುಃಖ-ಶೋಕ ಸಮನ್ವಿತಳಾದ ಅವಳು ನನ್ನನ್ನು ಕುರಿತು ಹೇಳಿದಳು: ಎಲೈ ಮಾಧವನೇ, ಪುತ್ರಸ್ನೇಹದಿಂದ ಅವಳು ನನ್ನನ್ನು ಆಲಿಂಗಿಸಿ ಶಿರಸ್ಸಿನಲ್ಲಿ ಆಘ್ರಾಣಿಸಿ, ವತ್ಸನೇ, ತಪಸ್ಸನ್ನು ಮಾಡುವ,

ಕಾಡಿನಲ್ಲಿ ವಾಸಿಸುವ, ನಿತ್ಯವೂ ಕಂದ-ಮೂಲ-ಫಲವನ್ನು ಭಕ್ಷಿಸುವ ಋಷಿಗಳಿಗೆ ಕ್ಷೀರಾನ್ನವು ಎಲ್ಲಿಂದ ಬರಬೇಕು?

ಆಸ್ಥಿತಾನಾಂ ನದೀಂ ದಿವ್ಯಾಂ ವಾಲಖಿಲ್ಯೈರ್ನಿಷೇವಿತಾಮ್ ।
ಕುತಃ ಕ್ಷೀರಂ ವನಸ್ಥಾನಾಂ ಮುನೀನಾಂ ಗಿರಿವಾಸಿನಾಮ್ ॥೮೩॥

ಅಪ್ರಸಾದ್ಯ ವಿರೂಪಾಕ್ಷಂ ವರದಂ ಸ್ಥಾಣುಮವ್ಯಯಮ್ ।
ಕುತಃ ಕ್ಷೀರೋದನಂ ವತ್ಸ ಸುಖಾನಿ ವಸನಾನಿ ಚ ॥೮೪॥

ವಾಲಖಿಲ್ಯರಿಂದ ಸೇವಿತವಾದ ಕಾಡಿನಲ್ಲಿ ವಾಸಮಾಡುವ ಋಷಿಗಳಿಗೆ ಕ್ಷೀರವು ಎಲ್ಲಿಂದ ಬರಬೇಕು? ವತ್ಸನೇ, ವಿರೂಪಾಕ್ಷನೂ, ವರಪ್ರದನೂ, ಸ್ಥಾಣುವೂ, ಅವ್ಯಯನೂ ಆದ ಶಿವನನ್ನು ಒಲಿಸದೆ ಕ್ಷೀರಾನ್ನವಾಗಲೀ, ಸುಖಗಳಾಗಲೀ, ವಸ್ತ್ರಗಳಾಗಲೀ ಎಲ್ಲಿಂದ ಬರಬೇಕು?

ತಂ ಪ್ರಪದ್ಯ ಸದಾ ವತ್ಸ ಸರ್ವಭಾವೇನ ಶಂಕರಮ್ ।
ತತ್ಪ್ರಸಾದಾಚ್ಚ ಕಾಮೇಭ್ಯಃ ಫಲಂ ಪ್ರಾಪ್ಸ್ಯಸಿ ಪುತ್ರಕ ॥೮೫॥

ವತ್ಸನೇ, ಯಾವಾಗಲೂ ಸರ್ವಭಾವಗಳಿಂದ ಶಂಕರನಿಗೆ ಶರಣಾಗತನಾಗು. ಅವನ ಅನುಗ್ರಹದಿಂದ ಎಲ್ಲ ಕಾಮಿತ ಫಲಗಳನ್ನೂ ಹೊಂದುವಿ (ಎಂದು ಹೇಳಿದಳು).

ಜನನ್ಯಾಸ್ತದ್ವಚಃ ಶ್ರುತ್ವಾ ತದಾಪ್ರಭೃತಿ ಶತ್ರುಹನ್ ।
ಪ್ರಾಂಜಲಿಃ ಪ್ರಣತೋ ಭೂತ್ವಾ ಇದಮಂಬಾಮವೋಚಯಮ್ ॥೮೬॥

ತಾಯಿಯ ಆ ಮಾತುಗಳನ್ನು ಕೇಳಿ ಎಲೈ ಶತ್ರುಸೂದನನೇ, ಆ ಕಾಲದಿಂದಲೂ ನಾನು ಕೈಗಳನ್ನು ಮುಗಿದು ನಮಸ್ಕರಿಸಿ, ತಾಯಿಯನ್ನು ಕುರಿತು ಈ ಮಾತುಗಳನ್ನು ಹೇಳಿದೆನು.

ಕೋऽಯಮಂಬ ಮಹಾದೇವಃ ಸ ಕಥಂ ಚ ಪ್ರಸೀದತಿ ।
ಕುತ್ರ ವಾ ವಸತೇ ದೇವೋ ದ್ರಷ್ಟವ್ಯೋ ವಾ ಕಥಂಚನ ॥೮೭॥

ತಾಯಿಯೇ, ಮಹಾದೇವನು ಯಾರು? ಅವನು ಹೇಗೆ ಪ್ರಸನ್ನನಾಗುತ್ತಾನೆ? ಆ ದೇವನು ಎಲ್ಲಿ ವಾಸಮಾಡುತ್ತಾನೆ? ಅವನನ್ನು ಹೇಗೆ ನೋಡಬೇಕು?

ತುಷ್ಯತೇ ವಾ ಕಥಂ ಶರ್ವೋ ರೂಪಂ ತಸ್ಯ ಚ ಕೀದೃಶಮ್ ।
ಕಥಂ ಜ್ಞೇಯಃ ಪ್ರಸನ್ನೋ ವಾ ದರ್ಶಯೇಜ್ಜನನೀ ಮಮ ॥೮೮॥

ಅವನ ರೂಪವಾದರೂ ಹೇಗಿರುತ್ತದೆ? ಅವನು ಪ್ರಸನ್ನನಾಗಿದ್ದಾನೆಂದು ಹೇಗೆ ತಿಳಿಯಬೇಕು? ಇದನ್ನು ತಾಯಿಯಾದ ನೀನು ನನಗೆ ತಿಳಿಸು.

ಏವಮುಕ್ತಾ ತದಾ ಕೃಷ್ಣ ಮಾತಾ ಮೇ ಸುತವತ್ಸಲಾ ।
ಮೂರ್ಧನ್ಯಾಘ್ರಾಯ ಗೋವಿಂದ ಸಬಾಷ್ಪಾಕುಲಲೋಚನಾ ॥೮೯॥

ಪ್ರಮಾರ್ಜಂತೀ ಚ ಗಾತ್ರಾಣಿ ಮಮ ವೈ ಮಧುಸೂದನ ।
ದೈನ್ಯಮಾಲಂಬ್ಯ ಜನನೀ ಇದಮಾಹ ಸುರೋತ್ತಮ ॥೯೦॥

ಎಲೈ ಕೃಷ್ಣನೇ, ಹೀಗೆ ನನ್ನಿಂದ ಕೇಳಲ್ಪಟ್ಟ ಸುತವತ್ಸಳಾದ ನನ್ನ ತಾಯಿಯು ಎಲೈ ಗೋವಿಂದನೇ, ನನ್ನನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ, ಕಣ್ಣುಗಳಲ್ಲಿ ನೀರನ್ನು ತಂದುಕೊಂಡು ಎಲೈ ಮಧುಸೂದನನೇ, ದೈನ್ಯವನ್ನು ಹೊಂದಿದವಳಾಗಿ ಈ ಮಾತನ್ನು ಆಡಿದಳು.

ದುರ್ವಿಜ್ಞೇಯೋ ಮಹಾದೇವೋ ದುರಾಧಾರೋ ದುರಂತಕಃ ।
ದುರಾಬಾಧಶ್ಚ ದುರ್ಗ್ರಾಹ್ಯೋ ದುರ್ದೃಶ್ಯೋ ಹ್ಯಕೃತಾತ್ಮಭಿಃ ॥೯೧॥

ಯಸ್ಯ ರೂಪಾಣ್ಯನೇಕಾನಿ ಪ್ರವದಂತಿ ಮನೀಷಿಣಃ ।
ಸ್ಥಾನಾನಿ ಚ ವಿಚಿತ್ರಾಣಿ ಪ್ರಾಸಾದಶ್ಚಾಪ್ಯನೇಕಶಃ ॥೯೨॥

ಮಹಾದೇವನನ್ನು ತಿಳಿಯುವುದು ಬಹಳ ಕಷ್ಟ, ಅವನಿಗೆ ಯಾವ ಆಧಾರವೂ ಇಲ್ಲ, ಅವನು ಅನಂತನಾದವನು. ಅವನನ್ನು ಯಾರೂ ಪೀಡಿಸಲಾರರು. ಅವನನ್ನು ಹಿಡಿಯುವುದೂ ಕಷ್ಟ, ಜಿತಮನಸ್ಸಿಲ್ಲದವರು ಅವನನ್ನು ನೋಡುವುದೂ ಸಾಧ್ಯವಿಲ್ಲ, ಜ್ಞಾನಿಗಳು ಅವನ ಅನೇಕ ರೂಪಗಳನ್ನು ಹೇಳುತ್ತಾರೆ. ಅವನ ವಿಚಿತ್ರವಾದ ಸ್ಥಾನಗಳನ್ನೂ, ಅವನ ಅನೇಕ ವಿಧವಾದ ಅನುಗ್ರಹವನ್ನೂ ಹೇಳುತ್ತಾರೆ.

ಕೋ ಹಿ ತತ್ತ್ವೇನ ತದ್ವೇದ ಈಶಸ್ಯ ಚರಿತಂ ಶುಭಮ್ ।
ಕೃತವಾನ್ ಯಾನಿ ರೂಪಾಣಿ ದೇವದೇವಃ ಪುರಾ ಕಿಲ ।
ಕ್ರೀಡತೇ ಚ ಯಥಾ ಶರ್ವಃ ಪ್ರಸೀದತಿ ಯಥಾ ಚ ವೈ ॥೯೩॥

ಶಿವನ ಶುಭಚರಿತೆಯನ್ನು ಯಾವನು ಸರಿಯಾಗಿ ತಿಳಿಯುತ್ತಾನೆ? ದೇವದೇವನಾದ ಅವನು ಹಿಂದೆ ಯಾವ ಯಾವ ರೂಪವನ್ನು ಧರಿಸಿದನೆಂದು ಯಾವನು ತಿಳಿಯುತ್ತಾನೆ? ಶಿವನು ಹಾಗೆಯೇ ಆಟವಾಡುತ್ತಾನೆ. ಹೇಗೆ ಪ್ರಸನ್ನನಾಗುತ್ತಾನೆ? ಎಂದಾದರೂ ಯಾವನು ತಿಳಿಯುವನು?

ಹೃದಿಸ್ಥಃ ಸರ್ವಭೂತಾನಾಂ ವಿಶ್ವರೂಪೋ ಮಹೇಶ್ವರಃ ।
ಭಕ್ತಾನಾಮನುಕಂಪಾರ್ಥಂ ದರ್ಶನಂ ಚ ಯಥಾಶ್ರುತಮ್ ।
ಮುನೀನಾಂ ಬ್ರುವತಾಂ ದಿವ್ಯಮೀಶಾನಚರಿತಂ ಶುಭಮ್ ॥೯೪॥

ವಿಶ್ವರೂಪನಾದ ಮಹೇಶ್ವರನು ಸರ್ವಪ್ರಾಣಿಗಳ ಹೃದಯದಲ್ಲಿದ್ದಾನೆ. ತನ್ನ ದಿವ್ಯವಾದ ಶುಭಚರಿತೆಯನ್ನು ಹೇಳುವ ಭಕ್ತರಾದ ಋಷಿಗಳಿಗೆ ಅವರ ಮೇಲಿನ ಅನುಕಂಪದಿಂದ ಶಾಸ್ತ್ರದಲ್ಲಿ ಹೇಳಿದಂತೆ ದರ್ಶನವನ್ನು ನೀಡುತ್ತಾನೆ.

ಕೃತವಾನ್ ಯಾನಿ ರೂಪಾಣಿ ಕಥಿತಾನಿ ದಿವೌಕಸೈಃ ।
ಅನುಗ್ರಹಾರ್ಥಂ ವಿಪ್ರಾಣಾಂ ಶೃಣು ವತ್ಸ ಸಮಾಸತಃ ॥೯೫॥

ತಾನಿ ತೇ ಕೀರ್ತಯಿಷ್ಯಾಮಿ ಯನ್ಮಾಂ ತ್ವಂ ಪರಿಪೃಚ್ಛಸಿ ॥೯೬॥

ಬ್ರಾಹ್ಮಣರಿಗೆ ಅನುಗ್ರಹವನ್ನು ಮಾಡಲು ದೇವತೆಗಳಿಂದ ಸ್ತುತಿಸಲ್ಪಡುವ ಯಾವ ರೂಪಗಳನ್ನು ಅವನು ಧರಿಸಿದನೋ, ಎಲೈ ವತ್ಸನೇ, ಅದನ್ನು ಸಂಕ್ಷೇಪವಾಗಿ ಕೇಳು. ನಿನ್ನ ಪ್ರಶ್ನೆಗೆ ಉತ್ತರವಾಗಿ ನಾನು ಅದನ್ನು ನಿನಗೆ ಹೇಳುವೆನು.

ಬ್ರಹ್ಮವಿಷ್ಣುಸುರೇಂದ್ರಾಣಾಂ ರುದ್ರಾದಿತ್ಯಾಶ್ವಿನಾಮಪಿ ।
ವಿಶ್ವೇಷಾಮಪಿ ದೇವಾನಾಂ ವಪುರ್ಧಾರಯತೇ ಭವಃ ॥೯೭॥

ಅವನು ಬ್ರಹ್ಮ, ವಿಷ್ಣು, ದೇವೇಂದ್ರ, ರುದ್ರ-ಆದಿತ್ಯ, ಅಶ್ವಿನಿಗಳ ಮತ್ತು ವಿಶ್ವೇದೇವತೆಗಳ ಶರೀರವನ್ನು ಧರಿಸುತ್ತಾನೆ.

ನರಾಣಾಂ ದೇವನಾರೀಣಾಂ ತಥಾ ಪ್ರೇತಪಿಶಾಚಯೋಃ ।
ಕಿರಾತಶಬರಾಣಾಂ ಚ ಜಲಜಾನಾಮನೇಕಶಃ ॥೯೮॥

ಕರೋತಿ ಭಗವಾನ್ ರೂಪಮಾಟವ್ಯಶಬರಾಣ್ಯಪಿ ।
ಕೂರ್ಮೋ ಮತ್ಸ್ಯಸ್ತಥಾ ಶಂಖಃ ಪ್ರವಾಳಾಂಕುರಭೂಷಣಃ ॥೯೯॥

ಮನುಷ್ಯರ, ದೇವತಾಸ್ತ್ರೀಯರ ಹಾಗೆ ಪ್ರೇತ ಪಿಶಾಚಿಗಳ, ಕಿರಾತ ಶಬರರ ಮತ್ತು ಅನೇಕ ಜಲಚರ ಪ್ರಾಣಿಗಳ ರೂಪವನ್ನು ಧರಿಸುತ್ತಾನೆ. ಭಗವಂತನಾದ ಶಂಕರನು ಅಡವಿಯ ಬೇಡರ ರೂಪವನ್ನು ಧರಿಸುತ್ತಾನೆ. ಅವನು ಮತ್ಸ್ಯ-ಕೂರ್ಮ-ಶಂಖ ರೂಪವನ್ನು ಧರಿಸಿ ಪ್ರವಳಾಂಕುರಗಳಿಂದ ಭೂಷಿತನಾಗುತ್ತಾನೆ.

ಯಕ್ಷರಾಕ್ಷಸಸರ್ಪಾಣಾಂ ದೈತ್ಯದಾನವಯೋರಪಿ ।
ವಪುರ್ಧಾರಯತೇ ದೇವೋ ಭೂಯಶ್ಚ ಬಿಲವಾಸಿನಾಮ್ ॥೧೦೦॥

ಯಕ್ಷ-ರಾಕ್ಷಸ-ಸರ್ಪಗಳ ರೂಪವನ್ನೂ, ದೈತ್ಯ-ದಾನವರ ರೂಪಗಳನ್ನೂ, ಬಿಲವಾಸಿಗಳಾದ ಸರ್ಪಗಳ ರೂಪವನ್ನೂ ಶಿವನು ಧರಿಸುತ್ತಾನೆ.

ವ್ಯಾಘ್ರಸಿಂಹಮೃಗಾಣಾಂ ಚ ತರಕ್ಷ್ವೃಕ್ಷಪತತ್ರಿಣಾಮ್ ।
ಉಲೂಕಶ್ವಸೃಗಾಲಾನಾಂ ರೂಪಾಣಿ ಕುರುತೇಽಪಿ ಚ ॥೧೦೧॥

ವ್ಯಾಘ್ರ-ಸಿಂಹ-ಜಿಂಕೆಗಳ ರೂಪವನ್ನೂ, ಹುಲಿ-ಚಿರತೆ-ಪಕ್ಷಿಗಳ ರೂಪವನ್ನೂ, ಗೂಬೆ-ನಾಯಿ-ನರಿಗಳ ರೂಪವನ್ನೂ ಧರಿಸುತ್ತಾನೆ.

ಹಂಸಕಾಕಮಯೂರಾಣಾಂ ಕೃಕಲಾಸಕಸಾರಸಾಮ್ ।
ರೂಪಾಣಿ ಚ ಬಲಾಕಾನಾಂ ಗೃಧ್ರಚಕ್ರಾಂಗಯೋರಪಿ ॥೧೦೨॥

ಹಂಸ-ಕಾಕ-ಮಯೂರಗಳ ರೂಪವನ್ನೂ, ಕೃಕಲಾಸ (ಓತಿಕೇತ)-ಸಾರಸ ಪಕ್ಷಿಗಳ ರೂಪವನ್ನೂ, ಬಲಾಕಗಳ ಗೃಧ್ರಚಕ್ರವಾಕ ಪಕ್ಷಿಗಳ ರೂಪಗಳನ್ನೂ ಧರಿಸುತ್ತಾನೆ.

ಕರೋತಿ ವಾ ಸ ರೂಪಾಣಿ ಧಾರಯತ್ಯಪಿ ಪರ್ವತಮ್ ।
ಗೋರೂಪಂ ಚ ಮಹಾದೇವೋ ಹಸ್ತ್ಯಶ್ವೋಷ್ಟ್ರಖರಾಕೃತಿಃ ॥೧೦೩॥

ಅವನು ಅನೇಕ ರೂಪಗಳನ್ನು ಧರಿಸುತ್ತಾನೆ. ಪರ್ವತದ ರೂಪವನ್ನು ಧರಿಸುತ್ತಾನೆ. ಗೋರೂಪವನ್ನೂ, ಹಸ್ತಿ-ಅಶ್ವ-ಉಷ್ಟ್ರ (ಒಂಟೆ)-ರಾಸಭ (ಕತ್ತೆ)ರೂಪಗಳನ್ನೂ ಮಹಾದೇವನು ಧರಿಸುತ್ತಾನೆ.

ಛಾಗಶಾರ್ದೂಲರೂಪಶ್ಚ ಅನೇಕಮೃಗರೂಪಧೃಕ್ ।
ಅಂಡಜಾನಾಂ ಚ ದಿವ್ಯಾನಾಂ ವಪುರ್ಧಾರಯತೇ ಭವಃ ॥೧೦೪॥

ಹೋತ-ಶಾರ್ದೂಲ ರೂಪಗಳನ್ನೂ, ಅನೇಕ ಮೃಗಗಳ ರೂಪವನ್ನೂ, ದಿವ್ಯವಾದ ಪಕ್ಷಿಗಳ ರೂಪವನ್ನೂ ಅವನು ಧರಿಸುತ್ತಾನೆ.

ದಂಡೀ ಛತ್ರೀ ಚ ಕುಂಡೀ ಚ ದ್ವಿಜಾನಾಂ ವಾರಣಸ್ತಥಾ ।
ಷಣ್ಮುಖೋ ವೈ ಬಹುಮುಖಸ್ತ್ರಿನೇತ್ರೋ ಬಹುಶೀರ್ಷಕಃ ॥೧೦೫॥

ಬ್ರಾಹ್ಮಣರ ದಂಡ, ಛತ್ರ, ಕಮಂಡಲವನ್ನೂ ಗಜರೂಪವನ್ನೂ ಧರಿಸುತ್ತಾನೆ. ಅವನು ಷಣ್ಮುಖನು, ಬಹುಮುಖನು, ತ್ರಿನೇತ್ರ ಮತ್ತು ಅನೇಕ ಶಿರಸ್ಸುಗಳನ್ನು ಉಳ್ಳವನು.

ಅನೇಕಕಟಿಪಾದಶ್ಚ ಅನೇಕೋದರವಕ್ತ್ರಭೃತ್ ।
ಅನೇಕಪಾಣಿಪಾರ್ಶ್ವಶ್ಚ ಅನೇಕಗಣಸಂವೃತಃ ॥೧೦೬॥

ಅನೇಕ ಕಟಿಪಾದಗಳನ್ನು, ಅನೇಕ ಉದರ (ತೊಡೆ) ಮುಖಗಳನ್ನು, ಅನೇಕ ಪಾಣಿ-ಪಾರ್ಶ್ವಗಳನ್ನು ಹೊಂದಿ, ಅನೇಕ ಗಣಗಳಿಂದ ಪರಿವೃತನಾಗಿದ್ದಾನೆ.

ಋಷಿಗಂಧರ್ವರೂಪಶ್ಚ ಸಿದ್ಧಚಾರಣರೂಪಧೃತ್ ।
ಭಸ್ಮಪಾಂಡರಗಾತ್ರಶ್ಚ ಚಂದ್ರಾರ್ಧಕೃತಭೂಷಣಃ ॥೧೦೭॥

ಋಷಿ-ಗಂಧರ್ವರೂಪವನ್ನೂ, ಸಿದ್ಧ-ಚಾರಣ ರೂಪವನ್ನೂ, ಭಸ್ಮಲೇಪನದಿಂದ ಶ್ವೇತವರ್ಣದಿಂದ ಕೂಡಿದ ದೇಹವನ್ನೂ ಹೊಂದಿದ್ದಾನೆ. ಅರ್ಧಚಂದ್ರನಿಂದ ಶಿರಸ್ಸಿನಲ್ಲಿ ಅಲಂಕೃತನಾಗಿದ್ದಾನೆ.

ಅನೇಕರಾವಸಂಘುಷ್ಟಶ್ಚಾನೇಕಸ್ತುತಿಸಂಸ್ಕೃತಃ ।
ಸರ್ವಭೂತಾಂತಕಃ ಸರ್ವಃ ಸರ್ವಲೋಕಪ್ರತಿಷ್ಠಿತಃ ॥೧೦೮॥

ಅನೇಕ ಧ್ವನಿಗಳಿಂದಲೂ, ಅನೇಕ ಸ್ತೋತ್ರಗಳಿಂದಲೂ ಪೂಜಿಸಲ್ಪಡುತ್ತಾನೆ. ಸರ್ವಭೂತಸಂಹಾರಕನೂ, ಸರ್ವನೂ, ಸರ್ವಲೋಕ ಪ್ರತಿಷ್ಠಿತನೂ ಆಗಿದ್ದಾನೆ.

ಸರ್ವಲೋಕಾಂತರಾತ್ಮಾ ಚ ಸರ್ವಗಃ ಸರ್ವವಾದ್ಯಪಿ ।
ಸರ್ವತ್ರ ಭಗವಾನ್ ಜ್ಞೇಯೋ ಹೃದಿಸ್ಥಃ ಸರ್ವದೇಹಿನಾಮ್ ॥೧೦೯॥

ಸರ್ವಲೋಕದ ಅಂತರಾತ್ಮನೂ, ಸರ್ವತ್ರ ವ್ಯಾಪ್ತನೂ, ಸರ್ವವಾದಿಯೂ ಆಗಿದ್ದಾನೆ. ಭಗವಂತನಾದ ಶಿವನು ಸರ್ವದೇಹಿಗಳ ಹೃದಯದಲ್ಲಿದ್ದಾನೆಂದು ತಿಳಿಯಬೇಕು.

ಯೋ ಹಿ ಯಂ ಕಾಮಯೇತ್ ಕಾಮಂ ಯಸ್ಮಿನ್ನರ್ಥೇऽರ್ಚ್ಯತೇ ಪುನಃ ।
ತತ್ಸರ್ವಂ ವೇತ್ತಿ ದೇವೇಶಸ್ತಂ ಪ್ರಪದ್ಯ ಯದೀಚ್ಛಸಿ ॥೧೧೦॥

ಯಾವನ ಮನಸ್ಸಿನಲ್ಲಿ ಯಾವ ಆಸೆ ಇದೆಯೋ, ಯಾವುದರ ಸಲುವಾಗಿ ಅವನು ಅರ್ಚಿಸುತ್ತಾನೆಯೋ ಅದೆಲ್ಲವನ್ನೂ ದೇವೇಶನು ತಿಳಿದಿದ್ದಾನೆ. ನಿನಗೆ ಏನಾದರೂ ಬೇಕಾದರೆ ಅವನಿಗೆ ಶರಣಾಗತನಾಗು.

ನಂದತೇ ಕುಪ್ಯತೇ ಚಾಪಿ ತಥಾ ಹುಂಕಾರಯತ್ಯಪಿ ।
ಚಕ್ರೀ ಶೂಲೀ ಗದಾಪಾಣಿರ್ಮುಸಲೀ ಖಡ್ಗಪಟ್ಟಿಶೀ ॥೧೧೧॥

ಅವನು ಸಂತೋಷದಲ್ಲಿರುತ್ತಾನೆ, ಕೋಪಗೊಳ್ಳುತ್ತಾನೆ, ಹೂಂಕಾರವನ್ನು ಮಾಡುತ್ತಾನೆ. ಚಕ್ರ-ಶೂಲ-ಗದಾ-ಮುಸಲ-ಖಡ್ಗ-ಪಟ್ಟಸಗಳನ್ನು ಧರಿಸುತ್ತಾನೆ.

ಭೂಧರೋ ನಾಗಮೌಂಜೀ ಚ ನಾಗಕುಂಡಲಕುಂಡಲೀ ।
ನಾಗಯಜ್ಞೋಪವೀತೀ ಯ ನಾಗಚರ್ಮೋತ್ತರಚ್ಛದಃ ॥೧೧೨॥

ಭೂಮಿಯನ್ನು ಧರಿಸುತ್ತಾನೆ. ಸರ್ಪಮೌಂಜಿಯನ್ನೂ, ಸರ್ಪಕುಂಡಲವನ್ನೂ, ಸರ್ಪಯಜ್ಞೋಪವೀತವನ್ನೂ, ಗಜಚರ್ಮದ ಉತ್ತರೀಯವನ್ನೂ, ಧರಿಸುತ್ತಾನೆ.

ಹಸತೇ ಗಾಯತೇ ಚೈವ ನೃತ್ಯತೇ ಚ ಮನೋಹರಮ್ ।
ವಾದಯತ್ಯಪಿ ವಾದ್ಯಾನಿ ವಿಚಿತ್ರಾಣಿ ಗಣೈರ್ಯುತಃ ॥೧೧೩॥

ನಗುತ್ತಾನೆ, ಗಾನ ಮಾಡುತ್ತಾನೆ, ಮನೋಹರವಾಗಿ ನರ್ತನವನ್ನು ಮಾಡುತ್ತಾನೆ. ತನ್ನ ಗಣಗಳಿಂದ ಕೂಡಿ ವಿಚಿತ್ರವಾದ ವಾದ್ಯಗಳನ್ನು ಬಾರಿಸುತ್ತಾನೆ.

ವಲ್ಗತೇ ಜೃಂಭತೇ ಚೈವ ರುದತೇ ರೋದಯತ್ಯಪಿ ।
ಉನ್ಮತ್ತಮತ್ತರೂಪಂ ಚ ಭಾಷತೇ ಚಾಪಿ ಸುಸ್ವರಃ ॥೧೧೪॥

ಮಾತನಾಡುತ್ತಾನೆ, ಆಕಳಿಸುತ್ತಾನೆ, ಅಳುತ್ತಾನೆ, ಅಳಿಸುತ್ತಾನೆ, ಉನ್ಮತ್ತ ಮತ್ತರೂಪಗಳನ್ನು ಧರಿಸಿ ಸುಸ್ವರದಿಂದ ಮಾತನಾಡುತ್ತಾನೆ.

ಅತೀವ ಹಸತೇ ರೌದ್ರಸ್ತ್ರಾಸಯನ್ ನಯನೈರ್ಜನಮ್ ।
ಜಾಗರ್ತಿ ಚೈವ ಸ್ವಪಿತಿ ಜೃಂಭತೇ ಚ ಯಥಾಸುಖಮ್ ॥೧೧೫॥

ಭಯಂಕರ ರೂಪವನ್ನು ತಾಳಿ ತನ್ನ ದೃಷ್ಟಿಯಿಂದ ಜನರನ್ನು ಭೀಷಣಗೊಳಿಸುತ್ತಾ ಬಹಳವಾಗಿ ನಗುತ್ತಾನೆ. ಅವನ ಮನಸ್ಸಿಗೆ ಬಂದಂತೆ ಎಚ್ಚರವಾಗಿರುತ್ತಾನೆ, ನಿದ್ರೆ ಮಾಡುತ್ತಾನೆ, ಆಕಳಿಸುತ್ತಾನೆ.

ಜಪತೇ ಜಪ್ಯತೇ ಚೈವ ತಪತೇ ತಪ್ಯತೇ ಪುನಃ ।
ದದಾತಿ ಪ್ರತಿಗೃಹ್ಣಾತಿ ಯುಂಜತೇ ಧ್ಯಾಯತೇಽಪಿ ಚ ॥೧೧೬॥

ಜಪವನ್ನು ಮಾಡುತ್ತಾನೆ, ತನ್ನನ್ನು ಉದ್ದೇಶಿಸಿ ಜಪವನ್ನು ಮಾಡಿಸಿಕೊಳ್ಳುತ್ತಾನೆ, ಪ್ರಕಾಶಿಸುತ್ತಾನೆ, ಪ್ರಕಾಶಿಸಲ್ಪಡುತ್ತಾನೆ, ದಾನ ಮಾಡುತ್ತಾನೆ, ಪ್ರತಿಗ್ರಹವನ್ನು ಮಾಡುತ್ತಾನೆ, ಯೋಗವನ್ನು ಮಾಡುತ್ತಾನೆ, ಧ್ಯಾನವನ್ನು ಮಾಡುತ್ತಾನೆ.

ವೇದೀಮಧ್ಯೇ ತಥಾ ಯೂಪೇ ಗೋಷ್ಠಮಧ್ಯೇ ಹುತಾಶನೇ ।
ದೃಶ್ಯತೇ ದೃಶ್ಯತೇ ಚಾಪಿ ಬಾಲೋ ವೃದ್ಧೋ ಯುವಾ ತಥಾ ॥೧೧೭॥

ವೇದಿಮಧ್ಯದಲ್ಲಿಯೂ, ಯೂಪದಲ್ಲಿಯೂ, ಗೋಶಾಲೆಯಲ್ಲಿಯೂ, ಅಗ್ನಿಯಲ್ಲಿಯೂ ಕಾಣುತ್ತಾನೆ. ಬಾಲನಾಗಿ, ಯುವಕನಾಗಿ, ವೃದ್ಧನಾಗಿ ಕಾಣುತ್ತಾನೆ.

ಕ್ರೀಡತೇ ಋಷಿಕನ್ಯಾಭಿರ್ಋಷಿಪತ್ನೀಭಿರೇವ ಚ ।
ಊರ್ಧ್ವಕೇಶೋ ಮಹಾಶೇಪೋ ನಗ್ನೋ ವಿಕೃತಲೋಚನಃ ॥೧೧೮॥

ಋಷಿಕನ್ಯೆಯರ ಜೊತೆಯಲ್ಲಿ, ಋಷಿಪತ್ನಿಯರ ಜೊತೆಯಲ್ಲಿ ಆಟವಾಡುತ್ತಾನೆ. ಮೇಲ್ಮುಖವಾದ ಕೇಶಗಳು, ದೊಡ್ಡ ಆಕಾರದ ಲಿಂಗವನ್ನು ಹೊಂದಿ ನಗ್ನನೂ, ವಿಕೃತಲೋಚನನೂ ಆಗಿದ್ದಾನೆ.

ಗೌರಃ ಶ್ಯಾಮಸ್ತದಾ ಕೃಷ್ಣಃ ಪಾಂಡರೋ ಧೂಮ್ರಲೋಹಿತಃ ।
ವಿಕೃತಾಕ್ಷೋ ವಿಶಾಲಾಕ್ಷೋ ದಿಗ್ವಾಸಾಃ ಸರ್ವವಾಸಕಃ ॥೧೧೯॥

ಅವನು ಗೌರವರ್ಣವನ್ನು, ಶ್ಯಾಮವರ್ಣವನ್ನು, ಕೃಷ್ಣವರ್ಣವನ್ನು, ಪಾಂಡರವರ್ಣವನ್ನು, ಧೂಮವರ್ಣವನ್ನು ಲೋಹಿತವರ್ಣವನ್ನು ಹೊಂದಿದ್ದಾನೆ. ವಿಕೃತವೂ, ವಿಶಾಲವೂ ಆದ ಕಣ್ಣುಗಳನ್ನು ಹೊಂದಿದ್ದಾನೆ. ದಿಗಂಬರನಾಗಿ ಸರ್ವರಿಗೂ ಆಶ್ರಯನಾಗಿದ್ದಾನೆ.

ಅರೂಪಸ್ಯಾದ್ಯರೂಪಸ್ಯ ಅತಿರೂಪಾದ್ಯರೂಪಿಣಃ ।
ಅನಾದ್ಯಂತಮಜಸ್ಯಾಂತಂ ವೇತ್ಸ್ಯತೇ ಕೋಽಸ್ಯ ತತ್ತ್ವತಃ ॥೧೨೦॥

ರೂಪರಹಿತನಾದ, ಅತಿಯಾದ ರೂಪವನ್ನು ಹೊಂದಿದ, ಆದ್ಯರೂಪನಾದ, ಜನ್ಮರಹಿತನಾದ, ಆದ್ಯಂತ ರಹಿತನಾದ ಅವನ ಜ್ಞಾನ ನಿರ್ಣಯವನ್ನು ಯಾವನು ಪಡೆಯುತ್ತಾನೆ?

ಹೃದಿ ಪ್ರಾಣೋ ಮನೋ ಜೀವೋ ಯೋಗಾತ್ಮಾ ಯೋಗಸಂಜ್ಞಿತಃ ।
ಧ್ಯಾನಂ ತತ್ಪರಮಾತ್ಮಾ ಚ ಭಾವಗ್ರಾಹ್ಯೋ ಮಹೇಶ್ವರಃ ॥೧೨೧॥

ಅವನು ಹೃದಯದಲ್ಲಿ ಪ್ರಾಣವನ್ನು ಹೊಂದಿದ್ದಾನೆ, ಮನಸ್ಸಿನಲ್ಲಿ ಜೀವರಿದ್ದಾರೆ. ಅವನು ಯೋಗಾತ್ಮ. ಯೋಗವೆಂಬ ಹೆಸರುಳ್ಳವನು. ಧ್ಯಾನರೂಪನಾದವನು. ಮಹೇಶ್ವರನಾದ ಆ ಪರಮಾತ್ಮನು ಭಕ್ತಿಯಿಂದ ಗ್ರಾಹ್ಯನಾದವನು.

ವಾದಕೋ ಗಾಯನಶ್ಚೈವ ಸಹಸ್ರಶತಲೋಚನಃ ।
ಏಕವಕ್ತ್ರೋ ದ್ವಿವಕ್ತ್ರಶ್ಚ ತ್ರಿವಕ್ತ್ರೋಽನೇಕವಕ್ತ್ರಃ ॥೧೨೨॥

ಅವನು ವಾದ್ಯವಾದಕನು, ಗಾಯನವನ್ನು ಮಾಡುವವನು, ಸಹಸ್ರ ಶತಲೋಚನನು, ಒಂದು ಮುಖ, ಎರಡು ಮುಖ, ಮೂರು ಮುಖ ಮತ್ತು ಅನೇಕ ಮುಖವುಳ್ಳವನು.

ತದ್ಭಕ್ತಸ್ತದ್ಗತೋ ನಿತ್ಯಂ ತನ್ನಿಷ್ಠಸ್ತತ್ಪರಾಯಣಃ ।
ಭಜ ಪುತ್ರ ಮಹಾದೇವಂ ತತಃ ಪ್ರಾಪ್ಸ್ಯಸಿ ಚೇಪ್ಸಿತಮ್ ॥೧೨೩॥

ಎಲೈ ಪುತ್ರನೇ, ಅಂತಹವನಿಗೆ ಭಕ್ತನಾಗಿ, ಅವನಲ್ಲೇ ನಿಶ್ಚಯವನ್ನು ಹೊಂದಿ, ಅವನನ್ನೇ ಶ್ರೇಷ್ಠನಾದ ಆಶ್ರಯವೆಂದು ತಿಳಿದು, ಮನಸ್ಸಿನಲ್ಲಿ ಅವನನ್ನೇ ಚಿಂತಿಸಿ ಭಜಿಸು. ಆಗ ಎಲ್ಲ ಇಷ್ಟವನ್ನೂ ಪಡೆಯುವಿ.

ಜನನ್ಯಾಸ್ತದ್ವಚಃ ಶ್ರುತ್ವಾ ತದಾಪ್ರಭೃತಿ ಶತ್ರುಹನ್ ।
ಮಮ ಭಕ್ತಿರ್ಮಹಾದೇವೇ ನೈಷ್ಠಿಕೀ ಸಮಪದ್ಯತ ॥೧೨೪॥

ಉಪಮನ್ಯು- ತಾಯಿಯ ಈ ಮಾತುಗಳನ್ನು ಕೇಳಿದಾಗಿನಿಂದ ಎಲೈ ಶತ್ರುಸಂಹಾರಕನೇ, ನನಗೆ ಮಹಾದೇವನಲ್ಲಿ ಏಕಾಂತವಾದ ಭಕ್ತಿಯು ಉಂಟಾಯಿತು.

ತತೋಽಹಂ ತಪ ಆಸ್ಥಾಯ ತೋಷಯಾಮಾಸ ಶಂಕರಮ್ ।
ದಿವ್ಯಂ ವರ್ಷಸಹಸ್ರಂ ತು ಪಾದಾಂಗುಷ್ಠಾಗ್ರವಿಷ್ಠಿತಃ ॥೧೨೫॥

ಅನಂತರ ನಾನು ದಿವ್ಯಮಾನದ ಸಹಸ್ರ ವರ್ಷಗಳ ಕಾಲ ಭೂಮಿಯಲ್ಲಿ ಪಾದಾಂಗುಷ್ಟದ ತುದಿಯಲ್ಲಿ ನಿಂತು ತಪಸ್ಸನ್ನು ಮಾಡಿ ಶಂಕರನನ್ನು ಸಂತೋಷಪಡಿಸಿದೆ.

ಏಕಂ ವರ್ಷಶತಂ ಚೈವ ಫಲಾಹಾರಸ್ತದಾಽಭವಮ್ ।
ದ್ವಿತೀಯಂ ಶೀರ್ಣಪರ್ಣಾಶೀ ತೃತೀಯಂ ಚಾಂಬುಭೋಜನಃ ।
ಶತಾನಿ ಸಪ್ತ ಚೈವಾಹಂ ವಾಯುಭಕ್ಷಸ್ತದಾಽಭವಮ್ ॥೧೨೬॥

ಆಗ ನೂರು ವರ್ಷಗಳ ಕಾಲ ನಾನು ಕೇವಲ ಫಲಭಕ್ಷಕನಾಗಿದ್ದೆ. ಎರಡನೆಯ ನೂರು ವರ್ಷಗಳ ಕಾಲ ಕೆಳಗೆ ಬಿದ್ದ ಎಲೆಗಳನ್ನು ಆಹಾರವಾಗಿ ಸ್ವೀಕರಿಸಿದೆ. ಮೂರನೆಯ ನೂರು ವರ್ಷಗಳು ಕೇವಲ ಜಲವನ್ನು ಸ್ವೀಕರಿಸಿದೆ. ಅನಂತರ ಏಳು ನೂರು ವರ್ಷಗಳ ಕಾಲ ವಾಯುಭಕ್ಷಕನಾಗಿದ್ದೆ.

ತತಃ ಪ್ರೀತೋ ಮಹಾದೇವಃ ಸರ್ವಲೋಕೇಶ್ವರಃ ಪ್ರಭುಃ ।
ಶಕ್ರರೂಪಂ ಸ ಕೃತ್ವಾ ತು ಸರ್ವೈರ್ದೇವಗಣೈರ್ವೃತಃ ।
ಸಹಸ್ರಾಕ್ಷಸ್ತದಾ ಭೂತ್ವಾ ವಜ್ರಪಾಣಿರ್ಮಹಾಯಶಾಃ ॥೧೨೭॥

ಸುಧಾವದಾತಂ ರಕ್ತಾಕ್ಷಂ ಸ್ತಬ್ಧಕರ್ಣಂ ಮದೋತ್ಕಟಮ್ ।
ಆವೇಷ್ಟಿತಕರಂ ರೌದ್ರಂ ಚತುರ್ದಂಷ್ಟ್ರಂ ಮಹಾಗಜಮ್ ॥೧೨೮॥

ಸಮಾಸ್ಥಿತಶ್ಚ ಭಗವಾನ್ ದೀಪ್ಯಮಾನಃ ಸ್ವತೇಜಸಾ ।
ಆಜಗಾಮ ಕಿರೀಟೀ ತು ಹಾರಕೇಯೂರಭೂಷಿತಃ ॥೧೨೯॥

ಆಗ ಪ್ರಸನ್ನನಾದ, ಸರ್ವಲೋಕೇಶ್ವರನಾದ, ಪ್ರಭುವಾದ ಮಹಾದೇವನು ಇಂದ್ರನ ರೂಪವನ್ನು ಧರಿಸಿ, ಸರ್ವದೇವಗಣಗಳಿಂದ ಕೂಡಿ, ಸಹಸ್ರಾಕ್ಷನಾಗಿ, ವಜ್ರಪಾಣಿಯಾಗಿ, ಅಮೃತದಂತೆ ಶ್ವೇತವರ್ಣದಿಂದ ಕೂಡಿದ, ಕೆಂಪಾದ ಕಣ್ಣುಗಳನ್ನು ಹೊಂದಿದ, ಅಲುಗಾಡದ ಕಿವಿಗಳನ್ನು ಹೊಂದಿದ, ಮದಭರಿತವಾದ, ಸುತ್ತಿದ ಸೊಂಡಿಲನ್ನು ಹೊಂದಿದ, ಮದೋತ್ಕಟವಾದ, ಭಯಂಕರವಾದ, ನಾಲ್ಕು ದಂತಗಳನ್ನು ಹೊಂದಿದ ಮಹಾಗಜವನ್ನು ಏರಿ, ತನ್ನ ತೇಜಸ್ಸಿನಿಂದ ಬೆಳಗುತ್ತಾ ಮಹಾಕೀರ್ತಿವಂತನೂ, ಭಗವಂತನೂ ಆದ ಶಂಕರನು ಕಿರೀಟವನ್ನು ಧರಿಸಿ, ಹಾರ-ಕೇಯೂರ ಭೂಷಿತನಾಗಿ ನನ್ನ ಬಳಿಗೆ ಬಂದನು.

ಪಾಂಡರೇಣಾತಪತ್ರೇಣ ಧ್ರಿಯಮಾಣೇನ ಮೂರ್ಧನಿ ।
ಸೇವ್ಯಮಾನೋಽಪ್ಸರೋಭಿಶ್ಚ ದಿವ್ಯಗಂಧರ್ವನಾದಿತಃ ॥೧೩೦॥

ತಲೆಯ ಮೇಲೆ ಹಿಡಿದ ಶ್ವೇತಚ್ಛತ್ರದಿಂದ ಕೂಡಿ, ಅಪ್ಸರೆಯರಿಂದ ಸೇವಿತನಾಗಿ ದಿವ್ಯಗಂಧರ್ವರಿಂದ ಗಾನ ಮಾಡಲ್ಪಡುತ್ತಿದ್ದನು.

ತತೋ ಮಾಮಾಹ ದೇವೇಂದ್ರಃ ಪ್ರೀತಸ್ತೇಽಹಂ ದ್ವಿಜೋತ್ತಮ ।
ವರಂ ವೃಣೀಷ್ವ ಮತ್ತಸ್ ತ್ವಂ ಯತ್ತೇ ಮನಸಿ ವರ್ತತೇ ॥೧೩೧॥

ಆಗ ದೇವೇಂದ್ರನಾದ ಅವನು ಎಲೈ ದ್ವಿಜಶ್ರೇಷ್ಠನೇ, ನಾನು ಪ್ರಸನ್ನನಾಗಿದ್ದೇನೆ. ನಿನ್ನ ಮನಸ್ಸಿನಲ್ಲಿರುವ ವರವನ್ನು ನನ್ನಿಂದ ಸ್ವೀಕರಿಸು ಎಂದು ಹೇಳಿದನು.

ಶಕ್ರಸ್ಯ ತು ವಚಃ ಶ್ರುತ್ವಾ ನಾಹಂ ಪ್ರೀತಮನಾಽಭವಮ್ ।
ಅಬ್ರುವಂ ಚ ತದಾ ಕೃಷ್ಣ ದೇವರಾಜಮಿದಂ ವಚಃ ॥೧೩೨॥

ಇಂದ್ರನ ಮಾತನ್ನು ಕೇಳಿ ನನಗೆ ಸಂತೋಷವಾಗಲಿಲ್ಲ. ಎಲೈ ಕೃಷ್ಣನೇ, ಆಗ ನಾನು ದೇವರಾಜನನ್ನು ಕುರಿತು ಹೀಗೆ ಮಾತನಾಡಿದೆನು.

ನಾಹಂ ತ್ವತ್ತೋ ವರಾಕಾಂಕ್ಷೀ ನಾನ್ಯಸ್ಮಾದಪಿ ದೈವತಾತ್ ।
ಮನಾಕ್ ಶಕ್ರ ತ್ವಯಾ ದತ್ತಂ ತ್ರೈಲೋಕ್ಯಮಪಿ ಕಾಮಯೇ ।
ಮಹಾದೇವಾದೃತೇ ಸೌಮ್ಯ ಸತ್ಯಮೇತದ್ ಬ್ರವೀಮಿ ತೇ ॥೧೩೩॥

ಜನನ್ಯಾಸ್ತದ್ವಚಃ ಶ್ರುತ್ವಾ ತದಾಪ್ರಭೃತಿ ಶತ್ರುಹನ್ ।
ಮಮ ಭಕ್ತಿರ್ಮಹಾದೇವೇ ನೈಷ್ಠಿಕೀ ಸಮಪದ್ಯತ ॥೧೨೪॥

ಉಪಮನ್ಯು- ತಾಯಿಯ ಈ ಮಾತುಗಳನ್ನು ಕೇಳಿದಾಗಿನಿಂದ ಎಲೈ ಶತ್ರುಸಂಹಾರಕನೇ, ನನಗೆ ಮಹಾದೇವನಲ್ಲಿ ಏಕಾಂತವಾದ ಭಕ್ತಿಯು ಉಂಟಾಯಿತು.

ತತೋಽಹಂ ತಪ ಆಸ್ಥಾಯ ತೋಷಯಾಮಾಸ ಶಂಕರಮ್ ।
ದಿವ್ಯಂ ವರ್ಷಸಹಸ್ರಂ ತು ಪಾದಾಂಗುಷ್ಠಾಗ್ರವಿಷ್ಠಿತಃ ॥೧೨೫॥

ಅನಂತರ ನಾನು ದಿವ್ಯಮಾನದ ಸಹಸ್ರ ವರ್ಷಗಳ ಕಾಲ ಭೂಮಿಯಲ್ಲಿ ಪಾದಾಂಗುಷ್ಠದ ತುದಿಯಲ್ಲಿ ನಿಂತು ತಪಸ್ಸನ್ನು ಮಾಡಿ ಶಂಕರನನ್ನು ಸಂತೋಷಪಡಿಸಿದೆ.

ಏಕಂ ವರ್ಷಶತಂ ಚೈವ ಫಲಾಹಾರಸ್ತದಾಽಭವಮ್ ।
ದ್ವಿತೀಯಂ ಶೀರ್ಣಪರ್ಣಾಶೀ ತೃತೀಯಂ ಚಾಂಬುಭೋಜನಃ ।
ಶತಾನಿ ಸಪ್ತ ಚೈವಾಹಂ ವಾಯುಭಕ್ಷಸ್ತದಾಽಭವಮ್ ॥೧೨೬॥

ಆಗ ನೂರು ವರ್ಷಗಳ ಕಾಲ ನಾನು ಕೇವಲ ಫಲಭಕ್ಷಕನಾಗಿದ್ದೆ. ಎರಡನೆಯ ನೂರು ವರ್ಷಗಳ ಕಾಲ ಕೆಳಗೆ ಬಿದ್ದ ಎಲೆಗಳನ್ನು ಆಹಾರವಾಗಿ ಸ್ವೀಕರಿಸಿದೆ. ಮೂರನೆಯ ನೂರು ವರ್ಷಗಳು ಕೇವಲ ಜಲವನ್ನು ಸ್ವೀಕರಿಸಿದೆ. ಅನಂತರ ಏಳು ನೂರು ವರ್ಷಗಳ ಕಾಲ ವಾಯುಭಕ್ಷಕನಾಗಿದ್ದೆ.

ತತಃ ಪ್ರೀತೋ ಮಹಾದೇವಃ ಸರ್ವಲೋಕೇಶ್ವರಃ ಪ್ರಭುಃ ।
ಶಕ್ರರೂಪಂ ಸ ಕೃತ್ವಾ ತು ಸರ್ವೈರ್ದೇವಗಣೈರ್ವೃತಃ ।
ಸಹಸ್ರಾಕ್ಷಸ್ತದಾ ಭೂತ್ವಾ ವಜ್ರಪಾಣಿರ್ಮಹಾಯಶಾಃ ॥೧೨೭॥

ಸುಧಾವದಾತಂ ರಕ್ತಾಕ್ಷಂ ಸ್ತಬ್ಧಕರ್ಣಂ ಮದೋತ್ಕಟಮ್ ।
ಆವೇಷ್ಟಿತಕರಂ ರೌದ್ರಂ ಚತುರ್ದಂಷ್ಟ್ರಂ ಮಹಾಗಜಮ್ ॥೧೨೮॥

ಸಮಾಸ್ಥಿತಶ್ಚ ಭಗವಾನ್ ದೀಪ್ಯಮಾನಃ ಸ್ವತೇಜಸಾ ।
ಆಜಗಾಮ ಕಿರೀಟೀ ತು ಹಾರಕೇಯೂರಭೂಷಿತಃ ॥೧೨೯॥

ಆಗ ಪ್ರಸನ್ನನಾದ, ಸರ್ವಲೋಕೇಶ್ವರನಾದ, ಪ್ರಭುವಾದ ಮಹಾದೇವನು ಇಂದ್ರನ ರೂಪವನ್ನು ಧರಿಸಿ, ಸರ್ವದೇವಗಣಗಳಿಂದ ಕೂಡಿ, ಸಹಸ್ರಾಕ್ಷನಾಗಿ, ವಜ್ರಪಾಣಿಯಾಗಿ, ಅಮೃತದಂತೆ ಶ್ವೇತವರ್ಣದಿಂದ ಕೂಡಿದ, ಕೆಂಪಾದ ಕಣ್ಣುಗಳನ್ನು ಹೊಂದಿದ, ಅಲುಗಾಡದ ಕಿವಿಗಳನ್ನು ಹೊಂದಿದ, ಮದಭರಿತವಾದ, ಸುತ್ತಿದ ಸೊಂಡಿಲನ್ನು ಹೊಂದಿದ, ಮದೋತ್ಕಟವಾದ, ಭಯಂಕರವಾದ, ನಾಲ್ಕು ದಂತಗಳನ್ನು ಹೊಂದಿದ ಮಹಾಗಜವನ್ನು ಏರಿ, ತನ್ನ ತೇಜಸ್ಸಿನಿಂದ ಬೆಳಗುತ್ತಾ ಮಹಾಕೀರ್ತಿವಂತನೂ, ಭಗವಂತನೂ ಆದ ಶಂಕರನು ಕಿರೀಟವನ್ನು ಧರಿಸಿ, ಹಾರ-ಕೇಯೂರ ಭೂಷಿತನಾಗಿ ನನ್ನ ಬಳಿಗೆ ಬಂದನು.

ಪಾಂಡರೇಣಾತಪತ್ರೇಣ ಧ್ರಿಯಮಾಣೇನ ಮೂರ್ಧನಿ ।
ಸೇವ್ಯಮಾನೋऽಪ್ಸರೋಭಿಶ್ಚ ದಿವ್ಯಗಂಧರ್ವನಾದಿತಃ ॥೧೩೦॥

ತಲೆಯ ಮೇಲೆ ಹಿಡಿದ ಶ್ವೇತಚ್ಛತ್ರದಿಂದ ಕೂಡಿ, ಅಪ್ಸರೆಯರಿಂದ ಸೇವಿತನಾಗಿ ದಿವ್ಯಗಂಧರ್ವರಿಂದ ಗಾನ ಮಾಡಲ್ಪಡುತ್ತಿದ್ದನು.

ತತೋ ಮಾಮಾಹ ದೇವೇಂದ್ರಃ ಪ್ರೀತಸ್ತೇऽಹಂ ದ್ವಿಜೋತ್ತಮ ।
ವರಂ ವೃಣೀಷ್ವ ಮತ್ತಸ್ತ್ವಂ ಯತ್ತೇ ಮನಸಿ ವರ್ತತೇ ॥೧೩೧॥

ಆಗ ದೇವೇಂದ್ರನಾದ ಅವನು ಎಲೈ ದ್ವಿಜಶ್ರೇಷ್ಠನೇ, ನಾನು ಪ್ರಸನ್ನನಾಗಿದ್ದೇನೆ. ನಿನ್ನ ಮನಸ್ಸಿನಲ್ಲಿರುವ ವರವನ್ನು ನನ್ನಿಂದ ಸ್ವೀಕರಿಸು ಎಂದು ಹೇಳಿದನು.

ಶಕ್ರಸ್ಯ ತು ವಚಃ ಶ್ರುತ್ವಾ ನಾಹಂ ಪ್ರೀತಮನಾऽಭವಮ್ ।
ಅಬ್ರುವಂ ಚ ತದಾ ಕೃಷ್ಣ ದೇವರಾಜಮಿದಂ ವಚಃ ॥೧೩೨॥

ಇಂದ್ರನ ಮಾತನ್ನು ಕೇಳಿ ನನಗೆ ಸಂತೋಷವಾಗಲಿಲ್ಲ. ಎಲೈ ಕೃಷ್ಣನೇ, ಆಗ ನಾನು ದೇವರಾಜನನ್ನು ಕುರಿತು ಹೀಗೆ ಮಾತನಾಡಿದೆನು.

ನಾಹಂ ತ್ವತ್ತೋ ವರಾಕಾಂಕ್ಷೀ ನಾನ್ಯಸ್ಮಾದಪಿ ದೈವತಾತ್ ।
ಮನಾಕ್ ಶಕ್ರ ತ್ವಯಾ ದತ್ತಂ ತ್ರೈಲೋಕ್ಯಮಪಿ ಕಾಮಯೇ ।
ಮಹಾದೇವಾದೃತೇ ಸೌಮ್ಯ ಸತ್ಯಮೇತದ್ ಬ್ರವೀಮಿ ತೇ ॥೧೩೩॥

ಎಲೈ ಇಂದ್ರನೇ, ನಾನು ನಿನ್ನಿಂದಲಾಗಲೀ ಅಥವಾ ಬೇರೆ ದೇವತೆಯಿಂದಲಾಗಲೀ ವರವನ್ನು ಬಯಸುತ್ತಿಲ್ಲ. ಎಲೈ ಸೌಮ್ಯನೇ, ಮಹಾದೇವನ ಪ್ರಸಾದವನ್ನು ಬಿಟ್ಟು ನೀನು ಒಂದು ಪಕ್ಷ ತ್ರೈಲೋಕ್ಯವನ್ನು ಕೊಟ್ಟರೂ ಅದು ನನಗೆ ಬೇಡ. ಸತ್ಯವಾದ ಈ ಮಾತನ್ನು ನಿನಗೆ ಹೇಳುತ್ತಿದ್ದೇನೆ.

ಸತ್ಯಂ ಸತ್ಯಂ ಹಿ ನಃ ಶಕ್ರ ವಾಕ್ಯಮೇತತ್ ಸುನಿಶ್ಚಿತಮ್ ।
ನ ಯನ್ಮಹೇಶ್ವರಂ ಮುಕ್ತ್ವಾ ಕಥಾಽನ್ಯಾ ಮಮ ರೋಚತೇ ॥೧೩೪॥

ಎಲೈ ಶಕ್ರನೇ, ಈ ನನ್ನ ಮಾತು ನಿಶ್ಚಿತವಾಗಿ ಸತ್ಯ, ಸತ್ಯ. ಮಹೇಶ್ವರನ ಕಥೆಯನ್ನು ಬಿಟ್ಟು ಬೇರೆ ಯಾವ ಕಥೆಯೂ ನನಗೆ ಇಷ್ಟವಾಗುವುದಿಲ್ಲ.

ಪಶುಪತಿವಚನಾದ್ ಭವಾಮಿ ಸದ್ಯಃ
ಕೃಮಿರಥ ವಾ ತರುರಪ್ಯನೇಕಶಾಖಃ ।
ಅಪಶುಪತಿವರಪ್ರಸಾದಜಾ ಮೇ
ತ್ರಿಭುವನರಾಜ್ಯವಿಭೂತಿರಪ್ಯನಿಷ್ಟಾ ॥೧೩೫॥

ಪಶುಪತಿಯ ವಚನದಂತೆ ನಾನು ತಕ್ಷಣ ಕ್ರಿಮಿಯಾಗಲೀ, ಅನೇಕ ಶಾಖೆಯುಳ್ಳ ವೃಕ್ಷವಾಗಲೀ ಆಗುತ್ತೇನೆ. ಪಶುಪತಿಯಲ್ಲದವನ ಅನುಗ್ರಹದಿಂದ ಉಂಟಾದ ಮೂರುಲೋಕಗಳ ರಾಜ್ಯದ ಐಶ್ವರ್ಯವೂ ನನಗೆ ಇಷ್ಟವಾಗುವುದಿಲ್ಲ.

ಜನ್ಮ ಶ್ವಪಾಕಮಧ್ಯೇಽಪಿ ಮೇಽಸ್ತು ಹರಚರಣವಂದನರತಸ್ಯ ।
ಮಾ ವಾಽನೀಶ್ವರಭಕ್ತೋ ಭವಾಮಿ ಭವನೇಽಪಿ ಶಕ್ರಸ್ಯ ॥೧೩೬॥

ನನಗೆ ಶ್ವಪಚರ (ಚಂಡಾಲರ) ಮಧ್ಯದಲ್ಲಿ ಶಿವಪಾದ ವಂದನೆಯಲ್ಲಿ ರತನಾದವನ ಜನ್ಮವಾದರೂ ಇರಲಿ. ನಾನು ಈಶ್ವರ ಭಕ್ತನಾಗದೆ ಇಂದ್ರನ ಮನೆಯಲ್ಲಿಯೂ ಇರಲು ಇಷ್ಟಪಡುವುದಿಲ್ಲ.

ವಾಯ್ವಂಬುಭುಜೋಽಪಿ ಸತೋ ನರಸ್ಯ ದುಃಖಕ್ಷಯಃ ಕುತಸ್ತಸ್ಯ ।
ಭವತಿ ಹಿ ಸುರಾಸುರಗುರೌ ಯಸ್ಯ ನ ವಿಶ್ವೇಶ್ವರೇ ಭಕ್ತಿಃ ॥೧೩೭॥

ಸುರಾಸುರ ಗುರುವೂ, ವಿಶ್ವೇಶ್ವರನೂ ಆದ ಶಿವನಲ್ಲಿ ಭಕ್ತಿ ಇಲ್ಲದಿದ್ದರೆ ವಾಯುಭಕ್ಷ, ಅಬ್ಭಕ್ಷರಾಗಿ ತಪಸ್ಸನ್ನು ಮಾಡಿದರೂ ದುಃಖ ಪರಿಹಾರವು ಹೇಗೆ ಉಂಟಾದೀತು?

ಅಲಮನ್ಯಾಭಿಸ್ತೇಷಾಂ ಕಥಾಭಿರತ್ಯರ್ಥಧರ್ಮಯುಕ್ತಾಭಿಃ ।
ಯೇಷಾಂ ನ ಕ್ಷಣಮಪಿ ರುಚಿತೋ ಹರಚರಣಸ್ಮರಣವಿಚ್ಛೇದಃ ॥೧೩೮॥

ಯಾರಿಗೆ ಶಿವನ ಪಾದಸ್ಮರಣೆಯ ವಿಚ್ಛೇದವು ಒಂದು ಕ್ಷಣವೂ ಇಷ್ಟವಾಗುವುದಿಲ್ಲವೋ ಅಂತಹವರಿಗೆ ಬಹಳ ಧರ್ಮದಿಂದ ಯುಕ್ತವಾದ ಬೇರೆಯ ಕಥೆಗಳಿಂದ ಆಗಬೇಕಾದುದು ಏನಿದೆ?

ಹರಚರಣನಿರತಮತಿನಾ ಭವಿತವ್ಯಮಾರ್ಜವಂ ಗುಣಂ ಪ್ರಾಪ್ಯ ।
ಸಂಸಾರಭಯಂ ನ ಭವತಿ ಹರಭಕ್ತಿರಸಾಯನಂ ಪೀತ್ವಾ ॥೧೩೯॥

ಶಿವನ ಪಾದಗಳಲ್ಲಿ ನಿರತವಾದ ಭಕ್ತಿಯುಳ್ಳವನು ಆರ್ಜವಗುಣದಿಂದ ಕೂಡಿರಬೇಕು. ಅವನ ಭಕ್ತಿರಸಾಯನವನ್ನು ಪಾನ ಮಾಡಿದವನಿಗೆ ಸಂಸಾರದ ಭಯವಿಲ್ಲ.

ದಿವಸಂ ದಿವಸಾರ್ಧಂ ವಾ ಮುಹೂರ್ತಂ ವಾ ಕ್ಷಣಂ ಲವಮ್ ।
ನ ಹ್ಯಲಬ್ಧಪ್ರಸಾದಸ್ಯ ಭಕ್ತಿರ್ಭವತಿ ಶಂಕರೇ ॥೧೪೦॥

ಶಿವನ ಅನುಗ್ರಹವಿಲ್ಲದೆ ಒಂದು ದಿವಸವಾಗಲೀ, ಅರ್ಧದಿವಸವಾಗಲೀ, ಒಂದು ಮುಹೂರ್ತವಾಗಲೀ, ಒಂದು ಕ್ಷಣವಾಗಲೀ, ಒಂದು ಲವವಾಗಲೀ ಶಂಕರನಲ್ಲಿ ಭಕ್ತಿಯುಂಟಾಗುವುದಿಲ್ಲ.

ಅಪಿ ಕೀಟಃ ಪತಂಗೋ ವಾ ಭವೇಯಂ ಶಂಕರಾಜ್ಞಯಾ ।
ನ ತು ಶಕ್ರ ತ್ವಯಾ ದತ್ತಂ ತ್ರೈಲೋಕ್ಯಮಪಿ ಕಾಮಯೇ ॥೧೪೧॥

ಶಂಕರನ ಆದೇಶದಂತೆ ನಾನು ಕೀಟವಾಗಲೀ, ಪತಂಗವಾಗಲೀ ಆದೇನು. ಎಲೈ ಇಂದ್ರನೇ, ನಿನ್ನಿಂದ ದತ್ತವಾದ ಮೂರು ಲೋಕಗಳನ್ನೂ ನಾನು ಬಯಸುವುದಿಲ್ಲ.

ಶ್ವಾಽಪಿ ಮಹೇಶ್ವರವಚನಾದ್ ಭವಾಮಿ ಸ ಹಿ ನಃ ಪರಃ ಕಾಮಃ ।
ತ್ರಿದಶಗಣರಾಜ್ಯಮಪಿ ಖಲು ನೇಚ್ಛಾಮ್ಯಮಹೇಶ್ವರಾಜ್ಞಪ್ತಮ್ ॥೧೪೨॥

ಮಹೇಶ್ವರನ ವಚನದಂತೆ ನಾನು ನಾಯಿಯಾದರೂ ಆಗುತ್ತೇನೆ. ಅದು ನನ್ನ ಶ್ರೇಷ್ಠವಾದ ಆಸೆ. ಮಹೇಶ್ವರನಿಂದ ಭಿನ್ನನಾದವನು ನೀಡಿದ ಸ್ವರ್ಗಲೋಕದ ರಾಜ್ಯವೂ ನನಗೆ ಬೇಡ.

ನ ನಾಕಪೃಷ್ಠಂ ನ ಚ ದೇವರಾಜ್ಯಂ
ನ ಬ್ರಹ್ಮಲೋಕಂ ನ ಚ ನಿಷ್ಕಲತ್ವಮ್ ।
ನ ಸರ್ವಕಾಮಾನಖಿಲಾನ್ ವೃಣೋಮಿ
ಹರಸ್ಯ ದಾಸತ್ವಮಹಂ ವೃಣೋಮಿ ॥೧೪೩॥

ಸ್ವರ್ಗಲೋಕವಾಗಲೀ ದೇವರಾಜ್ಯವಾಗಲೀ, ಬ್ರಹ್ಮಲೋಕವಾಗಲೀ, ಮೋಕ್ಷವಾಗಲೀ ನನಗೆ ಬೇಡ. ಯಾವ ಘೋರವಸ್ತುಗಳೂ ನನಗೆ ಬೇಡ. ಶಿವನ ದಾಸ್ಯವನ್ನು ಮಾತ್ರ ಬಯಸುತ್ತೇನೆ.

ಯಾವಚ್ಛಶಾಂಕಶಕಲಾಂಶಕಾಮಬದ್ಧಮೌಲಿ-
ರ್ನ ಪ್ರೀಯತೇ ಪಶುಪತಿರ್ಭಗವಾನ್ಮಮೇಶಃ ।
ತಾವಜ್ಜರಾಮರಣಜನ್ಮಶತಾಭಿಘಾತೈ-
ರ್ದುಃಖಾನಿ ದೇಹವಿಹಿತಾನಿ ಸಮುದ್ವಹಾಮಿ ॥೧೪೪॥

ಎಲ್ಲಿಯವರೆಗೆ ಶಶಾಂಕದಳ ಶೇಖರನಾದ, ಈಶ್ವರನಾದ, ಭಗವಂತನಾದ ಪಶುಪತಿಯು ಪ್ರಸನ್ನನಾಗುವುದಿಲ್ಲವೋ ಅಲ್ಲಿಯವರೆಗೆ ದೇಹಸಂಬಂಧದಿಂದ ಉಂಟಾದ ಜರಾ-ಮರಣ-ಜನನ ಮೊದಲಾದ ನೂರಾರು ದುಃಖಗಳನ್ನು ಅನುಭವಿಸುತ್ತೇನೆ.

ದಿವಸಕರಶಶಾಂಕವಹ್ನಿದೀಪ್ತಂ
ತ್ರಿಭುವನಸಾರಮಪಾರಮಾದ್ಯಮೇಕಮ್ ।
ಅಜರಮಮರಮಪ್ರಸಾದ್ಯ ರುದ್ರಂ
ಜಗತಿ ಪುಮಾನಿಹ ಕೋ ಲಭೇತ ಶಾಂತಿಮ್ ॥೧೪೫॥

ಸೂರ್ಯ-ಚಂದ್ರ-ಅಗ್ನಿಗಳ ಕಾಂತಿಯನ್ನು ಹೊಂದಿದ, ಮೂರುಲೋಕಗಳಲ್ಲಿ ಶ್ರೇಷ್ಠನಾದ, ಅಪಾರನಾದ, ಆದ್ಯನಾದ, ಮುಖ್ಯನಾದ, ಜರಾ-ಮರಣರಹಿತನಾದ ಶಿವನನ್ನು ಪ್ರಸನ್ನಗೊಳಿಸದೆ ಈ ಜಗತ್ತಿನಲ್ಲಿ ಯಾವ ಪುರುಷನು ಸುಖವನ್ನು ಪಡೆದಾನು?

ಶಕ್ರಃ

ಕಃ ಪುನಸ್ತವ ಹೇತುರ್ವೈ ಈಶೇ ಕಾರಣಕಾರಣೇ ।
ಯೇನ ದೇವಾದೃತೇಽನ್ಯಸ್ಮಾತ್ಪ್ರಸಾದಂ ನಾಭಿಕಾಂಕ್ಷಸಿ ॥೧೪೬॥

ಶಕ್ರ– ಎಲ್ಲ ಕಾರಣಗಳಿಗೂ ಕಾರಣನಾದ ಈಶ್ವರನಲ್ಲಿ, ಬೇರೆ ದೇವತೆಗಳಿಂದ ಏನು ಬಂದರೂ ಬಯಸದಂತಹ, ನಿನಗೆ ಇಷ್ಟು ಭಕ್ತಿಗೆ ಕಾರಣವಾದುದು ಏನು?

ಉಪಮನ್ಯುಃ

ಹೇತುಭಿರ್ವಾ ಕಿಮನ್ಯೈಸ್ತೇ ಈಶಃ ಕಾರಣಕಾರಣಮ್ ।
ನ ಶುಶ್ರುಮ ಯದನ್ಯಸ್ಯ ಲಿಂಗಮಭ್ಯರ್ಚ್ಯತೇ ಸುರೈಃ ॥೧೪೭॥

ಉಪಮನ್ಯು– ಬೇರೆ ಹೇತುಗಳನ್ನು ಹೇಳಿ ನಿನಗೆ ಏನು ಪ್ರಯೋಜನ? ಶಿವನು ಎಲ್ಲ ಕಾರಣಗಳಿಗೂ ಕಾರಣನಾಗಿದ್ದಾನೆ. ಶಿವನನ್ನು ಬಿಟ್ಟು ಯಾವನ ಲಿಂಗವು ದೇವತೆಗಳಿಂದ ಪೂಜಿಸಲ್ಪಡುವುದನ್ನು ನಾವು ಕೇಳಿದ್ದೇವೆ?

ಕಸ್ಯಾನ್ಯಸ್ಯ ಸುರೈಃ ಸರ್ವೈರ್ಲಿಂಗಂ ಮುಕ್ತ್ವಾ ಮಹೇಶ್ವರಮ್ ।
ಅರ್ಚ್ಯತೇಽರ್ಚಿತಪೂರ್ವಂ ವಾ ಬ್ರೂಹಿ ಯದ್ಯಸ್ತಿ ತೇ ಶ್ರುತಿಃ ॥೧೪೮॥

ಶಿವನನ್ನು ಬಿಟ್ಟು ಬೇರೆ ಯಾವ ದೇವತೆಗಳ ಲಿಂಗವು ಎಲ್ಲ ದೇವತೆಗಳಿಂದಲೂ ಪೂಜಿಸಲ್ಪಡುತ್ತದೆ ಅಥವಾ ಹಿಂದೆ ಪೂಜಿಸಲ್ಪಟ್ಟಿದೆ ಎಂದು ನೀನೇನಾದರೂ ಕೇಳಿದ್ದರೆ ನನಗೆ ಹೇಳು.

ಯಸ್ಯ ಬ್ರಹ್ಮಾ ಚ ವಿಷ್ಣುಶ್ಚ ತ್ವಂ ಚಾಪಿ ಸಹ ದೈವತೈಃ ।
ಅರ್ಚಯಧ್ವಂ ಸದಾ ಲಿಂಗಂ ತಸ್ಮಾಚ್ಛ್ರೇಷ್ಠತಮೋ ಹಿ ಸಃ ॥೧೪೯॥

ಯಾವನ ಲಿಂಗವನ್ನು ಬ್ರಹ್ಮನೂ, ವಿಷ್ಣುವೂ, ದೇವತೆಗಳಿಂದ ಕೂಡಿದ ನೀನೂ ಸಹ ಪೂಜಿಸುತ್ತಿರುವಿರೋ ಆ ಕಾರಣದಿಂದ ಅವನು ಅತ್ಯಂತ ಶ್ರೇಷ್ಠನಾದವನು.

ಸದಸದ್ವ್ಯಕ್ತಮವ್ಯಕ್ತಂ ಯಮಾಹುರ್ಬ್ರಹ್ಮವಾದಿನಃ ।
ನಿತ್ಯಮೇಕಮನೇಕಂ ಚ ವರಂ ತಸ್ಮಾದ್ ವೃಣೇಮಹೇ ॥೧೫೦॥

ಅವನನ್ನು ಬಹ್ಮವಾದಿಗಳು ಕಾರ್ಯಕಾರಣ ರೂಪನೆಂದೂ ನಿತ್ಯಾನಿತ್ಯರೂಪನೆಂದೂ ಹೇಳುತ್ತಾರೆ. ಅವನು ನಿತ್ಯವೂ ಏಕನೂ, ಅನೇಕನೂ ಆಗಿದ್ದಾನೆ. ಆ ಕಾರಣದಿಂದ ಅವನಿಂದ ವರವನ್ನು ಬೇಡುತ್ತೇವೆ.

ಅನಾದಿಮಧ್ಯಪರ್ಯಂತಂ ಜ್ಞಾನೈಶ್ವರ್ಯಮಚಿಂತಿತಮ್ ।
ಆತ್ಮಾನಂ ಪರಮಂ ಯಸ್ಮಾದ್ ವರಂ ತಸ್ಮಾದ್ ವೃಣೇಮಹೇ ॥೧೫೧॥

ಆದಿ-ಮಧ್ಯಾಂತರಹಿತನಾದ, ಅಚಿಂತ್ಯವಾದ ಜ್ಞಾನೈಶ್ವರ್ಯ ಸಂಪನ್ನನಾದ, ಪರಮಾತ್ಮನಾದ ಅವನಿಂದ ನಾವು ವರವನ್ನು ಬೇಡುತ್ತೇವೆ.

ತಮಸಃ ಪರಮಂ ಜ್ಯೋತಿಸ್ತಪಸ್ತದ್ ವೃತ್ತಿನಾಂ ಪರಮ್ ।
ಯಂ ಜ್ಞಾತ್ವಾ ನಾನುಶೋಚಂತಿ ವರಂ ತಸ್ಮಾದ್ ವೃಣೇಮಹೇ ॥೧೫೨॥

ಅವನು ತಮಸ್ಸಿನ ಆಚೆಗಿರುವ ಜ್ಯೋತಿ. ಅವನು ತಪೋರೂಪನಾದವನು. ಅವನನ್ನು ತಿಳಿದವರು ಶೋಕನಿರ್ಮುಕ್ತರಾಗುತ್ತಾರೆ. ಅವನಿಂದ ವರವನ್ನು ಬೇಡುತ್ತೇವೆ.

ಭೂತಭಾವನಭಾವಜ್ಞಂ ಸರ್ವಭೂತಾಭಿಭಾವನಮ್ ।
ಸರ್ವಗಂ ಸರ್ವದಂ ದೇವಂ ಪೂಜಯಾಮಿ ಪುರಂದರ ॥೧೫೩॥

ಅವನು ಭೂತಭಾವನನಾದವನು. ಎಲ್ಲರ ಭಾವವನ್ನು ತಿಳಿದವನು. ಸರ್ವಭೂತಗಳನ್ನು ಸೋಲಿಸುವವನು. ಸರ್ವತ್ರ ವ್ಯಾಪ್ತನಾದವನು. ಸರ್ವವನ್ನೂ ಕೊಡುವವನು. ಎಲೈ ಪುರಂದರನೇ, ಅಂತಹ ದೇವನನ್ನು ಪೂಜಿಸುತ್ತೇನೆ.

ಹೇತುವಾದೈರ್ವಿನಿರ್ಮುಕ್ತಂ ಸಾಂಖ್ಯಯೋಗಾರ್ಥದಂ ಪರಮ್ ।
ಯಮುಪಾಸಂತಿ ತತ್ತ್ವಜ್ಞಾ ವರಂ ತಸ್ಮಾದ್ ವೃಣೇಮಹೇ ॥೧೫೪॥

ಶುಷ್ಕವಾದಗಳಿಂದ ವಿನಿರ್ಮುಕ್ತನಾದ, ಸಾಂಖ್ಯಯೋಗಗಳಲ್ಲಿ ಹೇಳಿದ ಫಲವನ್ನು ಕೊಡುವ, ಶ್ರೇಷ್ಠನಾದ ಯಾವನನ್ನು ತತ್ತ್ವಜ್ಞಾನಿಗಳು ಉಪಾಸನೆ ಮಾಡುತ್ತಾರೆಯೋ, ಅವನಿಂದ ವರವನ್ನು ಬೇಡುತ್ತೇವೆ.

ಮಘವನ್ ಮಘವಾತ್ಮಾನಂ ಯಂ ವದಂತಿ ಸುರೇಶ್ವರಮ್ ।
ಸರ್ವಭೂತಗುರುಂ ದೇವಂ ವರಂ ತಸ್ಮಾದ್ ವೃಣೇಮಹೇ ॥೧೫೫॥

ಇಂದ್ರನೇ, ಯಾವನನ್ನು ಸುರೇಶ್ವರನೆಂದೂ, ಇಂದ್ರನ ಸ್ವಾಮಿಯೆಂದೂ, ಸರ್ವಭೂತಗುರುವೆಂದೂ, ಶ್ರೇಷ್ಠನಾದ ದೇವನೆಂದು ಹೇಳುತ್ತಾರೆಯೋ ಅವನಿಂದ ವರವನ್ನು ಪಡೆಯುತ್ತೇವೆ.

ಯತ್ಪೂರ್ವಮಸೃಜದ್ ದೇವಂ ಬ್ರಹ್ಮಾಣಂ ಲೋಕಭಾವನಮ್ ।
ಅಖಿಂಡಮಾಕಾಶಮಾಪೂರ್ಯ ವರಂ ತಸ್ಮಾದ್ ವೃಣೇಮಹೇ ॥೧೫೬॥

ಅವನು ಅಖಂಡವಾದ ಆಕಾಶವನ್ನು ವ್ಯಾಪಿಸಿ, ಲೋಕಸೃಷ್ಟಿಕರ್ತನಾದ ಬ್ರಹ್ಮನನ್ನು ಮೊದಲು ಸೃಷ್ಟಿಸಿದುದರಿಂದ ಅವನಿಂದ ವರವನ್ನು ಬೇಡುತ್ತೇವೆ.

ಅಗ್ನಿರಾಪೋಽನಿಲಃ ಪೃಥ್ವೀ ಖಂ ಬುದ್ಧಿಶ್ಚ ಮನೋ ಮಹಾನ್ ।
ಸ್ರಷ್ಟಾ ಚೈಷಾಂ ಭವೇದ್ ಯೋಽನ್ಯೋ ಬ್ರೂಹಿ ಕಃ ಪರಮೇಶ್ವರಾತ್ ॥

ಅಗ್ನಿ, ಜಲ, ಅನಿಲ, ಭೂಮಿ, ಆಕಾಶ, ಬುದ್ಧಿ, ಮನಸ್ಸು, ಮಹತತ್ತ್ವ ಇವುಗಳಿಗೆ ಪರಮೇಶ್ವರನನ್ನು ಬಿಟ್ಟು ಬೇರೆ ಯಾವನು ಸೃಷ್ಟಿಕರ್ತನಾಗುತ್ತಾನೆ ಎಂದು ಹೇಳು.

ಮನೋ ಮತಿರಹಂಕಾರಸ್ತನ್ಮಾತ್ರಾಣೀಂದ್ರಿಯಾಣಿ ಚ ।
ಬ್ರೂಹಿ ಚೈಷಾಂ ಭವೇಚ್ಚಕ್ರ ಕೋಽನ್ಯೋಸ್ತಿ ಪರಮಂ ಶಿವಾತ್ ॥೧೫೮॥

ಎಲೈ ಇಂದ್ರನೇ, ಮನಸ್ಸು, ಬುದ್ಧಿ, ಅಹಂಕಾರ, ತನ್ಮಾತ್ರಗಳು, ಇಂದ್ರಿಯಗಳು ಇವುಗಳಿಗೆ ಶಿವನನ್ನು ಬಿಟ್ಟು ಪ್ರವೃತ್ತಿಯನ್ನು ಉಂಟು ಮಾಡುವವನು ಯಾವನು ಇದ್ದಾನೆ ಎಂದು ಹೇಳು.

ಸ್ರಷ್ಟಾರಂ ಭುವನಸ್ಯೇಹ ವದಂತೀಹ ಪಿತಾಮಹಮ್ ।
ಆರಾಧ್ಯ ಸ ತು ದೇವೇಶಮಶ್ನುತೇ ಮಹತೀಂ ಶ್ರಿಯಮ್ ॥೧೫೯॥

ಪಿತಾಮಹನಾದ ಬ್ರಹ್ಮನನ್ನು ಲೋಕವನ್ನು ಸೃಷ್ಟಿಸುವವನು ಎಂದು ಹೇಳುತ್ತಾರೆ. ಆ ಬ್ರಹ್ಮನಾದರೂ ದೇವೇಶ್ವರನಾದ ಶಿವನನ್ನು ಆರಾಧಿಸಿ, ದೊಡ್ಡ ಸಂಪತ್ತನ್ನು ಪಡೆದಿದ್ದಾನೆ.

ಭಗವತ್ಯುತ್ತಮೈಶ್ವರ್ಯಂ ಬ್ರಹ್ಮವಿಷ್ಣುಪುರೋಗಮಮ್ ।
ವಿದ್ಯತೇ ವೈ ಮಹಾದೇವಾದ್ ಬ್ರೂಹಿ ಕಃ ಪರಮೇಶ್ವರಾತ್ ॥೧೬೦॥

ಭಗವಂತನಾದ ಶಿವನಲ್ಲಿ ಬ್ರಹ್ಮ, ವಿಷ್ಣುಗಳ ಸಂಪತ್ತನ್ನು ಮೀರಿಸಿದ ಐಶ್ವರ್ಯವಿದೆ. ಆದ್ದರಿಂದ ಪರಮೇಶ್ವರನಾದ ಮಹಾದೇವನನ್ನು ಬಿಟ್ಟು ಬೇರೆ ಯಾವನು ಉತ್ತಮನಿದ್ದಾನೆಂದು ಹೇಳು.

ದೈತ್ಯದಾನವಮುಖ್ಯಾನಾಮಾಧಿಪತ್ಯಾರಿಮರ್ದನಾತ್ ।
ಕೋಽನ್ಯಃ ಶಕ್ನೋತಿ ದೇವೇಶಾದ್ ದಿತೇಃ ಸಂಪಾದಿತುಂ ಸುತಾನ್ ॥

ದೈತ್ಯ-ದಾನವ ಶ್ರೇಷ್ಠರ ಆಧಿಪತ್ಯವು ಅರಿಮರ್ದನನಾದ ಶಿವನಿಂದ ಉಂಟಾಗುತ್ತದೆ. ದಿತಿಯ ಪುತ್ರರಿಗೆ ದೇವೇಶನಾದ ಶಿವನನ್ನು ಬಿಟ್ಟು ಬೇರೆ ಯಾವನು ಇಂತಹ ಸಂಪತ್ತನ್ನು ಸಂಪಾದಿಸಿಕೊಡುತ್ತಾನೆ.

ದಿಕ್‌ಕಾಲಸೂರ್ಯತೇಜಾಂಸಿ ಗ್ರಹವಾಯ್ವಿಂದುತಾರಕಾಃ ।
ವಿದ್ಧಿ ತ್ವೇತೇ ಮಹಾದೇವಾದ್ ಬ್ರೂಹಿ ಕಃ ಪರಮೇಶ್ವರಾತ್ ॥೧೬೨॥

ದಿಕ್ಕುಗಳು, ಕಾಲ, ಸೂರ್ಯ, ತೇಜಸ್ಸುಗಳು, ಗ್ರಹಗಳು, ವಾಯು, ಚಂದ್ರ, ನಕ್ಷತ್ರಗಳು - ಇವೆಲ್ಲವೂ ಮಹಾದೇವನನಿಂದಲೇ ಉಂಟಾಗಿವೆ. ಪರಮೇಶ್ವರನಿಗಿಂತ ಉತ್ತಮರು ಯಾರು ಎಂದು ಹೇಳು.

ಅಥೋತ್ಪತ್ತಿವಿನಾಶೇ ವಾ ಯಜ್ಞಸ್ಯ ತ್ರಿಪುರಸ್ಯ ವಾ ।
ದೈತ್ಯದಾನವಮುಖ್ಯಾನಾಮಾಧಿಪತ್ಯಾರಿಮರ್ದನಃ ॥೧೬೩॥

ಯಜ್ಞ-ದಾನಗಳ, ತ್ರಿಪುರಗಳ ಉತ್ಪತ್ತಿ-ವಿನಾಶಗಳು ಅವನಿಂದ ಆಗುತ್ತವೆ. ದೈತ್ಯ-ದಾನವ ಶ್ರೇಷ್ಠರ ಆಧಿಪತ್ಯಗಳು ಅರಿಮರ್ದನನಾದ ಅವನಿಂದ ಉಂಟಾಗುತ್ತವೆ.

ಕಿಂ ಚಾತ್ರ ಬಹುಭಿಃ ಸೂಕ್ಷ್ಮೈರ್ಹೇತುವಾದ್ಯೈಃ ಪುರಂದರ ।
ಸಹಸ್ರನಯನಂ ದೃಷ್ಟ್ವಾ ತ್ವಾಮೇವ ಸುರಸತ್ತಮ ॥೧೬೪॥

ಪೂಜಿತಂ ಸಿದ್ಧಗಂಧರ್ವೈರ್ದೇವೈಶ್ಚ ಋಷಿಭಿಸ್ತಥಾ ।
ದೇವದೇವಪ್ರಸಾದೇನ ತತ್ಸರ್ವಂ ಕುಶಿಕೋತ್ತಮ ॥೧೬೫॥

ಅವ್ಯಕ್ತಮುಕ್ತಕೇಶಾಯ ಸರ್ವಗಸ್ಯೇದಮಾತ್ಮಕಮ್ ।
ಚೇತನಾಚೇತನಾದ್ಯೇಷು ಶಕ್ರ ವಿದ್ಧಿ ಮಹೇಶ್ವರಾತ್ ॥೧೬೬॥

ಎಲೈ ಪುರಂದರನೇ, ಬಹಳ ಯುಕ್ತಿಗಳನ್ನು ಹೇಳಿ ಏನು ಪ್ರಯೋಜನ? ಎಲೈ ಸುರಶ್ರೇಷ್ಠನೇ, ಸಿದ್ಧ-ಗಂಧರ್ವರಿಂದಲೂ, ಋಷಿಗಳಿಂದಲೂ ಪೂಜಿತವಾದ ನಿನ್ನನ್ನೇ ನೋಡು. ಎಲೈ ಕುಶಿಕಶ್ರೇಷ್ಠನೇ, ಇವೆಲ್ಲವೂ ದೇವದೇವನಾದ ಶಿವನ ಪ್ರಸಾದದಿಂದಲೇ ಉಂಟಾಗಿವೆ. ಅವ್ಯಕ್ತನೂ, ಮುಕ್ತಕೇಶನೂ, ಸರ್ವತ್ರ ವ್ಯಾಪ್ತನೂ ಆದ ಅವನು ಈ ಜಗತ್ತಿಗೆ ಸ್ವಾಮಿಯಾದವನು. ಜಡ-ಚೇತನಗಳಿಂದ ನಡೆಯುವ ವ್ಯಾಪಾರಗಳೆಲ್ಲವೂ ಮಹೇಶ್ವರನಿಂದಲೇ ಉಂಟಾಗುವುದೆಂದು ತಿಳಿ.

ಭುವಾದ್ಯೇಷು ಮಹಾಂತೇಷು ಲೋಕಾಲೋಕಾಂತರೇಷು ಚ ।
ದ್ವೀಪಸ್ಥಾನೇಷು ಮೇರೋಶ್ಚ ವಿಭವೇಷ್ವಂತರೇಷು ಚ ।
ಭಗವನ್ ಮಘವನ್ ದೇವಂ ವದಂತೇ ತತ್ತ್ವದರ್ಶಿನಃ ॥೧೬೭॥

ಪೂಜ್ಯನಾದ ಇಂದ್ರನೇ, ದೊಡ್ಡಲೋಕಗಳಲ್ಲಿ, ಲೋಕಾಲೋಕ ಪರ್ವತಗಳ ಮಧ್ಯದಲ್ಲಿ, ದ್ವೀಪಸ್ಥಾನಗಳಲ್ಲಿ, ಮೇರುಪರ್ವತದ ವೈಭವಗಳಲ್ಲಿ, ಅದರ ಮಧ್ಯದ ಪ್ರದೇಶಗಳಲ್ಲಿ ತತ್ತ್ವಜ್ಞಾನಿಯಾದ ವೇದಜ್ಞರು ಶಿವನನ್ನೇ ಕೊಂಡಾಡುತ್ತಾರೆ.

ಯದಿ ದೇವಾಃ ಸುರಾಃ ಶಕ್ರ ಪಶ್ಯಂತ್ಯನ್ಯಾಂ ಭವಾಕೃತಿಮ್ ।
ಕಿಂ ನ ಗಚ್ಛಂತಿ ಶರಣಂ ಮರ್ದಿತಾಶ್ಚಾಸುರೈಃ ಸುರಾಃ ॥೧೬೮॥

ಎಲೈ ಇಂದ್ರನೇ, ದೇವತೆಗಳು ಶಿವನಂತೆ ತಮ್ಮನ್ನು ಸಲಹುವ ಇನ್ನೊಬ್ಬ ವ್ಯಕ್ತಿಯನ್ನು ನೋಡಿದರೆ ಅಸುರರಿಂದ ಪೀಡಿತರಾದ ಅವರು ಏಕೆ ಆ ವ್ಯಕ್ತಿಗೆ ಶರಣು ಹೊಂದುವುದಿಲ್ಲ?

ಅಭಿಘಾತೇಷು ದೇವಾನಾಂ ಸಯಕ್ಷೋರಗರಾಕ್ಷಸಾಮ್ ।
ಪರಸ್ಪರವಿನಾಶೇಷು ಸ್ವಸ್ಥಾನೈಶ್ವರ್ಯದೋ ಭವಃ ॥೧೬೯॥

ದೇವತೆಗಳಿಗೆ, ಯಕ್ಷ-ಉರಗ-ರಾಕ್ಷಸರಿಗೆ, ಪರಸ್ಪರ ವಿರೋಧವುಂಟಾಗಿ ಪರಸ್ಪರವಾಗಿ ವಿನಾಶವನ್ನು ಹೊಂದುವಾಗ ಅವರಿಗೆ ಅವರ ಸ್ಥಾನವನ್ನೂ, ಐಶ್ವರ್ಯವನ್ನೂ ಕೊಡುವವನು ಶಿವ.

ಅಂಧಕಸ್ಯಾಥ ಶುಕ್ರಸ್ಯ ದುಂದುಭೇರ್ಮಹಿಷಸ್ಯ ಚ ।
ಯಕ್ಷೇಂದ್ರಬಲರಕ್ಷಸ್ಸು ನಿವಾತಕವಚೇಷು ಚ ।
ವರದಾನಾವಘಾತಾಯ ಬ್ರೂಹಿ ಕೋಽನ್ಯೋ ಮಹೇಶ್ವರಾತ್ ॥೧೭೦॥

ಅಂಧಕಾಸುರನಿಗೆ, ಶುಕ್ರನಿಗೆ, ದುಂದುಬಿಗೆ, ಮಹಿಷಾಸುರನಿಗೆ, ಯಕ್ಷೇಂದ್ರ-ರಾಕ್ಷಸರಿಗೆ, ನಿವಾತ-ಕವಚರಿಗೆ ಕೊಟ್ಟ ವರವನ್ನು ವಿನಾಶಗೊಳಿಸಲು ಪರಮೇಶ್ವರನನ್ನು ಬಿಟ್ಟು ಬೇರೆ ಯಾವನು ಸಮರ್ಥನೆಂದು ಹೇಳು.

ಸುರಾಸುರಗುರೋರ್ವಕ್ತ್ರೇ ಕಸ್ಯ ರೇತಃ ಪುರಾ ಹುತಮ್ ।
ಕಸ್ಯ ವಾಽನ್ಯಸ್ಯ ರೇತಸ್ತದ್ಯೇನ ಹೈಮೋ ಗಿರಿಃ ಕೃತಃ ॥೧೭೧॥

ಸುರಾಸುರ ದೇವನಾದ ಅಗ್ನಿಯ ಮುಖದಲ್ಲಿ ಯಾವನ ರೇತಸ್ಸು ಹಿಂದೆ ಹಾಕಲ್ಪಟ್ಟಿತು? ಬೇರೆ ಯಾವನ ರೇತಸ್ಸಿನಿಂದ ಸುವರ್ಣಮಯವಾದ ಪರ್ವತವು ಉಂಟಾಗುತ್ತದೆ?

ದಿಗ್ವಾಸಾಃ ಕೀರ್ತ್ಯತೇ ಕೋಽನ್ಯೋ ಲೋಕೇ ಕಶ್ಚೋರ್ಧ್ವರೇತಸಃ ।
ಕಸ್ಯ ಚಾರ್ಧೇ ಸ್ಥಿತಾ ಕಾಂತಾ ಅನಂಗಃ ಕೇನ ನಿರ್ಜಿತಃ ॥೧೭೨॥

ಲೋಕದಲ್ಲಿ ದಿಗಂಬರನೆಂದೂ, ಊರ್ಧ್ವರೇತಸ್ಕನೆಂದೂ ಬೇರೆ ಯಾವನನ್ನು ಕೊಂಡಾಡುತ್ತಾರೆ? ಯಾವನ ಅರ್ಧಭಾಗದಲ್ಲಿ ಅವನ ಪತ್ನಿ ಇದ್ದಾಳೆ? ಮನ್ಮಥನನ್ನು ಜಯಿಸಿದವನು ಯಾರು?

ಬ್ರೂಹೀಂದ್ರ ಪರಮಂ ಸ್ಥಾನಂ ಕಸ್ಯ ದೇವೈಃ ಪ್ರಶಸ್ಯತೇ ।
ಶ್ಮಶಾನೇ ಕಸ್ಯ ಕ್ರೀಡಾರ್ಥಂ ನೃತ್ತೇ ವಾ ಕೋಽಭಿಭಾಷ್ಯತೇ ॥೧೭೩॥

ಎಲೈ ಇಂದ್ರನೇ, ಯಾವನ ಶ್ರೇಷ್ಠವಾದ ಸ್ಥಾನವು ದೇವತೆಗಳಿಂದ ಪ್ರಶಂಸಿಸಲ್ಪಡುತ್ತದೆ ಎಂದು ಹೇಳು. ಕ್ರೀಡಾರ್ಥವಾಗಿ ಸ್ಮಶಾನದಲ್ಲಿ ನೃತ್ಯವನ್ನು ಮಾಡುವ ಯಾವನು ವರ್ಣಿಸಲ್ಪಡುತ್ತಾನೆ?

ಕಸ್ಯೈಶ್ವರ್ಯಂ ಸಮಾನಂ ಚ ಭೂತೈಃ ಕೋ ವಾಽಪಿ ಕೀಡತೇ ।
ಕಸ್ಯ ತುಲ್ಯಬಲಾ ದೇವಗಣಾಶ್ಚೈಶ್ವರ್ಯದರ್ಪಿತಾಃ ॥೧೭೪॥

ಯಾವನ ಐಶ್ವರ್ಯವು ಶಿವನ ಐಶ್ವರ್ಯಕ್ಕೆ ಸಮಾನವಾಗಿದೆ? ಯಾವನು ಪಂಚಭೂತಗಳ ಜೊತೆಗೆ ಆಟವಾಡುತ್ತಾನೆ? ಐಶ್ವರ್ಯದಿಂದ ದರ್ಪವನ್ನು ಹೊಂದಿದ ದೇವತಾ ಸಮೂಹವು ಯಾವನಿಗೆ ಸಮಾನವಾದ ಬಲವನ್ನು ಹೊಂದಿದೆ?

ಘುಷ್ಯತೇ ಹ್ಯಚಲಂ ಸ್ಥಾನಂ ಕಸ್ಯ ತ್ರೈಲೋಕ್ಯಪೂಜಿತಮ್ ।
ವರ್ಷತೇ ತಪತೇ ಕೋಽನ್ಯೋ ಜ್ವಲತೇ ತೇಜಸಾ ಚ ಕಃ ॥೧೭೫॥

ಯಾವನ ಸ್ಥಾನವಾದ ಪರ್ವತವು ತ್ರೈಲೋಕ್ಯಜಿತವಾಗಿ ಪೂಜಿಸಲ್ಪಡುತ್ತದೆ? ಶಿವನನ್ನು ಬಿಟ್ಟು ಯಾವನು ಮಳೆಯನ್ನು ಸುರಿಸುತ್ತಾನೆ? ಬಿಸಿಲನ್ನು ಕೊಡುತ್ತಾನೆ? ತೇಜಸ್ಸಿನಿಂದ ಜ್ವಲಿಸುತ್ತಾನೆ?

ಕಸ್ಮಾದೋಷಧಿಸಂಪತ್ತಿಃ ಕೋ ವಾ ಧಾರಯತೇ ವಸು ।
ಪ್ರಕಾಮಂ ಕ್ರೀಡತೇ ಕೋ ವಾ ತ್ರೈಲೋಕ್ಯೇ ಸಚರಾಚರೇ ॥೧೭೬॥

ಓಷಧಿ-ವನಸ್ಪತಿಗಳ ಸಂಪತ್ತು ಯಾವನಿಂದ ಉಂಟಾಗುತ್ತದೆ? ಭೂಮಿಯ ಸಂಪತ್ತನ್ನು ಯಾವನು ಧರಿಸುತ್ತಾನೆ? ಜಲಾಚರಗಳಿಂದ ಸಹಿತವಾದ ಮೂರುಲೋಕಗಳಲ್ಲಿ ತನ್ನ ಮನಸ್ಸಿಗೆ ಬಂದಂತೆ ಬೇರೆ ಯಾವನು ಕ್ರೀಡಿಸುತ್ತಾನೆ?

ಜ್ಞಾನಸಿದ್ಧಿಕ್ರಿಯಾಯೋಗೈಃ ಸೇವ್ಯಮಾನಶ್ಚ ಯೋಗಿಭಿಃ ।
ಋಷಿಗಂಧರ್ವಸಿದ್ಧೈಶ್ಚ ವಿಹಿತಂ ಕಾರಣಂ ಪರಮ್ ॥೧೭೭॥

ಮುನಿಗಳಿಂದಲೂ, ಋಷಿ-ಗಂಧರ್ವ-ಸಿದ್ಧರಿಂದಲೂ ಜ್ಞಾನಯೋಗ, ಸಿದ್ಧಿಯೋಗ, ಕ್ರಿಯಾಯೋಗಗಳಿಂದ ಸಿದ್ಧಿಸಲ್ಪಡುವ ಅವನು ಜಗತ್ತಿಗೆ ಶ್ರೇಷ್ಠವಾದ ಕಾರಣನಾಗಿ ವಿಹಿತನಾಗಿದ್ದಾನೆ.

ಕರ್ಮಯಜ್ಞಕ್ರಿಯಾಯೋಗೈಃ ಸೇವ್ಯಮಾನಃ ಸುರಾಸುರೈಃ ।
ನಿತ್ಯಂ ಕರ್ಮಫಲೈರ್ಹೀನಂ ತಮಹಂ ಕಾರಣಂ ವದೇ ॥೧೭೮॥

ಸುರಾಸುರರಿಂದ ಕರ್ಮಗಳಿಂದಲೂ, ಯಜ್ಞಗಳಿಂದಲೂ, ಕ್ರಿಯಾಯೋಗಗಳಿಂದಲೂ ಸೇವಿಸಲ್ಪಡುವ ಸ್ವತಃ ನಿತ್ಯವೂ ಕರ್ಮಫಲ ರಹಿತನಾದ ಶಿವನು ಜಗತ್ತಿಗೆ ಕಾರಣನೆಂದು ಹೇಳುತ್ತೇನೆ.

ಸ್ಥೂಲಂ ಸೂಕ್ಷ್ಮಮನೌಪಮ್ಯಮಗ್ರಾಹ್ಯಂ ಗುಣಗೋಚರಮ್ ।
ಗುಣಹೀನಂ ಗುಣಾಧ್ಯಕ್ಷಂ ಪರಂ ಮಾಹೇಶ್ವರಂ ಪದಮ್ ॥೧೭೯॥

ಮಹೇಶ್ವರನ ಸ್ವರೂಪವು ಸ್ಥೂಲವಾದುದು, ಸೂಕ್ಷ್ಮವಾದುದು, ಅಸದೃಶವಾದುದು, ಬುದ್ಧಿಯಿಂದ ತಿಳಿಯಲು ಅಸಾಧ್ಯವಾದುದು. ಸದ್ಗುಣಗಳಿಗೆ ಗೋಚರವಾಗುವಂತಹದು. ಸ್ವತಃ ಗುಣಗಳಿಂದ ಹೀನವಾದುದು ಮತ್ತು ಎಲ್ಲ ಗುಣಗಳನ್ನು ನೇರವಾಗಿ ನೋಡುವಂತಹದು.

ವಿಶ್ವೇಶಂ ಕಾರಣಗುರುಂ ಲೋಕಾಲೋಕಾಂತಕಾರಣಮ್ ।
ಭೂತಾಭೂತಭವಿಷ್ಯಚ್ಚ ಜನಕಂ ಸರ್ವಕಾರಣಮ್ ॥೧೮೦॥

ಜಗತ್ತಿಗೆ ಒಡೆಯನಾದ ಕಾರಣವಾದುದು, ಗುರುವಾದುದು, ಲೋಕಾಲೋಕ ವಿನಾಶಕ್ಕೆ ಕಾರಣವಾದುದು. ಭೂತ-ಭವಿಷ್ಯತ್- ವರ್ತಮಾನವಾದ ಸರ್ವಪದಾರ್ಥಗಳಿಗೆ ಕಾರಣವಾದುದು.

ಅಕ್ಷರಕ್ಷರಮವ್ಯಕ್ತಂ ವಿದ್ಯಾವಿದ್ಯೇ ಕೃತಾಕೃತೇ ।
ಧರ್ಮಾಧರ್ಮೌ ಯತಃ ಶಕ್ರ ತಮಹಂ ಕಾರಣಂ ಬ್ರುವೇ ॥೧೮೧॥

ಎಲೈ ಶಕ್ರನೇ, ಅದು ಅಕ್ಷರವಾದುದು, ಕ್ಷರವಾದುದು, ಅವ್ಯಕ್ತವಾದುದು, ವಿದ್ಯೆ, ಅವಿದ್ಯೆ, ಕೃತ, ಅಕೃತ, ಧರ್ಮ ಮತ್ತು ಅಧರ್ಮಗಳು ಯಾವನಿಂದ ಉಂಟಾಗುತ್ತವೆಯೋ ಅವನನ್ನು ಕಾರಣನೆಂದು ಹೇಳುತ್ತೇನೆ.

ಪ್ರತ್ಯಕ್ಷಮಿಹ ದೇವೇಂದ್ರ ಪಶ್ಯ ಲಿಂಗಂ ಭಗಾಂಕಿತಮ್ ।
ದೇವದೇವೇನ ರುದ್ರೇಣ ಸೃಷ್ಟಿಸಂಹಾರಹೇತುನಾ ॥೧೮೨॥

ಎಲೈ ದೇವೇಂದ್ರನೇ, ದೇವದೇವನೂ, ಸೃಷ್ಟಿಸಂಹಾರ ಕಾರಣನೂ ಆದ ರುದ್ರನ ಭಗಾಂಕಿತವಾದ ಲಿಂಗವು ಇಲ್ಲಿ ಪ್ರತ್ಯಕ್ಷವಾಗಿರುವುದನ್ನು ನೋಡು.

ಮಾತ್ರಾ ಪೂರ್ವಂ ಮಮಾಖ್ಯಾತಂ ಕಾರಣಂ ಲೋಕಲಕ್ಷಣಮ್ ।
ನಾಸ್ತಿ ಚೇಶಾತ್ ಪರಂ ಶಕ್ರ ತಂ ಪ್ರಪದ್ಯ ಯದೀಚ್ಛಸಿ ॥೧೮೩॥

ನನ್ನ ತಾಯಿಯು ಹಿಂದೆ ನನಗೆ ಅವನನ್ನು ಕಾರಣವೆಂದೂ ಮತ್ತು ತ್ರಿಲೋಕ ರೂಪವನ್ನು ಧರಿಸಿದವನು ಎಂದೂ ಹೇಳಿದಳು. ಎಲೈ ಇಂದ್ರನೇ, ಶಿವನಿಗಿಂತ ಶ್ರೇಷ್ಠವಾದುದು ಇಲ್ಲ. ನಿನಗೆ ಮನಸ್ಸಿದ್ದರೆ ಅವನಿಗೆ ಶರಣಾಗತನಾಗು.

ಪ್ರತ್ಯಕ್ಷಂ ನ ತು ತೇ ಸುರೇಶ ವಿದಿತಂ ಸಂಯೋಗಲಿಂಗೋದ್ಭವಮ್ ।
ತ್ರೈಲೋಕ್ಯಂ ಸವಿಕಾರನಿರ್ಗುಣಗಣಂ ಬ್ರಹ್ಮಾದಿ ರೇತೋದ್ಭವಮ್ ॥

ಯದ್ ಬ್ರಹ್ಮೇಂದ್ರಹುತಾಶವಿಷ್ಣುಸಹಿತಾ ದೇವಾಶ್ಚ ದೈತ್ಯೇಶ್ವರಾಃ
ನಾನ್ಯತ್ಕಾಮಸಹಸ್ರಕಲ್ಪಿತಧಿಯಃ ಶಂಸಂತಿ ಈಶಾತ್ ಪರಮ್ ॥೧೮೫॥

ಎಲೈ ಸುರೇಶನೇ, ಮೂರುಲೋಕಗಳೂ ಲಿಂಗಸಂಯೋಗದಿಂದ ಉಂಟಾಗಿವೆ ಎಂಬುದು ನಿನಗೆ ಪ್ರತ್ಯಕ್ಷವಾಗಿ ತಿಳಿದಿದೆ. ತ್ರಿಲೋಕಸಹಿತರಾದ ಬ್ರಹ್ಮಾದಿ

ಸರ್ವಗಣಗಳೂ ಅವನ ರೇತಸ್ಸಿನಿಂದ ಜನಿಸಿದವುಗಳು. ಸಹಸ್ರ ಕಾಮಗಳನ್ನು ಹೊಂದಿರುವ ಬ್ರಹ್ಮೇಂದ್ರ, ಅಗ್ನಿ, ವಿಷ್ಣು ಸಹಿತರಾದ ಸಕಲ ದೇವತೆಗಳು, ಮತ್ತು ದೈತ್ಯೇಶ್ವರರು ಶಿವನಿಗಿಂತಲೂ ಶ್ರೇಷ್ಠವಾದುದು ಇಲ್ಲವೆಂದು ಪ್ರಶಂಸಿಸುತ್ತಾರೆ.

ತಂ ದೇವಂ ಸಚರಾಚರಸ್ಯ ಜಗತೋ ವ್ಯಾಖ್ಯಾತವೇದ್ಯೋತ್ತಮಮ್ ।
ಕಾಮಾರ್ಥೀ ವರಯಾಮಿ ಸಂಯತಮನಾ ಮೋಕ್ಷಾಯ ಸದ್ಯಃ ಶಿವಮ್ ॥

ಚರಾಚರವಾದ ಜಗತ್ತಿನಲ್ಲಿ ಜ್ಞೇಯ ವಸ್ತುಗಳಲ್ಲಿ ಅತ್ಯಂತ ಶ್ರೇಷ್ಠನೆಂದು ಹೇಳಲ್ಪಟ್ಟ ಆ ದೇವನನ್ನು ಕಾಮಾರ್ಥಿಯಾದ ನಾನು ಮನೋನಿಗ್ರಹವನ್ನು ಮಾಡಿಕೊಂಡು ಮೋಕ್ಷಕ್ಕಾಗಿ ತಕ್ಷಣದಲ್ಲಿ ವರವನ್ನು ಬೇಡುತ್ತೇನೆ.

ಹೇತುಭಿರ್ವಾ ಕಿಮನ್ಯೈ ರ್ಯೈರೀಶಃ ಕಾರಣಕಾರಣಮ್ ।
ನ ಶುಶ್ರುಮ ಯದನ್ಯಸ್ಯ ಲಿಂಗಮಭ್ಯರ್ಚಿತಂ ಸುರೈಃ ॥೧೮೭॥

ಅನೇಕ ಯುಕ್ತಿಗಳನ್ನು ಹೇಳಿ ಏನು ಪ್ರಯೋಜನ? ಈಶ್ವರನೇ ಕಾರಣಕಾರಣನು. ಬೇರೆ ಯಾವನ ಲಿಂಗವಾದರೂ ದೇವತೆಗಳಿಂದ ಪೂಜಿಸಲ್ಪಡುತ್ತದೆ ಎಂಬುದನ್ನು ನಾವು ಕೇಳಿಲ್ಲ.

ಕಸ್ಯಾನ್ಯಸ್ಯ ಸುರೈಃ ಸರ್ವೈರ್ಲಿಂಗಂ ಮುಕ್ತ್ವಾ ಮಹೇಶ್ವರಮ್ ।
ಅರ್ಚ್ಯತೇಽರ್ಚಿತಪೂರ್ವಂ ವಾ ಬ್ರೂಹಿ ಯದ್ಯಸ್ತಿ ತೇ ಶ್ರುತಿಃ ॥೧೮೮॥

ಈಶ್ವರನನ್ನು ಬಿಟ್ಟು ಬೇರೆ ಯಾವನ ಲಿಂಗವು ದೇವತೆಗಳಿಂದ ಹಿಂದೆ ಅರ್ಚಿಸಲ್ಪಟ್ಟಿದೆ ಅಥವಾ ಈಗ ಅರ್ಚಿಸಲ್ಪಡುತ್ತದೆ ಎಂದು ನೀನೇನಾದರೂ ಕೇಳಿದ್ದರೆ ನನಗೆ ಹೇಳು.

ಯಸ್ಯ ಬ್ರಹ್ಮಾ ಚ ವಿಷ್ಣುಶ್ಚ ತ್ವಂ ಚಾಪಿ ಸಹದೈವತೈಃ ।
ಅರ್ಚಯಧ್ವಂ ಸದಾ ಲಿಂಗಂ ತಸ್ಮಾಚ್ಛ್ರೇಷ್ಠತಮೋ ಹಿ ಸಃ ॥೧೮೯॥

ಯಾವನ ಲಿಂಗವನ್ನು ಬ್ರಹ್ಮನೂ, ವಿಷ್ಣುವೂ, ಸರ್ವದೇವತೆಗಳ ಸಹಿತನಾದ ನೀನೂ ಸದಾ ಪೂಜಿಸುತ್ತಿರುವಿರೋ ಆ ಕಾರಣದಿಂದ ಅವನು ಸರ್ವಶ್ರೇಷ್ಠನಾದವನು.

ನ ಪದ್ಮಾಂಕಾ ನ ಚಕ್ರಾಂಕಾ ನ ವಜ್ರಾಂಕಾ ಯತಃ ಪ್ರಜಾಃ ।
ಲಿಂಗಾಂಕಾ ಚ ಭಗಾಂಕಾ ಚ ತಸ್ಮಾನ್ಮಾಹೇಶ್ವರೀ ಪ್ರಜಾಃ ॥೧೯೦॥

ಜನಿಸಿದ ಪ್ರಜೆಗಳಲ್ಲಿ ಪದ್ಮದ ಚಿಹ್ನೆಯಾಗಲೀ, ಚಕ್ರದ ಚಿಹ್ನೆಯಾಗಲೀ, ವಜ್ರದ ಚಿಹ್ನೆಯಾಗಲೀ ಇರುವುದಿಲ್ಲ. ಆದರೆ ಲಿಂಗದ ಚಿಹ್ನೆಯೂ, ಭಗದ ಚಿಹ್ನೆಯೂ ಇರುತ್ತದೆ. ಆದ್ದರಿಂದ ಎಲ್ಲ ಪ್ರಜೆಗಳು ಮಹೇಶ್ವರನಿಂದ ಜನಿಸಿದವರು.

ದೇವ್ಯಾಃ ಕಾರಣರೂಪಭಾವಜನಿತಾಃ ಸರ್ವಾ ಭಗಾಂಕಾಃ ಸ್ತ್ರಿಯೋ
ಲಿಂಗೇನಾಪಿ ಹರಸ್ಯ ಸರ್ವಪುರುಷಾಃ ಪ್ರತ್ಯಕ್ಷಚಿಹ್ನೀಕೃತಾಃ ।
ಯೋಽನ್ಯತ್ ಕಾರಣಮೀಶ್ವರಾತ್ ಪ್ರವದತೇ ದೇವ್ಯಾ ಚ ಯನ್ನಾಂಕಿತಂ
ತ್ರೈಲೋಕ್ಯೇ ಸಚರಾಚರೇ ಸ ತು ಪುಮಾನ್ ಬಾಹ್ಯೋ ಭವೇದ್ ದುರ್ಮತಿಃ ॥

ಎಲ್ಲ ಸ್ತ್ರೀಯರೂ ಕಾರಣರೂಪಳಾದ ದೇವಿಯ ಚಿಹ್ನೆಯಾದ ಭಗದಿಂದ ಚಿಹ್ನಿತರಾಗಿದ್ದಾರೆ. ಎಲ್ಲ ಪುರುಷರೂ ಈಶ್ವರನ ಚಿಹ್ನೆಯಾದ ಲಿಂಗದಿಂದ ಪ್ರತ್ಯಕ್ಷವಾಗಿ ಚಿಹ್ನಿತರಾಗಿದ್ದಾರೆ. ಹೀಗೆ ಪ್ರಜೆಗಳು ದೇವಿಯ ಚಿಹ್ನೆಯಿಂದಾಗಲೀ, ಶಿವನ ಚಿಹ್ನೆಯಿಂದಾಗಲೀ ಅಂಕಿತರಾಗಿರುವಾಗ ಈಶ್ವರನನ್ನು ಬಿಟ್ಟು ಜಗತ್ತಿಗೆ ಬೇರೆ ಕಾರಣನಿದ್ದಾನೆಂದು ಹೇಳುವ ದುರ್ಮತಿಯಾದ ಅವನು ಚರಾಚರ ಪ್ರಾಣಿಗಳಿಂದ ಸಹಿತವಾದ ತ್ರೈಲೋಕ್ಯದಲ್ಲಿ ಬಾಹ್ಯನೆನಿಸುತ್ತಾನೆ.

ಪುಲ್ಲಿಂಗಂ ಸರ್ವಮೀಶಾನಂ ಸ್ತ್ರೀಲಿಂಗಂ ವಿದ್ಧಿ ಚಾಪ್ಯುಮಾಮ್ ।
ದ್ವಾಭ್ಯಾಂ ತನುಭ್ಯಾಂ ವ್ಯಾಪ್ತಂ ಹಿ ಚರಾಚರಮಿದಂ ಜಗತ್ ॥೧೯೨॥

ಪುಲ್ಲಿಂಗ ಎಲ್ಲವನ್ನೂ ಈಶ್ವರನೆಂದು ತಿಳಿ. ಸ್ತ್ರೀಲಿಂಗವನ್ನು ಪಾರ್ವತಿ ಎಂದು ತಿಳಿ. ಎರಡು ಶರೀರಗಳಿಂದ ಶಿವ-ಪಾರ್ವತಿಯರಿಂದ ಚರಾಚರಾತ್ಮಕವಾದ ಈ ಜಗತ್ತು ವ್ಯಾಪ್ತವಾಗಿದೆ.

ತಸ್ಮಾದ್ವರಮಹಂ ಕಾಂಕ್ಷೇ ನಿಧನಂ ವಾಪಿ ಕೌಶಿಕ ।
ಗಚ್ಛ ವಾ ತಿಷ್ಠ ವಾ ಶಕ್ರ ಯಥೇಷ್ಟಂ ಬಲಸೂದನ ॥೧೯೩॥

ಆದ್ದರಿಂದ ಎಲೈ ಕೌಶಿಕನೇ, ನಾನು ವರವನ್ನಾಗಲೀ, ವಧೆಯನ್ನಾಗಲೀ ಶಿವನಿಂದ ಬಯಸುತ್ತೇನೆ. ಎಲೈ ಬಲಸೂದನನೇ, ನಿನ್ನ ಮನಸ್ಸಿಗೆ ಬಂದಂತೆ ಇಲ್ಲಿಯೇ ಇರು ಅಥವಾ ಹೊರಟು ಹೋಗು.

ಕಾಮಮೇಷ ವರೋ ಮೇಽಸ್ತು ಶಾಪೋ ವಾಪಿ ಮಹೇಶ್ವರಾತ್ ।
ನ ಚಾನ್ಯಾಂ ದೇವತಾಂ ಕಾಂಕ್ಷೇ ಸರ್ವಕಾಮಫಲಾನ್ಯಪಿ ॥೧೯೪॥

ನನಗೆ ಶಿವನಿಂದ ವರವಾದರೂ ಇರಲಿ ಅಥವಾ ಶಾಪವಾದರೂ ಇರಲೀ ಅದು ನನಗೆ ಇಷ್ಟವಾದುದು. ನಾನು ಬೇರೆ ದೇವತೆಯನ್ನಾಗಲೀ, ಆ ದೇವತೆಯಿಂದ ಸರ್ವಕಾಮಫಲಗಳನ್ನಾಗಲೀ ಆಶಿಸುವುದಿಲ್ಲ.

ಏವಮುಕ್ತ್ವಾ ತು ದೇವೇಂದ್ರಂ ದುಃಖಾದಾಕುಲಿತೇಂದ್ರಿಯಃ ।
ನ ಪ್ರಸೀದತಿ ಮೇ ರುದ್ರಃ ಕಿಮೇತದಿತಿ ಚಿಂತಯನ್ ।
ಅಥಾಪಶ್ಯಂ ಕ್ಷಣೇನೈವ ತಮೇವೈರಾವತಂ ಪುನಃ ॥೧೯೫॥

ಹೀಗೆ ದೇವೇಂದ್ರನನ್ನು ಕುರಿತು ಹೇಳಿ, ದುಃಖದಿಂದ ಕೂಡಿದ ಮನಸ್ಸುಳ್ಳವನಾಗಿ, ಇದೇನು, ರುದ್ರನು ನನಗೆ ಪ್ರಸನ್ನನಾಗುತ್ತಿಲ್ಲ ಎಂದು ಚಿಂತಿಸುತ್ತಾ ಅನಂತರ ಒಂದು ಕ್ಷಣದಲ್ಲಿಯೇ ಅದೇ ಐರಾವತವನ್ನು ಪುನಃ ನೋಡಿದೆನು.

ಹಂಸಕುಂದೇಂದುಸದೃಶಂ ಮೃಣಾಲರಜತಪ್ರಭಮ್ ।
ವೃಷರೂಪಧರಂ ಸಾಕ್ಷಾತ್ ಕ್ಷೀರೋದಮಿವ ಸಾಗರಮ್ ॥೧೯೬॥

ಕೃಷ್ಣಪುಚ್ಛಂ ಮಹಾಕಾಯಂ ಮಧುಪಿಂಗಲಲೋಚನಮ್ ।
ವಜ್ರಸಾರಮಯೈಃ ಶೃಂಗೈರ್ನಿಷ್ಪತ್ತಕನಕಪ್ರಭೈಃ ॥೧೯೭॥

ತೀಕ್ಷ್ಣೈರಮೃದುರಕ್ತಾಗ್ರೈರುತ್ಕಿರಂತಮಿವಾವನಿಮ್ ।
ಜಾಂಬೂನದೇನ ದಾಮ್ನಾ ಚ ಸರ್ವತಃ ಸಮಲಂಕೃತಮ್ ॥೧೯೮॥

ರಕ್ತಾಕ್ಷಂ ಸುಮಹಾನಾಸಂ ಸುಕರ್ಣಂ ಸುಕಟೀತಟಮ್ ।
ಸುಪಾರ್ಶ್ವಂ ವಿಪುಲಸ್ಕಂಧಂ ಸುರೂಪಂ ಚಾರುದರ್ಶನಮ್ ॥೧೯೯॥

ಹಂಸಪಕ್ಷಿ, ಪುಷ್ಪ ಸದೃಶವಾದ, ಮೃಣಾಲ, ಚಂದ್ರರಿಗೆ ರಜತಕಾಂತಿಯಂತೆ ಶ್ವೇತವರ್ಣದಿಂದ ಕೂಡಿದ, ಸಾಕ್ಷಾತ್ ಕ್ಷೀರ ಸಮುದ್ರದಂತೆ ವಿಶ್ವರೂಪವನ್ನು ಧರಿಸಿದ, ಕೃಷ್ಣ ಪುಚ್ಛವನ್ನೂ, ದೊಡ್ಡ ಶರೀರವನ್ನೂ, ಜೇನಿನಂತೆ ಪಿಂಗಲವರ್ಣದ ಲೋಚನವನ್ನೂ, ಚಿನ್ನದಂತೆ ಹೊಳೆಯುವ ವಜ್ರಸಾರದಂತಿರುವ ಶೃಂಗಗಳನ್ನೂ,

ತೀಕ್ಷ್ಣವೂ, ಒರಟೂ, ಕೆಂಪೂ ಆದ ತುದಿಯುಳ್ಳ ಪಾದತಳದಿಂದ ಭೂಮಿಯ ಮಣ್ಣನ್ನು ಎಬ್ಬಿಸುತ್ತಿದ್ದಂತಹ, ಸುವರ್ಣಮಯವಾದ ಹಗ್ಗದಿಂದ ಭೂಷಿತವಾದಂತಹ, ಕೆಂಪಾದ ಕಣ್ಣುಳ್ಳ, ದೊಡ್ಡ ನಾಸಿಕವುಳ್ಳ, ಒಳ್ಳೆಯ ಕರ್ಣವನ್ನು, ಕಟಿ ಪ್ರದೇಶವನ್ನು, ಪಾರ್ಶ್ವ ಪ್ರದೇಶವನ್ನು, ವಿಸ್ತಾರವಾದ ಭುಜವನ್ನು, ಮನೋಹರ ರೂಪವುಳ್ಳ ವೃಷಭವನ್ನು (ಐರಾವತದ ಸ್ಥಾನದಲ್ಲಿ) ನೋಡಿದೆನು.

ಕಕುದಂ ತಸ್ಯ ಚಾಭಾತಿ ಸ್ಕಂಧಮಾಪೂರ್ಯ ವಿಷ್ಠಿತಮ್ ।
ತುಷಾರಗಿರಿಕೂಟಾಭಂ ಸಿತಾಭ್ರಶಿಖರೋಪಮಮ್ ॥೨೦೦॥

ಭುಜಪ್ರದೇಶವನ್ನೆಲ್ಲ ಆವರಿಸಿಕೊಂಡಿರುವ ಆ ವೃಷಭದ ಹಿಣಿಲು ಹಿಮಾಲಯ ಪರ್ವತದಂತೆ ಬಿಳಿಯ ಮೋಡದ ಶಿಖರದಂತೆ ಇದ್ದಿತು.

ತಮಾಸ್ಥಿತಶ್ಚ ಭಗವಾನ್ ದೇವದೇವಃ ಸಹೋಮಯಾ ।
ಅಶೋಭತ ಮಹಾದೇವಃ ಪೌರ್ಣಮಾಸ್ಯಾಮಿವೋಡುರಾಟ್ ॥೨೦೧॥

ಆ ವೃಷಭದ ಮೇಲೆ ಭಗವಂತನಾದ, ದೇವದೇವನಾದ ಮಹಾದೇವನು ಉಮೆಯ ಸಹಿತನಾಗಿ ಪೌರ್ಣಮಾಸಿಯ ಚಂದ್ರನಂತೆ ಶೋಭಿಸಿದನು.

ತಸ್ಯ ತೇಜೋಭವೋ ವಹ್ನಿಃ ಸಮೇಘಃ ಸ್ತನಯಿತ್ನುಮಾನ್ ।
ಸಹಸ್ರಮಿವ ಸೂರ್ಯಾಣಾಂ ಸರ್ವಮಾವೃತ್ಯ ತಿಷ್ಠತಿ ॥೨೦೨॥

ಅವನ ತೇಜಸ್ಸಿನಿಂದ ವಹ್ನಿಯೂ, ಮೇಘವೂ, ಗುಡುಗುಗಳೂ ಉಂಟಾದವು. ಅವನ ತೇಜಸ್ಸು ಸಹಸ್ರ ಸೂರ್ಯರ ಪ್ರಭೆಯಂತೆ ಎಲ್ಲವನ್ನೂ ಆವರಿಸಿ ನಿಂತಿತು.

ಈಶ್ವರಃ ಸುಮಹಾತೇಜಾಃ ಸಂವರ್ತಕ ಇವಾನಲಃ ।
ಯುಗಾಂತೇ ಸರ್ವಭೂತಾನಾಂ ದಿಧಕ್ಷುರಿವ ಚೋದ್ಯತಃ ॥೨೦೩॥

ಅತ್ಯಂತ ಮಹತ್ತಾದ ತೇಜಸ್ಸುಳ್ಳ ಈಶ್ವರನು ಯುಗಾಂತಕಾಲದಲ್ಲಿ ಸರ್ವಭೂತಗಳನ್ನೂ ದಹಿಸುವ ಸಂವರ್ತಕಾಗ್ನಿಯಂತೆ ಉದಯಿಸಿದನು.

ತೇಜಸಾ ತು ತದಾ ವ್ಯಾಪ್ತೇ ದುರ್ನಿರೀಕ್ಷ್ಯೇ ಸಮಂತತಃ ।
ಪುನರುದ್ವಿಗ್ನಹೃದಯಃ ಕಿಮೇತದಿತಿ ಚಿಂತಯಮ್ ॥೨೦೪॥

ಅವನ ತೇಜಸ್ಸಿನಿಂದ ಎಲ್ಲವೂ ವ್ಯಾಪ್ತವಾಗಿ, ಅವನನ್ನು ನೋಡಲು ಸಾಧ್ಯವಿಲ್ಲದಿದ್ದಾಗ ಪುನಃ ನಾನು ಮನಸ್ಸಿನಲ್ಲಿ ಉದ್ವೇಗಗೊಂಡು ಇದೇನೆಂದು ಚಿಂತಿಸಿದೆನು.

ಮುಹೂರ್ತಮಿವ ತತ್ತೇಜೋ ವ್ಯಾಪ್ಯ ಸರ್ವಾ ದಿಶೋ ದಶ ।
ಪ್ರಶಾಂತಂ ಚ ಕ್ಷಣೇನೈವ ದೇವದೇವಸ್ಯ ಮಾಯಯಾ ॥೨೦೫॥

ಒಂದು ಮುಹೂರ್ತದಲ್ಲಿ ಹತ್ತು ದಿಕ್ಕುಗಳನ್ನೂ ವ್ಯಾಪಿಸಿದ್ದ ಆ ತೇಜಸ್ಸು ಒಂದು ಕ್ಷಣದಲ್ಲಿಯೇ ದೇವದೇವನ ಸಾಮರ್ಥ್ಯದಿಂದ ಪ್ರಶಾಂತಗೊಂಡಿತು.

ಅಥಾಪಶ್ಯಂ ಸ್ಥಿತಂ ಸ್ಥಾಣುಂ ಭಗವಂತಂ ಮಹೇಶ್ವರಮ್ ।
ಸೌರಭೇಯಗತಂ ಸೌಮ್ಯಂ ವಿಧೂಮಮಿವ ಪಾವಕಮ್ ।
ಸಹಿತಂ ಚಾರುಸರ್ವಾಂಗ್ಯಾ ಪಾರ್ವತ್ಯಾ ಪರಮೇಶ್ವರಮ್ ॥೨೦೬॥

ಆಗ ನಾನು ವೃಷಭವನ್ನು ಏರಿ, ಧೂಮವಿಲ್ಲದ ಅಗ್ನಿಯಂತೆ ಶೋಭಿಸುತ್ತಾ, ಸೌಮ್ಯರೂಪದಲ್ಲಿ ಕುಳಿತ, ಮನೋಹರಳಾದ ಪಾರ್ವತಿಯ ಜೊತೆಗೆ ಇದ್ದ, ಭಗವಂತನಾದ ಸ್ಥಾಣುವಾದ ಪರಮೇಶ್ವರನನ್ನು ನೋಡಿದೆನು.

ನೀಲಕಂಠಂ ಮಹಾತ್ಮಾನಮಸಕ್ತಂ ತೇಜಸಾಂ ನಿಧಿಮ್ ।
ಅಷ್ಟಾದಶಭುಜಂ ಸ್ಥಾಣುಂ ಸರ್ವಾಭರಣಭೂಷಿತಮ್ ॥೨೦೭॥

ಶುಕ್ಲಾಂಬರಧರಂ ದೇವಂ ಶುಕ್ಲಮಾಲ್ಯಾನುಲೇಪನಮ್ ।
ಶುಕ್ಲಧ್ವಜಮನಾಧೃಷ್ಯಂ ಶುಕ್ಲಯಜ್ಞೋಪವೀತಿನಮ್ ॥೨೦೮॥

ನೀಲಕಂಠನೂ, ಮಹಾತ್ಮನೂ, ಸಂಗರಹಿತನೂ, ತೇಜೋನಿಧಿಯೂ, ಹದಿನೆಂಟು ಭುಜವುಳ್ಳವನೂ, ಸ್ಥಾಣುವೂ, ಸರ್ವಾಭರಣ ಭೂಷಿತನೂ, ಶ್ವೇತವಸ್ತ್ರಧಾರಿಯೂ ಶುಕ್ಲಮಾಲ್ಯವನ್ನು ಧರಿಸಿದ, ಶುಕ್ಲ ಧ್ವಜವುಳ್ಳವನೂ, ಶುಕ್ಲ ಯಜ್ಞೋಪವೀತವುಳ್ಳವನೂ, ಯಾರಿಗೂ ಸೋಲದವನೂ ಆದ ದೇವನನ್ನು ನೋಡಿದೆನು.

ಗಾಯದ್ಭಿರ್ನೃತ್ಯಮಾನೈಶ್ಚ ಉತ್ಪತದ್ಭಿರಿತಸ್ತತಃ ।
ವೃತಂ ಪಾರಿಷದೈರ್ದಿವ್ಯೈರಾತ್ಮತುಲ್ಯಪರಾಕ್ರಮೈಃ ॥೨೦೯॥

ಬಾಲೇಂದುಮಕುಟಂ ಪಾಂಡುಂ ಶರಚ್ಚಂದ್ರಮಿವೋದಿತಮ್ ।
ತ್ರಿಭಿರ್ನೇತ್ರೈಃ ಕೃತೋದ್ದ್ಯೋತಂ ತ್ರಿಭಿಃ ಸೂರ್ಯೈರಿವೋದಿತೈಃ ॥೨೧೦॥

ಗಾನವನ್ನು ಮಾಡುತ್ತಾ, ನರ್ತನವನ್ನು ಮಾಡುತ್ತಾ, ಇಲ್ಲಿಂದಲ್ಲಿಗೆ ಕುಣಿಯುತ್ತಾ ಇದ್ದ, ತನಗೆ ಸಮಾನವಾದ ಪರಾಕ್ರಮವುಳ್ಳ, ದಿವ್ಯರಾದ, ಪಾರ್ಷದರಿಂದ ಪರಿವೃತನಾದ, ಶಿರಸ್ಸಿನಲ್ಲಿ ಬಾಲಚಂದ್ರನನ್ನು ಧರಿಸಿದ ಶರತ್ಕಾಲದಲ್ಲಿ ಉದಿಸಿದ ಚಂದ್ರನಂತೆ ಪಾಂಡುವರ್ಣದ ಮೂರು ನೇತ್ರಗಳಿಂದ ನೂರು ಸೂರ್ಯರಿಂದಲೋ ಎಂಬಂತೆ ಪ್ರಕಾಶದಿಂದ ಜ್ವಲಿಸುತ್ತಿದ್ದ ಶಿವನನ್ನು ನೋಡಿದೆನು.

ಅಶೋಭತ ಚ ದೇವಸ್ಯ ಮಾಲಾ ಗಾತ್ರೇ ಸಿತಪ್ರಭೇ ।
ಜಾತರೂಪಮಯೈಃ ಪದ್ಮೈರ್ಗ್ರಥಿತಾ ರತ್ನಭೂಷಿತಾ ॥೨೧೧॥

ಬಿಳಿಯ ವರ್ಣದ ಅವನ ಶರೀರದಲ್ಲಿ ಸುವರ್ಣಮಯವಾದ ಪದ್ಮಗಳಿಂದ ಪೋಣಿಸಲ್ಪಟ್ಟ ರತ್ನಭೂಷಿತವಾದ ಮಾಲೆಯು ಶೋಭಿಸುತ್ತಿದ್ದಿತು.

ಮೂರ್ತಿಮಂತಿ ತಥಾಸ್ತ್ರಾಣಿ ಸರ್ವತೇಜೋಮಯಾನಿ ಚ ।
ಮಯಾ ದೃಷ್ಟಾನಿ ಗೋವಿಂದ ಭವಸ್ಯಾಮಿತತೇಜಸಃ ॥೨೧೨॥

ಎಲೈ ಗೋವಿಂದನೇ, ಅಮಿತಪರಾಕ್ರಮಿಯಾದ ಶಿವನ ತೇಜೋಮಯವಾದ ಶರೀರಧಾರಿಗಳಾದ ಎಲ್ಲ ಅಸ್ತ್ರಗಳನ್ನೂ ನಾನು ನೋಡಿದೆನು.

ಇಂದ್ರಾಯುಧಸಹಸ್ರಾಭಂ ಧನುಸ್ತಸ್ಯ ಮಹಾತ್ಮನಃ ।
ಪಿನಾಕಮಿತಿ ವಿಖ್ಯಾತಂ ಸ ಚ ವೈ ಪನ್ನಗೋ ಮಹಾನ್ ॥೨೧೩॥

ಸಪ್ತಶೀರ್ಷೋ ಮಹಾಕಾಯಸ್ತೀಕ್ಷ್ಣದಂಷ್ಟ್ರೋ ವಿಷೋಲ್ಬಣಃ ।
ಜ್ಯಾವೇಷ್ಟಿತಮಹಾಗ್ರೀವಃ ಸ್ಥಿತಃ ಪುರುಷವಿಗ್ರಹಃ ॥೨೧೪॥

ಸಹಸ್ರ ಇಂದ್ರಾಯುಧಗಳ ಕಾಂತಿಯನ್ನು ಹೊಂದಿದ ಆ ಮಹಾತ್ಮನ ಧನುಸ್ಸು ಪಿನಾಕ ಎಂದು ವಿಖ್ಯಾತವಾಗಿದೆ. ಅದರಲ್ಲಿ ಏಳು ಶಿರಸ್ಸುಗಳುಳ್ಳ ದೊಡ್ಡ ಶರೀರವನ್ನೂ, ತೀಕ್ಷ್ಣವಾದ ದಂಷ್ಟ್ರವನ್ನು ಹೊಂದಿ, ವಿಷೋಲ್ಬಣವಾದ ಒಂದು ಮಹಾಸರ್ಪವು ದೊಡ್ಡ ಕತ್ತನ್ನು ಹೊಂದಿದ್ದಾಗಿ ಪುರುಷರೂಪವನ್ನು ಧರಿಸಿ ಧನುಸ್ಸಿನ ಹೆದೆಯನ್ನು ಸುತ್ತಿಕೊಂಡಿದೆ.

ಶರಶ್ಚ ಸೂರ್ಯಸಂಕಾಶಃ ಕಾಲಾನಲಸಮದ್ಯುತಿಃ ।
ಏತದಸ್ತ್ರಂ ಮಹಾಘೋರಂ ದಿವ್ಯಂ ಪಾಶುಪತಂ ಮಹತ್ ॥೨೧೫॥

ಅದ್ವಿತೀಯಮನಿರ್ದೇಶ್ಯಂ ಸರ್ವಭೂತಭಯಾವಹಮ್ ।
ಸಸ್ಫುಲಿಂಗಂ ಮಹಾಕಾಯಂ ವಿಸೃಜಂತಮಿವಾನಲಮ್ ॥೨೧೬॥

ಬಾಣವಾದರೂ ಸೂರ್ಯಪ್ರಭೆಯನ್ನು ಹೊಂದಿ ಕಾಲಾಗ್ನಿಗೆ ಸಮವಾದ ಕಾಂತಿಯನ್ನು ಹೊಂದಿದೆ. ಇದು ದಿವ್ಯವೂ, ಮಹಾಘೋರವೂ ಆದ ಮಹತ್ತಾದ ಪಾಶುಪತಾಸ್ತ್ರ. ಅದು ಅದ್ವಿತೀಯವಾದುದು. ಅದನ್ನು ಹೀಗೆಯೇ ಎಂದು ವರ್ಣಿಸಲು ಸಾಧ್ಯವಿಲ್ಲ. ಎಲ್ಲ ಪ್ರಾಣಿಗಳಿಗೂ ಭಯವನ್ನುಂಟು ಮಾಡುವಂತಹದು. ದೊಡ್ಡ ಶರೀರವುಳ್ಳ ಅದು ಕಿಡಿಗಳುಳ್ಳ ಅಗ್ನಿಯನ್ನು ಕಾರುವಂತಿದೆ.

ಏಕಪಾದಂ ಮಹಾದಂಷ್ಟ್ರಂ ಸಹಸ್ರಶಿರಸೋದರಮ್ ।
ಸಹಸ್ರಭುಜಜಿಹ್ವಾಕ್ಷಮುದ್ಗಿರಂತಮಿವಾನಲಮ್ ॥೨೧೭॥

ಬ್ರಾಹ್ಮಾನ್ನಾರಾಯಣಾದ್ಯೈಂದ್ರಾದಾಗ್ನೇಯಾದಪಿ ವಾರುಣಾತ್ ।
ಯದ್ವಿಶಿಷ್ಟಂ ಮಹಾಬಾಹೋ ಸರ್ವಶಸ್ತ್ರವಿಘಾತನಮ್ ॥೨೧೮॥

ಅದಕ್ಕೆ ಒಂದು ಪಾದ, ಮಹಾದಂಷ್ಟ್ರಗಳು, ಸಹಸ್ರ ಶಿರಸ್ಸುಗಳು ಮತ್ತು ಉದರಗಳು. ಸಹಸ್ರ ಜಿಹ್ವೆಗಳು, ಭುಜಗಳು ಮತ್ತು ನೇತ್ರಗಳು. ಅಗ್ನಿಯನ್ನು ಉಗಳುವಂತಿದೆ. ಎಲೈ ಮಹಾಬಾಹುವೇ, ಅದು ಬ್ರಹ್ಮಾಸ್ತ್ರಕ್ಕಿಂತಲೂ, ನಾರಾಯಣಾಸ್ತ್ರಕ್ಕಿಂತಲೂ, ಐಂದ್ರಾಸ್ತ್ರಕ್ಕಿಂತಲೂ, ಆಗ್ನೇಯಾಸ್ತ್ರಕ್ಕಿಂತಲೂ, ವಾರುಣಾಸ್ತ್ರಕ್ಕಿಂತಲೂ ಶ್ರೇಷ್ಠವಾದುದು. ಸರ್ವಶಸ್ತ್ರವಿಘಾತಕವಾದುದು.

ಯೇನ ತತ್ತ್ರಿಪುರಂ ದಗ್ಧ್ವಾ ಕ್ಷಣಾದ್ ಭಸ್ಮೀಕೃತಂ ಪುರಾ ।
ಶರೇಣೈಕೇನ ಗೋವಿಂದ ಮಹಾದೇವೇನ ಲೀಲಯಾ ॥೨೧೯॥

ಎಲೈ ಗೋವಿಂದನೇ, ಆ ಅಸ್ತ್ರದಿಂದ ಮಹಾದೇವನು ಲೀಲೆಯಿಂದ ಒಂದೇ ಒಂದು ಬಾಣದಿಂದ ಹಿಂದೆ ತ್ರಿಪುರವನ್ನು ಸುಟ್ಟು, ಒಂದು ಕ್ಷಣದಲ್ಲಿ ಭಸ್ಮವನ್ನು ಮಾಡಿದನು.

ನಿರ್ದಹೇದ್ಧಿ ಜಗತ್ಕೃತ್ಸ್ನಂ ತ್ರೈಲೋಕ್ಯಂ ಸಚರಾಚರಮ್ ।
ಮಹೇಶ್ವರಭುಜೋತ್ಸೃಷ್ಟಂ ನಿಮೇಷಾತ್ತು ನ ಸಂಶಯಃ ॥೨೨೦॥

ಮಹೇಶ್ವರನ ಭುಜದಿಂದ ಪ್ರಯೋಗಿಸಲ್ಪಟ್ಟ ಆ ಅಸ್ತ್ರವು ಚರಾಚರ ಪ್ರಾಣಿಗಳಿಂದ ಸಹಿತವಾದ ಮೂರುಲೋಕಗಳಿಂದ ಕೂಡಿದ ಸಮಸ್ತವಾದ ಜಗತ್ತನ್ನು ಒಂದು ನಿಮಿಷದಲ್ಲಿ ದಹಿಸುವುದು ಎಂಬ ವಿಷಯದಲ್ಲಿ ಸಂಶಯವಿಲ್ಲ.

ನಾವಧ್ಯೋ ಯಸ್ಯ ಲೋಕೇಽಸ್ಮಿನ್ ಬ್ರಹ್ಮವಿಷ್ಣ್ವಸುರೇಷ್ವಪಿ ।
ತದಹಂ ದೃಷ್ಟವಾಂಸ್ತಾತ ಆಶ್ಚರ್ಯಾದ್ಭುತಮುತ್ತಮಮ್ ॥೨೨೧॥

ಆ ಅಸ್ತ್ರಕ್ಕೆ ಬ್ರಹ್ಮ-ವಿಷ್ಣು ದೇವತೆಗಳಲ್ಲಿ ಅವಧ್ಯರಾದವರು ಯಾರೂ ಇಲ್ಲ. ಎಲೈ ಪ್ರೀತಿಪಾತ್ರನೇ, ನಾನು ಅಂತಹ ಅದ್ಭುತವೂ, ಶ್ರೇಷ್ಠವೂ, ಆಶ್ಚರ್ಯಕರವೂ ಆದ ಅಸ್ತ್ರವನ್ನು ನೋಡಿದೆನು.

ಗುಹ್ಯಮಸ್ತ್ರಂ ಪರಂ ಚಾಪಿ ತತ್ತುಲ್ಯಾಧಿಕಮೇವ ವಾ ।
ಯತ್ತಚ್ಛೂಲಮಿತಿ ಖ್ಯಾತಂ ಸರ್ವಲೋಕೇಷು ಶೂಲಿನಃ ॥೨೨೨॥

ದಾರಯೇದ್ ಯನ್ಮಹೀಂ ಕೃತ್ಸ್ನಾಂ ಶೋಷಯೇದ್ ವಾ ಮಹೋದಧಿಮ್ ।
ಸಂಹರೇದ್ ವಾ ಜಗತ್ಕೃತ್ಸ್ನಂ ವಿಸೃಷ್ಟಂ ಶೂಲಪಾಣಿನಾ ॥೨೨೩॥

ಅವನಲ್ಲಿ ಇನ್ನೊಂದು ರಹಸ್ಯವಾದ ಅಸ್ತ್ರವಿದೆ. ಅದು ಪಾಶುಪತಕ್ಕೆ ಸಮಾನವಾದುದು ಅಥವಾ ಅಧಿಕವಾದುದು. ಶಿವನ ಆ ಆಯುಧವು ಶೂಲವೆಂದು ಎಲ್ಲ ಲೋಕಗಳಲ್ಲಿಯೂ ಪ್ರಖ್ಯಾತವಾಗಿದೆ. ಶೂಲಪಾಣಿಯು ಅದನ್ನು ವಿಸರ್ಜಿಸಿದರೆ ಅದು ಸಮಗ್ರವಾದ ಭೂಮಿಯನ್ನು ಸೀಳೀತು! ಮಹಾಸಾಗರವನ್ನು ಒಣಗಿಸೀತು! ಜಗತ್ತೆಲ್ಲವನ್ನೂ ನಾಶಮಾಡೀತು!

ಯೌವನಾಶ್ವೋ ಹತೋ ಯೇನ ಮಾಂಧಾತಾ ಸಬಲಃ ಪುರಾ ।
ಚಕ್ರವರ್ತೀ ಮಹಾತೇಜಾಸ್ತ್ರಿಲೋಕವಿಜಯೀ ನೃಪಃ ॥೨೨೪॥

ಚಕ್ರವರ್ತಿಯೂ, ಮಹಾತೇಜಸ್ವಿಯೂ, ತ್ರಿಲೋಕವಿಜಯಿಯೂ, ಯುವನಾಶ್ವನ ಪುತ್ರನೂ ಆದ ಮಾಂಧಾತೃ ರಾಜನು ಹಿಂದೆ ತನ್ನ ಸೈನ್ಯಸಹಿತನಾಗಿ ಅದರಿಂದ ಹತನಾದನು.

ಮಹಾಬಲೋ ಮಹಾವೀರ್ಯಃ ಶಕ್ರತುಲ್ಯಪರಾಕ್ರಮಃ ।
ಕರಸ್ಥೇನೈವ ಗೋವಿಂದ ಲವಣಸ್ಯೇವ ರಕ್ಷಸಃ ॥೨೨೫॥

ತಚ್ಛೂಲಮತಿತೀಕ್ಷ್ಣಾಗ್ರಂ ಸುಭೀಮಂ ಲೋಮಹರ್ಷಣಮ್ ।
ತ್ರಿಶಾಖೀಂ ಭ್ರುಕುಟೀಂ ಕೃತ್ವಾ ತರ್ಜಮಾನಮಿವ ಸ್ಥಿತಮ್ ॥೨೨೬॥

ಮಹಾಬಲನೂ, ಮಹಾವೀರ್ಯನೂ, ಶಕ್ರನಿಗೆ ಸಮವಾದ ಪರಾಕ್ರಮವುಳ್ಳವನೂ ಆದ ಮಾಂಧಾತೃವು ಶೂಲವು ಶಿವನ ಕೈಯಲ್ಲಿದ್ದಾಗಲೇ ಹತನಾದನು. ಲವಣಾಸುರನ ಶೂಲದಂತೆ ಆ ಶೂಲವು ಅತ್ಯಂತ ತೀಕ್ಷ್ಣವಾದ ತುದಿಯುಳ್ಳದ್ದು, ಭಯಂಕರವಾದುದು, ರೋಮಾಂಚಕಾರಿಯಾದುದು. ಮೂರು ಶಾಖೆಯನ್ನು ಹೊಂದಿ ಹುಬ್ಬನ್ನು ಗಂಟಿಕ್ಕಿದಂತೆ ಅದು ಜಗತ್ತನ್ನು ಹೆದರಿಸುವಂತಿದೆ.

ವಿಧೂಮಂ ಸಾರ್ಚಿಷಂ ಕೃಷ್ಣಂ ಕಾಲಸೂರ್ಯಮಿವೋದಿತಮ್ ।
ಸರ್ಪಹಸ್ತಮನಿರ್ದೇಶ್ಯಂ ಪಾಶಹಸ್ತಮಿವಾಂತಕಮ್ ।
ದೃಷ್ಟವಾನಸ್ಮಿ ಗೋವಿಂದ ತದಸ್ತ್ರಂ ರುದ್ರಸನ್ನಿಧೌ ॥೨೨೭॥

ಧೂಮವಿಲ್ಲದೆ ಜ್ವಾಲೆಯಿಂದ ಕೂಡಿದ, ಉದಿಸಿದ ಕಾಲಸೂರ್ಯನಂತೆ ಪ್ರಕಾಶಿಸುವ, ಕೃಷ್ಣವರ್ಣದಿಂದ ಕೂಡಿದ, ಸರ್ಪಹಸ್ತಪರಿಮಾಣವನ್ನುಳ್ಳ, ವರ್ಣಿಸಲು ಅಸಾಧ್ಯವಾದ, ಕೈಯಲ್ಲಿ ಪಾಶವನ್ನು ಹಿಡಿದ ಯಮನಂತಿರುವ, ಆ ಅಸ್ತ್ರವನ್ನು ಎಲೈ ಗೋವಿಂದನೇ, ರುದ್ರನ ಸನ್ನಿಧಿಯಲ್ಲಿ ನಾನು ನೋಡಿದೆನು.

ಪರಶುಸ್ತೀಕ್ಷ್ಣಧಾರಶ್ಚ ದತ್ತೋ ರಾಮಸ್ಯ ಯಃ ಪುರಾ ।
ಮಹಾದೇವೇನ ತುಷ್ಟೇನ ಕ್ಷತ್ರಿಯಾಣಾಂ ಕ್ಷಯಂಕರಃ ।
ಕಾರ್ತವೀರ್ಯೋ ಹತೋ ಯೇನ ಚಕ್ರವರ್ತೀ ಮಹಾಮೃಧೇ ॥೨೨೮॥

ತೀಕ್ಷ್ಣವಾದ ಅಲುಗುಳ್ಳ ಯಾವ ಪರಶುವು ಹಿಂದೆ ಮಹಾದೇವನಿಂದ ಸಂತೋಷದಿಂದ ಪರಶುರಾಮನಿಗೆ ಕೊಡಲ್ಪಟ್ಟಿತೋ ಅದು ಕ್ಷತ್ರಿಯ ವಿನಾಶಕವಾದುದು. ಅದರಿಂದ ದೊಡ್ಡ ಯುದ್ಧದಲ್ಲಿ ಚಕ್ರವರ್ತಿಯಾದ ಕಾರ್ತವೀರ್ಯನು ಹತನಾದನು.

ತ್ರಿಃಸಪ್ತಕೃತ್ವಃ ಪೃಥಿವೀ ಯೇನ ನಿಃಕ್ಷತ್ರಿಯಾ ಕೃತಾ ।
ಜಾಮದಗ್ನ್ಯೇನ ಗೋವಿಂದ ರಾಮೇಣಾಕ್ಲಿಷ್ಟಕರ್ಮಣಾ ॥೨೨೯॥

ದೀಪ್ತಧಾರಃ ಸುರೌದ್ರಾಸ್ಯಃ ಸರ್ಪಕಂಠಾಗ್ರವೇಷ್ಟಿತಃ ।
ಅಭವಚ್ಛೂಲಿನೋಽಭ್ಯಾಶೇ ದೀಪ್ತವಹ್ನಿಶಿಖೋಪಮಃ ॥೨೩೦॥

ಎಲೈ ಗೋವಿಂದನೇ, ಲೀಲೆಯಿಂದ ಕರ್ಮವನ್ನು ಮಾಡುವ ಜಮದಗ್ನಿಯ ಮಗನಾದ ಪರಶುರಾಮನಿಂದ ಅದೇ ಆಯುಧದಿಂದ ಭೂಮಿಯು ಇಪ್ಪತ್ತೊಂದು ಬಾರಿ ಕ್ಷತ್ರಿಯರಹಿತವಾಗಿ ಮಾಡಲ್ಪಟ್ಟಿತು. ದೀಪ್ತವಾದ ಅಲುಗುಳ್ಳ, ಭೀಕರವಾದ ಮುಖವುಳ್ಳ ಸರ್ಪದಿಂದ ಕಂಠಪ್ರದೇಶದಲ್ಲಿ ಸುತ್ತುವರಿಯಲ್ಪಟ್ಟ ಅಂತಹ ಜ್ವಲಿಸುವ ಅಗ್ನಿಶಿಖೆಯಂತಿರುವ ಅಂತಹ ಪರಶುವು ಶೂಲಿಯಾದ ಶಿವನ ಸಮೀಪದಲ್ಲಿ ಇದೆ.

ಅಸಂಖ್ಯೇಯಾನಿ ಚಾಸ್ತ್ರಾಣಿ ತಸ್ಯ ದಿವ್ಯಾನಿ ಧೀಮತಃ ।
ಪ್ರಾಧಾನ್ಯತೋ ಮಯೈತಾನಿ ಕೀರ್ತಿತಾನಿ ತವಾನಘ ॥೨೩೧॥

ಮೇಧಾವಿಯಾದ ಅವನ ಬಳಿ ಅಸಂಖ್ಯವಾದ ದಿವ್ಯಾಸ್ತ್ರಗಳಿವೆ. ಎಲೈ ಅನಘನೇ, ನಾನು ಪ್ರಧಾನವಾದ ಈ ಕೆಲವನ್ನು ಮಾತ್ರ ಹೇಳಿದ್ದೇನೆ.

ಸವ್ಯದೇಶೇ ತು ದೇವಸ್ಯ ಬ್ರಹ್ಮಾ ಲೋಕಪಿತಾಮಹಃ ।
ದಿವ್ಯಂ ವಿಮಾನಮಾಸ್ಥಾಯ ಹಂಸಯುಕ್ತಂ ಮನೋಜವಮ್ ॥೨೩೨॥

ವಾಮಪಾರ್ಶ್ವಗತಶ್ಚೈವ ತಥಾ ನಾರಾಯಣಃ ಸ್ಥಿತಃ ।
ವೈನತೇಯಂ ಸಮಾರುಹ್ಯ ಶಂಖಚಕ್ರಗದಾಧರಃ ॥೨೩೩॥

ಶಿವನ ಬಲಭಾಗದಲ್ಲಿ ಲೋಕಪಿತಾಮಹನಾದ ಬ್ರಹ್ಮನು ಮನೋಜವವನ್ನು ಹೊಂದಿದ, ಹಂಸಯುಕ್ತವಾದ ದಿವ್ಯವಿಮಾನವನ್ನು ಏರಿ ನಿಂತಿದ್ದಾನೆ. ಶಂಖ-ಚಕ್ರ-ಗದಾಧರನಾದ ನಾರಾಯಣನು ಗರುಡನನ್ನು ಏರಿ ಅವನ ಎಡಭಾಗದಲ್ಲಿದ್ದಾನೆ.

ಸ್ಕಂದೋ ಮಯೂರಮಾಸ್ಥಾಯ ಸ್ಥಿತೋ ದೇವ್ಯಾಃ ಸಮೀಪತಃ ।
ಶಕ್ತಿಂ ಕಂಠೇ ಸಮಾದಾಯ ದ್ವಿತೀಯ ಇವ ಭಾಸ್ಕರಃ ॥೨೩೪॥

ಪುರಸ್ತಾಚ್ಚೈವ ದೇವಸ್ಯ ನಂದಿಂ ಪಶ್ಯಾಮ್ಯವಸ್ಥಿತಮ್ ।
ಶೂಲಂ ವಿಷ್ಟಭ್ಯ ತಿಷ್ಠಂತಂ ದ್ವಿತೀಯಮಿವ ಶಂಕರಮ್ ॥೨೩೫॥

ಸ್ಕಂಧನು ನವಿಲನ್ನು ಏರಿ ಪಾರ್ವತಿಯ ಶಕ್ತಿಯನ್ನು ತನ್ನ ಕಂಠದಲ್ಲಿ ಧರಿಸಿ, ಪರ್ವತದ ಸಮೀಪದಲ್ಲಿ ಎರಡನೆಯ ಸೂರ್ಯನಂತಿದ್ದಾನೆ. ದೇವನಾದ ಶಿವನ ಮುಂಭಾಗದಲ್ಲಿ ನಂದಿಯು ಶೂಲವನ್ನು ಊರಿ ನಿಂತು ಎರಡನೆಯ ಶಂಕರನಂತೆ ಇರುವುದನ್ನು ನೋಡಿದೆನು.

ಸ್ವಾಯಂಭುವಾದ್ಯಾ ಮನವೋ ಭೃಗ್ವಾದ್ಯಾ ಋಷಯಸ್ತಥಾ ।
ಶಕ್ರಾದ್ಯಾ ದೇವತಾಶ್ಚೈವ ಸರ್ವ ಏವ ಸಮಭ್ಯಯುಃ ॥೨೩೬॥

ಸ್ವಾಯಂಭುವ ಮೊದಲಾದ ಮನುಗಳು, ಭೃಗ್ವಾದಿ ಋಷಿಗಳು, ಶಕ್ರಾದಿ ದೇವತೆಗಳು, ಎಲ್ಲರೂ ಅಲ್ಲಿಗೆ ಬಂದರು.

ತೇऽಭಿವಾದ್ಯ ಮಹಾತ್ಮಾನಂ ಪರಿವಾರ್ಯ ಸಮಂತತಃ ।
ಅಸ್ತುವನ್ ವಿವಿಧೈಃ ಸ್ತೋತ್ರೈರ್ಮಹಾದೇವಂ ಸುರಾಸ್ತದಾ ॥೨೩೭॥

ಆ ದೇವತೆಗಳು ಆ ಮಹಾತ್ಮನಾದ ಮಹಾದೇವನನ್ನು ನಮಸ್ಕರಿಸಿ, ಅವನನ್ನು ಸುತ್ತುವರಿದು, ವಿವಿಧ ಸ್ತೋತ್ರಗಳಿಂದ ಅವನನ್ನು ಸ್ತೋತ್ರ ಮಾಡಿದರು.

ಬ್ರಹ್ಮಾ ಭವಂ ತದಾ ಸ್ತುನ್ವನ್ ರಥಂತರಮುದೀರಯನ್ ।
ಜ್ಯೇಷ್ಠಸಾಮ್ನಾ ಚ ದೇವೇಶಂ ಜಗೌ ನಾರಾಯಣಸ್ತದಾ ।
ಗೃಣನ್ ಶಕ್ರಃ ಪರಂ ಬ್ರಹ್ಮ ಶತರುದ್ರೀಯಮುತ್ತಮಮ್ ॥೨೩೮॥

ಬ್ರಹ್ಮದೇವನು ಅವನನ್ನು ಸ್ತೋತ್ರ ಮಾಡುತ್ತಾ ರಥಂತರ ಸಾಮವನ್ನು ಹೇಳಿದನು. ನಾರಾಯಣನು ಆಗ ದೇವೇಶನಾದ ಶಿವನನ್ನು ಜ್ಯೇಷ್ಠಸಾಮ, ಎಂದರೆ ಬೃಹತ್‌ಸಾಮದಿಂದ ಸ್ತೋತ್ರವನ್ನು ಮಾಡಿದನು. ಇಂದ್ರನು ಪರಬ್ರಹ್ಮನನ್ನು ಸ್ತೋತ್ರ ಮಾಡುತ್ತಾ ಉತ್ತಮವಾದ ಶತರುದ್ರೀಯವನ್ನು ಪಠಿಸಿದನು.

ಬ್ರಹ್ಮಾ ನಾರಾಯಣಶ್ಚೈವ ದೇವರಾಜಶ್ಚ ಕೌಶಿಕಃ ।
ಅಶೋಭಂತ ಮಹಾತ್ಮಾನಸ್ತ್ರಯಸ್ತ್ರಯ ಇವಾಗ್ನಯಃ ॥೨೩೯॥

ಬ್ರಹ್ಮದೇವರು, ನಾರಾಯಣ ಮತ್ತು ದೇವರಾಜನಾದ ಇಂದ್ರ - ಈ ಮೂವರು ಮಹಾತ್ಮರು ಮೂರು ಅಗ್ನಿಗಳಂತೆ ಶೋಭಿಸಿದರು.

ತೇಷಾಂ ಮಧ್ಯಗತೋ ದೇವೋ ರರಾಜ ಭಗವಾನ್ ಶಿವಃ ।
ಶರದ್ಘನವಿನಿರ್ಮುಕ್ತಃ ಪರಿವಿಷ್ಟ ಇವಾಂಶುಮಾನ್ ।
ತತೋಽಹಮಸ್ತುವಂ ದೇವಂ ಸ್ತವೇನಾನೇನ ಸುವ್ರತಮ್ ॥೨೪೦॥

ಆ ಮೂವರ ಮಧ್ಯದಲ್ಲಿ ಭಗವಂತನಾದ ಶಿವನು ಶರತ್ಕಾಲದ ಮೋಡಗಳಿಂದ ನಿರ್ಮುಕ್ತನಾಗಿ, ಪರಿವೇಷವನ್ನು ಹೊಂದಿದ ಸೂರ್ಯನಂತೆ ರಾರಾಜಿಸಿದನು. ಆಗ ನಾನು ಈ ಸ್ತೋತ್ರದಿಂದ ಸುವ್ರತರಾದ ದೇವನನ್ನು ಸ್ತೋತ್ರ ಮಾಡಿದೆ.

ನಮೋ ದೇವಾಧಿದೇವಾಯ ಮಹಾದೇವಾಯ ವೈ ನಮಃ ।
ಶಕ್ರಾಯ ಶಕ್ರರೂಪಾಯ ಶಕ್ರವೇಷಧರಾಯ ಚ ॥೨೪೧॥

ದೇವಾಧಿದೇವನಿಗೆ ನಮಸ್ಕಾರ. ಮಹಾದೇವನಿಗೆ ನಮಸ್ಕಾರ. ಶಕ್ರನಿಗೆ, ಶಕ್ರರೂಪನಿಗೆ ಶಕ್ರವೇಷವನ್ನು ಧರಿಸಿದವನಿಗೆ ನಮಸ್ಕಾರ.

ನಮಸ್ತೇ ವಜ್ರಹಸ್ತಾಯ ಪಿಂಗಲಾಯಾರುಣಾಯ ಚ ।
ಪಿನಾಕಪಾಣಿನೇ ನಿತ್ಯಂ ಖಡ್ಗಶೂಲಧರಾಯ ಚ ॥೨೪೨॥

ವಜ್ರಹಸ್ತನಾದ, ಇಂದ್ರನಾದ, ಅರುಣನಾದ ನಿನಗೆ ನಮಸ್ಕಾರ. ಪಿನಾಕಪಾಣಿಗೆ ಖಡ್ಗ-ತ್ರಿಶೂಲಧರನಿಗೆ ಯಾವಾಗಲೂ ನಮಸ್ಕಾರ.

ನಮಸ್ತೇ ಕೃಷ್ಣವಾಸಾಯ ಕೃಷ್ಣಕುಂಚಿತಮೂರ್ಧಜೇ ।
ಕೃಷ್ಣಾಜಿನೋತ್ತರೀಯಾಯ ಕೃಷ್ಣಾಯಾಮಿತತೇಜಸೇ ॥೨೪೩॥

ಕಪ್ಪು ವಸ್ತ್ರವನ್ನು ಧರಿಸಿದ, ಕಪ್ಪಾದ ಗುಂಗುರು ಕೂದಲನ್ನುಳ್ಳ, ಕೃಷ್ಣಾಜಿನದ ಉತ್ತರೀಯವನ್ನು ಧರಿಸಿದ, ಕೃಷ್ಣನಾದ, ಅಮಿತ ಪರಾಕ್ರಮಿಯಾದ ನಿನಗೆ ನಮಸ್ಕಾರ.

ಶುಕ್ಲವರ್ಣಾಯ ಶುಕ್ಲಾಯ ಶುಕ್ಲಾಂಬರಧರಾಯ ಚ ।
ಶುಕ್ಲಭಸ್ಮಾವಲಿಪ್ತಾಯ ಶುಕ್ಲಕಮರತಾಯ ಚ ॥೨೪೪॥

ಶುಕ್ಲವರ್ಣವನ್ನು ಹೊಂದಿದ, ಶುಕ್ಲನಾದ, ಶುಕ್ಲಾಂಬರವನ್ನು ಧರಿಸಿದ, ಶುಕ್ಲ ಭಸ್ಮವನ್ನು ಲೇಪಿಸಿಕೊಂಡ, ಶುಕ್ಲ ಕರ್ಮಗಳಲ್ಲಿ ನಿರತನಾದ ನಿನಗೆ ನಮಸ್ಕಾರ.

ನಮೋಸ್ತು ರಕ್ತವರ್ಣಾಯ ರಕ್ತಾಂಬರಧರಾಯ ಚ ।
ರಕ್ತಧ್ವಜಪತಾಕಾಯ ರಕ್ತಸ್ರಗನುಲೇಪಿನೇ ।
ನಮೋಸ್ತು ಪೀತವರ್ಣಾಯ ಪೀತಾಂಬರಧರಾಯ ಚ ॥೨೪೫॥

ರಕ್ತವರ್ಣದವನಾದ, ರಕ್ತಾಂಬರನಾದ, ರಕ್ತಪತಾಕೆಯನ್ನು ಹೊಂದಿದ, ರಕ್ತಮಾಲ್ಯಾನುಲೇಪನಗಳನ್ನು ಹೊಂದಿದ ನಿನಗೆ ನಮಸ್ಕಾರ. ಪೀತವರ್ಣವನ್ನು ಹೊಂದಿದ, ಪೀತಾಂಬರಧಾರಿಯಾದ ನಿನಗೆ ನಮಸ್ಕಾರ.

ನಮೋಸ್ತೂಚ್ಛ್ರಿತಚ್ಛತ್ರಾಯ ಕಿರೀಟವರಧಾರಿಣೇ ।
ಅರ್ಧಹಾರಾರ್ಧಕೇಯೂರ ಅರ್ಧಕುಂಡಲಕರ್ಣಿನೇ ॥೨೪೬॥

ಎತ್ತಿಹಿಡಿದ ಛತ್ರವುಳ್ಳ, ಶ್ರೇಷ್ಠಕಿರೀಟವನ್ನು ಧರಿಸಿದ, ಅರ್ಧಹಾರ, ಅರ್ಧಕೇಯೂರ, ಕರ್ಣಗಳಲ್ಲಿ ಅರ್ಧಕುಂಡಲವನ್ನು ಧರಿಸಿದ ನಿನಗೆ ನಮಸ್ಕಾರ.

ನಮಃ ಪವನವೇಗಾಯ ನಮೋ ದೇವಾಯ ವೈ ನಮಃ ।
ಸುರೇಂದ್ರಾಯ ಮುನೀಂದ್ರಾಯ ಮಹೇಂದ್ರಾಯ ನಮೋಸ್ತು ತೇ ॥

ವಾಯುವೇಗವನ್ನು ಹೊಂದಿದ ನಿನಗೆ ನಮಸ್ಕಾರ. ದೇವನಾದ ನಿನಗೆ ನಮಸ್ಕಾರ. ಸುರೇಂದ್ರನಾದ, ಮುನೀಂದ್ರನಾದ, ಮಹೇಂದ್ರನಾದ ನಿನಗೆ ನಮಸ್ಕಾರ.

ನಮಃ ಪದ್ಮಾರ್ಧಮಾಲಾಯ ಉತ್ಪಲೈರ್ಮಿಶ್ರಿತಾಯ ಚ ।
ಅರ್ಧಚಂದನಲಿಪ್ತಾಯ ಅರ್ಧಸ್ರಗನುಲೇಪಿನೇ ॥೨೪೮॥

ಉತ್ಪಲಮಿಶ್ರಿತವಾದ ಪದ್ಮಗಳ ಅರ್ಧಮಾಲೆಯುಳ್ಳ ನಿನಗೆ ನಮಸ್ಕಾರ. ಅರ್ಧಚಂದನದಿಂದ ಲೇಪಿತನಾದ, ಅರ್ಧಮಾಲೆಯನ್ನು ಧರಿಸಿದ ನಿನಗೆ ನಮಸ್ಕಾರ.

ನಮ ಆದಿತ್ಯವಕ್ತ್ರಾಯ ಆದಿತ್ಯನಯನಾಯ ಚ ।
ನಮ ಆದಿತ್ಯವರ್ಣಾಯ ಆದಿತ್ಯಪ್ರತಿಮಾಯ ಚ ॥೨೪೯॥

ಸೂರ್ಯನಂತಹ ಮುಖವುಳ್ಳ, ಸೂರ್ಯನಂತಹ ಕಣ್ಣುಳ್ಳ ನಿನಗೆ ನಮಸ್ಕಾರ. ಸೂರ್ಯನ ವರ್ಣವನ್ನು ಹೊಂದಿದ, ಸೂರ್ಯನ ಪ್ರತೀಕವನ್ನು ಹೊಂದಿದ ನಿನಗೆ ನಮಸ್ಕಾರ.

ನಮಃ ಸೋಮಾಯ ಸೌಮ್ಯಾಯ ಸೌಮ್ಯವಕ್ತ್ರಧರಾಯ ಚ ।
ಸೌಮ್ಯರೂಪಾಯ ಮುಖ್ಯಾಯ, ಸೌಮ್ಯದಂಷ್ಟ್ರಾವಿಭೂಷಿಣೇ ॥೨೫೦॥

ಶಾಂತನಾದ ಸೋಮನಾದ ನಿನಗೆ ನಮಸ್ಕಾರ. ಶಾಂತಮುಖವನ್ನು ಧರಿಸಿದ ನಿನಗೆ ನಮಸ್ಕಾರ. ಶಾಂತರೂಪವನ್ನು ಧರಿಸಿದ ಪ್ರಧಾನನಾದ, ಶಾಂತದಂಷ್ಟ್ರಗಳಿಂದ ವಿಭೂಷಿತನಾದ ನಿನಗೆ ನಮಸ್ಕಾರ.

ನಮಃ ಶ್ಯಾಮಾಯ ಗೌರಾಯ ಅರ್ಧಪೀತಾರ್ಧಪಾಂಡವೇ ।
ನಾರೀನರಶರೀರಾಯ ಸ್ತ್ರೀಪುಂಸಾಯ ನಮೋಸ್ತು ತೇ ॥೨೫೧॥

ಶ್ಯಾಮವರ್ಣದ, ಗೌರವರ್ಣದ, ಅರ್ಧಪೀತ-ಅರ್ಧಪಾಂಡುವರ್ಣದ ನಿನಗೆ ನಮಸ್ಕಾರ. ನರ-ನಾರೀ ಶರೀರವುಳ್ಳ, ಸ್ತ್ರೀ-ಪುಂ ರೂಪವುಳ್ಳ ನಿನಗೆ ನಮಸ್ಕಾರ.

ನಮೋ ವೃಷಭವಾಹಾಯ ಗಜೇಂದ್ರಗಮನಾಯ ಚ ।
ದುರ್ಗಮಾಯ ನಮಸ್ತುಭ್ಯಮಗಮ್ಯಾಗಮನಾಯ ಚ ॥೨೫೨॥

ವೃಷಭವಾಹನನಾದ, ಗಜೇಂದ್ರಗಮನನಾದ ನಿನಗೆ ನಮಸ್ಕಾರ. ದುರ್ಗಮನಾದ ನಿನಗೆ ನಮಸ್ಕಾರ. ತಿಳಿಯಲು ಸಾಧ್ಯವಿಲ್ಲದ ಗಮನಾಗಮನವುಳ್ಳ ನಿನಗೆ ನಮಸ್ಕಾರ.

ನಮೋಸ್ತು ಗಣಗೀತಾಯ ಗಣವೃಂದರತಾಯ ಚ ।
ಗಣಾನುಯಾತಮಾರ್ಗಾಯ ಗಣನಿತ್ಯವ್ರತಾಯ ಚ ॥೨೫೩॥

ಗಣಗಳಿಂದ ಗಾನಮಾಡಲ್ಪಟ್ಟ ನಿನಗೆ ನಮಸ್ಕಾರ. ಗಣಗಳ ಸಮೂಹದಲ್ಲಿ ನಿರತನಾದ ನಿನಗೆ, ಗಣಗಳಿಂದ ಹಿಂಬಾಲಿಸಲ್ಪಟ್ಟ ಮಾರ್ಗವುಳ್ಳ ನಿನಗೆ, ಗಣಗಳಲ್ಲಿ ನಿತ್ಯವೂ ರತನಾದ ನಿನಗೆ ನಮಸ್ಕಾರ.

ನಮಃ ಶ್ವೇತಾಭ್ರವರ್ಣಾಯ ಸಂಧ್ಯಾರಾಗಪ್ರಭಾಯ ಚ ।
ಅನುದ್ದಿಷ್ಟಾಭಿಧಾನಾಯ ಸ್ವರೂಪಾಯ ನಮೋಸ್ತು ತೇ ॥೨೫೪॥

ಬಿಳಿಯ ಮೋಡದ ವರ್ಣದ, ಸಂಧ್ಯಾರಾಗದ ಕಾಂತಿಯ ನಿನಗೆ ನಮಸ್ಕಾರ. ನಿನ್ನ ಸ್ವರೂಪವನ್ನು ತಿಳಿಸುವ ಸರಿಯಾದ ನಾಮವಿಲ್ಲದ ನಿನಗೆ ನಮಸ್ಕಾರ.

ನಮೋ ರಕ್ತಾಗ್ರವಾಸಾಯ ರಕ್ತಸೂತ್ರಧರಾಯ ಚ ।
ರಕ್ತಮಾಲಾವಿಚಿತ್ರಾಯ ರಕ್ತಾಂಬರಧರಾಯ ಚ ॥೨೫೫॥

ರಕ್ತವರ್ಣದ ಶ್ರೇಷ್ಠ ವಸ್ತ್ರವುಳ್ಳ, ರಕ್ತಸೂತ್ರವನ್ನು ಧರಿಸಿದ, ರಕ್ತಮಾಲೆಗಳಿಂದ ವಿಚಿತ್ರನಾದ, ರಕ್ತವಸ್ತ್ರಧಾರಿಯಾದ ನಿನಗೆ ನಮಸ್ಕಾರ.

ಮಣಿಭೂಷಿತಮೂರ್ಧಾಯ ನಮಶ್ಚಂದ್ರಾರ್ಧಭೂಷಿಣೇ ।
ವಿಚಿತ್ರಮಣಿಮೂರ್ಧಾಯ ಕುಸುಮಾಷ್ಟಧರಾಯ ಚ ॥೨೫೬॥

ಮಣಿಗಳಿಂದ ಭೂಷಿತವಾದ ಶಿರಸ್ಸುಳ್ಳ, ಅರ್ಧಚಂದ್ರಭೂಷಣನಾದ, ವಿಚಿತ್ರಮಣಿಗಳಿಂದ ಅಲಂಕೃತವಾದ ಶಿರಸ್ಸುಳ್ಳ, ಅಷ್ಟಕುಸುಮಗಳನ್ನು ಧರಿಸಿದ ನಿನಗೆ ನಮಸ್ಕಾರ.

ನಮೋऽಗ್ನಿಮುಖನೇತ್ರಾಯ ಸಹಸ್ರಶಶಿಲೋಚನೇ ।
ಅಗ್ನಿರೂಪಾಯ ಕಾಂತಾಯ ನಮೋಸ್ತು ಗಹನಾಯ ಚ ॥೨೫೭॥

ಅಗ್ನಿಮುಖವುಳ್ಳ, ಅಗ್ನಿನೇತ್ರವುಳ್ಳ, ಸಹಸ್ರ ಚಂದ್ರ ಲೋಚನನಾದ ನಿನಗೆ ನಮಸ್ಕಾರ. ಅಗ್ನಿಯ ರೂಪವುಳ್ಳ, ಮನೋಹರನಾದ, ಗಹನನಾದ ನಿನಗೆ ನಮಸ್ಕಾರ.

ಖಚರಾಯ ನಮಸ್ತುಭ್ಯಂ ಗೋಚರಾಭಿರತಾಯ ಚ ।
ಭೂಚರಾಯ ಭುವನಾಯ ಅನಂತಾಯ ಶಿವಾಯ ಚ ॥೨೫೮॥

ಆಕಾಶದಲ್ಲಿ ಸಂಚರಿಸುವ ನಿನಗೆ ನಮಸ್ಕಾರ. ಭೂಮಿಯಲ್ಲಿ ಸಂಚರಿಸುವವರಲ್ಲಿ ರತನಾದ ನಿನಗೆ ನಮಸ್ಕಾರ. ಭೂಮಿಯಲ್ಲಿ ಸಂಚರಿಸುವ ಭುವನರೂಪನಾದ, ಅನಂತನಾದ, ಮಂಗಳನಾದ ನಿನಗೆ ನಮಸ್ಕಾರ.

ನಮೋ ದಿಗ್ವಾಸಸೇ ನಿತ್ಯಮಧಿವಾಸಸುವಾಸಸೇ ।
ನಮೋ ಜಗನ್ನಿವಾಸಾಯ ಪ್ರತಿಪತ್ತಿಸುಖಾಯ ಚ ॥೨೫೯॥

ದಿಗಂಬರನಾದ, ನಿತ್ಯವೂ ಶ್ರೇಷ್ಠವಾದ ಸುವಸ್ತ್ರವನ್ನು ಧರಿಸುವ ನಿನಗೆ ನಮಸ್ಕಾರ. ಜಗತ್ತಿನಲ್ಲಿ ನಿವಾಸಿಸುವ, ಜ್ಞಾನದಿಂದ ಸುಖವನ್ನು ಪಡುವ ನಿನಗೆ ನಮಸ್ಕಾರ.

ನಿತ್ಯಮುದ್ಬದ್ಧಮಕುಟೇ ಮಹಾಕೇಯೂರಧಾರಿಣೇ ।
ಸರ್ಪಕಂಠೋಪಹಾರಾಯ ವಿಚಿತ್ರಾಭರಣಾಯ ಚ ॥೨೬೦॥

ಯಾವಾಗಲೂ ಶಿರಸ್ಸಿನಲ್ಲಿ ಧರಿಸಿದ ಕಿರೀಟವುಳ್ಳ, ಮಹಾಕೇಯೂರವನ್ನು ಧರಿಸಿದ, ಕಂಠದಲ್ಲಿ ಸರ್ಪಹಾರವನ್ನು ಧರಿಸಿದ, ವಿಚಿತ್ರಾಭರಣವುಳ್ಳ ನಿನಗೆ ನಮಸ್ಕಾರ.

ನಮಸ್ತ್ರಿನೇತ್ರನೇತ್ರಾಯ ಸಹಸ್ರಶತಲೋಚನೇ ।
ಸ್ತ್ರೀಪುಂಸಾಯ ನಪುಂಸಾಯ ನಮಃ ಸಾಂಖ್ಯಾಯ ಯೋಗಿನೇ ॥೨೬೧॥

ತ್ರಿನೇತ್ರನಾದ, ಸಹಸ್ರಶತಲೋಚನನಾದ, ಸ್ತ್ರೀ-ಪುರುಷರೂಪನಾದ, ನಪುಂಸಕರೂಪನಾದ, ಸಾಂಖ್ಯಯೋಗರೂಪನಾದ ನಿನಗೆ ನಮಸ್ಕಾರ.

ಶಂಯೋರಭಿಸ್ರವಂತಾಯ ಅಥರ್ವಾಯ ನಮೋನಮಃ ।
ನಮಃ ಸರ್ವಾರ್ತಿನಾಶಾಯ ನಮಃ ಶೋಕಹರಾಯ ಚ ॥೨೬೨॥

ಸುಖವನ್ನು ಸುರಿಸುವ ಅಥರ್ವನಾದ ನಿನಗೆ ನಮಸ್ಕಾರ. ಸರ್ವದುಃಖಗಳನ್ನೂ ಪರಿಹರಿಸುವ ನಿನಗೆ ನಮಸ್ಕಾರ. ಶೋಕಪರಿಹಾರಕನಾದ ನಿನಗೆ ನಮಸ್ಕಾರ.

ನಮೋ ಮೇಘನಿನಾದಾಯ ಬಹುಮಾಯಾಧರಾಯ ಚ ।
ಬೀಜಕ್ಷೇತ್ರಾಭಿಪಾಲಾಯ ಜಗತ್ಸ್ರಷ್ಟ್ರೇ ನಮೋ ನಮಃ ॥೨೬೩॥

ಮೇಘಗಂಭೀರನಾದವುಳ್ಳ ನಿನಗೆ ನಮಸ್ಕಾರ. ಅನೇಕ ಸಾಮರ್ಥ್ಯಗಳನ್ನು ಧರಿಸಿದ ನಿನಗೆ ನಮಸ್ಕಾರ. ಬೀಜ-ಕ್ಷೇತ್ರಗಳನ್ನು ರಕ್ಷಿಸುವ, ಜಗತ್‌ಸೃಷ್ಟಿಕರ್ತನಾದ ನಿನಗೆ ನಮಸ್ಕಾರ.

ನಮಃ ಸುರಾಸುರೇಶಾಯ ವಿಶ್ವೇಶಾಯ ನಮೋನಮಃ ।
ನಮಃ ಪವನವೇಗಾಯ ನಮಃ ಪವನರೂಪಿಣೇ ॥೨೬೪॥

ಸುರಾಸುರ ಪ್ರಭುವಾದ, ವಿಶ್ವಪ್ರಭುವಾದ ನಿನಗೆ ನಮಸ್ಕಾರ. ವಾಯುವೇಗವುಳ್ಳ, ವಾಯುರೂಪನಾದ ನಿನಗೆ ನಮಸ್ಕಾರ.

ನಮಃ ಕಾಂಚನಮಾಲಾಯ ಗಿರಿಮಾಲಾಯ ವೈ ನಮಃ ।
ನಮಃ ಸುರಾರಿಮಾಲಾಯ ಚಂಡವೇಗಾಯ ವೈ ನಮಃ ॥೨೬೫॥

ಸುವರ್ಣಮಾಲೆಯನ್ನು ಧರಿಸಿದ, ಗಿರಿಮಾಲೆಯನ್ನು ಧರಿಸಿದ, ದೈತ್ಯರ ಮಾಲೆಯನ್ನು ಧರಿಸಿದ, ಚಂಡವೇಗವುಳ್ಳ ನಿನಗೆ ನಮಸ್ಕಾರ.

ಬ್ರಹ್ಮಶಿರೋಪಹರ್ತಾಯ ಮಹಿಷಘ್ನಾಯ ವೈ ನಮಃ ।
ನಮಃ ಸ್ತ್ರೀರೂಪಧರಾಯ ಯಜ್ಞವಿಧ್ವಂಸನಾಯ ಚ ॥೨೬೬॥

ಬ್ರಹ್ಮದೇವರ ಶಿರಸ್ಸನ್ನು ಕತ್ತರಿಸಿದ, ಮಹಿಷಾಸುರ ಸಂಹಾರಕನಾದ ನಿನಗೆ ನಮಸ್ಕಾರ. ಸ್ತ್ರೀರೂಪವನ್ನು ಧರಿಸಿದ, ಯಜ್ಞವಿಧ್ವಂಸಕನಾದ ನಿನಗೆ ನಮಸ್ಕಾರ.

ನಮಸ್ತ್ರಿಪುರಹರ್ತಾ ಯಜ್ಞವಿಧ್ವಂಸನಾಯ ಚ ।
ನಮಃ ಕಾಮಾಂಗನಾಶಾಯ ಕಾಲದಂಡಧರಾಯ ಚ ॥೨೬೭॥

ಶತ್ರುಗಳಾದ ತ್ರಿಪುರರನ್ನು ಸಂಹರಿಸಿದ ನಿನಗೆ, ಯಜ್ಞಗಳನ್ನು ಧ್ವಂಸ ಮಾಡಿದ ನಿನಗೆ, ಮನ್ಮಥಶರೀರವನ್ನು ನಾಶಮಾಡಿದ ನಿನಗೆ, ಕಾಲದಂಡವನ್ನು ಧರಿಸಿದ ನಿನಗೆ ನಮಸ್ಕಾರ.

ನಮಃ ಸ್ಕಂದವಿಶಾಖಾಯ ಬ್ರಹ್ಮದಂಡಾಯ ವೈ ನಮಃ ।
ನಮೋ ಭವಾಯ ಶರ್ವಾಯ ವಿಶ್ವರೂಪಾಯ ವೈ ನಮಃ ॥೨೬೮॥

ಸ್ಕಂಧವಿಶಾಖನಾದ, ಬ್ರಹ್ಮದಂಡರೂಪನಾದ, ಭವನಾದ, ಶರ್ವನಾದ, ವಿಶ್ವರೂಪನಾದ ನಿನಗೆ ನಮಸ್ಕಾರ.

ಈಶಾನಾಯ ಭವಘ್ನಾಯ ನಮೋಸ್ತ್ವಂಧಕಘಾತಿನೇ ।
ನಮೋ ವಿಶ್ವಾಯ ಮಾಯಾಯ ಚಿಂತ್ಯಾಚಿಂತ್ಯಾಯ ವೈ ನಮಃ ॥೨೬೯॥

ಈಶಾನನಾದ, ಸಂಸಾರನಾಶಕನಾದ, ಅಂಧಕಸಂಹಾರಕನಾದ ನಿನಗೆ ನಮಸ್ಕಾರ. ವಿಶ್ವನಾದ, ಪ್ರಧಾನನಾದ, ಚಿಂತ್ಯಾಚಿಂತ್ಯನಾದ ನಿನಗೆ ನಮಸ್ಕಾರ.

ತ್ವಂ ನೋ ಗತಿಶ್ಚ ಶ್ರೇಷ್ಠಶ್ಚ ತ್ವಮೇವ ಹೃದಯಂ ತಥಾ ।
ತ್ವಂ ಬ್ರಹ್ಮಾ ಸರ್ವದೇವಾನಾಂ ರುದ್ರಾಣಾಂ ನೀಲಲೋಹಿತಃ ।
ಆತ್ಮಾ ಚ ಸರ್ವಭೂತಾನಾಂ ಸಾಂಖ್ಯೇ ಪುರುಷ ಉಚ್ಯಸೇ ॥೨೭೦॥

ನೀನೇ ನಮಗೆ ಗತಿಯಾದವನು, ಶ್ರೇಷ್ಠನಾದವನು, ನಮಗೆ ಪ್ರಿಯನಾದವನು. ಎಲ್ಲ ದೇವತೆಗಳಿಗೂ ನೀನು ಬ್ರಹ್ಮನಾಗಿದ್ದೀಯೆ. ರುದ್ರನಲ್ಲಿ ನೀಲ-ಲೋಹಿತನಾಗಿದ್ದೀಯೆ. ಸರ್ವಭೂತಗಳಲ್ಲಿ ಆತ್ಮನಾಗಿದ್ದೀಯೆ. ಸಾಂಖ್ಯಶಾಸ್ತ್ರದಲ್ಲಿ ಪುರುಷನಾಗಿದ್ದೀಯೆ ಎಂದು ಹೇಳಲ್ಪಡುವಿ.

ಋಷಭಸ್ತ್ವಂ ಪವಿತ್ರಾಣಾಂ ಯೋಗಿನಾಂ ನಿಷ್ಕಲಃ ಶಿವಃ ।
ಆಶ್ರಮಾಣಾಂ ಗೃಹಸ್ಥಸ್ತ್ವಮೀಶ್ವರಾಣಾಂ ಮಹೇಶ್ವರಃ ।
ಕುಬೇರಃ ಸರ್ವಯಕ್ಷಾಣಾಂ ಕ್ರತೂನಾಂ ವಿಷ್ಣುರುಚ್ಯಸೇ ॥೨೭೧॥

ಪವಿತ್ರರಾದವರಲ್ಲಿ ನೀನು ವೃಷಭನಾಗಿದ್ದೀಯೆ. ಯೋಗಿಗಳಲ್ಲಿ ನಿಷ್ಕಲನಾದ ಶಿವನಾಗಿದ್ದೀಯೆ. ಆಶ್ರಮಗಳಲ್ಲಿ ಗೃಹಸ್ಥನೂ, ಈಶ್ವರರಲ್ಲಿ ಮಹೇಶ್ವರನೂ, ಸರ್ವಯಕ್ಷರಲ್ಲಿ ಕುಬೇರನೂ, ಕ್ರತುಗಳಲ್ಲಿ ವಿಷ್ಣುವೂ ಆಗಿದ್ದೀಯೆ.

ಪರ್ವತಾನಾಂ ಮಹಾಮೇರುರ್ನಕ್ಷತ್ರಾಣಾಂ ಚ ಚಂದ್ರಮಾಃ ।
ವಸಿಷ್ಠಸ್ತ್ವಮೃಷೀಣಾಂ ಚ ಗ್ರಹಾಣಾಂ ಸೂರ್ಯ ಉಚ್ಯಸೇ ॥೨೭೨॥

ಪರ್ವತಗಳಲ್ಲಿ ಮಹಾಮೇರುವೂ, ನಕ್ಷತ್ರಗಳಲ್ಲಿ ಚಂದ್ರನೂ, ಋಷಿಗಳಲ್ಲಿ ವಸಿಷ್ಠನೂ, ಗ್ರಹಗಳಲ್ಲಿ ಸೂರ್ಯನೂ ಆಗಿದ್ದೀಯೆ ಎಂದು ಹೇಳಲ್ಪಡುವಿ.

ಆರಣ್ಯಾನಾಂ ಪಶೂನಾಂ ಚ ಸಿಂಹಸ್ತ್ವಂ ಪರಮೇಶ್ವರಃ ।
ಗ್ರಾಮ್ಯಾಣಾಂ ಗೋವೃಷಶ್ಚಾಸಿ ಭಗವಾಲ್ಲೋಕಪೂಜಿತಃ ॥೨೭೩॥

ಪರಮೇಶ್ವರನಾದ ನೀನು ವನದಲ್ಲಿ ವಾಸಿಸುವ ಪಶುಗಳಲ್ಲಿ ಸಿಂಹನಾಗಿದ್ದೀಯೆ. ಲೋಕಪೂಜಿತನಾದ, ಭಗವಂತನಾದ ನೀನು ಗ್ರಾಮದಲ್ಲಿ ವಾಸಿಸುವ ಪಶುಗಳಲ್ಲಿ ಗೋವೃಷಭನಾಗಿದ್ದೀಯೆ.

ಆದಿತ್ಯಾನಾಂ ಭವಾನ್ ವಿಷ್ಣುರ್ವಸೂನಾಂ ಚೈವ ಪಾವಕಃ ।
ಪಕ್ಷಿಣಾಂ ವೈನತೇಯಶ್ಚ ಅನಂತೋ ಭುಜಗೇಷು ಚ ॥೨೭೪॥

ಆದಿತ್ಯರಲ್ಲಿ ನೀನು ವಿಷ್ಣುವೂ, ವಸುಗಳಲ್ಲಿ ಅಗ್ನಿಯೂ, ಪಕ್ಷಿಗಳಲ್ಲಿ ಗರುಡನೂ, ಸರ್ಪಗಳಲ್ಲಿ ಶೇಷನೂ ಆಗಿದ್ದೀಯೆ.

ಸಾಮವೇದಶ್ಚ ವೇದಾನಾಂ ಯಜುಷಾಂ ಶತರುದ್ರಿಯಮ್ ।
ಸನತ್ಕುಮಾರೋ ಯೋಗೀನಾಂ ಸಿದ್ಧಾನಾಂ ಕಪಿಲೋ ಹ್ಯಸಿ ॥೨೭೫॥

ವೇದಗಳಲ್ಲಿ ಸಾಮವೇದವೂ, ದ್ವಿಜಸ್ತುಗಳಲ್ಲಿ ಶತರುದ್ರೀಯವೂ, ಯೋಗಿಗಳಿಗೆ ಸನತ್ಕುಮಾರನೂ, ಸಿದ್ಧರಲ್ಲಿ ಕಪಿಲ ಋಷಿಯೂ ಆಗಿದ್ದೀಯೆ.

ಶಕ್ರೋಽಸಿ ಮರುತಾಂ ದೇವ ಪಿತೃಣಾಂ ಧರ್ಮರಾಡಸಿ ।
ಬ್ರಹ್ಮಲೋಕಶ್ಚ ಲೋಕಾನಾಂ ಗತೀನಾಂ ಮೋಕ್ಷ ಉಚ್ಯಸೇ ॥೨೭೬॥

ಎಲೈ ದೇವನೇ, ಮರುತ್ತುಗಳಲ್ಲಿ ಇಂದ್ರನಾಗಿದ್ದೀಯೆ. ಪಿತೃಗಳಲ್ಲಿ ಯಮನಾಗಿದ್ದೀಯೆ. ಲೋಕಗಳಲ್ಲಿ ಬ್ರಹ್ಮಲೋಕನಾಗಿದ್ದೀಯೆ. ಗತಿಗಳಲ್ಲಿ ಮೋಕ್ಷವೆಂದು ಹೇಳಲ್ಪಡುತ್ತೀಯೆ.

ಕ್ಷೀರೋದಃ ಸಾಗರಾಣಾಂ ಚ ಶೈಲಾನಾಂ ಹಿಮವಾನ್ ಗಿರಿಃ ।
ವರ್ಣಾನಾಂ ಬ್ರಾಹ್ಮಣಶ್ಚಾಸಿ ವಿಪ್ರಾಣಾಂ ದೀಕ್ಷಿತೋ ದ್ವಿಜಃ ।
ಆದಿಸ್ತ್ವಮಸಿ ದೇವಾನಾಂ ಸಂಹರ್ತಾ ಕಾಲ ಏವ ಚ ॥೨೭೭॥

ಯಚ್ಚಾನ್ಯದಪಿ ಲೋಕೇಷು ಸತ್ತ್ವಂ ತೇಜೋಧಿಕಂ ಸ್ಮೃತಮ್ ।
ತತ್ಸರ್ವಂ ಭಗವಾನೇವ ಇತಿ ಮೇ ನಿಶ್ಚಿತಾ ಮತಿಃ ॥೨೭೮॥

ಸಾಗರಗಳಲ್ಲಿ ಕ್ಷೀರಸಮುದ್ರವಾಗಿದ್ದೀಯೆ. ಪರ್ವತಗಳಲ್ಲಿ ಹಿಮಾಲಯವಾಗಿದ್ದೀಯೆ. ವರ್ಣಗಳಲ್ಲಿ ಬ್ರಾಹ್ಮಣನಾಗಿದ್ದೀಯೆ. ಬ್ರಾಹ್ಮಣರಲ್ಲಿ ದೀಕ್ಷಿತ ಬ್ರಾಹ್ಮಣನಾಗಿದ್ದೀಯೆ. ನೀನು ದೇವತೆಗಳಿಗೆ ಆದಿಯಾಗಿದ್ದೀಯೆ, ಅಂತಕನಾಗಿದ್ದೀಯೆ ಮತ್ತು ಕಾಮಪ್ರದನಾಗಿದ್ದೀಯೆ. ಲೋಕದಲ್ಲಿ ಅಧಿಕ ತೇಜಸ್ಸನ್ನು ಹೊಂದಿದ ಉಳಿದ ಯಾವ ಯಾವ ಪದಾರ್ಥಗಳಿವೆಯೋ ಅವೆಲ್ಲವೂ ನೀನೇ ಎಂದು ನನ್ನ ನಿಶ್ಚಿತವಾದ ಅಭಿಪ್ರಾಯ.

ನಮಸ್ತೇ ಭಗವನ್ ದೇವ ನಮಸ್ತೇ ಭಕ್ತವತ್ಸಲ ।
ಯೋಗೇಶ್ವರ ನಮಸ್ತೇಽಸ್ತು ನಮಸ್ತೇ ವಿಶ್ವಸಂಭವ ॥೨೭೯॥

ಭಗವಂತನಾದ ದೇವನೇ ನಿನಗೆ ನಮಸ್ಕಾರ. ಭಕ್ತವತ್ಸಲನೇ ನಿನಗೆ ನಮಸ್ಕಾರ. ಯೋಗೇಶ್ವರನೇ ನಿನಗೆ ನಮಸ್ಕಾರ. ವಿಶ್ವಸಂಭವನೇ ನಿನಗೆ ನಮಸ್ಕಾರ.

ಪ್ರಸೀದ ಮಮ ಭಕ್ತಸ್ಯ ದೀನಸ್ಯ ಕೃಪಣಸ್ಯ ಚ ।
ಅನೈಶ್ವರ್ಯೇಣ ಯುಕ್ತಸ್ಯ ಗತಿರ್ಭವ ಸನಾತನ ॥೨೮೦॥

ದೀನನೂ, ಕೃಪಣನೂ, ನಿನ್ನ ಭಕ್ತನೂ ಆದ ನನಗೆ ಅನುಗ್ರಹವನ್ನು ಮಾಡು. ಎಲೈ ಸನಾತನನೇ, ದಾರಿದ್ರ್ಯದಿಂದ ಕೂಡಿದ ನನಗೆ ಗತಿಯಾಗು.

ಯಂ ಚಾಪರಾಧಂ ಕೃತವಾನಜ್ಞಾನಾತ್ಪರಮೇಶ್ವರ ।
ಮದ್ಭಕ್ತ ಇತಿ ದೇವೇಶ ತತ್ಸರ್ವಂ ಕ್ಷಂತುಮರ್ಹಸಿ ॥೨೮೧॥

ಪರಮೇಶ್ವರನೇ, ನಾನು ಅಜ್ಞಾನದಿಂದ ಯಾವ ಅಪರಾಧವನ್ನು ಮಾಡಿದ್ದೇನೆಯೋ, ಎಲೈ ದೇವೇಶನೇ, ಅವೆಲ್ಲವನ್ನೂ ನಿನ್ನ ಭಕ್ತನೆಂದು ತಿಳಿದು ಕ್ಷಮಿಸಬೇಕು.

ಮೋಹಿತಶ್ಚಾಸ್ಮಿ ದೇವೇಶ ತುಭ್ಯಂ ರೂಪವಿಪರ್ಯಯಾತ್ ।
ತೇನ ನಾರ್ಘ್ಯಂ ಮಯಾ ದತ್ತಂ ಪಾದ್ಯಂ ಚಾಪಿ ಸುರೇಶ್ವರ ॥೨೮೨॥

ಎಲೈ ದೇವೇಶನೇ, ನಿನ್ನ ರೂಪಗಳ ವ್ಯತ್ಯಾಸವನ್ನು ನೋಡಿ, ನಾನು ಮೋಹಿತನಾಗಿದ್ದೇನೆ. ಎಲೈ ಸುರೇಶ್ವರನೇ, ಆದ್ದರಿಂದ ನಿನಗೆ ಅರ್ಘ್ಯವನ್ನಾಗಲೀ, ಪಾದ್ಯವನ್ನಾಗಲೀ ಕೊಡಲಿಲ್ಲ.

ಏವಂ ಸ್ತುತ್ವಾಹಮೀಶಾನಂ ಪಾದ್ಯಮರ್ಘ್ಯಂ ಚ ಭಕ್ತಿತಃ ।
ಕೃತಾಂಜಲಿಪುಟೋ ಭೂತ್ವಾ ಸರ್ವಂ ತಸ್ಮೈ ನ್ಯವೇದಯಮ್ ॥೨೮೩॥

ನಾನು ಈಶಾನನನ್ನು ಭಕ್ತಿಯಿಂದ ಈ ರೀತಿಯಲ್ಲಿ ಸ್ತೋತ್ರವನ್ನು ಮಾಡಿ, ಕೈಗಳನ್ನು ಮುಗಿದು, ಅವನಿಗೆ ಪಾದ್ಯ, ಅರ್ಘ್ಯ ಮೊದಲಾದ ಎಲ್ಲವನ್ನೂ ನಿವೇದಿಸಿದೆನು.

ತತಃ ಶೀತಾಂಬುಸಂಯುಕ್ತಾ ದಿವ್ಯಗಂಧಸಮನ್ವಿತಾ ।
ಪುಷ್ಪವೃಷ್ಟಿಃ ಶುಭಾ ತಾತ ಪಪಾತ ಮಮ ಮೂರ್ಧನಿ ॥೨೮೪॥

ಆಗ ಶೀತಜಲಕಣಗಳಿಂದ ಕೂಡಿದ, ದಿವ್ಯಗಂಧದಿಂದ ಕೂಡಿದ ಶುಭವಾದ ಪುಷ್ಪವೃಷ್ಟಿಯು ನನ್ನ ತಲೆಯ ಮೇಲೆ ಬಿದ್ದಿತು.

ದುಂದುಭಿಶ್ಚ ತತೋ ದಿವ್ಯಸ್ತಾಡಿತೋ ದೇವಕಿಂಕರೈಃ ।
ವವೌ ಚ ಮಾರುತಃ ಪುಣ್ಯಃ ದಿವ್ಯಗಂಧಸಮನ್ವಿತಃ ॥೨೮೫॥

ದೇವಕಿಂಕರರು ಆಗ ದಿವ್ಯವಾದ ದುಂದುಭಿಗಳನ್ನು ಬಾರಿಸಿದರು. ದಿವ್ಯಗಂಧದಿಂದ ಕೂಡಿದ ಪುಣ್ಯವಾದ ವಾಯುವು ಬೀಸಿತು.

ತತಃ ಪ್ರೀತೋ ಮಹಾದೇವಃ ಸಪತ್ನೀಕೋ ವೃಷಧ್ವಜಃ ।
ಅಬ್ರವೀತ್ ತ್ರಿದಶಾಂಸ್ತತ್ರ ಹರ್ಷಯನ್ನಿವ ಮಾಂ ತದಾ ॥೨೮೬॥

ಆಗ ಪ್ರಸನ್ನನಾದ, ಪತ್ನೀಸಹಿತನಾದ, ವೃಷಭಧ್ವಜನಾದ ಮಹಾದೇವನು ನನಗೆ ಸಂತೋಷವನ್ನುಂಟು ಮಾಡುವವನಂತೆ ಅಲ್ಲಿ ದೇವತೆಗಳನ್ನು ಕುರಿತು ಹೇಳಿದನು.

ಪಶ್ಯಧ್ವಂ ತ್ರಿದಶಾಃ ಸರ್ವೇ ಉಪಮನ್ಯೋರ್ಮಹಾತ್ಮನಃ ।
ಮಯಿ ಭಕ್ತಿಂ ಪರಾಂ ನಿತ್ಯಾಮೇಕಭಾವಾದವಸ್ಥಿತಾಮ್ ॥೨೮೭॥

ಎಲೈ ದೇವತೆಗಳೇ, ನೀವೆಲ್ಲರೂ ಮಹಾತ್ಮನಾದ ಉಪಮನ್ಯುವಿನ, ನನ್ನಲ್ಲಿ ಏಕಪ್ರಕಾರವಾಗಿರುವ ಶ್ರೇಷ್ಠವಾದ ಭಕ್ತಿಯನ್ನು ನೋಡಿ (ಎಂದು ಹೇಳಿದನು).

ಏವಮುಕ್ತಾಸ್ತತಃ ಕೃಷ್ಣ ಸುರಾಸ್ತೇ ಶೂಲಪಾಣಿನಾ ।
ಊಚುಃ ಪ್ರಾಂಜಲಯಃ ಸರ್ವೇ ನಮಸ್ಕೃತ್ವಾ ವೃಷಧ್ವಜಮ್ ॥೨೮೮॥

ಎಲೈ ಕೃಷ್ಣನೇ, ಶೂಲಪಾಣಿಯಿಂದ ಹೀಗೆ ಹೇಳಲ್ಪಟ್ಟ ಆ ದೇವತೆಗಳೆಲ್ಲರೂ ವೃಷಧ್ವಜನಾದ ಅವನಿಗೆ ನಮಸ್ಕಾರವನ್ನು ಮಾಡಿ ಕೈಗಳನ್ನು ಮುಗಿದು ಹೇಳಿದರು.

ಭಗವನ್ ದೇವದೇವೇಶ ಲೋಕನಾಥ ಜಗತ್ಪತೇ ।
ಲಭತಾಂ ಸರ್ವಕಾಮೇಭ್ಯಃ ಫಲಂ ತ್ವತ್ತೋ ದ್ವಿಜೋತ್ತಮಃ ॥೨೮೯॥

ಭಗವಂತನೇ, ದೇವದೇವೇಶನೇ, ಲೋಕನಾಥನೇ, ಜಗತ್ಪತಿಯೇ, ದ್ವಿಜೋತ್ತಮನಾದ ಉಪಮನ್ಯುವು ನಿನ್ನಿಂದ ಎಲ್ಲ ಕಾಮದ ಫಲವನ್ನು ಪಡೆಯಲಿ (ಎಂದು ಹೇಳಿದರು).

ಏವಮುಕ್ತಸ್ತತಃ ಶರ್ವಃ ಸುರೈರ್ಬ್ರಹ್ಮಾದಿಭಿಸ್ತಥಾ ।
ಆಹ ಮಾಂ ಭಗವಾನೀಶಃ ಪ್ರಹಸನ್ನಿವ ಶಂಕರಃ ॥೨೯೦॥

ಬ್ರಹ್ಮಾದಿ ದೇವತೆಗಳಿಂದ ಹೀಗೆ ಹೇಳಲ್ಪಟ್ಟ ಭಗವಂತನೂ, ಈಶನೂ ಆದ ಶಂಕರನು ನಗುತ್ತಾ ನನ್ನನ್ನು ಕುರಿತು ಹೇಳಿದನು.

ವತ್ಸೋಪಮನ್ಯೋ ಪ್ರೀತೋಽಸ್ಮಿ ವರಂ ವರಯ ಸುವ್ರತ ।
ದೃಢಭಕ್ತೋಽಸಿ ವಿಪ್ರರ್ಷೇ ಮಯಾ ಜಿಜ್ಞಾಸಿತೋ ಹ್ಯಸಿ ॥೨೯೧॥

ವತ್ಸ ಉಪಮನ್ಯು, ಒಳ್ಳೆಯ ವ್ರತವನ್ನು ಧರಿಸಿದವನೇ, ನಾನು ಪ್ರಸನ್ನನಾಗಿದ್ದೇನೆ. ವರವನ್ನು ಕೇಳು. ವಿಪ್ರರ್ಷಿಯೇ, ನನ್ನಲ್ಲೇ ದೃಢಭಕ್ತಿಯುಳ್ಳವನಾಗಿದ್ದೀಯೆ. ನಿನ್ನನ್ನು ನಾನು ಪರೀಕ್ಷಿಸಿದೆ.

ಅನಯಾ ಚೈವ ಭಕ್ತ್ಯಾ ತೇ ಅತ್ಯರ್ಥಂ ಪ್ರೀತಿಮಾನಹಮ್ ।
ತಸ್ಮಾತ್ ಸರ್ವಾನ್ ದದಾಮ್ಯದ್ಯ ಕಾಮಾನ್ ಮನಸಿ ತೇ ಸ್ಥಿತಾನ್ ॥

ನಿನ್ನ ಈ ಭಕ್ತಿಯಿಂದ ನಾನು ನಿನ್ನಲ್ಲಿ ಬಹಳ ಪ್ರೀತಿಯುಳ್ಳವನಾಗಿದ್ದೇನೆ. ಆದ್ದರಿಂದ ಈ ದಿನ ನಿನ್ನ ಮನಸ್ಸಿನಲ್ಲಿರುವ ಎಲ್ಲಾ ಕಾಮಗಳನ್ನು ಕೊಡುತ್ತೇನೆ.

ಏವಮುಕ್ತಸ್ಯ ಚೈವಾಥ ಮಹಾದೇವೇನ ಮೇ ವಿಭೋ ।
ಹರ್ಷಾದಶ್ರ್ಯಾಣ್ಯವರ್ತಂತ ರೋಮಹರ್ಷಶ್ಚ ಜಾಯತೇ ॥೨೯೩॥

ಎಲೈ ವಿಭುವೇ, ಮಹಾದೇವನಿಂದ ಹೀಗೆ ಹೇಳಲ್ಪಟ್ಟ ನನಗೆ ಕಣ್ಣುಗಳಲ್ಲಿ ಆನಂದಬಾಷ್ಪವೂ ಮತ್ತು ರೋಮಾಂಚವೂ ಉಂಟಾಯಿತು.

ಅಬ್ರುವಂ ಚ ತದಾ ದೇವಂ ಹರ್ಷಗದ್ಗದಯಾ ಗಿರಾ ।
ಜಾನುಭ್ಯಾಮವನಿಂ ಗತ್ವಾ ಪ್ರಣಮ್ಯ ಚ ಪುನಃ ಪುನಃ ॥೨೯೪॥

ನಾನು ಭೂಮಿಯ ಮೇಲೆ ಮಂಡೆಗಳನ್ನೂರಿ ಅವನಿಗೆ ಪುನಃ ಪುನಃ ನಮಸ್ಕರಿಸಿ ಹರ್ಷದಿಂದ ಗದ್ಗದವಾದ ಮಾತುಗಳಿಂದ ಅವನನ್ನು ಕುರಿತು ಹೇಳಿದೆನು.

ಅದ್ಯ ಜಾತೋ ಹ್ಯಹಂ ದೇವ ಅದ್ಯ ಮೇ ಸಫಲಂ ತಪಃ ।
ಯನ್ಮೇ ಸಾಕ್ಷಾನ್ಮಹಾದೇವಃ ಪ್ರಸನ್ನಸ್ತಿಷ್ಠತೇಽಗ್ರತಃ ॥೨೯೫॥

ಎಲೈ ದೇವನೇ, ನಾನು ಈ ದಿನ ಜನ್ಮವನ್ನು ಪಡೆದಿದ್ದೇನೆ. ಮಹಾದೇವನಾದ ನೀನು ಪ್ರಸನ್ನನಾಗಿ ನನ್ನ ಎದುರಿಗೆ ನಿಂತಿರುವುದರಿಂದ ಈ ದಿನ ನನ್ನ ತಪಸ್ಸು ಸಫಲವಾಗಿದೆ.

ಯಂ ನ ಪಶ್ಯಂತಿ ಚಾರಾಧ್ಯ ದೇವಾ ಹ್ಯಮಿತವಿಕ್ರಮಮ್ ।
ತಮಹಂ ದೃಷ್ಟವಾನ್ ದೇವಂ ಕೋಽನ್ಯೋ ಧನ್ಯತರೋ ಮಯಾ ॥

ದೇವತೆಗಳೂ ಸಹ ಅಮಿತವಿಕ್ರಮನಾದ ಯಾವನನ್ನು ಆರಾಧಿಸಿ ಕಾಣುವುದಿಲ್ಲವೋ ಅಂತಹ ದೇವನನ್ನು ನಾನು ನೋಡಿದ್ದೇನೆ. ನನಗಿಂತ ಧನ್ಯರಾದವರು ಬೇರೆ ಯಾರಿದ್ದಾರೆ?

ಏವಂ ಧ್ಯಾಯಂತಿ ವಿದ್ವಾಂಸಃ ಪರಂ ತತ್ತ್ವಂ ಸನಾತನಮ್ ।
ಷಟ್‌ವಿಂಶಕಮಿತಿ ಖ್ಯಾತಂ ಯತ್ಪರಾತ್ಪರಮಕ್ಷರಮ್ ॥೨೯೭॥

ವಿದ್ವಾಂಸರಾದವರು ಪರತತ್ವನೂ, ಸನಾತನನೂ, ಇಪ್ಪತ್ತಾರನೆಯ ತತ್ತ್ವನೆಂದು ಪ್ರಸಿದ್ಧನಾದವನೂ, ಪರಾತ್ಪರನೂ, ಅಕ್ಷರನೂ ಆದ ಶಿವನನ್ನು ಹೀಗೆ ಧ್ಯಾನ ಮಾಡುತ್ತಾರೆ.

ಸ ಏಷ ಭಗವಾನ್ ದೇವಃ ಸರ್ವತತ್ತ್ವಾದಿರವ್ಯಯಃ ।
ಸರ್ವತತ್ತ್ವವಿಧಾನಜ್ಞಃ ಪ್ರಧಾನಪುರುಷೇಶ್ವರಃ ॥೨೯೮॥

ಅಂತಹ ಭಗವಂತನಾದ ಈ ದೇವನು ಎಲ್ಲ ತತ್ತ್ವಗಳಿಗಿಂತ ಮೊದಲು ಇದ್ದವನು. ಅವ್ಯಯನಾದವನು. ಸರ್ವತತ್ತ್ವಗಳ ರೀತಿಯನ್ನು ತಿಳಿದವನು. ಪ್ರಧಾನ ಪುರುಷೇಶ್ವರನಾದವನು.

ಯೋಽಸೃಜದ್ ದಕ್ಷಿಣಾದಂಗಾದ್ ಬ್ರಹ್ಮಾಣಂ ಲೋಕಸಂಭವಮ್ ।
ವಾಮಪಾರ್ಶ್ವಾತ್ ತಥಾ ವಿಷ್ಣುಂ ಲೋಕರಕ್ಷಾರ್ಥಮೀಶ್ವರಃ ।
ಯುಗಾಂತೇ ಚೈವ ಸಂಪ್ರಾಪ್ತೇ ರುದ್ರಮಂಗಾತ್ ಸೃಜತ್ ಪ್ರಭುಃ ॥

ಅವನು ತನ್ನ ಶರೀರದ ಬಲಭಾಗದಿಂದ ಲೋಕಸ್ರಷ್ಟಾರನಾದ ಬ್ರಹ್ಮನನ್ನು ಸೃಷ್ಟಿಸಿದನು. ಈಶ್ವರನಾದ ಅವನು ಲೋಕದ ರಕ್ಷಣೆಗಾಗಿ ತನ್ನ ಶರೀರದ ಎಡಭಾಗದಿಂದ

ವಿಷ್ಣುವನ್ನು ಸೃಷ್ಟಿಸಿದನು. ಪ್ರಭುವಾದ ಅವನು ಯುಗಾಂತಕಾಲವು ಸಮೀಪಿಸಿದಾಗ ರುದ್ರನನ್ನು ತನ್ನ ಶರೀರದಿಂದ ಸೃಷ್ಟಿಸುತ್ತಾನೆ.

ಸ ರುದ್ರಃ ಸಂಹರನ್ ಕೃತ್ಸ್ನಂ ಜಗತ್ಸ್ಥಾವರಜಂಗಮಮ್ ।
ಕಾಲೋ ಭೂತ್ವಾ ಮಹಾತೇಜಾಃ ಸಂವರ್ತಕ ಇವಾನಲಃ ॥೩೦೦॥

ಆ ರುದ್ರನು ಸಂವರ್ತಕಾಗ್ನಿಯಂತೆ ಮಹಾತೇಜಸ್ವಿಯಾಗಿ, ಕಾಲನಾಗಿ, ಸ್ಥಾವರ-ಜಂಗಮಾತ್ಮಕವಾದ ಸಮಸ್ತವಾದ ಜಗತ್ತನ್ನು ಸಂಹರಿಸುತ್ತಾನೆ.

ಏಷ ದೇವೋ ಮಹಾದೇವೋ ಜಗತ್ ಸೃಷ್ಟ್ವಾ ಚರಾಚರಮ್ ।
ಕಲ್ಪಾಂತೇ ಚೈವ ಸರ್ವೇಷಾಂ ಸ್ಮೃತಿಮಾಕ್ರಮ್ಯ ತಿಷ್ಠತಿ ॥೩೦೧॥

ಮಹಾದೇವನಾದ ಈ ದೇವನು ಚರಾಚರವಾದ ಜಗತ್ತನ್ನು ಸೃಷ್ಟಿಸಿ, ಕಲ್ಪದ ಕೊನೆಯಲ್ಲಿ ಎಲ್ಲರ ಸ್ಮೃತಿಯನ್ನು ಆಕ್ರಮಿಸಿ (ನಾಶಮಾಡಿ) ಇರುತ್ತಾನೆ.

ಸರ್ವಗಃ ಸರ್ವಭೂತಾತ್ಮಾ ಸರ್ವಭೂತಭವೋದ್ಭವಃ ।
ಆಸ್ತೇ ಸರ್ವಗತೋ ನಿತ್ಯಮದೃಶ್ಯಃ ಸರ್ವದೈವತೈಃ ॥೩೦೨॥

ಸರ್ವತ್ರವ್ಯಾಪ್ತನೂ, ಸರ್ವಭೂತಸ್ವಾಮಿಯೂ, ಸರ್ವಭೂತಗಳಿಗೆ ಉಂಟಾಗುವ ಎಲ್ಲದಕ್ಕೂ ಕಾರಣನೂ ಆದ ಶಿವನು ನಿತ್ಯವೂ ಸರ್ವದೇವತೆಗಳಿಗೂ ಅದೃಶ್ಯನಾಗಿರುತ್ತಾನೆ.

ಯದಿ ದೇಯೋ ವರೋ ಮಹ್ಯಂ ಯದಿ ತುಷ್ಟಶ್ಚ ಮೇ ಪ್ರಭುಃ ।
ಭಕ್ತಿರ್ಭವತು ಮೇ ನಿತ್ಯಂ ಶಾಶ್ವತೀ ತ್ವಯಿ ಶಂಕರ ॥೩೦೩॥

ದೇವನಾದ ನೀನು ನನಗೆ ವರವನ್ನು ಕೊಡುವುದಾದರೆ, ಪ್ರಭುವಾದ ನೀನು ನನ್ನಲ್ಲಿ ಪ್ರಸನ್ನನಾಗಿದ್ದರೆ, ಎಲೈ ಶಂಕರನೇ, ನನಗೆ ನಿನ್ನಲ್ಲಿ ಶಾಶ್ವತವಾದ ಭಕ್ತಿ ಇರಲಿ.

ಅತೀತಾನಾಗತಂ ಚೈವ ವರ್ತಮಾನಂ ಚ ಯದ್ವಿಭೋ ।
ಜಾನೀಯಾಮಿತಿ ಮೇ ಬುದ್ಧಿಸ್ತ್ವತ್ಪ್ರಸಾದಾತ್ ಸುರೋತ್ತಮ ॥೩೦೪॥

ಎಲೈ ವಿಭುವೇ, ಸುರೋತ್ತಮನೇ, ನಿನ್ನ ಅನುಗ್ರಹದಿಂದ ನಾನು ಭೂತ, ಭವಿಷ್ಯತ್, ವರ್ತಮಾನ ವಸ್ತುಗಳ ಜ್ಞಾನವನ್ನು ಪಡೆದೇನು.

ಕ್ಷೀರೋದನಂ ಚ ಭುಂಜೀಯಾಮಕ್ಷಯಂ ಸಹ ಬಾಂಧವೈಃ ।
ಆಶ್ರಮೇ ಚ ಸದಾ ಮಹ್ಯಂ ಸಾನ್ನಿಧ್ಯಂ ಪರಮಸ್ತು ತೇ ॥೩೦೫॥

ಬಂಧುಗಳ ಜೊತೆಯಲ್ಲಿ ಅಕ್ಷಯಕಾಲದಲ್ಲಿ ಕ್ಷೀರಾನ್ನವನ್ನು ನಾನು ಭುಂಜಿಸುವಂತಾಗಲಿ. ನನ್ನ ಆಶ್ರಮದಲ್ಲಿ ನಿತ್ಯವೂ ನಿನ್ನ ಶ್ರೇಷ್ಠವಾದ ಸನ್ನಿಧಾನವಿರಲಿ.

ಏವಮುಕ್ತಃ ಸ ಮಾಂ ಪ್ರಾಹ ಭಗವಾಲ್ಲೋಕಪೂಜಿತಃ ।
ಮಹೇಶ್ವರೋ ಮಹಾತೇಜಾಶ್ಚರಾಚರಗುರುಃ ಪ್ರಭುಃ ॥೩೦೬॥

ಹೀಗೆ ಹೇಳಲ್ಪಟ್ಟ ಭಗವಂತನೂ, ಲೋಕಪೂಜಿತನೂ, ಮಹಾತೇಜಸ್ವಿಯೂ, ಚರಾಚರಗುರುವೂ, ಪ್ರಭುವೂ ಆದ ಮಹೇಶ್ವರನು ನನ್ನನ್ನು ಕುರಿತು ಹೇಳಿದನು.

ಅಜರಶ್ಚಾಮರಶ್ಚೈವ ಭವ ದುಃಖವಿವರ್ಜಿತಃ ।
ಶೀಲವಾನ್ ಗುಣಸಂಪನ್ನಃ ಸರ್ವಜ್ಞಃ ಪ್ರಿಯದರ್ಶನಃ ॥೩೦೭॥

ನೀನು ಜರಾ-ಮರಣ ರಹಿತನಾಗಿ, ದುಃಖವಿವರ್ಜಿತನಾಗಿ ಆಗು. ಶೀಲವಂತನೂ, ಗುಣಸಂಪನ್ನನೂ, ಸರ್ವಜ್ಞನೂ, ಪ್ರಿಯದರ್ಶನನೂ ಆಗು.

ಅಕ್ಷಯಂ ಯೌವನಂ ತೇಸ್ತು ತೇಜಶ್ಚೈವಾನಲೋಪಮಮ್ ।
ಕ್ಷೀರೋದಃ ಸಾಗರಶ್ಚೈವ ಯತ್ರ ಯತ್ರೇಚ್ಛಸೇ ಮುನೇ ॥೩೦೮॥

ತತ್ರ ತೇ ಭವಿತಾ ಕಾಮಂ ಸಾನ್ನಿಧ್ಯಂ ಪಯಸೋ ನಿಧೇಃ ।
ಕ್ಷೀರೋದನಂ ಚ ಭುಕ್ಷ್ವ ತ್ವಮಮೃತೇನ ಸಮನ್ವಿತಮ್ ॥೩೦೯॥

ನಿನಗೆ ಅಕ್ಷಯವಾದ ಯೌವನವಿರಲಿ. ಅಗ್ನಿಗೆ ಸದೃಶವಾದ ತೇಜಸ್ಸು ಇರಲಿ. ಎಲೈ ಮುನಿಯೇ, ನೀನು ಎಲ್ಲೆಲ್ಲಿ ಬಯಸುತ್ತೀಯೋ ಅದರಂತೆ ಕ್ಷೀರಸಮುದ್ರದಲ್ಲಿಯೂ ನಿನ್ನ ಸನ್ನಿಧಾನವಿರಲಿ. ನೀನು ಅಮೃತದಿಂದ ಯುಕ್ತವಾದ ಕ್ಷೀರಾನ್ನವನ್ನು ಭುಂಜಿಸುವವನಾಗು.

ಬಂಧುಭಿಃ ಸಹಿತಃ ಕಲ್ಪಂ ತತೋ ಮಾಮುಪಯಾಸ್ಯಸಿ ।
ಸಾನ್ನಿಧ್ಯಮಾಶ್ರಮೇ ತುಭ್ಯಂ ಕರಿಷ್ಯಾಮಿ ದ್ವಿಜೋತ್ತಮ ॥೩೧೦॥

ಒಂದು ಕಲ್ಪದವರೆಗೆ ಬಂಧುಗಳಿಂದ ಸಹಿತನಾಗಿ ಈ ಭೋಗವನ್ನು ಅನುಭವಿಸಿ ಅನಂತರ ನನ್ನ ಸಮೀಪಕ್ಕೆ ಬರುವಿ. ಎಲೈ ದ್ವಿಜೋತ್ತಮನೇ, ನಿನ್ನ ಆಶ್ರಮದಲ್ಲಿ ನಾನು ನಿತ್ಯವೂ ಸನ್ನಿಹಿತನಾಗಿರುತ್ತೇನೆ.

ತಿಷ್ಠ ವತ್ಸ ಯಥಾಕಾಮಂ ನೋತ್ಕಂಠಾಂ ಕರ್ತುಮರ್ಹಸಿ ।
ಸ್ಮೃತಃ ಸ್ಮೃತಶ್ಚ ತೇ ವತ್ಸ ಸದಾ ದಾಸ್ಯಾಮಿ ದರ್ಶನಮ್ ॥೩೧೧॥

ವತ್ಸನೇ, ನಿನ್ನ ಮನಸ್ಸಿಗೆ ಬಂದಂತೆ ಇಲ್ಲಿಯೇ ಇರು. ಆತಂಕ ಪಡಬೇಡ. ವತ್ಸನೇ, ನೀನು ಸ್ಮರಣೆ ಮಾಡಿದಾಗಲೆಲ್ಲ ನಿನಗೆ ದರ್ಶನವನ್ನು ನೀಡುವೆನು.

ಏವಮುಕ್ತ್ವಾ ಸ ಭಗವಾನ್ ಸೂರ್ಯಕೋಟಿಸಮಪ್ರಭಃ ।
ಮಮೇಶಾನೋ ವರಂ ದತ್ತ್ವಾ ತತ್ರೈವಾಂತರಧೀಯತ ॥೩೧೨॥

ಸೂರ್ಯಕೋಟಿ ಸಮಪ್ರಭೆಯುಳ್ಳ ಭಗವಂತನಾದ ಈಶ್ವರನು ನನ್ನನ್ನು ಕುರಿತು ಹೀಗೆ ಹೇಳಿ, ನನಗೆ ವರವನ್ನು ಕೊಟ್ಟು ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಏವಂ ದೃಷ್ಟೋ ಮಯಾ ಕೃಷ್ಣ ದೇವದೇವಃ ಸಮಾಧಿನಾ ।
ತದವಾಪ್ತಂ ಚ ಮೇ ಸರ್ವಂ ಯದುಕ್ತಂ ತೇನ ಧೀಮತಾ ॥೩೧೩॥

ಎಲೈ ಕೃಷ್ಣನೇ, ದೇವದೇವನಾದ ಅವನು ಸಮಾಧಿಯಲ್ಲಿ ಈ ರೀತಿಯಲ್ಲಿ ನನ್ನಿಂದ ನೋಡಲ್ಪಟ್ಟನು. ಮೇಧಾವಿಯಾದ ಅವನು ಹೇಳಿದುದೆಲ್ಲವೂ ನನಗೆ ಪ್ರಾಪ್ತವಾಯಿತು.

ಪ್ರತ್ಯಕ್ಷಂ ಚೈವ ತೇ ಕೃಷ್ಣ ಪಶ್ಯ ಸಿದ್ಧಾನ್ ವ್ಯವಸ್ಥಿತಾನ್ ।
ಋಷೀನ್ ವಿದ್ಯಾಧರಾನ್ ಯಕ್ಷಾನ್ ಗಂಧರ್ವಾಪ್ಸರಸಸ್ತಥಾ ॥೩೧೪॥

ಎಲೈ ಕೃಷ್ಣನೇ, ನಿನ್ನ ಕಣ್ಣೆದುರಿಗೆ ಈ ಆಶ್ರಮದಲ್ಲಿ ಸನ್ನಿಹಿತರಾಗಿರುವ ಸಿದ್ಧರನ್ನೂ, ಋಷಿಗಳನ್ನೂ, ವಿದ್ಯಾಧರರನ್ನೂ, ಯಕ್ಷರನ್ನೂ, ಗಂಧರ್ವಾಪ್ಸರರನ್ನೂ ನೋಡು.

ಪಶ್ಯ ವೃಕ್ಷಾನ್ ಮನೋರಮ್ಯಾನ್ ಸದಾ ಪುಷ್ಪಫಲಾನ್ವಿತಾನ್ ।
ಸರ್ವರ್ತುಕುಸುಮೈರ್ಯುಕ್ತಾನ್ ಸ್ನಿಗ್ಧಪತ್ರಾನ್ ಸುಗಂಧಿನಃ ॥೩೧೫॥

ಮನೋಹರವಾದ, ಸದಾ ಪುಷ್ಪ-ಫಲಭರಿತವಾದ, ಎಲ್ಲ ಋತುಗಳಲ್ಲಿಯೂ ಪುಷ್ಪಗಳಿಂದ ಕೂಡಿದ, ನಿಬಿಡವಾದ ಫಲಗಳಿಂದ ಕೂಡಿದ ಈ ವೃಕ್ಷಗಳನ್ನು ನೋಡು.

ಏವಮೇತನ್ಮಹಾಬಾಹೋ ದಿವ್ಯಭಾವಸಮನ್ವಿತಮ್ ।
ಪ್ರಸಾದಾದ್ ದೇವದೇವಸ್ಯ ಈಶ್ವರಸ್ಯ ಮಹಾತ್ಮನಃ ॥೩೧೬॥

ಎಲೈ ಮಹಾಬಾಹುವೇ, ದೇವದೇವನೂ ಮಹಾತ್ಮನೂ ಆದ ಈಶ್ವರನ ಅನುಗ್ರಹದಿಂದ ಈ ನನ್ನ ಆಶ್ರಮವು ದಿವ್ಯಭಾವಗಳಿಂದ ಕೂಡಿದೆ.

ವಾಸುದೇವಃ

ಏತಚ್ಛ್ರುತ್ವಾ ವಚಸ್ತಸ್ಯ ಪ್ರತ್ಯಕ್ಷಮಿವ ದರ್ಶನಮ್ ।
ವಿಸ್ಮಯಂ ಪರಮಂ ಗತ್ವಾ ಅಬ್ರುವಂ ತಂ ಮಹಾಮುನಿಮ್ ॥೩೧೭॥

ವಾಸುದೇವ– ಅವನ ಈ ಮಾತುಗಳನ್ನು ಕೇಳಿ, ಎಲ್ಲವೂ ಪ್ರತ್ಯಕ್ಷವಾಗಿ ಕಾಣುತ್ತಿರುವಂತೆ ಬಹಳ ವಿಸ್ಮಯವನ್ನು ಹೊಂದಿ, ಆ ಮಹಾಮುನಿಯನ್ನು ಕುರಿತು ಹೇಳಿದೆನು.

ಧನ್ಯಸ್ತ್ವಮಸಿ ವಿಪ್ರೇಂದ್ರ ಕಸ್ತ್ವದನ್ಯೋಽಸ್ತಿ ಪುಣ್ಯಕೃತ್ ।
ಯಸ್ಯ ದೇವಾಧಿದೇವಸ್ತೇ ಸಾನ್ನಿಧ್ಯಂ ಕುರುತೇಽಶ್ರಮೇ ॥೩೧೮॥

ಎಲೈ ವಿಪ್ರೇಂದ್ರನೇ, ನೀನು ಧನ್ಯನಾಗಿದ್ದೀಯೆ. ದೇವಾಧಿದೇವನಾದ ಶಿವನು ನಿನ್ನ ಆಶ್ರಮದಲ್ಲಿ ಸನ್ನಿಹಿತನಾಗಿರುವುದರಿಂದ ನಿನಗಿಂತ ಪುಣ್ಯಶಾಲಿಯಾದವನು ಬೇರೆ ಯಾವನಿದ್ದಾನೆ?

ಅಪಿ ತಾವನ್ಮಮಾಪ್ಯೇವಂ ದದ್ಯಾತ್ ಸ ಭಗವಾನ್ ಶಿವಃ ।
ದರ್ಶನಂ ಮುನಿಶಾರ್ದೂಲ ಪ್ರಸಾದಂ ಚಾಪಿ ಶಂಕರಃ ॥೩೧೯॥

ಎಲೈ ಮುನಿಶಾರ್ದೂಲನೇ, ನನಗೂ ಸಹ ಭಗವಂತನಾದ ಶಿವನು ಇಂತಹ ದರ್ಶನವನ್ನು ಕೊಡಲಿ. ಶಂಕರನು ನನಗೂ ಅನುಗ್ರಹವನ್ನು ಮಾಡಲಿ (ಎಂದು ಹೇಳಿದೆನು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ
ಉಪಮನ್ಯು-ಶ್ರೀಕೃಷ್ಣಸಂವಾದೇ ತ್ರಯಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ನಾಲ್ಕನೆಯ ಅಧ್ಯಾಯ

ತಪಸ್ಸನ್ನು ಆಚರಿಸಿದ ಕೃಷ್ಣನಿಂದ ಶಿವ-ಪಾರ್ವತಿಯರ ದರ್ಶನ

ಉಪಮನ್ಯುಃ

ದ್ರಕ್ಷ್ಯಸೇ ಪುಂಡರೀಕಾಕ್ಷ ಮಹಾದೇವಂ ನ ಸಂಶಯಃ ।
ಅಚಿರೇಣೈವ ಕಾಲೇನ ಯಥಾ ದೃಷ್ಟೋ ಮಯಾऽನಘ ॥೧॥

ಉಪಮನ್ಯು- ಎಲೈ ಪುಂಡರೀಕಾಕ್ಷನೇ, ಅನಘನೇ, ನೀನು ಅಲ್ಪಕಾಲದಲ್ಲಿಯೇ ನನ್ನ ದೃಷ್ಟಿಗೆ ಗೋಚರಿಸಿದಂತೆ ಮಹಾದೇವನನ್ನು ನೋಡುವುದರಲ್ಲಿ ಸಂಶಯವಿಲ್ಲ.

ಚಕ್ಷುಷಾ ಚೈವ ದಿವ್ಯೇನ ಪಶ್ಯಾಮ್ಯಮಿತವಿಕ್ರಮ ।
ಷಷ್ಠೇ ಮಾಸಿ ಮಹಾದೇವಂ ದ್ರಕ್ಷ್ಯಸೇ ಪುರುಷೋತ್ತಮ ॥೨॥

ಎಲೈ ಅಮಿತವಿಕ್ರಮನೇ, ಎಲೈ ಪುರುಷೋತ್ತಮನೇ, ಇಲ್ಲಿಂದ ಆರನೆಯ ತಿಂಗಳಿನಲ್ಲಿ ನೀನು ಮಹಾದೇವನನ್ನು ನೋಡುವಿ ಎಂದು ನಾನು ನನ್ನ ದಿವ್ಯದೃಷ್ಟಿಯಿಂದ ನೋಡುತ್ತಿದ್ದೇನೆ.

ಷೋಡಶಾಷ್ಟೌ ವರಾಂಶ್ಚಾಪಿ ಪ್ರಾಪ್ಸ್ಯಸಿ ತ್ವಂ ಮಹೇಶ್ವರಾತ್ ।
ಸಪತ್ನೀಕಾದ್ ಯದುಶ್ರೇಷ್ಠ ಸತ್ಯಮೇತದ್ ಬ್ರವೀಮಿ ತೇ ॥೩॥

ಎಲೈ ಯದುಶ್ರೇಷ್ಠನೇ, ನೀನು ಪತ್ನೀಸಹಿತನಾದ ಮಹೇಶ್ವರನಿಂದ ಹದಿನಾರು ಮತ್ತು ಎಂಟುವರಗಳನ್ನು ಪಡೆಯುವಿ. ನಿನಗೆ ಸತ್ಯವಾದ ಈ ವಿಷಯವನ್ನು ಹೇಳುತ್ತಿದ್ದೇನೆ.

ಅತೀತಾನಾಗತಂ ಚೈವ ವರ್ತಮಾನಂ ಚ ನಿತ್ಯಶಃ ।
ವಿದಿತಂ ಮೇ ಮಹಾಬಾಹೋ ಪ್ರಸಾದಾತ್ ತಸ್ಯ ಧೀಮತಃ ।
ಏತಾನ್ ಸಹಸ್ರಶಶ್ಚಾನ್ಯಾನ್ ಸಮನುಧ್ಯಾತವಾನ್ ಹರಃ ॥೪॥

ಎಲೈ ಮಹಾಬಾಹುವೇ, ಮೇಧಾವಿಯಾದ ಆ ಶಿವನ ಅನುಗ್ರಹದಿಂದ ನನಗೆ ಭೂತ-ಭವಿಷ್ಯತ್-ವರ್ತಮಾನಗಳ ಜ್ಞಾನವು ಯಾವಾಗಲೂ ಇದೆ. ಶಿವನು ಇದನ್ನು ಇಂತಹ ಅನೇಕ ಸಹಸ್ರ ವಿಷಯಗಳನ್ನು ನಿನ್ನ ವಿಷಯದಲ್ಲಿ ಚಿಂತಿಸಿದ್ದಾನೆ.

ಕಸ್ಮಾತ್ ಪ್ರಸಾದಂ ಭಗವಾನ್ನ ಕುರ್ಯಾತ್ ತವ ಮಾಧವ ।
ತಾದೃಶೇನ ಹಿ ದೇವಾನಾಂ ಶ್ಲಾಘನೀಯಃ ಸಮಾಗಮಃ ॥೫॥

ಬ್ರಹ್ಮಣ್ಯೇನಾನೃಶಂಸೇನ ಶ್ರದ್ದಧಾನೇನ ಚಾಪ್ಯುತ ।
ಜಪ್ಯಂ ಚ ತೇ ಪ್ರದಾಸ್ಯಾಮಿ ಯೇನ ದ್ರಕ್ಷ್ಯಸಿ ಶಂಕರಮ್ ॥೬॥

ಎಲೈ ಮಾಧವನೇ, ನಿನಗೆ ಶಿವನು ಏಕೆ ಅನುಗ್ರಹವನ್ನು ಮಾಡಲಾರ? ನಿನ್ನಂತಹ ಬ್ರಾಹ್ಮಣ ವತ್ಸಲನೂ, ದಯಾಪರನೂ, ಶ್ರದ್ಧಾಯುಕ್ತನೂ ಆದ ಪುರುಷನ ಜೊತೆಯಲ್ಲಿ ಸಮಾಗಮವು ದೇವತೆಗಳಿಗೂ ಶ್ಲಾಘ್ಯವಾದುದು. ನೀನು ಶಂಕರನನ್ನು ನೋಡುವಂತೆ ನಿನಗೆ ಮಂತ್ರವನ್ನುಪದೇಶಿಸುತ್ತೇನೆ.

ಕೃಷ್ಣಃ

ಅಬ್ರುವಂ ತಮಹಂ ಬ್ರಹ್ಮಂಸ್ತ್ವತ್ಪ್ರಸಾದಾನ್ಮಹಾಮುನೇ ।
ದ್ರಕ್ಷ್ಯೇ ದಿತಿಜಸಂಘಾನಾಂ ಮರ್ದನಂ ತ್ರಿದಶೇಶ್ವರಮ್ ॥೭॥

ಕೃಷ್ಣ– ನಾನು ಉಪಮನ್ಯುವನ್ನು ಕುರಿತು ಎಲೈ ಮಹಾಮುನಿಯೇ, ಬ್ರಾಹ್ಮಣಶ್ರೇಷ್ಠನೇ, ನಿನ್ನ ಅನುಗ್ರಹದಿಂದ ನಾನು ದೈತ್ಯಸಮೂಹವನ್ನು ಮರ್ದಿಸುವ ತ್ರಿದಶೇಶ್ವರನಾದ ಶಿವನನ್ನು ನೋಡುವೆನು ಎಂದು ಹೇಳಿದೆನು.

ದಿನೇಽಷ್ಟಮೇ ಚ ವಿಪ್ರೇಣ ದೀಕ್ಷಿತೋಽಹಂ ಯಥಾವಿಧಿ ।
ದಂಡೀ ಮುಂಡೀ ಕುಶೀ ಚೀರೀ ಫೃತಾಕ್ತೋ ಮೇಖಲೀ ತಥಾ ॥೮॥

ಎಂಟನೆಯ ದಿವಸದಲ್ಲಿ ನಾನು ವಿಧಿಗೆ ಅನುಗುಣವಾಗಿ ಆ ಬ್ರಾಹ್ಮಣನಿಂದ ದೀಕ್ಷೆಯನ್ನು ಪಡೆದು ದಂಡ, ಕುಶಗಳನ್ನು ಧರಿಸಿ, ಮುಂಡನವನ್ನು ಮಾಡಿಕೊಂಡು, ನಾರುಮಡಿಯನ್ನುಟ್ಟು, ಘೃತಾಕ್ತನಾಗಿ ಮೇಖಲವನ್ನು ಧರಿಸಿದೆನು.

ಮಾಸಮೇಕಂ ಫಲಾಹಾರೋ ದ್ವಿತೀಯಂ ಸಲಿಲಾಶನಃ ।
ತೃತೀಯಂ ಚ ಚತುರ್ಥಂ ಚ ಪಂಚಮಂ ಚಾನಿಲಾಶನಃ ॥೯॥

ಒಂದು ತಿಂಗಳು ಫಲಾಹಾರ, ಎರಡನೆಯ ತಿಂಗಳಿನಲ್ಲಿ ಜಲಪಾನ, ತೃತೀಯ, ಚತುರ್ಥ ಮತ್ತು ಪಂಚಮ ಮಾಸಗಳಲ್ಲಿ ವಾಯುಭಕ್ಷ್ಯನಾದೆನು.

ಏಕಪಾದೇನ ತಿಷ್ಠಂಶ್ಚ ಊರ್ಧ್ವಬಾಹುರತಂದ್ರಿತಃ ।
ತೇಜಃ ಸೂರ್ಯಸಹಸ್ರಸ್ಯ ಅಪಶ್ಯಂ ದಿವಿ ಭಾರತ ॥೧೦॥

ಕೈಗಳನ್ನು ಮೇಲಕ್ಕೆ ಎತ್ತಿ, ಒಂದು ಪಾದದ ಮೇಲೆ ನಿಂತು, ಆಲಸ್ಯವಿಲ್ಲದೆ ತಪಸ್ಸನ್ನು ಮಾಡಿ ಎಲೈ ಭಾರತನೇ, ಆಕಾಶದಲ್ಲಿ ಸಹಸ್ರ ಸೂರ್ಯರ ತೇಜಸ್ಸನ್ನು ನೋಡಿದೆನು.

ತಸ್ಯ ಮಧ್ಯಗತಂ ಚಾಪಿ ತೇಜಸಃ ಪಾಂಡುನಂದನ ।
ಇಂದ್ರಾಯುಧಪಿನದ್ಧಾಂಗಂ ವಿದ್ಯುನ್ಮಾಲಾಗವಾಕ್ಷಕಮ್ ।
ನೀಲಶೈಲಚಯಪ್ರಖ್ಯಂ ಬಲಾಕಾಭೂಷಿತಾಂಬರಮ್ ॥೧೧॥

ಎಲೈ ಪಾಂಡುನಂದನನೇ, ಆ ತೇಜಸ್ಸಿನ ಮಧ್ಯದಲ್ಲಿ ಇದ್ದ, ಇಂದ್ರಾಯುಧವನ್ನು ಕೈಯಲ್ಲಿ ಹಿಡಿದ, ವಿದ್ಯುನ್ಮಾಲೆಗಳ ಗವಾಕ್ಷವನ್ನು ಹೊಂದಿದ, ನೀಲಪರ್ವತದಂತೆ ಕಾಂತಿಯನ್ನು ಹೊಂದಿದ, ಬಲಾಕಪಕ್ಷಿಗಳಿಂದ ಭೂಷಿತವಾದ ಮೇಘದಂತಿದ್ದ ತೇಜೋರಾಶಿಯನ್ನು ನೋಡಿದೆನು.

ತಮಾಸ್ಥಿತಶ್ಚ ಭಗವಾನ್ ದೇವ್ಯಾ ಸಹ ಮಹಾದ್ಯುತಿಃ ।
ತಪಸಾ ತೇಜಸಾ ಕಾಂತ್ಯಾ ದೀಪ್ತಯಾ ಸಹ ಭಾರ್ಯಯಾ ॥೧೨॥

ಆ ತೇಜೋರಾಶಿಯನ್ನು ಆಶ್ರಯಿಸಿದ, ತಪಸ್ಸಿನಿಂದಲೂ, ತೇಜಸ್ಸಿನಿಂದಲೂ, ಕಾಂತಿಯಿಂದಲೂ ಕೂಡಿದ, ತನ್ನ ಪತ್ನಿಯಾದ ಪಾರ್ವತಿಯಿಂದ ಸಹಿತನಾದ, ಮಹಾಪ್ರಭೆಯುಳ್ಳ ಭಗವಂತನಾದ ಶಿವನನ್ನು ನೋಡಿದೆನು.

ರರಾಜ ಭಗವಾಂಸ್ತತ್ರ ದೇವ್ಯಾ ಸಹ ಮಹೇಶ್ವರಃ ।
ಸೋಮೇನ ಸಹಿತಃ ಸೂರ್ಯೋ ಯಥಾ ಮೇಘಸ್ಥಿತಸ್ತಥಾ ॥೧೩॥

ದೇವಿಯಿಂದ ಸಹಿತನಾದ, ಭಗವಂತನಾದ ಮಹೇಶ್ವರನು ಅಲ್ಲಿ ಮೇಘಸ್ಥಿತನಾದ ಸೂರ್ಯನು ಚಂದ್ರನಿಂದ ಸಹಿತನಾದಂತೆ ವಿರಾಜಿಸಿದನು.

ಸಂಹೃಷ್ಟರೋಮಾ ಕೌಂತೇಯ ವಿಸ್ಮಯೋತ್ಫುಲ್ಲಲೋಚನಃ ।
ಅಪಶ್ಯಂ ದೇವಸಂಘಾನಾಂ ಗತಿಮಾರ್ತಿಹರಂ ಹರಮ್ ॥೧೪॥

ಎಲೈ ಕೌಂತೇಯನೇ, ನಾನು ರೋಮಾಂಚಗೊಂಡು ವಿಸ್ಮಯದಿಂದ ಅರಳಿದ

ಕಣ್ಣುಳ್ಳವನಾಗಿ, ದೇವಸಂಘಗಳಿಗೆ ಗತಿಯೂ, ದೇವಸಂಘಗಳ ದುಃಖ ಪರಿಹಾರಕನೂ ಆದ ಹರನನ್ನು ನೋಡಿದೆನು.

ಕಿರೀಟಿನಂ ಗದಿನಂ ಶೂಲಪಾಣಿಂ
ವ್ಯಾಘ್ರಾಜಿನಂ ಜಟಿಲಂ ದಂಡಪಾಣಿಮ್ ।
ಪಿನಾಕಿನಂ ವಜ್ರಿಣಂ ತೀಕ್ಷ್ಣದಂಷ್ಟ್ರಂ
ಶುಭಾಂಗದಂ ವ್ಯಾಳಯಜ್ಞೋಪವೀತಮ್ ॥೧೫॥

ಕಿರೀಟ, ಗದೆ ಮತ್ತು ಶೂಲಗಳನ್ನು ಧರಿಸಿದ, ವ್ಯಾಘ್ರಾಜಿನವನ್ನು ಉಟ್ಟಿರುವ ಜಟಿಲನೂ, ದಂಡಪಾಣಿಯೂ, ಪಿನಾಕಿಯೂ, ವಜ್ರಹಸ್ತನೂ, ತೀಕ್ಷ್ಣದಂಷ್ಟ್ರನೂ, ಶುಭಾಂಗದ ಉಳ್ಳವನೂ, ಸರ್ಪಯಜ್ಞೋಪವೀತನೂ ಆದ,

ದಿವ್ಯಾಂ ಮಾಲಾಮುರಸಾನೇಕವರ್ಣಾಂ
ಸಮುದ್ವಹಂತಂ ಗುಹ್ಯದೇಶಾವಲಂಬಾಮ್ ।
ಚಂದ್ರಂ ಯಥಾ ಪರಿವಿಷ್ಟಂ ಸಸಂಧ್ಯಂ
ವರ್ಷಾತ್ಯಯೇ ತದ್ವದಪಶ್ಯಮೇನಮ್ ॥೧೬॥

ಕಟಿಪ್ರದೇಶದವರಿಗೂ ಇಳಿಬಿದ್ದ ಸುವರ್ಣಮಯವಾದ ದಿವ್ಯವಾದ ಮಾಲೆಯನ್ನು ಧರಿಸಿದವನೂ, ವರ್ಷಾಕಾಲದ ಅಂತ್ಯದಲ್ಲಿ ಸಂಧ್ಯಾಕಾಲದಲ್ಲಿ ಪರಿವೇಷವನ್ನು ಹೊಂದಿದ ಚಂದ್ರನಂತೆ ಇದ್ದವನೂ ಆದ ಆ ಶಿವನನ್ನು ನೋಡಿದೆನು.

ಪ್ರಮಥಾನಾಂ ಗಣೈಶ್ಚೈವ ಸಮಂತಾತ್ ಪರಿವಾರಿತಮ್ ।
ಶರದೀವ ಸುದುಷ್ಪ್ರೇಕ್ಷ್ಯಂ ಪರಿವಿಷ್ಟಂ ದಿವಾಕರಮ್ ॥೧೭॥

ಪ್ರಮಥರ ಗಣದಿಂದ ಸುತ್ತಲೂ ಪರಿವೃತನಾದವನೂ, ಶರತ್ಕಾಲದ ಪರಿವೇಷಗೊಂಡ ಸೂರ್ಯನಂತೆ ನೋಡಲು ಅಸಾಧ್ಯನಾದವನೂ ಆದ ಶಿವನನ್ನು ನೋಡಿದೆನು.

ಏಕಾದಶ ತಥಾ ಚೈನಂ ರುದ್ರಾಣಾಂ ವೃಷವಾಹನಮ್ ।
ಅಸ್ತುವನ್ ನಿಯತಾತ್ಮಾನಃ ಕರ್ಮಭಿಃ ಶುಭಕರ್ಮಿಣಮ್ ॥೧೮॥

ನಿಯತ ಮನಸ್ಸುಳ್ಳ ಏಕಾದಶರುದ್ರರು ಶುಭಕರ್ಮಗಳನ್ನು ಮಾಡುವ ವೃಷವಾಹನನನ್ನು ಅವನ ಕರ್ಮಗಳಿಂದ ಸ್ತೋತ್ರ ಮಾಡಿದರು.

ಆದಿತ್ಯಾ ವಸವಃ ಸಾಧ್ಯಾ ವಿಶ್ವೇದೇವಾಸ್ತಥಾಶ್ವಿನೌ ।
ವಿಶ್ವಾಭಿಃ ಸ್ತುತಿಭಿರ್ದೇವಂ ವಿಶ್ವದೇವಂ ಸಮಸ್ತುವನ್ ॥೧೯॥

ಆದಿತ್ಯರು, ವಸುಗಳು, ಸಾಧ್ಯರು, ವಿಶ್ವೇದೇವತೆಗಳು, ಅಶ್ವಿನಿಗಳು ಅನೇಕ ಸ್ತೋತ್ರಗಳಿಂದ ವಿಶ್ವದೇವನಾದ ಶಿವನನ್ನು ಸ್ತೋತ್ರ ಮಾಡಿದರು.

ಶತಕ್ರತುಶ್ಚ ಭಗವಾನ್ ವಿಷ್ಣುಶ್ಚಾದಿತಿನಂದನೌ ।
ಬ್ರಹ್ಮಾ ರಥಂತರಂ ಸಾಮ ಈರಯಂತಿ ಭವಾಂತಿಕೇ ॥೨೦॥

ಅದಿತಿ ಪುತ್ರರಾದ ಇಂದ್ರನು ಮತ್ತು ಪೂಜ್ಯನಾದ ವಿಷ್ಣುವು ಶಿವನ ಸಮೀಪದಲ್ಲಿ ಸ್ತೋತ್ರ ಮಾಡಿದರು. ಬ್ರಹ್ಮದೇವನು ರಥಂತರ ಸಾಮವನ್ನು ಗಾನ ಮಾಡಿದನು.

ಯೋಗೀಶ್ವರಾಃ ಸುಬಹವೋ ಯೋಗದಂ ಪಿತರಂ ಗುರುಮ್ ।
ಬ್ರಹ್ಮರ್ಷಯಶ್ಚ ಸಸುತಾಸ್ತಥಾ ದೇವರ್ಷಯಶ್ಚ ವೈ ॥೨೧॥

ಪೃಥಿವೀ ಚಾಂತರಿಕ್ಷಂ ಚ ನಕ್ಷತ್ರಾಣಿ ಗ್ರಹಾಸ್ತಥಾ ।
ಮಾಸಾರ್ಧಮಾಸಾ ಋತವೋ ರಾತ್ರ್ಯಃ ಸಂವತ್ಸರಾಃ ಕ್ಷಣಾಃ ॥೨೨॥

ಮುಹೂರ್ತಾಶ್ಚ ನಿಮೇಷಾಶ್ಚ ತಥೈವ ಯುಗಪರ್ಯಯಾಃ ।
ದಿವ್ಯಾ ರಾಜನ್ ನಮಸ್ಯಂತಿ ವಿದ್ಯಾಃ ಸರ್ವಾ ದಿಶಸ್ತಥಾ ॥೨೩॥

ಎಲೈ ರಾಜನೇ, ಯೋಗಫಲಪ್ರದನಾದ, ಸರ್ವಲೋಕ ಪಿತೃವಾದ, ಗುರುವಾದ ಶಿವನಿಗೆ ಅನೇಕ ಯೋಗೀಶ್ವರರು, ಪುತ್ರಸಹಿತರಾದ ಬ್ರಹ್ಮರ್ಷಿಗಳು, ದೇವರ್ಷಿಗಳು, ಭೂಮಿ, ಅಂತರಿಕ್ಷ, ನಕ್ಷತ್ರಗಳು, ಗ್ರಹಗಳು, ಮಾಸಗಳು, ಅರ್ಧಮಾಸಗಳು, ಋತುಗಳು, ರಾತ್ರಿಗಳು, ಸಂವತ್ಸರಗಳು, ಕ್ಷಣಗಳು, ಮುಹೂರ್ತಗಳು, ನಿಮಿಷಗಳು, ಯುಗಪರ್ಯಾಯಗಳು, ಸರ್ವದಿಗ್‌ವಿದ್ಯೆಗಳು ನಮಸ್ಕಾರವನ್ನು ಮಾಡಿದವು.

ಸನತ್ಕುಮಾರೋ ವೇದಾಶ್ಚ ಇತಿಹಾಸಾಸ್ತಥೈವ ಚ ।
ಮರೀಚಿರಂಗಿರಾ ಅತ್ರಿಃ ಪುಲಸ್ತ್ಯಃ ಪುಲಹಃ ಕ್ರತುಃ ॥೨೪॥

ಮುನಯಃ ಸಪ್ತಸೋಮಶ್ಚ ಅಥರ್ವಾ ಸಬೃಹಸ್ಪತಿಃ ।
ಭೃಗುರ್ದಕ್ಷಃ ಕಶ್ಯಪಶ್ಚ ವಸಿಷ್ಠಃ ಕಾಶ್ಯ ಏವ ಚ ॥೨೫॥

ಸನತ್ಕುಮಾರನು, ವೇದಗಳು, ಇತಿಹಾಸಗಳು, ಮರೀಚಿ, ಅಂಗಿರ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ಋಷಿಗಳು, ಸಪ್ತಸೋಮಗಳು, ಅಥರ್ವರು, ಬೃಹಸ್ಪತಿ, ಭೃಗು, ದಕ್ಷ, ಕಶ್ಯಪ, ವಸಿಷ್ಠ, ಕಾಶ್ಯ;

ಛಂದಾಂಸಿ ದೀಕ್ಷಾ ಯಜ್ಞಾಶ್ಚ ದಕ್ಷಿಣಾಃ ಪಾವಕೋ ಹವಿಃ ।
ಯಜ್ಞೋಪಗಾನಿ ದ್ರವ್ಯಾಣಿ ಮೂರ್ತಿಮಂತಿ ಯುಧಿಷ್ಠಿರ ॥೨೬॥

ಪ್ರಜಾನಾಂ ಪತಯಃ ಸರ್ವೇ ಸರಿತಃ ಪನ್ನಗಾ ನಗಾಃ ।
ದೇವಾನಾಂ ಮಾತರಃ ಸರ್ವಾ ದೇವಪತ್ನ್ಯಃ ಸಕನ್ಯಕಾಃ ॥೨೭॥

ಛಂದಸ್ಸುಗಳು, ದೀಕ್ಷೆ, ಯಜ್ಞಗಳು, ದಕ್ಷಿಣೆಗಳು, ಅಗ್ನಿ, ಹವಿಸ್ಸು, ಎಲೈ ಯುಧಿಷ್ಠಿರನೇ, ಶರೀರವನ್ನು ಧರಿಸಿದ ಯಜ್ಞಸಂಬಂಧಿ ದ್ರವ್ಯಗಳು, ಎಲ್ಲಾ ಪ್ರಜಾಪತಿಗಳು, ನದಿಗಳು, ಸರ್ಪಗಳು, ಪರ್ವತಗಳು, ದೇವಮಾತೆಯರು, ಎಲ್ಲ ದೇವಪತ್ನಿಯರು, ದೇವಕನ್ನಿಕೆಯರು;

ಸಹಸ್ರಾಣಿ ಮುನೀನಾಂ ಚ ಅಯುತಾನ್ಯರ್ಬುದಾನಿ ಚ ।
ನಮಸ್ಯಂತಿ ಪ್ರಭುಂ ಶಾಂತಂ ಪರ್ವತಾಃ ಸಾಗರಾ ದಿಶಃ ॥೨೮॥

ಅಯುತ, ಅರ್ಬುದ ಸಹಸ್ರ ಋಷಿಗಳು, ಪರ್ವತಗಳು, ಸಾಗರಗಳು, ದಿಕ್ಕುಗಳು ಇವರೆಲ್ಲರೂ ಶಾಂತನಾದ, ಪ್ರಭುವಾದ ಶಿವನಿಗೆ ನಮಸ್ಕಾರವನ್ನು ಮಾಡಿದರು.

ಗಂಧರ್ವಾಪ್ಸರಸಶ್ಚೈವ ಗೀತವಾದಿತ್ರಕೋವಿದಾಃ ।
ದಿವ್ಯತಾನೇನ ಗಾಯಂತಃ ಸ್ತುವಂತಿ ಭವಮದ್ಭುತಮ್ ।
ವಿದ್ಯಾಧರಾ ದಾನವಾಶ್ಚ ಗುಹ್ಯಕಾ ರಾಕ್ಷಸಾಸ್ತಥಾ ॥೨೯॥

ಸರ್ವಾಣಿ ಚೈವ ಭೂತಾನಿ ಸ್ಥಾವರಾಣಿ ಚರಾಣಿ ಚ ।
ನಮಸ್ಯಂತಿ ಮಹಾರಾಜ ವಾಙ್ಮನಃಕರ್ಮಭಿಃ ಪ್ರಭುಮ್ ।
ಪುರಸ್ತಾದ್ ವಿಷ್ಠಿತಃ ಶರ್ವೋ ಮಮಾಸೀತ್ ತ್ರಿದಶೇಶ್ವರಃ ॥೩೦॥

ಗೀತ-ವಾದ್ಯಕೋವಿದರಾದ ಗಂಧರ್ವಾಪ್ಸರರು, ದಿವ್ಯತಾನಗಳಿಂದ ಗಾನ ಮಾಡುತ್ತಾ ಶಿವನನ್ನು ಅದ್ಭುತವಾಗಿ ಸ್ತೋತ್ರ ಮಾಡಿದರು. ವಿದ್ಯಾಧರರೂ, ದಾನವರೂ, ಗುಹ್ಯಕರೂ, ರಾಕ್ಷಸರೂ, ಚರಾಚರವಾದ ಸರ್ವಭೂತಗಳೂ, ಎಲೈ ಮಹಾರಾಜನೇ, ವಾಙ್ಮನಃ ಕರ್ಮಗಳಿಂದ ಪ್ರಭುವಾದ ಶಿವನನ್ನು ಸ್ತೋತ್ರ ಮಾಡಿದವು. ತ್ರಿದಶೇಶ್ವರನಾದ ಶರ್ವನು ನನ್ನ ಎದುರಿನಲ್ಲಿ ಸ್ಥಿತನಾದನು.

ಪುರಸ್ತಾದ್ ವಿಷ್ಠಿತಂ ದೃಷ್ಟ್ವಾ ಮಮೇಶಾನಂ ಚ ಭಾರತ ।
ಸಪ್ರಜಾಪತಿಶಕ್ರಾಂತಂ ಜಗನ್ಮಾಮಭ್ಯುದೈಕ್ಷತ ॥೩೧॥

ಎಲೈ ಭಾರತನೇ, ನನ್ನ ಎದುರಿಗೆ ನಿಂತ ಈಶಾನನನ್ನು ನೋಡಿ ಪ್ರಜಾಪತಿಗಳಿಂದ ಹಿಡಿದು ಇಂದ್ರನವರೆಗಿನ ಜಗತ್ತು ನನ್ನನ್ನು ನೋಡಿತು.

ಈಕ್ಷಿತುಂ ಚ ಮಹಾದೇವಂ ನ ಮೇ ಶಕ್ತಿರಭೂತ್ತದಾ ।
ತತೋ ಮಾಮಬ್ರವೀದ್ ದೇವಃ ಪಶ್ಯ ಕೃಷ್ಣ ವದಸ್ವ ಚ ॥೩೨॥

ಮಹಾದೇವನನ್ನು ನೋಡಲೂ ಆಗ ನನಗೆ ಶಕ್ತಿ ಇರಲಿಲ್ಲ. ಆಗ ಆ ದೇವನು ನನ್ನನ್ನು ಕುರಿತು ಕೃಷ್ಣನೇ, ನನ್ನನ್ನು ನೋಡು, ಮಾತನಾಡು ಎಂದು ಹೇಳಿದನು.

ಶಿರಸಾ ವಂದಿತೇ ದೇವೇ ದೇವೀ ಪ್ರೀತಾ ಉಮಾऽಭವತ್ ।
ತತೋऽಹಮಸ್ತುವಂ ಸ್ಥಾಣುಂ ಸ್ತುತಂ ಬ್ರಹ್ಮಾದಿಭಿಃ ಸುರೈಃ ॥೩೩॥

ನಾನು ಶಿವನಿಗೆ ಶಿರಸಾ ಪ್ರಣಾಮವನ್ನು ಮಾಡಿದಾಗ ಪಾರ್ವತೀದೇವಿಯು ಪ್ರಸನ್ನಳಾದಳು. ಅನಂತರ ನಾನು ಬ್ರಹ್ಮಾದಿ ದೇವತೆಗಳಿಂದ ಸ್ತೋತ್ರ ಮಾಡಲ್ಪಟ್ಟ ಸ್ಥಾಣುವಾದ ಶಿವನನ್ನು ಸ್ತೋತ್ರ ಮಾಡಿದೆನು.

ನಮೋಸ್ತು ತೇ ಶಾಶ್ವತ ಸರ್ವಯೋನೇ
ಬ್ರಹ್ಮಾಧಿಪಂ ತ್ವಾಂ ಮುನಯೋ ವದಂತಿ ।
ತಪಶ್ಚ ಸತ್ತ್ವಂ ಚ ರಜಸ್ತಮಶ್ಚ
ತ್ವಾಮೇವ ಸತ್ಯಂ ಚ ವದಂತಿ ಸಂತಃ ॥೩೪॥

ಎಲೈ ಶಾಶ್ವತನೇ, ಸರ್ವಕಾರಣನೇ ನಿನಗೆ ನಮಸ್ಕಾರ. ಋಷಿಗಳು, ನಿನ್ನನ್ನು ಬ್ರಹ್ಮನಿಗೂ ಅಧಿಪತಿ ಎಂದು ಹೇಳುತ್ತಾರೆ. ಸಜ್ಜನರು, ತಪಸ್ಸು,

ಸತ್ವ-ರಜಸ್-ತಮೋಗುಣಗಳು, ಸತ್ಯ ಎಲ್ಲವೂ ನೀನೇ ಎಂದು ಹೇಳುತ್ತಾರೆ (ನಿನ್ನ ಅಧೀನವೆಂದು ಹೇಳುತ್ತಾರೆ).

ತ್ವಂ ವೈ ಬ್ರಹ್ಮಾ ಚ ರುದ್ರಶ್ಚ ವರುಣೋಽಗ್ನಿರ್ಮನುರ್ಭವಃ ।
ಧಾತಾ ತ್ವಷ್ಟಾ ವಿಧಾತಾ ಚ ತ್ವಂ ಪ್ರಭುಃ ಸರ್ವತೋಮುಖಃ ॥೩೫॥

ನೀನೇ ಬ್ರಹ್ಮ, ನೀನೇ ರುದ್ರ, ವರುಣ, ಅಗ್ನಿ, ಮನು, ಭವ, ಧಾತಾ, ತ್ವಷ್ಟ, ವಿಧಾತಾ, ನೀನೇ ಸರ್ವತೋಮುಖನಾದ ಪ್ರಭು.

ತ್ವತ್ತೋ ಜಾತಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ತ್ವಮಾದಿಃ ಸರ್ವಭೂತಾನಾಂ ಸಂಹರ್ತಾ ಚ ತ್ವಮೇವ ಹಿ ॥೩೬॥

ಸ್ಥಾವರ-ಜಂಗಮಾತ್ಮಕವಾದ ಪ್ರಾಣಿಗಳೆಲ್ಲವೂ ನಿನ್ನಿಂದ ಜನಿಸಿದೆ. ನೀನೇ ಎಲ್ಲ ಭೂತಗಳಿಗೆ ಕಾರಣನಾದವನು ಮತ್ತು ಸಂಹಾರಕನಾದವನು.

ಯೇ ಚೇಂದ್ರಿಯಾರ್ಥಾಶ್ಚ ಮನಶ್ಚ ಕೃತ್ಸ್ನಂ
ಯೇ ವಾಯವಃ ಸಪ್ತ ತಥೈವ ಚಾಗ್ನಿಃ ।
ಯೇ ವಾ ದಿವಿಸ್ಥಾ ದೇವತಾಶ್ಚಾಪಿ ಪುಂಸಾಂ
ತಸ್ಮಾತ್ತ್ವರಂ ತ್ವಾಮೃಷಯೋ ವದಂತಿ ॥೩೭॥

ಜಗತ್ತಿನಲ್ಲಿ ಇಂದ್ರಿಯವಿಷಯಗಳು, ಮನಸ್ಸು, ಸಪ್ತ ವಾಯುಗಳು, ಅಗ್ನಿ, ಸ್ವರ್ಗದಲ್ಲಿರುವ ದೇವತೆಗಳು ಯಾರಿದ್ದಾರೆಯೋ ಅವರೆಲ್ಲರಿಗಿಂತಲೂ ನೀನು ಶ್ರೇಷ್ಠನಾದವನು, ಪುರುಷಶ್ರೇಷ್ಠನಾದವನು ಎಂದು ಋಷಿಗಳು ಹೇಳುತ್ತಾರೆ.

ವೇದಾ ಯಜ್ಞಾಶ್ಚ ಸೋಮಶ್ಚ ದಕ್ಷಿಣಾ ಪಾವಕಾ ಪುನಃ ।
ಯಜ್ಞೋಪಗಂ ಚ ಯತ್ ಕಿಂಚಿದ್ಭಗವಾಂಸ್ತದಸಂಶಯಮ್ ॥೩೮॥

ಎಲೈ ಭಗವಂತನೇ, ವೇದಗಳು, ಯಜ್ಞಗಳು, ಸೋಮ, ದಕ್ಷಿಣೆ, ಅಗ್ನಿಗಳು, ಯಜ್ಞ ಸಂಬಂಧಿಯಾದ ದ್ರವ್ಯಗಳು- ಇವೆಲ್ಲವೂ ನೀನೇ. ಇದರಲ್ಲಿ ಸಂಶಯವಿಲ್ಲ.

ಇಷ್ಟಂ ದತ್ತಮಧೀತಂ ಚ ವ್ರತಾನಿ ನಿಯಮಾಶ್ಚ ಯೇ ।
ಹ್ರೀಃ ಕೀರ್ತಿಃ ಶ್ರೀರ್ದ್ಯುತಿಸ್ತುಷ್ಟಿಃ ಸಿದ್ಧಿಶ್ಚೈವ ತ್ವದರ್ಪಣಾ ॥೩೯॥

ಇಷ್ಟವಾದುದು, ದಾನ ಮಾಡಿದುದು, ಅಧ್ಯಯನವನ್ನು ಮಾಡಿದುದು, ವ್ರತ-ನಿಯಮಗಳನ್ನು ಆಚರಿಸಿದುದು, ನಾಚಿಕೆ, ಕೀರ್ತಿ, ಸಂಪತ್ತು, ಕಾಂತಿ, ತುಷ್ಟಿ, ಸಿದ್ಧಿ ಎಲ್ಲವೂ ನಿನಗೆ ಅರ್ಪಿತವಾದವುಗಳು.

ಕಾಮಃ ಕ್ರೋಧೋ ಭಯಂ ಲೋಭೋ ಮದಃ ಸ್ತಂಭೋಽಥ ಮತ್ಸರಃ ।
ಆಧಯೋ ವ್ಯಾಧಯಶ್ಚೈವ ಭಗವಂಸ್ತನಯಾಸ್ತವ ॥೪೦॥

ಎಲೈ ಭಗವಂತನೇ, ಕಾಮ, ಕ್ರೋಧ, ಭಯ, ಲೋಭ, ಮದ, ಅಹಂಕಾರ, ಮತ್ಸರ, ಮನೋರೋಗಗಳು-ದೈಹಿಕ ರೋಗಗಳು ಎಲ್ಲವೂ ನಿನ್ನ ಪುತ್ರರು.

ಕೃತಿರ್ವಿಕಾರಃ ಪ್ರಲಯಃ ಪ್ರಧಾನಂ ಪ್ರಭವೋಽವ್ಯಯಃ ।
ತಮಸಃ ಪರಮಾ ಯೋನಿಃ ಸ್ವಭಾವಶ್ಚಾಪಿ ಶಾಶ್ವತಃ ।
ಅವ್ಯಕ್ತಃ ಪಾವನ ವಿಭೋ ಸಹಸ್ರಾಂಶುರ್ಹಿರಣ್ಮಯಃ ॥೪೧॥

ಎಲೈ ವಿಭುವೇ, ನೀನೇ ಸೃಷ್ಟಿ,ವಿಕಾರ, ಪ್ರಳಯ, ಪ್ರಧಾನ, ಸಂಪತ್ತು ಎಲ್ಲದಕ್ಕೂ ಕಾರಣನಾದವನು. ನೀನೇ ಹ್ರಾಸರಹಿತನು. ತಮಸ್ಸಿಗೂ ಕಾರಣನಾದವನು, ಶಾಶ್ವತ ಸುಖನಾದವನು, ಅವ್ಯಕ್ತನಾದವನು, ಪವಿತ್ರನಾದವನು, ಸಹಸ್ರಕಿರಣನಾದವನು ಮತ್ತು ಸುವರ್ಣಮಯವಾದವನು.

ಆದಿರ್ಗುಣಾನಾಂ ಸರ್ವೇಷಾಂ ಭವಾನ್ ವೈ ಜೀವನಾಶ್ರಯಃ ।
ಮಹಾನಾತ್ಮಾ ಮತಿರ್ಬ್ರಹ್ಮಾ ವಿಶ್ವಃ ಶಂಭುಃ ಸ್ವಯಂಪ್ರಭುಃ ॥೪೨॥

ಬುದ್ಧಿಃ ಪ್ರಜ್ಞೋಪಲಬ್ಧಿಶ್ಚ ಸಂವಿತ್ ಖ್ಯಾತಿರ್ಧೃತಿಃ ಸ್ಮೃತಿಃ ।
ಪರ್ಯಾಯವಾಚಕೈಃ ಶಬ್ದೈರ್ಮಹಾನಾತ್ಮಾ ವಿಭಾವ್ಯಸೇ ॥೪೩॥

ನೀನು ಎಲ್ಲ ಗುಣಗಳಿಗೂ ಮೂಲನಾದವನು, ಜೀವನಕ್ಕೆ ಆಶ್ರಯನಾದವನು. ಮಹಾನ್, ಆತ್ಮ, ಮತಿ, ಬ್ರಹ್ಮಾ, ಈಶ, ಶಂಭು, ಸ್ವಯಂಪ್ರಭು, ಬುದ್ಧಿ, ಪ್ರಜ್ಞಾ, ಉಪಲಬ್ಧಿ, ಸವಿತ್, ಖ್ಯಾತಿ, ಧೃತಿ, ಸ್ಮೃತಿ - ಈ ಎಲ್ಲ ಪರ್ಯಾಯ ಶಬ್ದಗಳಿಂದ ಮಹಾತ್ಮನಾದ ನೀನೇ ಹೇಳಲ್ಪಡುತ್ತೀಯೆ.

ತ್ವಾಂ ಬುದ್ಧ್ವಾ ಬ್ರಾಹ್ಮಣೋ ವಿದ್ವಾನ್ನ ಪ್ರಮೋಹಂ ನಿಗಚ್ಛತಿ ।
ಹೃದಯಂ ಸರ್ವಭೂತಾನಾಂ ಕ್ಷೇತ್ರಜ್ಞಸ್ತ್ವಮೃಷಿಷ್ಟುತಃ ॥೪೪॥

ನಿನ್ನನ್ನು ತಿಳಿದ ವಿದ್ವಾಂಸನಾದ ಬ್ರಾಹ್ಮಣನು ಪುನಃ ಮೋಹವನ್ನು ಹೊಂದುವುದಿಲ್ಲ. ನೀನು ಎಲ್ಲ ಜೀವರ ಹೃದಯನಾಗಿದ್ದೀಯೆ. ಕ್ಷೇತ್ರಜ್ಞನಾಗಿದ್ದೀಯೆ. ಋಷಿಗಳಿಂದ ಸ್ತುತನಾಗಿದ್ದೀಯೆ.

ಸರ್ವತಃಪಾಣಿಪಾದಸ್ತ್ವಂ ಸರ್ವತೋಕ್ಷಿಶಿರೋಮುಖಃ ।
ಸರ್ವತಃಶ್ರುತಿಮಾಲ್ಲೋಕೇ ಸರ್ವಮಾವೃತ್ಯ ತಿಷ್ಠಸಿ ॥೪೫॥

ನೀನು ಸರ್ವತ್ರ ಪಾಣಿ-ಪಾದಗಳನ್ನು ಹೊಂದಿದ್ದೀಯೆ. ಸರ್ವತ್ರ ನೇತ್ರ-ಶಿರೋ-ಮುಖಗಳನ್ನು ಹೊಂದಿದ್ದೀಯೆ. ಸರ್ವತ್ರ ಶ್ರೋತ್ರಗಳನ್ನು ಹೊಂದಿದ್ದೀಯೆ. ಲೋಕಗಳನ್ನು ಎಲ್ಲ ಕಡೆಯಿಂದಲೂ ಆವರಿಸಿಕೊಂಡಿದ್ದೀಯೆ.

ಫಲಂ ತ್ವಮಸಿ ತಿಗ್ಮಾಂಶೋ ನಿಮೇಷಾದಿಷು ಕರ್ಮಸು ।
ತ್ವಂ ವೈ ಪ್ರಭಾರ್ಚಿಃ ಪುರುಷಃ ಸರ್ವಸ್ಯ ಹೃದಿ ಸಂಶ್ರಿತಃ ।
ಅಣಿಮಾ ಲಘಿಮಾ ಪ್ರಾಪ್ತಿರೀಶಾನೋ ಜ್ಯೋತಿರವ್ಯಯಃ ॥೪೬॥

ಎಲೈ ಚಂಡಕಿರಣನೇ, ನಿಮೇಷಾದಿ ಕರ್ಮಗಳಲ್ಲಿ ನೀನೇ ಫಲರೂಪನಾಗಿದ್ದೀಯೆ. ನೀನೇ ಕಾಂತಿರೂಪನಾದವನು, ಜ್ವಾಲಾರೂಪನಾದವನು, ಪುರುಷನಾದವನು, ಎಲ್ಲರ ಹೃದಯವನ್ನು ಆಶ್ರಯಿಸಿದವನು. ಅಣಿಮಾ, ಲಘಿಮಾ, ಪ್ರಾಪ್ತಿ, ಈಶಿತ್ವ ಎಲ್ಲವೂ ನಿನ್ನದೇ. ನೀನು ಜ್ಯೋತೀರೂಪನಾದವನು, ಅವ್ಯಯನಾದವನು.

ತ್ವಯಿ ಬುದ್ಧಿರ್ಮತಿರ್ಲೋಕಾಃ ಪ್ರಪನ್ನಾಃ ಸಂಶ್ರಿತಾಶ್ಚ ಯೇ ।
ಧ್ಯಾನಿನೋ ನಿತ್ಯಯೋಗಾಶ್ಚ ಸತ್ಯಸಂಧಾ ಜಿತೇಂದ್ರಿಯಾಃ ॥೪೭॥

ಯಾರು ನಿನ್ನಲ್ಲಿ ತಮ್ಮ ಮತಿ-ಬುದ್ಧಿಗಳನ್ನಿಟ್ಟು ನಿನ್ನನ್ನು ಆಶ್ರಯಿಸಿ, ನಿನಗೆ ಶರಣಾಗತರಾಗಿ ನಿತ್ಯಯೋಗದಿಂದ ನಿನ್ನನ್ನು ಧ್ಯಾನ ಮಾಡುತ್ತಾರೆಯೋ ಅವರು ಸತ್ಯಸಂಧರು ಮತ್ತು ಜಿತೇಂದ್ರಿಯರು.

ಯಸ್ತಾ ತ್ವಂ ಧ್ರುವಂ ವೇದಯತೇ ಗುಹಾಶಯಂ
ಪ್ರಭುಂ ಪುರಾಣಂ ಪುರುಷಂ ವಿಶ್ವರೂಪಮ್ ।
ಹಿರಣ್ಮಯಂ ಬುದ್ಧಿಮತಾಂ ಪರಾಂ ಗತಿಂ
ಸ ಬುದ್ಧಿಮಾನ್ ಬುದ್ಧಿಮತೀತ್ಯ ತಿಷ್ಠತಿ ॥೪೮॥

ಯಾವನು ನಿನ್ನನ್ನು ಶಾಶ್ವತನೆಂದೂ, ಹೃದಯ ವಾಸಿಯೆಂದೂ, ಪ್ರಭು-ಪುರಾಣ-ವಿಶ್ವರೂಪನೆಂದೂ, ಹಿರಣ್ಮಯನೆಂದೂ, ವಿವೇಕಿಗಳಿಗೆ ಪರಮಗತಿಯೆಂದೂ ಹೇಳುತ್ತಾರೆಯೋ ಅವನು ಬುದ್ಧಿಯನ್ನು ಮೀರಿ ಇರುತ್ತಾನೆ.

ವಿದಿತ್ವಾ ಸಪ್ತ ಸೂಕ್ಷ್ಮಾಣಿ ಷಡಂಗಂ ತ್ವಾಂ ಚ ಮೂರ್ತಿತಃ ।
ಪ್ರಧಾನವಿಧಿಯೋಗಸ್ಥಸ್ತ್ವಾಮೇವ ವಿಶತೇ ಬುಧಃ ॥೪೯॥

ನಿನ್ನ ಸಪ್ತ ಸೂಕ್ಷ್ಮಗಳನ್ನೂ, ನಿನ್ನ ಮೂರ್ತಿಯ ಷಡಂಗಗಳನ್ನೂ ತಿಳಿದು ಪ್ರಧಾನವಾದ ವಿಧಿ ಮತ್ತು ಯೋಗಗಳನ್ನು ಅನುಸರಿಸುವ ಜ್ಞಾನಿಯು ನಿನ್ನನ್ನೇ ಪ್ರವೇಶಿಸುತ್ತಾನೆ.

ಏವಮುಕ್ತೇ ಮಯಾ ಪಾರ್ಥ ಭವೇ ಚಾರ್ತಿವಿನಾಶನೇ ।
ಚರಾಚರಂ ಜಗತ್ಸರ್ವಂ ಸಿಂಹನಾದಮಥಾಕರೋತ್ ॥೫೦॥

ಎಲೈ ಪಾರ್ಥನೇ, ಆರ್ತಿವಿನಾಶನನಾದ ಶಿವನು ನನ್ನಿಂದ ಹೀಗೆ ಹೇಳಲ್ಪಟ್ಟಾಗ ಚರಾಚರವಾದ ಜಗತ್ತೆಲ್ಲವೂ ಸಿಂಹನಾದವನ್ನು ಮಾಡಿತು.

ಸವಿಪ್ರಸಂಘಾಶ್ಚ ಸುರಾಸುರಾಶ್ಚ
ಪಿಶಾಚಯಕ್ಷಾಃ ಪಿತರೋ ವಯಾಂಸಿ ।
ರಕ್ಷೋಗಣಾ ಭೂತಗಣಾಶ್ಚ ಸರ್ವೇ
ಮಹರ್ಷಯಶ್ಚೈವ ತಥಾ ಪ್ರಣೇಮುಃ ॥೫೧॥

ಆಗ ವಿಪ್ರಸಮೂಹಗಳಿಂದ ಕೂಡಿದ ಸುರಾಸುರರು, ಪಿಶಾಚಿಗಳು, ಯಕ್ಷರು, ಪಿತೃಗಳು, ಪಕ್ಷಿಗಳು, ರಾಕ್ಷಸಸಮೂಹಗಳು, ಭೂತಗಣಗಳು, ಮಹರ್ಷಿಗಳು ಎಲ್ಲರೂ ಶಿವನಿಗೆ ನಮಸ್ಕರಿಸಿದರು.

ಮಮ ಮೂರ್ಧ್ನಿ ಚ ದಿವ್ಯಾನಾಂ ಕುಸುಮಾನಾಂ ಸುಗಂಧಿನಾಮ್ ।
ರಾಶಯೋ ನಿಪತಂತಿ ಸ್ಮ ವಾಯುಶ್ಚ ಸುಸುಖೋ ವವೌ ॥೫೨॥

ನನ್ನ ಶಿರಸ್ಸಿನಲ್ಲಿ ಸುಗಂಧವುಳ್ಳ ದಿವ್ಯಪುಷ್ಪಗಳ ರಾಶಿಯು ಬಿದ್ದಿತು. ವಾಯುವೂ ಹಿತವಾಗಿ ಬೀಸಿದನು.

ನಿರೀಕ್ಷ್ಯ ಭಗವಾನ್ ದೇವೀಮುಮಾಂ ಮಾಂ ಚ ಜಗದ್ಧಿತಃ ।
ಶತಕ್ರತುಂ ಚಾಭಿವೀಕ್ಷ್ಯ ಸ್ವಯಂ ಮಾಮಾಹ ಶಂಕರಃ ॥೫೩॥

ಭಗವಂತನೂ, ಜಗತ್ತಿಗೆ ಹಿತಕರನೂ ಆದ ಶಿವನು ನನ್ನನ್ನೂ, ಉಮಾದೇವಿಯನ್ನೂ ಮತ್ತು ಇಂದ್ರನನ್ನೂ ನೋಡಿ ಸ್ವತಃ ನನ್ನನ್ನು ಕುರಿತು ಹೇಳಿದನು.

ವಿದ್ಮಃ ಕೃಷ್ಣ ಪರಾಂ ಭಕ್ತಿಮಸ್ಮಾಸು ತವ ಶತ್ರುಹನ್ ।
ಕ್ರಿಯತಾಮಾತ್ಮನಃ ಶ್ರೇಯಃ ಪ್ರೀತಿರ್ಹಿ ಪರಮಾ ತ್ವಯಿ ॥೫೪॥

ವೃಣೀಷ್ವಾಷ್ಟೌ ವರಾನ್ ಕೃಷ್ಣ ದಾತಾಸ್ಮಿ ತವ ಸತ್ತಮ ।
ಬ್ರೂಹಿ ಯಾದವಶಾರ್ದೂಲ ಯಾನಿಚ್ಛಸಿ ಸುದುರ್ಲಭಾನ್ ॥೫೫॥

ಎಲೈ ಕೃಷ್ಣನೇ, ಶತ್ರುಘಾತಕನೇ, ನಮ್ಮಲ್ಲಿ ನಿನಗಿರುವ ಪ್ರೀತಿಯನ್ನು, ನಿನಗಿರುವ ಭಕ್ತಿಯನ್ನು ನಾವು ತಿಳಿದಿದ್ದೇವೆ. ನಿನ್ನ ಶ್ರೇಯಸ್ಸನ್ನು ಹೊಂದುವವನಾಗು. ನನಗೂ ನಿನ್ನ ಮೇಲೆ ಬಹಳ ಪ್ರೀತಿಯಿದೆಯಷ್ಟೆ. ಎಲೈ ಕೃಷ್ಣನೇ, ಎಂಟು ವರಗಳನ್ನು ಕೇಳು. ಎಲೈ ಸಜ್ಜನರಲ್ಲಿ ಶ್ರೇಷ್ಠನೇ, ನಾನು ಅವುಗಳನ್ನು ಕೊಡುವೆನು. ನರಶಾರ್ದೂಲನೇ, ಯಾವ ದುರ್ಲಭವಾದ ವರವನ್ನು ಬಯಸುವಿಯೋ ಅದನ್ನು ಕೇಳು (ಎಂದು ಹೇಳಿದನು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಈಶ್ವರದರ್ಶನಂ ನಾಮ ಚತುಸ್ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೈದನೆಯ ಅಧ್ಯಾಯ

ಕೃಷ್ಣನಿಗೆ ಶಿವನಿಂದ ವರಪ್ರಾಪ್ತಿ ಮತ್ತು ಶಿವಸಹಸ್ರನಾಮ.

ಕೃಷ್ಣಃ

ಮೂರ್ಧ್ನಾ ಪ್ರಣಮ್ಯ ತು ಭವಂ ದೇವಮೀಶಾನಮವ್ಯಯಮ್ ।
ಪರಮಂ ಹರ್ಷಮಾಗಮ್ಯ ಭಗವಂತಮಥಾಬ್ರುವಮ್ ॥೧॥

ಕೃಷ್ಣ- ದೇವನೂ, ಈಶಾನನೂ, ಅವ್ಯಯನೂ ಆದ ಭವನನ್ನು ಶಿರಸಾ ನಮಸ್ಕರಿಸಿ ಬಹಳ ಸಂತೋಷವನ್ನು ಹೊಂದಿ, ಆ ಭಗವಂತನನ್ನು ಕುರಿತು ಹೇಳಿದೆನು.

ಧರ್ಮೇ ದೃಢತ್ವಂ ಯುಧಿ ಶತ್ರುಘಾತಂ
ಯಶಸ್ತಥಾಗ್ರ್ಯಂ ಪರಮಂ ಬಲಂ ಚ ।
ಯೋಗಿಪ್ರಿಯತ್ವಂ ಯುಧಿ ಸನ್ನಿಕರ್ಷಂ
ವೃಣೇ ಸುತಾನಾಂ ಚ ಶತಂ ಶತಾನಿ ॥೨॥

ಏವಮಸ್ತಿ ತ್ವಿ ತದಾವ್ಯಂ ಮಯೋಕ್ತಃ ಪ್ರಾಹ ಶಂಕರಃ ॥೩॥

ಧರ್ಮದಲ್ಲಿ ದಾರ್ಢ್ಯ, ಯುದ್ಧದಲ್ಲಿ ಶತ್ರುಜಯ, ಶ್ರೇಷ್ಠವಾದ ಕೀರ್ತಿ, ಶ್ರೇಷ್ಠವಾದ ಬಲ, ಯೋಗಿಪ್ರಿಯತ್ವ, ಯುದ್ಧದಲ್ಲಿ ಹಿಮ್ಮೆಟ್ಟದಿರುವುದು ಮತ್ತು ಹತ್ತುಸಾವಿರ ಪುತ್ರರನ್ನು ವರವಾಗಿ ಬೇಡುತ್ತೇನೆ (ಎಂದು ಹೇಳಿದೆನು). ಹೀಗೆ ನಾನು ಹೇಳಿದಾಗ ನನ್ನ ಮಾತನ್ನು ಕೇಳಿ 'ಹಾಗೆಯೇ ಆಗಲಿ' ಎಂದು ಹೇಳಿದನು.

ತತೋ ಮಾಂ ಜಗತೋ ಮಾತಾ ಧರಣೇ ಸರ್ವಪಾವನೀ ।
ಉವಾಚೋಮಾ ಪ್ರಣಿಹಿತಾ ಶರ್ವಾಣೇ ತಪಸಾಂ ನಿಧಿಃ ॥೪॥

ಅನಂತರ ಜಗತ್ತಿನ ತಾಯಿಯೂ, ಜಗತ್ತನ್ನು ಧರಿಸಿದವಳೂ, ಸರ್ವವನ್ನು ಪವಿತ್ರೀಕರಿಸುವವಳೂ, ತಪೋನಿಧಿಯೂ, ಭವಪತ್ನಿಯೂ ಆದ ಪಾರ್ವತಿಯು ವಿಶ್ವಾಸದಿಂದ ನನ್ನನ್ನು ಕುರಿತು ಹೇಳಿದಳು.

ದತ್ತೋ ಭಗವತಾ ಪುತ್ರಃ ಸಾಂಬೋ ನಾಮ ತವಾನಘ ।
ಮತ್ತೋಽಪ್ಯಷ್ಟೌ ವರಾನಿಷ್ಟಾನ್ ಗೃಹಾಣ ತ್ವಂ ದದಾಮಿ ತೇ ।
ಪ್ರಣಮ್ಯ ಶಿರಸಾ ಸಾ ಚ ಮಯೋಕ್ತಾ ಪಾಂಡುನಂದನ ॥೫॥

ಎಲೈ ಅನಘನೇ, ನಿನಗೆ ಭಗವಂತನು ಸಾಂಬನೆಂಬ ಪುತ್ರನನ್ನು ಕೊಟ್ಟಿದ್ದಾನೆ. ನನ್ನಿಂದಲೂ ನಿನಗೆ ಇಷ್ಟವಾದ ಎಂಟು ವರಗಳನ್ನು ಸ್ವೀಕರಿಸು. ಅದನ್ನು ನಿನಗೆ ಕೊಡುವೆನು (ಎಂದು ಹೇಳಿದಳು). ಎಲೈ ಪಾಂಡುನಂದನನೇ, ಅವಳಿಗೆ ಶಿರಸಾ ನಮಸ್ಕರಿಸಿ ನಾನು ಮಾತನಾಡಿದೆನು.

ದ್ವಿಜೇಷ್ವಕೋಪಂ ಪಿತೃತಃ ಪ್ರಸಾದಂ
ಶತಂ ಸುತಾನಾಮುಪಭೋಗಂ ಪರಂ ಚ ।
ಕುಲೇ ಪ್ರೀತಿಂ ಮಾತೃತಶ್ಚ ಪ್ರಸಾದಂ
ಶಮಪ್ರಾಪ್ತಿಂ ಪ್ರವೃಣೇ ಚಾಪಿ ದಾಕ್ಷ್ಯಮ್ ॥೬॥

ಬ್ರಾಹ್ಮಣರಲ್ಲಿ ಕೋಪವಿಲ್ಲದಿರುವಿಕೆ, ತಂದೆಯ ಅನುಗ್ರಹ, ನೂರು ಪುತ್ರರು, ಶ್ರೇಷ್ಠವಾದ ಭೋಗ, ಕುಲದಲ್ಲಿ ಪ್ರೀತಿ, ತಾಯಿಯ ಅನುಗ್ರಹ, ಸುಖಪ್ರಾಪ್ತಿ ಮತ್ತು ದಕ್ಷತೆಯನ್ನು ವರವಾಗಿ ಬೇಡುತ್ತೇನೆ (ಎಂದು ಹೇಳಿದೆನು).

ದೇವೀ

ಏವಂ ಭವಿಷ್ಯತ್ಯಮರಪ್ರಭಾವ
ನಾಹಂ ಮೃಷಾ ಜಾತು ವದೇ ಕದಾಚಿತ್ ।
ಭಾರ್ಯಾಸಹಸ್ರಾಣಿ ಚ ಷೋಡಶೈವ
ತಾಸು ಪ್ರಿಯತ್ವಂ ಚ ತಥಾಽಕ್ಷಯತ್ವಮ್ ॥೭॥

ಪ್ರೀತಿಂ ಚಾಗ್ರ್ಯಾಂ ಬಾಂಧವಾನಾಂ ಸಕಾಶಾದ್
ದದಾಮಿ ತೇ ವಪುಷಃ ಕಾಮ್ಯತಾಂ ಚ ।
ಭೋಕ್ಷ್ಯಂತೇ ವೈ ಸಪ್ತತಿರ್ವೈ ಶತಾನಿ
ಗೃಹೇ ತುಭ್ಯಮತಿಥೀನಾಂ ಚ ನಿತ್ಯಮ್ ॥೮॥

ದೇವೀ– ಎಲೈ ದೇವಸಾಮರ್ಥ್ಯವನ್ನು ಹೊಂದಿದವನೇ, ಅದು ಹಾಗೆಯೇ ಆಗುವುದು. ನನ್ನ ಮಾತು ಎಂದೂ ಸುಳ್ಳಾಗುವುದಿಲ್ಲ.ನಿನಗೆ ಹದಿನಾರು ಸಾವಿರ ಭಾರ್ಯೆಯರೂ ಅವರಲ್ಲಿ ಪ್ರಿಯತ್ವವೂ, ಅಕ್ಷಯತ್ವವೂ, ಬಾಂಧವರಲ್ಲಿ ಅತಿಶಯವಾದ ಪ್ರೀತಿಯೂ, ದೇಹದಲ್ಲಿ ಸೌಂದರ್ಯವೂ ನನ್ನ ಅನುಗ್ರಹದಿಂದ ಉಂಟಾಗುತ್ತದೆ. ನಿನ್ನ ಗೃಹದಲ್ಲಿ ನಿತ್ಯವೂ ಏಳು ಸಾವಿರ ಅತಿಥಿಗಳು ಭೋಜನ ಮಾಡುತ್ತಾರೆ.

ವಾಸುದೇವಃ

ಏವಂ ದತ್ತ್ವಾ ವರಾನ್ ದೇವೋ ಮಮ ದೇವೀ ಚ ಭಾರತ ।
ಅಂತರ್ಹಿತಃ ಕ್ಷಣೇ ತಸ್ಮಿನ್ ಸಗಣೋ ಭೀಮಪೂರ್ವಜ ॥೯॥

ವಾಸುದೇವ– ಎಲೈ ಭಾರತನೇ, ಭೀಮನ ಅಣ್ಣನೇ, ಹೀಗೆ ಶಿವನು ಮತ್ತು ಪಾರ್ವತಿಯು ನನಗೆ ವರಗಳನ್ನು ನೀಡಿ, ಆ ಕ್ಷಣದಲ್ಲಿ ತಮ್ಮ ಗಣದ ಜೊತೆಯಲ್ಲಿ ಅಂತರ್ಧಾನವನ್ನು ಹೊಂದಿದರು.

ಏತದತ್ಯದ್ಭುತಂ ಸರ್ವಂ ಬ್ರಾಹ್ಮಣಾಯಾತಿತೇಜಸೇ ।
ಉಪಮನ್ಯವೇ ಮಯಾ ಕೃತ್ಸ್ನಮಾಖ್ಯಾತಂ ಕೌರವೋತ್ತಮ ॥೧೦॥

ಎಲೈ ಕೌರವಶ್ರೇಷ್ಠನೇ, ಈ ಅದ್ಭುತವಾದ ಘಟನೆಯೆ ಎಲ್ಲವನ್ನೂ ನಾನು ಬ್ರಾಹ್ಮಣನೂ, ಅತಿ ತೇಜಸ್ವಿಯೂ ಆದ ಉಪಮನ್ಯುವಿಗೆ ಹೇಳಿದೆನು.

ನಮಸ್ಕೃತ್ವಾ ತು ಸ ಪ್ರಾಹ ದೇವದೇವಾಯ ಸುವ್ರತ ।
ನಾಸ್ತಿ ಶರ್ವಸಮೋ ದಾನೇ ನಾಸ್ತಿ ಶರ್ವಸಮೋ ರಣೇ ।
ನಾಸ್ತಿ ಶರ್ವಸಮೋ ದೇವೋ ನಾಸ್ತಿ ಶರ್ವಸಮಾ ಗತಿಃ ॥೧೧॥

ಎಲೈ ಸುವ್ರತನೇ, ಅವನು ದೇವದೇವನಾದ ಶಿವನಿಗೆ ನಮಸ್ಕರಿಸಿ ದಾನವನ್ನು ಕೊಡುವುದರಲ್ಲಿ, ಯುದ್ಧವನ್ನು ಮಾಡಿದವರಲ್ಲಿ ಶಿವನಿಗೆ ಸಮನಾದವರು ಯಾರೂ ಇಲ್ಲ. ದೇವತೆಗಳಲ್ಲಿ ಶಿವನಿಗೆ ಸಮರಾದವರು ಯಾರೂ ಇಲ್ಲ. ಶಿವನಿಗೆ ಸಮಾನವಾದ ಗಮ್ಯನು ಯಾರೂ ಇಲ್ಲ ಎಂದು ಹೇಳಿದನು.

ಋಷಿರಾಸೀತ್ ಕೃತೇ ತಾತ ತಂಡಿರಿತ್ಯೇವ ವಿಶ್ರುತಃ ।
ದಶ ವರ್ಷಸಹಸ್ರಾಣಿ ತೇನ ದೇವಃ ಸಮಾಧಿನಾ ।
ಆರಾಧಿತೋಽಭೂದ್ಭಕ್ತೇನ ತಸ್ಯೋದರ್ಕಂ ನಿಶಾಮಯ ॥೧೨॥

ಸ ದೃಷ್ಟವಾನ್ ಮಹಾದೇವಮಸ್ತೌಷೀಚ್ಚ ಸ್ತವೈರ್ವಿಭುಮ್ ।
ಇತಿ ತಂಡಿಸ್ತಪೋಯೋಗಾತ್ ಪರಮಾತ್ಮಾನಮವ್ಯಯಮ್ ॥೧೩॥

ಎಲೈ ಪ್ರೀತಿಪಾತ್ರನೇ, ಕೃತಯುಗದಲ್ಲಿ ತಂಡಿ ಎಂಬ ಪ್ರಖ್ಯಾತನಾದ ಋಷಿ ಇದ್ದನು. ಹತ್ತು ಸಹಸ್ರ ವರ್ಷಗಳ ಕಾಲ ಭಕ್ತನಾದ ಅವನು ದೇವನನ್ನು ಪೂಜಿಸಿದನು. ಅವನು ಪಡೆದ ವೈಭವವನ್ನು ಕೇಳು. ಅವನು ವಿಭುವಾದ ಅವನನ್ನು ನೋಡಿ ಸ್ತೋತ್ರಗಳಿಂದ ಸ್ತೋತ್ರ ಮಾಡಿದನು. ಹೀಗೆ ತಂಡಿಯು ತಪೋಯೋಗದಿಂದ ಅವ್ಯಯನಾದ ಪರಮಾತ್ಮನನ್ನು ನೋಡಿದನು.

ಚಿಂತಯಿತ್ವಾ ಮಹಾತ್ಮಾನಮಿದಮಾಹ ಸುವಿಸ್ಮಿತಃ ।
ಯೇ ಪಠಂತಿ ಸದಾ ಸಾಂಖ್ಯಾಶ್ಚಿಂತಯಂತಿ ಚ ಯೋಗಿನಃ ॥೧೪॥

ಪರಂ ಪ್ರಧಾನಂ ಪುರುಷಮಧಿಷ್ಠಾತಾರಮೀಶ್ವರಮ್ ।
ಉತ್ಪತ್ತೌ ಚ ವಿನಾಶೇ ಚ ಕಾರಣಂ ಯಂ ವಿದುರ್ಬುಧಾಃ ॥೧೫॥

ಅವನು ವಿಸ್ಮಿತನಾಗಿ ಮಹಾತ್ಮನಾದ ಶಿವನನ್ನು ಚಿಂತಿಸುತ್ತಾ ಹೀಗೆ ಹೇಳಿದನು. ಸಾಂಖ್ಯರು ಯಾವನನ್ನು ಚಿಂತನೆ ಮಾಡುತ್ತಾರೋ, ಯೋಗಿಗಳು ಯಾರನ್ನು ಧ್ಯಾನ ಮಾಡುತ್ತಾರೋ ಅಂತಹ ಈಶ್ವರನು ಶ್ರೇಷ್ಠನೂ, ಪ್ರಧಾನನೂ, ಪುರುಷನೂ, ಎಲ್ಲದರಲ್ಲಿಯೂ ಸನ್ನಿಹಿತನಾಗಿ ಉತ್ಪತ್ತಿ-ವಿನಾಶಕ್ಕೆ ಕಾರಣನಾದವನು ಎಂದು ಅವನನ್ನು ಜ್ಞಾನಿಗಳು ತಿಳಿಯುತ್ತಾರೆ.

ದೇವಾಸುರಮುನೀನಾಂ ಚ ಪರಂ ಯಸ್ಮಾನ್ನ ವಿದ್ಯತೇ ।
ಅಜಂ ತಮಹಮೀಶಾನಮನಾದಿನಿಧನಂ ಪ್ರಭುಮ್ ॥೧೬॥

ಅತ್ಯಂತಸುಖಿನಂ ದೇವಮನಘಂ ಶರಣಂ ವ್ರಜೇ ।
ಏವಂ ಬ್ರುವನ್ನೇವ ತದಾ ದದರ್ಶ ತಪಸಾಂ ನಿಧಿಮ್ ॥೧೭॥

ದೇವಾಸುರ-ಋಷಿಗಳಲ್ಲಿ ಯಾವನಿಗಿಂತ ಶ್ರೇಷ್ಠನಾದವನು ಇಲ್ಲವೋ ಅಂತಹ ಜನ್ಮರಹಿತನೂ, ಈಶಾನನೂ, ಆದ್ಯಂತ ರಹಿತನೂ, ಪ್ರಭುವೂ, ಅತ್ಯಂತ ಸುಖಿಯೂ, ಅನಘನೂ ಆದ ದೇವನಿಗೆ ಶರಣಾಗತನಾಗುತ್ತೇನೆ. ಹೀಗೆ ಹೇಳುತ್ತಲೇ ಅವನು ತಪೋನಿಧಿಯಾದ ಶಿವನನ್ನು ನೋಡಿದನು.

ತಮವ್ಯಯಮನೌಪಮ್ಯಮಚಿಂತ್ಯಂ ಶಾಶ್ವತಂ ಧ್ರುವಮ್ ।
ನಿಷ್ಕಲಂ ಸಕಲಂ ಬ್ರಹ್ಮ ನಿರ್ಗುಣಂ ಗುಣಗೋಚರಮ್ ॥೧೮॥

ಯೋಗಿನಾಂ ಪರಮಾನಂದಮಕ್ಷರಂ ಮೋಕ್ಷಸಂಜ್ಞಿತಮ್ ।
ಮನೋರಿಂದ್ರಾಗ್ನಿಮರುತಾಂ ವಿಶ್ವಸ್ಯ ಬ್ರಹ್ಮಣೋ ಗತಿಮ್ ॥೧೯॥

ಅವ್ಯಯನೂ, ಅಸದೃಶನೂ, ಅಚಿಂತ್ಯನೂ, ಶಾಶ್ವತನೂ, ನಿಷ್ಕಲನೂ, ಎಲ್ಲ ಕಲೆಗಳಿಂದ ಕೂಡಿದವನೂ, ಬ್ರಹ್ಮನೂ, ನಿರ್ಗುಣನೂ, ಗುಣಗೋಚರನೂ,

ಯೋಗಿಗಳಿಗೆ ಪರಮಾನಂದವನ್ನು ಕೊಡುವವನೂ, ವಿನಾಶರಹಿತನೂ, ಮೋಕ್ಷದಾಯಕನೂ, ಮನು-ಇಂದ್ರ-ಅಗ್ನಿ-ಮರುತ್ತುಗಳು, ಜಗತ್ತು ಮತ್ತು ಬ್ರಹ್ಮನಿಗೆ ಗತಿಯಾದವನೂ;

ಅಗ್ರಾಹ್ಯಮಚಲಂ ಶುದ್ಧಂ ಬುದ್ಧಿಗ್ರಾಹ್ಯಂ ಮನೋಮಯಮ್ ।
ದುರ್ವಿಜ್ಞೇಯಮಸಂಖ್ಯೇಯಂ ದುಷ್ಪ್ರಾಪಮಕೃತಾತ್ಮಭಿಃ ॥೨೦॥

ಯೋನಿಂ ವಿಶ್ವಸ್ಯ ಜಗತಸ್ತಮಸಃ ಪರತಃ ಪರಮ್ ।
ಪರಂ ಪುರಾಣಂ ಪುರುಷಂ ಪರೇಭ್ಯಃ ಪರತಃ ಪರಮ್ ॥೨೧॥

ತಿಳಿಯಲು ಅಸಾಧ್ಯನಾದವನೂ, ಅಚಲನೂ, ಶುದ್ಧನೂ, ಬುದ್ಧಿಗೆ ಗೋಚರನಾಗುವವನೂ, ಮನೋಮಯನೂ, ಕಷ್ಟದಿಂದ ತಿಳಿಯಲ್ಪಡುವವನೂ, ಎಣಿಸಲು ಸಾಧ್ಯವಿಲ್ಲದವನೂ, ಮನೋಜಯವಿಲ್ಲದವನಿಂದ ಹೊಂದಲು ಅಸಾಧ್ಯನಾದವನೂ, ಸಮಸ್ತ ಜಗತ್ತಿಗೆ ಕಾರಣನಾದವನೂ, ಪ್ರಕೃತಿಗಿಂತಲೂ ಪರನೂ, ಶ್ರೇಷ್ಠನೂ, ಪುರಾಣಪುರುಷನೂ, ಶ್ರೇಷ್ಠರಿಗಿಂತಲೂ ಶ್ರೇಷ್ಠನೂ;

ಯಂ ಪ್ರಾಣವಂತಮಾತ್ಮಾನಂ ಜ್ಯೋತಿರ್ಜೀವಸ್ಥಿತಂ ಮನಃ ।
ತಂ ದೇವಂ ದರ್ಶನಾಕಾಂಕ್ಷೀ ಬಹೂನ್ ವರ್ಷಗಣಾನೃಷಿಃ ।
ತಪಸ್ಯುಗ್ರೇ ಸ್ಥಿತೋ ಭೂತ್ವಾ ದೃಷ್ಟ್ವಾ ತುಷ್ಟಾವ ಚೇಶ್ವರಮ್ ॥೨೨॥

ಯಾವನು ಪ್ರಾಣಗಳಿಂದ ಕೂಡಿದವನೂ, ಸ್ವಾಮಿಯೂ, ಜ್ಯೋತಿರೂಪನೂ, ಜೀವಸ್ಥಿತ ಮನೋರೂಪನೂ ಆದವನೋ, ಅಂತಹ ದೇವನನ್ನು ನೋಡಲು ಬಯಸಿ, ಋಷಿಯಾದ ತಂಡಿಯು ಅನೇಕ ವರ್ಷಗಳ ಕಾಲ ಉಗ್ರವಾದ ತಪಸ್ಸನ್ನು ಮಾಡಿ, ಶಂಕರನನ್ನು ನೋಡಿ ಅವನನ್ನು ಹೀಗೆ ಸ್ತೋತ್ರ ಮಾಡಿದನು.

ಪವಿತ್ರಾಣಾಂ ಪವಿತ್ರಸ್ತ್ವಂ ಗತಿರ್ಗತಿಮತಾಂ ವರಾ ॥೨೩॥

ಅತ್ಯುಗ್ರಂ ತೇಜಸಾಂ ತೇಜಸ್ತಪಸಾಂ ಪರಮಂ ತಪಃ ॥೨೪॥

ಎಲೈ ಜ್ಞಾನಿಗಳಲ್ಲಿ ಶ್ರೇಷ್ಠನಾದ ದೇವನೇ, ನೀನು ಪವಿತ್ರನಲ್ಲಿ ಪವಿತ್ರನಾದವನು, ಶ್ರೇಷ್ಠನಾದ ಗಮ್ಯನಾದವನು. ತೇಜಸ್ಸುಗಳಲ್ಲಿ ಅತ್ಯುಗ್ರವಾದ ತೇಜೋರೂಪನಾದವನು. ತಪಸ್ಸುಗಳಲ್ಲಿ ಉಗ್ರವಾದ ತಪೋರೂಪನಾದವನು.

ವಿಶ್ವಾವಸುಹಿರಣ್ಯಾಕ್ಷಪುರುಹೂತನಮಸ್ಕೃತ ।
ಭೂರಿಕಲ್ಯಾಣದ ವಿಭೋ ಪುರುಸತ್ಯ ನಮೋಽಸ್ತು ತೇ ॥೨೫॥

ವಿಶ್ವಾವಸು, ಹಿರಣ್ಯಾಕ್ಷ ಮತ್ತು ಇಂದ್ರನಿಂದ ನಮಸ್ಕೃತನಾದವನೇ, ಬಹಳ ಶುಭವನ್ನು ಕೊಡುವವನೇ, ವ್ಯಾಪ್ತನೇ, ಅತ್ಯಂತ ಸತ್ಯನಾದವನೇ, ನಿನಗೆ ನಮಸ್ಕಾರ.

ಜಾತೀಮರಣಭೀರೂಣಾಂ ಯತೀನಾಂ ಯತತಾಂ ವಿಭೋ ।
ನಿರ್ವಾಣದ ಸಹಸ್ರಾಂಶೋ ನಮಸ್ತೇಽಸ್ತು ಸುಖಾಶ್ರಯ ॥೨೬॥

ಜನ್ಮ-ಮರಣಗಳಿಗೆ ಹೆದರುವ ಪ್ರಯತ್ನಶೀಲರಾದ ಯತಿಗಳಿಗೆ ಮೋಕ್ಷವನ್ನು ಕೊಡುವ ವಿಭುವೇ, ಸಹಸ್ರ ಕಿರಣಗಳನ್ನು ಹೊಂದಿದವನೇ, ಸುಖನಿಧಿಯೇ, ನಿನಗೆ ನಮಸ್ಕಾರ.

ಬ್ರಹ್ಮಾ ಶತಕ್ರತುರ್ವಿಷ್ಣುರ್ವಿಶ್ವೇದೇವಾ ಮಹರ್ಷಯಃ ।
ನ ವಿದುಸ್ತ್ವಾಂ ತು ತತ್ತ್ವೇನ ಕುತೋ ವೇತ್ಸ್ಯಾಮಹೇ ವಯಮ್ ॥೨೭॥

ಬ್ರಹ್ಮದೇವರು, ಇಂದ್ರ, ವಿಷ್ಣು, ವಿಶ್ವೇದೇವತೆಗಳು, ಮಹರ್ಷಿಗಳು ನಿನ್ನನ್ನು ಸರಿಯಾಗಿ ತಿಳಿಯಲಾರರು. ನಾವು ಹೇಗೆ ತಿಳಿದೇವು?

ತತ್ತಃ ಪ್ರವರ್ತತೇ ಕಾಲಸ್ತ್ವಯಿ ಕಾಲಶ್ಚ ಲೀಯತೇ ।
ಕಾಲಾಖ್ಯಃ ಪುರುಷಾಖ್ಯಶ್ಚ ಬ್ರಹ್ಮಾಖ್ಯಶ್ಚ ತ್ವಮೇವ ಹಿ ॥೨೮॥

ಕಾಲವು ನಿನ್ನಿಂದ ಪ್ರವೃತ್ತವಾಗುತ್ತದೆ. ನಿನ್ನಲ್ಲಿ ಲಯವನ್ನು ಹೊಂದುತ್ತದೆ. ಕಾಲನಾಮಕನಾದವನು, ಪುರುಷನಾಮಕನಾದವನು, ಬ್ರಹ್ಮನಾಮಕನಾದವನು ನೀನೇ.

ತನವಸ್ತೇ ಸ್ಮೃತಾಸ್ತಿಸ್ರಃ ಪುರಾಣಜ್ಞೈಃ ಸುರರ್ಷಿಭಿಃ ।
ಅಧಿಪೌರುಷಮಧ್ಯಾತ್ಮಮಧಿಭೂತಾಧಿದೈವತಮ್ ।
ಅಧಿಲೋಕ್ಯಾಧಿವಿಜ್ಞಾನಮಧಿಯಜ್ಞಸ್ತ್ವಮೇವ ಹಿ ॥೨೯॥

ಪುರಾಣಗಳನ್ನು ತಿಳಿದ ದೇವರ್ಷಿಗಳು ನಿನಗೆ ಮೂರು ರೂಪಗಳೆಂದು ಹೇಳುತ್ತಾರೆ ಹಾಗೂ ಅದು ಸರ್ವಶರೀರಗಳಲ್ಲಿರುವ ಪೌರುಷ ರೂಪ, ಭೂತಗಳಲ್ಲಿರುವ ಅಧಿಭೂತ ರೂಪ ಮತ್ತು ದೇವತೆಗಳಲ್ಲಿರುವ ಅಧಿದೈವತ ರೂಪ. ಅಧಿಲೋಕ್ಯ, ಅಧಿವಿಜ್ಞಾನ, ಅಧಿಯಜ್ಞರೂಪಗಳೂ ನಿನ್ನವೇ.

ತ್ವಾಂ ವಿದಿತ್ವಾಽತ್ಮದೇಹಸ್ಥಂ ದುರ್ವಿದಂ ದೈವತೈರಪಿ ।
ವಿದ್ವಾಂಸೋ ಯಾಂತಿ ನಿರ್ಮುಕ್ತಾಃ ಪರಂ ಭಾವಮನಾಮಯಮ್ ॥

ದೇವತೆಗಳಿಂದಲೂ ತಿಳಿಯಲು ಕಷ್ಟಸಾಧ್ಯನಾದ ನಿನ್ನನ್ನು ತಮ್ಮ ಶರೀರದಲ್ಲಿ ನೋಡಿದ ಜ್ಞಾನಿಗಳು, ಮೋಕ್ಷವನ್ನು ಹೊಂದಿ ನಿರ್ದುಷ್ಟವಾದ ಶ್ರೇಷ್ಠವಾದ, ಭಾವವನ್ನು ಹೊಂದುತ್ತಾರೆ.

ಅನಿಚ್ಛತಸ್ತವ ವಿಭೋ ಜನ್ಮಮೃತ್ಯುರನೇಕಶಃ ।
ದ್ವಾರಂ ತ್ವಂ ಸ್ವರ್ಗಮೋಕ್ಷಾಣಾಮಾಕ್ಷೇಪ್ತಾ ತ್ವಂ ದದಾಸಿ ಚ ॥೩೧॥

ನಿನ್ನನ್ನು ಬಯಸದವನಿಗೆ ಅನೇಕ ಜನನ-ಮರಣಗಳುಂಟಾಗುತ್ತವೆ. ನೀನು ಸ್ವರ್ಗ-ಮೋಕ್ಷಗಳಿಗೆ ದ್ವಾರನಾದವನು. ಅವುಗಳನ್ನು ಕೊಡುವವನು ಮತ್ತು ಸಂಹರಿಸುವವನು ನೀನು.

ತ್ವಮೇವ ಮೋಕ್ಷಃ ಸ್ವರ್ಗಶ್ಚ ಕಾಮಃ ಕ್ರೋಧಸ್ತ್ವಮೇವ ಹಿ ।
ಸತ್ತ್ವಂ ರಜಸ್ತಮಶ್ಚೈವ ಅಧಶ್ಚೋರ್ಧ್ವಂ ತ್ವಮೇವ ಹಿ ॥೩೨॥

ಮೋಕ್ಷ-ಸ್ವರ್ಗ, ಕಾಮ-ಕ್ರೋಧ, ಸತ್ವ-ರಜಸ್ಸು-ತಮಸ್ಸು, ಊರ್ಧ್ವದಿಕ್ಕು ಮತ್ತು ಅಧೋದಿಕ್ಕು ಎಲ್ಲವೂ ನೀನೇ.

ಭವಶ್ಚ ವಿಷ್ಣುಶ್ಚ ರುದ್ರಶ್ಚ ಸ್ಕಂದೇಂದ್ರೌ ಸವಿತಾ ಯಮಃ ।
ವರುಣೇಂದೂ ಮನುರ್ಧಾತಾ ವಿಧಾತಾ ತ್ವಂ ಧನೇಶ್ವರಃ ॥೩೩॥

ನೀನೇ ಭವ, ವಿಷ್ಣು, ರುದ್ರ, ಸ್ಕಂಧ, ಇಂದ್ರ, ಸವಿತಾ, ಯಮ, ವರುಣ, ಚಂದ್ರ, ಮನು, ಧಾತ, ವಿಧಾತ, ಕುಬೇರ.

ಭೂರ್ವಾಯುರ್ಜ್ಯೋತಿರಾಪಶ್ಚ ವಾಗ್ಬುದ್ಧಿಸ್ತ್ವಂ ಮತಿರ್ಮನಃ ।
ಕರ್ಮ ಸತ್ಯಾನೃತೇ ಚೋಭೇ ತ್ವಮೇವಾಸ್ತಿ ಚ ನಾಸ್ತಿ ಚ ॥೩೪॥

ಭೂಮಿ, ವಾಯು, ಅಗ್ನಿ, ಜಲ, ವಾಕ್, ಬುದ್ಧಿ, ಮತಿ, ಮನಸ್ಸು, ಕರ್ಮ, ಸತ್ಯ, ಅನೃತ, ಸತ್ವ ಮತ್ತು ಅಸತ್ವ ಎಲ್ಲವೂ ನೀನೇ.

ಇಂದ್ರಿಯಾಣೇಂದ್ರಿಯಾರ್ಥಾಶ್ಚ ಪ್ರಕೃತಿಭ್ಯಃ ಪರಂ ಧ್ರುವಮ್ ।
ವಿಶ್ವಾವಿಶ್ವಪರೋ ಭಾವಶ್ಚಿಂತ್ಯಾಚಿಂತ್ಯಸ್ತ್ವಮೇವ ಹಿ ॥೩೫॥

ಇಂದ್ರಿಯಗಳು, ಇಂದ್ರಿಯದ ವಿಷಯಗಳು, ಪ್ರಕೃತಿಗಿಂತ ಶ್ರೇಷ್ಠವಾದುದು, ನಿತ್ಯವಾದುದು, ವಿಶ್ವಗಳಿಗಿಂತ ಶ್ರೇಷ್ಠವಾದ ವಸ್ತು, ಚಿಂತ್ಯನೂ, ಅಚಿಂತ್ಯನೂ ಆದವನು ಎಲ್ಲವೂ ನೀನೇ.

ಯಚ್ಚೈತತ್ಪರಮಂ ಬ್ರಹ್ಮ ಯಚ್ಚ ತತ್ಪರಮಂ ಪದಮ್ ।
ಯಾ ಗತಿಃ ಸಾಂಖ್ಯಯೋಗಾನಾಂ ಸ ಭವಾನ್ನಾತ್ರ ಸಂಶಯಃ ॥೩೬॥

ಪರಬ್ರಹ್ಮನೂ, ಪರಮಪದನೂ ನೀನೇ. ಸಾಂಖ್ಯಯೋಗಗಳ ಗತಿಯೂ ನೀನೇ. ಇದರಲ್ಲಿ ಸಂಶಯವಿಲ್ಲ.

ನೂನಮದ್ಯ ಕೃತಾರ್ಥಾಃ ಸ್ಮ ನೂನಂ ಪ್ರಾಪ್ತಾಃ ಸತಾಂ ಗತಿಮ್ ।
ಯಾಂ ಗತಿಂ ಪ್ರಾಪ್ನುವಂತೀಹ ಜ್ಞಾನನಿರ್ಮಲಬುದ್ಧಯಃ ॥೩೭॥

ಈ ದಿನ ನಾವು ನಿಶ್ಚಿತವಾಗಿ ಧನ್ಯರಾಗಿದ್ದೇವೆ. ಜ್ಞಾನನಿರ್ಮಲವಾದ ಬುದ್ಧಿಯುಳ್ಳವರು ಎಂತಹ ಗತಿಯನ್ನು ಹೊಂದುತ್ತಾರೋ ಅಂತಹ ಸದ್ಗತಿಯನ್ನು ಹೊಂದಿದ್ದೇವೆ.

ಅಹೋ ಮೂಢಾಃ ಸ್ಮ ಸುಚಿರಮಿಮಂ ಕಾಲಮಚೇತಸಃ ।
ಯನ್ನ ವಿದ್ಮಃ ಪರಂ ದೇವಂ ಶಾಶ್ವತಂ ಯಂ ವಿದುರ್ಬುಧಾಃ ॥೩೮॥

ಶಾಶ್ವತನಾದ ದೇವನಾದ ಯಾವನನ್ನು ಜ್ಞಾನಿಗಳು ತಿಳಿಯುತ್ತಾರೆಯೋ ಅಂತಹ ಶ್ರೇಷ್ಠನಾದ ನಿನ್ನನ್ನು ಇಷ್ಟು ಕಾಲ ತಿಳಿಯದೆ ಜ್ಞಾನಶೂನ್ಯರಾಗಿ ನಾವು ಮೂಢರಾಗಿದ್ದೆವು.

ಸೋಽಯಮಾಸಾದಿತಃ ಸಾಕ್ಷಾದ್ ತ್ವದ್ಭಕ್ತಿರ್ಜನ್ಮಭಿರ್ಮಯಾ ।
ಭಕ್ತಾನುಗ್ರಹಕೃದ್ ದೇವೋ ಯಂ ಜ್ಞಾತ್ವಾಽಮೃತಮಶ್ನುತೇ ॥೩೯॥

ನಾನು ಅನೇಕ ಜನ್ಮಗಳ ಸಾಧನೆಯಿಂದ ನಿನ್ನಲ್ಲಿ ಇಂತಹ ಭಕ್ತಿಯನ್ನು ಪಡೆದು ಭಕ್ತಾನುಗ್ರಹಕಾರಕನಾದ ಯಾವನ ಜ್ಞಾನದಿಂದ ಮೋಕ್ಷವುಂಟಾಗುವುದೋ ಅಂತಹ ನಿನ್ನನ್ನು ಹೊಂದಿದ್ದೇವೆ.

ದೇವಾಸುರಮುನೀನಾಂ ಚ ಯಚ್ಚ ಗುಹ್ಯಂ ಸನಾತನಮ್ ।
ಗುಹಾಯಾಂ ನಿಹಿತಂ ಬ್ರಹ್ಮ ದುರ್ವಿಜ್ಞೇಯಂ ಸುರೈರಪಿ ॥೪೦॥

ಸ ಏಷ ಭಗವಾನ್ ದೇವಃ ಸರ್ವಕೃತ್ಸರ್ವತೋಮುಖಃ ।
ಸರ್ವಾತ್ಮಾ ಸರ್ವದರ್ಶೀ ಚ ಸರ್ವಗಃ ಸರ್ವವೇದಿತಾ ॥೪೧॥

ದೇವಾಸುರ-ಋಷಿಗಳಿಗೆ ಯಾವುದು ರಹಸ್ಯವೋ, ಯಾವುದು ಸನಾತನವೋ, ಯಾವ ವಸ್ತುವು ಪ್ರಕೃತಿಯ ಗುಹೆಯಲ್ಲಿ (ಜೀವರ ಹೃದಯಗುಹೆಯಲ್ಲಿ) ಹಿತವಾಗಿದೆಯೋ, ಯಾವ ಬ್ರಹ್ಮನು ದೇವತೆಗಳಿಂದಲೂ ಕಷ್ಟದಿಂದ ತಿಳಿಯಲು ಸಾಧ್ಯನೋ ಅಂತಹ ಭಗವಂತನಾದ ಇವನು ದೇವನಾದವನು, ಸರ್ವವನ್ನೂ ಮಾಡುವವನು, ಸರ್ವತೋಮುಖನಾದವನು, ಸರ್ವವ್ಯಾಪ್ತನಾದವನು, ಸರ್ವದರ್ಶೀ, ಸರ್ವಸ್ವಾಮಿ ಮತ್ತು ಸರ್ವಜ್ಞನಾದವನು.

ಪ್ರಾಣಕೃತ್ಪ್ರಾಣಭೃತ್ಪ್ರಾಣೀ ಪ್ರಾಣದಃ ಪ್ರಾಣಿನಾಂ ಗತಿಃ ।
ದೇಹಕೃದ್ ದೇಹಭೃದ್ ದೇಹೀ ದೇಹಭುಗ್ದೇಹಿನಾಂ ಗತಿಃ ॥೪೨॥

ಪ್ರಾಣಗಳನ್ನು ಮಾಡುವವನು, ಪ್ರಾಣಗಳನ್ನು ಧರಿಸುವವನು, ಸ್ವತಃ ಪ್ರಾಣವುಳ್ಳವನು, ಪ್ರಾಣವನ್ನು ಕೊಡುವವನು, ಪ್ರಾಣಿಗಳಿಗೆ ಗತಿಯಾದವನು, ದೇಹವನ್ನು ಕೊಡುವವನು, ದೇಹವನ್ನು ಧರಿಸುವವನು, ದೇಹವುಳ್ಳವನು, ದೇಹವನ್ನು ಭೋಗಿಸುವವನು, ದೇಹಿಗಳಿಗೆ ಗತಿಯಾದವನು.

ಅಧ್ಯಾತ್ಮಗತಿನಿಷ್ಠಾನಾಂ ಧ್ಯಾನಿನಾಮಾತ್ಮವೇದಿನಾಮ್ ।
ಅಪುನರ್ಮಾರಕಾಮಾನಾಂ ಯಾ ಗತಿಃ ಸೋಽಯಮೀಶ್ವರಃ ॥೪೩॥

ಅಧ್ಯಾತ್ಮಯೋಗನಿಷ್ಠರಾದ, ಆತ್ಮಜ್ಞಾನಿಗಳಾದ, ಧ್ಯಾನಶೀಲರಾದ, ಪುನಃ ಮರಣವನ್ನು ಬಯಸದ ಯೋಗಿಗಳಿಗೆ ಯಾವನು ಗಮ್ಯನೋ ಇವನು ಅಂತಹ ಈಶ್ವರನಾದವನು.

ಅಯಂ ಚ ಸರ್ವಭೂತಾನಾಂ ಶುಭಾಶುಭಗತಿಪ್ರದಃ ।
ಅಯಂ ಚ ಜನ್ಮಮರಣೇ ವಿದಧ್ಯಾತ್ ಸರ್ವಜಂತುಷು ॥೪೪॥

ಇವನು ಸರ್ವಭೂತಗಳಿಗೆ ಶುಭಾಶುಭ ಗತಿಯನ್ನು ಕೊಡುವವನು. ಎಲ್ಲ ಜಂತುಗಳಿಗೂ ಜನ್ಮ-ಮರಣಗಳನ್ನು ಉಂಟುಮಾಡುವವನು.

ಅಯಂ ಸಂಸಿದ್ಧಿಕಾಮಾನಾಮೃಷೀಣಾಂ ಸಿದ್ಧಿದಃ ಪ್ರಭುಃ ।
ಅಯಂ ಚ ಮೋಕ್ಷಕಾಮಾನಾಂ ದ್ವಿಜಾನಾಂ ಮೋಕ್ಷದಃ ಪ್ರಭುಃ ॥೪೫॥

ಇವನು ಒಳ್ಳೆಯ ಸಿದ್ಧಿಯನ್ನು ಬಯಸುವ ಋಷಿಗಳಿಗೆ ಸಿದ್ಧಿಯನ್ನು ಕೊಡುವ ಪ್ರಭು ಮತ್ತು ಮೋಕ್ಷವನ್ನು ಬಯಸುವ ದ್ವಿಜರಿಗೆ ಮೋಕ್ಷವನ್ನು ಕೊಡುವ ಪ್ರಭು.

ಭೂರಾದ್ಯಾನ್ ಸರ್ವಭುವನಾನುತ್ಪಾದ್ಯ ಸದಿವೌಕಸಃ ।
ಬಿಭರ್ತಿ ದೇವಸ್ತನುಭಿರಷ್ಟಾಭಿಶ್ಚ ದದಾತಿ ಚ ॥೪೬॥

ದೇವನಾದ ಇವನು ಭೂಮಿಯೇ ಮೊದಲಾದ ಎಲ್ಲ ಲೋಕಗಳನ್ನು, ದೇವತೆಗಳನ್ನು ಸೃಷ್ಟಿಮಾಡಿ, ಅವುಗಳನ್ನು ತನ್ನ ಎಂಟು ರೂಪಗಳಿಂದ ಧರಿಸುತ್ತಾನೆ ಮತ್ತು ಇಷ್ಟಾರ್ಥಗಳನ್ನು ಕೊಡುತ್ತಾನೆ.

ಅತಃ ಪ್ರವರ್ತತೇ ಸರ್ವಮಸ್ಮಿನ್ ಸರ್ವಂ ಪ್ರತಿಷ್ಠಿತಮ್ ।
ಅಸ್ಮಿಂಶ್ಚ ಪ್ರಲಯಂ ಯಾತಿ ಅಯಮೇಕಃ ಸನಾತನಃ ॥೪೭॥

ಇವನಿಂದಲೇ ಎಲ್ಲವೂ ಪ್ರವೃತ್ತಿಯನ್ನು ಹೊಂದುತ್ತವೆ. ಎಲ್ಲವೂ ಇವನಲ್ಲಿಯೇ ಪ್ರತಿಷ್ಠಿತವಾಗಿವೆ. ಇವನಲ್ಲಿಯೇ ಲಯವನ್ನು ಹೊಂದುತ್ತವೆ. ಇವನೊಬ್ಬನೇ ಸನಾತನನಾದವನು.

ಅಯಂ ಸ ಸತ್ಯಕಾಮಾನಾಂ ಸತ್ಯಲೋಕಃ ಪರಃ ಸತಾಮ್ ।
ಅಪವರ್ಗಶ್ಚ ಮುಕ್ತಾನಾಂ ಕೈವಲ್ಯಂ ಚಾತ್ಮವಾದಿನಾಮ್ ॥೪೮॥

ಇವನೇ ಸತ್ಯವನ್ನು ಬಯಸುವ ಸಜ್ಜನರಿಗೆ ಶ್ರೇಷ್ಠವಾದ ಸತ್ಯಲೋಕಪ್ರದನಾದವನು. ಮುಕ್ತರಿಗೆ ಮೋಕ್ಷವನ್ನು ಕೊಡುವವನು. ಆತ್ಮವಾದಿಗಳಿಗೆ ಶುದ್ಧನೆನಿಸುವವನು.

ಅಯಂ ಬ್ರಹ್ಮಾದಿಭಿಃ ಸಿದ್ಧೈರ್ಗುಹಾಯಾಂ ಗೋಪಿತಃ ಪ್ರಭುಃ ।
ದೇವಾಸುರಮನುಷ್ಯಾಣಾಮ್ ಅಪ್ರಕಾಶೋ ಭವೇದಿತಿ ॥೪೯॥

ಬ್ರಹ್ಮ ಮೊದಲಾದ ಸಿದ್ಧರು ಇವನನ್ನು ದೇವಾಸುರ ಮನುಷ್ಯರಿಗೆ ಇವನು ತಿಳಿಯದಿರಲಿ ಎಂದು ತಮ್ಮ ಹೃದಯದಲ್ಲಿ ಅಡಗಿಸಿ ಇಡುತ್ತಾರೆ.

ತಂ ತ್ವಾಂ ದೇವಾಸುರನರಾಸ್ತತ್ತ್ವೇನ ನ ವಿದುರ್ಭವಮ್ ।
ಮೋಹಿತಾಃ ಖಲ್ವನೇನೈವ ಹೃಚ್ಛಯೇನ ಪ್ರವೇಶಿತಾಃ ॥೫೦॥

ಸರ್ವಜೀವರ ಹೃದಯದಲ್ಲಿರುವ ಭವನಾದ ಇವನಿಂದಲೇ ಮೋಹಿತರಾಗಿ ದೇವಾಸುರ-ಮನುಷ್ಯರು ಯಾರೂ ಇವನನ್ನು ಸರಿಯಾಗಿ ತಿಳಿಯುವುದಿಲ್ಲ.

ಯೇ ಚೈನಂ ಸಂಪ್ರಪದ್ಯಂತೇ ಭಕ್ತಿಯೋಗೇನ ಭಾರತ ।
ತೇಷಾಮೇವಾತ್ಮನಾತ್ಮಾನಂ ದರ್ಶಯತ್ಯೇಷ ಹೃಚ್ಛಯಃ ॥೫೧॥

ಎಲೈ ಭಾರತನೇ, ಯಾರು ಇವನಿಗೆ ಭಕ್ತಿಯೋಗದಿಂದ ಶರಣಾಗತರಾಗುತ್ತಾರೆಯೋ ಅವರಿಗೆ ಮಾತ್ರ ಹೃದಯವಾಸಿಯಾದ ಅವನು ತಾನೇ ತನ್ನನ್ನು ತೋರಿಸಿಕೊಳ್ಳುತ್ತಾನೆ.

ಯಂ ಜ್ಞಾತ್ವಾ ನ ಪುನರ್ಜನ್ಮ ಮರಣಂ ಚಾಪಿ ವಿದ್ಯತೇ ।
ಯಂ ವಿದಿತ್ವಾ ಪರಂ ವೇದ್ಯಂ ವೇದಿತವ್ಯಂ ನ ವಿದ್ಯತೇ ॥೫೨॥

ಯಾವನನ್ನು ತಿಳಿದರೆ ಪುನರ್ಜನ್ಮ ಮತ್ತು ಮರಣಗಳು ಇರುವುದಿಲ್ಲವೋ, ಯಾವನನ್ನು ತಿಳಿದರೆ ತಿಳಿಯಬೇಕಾದ ಇನ್ನೊಂದು ವಸ್ತುವು ಇರುವುದಿಲ್ಲವೋ ಅವನು ಶಿವ.

ಯಂ ಲಬ್ಧ್ವಾ ಪರಮಂ ಲಾಭಂ ಮನ್ಯತೇ ನಾಧಿಕಂ ಪುನಃ ।
ಯಾಂ ಸೂಕ್ಷ್ಮಾಂ ಪರಮಾಂ ಪ್ರಾಪ್ತಿಮಾಗಚ್ಛತ್ಯಕ್ಷಯಾವಹಾಮ್ ॥೫೩॥

ಯಾವನನ್ನು ಹೊಂದಿದ ಭಕ್ತನು ಅದೇ ಪರಮಲಾಭವೆಂದೂ, ಅದಕ್ಕಿಂತ ಅಧಿಕವಾದುದು ಯಾವುದೂ ಇಲ್ಲವೆಂದೂ ತಿಳಿಯುತ್ತಾನೆಯೋ ಮತ್ತು ಸೂಕ್ಷ್ಮವಾದ, ಅಕ್ಷಯವಾದ ಶ್ರೇಷ್ಠವಾದ ಪ್ರಾಪ್ತಿಯನ್ನು ಹೊಂದುತ್ತಾನೆಯೋ ಅಂತಹವನು ಶಿವ.

ಯಂ ಸಾಂಖ್ಯಾ ಗುಣತತ್ತ್ವಜ್ಞಾಃ ಸಾಂಖ್ಯಶಾಸ್ತ್ರವಿಶಾರದಾಃ ।
ಸೂಕ್ಷ್ಮಜ್ಞಾನರತಾಃ ಪೂರ್ವಂ ಜ್ಞಾತ್ವಾ ಮುಚ್ಯಂತಿ ಬಂಧನೈಃ ॥೫೪॥

ಗುಣತತ್ತ್ವಗಳನ್ನು ತಿಳಿದ, ಸಾಂಖ್ಯಶಾಸ್ತ್ರವಿಶಾರದರಾದ, ಸೂಕ್ಷ್ಮಜ್ಞಾನದಲ್ಲಿ ನಿರತರಾದ ಸಾಂಖ್ಯರು ಮೊದಲು ಯಾವನನ್ನು ತಿಳಿದು, ಸಂಸಾರಬಂಧನದಿಂದ ಮುಕ್ತರಾಗುತ್ತಾರೆಯೋ ಅವನು ಶಿವ.

ಯಂ ಚ ವೇದವಿದೋ ವೇದ್ಯಂ ವೇದಾಂತೇಷು ಪ್ರತಿಷ್ಠಿತಮ್ ।
ಪ್ರಾಣಾಯಾಮಪರಾ ನಿತ್ಯಂ ಯಂ ವಿಶಂತಿ ಜಪಂತಿ ಚ ।
ಓಂಕಾರರಥಮಾರುಹ್ಯ ತೇ ವಿಶಂತಿ ಮಹೇಶ್ವರಮ್ ॥೫೫॥

ವೇದವನ್ನು ತಿಳಿದವರು ಯಾವನನ್ನು ವೇದಾಂತಗಳಲ್ಲಿ ವಂದ್ಯನಾಗಿ ಪ್ರತಿಷ್ಠಿತನಾಗಿದ್ದಾನೆಂದು ತಿಳಿಯುತ್ತಾರೆಯೋ, ಯಾರು ಪ್ರಾಣಾಯಾಮ ನಿರತರಾಗಿ ನಿತ್ಯವೂ ಜಪವನ್ನು ಮಾಡುತ್ತಾರೆಯೋ ಅಂತಹವರೂ ಓಂಕಾರವೆಂಬ ರಥವನ್ನು ಏರಿ ಮಹೇಶ್ವರನನ್ನು ಪ್ರವೇಶಿಸುತ್ತಾರೆ.

ಅಯಂ ಸ ದೇವಯಾನಾನಾಮಾದಿತ್ಯೋ ದ್ವಾರಮುಚ್ಯತೇ ।
ಅಯಂ ಚ ಪಿತೃಯಾನಾನಾಂ ಚಂದ್ರಮಾ ದ್ವಾರಮುಚ್ಯತೇ ॥೫೬॥

ಇವನೇ ದೇವಯಾನದ ದ್ವಾರನಾದ ಆದಿತ್ಯ ಮತ್ತು ಪಿತೃಯಾನದ ದ್ವಾರನಾದ ಚಂದ್ರ ಎಂದು ಹೇಳಲ್ಪಡುತ್ತಾನೆ.

ಏಷ ಕಾಲಗತಿಶ್ಚಿತ್ರಾ ಸಂವತ್ಸರಯುಗಾದಿಷು ।
ದಿವ್ಯಾದಿವ್ಯಃ ಪರೋ ಲಾಭ ಅಯನೇ ದಕ್ಷಿಣೋತ್ತರೇ ॥೫೭॥

ಸಂವತ್ಸರ ಮೊದಲಾದವುಗಳಲ್ಲಿ ವಿಚಿತ್ರವಾದ ಕಾಲಗತಿ ರೂಪನಾದವನೂ, ದಿವ್ಯನೂ, ಅದಿವ್ಯನೂ, ಪರಮಲಾಭರೂಪನೂ, ದಕ್ಷಿಣಾಯನ, ಉತ್ತರಾಯಣ ರೂಪನೂ ಇವನೇ ಆಗಿದ್ದಾನೆ.

ಏನಂ ಪ್ರಜಾಪತಿಃ ಪೂರ್ವಮಾರಾಧ್ಯ ಬಹುಭಿಃ ಸ್ತವೈಃ ।
ವರಯಾಮಾಸ ಪುತ್ರತ್ವೇ ನೀಲಲೋಹಿತಸಂಜ್ಞಿತಮ್ ॥೫೮॥

ಹಿಂದೆ ಪ್ರಜಾಪತಿಯು ಅನೇಕ ಸ್ತೋತ್ರಗಳಿಂದ ಅವನನ್ನು ಆರಾಧಿಸಿ, ನೀಲಲೋಹಿತನನ್ನು ಪುತ್ರನನ್ನಾಗಿ ವರವನ್ನು ಕೇಳಿದನು.

ಋಗ್ಭಿರ್ಯಮನುಶಂಸಂತಿ ತಂತ್ರೇ ಕರ್ಮಣಿ ಬಹ್ವೃಚಃ ।
ಯಜುರ್ಭಿರ್ಯಂ ತ್ರಿಧಾ ವೇದ್ಯಂ ಜುಹ್ವತ್ಯಧ್ವರ್ಯವೋಽಧ್ವರೇ ॥೫೯॥

ಸಾಮಭಿರ್ಯಂ ಚ ಗಾಯಂತಿ ಸಾಮಗಾಃ ಶುದ್ಧಬುದ್ಧಯಃ ।
ಋತಂ ಸತ್ಯಂ ಪರಂ ಬ್ರಹ್ಮ ಸ್ತುವಂತ್ಯಾಥರ್ವಣಾ ದ್ವಿಜಾಃ ।
ಯಜ್ಞಸ್ಯ ಪರಮಾ ಯೋನಿಃ ಪತಿಶ್ಚಾಯಂ ಪರಃ ಸ್ಮೃತಃ ॥೬೦॥

ಕರ್ಮತಂತ್ರದಲ್ಲಿ ನಿರತರಾದ ಋಗ್ವೇದಿಗಳು ಯಾವನನ್ನು ಋಗ್ವೇದದಿಂದ ಶಂಸನೆ ಮಾಡುತ್ತಾರೆಯೋ, ಅಧ್ವರ್ಯುಗಳು ಯಜ್ಞದಲ್ಲಿ ಯಜುಸ್ಸುಗಳಿಂದ ವೇದ್ಯನಾದ ಯಾವನನ್ನು ಮೂರು ರೀತಿಯಲ್ಲಿ ಹೋಮವನ್ನು ಮಾಡುತ್ತಾರೆಯೋ, ಶುದ್ಧಬುದ್ಧಿಯುಳ್ಳ ಸಾಮಗಾಯಕರು ಸಾಮಗಳಿಂದ ಯಾವನನ್ನು ಗಾನ ಮಾಡುತ್ತಾರೆಯೋ, ಅಥರ್ವಣ ಬ್ರಾಹ್ಮಣರು ಯಾವನನ್ನು ಋತ, ಸತ್ಯ , ಪರಬ್ರಹ್ಮ ಎಂದು ಸ್ತೋತ್ರ ಮಾಡುತ್ತಾರೆಯೋ ಅಂತಹ ಈ ಶಿವನು ಯಜ್ಞಕ್ಕೆ ಮೂಲಕಾರಣನಾದವನು ಮತ್ತು ಶ್ರೇಷ್ಠಸ್ವಾಮಿಯಾದವನೆಂದು ಹೇಳಲ್ಪಡುತ್ತದೆ.

ರಾತ್ರ್ಯಹಃಶ್ಮೋತ್ರನಯನಃ ಪಕ್ಷಮಾಸಶಿರೋಭುಜಃ ।
ಋತುವೀರ್ಯಸ್ತಪೋಧೈರ್ಯೋ ಹ್ಯಬ್ದಗುಹ್ಯೋರುಪಾದವಾನ್ ॥೬೧॥

ರಾತ್ರಿ ಮತ್ತು ಹಗಲುಗಳು ಅವನ ಶ್ಮೋತ್ರನಯನಗಳು. ಪಕ್ಷ-ಮಾಸಗಳು ಶಿರೋ-ಭುಜಗಳು. ಋತುಗಳು ಅವನ ವೀರ್ಯ. ತಪಸ್ಸು ಅವನ ಧೈರ್ಯ. ಸಂವತ್ಸರಗಳು ಅವನ ಗುಹ್ಯಪ್ರದೇಶ. ಅವನು ಅನೇಕ ಪಾದಗಳುಳ್ಳವನು.

ಮೃತ್ಯುರ್ಯಮೋ ಹುತಾಶಶ್ಚ ಕಾಲಃ ಸಂಹಾರವೇಗವಾನ್ ।
ಕಾಲಸ್ಯ ಪರಮಾ ಯೋನಿಃ ಕಾಲಶ್ಚಾಯಂ ಸನಾತನಃ ॥೬೨॥

ಅವನು ಮೃತ್ಯು , ಯಮ, ಅಗ್ನಿ, ಸಂಹಾರವೇಗ ಉಳ್ಳ ಕಾಲ. ಕಾಲಕ್ಕೆ ಮೂಲಕಾರಣನಾದವನು ಮತ್ತು ಸ್ವತಃ ಸನಾತನನಾದ ಕಾಲ ರೂಪನಾದವನು.

ಚಂದ್ರಾದಿತ್ಯೌ ಸನಕ್ಷತ್ರೌ ಸಗ್ರಹೌ ಸಹ ವಾಯುನಾ ।
ಧ್ರುವಃ ಸಪ್ತರ್ಷಯಶ್ಚೈವ ಭುವನಾಃ ಸಪ್ತ ಏವ ಚ ॥೬೩॥

ನಕ್ಷತ್ರಗಳಿಂದಲೂ, ಗ್ರಹಗಳಿಂದಲೂ ಮತ್ತು ವಾಯುವಿನಿಂದಲೂ ಕೂಡಿದ ಚಂದ್ರ-ಸೂರ್ಯರು, ಧ್ರುವ, ಸಪ್ತರ್ಷಿಗಳು, ಏಳು ಭುವನಗಳು.

ಪ್ರಧಾನಂ ಮಹದವ್ಯಕ್ತಂ ವಿಶೇಷಾಂತಂ ಸವೈಕೃತಮ್ ।
ಬ್ರಹ್ಮಾದಿ ಸ್ತಂಬಪರ್ಯಂತಂ ಭೂತಾದಿ ಸದಸಚ್ಚ ಯತ್ ॥೬೪॥

ಪ್ರಧಾನ, ಮಹತ್ತತ್ತ್ವ, ಅವ್ಯಕ್ತ ತತ್ತ್ವ, ಭೂಮಿಯವರೆಗಿನ ಎಲ್ಲ ಪ್ರಕೃತಿ ವಿಕಾರಗಳು, ಬ್ರಹ್ಮಾದಿ ಸ್ತಂಬಪರ್ಯಂತವಾದ ಜೀವರಾಶಿ, ಸಮಸ್ತವಾದ ಕಾರ್ಯಕಾರಣಗಳು.

ಅಷ್ಟೌ ಪ್ರಕೃತಯಶ್ಚೈವ ಪ್ರಕೃತಿಭ್ಯಶ್ಚ ಯತ್ಪರಮ್ ।
ಅಸ್ಯ ದೇವಸ್ಯ ಯದ್ಭಾಗಂ ಕೃತ್ಸ್ನಂ ಸಂಪರಿವರ್ತತೇ ॥೬೫॥

ಎಂಟು ಪ್ರಕೃತಿಗಳು, ಪ್ರಕೃತಿಗಿಂತ ಪರವಾದುದು ಎಲ್ಲವೂ ಈ ದೇವನ ಒಂದು ಭಾಗ ಮಾತ್ರ. ಇವೆಲ್ಲವೂ ಆ ದೇವನಿಂದ ಪರಿವರ್ತನವನ್ನು ಹೊಂದುತ್ತವೆ.

ಏತತ್ಪರಮಮಾನಂದಂ ಯತ್ತಚ್ಛಾಶ್ವತಮೇವ ಚ ।
ಏಷಾ ಗತಿರ್ವಿರಕ್ತಾನಾಮೇಷ ಭಾವಃ ಪರಃ ಸತಾಮ್ ॥೬೬॥

ಇವನು ಶಾಶ್ವತವಾದ ಪರಮಾನಂದರೂಪನಾದವನು. ವಿರಕ್ತರಿಗೆ ಗತಿಯಾದವನು. ಸಜ್ಜನರ ಭಕ್ತಿಗೆ ವಿಷಯನಾದವನು.

ಏತತ್ಪದಮನುದ್ವಿಗ್ನಮೇತದ್ ಬ್ರಹ್ಮ ಸನಾತನಮ್ ।
ಶಾಸ್ತ್ರವೇದಾಂಗವಿದುಷಾಮೇತದ್ ಧ್ಯಾನಂ ಪರಂ ಪದಮ್ ॥೬೭॥

ಅವನ ಸ್ವರೂಪವು ಉದ್ವೇಗರಹಿತವಾದುದು. ಅವನೇ ಬ್ರಹ್ಮ, ಸನಾತನನಾದವನು. ಶಾಸ್ತ್ರಗಳನ್ನು ಮತ್ತು ವೇದಾಂಗಗಳನ್ನು ತಿಳಿದ ಜ್ಞಾನಿಗಳಿಗೆ ಅವನೇ ಶ್ರೇಷ್ಠವಾದ ಧ್ಯಾನವಿಷಯವಾದ ವಸ್ತು.

ಇಯಂ ಸಾ ಪರಮಾ ಕಾಷ್ಠಾ ಇಯಂ ಸಾ ಪರಮಾ ಕಲಾ ।
ಇಯಂ ಸಾ ಪರಮಾ ಸಿದ್ಧಿರಿಯಂ ಸಾ ಪರಮಾ ಗತಿಃ ॥೬೮॥

ಪರಮಕಾಷ್ಠೆ ಎಂದರೆ (ಸರ್ವಶ್ರೇಷ್ಠನೆಂದರೆ) ಇವನೇ. ಶ್ರೇಷ್ಠವಾದ ಕಲೆ ಎಂದರೆ ಇವನೇ. ಶ್ರೇಷ್ಠವಾದ ಸಿದ್ಧಿ ಎಂದರೆ ಇವನೇ. ಶ್ರೇಷ್ಠವಾದ ಗತಿ ಎಂದರೂ ಇವನೇ.

ಇಯಂ ಸಾ ಪರಮಾ ಶಾಂತಿರಿಯಂ ಸಾ ನಿರ್ವೃತಿಃ ಪರಾ ।
ಯಂ ಪ್ರಾಪ್ಯ ಕೃತಕೃತ್ಯಾಃ ಸ್ಮ ಇತ್ಯಮನ್ಯಂತ ಯೋಗಿನಃ ॥೬೯॥

ಪರಮಶಾಂತಿಯು ಇವನೇ. ಪರಮಸುಖವು ಇವನೇ. ಇವನನ್ನು ಹೊಂದಿ ನಾವು ಕೃತಕೃತ್ಯರಾಗಿದ್ದೇವೆ ಎಂದು ಯೋಗಿಗಳು ತಿಳಿದಿದ್ದಾರೆ.

ಇಯಂ ತುಷ್ಟಿರಿಯಂ ಸಿದ್ಧಿರಿಯಂ ಶ್ರುತಿರಿಯಂ ಸ್ಮೃತಿಃ ।
ಅಧ್ಯಾತ್ಮಗತಿನಿಷ್ಠಾನಾಂ ವಿದುಷಾಂ ಪ್ರಾಪ್ತಿರವ್ಯಯಾ ॥೭೦॥

ಇವನೇ ತುಷ್ಟಿ, ಇವನೇ ಸಿದ್ಧಿ, ಇವನೇ ಶ್ರುತಿ-ಸ್ಮೃತಿರೂಪನಾದವನು. ಅಧ್ಯಾತ್ಮ ಮಾರ್ಗನಿಷ್ಠರಾದ ಇವನೇ ವಿದ್ವಾಂಸರಿಗೆ ಶಾಶ್ವತನಾಗಿ ಪ್ರಾಪ್ಯನಾದವನು.

ಯಜತಾಂ ಯಜ್ಞಕಾಮಾನಾಂ ಯಜ್ಞೈರ್ವಿಪುಲದಕ್ಷಿಣೈಃ ।
ಯಾ ಗತಿರ್ದೈವತೈರ್ದಿವ್ಯಾ ಸಾ ಗತಿಸ್ತ್ವಂ ಸನಾತನ ॥೭೧॥

ಎಲೈ ಸನಾತನನೇ, ಯಜ್ಞವನ್ನು ಮಾಡಲು ಬಯಸಿ ವಿಪುಲದಕ್ಷಿಣೆಗಳನ್ನು ನೀಡುವ ದೇವತೆಗಳಿಗೆ ಯಾವ ಗತಿಯುಂಟಾಗುತ್ತದೆಯೋ ನೀನು ಅಂತಹ ಗತಿಪ್ರದನಾದವನು.

ಸಮ್ಯಗ್ ಯೋಗಜಪೈಃ ಶಾಂತಿರ್ನಿಯಮೈರ್ದೇಹಪಾತನೈಃ ।
ತಪ್ಯತಾಂ ಯಾ ಗತಿರ್ದೇವ ವೈರಾಜೇ ಸಾ ಗತಿರ್ಭವಾನ್ ॥೭೨॥

ಚೆನ್ನಾದ ಯೋಗ-ಜಪಗಳಿಂದಲೂ, ಶಾಂತಿ-ನಿಯಮ-ದೇಹ ದಂಡನೆಗಳಿಂದಲೂ, ತಪಸ್ಸನ್ನು ಮಾಡುವವರಿಗೆ ಬ್ರಹ್ಮಾಂಡದಲ್ಲಿ ಯಾವ ಗತಿಯಾಗುತ್ತದೆಯೋ, ಎಲೈ ದೇವನೇ, ನೀನೇ ಆ ಗತಿಪ್ರದನಾದವನು.

ಕರ್ಮನ್ಯಾಸಕೃತಾನಾಂ ಚ ವಿರಕ್ತಾನಾಂ ತತಸ್ತತಃ ।
ಯಾ ಗತಿರ್ಬ್ರಹ್ಮಸದನೇ ಸಾ ಗತಿಸ್ತ್ವಂ ಸನಾತನ ॥೭೩॥

ಎಲೈ ಸನಾತನನೇ, ಕರ್ಮನ್ಯಾಸವನ್ನು ಮಾಡಿ, ಎಲ್ಲದರಿಂದಲೂ ವಿರಕ್ತರಾದ ಸಂನ್ಯಾಸಿಗಳಿಗೆ ಬ್ರಹ್ಮಸದನದಲ್ಲಿ ಯಾವ ಗತಿಯಾಗುತ್ತದೆಯೋ ಅಂತಹ ಗತಿಪ್ರದನಾದವನು ನೀನು.

ಅಪುನರ್ಭವಕಾಮಾನಾಂ ವೈರಾಗ್ಯೇ ವರ್ತತಾಂ ಪರೇ ।
ವಿಕೃತೀನಾಂ ಲಯಾನಾಂ ಚ ಸಾ ಗತಿಸ್ತ್ವಂ ಸನಾತನ ॥೭೪॥

ಮೋಕ್ಷವನ್ನು ಬಯಸಿ ವಿರಕ್ತರಾದವರಿಗೂ ಶ್ರೇಷ್ಠವಾದ ವೈರಾಗ್ಯವನ್ನು ಹೊಂದಿದವರಿಗೂ, ವಿಕಾರಗಳಿಗೂ ಮತ್ತು ಲಯಗಳಿಗೂ (ವಿನಾಶಗಳಿಗೂ) ನೀನೇ ಗತಿಯಾದವನು.

ಜ್ಞಾನವಿಜ್ಞಾನನಿಷ್ಠಾನಾಂ ನಿರುಪಾಖ್ಯಾ ನಿರಂಜನಾ ।
ಕೈವಲ್ಯಾ ಯಾ ಗತಿರ್ದೇವ ಪರಮಾ ಸಾ ಗತಿರ್ಭವಾನ್ ॥೭೫॥

ಜ್ಞಾನ-ವಿಜ್ಞಾನನಿಷ್ಠರಾದವರಿಗೆ ವರ್ಣಿಸಲು ಅಸಾಧ್ಯವಾದ, ದೋಷದೂರವಾದ ಯಾವ ಶ್ರೇಷ್ಠಗತಿಯುಂಟಾಗುತ್ತದೆಯೋ ಅಂತಹ ಶ್ರೇಷ್ಠ ಗತಿಯನ್ನು ಕೊಡುವವನು ನೀನು.

ವೇದಶಾಸ್ತ್ರಪುರಾಣೋಕ್ತಾಃ ಪಂಚೈತಾ ಗತಯಃ ಸ್ಮೃತಾಃ ।
ತ್ವತ್ಪ್ರಸಾದಾದ್ಧಿ ಲಭ್ಯಂತೇ ನ ಲಭ್ಯಂತೇऽನ್ಯಥಾ ವಿಭೋ ॥೭೬॥

ವೇದ-ಶಾಸ್ತ್ರ-ಪುರಾಣಗಳಲ್ಲಿ ಈ ಐದು ಗತಿಗಳು ಹೇಳಲ್ಪಟ್ಟಿವೆ. ಎಲೈ ವಿಭುವೇ, ಇವು ನಿನ್ನ ಅನುಗ್ರಹದಿಂದ ಲಭ್ಯವಾಗುತ್ತವೆ. ಬೇರೆ ರೀತಿಯಲ್ಲಿ ಲಭ್ಯವಾಗುವುದಿಲ್ಲ.

ಇತಿ ತಂಡಿಸ್ತಪೋಯೋಗಾತ್ ತುಷ್ಟಾವೇಶಾನಮವ್ಯಯಮ್ ।
ಜಗೌ ಚ ಪರಮಂ ಬ್ರಹ್ಮ ಯತ್ಪುರಾ ಲೋಕಕೃಜ್ಜಗೌ ॥೭೭॥

ಹೀಗೆ ತಂಡಿಯು ತಪೋಯೋಗದಿಂದ ಅವ್ಯಯನಾದ ಈಶಾನನನ್ನು ಸ್ತೋತ್ರ ಮಾಡಿದನು. ಹಿಂದೆ ಲೋಕಕರ್ತನಾದ ಬ್ರಹ್ಮನು ಮಾಡಿದ ಪರಮವೇದವನ್ನು ಗಾನ ಮಾಡಿದನು.

ಉಪಮನ್ಯುಃ

ಏವಂ ಸ್ತುತೋ ಮಹಾದೇವಸ್ತಂಡಿನಾ ಬ್ರಹ್ಮವಾದಿನಾ ।
ಉವಾಚ ಭಗವಾನ್ ದೇವ ಉಮಯಾ ಸಹಿತಃ ಪ್ರಭುಃ ॥೭೮॥

ಉಪಮನ್ಯು– ಹೀಗೆ ಬ್ರಹ್ಮವಾದಿಯಾದ ತಂಡಿಯಿಂದ ಸ್ತೋತ್ರ ಮಾಡಲ್ಪಟ್ಟ ಉಮಾಸಹಿತನಾದ ಭಗವಂತನಾದ ಮಹಾದೇವನು ತಂಡಿಯನ್ನು ಕುರಿತು ಹೇಳಿದನು.

ಬ್ರಹ್ಮಾ ಶತಕ್ರತುರ್ವಿಷ್ಣುರ್ವಿಶ್ವೇದೇವಾ ಮಹರ್ಷಯಃ ।
ನ ವಿದುಸ್ತಾ ತ್ವಮಿತಿ ತತಸ್ತುಷ್ಟಃ ಪ್ರೋವಾಚ ತಂ ಶಿವಃ ॥೭೯॥

ಬ್ರಹ್ಮದೇವನು, ಇಂದ್ರನು, ವಿಷ್ಣುವು, ವಿಶ್ವೇದೇವತೆಗಳು, ಮಹರ್ಷಿಗಳು ನಿನ್ನನ್ನು ತಿಳಿಯುವುದಿಲ್ಲ ಎಂದು ಹೇಳಿದ ಕಾರಣದಿಂದ ಸಂತುಷ್ಟನಾದ ಶಿವನು ಅವನನ್ನು ಕುರಿತು ಮಾತನಾಡಿದನು.

ಅಕ್ಷಯಶ್ಚಾವ್ಯಯಶ್ಚೈವ ಭವಿತಾ ದುಃಖವರ್ಜಿತಃ ।
ಯಶಸ್ವೀ ತೇಜಸಾ ಯುಕ್ತೋ ದಿವ್ಯಜ್ಞಾನಸಮನ್ವಿತಃ ॥೮೦॥

ನೀನು ಅಕ್ಷಯವಾದುದನ್ನು ಮತ್ತು ಅವ್ಯಯವಾದುದನ್ನು ಹೊಂದುತ್ತೀಯೆ. ದುಃಖರಹಿತನಾಗುತ್ತೀಯೆ. ಯಶಸ್ವಿಯೂ, ತೇಜಸ್ವಿಯೂ, ದಿವ್ಯ ಜ್ಞಾನ ಸಮನ್ವಿತನೂ ಆಗುವಿ.

ಋಷೀಣಾಮಭಿಗಮ್ಯಶ್ಚ ಸೂತ್ರಕರ್ತಾ ಸುತಸ್ತವ ।
ಮತ್ಪ್ರಸಾದಾದ್ ದ್ವಿಜಶ್ರೇಷ್ಠ ಭವಿಷ್ಯತಿ ನ ಸಂಶಯಃ ॥೮೧॥

ಋಷಿಗಳು ನಿನ್ನ ಬಳಿಗೆ ಬರುತ್ತಾರೆ. ನಿನ್ನ ಪುತ್ರನು ಸೂತ್ರಕರ್ತನಾಗುತ್ತಾನೆ. ಎಲೈ ದ್ವಿಜಶ್ರೇಷ್ಠನೇ, ನನ್ನ ಅನುಗ್ರಹದಿಂದ ಇವೆಲ್ಲವೂ ಆಗುವವು. ಇದರಲ್ಲಿ ಸಂಶಯವಿಲ್ಲ.

ಕಂ ವಾ ಕಾಮಂ ದದಾಮ್ಯದ್ಯ ಬ್ರೂಹಿ ಯದ್ವತ್ಸ ಕಾಂಕ್ಷಸೇ ।
ಪ್ರಾಂಜಲಿಃ ಸ ಉವಾಚೇದಂ ತ್ವಯಿ ಭಕ್ತಿರ್ದೃಢಾಸ್ತು ಮೇ ॥೮೨॥

ವತ್ಸನೇ, ನೀನು ಬೇರೆ ಏನನ್ನು ಬಯಸುತ್ತೀಯೋ ಅಂತಹ ಯಾವ ವರವನ್ನು ಈ ದಿನ ಕೊಡಲಿ ಎಂದು ಹೇಳು ಎಂದು ಶಿವನು ಹೇಳಿದನು. ತಂಡಿಯು ಕೈಗಳನ್ನು ಮುಗಿದು 'ನನಗೆ ನಿನ್ನಲ್ಲಿ ದೃಢವಾದ ಭಕ್ತಿ ಇರಲಿ' ಎಂದು ಕೇಳಿದನು.

ಏವಂ ದತ್ತ್ವಾ ವರಂ ದೇವೋ ವಂದ್ಯಮಾನಃ ಸುರರ್ಷಿಭಿಃ ।
ಸ್ತೂಯಮಾನಶ್ಚ ವಿಬುಧೈಸ್ತತ್ರೈವಾಂತರಧೀಯತ ॥೮೩॥

ಹೀಗೆ ದೇವನು ವರವನ್ನು ಕೊಟ್ಟು, ದೇವತೆಗಳಿಂದಲೂ ಮತ್ತು ಋಷಿಗಳಿಂದಲೂ ನಮಸ್ಕರಿಸಲ್ಪಟ್ಟು ಮತ್ತು ಸ್ತೋತ್ರ ಮಾಡಲ್ಪಟ್ಟು, ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಅಂತರ್ಹಿತೇ ಭಗವತಿ ಸಾನುಗೇ ಯಾದವೇಶ್ವರ ।
ಋಷಿರಾಶ್ರಮಮಾಗಮ್ಯ ಮಮೈತತ್ಪ್ರೋಕ್ತವಾನಿಹ ॥೮೪॥

ಎಲೈ ಯಾದವೇಶ್ವರನೇ, ಭಗವಂತನು ಪರಿವಾರ ಸಹಿತನಾಗಿ ಅಂತರ್ಧಾನವನ್ನು ಹೊಂದಿದ ಮೇಲೆ ಋಷಿಯು ಈ ಆಶ್ರಮಕ್ಕೆ ಬಂದು ನನಗೆ ಇದನ್ನು ಹೇಳಿದನು.

ಯಾನಿ ಚ ಪ್ರಥಿತಾನ್ಯಾದೌ ತಂಡಿರಾಖ್ಯಾತವಾನ್ ಮಮ ।
ನಾಮಾನಿ ಮಾನವಶ್ರೇಷ್ಠ ತಾನಿ ತ್ವಂ ಶೃಣು ಸಿದ್ಧಯೇ ॥೮೫॥

ಎಲೈ ಮಾನವಶ್ರೇಷ್ಠನೇ, ತಂಡಿಯು ಹಿಂದೆ ಯಾವ ಪ್ರಖ್ಯಾತವಾದ ನಾಮಗಳನ್ನು ನನಗೆ ಹೇಳಿದನೋ ನೀನು ನಿನ್ನ ಸಿದ್ಧಿಗಾಗಿ ಆ ನಾಮಗಳನ್ನು ಕೇಳು.

ದಶ ನಾಮಸಹಸ್ರಾಣಿ ವೇದೇಷ್ವಾಹ ಪಿತಾಮಹಃ ।
ಶರ್ವಸ್ಯ ಶಾಸ್ತ್ರೇಷು ತಥಾ ದಶ ನಾಮಶತಾನಿ ವೈ ॥೮೬॥

ಪಿತಾಮಹರಾದ ಬ್ರಹ್ಮದೇವರು ವೇದಗಳಲ್ಲಿ ದಶಸಹಸ್ರನಾಮಗಳನ್ನು ಹೇಳಿದ್ದಾರೆ. ಹಾಗೆ ಶಾಸ್ತ್ರಗಳಲ್ಲಿ ಶಿವನಿಗೆ ಹತ್ತು ಶತ (ಸಾವಿರ) ನಾಮಗಳು ಹೇಳಲ್ಪಟ್ಟಿವೆ.

ಗುಹ್ಯಾನೀಮಾನಿ ನಾಮಾನಿ ತಂಡಿರ್ಭಗವತೋऽಚ್ಯುತ ।
ದೇವಪ್ರಸಾದಾದ್ ದೇವೇಶ ಪುರಾ ಪ್ರಾಹ ಮಹಾತ್ಮನೇ ॥೮೭॥

ಎಲೈ ಅಚ್ಯುತನೇ, ಈ ನಾಮಗಳೆಲ್ಲವೂ ರಹಸ್ಯವಾದವು. ಎಲೈ ದೇವೇಶನೇ, ಹಿಂದೆ ತಂಡಿಯು ಆ ದೇವನ ಅನುಗ್ರಹದಿಂದ ಮಹಾತ್ಮನಾದ ವಾಸುದೇವನಿಗೆ ಆ ನಾಮಗಳನ್ನು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಈಶ್ವರದರ್ಶನಂ ನಾಮ ಪಂಚತ್ರಿಂಶೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತಾರನೆಯ ಅಧ್ಯಾಯ

ಶಿವಸಹಸ್ರನಾಮಾವಲಿಃ

ವಾಸುದೇವಃ

ತತಃ ಸ ಪ್ರಯತೋ ಭೂತ್ವಾ ಮಮ ತಾತ ಯುಧಿಷ್ಠಿರ ।
ಪ್ರಾಂಜಲಿಃ ಪ್ರಾಹ ವಿಪ್ರರ್ಷಿರ್ನಾಮಸಂಹಾರಮಾದಿತಃ ॥೧॥

ವಾಸುದೇವ– ಎಲೈ ಪ್ರೀತಿಪಾತ್ರನಾದ ಯುಧಿಷ್ಠಿರನೇ, ಅನಂತರ ಆ ವಿಪ್ರರ್ಷಿಯು ಕೈಗಳನ್ನು ಮುಗಿದು, ಮನಸ್ಸನ್ನು ಏಕಾಗ್ರೀಕರಿಸಿ, ಶಿವನ ನಾಮಸಮುದಾಯವನ್ನು ಮೊದಲಿನಿಂದಲೂ ಹೇಳಿದನು.

ಉಪಮನ್ಯುಃ

ಬ್ರಹ್ಮಪ್ರೋಕ್ತೈರ್ಋಷಿಪ್ರೋಕ್ತೈರ್ವೇದವೇದಾಂಗಸಂಭವೈಃ ।
ಸರ್ವಲೋಕೇಷು ವಿಖ್ಯಾತೈಃ ಸ್ಥಾಣುಂ ಸ್ತೋಷ್ಯಾಮಿ ನಾಮಭಿಃ ॥೨॥

ಉಪಮನ್ಯು– ಬ್ರಹ್ಮದೇವರಿಂದ ಹೇಳಲ್ಪಟ್ಟ, ಋಷಿಗಳಿಂದ ಹೇಳಲ್ಪಟ್ಟ, ವೇದ-ವೇದಾಂತಗಳಲ್ಲಿ ಇರುವ, ಸರ್ವಲೋಕಗಳಲ್ಲಿ ಪ್ರಸಿದ್ಧವಾದ ನಾಮಗಳಿಂದ ಸ್ಥಾಣುವನ್ನು ಸ್ತೋತ್ರ ಮಾಡುವೆನು.

ಮಹದ್ಭಿರ್ವಿಹಿತೈಃ ಸತ್ಯೈಃ ಸಿದ್ಧೈಃ ಸರ್ವಾರ್ಥಸಾಧಕೈಃ ।
ಋಷಿಣಾ ತಂಡಿನಾ ಭಕ್ತ್ಯಾ ಕೃತೈರ್ದೇವಕೃತಾತ್ಮನಾ ॥೩॥

ಮಹಾತ್ಮರು ವಿಧಾನ ಮಾಡಿದ, ಸರ್ವಾರ್ಥ ಸಾಧಕವಾದ, ಆ ದೇವನ ಸನ್ನಿಧಾನ ಪಾತ್ರನಾದ ತಂಡಿಯೆಂಬ ಋಷಿಯು ಭಕ್ತಿಯಿಂದ ಮಾಡಿದ ನಾಮಗಳನ್ನು ಹೇಳುತ್ತೇನೆ.

ಯಥೋಕ್ತೈರ್ಲೋಕವಿಖ್ಯಾತೈರ್ಮುನಿಭಿಸ್ತತ್ತ್ವದರ್ಶಿಭಿಃ ।
ಪ್ರವರಂ ಪ್ರಥಮಂ ಸ್ವರ್ಗ್ಯಂ ಸರ್ವಭೂತಹಿತಂ ಶುಭಮ್ ।
ಶ್ರುತೈಃ ಸರ್ವತ್ರ ಜಗತಿ ಬ್ರಹ್ಮಲೋಕಾವತಾರಿತೈಃ ॥೪॥

ಲೋಕವಿಖ್ಯಾತರಾದ, ತತ್ತ್ವದರ್ಶಿಗಳಾದ ಋಷಿಗಳಿಂದ ಹೇಳಲ್ಪಟ್ಟಂತೆ ಅತ್ಯಂತ ಶ್ರೇಷ್ಠವೂ, ನಿತ್ಯವೂ, ಸ್ವರ್ಗಪ್ರದವೂ, ಸರ್ವಪ್ರಾಣಿಗಳಿಗೆ ಹಿತವೂ ಮತ್ತು ಶುಭವೂ

ಆದ ಬ್ರಹ್ಮಲೋಕದಿಂದ ಕೆಳಗೆ ಇಳಿದು ಬಂದು ಜಗತ್ತಿನಲ್ಲಿ ಎಲ್ಲ ಕಡೆ ಶ್ರುತವಾದ ನಾಮಗಳನ್ನು ಹೇಳುತ್ತೇನೆ.

ಯಚ್ಚೈತತ್ ಪರಮಂ ಗುಹ್ಯಂ ಬ್ರಹ್ಮಪ್ರೋಕ್ತಂ ಸನಾತನಮ್ ।
ವಕ್ಷ್ಯೇ ಯದುಕುಲಶ್ರೇಷ್ಠ ಶೃಣುಷ್ವಾವಹಿತೋ ಮಮ ॥೫॥

ಎಲೈ ಯದುಕುಲಶ್ರೇಷ್ಠನೇ, ಬ್ರಹ್ಮನಿಂದ ಹೇಳಲ್ಪಟ್ಟ, ಸನಾತನವಾದ, ಅತ್ಯಂತ ರಹಸ್ಯವಾದ ಯಾವ ನಾಮಗಳನ್ನು ಹೇಳುವೆನೋ ಅದನ್ನು ನನ್ನಿಂದ ಅವಧಾನಪೂರ್ವಕವಾಗಿ (ಲಕ್ಷ್ಯಗೊಟ್ಟು) ಕೇಳು.

ಪರತ್ವೇನ ಭವಂ ದೇವಂ ಭಕ್ತಸ್ತ್ವಂ ಪರಮೇಶ್ವರಮ್ ।
ತೇನ ತೇ ಶ್ರಾವಯಿಷ್ಯಾಮಿ ಯತ್ತದ್ ಬ್ರಹ್ಮ ಸನಾತನಮ್ ॥೬॥

ನೀನು ಪರಮೇಶ್ವರನನ್ನು ಶ್ರೇಷ್ಠನೆಂದು ತಿಳಿಯುವ ಭಕ್ತನಾಗಿದ್ದೀಯೆ. ಆದ್ದರಿಂದ ಸನಾತನವಾದ ಆ ಸ್ತೋತ್ರವನ್ನು ನಿನಗೆ ಶ್ರವಣ ಮಾಡಿಸುವೆನು.

ನ ಶಕ್ಯಂ ವಿಸ್ತರಾತ್ಕೃತ್ಸ್ನಂ ವಕ್ತುಂ ಶರ್ವಸ್ಯ ಕೇನಚಿತ್ ।
ಯುಕ್ತೇನಾಪಿ ವಿಭೂತೀನಾಮಪಿ ವರ್ಷಶತೈರಪಿ ॥೭॥

ಶಿವನ ವಿಭೂತಿಗಳ ಸಮಗ್ರವಾದ ವಿಸ್ತಾರವನ್ನು ಯಾವನೂ ನೂರು ವರ್ಷಗಳಿಂದಲೂ ಹೇಳಲು ಸಾಧ್ಯವಿಲ್ಲ.

ಯಸ್ಯಾದಿರ್ಮಧ್ಯಮಂತಶ್ಚ ಸುರೈರಪಿ ನ ಗಮ್ಯತೇ ।
ಕಸ್ತಸ್ಯ ಶಕ್ನುಯಾದ್ ವಕ್ತುಂ ಗುಣಾನ್ ಕಾತ್ಸ್ನ್ಯೇನ ಮಾಧವ ॥೮॥

ಎಲೈ ಮಾಧವನೇ, ಯಾವನ ಆದಿ, ಅಂತ್ಯ, ಮಧ್ಯಗಳನ್ನು ದೇವತೆಗಳು ತಿಳಿಯಲಾರರೋ ಅಂತಹ ಅವನ ಗುಣಗಳನ್ನು ಪೂರ್ಣವಾಗಿ ಯಾವನು ಹೇಳಿಯಾನು?

ಕಿಂ ತು ದೇವಸ್ಯ ಮಹತಃ ಸಂಕ್ಷಿಪ್ತಾರ್ಥಪದಾಕ್ಷರಮ್ ।
ಶಕ್ತಿತಶ್ಚರಿತಂ ವಕ್ಷ್ಯೇ ಪ್ರಸಾದಾತ್ ತಸ್ಯ ಚೈವ ಹಿ ॥೯॥

ಆದರೆ ಆ ಮಹಾತ್ಮನಾದ ದೇವನ ಅನುಗ್ರಹದಿಂದ ಸಂಕ್ಷಿಪ್ತವಾದ ಅರ್ಥಗಳನ್ನು, ಪದಗಳನ್ನು ಮತ್ತು ಅಕ್ಷರಗಳನ್ನು ಹೊಂದಿದ ಅವನ ಚರಿತ್ರೆಯನ್ನು ನಾನು ನನ್ನ ಶಕ್ತಿಯಿದ್ದಷ್ಟು ಹೇಳುವೆನು.

ಅಪ್ರಾಪ್ಯೇಹ ತತೋಽನುಜ್ಞಾಂ ನ ಶಕ್ಯಃ ಸ್ತೋತುಮೀಶ್ವರಃ ।
ಯದಾ ತೇನಾಭ್ಯನುಜ್ಞಾತಃ ಸ್ತುವತ್ಯೇವ ಸದಾ ಭವಮ್ ॥೧೦॥

ಅವನ ಅನುಮತಿಯನ್ನು ಪಡೆಯದೆ ಯಾರೂ ಈಶ್ವರನನ್ನು ಸ್ತೋತ್ರ ಮಾಡಲಾರರು. ಅವನ ಅನುಮತಿಯನ್ನು ಪಡೆದರೆ ಮಾತ್ರ ಅವನನ್ನು ಸ್ತೋತ್ರ ಮಾಡುವರು.

ಅನಾದಿನಿಧನಸ್ಯಾಹಂ ಸರ್ವಯೋನೇರ್ಮಹಾತ್ಮನಃ ।
ನಾಮ್ನಾಂ ಕಂಚಿತ್ಸಮುದ್ದೇಶಂ ವಕ್ಷ್ಯೇ ಹ್ಯವ್ಯಕ್ತಯೋನಿನಃ ॥೧೧॥

ಅನಾದಿನಿಧನನೂ, ಸರ್ವಕಾರಣನೂ, ಮಹಾತ್ಮನೂ, ಅವ್ಯಕ್ತ ಯೋನಿಯೂ ಆದ ಅವನ ಕೆಲವು ನಾಮ ಸಮೂಹಗಳನ್ನು ಹೇಳುವೆನು.

ವರದಸ್ಯ ವರೇಣ್ಯಸ್ಯ ವಿರೂಪಾಕ್ಷಸ್ಯ ಧೀಮತಃ ।
ಶೃಣು ನಾಮಸಮುದ್ದೇಶಂ ಯದುಕ್ತಂ ಪದ್ಮಯೋನಿನಾ ॥೧೨॥

ಬ್ರಹ್ಮದೇವರು ಹೇಳಿದ ವರಪ್ರದನೂ, ವರೇಣ್ಯನೂ, ವಿರೂಪಾಕ್ಷನೂ, ಮೇಧಾವಿಯೂ ಆದ ಅವನ ನಾಮಸಮೂಹವನ್ನು ಕೇಳು.

ದಶ ನಾಮಸಹಸ್ರಾಣಿ ಯಾನ್ಯಾಹ ಪ್ರಪಿತಾಮಹಃ ।
ತಾನಿ ನಿರ್ಮಥ್ಯ ಮನಸಾ ದಧ್ನೋ ಘೃತಮಿವೋದ್ಧೃತಮ್ ॥೧೩॥

ಗಿರೇಃ ಸಾರಂ ಯಥಾ ಹೇಮಂ ಪುಷ್ಪಾತ್ಸಾರಂ ಯಥಾ ಮಧು ।
ಘೃತಾತ್ಸಾರಂ ಯಥಾ ಮಂಡಸ್ತಥೈತತ್ಸಾರಮುದ್ಧೃತಮ್ ॥೧೪॥

ಸರ್ವಪಾಪ್ಮಾಪಹಮಿದಂ ಚತುರ್ವೇದಸಮನ್ವಿತಮ್ ।
ಪ್ರಯತ್ನೇನಾಧಿಗಂತವ್ಯಂ ಧಾರ್ಯಂ ಚ ಪ್ರಯತಾತ್ಮನಾ ।
ಶಾಂತಿಕಂ ಪೌಷ್ಟಿಕಂ ಚೈವ ರಕ್ಷೋಘ್ನಂ ಪಾವನಂ ಮಹತ್ ॥೧೫॥

ಪ್ರಪಿತಾಮಹರಾದ ಬ್ರಹ್ಮದೇವರು ಯಾವ ಹತ್ತು ಸಹಸ್ರನಾಮಗಳನ್ನು ಹೇಳಿದರೋ ಅವುಗಳನ್ನು ಮನಸ್ಸಿನಲ್ಲೇ ಮಥನ ಮಾಡಿ, ದಧಿಯಿಂದ ಘೃತವನ್ನು ತೆಗೆದಂತೆ, ಪರ್ವತದಿಂದ ಸಾರವಾದ ಸುವರ್ಣವನ್ನು ತೆಗೆದಂತೆ, ಪುಷ್ಪದಿಂದ ಸಾರವಾದ ಮಧುವನ್ನು ತೆಗೆದಂತೆ, ಘೃತದಿಂದ ಸಾರವಾದ ಕೆನೆಯನ್ನು ತೆಗೆದಂತೆ ಸಾರರೂಪವಾಗಿ ಈ ಸಹಸ್ರನಾಮಗಳು ಉದ್ಧರಿಸಲ್ಪಟ್ಟಿವೆ. ಇದು ಸರ್ವಪಾಪ ಪರಿಹಾರಕವಾದುದು. ಚತುರ್ವೇದಗಳಿಗೆ ಸಮ್ಮತವಾದುದು. ಪ್ರಯತ್ನಪೂರ್ವಕವಾದುದು ಮತ್ತು ನಿಷ್ಠೆಯಿಂದ ಧರಿಸಬೇಕಾದುದು. ಇದು ಶಾಂತಿ, ಪುಷ್ಟಿ, ರಕ್ಷೋವಿನಾಶಗಳನ್ನುಂಟು ಮಾಡುವ ದೊಡ್ಡ ಸ್ತೋತ್ರ.

ಇದಂ ಭಕ್ತಾಯ ದಾತವ್ಯಂ ಶ್ರದ್ದಧಾನಾಸ್ತಿಕಾಯ ಚ ।
ನಾಶ್ರದ್ದಧಾನರೂಪಾಯ ನಾಸ್ತಿಕಾಯಾಜಿತಾತ್ಮನೇ ॥೧೬॥

ಇದನ್ನು ಭಕ್ತಿಯುಳ್ಳ, ಶ್ರದ್ಧೆಯುಳ್ಳ, ಆಸ್ತಿಕ್ಯಬುದ್ಧಿಯುಳ್ಳ ಪುರುಷನಿಗೆ ಉಪದೇಶಿಸಬೇಕು. ಶ್ರದ್ಧೆಯಿಲ್ಲದ ನಾಸ್ತಿಕನಿಗೆ, ಮನೋಜಯವಿಲ್ಲದವನಿಗೆ ಉಪದೇಶಿಸಬಾರದು.

ಯಶ್ಚಾಭ್ಯಸೂಯತೇ ದೇವಂ ಭೂತಾತ್ಮಾನಂ ಪಿನಾಕಿನಮ್ ।
ಸ ಕೃಷ್ಣ ನರಕಂ ಯಾತಿ ಸಹ ಪೂರ್ವೈಃ ಸಹಾನುಗೈಃ ॥೧೭॥

ಎಲೈ ಕೃಷ್ಣನೇ, ಯಾವನು ಭೂತಸ್ವಾಮಿಯೂ, ಪಿನಾಕಧಾರಿಯೂ ಆದ ದೇವನನ್ನು ದ್ವೇಷಿಸುತ್ತಾನೆಯೋ ಅವನು ತನ್ನ ಪೂರ್ವಜರಿಂದ ಮತ್ತು ಅನಂತರ ಜನಿಸುವವರಿಂದ ಕೂಡಿಕೊಂಡು ನರಕಕ್ಕೆ ಹೋಗುತ್ತಾನೆ.

ಇದಂ ಧ್ಯಾನಮಿದಂ ಯೋಗಮಿದಂ ಜ್ಞಾನಮನುತ್ತಮಮ್ ।
ಇದಂ ಜಪ್ಯಮಿದಂ ಧ್ಯೇಯಂ ರಹಸ್ಯಮಿದಮುತ್ತಮಮ್ ।
ಇದಂ ಜ್ಞಾತ್ವಾಽಂತಕಾಲೇಽಪಿ ಗಚ್ಛೇದ್ಧಿ ಪರಮಾಂ ಗತಿಮ್ ॥೧೮॥

ಧ್ಯಾನವೆಂದರೆ ಇದು (ಈ ಸ್ತೋತ್ರ), ಇದೇ ಯೋಗ. ಇದೇ ಶ್ರೇಷ್ಠವಾದ ಜ್ಞಾನ. ಇದೇ ಜಪಿಸಲ್ಪಡಬೇಕಾದುದು. ಇದೇ ಧ್ಯಾನ ಮಾಡಲ್ಪಡಬೇಕಾದುದು. ಇದು ಶ್ರೇಷ್ಠವಾದ ರಹಸ್ಯ. ಮರಣಕಾಲದಲ್ಲಿ ಇದನ್ನು ತಿಳಿದರೆ ಶ್ರೇಷ್ಠಗತಿಯನ್ನು ಹೊಂದುವನು.

ಪವಿತ್ರಂ ಮಂಗಲಂ ಪುಣ್ಯಂ ಕಲ್ಯಾಣಮಿದಮುತ್ತಮಮ್ ।
ನಿಗದಿಷ್ಯೇ ಮಹಾಬಾಹೋ ಸ್ತವಾನಾಮುತ್ತಮಂ ಸ್ತವಮ್ ॥೧೯॥

ಎಲೈ ಮಹಾಬಾಹುವೇ, ಪವಿತ್ರವೂ, ಮಂಗಳವೂ, ಪುಣ್ಯಪ್ರದವೂ, ಕಲ್ಯಾಣದಾಯಕವೂ, ಶ್ರೇಷ್ಠವೂ ಆದ ಈ ಉತ್ತಮಸ್ತೋತ್ರವನ್ನು ನಿನಗೆ ಹೇಳುವೆನು.

ಇದಂ ಬ್ರಹ್ಮಾ ಪುರಾ ಕೃತ್ವಾ ಸರ್ವಲೋಕಪಿತಾಮಹಃ ।
ಸರ್ವಸ್ತವಾನಾಂ ದಿವ್ಯಾನಾಂ ರಾಜತ್ವೇ ಸಮಕಲ್ಪಯತ್ ॥೨೦॥

ಸರ್ವಲೋಕಪಿತಾಮಹರಾದ ಬ್ರಹ್ಮದೇವರು ಇದನ್ನು ಮೊದಲು ರಚಿಸಿ, ಎಲ್ಲ ದಿವ್ಯಸ್ತೋತ್ರಗಳ ರಾಜನನ್ನಾಗಿ ಕಲ್ಪಿಸಿದರು.

ತದಾಪ್ರಭೃತಿ ಚೈವಾಯಮೀಶ್ವರಸ್ಯ ಮಹಾತ್ಮನಃ ।
ಸ್ತವರಾಜೇತಿ ವಿಖ್ಯಾತೋ ಜಗತ್ಯಮರಪೂಜಿತಃ ।
ಬ್ರಹ್ಮಲೋಕಾದಯಂ ಚೈವ ಸ್ತವರಾಜೋऽವತಾರಿತಃ ॥೨೧॥

ಅಲ್ಲಿಂದ ಪ್ರಾರಂಭಿಸಿ ಇದು ಮಹಾತ್ಮನಾದ ಈಶ್ವರನ ಸ್ತವರಾಜವೆಂದು ದೇವತೆಗಳಿಂದ ಪೂಜಿತವಾಗಿ ಜಗತ್ತಿನಲ್ಲಿ ಪ್ರಖ್ಯಾತವಾಗಿದೆ. ಈ ಸ್ತವರಾಜವು ಬ್ರಹ್ಮಲೋಕದಿಂದ ಭೂಮಿಗೆ ತರಲ್ಪಟ್ಟಿದೆ.

ಯಸ್ಮಾತ್ ತಂಡಿಃ ಪುರಾ ಪ್ರಾಹ ತೇನ ತಂಡಿಕೃತೋऽಭವತ್ ।
ಸ್ವರ್ಗಾಚ್ಚೈವಾತ್ರ ಭೂಲೋಕಂ ತಂಡಿನಾ ಹ್ಯವತಾರಿತಃ ॥೨೨॥

ಇದನ್ನು ತಂಡಿಯು ಮೊದಲು (ಭೂಲೋಕದಲ್ಲಿ) ಹೇಳಿದುದರಿಂದ ಇದನ್ನು ತಂಡಿಕೃತ ಎಂದು ಕರೆಯುತ್ತಾರೆ. ವಸ್ತುತಃ ತಂಡಿಯು ಸ್ವರ್ಗಲೋಕದಿಂದ ಈ ಸ್ತೋತ್ರವನ್ನು ಭೂಲೋಕಕ್ಕೆ ತೆಗೆದುಕೊಂಡು ಬಂದನು.

ಸರ್ವಮಂಗಲಮಂಗಲ್ಯಂ ಸರ್ವಪಾಪಪ್ರಣಾಶನಮ್ ।
ನಿಗದಿಷ್ಯೇ ಮಹಾಬಾಹೋ ಸ್ತವಾನಾಮುತ್ತಮಂ ಸ್ತವಮ್ ॥೨೩॥

ಇದು ಎಲ್ಲ ಮಂಗಳಕ್ಕಿಂತಲೂ ಮಂಗಳವಾದುದು. ಎಲ್ಲ ಪಾಪಗಳ ಪರಿಹಾರಕವಾದುದು. ಎಲೈ ಮಹಾಬಾಹುವೇ, ಎಲ್ಲ ಸ್ತೋತ್ರಗಳಲ್ಲೂ ಶ್ರೇಷ್ಠವಾದ ಈ ಸ್ತೋತ್ರವನ್ನು ನಿನಗೆ ಹೇಳುವೆನು.

ಬ್ರಹ್ಮಣಾಮಪಿ ಯದ್ಬ್ರಹ್ಮ ಪರಾಣಾಮಪಿ ಯತ್ಪರಮ್ ।
ತೇಜಸಾಮಪಿ ಯತ್ತೇಜಸ್ತಪಸಾಮಪಿ ಯತ್ತಪಃ ॥೨೪॥

ಶಾಂತೀನಾಮಪಿ ಯಾ ಶಾಂತಿರ್ಧೃತೀನಾಮಪಿ ಯಾ ದ್ಯುತಿಃ ।

ವೇದಗಳಿಗೂ ಯಾವುದು ವೇದತುಲ್ಯವೋ, ಶ್ರೇಷ್ಠವಾದುದಕ್ಕಿಂತಲೂ ಯಾವುದು ಶ್ರೇಷ್ಠವೋ, ತೇಜಸ್ಸುಗಳಿಗಿಂತ ಯಾವುದು ಹೆಚ್ಚು ತೇಜಸ್ಸುಳ್ಳದ್ದೋ, ತಪಸ್ಸುಗಳಲ್ಲಿ ಯಾವುದು ದೊಡ್ಡ ತಪಸ್ಸೋ, ಶಾಂತಿಗಳಲ್ಲಿ ಯಾವುದು ದೊಡ್ಡ ಶಾಂತಿಯೋ, ಕಾಂತಿಗಳಲ್ಲಿ ಯಾವುದು ಶ್ರೇಷ್ಠ ಕಾಂತಿಯೋ ಅಂತಹದು ಈ ಸ್ತೋತ್ರಗಳಲ್ಲಿ ಸ್ತೋತ್ರರೂಪವಾದ ಶಿವಸಹಸ್ರನಾಮಾವಳಿ.

ದಾಂತಾನಾಮಪಿ ಯೋ ದಾಂತೋ ಧೀಮತಾಮಪಿ ಯಾ ಚ ಧೀಃ ॥

ದೇವಾನಾಮಪಿ ಯೋ ದೇವೋ ಮುನೀನಾಮಪಿ ಯೋ ಮುನಿಃ ।
ಯಜ್ಞಾನಾಮಪಿ ಯೋ ಯಜ್ಞಃ ಶಿವಾನಾಮಪಿ ಯಃ ಶಿವಃ ॥೨೬॥

ರುದ್ರಾಣಾಮಪಿ ಯೋ ರುದ್ರಃ ಪ್ರಭುಃ ಪ್ರಭವತಾಮಪಿ ।
ಯೋಗಿನಾಮಪಿ ಯೋ ಯೋಗೀ ಕಾರಣಾನಾಂ ಚ ಕಾರಣಮ್ ॥೨೭॥

ಯತೋ ಲೋಕಾಃ ಸಂಭವಂತಿ ನ ಭವಂತಿ ಯತಃ ಪುನಃ ।
ಸರ್ವಭೂತಾತ್ಮಭೂತಸ್ಯ ಹರಸ್ಯಾಮಿತತೇಜಸಃ ॥೨೮॥

ಅಷ್ಟೋತ್ತರಸಹಸ್ರಂ ತು ನಾಮ್ನಾಂ ಶರ್ವಸ್ಯ ಮೇ ಶೃಣು ।
ಯಚ್ಛ್ರುತ್ವಾ ಮನುಜಶ್ರೇಷ್ಠ ಸರ್ವಾನ್ ಕಾಮಾನವಾಪ್ಸ್ಯಸಿ ॥೨೯॥

ಯಾವನು ದಾಂತರಲ್ಲಿಯೂ ದಾಂತನೋ, ಧೀಮಂತರಲ್ಲಿಯೂ ಧೀಮಂತನೋ, ದೇವತೆಗಳಲ್ಲಿಯೂ ದೇವನೋ, ಋಷಿಗಳಲ್ಲಿಯೂ ಋಷಿಯೋ, ಯಜ್ಞಗಳಿಗೂ ಯಾವನು ಯಜ್ಞನೋ, ರುದ್ರರಿಗೂ ಯಾವನು ರುದ್ರನೋ, ಶಿವರಿಗೂ ಯಾವನು ಶಿವನೋ, ಪ್ರಭುಗಳಿಗೂ ಯಾವನು ಪ್ರಭುವೋ, ಯೋಗಿಗಳಿಗೂ ಯಾವನು ಯೋಗಿಯೋ, ಕಾರಣಗಳಿಗೂ ಯಾವನು ಕಾರಣನೋ, ಯಾವನಿಂದ ಎಲ್ಲ ಲೋಕಗಳು ಸೃಷ್ಟಿಯನ್ನು ಹೊಂದುವವೋ ಅಂತಹ ಸರ್ವಭೂತಾಂತರ್ಯಾಮಿಯಾದ, ಅಮಿತ ಪರಾಕ್ರಮಿಯಾದ ಶಿವನ ಅಷ್ಟೋತ್ತರ ಸಹಸ್ರನಾಮವನ್ನು

ಕೇಳುವವನಾಗು. ಎಲೈ ಮನುಜಶ್ರೇಷ್ಠನೇ, ಅದನ್ನು ಕೇಳಿದರೆ ನೀನು ಎಲ್ಲ ಕಾಮಗಳನ್ನು ಹೊಂದುವಿ.

ಸ್ಥಿರಃ ಸ್ಥಾಣುಃ ಪ್ರಭುರ್ಭಾನುಃ ಪ್ರವರೋ ವರದೋ ವರಃ ।
ಸರ್ವಾತ್ಮಾ ಸರ್ವವಿಖ್ಯಾತಃ ಸರ್ವಃ ಸರ್ವಕರೋ ಭವಃ ॥೩೦॥

ಸ್ಥಿರ= ನಿತ್ಯ, ಸ್ಥಾಣು= ಜಗತ್ತಿಗೆ ಆಧಾರನಾದವನು, ಪ್ರಭುಃ= ಸಮರ್ಥ, ಭಾನುಃ= ಪ್ರಕಾಶರೂಪನಾದವನು, ಪ್ರವರ= ಸರ್ವಶ್ರೇಷ್ಠನಾದವನು, ವರದಃ= ವರಗಳನ್ನು ಕೊಡುವವನು, ವರಃ= ವರಿಸಲ್ಪಡುವವನು, ಸರ್ವಾತ್ಮಾ= ಸರ್ವವ್ಯಾಪಕನಾದವನು, ಸರ್ವವಿಖ್ಯಾತಃ= ಎಲ್ಲ ಕಡೆಯಲ್ಲಿಯೂ ಪ್ರಸಿದ್ಧನಾದವನು, ಸರ್ವಃ= ಸರ್ವ ವ್ಯಾಪ್ತನಾದವನು, ಸರ್ವಕರಃ= ಎಲ್ಲವನ್ನೂ ಮಾಡುವವನು, ಭವಃ= ಮಂಗಳ ಸ್ವರೂಪನು.

ಜಟೀ ಚರ್ಮೀ ಶಿಖಂಡೀ ಚ ಸರ್ವಾಂಗಃ ಸರ್ವಭಾವನಃ ।
ಹರಶ್ಚ ಹರಿಣಾಕ್ಷಶ್ಚ ಸರ್ವಭೂತಹರಃ ಪ್ರಭುಃ ॥೩೧॥

ಜಟೀ= ಜಟಾಧಾರಿ, ಚರ್ಮೀ= ಗಜಚರ್ಮಾಂಬರ, ಶಿಖಂಡೀ= ಶಿಖೆಯನ್ನು ಧರಿಸಿದವನು, ಸರ್ವಾಂಗಃ= ಸಂಪೂರ್ಣವಾದ ಅವಯವವುಳ್ಳವನು, ಸರ್ವಭಾವನಃ= ಸಕಲ ಸೃಷ್ಟಿಕರ್ತಾ, ಹರಃ= ಸಂಹಾರಕ, ಹರಿಣಾಕ್ಷಃ= ಜಿಂಕೆಯ ಕಣ್ಣಿನಂತಹ ಕಣ್ಣುಳ್ಳವನು, ಸರ್ವಭೂತಹರಃ= ಎಲ್ಲ ಪ್ರಾಣಿಗಳನ್ನು ಸಂಹರಿಸುವವನು, ಪ್ರಭುಃ= ಸಮರ್ಥ.

ಪ್ರವೃತ್ತಿಶ್ಚ ನಿವೃತ್ತಿಶ್ಚ ನಿಯತಃ ಶಾಶ್ವತೋ ಧ್ರುವಃ ।
ಶ್ಮಶಾನಚಾರೀ ಭಗವಾನ್ ಖಚರೋ ಗೋಚರೋಽರ್ದನಃ ॥೩೨॥

ಪ್ರವೃತ್ತಿಃ= ಪ್ರವರ್ತಕನಾದವನು, ನಿವೃತ್ತಿಃ= ನಿವರ್ತಕನಾದವನು, ನಿಯತಃ= ನೇಮನಿಷ್ಠನಾದವನು, ಶಾಶ್ವತಃ= ನಿತ್ಯ, ಧ್ರುವಃ= ಸ್ಥಿರ, ಸ್ಮಶಾನಚಾರೀ= ಸ್ಮಶಾನದಲ್ಲಿ ಸಂಚರಿಸುವವನು, ಭಗವಾನ್= ಐಶ್ವರ್ಯಾದಿಗುಣವುಳ್ಳವನು, ಖಚರಃ= ಆಕಾಶದಲ್ಲಿ ಸಂಚರಿಸುವವನು, ಗೋಚರಃ= ಭೂಮಿಯಲ್ಲಿ ಸಂಚರಿಸುವವನು, ಅರ್ದನಃ= ಹಿಂಸಿಸುವವನು.

ಅಭಿವಾದ್ಯೋ ಮಹಾಕರ್ಮಾ ತಪಸ್ವೀ ಭೂತಭಾವನಃ ।
ಉನ್ಮತ್ತವೇಷಪ್ರಚ್ಛನ್ನಃ ಸರ್ವಲೋಕಪ್ರಜಾಪತಿಃ ॥೩೩॥

ಅಭಿವಾದ್ಯಃ= ನಮಸ್ಕರಿಸಲು ಯೋಗ್ಯನಾದವನು, ಮಹಾಕರ್ಮಾ= ದೊಡ್ಡ ಕಾರ್ಯಗಳನ್ನು ಮಾಡುವವನು, ತಪಸ್ವೀ= ತಪೋನಿಷ್ಠನಾದವನು, ಭೂತಭಾವನಃ= ಪಂಚಮಹಾಭೂತಗಳನ್ನು ಸೃಷ್ಟಿಸುವವನು, ಉನ್ಮತ್ತ ವೇಷ ಪ್ರಚ್ಛನ್ನಃ= ಉನ್ಮತ್ತನಂತೆ ವೇಷವನ್ನು ಧರಿಸಿ, ತನ್ನ ನಿಜಸ್ವರೂಪವನ್ನು ತಿಳಿಯಗೊಡದವನು, ಸರ್ವಲೋಕಪ್ರಜಾಪತಿಃ= ಎಲ್ಲ ಲೋಕಗಳ ಪ್ರಜೆಗಳನ್ನೂ ಪಾಲಿಸುವವನು.

ಮಹಾರೂಪೋ ಮಹಾಕಾಯಃ ಸರ್ವರೂಪೋ ಮಹಾಯಶಾಃ ।
ಮಹಾತ್ಮಾ ಸರ್ವಭೂತಶ್ಚ ವಿರೂಪೋ ವಾಮನೋ ಮನುಃ ॥೩೪॥

ಮಹಾರೂಪಃ= ದೊಡ್ಡ ರೂಪವುಳ್ಳವನು, ಮಹಾಕಾಯಃ= ದೊಡ್ಡ ಶರೀರವುಳ್ಳವನು, ಸರ್ವರೂಪಃ= ಎಲ್ಲ ರೂಪಗಳನ್ನು ಹೊಂದಿದವನು, ಮಹಾಯಶಾಃ= ಬಹಳ ಕೀರ್ತಿಯನ್ನು ಪಡೆದವನು, ಮಹಾತ್ಮಾ= ಮಹಾತ್ಮನಾದವನು, ಸರ್ವಭೂತಃ= ಸರ್ವಭೂತಗಳಿಗೆ ಒಡೆಯನಾದವನು, ವಿರೂಪಃ= ವಿರೂಪ ಉಳ್ಳವನು, ವಾಮನಃ= ಸುಂದರ, ಮನುಃ= ಜ್ಞಾನರೂಪ.

ಲೋಕಪಾಲೋಽಂತರ್ಹಿತಾತ್ಮಾ ಪ್ರಸಾದೋ ಹಯಗರ್ದಭಿಃ ।
ಪವಿತ್ರಶ್ಚ ಮಹಾಂಶ್ಚೈವ ನಿಯಮೋ ನಿಯಮಮಾಶ್ರಿತಃ ॥೩೫॥

ಲೋಕಪಾಲಃ= ಲೋಕಗಳನ್ನು ರಕ್ಷಿಸುವವನು, ಅಂತರ್ಹಿತಾತ್ಮಾ= ಅದೃಶ್ಯವಾದ ಸ್ವರೂಪವುಳ್ಳವನು, ಪ್ರಸಾದಃ= ಅನುಗ್ರಹಶೀಲನಾದವನು, ಹಯಗರ್ದಭಿಃ= ಅಶ್ವ ಮತ್ತು ಗರ್ದಭಗಳನ್ನು ಹೂಡಿದ ರಥವುಳ್ಳವನು, ಪವಿತ್ರಃ= ಪವಿತ್ರನಾದವನು, ಮಹಾನ್= ದೊಡ್ಡವನಾದವನು, ನಿಯಮಃ= ನಿಯಮರೂಪನಾದವನು, ನಿಯಮಮಾಶ್ರಿತಃ= ನಿಯಮವನ್ನು ಧರಿಸಿದವನು.

ಸರ್ವಕರ್ಮಾ ಸ್ವಯಂಭೂಶ್ಚ ಆದಿರಾದಿಕರೋ ನಿಧಿಃ ।
ಸಹಸ್ರಾಕ್ಷೋ ವಿರೂಪಾಕ್ಷಃ ಸೋಮೋ ನಕ್ಷತ್ರಸಾಧಕಃ ॥೩೬॥

ಸರ್ವಕರ್ಮಾ= ಎಲ್ಲ ಕಾರ್ಯಗಳನ್ನು ಮಾಡುವವನು, ಸ್ವಯಂಭೂಃ= ಸ್ವತಂತ್ರ, ಆದಿಃ= ಎಲ್ಲದಕ್ಕೂ ಮೂಲಕಾರಣ, ಆದಿಕರಃ= ಎಲ್ಲದರ ಉತ್ಪತ್ತಿಗೆ ಕಾರಣ, ನಿಧಿಃ= ಐಶ್ವರ್ಯರೂಪನಾದವನು, ಸಹಸ್ರಾಕ್ಷಃ= ಸಾವಿರ ಕಣ್ಣುಳ್ಳವನು, ವಿರೂಪಾಕ್ಷಃ= ವಿರೂಪವಾದ ಕಣ್ಣುಳ್ಳವನು, ಸೋಮಃ= ಚಂದ್ರನಲ್ಲಿರುವವನು, ನಕ್ಷತ್ರಸಾಧಕಃ= ನಕ್ಷತ್ರಗಳನ್ನು ಬೆಳಗುವವನು.

ಚಂದ್ರಸೂರ್ಯಶನಿಃ ಕೇತುರ್ಗ್ರಹೋ ಗ್ರಹಪತಿರ್ವರಃ ।
ಅತ್ರಿರತ್ರ್ಯ ನಮಸ್ಕರ್ತಾ ಮೃಗಬಾಣಾರ್ಪಣೋऽನಘಃ ॥೩೭॥

ಚಂದ್ರಸೂರ್ಯಶನಿಃ= ಚಂದ್ರ-ಸೂರ್ಯ-ಶನಿಗಳಲ್ಲಿ ಇರುವವನು, ಕೇತುಃ= ಕೇತುವಿನಲ್ಲಿರುವವನು, ಗ್ರಹಃ= ರಾಹುವಿನಲ್ಲಿರುವವನು, ಗ್ರಹಪತಿಃ= ಗ್ರಹಗಳಿಗೆ ಒಡೆಯ, ವರಃ= ಶ್ರೇಷ್ಠ, ಅತ್ರಿಃ= ಅತ್ರಿಗೋತ್ರದ ದುರ್ವಾಸ ಮುನಿಸ್ವರೂಪನು, ಅತ್ರ್ಯ ನಮಸ್ಕರ್ತಾ= ಅತ್ರಿಗೆ ನಮಸ್ಕರಿಸುವವನು, ಮೃಗಬಾಣಾರ್ಪಣಃ= ಮೃಗರೂಪನಾದ ವ್ಯಾಧನ ಮೇಲೆ ಬಾಣ ಬಿಟ್ಟವನು, ಅನಘಃ= ದೋಷ ರಹಿತನು.

ಮಹಾತಪಾ ಘೋರತಪಾ ಅದೀನೋ ದೀನಸಾಧಕಃ ।
ಸಂವತ್ಸರಕರೋ ಮಂತ್ರಃ ಪ್ರಮಾಣಂ ಪರಮಂ ತಪಃ ॥೩೮॥

ಮಹಾತಪಾಃ= ದೊಡ್ಡ ತಪಸ್ವಿ, ಘೋರತಪಾಃ= ಘೋರ ತಪಸ್ಸನ್ನು ಮಾಡುವವನು, ಅದೀನಃ= ದೈನ್ಯವಿಲ್ಲದವನು, ದೀನಸಾಧಕಃ= ದೀನರ ಕಾರ್ಯವನ್ನು ಸಾಧಿಸುವವನು, ಸಂವತ್ಸರಕರಃ= ಸಂವತ್ಸರಗಳಿಗೆ ಪ್ರವರ್ತಕನು, ಮಂತ್ರಃ= ಜ್ಞಾನ ರೂಪನಾದವನು, ಪ್ರಮಾಣಂ= ಪ್ರಮಾಣ ರೂಪನಾದವನು, ಪರಮಂ ತಪಃ= ಶ್ರೇಷ್ಠವಾದ ತಪೋರೂಪನಾದವನು.

ಯೋಗೀ ಯೋಜ್ಯೋ ಮಹಾಬೀಜೋ ಮಹಾರೇತಾ ಮಹಾಬಲಃ ।
ಸುವರ್ಣರೇತಾಃ ಸರ್ವಜ್ಞಃ ಸುಬೀಜೋ ಬೀಜವಾಹನಃ ॥೩೯॥

ಯೋಗೀ= ಯೋಗಿಯಾದವನು, ಯೋಜ್ಯಃ= ಭಕ್ತರಿಂದ ಯೋಗವನ್ನು ಹೊಂದಲ್ಪಡುವವನು, ಮಹಾಬೀಜಃ= ಜಗದ್ವೃಕ್ಷಕ್ಕೆ ದೊಡ್ಡ ಬೀಜನಾದವನು, ಮಹಾರೇತಾಃ= ಶ್ರೇಷ್ಠವಾದ ರೇತಸ್ಸನ್ನು ಹೊಂದಿದವನು, ಮಹಾಬಲಃ= ಬಹಳ

ಬಲವುಳ್ಳವನು, ಸುವರ್ಣರೇತಾಃ= ಸುವರ್ಣಮಯವಾದ ರೇತಸ್ಸನ್ನು ಹೊಂದಿದವನು, ಸರ್ವಜ್ಞಃ= ಸರ್ವಜ್ಞನಾದವನು, ಸುಬೀಜಃ= ಜಗತ್ತಿಗೆ ಶ್ರೇಷ್ಠವಾದ ಬೀಜವಾದವನು, ಬೀಜವಾಹನಃ= ಬೀಜಗಳನ್ನು ಕೊಂಡೊಯ್ಯುವವನು.

ದಶಬಾಹುಸ್ತ್ವನಿಮಿಷೋ ನೀಲಕಂಠ ಉಮಾಪತಿಃ ।
ವಿಶ್ವರೂಪಃ ಸ್ವಯಂಶ್ರೇಷ್ಠೋ ಬಲವೀರೋ ಬಲೋ ಗಣಃ ॥೪೦॥

ದಶಬಾಹುಃ= ಹತ್ತು ಬಾಹುಗಳುಳ್ಳವನು, ಅನಿಮಿಷಃ= ರೆಪ್ಪೆಯನ್ನು ಮುಚ್ಚದವನು, ನೀಲಕಂಠಃ= ಕಂಠದಲ್ಲಿ ನೀಲವರ್ಣವುಳ್ಳವನು, ಉಮಾಪತಿಃ= ಪಾರ್ವತೀ ಪತಿ, ವಿಶ್ವರೂಪಃ= ಅನೇಕ ರೂಪಗಳನ್ನು ಹೊಂದಿದವನು, ಸ್ವಯಂಶ್ರೇಷ್ಠಃ= ತಾನೇ ಶ್ರೇಷ್ಠನಾಗಿರುವವನು, ಬಲವೀರಃ= ಬಲದಿಂದ ವೀರನಾದವನು, ಬಲಃ= ಬಲರೂಪಿಯಾದವನು, ಗಣಃ= ತನ್ನ ಗಣದಲ್ಲಿ ಇರುವವನು.

ಗಣಕರ್ತಾ ಗಣಪತಿರ್ದಿಗ್ವಾಸಾಃ ಕಾಮ್ಯ ಏವ ಚ ।
ಪವಿತ್ರಂ ಪರಮಂ ಮಂತ್ರಃ ಸರ್ವಭಾವಕರೋ ಹರಃ ॥೪೧॥

ಗಣಕರ್ತಾ= ಗಣಗಳನ್ನು ಮಾಡುವವನು, ಗಣಪತಿಃ= ಗಣಗಳಿಗೆ ಒಡೆಯ, ದಿಗ್ವಾಸಾಃ= ದಿಗಂಬರ, ಕಾಮ್ಯಃ= ಎಲ್ಲರಿಂದಲೂ ಬಯಸಲ್ಪಡುವವನು, ಪವಿತ್ರಂ= ಪವಿತ್ರನಾದವನು, ಪರಮಂ= ಶ್ರೇಷ್ಠನಾದವನು, ಮಂತ್ರಃ= ಮಂತ್ರಸ್ವರೂಪಿಯು, ಸರ್ವಭಾವಕರಃ= ಎಲ್ಲದರ ಉತ್ಪತ್ತಿಗೆ ಕಾರಣನು, ಹರಃ= ಸಂಹರಿಸುವವನು.

ಕಮಂಡಲುಧರೋ ಧನ್ವೀ ಬಾಣಹಸ್ತಃ ಕಪಾಲವಾನ್ ।
ಅಶನೀ ಶತಘ್ನೀ ಖಡ್ಗೀ ಪಟ್ಟಿಶೀ ಚಾಯುಧೀ ಮಹಾನ್ ॥೪೨॥

ಕಮಂಡಲುಧರಃ= ಕಮಂಡಲುವನ್ನು ಧರಿಸಿದವನು, ಧನ್ವೀ= ಧನುರ್ಧಾರಿ, ಬಾಣಹಸ್ತಃ= ಹಸ್ತದಲ್ಲಿ ಬಾಣವುಳ್ಳವನು, ಕಪಾಲವಾನ್= ಕಪಾಲವನ್ನು ಧರಿಸಿದವನು, ಅಶನೀ= ಅಶನವೆಂಬ ಆಯುಧವುಳ್ಳವನು, ಶತಘ್ನೀ= ಶತಘ್ನೀ ಎಂಬ ಆಯುಧ ಉಳ್ಳವನು, ಖಡ್ಗೀ= ಖಡ್ಗವನ್ನು ಧರಿಸಿದವನು, ಪಟ್ಟಿಶೀ= ಪಟ್ಟಸವೆಂಬ ಆಯುಧವನ್ನು ಧರಿಸಿದವನು, ಆಯುಧೀ= ಇನ್ನೂ ಅನೇಕ ಆಯುಧಗಳನ್ನು ಧರಿಸಿದವನು, ಮಹಾನ್= ದೊಡ್ಡವನು.

ಸ್ರುವಹಸ್ತಃ ಸುರೂಪಶ್ಚ ತೇಜಸ್ತೇಜಸ್ಕರೋ ನಿಧಿಃ ।
ಉಷ್ಣೀಷೀ ಚ ಸುವಕ್ತ್ರಶ್ಚ ಉದಗ್ರೋ ವಿರತಸ್ತಥಾ ॥೪೩॥

ಸ್ರುವಹಸ್ತಃ= ಹಸ್ತದಲ್ಲಿ ಸ್ರುವವನ್ನು ಹಿಡಿದವನು, ಸುರೂಪಃ= ಒಳ್ಳೆಯ ರೂಪವುಳ್ಳವನು, ತೇಜಃ= ತೇಜೋರೂಪಿಯಾದವನು, ತೇಜಸ್ಕರಃ= ತೇಜಸ್ಸನ್ನು ಉಂಟು ಮಾಡುವವನು, ಉಷ್ಣೀಷೀ= ರುಮಾಲನ್ನು ಧರಿಸಿದವನು, ಸುವಕ್ತ್ರಃ= ಸುಂದರವಾದ ಮುಖವುಳ್ಳವನು, ಉದಗ್ರಃ= ಉನ್ನತನಾದವನು, ವಿರತಃ= ವಿರಾಗವನ್ನು ಹೊಂದಿದವನು.

ದೀರ್ಘಶ್ಚ ಹರಿಕೇಶಶ್ಚ ಸುತೀರ್ಥಃ ಕೃಷ್ಣ ಏವ ಚ ।
ಸೃಗಾಲರೂಪಃ ಸರ್ವಾರ್ಥೋ ಮುಂಡಃ ಕುಂಡೀ ಕಮಂಡಲುಃ ॥೪೪॥

ದೀರ್ಘಃ= ಎತ್ತರನಾದವನು, ಹರಿಕೇಶಃ= ಕಂದುಬಣ್ಣದ ಕೇಶವುಳ್ಳವನು, ಸುತೀರ್ಥಃ= ಬಹಳ ಪವಿತ್ರನಾದವನು, ಕೃಷ್ಣಃ= ಆನಂದರೂಪನಾದವನು, ಸೃಗಾಲರೂಪಃ= ನರಿಯ ರೂಪವನ್ನು ಧರಿಸಿದವನು, ಸರ್ವಾರ್ಥಃ= ಸರ್ವ ಪ್ರಯೋಜನವನ್ನುಂಟು ಮಾಡುವವನು, ಮುಂಡಃ= ಸಂನ್ಯಾಸಿ ಸ್ವರೂಪನು, ಕುಂಡೀ= ಕುಂಡವನ್ನು ಧರಿಸಿದವನು, ಕಮಂಡಲುಃ= ಕಮಂಡಲುಧಾರಿ.

ಅಜಶ್ಚ ಮೃಗರೂಪಶ್ಚ ಗಂಧಧಾರೀ ಕಪರ್ದ್ಯಪಿ ।
ಊರ್ಧ್ವರೇತಾ ಊರ್ಧ್ವಲಿಂಗ ಊರ್ಧ್ವಶಾಯೀ ನಭಸ್ತಳಃ ॥೪೫॥

ಅಜಃ= ಆಡಿನ ರೂಪದವನು, ಮೃಗಃ= ಜಿಂಕೆಯ ರೂಪದವನು, ಗಂಧಧಾರೀ= ಕಸ್ತೂರಿ ಮೃಗರೂಪವುಳ್ಳವನು, ಕಪರ್ದೀ= ಜಟಾಸಮೂಹಧಾರಿ, ಊರ್ಧ್ವರೇತಾಃ= ಊರ್ಧ್ವರೇತಸ್ಕನಾದವನು, ಊರ್ಧ್ವಲಿಂಗ= ಊರ್ಧ್ವಮುಖವಾದ ಲಿಂಗವುಳ್ಳವನು, ಊರ್ಧ್ವಶಾಯೀ= ಮೇಲ್ಮುಖವಾಗಿ ಮಲಗುವವನು, ನಭಸ್ತಳಃ= ಆಕಾಶವಾಸಿ.

ತ್ರಿಜಟಶ್ಚೀರವಾಸಾಶ್ಚ ರುದ್ರಃ ಸೇನಾಪತಿರ್ವಿಭುಃ ।
ಅಹಶ್ಚರೋಽಥ ನಕ್ತಂ ಚ ತಿಗ್ಮಮನ್ಯುಃ ಸುವರ್ಚಸಃ ॥೪೬॥

ತ್ರಿಜಟಃ= ಮೂರು ಜಡೆಯುಳ್ಳವನು, ಚೀರವಾಸಃ= ನಾರುಮಡಿಯನ್ನು ಧರಿಸಿದವನು, ರುದ್ರಃ= ಭಯಂಕರನಾದವನು, ಸೇನಾಪತಿಃ= ಸೇನಾ

ನಾಯಕನಾದವನು, ವಿಭುಃ= ವ್ಯಾಪ್ತನಾದವನು, ಅಹಶ್ಚರಃ= ಹಗಲಿನಲ್ಲಿ ಸಂಚರಿಸುವವನು, ನಕ್ತಂ= ರಾತ್ರಿಯಲ್ಲಿ ಸಂಚರಿಸುವವನು, ತಿಗ್ಮಮನ್ಯುಃ= ತೀಕ್ಷ್ಣವಾದ ಕೋಪವುಳ್ಳವನು, ಸುವರ್ಚಸಃ= ಒಳ್ಳೆಯ ವರ್ಚಸ್ಸನ್ನು ಹೊಂದಿದವನು.

ಗಜಹಾ ದೈತ್ಯಹಾ ಕಾಲೋ ಲೋಕಧಾತಾ ಗುಣಾಕರಃ ।
ಸಿಂಹಶಾರ್ದೂಲರೂಪಶ್ಚ ಆರ್ದ್ರಚರ್ಮಾಂಬರಾವೃತಃ ॥೪೭॥

ಗಜಹಾ= ಗಜವನ್ನು ಕೊಂದವನು, ದೈತ್ಯಹಾ= ದೈತ್ಯರನ್ನು ಕೊಂದವನು, ಕಾಲಃ= ಸಂಹಾರಕನಾದವನು, ಲೋಕಧಾತಾ= ಲೋಕಗಳ ಧಾರಣೆಯನ್ನು ಮಾಡುವವನು, ಗುಣಾಕರಃ= ಗುಣಗಳಿಗೆ ಆಶ್ರಯನಾದವನು, ಸಿಂಹಶಾರ್ದೂಲರೂಪಃ= ಸಿಂಹ ಶಾರ್ದೂಲರೂಪಗಳನ್ನು ಹೊಂದಿದವನು, ಆರ್ದ್ರಚರ್ಮಾಂಬರಾವೃತಃ= ಹಸಿಯ ಚರ್ಮದ ವಸ್ತ್ರವನ್ನು ಉಟ್ಟವನು.

ಕಾಲಯೋಗೀ ಮಹಾನಾದಃ ಸರ್ವವಾಸಶ್ಚತುಷ್ಪಥಃ ।
ನಿಶಾಚರಃ ಪ್ರೇತಚಾರೀ ಭೂತಚಾರೀ ಮಹೇಶ್ವರಃ ॥೪೮॥

ಕಾಲಯೋಗೀ= ಕಾಲದ ಸಂಬಂಧವುಳ್ಳವನು, ಮಹಾನಾದಃ= ದೊಡ್ಡನಾದವನ್ನು ಮಾಡುವವನು, ಸರ್ವವಾಸಃ= ಎಲ್ಲ ರೀತಿಯ ವಸ್ತ್ರವನ್ನು ಧರಿಸುವವನು, ಚತುಷ್ಪಥಃ= ತನ್ನ ಪ್ರಾಪ್ತಿಗೆ ನಾಲ್ಕು ಮಾರ್ಗವನ್ನು ಹೊಂದಿದವನು, ನಿಶಾಚರಃ= ರಾತ್ರಿಯಲ್ಲಿ ಸಂಚರಿಸುವವನು, ಪ್ರೇತಚಾರೀ= ಪ್ರೇತಗಳ ಜೊತೆಯಲ್ಲಿ ಸಂಚರಿಸುವವನು, ಭೂತಚಾರೀ= ಭೂತಗಳ ಜೊತೆಯಲ್ಲಿ ಸಂಚರಿಸುವವನು, ಮಹೇಶ್ವರಃ= ದೊಡ್ಡವರಿಗೂ ಈಶ್ವರನು.

ಬಹುಭೂತೋ ಬಹುಧನಃ ಸರ್ವಾಧಾರೋಽಮಿತೋ ಗತಿಃ ।
ನೃತ್ಯಪ್ರಿಯೋ ನಿತ್ಯನರ್ತೋ ನರ್ತಕಃ ಸರ್ವಲಾಸಕಃ ॥೪೯॥

ಬಹುಭೂತಃ= ಅನೇಕ ರೂಪಗಳನ್ನು ಧರಿಸಿದವನು, ಬಹುಧನಃ= ಅನೇಕ ಧನವನ್ನು ಹೊಂದಿದವನು, ಸರ್ವಾಧಾರಃ= ಎಲ್ಲದಕ್ಕೂ ಆಧಾರನಾದವನು, ಅಮಿತಃ= ಪರಿಮಾಣವಿಲ್ಲದವನು, ಗತಿಃ= ಗಮ್ಯನಾದವನು, ನೃತ್ಯಪ್ರಿಯಃ= ನರ್ತನ ಪ್ರಿಯ, ನಿತ್ಯನರ್ತಃ= ಯಾವಾಗಲೂ ನರ್ತನವನ್ನು ಮಾಡುವವನು, ನರ್ತಕಃ= ನರ್ತಕ, ಸರ್ವಲಾಸಕಃ= ಎಲ್ಲ ವಿಧದ ಲಾಸ್ಯನರ್ತನವನ್ನು ಮಾಡುವವನು.

ಘೋರೋ ಮಹಾತಪಾಃ ಪಾಶೋ ನಿತ್ಯೋ ಗಿರಿಚರೋ ನಭಃ ।
ಸಹಸ್ರಹಸ್ತೋ ವಿಜಯೋ ವ್ಯವಸಾಯೋ ಹ್ಯತಂದ್ರಿತಃ ॥೫೦॥

ಘೋರಃ= ಭಯಂಕರನಾದವನು, ಮಹಾತಪಾಃ= ದೊಡ್ಡ ತಪಸ್ವಿ, ಪಾಶಃ= ಪಾಶವನ್ನು ಹೊಂದಿದವನು, ಗಿರಿಚರಃ= ಪರ್ವತದ ಸಂಚಾರಿ, ನಭಃ= ಆಕಾಶ ರೂಪನು, ಸಹಸ್ರಹಸ್ತಃ= ಸಹಸ್ರ ಹಸ್ತವುಳ್ಳವನು, ವಿಜಯಃ= ವಿಜಯಶಾಲಿ, ವ್ಯವಸಾಯಃ= ನಿಶ್ಚಯರೂಪನಾದವನು, ಹ್ಯತಂದ್ರಿತಃ= ಆಲಸ್ಯರಹಿತನಾದವನು.

ಅಧರ್ಷಣೋ ಮರ್ಷಣಾತ್ಮಾ ಯಜ್ಞಹಾ ಕಾಮನಾಶನಃ ।
ದಕ್ಷಯಜ್ಞಾಪಹಾರೀ ಚ ಸುಸಹೋ ಮಧ್ಯಮಸ್ತಥಾ ॥೫೧॥

ಅಧರ್ಷಣಃ= ಭಕ್ತರನ್ನು ಹಿಂಸಿಸದವನು, ಮರ್ಷಣಾತ್ಮಾ= ಕ್ಷಮಾರೂಪನಾದವನು, ಯಜ್ಞಹಾ= ಯಜ್ಞಧ್ವಂಸಕ, ಕಾಮನಾಶನಃ= ಮನ್ಮಥನನ್ನು ಸಂಹರಿಸಿದವನು, ದಕ್ಷಯಜ್ಞಾಪಹಾರೀ= ದಕ್ಷನ ಯಜ್ಞವನ್ನು ನಾಶಗೊಳಿಸಿದವನು, ಸುಸಹಃ= ಎಲ್ಲವನ್ನೂ ಸಹಿಸುವವನು, ಮಧ್ಯಮಃ= ಮಧ್ಯದಲ್ಲಿರುವವನು.

ತೇಜೋಪಹಾರೀ ಬಲಹಾ ಮುದಿತೋಽರ್ಥೋಽಜಿತೋ ವರಃ ।
ಗಂಭೀರಘೋಷೋ ಗಂಭೀರೋ ಗಂಭೀರಬಲವಾಹನಃ ॥೫೨॥

ತೇಜೋಪಹಾರೀ= ಶತ್ರುಗಳ ತೇಜಸ್ಸನ್ನು ಅಪಹರಿಸುವವನು, ಬಲಹಾ= ಬಲವನ್ನು ನಾಶಮಾಡುವವನು, ಮುದಿತಃ= ಸಂತೋಷರೂಪಿ, ಅರ್ಥಃ= ಪುರುಷಾರ್ಥರೂಪನು, ಅಜಿತಃ= ಪರಾಜಯವನ್ನು ಹೊಂದದವನು, ವರಃ= ಶ್ರೇಷ್ಠನಾದವನು, ಗಂಭೀರ ಘೋಷಃ= ಗಂಭೀರವಾದ ನಾದವುಳ್ಳವನು, ಗಂಭೀರಃ= ತಿಳಿಯಲು ಅಶಕ್ಯನಾದವನು, ಗಂಭೀರಬಲವಾಹನಃ= ಗಂಭೀರವಾದ ಬಲವನ್ನು ಮತ್ತು ವಾಹನವನ್ನು ಹೊಂದಿದವನು.

ನ್ಯಗ್ರೋಧರೂಪೋ ನ್ಯಗ್ರೋಧೋ ವೃಕ್ಷಕರ್ಣಸ್ಥಿತಿರ್ವಿಭುಃ ।
ಸುತೀಕ್ಷ್ಣದಶನಶ್ಚೈವ ಮಹಾಕಾಯೋ ಮಹಾನನಃ ॥೫೩॥

ನ್ಯಗ್ರೋಧರೂಪಃ= ವಟವೃಕ್ಷನಾದವನು, ನ್ಯಗ್ರೋಧಃ= ಸರ್ವತ್ರ ವ್ಯಾಪಿಸುವವನು, ವೃಕ್ಷಕರ್ಣಸ್ಥಿತಿಃ= ವೃಕ್ಷಕರ್ಣದ ಬಳಿ ಇರುವವನು, ವಿಭುಃ=

ವ್ಯಾಪಕನು, ಸುತೀಕ್ಷ್ಣದಶನ= ತೀಕ್ಷ್ಣವಾದ ದಂತವುಳ್ಳವನು, ಮಹಾಕಾಯಃ= ದೊಡ್ಡ ಶರೀರಧಾರಿ, ಮಹಾನನಃ= ದೊಡ್ಡ ಮುಖವುಳ್ಳವನು.

ವಿಷ್ವಕ್ಸೇನೋ ಹರಿರ್ಯಜ್ಞಃ ಸಂಯುಗಾಪೀಡವಾಹನಃ ।
ತೀಕ್ಷ್ಣತಾಪಶ್ಚ ಹರ್ಯಶ್ವಃ ಸಹಾಯಃ ಕರ್ಮಕಾಲವಿತ್ ॥೫೪॥

ವಿಷ್ವಕ್ಸೇನಃ= ಎಲ್ಲ ಕಡೆಗಳಲ್ಲಿಯೂ ಸೈನ್ಯವುಳ್ಳವನು, ಹರಿಃ= ಪಾಪಹರನು, ಯಜ್ಞಃ= ಯಜ್ಞ ರೂಪನಾದವನು, ಸಂಯುಗಾಪೀಡವಾಹನಃ= ಯುದ್ಧದಲ್ಲಿ ಪೀಡಿಸಲ್ಪಡದ ವಾಹನವುಳ್ಳವನು, ತೀಕ್ಷ್ಣತಾಪಃ= ತೀಕ್ಷ್ಣವಾದ ತಾಪವನ್ನು ಹೊಂದಿದವನು, ಹರ್ಯಶ್ವಃ= ಕಂದು-ಹಳದಿ ಬಣ್ಣದ ಅಶ್ವವುಳ್ಳವನು, ಸಹಾಯಃ= ಭಕ್ತರಿಗೆ ಸಹಾಯನಾದವನು, ಕರ್ಮಕಾಲವಿತ್= ಕರ್ಮವನ್ನು ಮಾಡುವ ಸಮಯವನ್ನು ತಿಳಿದವನು.

ವಿಷ್ಣುಪ್ರಸಾದಿತೋ ಯಜ್ಞಃ ಸಮುದ್ರೋ ವಡವಾಮುಖಃ ।
ಹುತಾಶನಸಹಾಯಶ್ಚ ಪ್ರಶಾಂತಾತ್ಮಾ ಹುತಾಶನಃ ॥೫೫॥

ವಿಷ್ಣುಪ್ರಸಾದಿತಃ= ವಿಷ್ಣುವಿನಿಂದ ಸಂತೋಷಗೊಳಿಸಲ್ಪಟ್ಟವನು, ಯಜ್ಞಃ= ಯಜ್ಞರೂಪನು, ಸಮುದ್ರಃ= ಉದ್ರಿಕ್ತವಾದ ಗುಣವುಳ್ಳವನು, ವಡವಾಮುಖಃ= ಹೆಣ್ಣು ಕುದುರೆಯ ಮುಖ ಉಳ್ಳವನು, ಹುತಾಶನಸಹಾಯಃ= ಅಗ್ನಿಗೆ ಸಹಾಯ ಮಾಡುವವನು, ಪ್ರಶಾಂತಾತ್ಮಾ= ಶಾಂತವಾದ ಮನಸ್ಸುಳ್ಳವನು, ಹುತಾಶನಃ= ಅಗ್ನಿಮುಖವುಳ್ಳವನು.

ಉಗ್ರತೇಜಾ ಮಹಾತೇಜಾ ಜಯೋ ವಿಜಯಕಾಲವಿತ್ ।
ಜ್ಯೋತಿಷಾಮಯನಂ ಸಿದ್ಧಿಃ ಸಂಧಿರ್ವಿಗ್ರಹ ಏವ ಚ ॥೫೬॥

ಉಗ್ರತೇಜಾಃ= ಉಗ್ರವಾದ ತೇಜಸ್ಸುಳ್ಳವನು, ಮಹಾತೇಜಾಃ= ಮಹಾತೇಜಸ್ವಿ, ಜಯಃ= ಜಯರೂಪಿ, ವಿಜಯಕಾಲವಿತ್= ಜಯದ ಕಾಲವನ್ನು ತಿಳಿದವನು, ಜ್ಯೋತಿಷಾಮಯನಂ= ಜ್ಯೋತಿಸ್ಸುಗಳಿಗೆ ಆಶ್ರಯ, ಸಿದ್ಧಿಃ= ಸಿದ್ಧಿರೂಪನಾದವನು, ಸಂಧಿಃ= ಸಂಧಿಗೆ ನಿಯಾಮಕನಾದವನು, ವಿಗ್ರಹಃ= ಯುದ್ಧಕ್ಕೆ ನಿಯಾಮಕನಾದವನು.

ಘೋರೋ ಮಹಾತಪಾಃ ಪಾಶೋ ನಿತ್ಯೋ ಗಿರಿಚರೋ ನಭಃ ।
ಸಹಸ್ರಹಸ್ತೋ ವಿಜಯೋ ವ್ಯವಸಾಯೋ ಹ್ಯತಂದ್ರಿತಃ ॥೫೦॥

ಘೋರಃ= ಭಯಂಕರನಾದವನು, ಮಹಾತಪಾಃ= ದೊಡ್ಡ ತಪಸ್ವಿ, ಪಾಶಃ= ಪಾಶವನ್ನು ಹೊಂದಿದವನು, ಗಿರಿಚರಃ= ಪರ್ವತದ ಸಂಚಾರಿ, ನಭಃ= ಆಕಾಶ ರೂಪನು, ಸಹಸ್ರಹಸ್ತಃ= ಸಹಸ್ರ ಹಸ್ತವುಳ್ಳವನು, ವಿಜಯಃ= ವಿಜಯಶಾಲಿ, ವ್ಯವಸಾಯಃ= ನಿಶ್ಚಯರೂಪನಾದವನು, ಹ್ಯತಂದ್ರಿತಃ= ಆಲಸ್ಯರಹಿತನಾದವನು.

ಅಧರ್ಷಣೋ ಮರ್ಷಣಾತ್ಮಾ ಯಜ್ಞಹಾ ಕಾಮನಾಶನಃ ।
ದಕ್ಷಯಜ್ಞಾಪಹಾರೀ ಚ ಸುಸಹೋ ಮಧ್ಯಮಸ್ತಥಾ ॥೫೧॥

ಅಧರ್ಷಣಃ= ಭಕ್ತರನ್ನು ಹಿಂಸಿಸದವನು, ಮರ್ಷಣಾತ್ಮಾ= ಕ್ಷಮಾರೂಪನಾದವನು, ಯಜ್ಞಹಾ= ಯಜ್ಞಧ್ವಂಸಕ, ಕಾಮನಾಶನಃ= ಮನ್ಮಥನನ್ನು ಸಂಹರಿಸಿದವನು, ದಕ್ಷಯಜ್ಞಾಪಹಾರೀ= ದಕ್ಷನ ಯಜ್ಞವನ್ನು ನಾಶಗೊಳಿಸಿದವನು, ಸುಸಹಃ= ಎಲ್ಲವನ್ನೂ ಸಹಿಸುವವನು, ಮಧ್ಯಮಃ= ಮಧ್ಯದಲ್ಲಿರುವವನು.

ತೇಜೋಪಹಾರೀ ಬಲಹಾ ಮುದಿತೋಽರ್ಥೋಽಜಿತೋ ವರಃ ।
ಗಂಭೀರಘೋಷೋ ಗಂಭೀರೋ ಗಂಭೀರಬಲವಾಹನಃ ॥೫೨॥

ತೇಜೋಪಹಾರೀ= ಶತ್ರುಗಳ ತೇಜಸ್ಸನ್ನು ಅಪಹರಿಸುವವನು, ಬಲಹಾ= ಬಲವನ್ನು ನಾಶಮಾಡುವವನು, ಮುದಿತಃ= ಸಂತೋಷರೂಪಿ, ಅರ್ಥಃ= ಪುರುಷಾರ್ಥರೂಪನು, ಅಜಿತಃ= ಪರಾಜಯವನ್ನು ಹೊಂದದವನು, ವರಃ= ಶ್ರೇಷ್ಠನಾದವನು, ಗಂಭೀರ ಘೋಷಃ= ಗಂಭೀರವಾದ ನಾದವುಳ್ಳವನು, ಗಂಭೀರಃ= ತಿಳಿಯಲು ಅಶಕ್ಯನಾದವನು, ಗಂಭೀರಬಲವಾಹನಃ= ಗಂಭೀರವಾದ ಬಲವನ್ನು ಮತ್ತು ವಾಹನವನ್ನು ಹೊಂದಿದವನು.

ನ್ಯಗ್ರೋಧರೂಪೋ ನ್ಯಗ್ರೋಧೋ ವೃಕ್ಷಕರ್ಣಸ್ಥಿರ್ವಿಭುಃ ।
ಸುತೀಕ್ಷ್ಣದಶನಶ್ಚೈವ ಮಹಾಕಾಯೋ ಮಹಾನನಃ ॥೫೩॥

ನ್ಯಗ್ರೋಧರೂಪಃ= ವಟವೃಕ್ಷನಾದವನು, ನ್ಯಗ್ರೋಧಃ= ಸರ್ವತ್ರ ವ್ಯಾಪಿಸುವವನು, ವೃಕ್ಷಕರ್ಣಸ್ಥಿತಿಃ= ವೃಕ್ಷಕರ್ಣದ ಬಳಿ ಇರುವವನು, ವಿಭುಃ=

ವ್ಯಾಪಕನು, ಸುತೀಕ್ಷ್ಣದಶನ= ತೀಕ್ಷ್ಣವಾದ ದಂತವುಳ್ಳವನು, ಮಹಾಕಾಯಃ= ದೊಡ್ಡ ಶರೀರಧಾರಿ, ಮಹಾನನಃ= ದೊಡ್ಡ ಮುಖವುಳ್ಳವನು.

ವಿಷ್ವಕ್ಸೇನೋ ಹರಿರ್ಯಜ್ಞಃ ಸಂಯುಗಾಪೀಡವಾಹನಃ ।
ತೀಕ್ಷ್ಣತಾಪಶ್ಚ ಹರ್ಯಶ್ವಃ ಸಹಾಯಃ ಕರ್ಮಕಾಲವಿತ್ ॥೫೪॥

ವಿಷ್ವಕ್ಸೇನಃ= ಎಲ್ಲ ಕಡೆಗಳಲ್ಲಿಯೂ ಸೈನ್ಯವುಳ್ಳವನು, ಹರಿಃ= ಪಾಪಹರನು, ಯಜ್ಞಃ= ಯಜ್ಞ ರೂಪನಾದವನು, ಸಂಯುಗಾಪೀಡವಾಹನಃ= ಯುದ್ಧದಲ್ಲಿ ಪೀಡಿಸಲ್ಪಡದ ವಾಹನವುಳ್ಳವನು, ತೀಕ್ಷ್ಣತಾಪಃ= ತೀಕ್ಷ್ಣವಾದ ತಾಪವನ್ನು ಹೊಂದಿದವನು, ಹರ್ಯಶ್ವಃ= ಕಂದು-ಹಳದಿ ಬಣ್ಣದ ಅಶ್ವವುಳ್ಳವನು, ಸಹಾಯಃ= ಭಕ್ತರಿಗೆ ಸಹಾಯನಾದವನು, ಕರ್ಮಕಾಲವಿತ್= ಕರ್ಮವನ್ನು ಮಾಡುವ ಸಮಯವನ್ನು ತಿಳಿದವನು.

ವಿಷ್ಣುಪ್ರಸಾದಿತೋ ಯಜ್ಞಃ ಸಮುದ್ರೋ ವಡವಾಮುಖಃ ।
ಹುತಾಶನಸಹಾಯಶ್ಚ ಪ್ರಶಾಂತಾತ್ಮಾ ಹುತಾಶನಃ ॥೫೫॥

ವಿಷ್ಣುಪ್ರಸಾದಿತಃ= ವಿಷ್ಣುವಿನಿಂದ ಸಂತೋಷಗೊಳಿಸಲ್ಪಟ್ಟವನು, ಯಜ್ಞಃ= ಯಜ್ಞರೂಪನು, ಸಮುದ್ರಃ= ಉದ್ರಿಕ್ತವಾದ ಗುಣವುಳ್ಳವನು, ವಡವಾಮುಖಃ= ಹೆಣ್ಣು ಕುದುರೆಯ ಮುಖ ಉಳ್ಳವನು, ಹುತಾಶನಸಹಾಯಃ= ಅಗ್ನಿಗೆ ಸಹಾಯ ಮಾಡುವವನು, ಪ್ರಶಾಂತಾತ್ಮಾ= ಶಾಂತವಾದ ಮನಸ್ಸುಳ್ಳವನು, ಹುತಾಶನಃ= ಅಗ್ನಿಮುಖವುಳ್ಳವನು.

ಉಗ್ರತೇಜಾ ಮಹಾತೇಜಾ ಜಯೋ ವಿಜಯಕಾಲವಿತ್ ।
ಜ್ಯೋತಿಷಾಮಯನಂ ಸಿದ್ಧಿಃ ಸಂಧಿರ್ವಿಗ್ರಹ ಏವ ಚ ॥೫೬॥

ಉಗ್ರತೇಜಾಃ= ಉಗ್ರವಾದ ತೇಜಸ್ಸುಳ್ಳವನು, ಮಹಾತೇಜಾಃ= ಮಹಾತೇಜಸ್ವಿ, ಜಯಃ= ಜಯರೂಪಿ, ವಿಜಯಕಾಲವಿತ್= ಜಯದ ಕಾಲವನ್ನು ತಿಳಿದವನು, ಜ್ಯೋತಿಷಾಮಯನಂ= ಜ್ಯೋತಿಸ್ಸುಗಳಿಗೆ ಆಶ್ರಯ, ಸಿದ್ಧಿಃ= ಸಿದ್ಧಿರೂಪನಾದವನು, ಸಂಧಿಃ= ಸಂಧಿಗೆ ನಿಯಾಮಕನಾದವನು, ವಿಗ್ರಹಃ= ಯುದ್ಧಕ್ಕೆ ನಿಯಾಮಕನಾದವನು.

ಶಿಖೀ ದಂಡೀ ಜಟೀ ಜ್ವಾಲೀ ಮೂರ್ತಿಜೋ ಮೂರ್ಧಗೋ ಬಲೀ ।
ವೇಣವೀ ಪಣವೀ ತಾಲೀ ಕಾಲಃ ಕಾಲಕಟಂಕಟಃ ॥೫೭॥

ಶಿಖೀ= ಶಿಖೆಯನ್ನು ಧರಿಸಿದವನು, ದಂಡೀ= ದಂಡವನ್ನು ಧರಿಸಿದವನು, ಜಟೀ= ಜಟೆಗಳನ್ನು ಧರಿಸಿದವನು, ಜ್ವಾಲೀ= ಜ್ವಾಲೆಗಳನ್ನು ಹೊಂದಿದವನು, ಮೂರ್ತಿಜಃ= ಸಾಕಾರರೂಪನಾಗಿ ಜನಿಸಿದವನು, ಮೂರ್ಧಗಃ= ಎಲ್ಲರ ಮೇಲೆ ಇರುವವನು, ಬಲೀ= ಬಲಿಷ್ಠನಾದವನು, ವೇಣವೀ= ಕೊಳಲನ್ನು ಹಿಡಿದವನು, ಪಣವೀ= ಪಣವವನ್ನು ಹಿಡಿದವನು, ತಾಲೀ= ತಾಳವನ್ನು ಹಿಡಿದವನು, ಕಾಲ= ಕಾಲರೂಪನಾದವನು, ಕಾಲಕಟಂಕಟಃ= ಕಾಲವನ್ನು ಮೀರಿದವನು.

ನಕ್ಷತ್ರವಿಗ್ರಹವಿಧಿರ್ಗುಣವೃದ್ಧಿರ್ಲಯೋಽಗಮಃ ।
ಪ್ರಜಾಪತಿರ್ದಿಶಾಬಾಹುರ್ವಿಭಾಗಃ ಸರ್ವತೋಮುಖಃ ॥೫೮॥

ನಕ್ಷತ್ರವಿಗ್ರಹವಿಧಿಃ= ನಕ್ಷತ್ರ ವಿಗ್ರಹಗಳನ್ನು ಉಂಟು ಮಾಡುವವನು, ಗುಣವೃದ್ಧಿಃ= ಗುಣಗಳನ್ನು ಅಭಿವೃದ್ಧಿಪಡಿಸುವವನು, ಲಯಃ= ನಾಶವನ್ನು ಮಾಡುವವನು, ಅಗಮಃ= ಭಕ್ತರನ್ನು ಬಿಟ್ಟು ಹೋಗದವನು, ಪ್ರಜಾಪತಿಃ= ಪ್ರಜೆಗಳಿಗೆ ಒಡೆಯನಾದವನು, ದಿಶಾಬಾಹುಃ= ದಿಕ್ಕುಗಳಲ್ಲಿ ಬಾಹುಗಳನ್ನು ಹೊಂದಿದವನು, ವಿಭಾಗಃ= ವಿಭಾಗವನ್ನು ಮಾಡಿದವನು, ಸರ್ವತೋಮುಖಃ= ಎಲ್ಲ ಕಡೆಗಳಲ್ಲಿಯೂ ಮುಖವನ್ನು ಹೊಂದಿದವನು.

ವಿಮೋಚನಃ ಸುರಗಣೋ ಹಿರಣ್ಯಕವಚೋದ್ಭವಃ ।
ಮೇಢ್ರಜೋ ಬಲಚಾರೀ ಚ ಮಹಾಚಾರೀ ಸ್ತುತಸ್ತಥಾ ॥೫೯॥

ವಿಮೋಚನಃ= ಭಕ್ತರ ಸಂಕಟವನ್ನು ಬಿಡಿಸುವವನು, ಸುರಗಣಃ= ದೇವತೆಗಳ ಸಮೂಹದಲ್ಲಿ ಇರುವವನು, ಹಿರಣ್ಯಕವಚೋದ್ಭವಃ= ಬ್ರಹ್ಮದೇವರಿಂದ ಜನಿಸಿದವನು, ಮೇಢ್ರಜಃ= ಲಿಂಗರೂಪದಿಂದ ಜನಿಸಿದವನು, ಬಲಚಾರೀ= ಬಲದಿಂದ ಸಂಚರಿಸುವವನು, ಮಹಾಚಾರೀ= ಬಹಳ ಸಂಚರಿಸುವವನು, ಸ್ತುತಃ= ಸ್ತೋತ್ರ ಮಾಡಲ್ಪಡುವವನು.

ಸರ್ವತೂರ್ಯನಿನಾದೀ ಚ ಸರ್ವವಾದ್ಯಪರಿಗ್ರಹಃ ।
ವ್ಯಾಲರೂಪೋ ಗುಹಾವಾಸೀ ಗುಹೋ ಮಾಲೀ ತರಂಗವಿತ್ ॥೬೦॥

ಸರ್ವತೂರ್ಯನಿನಾದೀ= ಎಲ್ಲ ತೂರ್ಯಗಳ ನಾದವುಳ್ಳವನು, ಸರ್ವವಾದ್ಯ ಪರಿಗ್ರಹಃ= ಎಲ್ಲ ವಾದ್ಯಗಳನ್ನು ಪರಿಗ್ರಹಿಸುವವನು, ವ್ಯಾಲರೂಪಃ= ಸರ್ಪ ರೂಪನಾದವನು, ಗುಹಾವಾಸಿ= ಎಲ್ಲರ ಹೃದಯ ಗುಹೆಯಲ್ಲಿರುವವನು, ಗುಹಃ= ಷಣ್ಮುಖನಲ್ಲಿ ಸನ್ನಿಹಿತನಾದವನು, ಮಾಲೀ= ಮಾಲೆಯನ್ನು ಧರಿಸಿದವನು, ತರಂಗವಿತ್= ಸೃಷ್ಟಿ-ಸಂಹಾರಗಳ ತರಂಗಗಳನ್ನು ತಿಳಿದವನು.

ತ್ರಿದಶಸ್ತ್ರಿಕಾಲಧೃಕ್ಕರ್ಮ ಸರ್ವಬಂಧವಿಮೋಚನಃ ।
ಬಂಧನಸ್ತ್ವಸುರೇಂದ್ರಾಣಾಂ ಯುಧಿ ಶತ್ರುವಿನಾಶನಃ ॥೬೧॥

ತ್ರಿದಶಃ= ದೇವತೆಗಳಲ್ಲಿರುವವನು, ತ್ರಿಕಾಲಧೃಕ್= ಮೂರು ಕಾಲಗಳನ್ನೂ ಧರಿಸಿದವನು, ಕರ್ಮ= ಸರ್ವಕರ್ಮವನ್ನು ಮಾಡಿಸುವವನು, ಸರ್ವಬಂಧ ವಿಮೋಚನಃ= ಎಲ್ಲ ಬಂಧಗಳನ್ನೂ ಬಿಡಿಸುವವನು, ಅಸುರೇಂದ್ರಾಣಾಂ ಬಂಧನಃ= ಅಸುರಶ್ರೇಷ್ಠರಿಗೆ ಬಂಧನವನ್ನುಂಟು ಮಾಡುವವನು, ಯುಧಿ ಶತ್ರುವಿನಾಶನಃ= ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುವವನು.

ಸಾಂಖ್ಯಪ್ರಸಾದೋ ದುರ್ವಾಸಾಃ ಸರ್ವಸಾಧುನಿಷೇವಿತಃ ।
ಪ್ರಸ್ಕಂದನೋ ವಿಭಾಗಜ್ಞ ಅತುಲ್ಯೋ ಯಜ್ಞಭಾಗವಿತ್ ॥೬೨॥

ಸಾಂಖ್ಯಪ್ರಸಾದಃ= ಶುದ್ಧವಾದ ಜ್ಞಾನದಿಂದ ಪ್ರಸನ್ನನಾಗುವವನು, ದುರ್ವಾಸಾಃ= ದುರ್ವಾಸ ಋಷಿ ರೂಪನಾದವನು, ಸರ್ವಸಾಧುನಿಷೇವಿತಃ= ಎಲ್ಲ ಸಜ್ಜನರಿಂದಲೂ ಸೇವಿತನಾದವನು, ಪ್ರಸ್ಕಂದನಃ= ಅಭಕ್ತರಿಗೆ ಸ್ಥಾನ ಚ್ಯುತಿಯನ್ನುಂಟು ಮಾಡುವವನು, ವಿಭಾಗಜ್ಞಃ= ಎಲ್ಲ ಪ್ರಾಣಿಗಳ ವಿಭಾಗವನ್ನು ತಿಳಿದವನು, ಅತುಲ್ಯಃ= ಅಸದೃಶನಾದವನು, ಯಜ್ಞಭಾಗವಿತ್= ಯಜ್ಞಾಂಗಗಳನ್ನು ತಿಳಿದವನು.

ಸರ್ವಾವಾಸಃ ಸರ್ವಚಾರೀ ದುರ್ವಾಸಾ ವಾಸವೋऽಮರಃ ।
ಹೈಮೋ ಹೇಮಕರೋ ಯಜ್ಞಃ ಸರ್ವಧಾರೀ ಧರೋತ್ತಮಃ ॥೬೩॥

ಸರ್ವಾವಾಸಃ= ಎಲ್ಲರನ್ನೂ ತನ್ನಲ್ಲಿ ವಾಸ ಮಾಡಿಸಿಕೊಳ್ಳುವವನು, ಸರ್ವಚಾರೀ= ಎಲ್ಲ ಕಡೆಗಳಲ್ಲಿಯೂ ಸಂಚರಿಸುವವನು, ದುರ್ವಾಸಾಃ= ಮಲಿನವಸ್ತ್ರಧಾರಿ, ವಾಸವಃ= ಇಂದ್ರನಲ್ಲಿ ಇರುವವನು, ಅಮರಃ= ಮರಣ ರಹಿತನಾದವನು, ಹೈಮಃ=

ಸುವರ್ಣರೂಪನಾದವನು, ಹೇಮಕರಃ= ಸುವರ್ಣಕ್ಕೆ ಉತ್ಪಾದಕನು, ಯಜ್ಞಃ= ಯಜ್ಞರೂಪಿ, ಸರ್ವಧಾರಿ= ಎಲ್ಲವನ್ನೂ ಧರಿಸಿದವನು, ಧರೋತ್ತಮಃ= ಧರಿಸಿದವರಲ್ಲಿ ಶ್ರೇಷ್ಠನಾದವನು.

ಲೋಹಿತಾಕ್ಷೋ ಮಹಾಕ್ಷಶ್ಚ ವಿಜಯಾಕ್ಷೋ ವಿಶಾರದಃ ।
ಸಂಗ್ರಹೋ ನಿಗ್ರಹಃ ಕರ್ತಾ ಸರ್ಪಚೀರನಿವಾಸನಃ ॥೬೪॥

ಲೋಹಿತಾಕ್ಷಃ= ಕೆಂಪಾದ ಕಣ್ಣುಳ್ಳವನು, ಮಹಾಕ್ಷಃ= ವಿಶಾಲ ನೇತ್ರ, ವಿಜಯಾಕ್ಷಃ= ವಿಜಯವನ್ನು ನೋಡುವ ನೇತ್ರವುಳ್ಳವನು, ವಿಶಾರದಃ= ಕುಶಲನಾದವನು, ಸಂಗ್ರಹಃ= ಭಕ್ತರನ್ನು ಸ್ವೀಕರಿಸುವವನು, ನಿಗ್ರಹಃ= ಅಭಕ್ತರನ್ನು ಶಿಕ್ಷಿಸುವವನು, ಕರ್ತಾ= ಸರ್ವಕರ್ತ, ಸರ್ವಚೀರನಿವಾಸನಃ= ಸರ್ವಚರ್ಮಧಾರಿ.

ಮುಖ್ಯೋಽಮುಖ್ಯಶ್ಚ ದೇಹಶ್ಚ ದೇಹರ್ದ್ಧಿಃ ಸರ್ವಕಾಮದಃ ।
ಸರ್ವಕಾಮಪ್ರಸಾದಶ್ಚ ಸುಬಲೋ ಬಲರೂಪಧೃಕ್ ॥೬೫॥

ಮುಖ್ಯಃ= ಮುಖ್ಯನಾದವನು, ಅಮುಖ್ಯಃ= ಅಮುಖ್ಯರಲ್ಲಿರುವವನು, ದೇಹಃ= ದೇಹದಲ್ಲಿರುವವನು, ದೇಹರ್ದ್ಧಿಃ= ದೇಹದ ಅಭಿವೃದ್ಧಿಗೆ ಕಾರಣನಾದವನು, ಸರ್ವಕಾಮದಃ= ಎಲ್ಲ ಕಾಮಗಳನ್ನೂ ಕೊಡುವವನು, ಸರ್ವಕಾಮಪ್ರಸಾದಃ= ಎಲ್ಲ ಕಾಮಗಳನ್ನು ಅನುಗ್ರಹಿಸುವವನು, ಸುಬಲಃ= ಒಳ್ಳೆಯ ಬಲವುಳ್ಳವನು, ಬಲರೂಪಧೃಕ್= ಬಲ-ರೂಪವನ್ನು ಧರಿಸಿದವನು.

ಆಕಾಶನಿಧಿರೂಪಶ್ಚ ನಿಪಾತೀ ಉರಗಃ ಖಗಃ ।
ರೌದ್ರರೂಪೋಽಂಶುರಾದಿತ್ಯೋ ವಸುರಶ್ಮಿಃ ಸುವರ್ಚಸೀ ॥೬೬॥

ಆಕಾಶನಿಧಿರೂಪಃ= ಆಕಾಶದಂತೆ ಅಸಂಗನಾದವನು, ನಿಪಾತೀ= ಪಕ್ಷಿಯಂತೆ ಸಂಚರಿಸುವವನು, ಉರಗಃ= ಸರ್ಪದಂತೆ ಸಂಚರಿಸುವವನು, ಖಗಃ= ಪಕ್ಷಿರೂಪಧಾರಿ, ರೌದ್ರರೂಪಃ= ಭಯಂಕರ ರೂಪವುಳ್ಳವನು, ಅಂಶುಃ= ಕಿರಣರೂಪನಾದವನು, ಆದಿತ್ಯಃ= ಆದಿತ್ಯನಲ್ಲಿರುವವನು, ವಸುರಶ್ಮಿಃ= ರಶ್ಮಿಗಳಿಗೆ ಆಶ್ರಯನಾದವನು, ಸುವರ್ಚಸೀ= ಒಳ್ಳೆಯ ವರ್ಚಸ್ಸನ್ನು ಹೊಂದಿದವನು.

ವಸುವೇಗೋ ಮಹಾವೇಗೋ ಮನೋವೇಗೋ ನಿಶಾಚರಃ ।
ಸರ್ವಾವಾಸೀ ಶ್ರಿಯಾವಾಸೀ ಉಪದೇಶಕರೋ ಹರಃ ॥೬೭॥

ವಸುವೇಗಃ= ವಸುಗಳ ವೇಗವನ್ನು ಹೊಂದಿದವನು, ಮಹಾವೇಗಃ= ಮಹಾವೇಗವನ್ನು ಹೊಂದಿದವನು, ಮನೋವೇಗಃ= ಮನೋವೇಗವನ್ನು ಹೊಂದಿದವನು, ನಿಶಾಚರಃ= ರಾತ್ರಿಯಲ್ಲಿ ಸಂಚರಿಸುವವನು, ಸರ್ವಾವಾಸೀ= ಎಲ್ಲರನ್ನೂ ತನ್ನಲ್ಲಿ ವಾಸಿಸಿಕೊಳ್ಳುವವನು, ಶ್ರಿಯಾವಾಸೀ= ವೇದಪ್ರತಿಪಾದ್ಯನಾದವನು, ಉಪದೇಶಕರಃ= ಉಪದೇಶವನ್ನು ಮಾಡುವವನು, ಹರಃ= ಪಾಪಹಾರಕನು.

ಮುನಿರಾತ್ಮನಿರಾಲೋಕಃ ಸಂಭೋಜ್ಯಶ್ಚ ಸಹಸ್ರದಃ ।
ಪಕ್ಷೀ ಚ ಪಕ್ಷಿರೂಪೀ ಚ ಅತಿದೀಪ್ತೋ ವಿಶಾಂಪತಿಃ ॥೬೮॥

ಮುನಿಃ= ಮನನಶೀಲನಾದವನು, ಆತ್ಮನಿರಾಲೋಕಃ= ಆತ್ಮದರ್ಶನಶೀಲನು, ಸಂಭೋಜ್ಯಃ= ಚೆನ್ನಾಗಿ ಪೂಜಿಸಲ್ಪಡಬೇಕಾದವನು, ಸಹಸ್ರದಃ= ಸಹಸ್ರ ಕಾಮಗಳನ್ನು ಕೊಡುವವನು, ಪಕ್ಷೀ= ಪಕ್ಷರೂಪವನ್ನು ಹೊಂದಿದವನು, ಪಕ್ಷಿರೂಪೀ= ಪಕ್ಷಿ ರೂಪವನ್ನು ಧರಿಸಿದವನು, ಅತಿದೀಪ್ತಃ= ಬಹಳ ಪ್ರಕಾಶವುಳ್ಳವನು, ವಿಶಾಂಪತಿಃ= ಪ್ರಜೆಗಳಿಗೆ ಪತಿ.

ಉನ್ಮಾದೋ ಮದನಃ ಕಾಮೋ ಅರ್ಥಾರ್ಥಕರರೋಮಶಃ ।
ವಾಮದೇವಶ್ಚ ವಾಮಶ್ಚ ಪ್ರಾಗ್ದಕ್ಷಿಣ್ಯಶ್ಚ ವಾಮನಃ ॥೬೯॥

ಉನ್ಮಾದಃ= ಉನ್ಮತ್ತನಾದವನು, ಮದನಃ= ಸುಖರೂಪನಾದವನು, ಕಾಮಃ= ಸುಂದರನಾದವನು, ಅರ್ಥಾರ್ಥಕರರೋಮಶಃ= ಎಲ್ಲ ಪುರುಷಾರ್ಥಗಳನ್ನು ಕೊಡುವ ರೋಮಗಳಿಂದ ದೇಹದಲ್ಲಿ ಆವೃತನಾದವನು, ವಾಮದೇವಃ= ಸುಂದರನಾದ ದೇವನಾದವನು, ವಾಮಃ= ಸುಂದರನು, ಪ್ರಾಕ್= ಎಲ್ಲರಿಗಿಂತಲೂ ಮೊದಲಿನವನು, ದಕ್ಷಿಣ್ಯಃ= ಕುಶಲನಾದವನು, ವಾಮನಃ= ವಟುರೂಪಿಯು.

ಸಿದ್ಧಯೋಗಾಪಹಾರೀ ಚ ಸಿದ್ಧಃ ಸರ್ವಾರ್ಥಸಾಧಕಃ ।
ಭಿಕ್ಷುಶ್ಚ ಭಿಕ್ಷುರೂಪಶ್ಚ ವಿಷಾಣೀ ಮೃದುರವ್ಯಯಃ ॥೭೦॥

ಸಿದ್ಧಯೋಗಾಪಹಾರೀ= ಅಭಕ್ತರಿಗೆ ಸಿದ್ಧವಾದ ಯೋಗಗಳನ್ನು ಅಪಹರಿಸುವವನು ಸಿದ್ಧಃ= ಸರ್ವ ಸಿದ್ಧನಾದವನು, ಸರ್ವಾರ್ಥಸಾಧಕಃ= ಎಲ್ಲ ಅರ್ಥಗಳನ್ನು ಸಾಧಿಸಿಕೊಡುವವನು, ಭಿಕ್ಷುಃ= ಭಿಕ್ಷುಗಳಲ್ಲಿ ಇರುವವನು, ಭಿಕ್ಷುರೂಪಶ್ಚ= ಭಿಕ್ಷುವಿನ ರೂಪವನ್ನು ಧರಿಸಿದವನು, ವಿಷಾಣೀ= ಶೃಂಗವುಳ್ಳವನು, ಮೃದುಃ= ಮೃದುವಾದವನು, ಅವ್ಯಯಃ= ಶಾಶ್ವತನಾದವನು.

ಮಹಾಸೇನೋ ವಿಶಾಖಶ್ಚ ಷಷ್ಟಿಭಾಗೋ ಗವಾಂಪತಿಃ ।
ವಜ್ರಹಸ್ತಶ್ಚ ವಿಷ್ಕಂಭೀ ಚಮೂಸ್ತಂಭನ ಏವ ಚ ॥೭೧॥

ಮಹಾಸೇನಃ= ದೊಡ್ಡ ಸೈನ್ಯವುಳ್ಳವನು, ವಿಶಾಖಃ= ಸ್ಕಂಧನ ಸ್ನೇಹಿತನಾದ ವಿಶಾಖನಲ್ಲಿರುವವನು, ಷಷ್ಟಿಭಾಗಃ= ಪ್ರಭವಾದಿ ಸಂವತ್ಸರ ರೂಪವಾದ ಕಾಲಭಾಗದಲ್ಲಿರುವವನು, ಗವಾಂಪತಿಃ= ಗೋವುಗಳಿಗೆ ಪತಿಯಾದವನು, ವಜ್ರಹಸ್ತಃ= ಕೈಯಲ್ಲಿ ವಜ್ರವನ್ನು ಹಿಡಿದವನು, ವಿಷ್ಕಂಭೀ= ವಿಸ್ತೃತನಾದವನು, ಚಮೂಸ್ತಂಭನಃ= ಸೈನ್ಯವನ್ನು ಸ್ತಂಭನಗೊಳಿಸುವವನು.

ಋತುರ್ಋತುಕರಃ ಕಾಲೋ ಮಧುರ್ಮಧುಕರೋಚಲಃ ।
ವಾನಸ್ಪತ್ಯೋ ವಾಜಸನೋ ನಿತ್ಯಮಾಶ್ರಮಪೂಜಿತಃ ॥೭೨॥

ಋತುಃ= ಋತುನಾಮಕನಾದವನು, ಋತುಕರಃ= ಋತುಗಳ ಪ್ರವರ್ತಕ, ಮಧುಃ= ವಸಂತ ಋತು ನಿಯಾಮಕ, ಮಧುಕರಃ= ಮಧುವನ್ನು ಮಾಡುವವನು, ಅಚಲಃ= ಸ್ಥಿರ, ವಾನಸ್ಪತ್ಯಃ= ವನಸ್ಪತಿಗಳಿಗೆ ಒಡೆಯ, ವಾಜಸನಃ= ಅನ್ನವನ್ನು ಕೊಡುವವನು, ನಿತ್ಯಮಾಶ್ರಮಪೂಜಿತಃ= ನಾಲ್ಕು ಆಶ್ರಮದವರಿಂದ ನಿತ್ಯವೂ ಪೂಜಿತನಾದವನು.

ಬ್ರಹ್ಮಚಾರೀ ಲೋಕಚಾರೀ ಸರ್ವಚಾರೀ ಸಂಚಾರವಿತ್ ।
ಈಶಾನ ಈಶ್ವರಃ ಕಾಲೋ ನಿಶಾಚಾರೀ ಪಿನಾಕವಾನ್ ॥೭೩॥

ಬ್ರಹ್ಮಚಾರೀ= ಬ್ರಹ್ಮಚರ್ಯವನ್ನು ಹೊಂದಿದವನು, ಲೋಕಚಾರೀ= ಲೋಕ ಸಂಚಾರಿ, ಸರ್ವಚಾರೀ= ಸರ್ವ ಸಂಚಾರಿ, ಸಂಚಾರವಿತ್= ಒಳ್ಳೆಯ ಸಂಚಾರದಿಂದ ಕೂಡಿದವನು, ಈಶಾನಃ= ಪ್ರಭು, ಈಶ್ವರಃ= ಪ್ರಭು, ಕಾಲಃ= ಕಾಲರೂಪಿ, ನಿಶಾಚಾರೀ= ರಾತ್ರಿ ಸಂಚರಿಸುವವನು, ಪಿನಾಕವಾನ್= ಪಿನಾಕಧಾರಿ.

ನಂದೀಶ್ವರಶ್ಚ ನಂದೀ ಚ ನಂದನೋ ನಂದಿವರ್ಧನಃ ।
ಭಗಹಾರೀ ನಿಹಂತಾ ಚ ಕಾಲೋ ಬ್ರಹ್ಮವಿದಾಂ ವರಃ ॥೭೪॥

ನಂದೀಶ್ವರಃ= ನಂದಿಯ ಒಡೆಯನಾದವನು, ನಂದೀ= ಆನಂದರೂಪಾನುಭವಿ, ನಂದನಃ= ಆನಂದರೂಪನಾದವನು, ನಂದಿವರ್ಧನಃ= ಭಕ್ತರ ಸುಖವನ್ನು ಹೆಚ್ಚಿಸುವವನು, ಭಗಹಾರೀ= ದುಷ್ಟರ ಸಂಪತ್ತನ್ನು ನಾಶ ಮಾಡುವವನು, ನಿಹಂತಾ= ಸಂಹರಿಸುವವನು, ಕಾಲಃ= ಕಾಲರೂಪಿ, ಬ್ರಹ್ಮವಿದಾಂ ವರಃ= ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದವನು.

ಚತುರ್ಮುಖೋ ಮಹಾಲಿಂಗಶ್ಚಾರುಲಿಂಗಸ್ತಥೈವ ಚ ।
ಲಿಂಗಾಧ್ಯಕ್ಷಃ ಸುರಾಧ್ಯಕ್ಷೋ ಲೋಕಾಧ್ಯಕ್ಷೋ ಯುಗಾವಹಃ ॥೭೫॥

ಚತುರ್ಮುಖಃ= ನಾಲ್ಕು ಮುಖವುಳ್ಳವನು, ಮಹಾಲಿಂಗಃ= ದೊಡ್ಡ ಲಿಂಗವುಳ್ಳವನು, ಚಾರುಲಿಂಗಃ= ಮನೋಹರವಾದ ಲಿಂಗವುಳ್ಳವನು, ಲಿಂಗಾಧ್ಯಕ್ಷಃ= ಲಿಂಗಕ್ಕೆ ಒಡೆಯ, ಸುರಾಧ್ಯಕ್ಷಃ= ದೇವತೆಗಳಿಗೆ ಒಡೆಯ, ಲೋಕಾಧ್ಯಕ್ಷಃ= ಲೋಕಗಳಿಗೆ ಒಡೆಯ, ಯುಗಾವಹಃ= ಯುಗಗಳ ಪ್ರವರ್ತಕ.

ಬೀಜಾಧ್ಯಕ್ಷೋ ಬೀಜಕರ್ತಾ ಅಧ್ಯಾತ್ಮಾನುಗತೋ ಬಲಃ ।
ಇತಿಹಾಸಃ ಸಕಲ್ಪಶ್ಚ ಗೌತಮೋऽಥ ಜಲೇಶ್ವರಃ ॥೭೬॥

ಬೀಜಾಧ್ಯಕ್ಷಃ= ಬೀಜಗಳಿಗೆ ಒಡೆಯ, ಬೀಜಕರ್ತಾ= ಬೀಜಗಳನ್ನು ಮಾಡುವವನು, ಅಧ್ಯಾತ್ಮಾನುಗತಃ= ಶರೀರಗಳಲ್ಲಿ ಅನುಗತನಾದವನು, ಬಲಃ= ಬಲಶಾಲಿ, ಇತಿಹಾಸಃ ಸಕಲ್ಪಃ= ಕಲ್ಪಸಹಿತ ಇತಿಹಾಸ ಪ್ರತಿಪಾದ್ಯನಾದವನು, ಗೌತಮಃ= ಒಳ್ಳೆಯ ಜ್ಞಾನವುಳ್ಳವನು, ಜಲೇಶ್ವರಃ= ವರುಣರೂಪಿಯಾದವನು.

ದಂಭೋ ಹ್ಯದಂಭೋ ವೈದಂಭೋ ವಶ್ಯೋ ವಶಕರಃ ಕಲಿಃ ।
ಲೋಕಕರ್ತಾ ಪಶುಪತಿರ್ಮಹಾಕರ್ತಾ ಹ್ಯನೌಷಧಃ ॥೭೭॥

ದಂಭಃ= ಡಂಭದಲ್ಲಿ ಇರುವವನು, ಅದಂಭೀ= ಡಂಭವಿಲ್ಲದವನು, ವೈದಂಭಃ= ಡಂಭಕ್ಕೆ ವಿರುದ್ಧನಾದವನು, ವಶ್ಯಃ= ಭಕ್ತರಿಗೆ ವಶನಾದವನು, ವಶಕರಃ= ಭಕ್ತರನ್ನು

ವಶಪಡಿಸಿಕೊಳ್ಳುವವನು, ಕಲಿಃ= ವೀರನಾದವನು, ಲೋಕಕರ್ತಾ= ಲೋಕಗಳ ಸೃಷ್ಟಿಕರ್ತ, ಪಶುಪತಿಃ= ಪಶುಗಳಿಗೆ ಪತಿ, ಮಹಾಕರ್ತಾ= ದೊಡ್ಡ ಕಾರ್ಯವನ್ನು ಮಾಡುವವನು, ಅನೌಷಧಃ= ಔಷಧ ರಹಿತನಾದವನು.

ಅಕ್ಷರಂ ಪರಮಂ ಬ್ರಹ್ಮ ಬಲವಾನ್ ಶಕ್ರ ಏವ ಚ ।
ನೀತಿರ್ಹ್ಯನೀತಿಃ ಶುದ್ಧಾತ್ಮಾ ಶುದ್ಧೋ ಮಾನ್ಯೋ ಮನೋಗತಿಃ ॥೭೮॥

ಅಕ್ಷರಂ= ನಾಶವನ್ನು ಹೊಂದದವನು, ಪರಮಂ ಬ್ರಹ್ಮ= ಶ್ರೇಷ್ಠನಾದ ಬ್ರಹ್ಮ, ಬಲವಾನ್= ಬಲಿಷ್ಠ, ಶಕ್ರಃ= ಇಂದ್ರ, ನೀತಿಃ= ನಯರೂಪನಾದವನು, ಅನೀತಿಃ= ಅನೀತಿಯ ಪ್ರವರ್ತಕ, ಶುದ್ಧಾತ್ಮಾ= ಶುದ್ಧವಾದ ಮನಸ್ಸುಳ್ಳವನು, ಶುದ್ಧಃ= ಶುದ್ಧನು, ಮಾನ್ಯಃ= ಸಮ್ಮಾನಿಸಲ್ಪಡುವವನು, ಮನೋಗತಿಃ= ಮನಸ್ಸಿನ ವೇಗವನ್ನು ಹೊಂದಿದವನು.

ಬಹುಪ್ರಸಾದಃ ಸ್ವಪನೋ ದರ್ಪಣೋऽಥ ತ್ವಮಿತ್ರಜಿತ್ ।
ವೇದಕಾರಃ ಸೂತ್ರಕಾರೋ ವಿದ್ವಾನ್ ಸಮರಮರ್ದನಃ ॥೭೯॥

ಬಹುಪ್ರಸಾದಃ= ಬಹಳ ಅನುಗ್ರಹವನ್ನು ಮಾಡುವವನು, ಸ್ವಪನಃ= ಸ್ವಪ್ನ ಉಳ್ಳವನು, ದರ್ಪಣಃ= ಕನ್ನಡಿಯಂತೆ ಸ್ವಚ್ಛನಾದವನು, ಅಮಿತ್ರಜಿತ್= ಶತ್ರುಗಳನ್ನು ಜಯಿಸುವವನು, ವೇದಕಾರಃ= ವೇದ ಪ್ರವರ್ತಕ, ಸೂತ್ರಕಾರಃ= ಸೂತ್ರಗಳ ರಚನೆ ಮಾಡುವವನು, ವಿದ್ವಾನ್= ವಿದ್ಯಾವಂತನು, ಸಮರಮರ್ದನಃ= ಯುದ್ಧವನ್ನು ನಾಶ ಪಡಿಸುವವನು.

ಮಹಾಮೇಘನಿವಾಸೀ ಚ ಮಹಾಘೋರೋ ವಶೀಕರಃ ।
ಅಗ್ನಿಜ್ವಾಲೋ ಮಹಾಜ್ವಾಲೋ ಅತಿಧೂಮ್ರೋ ಹುತೋ ಹವಿಃ ॥೮೦॥

ಮಹಾಮೇಘನಿವಾಸೀ= ದೊಡ್ಡ ಮೋಡಗಳಲ್ಲಿ ವಾಸಿಸುವನು, ಮಹಾಘೋರಃ= ಬಹಳ ಘೋರನಾದವನು, ವಶೀಕರಃ= ಎಲ್ಲರನ್ನೂ ವಶಪಡಿಸಿಕೊಳ್ಳುವವನು, ಅಗ್ನಿಜ್ವಾಲಃ= ಅಗ್ನಿಜ್ವಾಲೆಗಳಲ್ಲಿ ಸನ್ನಿಹಿತನಾದವನು, ಮಹಾಜ್ವಾಲಃ= ದೊಡ್ಡ ಜ್ವಾಲೆಗಳನ್ನು ಹೊಂದಿದವನು, ಅತಿಧೂಮ್ರಃ= ಬಹಳ ಧೂಮದಿಂದ ಕೂಡಿದವನು, ಹುತಃ= ಹೋಮ ಮಾಡಲ್ಪಟ್ಟವನು, ಹವಿಃ= ದೇವತೆಗಳಿಂದ ಆಹ್ವಾನ ಮಾಡಲ್ಪಟ್ಟವನು.

ವೃಷಣಃ ಶಂಕರೋ ನಿತ್ಯೋ ವರ್ಚಸ್ವೀ ಧೂಮಕೇತನಃ ।
ನೀಲಸ್ತಥಾಂಗಲುಬ್ಧಶ್ಚ ಶೋಭನೋ ನಿರವಗ್ರಹಃ ॥೮೧॥

ವೃಷಣಃ= ಶ್ರೇಷ್ಠ ಸುಖರೂಪನಾದವನು, ಶಂಕರಃ= ಮಂಗಳವನ್ನು ಮಾಡುವವನು, ವರ್ಚಸ್ವೀ= ಕಾಂತಿಮಯನು, ಧೂಮಕೇತನಃ= ಧೂಮಧ್ವಜನು, ನೀಲಃ= ನೀಲವರ್ಣದವನು, ಅಂಗಲುಬ್ಧಃ= ತನ್ನ ಅಂಗಗಳ ಸೌಂದರ್ಯದಲ್ಲಿ ಆಸಕ್ತನಾದವನು, ಶೋಭನಃ= ಶುಭರೂಪನಾದವನು, ನಿರವಗ್ರಹಃ= ಪ್ರತಿಬಂಧಕ ಇಲ್ಲದವನು.

ಸ್ವಸ್ತಿದಃ ಸ್ವಸ್ತಿಭಾವಶ್ಚ ಭಾಗೀ ಭಾಗಕರೋ ಲಘುಃ ।
ಉತ್ಸಂಗಶ್ಚ ಮಹಾಂಗಶ್ಚ ಮಹಾಗರ್ಭಃ ಪರಾಯಣಃ ॥೮೨॥

ಸ್ವಸ್ತಿದಃ= ಕ್ಷೇಮವನ್ನು ಮಾಡುವವನು, ಸ್ವಸ್ತಿಭಾವಃ= ಕ್ಷೇಮರೂಪಿ, ಭಾಗೀ= ಯಜ್ಞಭಾಗಕ್ಕೆ ಅರ್ಹನಾದವನು, ಭಾಗಕರಃ= ಭಾಗ ಮಾಡುವವನು, ಲಘುಃ= ಶೀಘ್ರನಾದವನು, ಉತ್ಸಂಗಃ= ಶ್ರೇಷ್ಠ ಸಹವಾಸ ಉಳ್ಳವನು, ಮಹಾಂಗಃ= ದೊಡ್ಡ ಅವಯವಗಳುಳ್ಳವನು, ಮಹಾಗರ್ಭಃ= ದೊಡ್ಡ ಗರ್ಭರೂಪನಾದವನು, ಪರಾಯಣಃ= ಉತ್ತಮ ಆಶ್ರಯನಾದವನು.

ಕೃಷ್ಣವರ್ಣಃ ಸುವರ್ಣಶ್ಚ ಇಂದ್ರಿಯಃ ಸರ್ವದೇಹಿನಾಮ್ ।
ಮಹಾಪಾದೋ ಮಹಾಹಸ್ತೋ ಮಹಾಕಾಯೋ ಮಹಾಯಶಾಃ ॥೮೩॥

ಕೃಷ್ಣವರ್ಣಃ= ಕಪ್ಪು ಬಣ್ಣದವನು, ಸುವರ್ಣಃ= ಒಳ್ಳೆಯ ಬಣ್ಣದವನು, ಸರ್ವದೇಹಿನಾಮ್ ಇಂದ್ರಿಯಃ= ಎಲ್ಲ ದೇಹಿಗಳ ಇಂದ್ರಿಯಗಳಲ್ಲಿ ಇರುವವನು, ಮಹಾಪಾದಃ= ದೊಡ್ಡ ಪಾದವುಳ್ಳವನು, ಮಹಾಹಸ್ತಃ= ದೊಡ್ಡ ಹಸ್ತವುಳ್ಳವನು, ಮಹಾಕಾಯಃ= ದೊಡ್ಡಶರೀರಧಾರಿ, ಮಹಾಯಶಃ= ದೊಡ್ಡ ಕೀರ್ತಿಯುಳ್ಳವನು.

ಮಹಾಮೂರ್ಧಾ ಮಹಾಮಾತ್ರೋ ಮಹಾನೇತ್ರೋ ದಿಗಾಲಯಃ ।
ಮಹಾದಂತೋ ಮಹಾಕರ್ಣೋ ಮಹಾಮೇಢ್ರೋ ಮಹಾಹನುಃ ॥

ಮಹಾಮೂರ್ಧಾ= ದೊಡ್ಡ ತಲೆಯುಳ್ಳವನು, ಮಹಾಮಾತ್ರಃ= ಪ್ರಧಾನನಾದವನು, ಮಹಾನೇತ್ರಃ= ವಿಶಾಲ ನೇತ್ರವುಳ್ಳವನು, ದಿಗಾಲಯಃ=

ದಿಕ್ಕುಗಳಲ್ಲಿ ವಾಸಿಸುವವನು, ಮಹಾದಂತಃ= ದೊಡ್ಡ ದಂತಗಳುಳ್ಳವನು, ಮಹಾಕರ್ಣಃ= ದೊಡ್ಡ ಕಿವಿಗಳುಳ್ಳವನು, ಮಹಾಮೇಢ್ರಃ= ದೊಡ್ಡ ಶಿಶ್ನವುಳ್ಳವನು, ಮಹಾಹನುಃ= ದೊಡ್ಡ ಗಲ್ಲವುಳ್ಳವನು.

ಮಹಾನಾಸೋ ಮಹಾಕಂಬುರ್ಮಹಾಗ್ರೀವಃ ಶ್ಮಶಾನಭಾಕ್ ।
ಮಹಾವಕ್ಷಾ ಮಹೋರಸ್ಕೋ ಅಂತರಾತ್ಮಾ ಮೃಗಾಲಯಃ ॥೮೫॥

ಮಹಾನಾಸಃ= ದೊಡ್ಡ ನಾಸಿಕವುಳ್ಳವನು, ಮಹಾಕಂಬುಃ= ದೊಡ್ಡ ಕಂಠವುಳ್ಳವನು, ಮಹಾಗ್ರೀವಃ= ದೊಡ್ಡ ಕತ್ತುಳ್ಳವನು, ಶ್ಮಶಾನಭಾಕ್= ಸ್ಮಶಾನದಲ್ಲಿ ನೆಲೆಸಿರುವವನು, ಮಹಾವಕ್ಷಾಃ= ದೊಡ್ಡ ವಕ್ಷಸ್ಥಲವುಳ್ಳವನು, ಮಹೋರಸ್ಕ= ದೊಡ್ಡ ಎದೆಯುಳ್ಳವನು, ಅಂತರಾತ್ಮಾ= ಜೀವರ ಒಳಗೆ ಇರುವವನು, ಮೃಗಾಲಯಃ= ಪ್ರಾಣಿಗಳಲ್ಲಿ ವಾಸಿಸುವವನು.

ಲಂಬನೋ ಲಂಬಿತೋಷ್ಠಶ್ಚ ಮಹಾಮಾಯಃ ಪಯೋನಿಧಿಃ ।
ಮಹಾದಂತೋ ಮಹಾದಂಷ್ಟ್ರೋ ಮಹಾಜಿಹ್ವೋ ಮಹಾಮುಖಃ॥೮೬॥

ಲಂಬನಃ= ಆಲಂಬನನಾದವನು, ಲಂಬಿತೋಷ್ಠಃ= ಸಂಹಾರಕನಾದ್ದರಿಂದ ದೊಡ್ಡ ತುಟಿಯುಳ್ಳವನು, ಮಹಾಮಾಯಃ= ಅನೇಕ ಸಾಮರ್ಥ್ಯವುಳ್ಳವನು, ಪಯೋನಿಧಿಃ= ಸಮುದ್ರದಲ್ಲಿರುವವನು, ಮಹಾದಂತಃ= ದೊಡ್ಡ ಹಲ್ಲುಳ್ಳವನು, ಮಹಾದಂಷ್ಟ್ರಃ= ದೊಡ್ಡ ಕೋರೆದಂತವುಳ್ಳವನು, ಮಹಾಜಿಹ್ವಃ= ದೊಡ್ಡ ನಾಲಿಗೆಯುಳ್ಳವನು, ಮಹಾಮುಖಃ= ದೊಡ್ಡ ಮುಖವುಳ್ಳವನು.

ಮಹಾನಖೋ ಮಹಾರೋಮಾ ಮಹಾಕೇಶೋ ಮಹಾಜಟಃ ।
ಪ್ರಸನ್ನಶ್ಚ ಪ್ರಸಾದಶ್ಚ ಪ್ರತ್ಯಯೋ ಗಿರಿಸಾಧನಃ ॥೮೭॥

ಮಹಾನಖಃ= ಶ್ರೇಷ್ಠವಾದ ನಖವುಳ್ಳವನು, ಮಹಾರೋಮಾ= ಶ್ರೇಷ್ಠವಾದ ರೋಮವುಳ್ಳವನು, ಮಹಾಕೇಶ= ಶ್ರೇಷ್ಠವಾದ ತಲೆಕೂದಲುಗಳನ್ನುಳ್ಳವನು, ಮಹಾಜಟಃ= ಶ್ರೇಷ್ಠವಾದ ಜಟೆಯನ್ನುಳ್ಳವನು, ಪ್ರಸನ್ನಃ= ಪ್ರಸನ್ನನಾದವನು, ಪ್ರಸಾದಃ= ಸುಖರೂಪನಾದವನು, ಪ್ರತ್ಯಯಃ= ಜ್ಞಾನರೂಪನಾದವನು, ಗಿರಿಸಾಧನಃ= ಪರ್ವತವೇ ಆಯುಧವಾಗಿ ಉಳ್ಳವನು.

ಸ್ನೇಹನೋಽಸ್ನೇಹನಶ್ಚೈವ ಅಜಿತಶ್ಚ ಮಹಾಮುನಿಃ ।
ವೃಕ್ಷಾಕಾರೋ ವೃಕ್ಷಕೇತುರನಲೋ ವಾಯುವಾಹನಃ ॥೮೮॥

ಸ್ನೇಹನಃ= ಭಕ್ತರಲ್ಲಿ ಸ್ನೇಹವುಳ್ಳವನು, ಅಸ್ನೇಹನಃ= ಅಭಕ್ತರಲ್ಲಿ ಸ್ನೇಹವಿಲ್ಲದವನು, ಅಜಿತಃ= ಪರಾಜಿತನಾಗದವನು, ಮಹಾಮುನಿಃ= ಬಹಳ ಮನನಶೀಲನಾದವನು, ವೃಕ್ಷಾಕಾರಃ= ವೃಕ್ಷದ ಆಕಾರವನ್ನು ಹೊಂದಿದವನು, ವೃಕ್ಷಕೇತುಃ= ವೃಕ್ಷಧ್ವಜನಾದವನು, ಅನಲಃ= ಅಗ್ನಿ, ವಾಯುವಾಹನಃ= ವಾಯುವನ್ನು ವಾಹನವಾಗಿ ಹೊಂದಿದವನು.

ಮಂಡಲೀ ಮೇರುಧಾಮಾ ಚ ದೇವಾಧಿಪತಿರೇವ ಚ ।
ಅಥರ್ವಶೀರ್ಷಃ ಸಾಮಾಸ್ಯ ಋಕ್ಸಹಸ್ರಾಮಿತೇಕ್ಷಣಃ ॥೮೯॥

ಮಂಡಲೀ= ಭೂಮಂಡಲದಲ್ಲಿರುವವನು, ಮೇರುಧಾಮಾ= ಮೇರು ಪರ್ವತವನ್ನು ಮನೆಯಾಗಿ ಹೊಂದಿದವನು, ದೇವಾಧಿಪತಿಃ= ದೇವತೆಗಳಿಗೆ ಒಡೆಯ, ಅಥರ್ವಶೀರ್ಷಃ= ಅಥರ್ವವೇದವನ್ನು ಶಿರಸ್ಸಿನಲ್ಲಿ ಧರಿಸಿದವನು, ಸಾಮಾಸ್ಯಃ= ಸಾಮವೇದವು ಮುಖವನ್ನು ಆಶ್ರಯಿಸಿದೆ, ಋಕ್ಸಹಸ್ರಾಮಿತೇಕ್ಷಣಃ= ಸಹಸ್ರ ಋಕ್ ಮಂತ್ರಗಳು ಅವನ ನೇತ್ರವನ್ನು ಆಶ್ರಯಿಸಿವೆ.

ಯಜುಃಪಾದಭುಜೋ ಗುಹ್ಯಃ ಪ್ರಕಾಶೋ ಜಂಗಮಸ್ತಥಾ ।
ಅಮೋಘಾರ್ಥಃ ಪ್ರಸಾದಶ್ಚ ಅಭಿಗಮ್ಯಃ ಸುದರ್ಶನಃ ॥೯೦॥

ಯಜುಃಪಾದಭುಜಃ= ಯಜುಸ್ಸುಗಳು ಅವನ ಪಾದ ಮತ್ತು ಭುಜಗಳು, ಗುಹ್ಯಃ= ರಹಸ್ಯನಾದವನು, ಪ್ರಕಾಶಃ- ಪ್ರಕಾಶರೂಪನಾದವನು, ಜಂಗಮಃ= ಚಲಿಸುವ ರೂಪವನ್ನು ಧರಿಸಿದವನು, ಅಮೋಘಾರ್ಥಃ= ಭಕ್ತರ ಪ್ರಾರ್ಥನೆಯನ್ನು ವ್ಯರ್ಥ ಮಾಡದವನು, ಪ್ರಸಾದಃ= ಅನುಗ್ರಹಕರ್ತಾ, ಅಭಿಗಮ್ಯಃ= ಭಕ್ತರಿಂದ ಹೊಂದಲ್ಪಡುವವನು, ಸುದರ್ಶನಃ= ಸುಂದರ.

ಉಪಹಾರಪ್ರಿಯಃ ಶರ್ವಃ ಕನಕಃ ಕಾಂಚನಚ್ಛವಿಃ ।
ನಾಭಿರ್ನಂದಿಕರೋ ಭಾವ್ಯಃ ಪುಷ್ಕರಸ್ಥಪತಿಃ ಸ್ಥಿರಃ ॥೯೧॥

ಉಪಹಾರಪ್ರಿಯಃ= ಪೂಜೆಯಿಂದ ಸಂತೋಷ ಪಡುವವನು, ಶರ್ವಃ= ಶರ್ವನಾಮಕನು, ಕನಕಃ= ಸುವರ್ಣರೂಪಿ, ಕಾಂಚನಚ್ಛವಿಃ= ಸುವರ್ಣಕಾಂತಿಯನ್ನು

ಹೊಂದಿದವನು, ನಾಭಿಃ= ಜಗತ್ತಿಗೆ ಮೂಲನಾದವನು, ಭಾವ್ಯಃ= ಭಕ್ತಿಗೆ ವಿಷಯನಾದವನು, ಪುಷ್ಕರಸ್ಥಪತಿಃ= ಬ್ರಹ್ಮಾಂಡ ರೂಪವಾದ ಕಮಲವನ್ನು ಮಾಡಿದ ಬಡಗಿ, ಸ್ಥಿರಃ= ಶಾಶ್ವತನು.

ದ್ವಾದಶಸ್ತ್ರಾಸನಶ್ಚಾದ್ಯೋ ಯಜ್ಞೋ ಯಜ್ಞಸಮಾಹಿತಃ ।
ನಕ್ತಂ ಕಲಿಶ್ಚ ಕಾಲಶ್ಚ ಮಕರಃ ಕಾಲಪೂಜಿತಃ ॥೯೨॥

ದ್ವಾದಶಃ= ಗರ್ಭವಾಸಾದಿಗಳಿಂದ ಎಣಿಸಿದರೆ ಮೋಕ್ಷವು ಹನ್ನೆರಡನೆಯದು ಅಂತಹ ಮೋಕ್ಷಪ್ರದನು, ತ್ರಾಸನಃ= ಅಭಕ್ತರನ್ನು ಹೆದರಿಸುವವನು, ಆದ್ಯಃ= ಮೊದಲನೆಯವನು, ಯಜ್ಞಃ= ಯಜ್ಞರೂಪಿ, ಯಜ್ಞಸಮಾಹಿತಃ= ಯಜ್ಞದಲ್ಲಿ ಸನ್ನಿಹಿತನಾದವನು, ನಕ್ತಂ= ರಾತ್ರಿ ಪ್ರವರ್ತಕನಾದವನು, ಕಲಿಃ= ಪರಾಕ್ರಮಿ, ಕಾಲಃ= ಕಾಲನಿಯಾಮಕ, ಮಕರಃ= ಶಿಂಶುಮಾರರೂಪನಾದವನು, ಕಾಲಪೂಜಿತಃ= ಮೃತ್ಯುವಿನಿಂದ ಪೂಜಿಸಲ್ಪಡುವವನು.

ಸಗಣೋ ಗಣಕಾರಶ್ಚ ಭೂತಭಾವನಸಾರಥಿಃ ।
ಭಸ್ಮಶಾಯೀ ಭಸ್ಮಗೋಪ್ತಾ ಭಸ್ಮಭೂತಸ್ತರುರ್ಗಣಃ ॥೯೩॥

ಸಗಣಃ= ಗಣದಿಂದ ಕೂಡಿದವನು, ಗಣಕಾರಃ= ಗಣಗಳನ್ನು ಮಾಡುವವನು, ಭೂತಭಾವನಸಾರಥಿಃ= ತ್ರಿಪುರಾಸುರ ಸಂಹಾರಕಾಲದಲ್ಲಿ ಬ್ರಹ್ಮನನ್ನು ಸಾರಥಿಯನ್ನಾಗಿ ಮಾಡಿಕೊಂಡವನು, ಭಸ್ಮಶಾಯೀ= ಭಸ್ಮದಲ್ಲಿ ಮಲಗುವವನು, ಭಸ್ಮಗೋಪ್ತಾ= ಭಸ್ಮದಿಂದ ರಕ್ಷಿಸುವವನು, ಭಸ್ಮಭೂತಃ= ಭಸ್ಮದಲ್ಲಿ ಇರುವವನು, ತರುಃ= ಕಲ್ಪವೃಕ್ಷ ಸ್ವರೂಪನು, ಗಣಃ= ನಂದಿ ಮೊದಲಾದ ಗಣಗಳನ್ನು ಹೊಂದಿದವನು.

ಲೋಕಪಾಲಸ್ತಥಾಽಲೋಕೋ ಮಹಾತ್ಮಾ ಸರ್ವಪೂಜಿತಃ ।
ಶಂಕುಸ್ತ್ರಿಶಂಕುಃ ಸಂಪನ್ನಃ ಶುಚಿರ್ಭೂತನಿಷೇವಿತಃ ॥೯೪॥

ಲೋಕಪಾಲಃ= ಲೋಕಪಾಲಕನಾದವನು, ಅಲೋಕಃ= ಲೋಕವಿಲಕ್ಷಣನಾದವನು, ಮಹಾತ್ಮ= ಮಹಾತ್ಮನು, ಸರ್ವಪೂಜಿತಃ= ಎಲ್ಲರಿಂದ ಪೂಜಿತನು, ಶಂಕುಃ= ಶಂಕುರೂಪನಾದವನು, ತ್ರಿಶಂಕುಃ= ತ್ರಿಶಂಕುರೂಪಿ, ಸಂಪನ್ನಃ= ಗುಣಭರಿತನಾದವನು, ಶುಚಿಃ= ಶುದ್ಧನಾದವನು, ಭೂತನಿಷೇವಿತಃ= ಭೂತಗಳಿಂದ ಸೇವಿಸಲ್ಪಡುವವನು.

ಆಶ್ರಮಸ್ಥಃ ಕಪೋತಸ್ಥೋ ವಿಶ್ವಕರ್ಮಾ ಪತಿರ್ವರಃ ।
ಶಾಖೋ ವಿಶಾಖಸ್ತಾಮ್ರೋಷ್ಠೋ ಹ್ಯಂಬುಜಾಲಃ ಸುನಿಶ್ಚಯಃ ॥೯೫॥

ಆಶ್ರಮಸ್ಥಃ= ಎಲ್ಲ ಆಶ್ರಮಗಳಲ್ಲಿಯೂ ಇರುವವನು, ಕಪೋತಸ್ಥಃ= ಪಾರಿವಾಳದಲ್ಲಿ ಇರುವವನು, ವಿಶ್ವಕರ್ಮಾ= ಎಲ್ಲ ಕರ್ಮಗಳನ್ನೂ ಮಾಡುವವನು, ಪತಿಃ= ಒಡೆಯನಾದವನು, ವರಃ= ಶ್ರೇಷ್ಠನಾದವನು, ಶಾಖಃ= ಅನೇಕ ರೂಪವುಳ್ಳವನು, ವಿಶಾಖಃ= ಅನೇಕ ಭಾಗವುಳ್ಳವನು, ತಾಮ್ರೋಷ್ಠಃ= ಕೆಂಪಾದ ತುಟಿಯುಳ್ಳವನು, ಅಂಬುಜಾಲಃ= ಸಮುದ್ರದಲ್ಲಿ ಇರುವವನು, ಸುನಿಶ್ಚಯಃ= ನಿಶ್ಚಯ ಜ್ಞಾನರೂಪನಾದವನು.

ಕಪಿಲೋಽಕಪಿಲಃ ಶೂರ ಆಯುಶ್ಚೈವ ಪರೋಽಪರಃ ।
ಗಂಧರ್ವೋ ಹ್ಯದಿತಿಸ್ತಾರ್ಕ್ಷ್ಯಃ ಸುವಿಜ್ಞೇಯಃ ಸುಸಾರಥಿಃ ॥೯೬॥

ಕಪಿಲಃ= ಕಪಿಲವರ್ಣದವನು, ಅಕಪಿಲಃ= ಕಪಿಲೇತರ ವರ್ಣದವನು, ಶೂರಃ= ಶೂರನಾದವನು, ಆಯುಃ= ಆಯುಃಪ್ರದ, ಪರಃ= ಶ್ರೇಷ್ಠರಲ್ಲಿ ಇರುವವನು, ಅಪರಃ= ಕನಿಷ್ಠರಲ್ಲಿ ಇರುವವನು, ಗಂಧರ್ವಃ= ಗಂಧರ್ವರಲ್ಲಿ ಇರುವವನು, ಅದಿತಿ= ಅದಿತಿಯಲ್ಲಿ ಇರುವವನು, ತಾರ್ಕ್ಷ್ಯಃ= ಗರುಡನಲ್ಲಿ ಇರುವವನು, ಸುವಿಜ್ಞೇಯಃ= ಚೆನ್ನಾಗಿ ತಿಳಿಯಲ್ಪಡುವವನು, ಸುಸಾರಥಿಃ= ಒಳ್ಳೆಯ ಸಾರಥಿಯನ್ನು ಹೊಂದಿದವನು.

ಪರಶ್ವಧಾಯುಧೋ ದೇವ ಅರ್ಥಕಾರೀ ಸುಬಾಂಧವಃ ।
ತುಂಬವೀಣೀ ಮಹಾಕೋಪ ಊರ್ಧ್ವರೇತಾ ಜಲೇಶಯಃ ॥೯೭॥

ಪರಶ್ವಧಾಯುಧಃ= ಗಂಡು ಕೊಡಲಿಯನ್ನು ಆಯುಧವಾಗಿ ಉಳ್ಳವನು, ದೇವಃ= ಕ್ರೀಡಾದಿ ವಿಶಿಷ್ಟನಾದವನು, ಅರ್ಥಕಾರೀ= ಪುರುಷಾರ್ಥಪ್ರದನಾದವನು, ಸುಬಾಂಧವಃ= ಒಳ್ಳೆಯ ಬಂಧುಗಳನ್ನು ಹೊಂದಿದವನು, ತುಂಬವೀಣೀ= ತುಂಬ ವೀಣೆಯನ್ನು ನುಡಿಸುವವನು, ಮಹಾಕೋಪಃ= ಬಹಳ ಕೋಪವನ್ನು ಹೊಂದಿದವನು, ಊರ್ಧ್ವರೇತಃ= ಮೇಲ್ಮುಖವಾದ ವೀರ್ಯವುಳ್ಳವನು, ಜಲೇಶಯಃ= ನೀರಿನಲ್ಲಿ ಮಲಗಿದವನು.

ಉಗ್ರೋ ವಂಶಕರೋ ವಂಶೋ ವಂಶನಾದೋ ಹ್ಯನಿಂದಿತಃ ।
ಸರ್ವಾಂಗರೂಪೋ ಮಾಯಾವೀ ಸುಹೃದೋ ಹ್ಯನಿಲೋಽನಲಃ ॥೯೮॥

ಉಗ್ರಃ= ಉಗ್ರನಾದವನು, ವಂಶಕರಃ= ವಂಶವನ್ನು ಉಂಟು ಮಾಡುವವನು, ವಂಶಃ= ವಂಶಸ್ವರೂಪನಾದವನು, ವಂಶನಾದಃ= ವೇಣುನಾದ ರೂಪನಾದವನು, ಅನಿಂದಿತಃ= ದೋಷವಿಲ್ಲದವನು, ಸರ್ವಾಂಗರೂಪಃ= ಸರ್ವಾಂಗಗಳಲ್ಲಿಯೂ ಒಳ್ಳೆಯ ರೂಪವನ್ನು ಹೊಂದಿದವನು, ಮಾಯಾವೀ= ಸಾಮರ್ಥ್ಯವನ್ನು ಹೊಂದಿದವನು, ಸುಹೃದಃ= ಒಳ್ಳೆಯ ಹೃದಯವುಳ್ಳವನು, ಅನಿಲಃ= ವಾಯುರೂಪಿ, ಅನಲಃ= ಅಗ್ನಿರೂಪಿ.

ಬಂಧನೋ ಬಂಧಕರ್ತಾ ಚ ಸುಬಂಧನವಿಮೋಚನಃ ।
ಸ ಯಜ್ಞಾರಿಃ ಸ ಕಾಮಾರಿರ್ಮಹಾದಂಷ್ಟ್ರೋ ಮಹಾಯುಧಃ ॥೯೯॥

ಬಂಧನಃ= ಬಂಧನರೂಪನಾದವನು, ಬಂಧಕರ್ತಾ= ಬಂಧನವನ್ನುಂಟು ಮಾಡುವವನು, ಸುಬಂಧನವಿಮೋಚನಃ= ಒಳ್ಳೆಯ ಬಂಧನವನ್ನು ಬಿಡಿಸುವವನು, ಯಜ್ಞಾರಿಃ= ದಕ್ಷಯಜ್ಞಕ್ಕೆ ಶತ್ರುವಾದವನು, ಕಾಮಾರಿಃ= ಮನ್ಮಥ ಶತ್ರು, ಮಹಾದಂಷ್ಟ್ರಃ= ದೊಡ್ಡ ದಂತಗಳನ್ನು ಹೊಂದಿದವನು, ಮಹಾಯುಧಃ= ದೊಡ್ಡ ಆಯುಧವುಳ್ಳವನು.

ಬಾಹುಸ್ತ್ವನಿಂದಿತಃ ಶರ್ವಃ ಶಂಕರಃ ಶಂಕರೋಽಧನಃ ।
ಅಮರೇಶೋ ಮಹಾದೇವೋ ವಿಶ್ವದೇವಃ ಸುರಾರಿಹಾ ॥೧೦೦॥

ಬಾಹುಃ= ಬಾಹುಸ್ವರೂಪನಾದವನು, ಅನಿಂದಿತಃ= ನಿಂದಿತನಲ್ಲದವನು, ಶರ್ವಃ= ಸಂಹಾರಕನಾದವನು, ಶಂಕರಃ= ಸುಖಕರನಾದವನು, ಶಂಕರಃ= ಮಂಗಳಕರನು, ಅಧನಃ= ಹೇಯವಾದ ಧನದಿಂದ ರಹಿತನಾದವನು, ಅಮರೇಶಃ= ದೇವತೆಗಳಿಗೆ ಒಡೆಯ, ಮಹಾದೇವಃ= ಮಹಾದೇವನು, ವಿಶ್ವದೇವಃ= ವಿಶ್ವಕ್ಕೆ ದೇವನಾದವನು, ಸುರಾರಿಹಾ= ದೇವತೆಗಳ ಶತ್ರುಗಳನ್ನು ಕೊಲ್ಲುವವನು.

ಅಹಿರ್ಬುಧ್ನೋ ನಿರ್ಋತಿಶ್ಚ ಚೇಕಿತಾನೋ ಹರಿಸ್ತಥಾ ।
ಅಜೈಕಪಾಚ್ಚ ಕಾಪಾಲೀ ತ್ರಿಶಂಕುರಜಿತಃ ಶಿವಃ ॥೧೦೧॥

ಅಹಿರ್ಬುಧ್ನಃ= ಶ್ರೇಷ್ಠಸ್ವರೂಪನಾದವನು, ನಿರ್ಋತಿಃ= ಶತ್ರುಗಳಿಗೆ ಹಿಂಸಕನಾದವನು, ಚೇಕಿತಾನಃ= ಬಹುಜ್ಞಾನವುಳ್ಳವನು, ಹರಿಃ= ಪಾಪಹಾರಕನಾದವನು, ಅಜೈಕಪಾತ್= ಅನೇಕ ಪಾದಗಳುಳ್ಳವನು, ಕಾಪಾಲಿ=

ಕಪಾಲವನ್ನು ಧರಿಸಿದವನು, ತ್ರಿಶಂಕುಃ= ಮೂರು ಲೋಕಗಳನ್ನು ವ್ಯಾಪಿಸಿದವನು, ಅಜಿತಃ= ಸೋಲಿಲ್ಲದವನು, ಶಿಖಿಃ= ಶುಭಕರನು.

ಧನ್ವಂತರಿರ್ಧೂಮಕೇತುಃ ಸ್ಕಂದೋ ವೈಶ್ರವಣಸ್ತಥಾ ।
ಧಾತಾ ಶಕ್ರಶ್ಚ ವಿಷ್ಣುಶ್ಚ ಮಿತ್ರಸ್ತ ಷ್ಟಾ ಧ್ರುವೋ ಧರಃ ॥೧೦೨॥

ಧನ್ವಂತರಿಃ= ಮಹಾವೈದ್ಯನಾದವನು, ಧೂಮಕೇತುಃ= ಅಗ್ನಿಸ್ವರೂಪನು, ಸ್ಕಂದಃ= ಷಣ್ಮುಖಸ್ವರೂಪನು, ವೈಶ್ರವಣಃ= ಕುಬೇರಸ್ವರೂಪನು, ಧಾತಾ= ಬ್ರಹ್ಮಸ್ವರೂಪನು, ಶಕ್ರಃ= ಇಂದ್ರಸ್ವರೂಪನು, ವಿಷ್ಣುಃ= ವಿಷ್ಣುಸ್ವರೂಪನು, ಮಿತ್ರಃ= ಮಿತ್ರಸ್ವರೂಪನು, ತ್ವಷ್ಟಾ= ತ್ವಷ್ಟೃಸ್ವರೂಪನು, ಧ್ರುವಃ= ಧ್ರುವಸ್ವರೂಪನು, ಧರಃ= ಧರಸ್ವರೂಪನು (ಧರ ಮೊದಲಾದ ಅಷ್ಟವಸುಗಳಲ್ಲಿ ಇರುವವನು).

ಪ್ರಭಾವಃ ಸರ್ವಗೋ ವಾಯುರರ್ಯಮಾ ಸವಿತಾ ರವಿಃ ।
ಉಷಂಗುಶ್ಚ ವಿಧಾತಾ ಚ ಮಾಂಧಾತಾ ಭೂತಭಾವನಃ ॥೧೦೩॥

ಪ್ರಭಾವಃ= ಒಳ್ಳೆಯ ಸಾಮರ್ಥ್ಯವುಳ್ಳವನು, ಸರ್ವಗಃ= ಸರ್ವಸಂಚಾರಿ, ವಾಯುಃ= ವಾಯುಸ್ವರೂಪನು, ಅರ್ಯಮಾ= ಅರ್ಯಮಸ್ವರೂಪಿ, ಸವಿತಾ= ಜಗತ್ತನ್ನು ಪ್ರಸವಿಸುವವನು, ರವಿಃ= ಸೂರ್ಯ, ಉಷಂಗುಃ= ಅಗ್ನಿಕಿರಣನಾದವನು, ವಿಧಾತಾ= ವಿಧವಿಧವಾದ ರೂಪ ಧಾರಣೆಯನ್ನು ಮಾಡುವವನು, ಮಾಂಧಾತಾ= ಮಾಂಧಾತೃ ಮೊದಲಾದ ರಾಜರಲ್ಲಿ ಇರುವವನು, ಭೂತಭಾವನಃ= ಎಲ್ಲ ಜೀವಿಗಳಿಂದ ಪ್ರಾರ್ಥಿತನು.

ವಿಭುರ್ವರ್ಣವಿಭಾವೀ ಚ ಸರ್ವಕಾಮಗುಣಾವಹಃ ।
ಪದ್ಮಗರ್ಭೋ ಮಹಾಗರ್ಭಶ್ಚಂದ್ರವಕ್ತ್ರೋ ಮನೋರಮಃ ॥೧೦೪॥

ವಿಭುಃ= ವ್ಯಾಪ್ತನು, ವರ್ಣವಿಭಾವೀ= ಅನೇಕ ವರ್ಣಗಳನ್ನು ತೋರಿಸುವವನು, ಸರ್ವಕಾಮ- ಗುಣಾವಹಃ= ಬಯಸಿದ ಎಲ್ಲ ಗುಣಗಳನ್ನೂ ತಂದುಕೊಡುವವನು, ಪದ್ಮಗರ್ಭಃ= ಪದ್ಮವನ್ನು ಗರ್ಭದಲ್ಲಿ ಧರಿಸಿದವನು, ಮಹಾಗರ್ಭಃ= ದೊಡ್ಡ ಗರ್ಭವುಳ್ಳವನು, ಚಂದ್ರವಕ್ತ್ರಃ= ಚಂದ್ರನಂತಹ ಮುಖವುಳ್ಳವನು, ಮನೋರಮಃ= ಮನಸ್ಸಿಗೆ ಸಂತೋಷವನ್ನು ಕೊಡುವವನು.

ಬಲವಾಂಶ್ಚೋಪಶಾಂತಶ್ಚ ಪುರಾಣಃ ಪುಣ್ಯಚಂಚುರೀ ।
ಕುರುಕರ್ತಾ ಕಾಲರೂಪೀ ಕುರುಭೂತೋ ಮಹೇಶ್ವರಃ ॥೧೦೫॥

ಬಲವಾನ್= ಬಲಿಷ್ಠನಾದವನು, ಉಪಶಾಂತಃ= ಶಾಂತಸ್ವಭಾವದವನು, ಪುರಾಣಃ= ಪ್ರಾಚೀನನಾದವನು, ಪುಣ್ಯಚಂಚುರೀ= ಪುಣ್ಯಗಳನ್ನು ಮಾಡಿಸುವವನು, ಕುರುಕರ್ತಾ= ಕುರುಕ್ಷೇತ್ರವನ್ನು ಮಾಡಿದವನು, ಕಾಲರೂಪೀ= ಕಾಲರೂಪನಾದವನು, ಕುರುಭೂತಃ= ಕುರುಕ್ಷೇತ್ರದಲ್ಲಿ ಇರುವವನು, ಮಹೇಶ್ವರಃ= ಮಹೇಶ್ವರನು.

ಸರ್ವಾಶಯೋ ದರ್ಭಶಾಯೀ ಸರ್ವೇಷಾಂ ಪ್ರಾಣಿನಾಂ ಪತಿಃ ।
ದೇವದೇವಮುಖೋಽಸಕ್ತಃ ಸದಸತ್ಸರ್ವರತ್ನವಿತ್ ॥೧೦೬॥

ಸರ್ವಾಶಯಃ= ಎಲ್ಲರಿಗೂ ಆಶ್ರಯನಾದವನು, ದರ್ಭಶಾಯೀ= ದರ್ಭೆಗಳ ಮೇಲೆ ಮಲಗಿದವನು, ಸರ್ವೇಷಾಂ ಪ್ರಾಣಿನಾಂ ಪತಿಃ= ಎಲ್ಲ ಪ್ರಾಣಿಗಳಿಗೂ ಒಡೆಯನಾದವನು, ದೇವದೇವಮುಖಃ= ದೇವ-ದೇವತೆಗಳಿಗಿಂತಲೂ ಪ್ರಧಾನನಾದವನು, ಅಸಕ್ತಃ= ಲೇಪರಹಿತನಾದವನು, ಸದಸತ್= ಕಾರ್ಯ-ಕಾರಣ ರೂಪಿಯಾದವನು, ಸರ್ವರತ್ನವಿತ್= ಎಲ್ಲ ರತ್ನಗಳನ್ನೂ ಪಡೆದವನು.

ಕೈಲಾಸಶಿಖಿರಾವಾಸೀ ಹಿಮವದ್ಗಿರಿಸಂಶ್ರಯಃ ।
ಕೂಲಹಾರೀ ಕೂಲಕರ್ತಾ ಬಹುವಿದ್ಯೋ ಬಹುಪ್ರದಃ ॥೧೦೭॥

ಕೈಲಾಸಶಿಖಿರಾವಾಸೀ= ಕೈಲಾಸ ಶಿಖರದಲ್ಲಿ ವಾಸಿಸುವವನು, ಹಿಮವದ್ಗಿರಿ ಸಂಶಯಃ= ಹಿಮವದ್ಗಿರಿಯಲ್ಲಿ ವಾಸಿಸುವವನು, ಕೂಲಹಾರೀ= ಪ್ರವಾಹದಿಂದ ನದಿಗಳ ಕೂಲವನ್ನು ಅಪಹರಿಸುವವನು, ಕೂಲಕರ್ತಾ= ಕೂಲ(ದಂಡೆ)ಗಳನ್ನು ನಿರ್ಮಿಸುವವನು, ಬಹುವಿದ್ಯಃ= ಬಹಳ ವಿದ್ಯೆಗಳನ್ನು ಬಲ್ಲವನು, ಬಹುಪ್ರದಃ= ಬಹಳವನ್ನು ಕೊಡುವವನು.

ವಣಿಜೋ ವರ್ಧನೋ ವೃಕ್ಷೋ ನಕುಲಶ್ಚಂದನಶ್ಛದಃ ।
ಸಾರಗ್ರೀವೋ ಮಹಾಜತ್ರುರಲೋಲಶ್ಚ ಮಹೌಷಧಃ ॥೧೦೮॥

ವಣಿಜಃ= ವೈಶ್ಯರಲ್ಲಿ ಇರುವವನು, ವರ್ಧನಃ= ಅಭಿವೃದ್ಧಿಶೀಲನಾದವನು, ವೃಕ್ಷಃ= ಸಂಸಾರ ಛೇದಕನಾದವನು, ನಕುಲಃ= ಮುಂಗುಸಿಯಲ್ಲಿರುವವನು, ಚಂದನಃ=

ಚಂದನ ವೃಕ್ಷದಲ್ಲಿರುವವನು, ಛದಃ= ಜಗತ್ತಿಗೆ ಆವರಣನಾದವನು, ಸಾರಗ್ರೀವಃ= ದೃಢವಾದ ಕತ್ತುಳ್ಳವನು, ಮಹಾಜತ್ರುಃ= ದೊಡ್ಡ ಭುಜಸಂಧಿಯುಳ್ಳವನು, ಅಲೋಲಃ= ಚಂಚಲನಾದವನು, ಮಹೌಷಧಃ= ಸಂಸಾರ ರೋಗಕ್ಕೆ ಔಷಧಿರೂಪನಾದವನು.

ಸಿದ್ಧಾರ್ಥಕಾರೀ ಸಿದ್ಧಾರ್ಥಶ್ಛಂದೋವ್ಯಾಕರಣೋತ್ತರಃ ।
ಸಿಂಹನಾದಃ ಸಿಂಹದಂಷ್ಟ್ರಃ ಸಿಂಹಗಃ ಸಿಂಹವಾಹನಃ ॥೧೦೯॥

ಸಿದ್ಧಾರ್ಥಕಾರೀ= ಸಿದ್ಧವಾದ ಅರ್ಥವನ್ನು ಮಾಡುವವನು, ಸಿದ್ಧಾರ್ಥಃ= ಸಿದ್ಧಿಸಿದ ಪುರುಷಾರ್ಥವುಳ್ಳವನು, ಛಂದೋವ್ಯಾಕರಣೋತ್ತರಃ= ಛಂದಸ್ಸು ಮತ್ತು ವ್ಯಾಕರಣ ಶಾಸ್ತ್ರವನ್ನು ಮೀರಿದವನು, ಸಿಂಹನಾದಃ= ಸಿಂಹದಂತಹ ನಾದವುಳ್ಳವನು, ಸಿಂಹದಂಷ್ಟ್ರಃ= ಸಿಂಹದಂತಹ ಕೋರೆದಾಡೆಯುಳ್ಳವನು, ಸಿಂಹಗಃ= ಸಿಂಹದಲ್ಲಿ ಇರುವವನು, ಸಿಂಹವಾಹನಃ= ಸಿಂಹವನ್ನು ವಾಹನವಾಗಿ ಹೊಂದಿದವನು.

ಪ್ರಭಾವಾತ್ಮಾ ಜಗತ್ಕಾಲಸ್ತಾಲೋ ಲೋಕಹಿತಸ್ತರುಃ ।
ಸಾರಂಗೋ ನವಚಕ್ರಾಂಗಃ ಕೇತುಮಾಲೀ ಸಭಾವನಃ ॥೧೧೦॥

ಪ್ರಭಾವಾತ್ಮಾ= ಪ್ರಭಾವಶಾಲಿಯಾದ ದೇಹವನ್ನು ಹೊಂದಿದವನು, ಜಗತ್ಕಾಲಃ= ಜಗತ್ತಿಗೆ ಬಂಧನ, ಸಂಹಾರಗಳನ್ನು ಮಾಡುವವನು, ತಾಲಃ= ತಾಳಪ್ರವರ್ತಕನಾದವನು, ಲೋಕಹಿತಃ= ಲೋಕಕ್ಕೆ ಹಿತನಾದವನು, ತರುಃ= ಕಷ್ಟದಿಂದ ದಾಟಿಸುವವನು, ಸಾರಂಗಃ= ಸಾರಂಗರೂಪನಾದವನು, ನವಚಕ್ರಾಂಗಃ= ಎಳೆಯ ಹಂಸರೂಪವನ್ನು ಧರಿಸಿರುವವನು, ಕೇತುಮಾಲೀ= ಧ್ವಜಗಳಿಂದ ಅಲಂಕೃತನಾದವನು, ಸಭಾವನಃ= ಸಭೆಯನ್ನು ರಕ್ಷಿಸುವವನು.

ಭೂತಾಲಯೋ ಭೂತಪತಿರಹೋರಾತ್ರಮನಿಂದಿತಃ ।
ವಾಹಿತಾ ಸರ್ವಭೂತಾನಾಂ ನಿಲಯಶ್ಚ ವಿಭುರ್ಭವಃ ॥೧೧೧॥

ಭೂತಾಲಯಃ= ಎಲ್ಲ ಪ್ರಾಣಿಗಳಿಗೂ ಆಶ್ರಯನಾದವನು, ಭೂತಪತಿಃ= ಭೂತಗಳಿಗೆ ಒಡೆಯ, ಅಹೋರಾತ್ರಂ= ಹಗಲು-ರಾತ್ರಿಗಳ ಪ್ರವರ್ತಕ, ಅನಿಂದಿತಃ= ಅನಿಂದಿತನು, ವಾಹಿತಾ= ಎಲ್ಲವನ್ನೂ ನಡೆಸುವವನು, ಸರ್ವಭೂತಾನಾಂ ನಿಲಯಃ= ಎಲ್ಲ ಪ್ರಾಣಿಗಳಿಗೆ ಆಶ್ರಯನಾದವನು, ವಿಭುಃ= ವ್ಯಾಪ್ತನಾದವನು, ಭವಃ= ಐಶ್ವರ್ಯರೂಪನಾದವನು.

ಬಲವಾಂಶ್ಚೋಪಶಾಂತಶ್ಚ ಪುರಾಣಃ ಪುಣ್ಯಚಂಚುರೀ ।
ಕುರುಕರ್ತಾ ಕಾಲರೂಪೀ ಕುರುಭೂತೋ ಮಹೇಶ್ವರಃ ॥೧೦೫॥

ಬಲವಾನ್= ಬಲಿಷ್ಠನಾದವನು, ಉಪಶಾಂತಃ= ಶಾಂತಸ್ವಭಾವದವನು, ಪುರಾಣಃ= ಪ್ರಾಚೀನನಾದವನು, ಪುಣ್ಯಚಂಚುರೀ= ಪುಣ್ಯಗಳನ್ನು ಮಾಡಿಸುವವನು, ಕುರುಕರ್ತಾ= ಕುರುಕ್ಷೇತ್ರವನ್ನು ಮಾಡಿದವನು, ಕಾಲರೂಪೀ= ಕಾಲರೂಪನಾದವನು, ಕುರುಭೂತಃ= ಕುರುಕ್ಷೇತ್ರದಲ್ಲಿ ಇರುವವನು, ಮಹೇಶ್ವರಃ= ಮಹೇಶ್ವರನು.

ಸರ್ವಾಶಯೋ ದರ್ಭಶಾಯೀ ಸರ್ವೇಷಾಂ ಪ್ರಾಣಿನಾಂ ಪತಿಃ ।
ದೇವದೇವಮುಖೋಽಸಕ್ತಃ ಸದಸತ್ಸರ್ವರತ್ನವಿತ್ ॥೧೦೬॥

ಸರ್ವಾಶಯಃ= ಎಲ್ಲರಿಗೂ ಆಶ್ರಯನಾದವನು, ದರ್ಭಶಾಯೀ= ದರ್ಭೆಗಳ ಮೇಲೆ ಮಲಗಿದವನು, ಸರ್ವೇಷಾಂ ಪ್ರಾಣಿನಾಂ ಪತಿಃ= ಎಲ್ಲ ಪ್ರಾಣಿಗಳಿಗೂ ಒಡೆಯನಾದವನು, ದೇವದೇವಮುಖಃ= ದೇವ-ದೇವತೆಗಳಿಗಿಂತಲೂ ಪ್ರಧಾನನಾದವನು, ಅಸಕ್ತಃ= ಲೇಪರಹಿತನಾದವನು, ಸದಸತ್= ಕಾರ್ಯ-ಕಾರಣ ರೂಪಿಯಾದವನು, ಸರ್ವರತ್ನವಿತ್= ಎಲ್ಲ ರತ್ನಗಳನ್ನೂ ಪಡೆದವನು.

ಕೈಲಾಸಶಿಖಿರಾವಾಸೀ ಹಿಮವದ್ಗಿರಿಸಂಶ್ರಯಃ ।
ಕೂಲಹಾರೀ ಕೂಲಕರ್ತಾ ಬಹುವಿದ್ಯೋ ಬಹುಪ್ರದಃ ॥೧೦೭॥

ಕೈಲಾಸಶಿಖಿರಾವಾಸೀ= ಕೈಲಾಸ ಶಿಖರದಲ್ಲಿ ವಾಸಿಸುವವನು, ಹಿಮವದ್ಗಿರಿ ಸಂಶಯಃ= ಹಿಮವದ್ಗಿರಿಯಲ್ಲಿ ವಾಸಿಸುವವನು, ಕೂಲಹಾರೀ= ಪ್ರವಾಹದಿಂದ ನದಿಗಳ ಕೂಲವನ್ನು ಅಪಹರಿಸುವವನು, ಕೂಲಕರ್ತಾ= ಕೂಲ(ದಂಡೆ)ಗಳನ್ನು ನಿರ್ಮಿಸುವವನು, ಬಹುವಿದ್ಯಃ= ಬಹಳ ವಿದ್ಯೆಗಳನ್ನು ಬಲ್ಲವನು, ಬಹುಪ್ರದಃ= ಬಹಳವನ್ನು ಕೊಡುವವನು.

ವಣಿಜೋ ವರ್ಧನೋ ವೃಕ್ಷೋ ನಕುಲಶ್ಚಂದನಶ್ಛದಃ ।
ಸಾರಗ್ರೀವೋ ಮಹಾಜತ್ರುರಲೋಲಶ್ಚ ಮಹೌಷಧಃ ॥೧೦೮॥

ವಣಿಜಃ= ವೈಶ್ಯರಲ್ಲಿ ಇರುವವನು, ವರ್ಧನಃ= ಅಭಿವೃದ್ಧಿಶೀಲನಾದವನು, ವೃಕ್ಷಃ= ಸಂಸಾರ ಛೇದಕನಾದವನು, ನಕುಲಃ= ಮುಂಗುಸಿಯಲ್ಲಿರುವವನು, ಚಂದನಃ=

ಚಂದನ ವೃಕ್ಷದಲ್ಲಿರುವವನು, ಛದಃ= ಜಗತ್ತಿಗೆ ಆವರಣನಾದವನು, ಸಾರಗ್ರೀವಃ= ದೃಢವಾದ ಕತ್ತುಳ್ಳವನು, ಮಹಾಜತ್ರುಃ= ದೊಡ್ಡ ಭುಜಸಂಧಿಯುಳ್ಳವನು, ಅಲೋಲಃ= ಚಂಚಲನಾದವನು, ಮಹೌಷಧಃ= ಸಂಸಾರ ರೋಗಕ್ಕೆ ಔಷಧಿರೂಪನಾದವನು.

ಸಿದ್ಧಾರ್ಥಕಾರೀ ಸಿದ್ಧಾರ್ಥಶ್ಛಂದೋವ್ಯಾಕರಣೋತ್ತರಃ ।
ಸಿಂಹನಾದಃ ಸಿಂಹದಂಷ್ಟ್ರಃ ಸಿಂಹಗಃ ಸಿಂಹವಾಹನಃ ॥೧೦೯॥

ಸಿದ್ಧಾರ್ಥಕಾರೀ= ಸಿದ್ಧವಾದ ಅರ್ಥವನ್ನು ಮಾಡುವವನು, ಸಿದ್ಧಾರ್ಥಃ= ಸಿದ್ಧಿಸಿದ ಪುರುಷಾರ್ಥವುಳ್ಳವನು, ಛಂದೋವ್ಯಾಕರಣೋತ್ತರಃ= ಛಂದಸ್ಸು ಮತ್ತು ವ್ಯಾಕರಣ ಶಾಸ್ತ್ರವನ್ನು ಮೀರಿದವನು, ಸಿಂಹನಾದಃ= ಸಿಂಹದಂತಹ ನಾದವುಳ್ಳವನು, ಸಿಂಹದಂಷ್ಟ್ರಃ= ಸಿಂಹದಂತಹ ಕೋರೆದಾಡೆಯುಳ್ಳವನು, ಸಿಂಹಗಃ= ಸಿಂಹದಲ್ಲಿ ಇರುವವನು, ಸಿಂಹವಾಹನಃ= ಸಿಂಹವನ್ನು ವಾಹನವಾಗಿ ಹೊಂದಿದವನು.

ಪ್ರಭಾವಾತ್ಮಾ ಜಗತ್ಕಾಲಸ್ತಾಲೋ ಲೋಕಹಿತಸ್ತರುಃ ।
ಸಾರಂಗೋ ನವಚಕ್ರಾಂಗಃ ಕೇತುಮಾಲೀ ಸಭಾವನಃ ॥೧೧೦॥

ಪ್ರಭಾವಾತ್ಮಾ= ಪ್ರಭಾವಶಾಲಿಯಾದ ದೇಹವನ್ನು ಹೊಂದಿದವನು, ಜಗತ್ಕಾಲಃ= ಜಗತ್ತಿಗೆ ಬಂಧನ, ಸಂಹಾರಗಳನ್ನು ಮಾಡುವವನು, ತಾಲಃ= ತಾಳಪ್ರವರ್ತಕನಾದವನು, ಲೋಕಹಿತಃ= ಲೋಕಕ್ಕೆ ಹಿತನಾದವನು, ತರುಃ= ಕಷ್ಟದಿಂದ ದಾಟಿಸುವವನು, ಸಾರಂಗಃ= ಸಾರಂಗರೂಪನಾದವನು, ನವಚಕ್ರಾಂಗಃ= ಎಳೆಯ ಹಂಸರೂಪವನ್ನು ಧರಿಸಿರುವವನು, ಕೇತುಮಾಲೀ= ಧ್ವಜಗಳಿಂದ ಅಲಂಕೃತನಾದವನು, ಸಭಾವನಃ= ಸಭೆಯನ್ನು ರಕ್ಷಿಸುವವನು.

ಭೂತಾಲಯೋ ಭೂತಪತಿರಹೋರಾತ್ರಮನಿಂದಿತಃ ।
ವಾಹಿತಾ ಸರ್ವಭೂತಾನಾಂ ನಿಲಯಶ್ಚ ವಿಭುರ್ಭವಃ ॥೧೧೧॥

ಭೂತಾಲಯಃ= ಎಲ್ಲ ಪ್ರಾಣಿಗಳಿಗೂ ಆಶ್ರಯನಾದವನು, ಭೂತಪತಿಃ= ಭೂತಗಳಿಗೆ ಒಡೆಯ, ಅಹೋರಾತ್ರಂ= ಹಗಲು-ರಾತ್ರಿಗಳ ಪ್ರವರ್ತಕ, ಅನಿಂದಿತಃ= ಅನಿಂದಿತನು, ವಾಹಿತಾ= ಎಲ್ಲವನ್ನೂ ನಡೆಸುವವನು, ಸರ್ವಭೂತಾನಾಂ ನಿಲಯಃ= ಎಲ್ಲ ಪ್ರಾಣಿಗಳಿಗೆ ಆಶ್ರಯನಾದವನು, ವಿಭುಃ= ವ್ಯಾಪ್ತನಾದವನು, ಭವಃ= ಐಶ್ವರ್ಯರೂಪನಾದವನು.

ಅಮೋಘಃ ಸಂಯತೋ ಹ್ಯಶ್ವೋ ಭೋಜನಃ ಪ್ರಾಣಧಾರಣಃ ।
ಧೃತಿಮಾನ್ ಮತಿಮಾನ್ ದಕ್ಷಃ ಸತ್ಕೃತಶ್ಚ ಯುಗಾಧಿಪಃ ॥೧೧೨॥

ಅಮೋಘಃ= ಭಕ್ತರ ಪ್ರಾರ್ಥನೆಯನ್ನು ವ್ಯರ್ಥಗೊಳಿಸದವನು, ಸಂಯತಃ= ಸಂಯಮವನ್ನು ಹೊಂದಿದವನು, ಅಶ್ವಃ= ಅಶ್ವಗಳಲ್ಲಿ ಇರುವವನು, ಭೋಜನಃ= ಪ್ರಾಣಿಗಳಿಗೆ ಆಹಾರವನ್ನು ಕೊಡುವವನು, ಪ್ರಾಣಧಾರಣಃ= ಪ್ರಾಣಗಳನ್ನು ಧರಿಸಿದವನು, ಧೃತಿಮಾನ್= ಧೈರ್ಯಶಾಲಿ, ಮತಿಮಾನ್= ಒಳ್ಳೆಯ ಬುದ್ಧಿಯುಳ್ಳವನು, ದಕ್ಷಃ= ದಕ್ಷತೆಯುಳ್ಳವನು, ಸತ್ಕೃತಃ= ಸಮ್ಮಾನಿತನು, ಯುಗಾಧಿಪಃ= ಯುಗಗಳಿಗೆ ಒಡೆಯ.

ಗೋಪಾಲಿರ್ಗೋಪತಿರ್ಗ್ರಾಮೋ ಗೋಚರ್ಮವಸನೋ ಹರಃ ।
ಹಿರಣ್ಯಬಾಹುಶ್ಚ ತಥಾ ಗುಹಾಪಾಲಃ ಪ್ರವೇಶಿನಾಮ್ ॥೧೧೩॥

ಗೋಪಾಲಿಃ= ಗೋವುಗಳನ್ನು ರಕ್ಷಿಸುವವನು, ಗೋಪತಿಃ= ಗೋವುಗಳಿಗೆ ಒಡೆಯ, ಗ್ರಾಮಃ= ಗ್ರಾಮದಲ್ಲಿ ಇರುವವನು, ಗೋಚರ್ಮವಸನಃ= ಗೋಚರ್ಮವನ್ನು ಧರಿಸಿದವನು, ಹರಃ= ಪಾಪಹರನು, ಹಿರಣ್ಯಬಾಹುಃ= ಸುವರ್ಣಮಯವಾದ ಬಾಹು ಉಳ್ಳವನು, ಪ್ರವೇಶಿನಾಮ್ ಗುಹಾಪಾಲಃ= ಮನಸ್ಸಿನಲ್ಲಿ ತನ್ನನ್ನು ಧ್ಯಾನಿಸುವ ಯೋಗಿಗಳ ಹೃದಯದಲ್ಲಿದ್ದು ರಕ್ಷಿಸುವವನು.

ಪ್ರಕೃಷ್ಟಾರಿಃ ಮಹಾಹರ್ಷೋ ಜಿತಕಾಮೋ ಜಿತೇಂದ್ರಿಯಃ ।
ಗಾಂಧಾರಶ್ಚ ಸುವಾಸಶ್ಚ ತಪಃಕರ್ಮರತಿರ್ಧನುಃ ॥೧೧೪॥

ಪ್ರಕೃಷ್ಟಾರಿಃ= ಶತ್ರುಗಳನ್ನು ಎಳೆದಾಡುವವನು, ಮಹಾಹರ್ಷಃ= ಬಹಳ ಸಂತೋಷದಿಂದ ಕೂಡಿದವನು, ಜಿತಕಾಮಃ= ಕಾಮವನ್ನು ಗೆದ್ದವನು, ಜಿತೇಂದ್ರಿಯಃ= ಇಂದ್ರಿಯಜಯವುಳ್ಳವನು, ಗಾಂಧಾರಃ= ಗಾಂಧಾರಾದಿ ಸ್ವರ ನಿಯಾಮಕನು, ಸುವಾಸಃ= ಒಳ್ಳೆಯ ವಸ್ತ್ರವುಳ್ಳವನು, ತಪಃಕರ್ಮರತಿಃ= ತಪಸ್ಸಿನಲ್ಲಿ ನಿರತನಾದವನು, ಧನುಃ= ಪಿನಾಕಧನುರ್ಧಾರಿ.

ಮಹಾಗೀತೋ ಮಹಾನೃತ್ತೋ ಹ್ಯಪ್ಸರೋಗಣಸೇವಿತಃ ।
ಮಹಾಕೇತುರ್ಧನುರ್ಧಾತುರ್ನೈಕಸಾನುಚರಶ್ಚರಃ ॥೧೧೫॥

ಮಹಾಗೀತಃ= ದೊಡ್ಡ ಗಾನವನ್ನು ಮಾಡುವವನು, ಮಹಾನೃತ್ತಃ= ಉತ್ತಮವಾಗಿ ನೃತ್ಯವನ್ನು ಮಾಡುವವನು, ಅಪ್ಸರೋಗಣಸೇವಿತಃ= ಅಪ್ಸರೆಯರ ಗಣದಿಂದ ಸೇವಿತನಾದವನು, ಮಹಾಕೇತುಃ= ದೊಡ್ಡ ಧ್ವಜವುಳ್ಳವನು, ಧನುಃ= ಶ್ರೇಷ್ಠ ಧನುರ್ಧಾರಿ, ಧಾತುಃ= ಜಗತ್ತನ್ನು ಪೋಷಿಸುವವನು, ನೈಕಸಾನುಚರಃ= ಅನೇಕ ಪರ್ವತ ಶಿಖರಗಳಲ್ಲಿ ಸಂಚರಿಸುವವನು, ಚರಃ= ಚಲಿಸುವವನು.

ಆವೇದನೀಯ ಆದೇಶಃ ಸರ್ವಗಂಧಸುಖಾವಹಃ ।
ತೋರಣಸ್ತಾರಣೋ ವಾಯುಃ ಪರಿಧಾವತಿ ಚೈಕತಃ ॥೧೧೬॥

ಆವೇದನೀಯಃ= ಉಪದೇಶಿಸಲ್ಪಡುವವನು, ಆದೇಶಃ= ಆಜ್ಞೆಯನ್ನು ಕೊಡುವವನು, ಸರ್ವಗಂಧಸುಖಾವಹಃ= ಸರ್ವಗಂಧಗಳಿಂದ ಸುಖವನ್ನು ಕೊಡುವವನು, ತೋರಣಃ= ಸುಖಕ್ಕೆ ದ್ವಾರನಾದವನು, ತಾರಣಃ= ಕಷ್ಟದಿಂದ ದಾಟಿಸುವವನು, ವಾಯುಃ= ವಾಯುವಿನಲ್ಲಿ ಇರುವವನು, ಪರಿಧಾವತಿ ಚೈಕತಃ= ಒಂದು ಸ್ಥಾನದಿಂದ ಎಲ್ಲ ಕಡೆಯಲ್ಲಿಯೂ ಓಡುವವನು.

ಸಂಯೋಗೋ ವರ್ಧನೋ ವೃದ್ಧೋ ಮಹಾವೃದ್ಧೋ ಗಣಾಧಿಪಃ ।
ನಿತ್ಯ ಆತ್ಮಸಹಾಯಶ್ಚ ದೇವಾಸುರಪತಿಃ ಪತಿಃ ॥೧೧೭॥

ಸಂಯೋಗಃ= ಒಳ್ಳೆಯ ಯೋಗವುಳ್ಳವನು, ವರ್ಧನಃ= ಅಭಿವೃದ್ಧಿ ಪಡಿಸುವವನು, ವೃದ್ಧಃ= ಅಭಿವೃದ್ಧನಾದವನು, ಮಹಾವೃದ್ಧಃ= ಬಹಳ ವೃದ್ಧಿಯನ್ನು ಹೊಂದಿದವನು, ಗಣಾಧಿಪಃ= ಗಣಗಳಿಗೆ ಒಡೆಯ, ನಿತ್ಯಃ= ನಿತ್ಯನು, ಆತ್ಮಸಹಾಯಃ= ತನಗೆ ತಾನೇ ಸಹಾಯನಾದವನು, ದೇವಾಸುರಪತಿಃ= ದೇವಾಸುರರಿಗೆ ಒಡೆಯನಾದವನು, ಪತಿಃ= ರಕ್ಷಕನು.

ಯುಕ್ತಶ್ಚ ಯುಕ್ತಬಾಹುಶ್ಚ ದೇವೋ ದಿವಿ ಸುಪರ್ವಣಃ ।
ಆಷಾಢಶ್ಚ ಸುಷಾಢಶ್ಚ ಧ್ರುವೋ ಹರಿಹರೋ ಹರಃ ॥೧೧೮॥

ಯುಕ್ತಃ= ಯೋಗಯುಕ್ತನಾದವನು, ಯುಕ್ತಬಾಹುಃ= ಭಕ್ತರ ಕಷ್ಟ ಪರಿಹಾರಕ್ಕೆ ಉದ್ಯುಕ್ತವಾದ ಬಾಹುವುಳ್ಳವನು, ದೇವಃ= ದೇವನು, ದಿವಿ ಸುಪರ್ವಣಃ= ಸ್ವರ್ಗದಲ್ಲಿಯೂ ಆರಾಧ್ಯನಾದವನು, ಆಷಾಢಃ= ಭಕ್ತರ ತಪ್ಪನ್ನು ಸಹಿಸುವವನು,

ಸುಷಾಢಃ= ಒಳ್ಳೆಯ ಸಹನಶೀಲನಾದವನು, ಧ್ರುವಃ= ನಿತ್ಯನಾದವನು, ಹರಿಹಣಃ= ಸಿಂಹವನ್ನು ಕೊಲ್ಲುವವನು, ಹರಃ= ಪಾಪಹರನು.

ವಪುರಾವರ್ತಮಾನೇಭ್ಯೋ ವಸುಶ್ರೇಷ್ಠೋ ಮಹಾಪಥಃ ।
ಶಿರೋಹಾರೀ ವಿಮರ್ಷಶ್ಚ ಸರ್ವಲಕ್ಷಣಭೂಷಿತಃ ॥೧೧೯॥

ಆವರ್ತಮಾನೇಭ್ಯಃ ವಪುಃ= ಲೋಕಾಂತರದಿಂದ ಹಿಂದಿರುಗಿದವರಿಗೆ ಶರೀರವನ್ನು ಕೊಡುವವನು, ವಸುಶ್ರೇಷ್ಠಃ= ವಾಸ ಮಾಡುವವರಲ್ಲಿ ಶ್ರೇಷ್ಠನಾದವನು, ಮಹಾಪಥಃ= ದೊಡ್ಡ ಮಾರ್ಗರೂಪನು, ಶಿರೋಹಾರೀ= ದುಷ್ಟರ ಶಿರಸ್ಸನ್ನು ಛೇದಿಸುವವನು, ವಿಮರ್ಷಃ= ವಿವಿಧವಾದ ಸಹನೆಯುಳ್ಳವನು, ಸರ್ವಲಕ್ಷಣ ಭೂಷಿತಃ= ಎಲ್ಲ ಲಕ್ಷಣಗಳಿಂದಲೂ ಅಲಂಕೃತನಾದವನು.

ಅಕ್ಷಶ್ಚ ರಥಯೋಗೀ ಚ ಸರ್ವಯೋಗೀ ಮಹಾಬಲಃ ।
ಸಮಾಮ್ನಾಯೋಽಸಮಾಮ್ನಾಯಸ್ತೀರ್ಥದೇವೋ ಮಹಾರಥಃ ॥೧೨೦॥

ಅಕ್ಷಃ= ರಥದ ಅಕ್ಷದಂತೆ ಆಧಾರನಾದವನು, ರಥಯೋಗೀ= ರಥವನ್ನು ಹೊಂದಿದವನು, ಸರ್ವಯೋಗೀ= ಸರ್ವವನ್ನೂ ಪಡೆದವನು, ಸಮಾಮ್ನಾಯಃ= ವೇದಪ್ರತಿಪಾದ್ಯನು, ಅಸಮಾಮ್ನಾಯಃ= ವೇದಗಳಿಂದಲೂ ಪೂರ್ಣವಾಗಿ ಪ್ರತಿಪಾದಿಸಲ್ಪಡದವನು, ತೀರ್ಥದೇವಃ= ಶಿರಸ್ಸಿನಲ್ಲಿ ಗಂಗೆಯನ್ನು ಧರಿಸಿದ ದೇವನು, ಮಹಾರಥಃ= ದೊಡ್ಡ ರಥವುಳ್ಳವನು.

ನಿರ್ಜೀವೋ ಜೀವನೋ ಮಂತ್ರಃ ಶುಭಾಕ್ಷೋ ಬಹುಕರ್ಕಶಃ ।
ರತ್ನಪ್ರಭೂತೋ ರತ್ನಾಂಗೋ ಮಹಾರ್ಣವನಿಪಾನವಿತ್ ॥೧೨೧॥

ನಿರ್ಜೀವಃ= ಜಡಪ್ರಪಂಚಕ್ಕೆ ಸ್ವಾಮಿ, ಜೀವನಃ= ಬದುಕಿಸುವವನು, ಮಂತ್ರಃ= ಮಂತ್ರಪ್ರತಿಪಾದ್ಯನು, ಶುಭಾಕ್ಷಃ= ಶುಭವಾದ ಕಣ್ಣುಳ್ಳವನು, ಬಹುಕರ್ಕಶಃ= ಶತ್ರುಗಳಿಗೆ ಬಹಳ ಒರಟಾದವನು, ರತ್ನಪ್ರಭೂತಃ= ರತ್ನಗಳಿಗೆ ಉತ್ಪತ್ತಿಸ್ಥಾನನಾದವನು, ರತ್ನಾಂಗಃ= ಉತ್ತಮವಾದ ಅಂಗಗಳುಳ್ಳವನು, ಮಹಾರ್ಣವನಿಪಾನವಿತ್= ಸಮುದ್ರವನ್ನು ಪಾನ ಮಾಡಿ ಶೋಷಿಸಲು ತಿಳಿದವನು.

ಮೂಲಂ ವಿಶಾಲೋ ಹ್ಯಮೃತೋ ವ್ಯಕ್ತಾವ್ಯಕ್ತಸ್ತಪೋನಿಧಿಃ ।
ಆರೋಹಣೋ ನಿರೋಹಶ್ಚ ಶೈಲಹಾರೀ ಮಹಾತಪಾಃ ॥೧೨೨॥

ಮೂಲಂ= ಎಲ್ಲದಕ್ಕೂ ಮೂಲನಾದವನು, ವಿಶಾಲಃ= ವಿಸ್ತಾರನಾದವನು, ಅಮೃತಃ= ಮರಣರಹಿತನು, ವ್ಯಕ್ತಾವ್ಯಕ್ತಃ= ವ್ಯಕ್ತನು ಮತ್ತು ಅವ್ಯಕ್ತನು, ತಪೋನಿಧಿಃ= ತಪಸ್ಸಿಗೆ ಆಶ್ರಯನಾದವನು, ಆರೋಹಣಃ= ಮೇಲ್ಮುಖವಾಗಿ ಹೋಗುವವನು, ನಿರೋಹಃ= ಶತ್ರುಗಳನ್ನು ಕೆಳಗೆ ತಳ್ಳುವವನು, ಶೈಲಹಾರೀ= ಪರ್ವತವನ್ನು ನಾಶಮಾಡುವವನು, ಮಹಾತಪಾಃ= ಮಹಾತಪಸ್ವಿ.

ಸೇನಾಕಲ್ಪೋ ಮಹಾಕಲ್ಪೋ ಯುಗಾಯುಗಕರೋ ಹರಿಃ ।
ಯುಗರೂಪೋ ಮಹಾರೂಪಃ ಮಹಾನಾಗಹನೋಽವಧಃ ॥೧೨೩॥

ಸೇನಾಕಲ್ಪಃ= ಸೇನೆಯನ್ನು ಉಂಟುಮಾಡುವವನು, ಮಹಾಕಲ್ಪಃ= ಆಭರಣಗಳಿಂದ ಅಲಂಕೃತನಾದವನು, ಯುಗಾಯುಗಕರಃ= ಯುಗಗಳನ್ನು ಮತ್ತು ಯುಗಭಿನ್ನವಾದವುಗಳನ್ನು ಮಾಡುವವನು, ಹರಿಃ= ಪಾಪಹಾರಿಯು, ಯುಗರೂಪಃ= ಯುಗವನ್ನು ರೂಪಿಸುವವನು, ಮಹಾರೂಪಃ= ದೊಡ್ಡ ರೂಪವನ್ನು ಹೊಂದಿದವನು, ಮಹಾನಾಗಹನಃ= ದೊಡ್ಡ ಸರ್ಪವನ್ನು ಕೊಂದವನು, ಅವಧಃ= ಮರಣ ರಹಿತನಾದವನು.

ನ್ಯಾಯನಿರ್ವಾಪಣಃ ಪಾದಃ ಪಂಡಿತೋ ಹ್ಯಚಲೋಪಮಃ ।
ಬಹುಮಾಲೋ ಮಹಾಮಾಲಃ ಸುಮಾಲೋ ಬಹುಲೋಚನಃ ॥೧೨೪॥

ನ್ಯಾಯನಿರ್ವಾಪಣಃ= ಶಾಸ್ತ್ರನ್ಯಾಯದಂತೆ ದಾನವನ್ನು ಮಾಡುವವನು, ಪಾದಃ= ಗಮ್ಯನಾದವನು, ಪಂಡಿತಃ= ಜ್ಞಾನಿ, ಅಚಲೋಪಮಃ= ಪರ್ವತದಂತೆ ಸ್ಥಿರನಾದವನು, ಬಹುಮಾಲಃ= ಅನೇಕ ಮಾಲೆಗಳನ್ನು ಧರಿಸಿದವನು, ಮಹಾಮಾಲಃ= ದೊಡ್ಡ ಮಾಲೆಯನ್ನು ಧರಿಸಿದವನು, ಸುಮಾಲಃ= ಒಳ್ಳೆಯ ಮಾಲೆಗಳನ್ನು ಧರಿಸಿದವನು, ಬಹುಲೋಚನಃ= ಅನೇಕ ನೇತ್ರಗಳುಳ್ಳವನು.

ವಿಸ್ತಾರೋ ಲವಣಃ ಕೂಪಃ ತ್ರಿಯುಗಃ ಸಫಲೋದಯಃ ।
ವೃಷಭೋ ವೃಷಭಾಂಕಾಂಗೋ ಮಣಿಬಿಲ್ವೋ ಜಟಾಧರಃ ॥೧೨೫॥

ವಿಸ್ತಾರಃ= ವಿಶಾಲನಾದವನು, ಲವಣಃ= ಲವಣ ನಿಯಾಮಕನು, ಕೂಪಃ= ಬಾವಿಗಳಲ್ಲಿ ಇರುವವನು, ತ್ರಿಯುಗಃ= ಮೂರು ಯುಗಗಳಲ್ಲಿ ಇರುವವನು, ಸಫಲೋದಯಃ= ಸಫಲವಾದ ಅಭಿವೃದ್ಧಿಯನ್ನು ಕೊಡುವವನು, ವೃಷಭಃ= ಶ್ರೇಷ್ಠನಾದವನು, ವೃಷಭಾಂಕಾಂಗಃ= ವೃಷಭ ಚಿಹ್ನೆಯುಳ್ಳ ಅಂಗಗಳನ್ನುಳ್ಳವನು, ಮಣಿಬಿಲ್ವಃ= ಮಣಿಗಳಲ್ಲಿಮತ್ತು ಬಿಲ್ವಗಳಲ್ಲಿಇರುವವನು, ಜಟಾಧರಃ= ಜಟೆಯನ್ನು ಧರಿಸಿದವನು.

ಬಿಂದುರ್ವಿಸರ್ಗಃ ಸುಮುಖಃ ಸುರಃ ಸರ್ವಾಯುಧಃ ಸಹಃ ।
ನಿವೇದನಃ ಸುಧಾಜಾತಃ ಸುಗಂಧಾರೋ ಮಹಾಧನುಃ ॥೧೨೬॥

ಬಿಂದುಃ= ಬಿಂದುವಿನಲ್ಲಿಇರುವವನು, ವಿಸರ್ಗಃ= ವಿಸರ್ಗದಲ್ಲಿಇರುವವನು, ಸುಮುಖಃ= ಒಳ್ಳೆಯ ಮುಖವುಳ್ಳವನು, ಸುರಃ= ಒಳ್ಳೆಯ ಸುಖರೂಪನು, ಸರ್ವಾಯುಧಃ= ಎಲ್ಲಆಯುಧಗಳನ್ನೂ ಹೊಂದಿದವನು, ಸಹಃ= ಸಹನರೂಪನು, ನಿವೇದನಃ= ಎಲ್ಲವನ್ನೂ ನಿವೇದಿಸುವವನು, ಸುಧಾಜಾತಃ= ಅಮೃತದ ಉತ್ಪತ್ತಿಗೆ ಕಾರಣನು, ಸುಗಂಧಾರಃ= ಒಳ್ಳೆಯ ಗಂಧದಿಂದ ಕೂಡಿದವನು, ಮಹಾಧನುಃ= ಮಹಾಧನುರ್ಧಾರಿ.

ಗಂಧಮಾಲೀ ಚ ಭಗವಾನುತ್ಥಾನಃ ಸರ್ವಕರ್ಮಣಾಮ್ ।
ಮಂಥಾನೋ ಬಹುಲೋ ಬಾಹುಃ ಸಕಲಃ ಸರ್ವಲೋಚನಃ ॥೧೨೭॥

ಗಂಧಮಾಲೀ= ಸುಗಂಧಯುಕ್ತ ಮಾಲೆಯುಳ್ಳವನು, ಸರ್ವಕರ್ಮಣಾಮ್ ಭಗವಾನುತ್ಥಾನಃ= ಎಲ್ಲಕರ್ಮಗಳಿಗೆ ಅಭಿವೃದ್ಧಿಯನ್ನು ಕೊಡುವವನು, ಮಂಥಾನಃ= ಸಂಸಾರಸಾಗರಕ್ಕೆ ಕಡೆಗೋಲಿನ ರೂಪನಾದವನು, ಬಹುಲಃ= ಅನೇಕ ರೂಪಗಳುಳ್ಳವನು, ಬಾಹುಃ= ಅನೇಕ ಬಾಹುಗಳನ್ನು ಹೊಂದಿದವನು, ಸಕಲಃ= ಕಲೆಗಳಿಂದ ಕೂಡಿದವನು, ಸರ್ವಲೋಚನಃ= ಎಲ್ಲಕಡೆಗಳಲ್ಲಿಯೂ ಕಣ್ಣುಳ್ಳವನು.

ತಲಸ್ತಾಲಃ ಕರಸ್ಥಾಲೀ ಊರ್ಧ್ವಸಂಹನನೋ ವಹಃ ।
ಛತ್ರಂ ಸುಚ್ಛತ್ರೋ ವಿಖ್ಯಾತಃ ಸರ್ವಲೋಕಾಶ್ರಯೋ ಮಹಾನ್ ॥೧೨೮॥

ತಲಃ= ಆಶ್ರಯನಾದವನು, ತಾಲಃ= ಕ್ರಿಯಾನಿಯಾಮಕ, ಕರಸ್ಥಾಲೀ= ಹಸ್ತವೇ ಪಾತ್ರೆಯಾಗಿ ಉಳ್ಳವನು, ಊರ್ಧ್ವಸಂಹನಃ= ಊರ್ಧ್ವಮುಖವಾದ ಶರೀರವುಳ್ಳವನು,

ವಹಃ= ಸರ್ವನಿರ್ವಾಹಕನು, ಛತ್ರಂ= ಆಚ್ಛಾದಕನು, ಸುಚ್ಛತ್ರಃ= ಭಕ್ತರನ್ನು ಕಷ್ಟದಿಂದ ಆಚ್ಛಾದಿಸುವವನು, ವಿಖ್ಯಾತಃ= ಪ್ರಸಿದ್ಧನು, ಸರ್ವಲೋಕಾಶ್ರಯಃ= ಎಲ್ಲ ಲೋಕಗಳಿಗೆ ಆಶ್ರಯನಾದವನು, ಮಹಾನ್= ದೊಡ್ಡವನು.

ಮುಂಡೋ ವಿರೂಪೋ ವಿಕೃತೋ ದಂಡಿಮುಂಡೋ ವಿಕುರ್ವಣಃ ।
ಹರ್ಯಕ್ಷಃ ಕಕುಭೋ ವಜ್ರೀ ದೀಪ್ತಜಿಹ್ವಃ ಸಹಸ್ರಪಾತ್ ॥೧೨೯॥

ಮುಂಡಃ= ಭಿಕ್ಷುರೂಪನು, ವಿರೂಪಃ= ವಿರೂಪವುಳ್ಳವನು, ವಿಕೃತಃ= ವಿಕಾರವನ್ನು ಹೊಂದಿಸುವವನು, ದಂಡಿಮುಂಡಃ= ದಂಡವನ್ನು ಧರಿಸಿ ಮುಂಡನಾದವನು (ಭಿಕ್ಷು), ವಿಕುರ್ವಣಃ= ವಿಕಾರವನ್ನು ಉಂಟುಮಾಡುವವನು, ಹರ್ಯಕ್ಷಃ= ಸಿಂಹದಲ್ಲಿ ಇರುವವನು, ಕಕುಭಃ= ದಿಕ್ಕುಗಳಲ್ಲಿ ಇರುವವನು, ವಜ್ರೀ= ವಜ್ರಾಯುಧವನ್ನು ಧರಿಸಿದವನು, ದೀಪ್ತಜಿಹ್ವಃ= ಪ್ರಕಾಶಮಾನವಾದ ನಾಲಿಗೆಯುಳ್ಳವನು, ಸಹಸ್ರಪಾತ್= ಸಹಸ್ರ ಪಾದಗಳುಳ್ಳವನು.

ಸಹಸ್ರಮೂರ್ಧಾ ದೇವೇಂದ್ರಃ ಸರ್ವದೇವಮಯೋ ಗುರುಃ ।
ಸಹಸ್ರಬಾಹುಃ ಸರ್ವಾಂಗಃ ಶರಣ್ಯಃ ಸರ್ವಲೋಕಕೃತ್ ॥೧೩೦॥

ಸಹಸ್ರಮೂರ್ಧಾ= ಸಹಸ್ರ ಶಿರಸ್ಸುಳ್ಳವನು, ದೇವೇಂದ್ರಃ= ದೇವತೆಗಳಿಗೆ ಒಡೆಯ, ಸರ್ವದೇವಮಯಃ= ಎಲ್ಲ ದೇವತೆಗಳಿಗೆ ಪ್ರಧಾನನಾದವನು, ಗುರುಃ= ಉಪದೇಶಕ, ಸಹಸ್ರಬಾಹುಃ= ಸಹಸ್ರ ಬಾಹುಗಳುಳ್ಳವನು, ಸರ್ವಾಂಗಃ= ಎಲ್ಲ ಅಂಗಧಾರಿ, ಶರಣ್ಯಃ= ಶರಣು ಹೊಂದಲು ಅರ್ಹನಾದವನು, ಸರ್ವಲೋಕಕೃತ್= ಎಲ್ಲ ಲೋಕಗಳನ್ನು ಸೃಷ್ಟಿಸುವವನು.

ಪವಿತ್ರಂ ತ್ರಿಕಕುನ್ಮಂತ್ರಃ ಕನಿಷ್ಠಃ ಕೃಷ್ಣಪಿಂಗಲಃ ।
ಬ್ರಹ್ಮದಂಡವಿನಿರ್ಮಾತಾ ಶತಘ್ನೀಶತಪಾಶಧೃಕ್ ॥೧೩೧॥

ಪವಿತ್ರಂ= ಪವಿತ್ರನಾದವನು, ತ್ರಿಕಕುನ್ಮಂತ್ರಃ= ಮೂರು ಶಿಖರಗಳುಳ್ಳ ಗಾಯತ್ರಿಯಿಂದ ಪ್ರತಿಪಾದ್ಯನು, ಕನಿಷ್ಠಃ= ಕನಿಷ್ಠರಲ್ಲಿ ಇರುವವನು, ಕೃಷ್ಣಪಿಂಗಲಃ= ಕಪ್ಪು ಕಂದುರೂಪದವನು, ಬ್ರಹ್ಮದಂಡವಿನಿರ್ಮಾತಾ= ಬ್ರಹ್ಮದಂಡವನ್ನು ಸೃಷ್ಟಿಸುವವನು, ಶತಘ್ನೀಶತಪಾಶಧೃಕ್= ಶತಘ್ನೀ- ಶತಪಾಶ ಎಂಬ ಆಯುಧವನ್ನು ಹಿಡಿದವನು.

ಪದ್ಮಗರ್ಭೋ ಮಹಾಗರ್ಭೋ ಬ್ರಹ್ಮಗರ್ಭೋ ಜಲೋದ್ಭವಃ ।
ಗಭಸ್ತಿರ್ಬ್ರಹ್ಮಕೃದ್ ಬ್ರಹ್ಮಾ ಬ್ರಹ್ಮವಿದ್ ಬ್ರಾಹ್ಮಣೋ ಗತಿಃ ॥೧೩೨॥

ಪದ್ಮಗರ್ಭಃ= ಗರ್ಭದಲ್ಲಿ ಪದ್ಮವನ್ನು ಧರಿಸಿದವನು, ಮಹಾಗರ್ಭಃ= ದೊಡ್ಡ ಗರ್ಭವುಳ್ಳವನು, ಬ್ರಹ್ಮಗರ್ಭಃ= ವೇದಗಳನ್ನು ಹೃದಯದಲ್ಲಿ ಧರಿಸಿದವನು, ಜಲೋದ್ಭವಃ= ಜಲದ ಉತ್ಪತ್ತಿಗೆ ಕಾರಣನಾದವನು, ಗಭಸ್ತಿಃ= ಕಿರಣಗಳನ್ನು ಹೊಂದಿದವನು, ಬ್ರಹ್ಮಕೃದ್= ವೇದೋಪದೇಶಕ, ಬ್ರಹ್ಮಾ= ಪೂರ್ಣನಾದವನು, ಬ್ರಹ್ಮವಿದ್= ಬ್ರಹ್ಮನನ್ನು ಹೊಂದಿದವನು, ಬ್ರಾಹ್ಮಣಃ= ಬ್ರಹ್ಮನನ್ನು ತಿಳಿದವನು, ಗತಿಃ= ಗಮ್ಯನಾದವನು.

ಅನಂತರೂಪೋ ನೈಕಾತ್ಮಾ ತಿಗ್ಮತೇಜಾಃ ಸ್ವಯಂಭುವಃ ।
ಊರ್ಧ್ವಗಾತ್ಮಾ ಪಶುಪತಿರ್ವಾತರಂಹಾ ಮನೋಜವಃ ॥೧೩೩॥

ಅನಂತರೂಪಃ= ಅನಂತರೂಪಗಳನ್ನು ಹೊಂದಿದವನು, ನೈಕಾತ್ಮಾ= ಅನೇಕ ಶರೀರಗಳನ್ನು ಹೊಂದಿದವನು, ತಿಗ್ಮತೇಜಾಃ= ತೀಕ್ಷ್ಣವಾದ ತೇಜಸ್ಸನ್ನು ಹೊಂದಿದವನು, ಸ್ವಯಂಭುವಃ= ಸ್ವತಂತ್ರನಾಗಿ ಇರುವವನು, ಊರ್ಧ್ವಗಾತ್ಮಾ= ಊರ್ಧ್ವಮುಖವಾದ ಶರೀರವುಳ್ಳವನು, ಪಶುಪತಿಃ= ಪಶುಗಳಿಗೆ ಒಡೆಯ, ವಾತರಂಹಾಃ= ವಾಯುವೇಗವುಳ್ಳವನು, ಮನೋಜವಃ= ಮನೋವೇಗವುಳ್ಳವನು.

ಚಂದನೀ ಪದ್ಮಮಾಲಾಗ್ರ್ಯಃ ಸುರಭ್ಯುತ್ತರಣೋ ನರಃ ।
ಕರ್ಣಿಕಾರಮಹಾಸ್ರಗ್ವೀ ನೀಲಮೌಲಿಃ ಪಿನಾಕಧೃಕ್ ॥೧೩೪॥

ಚಂದನೀ= ಗಂಧದಿಂದ ಲಿಪ್ತನಾದವನು, ಪದ್ಮಮಾಲಾಗ್ರ್ಯಃ= ಶ್ರೇಷ್ಠವಾದ ಪದ್ಮಮಾಲೆಯನ್ನು ಧರಿಸಿದವನು, ಸುರಭ್ಯುತ್ತರಣಃ= ಕಾಮಧೇನುವನ್ನು ಕಷ್ಟದಿಂದ ಪಾರು ಮಾಡಿದವನು, ನರಃ= ಪುರುಷರೂಪದಿಂದ ಇರುವವನು, ಕರ್ಣಿಕಾರ ಮಹಾಸ್ರಗ್ವೀ= ಕರ್ಣಿಕಾರ ಪುಷ್ಪದ ದೊಡ್ಡ ಮಾಲೆಯನ್ನು ಧರಿಸಿದವನು, ನೀಲಮೌಲಿಃ= ನೀಲಮಣಿಯ ಕಿರೀಟವನ್ನು ಧರಿಸಿದವನು, ಪಿನಾಕಧೃಕ್= ಪಿನಾಕಧನುರ್ಧಾರಿ.

ಉಮಾಪತಿರುಮಾಕಾಂತೋ ಜಾಹ್ನವೀಧೃಗುಮಾಧವಃ ।
ವರೋ ವರಾಹೋ ವರದೋ ವರೇಶಃ ಸುಮಹಾಸ್ವನಃ ॥೧೩೫॥

ಉಮಾಪತಿಃ= ಪಾರ್ವತೀಪತಿ, ಉಮಾಕಾಂತಃ= ಪಾರ್ವತಿಗೆ ಮನೋಹರನಾದವನು, ಜಾಹ್ನವೀಧೃಕ್= ಗಂಗೆಯನ್ನು ಧರಿಸಿದವನು, ಉಮಾಧವಃ= ಪಾರ್ವತಿಯನ್ನು ಶುದ್ಧಿಗೊಳಿಸುವವನು, ವರಃ= ಶ್ರೇಷ್ಠನಾದವನು, ವರಾಹಃ= ವರಾಹ ರೂಪದಲ್ಲಿರುವವನು, ವರದಃ= ವರಪ್ರದಾತಾ, ವರೇಶಃ= ವರಗಳಿಗೆ ಸ್ವಾಮಿ, ಸುಮಹಾಸ್ವನಃ= ದೊಡ್ಡನಾದವುಳ್ಳವನು (ವೇದಪ್ರತಿಪಾದ್ಯನು).

ಮಹಾಪ್ರಸಾದೋ ದಮನಃ ಶತ್ರುಹಾ ಶ್ವೇತಪಿಂಗಲಃ ।
ಪ್ರೀತಾತ್ಮಾ ಪರಮಾತ್ಮಾ ಚ ಸಂಯತಾತ್ಮಾ ಪ್ರಧಾನಧೃಕ್ ॥೧೩೬॥

ಮಹಾಪ್ರಸಾದಃ= ದೊಡ್ಡ ಅನುಗ್ರಹವನ್ನು ಮಾಡುವವನು, ದಮನಃ= ಶತ್ರುಗಳನ್ನು ದಮನ ಮಾಡುವವನು, ಶತ್ರುಹಾ= ಶತ್ರುಗಳನ್ನು ಸಂಹರಿಸುವವನು, ಶ್ವೇತಪಿಂಗಲಃ= ಬಿಳಿ ಮತ್ತು ಕಂದು ಬಣ್ಣದಿಂದ ಕೂಡಿದವನು, ಪ್ರೀತಾತ್ಮಾ= ಸಂತುಷ್ಟವಾದ ಮನಸ್ಸುಳ್ಳವನು, ಪರಮಾತ್ಮಾ= ಜಿತವಾದ ಮನಸ್ಸುಳ್ಳವನು, ಸಂಯತಾತ್ಮಾ= ಸಂಯಮಿ, ಪ್ರಧಾನಧೃಕ್= ಪ್ರಧಾನರಾದವರನ್ನು ಧರಿಸಿದವನು.

ಸರ್ವಪಾರ್ಶ್ವಸುತಸ್ತಾರ್ಕ್ಷ್ಯೋ ಧರ್ಮಸಾಧಾರಣೋ ವರಃ ।
ಚರಾಚರಾತ್ಮಾ ಸೂಕ್ಷ್ಮಾತ್ಮಾ ಸುವೃಷೋ ಗೋವೃಷೇಶ್ವರಃ ॥೧೩೭॥

ಸರ್ವಪಾರ್ಶ್ವಸುತಃ= ಎಲ್ಲ ಪಾರ್ಶ್ವಗಳಲ್ಲಿಯೂ ಮಕ್ಕಳನ್ನು ಹೊಂದಿದವನು, ತಾರ್ಕ್ಷ್ಯಃ= ಗರುಡನಲ್ಲಿ ಇರುವವನು, ಧರ್ಮಸಾಧಾರಣಃ= ಧರ್ಮಕ್ಕೆ ಆಶ್ರಯನಾದವನು, ವರಃ= ಶ್ರೇಷ್ಠನಾದವನು, ಚರಾಚರಾತ್ಮಾ= ಚರಾಚರವನ್ನು ವ್ಯಾಪಿಸಿದವನು, ಸೂಕ್ಷ್ಮಾತ್ಮಾ= ಸೂಕ್ಷ್ಮ ಶರೀರವನ್ನು ಹೊಂದಿದವನು, ಸುವೃಷಃ= ಒಳ್ಳೆಯ ವೃಷಭವನ್ನು ವಾಹನವಾಗಿ ಹೊಂದಿದವನು, ಗೋವೃಷೇಶ್ವರಃ= ಗೋ-ವೃಷಭಗಳಿಗೆ ಒಡೆಯ.

ಸಾಧ್ಯರ್ಷಿರ್ವಸುರಾದಿತ್ಯೋ ವಿವಸ್ವಾನ್ ಸವಿತಾ ಮೃಡಃ ।
ವ್ಯಾಸಃ ಸರ್ವಸ್ಯ ಸಂಕ್ಷೇಪೋ ವಿಸ್ತರಃ ಪರ್ಯಯೋ ನಯಃ ॥೧೩೮॥

ಸಾಧ್ಯರ್ಷಿಃ= ಸಾಧ್ಯರಲ್ಲಿ ಮತ್ತು ಋಷಿಗಳಲ್ಲಿ ಇರುವವನು, ವಸುಃ= ವಾಸನ ಶೀಲನಾದವನು, ಆದಿತ್ಯಃ= ಆದಿತ್ಯನಲ್ಲಿರುವವನು, ವಿವಸ್ವಾನ್= ಸೂರ್ಯನಲ್ಲಿ

ಇರುವವನು, ಸವಿತಾ= ಸವಿತೃನಾಮಕ ಸೂರ್ಯನಲ್ಲಿರುವವನು, ಮೃಡಃ= ರಕ್ಷಿಸುವವನು, ಸರ್ವಸ್ಯ ವ್ಯಾಸಃ= ಎಲ್ಲವನ್ನೂ ವಿಸ್ತಾರ ಮಾಡುವವನು, ಸಂಕ್ಷೇಪಃ= ಸಂಕ್ಷೇಪಗೊಳಿಸುವವನು, ವಿಸ್ತರಃ= ವಿಶಾಲನಾದವನು, ಪರ್ಯಯಃ= ಯುಗ ಪ್ರವರ್ತಕನಾದವನು, ನಯಃ= ನೀತಿರೂಪನಾದವನು.

ಋತುಃ ಸಂವತ್ಸರೋ ಮಾಸಃ ಪಕ್ಷಃ ಸಂಖ್ಯಾಸಮಾಪನಃ ।
ಕಲಾಃ ಕಾಷ್ಠಾ ಲವೋ ಮಾತ್ರಾ ಮುಹೂರ್ತೋ೯ಽಹಃ ಕ್ಷಪಾಃ ಕ್ಷಣಾಃ ॥

ಋತುಃ= ಋತುನಿಯಾಮಕನು, ಸಂವತ್ಸರಃ= ಸಂವತ್ಸರ ನಿಯಾಮಕ, ಮಾಸಃ= ಮಾಸನಿಯಾಮಕನು, ಪಕ್ಷಃ= ಪಕ್ಷನಿಯಾಮಕನು, ಸಂಖ್ಯಾಸಮಾಪನಃ= ಸಂಖ್ಯೆಯನ್ನು ಕೊನೆ ಮಾಡುವವನು, ಕಲಾಃ= ಕಲೆಗಳಿಗೆ ಒಡೆಯ, ಕಾಷ್ಠಾ= ಕಾಷ್ಠಗಳಿಗೆ ನಿಯಾಮಕ, ಲವ= ಲವನಿಯಾಮಕ, ಮಾತ್ರಾ= ಮಾತ್ರಾನಿಯಾಮಕ, ಮುಹೂರ್ತಃ= ಮುಹೂರ್ತ ನಿಯಾಮಕ, ಅಹಃ= ಹಗಲಿನ ನಿಯಾಮಕ, ಕ್ಷಪಾಃ= ರಾತ್ರಿಯ ನಿಯಾಮಕ, ಕ್ಷಣಾಃ= ಕ್ಷಣಗಳ ನಿಯಾಮಕ.

ವಿಶ್ವಕ್ಷೇತ್ರಂ ಪ್ರಜಾಬೀಜಂ ಲಿಂಗಮಾದ್ಯಸ್ತ ನಿಂದಿತಃ ।
ಸದಸದ್ವ್ಯಕ್ತಮವ್ಯಕ್ತಂ ಪಿತಾ ಮಾತಾ ಪಿತಾಮಹಃ ॥೧೪೦॥

ವಿಶ್ವಕ್ಷೇತ್ರಂ= ಜಗತ್ತು ಅಭಿವೃದ್ಧಿಯನ್ನು ಹೊಂದುವ ಕ್ಷೇತ್ರರೂಪನಾಗಿರುವವನು, ಪ್ರಜಾಬೀಜಂ= ಪ್ರಜೆಗಳಿಗೆ ಕಾರಣನಾದವನು, ಲಿಂಗಂ= ಲಿಂಗರೂಪನಾದವನು, ಆದ್ಯಃ= ಮೊದಲಿನಲ್ಲಿರುವವನು, ಅನಿಂದಿತಃ= ಅನಿಂದ್ಯನು, ಸದಸತ್= ಕಾರ್ಯಕಾರಣದಲ್ಲಿ ಇರುವವನು, ವ್ಯಕ್ತಮವ್ಯಕ್ತಂ= ವ್ಯಕ್ತ-ಅವ್ಯಕ್ತ ರೂಪನು, ಪಿತಾ= ಜಗತ್ತನ್ನು ಪಾಲಿಸುವವನು, ಮಾತಾ= ತಾಯಿಯಂತೆ ರಕ್ಷಿಸುವವನು, ಪಿತಾಮಹಃ= ಜಗತ್ತಿಗೆ ಪಿತಾಮಹನಾದವನು.

ಸ್ವರ್ಗದ್ವಾರಂ ಪ್ರಜಾದ್ವಾರಂ ಮೋಕ್ಷದ್ವಾರಂ ತ್ರಿವಿಷ್ಟಪಮ್ ।
ನಿರ್ವಾಣಂ ಹ್ಲಾದನಂ ಚೈವ ಬ್ರಹ್ಮಲೋಕಃ ಪರಾ ಗತಿಃ ॥೧೪೧॥

ಸ್ವರ್ಗದ್ವಾರಂ= ಸ್ವರ್ಗಕ್ಕೆ ಕಾರಣನಾದವನು, ಪ್ರಜಾದ್ವಾರಂ= ಪ್ರಜೆಗಳಿಗೆ ಕಾರಣನಾದವನು, ಮೋಕ್ಷದ್ವಾರಂ= ಮೋಕ್ಷಕ್ಕೆ ಕಾರಣನಾದವನು, ತ್ರಿವಿಷ್ಟಪಮ್=

ಸ್ವರ್ಗಕ್ಕೆ ಕಾರಣನಾದವನು, ನಿರ್ವಾಣಂ= ಪ್ರಾಕೃತ ದೇಹರಾಹಿತ್ಯಕ್ಕೆ ಕಾರಣನಾದವನು, ಹ್ಲಾದನಂ= ಸಂತೋಷವನ್ನು ಕೊಡುವವನು, ಬ್ರಹ್ಮಲೋಕಃ= ಬ್ರಹ್ಮನನ್ನು ನೋಡುವವನು, ಪರಾ ಗತಿಃ= ಶ್ರೇಷ್ಠನಾದ ಗಮ್ಯನು.

ದೇವಾಸುರವಿನಿರ್ಮಾತಾ ದೇವಾಸುರಪರಾಯಣಃ ।
ದೇವಾಸುರಗುರುರ್ದೇವೋ ದೇವಾಸುರನಮಸ್ಕೃತಃ ॥೧೪೨॥

ದೇವಾಸುರವಿನಿರ್ಮಾತಾ= ದೇವಾಸುರರನ್ನು ಸೃಷ್ಟಿಸುವವನು, ದೇವಾಸುರ ಪರಾಯಣಃ= ದೇವಾಸುರರಿಗೆ ದೊಡ್ಡ ಆಶ್ರಯನಾದವನು, ದೇವಾಸುರಗುರುಃ= ದೇವಾಸುರರಿಗೆ ಉಪದೇಶಕನಾದವನು, ದೇವಃ= ಸ್ವತಃ ದೇವನು, ದೇವಾಸುರನಮಸ್ಕೃತಃ= ದೇವಾಸುರರಿಂದ ನಮಸ್ಕರಿಸಲ್ಪಡುವವನು.

ದೇವಾಸುರಮಹಾಮಾತ್ರೋ ದೇವಾಸುರಗಣಾಶ್ರಯಃ ।
ದೇವಾಸುರಗಣಾಧ್ಯಕ್ಷೋ ದೇವಾಸುರಗಣಾಗ್ರಣೀಃ ॥೧೪೩॥

ದೇವಾಸುರಮಹಾಮಾತ್ರಃ= ದೇವಾಸುರರಲ್ಲಿ ಪ್ರಧಾನನಾದವನು, ದೇವಾಸುರ ಗಣಾಶ್ರಯಃ= ದೇವಾಸುರ ಗಣಗಳಿಗೆ ಆಶ್ರಯನಾದವನು, ದೇವಾಸುರಗಣಾಧ್ಯಕ್ಷಃ= ದೇವಾಸುರ ಗಣಗಳನ್ನು ಮೇಲಿನಿಂದ ನೋಡುವವನು, ದೇವಾಸುರಗಣಾಗ್ರಣೀಃ= ದೇವಾಸುರ ಗಣಗಳಿಗೆ ನಾಯಕನಾದವನು.

ದೇವಾತಿದೇವೋ ದೇವರ್ಷಿರ್ದೇವಾಸುರವರಪ್ರದಃ ।
ದೇವಾಸುರೇಶ್ವರೋ ವಿಶ್ವೋ ದೇವಾಸುರಮಹೇಶ್ವರಃ ॥೧೪೪॥

ದೇವಾತಿದೇವಃ= ದೇವತೆಗಳನ್ನು ಮೀರಿದ ದೇವನು, ದೇವರ್ಷಿಃ= ದೇವರ್ಷಿಯಾದವನು, ದೇವಾಸುರವರಪ್ರದಃ= ದೇವಾಸುರರಿಗೆ ವರವನ್ನು ನೀಡುವವನು, ದೇವಾಸುರೇಶ್ವರಃ= ದೇವಾಸುರರಿಗೆ ಒಡೆಯನಾದವನು, ವಿಶ್ವಃ= ವಿಶ್ವರೂಪನಾದವನು, ದೇವಾಸುರಮಹೇಶ್ವರಃ= ದೇವಾಸುರರಿಗೆ ದೊಡ್ಡ ಪ್ರಭುವಾದವನು.

ಸರ್ವದೇವಮಯೋಽಚಿಂತ್ಯೋ ದೇವತಾತ್ಮಾತ್ಮಸಂಭವಃ ।
ಉದ್ಭಿದಸ್ತ್ರಿಕ್ರಮೋ ವೈದ್ಯೋ ವಿರಜೋ ವಿರಜೋಂಬರಃ ॥೧೪೫॥

ಸರ್ವದೇವಮಯಃ= ಎಲ್ಲ ದೇವತೆಗಳಲ್ಲಿ ಪ್ರಭುವಾದವನು, ಅಚಿಂತ್ಯಃ= ಭಕ್ತರ ಚಿಂತನೆಯನ್ನು ಮೀರಿದವನು, ದೇವತಾತ್ಮಾ= ದೇವತಾಸ್ವರೂಪನು, ಆತ್ಮಸಂಭವಃ= ತನ್ನಿಂದಲೇ ಜನಿಸಿದವನು, ಉದ್ಭಿದಃ= ಭೂಮಿಯನ್ನು ಒಡೆದು ಮೇಲೆ ಬರುವ ಸಸ್ಯದಲ್ಲಿರುವವನು, ತ್ರಿಕ್ರಮಃ= ಮೂರು ವಿಧವಾದ ನಡಿಗೆಯುಳ್ಳವನು, ವೈದ್ಯಃ= ಭವರೋಗವೈದ್ಯನು, ವಿರಜಃ= ದೋಷದೂರನು, ವಿರಜೋಂಬರಃ= ಶುಭ್ರವಸ್ತ್ರವನ್ನು ಧರಿಸಿದವನು.

ಈಡ್ಯೋ ಹಸ್ತೀ ಸುರವ್ಯಾಘ್ರೋ ದೇವಸಿಂಹೋ ನರರ್ಷಭಃ ।
ವಿಬುಧಾಗ್ರವರಃ ಶ್ರೇಷ್ಠಃ ಸರ್ವದೇವೋತ್ತಮೋತ್ತಮಃ ॥೧೪೬॥

ಈಡ್ಯಃ= ಸ್ತೋತ್ರ ಮಾಡಲ್ಪಡುವವನು, ಹಸ್ತೀ= ಪ್ರಶಸ್ತವಾದ ಹಸ್ತವುಳ್ಳವನು, ಸುರವ್ಯಾಘ್ರಃ= ದೇವತೆಗಳಲ್ಲಿ ಪ್ರಧಾನನಾದವನು, ದೇವಸಿಂಹಃ= ದೇವತೆಗಳಲ್ಲಿ ಸಿಂಹದಂತೆ ಶ್ರೇಷ್ಠನಾದವನು, ನರರ್ಷಭಃ= ಮನುಷ್ಯರಲ್ಲಿಯೂ ಶ್ರೇಷ್ಠನಾದವನು, ವಿಬುಧಾಗ್ರವರಃ= ದೇವತೆಗಳಿಗೆ ಶ್ರೇಷ್ಠವಾದ ವರವನ್ನು ಕೊಡುವವನು, ಶ್ರೇಷ್ಠಃ= ಸ್ವತಃ ಶ್ರೇಷ್ಠನಾದವನು, ಸರ್ವದೇವೋತ್ತಮೋತ್ತಮಃ= ಎಲ್ಲ ದೇವತೆಗಳಲ್ಲಿ ಉತ್ತಮೋತ್ತಮನಾದವನು.

ಸುಯುಕ್ತಃ ಶೋಭನೋ ವಜ್ರ ಈಶಾನಃ ಪ್ರಭುರವ್ಯಯಃ ।
ಗುರುಃ ಕಾಂತೋ ನಿಜಃ ಸರ್ಗಃ ಪವಿತ್ರಃ ಸರ್ವವಾಹನಃ ॥೧೪೭॥

ಸುಯುಕ್ತಃ= ಒಳ್ಳೆಯ ಯೋಗದಿಂದ ಕೂಡಿದವನು, ಶೋಭನಃ= ಮಂಗಳ ಸ್ವರೂಪನು, ವಜ್ರಃ= ವಜ್ರಾಯುಧದಲ್ಲಿ ಇರುವವನು, ಈಶಾನಃ= ಈಶಾನನು, ಪ್ರಭುಃ= ಒಡೆಯನು, ಅವ್ಯಯಃ= ನಾಶರಹಿತನು, ಗುರುಃ= ಉಪದೇಶಕನು, ಕಾಂತಃ= ಮನೋಹರನಾದವನು, ನಿಜಃ= ಭಕ್ತರಿಗೆ ಸೇರಿದವನು, ಸರ್ಗಃ= ಸೃಷ್ಟಿಕರ್ತ, ಪವಿತ್ರಃ= ಪವಿತ್ರನು, ಸರ್ವವಾಹನಃ= ಎಲ್ಲ ವಾಹನಗಳನ್ನು ಹೊಂದಿದವನು.

ಶೃಂಗೀ ಶೃಂಗಪ್ರಿಯೋ ಬಭ್ರೂ ರಾಜರಾಜೋ ನಿರಾಮಯಃ ।
ಅಭಿರಾಮಃ ಸುರಗಣೋ ವಿರಾಮಃ ಸರ್ವಸಾಧನಃ ॥೧೪೮॥

ಶೃಂಗೀ= ಶೃಂಗವನ್ನು ಧರಿಸಿದವನು, ಶೃಂಗಪ್ರಿಯಃ= ಶೃಂಗಪ್ರಿಯನಾದವನು, ಬಭ್ರೂಃ= ಜಗತ್ತನ್ನು ವಿಶೇಷವಾಗಿ ಭರಿಸುವವನು, ರಾಜರಾಜಃ= ರಾಜರಿಗೂ

ರಾಜನಾದವನು, ನಿರಾಮಯಃ= ರೋಗರಹಿತನು, ಅಭಿರಾಮಃ= ಸುಖರೂಪನು, ಸುರಗಣಃ= ದೇವತೆಗಳ ಗಣಗಳನ್ನು ಹೊಂದಿದವನು, ವಿರಾಮಃ= ಎಲ್ಲವನ್ನೂ ಕೊನೆಗೊಳಿಸುವವನು, ಸರ್ವಸಾಧನಃ= ಎಲ್ಲದಕ್ಕೂ ಸಾಧನನಾದವನು.

ಲಲಾಟಾಕ್ಷೋ ವಿಶ್ವದೇಹೋ ಹರಿಣೋ ಬ್ರಹ್ಮವರ್ಚಸಃ ।
ಸ್ಥಾವರಾಣಾಂ ಪತಿಶ್ಚೈವ ನಿಯಮೇಂದ್ರಿಯವರ್ಧನಃ ॥೧೪೯॥

ಲಲಾಟಾಕ್ಷಃ= ಹಣೆಯಲ್ಲಿ ಕಣ್ಣುಳ್ಳವನು, ವಿಶ್ವದೇಹಃ= ಜಗತ್ತನ್ನೇ ದೇಹವಾಗಿ ಹೊಂದಿದವನು, ಹರಿಣಃ= ಜಿಂಕೆಗಳಲ್ಲಿ ಇರುವವನು, ಬ್ರಹ್ಮವರ್ಚಸಃ= ಬ್ರಹ್ಮವರ್ಚಸ್ವಿ, ಸ್ಥಾವರಾಣಾಂ ಪತಿಃ= ವೃಕ್ಷಗಳಿಗೆ ಒಡೆಯ, ನಿಯಮೇಂದ್ರಿಯವರ್ಧನಃ= ನಿಯಮಗಳನ್ನು ಮತ್ತು ಇಂದ್ರಿಯಗಳನ್ನು ಅಭಿವೃದ್ಧಿಗೊಳಿಸುವವನು.

ಸಿದ್ಧಾರ್ಥಃ ಸರ್ವಭೂತಾರ್ಥೋಽಚಿಂತ್ಯಃ ಸತ್ಯವ್ರತಃ ಶುಚಿಃ ।
ವ್ರತಾಧಿಪಃ ಪರಂ ಬ್ರಹ್ಮ ಮುಕ್ತಾನಾಂ ಪರಮಾ ಗತಿಃ ॥೧೫೦॥

ಸಿದ್ಧಾರ್ಥಃ= ಲಬ್ಧವಾದ ಪುರುಷಾರ್ಥವುಳ್ಳವನು, ಸರ್ವಭೂತಾರ್ಥಃ= ಸರ್ವ ಪ್ರಾಣಿಗಳಿಗೆ ಪುರುಷಾರ್ಥವನ್ನು ಕೊಡುವವನು, ಅಚಿಂತ್ಯಃ= ಚಿಂತೆಯನ್ನು ಮೀರಿದವನು, ಸತ್ಯವ್ರತಃ= ಸತ್ಯವಾದ ವ್ರತವುಳ್ಳವನು, ಶುಚಿಃ= ಶುದ್ಧನಾದವನು, ವ್ರತಾಧಿಪಃ= ವ್ರತಗಳಿಗೆ ಒಡೆಯ, ಪರಂ ಬ್ರಹ್ಮ= ಪರಬ್ರಹ್ಮನಾದವನು, ಮುಕ್ತಾನಾಂ ಪರಮಾ ಗತಿಃ= ಮುಕ್ತರಿಗೆ ಆಶ್ರಯನಾದವನು.

ವಿಮುಕ್ತೋ ಮುಕ್ತತೇಜಾಶ್ಚ ಶ್ರೀಮಾನ್ ಶ್ರೀವರ್ಧನೋ ಜಗತ್ ।
ಯಥಾಪ್ರಧಾನಂ ಭಗವಾನಿತಿ ಭಕ್ತ್ಯಾ ಸ್ತುತೋ ಮಯಾ ॥೧೫೧॥

ವಿಮುಕ್ತಃ= ಮುಕ್ತನಾದವನು, ಮುಕ್ತತೇಜಾಃ= ಶತ್ರುಗಳಿಗೆ ತನ್ನ ತೇಜಸ್ಸನ್ನು ತೋರಿಸುವವನು, ಶ್ರೀಮಾನ್= ಕಾಂತಿಯುಕ್ತನಾದವನು, ಶ್ರೀವರ್ಧನಃ= ಕಾಂತಿಯನ್ನು ಹೆಚ್ಚಿಸುವವನು, ಜಗತ್= ಸಂಚರಿಸುವವನು. ಅವನ ಪ್ರಾಧಾನ್ಯಕ್ಕೆ ಅನುಗುಣವಾಗಿ ಅವನನ್ನು ಭಗವಂತನೆಂದು ನಾನು ಭಕ್ತಿಯಿಂದ ಸ್ತೋತ್ರ ಮಾಡಿದೆನು.

ಯಂ ನ ಬ್ರಹ್ಮಾದಯೋ ದೇವಾ ವಿದುರ್ಯಂ ನ ಮಹರ್ಷಯಃ ।
ಸ್ತೋತವ್ಯಮರ್ಚ್ಯಂ ವಂದ್ಯಂ ಚ ಕಃ ಸ್ತೋಷ್ಯತಿ ಜಗತ್ಪತಿಮ್ ॥೧೫೨॥

ಯಾವನನ್ನು ಬ್ರಹ್ಮಾದಿ ದೇವತೆಗಳು, ಮಹರ್ಷಿಗಳು ತಿಳಿದಿಲ್ಲವೋ ಅಂತಹ ಸ್ತೋತ್ರ ಮಾಡಲು ಅರ್ಹನಾದ, ಪೂಜಿಸಲು-ನಮಸ್ಕರಿಸಲು ಅರ್ಹನಾದ ಜಗತ್ಪತಿಯನ್ನು ಯಾವನು ಸ್ತೋತ್ರ ಮಾಡುವನು?

ಭಕ್ತಿಂ ತ್ವೇವಂ ಪುರಸ್ಕೃತ್ಯ ಮಯಾ ಯಜ್ಞಪತಿರ್ವಸುಃ ।
ತತೋಽಭ್ಯನುಜ್ಞಾಂ ಪ್ರಾಪ್ಯೈವ ಸ್ತುತೋ ಮತಿಮತಾಂ ವರಃ ॥೧೫೩॥

ನಾನು ನನ್ನ ಭಕ್ತಿಯನ್ನು ಮುಂದೆ ಮಾಡಿಕೊಂಡು, ಆ ಜಗತ್ಪತಿಯಿಂದಲೇ ಅನುಮತಿಯನ್ನು ಪಡೆದು, ಯಜ್ಞಪತಿಯೂ, ಮೇಧಾವಿಗಳಲ್ಲಿ ಶ್ರೇಷ್ಠನೂ, ಸರ್ವನಿವಾಸ ಸ್ಥಾನನೂ ಆದ ಅವನನ್ನು ಸ್ತೋತ್ರ ಮಾಡಿದೆನು.

ಶಿವಮೇಭಿಃ ಸ್ತುವನ್ ದೇವಂ ನಾಮಭಿಃ ಪುಷ್ಟಿವರ್ಧನೈಃ ।
ನಿತ್ಯಯುಕ್ತಃ ಶುಚಿರ್ಭೂತ್ವಾ ಪ್ರಾಪ್ನೋತ್ಯಾತ್ಮಾನಮಾತ್ಮನಾ ॥೧೫೪॥

ಯಾವ ಪುರುಷನು ಶುಚಿಯಾಗಿ ನಿತ್ಯದಲ್ಲಿಯೂ ಶಿವನ ಯೋಗಯುಕ್ತನಾಗಿ, ಪುಷ್ಟಿವರ್ಧಕವಾದ ಈ ನಾಮಗಳಿಂದ ದೇವನಾದ ಶಿವನನ್ನು ಸ್ತೋತ್ರ ಮಾಡುತ್ತಾನೆಯೋ ಅವನು ಶಿವನಿಂದ ಎಲ್ಲವನ್ನೂ ಪಡೆಯುತ್ತಾನೆ.

ಏತದ್ಧಿ ಪರಮಂ ಬ್ರಹ್ಮ ಸ್ವಯಂ ಗೀತಂ ಸ್ವಯಂಭುವಾ ।
ಋಷಯಶ್ಚೈವ ದೇವಾಶ್ಚ ಸ್ತುವಂತ್ಯೇತೇನ ತತ್ಪರಮ್ ॥೧೫೫॥

ಇದು ಬ್ರಹ್ಮದೇವರು ಸ್ವತಃ ಗಾನ ಮಾಡಿದ ಶ್ರೇಷ್ಠವಾದ ಸ್ತೋತ್ರ. ಋಷಿಗಳು ಮತ್ತು ದೇವತೆಗಳು ಈ ಸ್ತೋತ್ರದಿಂದ ಶ್ರೇಷ್ಠನಾದ ಶಿವನನ್ನು ಸ್ತೋತ್ರ ಮಾಡುತ್ತಾರೆ.

ಸ್ತೂಯಮಾನೋ ಮಹಾದೇವಃ ಪ್ರೀಯತೇ ಚಾತ್ಮನಾಮಭಿಃ ।
ಭಕ್ತಾನುಕಂಪೀ ಭಗವಾನಾತ್ಮಸಂಸ್ಥಾನ್ ಕರೋತಿ ತಾನ್ ॥೧೫೬॥

ತನ್ನ ನಾಮಗಳಿಂದ ಸ್ತೋತ್ರ ಮಾಡಲ್ಪಟ್ಟ ಮಹಾದೇವನು ಪ್ರಸನ್ನನಾಗುತ್ತಾನೆ. ಭಕ್ತಾನುಕಂಪಿಯಾದ ಆ ಭಗವಂತನು ಅವರನ್ನು ತನ್ನಲ್ಲಿಯೇ ಇರಿಸಿಕೊಳ್ಳುತ್ತಾನೆ.

ತಥೈವ ಚ ಮನುಷ್ಯೇಷು ಯೇ ಮನುಷ್ಯಾಃ ಪ್ರಧಾನತಃ ।
ಆಸ್ತಿಕಾಃ ಶ್ರದ್ದಧಾನಾಶ್ಚ ಬಹುಭಿರ್ಜನ್ಮಭಿಃ ಸ್ತವೈಃ ॥೧೫೭॥

ಭಕ್ತ್ಯಾ ಹ್ಯನನ್ಯಮೀಶಾನಂ ಪರಂ ದೇವಂ ಸನಾತನಮ್ ।
ಕರ್ಮಣಾ ಮನಸಾ ವಾಚಾ ಭಾವೇನಾಮಿತತೇಜಸಃ ॥೧೫೮॥

ಸ್ವಪಂತೋ ಜಾಗ್ರಮಾಣಾಶ್ಚ ವ್ರಜನ್ನುಪವಿಶಂಸ್ತಥಾ ।
ಉನ್ಮಿಷನ್ ನಿಮಿಷಂಶ್ಚೈವ ಚಿಂತಯಂತಃ ಪುನಃ ಪುನಃ ॥೧೫೯॥

ಜಾಗ್ರತಶ್ಚ ಸ್ವಪಂತಶ್ಚ ವ್ರಜಂತಃ ಪಥಿ ಸಂಸ್ಥಿತಾಃ ।
ಸ್ತುವಂತಿ ಸ್ತೂಯಮಾನಾಶ್ಚ ತುಷ್ಯಂತಿ ಚ ರಮಂತಿ ಚ ॥೧೬೦॥

ಹಾಗೆಯೇ ಮನುಷ್ಯರಲ್ಲಿ ಯಾರು ಪ್ರಧಾನವಾಗಿ ಆಸ್ತಿಕರೂ, ಶ್ರದ್ಧೆಯುಳ್ಳವರೂ ಆಗಿದ್ದಾರೆಯೋ ಅವರು ಅನೇಕ ಜನ್ಮಗಳಲ್ಲಿ ಭಕ್ತಿಯಿಂದ ಅನನ್ಯನಾದ, ಪರದೇವನಾದ, ಸನಾತನನಾದ ಈಶ್ವರನನ್ನು ಕರ್ಮದಿಂದಲೂ, ಮನಸ್ಸಿನಿಂದಲೂ, ಮಾತಿನಿಂದಲೂ ಭಕ್ತಿಯಿಂದಲೂ ಸ್ತೋತ್ರ ಮಾಡುತ್ತಾರೆಯೋ, ಮಲಗುವಾಗಲೂ, ಎಚ್ಚರದಲ್ಲೂ, ನಡೆಯುವಾಗಲೂ, ಕುಳಿತುಕೊಳ್ಳುವಾಗಲೂ, ಕಣ್ಣಿನ ರೆಪ್ಪೆಯನ್ನು ಮುಚ್ಚಿ ಬಿಡುವಾಗಲೂ ಪುನಃ ಪುನಃ ಅವನನ್ನೇ ಚಿಂತಿಸುತ್ತಾರೆಯೋ ಎಚ್ಚರವಾಗಿರುವಾಗ, ಮಲಗಿರುವಾಗ, ನಡೆಯುವಾಗ, ದಾರಿಯಲ್ಲಿ ಇರುವಾಗ ಅವನನ್ನು ಸ್ತೋತ್ರ ಮಾಡುತ್ತಾರೆಯೋ, ಉಳಿದವರಿಂದ ಸ್ತೋತ್ರ ಮಾಡಿಸಲ್ಪಡುತ್ತಾರೆಯೋ ಅಂತಹ ಮನುಷ್ಯರು ತೃಪ್ತಿಯನ್ನು ಮತ್ತು ಸಂತೋಷವನ್ನು ಹೊಂದುತ್ತಾರೆ.

ಜನ್ಮಕೋಟಿಸಹಸ್ರೇಷು ನಾನಾಸಂಸಾರಯೋನಿಷು ।
ಜಂತೋರ್ವಿಶುದ್ಧಪಾಪಸ್ಯ ಭವೇ ಭಕ್ತಿಃ ಪ್ರಜಾಯತೇ ।
ಉತ್ಪನ್ನಾ ಚ ಭವೇ ಭಕ್ತಿರನನ್ಯಾ ಸರ್ವಭಾವತಃ ॥೧೬೧॥

ಅನೇಕ ಸಹಸ್ರಕೋಟಿ ಜನ್ಮಗಳಲ್ಲಿ, ನಾನಾ ಸಂಸಾರಯೋನಿಗಳಲ್ಲಿ ತಿರುಗಿ ಪಾಪವನ್ನು ಕಳೆದುಕೊಂಡ ಜೀವನಿಗೆ ಶಿವನಲ್ಲಿ ಭಕ್ತಿಯುಂಟಾಗುತ್ತದೆ. ಶಿವನಲ್ಲಿ ಉಂಟಾದ ಅಂತಹ ಭಕ್ತಿ ಅತಿಶ್ರೇಷ್ಠವಾಗಿದ್ದು ಎಲ್ಲವನ್ನೂ ಸಂಪಾದಿಸಿಕೊಡುತ್ತದೆ.

ಭಾವಿನಃ ಕಾರಣಂ ತಸ್ಯ ಸರ್ವಮುಕ್ತಸ್ಯ ಸರ್ವತಃ ।
ಏತದ್ ದೇವೇಷು ದುಷ್ಪ್ರಾಪಂ ಮನುಷ್ಯೇಷು ನ ಲಭ್ಯತೇ ॥೧೬೨॥

ಸರ್ವಮುಕ್ತನಾದ ಅವನಿಗೆ ಮುಂದೆ ಉಂಟಾಗುವ ಶುಭಕ್ಕೆಲ್ಲ ಕಾರಣವಾಗುತ್ತದೆ. ಅಂತಹ ಭಕ್ತಿಯು ದೇವತೆಗಳಿಗೂ ಪಡೆಯಲು ಕಷ್ಟಸಾಧ್ಯವಾದುದು. ಮನುಷ್ಯರಿಗೆ ಅಂತಹ ಭಕ್ತಿಯು ಬರುವುದಿಲ್ಲ.

ನಿರ್ವಿಘ್ನಾ ನಿಶ್ಚಲಾ ರುದ್ರೇ ಭಕ್ತಿರವ್ಯಭಿಚಾರಿಣೀ ।
ತಸ್ಯೈವ ಚ ಪ್ರಸಾದೇನ ಭಕ್ತಿರುತ್ಪದ್ಯತೇ ನೃಣಾಮ್ ।
ಯಯಾ ಯಾಂತಿ ಪರಾಂ ಸಿದ್ಧಿಂ ತದ್ಭಾವಗತಚೇತಸಃ ॥೧೬೩॥

ಶಿವನ ಪ್ರಸಾದದಿಂದ ಮನುಷ್ಯರಿಗೆ ಅವನಲ್ಲಿ ಪ್ರತಿಬಂಧರಹಿತವಾದ, ಅವ್ಯಭಿಚರಿತವಾದ, ನಿಶ್ಚಲವಾದ ಭಕ್ತಿಯುಂಟಾಗುತ್ತದೆ. ಅವನನ್ನೇ ಚಿಂತಿಸಿ ಪವಿತ್ರವಾದ ಮನಸ್ಸಿನಿಂದ, ಆ ಭಕ್ತಿಯಿಂದ ಅವರು ಶ್ರೇಷ್ಠವಾದ ಸಿದ್ಧಿಯನ್ನು ಪಡೆಯುತ್ತಾರೆ.

ಯೇ ಸರ್ವಭಾವೋಪಗತಾಃ ಪರತ್ವೇನಾಭವನ್ ನರಾಃ ।
ಪ್ರಪನ್ನವತ್ಸಲೋ ದೇವಃ ಸಂಸಾರಾತ್ ತಾನ್ ಸಮುದ್ಧರೇತ್ ॥೧೬೪॥

ಯಾರು ಸರ್ವಪ್ರಕಾರದಿಂದ ಅವನನ್ನು ಶ್ರೇಷ್ಠನೆಂದು ಚಿಂತಿಸಿ, ಅವನಿಗೆ ಶರಣಾಗತರಾಗುತ್ತಾರೆಯೋ ಅಂತಹ ಮನುಷ್ಯರನ್ನು ಪ್ರಪನ್ನವತ್ಸಲನಾದ ದೇವನು ಸಂಸಾರದಿಂದ ದಾಟಿಸುತ್ತಾನೆ.

ಏವಮನ್ಯೇ ನ ಕುರ್ವಂತಿ ದೇವಾಃ ಸಂಸಾರಮೋಚನಮ್ ।
ಮನುಷ್ಯಾಣಾಂ ಮಹಾದೇವಾದನ್ಯತ್ರಾಪಿ ತಪೋಬಲಾತ್ ॥೧೬೫॥

ಆ ರೀತಿಯಲ್ಲಿ ಬೇರೆ ದೇವತೆಗಳು ಮಹಾದೇವನು ತಪೋಬಲದಿಂದ ಸಂಸಾರಮೋಚನೆಯನ್ನು ಮಾಡಿದಂತೆ ಮನುಷ್ಯರಿಗೆ ಸಂಸಾರಮೋಚನೆಯನ್ನು ಮಾಡುವುದಿಲ್ಲ.

ಇತಿ ತೇನೇಂದ್ರಕಲ್ಪೇನ ಭಗವಾನ್ ಸದಸತ್ಪತಿಃ ।
ಕೃತ್ತಿವಾಸಾಃ ಸ್ತುತಃ ಕೃಷ್ಣ ತಂಡಿನಾ ಶುದ್ಧಬುದ್ಧಿನಾ ॥೧೬೬॥

ಎಲೈ ಪುರುಷನೇ, ಈ ರೀತಿಯಾಗಿ ಇಂದ್ರನಿಗೆ ಸಮಾನವಾದ ಶುದ್ಧ ಬುದ್ಧಿಯುಳ್ಳ

ತಂಡಿಯಿಂದ ಭಗವಂತನೂ, ಚರ್ಮಾಂಬರನೂ ಆದ ಶಿವನು ಸ್ತೋತ್ರ ಮಾಡಲ್ಪಟ್ಟನು.

ಸ್ತವಮೇತಂ ಭಗವತೋ ಬ್ರಹ್ಮಾ ಸ್ವಯಮಧಾರಯತ್ ।
ಗೀಯತೇ ಚ ಸ ಬುದ್ಧ್ಯೇತ ಬ್ರಹ್ಮಾ ಶಂಕರಸನ್ನಿಧೌ ॥೧೬೭॥

ಇದಂ ಪುಣ್ಯಂ ಪವಿತ್ರಂ ಚ ಸರ್ವದಾ ಪಾಪನಾಶನಮ್ ।
ಯೋಗದಂ ಮೋಕ್ಷದಂ ಚೈವ ಸ್ವರ್ಗದಂ ತೋಷದಂ ತಥಾ ॥೧೬೮॥

ಬ್ರಹ್ಮದೇವನು ಈ ಸ್ತೋತ್ರವನ್ನು ಸ್ವತಃ ಧರಿಸಿ ಶಂಕರನ ಸನ್ನಿಧಿಯಲ್ಲಿ ಗಾನವನ್ನು ಮಾಡಿ ವೃದ್ಧಿಯನ್ನು ಹೊಂದಿದನು. ಇದು ಪುಣ್ಯಪ್ರದವಾದುದು, ಪವಿತ್ರವಾದುದು, ಪಾಪನಾಶನವಾದುದು, ಯೋಗವನ್ನು ಕೊಡುವಂತಹದು, ಮೋಕ್ಷವನ್ನೂ, ಸ್ವರ್ಗವನ್ನೂ, ಸಂತೋಷವನ್ನೂ ಕೊಡುವಂತಹದು.

ಏವಮೇತತ್ ಪಠಂತೇ ಯೇ ಏಕಭಕ್ತ್ಯಾ ತು ಶಂಕರೇ ।
ಯಾ ಗತಿಃ ಸಾಂಖ್ಯಯೋಗಾನಾಂ ವ್ರಜಂತ್ಯೇತಾಂ ಗತಿಂ ತದಾ ॥೧೬೯॥

ನಿಶ್ಚಲವಾದ ಭಕ್ತಿಯಿಂದ ಶಂಕರನ ಸ್ತೋತ್ರವನ್ನು ಯಾರು ಪಠಿಸುತ್ತಾರೆಯೋ ಅವರು ಸಾಂಖ್ಯಯೋಗಗಳಲ್ಲಿ ಹೇಳಿದ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾರೆ.

ಸ್ತವಮೇತಂ ಪ್ರಯತ್ನೇನ ಸದಾ ರುದ್ರಸ್ಯ ಸನ್ನಿಧೌ ।
ಅಬ್ದಮೇಕಂ ಚರೇದ್ ಭಕ್ತಃ ಪ್ರಾಪ್ನುಯಾದೀಪ್ಸಿತಂ ಫಲಮ್ ॥೧೭೦॥

ಭಕ್ತನಾದವನು ರುದ್ರನ ಸನ್ನಿಧಿಯಲ್ಲಿ ಒಂದು ವರ್ಷದ ಕಾಲ ಪ್ರಯತ್ನ ಪೂರ್ವಕವಾಗಿ ಈ ಸ್ತೋತ್ರವನ್ನು ಹೇಳಿದರೆ ತನ್ನ ಅಭೀಷ್ಟವಾದ ಫಲವನ್ನು ಪಡೆಯುತ್ತಾನೆ.

ಏತದ್ ರಹಸ್ಯಂ ಪರಮಂ ಬ್ರಹ್ಮಣೋ ಹೃದಿ ಸಂಸ್ಥಿತಮ್ ।
ಬ್ರಹ್ಮಾ ಪ್ರೋವಾಚ ಶಕ್ರಾಯ ಶಕ್ರಃ ಪ್ರೋವಾಚ ಮೃತ್ಯವೇ ॥೧೭೧॥

ಇದು ಬ್ರಹ್ಮದೇವನ ಹೃದಯದಲ್ಲಿದ್ದ ಪರಮ ರಹಸ್ಯವಾದ ಸ್ತೋತ್ರ. ಬ್ರಹ್ಮನು ಇಂದ್ರನಿಗೂ, ಇಂದ್ರನು ಮೃತ್ಯುವಿಗೂ ಹೇಳಿದನು.

ಮೃತ್ಯುಃ ಪ್ರೋವಾಚ ರುದ್ರಾಣಾಂ ರುದ್ರೇಭ್ಯಸ್ತಂಡಿಮಾಗಮತ್ ।
ಮಹತಾ ತಪಸಾ ಪ್ರಾಪ್ತಸ್ತಂಡಿನಾ ಬ್ರಹ್ಮಸದ್ಮನಿ ॥೧೭೨॥

ಮೃತ್ಯುವು ರುದ್ರರಿಗೂ, ರುದ್ರರು ತಂಡಿಗೂ ಹೇಳಿದರು. ತಂಡಿಯು ಬ್ರಹ್ಮದೇವರ ಸದನದಲ್ಲಿ ದೊಡ್ಡ ತಪಸ್ಸಿನಿಂದ ಇದನ್ನು ಪಡೆದನು.

ತಂಡಿಃ ಪ್ರೋವಾಚ ಶುಕ್ರಾಯ ಗೌತಮಾಯಾಹ ಭಾರ್ಗವಃ ।
ವೈವಸ್ವತಾಯ ಮನವೇ ಗೌತಮಃ ಪ್ರಾಹ ಮಾಧವ ॥೧೭೩॥

ತಂಡಿಯು ಶುಕ್ರನಿಗೆ ಉಪದೇಶಿಸಿದನು. ಶುಕ್ರನು ಗೌತಮರಿಗೆ ಉಪದೇಶಿಸಿದನು. ಎಲೈ ಮಾಧವನೇ, ಗೌತಮರು ವೈವಸ್ವತ ಮನುವಿಗೆ ಉಪದೇಶಿಸಿದರು.

ನಾರಾಯಣಾಯ ಸಾಧ್ಯಾಯ ಮನುರಿಷ್ಟಾಯ ಧೀಮತೇ ।
ಯಮಾಯ ಪ್ರಾಹ ಭಗವಾನ್ ಸಾಧ್ಯೋ ನಾರಾಯಣೋಽಚ್ಯುತಃ ॥

ಮನುವು ತನಗೆ ಇಷ್ಟನಾದ ಮೇಧಾವಿಯಾದ ಸಾಧ್ಯನಾದ ನಾರಾಯಣನಿಗೆ ಉಪದೇಶಿಸಿದನು. ಸಾಧ್ಯನಾದ ಅಚ್ಯುತನಾದ ಭಗವಂತನು ಯಮನಿಗೆ ಉಪದೇಶಿಸಿದನು.

ನಾಚಿಕೇತಾಯ ಭಗವಾನಾಹ ವೈವಸ್ವತೋ ಯಮಃ ।
ಮಾರ್ಕಂಡೇಯಾಯ ವಾಷ್ಣೇಯ ನಾಚಿಕೇತೋಽಭ್ಯಭಾಷತ ॥೧೭೫॥

ಪೂಜ್ಯನಾದ ಯಮನು ನಚಿಕೇತನಿಗೆ ಉಪದೇಶಿಸಿದನು. ಎಲೈ ವಾಷ್ಣೇಯನೇ, ನಚಿಕೇತನು ಮಾರ್ಕಂಡೇಯರಿಗೆ ಉಪದೇಶಿಸಿದನು.

ಮಾರ್ಕಂಡೇಯಾನ್ಮಯಾ ಪ್ರಾಪ್ತಂ ನಿಯಮೇನ ಜನಾರ್ದನ ।
ತವಾಪ್ಯಹಮಮಿತ್ರಘ್ನ ಸ್ತವಂ ದದ್ಮ್ಯದ್ಯ ವಿಶ್ರುತಮ್ ।
ಸ್ವರ್ಗ್ಯಮಾರೋಗ್ಯಮಾಯುಷ್ಯಂ ಧನ್ಯಂ ಬಲ್ಯಂ ತಥೈವ ಚ ॥೧೭೬॥

ಎಲೈ ಜನಾರ್ದನನೇ, ನಾನು ನಿಯಮವನ್ನು ಧರಿಸಿ ಮಾರ್ಕಂಡೇಯರಿಂದ ಈ ಸ್ತೋತ್ರವನ್ನು ಪಡೆದೆನು. ಎಲೈ ಶತ್ರುಸಂಹಾರಕನೇ, ಈ ದಿನ ನಾನು ನಿನಗೆ ಈ ಪ್ರಖ್ಯಾತವಾದ ಸ್ತೋತ್ರವನ್ನು ಹೇಳುತ್ತಿದ್ದೇನೆ. ಇದು ಸ್ವರ್ಗಪ್ರದವಾದುದು,

ರೋಗನಿವಾರಕವಾದುದು, ಆಯುಃಪ್ರದವಾದುದು, ಧನಪ್ರದವಾದುದು ಮತ್ತು ಬಲಪ್ರದವಾದುದು.

ನ ತಸ್ಯ ವಿಘ್ನಂ ಕುರ್ವಂತಿ ದಾನವಾ ಯಕ್ಷರಾಕ್ಷಸಾಃ ।
ಪಿಶಾಚಾ ಯಾತುಧಾನಾಶ್ಚ ಗುಹ್ಯಕಾ ಭುಜಗಾ ಅಪಿ ॥೧೭೭॥

ಈ ಸ್ತೋತ್ರವನ್ನು ಪಠಿಸುವವನಿಗೆ ದಾನವರಾಗಲೀ, ಯಕ್ಷ-ರಾಕ್ಷಸರಾಗಲೀ, ಪಿಶಾಚಿಗಳಾಗಲೀ, ಯಾತುಧಾನರಾಗಲೀ, ಗುಹ್ಯಕರಾಗಲೀ, ಸರ್ಪಗಳಾಗಲೀ ವಿಘ್ನವನ್ನು ಮಾಡುವುದಿಲ್ಲ.

ಯಃ ಪಠೇತ ಶುಚಿಃ ಪಾರ್ಥ ಬ್ರಹ್ಮಚಾರೀ ಜಿತೇಂದ್ರಿಯಃ ।
ಅಭಗ್ನಯೋಗೋ ವರ್ಷಂ ತು ಸೋಽಶ್ವಮೇಧಫಲಂ ಲಭೇತ್ ॥೧೭೮॥

ಎಲೈ ಪಾರ್ಥನೇ, ಯಾವನು ಬ್ರಹ್ಮಚಾರಿಯಾಗಿ, ಜಿತೇಂದ್ರಿಯನಾಗಿ, ಯೋಗಬಲವನ್ನು ಹೊಂದಿ ಒಂದು ವರ್ಷದ ಕಾಲ ಇದನ್ನು ಪಠಿಸುವನೋ ಅವನಿಗೆ ಅಶ್ವಮೇಧ ಫಲವುಂಟಾಗುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಮಹಾದೇವಸ್ಯ
ಸಹಸ್ರನಾಮಸ್ತುತಿರ್ನಾಮ ಷಟ್‌ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೇಳನೆಯ ಅಧ್ಯಾಯ

ಶಿವಸ್ತುತಿಮಹಾತ್ಮೆ

ವೈಶಂಪಾಯನಃ

ಏವಮುಕ್ತೇ ತು ಕೃಷ್ಣೇನ ತದಾನೀಂ ಜನಮೇಜಯ ।
ಪ್ರಹೃಷ್ಟಾನಾಂ ನಿನಾದೋಭೂನ್ಮುನೀನಾಂ ಸಾಧುಸಾಧ್ವಿತಿ ॥೧॥

ವೈಶಂಪಾಯನ– ಎಲೈ ಜನಮೇಜಯನೇ, ಕೃಷ್ಣನು ಹೀಗೆ ಹೇಳುತ್ತಿರಲು ಆಗ ಸಂತೋಷಗೊಂಡ ಮುನಿಗಳಿಂದ ಸಾಧು-ಸಾಧು ಎಂಬ ಶಬ್ದವು ಕೇಳಿಬಂದಿತು.

ಮಹಾಯೋಗೀ ತತಃ ಪ್ರಾಹ ಕೃಷ್ಣದ್ವೈಪಾಯನೋ ಮುನಿಃ ।
ಪಠಸ್ವ ಪುತ್ರ ಭದ್ರಂ ತೇ ಪ್ರೀಯತಾಂ ತೇ ಮಹೇಶ್ವರಃ ॥೨॥

ಆಗ ಮಹಾಯೋಗಿಗಳಾದ ಕೃಷ್ಣದ್ವೈಪಾಯನರು ಯುಧಿಷ್ಠಿರನನ್ನು ಕುರಿತು ಪುತ್ರನೇ, ನಿನಗೆ ಮಂಗಳವಾಗಲಿ. ಶಿವಸಹಸ್ರನಾಮವನ್ನು ಪಠನ ಮಾಡು. ನಿನಗೆ ಮಹೇಶ್ವರನು ಪ್ರಸನ್ನನಾಗಲಿ ಎಂದು ಹೇಳಿದರು.

ಪುರಾ ಪುತ್ರ ಮಯಾ ಮೇರೌ ತಪ್ಯತಾ ಪರಮಂ ತಪಃ ।
ಪುತ್ರಹೇತೋರ್ಮಹಾರಾಜ ಸ್ತವ ಏಷೋಽನುಕೀರ್ತಿತಃ ॥೩॥

ಎಲೈ ಪುತ್ರನೇ, ಹಿಂದೆ ಪುತ್ರರನ್ನು ಪಡೆಯುವ ಉದ್ದೇಶದಿಂದ ಮೇರುಪರ್ವತದಲ್ಲಿ ನಾನು ದೊಡ್ಡ ತಪಸ್ಸನ್ನು ಮಾಡುತ್ತಿದ್ದಾಗ ಎಲೈ ಮಹಾರಾಜನೇ, ಈ ಸ್ತೋತ್ರವನ್ನು ಹೇಳಿದೆನು.

ಲಬ್ಧವಾನಸ್ಮಿ ತಾನ್ ಕಾಮಾನಹಂ ವೈ ಪಾಂಡುನಂದನ ।
ತಥಾ ತ್ವಮಪಿ ಶರ್ವಾದ್ಧಿ ಸರ್ವಾನ್ ಕಾಮಾನವಾಪ್ಸ್ಯಸಿ ॥೪॥

ಎಲೈ ಪಾಂಡುನಂದನನೇ, ನಾನು ನನ್ನ ಅಭೀಷ್ಟಗಳನ್ನು ಪಡೆದೆನು. ಅದರಂತೆಯೇ ನೀನೂ ಸಹ ಶಿವನಿಂದ ಸರ್ವಾಭೀಷ್ಟಗಳನ್ನು ಪಡೆಯುವಿ (ಎಂದು ಹೇಳಿದರು).

ಕಪಿಲಶ್ಚ ತತಃ ಪ್ರಾಹ ಸಾಂಖ್ಯರ್ಷಿರ್ದೇವಸಮ್ಮತಃ ।
ಮಯಾ ಜನ್ಮಾನ್ಯನೇಕಾನಿ ಶಕ್ತ್ಯಾ ಚಾರಾಧಿತೋ ಭವಃ ।
ಪ್ರೀತಶ್ಚ ಭಗವಾನ್ ಜ್ಞಾನಂ ದದೌ ಮಮ ಭವಾಂತಕಮ್ ॥೫॥

ಅನಂತರ ದೇವತೆಗಳಿಗೆ ಸಮ್ಮತರಾದ, ಸಾಂಖ್ಯಾಚಾರ್ಯರಾದ ಕಪಿಲರು ಮಾತನಾಡಿದರು. ನಾನು ಅನೇಕ ಜನ್ಮಗಳಲ್ಲಿ ಭಕ್ತಿಯಿಂದ ಶಿವನನ್ನು ಆರಾಧಿಸಿದೆನು. ಭಗವಂತನಾದ ಶಿವನು ಪ್ರಸನ್ನನಾಗಿ ನನಗೆ ಸಂಸಾರ ನಾಶಕವಾದ ಜ್ಞಾನವನ್ನು ಕೊಟ್ಟನು.

ಪೃಥುಶೀರ್ಷಸ್ತತಃ ಪ್ರಾಹ ಶಕ್ರಸ್ಯ ದಯಿತಃ ಸಖಾ ।
ಆಲಂಬಾಯನ ಇತ್ಯೇವ ವಿಶ್ರುತಃ ಕರುಣಾತ್ಮಕಃ ॥೬॥

ಅನಂತರ ಪೃಥುಶೀರ್ಷನೆಂಬ ಇಂದ್ರನ ಪ್ರಿಯಸ್ನೇಹಿತರಾದ ಆಲಂಬಾಯನ ಎಂದು ಪ್ರಖ್ಯಾತರಾದ, ಕರುಣಾಮಯರಾದ ಋಷಿಗಳು ಹೇಳಿದರು.

ಮಯಾ ಗೋಕರ್ಣಮಾಸಾದ್ಯ ತಪಸ್ತಪ್ತ್ವಾ ಶತಂ ಸಮಾಃ ।
ಅಯೋನಿಜಾನಾಂ ದಾಂತಾನಾಂ ಧರ್ಮಜ್ಞಾನಾಂ ಸುವರ್ಚಸಾಮ್ ॥

ಅಜರಾಣಾಮದುಃಖಾನಾಂ ಶತವರ್ಷಸಹಸ್ರಿಣಾಮ್ ।
ಲಬ್ಧಂ ಪುತ್ರಶತಂ ಶರ್ವಾತ್ ಪುರಾ ಪಾಂಡುನೃಪಾತ್ಮಜ ॥೬॥

ಎಲೈ ಪಾಂಡುಕುಮಾರನೇ, ನಾನು ಗೋಕರ್ಣಕ್ಕೆ ಹೋಗಿ ನೂರು ವರ್ಷಗಳ ಕಾಲ ತಪಸ್ಸನ್ನು ಮಾಡಿ ಅಯೋನಿಜರಾದ, ಇಂದ್ರಿಯನಿಗ್ರಹವುಳ್ಳ, ಧರ್ಮಜ್ಞರಾದ, ಒಳ್ಳೆಯ ವರ್ಚಸ್ವಿಗಳಾದ, ಮುಪ್ಪಿಲ್ಲದ, ದುಃಖರಹಿತರಾದ, ಶತಸಹಸ್ರ ವರ್ಷ ಆಯುಷ್ಯವುಳ್ಳ ನೂರು ಪುತ್ರರನ್ನು ಶಿವನಿಂದ ಪಡೆದೆನು (ಎಂದು ಹೇಳಿದರು).

ವಾಲ್ಮೀಕಿಶ್ಚಾಪಿ ಭಗವಾನ್ ಯುಧಿಷ್ಠಿರಮಭಾಷತ ।
ವಿವಾದೇ ಸಾಮ್ನಿ ಮುನಿಭಿರ್ಬ್ರಹ್ಮಘ್ನೋ ವೈ ಭವಾನಿತಿ ।
ಉಕ್ತಃ ಕ್ಷಣೇನ ಚಾವಿಷ್ಟಸ್ತೇನಾಧರ್ಮೇಣ ಭಾರತ ॥೭॥

ಸೋಽಹಮೀಶಾನಮನಘಮಸ್ತೌಷಂ ಶರಣಂ ಗತಃ ।
ಮುಕ್ತಶ್ಚಾಸ್ಮ್ಯವಶಃ ಪಾಪೈಃ ತತೋ ದುಃಖವಿನಾಶನಃ ।
ಆಹ ಮಾಂ ತ್ರಿಪುರಘ್ನೋ ವೈ ಯಶಸ್ತೇಽಗ್ರ್ಯಂ ಭವಿಷ್ಯತಿ ॥೮॥

ಪೂಜ್ಯರಾದ ವಾಲ್ಮೀಕಿಗಳು ಯುಧಿಷ್ಠಿರನನ್ನು ಕುರಿತು- 'ಎಲೈ ಭಾರತನೇ, ನಾನು ಸಾಮವನ್ನು ಗಾನ ಮಾಡುವಾಗ ಋಷಿಗಳು, ತಪ್ಪಾಗಿ ಹೇಳಿದೆನೆಂದು ತಿಳಿದು ನನಗೆ ಬ್ರಹ್ಮಹತ್ಯಾ ದೋಷವು ಬಂದಿದೆ ಎಂದು ಹೇಳಿದರು. ಒಂದು ಕ್ಷಣದಲ್ಲಿ ಆ ಅಧರ್ಮದ ದೋಷವು ನನ್ನನ್ನು ಆವರಿಸಿತು. ಆಗ ನಾನು ದೋಷದೂರನಾದ ಈಶಾನನನ್ನು ಶರಣು ಹೊಂದಿದೆನು ಮತ್ತು ಆ ಪಾಪದಿಂದ ವಿಮುಕ್ತನಾದೆನು. ದುಃಖ ಪರಿಹಾರಕನಾದ, ತ್ರಿಪುರಘ್ನನಾದ ಈಶಾನನು ನಿನಗೆ ಶ್ರೇಷ್ಠವಾದ ಕೀರ್ತಿ ಉಂಟಾಗುತ್ತದೆ ಎಂದು ನನಗೆ ಹೇಳಿದನು.

ಜಾಮದಗ್ನ್ಯಶ್ಚ ಕೌಂತೇಯಮಾಹ ಧರ್ಮಭೃತಾಂ ವರಃ ।
ಋಷಿಮಧ್ಯೇ ಸ್ಥಿತಃ ಪ್ರಾಹ ತಪನ್ನಿವ ವಿಭಾವಸುಃ ॥೯॥

ಪಿತೃವಿಪ್ರವಧೇನಾಹಮಾರ್ತೋ ವೈ ಪಾಂಡವಾಗ್ರಜ ।
ಶುಚಿರ್ಭೂತ್ವಾ ಮಹಾದೇವಂ ಗತವಾನ್ ಶರಣಂ ನೃಪ ॥೧೦॥

ಧರ್ಮಿಷ್ಠರಲ್ಲಿ ಶ್ರೇಷ್ಠರಾದ, ಜಮದಗ್ನಿ ಪುತ್ರರಾದ, ಜ್ವಲಿಸುವ ಅಗ್ನಿಯಂತಿರುವ ಪರಶುರಾಮರು ಋಷಿಗಳ ಮಧ್ಯದಲ್ಲಿ ನಿಂತು ಯುಧಿಷ್ಠಿರನನ್ನು ಕುರಿತು- 'ಎಲೈ ಪಾಂಡವರಿಗೆ ಅಣ್ಣನಾದವನೇ, ನಾನು ಪಿತೃ-ವಿಪ್ರ ವಧೆಯಿಂದ ಆರ್ತನಾಗಿ ಶುದ್ಧನಾಗಿ ತಕ್ಷಣ ಮಹಾದೇವನಿಗೆ ಶರಣಾಗತನಾದೆನು.

ನಾಮಭಿಶ್ಚಾಸ್ತುವಂ ದೇವಂ ತತಸ್ತುಷ್ಟೋಽಭವದ್ ಭವಃ ।
ಪರಶುಂ ಚ ತತೋ ದೇವೋ ದಿವ್ಯಾನ್ಯಸ್ತ್ರಾಣಿ ಚೈವ ಮೇ ॥೧೧॥

ಪಾಪಂ ನ ಭವಿತಾ ತೇಽದ್ಯ ಅಜೇಯಶ್ಚ ಭವಿಷ್ಯಸಿ ।
ನ ತೇ ಪ್ರಭವಿತಾ ಮೃತ್ಯುರ್ಯಶಸ್ವೀ ಚ ಭವಿಷ್ಯಸಿ ॥೧೨॥

ಎಲೈ ರಾಜನೇ, ಅವನನ್ನು ಸಹಸ್ರನಾಮಗಳಿಂದ ಸ್ತೋತ್ರ ಮಾಡಿದೆನು. ಸಂತುಷ್ಟನಾದ ಶಿವದೇವನು ನನಗೆ ಪರಶುವನ್ನೂ ಮತ್ತು ದಿವ್ಯಾಸ್ತ್ರಗಳನ್ನೂ ಕೊಟ್ಟನು. ಇಂದು ನಿನಗೆ ಪಾಪವುಂಟಾಗುವುದಿಲ್ಲ. ನೀನು ಅಜೇಯನಾಗುವಿ. ನಿನಗೆ ಮೃತ್ಯುವು ಉಂಟಾಗುವುದಿಲ್ಲ, ಕೀರ್ತಿವಂತನಾಗುವಿ (ಎಂದು ಹೇಳಿದನು).

ಆಹ ಮಾಂ ಭಗವಾನೇವಂ ಶಿಖಂಡೀ ಶಿವವಿಗ್ರಹಃ ।
ತದವಾಪ್ತಂ ಚ ಮೇ ಸರ್ವಂ ಪ್ರಸಾದಾತ್ ತಸ್ಯ ಧೀಮತಃ ॥೧೩॥

ಶಿಖೆಯನ್ನು ಧರಿಸಿದ ಶಿವರೂಪನಾದ ಭಗವಂತನು ನನಗೆ ಹೀಗೆ ಹೇಳಿದನು. ಮೇಧಾವಿಯಾದ ಅವನ ಅನುಗ್ರಹದಿಂದ ನನಗೆ ಅವೆಲ್ಲವೂ ದೊರೆತವು (ಎಂದು ಹೇಳಿದರು).

ವಿಶ್ವಾಮಿತ್ರಸ್ತದೋವಾಚ ಕ್ಷತ್ರಿಯೋಽಹಂ ಪುರಾಭವಮ್ ।
ಬ್ರಾಹ್ಮಣೋಽಹಂ ಭವಾನೀತಿ ಮಯಾ ಚಾರಾಧಿತೋ ಭವಃ ।
ತತ್ಪ್ರಸಾದಾತ್ ಮಯಾ ಪ್ರಾಪ್ತಂ ಬ್ರಾಹ್ಮಣ್ಯಂ ದುಲರ್ಭಂ ಮಹತ್ ॥೧೪॥

ಆಗ ವಿಶ್ವಾಮಿತ್ರರು, ನಾನು ಮೊದಲು ಕ್ಷತ್ರಿಯನಾಗಿದ್ದೆ. ನಾನು ಬ್ರಾಹ್ಮಣನಾಗಬೇಕೆಂದು ಬಯಸಿ ಭವನನ್ನು ಆರಾಧಿಸಿದೆ. ಅವನ ಅನುಗ್ರಹದಿಂದ ನನಗೆ ದುರ್ಲಭವಾದ ಶ್ರೇಷ್ಠವಾದ ಬ್ರಾಹ್ಮಣ್ಯವು ದೊರೆಯಿತು ಎಂದು ಹೇಳಿದರು.

ಅಸಿತೋ ದೇವಲಶ್ಚೈವ ಪ್ರಾಹ ಪಾಂಡುಸುತಂ ನೃಪಮ್ ।
ಶಾಪಾಚ್ಚಕ್ರಸ್ಯ ಕೌಂತೇಯ ಚಿತೋ ಧರ್ಮೋ‌ಽನಶನ್ಮಮ ।
ತನ್ಮೇ ಧರ್ಮಂ ಯಶಶ್ಚಾಗ್ರ್ಯಮಾಯುಶ್ಚೈವಾದದದ್ ಭವಃ ॥೧೫॥

ಅಸಿತರು ಮತ್ತು ದೇವಲರು ರಾಜನಾದ ಪಾಂಡುಪುತ್ರನನ್ನು ಕುರಿತು- 'ಎಲೈ ಕೌಂತೇಯನೇ, ಇಂದ್ರನ ಶಾಪದಿಂದ ನಾನು ಬಹಳ ಕಾಲದಿಂದ ಸಂಪಾದಿಸಿದ್ದ ಧರ್ಮವು ನಾಶವನ್ನು ಹೊಂದಿತು. ಭವನು ಪ್ರಸನ್ನನಾಗಿ ನನಗೆ ಆ ಧರ್ಮವನ್ನೂ, ಶ್ರೇಷ್ಠವಾದ ಕೀರ್ತಿಯನ್ನೂ ಮತ್ತು ಆಯುಸ್ಸನ್ನೂ ಕೊಟ್ಟನು' ಎಂದು ಹೇಳಿದರು.

ಋಷಿರ್ಗೃತ್ಸಮದೋ ನಾಮ ಶಕ್ರಸ್ಯ ದಯಿತಃ ಸಖಾ ।
ಪ್ರಾಹಾಜಮೀಢಂ ಭಗವಾನ್ ಬೃಹಸ್ಪತಿಸಮದ್ಯುತಿಃ ॥೧೬॥

ಶಕ್ರನ ಪ್ರೀತಿಪಾತ್ರ ಸ್ನೇಹಿತರಾದ, ಬೃಹಸ್ಪತಿಗೆ ಸಮಾನವಾದ ಕಾಂತಿಯುಳ್ಳ, ಪೂಜ್ಯರಾದ ಗೃತ್ಸಮದ ಋಷಿಗಳು ಅಜಮೀಢನಾದ ಧರ್ಮರಾಜನನ್ನು ಕುರಿತು ಹೀಗೆ ಹೇಳಿದರು.

ವಸಿಷ್ಠೋ ನಾಮ ಭಗವಾಂಶ್ಚಾಕ್ಷುಷಸ್ಯ ಮನೋಃ ಸುತಃ ।
ಶತಕ್ರತೋರಚಿಂತ್ಯಸ್ಯ ಸತ್ರೇ ವರ್ಷಸಹಸ್ರಿಕೇ ।
ವರ್ತಮಾನೇ‌ಽಬ್ರವೀದ್ ವಾಕ್ಯಂ ಸಾಮ್ನಿ ಹ್ಯುಚ್ಚಾರಿತೇ ಮಯಾ ॥೧೭॥

ರಥಂತರೇ ದ್ವಿಜಶ್ರೇಷ್ಠ ನ ಸಮ್ಯಗಿತಿ ವರ್ತತೇ ।
ಸಮೀಕ್ಷಸ್ವ ಪುನರ್ಬುದ್ಧ್ಯಾ ಹರ್ಷಂ ತ್ಯಕ್ತ್ವಾ ದ್ವಿಜೋತ್ತಮ ।
ಅಯಜ್ಞವಾಹಿನಂ ಪಾಪಮಕಾರ್ಷೀಸ್ತ್ವಂ ಸುದುರ್ಮತೇ ॥೧೮॥

ಚಾಕ್ಷುಷಮನುವಿನ ಪುತ್ರರಾದ ಪೂಜ್ಯರಾದ ವಸಿಷ್ಠರು ಅಚಿಂತ್ಯ ಮಹಿಮೆಯುಳ್ಳ ಇಂದ್ರನ ಸಹಸ್ರವರ್ಷದ ಸತ್ರಯಾಗವು ನಡೆಯುತ್ತಿದ್ದಾಗ ನಾನು ಸಾಮವನ್ನು ಉಚ್ಚಾರ ಮಾಡುತ್ತಿರಲು ಹೀಗೆ ಹೇಳಿದರು: ಎಲೈ ದ್ವಿಜಶ್ರೇಷ್ಠನೇ, ನೀನು ರಥಂತರ ಸಾಮವನ್ನು ಸರಿಯಾಗಿ ಹೇಳಲಿಲ್ಲ. ಎಲೈ ದ್ವಿಜೋತ್ತಮನೇ, ಪುನಃ ಹರ್ಷವನ್ನು ಬಿಟ್ಟು ಬುದ್ಧಿಯಿಂದ ವಿಮರ್ಶಿಸು. ಎಲೈ ದುರ್ಬುದ್ಧಿಯುಳ್ಳವನೇ, ನೀನು ಯಜ್ಞಕ್ಕೆ ಅನುಪಯೋಗಿಯಾದ ಸಾಮೋಚ್ಚಾರಣೆಯಿಂದ ಪಾಪವನ್ನು ಮಾಡಿದ್ದೀಯೆ.

ಏವಮುಕ್ತ್ವಾ ಮಹಾಕ್ರೋಧಾತ್ ಪ್ರಾಹ ರುಷ್ಟಃ ಪುನರ್ವಚಃ ।
ಪ್ರಜ್ಞಯಾ ರಹಿತೋ ದುಃಖೀ ನಿತ್ಯಂ ಭೀತೋ ವನೇಚರಃ ।
ದಶ ವರ್ಷಸಹಸ್ರಾಣಿ ದಶಾಷ್ಟೌ ಚ ಶತಾನಿ ಚ ॥೧೯॥

ನಷ್ಟಪಾನೀಯಪವನೇ ಮೃಗೈರನ್ಯೈಶ್ಚ ವರ್ಜಿತೇ ।
ಅಯಜ್ಞೀಯದ್ರುಮೇ ದೇಶೇ ರುರುಸಿಂಹನಿಷೇವಿತೇ ।
ಭವಿತಾ ತ್ವಂ ಮೃಗಃ ಕ್ರೂರೋ ಮಹಾದುಃಖಸಮನ್ವಿತಃ ॥೨೦॥

ಹೀಗೆ ಹೇಳಿ ಮಹಾಕ್ರೋಧದಿಂದ ಕೂಡಿದವರಾಗಿ ಪುನಃ ಮಾತನಾಡಿದರು: ನೀನು ಪ್ರಜ್ಞಾಹೀನನಾಗಿ, ದುಃಖಿಯಾಗಿ, ಭಯದಿಂದ, ಯಾವಾಗಲೂ ವನಸಂಚಾರಿಯಾಗಿ ಹತ್ತು ಸಹಸ್ರವರ್ಷ ಮತ್ತು ಹದಿನೆಂಟು ನೂರು ವರ್ಷಗಳ ಕಾಲ ಜಲ-ವಾಯುವಿಲ್ಲದಿರುವ, ಬೇರೆ ಮೃಗಗಳೂ ಇಲ್ಲದಿರುವ, ಯಜ್ಞ ವೃಕ್ಷಗಳಿಲ್ಲದಿರುವ, ರುರು (ಜಿಂಕೆ) ಸಿಂಹಗಳಿಂದ ಕೂಡಿರುವ ಅರಣ್ಯದಲ್ಲಿ ಕ್ರೂರವಾದ ಮಹಾದುಃಖದಿಂದ ಕೂಡಿದ ಮೃಗವಾಗುವಿ ಎಂದು ಹೇಳಿದರು.

ತಸ್ಯ ವಾಕ್ಯಸ್ಯ ನಿಧನೇ ಪಾರ್ಥ ಜಾತೋ ಹ್ಯಹಂ ಮೃಗಃ ।
ತತೋ ಮಾಂ ಶರಣಂ ಪ್ರಾಪ್ತಂ ಪ್ರಾಹ ಯೋಗೀ ಮಹೇಶ್ವರಃ ॥೨೧॥

ಎಲೈ ಪಾರ್ಥನೇ, ಅವರು ಆ ವಾಕ್ಯವನ್ನು ಮುಗಿಸುತ್ತಿದ್ದಂತೆಯೇ ನಾನು ಮೃಗವಾದೆನು. ಆಗ ಶರಣಾಗತನಾದ ನನ್ನನ್ನು ಕುರಿತು ಯೋಗಿಯಾದ ಮಹೇಶ್ವರನು ಹೀಗೆ ಹೇಳಿದನು.

ಅಜರಶ್ಚಾಮರಶ್ಚೈವ ಭವಿತಾ ದುಃಖವರ್ಜಿತಃ ।
ಸಾಮ್ಯಂ ಮಮಾಸ್ತು ತೇ ಸೌಖ್ಯಂ ಯುವಯೋರ್ವರ್ಧತಾಂ ಕ್ರತುಃ ॥

ನೀನು ಅಜರನೂ, ಮರಣರಹಿತನೂ ಮತ್ತು ದುಃಖವರ್ಜಿತನೂ ಆಗುವಿ. ನಿನ್ನ ಸುಖವು ನನ್ನ ಸುಖಕ್ಕೆ ಸಮವಾಗಲಿ. ನಿಮ್ಮಿಬ್ಬರಿಂದ (ವಸಿಷ್ಠ ಮತ್ತು ಗೃತ್ಸಮದರಿಂದ) ಕ್ರತುವು ಅಭಿವೃದ್ಧಿಯನ್ನು ಹೊಂದಲಿ ಎಂದು ಹೇಳಿದನು.

ಅನುಗ್ರಹಾನೇವಮೇಷ ಕರೋತಿ ಭಗವಾನ್ ವಿಭುಃ ।
ಅಯಂ ಧಾತಾ ವಿಧಾತಾ ಚ ಸುಖದುಃಖೇ ಚ ಸರ್ವದಾ ॥೨೩॥

ಭಗವಂತನೂ, ವಿಭುವೂ ಆದ ಶಿವನು ಹೀಗೆಯೇ ಅನುಗ್ರಹವನ್ನು ಮಾಡುವನು. ಇವನೇ ಧಾತ, ವಿಧಾತ ಮತ್ತು ಯಾವಾಗಲೂ ಸುಖ-ದುಃಖಗಳಿಗೆ ಕಾರಣನಾದವನು.

ಅಚಿಂತ್ಯ ಏಷ ಭಗವಾನ್ ಕರ್ಮಣಾ ಮನಸಾ ಗಿರಾ ।
ನ ಮೇ ತಾತ ಯುಧಿಶ್ರೇಷ್ಠ ವಿದ್ಯಯಾ ಪಂಡಿತಃ ಸಮಃ ॥೨೪॥

ಅಂತಹ ಭಗವಂತನನ್ನು ಕರ್ಮದಿಂದಲಾಗಲೀ, ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ ಚಿಂತಿಸಲು ಸಾಧ್ಯವಿಲ್ಲ. ಎಲೈ ಯುದ್ಧಮಾಡುವವರಲ್ಲಿ ಶ್ರೇಷ್ಠನಾದ ಪ್ರೀತಿಪಾತ್ರನೇ, ನನ್ನ ದೃಷ್ಟಿಯಲ್ಲಿ ವಿದ್ಯೆಯಿಂದ ಪಂಡಿತನಾದ ಯಾವನೂ ಅವನಿಗೆ ಸಮನಲ್ಲ.

ವಾಸುದೇವಸ್ತದೋವಾಚ ಪುನರ್ಮತಿಮತಾಂ ವರಃ ।
ಸುವರ್ಣಾಕ್ಷೋ ಮಹಾದೇವಸ್ತಪಸಾ ತೋಷಿತೋ ಮಯಾ ॥೨೫॥

ತತೋಽಥ ಭಗವಾನಾಹ ಪ್ರೀತೋ ಮಾಂ ವೈ ಯುಧಿಷ್ಠಿರ ।
ಅನ್ನಾತ್ ಪ್ರಿಯತರಃ ಕೃಷ್ಣ ಮತ್ಪ್ರಸಾದಾದ್ ಭವಿಷ್ಯತಿ ॥೨೬॥

ಅಪರಾಜಿತಶ್ಚ ಯುದ್ಧೇಷು ತೇಜಶ್ಚೈವಾನಲೋಪಮಮ್ ।
ಏವ ಸಹಸ್ರಶಶ್ಚಾತ್ಮಾ ಮಹಾದೇವೋ ವರಂ ದದೌ ॥೨೭॥

ಮಣಿಮಂಥೇಽಥ ಶೈಲೇ ವೈ ಪುರಾ ಸಂರಾಧಿತೋ ಮಯಾ ।
ವರ್ಷಾಯುತಸಹಸ್ರಾಣಾಂ ಸಹಸ್ರಶತಮೇವ ಚ ॥೨೮॥

ಆಗ ಮೇಧಾವಿಗಳಲ್ಲಿ ಶ್ರೇಷ್ಠನಾದ ವಾಸುದೇವನು ಪುನಃ ಮಾತನಾಡಿದನು: ಸುವರ್ಣನೇತ್ರನಾದ ಮಹಾದೇವನನ್ನು ನಾನು ತಪಸ್ಸಿನಿಂದ ಸಂತೋಷಪಡಿಸಿದೆ. ಎಲೈ ಯುಧಿಷ್ಠಿರನೇ, ಆಗ ಭಗವಂತನಾದ ಅವನು ಪ್ರೀತನಾಗಿ ನನ್ನನ್ನು ಕುರಿತು- 'ಕೃಷ್ಣನೇ, ನನ್ನ ಅನುಗ್ರಹದಿಂದ ನೀನು ಅನ್ನಕ್ಕಿಂತಲೂ (ಎಲ್ಲದಕ್ಕಿಂತಲೂ) ಪ್ರಿಯಕರನಾಗುವಿ. ಯುದ್ಧದಲ್ಲಿ ಅಪರಾಜಿತನಾಗುವಿ. ನಿನ್ನ ತೇಜಸ್ಸು ಅಗ್ನಿಗೆ ಸಮಾನವಾಗಿರುತ್ತದೆ' ಎಂದು ಹೇಳಿದನು. ಹೀಗೆ ಮಹಾದೇವನು ಸಾವಿರಾರು ವರಗಳನ್ನು ಕೊಟ್ಟನು.

ತತೋ ಮಾಂ ಭಗವಾನ್ ಪ್ರೀತ ಇದಂ ವಚನಮಬ್ರವೀತ್ ।
ವರಂ ವೃಣೀಷ್ವ ಭದ್ರಂ ತೇ ಯಸ್ತೇ ಮನಸಿ ವರ್ತತೇ ॥೨೯॥

ಮಣಿವಂತ ಎಂಬ ಪರ್ವತದಲ್ಲಿ ನಾನು ಹಿಂದೆ ಅವನನ್ನು ಸಹಸ್ರ ವರ್ಷಗಳು ಮತ್ತು ಶತಸಹಸ್ರ ವರ್ಷಗಳ ಕಾಲ ಆರಾಧಿಸಿದೆನು. ಆಗ ಭಗವಂತನಾದ ಶಿವನು ಪ್ರೀತನಾಗಿ ನನ್ನನ್ನು ಕುರಿತು ನಿನಗೆ ಮಂಗಳವಾಗಲಿ, ನಿನ್ನ ಮನಸ್ಸಿನಲ್ಲಿರುವ ವರವನ್ನು ಕೇಳು ಎಂದು ಹೇಳಿದನು.

ತತಃ ಪ್ರಣಮ್ಯ ಶಿರಸಾ ಇದಂ ವಚನಮಬ್ರುವಮ್ ।
ಯದಿ ಪ್ರೀತೋ ಮಹಾದೇವೋ ಭಕ್ತ್ಯಾ ಪರಮಯಾ ಪ್ರಭುಃ ॥೩೦॥

ನಿತ್ಯಕಾಲಂ ತವೇಶಾನ ಭಕ್ತಿರ್ಭವತು ಮೇ ಸ್ಥಿರಾ ।
ಏವಮಸ್ತ್ವಿತಿ ಭಗವಾಂಸ್ತತ್ರೋಕ್ತ್ವಾಂತರಧೀಯತ ॥೩೧॥

ಆಗ ನಾನು ಅವನಿಗೆ ಶಿರಸಾ ಪ್ರಣಾಮವನ್ನು ಮಾಡಿ 'ಮಹಾದೇವನೇ, ಪ್ರಭುವಾದ ನೀನು ನನ್ನ ಶ್ರೇಷ್ಠವಾದ ಭಕ್ತಿಯಿಂದ ಪ್ರಸನ್ನನಾಗಿದ್ದರೆ, ಎಲೈ ಈಶಾನನೇ, ನನಗೆ ನಿತ್ಯವೂ ನಿನ್ನಲ್ಲಿ ಸ್ಥಿರವಾದ ಭಕ್ತಿಯುಂಟಾಗಲಿ' ಎಂದು ಕೇಳಿದೆನು. ಹಾಗೆಯೇ ಆಗಲಿ ಎಂದು ಹೇಳಿ ಭಗವಂತನು ಅಂತರ್ಧಾನವನ್ನು ಹೊಂದಿದನು.

ಜೈಗೀಷವ್ಯಃ

ಮಮಾಷ್ಟಗುಣಮೈಶ್ವರ್ಯಂ ದತ್ತಂ ಭಗವತಾ ಪುರಾ ।
ಯತ್ನೇನಾಲ್ಪೇನ ಬಲಿನಾ ವಾರಾಣಸ್ಯಾಂ ಯುಧಿಷ್ಠಿರ ॥೩೨॥

ಜೈಗೀಷವ್ಯ– ಎಲೈ ಯುಧಿಷ್ಠಿರನೇ, ನಾನು ಹಿಂದೆ ವಾರಣಾಸಿಯಲ್ಲಿ ಮಾಡಿದ ಅಲ್ಪ ತಪಸ್ಸಿನ ಪ್ರಯತ್ನದಿಂದ ಬಲಿಷ್ಠನಾದ ಭಗವಂತನಾದ ಶಿವನು ಪ್ರಸನ್ನನಾಗಿ ಎಂಟು ಪಟ್ಟು ಅಧಿಕವಾದ ಐಶ್ವರ್ಯವನ್ನು ಕೊಟ್ಟನು.

ಗಾರ್ಗ್ಯಃ

ಚತುಃಷಷ್ಟ್ಯಂಗಮದದಾತ್ಕಾಲಜ್ಞಾನಂ ಮಮಾದ್ಭುತಮ್ ।
ಸರಸ್ವತ್ಯಾಸ್ತಟೇ ತುಷ್ಟೋ ಮನೋಯಜ್ಞೇನ ಪಾಂಡವ ॥೩೩॥

ತುಲ್ಯಂ ಮಮ ಸಹಸ್ರಂ ತು ಸುತಾನಾಂ ಬ್ರಹ್ಮವಾದಿನಾಮ್ ।
ಆಯುಶ್ಚೈವ ಸಪುತ್ರಸ್ಯ ಸಂವತ್ಸರಶತಾಯುತಮ್ ॥೩೪॥

ಗಾರ್ಗ್ಯ– ಎಲೈ ಪಾಂಡವನೇ, ಸರಸ್ವತೀ ದಡದಲ್ಲಿ ನನ್ನ ಮಾನಸಿಕ ಯಜ್ಞದಿಂದ ಸಂತುಷ್ಟನಾದ ಶಿವನು ನನಗೆ ಅರವತ್ನಾಲ್ಕು ಅಂಗಗಳಿಂದ ಸಹಿತವಾದ ಅದ್ಭುತವಾದ ಕಾಲಜ್ಞಾನವನ್ನು ಕೊಟ್ಟನು. ನನಗೆ ಸಮಾನರಾದ ಬ್ರಹ್ಮವಾದಿಗಳಾದ ಸಹಸ್ರ ಪುತ್ರರನ್ನು ಕೊಟ್ಟನು. ಪುತ್ರರಿಂದ ಸಹಿತನಾದ ನನಗೆ ಶತಾಯುತ (ಹತ್ತು ಲಕ್ಷ) ವರ್ಷಗಳ ಆಯುಸ್ಸನ್ನೂ ಕೊಟ್ಟನು.

ಪರಾಶರಃ

ಪ್ರಸಾದ್ಯೇಹ ಪುರಾ ಶರ್ವಂ ಮನಸಾಚಿಂತಯಂ ನೃಪ ।
ಮಹಾತಪಾ ಮಹಾತೇಜಾ ಮಹಾಯೋಗೀ ಮಹಾಯಶಾಃ ।
ವೇದಾವಾಸಃ ಶ್ರಿಯಾವಾಸೋ ಬ್ರಹ್ಮಣ್ಯಃ ಕರುಣಾತ್ಮಕಃ ॥೩೫॥

ಅಪ್ಯಸಾವೀಪ್ಸಿತಃ ಪುತ್ರೋ ಮಮ ಸ್ಯಾದ್ವೈ ಮಹೇಶ್ವರಾತ್ ।
ಇತಿ ಮತ್ವಾ ಹೃದಿ ಮತಂ ಪ್ರಾಹ ಮಾಂ ಸುರಸತ್ತಮಃ ॥೩೬॥

ಪರಾಶರ– ಎಲೈ ರಾಜನೇ, ನಾನು ಹಿಂದೆ ಶಿವನನ್ನು ಪ್ರಸನ್ನೀಕರಿಸಿಕೊಂಡು ಮನಸ್ಸಿನಿಂದಲೇ ಧ್ಯಾನಿಸಿದೆನು. ಮಹೇಶ್ವರನ ಅನುಗ್ರಹದಿಂದ ನನಗೆ ಮಹಾತಪಸ್ವಿಯೂ, ಮಹಾತೇಜಸ್ವಿಯೂ, ಮಹಾಯೋಗಿಯೂ, ಮಹಾಕೀರ್ತಿವಂತನೂ, ವೇದವಿಭಾಗವನ್ನು ಮಾಡುವವನೂ, ಕಾಂತಿಯಿಂದ ಕೂಡಿದವನೂ, ಬ್ರಾಹ್ಮಣವತ್ಸಲನೂ, ಕರುಣಾಮೂರ್ತಿಯೂ ಆದ ಪುತ್ರನು ಜನಿಸುತ್ತಾನೆ ಎಂದು ತಿಳಿದು ಧ್ಯಾನ ಮಾಡಿದೆನು. ನನ್ನ ಹೃದಯದಲ್ಲಿದ್ದ ಈ ಆಸೆಯನ್ನು ತಿಳಿದ ಸುರಶ್ರೇಷ್ಠನಾದ ಶಿವನು ನನ್ನನ್ನು ಕುರಿತು ಹೇಳಿದನು.

ಮಯಿ ಸಂಭವತಸ್ತಸ್ಯ ಫಲಾತ್ ಕೃಷ್ಣೋ ಭವಿಷ್ಯತಿ ।
ಸಾವರ್ಣಸ್ಯ ಮನೋಃ ಸರ್ಗೇ ಸಪ್ತರ್ಷಿಶ್ಚ ಭವಿಷ್ಯತಿ ॥೩೭॥

ನನ್ನನ್ನು ಧ್ಯಾನ ಮಾಡಿದುದರ ಫಲವಾಗಿ ನಿನಗೆ ಕೃಷ್ಣ ಎಂಬ ಪುತ್ರನು ಜನಿಸುವನು. ಅವನು ಸಾವರ್ಣಿಯ ಮನ್ವಂತರದಲ್ಲಿ ಸಪ್ತರ್ಷಿಯಾಗುವನು.

ವೇದಾನಾಂ ಚ ಸ ವೈ ವ್ಯಸ್ತಾ ಕುರುವಂಶಕರಸ್ತಥಾ ।
ಇತಿಹಾಸಸ್ಯ ಕರ್ತಾ ಚ ಪುತ್ರಸ್ತೇ ಜಗತೋ ಹಿತಃ ॥೩೮॥

ವೇದಗಳನ್ನು ವಿಭಾಗ ಮಾಡುವನು. ಕುರುವಂಶವನ್ನು ಅಭಿವೃದ್ಧಿ ಮಾಡುವನು. ನಿನ್ನ ಪುತ್ರನು ಇತಿಹಾಸವನ್ನು ರಚಿಸಿ ಜಗತ್ತಿಗೆ ಹಿತಕಾರಿಯಾಗುವನು.

ಭವಿಷ್ಯತಿ ಮಹೇಂದ್ರಸ್ಯ ದಯಿತಃ ಸ ಮಹಾಮುನಿಃ ।
ಅಜರಶ್ಚಾಮರಶ್ಚೈವ ಪರಾಶರ ಸುತಸ್ತವ ॥೩೯॥

ಅವನು ಇಂದ್ರನಿಗೆ ಪ್ರಿಯನಾದ ಮಹರ್ಷಿಯಾಗುವನು. ಎಲೈ ಪರಾಶರನೇ, ನಿನ್ನ ಪುತ್ರನು ಅಜರಾಮರನಾಗುವನು (ಎಂದು ಹೇಳಿದನು).

ಏವಮುಕ್ತ್ವಾ ಸ ಭಗವಾಂಸ್ತತ್ರೈವಾಂತರಧೀಯತ ।
ಯುಧಿಷ್ಠಿರ ಮಹಾಯೋಗೀ ವೀರ್ಯವಾನಕ್ಷಯೋಽವ್ಯಯಃ ॥೪೦॥

ಎಲೈ ಯುಧಿಷ್ಠಿರನೇ, ಹೀಗೆ ಹೇಳಿ ಮಹಾಯೋಗಿಯೂ, ಪರಾಕ್ರಮಶಾಲಿಯೂ, ಅಕ್ಷಯನೂ, ನಾಶರಹಿತನೂ ಆದ, ಭಗವಂತನಾದ ಶಿವನು ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಮಾಂಡವ್ಯಃ

ಅಚೌರಶ್ಚೌರಶಂಕಾಯಾಂ ಶೂಲೇ ಭಿನ್ನೋ ಹ್ಯಹಂ ಯದಾ ।
ತತ್ರಸ್ಥೇನ ಸ್ತುತೋ ದೇವಃ ಪ್ರಾಹ ಮಾಂ ವೈ ಮಹೇಶ್ವರಃ ॥೪೧॥

ಮಾಂಡವ್ಯ– ಕಳ್ಳತನವನ್ನು ಮಾಡದಿದ್ದರೂ ಕಳ್ಳನೆಂಬ ಶಂಕೆಯಿಂದ ನನ್ನನ್ನು ಶೂಲಕ್ಕೆ ಏರಿಸಿ ಭೇದಿಸಿದಾಗ ಶೂಲದಲ್ಲಿಯೇ ಇದ್ದು ಸ್ತೋತ್ರ ಮಾಡಿದ ನನ್ನನ್ನು ಕುರಿತು ದೇವನಾದ ಮಹೇಶ್ವರನು ಹೇಳಿದನು.

ಮೋಕ್ಷಂ ಪ್ರಾಪ್ಸ್ಯಸಿ ಶೂಲಾಚ್ಚ ಜೀವಿಷ್ಯಸಿ ಸಮಾರ್ಬುದಮ್ ।
ರುಜಾ ಶೂಲಕೃತಾ ಚೈವ ನ ತೇ ವಿಪ್ರ ಭವಿಷ್ಯತಿ ।
ಆಧಿಭಿರ್ವ್ಯಾಧಿಭಿಶ್ಚೈವ ವರ್ಜಿತಸ್ತ್ವಂ ಭವಿಷ್ಯಸಿ ॥೪೨॥

ಶೂಲದಿಂದ ಬಿಡುಗಡೆಯನ್ನು ಹೊಂದುವಿ. ಅರ್ಬುದ ವರ್ಷಗಳವರೆಗೆ ಜೀವಿಸುವಿ. ಎಲೈ ಬ್ರಾಹ್ಮಣನೇ, ಶೂಲಕ್ಕೆ ಏರಿಸಿದುದರಿಂದ ನಿನಗೆ ಯಾವ ನೋವೂ ಉಂಟಾಗುವುದಿಲ್ಲ. ನೀನು ಆಧಿ-ವ್ಯಾಧಿಗಳಿಂದ ರಹಿತನಾಗುವಿ.

ಪಾದಾಚ್ಚತುರ್ಥಾತ್ ಸಂಭೂತ ಆತ್ಮಾ ಯಸ್ಮಾನ್ಮುನೇ ತವ ।
ತ್ವಂ ಭವಿಷ್ಯಸ್ಯನುಪಮೋ ಜನ್ಮ ವೈ ಸಫಲಂ ಕುರು ॥೪೩॥

ಎಲೈ ಋಷಿಯೇ, ನೀನು ಧರ್ಮದ ನಾಲ್ಕನೆಯ ಪಾದದಿಂದ ಜನಿಸಿದವನು. ನೀನು ಅಸದೃಶನಾಗುವಿ. ನಿನ್ನ ಜನ್ಮವನ್ನು ಸಫಲವನ್ನಾಗಿ ಮಾಡಿಕೊ.

ತೀರ್ಥಾಭಿಷೇಕಂ ಸಫಲಂ ತ್ವಮವಿಘ್ನೇನ ಚಾಪ್ಸ್ಯಸಿ ।
ಸ್ವರ್ಗಂ ಚೈವಾಕ್ಷಯಂ ವಿಪ್ರ ವಿದಧಾಮಿ ತವೋರ್ಜಿತಮ್ ॥೪೪॥

ನೀನು ಸಫಲವಾದ ತೀರ್ಥಯಾತ್ರೆಯನ್ನು ನಿರ್ವಿಘ್ನವಾಗಿ ಮಾಡುವಿ. ಎಲೈ ಬ್ರಾಹ್ಮಣನೇ, ನಿನಗೆ ಶ್ರೇಷ್ಠವಾದ, ಅಕ್ಷಯವಾದ ಸ್ವರ್ಗವನ್ನು ದಯಪಾಲಿಸುವೆನು (ಎಂದು ಹೇಳಿದನು).

ಏವಮುಕ್ತ್ವಾ ತು ಭಗವಾನ್ ವರೇಣ್ಯೋ ವೃಷವಾಹನಃ ।
ಮಹೇಶ್ವರೋ ಮಹಾರಾಜ ಕೃತ್ತಿವಾಸಾ ಮಹಾದ್ಯುತಿಃ ।
ಸಗಣೋ ದೈವತಶ್ರೇಷ್ಠಸ್ತತ್ರೈವಾಂತರಧೀಯತ ॥೪೫॥

ಹೀಗೆ ಹೇಳಿ ಎಲೈ ಮಹಾರಾಜನೇ, ವರೇಣ್ಯನೂ, ಭಗವಂತನೂ, ವೃಷವಾಹನನೂ, ಚರ್ಮಚೇಲನೂ, ಮಹಾದ್ಯುತಿಯುಳ್ಳವನು, ದೇವಶ್ರೇಷ್ಠನೂ ಆದ ಮಹೇಶ್ವರನು ತನ್ನ ಗಣಗಳ ಜೊತೆಯಲ್ಲಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಗಾಲವಃ

ವಿಶ್ವಾಮಿತ್ರಾಭ್ಯನುಜ್ಞಾತೋ ಹ್ಯಹಂ ಪಿತರಮಾಗತಃ ।
ಅಬ್ರವೀನ್ಮಾಂ ತತೋ ಮಾತಾ ದುಃಖಿತಾ ರುದತೀ ಭೃಶಮ್ ॥೪೬॥

ಕೌಶಿಕೇನಾಭ್ಯನುಜ್ಞಾತಂ ಪುತ್ರಂ ವೇದವಿಭೂಷಿತಮ್ ।
ನ ತಾತ ತರುಣಂ ದಾಂತಂ ಪಿತಾ ತ್ವಾಂ ಪಶ್ಯತೇಽನಘ ॥೪೭॥

ಗಾಲವ– ವಿಶ್ವಾಮಿತ್ರರಲ್ಲಿ ವಿದ್ಯಾಭ್ಯಾಸ ಮಾಡಿ, ಅವರ ಅನುಗ್ರಹವನ್ನು ಪಡೆದು ನಾನು ತಂದೆಯ ಬಳಿಗೆ ಬಂದೆನು. ಆಗ ತಾಯಿಯು ದುಃಖಿತಳಾಗಿ ಅಳುತ್ತಾ ನನ್ನನ್ನು ಕುರಿತು- 'ಎಲೈ ಪುತ್ರನೇ, ನೀನು ವಿಶ್ವಾಮಿತ್ರರಿಂದ ಅನುಜ್ಞೆಯನ್ನು ಪಡೆದಿದ್ದರೂ ವೇದಗಳಿಂದ ಅಲಂಕೃತನಾಗಿದ್ದರೂ ಎಲೈ ಅನಘನೇ, ಪ್ರೀತಿಪಾತ್ರನೇ, ತರುಣನೂ, ಇಂದ್ರಿಯನಿಗ್ರಹವುಳ್ಳವನೂ ಆದ ನಿನ್ನನ್ನು ನಿನ್ನ ತಂದೆಯು ನೋಡುವುದಿಲ್ಲ' ಎಂದು ಹೇಳಿದಳು.

ಶ್ರುತ್ವಾ ಜನನ್ಯಾ ವಚನಂ ನಿರಾಶೋ ಗುರುದರ್ಶನೇ ।
ನಿಯತಾತ್ಮಾ ಮಹಾದೇವಮಪಶ್ಯಂ ಸೋಽಬ್ರವೀಚ್ಚ ಮಾಮ್ ॥೪೯॥

ಪಿತಾ ಮಾತಾ ಚ ತೇ ತ್ವಂ ಚ ಪುತ್ರ ಮೃತ್ಯುವಿವರ್ಜಿತಾಃ ।
ಭವಿಷ್ಯಥ ವಿಶ ಕ್ಷಿಪ್ರಂ ದ್ರಷ್ಟಾಸಿ ಪಿತರಂ ಕ್ಷಯೇ ॥೫೦॥

ತಾಯಿಯ ಮಾತನ್ನು ಕೇಳಿ, ತಂದೆಯ ದರ್ಶನವಿಲ್ಲದೆ ನಿರಾಸೆಯಿಂದ ಕೂಡಿ, ನಿಯತವಾದ ಮನಸ್ಸಿನಿಂದ ಮಹದೇವನನ್ನು ನೋಡಿದೆನು. ಅವನು ನನ್ನನ್ನು ಕುರಿತು- 'ಎಲೈ ಪುತ್ರನೇ, ನಿನ್ನ ತಂದೆ-ತಾಯಿ ಮತ್ತು ನೀನೂ ಸಹ ಮೃತ್ಯುವಿವರ್ಜಿತರಾಗುವಿರಿ. ಮನೆಗೆ ಹೋಗು. ಕ್ಷಿಪ್ರವಾಗಿ ತಂದೆಯನ್ನು ನೋಡುವಿ' ಎಂದು ಹೇಳಿದನು.

ಅನುಜ್ಞಾತೋ ಭಗವತಾ ಗೃಹಂ ಗತ್ವಾ ಯುಧಿಷ್ಠಿರ ।
ಅಪಶ್ಯಂ ಪಿತರಂ ತಾತ ಇಷ್ಟಿಂ ಕೃತ್ವಾ ವಿನಿಃಸೃತಮ್ ॥೫೧॥

ಎಲೈ ಯುಧಿಷ್ಠಿರನೇ, ಭಗವಂತನಾದ ಈಶ್ವರನ ಅನುಗ್ರಹವನ್ನು ಪಡೆದು ಮನೆಗೆ ಹೋಗಿ, ಇಷ್ಟಿಯನ್ನು ಮಾಡಿ ಹೊರಗೆ ಬರುತ್ತಿದ್ದ ನನ್ನ ತಂದೆಯನ್ನು ನೋಡಿದೆನು.

ಉಪಸ್ಪೃಶ್ಯ ಗೃಹೀತ್ವೇಧ್ಮಂ ಕುಶಾಂಶ್ಚ ಶರಣಾದ್ ಗುರೂನ್ ।
ತಾನ್ ವಿಸೃಜ್ಯ ಚ ಮಾಂ ಪ್ರಾಹ ಪಿತಾ ಸಾಸ್ರಾವಿಲೇಕ್ಷಣಃ ॥೫೨॥

ಅಗ್ನಿಗೃಹದಿಂದ ಕೈಗಳನ್ನು ತೊಳೆದು, ಕಟ್ಟಿಗೆಯನ್ನು ಮತ್ತು ಬಹಳ ದರ್ಭೆಗಳನ್ನು ತರುತ್ತಿದ್ದ ತಂದೆಯು ಅವುಗಳನ್ನು ಪಕ್ಕದಲ್ಲಿಟ್ಟು ಪ್ರೀತಿಯಿಂದ ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ನನ್ನನ್ನು ಕುರಿತು ಮಾತನಾಡಿದನು.

ಪ್ರಣಮಂತಂ ಪರಿಷ್ವಜ್ಯ ಮೂರ್ಧ್ನಿ ಚಾಘ್ರಾಯ ಪಾಂಡವ ।
ದಿಷ್ಟ್ಯಾ ದೃಷ್ಟೋಽಸಿ ಮೇ ಪುತ್ರ ಕೃತವಿದ್ಯ ಇಹಾಗತಃ ॥೫೩॥

ಎಲೈ ಪಾಂಡವನೇ, ನಮಸ್ಕಾರ ಮಾಡಿದ ನನ್ನನ್ನು ಆಲಿಂಗಿಸಿ, ಶಿರಸ್ಸಿನಲ್ಲಿ ಆಘ್ರಾಣಿಸಿ 'ಪುತ್ರನೇ, ವಿದ್ಯಾಭ್ಯಾಸವನ್ನು ಮುಗಿಸಿ ಇಲ್ಲಿಗೆ ಬಂದ ನಿನ್ನನ್ನು ದೇವರ ದಯೆಯಿಂದ ನೋಡುತ್ತಿದ್ದೇನೆ' ಎಂದು ಹೇಳಿದನು.

ವೈಶಂಪಾಯನಃ

ಏತಾನ್ಯತ್ಯದ್ಭುತಾನ್ಯೇವ ಕರ್ಮಾಣ್ಯಥ ಮಹಾತ್ಮನಃ ।
ಪ್ರೋಕ್ತಾನಿ ಮುನಿಭಿಃ ಶ್ರುತ್ವಾ ವಿಸ್ಮಯಾಮಾಸ ಪಾಂಡವಃ ॥೫೪॥

ವೈಶಂಪಾಯನ– ಶಿವನ ಇಂತಹ ಅದ್ಭುತವಾದ ಕರ್ಮಗಳು ಋಷಿಗಳಿಂದ ಹೇಳಲ್ಪಟ್ಟುದನ್ನು ಕೇಳಿ ಯುಧಿಷ್ಠಿರನು ವಿಸ್ಮಯಗೊಂಡನು.

ತತಃ ಕೃಷ್ಣೋಽಬ್ರವೀದ್ ವಾಕ್ಯಂ ಪುನರ್ಮತಿಮತಾಂ ವರಃ ।
ಯುಧಿಷ್ಠಿರಂ ಧರ್ಮನಿತ್ಯಂ ಪುರುಹೂತಮಿವೇಶ್ವರಃ ॥೫೫॥

ಆಗ ಮೇಧಾವಿಗಳಲ್ಲಿ ಶ್ರೇಷ್ಠನಾದ ಕೃಷ್ಣನು ಧರ್ಮನಿಷ್ಠನಾದ ಯುಧಿಷ್ಠಿರನನ್ನು ಕುರಿತು, ಈಶ್ವರನು ಇಂದ್ರನನ್ನು ಕುರಿತು ಹೇಳಿದಂತೆ ಪುನಃ ಮಾತನಾಡಿದನು.

ಉಪಮನ್ಯುರ್ಮಯಿ ಪ್ರಾಹ ತಪನ್ನಿವ ದಿವಾಕರಃ ।
ಅಶುಭೈಃ ಪಾಪಕರ್ಮಾಣೋ ಯೇ ನರಾ ಕಲುಷೀಕೃತಾಃ ॥೫೬॥

ಈಶಾನಂ ನ ಪ್ರಪದ್ಯಂತೇ ತಮೋರಾಜಸವೃತ್ತಯಃ ।
ಈಶ್ವರಂ ಸಂಪ್ರಪದ್ಯಂತೇ ದ್ವಿಜಾಃ ಭಾವಿತಭಾವನಾಃ ॥೫೭॥

ತಪಸ್ಸಿನಿಂದ ದಿವಾಕರನಂತೆ ಬೆಳಗುತ್ತಾ ಉಪಮನ್ಯುವು ನನಗೆ ಹೀಗೆ ಹೇಳಿದನು: 'ಯಾವ ಮನುಷ್ಯರು ಪಾಪಕರ್ಮವನ್ನು ಮಾಡಿ, ಅಶುಭಗಳಿಂದ ಮಲಿನರಾಗಿರುತ್ತಾರೆಯೋ ಅಂತಹ ತಾಮಸ-ರಾಜಸ ಪ್ರವೃತ್ತಿಯುಳ್ಳವರು ಶಿವನಿಗೆ ಶರಣಾಗತರಾಗುವುದಿಲ್ಲ. ಶುದ್ಧ ಮನಸ್ಸುಳ್ಳ ಬ್ರಾಹ್ಮಣರು ಈಶ್ವರನಿಗೆ ಶರಣಾಗತರಾಗುತ್ತಾರೆ.

ಸರ್ವಯಾ ವರ್ತಮಾನೋಽಪಿ ಯೋ ಭಕ್ತಃ ಪರಮೇಶ್ವರೇ ।
ಸದೃಶೋಽರಣ್ಯವಾಸೀನಾಂ ಮುನೀನಾಂ ಭಾವಿತಾತ್ಮನಾಮ್ ॥೫೮॥

ಮನುಷ್ಯನು ಯಾವ ರೀತಿಯಲ್ಲಿದ್ದರೂ ಪರಮೇಶ್ವರನಲ್ಲಿ ಭಕ್ತನಾದರೆ ಶುದ್ಧ ಮನಸ್ಸುಳ್ಳ ಅರಣ್ಯವಾಸಿಗಳಾದ ಋಷಿಗಳಿಗೆ ಸದೃಶನಾಗುತ್ತಾನೆ.

ಬ್ರಹ್ಮತ್ವಂ ಕೇಶವತ್ವಂ ವಾ ಶಕ್ರತ್ವಂ ವಾ ಸುರೈಃ ಸಹ ।
ತ್ರೈಲೋಕ್ಯಸ್ಯಾಧಿಪತ್ಯಂ ವಾ ತುಷ್ಟೋ ರುದ್ರಃ ಪ್ರಯಚ್ಛತಿ ॥೫೯॥

ರುದ್ರನು ಪ್ರಸನ್ನನಾದರೆ ಬ್ರಹ್ಮಪದವಿಯನ್ನಾಗಲೀ, ಕೇಶವ ಪದವಿಯನ್ನಾಗಲೀ, ದೇವತೆಗಳಿಂದ ಕೂಡಿದ ಇಂದ್ರಪದವಿಯನ್ನಾಗಲೀ, ಮೂರುಲೋಕದ ಆಧಿಪತ್ಯವನ್ನಾಗಲೀ ಕೊಡುತ್ತಾನೆ.

ಮನಸಾಪಿ ಶಿವಂ ತಾತ ಯೇ ಪ್ರಪದ್ಯಂತಿ ಮಾನವಾಃ ।
ವಿಧೂಯ ಸರ್ವಪಾಪಾನಿ ದೇವೈಃ ಸಹ ವಸಂತಿ ತೇ ॥೬೦॥

ಎಲೈ ಪ್ರೀತಿಪಾತ್ರನೇ, ಯಾವ ಮಾನವರು ಮನಸ್ಸಿನಿಂದಲಾದರೂ ಶಿವನಿಗೆ ಶರಣಾಗತರಾಗುವರೋ ಅವರು ಎಲ್ಲ ಪಾಪಗಳನ್ನೂ ಕಳೆದುಕೊಂಡು ದೇವತೆಗಳ ಜೊತೆಯಲ್ಲಿ ವಾಸ ಮಾಡುತ್ತಾರೆ.

ಭಿತ್ತ್ವಾ ಭಿತ್ತ್ವಾ ಚ ಕೂಲಾನಿ ಹತ್ವಾ ಸರ್ವಮಿದಂ ಜಗತ್ ।
ಯಜೇದ್ ದೇವಂ ವಿರೂಪಾಕ್ಷಂ ನ ಸ ಪಾಪೇನ ಲಿಪ್ಯತೇ ॥೬೧॥

ಕೆರೆ-ಕಟ್ಟೆಗಳನ್ನು ಒಡೆದು, ಎಲ್ಲ ಜಗತ್ತನ್ನು ಕೊಂದರೂ ವಿರೂಪಾಕ್ಷನನ್ನು ಪೂಜಿಸುವವನು ಪಾಪದಿಂದ ಲೇಪಿತವಾಗುವುದಿಲ್ಲ.

ಸರ್ವಲಕ್ಷಣಹೀನೋಽಪಿ ಯುಕ್ತೋ ವಾ ಸರ್ವಪಾತಕೈಃ ।
ಸರ್ವಂ ತುದತಿ ತತ್ಪಾಪಂ ಭಾವಯನ್ ಶಿವಮಾತ್ಮನಾ ॥೬೨॥

ಎಲ್ಲ ಲಕ್ಷಣಗಳಿಂದ ರಹಿತನಾಗಿದ್ದರೂ, ಎಲ್ಲ ಪಾಪಗಳನ್ನು ಮಾಡಿದ್ದರೂ ಶಿವನನ್ನು ಮನಸ್ಸಿನಲ್ಲಿಯೇ ಚಿಂತಿಸಿದರೆ ಮನುಷ್ಯನು ಆ ಪಾಪವೆಲ್ಲವನ್ನೂ ನಾಶಗೊಳಿಸುವನು.

ಕೀಟಪಕ್ಷಿಪತಂಗಾನಾಂ ತಿರಶ್ಚಾಮಪಿ ಕೇಶವ ।
ಮಹಾದೇವಪ್ರಪನ್ನಾನಾಂ ನ ಭಯಂ ವಿದ್ಯತೇ ಕ್ವಚಿತ್ ॥೬೩॥

ಎಲೈ ಕೇಶವನೇ, ಮಹಾದೇವನಿಗೆ ಶರಣಾಗತರಾದ ಕೀಟ, ಪಕ್ಷಿ, ಪತಂಗಗಳಿಗೂ ಯಾವ ಭಯವು ಇರುವುದಿಲ್ಲ.

ಏವಮೇವ ಮಹಾದೇವಂ ಭಕ್ತ್ಯಾ ಯೇ ಮಾನವಾ ಭುವಿ ।
ನ ತೇ ಸಂಸಾರವಶಗಾ ಇತಿ ಮೇ ನಿಶ್ಚಿತಾ ಮತಿಃ ।
ತತಃ ಕೃಷ್ಣೋಽಬ್ರವೀದ್ ವಾಕ್ಯಂ ಧರ್ಮಪುತ್ರಂ ಯುಧಿಷ್ಠಿರಮ್ ॥೬೪॥

ಹೀಗೆ ಯಾವ ಮಾನವರು ಭೂಮಿಯಲ್ಲಿ ಮಹದೇವನಿಗೆ ಭಕ್ತಿಯಿಂದ ಶರಣಾಗತರಾಗುತ್ತಾರೆಯೋ ಅವನು ಸಂಸಾರವಶರಾಗುವುದಿಲ್ಲವೆಂದು ನನ್ನ ನಿಶ್ಚಿತವಾದ ಅಭಿಪ್ರಾಯ' (ಎಂದು ಉಪಮನ್ಯುವು ಹೇಳಿದನು). ಆಗ ಕೃಷ್ಣನು ಧರ್ಮಪುತ್ರನಾದ ಯುಧಿಷ್ಠಿರನನ್ನುಕುರಿತು ಮಾತನಾಡಿದನು.

ಆದಿತ್ಯಚಂದ್ರಾವನಿಲಾನಲೌ ಚ
ದ್ಯೌರ್ಭೂಮಿರಾಪೋ ವಸವೋಽಥ ವಿಶ್ವೇ ।
ಧಾತಾರ್ಯಮಾ ಶುಕ್ರಬೃಹಸ್ಪತೀ ಚ
ರುದ್ರಾಃ ಸಸಾಧ್ಯಾ ವರುಣೋಽಥ ಗೋಪಃ ॥೬೫॥

ಆದಿತ್ಯ-ಚಂದ್ರರು, ಅಗ್ನಿ-ವಾಯುಗಳು, ಆಕಾಶ-ಭೂಮಿ ಮತ್ತು ಜಲ, ಎಲ್ಲ ವಸುಗಳು, ಧಾತಾ, ಅರ್ಯಮಾ, ಶುಕ್ರ-ಬೃಹಸ್ಪತಿಗಳು, ರುದ್ರಗಣಕ್ಕೆ ಸೇರಿದವರು, ಸಾಧ್ಯರಿಂದ ಸಹಿತರಾದವರು, ವರುಣ, ಇಂದ್ರ;

ಬ್ರಹ್ಮಾ ಶಕ್ರೋ ಮಾರುತೋ ಬ್ರಹ್ಮ ಸತ್ಯಂ
ವೇದಾ ಯಜ್ಞಾ ದಕ್ಷಿಣಾ ವೇದವಾಹಾಃ ।
ಸೋಮೋ ಯಷ್ಟಾ ಯಚ್ಚ ಹವ್ಯಂ ಹವಿಶ್ಚ
ರಕ್ಷಾ ದೀಕ್ಷಾ ಸಂಯಮಾ ಯೇ ಚ ಕೇಚಿತ್ ॥೬೬॥

ಬ್ರಹ್ಮದೇವರು, ಇಂದ್ರ, ವಾಯು, ಬ್ರಹ್ಮ, ವೇದಗಳು, ಸತ್ಯ, ಯಜ್ಞಗಳು, ದಕ್ಷಿಣೆಗಳು, ವೇದ ಪಾಠಕರು, ಸೋಮ, ಯಜ್ಞವನ್ನು ಮಾಡುವ ಯಜಮಾನ, ಹವಿರ್ದ್ರವ್ಯ, ಹವಿಸ್ಸು, ರಕ್ಷೆ, ದೀಕ್ಷೆ, ಸಂಯಮಗಳು;

ಸ್ವಾಹಾ ವೌಷಟ್ ಬ್ರಾಹ್ಮಣಾಃ ಸೌರಭೇಯಾ
ಧರ್ಮಂ ಚಕ್ರಂ ಕಾಲಚಕ್ರಂ ಚರಂ ಚ ।
ಯಶೋ ದಮೋ ಬುದ್ಧಿಮತೀ ಸ್ಥಿತಿಶ್ಚ
ಶುಭಾಶುಭಂ ಮುನಯಶ್ಚೈವ ಸಪ್ತ ॥೬೭॥

ಸ್ವಾಹಾಕಾರ, ವೌಷಟ್‌ಕಾರ, ಬ್ರಾಹ್ಮಣರು, ಗೋವುಗಳು, ಧರ್ಮಚಕ್ರ, ಚಲಿಸುವ ಕಾಲಚಕ್ರ, ಕೀರ್ತಿ, ಇಂದ್ರಿಯನಿಗ್ರಹ, ಬುದ್ಧಿಯುಳ್ಳ ಸ್ಥಿತಿ, ಶುಭಾಶುಭಗಳು, ಸಪ್ತರ್ಷಿಗಳು,

ಅಗ್ರ್ಯಾ ಬುದ್ಧಿರ್ಮನಸಾ ದರ್ಶನೇ ಚ
ಸ್ಪರ್ಶೇ ಸಿದ್ಧಿಃ ಕರ್ಮಣಾಂ ಯಾ ಚ ಸಿದ್ಧಿಃ ।
ಗಣಾ ದೇವಾನಾಮೂಷ್ಮಪಾಃ ಸೋಮಪಾಶ್ಚ
ಲೇಖಾಃ ಸುಯಾಮಾಸ್ತುಷಿತಾ ಬ್ರಹ್ಮಕಾಯಾಃ ॥೬೮॥

ಮನಸ್ಸಿನಿಂದಲೂ ಮತ್ತು ನೋಡುವುದರಿಂದಲೂ ಶ್ರೇಷ್ಠವಾದ ಬುದ್ಧಿ, ಸ್ಪರ್ಶದಿಂದ ಉಂಟಾಗುವ ಸಿದ್ಧಿ, ಕರ್ಮಗಳ ಸಿದ್ಧಿ, ದೇವತಾ ಗಣಗಳು, ಊಷ್ಮಪ ಋಷಿಗಳು, ಸೋಮಪಾನ ಮಾಡುವ ಋಷಿಗಳು, ದೇವತೆಗಳು, ಕಾಲನಿಯಾಮಕ ದೇವತೆಗಳು, ತುಷಿತ ನಾಮಕ ದೇವತೆಗಳು, ಬ್ರಾಹ್ಮಣ ಶರೀರಗಳು;

ಆಭಾಸುರಾ ಗಂಧಪಾ ದೃಷ್ಟಿಪಾಶ್ಚ
ವಾಚಾ ವಿರುದ್ಧಾಶ್ಚ ಮನೋವಿರುದ್ಧಾಃ ।
ಶುದ್ಧಾಶ್ಚ ನಿರ್ವಾಣರತಾಶ್ಚ ದೇವಾಃ
ಸ್ಪರ್ಶಾಶನಾ ದರ್ಶಪಾ ಆಜ್ಯಪಾಶ್ಚ ॥೬೯॥

ಶ್ರೇಷ್ಠವಾದ ಕಾಂತಿಯುಳ್ಳ ದೇವತೆಗಳು, ಗಂಧವನ್ನು ಪಾನ ಮಾಡುವವನು, ದೃಷ್ಟಿಯಿಂದಲೇ ಪಾನ ಮಾಡುವವನು, ವಾಕ್ ಮತ್ತು ಮನಸ್ಸುಗಳಿಗೆ ವಿರುದ್ಧವಾದ ಭಾವಗಳು, ಶುದ್ಧರಾದ, ಮೋಕ್ಷರತರಾದ ದೇವತೆಗಳು, ಸ್ಪರ್ಶದಿಂದಲೇ ಭೋಜನ ಮಾಡುವವರು, ದರ್ಶನದಿಂದ ಪಾನ ಮಾಡುವವರು, ಆಜ್ಯಪಾನ ಮಾಡುವವರು;

ಚಿಂತಾಗತಾ ಯೇ ಚ ದೇವೇಷು ಮುಖ್ಯಾ
ಯೇ ಚಾಪ್ಯನ್ಯೇ ದೇವತಾಶ್ಚಾಜಮೀಢ ।
ಸುಪರ್ಣಗಂಧರ್ವಪಿಶಾಚದಾನವಾ
ಯಕ್ಷಾಸ್ತಥಾ ಪನ್ನಗಾಶ್ಚಾರಣಾಶ್ಚ ॥೭೦॥

ಎಲೈ ಅಜಮೀಢನೇ, ಚಿಂತಾಗತರಾದ ದೇವತೆಗಳಲ್ಲಿ ಮುಖ್ಯರಾದವರು, ಉಳಿದ ದೇವತೆಗಳು, ಸುಪರ್ಣಗಂಧರ್ವಪಿಶಾಚ-ದಾನವರು, ಯಕ್ಷರು, ಪನ್ನಗ-ಚಾರಣರು;

ಸೂಕ್ಷ್ಮಂ ಸ್ಥೂಲಂ ಮೃದು ಯಚ್ಚಾಪ್ಯಸೂಕ್ಷ್ಮಂ
ಸುಖಂ ದುಃಖಂ ಸುಖದುಃಖಾಂತರಂ ಚ ।
ಸಾಂಖ್ಯಂ ಯೋಗಂ ತತ್ಪರಾಣಾಂ ಪರಂ ಚ
ಶರ್ವಾಜ್ಜಾತಂ ವಿದ್ಧಿ ಯತ್ಕೀರ್ತಿತಂ ಮೇ ॥೭೧॥

ಸೂಕ್ಷ್ಮ, ಸ್ಥೂಲ, ಮೃದು, ಕಠಿಣವಾದ ವಸ್ತುಗಳು, ಸುಖ-ದುಃಖ, ಸುಖ ದುಃಖದ ಮಧ್ಯದಲ್ಲಿರುವ ವಸ್ತುಗಳು, ಸಾಂಖ್ಯ ಯೋಗಪರರಾದವರಿಗೆ ಪರವಾದುದು ನಾನು ಹೇಳಿದ ಈ ಎಲ್ಲವೂ ಈಶ್ವರನಿಂದಲೇ ಜನಿಸಿವೆ ಎಂದು ತಿಳಿ.

ತತ್ಸಂಭೂತಾ ಭೂತಕೃತೋ ವರೇಣ್ಯಾಃ
ಸರ್ವೇ ದೇವಾ ಭುವನಸ್ಯಾಸ್ಯ ಗೋಪಾಃ ।
ಆವಿಶ್ಯೇಮಾಂ ಧರಣೀಂ ಯೇಽಭ್ಯರಕ್ಷನ್
ಪುರಾತನೀಂ ತಸ್ಯ ದೇವಸ್ಯ ಸೃಷ್ಟಿಮ್ ॥೭೨॥

ಭೂತ ನಿರ್ಮಾಪಕರಾದ, ಭಜನೀಯರಾದ ದೇವತೆಗಳೆಲ್ಲರೂ ಅವನಿಂದಲೇ ಜನಿಸಿದವರು. ಈ ಭೂಮಿಯನ್ನು ಪ್ರವೇಶಿಸಿ ಪುರಾತನವಾದ ಈ ಭೂಮಿಯನ್ನು ಯಾವ ದೇವತೆಗಳು ರಕ್ಷಿಸುತ್ತಾರೆಯೋ ಅಂತಹ ಭೂಮಿಯ ರಕ್ಷಕರಾದ ಎಲ್ಲ ದೇವತೆಗಳೂ ಅವನಿಂದಲೇ ಜನಿಸಿದವರು.

ವಿಚಿನ್ವಂತಂ ತಪಸಾ ತೋಷ್ಟುವೀಮಿ
ಕಿಂಚಿತ್ತತ್ತ್ವಂ ಪ್ರಾಣಹೇತೋರ್ನತೋಽಸ್ಮಿ ।
ದದಾತು ದೇವಃ ಸ ವರಾನಿಹೇಷ್ಟಾನ್
ಅಭಿಷ್ಟುತೋ ನಃ ಪ್ರಭುರವ್ಯಯಃ ಸದಾ ॥೭೩॥

ಋಷಿಗಳು ಯಾವನನ್ನು ಅನ್ವೇಷಣೆ ಮಾಡುತ್ತಾರೆಯೋ ಅಂತಹ ಅವನನ್ನು ತಪಸ್ಸಿನಿಂದ ಸ್ತೋತ್ರ ಮಾಡುತ್ತೇನೆ. ನನ್ನ ಪ್ರಾಣಗಳ ಸಲುವಾಗಿ ಜಗದ್ವಿಲಕ್ಷಣನಾದ ಆ ತತ್ತ್ವವನ್ನು ನಮಸ್ಕರಿಸುತ್ತೇನೆ. ಹೀಗೆ ಸ್ತೋತ್ರ ಮಾಡಲ್ಪಟ್ಟ ಅವ್ಯಯನಾದ ಪ್ರಭುವಾದ ಆ ದೇವನು ನಮಗೆ ಇಷ್ಟವಾದ ವರಗಳನ್ನು ಕೊಡಲಿ.

ಇಮಂ ಸ್ತವಂ ಸನ್ನಿಯಮ್ಯೇಂದ್ರಿಯಾಣಿ
ಶುಚಿರ್ಭೂತ್ವಾ ಯಃ ಪುರುಷಃ ಪಠೇತ ।
ಅಭಗ್ನಯೋಗೋ ನಿಯತೋऽಬ್ದಮೇಕಂ
ಸ ಪ್ರಾಪ್ನುಯಾದಶ್ವಮೇಧೇ ಫಲಂ ಯತ್ ॥೭೪॥

ಯಾವ ಪುರುಷನು ಶುಚಿಯಾಗಿ, ಇಂದ್ರಿಯನಿಯಮದಿಂದ ಕೂಡಿ, ನಿಯಮವನ್ನು ಭಗ್ನಗೊಳಿಸದೆ ಒಂದು ವರ್ಷದ ಕಾಲ ಈ ಸ್ತೋತ್ರವನ್ನು ಪಠನ ಮಾಡುತ್ತಾನೆಯೋ ಅವನು ಅಶ್ವಮೇಧ ಫಲವನ್ನು ಪಡೆಯುವನು.

ವೇದಾನ್ ಕೃತ್ಸ್ನಾನ್ ಬ್ರಾಹ್ಮಣಃ ಪ್ರಾಪ್ನುಯಾಚ್ಚ
ಜಯೇದ್ ರಾಜಾ ಪೃಥಿವೀಂ ಚಾಪಿ ಕೃತ್ಸ್ನಾಮ್ ।
ವೈಶ್ಯೋ ಲಾಭಂ ಪ್ರಾಪ್ನುಯಾನ್ನೈಪುಣಂ ಚ
ಶೂದ್ರೋ ಗತಿಂ ಪ್ರೇತ್ಯ ತಥಾ ಸುಖಂ ಚ ॥೭೫॥

ಬ್ರಾಹ್ಮಣನು ಸಮಸ್ತ ವೇದಗಳನ್ನು ಹೊಂದುವನು. ರಾಜನು ಸಮಗ್ರವಾದ ಭೂಮಿಯನ್ನು ಜಯಿಸುವನು. ವೈಶ್ಯನು ಲಾಭವನ್ನು ಮತ್ತು ಕೌಶಲವನ್ನು ಪಡೆಯುವನು. ಶೂದ್ರನು ಒಳ್ಳೆಯ ಸುಖವನ್ನು ಮತ್ತು ಮರಣ ಹೊಂದಿದ ಮೇಲೆ ಸದ್ಗತಿಯನ್ನು ಪಡೆಯುವನು.

ಸ್ತವರಾಜಮಿಮಂ ಕೃತ್ವಾ ರುದ್ರಾಯ ದಧಿರೇ ಮನಃ ।
ಸರ್ವದೋಷಾಪಹಂ ಪುಣ್ಯಂ ಪವಿತ್ರಂ ಚ ಯಶಸ್ವಿನಃ ॥೭೬॥

ಯಾವಂತ್ಯಸ್ಯ ಶರೀರೇಷು ರೋಮಕೂಪಾಣಿ ಭಾರತ ।
ತಾವದ್ವರ್ಷಸಹಸ್ರಾಣಿ ಸ್ವರ್ಗೇ ವಸತಿ ಮಾನವಃ ॥೭೭॥

ಯಶಸ್ವಿಗಳಾದ ಋಷಿಗಳು ಶ್ರೇಷ್ಠವಾದ, ಸರ್ವದೋಷ ಪರಿಹಾರಕವಾದ, ಪುಣ್ಯದಾಯಕವಾದ, ಪವಿತ್ರೀಕರಿಸುವ ಈ ಸ್ತೋತ್ರವನ್ನು ಮಾಡಿ ರುದ್ರನನ್ನು ಧ್ಯಾನಿಸಿದರು. ಎಲೈ ಭಾರತನೇ, ಯಾರು ಈ ರೀತಿಯಲ್ಲಿ ಧ್ಯಾನಿಸುತ್ತಾರೆಯೋ ಅಂತಹ ಮನುಷ್ಯನು ತನ್ನ ಶರೀರದಲ್ಲಿರುವ ರೋಮಕೂಪಗಳಿಗೆ ಸಮವಾದ ಸಹಸ್ರ ವರ್ಷಗಳವರೆಗೆ ಸ್ವರ್ಗದಲ್ಲಿ ವಾಸಿಸುತ್ತಾನೆ.

ಬ್ರಹ್ಮಹತ್ಯಾದಿಭಿಃ ಪಾಪೈರ್ಮುಚ್ಯತೇ ಚಾನುಕೀರ್ತನಾತ್ ।
ವಿಪುಳಾಂ ಶ್ರಿಯಮಾಪ್ನೋತಿ ಪೂಜಯಾ ಚ ನ ಸಂಶಯಃ ॥೭೮॥

ಈ ಸ್ತೋತ್ರವನ್ನು ಪಠನ ಮಾಡುವುದರಿಂದ ಬ್ರಹ್ಮಹತ್ಯಾದಿ ಪಾಪಗಳಿಂದ ನಿರ್ಮುಕ್ತನಾಗುತ್ತಾನೆ. ಈಶ್ವರನನ್ನು ಪೂಜಿಸುವುದರಿಂದ ವಿಪುಲವಾದ ಸಂಪತ್ತನ್ನು ಹೊಂದುತ್ತಾನೆ, ಇದರಲ್ಲಿ ಸಂಶಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಯುಧಿಷ್ಠಿರಂ ಪ್ರತಿ ಕೃಷ್ಣೇನ
ಶಿವಸಹಸ್ರನಾಮಾನುವರ್ಣನಂ ನಾಮ ಸಪ್ತತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೂವತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆಂಟನೆಯ ಅಧ್ಯಾಯ

ಗರುಡ-ನಾರಾಯಣರ ಸಂವಾದದ ವಿಷಯದಲ್ಲಿ ಯುಧಿಷ್ಠಿರನ ಪ್ರಶ್ನೆ.

ವೈಶಂಪಾಯನಃ

ಏವಂ ಭಗವತಃ ಕೃಷ್ಣಾತ್ ಶ್ರುತ್ವಾ ಸರ್ವಂ ಯುಧಿಷ್ಠಿರಃ ।
ಶರತಲ್ಪಗತಂ ಭೀಷ್ಮಂ ಭೂಯಃ ಪಪ್ರಚ್ಛ ಭೂಪತೇ ॥೧॥

ವೈಶಂಪಾಯನ– ಎಲೈ ರಾಜನೇ, ಯುಧಿಷ್ಠಿರನು ಈ ರೀತಿಯಲ್ಲಿ ಭಗವಂತನಾದ ಕೃಷ್ಣನಿಂದ ಎಲ್ಲವನ್ನೂ ಕೇಳಿ ಶರತಲ್ಪದಲ್ಲಿ ಮಲಗಿದ ಭೀಷ್ಮರನ್ನು ಕುರಿತು ಪುನಃ ಪ್ರಶ್ನೆ ಮಾಡಿದನು.

ಆತ್ಮನ್ಯಗ್ನೀನ್ ಸಮಾಧಾಯ ಯ ಏತೇ ಕುರುನಂದನ ।
ದ್ವಿಜಾತಯೋ ವ್ರತೋಪೇತಾ ಜಪಯಜ್ಞಪರಾಯಣಾಃ ॥೨॥

ಯಜಂತ್ಯಾರಂಭಯಜ್ಞೈಶ್ಚ ಮಾನಸಂ ಯಜ್ಞಮಾಸ್ಥಿತಾ ।
ಅಗ್ನಿಭ್ಯಶ್ಚ ಪರಂ ನಾಸ್ತಿ ಯೇಷಾಮೇಷಾ ವ್ಯವಸ್ಥಿತಿಃ ॥೩॥

ತೇಷಾಂ ಗತಿರ್ಮಹಾಪ್ರಾಜ್ಞ ಕೀದೃಶೀ ಕಿಂಪರಾಶ್ಚ ತೇ ।
ಏತದಿಚ್ಛಾಮಿ ತತ್ತ್ವೇನ ತತ್ತಃ ಶ್ರೋತುಂ ಪಿತಾಮಹ ॥೪॥

ಎಲೈ ಕುರುನಂದನನೇ, ಜಪ-ಯಜ್ಞದಲ್ಲಿ ನಿರತರಾದ, ವ್ರತನಿಷ್ಠರಾದ ದ್ವಿಜರು ಅಗ್ನಿಯನ್ನು ತಮ್ಮಲ್ಲಿಯೇ ಆರೋಪ ಮಾಡಿಕೊಂಡು, ಮಾನಸ ಯಜ್ಞವನ್ನು ಮಾಡುತ್ತಾ ಯಜ್ಞಗಳನ್ನು ಉಪಕ್ರಮಿಸಿ ಆರಾಧಿಸುತ್ತಾರೆಯೋ, ಯಾರಿಗೆ ಅಗ್ನಿಗಿಂತಲೂ ಉತ್ತಮವಾದ ಉಪಾಸನಾಧಿಷ್ಠಾನವಿಲ್ಲವೋ, ಎಲೈ ಮಹಾಪ್ರಾಜ್ಞನೇ, ಪಿತಾಮಹನೇ, ಅವರಿಗೆ ಎಂತಹ ಗತಿಯಾಗುತ್ತದೆ? ಅವರು ಏನನ್ನು ಚಿಂತಿಸುತ್ತಾರೆ? ಇದನ್ನು ನಿನ್ನಿಂದ ನಾನು ಸರಿಯಾಗಿ ತಿಳಿಯಲು ಬಯಸುತ್ತೇನೆ.

ಭೀಷ್ಮಃ

ಅತ್ರ ತೇ ವರ್ತಯಿಷ್ಯಾಮಿ ಇತಿಹಾಸಂ ಪುರಾತನಮ್ ।
ವೈಕುಂಠಸ್ಯ ಚ ಸಂವಾದಂ ಸುಪರ್ಣಸ್ಯ ಚ ಭಾರತ ॥೫॥

ಭೀಷ್ಮ- ಎಲೈ ಭಾರತನೇ, ಈ ವಿಷಯದಲ್ಲಿ ನಾನು ನಾರಾಯಣನಿಗೂ ಮತ್ತು ಗರುಡನಿಗೂ ನಡೆದ ಪುರಾತನ ಸಂವಾದರೂಪವಾದ ಇತಿಹಾಸವನ್ನು ಹೇಳುವೆನು.

ಅಮೃತಸ್ಯ ಸಮುತ್ಪತ್ತೌ ದೇವಾನಾಮಸುರೈಃ ಸಹ ।
ಷಷ್ಟಿಂ ವರ್ಷಸಹಸ್ರಾಣಿ ದೇವಾಸುರಮವರ್ತತ ॥೬॥

ಅಮೃತವು ಉತ್ಪತ್ತಿಯಾದ ಮೇಲೆ ದೇವಾಸುರರಿಗೆ ಅರವತ್ತು ಸಹಸ್ರ ವರ್ಷಗಳ ಕಾಲ ಯುದ್ಧವು ನಡೆಯಿತು.

ತತ್ರ ದೇವಾಸ್ತು ದೈತೇಯೈರ್ವಧ್ಯಂತೇ ಭೃಶದಾರುಣೈಃ ।
ತ್ರಾತಾರಂ ನಾಧಿಗಚ್ಛಂತಿ ವಧ್ಯಮಾನಾ ಮಹಾಸುರೈಃ ॥೭॥

ಆಗ ಬಹಳ ಕ್ರೂರಿಗಳಾದ, ದಿತಿಪುತ್ರರಾದ ಮಹಾ ಅಸುರರಿಂದ ಪ್ರಹಾರಕ್ಕೆ ಒಳಗಾದ ದೇವತೆಗಳಿಗೆ ಯಾವ ರಕ್ಷಕನೂ ಕಾಣಲಿಲ್ಲ.

ಆರ್ತಾಸ್ತೇ ದೇವದೇವೇಶಂ ಪ್ರಪನ್ನಾಃ ಶರಣೈಷಿಣಃ ।
ಪಿತಾಮಹಂ ಮಹಾಪ್ರಾಜ್ಞ ವಧ್ಯಮಾನಾ ಸುರೇತರೈಃ ॥೮॥

ಎಲೈ ಮಹಾಪ್ರಾಜ್ಞನೇ, ಅಸುರರಿಂದ ಪೀಡಿತರಾಗಿ ಆರ್ತರಾದ ಅವರು ಒಬ್ಬ ರಕ್ಷಕನನ್ನು ಬಯಸಿ, ದೇವದೇವೇಶನಾದ ಬ್ರಹ್ಮದೇವನ ಬಳಿಗೆ ಹೋದರು.

ತಾ ದೃಷ್ಟ್ವಾ ದೇವತಾ ಬ್ರಹ್ಮಾ ಸಂತ್ರಸ್ತೇಂದ್ರಿಯಮಾನಸಾಃ ।
ವೈಕುಂಠಂ ಶರಣಂ ದೇವಂ ಪ್ರತಿಪೇದೇ ಚ ತೈಃ ಸಹ ॥೯॥

ಬ್ರಹ್ಮನು ಬಳಲಿದ ಇಂದ್ರಿಯ-ಮನಸ್ಸುಗಳುಳ್ಳ ಆ ದೇವತೆಗಳನ್ನು ನೋಡಿ, ಅವರ ಜೊತೆಯಲ್ಲಿ ದೇವನಾದ ನಾರಾಯಣನನ್ನು ಶರಣು ಹೊಂದಿದನು.

ತತಃ ಸ ದೇವೈಃ ಸಹಿತಃ ಪದ್ಮಯೋನಿರ್ನರೇಶ್ವರ ।
ತುಷ್ಟಾವ ಪ್ರಾಂಜಲಿರ್ಭೂತ್ವಾ ನಾರಾಯಣಮನಾಮಯಮ್ ॥೧೦॥

ಎಲೈ ನರೇಶ್ವರನೇ, ಅನಂತರ ಅವನು ದೇವತೆಗಳಿಂದ ಸಹಿತನಾಗಿ ಕೈಗಳನ್ನು ಮುಗಿದು ನಿರ್ದುಷ್ಟನಾದ ನಾರಾಯಣನನ್ನು ಸ್ತೋತ್ರ ಮಾಡಿದನು.

ಬ್ರಹ್ಮಾ:

ತ್ವದ್ರೂಪಚಿಂತನಾನ್ನಾಮ್ನಾಂ ಸ್ಮರಣಾದರ್ಚನಾದಪಿ ।
ತಪೋಯೋಗಾದಿಭಿಶ್ಚೈವ ಶ್ರೇಯೋ ಯಾಂತಿ ಮನೀಷಿಣಃ ॥೧೧॥

ವಿವೇಕಿಗಳಾದವರು ನಿನ್ನ ರೂಪದ ಚಿಂತನೆಯಿಂದ, ನಿನ್ನ ನಾಮದ ಕೀರ್ತನೆಯಿಂದ, ನಿನ್ನ ಸ್ಮರಣೆಯಿಂದ, ಅರ್ಚನೆಯಿಂದ ಮತ್ತು ತಪೋಯೋಗದಿಂದ ಶ್ರೇಯಸ್ಸನ್ನು ಹೊಂದುತ್ತಾರೆ.

ಭಕ್ತವತ್ಸಲ ಪದ್ಮಾಕ್ಷ ಪರಮೇಶ್ವರ ಪಾಪಹನ್ ।
ಪರಮಾತ್ಮಾವಿಕಾರಾದ್ಯ ನಾರಾಯಣ ನಮೋಸ್ತು ತೇ ॥೧೨॥

ಭಕ್ತವತ್ಸಲನೇ, ಪದ್ಮಾಕ್ಷನೇ, ಪರಮೇಶ್ವರನೇ, ಪಾಪನಾಶಕನೇ, ಪರಮಾತ್ಮನೇ, ವಿಕಾರರಹಿತನೇ, ಅನಾದಿಯಾದವನೇ, ನಾರಾಯಣನೇ ನಿನಗೆ ನಮಸ್ಕಾರ.

ನಮಸ್ತೇ ಸರ್ವಲೋಕಾದೇ ಸರ್ವಾತ್ಮಾಽಮಿತವಿಕ್ರಮ ।
ಸರ್ವಭೂತಭವಿಷ್ಯೇಶ ಸರ್ವಭೂತಮಹೇಶ್ವರ ॥೧೩॥

ಎಲ್ಲ ಲೋಕಗಳಿಗೂ ಕಾರಣನಾದವನೇ, ಸರ್ವವ್ಯಾಪ್ತನೇ, ಅಮಿತವಿಕ್ರಮನೇ, ಸರ್ವಭೂತಭವಿಷ್ಯತ್‌ಗಳಿಗೆ ಒಡೆಯನೇ, ಸರ್ವಭೂತಗಳಿಗೆ ಮಹೇಶ್ವರನಾದವನೇ ನಿನಗೆ ನಮಸ್ಕಾರ.

ದೇವಾನಾಮಪಿ ದೇವಸ್ತ್ವಂ ಸರ್ವವಿದ್ಯಾಪರಾಯಣಃ ।
ಜಗದ್ಬೀಜಸಮಾಹಾರೋ ಜಗತಃ ಪರಮೋ ಹ್ಯಸಿ ॥೧೪॥

ನೀನು ದೇವತೆಗಳಿಗೂ ದೇವನಾದವನು, ಎಲ್ಲ ವಿದ್ಯೆಗಳಿಗೆ ಆಶ್ರಯನಾದವನು, ಜಗತ್ತಿಗೆ ಬೀಜರೂಪನಾದವನು, ಜಗತ್ತಿಗೆ ಸರ್ವಶ್ರೇಷ್ಠನಾದವನು.

ತ್ರಾಯಸ್ವ ದೇವತಾ ವೀರ ದಾನವಾದ್ಯೈಃ ಸುಪೀಡಿತಾನ್ ।
ಲೋಕಾಂಶ್ಚ ಲೋಕಪಾಲಾಂಶ್ಚ ಋಷೀಂಶ್ಚ ಜಯತಾಂವರ ॥೧೫॥

ಎಲೈ ವೀರನೇ, ಜಯಶಾಲಿಗಳಲ್ಲಿ ಶ್ರೇಷ್ಠನೇ, ದಾನವಾದಿಗಳಿಂದ ಬಹಳವಾಗಿ ಪೀಡಿತರಾದ ದೇವತೆಗಳನ್ನೂ, ಲೋಕಗಳನ್ನೂ, ಲೋಕಪಾಲಕರನ್ನೂ, ಋಷಿಗಳನ್ನೂ ರಕ್ಷಿಸು.

ವೇದಾಃ ಸಾಂಗೋಪನಿಷದಃ ಸರಹಸ್ಯಾಃ ಸಸಂಗ್ರಹಾಃ ।
ಸೋಂಕಾರಾಃ ಸವಷಟ್‌ಕಾರಾಃ ಪ್ರಾಹುಸ್ತ್ವಂ ಯಜ್ಞಮುತ್ತಮಮ್ ॥

ಪವಿತ್ರಾಣಾಂ ಪವಿತ್ರಂ ಚ ಮಂಗಲಾನಾಂ ಚ ಮಂಗಲಮ್ ।
ತಪಸ್ವಿನಾಂ ತಪಶ್ಚೈವ ದೈವತಂ ದೇವತಾಸ್ವಪಿ ॥೧೭॥

ಅಂಗಗಳಿಂದ ಮತ್ತು ಉಪನಿಷತ್ತುಗಳಿಂದ ಸಹಿತವಾದ, ರಹಸ್ಯಪೂರ್ಣವಾದ, ಸಂಕ್ಷೇಪ ಗ್ರಂಥಗಳಿಂದ ಸಹಿತವಾದ, ಓಂಕಾರದಿಂದ ಸಹಿತವಾದ, ವಷಟ್‌ಕಾರದಿಂದ ಸಹಿತವಾದ ವೇದಗಳು ನಿನ್ನನ್ನು ಶ್ರೇಷ್ಠನಾದ ಭಜನೀಯನೆಂದೂ, ಪವಿತ್ರವಾದ

ವಸ್ತುಗಳಿಗಿಂತಲೂ ಪವಿತ್ರನೆಂದೂ, ಮಂಗಳಗಳಿಗೂ ಮಂಗಳನೆಂದೂ, ತಪಸ್ವಿಗಳ ತಪಸ್ಸಿಗೆ ವಿಷಯನೆಂದೂ, ದೇವತೆಗಳಿಗೂ ದೇವತೆ ಎಂದೂ ಹೇಳುತ್ತವೆ.

ಏವಮಾದಿಪುರಸ್ಕಾರೈರ್ಋಕ್ಸಾಮಯಜುಷಾಂ ಗಣೈಃ ।
ವೈಕುಂಠಂ ತುಷ್ಟುವುರ್ದೇವಾಃ ಸರ್ವೇ ಬ್ರಹ್ಮರ್ಷಿಭಿಃ ಸಹ ॥೧೮॥

ದೇವತೆಗಳು ಈ ರೀತಿಯಾದ ಸ್ತೋತ್ರಗಳಿಂದ ಋಕ್ಸಾಮಯಜುರ್ವೇದ ಸಮೂಹಗಳಿಂದ ಬ್ರಹ್ಮರ್ಷಿಗಳೊಂದಿಗೆ ವೈಕುಂಠನನ್ನು ಸ್ತೋತ್ರ ಮಾಡಿದರು.

ತತೋಽಂತರಿಕ್ಷೇ ವಾಗಾಸೀನ್ಮೇಘಗಂಭೀರನಿಸ್ವನಾ ।
ಜೇಷ್ಯಧ್ವಂ ದಾನವಾನ್ ಯೂಯಂ ಮಯೈವ ಸಹ ಸಂಗರೇ ॥೧೯॥

ಆಗ ಅಂತರಿಕ್ಷದಲ್ಲಿ ''ನೀವು ನನ್ನಿಂದಲೇ ಯುದ್ಧದಲ್ಲಿ ದಾನವರನ್ನು ಗೆಲ್ಲುವಿರಿ'' ಎಂಬ ಮೇಘಗಂಭೀರವಾದ ವಾಣಿಯು ಕೇಳಿ ಬಂದಿತು.

ತತೋ ದೇವಗಣಾನಾಂ ಚ ದಾನವಾನಾಂ ಚ ಯುದ್ಧ್ಯತಾಮ್ ।
ಪ್ರಾದುರಾಸೀನ್ಮಹಾತೇಜಾ ಶಾರ್ಙ್ಗಚಕ್ರಗದಾಧರಃ ॥೨೦॥

ಆಗ ದೇವತೆಗಳ ಸಮೂಹವು ಮತ್ತು ದಾನವರು ಯುದ್ಧವನ್ನು ಮಾಡುತ್ತಿರಲು ಮಹಾತೇಜಸ್ವಿಯಾದ ಶಾರ್ಙ್ಗಚಕ್ರಗದಾಧರನು ಪ್ರತ್ಯಕ್ಷನಾದನು.

ಸುಪರ್ಣಪೃಷ್ಠಮಾಸ್ಥಾಯ ತೇಜಸಾ ಪ್ರದಹನ್ನಿವ ।
ವ್ಯಧಮದ್ ದಾನವಾನ್ ಸರ್ವಾನ್ ಬಾಹುದ್ರವಿಣತೇಜಸಾ ॥೨೧॥

ಗರುಡನ ಬೆನ್ನಿನ ಮೇಲೆ ಕುಳಿತು ತನ್ನ ತೇಜಸ್ಸಿನಿಂದ ಎಲ್ಲರನ್ನೂ ಸುಡುವವನಂತೆ ತನ್ನ ಬಾಹುಬಲದಿಂದ ಎಲ್ಲ ದಾನವರನ್ನೂ ನಾಶಗೊಳಿಸಿದನು.

ತಂ ಸಮಾಸಾದ್ಯ ಸಮರೇ ದೈತ್ಯದಾನವಪುಂಗವಾಃ ।
ವ್ಯನಶ್ಯಂತ ಮಹಾರಾಜ ಪತಂಗಾ ಇವ ಪಾವಕಮ್ ॥೨೨॥

ಎಲೈ ಮಹಾರಾಜನೇ, ದೈತ್ಯದಾನವಶ್ರೇಷ್ಠರು ಯುದ್ಧದಲ್ಲಿ ಅವನನ್ನು ಸಮೀಪಿಸಿ ಅಗ್ನಿಯನ್ನು ಸಮೀಪಿಸಿದ ಪತಂಗಗಳಂತೆ ನಾಶ ಹೊಂದಿದರು.

ಸ ವಿಜಿತ್ಯಾಸುರಾನ್ ಸರ್ವಾನ್ ದಾನವಾಂಶ್ಚ ಮಹಾಮತಿಃ ।
ಪಶ್ಯತಾಮೇವ ದೇವಾನಾಂ ತತ್ರೈವಾಂತರಧೀಯತ ॥೨೩॥

ಮಹಾಬುದ್ಧಿಯುಳ್ಳ ಅವನು ಎಲ್ಲ ಅಸುರರನ್ನೂ ಮತ್ತು ದಾನವರನ್ನೂ ಜಯಿಸಿ ದೇವತೆಗಳು ನೋಡುತ್ತಿರುವಂತೆಯೇ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ತಂ ದೃಷ್ಟ್ವಾಽಂತರ್ಹಿತಂ ದೇವಂ ವಿಷ್ಣುಂ ದೇವಾಮಿತದ್ಯುತಿಮ್ ।
ವಿಸ್ಮಯೋತ್ಫುಲ್ಲನಯನಾ ಬ್ರಹ್ಮಾಣಮಿದಮಬ್ರುವನ್ ॥೨೪॥

ಅಮಿತ ದ್ಯುತಿಯಾದ ದೇವನಾದ ವಿಷ್ಣುವು ಅಂತರ್ಧಾನವನ್ನು ಹೊಂದಿದುದನ್ನು ನೋಡಿ ದೇವತೆಗಳು ಆಶ್ಚರ್ಯದಿಂದ ಅರಳಿದ ಕಣ್ಣುಳ್ಳವರಾಗಿ ಬ್ರಹ್ಮದೇವರನ್ನು ಕುರಿತು ಹೀಗೆ ಹೇಳಿದರು.

ಭಗವನ್ ಸರ್ವಲೋಕೇಶ ಸರ್ವಲೋಕಪಿತಾಮಹ ।
ಇದಮತ್ಯದ್ಭುತಂ ವೃತ್ತಂ ತನ್ನಃ ಶಂಸಿತುಮರ್ಹಸಿ ॥೨೫॥

ಭಗವಂತನೇ, ಸರ್ವಲೋಕೇಶನೇ, ಸರ್ವಲೋಕಪಿತಾಮಹನೇ, ನಡೆದ ಈ ಘಟನೆಯು ಅದ್ಭುತವಾದುದು. ಅದನ್ನು ನಮಗೆ ತಿಳಿಸಬೇಕು.

ದೇವಾಸುರೇಽಸ್ಮಿನ್ ಸಂಗ್ರಾಮೇ ತ್ರಾತಾ ಯೇನ ವಯಂ ವಿಭೋ ।
ಏತದ್ ವಿಜ್ಞಾತುಮಿಚ್ಛಾಮಃ ಕುತೋಽಸೌ ಕಶ್ಚ ತತ್ತ್ವತಃ ॥೨೬॥

ಈ ದೇವಾಸುರ ಸಂಗ್ರಾಮದಲ್ಲಿ ನಮ್ಮನ್ನು ರಕ್ಷಿಸಿದವನು ಯಾರು? ಎಲೈ ವಿಭುವೇ, ಅವನು ಎಲ್ಲಿಂದ ಬಂದನು ಮತ್ತು ಅವನ ಸ್ವರೂಪವೇನು ಎಂದು ತಿಳಿಯಲು ನಾವು ಇಚ್ಛಿಸುತ್ತೇವೆ.

ಕೋಽಯಮಸ್ಮಾನ್ ಪರಿತ್ರಾಯ ತೂಷ್ಣೀಮೇವ ಯಥಾಗತಮ್ ।
ಪ್ರತಿಪ್ರಯಾತೋ ದಿವ್ಯಾತ್ಮಾ ತಂ ನಃ ಶಂಸಿತುಮರ್ಹಸಿ ॥೨೭॥

ನಮ್ಮನ್ನು ರಕ್ಷಿಸಿ ಬಂದಂತೆಯೇ ಮಾತನಾಡದೆ ಹೊರಟು ಹೋದ ಆ ದಿವ್ಯಾತ್ಮನು ಯಾರು ಎಂದು ನಮಗೆ ಹೇಳಬೇಕು.

ಏವಮುಕ್ತಃ ಸುರೈಃ ಸರ್ವೈರ್ವಚನಂ ವಚನಾರ್ಥವಿತ್ ।
ಉವಾಚ ಪದ್ಮನಾಭಸ್ಯ ಪೂರ್ವರೂಪಂ ಪ್ರತಿ ಪ್ರಭೋ ॥೨೮॥

ಏಲೈ ಪ್ರಭುವೇ, ಎಲ್ಲ ದೇವತೆಗಳಿಂದ ಹೀಗೆ ಕೇಳಲ್ಪಟ್ಟ, ದೇವತೆಗಳ ವಚನಾರ್ಥಗಳನ್ನು ತಿಳಿದ ಬ್ರಹ್ಮನು ಪದ್ಮನಾಭನ ಪೂರ್ವರೂಪವಾದ ನಾರಾಯಣನ ರೂಪದ ವಿಷಯದಲ್ಲಿ ಮಾತನಾಡಿದನು.

ಬ್ರಹ್ಮಾ

ನ ಹ್ಯೇನಂ ವೇದ ತತ್ತ್ವೇನ ಭುವನಂ ಭುವನೇಶ್ವರಮ್ ।
ಸಂಖ್ಯಾತುಂ ನೈವ ಚಾತ್ಮಾನಂ ನಿರ್ಗುಣಂ ಗುಣಿನಾಂ ವರಮ್ ॥೨೯॥

ಬ್ರಹ್ಮಾ– ಭುವನೇಶ್ವರನಾದ ಇವನನ್ನು ಸಮಸ್ತ ಲೋಕವು ಸರಿಯಾಗಿ ತಿಳಿದಿಲ್ಲ. ಪ್ರಾಕೃತ ಗುಣರಹಿತನೂ, ಅಪ್ರಾಕೃತ ಗುಣಗಳಿಂದ ಗುಣವಂತರಲ್ಲಿ ಶ್ರೇಷ್ಠನೂ ಆದ ಅವನ ಗುಣವನ್ನಾಗಲೀ ಲೋಕವು ತಿಳಿದಿಲ್ಲ.

ಅತ್ರ ವೋ ವರ್ತಯಿಷ್ಯಾಮಿ ಇತಿಹಾಸಂ ಪುರಾತನಮ್ ।
ಸುಪರ್ಣಸ್ಯ ಚ ಸಂವಾದಮೃಷೀಣಾಂ ಚಾಪಿ ದೇವತಾಃ ॥೩೦॥

ಎಲೈ ದೇವತೆಗಳೇ, ಈ ವಿಷಯದಲ್ಲಿ ಹಿಂದೆ ನಡೆದ ಗರುಡ ಮತ್ತು ಋಷಿಗಳ ಸಂವಾದ ರೂಪವಾದ ಇತಿಹಾಸವನ್ನು ಹೇಳುವೆನು.

ಪುರಾ ಬ್ರಹ್ಮರ್ಷಯಶ್ಚೈವ ಸಿದ್ಧಾಶ್ಚ ಭುವನೇಶ್ವರಮ್ ।
ಆಶ್ರಿತ್ಯ ಹಿಮವತ್ಪೃಷ್ಠೇ ಚಕ್ರಿರೇ ವಿವಿಧಾಃ ಕಥಾಃ ॥೩೧॥

ಹಿಂದೆ ಬ್ರಹ್ಮರ್ಷಿಗಳು ಮತ್ತು ಸಿದ್ಧರು ಹಿಮಾಲಯದ ತಪ್ಪಲಿನಲ್ಲಿ ಸೇರಿ ಭುವನೇಶ್ವರನಾದ ನಾರಾಯಣನ ವಿಷಯದಲ್ಲಿ ಅನೇಕ ಕಥೆಗಳನ್ನು ಮಾಡಿದರು.

ತೇಷಾಂ ಕಥಯತಾಂ ತತ್ರ ಕಥಾಂತೇ ಪತತಾಂ ವರಃ ।
ಪ್ರಾದುರಾಸೀತ್ ಮಹಾತೇಜಾ ವಾಹಶ್ಚಕ್ರಗದಾಭೃತಃ ॥೩೨॥

ಅವರು ಕಥೆಗಳನ್ನು ಹೇಳುತ್ತಿರುವಾಗ ಆ ಕಥೆಗಳು ಮುಗಿದ ಮೇಲೆ ಹಾರುವವರಲ್ಲಿ ಶ್ರೇಷ್ಠನಾದವನೂ, ಮಹಾತೇಜಸ್ವಿಯೂ, ಚಕ್ರಗಧಾಧಾರಿಯಾದ ನಾರಾಯಣನ ವಾಹನನೂ ಆದ ಗರುಡನು ಪ್ರತ್ಯಕ್ಷನಾದನು.

ಸ ತಾನ್ ಋಷೀನ್ ಸಮಾಸಾದ್ಯ ವಿನಯಾವನತಾನನಃ ।
ಅವತೀರ್ಯ ಮಹಾವೀರ್ಯಸ್ತಾನೃಷೀನಭಿಜಗ್ಮಿವಾನ್ ॥೩೩॥

ಮಹಾಪರಾಕ್ರಮಿಯಾದ ಅವನು ಅಂತರಿಕ್ಷದಿಂದ ಇಳಿದು, ಋಷಿಗಳನ್ನು ಸಮೀಪಿಸಿ, ವಿನಯದಿಂದ ಶಿರಸ್ಸನ್ನು ತಗ್ಗಿಸಿ, ಆ ಋಷಿಗಳ ಸಮೀಪಕ್ಕೆ ಹೋದನು.

ಅಭ್ಯರ್ಚಿತಃ ಸ ಋಷಿಭಿಃ ಸ್ವಾಗತೇನ ಮಹಾಬಲಃ ।
ಉಪಾವಿಶತ ತೇಜಸ್ವೀ ಭೂಮೌ ವೇಗವತಾಂ ವರಃ ॥೩೪॥

ಮಹಾಬಲನಾದ ವೇಗವಂತರಲ್ಲಿ ಶ್ರೇಷ್ಠನಾದ ತೇಜಸ್ವಿಯಾದ ಅವನು ಋಷಿಗಳಿಂದ ಸ್ವಾಗತವಚನಗಳಿಂದ ಪೂಜಿಸಲ್ಪಟ್ಟು ಭೂಮಿಯ ಮೇಲೆ ಕುಳಿತನು.

ತಮಾಸೀನಂ ಮಹಾತ್ಮಾನಂ ವೈನತೇಯಂ ಮಹಾದ್ಯುತಿಮ್ ।
ಋಷಯಃ ಪರಿಪಪ್ರಚ್ಛುರ್ಮಹಾತ್ಮಾನಸ್ತಪಸ್ವಿನಃ ॥೩೫॥

ಕೌತೂಹಲಂ ವೈನತೇಯ ಪರಂ ನೋ ಹೃದಿ ವರ್ತತೇ ।
ತಸ್ಯ ನಾನ್ಯೋಽಸ್ತಿ ವಕ್ತೇಹ ತ್ವಾಮೃತೇ ಪನ್ನಗಾಶನ ॥೩೬॥

ತದಾಖ್ಯಾತುಮಿಹೇಚ್ಛಾಮೋ ಭವತಾ ಪ್ರಶ್ನಮುತ್ತಮಮ್ ।
ಏವಮುಕ್ತಃ ಪ್ರತ್ಯುವಾಚ ಪ್ರಾಂಜಲಿರ್ವಿನತಾಸುತಃ ॥೩೭॥

ಭೂಮಿಯ ಮೇಲೆ ಕುಳಿತ ಮಹಾತ್ಮನೂ, ಮಹಾದ್ಯುತಿಯೂ ಆದ, ವಿನತಾ ಪುತ್ರನಾದ ಗರುಡನನ್ನು ಕುರಿತು ಮಹಾತ್ಮರೂ, ತಪಸ್ವಿಗಳೂ ಆದ ಋಷಿಗಳು ಎಲೈ ವೈನತೇಯನೇ, ನಮ್ಮ ಮನಸ್ಸಿನಲ್ಲಿ ದೊಡ್ಡ ಕುತೂಹಲವಿದೆ. ಎಲೈ ಪನ್ನಗಾಶನನೇ, ನಿನ್ನನ್ನು ಬಿಟ್ಟು ಅದಕ್ಕೆ ಉತ್ತರವನ್ನು ಕೊಡಲು ಯಾರೂ ಸಮರ್ಥರಲ್ಲ. ಆದ್ದರಿಂದ ಆ ಶ್ರೇಷ್ಠವಾದ ಪ್ರಶ್ನೆಗೆ ನೀನು ಉತ್ತರವನ್ನು ಹೇಳಬೇಕೆಂದು ಬಯಸುತ್ತೇವೆ ಎಂದು ಹೇಳಿದರು. ಹೀಗೆ ಹೇಳಲ್ಪಟ್ಟ ವಿನತಾಸುತನಾದ ಗರುಡನು ಕೈಗಳನ್ನು ಮುಗಿದು ಮಾತನಾಡಿದನು.

ಸುಪರ್ಣಃ

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯನ್ಮಾಂ ಬ್ರಹ್ಮರ್ಷಿಸತ್ತಮಾಃ ।
ಪ್ರಷ್ಟವ್ಯಂ ಪ್ರಷ್ಟುಮಿಚ್ಛಂತಿ ಪ್ರೀತಿಮಂತೋಽನಸೂಯಕಾಃ ॥೩೮॥

ಗರುಡ– ಎಲೈ ಬ್ರಹ್ಮರ್ಷಿಗಳಲ್ಲಿ ಶ್ರೇಷ್ಠರೇ, ನಾನು ಧನ್ಯನಾಗಿದ್ದೇನೆ. ನಿಮ್ಮಿಂದ ಅನುಗ್ರಹಿತನಾಗಿದ್ದೇನೆ. ಏಕೆಂದರೆ ನೀವು ಪ್ರೀತಿಯಿಂದ ಅಸೂಯಾರಹಿತರಾಗಿ ನನ್ನನ್ನು ಪ್ರಶ್ನೆ ಮಾಡುತ್ತಿದ್ದೀರಿ.

ಕಿಂ ಮಯಾ ಬ್ರೂತ ವಕ್ತವ್ಯಂ ಕಾರ್ಯಂ ಚ ವದತಾಂವರಾಃ ।
ಯೂಯಂ ಹಿ ಮಾಂ ಯಥಾಯುಕ್ತಂ ಸರ್ವಂ ವೈ ಪ್ರಷ್ಟುಮರ್ಹಥ ॥

ಎಲೈ ಮಾತನಾಡುವವರಲ್ಲಿ ಶ್ರೇಷ್ಠರಾದವರೇ, ನಾನು ಏನು ಹೇಳಬೇಕು? ಅಥವಾ ಏನು ಮಾಡಬೇಕೆಂದು ಹೇಳಿ. ನೀವು ನನ್ನನ್ನು ಯಥೋಚಿತವಾಗಿ ಎಲ್ಲ ವಿಷಯದಲ್ಲಿಯೂ ಪ್ರಶ್ನೆಯನ್ನು ಮಾಡಬಹುದು (ಎಂದು ಹೇಳಿದನು).

ನಮಸ್ಕೃತ್ವಾ ಹ್ಯನಂತಾಯ ತತಸ್ತೇ ಋಷಿಸತ್ತಮಾಃ ।
ಪ್ರಷ್ಟುಂ ಪ್ರಚಕ್ರಮುಸ್ತತ್ರ ವೈನತೇಯಂ ಮಹಾಬಲಮ್ ॥೪೦॥

ಆಗ ಋಷಿಗಳು ಅನಂತನಾದ ನಾರಾಯಣನಿಗೆ ನಮಸ್ಕಾರ ಮಾಡಿ, ಮಹಾಬಲನಾದ ಗರುಡನನ್ನು ಕುರಿತು ಪ್ರಶ್ನೆಯನ್ನು ಮಾಡಲು ಪ್ರಾರಂಭಿಸಿದರು.

ದೇವದೇವಂ ಮಹಾತ್ಮಾನಂ ನಾರಾಯಣಮನಾಮಯಮ್ ।
ಭವಾನುಪಾಸ್ತೇ ವರದಂ ಕುತೋಽಸೌ ಕಶ್ಚ ತತ್ತ್ವತಃ ॥೪೧॥

ದೇವದೇವನೂ, ಮಹಾತ್ಮನೂ, ನಿರ್ದೋಷನೂ, ವರಪ್ರದನೂ ಆದ ನಾರಾಯಣನನ್ನು ನೀನು ಉಪಾಸನೆ ಮಾಡುತ್ತೀಯೆ. ಅವನು ಎಲ್ಲಿಂದ ಬಂದವನು? ಅವನ ಸ್ವರೂಪವೇನು?

ಪ್ರಕೃತಿರ್ವಿಕೃತಿರ್ವಾಽಸ್ಯ ಕೀದೃಶೀ ಕ್ವ ನು ಸಂಸ್ಥಿತಿಃ ।
ಏತದ್ ಭವಂತಂ ಪೃಚ್ಛಾಮೋ ದೇವೋಽಯಂ ಕ್ವ ಕೃತಾಲಯಃ ॥೪೨॥

ಅವನ ಸ್ವಭಾವವಾಗಲೀ ಅಥವಾ ವಿವಿಧ ಕಾರ್ಯಗಳಾಗಲೀ ಯಾವ ರೀತಿ ಇರುತ್ತವೆ? ಅವನ ನಿಜವಾದ ಸ್ಥಿತಿ ಏನು? ಆ ದೇವನು ಎಲ್ಲಿ ವಾಸ ಮಾಡುತ್ತಾನೆ? ಎಂದು ನಾವು ನಿನ್ನನ್ನು ಕೇಳುತ್ತಿದ್ದೇವೆ.

ಏಷ ಭಕ್ತಪ್ರಿಯೋ ದೇವಃ ಪ್ರಿಯಭಕ್ತಸ್ತಥೈವ ಚ ।
ತ್ವಂ ಪ್ರಿಯಶ್ಚಾಸ್ಯ ಭಕ್ತಶ್ಚ ನಾನ್ಯಃ ಕಾಶ್ಯಪ ವಿದ್ಯತೇ ॥೪೩॥

ಆ ದೇವನು ಭಕ್ತರಿಗೆ ಪ್ರಿಯನಾದವನು. ಹಾಗೆಯೇ ಭಕ್ತರೂ ಅವನಿಗೆ ಪ್ರಿಯರಾದವರು. ಎಲೈ ಕಾಶ್ಯಪಪುತ್ರನೇ, ನೀನು ಅವನಿಗೆ ಪ್ರಿಯನಾದವನು ಮತ್ತು ಭಕ್ತನಾದವನು. ನಿನ್ನಂತಹವನು ಇನ್ನೊಬ್ಬನಿಲ್ಲ.

ಮುಷ್ಣನ್ನಿವ ಮನಶ್ಚಕ್ಷೂಂಷ್ಯವಿಭಾವ್ಯತನುರ್ವಿಭುಃ ।
ಅನಾದಿಮಧ್ಯನಿಧನೋ ನ ವಿದ್ಮೈನಂ ಕುತೋ ಹ್ಯಸೌ ॥೪೪॥

ಆ ವಿಭುವು ತಿಳಿಯಲು ಅಸಾಧ್ಯವಾದ ಶರೀರವನ್ನು ಹೊಂದಿ, ನಮ್ಮ ಮನಸ್ಸನ್ನು ಮತ್ತು ಚಕ್ಷುಸ್ಸುಗಳನ್ನು ಅಪಹರಿಸುವವನಂತೆ ಇದ್ದಾನೆ. ಆದಿ-ಮಧ್ಯಾಂತ ಶೂನ್ಯನಾದ ಅವನನ್ನು ನಾವು ತಿಳಿದಿಲ್ಲ.

ವೇದೇಷ್ವಪಿ ಚ ವಿಶ್ವಾತ್ಮಾ ಗೀಯತೇ ನ ಚ ವಿದ್ಮಹೇ ।
ತತ್ತ್ವತಸ್ತತ್ತ್ವಭೂತಾತ್ಮಾ ವಿಭುರ್ನಿತ್ಯಃ ಸನಾತನಃ ॥೪೫॥

ವೇದಗಳಲ್ಲಿಯೂ ಆ ವಿಶ್ವಾತ್ಮನು ಗಾನ ಮಾಡಲ್ಪಡುತ್ತಾನೆ. ಆದರೂ ನಾವು ಅವನನ್ನು ಸರಿಯಾಗಿ ತಿಳಿದಿಲ್ಲ. ಅವನು ಯಥಾರ್ಥವಾದ ಸ್ವರೂಪವುಳ್ಳವನು, ವ್ಯಾಪ್ತನಾದವನು, ನಿತ್ಯನಾದವನು, ಸನಾತನನಾದವನು.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ।
ಗುಣಾಶ್ಚೈಷಾಂ ಯಥಾಸಂಖ್ಯಂ ಭಾವಾಭಾವೌ ತಥೈವ ಚ ॥೪೬॥

ತಮಃ ಸತ್ವಂ ರಜಶ್ಚೈವ ಭಾವಾಶ್ಚೈವ ತದಾತ್ಮಕಾಃ ।
ಮನೋ ಬುದ್ಧಿಶ್ಚ ತೇಜಶ್ಚ ಬುದ್ಧಿಗಮ್ಯಾನಿ ತತ್ತ್ವತಃ ॥೪೭॥

ಜಾಯಂತೇ ತಾತ ಕಸ್ಮಾದ್ಧಿ ತಿಷ್ಠತೇ ತೇಷ್ವಸೌ ವಿಭುಃ ।
ಸಂಚಿತ್ಯ ಬಹುಧಾ ಬುದ್ಧ್ಯಾ ನಾಧ್ಯವಸ್ಯಾಮಹೇ ಪರಮ್ ॥೪೮॥

ಪೃಥಿವೀ, ವಾಯು, ಆಕಾಶ, ಜಲ ಮತ್ತು ಅಗ್ನಿ ಅವುಗಳ ಕ್ರಮವಾದ ಗುಣಗಳು ಉತ್ಪತ್ತಿ-ನಾಶಗಳು, ಸತ್ವ-ರಜಸ್-ತಮೋಗುಣಗಳು, ಅಂತಹ ಗುಣಾತ್ಮಕವಾದ ವಸ್ತುಗಳು, ಮನಸ್ಸು, ಬುದ್ಧಿ, ತೇಜಸ್ಸು ಇವೆಲ್ಲವೂ ಬುದ್ಧಿಗೆ ವಿಷಯವಾಗುವಂತಹವುಗಳು. ಎಲೈ ಪ್ರೀತಿಪಾತ್ರನೇ, ಇವೆಲ್ಲವೂ ಯಾರಿಂದ

ಉಂಟಾಗುತ್ತವೆ? ಅವುಗಳಲ್ಲಿ ವ್ಯಾಪ್ತನಾದ ಇವನು ಇರುತ್ತಾನೆ. ನಾವು ಬುದ್ಧಿಯಿಂದ, ಯುಕ್ತಿಯಿಂದ ಎಷ್ಟು ವಿಚಾರ ಮಾಡಿದರೂ ನಾವು ಆ ಸರ್ವೋತ್ತಮನಾದ ಇವನನ್ನು ಸರಿಯಾಗಿ ತಿಳಿಯಲಾರೆವು.

ತಸ್ಯ ದೇವಸ್ಯ ತತ್ತ್ವೇನ ತನ್ನಃ ಶಂಸ ಯಥಾತಥಮ್ ।
ಏತಮೇವ ಪರಂ ಪ್ರಶ್ನಂ ಕೌತೂಹಲಸಮನ್ವಿತಾಃ ।
ಏವಂ ಭವಂತಂ ಪೃಚ್ಛಾಮಸ್ತನ್ನಃ ಶಂಸಿತುಮರ್ಹಸಿ ॥೪೯॥

ಆ ದೇವನ ಸರಿಯಾದ ತತ್ತ್ವವನ್ನು ನಮಗೆ ನೀನು ಹೇಳುವವನಾಗು. ಕುತೂಹಲದಿಂದ ಕೂಡಿದ ನಾವು ಇದೇ ಶ್ರೇಷ್ಠವಾದ ಪ್ರಶ್ನೆಯನ್ನು ನಿನಗೆ ಕೇಳುತ್ತಿದ್ದೇವೆ. ಈ ಪ್ರಶ್ನೆಗೆ ಉತ್ತರವನ್ನು ಹೇಳು.

ಸುಪರ್ಣಃ

ಸ್ಥೂಲತೋ ಯಸ್ತು ಭಗವಾಂಸ್ತೇನೈವ ಸ್ವೇನ ಹೇತುನಾ ।
ತ್ರೈಲೋಕ್ಯಸ್ಯ ತು ರಕ್ಷಾರ್ಥಂ ದೃಶ್ಯತೇ ರೂಪಮಾಸ್ಥಿತಃ ॥೫೦॥

ಗರುಡ– ಭಗವಂತನು ತನ್ನ ಇಚ್ಛೆಯ ನಿಮಿತ್ತದಿಂದಲೇ ಮೂರು ಲೋಕಗಳ ರಕ್ಷಣೆಗೋಸ್ಕರ ಸ್ಥೂಲರೂಪವನ್ನು ತೆಗೆದುಕೊಂಡು ಕಾಣಿಸಿಕೊಳ್ಳುತ್ತಾನೆ.

ಮಯಾ ತು ಮಹದಾಶ್ಚರ್ಯಂ ಪುರಾ ದೃಷ್ಟಂ ಸನಾತನೇ ।
ದೇವೇ ಶ್ರೀವೃಕ್ಷನಿಲಯೇ ತಚ್ಛೃಣುಧ್ವಮಶೇಷತಃ ॥೫೧॥

ನಾನು ಸನಾತನನೂ, ಶ್ರೀವೃಕ್ಷವಾಸಿಯೂ ಆದ ದೇವನಲ್ಲಿ ಹಿಂದೆ ಒಂದು ದೊಡ್ಡ ಆಶ್ಚರ್ಯವನ್ನು ನೋಡಿದೆನು. ಅದನ್ನು ಪೂರ್ಣವಾಗಿ ಕೇಳಿ.

ನ ಸ್ಮ ಶಕ್ತೋ ಮಯಾ ವೇತ್ತುಂ ನ ಭವದ್ಭಿಃ ಕಥಂಚನ ।
ಯಥಾ ಮಾಂ ಪ್ರಾಹ ಭಗವಾಂಸ್ತಥಾ ತಚ್ಛ್ರೂಯತಾಂ ಮಮ ॥೫೨॥

ನಾನಾಗಲೀ, ನೀವಾಗಲೀ ಅವನನ್ನು ತಿಳಿಯಲಾರೆವು. ಅವನೇ ನನಗೆ ಉಪದೇಶ ಮಾಡಿದಂತೆ ನಾನು ನಿಮಗೆ ಹೇಳುತ್ತಿದ್ದೇನೆ, ಅದನ್ನು ಕೇಳಿ.

ಮಯಾऽಮೃತಂ ದೇವತಾನಾಂ ಮಿಷತಾಮೃಷಿಸತ್ತಮಾಃ ।
ಹೃತಂ ವಿಪಾಟ್ಯ ತದ್ಯಂತ್ರಂ ವಿದ್ರಾವ್ಯಾಮೃತರಕ್ಷಿಣಃ ॥೫೩॥

ಎಲೈ ಋಷಿಶ್ರೇಷ್ಠರೇ, ನಾನು ಅಮೃತವನ್ನು ರಕ್ಷಿಸುವ ಕಾವಲುಗಾರರನ್ನು ಓಡಿಸಿ, ಯಂತ್ರವನ್ನು ಭೇದಿಸಿ ದೇವತೆಗಳು ನೋಡುತ್ತಿರುವಂತೆಯೇ ಅಮೃತವನ್ನು ತಂದೆನು.

ದೇವತಾ ವಿಮುಖೀಕೃತ್ಯ ಸೇಂದ್ರಾಃ ಸಮರುತೋ ಮೃಧೇ ।
ಉನ್ಮಥ್ಯಾಶು ಗಿರೀಂಶ್ಚೈವ ವಿಮೋಕ್ಷ್ಯ ಚ ಮಹೋದಧಿಮ್ ॥೫೪॥

ಇಂದ್ರನಿಂದಲೂ, ಮರುದ್ಗಣದಿಂದಲೂ ಸಹಿತರಾದ ದೇವತೆಗಳನ್ನು ಯುದ್ಧದಲ್ಲಿ ವಿಮುಖರನ್ನಾಗಿ ಮಾಡಿ, ಮಹಾಸಾಗರವನ್ನು ಕ್ಷೋಭೆಗೊಳಿಸಿ, ಪರ್ವತಗಳನ್ನು ದಾಟಿ (ಅಮೃತವನ್ನು ತಂದೆನು).

ತಂ ದೃಷ್ಟ್ವಾ ಮಮ ವಿಕ್ರಾಂತಂ ವಾಗುವಾಚಾಶರೀರಿಣೀ ।
ಪ್ರೀತೋಽಸ್ಮಿ ತೇ ವೈನತೇಯ ಕರ್ಮಣಾಽನೇನ ಸುವ್ರತ ॥೫೫॥

ಅವೃಥಾ ತೇಽಸ್ತು ಮದ್ವಾಕ್ಯಂ ಬ್ರೂಹಿ ಕಿಂ ಕರವಾಣಿ ತೇ ।
ತಾಮೇವಂವಾದಿನೀಂ ವಾಚಮಹಂ ಪ್ರತ್ಯುಕ್ತವಾಂಸ್ತದಾ ॥೫೬॥

ನನ್ನ ಪರಾಕ್ರಮವನ್ನು ನೋಡಿ ಒಂದು ಅಶರೀರವಾಣಿಯು 'ಎಲೈ ವಿನತಾ ಪುತ್ರನೇ, ಸುವ್ರತನೇ, ನಿನ್ನ ಈ ಕಾರ್ಯದಿಂದ ನಾನು ಪ್ರಸನ್ನನಾಗಿದ್ದೇನೆ. ನನ್ನ ಮಾತು ನಿನ್ನಲ್ಲಿ ವ್ಯರ್ಥವಾಗುವುದು ಬೇಡ. ನಿನಗೆ ಏನು ಮಾಡಲಿ ಎಂದು ಹೇಳು' ಎಂದು ಹೇಳಿತು. ಹೀಗೆ ಹೇಳಿದ ಆ ಅಶರೀರವಾಣಿಯನ್ನು ಕುರಿತು ಆಗ ನಾನು ಪ್ರತಿಯಾಗಿ ಹೇಳಿದೆನು.

ಜ್ಞಾತುಮಿಚ್ಛಾಮಿ ಕಸ್ತ್ವಂ ಹಿ ತತೋ ಮೇ ದಾಸ್ಯಸೇ ವರಮ್ ।
ಪ್ರಕೃತಿರ್ವಿಕೃತಿರ್ವಾ ತ್ವಂ ದೇವೋ ವಾ ದಾನವೋಽಪಿ ವಾ ॥೫೭॥

ನೀನು ಯಾರು ಎಂದು ತಿಳಿಯಲು ಬಯಸುತ್ತೇನೆ. ಅನಂತರ ವರವನ್ನು ಕೊಡಬಹುದು. ನೀನು ಪ್ರಕೃತಿಯೇ ಅಥವಾ ವಿಕಾರವೇ? ದೇವನೇ ಅಥವಾ ದಾನವನೇ?

ತತೋ ಜಲದಗಂಭೀರಂ ಪ್ರಹಸ್ಯ ಗದತಾಂವರಃ ।
ಉವಾಚ ವರದಃ ಪ್ರೀತಃ ಕಾಲೇ ತ್ವಂ ಮಾಽಭಿವೇತ್ಸ್ಯತಿ ॥೫೮॥

ಆಗ ಮಾತನಾಡುವವರಲ್ಲಿ ಶ್ರೇಷ್ಠನಾದ, ವರಪ್ರದನಾದ ಅವನು ಮೇಘಗಂಭೀರವಾಗಿ ನಕ್ಕು, ಸಂತೋಷಗೊಂಡು 'ಯೋಗ್ಯವಾದ ಕಾಲದಲ್ಲಿ ನೀನು ನನ್ನನ್ನು ತಿಳಿಯುವಿ' ಎಂದು ಹೇಳಿದನು.

ವಾಹನಂ ಭವ ಮೇ ಸಾಧೋ ವರಂ ದದ್ಮಿ ತವೋತ್ತಮಮ್ ।
ನ ತೇ ವೀರ್ಯೇಣ ಸದೃಶಃ ಕಶ್ಚಿಲ್ಲೋಕೇ ಭವಿಷ್ಯತಿ ॥೫೯॥

ಪತಂಗ ಪತತಾಂಶ್ರೇಷ್ಠ ನ ದೇವೋ ನಾಪಿ ದಾನವಃ ।
ಮತ್ಸಖಿತ್ವಮನುಪ್ರಾಪ್ತೋ ದುರ್ಧರ್ಷಶ್ಚ ಭವಿಷ್ಯತಿ ॥೬೦॥

'ಎಲೈ ಸಾಧುವೇ, ನನಗೆ ವಾಹನನಾಗು. ನಿನಗೆ ಶ್ರೇಷ್ಠವಾದ ವರಗಳನ್ನು ಕೊಡುತ್ತೇನೆ. ಎಲೈ ಪಕ್ಷಿಯೇ, ಹಾರುವವರಲ್ಲಿ ಶ್ರೇಷ್ಠನಾದವನೇ, ದೇವನಾಗಲೀ, ದಾನವನಾಗಲೀ ನಿನಗೆ ಸದೃಶವಾದ ಪರಾಕ್ರಮವನ್ನು ಲೋಕದಲ್ಲಿ ಹೊಂದುವುದಿಲ್ಲ. ನೀನು ನನ್ನ ಸ್ನೇಹವನ್ನು ಪಡೆದು ಯಾರಿಂದಲೂ ಸೋಲಿಸಲು ಅನರ್ಹನಾಗುವಿ' (ಎಂದು ಹೇಳಿದನು).

ತಮಬ್ರವಂ ದೇವದೇವಂ ಮಾಮೇವಂವಾದಿನಂ ಪರಮ್ ।
ಪ್ರಯತಃ ಪ್ರಾಂಜಲಿರ್ಭೂತ್ವಾ ಪ್ರಣಮ್ಯ ಶಿರಸಾ ವಿಭುಮ್ ॥೬೧॥

ನನ್ನನ್ನು ಕುರಿತು ಹೀಗೆಮಾತನಾಡಿದ ಸರ್ವೋತ್ತಮನೂ, ದೇವದೇವನೂ ಆದ ಅವನನ್ನು ಕುರಿತು ಕೈಗಳನ್ನು ಮುಗಿದು, ಶಿರಸಾ ನಮಸ್ಕರಿಸಿ ನಾನು ಮಾತನಾಡಿದೆನು.

ಏವಮೇತನ್ಮಹಾಬಾಹೋ ಸರ್ವಮೇತದ್ ಭವಿಷ್ಯತಿ ।
ವಾಹನಂ ತೇ ಭವಿಷ್ಯಾಮಿ ಯಥಾ ವದಸಿ ಮಾಂ ಭವಾನ್ ॥೬೨॥

ಮಮಾಪಿ ಚ ಮಹಾಬುದ್ಧೇ ನಿಶ್ಚಯಂ ಶ್ರೂಯತಾಮಿತಿ ।
ಧ್ವಜಸ್ತೇऽಹಂ ಭವಿಷ್ಯಾಮಿ ರಥಸ್ಥಸ್ಯ ನ ಸಂಶಯಃ ॥೬೩॥

'ಮಹಾಬಾಹುವೇ, ನೀನು ಹೇಳಿದಂತೆಯೇ ಎಲ್ಲವೂ ಆಗುತ್ತದೆ. ನೀನು ನನಗೆ ಹೇಳುವಂತೆ ನಾನು ನಿನ್ನ ವಾಹನವಾಗುವೆನು. ಎಲೈ ಮಹಾಬುದ್ಧಿಯೇ, ನನ್ನ ಮಾತನ್ನು ಕೇಳುವವನಾಗು. ನಾನು ನಿನ್ನ ರಥದಲ್ಲಿದ್ದು ನಿನಗೆ ಧ್ವಜವಾಗುತ್ತೇನೆ. ಇದರಲ್ಲಿ ಸಂಶಯವಿಲ್ಲ' (ಎಂದು ಹೇಳಿದೆನು).

ತಥಾಸ್ತಿ ತ್ವಿತಿ ಸ ಮಾಮುಕ್ತ್ವಾ ಭೂಯಃ ಪ್ರಾಹ ಮಹಾಮನಾಃ ।
ನ ತೇ ಗತಿವಿಘಾತೋಽದ್ಯ ಭವಿಷ್ಯತ್ಯಮೃತಂ ವಿನಾ ॥೬೪॥

ಮಹಾಮನಸ್ಸುಳ್ಳ ಅವನು 'ಹಾಗೆಯೇ ಆಗಲಿ' ಎಂದು ಹೇಳಿ ಪುನಃ ನನ್ನನ್ನು ಕುರಿತು 'ನಿನ್ನ ಗಮನಕ್ಕೆ ಅಮೃತವನ್ನು ಬಿಟ್ಟು ಎಂದೂ ವಿಘಾತವುಂಟಾಗುವುದಿಲ್ಲ' ಎಂದು ಹೇಳಿದನು. (ಅಮೃತವನ್ನು ತರುವಾಗ ಸ್ವಲ್ಪ ತಡೆಯಯುಂಟಾಗುತ್ತದೆ. ಬೇರೆ ಯಾವಾಗಲೂ ಇಲ್ಲ ಎಂದು ಅಭಿಪ್ರಾಯ).

ಏವಂ ಕೃತ್ವಾ ತು ಸಮಯಂ ದೇವದೇವಃ ಸನಾತನಃ ।
ಮಾಮುಕ್ತ್ವಾ ಸಾಧಯಸ್ವೇತಿ ಯಥಾಭಿಪ್ರಾಯತೋ ಗತಃ ॥೬೫॥

ಸನಾತನನಾದ ಆ ದೇವದೇವನು ನನಗೆ ಹೀಗೆ ಪ್ರತಿಜ್ಞೆಯನ್ನು ಮಾಡಿ, ನೀನು ಹೊರಡು ಎಂದು ಹೇಳಿ, ತನ್ನ ಅಭಿಪ್ರಾಯದಂತೆ ತಾನೂ ಹೊರಟು ಹೋದನು.

ತತೋಽಹಂ ಕೃತಸಂವಾದೋ ತೇನ ಕೇನಾಪಿ ಸತ್ತಮಾಃ ।
ಕೌತೂಹಲಸಮಾವಿಷ್ಟಃ ಪಿತರಂ ಕಾಶ್ಯಪಂ ಗತಃ ॥೬೬॥

ಎಲೈ ಸಜ್ಜನರಲ್ಲಿ ಶ್ರೇಷ್ಠರೇ, ಲೋಕವಿಲಕ್ಷಣನಾದ ಅವನ ಜೊತೆಯಲ್ಲಿ ಸಂವಾದವನ್ನು ಮಾಡಿ, ಕುತೂಹಲದಿಂದ ಕೂಡಿದ ನಾನು ತಂದೆಯಾದ ಕಾಶ್ಯಪರ ಬಳಿಗೆ ಹೋದೆನು.

ಸೋಽಹಂ ಪಿತರಮಾಸಾದ್ಯ ಪ್ರಣಿಪತ್ಯಾಭಿವಾದ್ಯ ಚ ।
ಸರ್ವಮೇತದ್ ಯಥಾತಥ್ಯಮುಕ್ತವಾನ್ ಪಿತುರಂತಿಕೇ ॥೬೭॥

ನಾನು ತಂದೆಯನ್ನು ಸಮೀಪಿಸಿ, ಅವರಿಗೆ ನಮಸ್ಕಾರವನ್ನು ಮಾಡಿ, ನಡೆದುದೆಲ್ಲವನ್ನೂ ಅವರಿಗೆ ಸರಿಯಾಗಿ ವಿವರಿಸಿದೆನು.

ಶ್ರುತ್ವಾ ತು ಭಗವಾನ್ ಮಹ್ಯಂ ಧ್ಯಾನಮೇವಾನ್ವಪದ್ಯತ ।
ಸ ಮುಹೂರ್ತಮಿವ ಧ್ಯಾತ್ವಾ ಮಾಮಾಹ ವದತಾಂವರಃ ॥೬೮॥

ನನ್ನ ಮಾತನ್ನು ಕೇಳಿದ ಆ ಪೂಜ್ಯರು ಧ್ಯಾನಪರರಾದರು. ಒಂದು ಮುಹೂರ್ತದ ಕಾಲ ಧ್ಯಾನವನ್ನು ಮಾಡಿ, ಮಾತನಾಡುವವರಲ್ಲಿ ಶ್ರೇಷ್ಠರಾದ ಅವರು ನನ್ನನ್ನು ಕುರಿತು ಹೇಳಿದರು.

ಧನ್ಯೋಽಸ್ಮ್ಯನುಗೃಹೀತಶ್ಚ ಯತ್ತ್ವಂ ತೇನ ಮಹಾತ್ಮನಾ ।
ಸಂವಾದಂ ಕೃತವಾಂಸ್ತಾತ ಗುಹ್ಯೇನ ಪರಮಾತ್ಮನಾ ॥೬೯॥

'ಎಲೈ ಪ್ರೀತಿಪಾತ್ರನೇ, ರಹಸ್ಯನಾದ, ಮಹಾತ್ಮನಾದ ಆ ಪರಮಾತ್ಮನ ಜೊತೆಯಲ್ಲಿ ನೀನು ಸಂವಾದ ಮಾಡಿರುವುದರಿಂದ ನಾನು ಧನ್ಯನಾಗಿದ್ದೇನೆ, ಅನುಗೃಹೀತನಾಗಿದ್ದೇನೆ.

ಸ್ಥೂಲದೃಶ್ಯಃ ಸ ಭಗವಾಂಸ್ತೇನ ತೇನೈವ ಹೇತುನಾ ।
ದೃಶ್ಯತೇಽವ್ಯಕ್ತರೂಪಸ್ಥಃ ಪ್ರಧಾನಂ ಪ್ರಭವಾಪ್ಯಯಃ ॥೭೦॥

ಅವ್ಯಕ್ತ ಸ್ವಭಾವದವನೂ, ಪ್ರಧಾನನೂ, ಜಗತ್ತಿನ ಉತ್ಪತ್ತಿ-ಆಶ್ರಯಗಳಿಗೆ ಕಾರಣನೂ ಆದ ಆ ಭಗವಂತನು ಆಯಾ ನಿಮಿತ್ತದಿಂದ ಸ್ಥೂಲರೂಪದಿಂದ ಕಾಣುತ್ತಾನೆ.

ಮಯಾ ಹಿ ಸ ಮಹಾತೇಜಾ ನಾನ್ಯಯೋಗಸಮಾಧಿನಾ ।
ತಪಸೋಗ್ರೇಣ ತೇಜಸ್ವೀ ತೋಷಿತಸ್ತಪಸಾಂ ನಿಧಿಃ ॥೭೧॥

ನಾನು ಮಹಾತೇಜಸ್ವಿಯೂ, ತಪಸ್ವಿಯೂ ಆದ ಅವನನ್ನು ಅನನ್ಯವಾದ ಯೋಗ ಸಮಾಧಿಗಳಿಂದಲೂ, ಉಗ್ರವಾದ ತಪಸ್ಸಿನಿಂದಲೂ ಸಂತೋಷಪಡಿಸಿದೆನು.

ತತೋ ಮೇ ದರ್ಶಯಾಮಾಸ ತೋಷಯನ್ನಿವ ಪುತ್ರಕ ।
ಶ್ವೇತಪೀತಾರುಣನಿಭಃ ಕದ್ರೂಕಪಿಲಪಿಂಗಲಃ ॥೭೨॥

ರಕ್ತನೀಲಾಸಿತನಿಭಃ ಸಹಸ್ರೋದರಪಾಣಿಮಾನ್ ।
ದ್ವಿಸಾಹಸ್ರಮಹಾವಕ್ತ್ರ ಏಕಾಕ್ಷಃ ಶತಲೋಚನಃ ॥೭೩॥

ಎಲೈ ಪುತ್ರನೇ, ಆಗ ಅವನು ನನಗೆ ಸಂತೋಷವನ್ನುಂಟು ಮಾಡುವವನಾಗಿ ಶ್ವೇತ-ಪೀತ-ಅರುಣ ವರ್ಣದ ಕಂದು-ಕಪಿಲ-ಪಿಂಗಲವರ್ಣದ, ರಕ್ತ-ನೀಲ-ಕೃಷ್ಣ ವರ್ಣದ, ಸಹಸ್ರ ಉದರ-ಪಾಣಿಗಳುಳ್ಳ, ಎರಡು ಸಹಸ್ರ ವದನಗಳುಳ್ಳ, ಏಕಾಕ್ಷವುಳ್ಳ, ಶತನೇತ್ರಗಳುಳ್ಳ ರೂಪಗಳನ್ನು ತೋರಿಸಿದನು.

ಅನಿಷ್ಯಂದಾ ನಿರಾಹಾರಾಃ ಸಮಾನಾಃ ಸೂರ್ಯತೇಜಸಾ ।
ತಮುಪಾಸಂತಿ ಪರಮಂ ಗುಹ್ಯಮಕ್ಷರಮವ್ಯಯಮ್ ॥೭೪॥

ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸುಳ್ಳ, ನಿರಾಹಾರರಾದ, ಬೆವರಿನಿಂದ ರಹಿತರಾದ ಋಷಿಗಳು ಮತ್ತು ತೇಜಸ್ವಿಗಳು ಗುಹ್ಯನೂ, ಅಕ್ಷರನೂ, ಅವ್ಯಯನೂ, ಸರ್ವೋತ್ತಮನೂ ಆದ ಅವನನ್ನು ಸ್ತೋತ್ರ ಮಾಡುತ್ತಾರೆ.

ಸಮಾಸಾದ್ಯ ತು ತಂ ವಿಶ್ವಮಹಂ ಮೂರ್ಧ್ನಾ ಪ್ರಣಮ್ಯ ಚ ।
ಋಗ್ಯಜುಃಸಾಮಭಿಃ ಸ್ತುತ್ವಾ ಶರಣ್ಯಂ ಶರಣಂ ಗತಃ ॥೭೫॥

ಆ ವಿಶ್ವರೂಪನನ್ನು ಸಮೀಪಿಸಿ, ಅವನಿಗೆ ನಮಸ್ಕರಿಸಿ, ಋಗ್ಯಜುಃಸಾಮಗಳಿಂದ ಅವನನ್ನು ಸ್ತೋತ್ರ ಮಾಡಿ, ಶರಣು ಹೊಂದಲು ಯೋಗ್ಯನಾದ ಅವನಿಗೆ ನಾನು ಶರಣಾಗತನಾದೆನು.

ಮಹಾಮೇಘೌಘಧೀರೇಣ ಸ್ವರೇಣ ಜಯತಾಂ ವರಃ ।
ಆಭಾಷ್ಯ ಪುತ್ರ ಪುತ್ರೇತಿ ಇದಮಾಹ ಧ್ರುವಂ ವಚಃ ॥೭೬॥

ಎಲೈ ಪುತ್ರನೇ, ಜಯಶಾಲಿಗಳಲ್ಲಿ ಶ್ರೇಷ್ಠನಾದ ಅವನು ಮೇಘಗಂಭೀರ ವಾಣಿಯಿಂದ ನನ್ನನ್ನು 'ಎಲೈ ಪುತ್ರನೇ' ಎಂದು ಸಂಬೋಧಿಸಿ ಈ ಮಾತನ್ನು ಆಡಿದನು.

ತ್ವಯಾऽಭ್ಯುದಯಕಾಮೇನ ತಪಶ್ಚೀರ್ಣಂ ಮಹಾಮುನೇ ।
ಅಮುಕ್ತಸ್ತ್ವಂ ನ ಮಾಂ ಸಂಗೈರವಿಮುಕ್ತೋऽದ್ಯ ಪಶ್ಯಸಿ ॥೭೭॥

'ಎಲೈ ಮಹಾಮುನಿಯೇ, ಶ್ರೇಯಸ್ಸನ್ನು ಪಡೆಯಲು ಬಯಸಿ ನೀನು ತಪಸ್ಸನ್ನು ಮಾಡಿದ್ದೀಯೆ. ಅಮುಕ್ತನಾದ ನೀನು ಸ್ನೇಹಪಾಶದಿಂದ ಮುಕ್ತನಾಗದಿರುವುದರಿಂದ ನನ್ನನ್ನು ಸರಿಯಾಗಿ ಕಾಣುತ್ತಿಲ್ಲ.

ಯದಾ ಸಂಗೈರ್ವಿಮುಕ್ತಶ್ಚ ಗತಮೋಹೋ ಗತಸ್ಪೃಹಃ ।
ಭವಿಷ್ಯಸಿ ತದಾ ಬ್ರಹ್ಮ ಮಾಮನುಧ್ಯಾಸ್ಯಸೇ ದ್ವಿಜ ॥೭೮॥

ಎಲೈ ಬ್ರಾಹ್ಮಣನೇ, ನೀನು ಎಲ್ಲ ಸಂಗಗಳನ್ನು, ಮೋಹವನ್ನು ಮತ್ತು ಆಸೆಯನ್ನು ಕಳೆದುಕೊಂಡಾಗ ಆಗ ನನ್ನನ್ನು ಧ್ಯಾನಿಸುವಿ (ನೋಡುವಿ).

ಏಕಾಂತಿಕೀಂ ಮತಿಂ ಕೃತ್ವಾ ಮದ್ಭಕ್ತೋ ಮತ್ಪರಾಯಣಃ ।
ಜ್ಞಾಸ್ಯಸೇ ಮಾಂ ತತೋ ಬ್ರಹ್ಮನ್ ಏತಮೋಹಶ್ಚ ತತ್ತ್ವತಃ ॥೭೯॥

ಎಲೈ ಬ್ರಾಹ್ಮಣನೇ, ನನ್ನಲ್ಲಿ ಏಕಾಂತವಾದ ಬುದ್ಧಿಯನ್ನು ಹೊಂದಿ, ನನ್ನ ಭಕ್ತನಾಗಿ ನನ್ನನ್ನೇ ಶ್ರೇಷ್ಠವಾದ ಆಶ್ರಯವೆಂದು ನಂಬಿ, ಮೋಹಗಳಿಂದ ದೂರವಾಗಿ ನನ್ನನ್ನು ಯಥಾರ್ಥವಾಗಿ ತಿಳಿಯುವಿ' (ಎಂದು ಹೇಳಿದನು).

ತೇನ ತ್ವಂ ಕೃತಸಂವಾದಃ ಸ್ವತಃ ಸರ್ವಹಿತೈಷಿಣಾ ।
ವಿಶ್ವರೂಪೇಣ ದೇವೇನ ಪುರುಷೇಣ ಮಹಾತ್ಮನಾ ॥೮೦॥

'ನೀನು ಅಂತಹ ಸರ್ವಹಿತೈಷಿಯಾದ, ವಿಶ್ವರೂಪನಾದ, ಮಹಾತ್ಮನಾದ, ಪುರುಷಶಬ್ದವಾಚ್ಯನಾದ ದೇವನ ಜೊತೆಯಲ್ಲಿ ಸ್ವತಃ ಸಂವಾದವನ್ನು ಮಾಡಿದ್ದೀಯೆ.

ತಮೇವಾರಾಧಯ ಕ್ಷಿಪ್ರಂ ತಮಾರಾಧ್ಯ ನ ಸೀದತಿ ।
ಸೋಽಹಮೇವಂ ಭಗವತಾ ಪಿತ್ರಾ ಬ್ರಹ್ಮರ್ಷಿಸತ್ತಮಾಃ ।
ಅನುನೀತೋ ಯಥಾನ್ಯಾಯಂ ಸ್ವಮೇವ ಭವನಂ ಗತಃ ॥೮೧॥

ಅವನನ್ನೇ ಶೀಘ್ರವಾಗಿ ಆರಾಧಿಸು. ಅವನನ್ನು ಆರಾಧಿಸಿದವನು ನಾಶವನ್ನು ಹೊಂದುವುದಿಲ್ಲ' ಎಂದು ಎಲೈ ಬ್ರಹ್ಮರ್ಷಿಶ್ರೇಷ್ಠರೇ ನಾನು ಪೂಜ್ಯರಾದ ತಂದೆಯಿಂದ ನ್ಯಾಯರೀತಿಯಲ್ಲಿ ಸಮಾಧಾನಪಡಿಸಲ್ಪಟ್ಟು ನನ್ನ ಗೃಹಕ್ಕೆ ಹೋದೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ
ಗರುಡಕಾಶ್ಯಪಸಮಾಗಮೋ ನಾಮ ಅಷ್ಟತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂಬತ್ತನೆಯ ಅಧ್ಯಾಯ

ಗರುಡ-ನಾರಾಯಣರ ಸಮಾಗಮ

ಸುಪರ್ಣಃ

ಸೋಽಹಮಾಮಂತ್ರ್ಯ ಪಿತರಂ ತದ್ಭಾವಗತಮಾನಸಃ ।
ಸ್ವಮೇವಾಲಯಮಾಸಾದ್ಯ ತಮೇವಾರ್ಥಮಚಿಂತಯಮ್ ॥೧॥

ಗರುಡ– ನಾನು ತಂದೆಯ ಅನುಮತಿಯನ್ನು ಪಡೆದು, ಭಗವಂತನಲ್ಲೇ ನೆಟ್ಟ ಮನಸ್ಸುಳ್ಳವನಾಗಿ, ಅದೇ ವಿಷಯವನ್ನು ಚಿಂತಿಸುತ್ತಾ ಮನೆಗೆ ಬಂದೆನು.

ತದ್ಭಾವಗತಭಾವಾತ್ಮಾ ತದ್ಭೂತಗತಮಾನಸಃ ।
ಗೋವಿಂದಂ ಚಿಂತಯನ್ನಾಸ್ಸೇ ಶಾಶ್ವತಂ ಪರಮವ್ಯಯಮ್ ।
ಧೃತಂ ಬಭೂವ ಹೃದಯಂ ನಾರಾಯಣದಿದೃಕ್ಷಯಾ ॥೨॥

ಅವನ ಸ್ವರೂಪವನ್ನೇ ಚಿಂತಿಸುತ್ತಾ, ಅವನಲ್ಲಿಯೇ ನಿಂತ ಮನಸ್ಸುಳ್ಳವನಾಗಿ ಶಾಶ್ವತನೂ, ಶ್ರೇಷ್ಠನೂ, ಅವ್ಯಯನೂ ಆದ ಗೋವಿಂದನನ್ನು ಚಿಂತಿಸುತ್ತಿದ್ದೆನು. ನನ್ನ ಹೃದಯದಲ್ಲಿ ನಾರಾಯಣನನ್ನು ನೋಡುವ ಆಸೆಯು ಆವರಿಸಿತು.

ಸೋಽಹಂ ವೇಗಂ ಸಮಾಸ್ಥಾಯ ಮನೋಮಾರುತವೇಗವಾನ್ ।
ರಮ್ಯಾಂ ವಿಶಾಲಾಂ ಬದರೀಂ ಗತೋ ನಾರಾಯಣಾಶ್ರಮಮ್ ॥೩॥

ಅಂತಹ ನಾನು ಮನೋಮಾರುತ ವೇಗವನ್ನು ಆಶ್ರಯಿಸಿ ರಮ್ಯವೂ, ವಿಶಾಲವೂ ಆದ ನಾರಾಯಣಾಶ್ರಮವಾದ ಬದರಿಗೆ ಹೋದೆನು.

ತತಸ್ತತ್ರ ಹರಿಂ ದೃಷ್ಟ್ವಾ ಜಗತಃ ಪ್ರಭವಂ ವಿಭುಮ್ ।
ಗೋವಿಂದಂ ಪುಂಡರೀಕಾಕ್ಷಂ ಪ್ರಣತಃ ಶಿರಸಾ ಹರಿಮ್ ॥೪॥

ಅಲ್ಲಿ ಜಗತ್ತಿಗೆ ಕಾರಣನೂ, ವ್ಯಾಪ್ತನೂ, ಪುಂಡರೀಕಾಕ್ಷನೂ, ಪಾಪ ಪರಿಹಾರಕನೂ ಆದ ಗೋವಿಂದನನ್ನು ನೋಡಿ ಹರಿಗೆ ಶಿರಸಾ ಪ್ರಣಾಮವನ್ನು ಮಾಡಿದೆನು.

ಋಗ್ಯಜುಃಸಾಮಭಿಶ್ಚೈನಂ ತುಷ್ಟಾವ ಪರಯಾ ಮುದಾ ।
ಅಥಾಪಶ್ಯಂ ಸುವಿಪುಲಮಶ್ವತ್ಥಂ ದೇವಸಂಶ್ರಯಮ್ ॥೫॥

ಬಹಳ ಸಂತೋಷದಿಂದ ಕೂಡಿದವನಾಗಿ ಋಗ್ಯಜುಸ್ಸಾಮವೇದಗಳಿಂದ ಅವನನ್ನು ಸ್ತೋತ್ರ ಮಾಡಿದೆನು. ಅನಂತರ ದೇವನು ಆಶ್ರಯಿಸಿದ ವಿಸ್ತಾರವಾದ ಅಶ್ವತ್ಥ ವೃಕ್ಷವನ್ನು ನೋಡಿದೆನು.

ಚತುರ್ಭಿರ್ಗುಣಪೀನಾಂಗಃ ಶಂಖಚಕ್ರಗದಾಧರಃ ।
ಪ್ರಾದುರ್ಬಭೂವ ಪುರುಷಃ ಪೀತವಾಸಾಃ ಸನಾತನಃ ।
ಮಧ್ಯಾಹ್ನಾರ್ಕಪ್ರತೀಕಾಶಸ್ತೇಜಸಾ ಭಾಸಯನ್ ದಿಶಃ ॥೬॥

ಶಂಕಚಕ್ರಗದಾಧರನೂ, ಪುಷ್ಪವಾದ ಅಷ್ಟಾಂಗವುಳ್ಳವನೂ, ಪೀತಾಂಬರಧಾರಿಯೂ, ಸನಾತನನೂ ಆದ, ಪುರುಷನಾದ ಹರಿಯು ಮಧ್ಯಾಹ್ನದ ಸೂರ್ಯನಂತೆ ತನ್ನ ತೇಜಸ್ಸಿನಿಂದ ದಿಕ್ಕುಗಳನ್ನು ಬೆಳಗುತ್ತಾ ಪ್ರತ್ಯಕ್ಷನಾದನು.

ಸಂಸ್ತುತಃ ಸಂವಿದಂ ಕೃತ್ವಾ ಜಗತಃ ಶ್ರೇಯಸೇ ರತಃ ।
ಪ್ರಾಗುದೀಚೀಂ ದಿಶಂ ದೇವಃ ಪ್ರತಸ್ಥೇ ಪುರುಷೋತ್ತಮಃ ।
ದಿಶಶ್ಚ ವಿದಿಶಶ್ಚೈವ ಭಾಸಯನ್ ಸ್ವೇನ ತೇಜಸಾ ॥೭॥

ತಮಹಂ ಪುರುಷಂ ದಿವ್ಯಂ ವ್ರಜಂತಮಮಿತೌಜಸಮ್ ।
ಅನುವವ್ರಾಜ ವೇಗೇನ ಶನೈರ್ಗಚ್ಛಂತಮವ್ಯಯಮ್ ॥೮॥

ನಾನು ಅವನನ್ನು ಸ್ತೋತ್ರ ಮಾಡಿ ಅವನ ಜೊತೆಯಲ್ಲಿ ಮಾತನಾಡಿದ ಮೇಲೆ ಪುರುಷೋತ್ತಮನಾದ ಆ ದೇವನು ತನ್ನ ತೇಜಸ್ಸಿನಿಂದ ದಿಕ್ಕು-ವಿದಿಕ್ಕುಗಳನ್ನು ಬೆಳಗುತ್ತಾ ಈಶಾನ್ಯದಿಕ್ಕಿಗೆ ಹೊರಟನು. ಜಗತ್ತಿನ ಶ್ರೇಯಸ್ಸಿನಲ್ಲಿ ನಿರತನಾದ ನಾನು ನಿಧಾನವಾಗಿ ಹೋಗುತ್ತಿದ್ದ ಅವ್ಯಯನೂ, ಅಮಿತಪರಾಕ್ರಮಿಯೂ ಆದ ಆ ದಿವ್ಯಪುರುಷನನ್ನು ವೇಗದಿಂದ ಹಿಂಬಾಲಿಸಿದೆನು.

ಯೋಜನಾನಾಂ ಸಹಸ್ರಾಣಿ ಷಷ್ಟಿಮಷ್ಟೌ ತಥಾ ಶತಮ್ ।
ತಥಾ ಶತಸಹಸ್ರಂ ಚ ಶತಂ ದ್ವಿಗುಣಮೇವ ಚ ॥೯॥

ಸ ಗತ್ವಾ ದೀರ್ಘಮಧ್ವಾನಮಪಶ್ಯಮಹಮದ್ಭುತಮ್ ।
ಮಹಾಂತಂ ಪಾವಕಂ ದೀಪ್ತಮರ್ಚಿಷ್ಮಂತಮನಿಂಧನಮ್ ॥೧೦॥

ಸಹಸ್ರಯೋಜನಗಳನ್ನು, ಅರವತ್ತೆಂಟು ನೂರು ಯೋಜನಗಳನ್ನು, ಪುನಃ ಶತಸಹಸ್ರ ಯೋಜನಗಳನ್ನು, ಪುನಃ ಅದರ ಎರಡರಷ್ಟು ಶತಯೋಜನಗಳನ್ನು ಹೊಂದಿದ ದೀರ್ಘವಾದ ಮಾರ್ಗಗಳಲ್ಲಿ ಹೋಗಿ ಇಂಧನವಿಲ್ಲದೆ ಉರಿಯುತ್ತಿದ್ದ ಜ್ವಾಲೆಗಳಿಂದ ಕೂಡಿದ ಅದ್ಭುತವಾದ ದೊಡ್ಡ ಅಗ್ನಿಯನ್ನು ನೋಡಿದೆನು.

ಶತಯೋಜನವಿಸ್ತೀರ್ಣಂ ತಸ್ಮಾದ್ ದ್ವಿಗುಣಮಾಯತಮ್ ।
ವಿವೇಶ ಸ ಮಹಾಯೋಗೀ ಪಾವಕಂ ಪಾವಕದ್ಯುತಿಃ ॥೧೧॥

ನೂರು ಯೋಜನ ವಿಸ್ತೀರ್ಣವಾದ, ಇನ್ನೂರು ಯೋಜನ ಉಗಲವಾದ ಆ ಅಗ್ನಿಯನ್ನು ಅಗ್ನಿಗೆ ಸಮಾನವಾದ ಕಾಂತಿಯನ್ನು ಹೊಂದಿದ ಆ ಮಹಾಯೋಗಿಯು ಪ್ರವೇಶಿಸಿದನು.

ತತ್ರ ಶಂಭುಸ್ತಪಸ್ತೇಪೇ ಮಹಾದೇವಃ ಸಹೋಮಯಾ ।
ಸ ತೇನ ಸಂವಿದಂ ಕೃತ್ವಾ ಪಾವಕಂ ಸಮತಿಕ್ರಮತ್ ।
ಶ್ರಮಾಭಿಭೂತೇನ ಮಯಾ ಕಥಂಚಿದನುಗಮ್ಯತೇ ॥೧೨॥

ಅಲ್ಲಿ ಪಾರ್ವತಿಯ ಜೊತೆಯಲ್ಲಿ ಮಹಾದೇವನಾದ ಶಂಭುವು ತಪಸ್ಸನ್ನು ಮಾಡುತ್ತಿದ್ದನು. ಅವನು ಅವನ ಜೊತೆಯಲ್ಲಿ ಮಾತನಾಡಿ ಅಗ್ನಿಯನ್ನು ಪ್ರವೇಶಿಸಿದನು. ಬಳಲಿದ ನಾನು ಕಷ್ಟಪಟ್ಟು ಅವನನ್ನು ಹಿಂಬಾಲಿಸಿದೆನು.

ಗತ್ವಾ ಸ ದೀರ್ಘಮಧ್ವಾನಂ ಭಾಸ್ಕರೇಣಾವಭಾಸಿತಮ್ ।
ಅಭಾಸ್ಕರಮಮರ್ಯಾದಂ ವಿವೇಶ ಸುಮಹತ್ತಮಃ ॥೧೩॥

ಸೂರ್ಯನಿಂದ ಪ್ರಕಾಶಿತವಾದ ದೀರ್ಘವಾದ ಮಾರ್ಗದಲ್ಲಿ ಹೋಗಿ ಅವನು ಸೂರ್ಯರಶ್ಮಿ ಇಲ್ಲದ, ಎಲ್ಲೆಯೇ ಇಲ್ಲದ ದೊಡ್ಡ ಅಂಧಕಾರವನ್ನು ಪ್ರವೇಶಿಸಿದನು.

ಅಥ ದೃಷ್ಟಿಃ ಪ್ರತಿಹತಾ ಮಮ ತತ್ರ ಬಭೂವ ಹ ।
ಯಥಾಸ್ವಭಾವಂ ಭೂತಾತ್ಮಾ ವಿವೇಶ ಸ ಮಹಾದ್ಯುತಿಃ ॥೧೪॥

ಆಗ ನನ್ನ ದೃಷ್ಟಿಯು ಅಂಧಕಾರದಿಂದ ಪ್ರತಿಹತವಾಯಿತು. ಆದರೆ ಸರ್ವಸ್ವಾಮಿಯೂ, ಮಹಾದ್ಯುತಿಯೂ ಆದ ಅವನು ಸಹಜವಾಗಿಯೇ ಪ್ರವೇಶಿಸಿದನು.

ತತೋಽಹಮಭವಂ ಮೂಢೋ ಜಡಾಂಧಬಧಿರೋಪಮಃ ।
ದಿಶಶ್ಚ ವಿದಿಶಶ್ಚೈವ ನ ವಿಜಜ್ಞೇ ತಮೋವೃತಃ ॥೧೫॥

ಆಗ ನಾನು ಜಡಾಂಧಬಧಿರರಂತೆ ಮೂಢನಾದೆನು. ತಮಸ್ಸಿನಿಂದ ಆವೃತವಾಗಿ ದಿಕ್ಕುಗಳನ್ನಾಗಲೀ, ವಿದಿಕ್ಕುಗಳನ್ನಾಗಲೀ ತಿಳಿಯಲಿಲ್ಲ.

ಅವಿಜಾನನ್ನಹಂ ಕಿಂಚಿತ್ ತಸ್ಮಿಂಸ್ತಮಸಿ ಸಂವೃತೇ ।
ಸುಸಂಭ್ರಾಂತೇನ ಮನಸಾ ವ್ಯಥಾಂ ಪರಮಿಕಾಂ ಗತಃ ॥೧೬॥

ತಮಸ್ಸು ಎಲ್ಲ ಕಡೆಯಲ್ಲಿಯೂ ಆವರಿಸಿರಲು ನಾನು ಏನನ್ನೂ ಕಾಣದೆ, ದಿಗ್ಭ್ರಾಂತನಾಗಿ ಮನಸ್ಸಿನಲ್ಲಿ ಬಹಳ ವ್ಯಥೆಯನ್ನು ಹೊಂದಿದೆನು.

ಸೋಽಹಂ ಪ್ರಪನ್ನಃ ಶರಣಂ ದೇವದೇವಂ ಸನಾತನಮ್ ।
ಪ್ರಾಂಜಲಿರ್ಮನಸಾ ಭೂತ್ವಾ ವಾಕ್ಯಮೇತತ್ ತದೋಕ್ತವಾನ್ ॥೧೭॥

ಅಂತಹ ನಾನು ಸನಾತನನೂ, ದೇವದೇವನೂ ಆದ ಅವನಿಗೆ ಶರಣಾಗತನಾಗಿ ಕೈಗಳನ್ನು ಮುಗಿದು, ಮನಸ್ಸಿನಲ್ಲಿ ಅವನನ್ನು ಚಿಂತಿಸಿ ಈ ಮಾತನ್ನು ಆಡಿದೆನು.

ಭಗವನ್ ಭೂತಭವ್ಯೇಶ ಭವದ್ಭೂತಕೃದವ್ಯಯ ।
ಶರಣಂ ಸಂಪ್ರಪನ್ನಂ ಮಾಂ ತ್ರಾತುಮರ್ಹಸ್ಯರಿಂದಮ ॥೧೮॥

ಭಗವಂತನೇ, ಭೂತಭವ್ಯಪ್ರಭುವೇ, ಭೂತವಸ್ತುಗಳನ್ನು ಸೃಷ್ಟಿಸಿದವನೇ, ವರ್ತಮಾನನೇ, ಅವ್ಯಯನೇ, ಅರಿಂದಮನೇ, ಶರಣಾಗತನಾದ ನನ್ನನ್ನು ರಕ್ಷಿಸಬೇಕು.

ಅಹಂ ತು ತತ್ತ್ವಜಿಜ್ಞಾಸುಃ ಕೋಽಸಿ ಕಸ್ಯಾಸಿ ಕುತ್ರ ವಾ ।
ಸಂಪ್ರಾಪ್ತಃ ಪದವೀಂ ದೇವ ಸ ಮಾಂ ಸಂತ್ರಾತುಮರ್ಹಸಿ ।
ಆವಿರ್ಭೂತಃ ಪುರಾಣಾತ್ಮಾ ಮಾಮೇಹೀತಿ ಸನಾತನಃ ॥೧೯॥

ನಾನಾದರೂ ನೀನು ಯಾರು? ಯಾರಿಗೆ ಸೇರಿದವನು? ಎಲ್ಲಿಂದ ಬಂದೆ? ಎಲ್ಲಿ ವಾಸಿಸುತ್ತೀಯೆ? ಎಂದು ನಿನ್ನ ಮಾರ್ಗವನ್ನು ತಿಳಿಯಲು ಬಂದವನು. ಅಂತಹ ನನ್ನನ್ನು ರಕ್ಷಿಸಬೇಕು (ಎಂದು ಹೇಳಿದೆನು). ಪುರಾಣಾತ್ಮನೂ, ಸನಾತನನೂ ಆದ ಅವನು ಪ್ರತ್ಯಕ್ಷನಾಗಿ ನನ್ನನ್ನು ಕುರಿತು ನನ್ನನ್ನು ಹಿಂಬಾಲಿಸು ಎಂದು ಹೇಳಿದನು.

ತತೋಽಪರಾಂತತೋ ದೇವೋ ವಿಶ್ವಸ್ಯ ಗತಿರಾತ್ಮವಾನ್ ।
ಮೋಹಯಾಮಾಸ ಮಾಂ ತತ್ರ ದುರ್ವಿಭಾವ್ಯವಪುರ್ವಿಭುಃ ॥೨೦॥

ಅನಂತರ ಇನ್ನೊಂದು ತುದಿಗೆ ಹೋಗಿ, ವಿಶ್ವಕ್ಕೆ ಗತಿಯೂ, ಆತ್ಮವಂತನೂ, ದುರ್ವಿಭಾವ್ಯವಾದ ಶರೀರವುಳ್ಳವನೂ, ವಿಭುವೂ ಆದ ದೇವನು ಅಲ್ಲಿ ನನಗೆ ಮೋಹವನ್ನುಂಟು ಮಾಡಿದನು.

ಸ್ವಭಾವಮಾತ್ಮನಸ್ತತ್ರ ದರ್ಶಯನ್ ಸ್ವಯಮಾತ್ಮನಾ ।
ಶ್ರಮಂ ಮೇ ಜನಯಾಮಾಸ ಭಯಂ ಚಾಭಯದಃ ಪ್ರಭುಃ ॥೨೧॥

ಅಭಯವನ್ನು ಕೊಡುವ ಆ ಪ್ರಭುವು ತನ್ನ ಇಚ್ಛೆಯಿಂದಲೇ ತನ್ನ ಸ್ವಭಾವವನ್ನು ತೋರಿಸುತ್ತಾ ಅಲ್ಲಿ ನನಗೆ ಶ್ರಮವನ್ನೂ, ಭಯವನ್ನೂ ಉಂಟು ಮಾಡಿದನು.

ಖಿನ್ನ ಇತ್ಯೇವ ಮಾಂ ಮತ್ವಾ ಭಗವಾನವ್ಯಯೋಽಚ್ಯುತಃ ।
ಶಬ್ದೇನಾಶ್ವಾಸಯಾಮಾಸ ಜಗಾಹೇ ಚ ತಮೋ ಮಹತ್ ॥೨೨॥

ನಾನು ಖಿನ್ನನಾಗಿದ್ದೇನೆಂದು ತಿಳಿದ ಭಗವಂತನೂ, ಅವ್ಯಯನೂ ಆದ ಅಚ್ಯುತನು ನನ್ನನ್ನು ಮಾತಿನಿಂದ ಸಮಾಧಾನ ಪಡಿಸಿ, ಆ ದೊಡ್ಡ ತಮಸ್ಸನ್ನು ಪ್ರವೇಶಿಸಿದನು.

ಅಹಂ ಚ ಖೇದಾನುಗತಃ ಶ್ರಮಾಚ್ಚಲಪದಶ್ಚರನ್ ।
ಮನಸಾ ದೇವದೇವೇಶಂ ಧ್ಯಾತುಂ ಸಮುಪಚಕ್ರಮೇ ॥೨೩॥

ನಾನಾದರೂ ಖೇದವನ್ನು ಹೊಂದಿದವನಾಗಿ, ಶ್ರಮದಿಂದ ನಡುಗುವ ಪಾದಗಳಿಂದ ಕೂಡಿ, ಮನಸ್ಸಿನಲ್ಲಿಯೇ ದೇವದೇವೇಶನನ್ನು ಧ್ಯಾನ ಮಾಡಲು ಪ್ರಾರಂಭಿಸಿದೆನು.

ತಥಾಗತಂ ತು ಮಾಂ ಜ್ಞಾತ್ವಾ ಭಗವಾನಮಿತದ್ಯುತಿಃ ।
ತಮಃ ಪ್ರಣಾಶಯಾಮಾಸ ಮಮಾನುಗ್ರಹಕಾಂಕ್ಷಯಾ ॥೨೪॥

ನನ್ನ ಅವಸ್ಥೆಯನ್ನು ತಿಳಿದ ಅಮಿತದ್ಯುತಿಯಾದ ಭಗವಂತನು ನನಗೆ ಅನುಗ್ರಹವನ್ನು ಮಾಡಲು ಬಯಸಿ ಆ ತಮಸ್ಸನ್ನು ನಾಶಪಡಿಸಿದನು.

ತತಃ ಪ್ರನಷ್ಟೇ ತಮಸಿ ತಮಹಂ ದೀಪ್ತತೇಜಸಮ್ ।
ಅಪಶ್ಯಂ ತೇಜಸಾ ವ್ಯಾಪ್ತಂ ಮಧ್ಯಾಹ್ನ ಇವ ಭಾಸ್ಕರಮ್ ॥೨೫॥

ತಮಸ್ಸು ನಾಶವನ್ನು ಹೊಂದುತ್ತಿರಲು ನಾನು ತನ್ನ ತೇಜಸ್ಸಿನಿಂದ ವ್ಯಾಪ್ತನಾದ, ಮಧ್ಯಾಹ್ನದ ಸೂರ್ಯನಂತೆ ಬೆಳಗುವ ದೀಪ್ತವಾದ ತೇಜಸ್ಸುಳ್ಳ ಅವನನ್ನು ನೋಡಿದೆನು.

ಸ್ವಯಂಪ್ರಭಾಂಶ್ಚ ಪುರುಷಾನ್ ಸ್ತ್ರಿಯಶ್ಚ ಪರಮಾದ್ಭುತಾಃ ।
ಅಪಶ್ಯಮಹಮವ್ಯಗ್ರಂ ತಸ್ಮಿನ್ ದೇಶೇ ಸಹಸ್ರಶಃ ॥೨೬॥

ನಾನು ಆ ಪ್ರದೇಶದಲ್ಲಿ ಸ್ವಯಂಪ್ರಭೆಯುಳ್ಳ, ಪರಮಾದ್ಭುತರಾದ ಪುರುಷರನ್ನು ಮತ್ತು ಸ್ತ್ರೀಯರನ್ನು ಅವ್ಯಗ್ರನಾಗಿ ಸಹಸ್ರ ಸಂಖ್ಯೆಯಲ್ಲಿ ನೋಡಿದೆನು.

ನ ತತ್ರ ದ್ಯೋತತೇ ಸೂರ್ಯೋ ನಕ್ಷತ್ರಾಣಿ ತಥೈವ ಚ ।
ನ ತತ್ರ ಚಂದ್ರಮಾ ಭಾತಿ ನ ವಾಯುರ್ವಾತಿ ಪಾಂಸುಲಃ ॥೨೮॥

ಅಲ್ಲಿ ಸೂರ್ಯನಾಗಲೀ, ನಕ್ಷತ್ರವಾಗಲೀ ಪ್ರಕಾಶಿಸುವುದಿಲ್ಲ. ಚಂದ್ರನು ಪ್ರಕಾಶಿಸುವುದಿಲ್ಲ. ಧೂಳಿನಿಂದ ಕೂಡಿದ ವಾಯುವು ಬೀಸುವುದಿಲ್ಲ.

ತತ್ರ ತೂರ್ಯಾಣ್ಯನೇಕಾನಿ ಗೀತಾನಿ ಮಧುರಾಣಿ ಚ ।
ಅದೃಶ್ಯಾನಿ ಮನೋಜ್ಞಾನಿ ಶ್ರೂಯಂತೇ ಸರ್ವತೋದಿಶಮ್ ॥೨೯॥

ಅಲ್ಲಿ ಕಣ್ಣಿಗೆ ಕಾಣದಂತೆ ಎಲ್ಲ ದಿಕ್ಕುಗಳಿಂದಲೂ ಮನೋಹರವಾದ ಮಧುರವಾದ ಗೀತೆಗಳು ಮತ್ತು ಗೀತವಾದ್ಯಗಳು ಕೇಳಿಬರುತ್ತವೆ.

ಸ್ರವಂತಿ ವೈಡೂರ್ಯಲತಾಃ ಪದ್ಮೋತ್ಪಲರುಷಾಕುಲಾಃ ।
ಮುಕ್ತಾಸಿಕತವಪ್ರಾಶ್ಚ ಸರಿತೋ ನಿರ್ಮಲೋದಕಾಃ ॥೩೦॥

ಅಲ್ಲಿ ವೈಡೂರ್ಯಲತೆಗಳನ್ನು ಹೊಂದಿದ, ಪದ್ಮಗಳಿಂದಲೂ ಉತ್ಪಲಗಳಿಂದಲೂ, ಮೀನುಗಳಿಂದಲೂ ನಿಬಿಡವಾದ, ಮುತ್ತಿನಂತಹ ಮರಳುಗಳ ಹೊಂದಿದ ತೀರವನ್ನು ಹೊಂದಿದ, ನಿರ್ಮಲವಾದ ನೀರಿರುವ ನದಿಗಳು ಹರಿಯುತ್ತವೆ.

ಅಗತಿಸ್ತತ್ರ ದೇವಾನಾಮಸುರಾಣಾಂ ತಥೈವ ಚ ।
ಗಂಧರ್ವನಾಗಯಕ್ಷಾಣಾಂ ರಾಕ್ಷಸಾನಾಂ ತಥೈವ ಚ ॥೩೧॥

ಅಲ್ಲಿ ದೇವತೆಗಳಾಗಲೀ, ಅಸುರರಾಗಲೀ, ಗಂಧರ್ವ-ಸರ್ಪ-ಯಕ್ಷರಾಗಲೀ, ರಾಕ್ಷಸರಾಗಲೀ ಹೋಗಲು ಸಾಧ್ಯವಿಲ್ಲ.

ಸ್ವಯಂಪ್ರಭಾಸ್ತತ್ರ ನರಾ ದೃಶ್ಯಂತೇऽದ್ಭುತದರ್ಶನಾಃ ।
ಯೇಷಾಂ ನ ದೇವತಾಸ್ತುಲ್ಯಾಃ ಪ್ರಭಾಭಿರ್ಭಾಸಿತಾತ್ಮನಾಮ್ ॥೩೨॥

ಅಲ್ಲಿ ಸ್ವಯಂಪ್ರಭೆಯುಳ್ಳ, ಅದ್ಭುತರೂಪವುಳ್ಳ ಮನುಷ್ಯರು ಕಂಡುಬರುತ್ತಾರೆ. ಸ್ವಯಂ ಪ್ರಭೆಯಿಂದ ಬೆಳಗುವ ಅವರಿಗೆ ದೇವತೆಗಳೂ ಸಮಾನರಲ್ಲ.

ಸ ಚ ತಾನ್ಯಪ್ಯತಿಕ್ರಮ್ಯ ದೈವತೈರಪಿ ಪೂಜಿತಃ ।
ವಿವೇಶ ಜ್ವಲನಂ ದೀಪ್ತಮನಿಂಧನಮನೌಪಮಮ್ ॥೩೩॥

ಅವನು ದೇವತೆಗಳಿಂದ ಪೂಜಿಸಲ್ಪಟ್ಟು, ಅಂತಹ ಜಲವನ್ನು ದಾಟಿ, ಇಂಧನವಿಲ್ಲದೆ ಉರಿಯುತ್ತಿದ್ದ ಅಸದೃಶವಾದ ಆ ಅಗ್ನಿಯನ್ನು ಪ್ರವೇಶಿಸಿದನು.

ಜ್ವಾಲಾಭಿರ್ಮಾಂ ಪ್ರವಿಷ್ಟಂ ಚ ಜ್ವಲಂತಂ ಸರ್ವತೋದಿಶಮ್ ।
ದೈತ್ಯದಾನವರಕ್ಷೋಭಿರ್ದೈವತೈಶ್ಚಾಪಿ ದುಃಸಹಮ್ ॥೩೪॥

ದೈತ್ಯ-ದಾನವ-ರಾಕ್ಷಸರಿಂದಲೂ, ದೇವತೆಗಳಿಂದಲೂ ಸಹಿಸಲು ಅಸಾಧ್ಯವಾದ ಅಗ್ನಿಜ್ವಾಲೆಗಳಿಂದ ನಾನು ಎಲ್ಲ ಕಡೆಯಲ್ಲಿಯೂ ಆವೃತನಾಗಿ ನಾನೂ ಅಗ್ನಿಯನ್ನು ಪ್ರವೇಶಿಸಿದೆನು.

ಜ್ವಾಲಾಮಾಲಿನಮಾಸಾದ್ಯ ತಮಗ್ನಿಮಹಮವ್ಯಯಮ್ ।
ಅವಿಷಹ್ಯತಮಂ ಮತ್ವಾ ಮನಸೇದಮಚಿಂತಯಮ್ ॥೩೫॥

ಜ್ವಾಲಾಮಾಲೆಗಳುಳ್ಳ, ತಡೆಯಲು ಅತ್ಯಂತ ಅಸಾಧ್ಯವಾದ, ನಾಶವನ್ನು ಹೊಂದದ ಆ ಅಗ್ನಿಯನ್ನು ಪ್ರವೇಶಿಸಿ ನಾನು ಮನಸ್ಸಿನಲ್ಲಿ ಹೀಗೆ ಚಿಂತಿಸಿದೆನು.

ಮಯಾ ಹಿ ಸಮರೇಷ್ವಗ್ನಿರನೇಕೇಷು ಮಹಾದ್ಯುತಿಃ ।
ಪ್ರವಿಷ್ಟಶ್ಚಾಪವಿದ್ಧಶ್ಚ ನ ಚ ಮಾಂ ದಗ್ಧವಾನ್ ಕ್ವಚಿತ್ ॥೩೬॥

ನಾನು ಯುದ್ಧಗಳಲ್ಲಿ ಅನೇಕ ಬಾರಿ ಮಹಾದ್ಯುತಿಯುಳ್ಳ ಅಗ್ನಿಯನ್ನು ಪ್ರವೇಶ ಮಾಡಿ ಹೊರಗೆ ಬಂದಿದ್ದೇನೆ. ಅಗ್ನಿಯು ಎಂದೂ ನನ್ನನ್ನು ಸುಡಲಿಲ್ಲ.

ಅಯಂ ಚ ದುಃಸಹಃ ಶಶ್ವತ್ ತೇಜಸಾऽತಿಹುತಾಶನಃ ।
ಆತ್ಯಾದಿತ್ಯಪ್ರಕಾಶಾರ್ಚಿರನಲೋ ದೀಪ್ಯತೇ ಮಹಾನ್ ॥೩೭॥

ಆದರೆ ಈ ಅಗ್ನಿಯು ಮಾತ್ರ ತಡೆಯಲು ಅಸಾಧ್ಯವಾದುದು. ತನ್ನ ತೇಜಸ್ಸಿನಿಂದ ಅಗ್ನಿಯನ್ನು ಮೀರಿದೆ. ಸೂರ್ಯಪ್ರಕಾಶವನ್ನು ಮೀರಿದ ಜ್ವಾಲೆಗಳನ್ನು ಹೊಂದಿ ದೊಡ್ಡದಾಗಿ ಜ್ವಲಿಸುತ್ತಿದೆ (ಎಂದು ಚಿಂತಿಸಿದೆನು).

ಸ ತಥಾ ದಹ್ಯಮಾನೋऽಪಿ ತೇಜಸಾ ದೀಪ್ತವರ್ಚಸಾ ।
ಪ್ರಪನ್ನಃ ಶರಣಂ ದೇವಂ ಶಂಖಚಕ್ರಗದಾಧರಮ್ ॥೩೮॥

ಭಕ್ತಶ್ಚಾನುಗತಶ್ಚೇತಿ ತ್ರಾತುಮರ್ಹಸಿ ಮಾಂ ವಿಭೋ ।
ಯಥಾ ಮಾಂ ನ ದಹೇದಗ್ನಿಃ ಸದ್ಯೋ ದೇವ ತಥಾ ಕುರು ॥೩೯॥

ನಾನು ದೀಪ್ತವಾದ ಕಾಂತಿಯುಳ್ಳ ಅಗ್ನಿಯ ತೇಜಸ್ಸಿನಿಂದ ಹಾಗೆ ದಹಿಸಲ್ಪಡುತ್ತಿದ್ದರೂ ಪ್ರಪನ್ನರನ್ನು ರಕ್ಷಿಸುವ, ಶಂಖಚಕ್ರಗದಾಧರನಾದ ದೇವನಿಗೆ ಶರಣಾಗತನಾಗಿ ಎಲೈ ವಿಭುವೇ, ನಾನು ನಿನ್ನ ಭಕ್ತನಾಗಿ ಹಿಂಬಾಲಿಸುತ್ತಿದ್ದೇನೆಂದು ನೀನು ನನ್ನನ್ನು ರಕ್ಷಿಸಬೇಕು. ದೇವನೇ, ಈ ಅಗ್ನಿಯು ನನ್ನನ್ನು ಸುಡದಂತೆ ತಕ್ಷಣ ಅನುಗ್ರಹಿಸು (ಎಂದು ಕೇಳಿದೆನು).

ಏವಂ ವಿಲಪಮಾನಸ್ಯ ಜ್ಞಾತ್ವಾ ಮೇ ವಚನಂ ಪ್ರಭುಃ ।
ಮಾ ಭೈರಿತಿ ವಚಃ ಪ್ರಾಹ ಮೇಘಗಂಭೀರನಿಸ್ವನಃ ।
ಸ ಮಾಮಾಶಾಸ್ಯ ವಚನಂ ಪ್ರಾಹೇದಂ ಭಗವಾನ್ ವಿಭುಃ ॥೪೦॥

ಹೀಗೆ ಮಾತನಾಡುತ್ತಿದ್ದ ನನ್ನ ಮಾತನ್ನು ತಿಳಿದ ಪ್ರಭುವಾದ ಅವನು ಮೇಘ ಗಂಭೀರವಾಣಿಯಿಂದ ಹೆದರಬೇಡ ಎಂದು ನನ್ನನ್ನು ಕುರಿತು ಹೇಳಿದನು. ಆ ರೀತಿ ನನಗೆ ಸಮಾಧಾನವನ್ನು ಮಾಡಿ ವ್ಯಾಪ್ತನಾದ ಭಗವಂತನು ಹೀಗೆ ಹೇಳಿದನು.

ಮಮ ತ್ವಂ ವಿದಿತಃ ಸೌಮ್ಯ ಯಥಾವತ್ ತತ್ತ್ವದರ್ಶನೇ ।
ಜ್ಞಾಪಿತಶ್ಚಾಪಿ ಯತ್ ಪಿತ್ರಾ ತಚ್ಚಾಪಿ ವಿದಿತಂ ಮಹತ್ ॥೪೧॥

ಎಲೈ ಪ್ರೀತಿಪಾತ್ರನೇ, ಸರಿಯಾದ ತತ್ತ್ವವನ್ನು ತಿಳಿಯಲು ನೀನು ಬಂದಿದ್ದೀಯೆ ಎಂದು ನಾನು ತಿಳಿದಿದ್ದೇನೆ. ನಿನಗೆ ನಿನ್ನ ತಂದೆಯು ಹೇಳಿದ ವಿಷಯವೆಲ್ಲವೂ ನನಗೆ ತಿಳಿದಿದೆ.

ವೈನತೇಯ ಮಮಾಪ್ಯೇವಮಹಂ ವೇದ್ಯಃ ಕಥಂಚನ ।
ಮಹದೇತತ್ಸ್ವರೂಪಂ ಮೇ ನ ತೇ ವೇದ್ಯಂ ಕಥಂಚನ ॥೪೨॥

ಮಾಂ ಹಿ ವಿಂದಂತಿ ವಿದ್ವಾಂಸೋ ಯೇ ಜ್ಞಾನೇ ಪರಿನಿಷ್ಠಿತಾಃ ।
ನಿರ್ಮಮಾ ನಿರಹಂಕಾರಾ ನಿರಾಶೀರ್ಬಂಧನಾಯುತಾಃ ॥೪೩॥

ಎಲೈ ಗರುಡನೇ, ನಾನು ಯಾರಿಂದಲೂ ತಿಳಿಯಲು ಸಾಧ್ಯವಾದವನಲ್ಲ. ಅಹಂಕಾರ, ಮಮಕಾರವನ್ನು ಬಿಟ್ಟು, ಆಶಾಬಂಧಗಳಿಂದ ಮುಕ್ತರಾದ, ಜ್ಞಾನನಿಷ್ಠರಾದ ಜ್ಞಾನಿಗಳು ಮಾತ್ರ ನನ್ನನ್ನು ತಿಳಿಯುತ್ತಾರೆ.

ಭವಾಂಸ್ತು ಸತತಂ ಭಕ್ತೋ ಮನ್ಮನಾಃ ಪಕ್ಷಿಸತ್ತಮ ।
ಸ್ಥೂಲಂ ಮಾಂ ವೇತ್ಸ್ಯತೇ ತಸ್ಮಾಜ್ಜಗತಃ ಕಾರಣೇ ಸ್ಥಿತಮ್ ॥೪೪॥

ಎಲೈ ಪಕ್ಷಿಶ್ರೇಷ್ಠನೇ, ನೀನು ಯಾವಾಗಲೂ ನನ್ನ ಭಕ್ತನಾಗಿ ನನ್ನಲ್ಲಿಯೇ ಮನಸ್ಸನ್ನು ಇಟ್ಟಿದ್ದೀಯೆ. ಆದ್ದರಿಂದ ಜಗತ್ತಿಗೆ ಕಾರಣವಾದ ನನ್ನ ಸ್ಥೂಲರೂಪವನ್ನು ತಿಳಿಯುವಿ (ಎಂದು ಹೇಳಿದನು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ
ಗರುಡನಾರಾಯಣಸಮಾಗಮೋ ನಾಮ ಏಕೋನಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತನೆಯ ಅಧ್ಯಾಯ

ಗರುಡನಿಂದ ನಾರಾಯಣನ ಮಹಿಮೆಯ ವರ್ಣನೆ

ಸುಪರ್ಣಃ

ಏವಂ ದತ್ತಾಭಯಸ್ತೇನ ತತೋಽಹಮೃಷಿಸತ್ತಮಾಃ ।
ನಷ್ಟಖೇದಶ್ರಮಭಯಃ ಕ್ಷಣೇನ ಹ್ಯಭವಂ ತದಾ ॥೧॥

ಗರುಡ– ನಾನು ಹೀಗೆ ಅವನಿಂದ ಅಭಯವನ್ನು ಪಡೆದ ತಕ್ಷಣ ಒಂದು ಕ್ಷಣದಲ್ಲಿ ನನ್ನ ದುಃಖ-ಶ್ರಮ-ಭಯಗಳು ನಾಶವನ್ನು ಹೊಂದಿದವು.

ಸ ಶನೈರ್ಯಾತಿ ಭಗವಾನ್ ಗತ್ಯಾ ಲಘುಪರಾಕ್ರಮಃ ।
ಅಹಂ ತು ಸುಮಹಾವೇಗಮಾಸ್ಥಾಯಾನುವ್ರಜಾಮಿ ತಮ್ ॥೨॥

ಅಲ್ಪಪರಾಕ್ರಮವನ್ನು ತೋರಿಸುತ್ತಿದ್ದ ಆ ಭಗವಂತನು ನಿಧಾನಗತಿಯಿಂದ ಮುಂದೆ ಹೋಗುತ್ತಿದ್ದನು. ನಾನಾದರೂ ಬಹಳ ವೇಗವನ್ನು ಹೊಂದಿ ಅವನನ್ನು ಹಿಂಬಾಲಿಸಿದೆನು.

ಸ ಗತ್ವಾ ದೀರ್ಘಮಧ್ವಾನಮಾಕಾಶಮಮಿತದ್ಯುತಿಃ ।
ಮನಸಾಽಪ್ಯಗಮಂ ದೇಶಮಾಸಸಾದಾತ್ಮತತ್ತ್ವವಿತ್ ॥೩॥

ಅಮಿತದ್ಯುತಿಯೂ, ಆತ್ಮತತ್ತ್ವಜ್ಞನೂ ಆದ ಅವನು ಪ್ರಕಾಶಮಾನವಾದ ದೀರ್ಘವಾದ ಮಾರ್ಗದಲ್ಲಿ ಹೋಗಿ ಮನಸ್ಸಿನಿಂದಲೂ ಸಮೀಪಿಸಲು ಸಾಧ್ಯವಿಲ್ಲದ ದೇಶವನ್ನು ತಲುಪಿದನು.

ಅಥ ದೇವಃ ಸಮಾಸಾದ್ಯ ಮನಸಃ ಸದೃಶಂ ಜವಮ್ ।
ಮೋಹಯಿತ್ವಾ ಚ ಮಾಂ ತತ್ರ ಕ್ಷಣೇನಾಂತರಧೀಯತ ॥೪॥

ಅನಂತರ ಆ ದೇವನು ತನ್ನ ಮನಸ್ಸಿಗೆ ಅನುಗುಣವಾದ ವೇಗವನ್ನು ಹೊಂದಿ, ನನಗೆ ಮೋಹವನ್ನುಂಟು ಮಾಡಿ, ಅಲ್ಲಿ ಒಂದು ಕ್ಷಣದಲ್ಲಿ ಅಂತರ್ಧಾನವನ್ನು ಹೊಂದಿದನು.

ತತ್ರಾಂಬುಧರಧೀರೇಣ ಭೋಶಬ್ದೇನಾನುನಾದಿನಾ ।
ಅಯಂ ಭೋಽಹಮಿತಿ ಪ್ರಾಹ ವಾಕ್ಯಂ ವಾಕ್ಯವಿಶಾರದಃ ॥೫॥

ವಾಕ್ಯವಿಶಾರದನಾದ ಅವನು ಮೇಘಗಂಭೀರವಾಣಿಯಿಂದ ಪ್ರತಿಧ್ವನಿಸುವ ಭೋಶಬ್ದದಿಂದ ಕೂಡಿದ 'ಅಯ್ಯಾ ಇದು ನಾನು' ಎಂಬ ಮಾತನ್ನು ಆಡಿದನು.

ಶಬ್ದಾನುಸಾರೀ ತು ತತಸ್ತಂ ದೇಶಮಹಮಾವ್ರಜಮ್ ।
ತತ್ರಾಪಶ್ಯಂ ತತಶ್ಚಾಹಂ ಶ್ರೀಮದ್ಧಂಸಯುತಂ ಸರಃ ॥೬॥

ಆಗ ನಾನು ಶಬ್ದವನ್ನು ಅನುಸರಿಸಿ ಆ ದೇಶಕ್ಕೆ ಹೋದೆನು. ನಾನು ಅಲ್ಲಿ ಕಾಂತಿಯುಕ್ತವಾದ ಹಂಸಗಳಿಂದ ಕೂಡಿದ ಸರೋವರವನ್ನು ನೋಡಿದೆನು.

ಸ ತತ್ ಸರಃ ಸಮಾಸಾದ್ಯ ಭಗವಾನಾತ್ಮವಿತ್ತಮಃ ।
ಭೋಶಬ್ದಪ್ರತಿಸೃಷ್ಟೇನ ಸ್ವರೇಣಾಪ್ರತಿವಾದಿನಾ ॥೭॥

ವಿವೇಶ ದೇವಃ ಸ್ವಾಂ ಯೋನಿಂ ಮಾಮಿದಂ ಚಾಭ್ಯಭಾಷತ ।
ವಿಶಸ್ವ ಸಲಿಲಂ ಸೌಮ್ಯ ಸುಖಮತ್ರ ವಸಾಮಹೇ ॥೮॥

ಆತ್ಮಜ್ಞಾನಿಯಾದ ಭಗವಂತನಾದ ಅವನು ಆ ಸರೋವರವನ್ನು ತಲುಪಿ ಭೋಶಬ್ದದಿಂದ ಕೂಡಿದ ಪ್ರತಿಧ್ವನಿ ಬಾರದಂತಹ ಸ್ವರದಿಂದ ತನ್ನ ಯೋನಿಯಾದ ಆ ನೀರನ್ನು ಪ್ರವೇಶಿಸಿ ನನ್ನನ್ನು ಕುರಿತು- 'ಎಲೈ ಸೌಮ್ಯನೇ, ನೀನೂ ಜಲವನ್ನು ಪ್ರವೇಶಿಸು. ನಾವಿಬ್ಬರೂ ಇಲ್ಲಿ ಸುಖವಾಗಿ ವಾಸ ಮಾಡೋಣ' ಎಂದು ಹೇಳಿದನು.

ತತಶ್ಚ ಪ್ರಾವಿಶಂ ತತ್ರ ಸಹ ತೇನ ಮಹಾತ್ಮನಾ ।
ದೃಷ್ಟವಾನದ್ಭುತತರಂ ತಸ್ಮಿನ್ ಸರಸಿ ಭಾಸ್ವತಾಮ್ ॥೯॥

ಅನಂತರ ಆ ಮಹಾತ್ಮನ ಜೊತೆಯಲ್ಲಿ ನಾನೂ ಆ ಜಲವನ್ನು ಪ್ರವೇಶಿಸಿದೆನು. ಆ ಸರೋವರದಲ್ಲಿ ಅದ್ಭುತವಾದ, ಪ್ರಕಾಶಮಾನವಾದ ವಿಷಯಗಳನ್ನು ನೋಡಿದೆನು.

ಅಗ್ನೀನಾಮಪ್ರಣೀತಾನಾಮಿದ್ಧಾನಾಮಿಂಧನೈರ್ವಿನಾ ।
ದೀಪ್ತಾನಾಮಾಜ್ಯಸಿಕ್ತಾನಾಂ ಪ್ರಾಪ್ತಾಜ್ಯಾನಾಮಿವಾಭವತ್ ॥೧೦॥

ಅಲ್ಲಿ ಇಂಧನವಿಲ್ಲದೆಯೇ ಆಜ್ಯವನ್ನು ಹಾಕಿದ, ಅಗ್ನಿಗಳಂತೆ ಜ್ವಲಿಸುವ ಆಜ್ಯರಹಿತವಾದ ಅಗ್ನಿಗಳನ್ನು ನೋಡಿದೆನು.

ದೀಪ್ತಿಸ್ತೇಷಾಮನಾಜ್ಯಾನಾಂ ಪ್ರಾಪ್ತಾಜ್ಯಾನಾಮಿವಾಭವತ್ ।
ಅನಿದ್ಧಾನಾಮಿವ ಸತಾಮಿದ್ಧಾನಾಮಿವ ಭಾಸ್ವತಾಮ್ ॥೧೧॥

ಆಜ್ಯವಿಲ್ಲದ ಆ ಅಗ್ನಿಗಳ ಪ್ರಕಾಶವು ಆಜ್ಯಸಿಕ್ತವಾದ ಅಗ್ನಿಗಳ ಪ್ರಕಾಶದಂತಿದ್ದಿತು. ಯಾರೂ ಜ್ವಲಿಸದಿದ್ದರೂ ಅವು ತಾವಾಗಿಯೇ ಜ್ವಲಿಸುತ್ತಿದ್ದವು.

ಅಥಾಹಂ ವರದಂ ದೇವಂ ನಾಪಶ್ಯಂ ತತ್ರ ಸಂಗತಮ್ ।
ತತಃ ಸಮ್ಮೋಹಮಾಪನ್ನೋ ವಿಷಾದಮಗಮಂ ಪರಮ್ ॥೧೨॥

ಅನಂತರ ನಾನು ಅಲ್ಲಿ ವರಪ್ರದನಾದ ಆ ದೇವನನ್ನು ಕಾಣಲಿಲ್ಲ. ಆಗ ನನಗೆ ಮೋಹವುಂಟಾಗಿ ತೀವ್ರವಾದ ವಿಷಾದ ಉಂಟಾಯಿತು.

ಅಪಶ್ಯಂ ಚಾಗ್ನಿಹೋತ್ರಾಣಿ ಶತಶೋಽಥ ಸಹಸ್ರಶಃ ।
ವಿಧಿನಾ ಸಂಪ್ರಣೀತಾನಿ ಧಿಷ್ಣ್ಯೇಷ್ವಾಜ್ಯವತಾಂ ತದಾ ॥೧೩॥

ಆಗ ವಿಧಿಪ್ರಕಾರವಾಗಿ ಸಾಧಿಸಿದ ಆಜ್ಯದಿಂದ ಕೂಡಿದ ಅಗ್ನಿಸ್ಥಾನಗಳನ್ನು ನೂರರ ಸಂಖ್ಯೆಯಲ್ಲಿ ಮತ್ತು ಸಾವಿರದ ಸಂಖ್ಯೆಯಲ್ಲಿ ಅಗ್ನಿಹೋತ್ರಗಳನ್ನು ನೋಡಿದೆನು.

ಅಸಂಮಾಷ್ಟತಳಾಂಶ್ಚೈವ ವೇದೀಃ ಕುಸುಮಸಂಸ್ತೃತಾಃ ।
ಕುಶಪದ್ಮೋತ್ಪಲಾಸಂಗಾನ್ ಕಲಶಾಂಶ್ಚ ಹಿರಣ್ಮಯಾನ್ ॥೧೪॥

ಕುಸುಮಗಳು ಹರಡಲ್ಪಟ್ಟ ಸಾರಿಸದ ವೇದಿಗಳನ್ನು ಕುಶಪದ್ಮ ಉತ್ಪಲಗಳನ್ನು ಹೊಂದಿದ ಬುಟ್ಟಿಗಳನ್ನು, ಸುವರ್ಣಮಯವಾದ ಕಲಶಗಳನ್ನು ನೋಡಿದೆನು.

ಅಗ್ನಿಹೋತ್ರಾಣಿ ಚಿತ್ರಾಣಿ ಶತಶೋಽಥ ಸಹಸ್ರಶಃ ।
ಅಗ್ನಿಹೋತ್ರೋಪಯುಕ್ತಾನಿ ಯಾನಿ ದ್ರವ್ಯಾಣಿ ಕಾನಿಚಿತ್ ।
ತಾನಿ ಚಾತ್ರ ಸಮೃದ್ಧಾನಿ ದೃಷ್ಟವಾನಸ್ಮ್ಯನೇಕಶಃ ॥೧೫॥

ವಿಚಿತ್ರವಾದ ಅಗ್ನಿಹೋತ್ರಗಳನ್ನು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ನೋಡಿದೆನು. ಅಗ್ನಿಹೋತ್ರಗಳಿಗೆ ಉಪಯುಕ್ತವಾದ ಯಾವ ದ್ರವ್ಯಗಳಿವೆಯೋ ಅವುಗಳು ಅಲ್ಲಿ ಅನೇಕ ಕಡೆಗಳಲ್ಲಿ ಸಮೃದ್ಧವಾಗಿರುವುದನ್ನು ನೋಡಿದೆನು.

ಮನೋಹೃದ್ಯತಮಶ್ಚಾತ್ರ ಸುರಭಿಃ ಪುಣ್ಯಲಕ್ಷಣಃ ।
ಆಜ್ಯಗಂಧೋ ಮನೋಗ್ರಾಹೀ ಘ್ರಾಣಚಕ್ಷುಃ ಸುಖಾವಹಃ ॥೧೬॥

ಅಲ್ಲಿ ಮನಸ್ಸಿಗೆ ಆನಂದವನ್ನುಂಟು ಮಾಡುವ ಪವಿತ್ರವಾದ ಸುವಾಸನೆಯಿಂದ ಕೂಡಿದ ಆಜ್ಯಗಂಧದಿಂದ ಸಹಿತವಾದ, ಮನಸ್ಸಿಗೆ ಹಿತವಾದ ಸುಖವನ್ನು ಕೊಡುವ ವಾಯುವು ಬೀಸುತ್ತಿದ್ದಿತು.

ತೇಷಾಂ ತತ್ರಾಗ್ನಿಹೋತ್ರಾಣಾಮೀಡಿತಾನಾಂ ಸಹಸ್ರಶಃ ।
ಸಮೀಪೇ ತದ್ಭುತತಮಮಪಶ್ಯಮಹಮವ್ಯಯಮ್ ॥೧೭॥

ಹೀಗೆ ಸಹಸ್ರಸಂಖ್ಯೆಯಲ್ಲಿ ಪೂಜಿಸಲ್ಪಟ್ಟ ಆ ಅಗ್ನಿಹೋತ್ರಗಳ ಸಮೀಪದಲ್ಲಿ ಅದ್ಭುತತಮವಾದ, ಅವ್ಯಯವಾದ ವಿಷಯವನ್ನು ನೋಡಿದೆನು.

ಚಂದ್ರಾಂಶುಕಾಶಶುಭ್ರಾಣಾಂ ತುಷಾರೋದ್ಭೇದವರ್ಚಸಾಮ್ ।
ವಿಮಲಾದಿತ್ಯಭಾಸಾನಾಂ ಸ್ಥಂಡಿಲಾನಿ ಸಹಸ್ರಶಃ ॥೧೮॥

ದೃಷ್ಟ್ವಾನ್ಯಗ್ನಿಸಮೀಪೇ ತು ದ್ಯುತಿಮಂತಿ ಮಹಾಂತಿ ಚ ।
ಏಷು ಚಾಗ್ನಿಸಮೀಪೇಷು ಶುಶ್ರಾವ ಸುಪದಾಕ್ಷರಾಃ ॥೧೯॥

ಅಲ್ಲಿ ಚಂದ್ರಗಳ ಕಿರಣಗಳಂತೆ, ಕಾಶಕುಸುಮಗಳಂತೆ ಶುಭ್ರವಾದ ಹಿಮದ ಅಂಕುರದಂತೆ ವರ್ಚಸ್ಸನ್ನು ಹೊಂದಿದ, ವಿಮಲಾದಿತ್ಯ ಪ್ರಕಾಶವನ್ನು ಹೊಂದಿದ

ಕಾಂತಿಯುಕ್ತವಾದ, ದೊಡ್ಡದಾದ ಸ್ಥಂಡಿಲಗಳನ್ನು ಸಹಸ್ರ ಸಂಖ್ಯೆಯಲ್ಲಿ ಅಗ್ನಿ ಸಮೀಪದಲ್ಲಿ ನಾನು ನೋಡಿದೆನು. ಆ ಅಗ್ನಿಗಳ ಸಮೀಪದಲ್ಲಿ ಒಳ್ಳೆಯ ಪದಾಕ್ಷರವುಳ್ಳ ವಾಣಿಯು ಕೇಳಿಬರುತ್ತಿದ್ದಿತು.

ಪ್ರಭಾವಾಂತರಿತಾನಾಂ ತು ಪ್ರಸ್ಪಷ್ಟಾಕ್ಷರಭಾಷಿಣಾಮ್ ।
ಋಗ್ಯಜುಃಸಾಮಗಾನಾಂ ಚ ಮಧುರಾಃ ಸುಸ್ವರಾ ಗಿರಃ ॥೨೦॥

ಸ್ಪಷ್ಟವಾದ ಅಕ್ಷರಗಳನ್ನು ಉಚ್ಚರಿಸುವ ಪ್ರಭಾವಯುಕ್ತರಾದ ಪುರುಷರ ಋಗ್ಯಜುಸ್ಸಾಮವೇದಗಳ ಮಧುರವಾದ ಸುಸ್ವರಗಳು ಕೇಳಿಬಂದವು.

ಸುಸಮ್ಮೃಷ್ಟತಳೈಸ್ತೈಸ್ತು ಬೃಹದ್ಭಿರ್ದೀಪ್ತತೇಜಸೈಃ ।
ಪಾವಕೈಃ ಪಾವಿತಾತ್ಮಾಽಹಮಭವಂ ಲಘುವಿಕ್ರಮಃ ॥೨೧॥

ಸುತ್ತಲೂ ಸಾರಿಸಿದ, ಬಹಳ ಪ್ರಕಾಶ ಹೊಂದಿದ ಮಹತ್ತಾದ, ಅನೇಕ ಅಗ್ನಿಗಳಿಂದ ಪವಿತ್ರೀಕರಿಸಲ್ಪಟ್ಟ ನಾನು ಲಘುವಿಕ್ರಮವನ್ನು ಹೊಂದಿದೆನು.

ತತೋಽಹಂ ತೇಷು ಧಿಷ್ಣ್ಯೇಷು ಜ್ವಲಮಾನೇಷು ಯಜ್ವನಾಮ್ ।
ತಂ ದೇಶಂ ಪ್ರಣಮಿತ್ವಾಽಥ ಅನ್ವೇಷ್ಟುಮುಪಚಕ್ರಮೇ ॥೨೨॥

ಅನಂತರ ನಾನು ಯಜ್ಞ ಮಾಡುವವರಿಂದ ಸ್ಥಾಪಿಸಲ್ಪಟ್ಟು, ತಮ್ಮ ಸ್ಥಾನಗಳಲ್ಲಿ ಅಗ್ನಿಗಳು ಜ್ವಲಿಸುತ್ತಿರಲು ಆ ದೇಶಕ್ಕೆ ನಮಸ್ಕಾರವನ್ನು ಮಾಡಿ ಹುಡುಕಲು ಪ್ರಾರಂಭಿಸಿದೆನು.

ತಾನ್ಯನೇಕಸಹಸ್ರಾಣಿ ಪರೀಯಂಸ್ತು ಮಹಾಜವಾತ್ ।
ಅಪಶ್ಯಮಾನಸ್ತಂ ದೇವಂ ತತೋಽಹಂ ವ್ಯಥಿತೋಽಭವಮ್ ॥೨೩॥

ಅಂತಹ ಅನೇಕ ಅಗ್ನಿಹೋತ್ರಗಳುಳ್ಳ ದೊಡ್ಡ ಅಗ್ನಿಯಲ್ಲಿ ಸುತ್ತಾಡುತ್ತಾ ಆ ದೇವನನ್ನು ಕಾಣದೆ ನಾನು ವ್ಯಥೆಯಿಂದ ಕೂಡಿದೆನು.

ತತಸ್ತೇಷ್ವಗ್ನಿಹೋತ್ರೇಷು ಜ್ವಲತ್ಸು ವಿಮಲಾರ್ಚಿಷು ।
ಭಾನುಮತ್ಸು ನ ಪಶ್ಯಾಮಿ ದೇವದೇವಂ ಸನಾತನಮ್ ॥೨೪॥

ವಿಮಲವಾದ ಜ್ವಾಲೆಗಳಿಂದ ಆ ಅಗ್ನಿಹೋತ್ರಗಳು ಪ್ರಕಾಶಮಾನವಾಗಿ ಉರಿಯುತ್ತಿದ್ದರೂ ಸನಾತನನಾದ ಆ ದೇವದೇವನನ್ನು ನಾನು ಕಾಣಲಿಲ್ಲ.

ತತೋಽಹಂ ತಾನಿ ದೀಪ್ತಾನಿ ಪರೀಯ ವ್ಯಥಿತೇಂದ್ರಿಯಃ ।
ನಾಂತಂ ತೇಷಾಂ ಪ್ರಪಶ್ಯಾಮಿ ಖೇದಶ್ಚ ಸಹಸಾಭವತ್ ॥೨೫॥

ಅನಂತರ ನಾನು ಮನೋವ್ಯಥೆಯನ್ನು ಹೊಂದಿ ಆ ದೀಪ್ತವಾದ ಅಗ್ನಿಗಳನ್ನು ಸುತ್ತುತ್ತಿರಲು ಅವುಗಳ ಅಂತವೇ ಕಾಣಲಿಲ್ಲ.

ವಿಹೃತ್ಯ ಸರ್ವತೋ ದೃಷ್ಟಿಂ ಭಯಮೋಹಸಮನ್ವಿತಃ ।
ಶ್ರಮಂ ಪರಮಮಾಪನ್ನಶ್ಚಿಂತಯಾಮಿ ವಿಚೇತನಃ ॥೨೬॥

ಎಲ್ಲ ಕಡೆಗಳಲ್ಲಿಯೂ ದೃಷ್ಟಿಯನು ಹರಿಸಿ, ಭಯಾಭ್ರಾಂತಿಯುಕ್ತನಾಗಿ, ಬಹಳ ದಣಿದು ವಿಚೇತನನಾಗಿ ಚಿಂತಿಸಿದೆ.

ತಸ್ಮಿನ್ನು ಖಲು ವರ್ತಾಮಿ ಲೋಕೇ ಕಿಂ ಚೈತದೀದೃಶಮ್ ।
ಋಗ್ಯಜುಃಸಾಮನಿರ್ಘೋಷಃ ಶ್ರೂಯತೇ ನ ಚ ದೃಶ್ಯತೇ ॥೨೭॥

ಆ ಲೋಕದಲ್ಲಿಯೇ ಇದ್ದೇನಷ್ಟೆ? ಇದು ಏಕೆ ಹೀಗಿದೆ? ಋಗ್ಯಜುಸ್ಸಾಮ ವೇದಗಳ ಸ್ವರಗಳು ಕೇಳಿ ಬರುತ್ತವೆ. ಆದರೆ ಯಾರೂ ಕಾಣುತ್ತಿಲ್ಲ (ಎಂದು ಚಿಂತಿಸಿದೆನು).

ನ ಚ ಪಶ್ಯಾಮಿ ತಂ ದೇವಂ ಯೇನಾಹಮಿಹ ಚೋದಿತಃ ।
ಏವಂ ಚಿಂತಾಸಮಾಪನ್ನಃ ಪ್ರಧ್ಯಾತುಮುಪಚಕ್ರಮೇ ॥೨೮॥

ಯಾವನಿಂದ ಇಲ್ಲಿಗೆ ಬರಲು ಪ್ರಚೋದಿಸಲ್ಪಟ್ಟೆನೋ ಅವನನ್ನೂ ಕಾಣದೆ ಚಿಂತಾಪರನಾಗಿ ಧ್ಯಾನವನ್ನು ಮಾಡಲು ಉಪಕ್ರಮಿಸಿದೆನು.

ತತಶ್ಚಿಂತಯತೋ ಮಹ್ಯಂ ಮೋಹೇನಾವಿಷ್ಟಚೇತಸಃ ।
ಮಹಾನ್ ಶಬ್ದಃ ಪ್ರಾದುರಾಸೀತ್ ಸುಭೃಶಂ ಮೇಽವ್ಯಥಾಕರಃ ॥೨೯॥

ಮೋಹದಿಂದ ಕೂಡಿದ ಮನಸ್ಸುಳ್ಳವನಾಗಿ ಅವನನ್ನೇ ಚಿಂತಿಸುತ್ತಿದ್ದ ನನಗೆ ವ್ಯಥೆಯನ್ನು ಪರಿಹರಿಸುವ ದೊಡ್ಡ ಶಬ್ದವು ಕೇಳಿಬಂದಿತು.

ತಥಾऽಹಂ ಸಹಸಾ ತತ್ರ ಶೃಣೋಮಿ ವಿಪುಲಧ್ವನಿಮ್ ।
ಅಪಶ್ಯಂ ಚ ಸುಪರ್ಣಾನಾಂ ಸಹಸ್ರಾಣ್ಯಯುತಾನಿ ಚ ॥೩೦॥

ಆ ವಿಪುಲಧ್ವನಿಯನ್ನು ಕೇಳಿದ ನಾನು ಸಹಸ್ರ ಅಯುತದ ಸಂಖ್ಯೆಯಲ್ಲಿ ಇದ್ದ ಸುಪರ್ಣಗಳನ್ನು (ಗರುಡ ಪಕ್ಷಿಗಳನ್ನು) ನೋಡಿದೆನು.

ಅಭ್ಯದ್ರವಂತ ಮಾಮೇವ ವಿಪುಲದ್ಯುತಿರಂಹಸಃ ।
ತೇಷಾಮಹಂ ಪ್ರಭಾವೇಣ ಸರ್ವಥೈವಾವರೋऽಭವಮ್ ॥೩೧॥

ವಿಪುಲವಾದ ಕಾಂತಿ ಮತ್ತು ವೇಗವನ್ನು ಹೊಂದಿದ ಅವುಗಳು ನನ್ನ ಕಡೆಗೆ ಓಡಿ ಬಂದವು. ಅವುಗಳ ಪ್ರಭಾವದ ಮುಂದೆ ನಾನು ಸರ್ವಥಾ ಅಲ್ಪನಾದೆನು.

ಸೋऽಹಂ ಸಮಂತಾತ್ ತೈಃ ಸರ್ವೈಃ ಸುಪರ್ಣೈರತಿತೇಜಸೈಃ ।
ದೃಷ್ಟ್ವಾऽऽತ್ಮಾನಂ ಪರಿಗತಂ ಸಂಭ್ರಮಂ ಪರಮಂ ಗತಃ ॥೩೨॥

ಅಂತಹ ನಾನು ಎಲ್ಲ ಕಡೆಗಳಿಂದಲೂ ಅಮಿತ ಸಾಮರ್ಥ್ಯವುಳ್ಳ ಅಂತಹ ಸುಪರ್ಣಗಳಿಂದ ಸುತ್ತುವರಿಯಲ್ಪಟ್ಟುದನ್ನು ನೋಡಿ ಗಾಬರಿಗೆ ಒಳಗಾದೆನು.

ವಿನಯಾವನತೋ ಭೂತ್ವಾ ನಮಶ್ಚಕ್ರೇ ಮಹಾತ್ಮನೇ ।
ಅನಾದಿನಿಧನಾಯೈಭಿರ್ನಾಮಭಿಃ ಪರಮಾತ್ಮನೇ ॥೩೩॥

ಆಗ ವಿನಯದಿಂದ ಬಾಗಿ ಮಹಾತ್ಮನೂ, ಆದ್ಯಂತರಹಿತನೂ ಆದ ಪರಮಾತ್ಮನಿಗೆ ಈ ನಾಮಗಳಿಂದ ನಮಸ್ಕಾರವನ್ನು ಮಾಡಿದೆನು.

ನಾರಾಯಣಾಯ ಶುದ್ಧಾಯ ಶಾಶ್ವತಾಯ ಧ್ರುವಾಯ ಚ ।
ಭೂತಭವ್ಯಭವೇಶಾಯ ಶಿವಾಯ ಶಿವಮೂರ್ತಯೇ ॥೩೪॥

ನಾರಾಯಣನಾದ ಶುದ್ಧನಾದ, ಶಾಶ್ವತನಾದ, ಅಚಲನಾದ, ಭೂತಭವಿಷ್ಯತ್ ವರ್ತಮಾನ ಪ್ರಭುವಾದ, ಮಂಗಳಸ್ವರೂಪನಾದ, ಮಂಗಳ ಶರೀರವುಳ್ಳ;

ಶಿವಯೋನೇಃ ಶಿವಾದ್ಯಾಯ ಶಿವಪೂಜ್ಯತಮಾಯ ಚ ।
ಘೋರರೂಪಾಯ ಮಹತೇ ಯುಗಾಂತಕರಣಾಯ ಚ ॥೩೫॥

ಶಿವನಿಗೆ ಕಾರಣನಾದ, ಶಿವನಿಗಿಂತಲೂ ಮೊದಲನೆಯವನಾದ, ಶಿವನಿಂದ ಪೂಜ್ಯನಾದ, ಘೋರರೂಪವನ್ನು ಹೊಂದಿದ, ದೊಡ್ಡ ರೂಪವನ್ನು ಧರಿಸಿದ, ಯುಗಗಳನ್ನು ಪರ್ಯವಸಾನ ಮಾಡುವ;

ವಿಶ್ವಾಯ ವಿಶ್ವದೇವಾಯ ವಿಶ್ವೇಶಾಯ ಮಹಾತ್ಮನೇ ।
ಸಹಸ್ರೋದರಪಾದಾಯ ಸಹಸ್ರನಯನಾಯ ಚ ॥೩೫॥

ಸರ್ವತ್ರ ಪ್ರವಿಷ್ಟನಾದ, ವಿಶ್ವದೇವನಾದ, ವಿಶ್ವಪ್ರಭುವಾದ, ಮಹಾತ್ಮನಾದ, ಸಹಸ್ರ ಹೊಟ್ಟೆ-ಪಾದಗಳನ್ನು ಹೊಂದಿದ, ಸಹಸ್ರನಯನಗಳನ್ನು ಹೊಂದಿದ;

ಸಹಸ್ರಬಾಹವೇ ಚೈವ ಸಹಸ್ರವದನಾಯ ಚ ।
ಶುಚಿಶ್ರವಾಯ ಮಹತೇ ಋತುಸಂವತ್ಸರಾಯ ಚ ॥೩೬॥

ಸಹಸ್ರಬಾಹುಗಳನ್ನು ಹೊಂದಿದ, ಸಹಸ್ರ ಮುಖಗಳನ್ನು ಹೊಂದಿದ, ಪವಿತ್ರವಾದ ಕೀರ್ತಿಯುಳ್ಳ, ಮಹಾತ್ಮನಾದ, ಋತು-ಸಂವತ್ಸರ ಪ್ರವರ್ತಕನಾದ;

ಋಗ್ಯಜುಸ್ಸಾಮವಕ್ತ್ರಾಯ ಅಥರ್ವಶಿರಸೇ ನಮಃ ।
ಹೃಷೀಕೇಶಾಯ ಕೃಷ್ಣಾಯ ದ್ರುಹಿಣೋರುಕ್ರಮಾಯ ಚ ॥೩೭॥

ಋಗ್ಯಜುಸ್ಸಾಮವೇದಗಳನ್ನು ಮುಖದಲ್ಲಿ ಧರಿಸಿದ, ಅಥರ್ವವೇದವನ್ನು ಶಿರಸ್ಸಿನಲ್ಲಿ ಧರಿಸಿದ, ಇಂದ್ರಿಯಗಳ ಪತಿಯಾದ, ಆನಂದರೂಪನಾದ, ಬ್ರಹ್ಮದೇವರ ಪರಾಕ್ರಮಕ್ಕೆ ಕಾರಣನಾದ ಕೃಷ್ಣನಿಗೆ ನಮಸ್ಕಾರ.

ಬ್ರಹ್ಮೇಂದ್ರಕಾಯ ತಾರ್ಕ್ಷ್ಯಾಯ ವರಾಹಾಯೈಕಶೃಂಗಿಣೇ ।
ಶಿಪಿವಿಷ್ಟಾಯ ಸತ್ಯಾಯ ಹರಯೇಽಥ ಶಿಖಂಡಿನೇ ॥೩೮॥

ಬ್ರಹ್ಮ-ಇಂದ್ರರಿಗೆ ಸುಖವನ್ನು ಕೊಡುವ, ಗರುಡನ ಅಂತರ್ಯಾಮಿಯಾದ, ವರಾಹರೂಪಿಯಾದ, ಏಕಶೃಂಗವುಳ್ಳ ಮತ್ಸ್ಯರೂಪಿಯಾದ, ಗರುಡಾರೂಢನಾದ, ಜಗತ್ಸೃಷ್ಟ್ಯಾದಿ ಕರ್ತನಾದ, ಪಾಪಪರಿಹಾರಕನಾದ, ಶಿಖೆಯನ್ನು ಧರಿಸಿದ;

ಹುತಾಯೋರ್ಧ್ವಾಯ ವಕ್ತ್ರಾಯ ರೌದ್ರಾನೀಕಾಯ ಸಾಧವೇ ।
ಸಿಂಧವೇ ಸಿಂಧವರ್ಷಘ್ನೇ ದೇವಾನಾಂ ಸಿಂಧವೇ ನಮಃ ॥೩೯॥

ಎಲ್ಲರಿಂದಲೂ ಆಹೂತನಾದ, ಉನ್ನತನಾದ, ವಾಕ್ ಪ್ರೇರಕನಾದ, ಭಯಂಕರವಾದ ಸೈನ್ಯವನ್ನು ಹೊಂದಿದ, ಸಾಧುವಾದ, ಆಶ್ರಯನಾದ, ಸಿಂಧವರ್ಷಘ್ನನಾದ ದೇವತೆಗಳಿಗೆ ಆಶ್ರಯನಾದ ಹರಿಗೆ ನಮಸ್ಕಾರ.

ಗರುತ್ಮತೇ ತ್ರಿನೇತ್ರಾಯ ಸುಧಾಮಾಯ ವೃಷಾವೃಷೇ ।
ಸಮ್ರಾಡುಗ್ರೇ ಸಂಕೃತಯೇ ವಿರಜೇ ಸಂಭವೇ ಭವೇ ॥೪೦॥

ರೆಕ್ಕೆಗಳನ್ನು ಹೊಂದಿದ, ತ್ರಿನೇತ್ರನಾದ, ಒಳ್ಳೆಯ ನಿವಾಸವನ್ನು ಹೊಂದಿರುವ, ಶ್ರೇಷ್ಠರಿಗೂ ಶ್ರೇಷ್ಠನಾದ, ಉಗ್ರನಾದ ಚಕ್ರವರ್ತಿಯಾದ, ಚೆನ್ನಾಗಿ ಕಾರ್ಯಗಳನ್ನು ಮಾಡುವ, ರಜೋರಹಿತನಾದ, ಉತ್ಪತ್ತಿ ಕಾರಣನಾದ, ವೈಭವರೂಪನಾದ;

ವೃಷಾಯ ವೃಷರೂಪಾಯ ವಿಭವೇ ಭೂರ್ಭುವಾಯ ಚ ।
ದೀಪ್ತಸೃಷ್ಟಾಯ ಯಜ್ಞಾಯ ಸ್ಥಿರಾಯ ಸ್ಥವಿರಾಯ ಚ ॥೪೧॥

ಶ್ರೇಷ್ಠನಾದ, ವೃಷಭರೂಪವನ್ನು ಧರಿಸಿದ, ವಿಭುವಾದ, ಪೂರ್ಣನಾದ, ಬಹುಪರಾಕ್ರಮಿಯಾದ, ದೀಪ್ತವಾದ ಸೃಷ್ಟಿಯನ್ನು ಹೊಂದಿದ, ಯಜನೀಯನಾದ, ಸ್ಥಿರನಾದ, ವೃದ್ಧನಾದ;

ಅಚ್ಯುತಾಯ ತುಷಾರಾಯ ವೀರಾಯ ಚ ಸಮಾಯ ಚ ।
ಜಿಷ್ಣವೇ ಪುರುಹೂತಾಯ ವಸಿಷ್ಠಾಯ ವರಾಯ ಚ ॥೪೨॥

ಚ್ಯುತಿರಹಿತನಾದ, ಶುಭ್ರನಾದ, ವೀರನಾದ, ಸಮನಾದ, ಜಯಶೀಲನಾದ, ಅನೇಕರಿಂದ ಸ್ತೋತ್ರ ಮಾಡಲ್ಪಡುವ, ವಾಸಮಾಡುವರಲ್ಲಿ ಉತ್ತಮನಾದ, ಶ್ರೇಷ್ಠನಾದ;

ಸತ್ಯೇಶಾಯ ಸುರೇಶಾಯ ಹರಯೇಽಥ ಶಿಖಂಡಿನೇ ।
ಬರ್ಹಿಷಾಯ ವರೇಣ್ಯಾಯ ವಸವೇ ವಿಶ್ವವೇಧಸೇ ॥೪೩॥

ಸತ್ಯಕ್ಕೆ ಪ್ರಿಯನಾದ, ದೇವತೆಗಳಿಗೆ ಒಡೆಯನಾದ, ಹರಿರೂಪನಾದ, ಶಿಖಾ ಧಾರಿಯಾದ, ನವಿಲುಗರಿಯನ್ನು ಧರಿಸಿದ, ವರ್ಣನೀಯನಾದ, ಸರ್ವತ್ರ ವಾಸಿಸುವ, ವಿಶ್ವವನ್ನು ಧರಿಸುವ;

ಕಿರೀಟಿನೇ ಸುಕೇಶಾಯ ವಾಸುದೇವಾಯ ಶುಷ್ಮಿಣೇ ।
ಬೃಹದುಗ್ರೇ ಸುಷೇಣಾಯ ಯುಗ್ಯೇ ದುಂದುಭಯೇ ತಥಾ ॥೪೪॥

ಕಿರೀಟವನ್ನು ಧರಿಸಿದ, ಒಳ್ಳೆಯ ಕೇಶವನ್ನು ಹೊಂದಿದ, ಪ್ರಶಸ್ತವಾದ ವೀರ್ಯವನ್ನು ಹೊಂದಿದ, ವಾಸುದೇವನಾದ, ಬಹಳ ಅಭೀಷ್ಟಗಳನ್ನು ಕರೆಯುವ, ಒಳ್ಳೆಯ ಸೈನ್ಯಗಳನ್ನು ಹೊಂದಿದ, ರಥದ ಅಶ್ವಗಳಲ್ಲಿ ಇರುವ, ದುಂದುಭಿಯಲ್ಲಿರುವ;

ಭವೇ ಸಖಾಯ ವಿಭವೇ ಭರದ್ವಾಜಾಭಯಾಯ ಚ ।
ಭಾಸ್ಕರಾಯ ಚ ಚಂದ್ರಾಯ ಪದ್ಮನಾಭಾಯ ಭೂರಿಣೇ ॥೪೫॥

ಸಂಸಾರದಲ್ಲಿ ಸ್ನೇಹಿತನಾದ, ವ್ಯಾಪ್ತನಾದ, ಅನ್ನಪ್ರೇಮಿಗಳಿಗೆ ಭಯದಾಯಕನಾದ, ಪ್ರಕಾಶಮಾನನಾದ, ಶ್ರೇಷ್ಠನಾದ, ಸ್ವಾಮಿಯಾದ, ಪದ್ಮನಾಭನಾದ, ಬಹುರೂಪಿಯಾದ (ನಿನಗೆ ನಮಸ್ಕಾರ).

ಪುನರ್ವಸುಭೃತತ್ವಾಯ ಜೀವಪ್ರಭವಿಷಯಾಯ ಚ ।
ವಷಟ್‌ಕಾರಾಯ ಸ್ವಾಹಾಯೈ ಸ್ವಧಾಯ ನಿಧನಾಯ ಚ ॥೪೬॥

ಪುನರ್ವಸು ಮೊದಲಾದ ನಕ್ಷತ್ರಗಳನ್ನು ಧರಿಸಿದ, ಜೀವನ ಜ್ಞಾನಕ್ಕೆ ವಿಷಯನಾದ, ಪೂರ್ಣಷಡ್ಗುಣ ಸಂಪನ್ನನಾದ, ಚೆನ್ನಾಗಿ ಆಹ್ವಾನಿಸಲ್ಪಡುವ, ಸುಖರೂಪನಾದ, ಜಗತ್ಸಂಹಾರಕನಾದ;

ಋಚೇ ಚ ಯಜುಷೇ ಸಾಮ್ನೇ ತ್ರೈಲೋಕ್ಯಪತಯೇ ನಮಃ ।
ಶ್ರೀಪದ್ಮಾಯಾಜಸದೃಶೇ ಧರಣೇ ಧಾರಣೇ ಪರೇ ॥೪೭॥

ಅರ್ಚನೀಯನಾದ, ಯಾಜ್ಯನಾದ, ಸಮನಾದ, ತ್ರಿಲೋಕಪತಿಯಾದ ನಿನಗೆ ನಮಸ್ಕಾರ. ಲಕ್ಷ್ಮಿಯಲ್ಲಿ ಶ್ರೀಪದ್ಮರೂಪದಿಂದಿರುವ, ನಿನಗೆ ನೀನೇ ಸದೃಶನಾದ, ಎಲ್ಲವನ್ನೂ ಧರಿಸುವ ಶ್ರೇಷ್ಠನಾದ;

ಸೌಮ್ಯಾಯ ಸೌಮ್ಯರೂಪಾಯ ಸೌಮ್ಯೇ ಸುಮನಸೇ ನಮಃ ।
ವಿಶ್ವಾಯ ಚ ಸುವಿಶ್ವಾಯ ವಿಶ್ವರೂಪಧರಾಯ ಚ ॥೪೮॥

ಸೌಮ್ಯನಾದ, ಸೌಮ್ಯಶರೀರವನ್ನು ಹೊಂದಿದ, ಒಳ್ಳೆಯ ಮನಸ್ಸನ್ನು ಹೊಂದಿದ ನಿನಗೆ ನಮಸ್ಕಾರ. ವಿಶ್ವನಾದ, ಒಳ್ಳೆಯ ವಿಶ್ವವನ್ನು ಹೊಂದಿದ, ವಿಶ್ವರೂಪವನ್ನು ಧರಿಸಿದ;

ಕೇಶವಾಯ ಸುಕೇಶಾಯ ರಶ್ಮಿಕೇಶಾಯ ಭೂರಿಣೇ ।
ಹಿರಣ್ಯಗರ್ಭಾಯ ನಮಃ ಸೌಮ್ಯಾಯ ವೃಷರೂಪಿಣೇ ॥೪೯॥

ಕೇಶವನಾದ, ಒಳ್ಳೆಯ ಕೇಶವನ್ನು ಹೊಂದಿದ, ಕಿರಣಗಳಂತಹ ಕೇಶವನ್ನು ಹೊಂದಿದ, ಬಹುರೂಪನಾದ, ಹಿರಣ್ಯಗರ್ಭನಾದ, ವೃಷರೂಪನಾದ, ಸೌಮ್ಯನಾದ ನಿನಗೆ ನಮಸ್ಕಾರ.

ನಾರಾಯಣಾಗ್ರವಪುಷೇ ಪುರುಹೂತಾಯ ವಜ್ರಿಣೇ ।
ಧರ್ಮಿಣೇ ವೃಷಸೇನಾಯ ಧರ್ಮಸೇನಾಯ ರೋಧಸೇ ॥೫೦॥

ನಾರಾಯಣನಾದ, ಶ್ರೇಷ್ಠ ಶರೀರವನ್ನು ಧರಿಸಿದ, ಅನೇಕರಿಂದ ಸ್ತೋತ್ರ ಮಾಡಲ್ಪಡುವ, ವಜ್ರಧರನಾದ, ಧರ್ಮಶೀಲನಾದ, ವೃಷಸೇನೆಯನ್ನು ಹೊಂದಿದ, ಧರ್ಮಸೇನೆಯನ್ನು ಹೊಂದಿದ, ಸಂಸಾರ ಸಮುದ್ರಕ್ಕೆ ದಡನಾದ;

ಮುನಯೇ ಜ್ವರಮುಕ್ತಾಯ ಜ್ವರಾಧಿಪತಯೇ ನಮಃ ।
ಅನೇತ್ರಾಯ ತ್ರಿನೇತ್ರಾಯ ಪಿಂಗಲಾಯ ವಿಧರ್ಮಿಣೇ ॥೫೧॥

ತಪೋಬ್ರಹ್ಮನಿಧಾನಾಯ ಯುಗಪರ್ಯಾಯಿಣೇ ನಮಃ ।
ಶರಣಾಯ ಶರಣ್ಯಾಯ ಶಕ್ತೇಷ್ಟಶರಣಾಯ ಚ ॥೫೨॥

ಜ್ಞಾನಶೀಲನಾದ, ಜ್ವರರಹಿತನಾದ, ಜ್ವರಸ್ವಾಮಿಯಾದ ನಿನಗೆ ನಮಸ್ಕಾರ. ಪ್ರಾಕೃತ ನೇತ್ರರಹಿತನಾದ, ಅಪ್ರಾಕೃತ ತ್ರಿನೇತ್ರನಾದ, ಪಿಂಗಲವರ್ಣದವನಾದ, ಪ್ರಜೆಗಳೆಂಬ ಅಲೆಗಳನ್ನು ಹೊಂದಿದ, ತಪಸ್ಸು ಮತ್ತು ವೇದಗಳಿಗೆ ನಿಧಿಯಾದ, ಯುಗ ಪ್ರವರ್ತಕನಾದ ನಿನಗೆ ನಮಸ್ಕಾರ. ಆಶ್ರಯನಾದ, ಶರಣು ಹೊಂದಲು ಯೋಗ್ಯನಾದ, ಶ್ರೇಷ್ಠನಾದ, ಭಕ್ತರಿಗೆ ಆಶ್ರಯನಾದ;

ನಮಃ ಸರ್ವಭವೇಶಾಯ ಭೂತಭವ್ಯಭವಾಯ ಚ ।
ಪಾಹಿ ಮಾಂ ದೇವದೇವೇಶ ಕೋಽಪ್ಯಜೋಽಸಿ ಸನಾತನ ।
ಏವಂ ಗತೋಽಸ್ಮಿ ಶರಣಂ ಶರಣ್ಯಂ ಬ್ರಹ್ಮಯೋನಿನಾಮ್ ॥೫೩॥

ಎಲ್ಲ ವೈಭವಕ್ಕೂ ಕಾರಣನಾದ, ಭೂತ-ವರ್ತಮಾನ-ಭವಿಷ್ಯತ್ ಕಾಲಗಳಲ್ಲಿ ಇರುವ ನಿನಗೆ ನಮಸ್ಕಾರ. ಎಲೈ ದೇವದೇವೇಶನೇ ನನ್ನನ್ನು ರಕ್ಷಿಸು. ಎಲೈ ಸನಾತನನೇ, ನೀನು ಜನ್ಮರಹಿತನಾಗಿ ಲೋಕವಿಲಕ್ಷಣನಾಗಿದ್ದೀಯೆ. ಈ ರೀತಿ ಬ್ರಾಹ್ಮಣರಿಗೆ ಶರಣ್ಯನಾದ ಆ ದೇವನಿಗೆ ಶರಣಾಗತನಾದೆನು.

ಸ್ತವ್ಯಂ ಸ್ತವಂ ಸ್ತುತವತಃ ತತ್ತಮೋ ಮೇ ಪ್ರಣಶ್ಯತ ।
ಭಯಂ ಚ ಮೇ ವ್ಯಪಗತಂ ಪಕ್ಷಿಣೋಽಂತರ್ಹಿತಾ ಭವನ್ ।
ಶೃಣೋಮಿ ಚ ಗಿರಂ ದಿವ್ಯಾಮಂತರ್ಧಾನಗತಾಂ ಶಿವಾಮ್ ॥೫೪॥

ಸ್ತೋತ್ರ ಮಾಡಲ್ಪಡಬೇಕಾದ ಸ್ತೋತ್ರವನ್ನು ಕೀರ್ತನೆ ಮಾಡಿದುದರಿಂದ ನನಗೆ ಆ ಮೋಹವು ನಷ್ಟವಾಯಿತು. ಭಯವು ನಾಶವಾಯಿತು. ಆ ಪಕ್ಷಿಗಳು ಅಂತರ್ಧಾನವನ್ನು ಹೊಂದಿದವು. ದಿವ್ಯವಾದ ಮಂಗಳವಾದ ಅಶರೀರವಾಣಿಯನ್ನು ಕೇಳಿದೆನು.

ಭಗವಾನ್

ಮಾ ಭೈರ್ಗರುತ್ಮನ್ ದಾಂತೋಽಸಿ ಪುನಃ ಸೇಂದ್ರಾ ದಿವೌಕಸಃ ।
ಸ್ವಂ ಚೈವ ಭವನಂ ಗತ್ವಾ ದ್ರಕ್ಷ್ಯಸೇ ಪುತ್ರಬಾಂಧವಾನ್ ॥೫೫॥

ಭಗವಾನ್– ಎಲೈ ಗರುಡನೇ, ಹೆದರಬೇಡ. ಇಂದ್ರಿಯನಿಗ್ರಹ ಉಳ್ಳವನಾಗಿದ್ದೀಯೆ. ನೀನು ಪುನಃ ನಿನ್ನ ಮನೆಗೆ ಹೋಗಿ ಇಂದ್ರಾದಿ ದೇವತೆಗಳನ್ನು, ನಿನ್ನ ಪುತ್ರ-ಬಾಂಧವರನ್ನು ನೋಡುವಿ.

ಸುಪರ್ಣಃ

ತತಸ್ತಸ್ಮಿನ್ ಕ್ಷಣೇನೈವ ಸಹಸೈವ ಮಹಾದ್ಯುತಿಃ ।
ಪ್ರತ್ಯದೃಶ್ಯತ ತೇಜಸ್ವೀ ಪುರಸ್ತಾತ್ ಸ ಮಮಾಂತಿಕೇ ॥೫೬॥

ಗರುಡ– ಆಗ ಆ ಕ್ಷಣದಲ್ಲಿಯೇ ನನ್ನ ಸಮೀಪದಲ್ಲಿ ಮಹಾಕಾಂತಿಯುಳ್ಳ ತೇಜಸ್ವಿಯಾದ ಅವನು ನನ್ನ ಎದುರಿಗೆ ಕಂಡನು.

ಸಮಾಗಮ್ಯ ತತಸ್ತೇನ ಶಿವೇನ ಪರಮಾತ್ಮನಾ ।
ಅಪಶ್ಯಂ ಚಾಹಮಾಯಾಂತಂ ನರನಾರಾಯಣಾಶ್ರಮೇ ।
ಚತುರ್ವ್ಯೂಹವಿನ್ಯಾಸಂ ತಂ ಚ ದೇವಂ ಸನಾತನಮ್ ॥೫೭॥

ಮಂಗಳಕರನಾದ ಆ ಪರಮಾತ್ಮನ ಜೊತೆಯಲ್ಲಿ ಸಂವಾದವನ್ನು ಹೊಂದಿ ನಾನು ನರನಾರಾಯಣಾಶ್ರಮಕ್ಕೆ ಹೋಗುತ್ತಿರುವುದನ್ನು ಗಮನಿಸಿದೆನು. ಎಂಟುಪಟ್ಟು

ಗುಣಗಳಿಂದ ಕೂಡಿದ (ಎಂಟುಪಟ್ಟು ದೊಡ್ಡದಾದ ರೂಪದಿಂದ ಕೂಡಿದ) ಸನಾತನನಾದ ಆ ದೇವನನ್ನು ನೋಡಿದೆನು.

ಯಜತಸ್ತಾನೃಷೀನ್ ದೇವಾನ್ ವದತೋ ಧ್ಯಾಯತೋ ಮುನೀನ್ ।
ಯುಕ್ತಾನ್ ಸಿದ್ಧಾನ್ ನೈಷ್ಠಿಕಾಂಶ್ಚ ಜಪತೋ ಯಜತೋ ಗೃಹೀನ್ ॥೫೮॥

ಯಾಗ ಮಾಡುವ ಆ ಋಷಿಗಳನ್ನು, ಪ್ರವಚನ ಮಾಡುವ ದೇವತೆಗಳನ್ನು, ದಾನ ಮಾಡುವ ಮುನಿಗಳನ್ನು, ಯೋಗಯುಕ್ತರಾದ ಸಿದ್ಧರನ್ನು, ಜಪವನ್ನು ಮಾಡುವ ನೈಷ್ಠಿಕರಾದ ಬ್ರಹ್ಮಚಾರಿಗಳನ್ನು, ಯಾಗವನ್ನು ಮಾಡುವ ಗೃಹಸ್ಥರನ್ನು ನೋಡಿದೆನು.

ಪುಷ್ಪಪೂರಪರಿಕ್ಷಿಪ್ತಂ ಧೂಪಿತಂ ದೀಪಿತಂ ಹುತಮ್ ।
ವಂದಿತಂ ಸಿಕ್ತಸಮ್ಮೃಷ್ಟಂ ನರನಾರಾಯಣಾಶ್ರಮಮ್ ॥೫೯॥

ಆ ನರನಾರಾಯಣಾಶ್ರಮದಲ್ಲಿ ಪುಷ್ಪಸಮೂಹವೆಲ್ಲವೂ ಹರಡಿದ್ದಿತು. ಧೂಪ ದೀಪಗಳಿಂದ ಕೂಡಿ ಹಿತವಾಗಿ ವಂದನೀಯವಾಗಿದ್ದಿತು. ನೀರನ್ನು ಚುಮುಕಿಸಿ ಸಾರಿಸಲ್ಪಟ್ಟಿದ್ದಿತು.

ತದದ್ಭುತಮಹಂ ದೃಷ್ಟ್ವಾ ವಿಸ್ಮಿತೋಽಸ್ಮಿ ತದಾಽನಘಾಃ ।
ಜಗಾಮ ಶಿರಸಾ ದೇವಂ ಪ್ರಯತೇನಾಂತರಾತ್ಮನಾ ॥೬೦॥

ಎಲೈ ಅನಘರೇ, ಆ ಅದ್ಭುತವನ್ನು ನೋಡಿ ಆಗ ನಾನು ವಿಸ್ಮಯವನ್ನು ಹೊಂದಿದೆ. ನಾನು ಏಕಾಗ್ರವಾದ ಮನಸ್ಸಿನಿಂದ ಆ ದೇವನಿಗೆ ಶಿರಸಾ ನಮಸ್ಕಾರವನ್ನು ಮಾಡಿದೆ.

ತದತ್ಯದ್ಭುತಸಂಕಾಶಂ ಕಿಮೇತದಿತಿ ಚಿಂತಯನ್ ।
ನಾಧ್ಯಗಚ್ಛಂ ಪರಂ ದಿವ್ಯಂ ತಸ್ಯ ಸರ್ವಭವಾತ್ಮನಃ ॥೬೧॥

ಇದೇನು ಅದ್ಭುತವಾದ ದೃಶ್ಯ ಎಂದು ಚಿಂತಿಸಿದರೂ ಸರ್ವಸಂಪದ್ಭರಿತನಾದ ಆ ಪರಮಾತ್ಮನ ದಿವ್ಯ ಮಹಿಮೆಯನ್ನು ತಿಳಿಯಲು ಸಾಧ್ಯವಾಗಲಿಲ್ಲ.

ಪ್ರಣಿಪತ್ಯ ಸುದುರ್ಧರ್ಷಂ ಪುನಃ ಪುನರುದೀಕ್ಷ್ಯ ಚ ।
ಶಿರಸ್ಯಂಜಲಿಮಾಧಾಯ ವಿಸ್ಮಯೋತ್ಫುಲ್ಲಲೋಚನಃ ।
ಅವೋಚಂ ತಮದೀನಾರ್ಥಂ ಶ್ರೇಷ್ಠಾನಾಂ ಶ್ರೇಷ್ಠಮುತ್ತಮಮ್ ॥೬೨॥

ನಾನು ಎಂದೂ ಸೋಲದ ಅವನಿಗೆ ನಮಸ್ಕಾರವನ್ನು ಮಾಡಿ ಪುನಃ ಪುನಃ ಅವನನ್ನು ನೋಡಿ ತಲೆ ಮೇಲೆ ಕೈಗಳನ್ನು ಜೋಡಿಸಿ ಆಶ್ಚರ್ಯದಿಂದ ಅರಳಿದ ಕಣ್ಣುಳ್ಳವನಾಗಿ ಶ್ರೇಷ್ಠರಿಗೂ ಶ್ರೇಷ್ಠನಾದ, ಸರ್ವೋತ್ತಮನಾದ ಅವನನ್ನು ಕುರಿತು ಉದಾರ ಅರ್ಥವುಳ್ಳವಾದ ಮಂತ್ರವನ್ನು ಹೇಳಿದೆನು.

ನಮಸ್ತೇ ಭಗವನ್ ದೇವ ಭೂತಭವ್ಯಭವತ್ಪ್ರಭೋ ।
ಯದೇತದದ್ಭುತಂ ದೇವ ಮಯಾ ದೃಷ್ಟಂ ತ್ವದಾಶ್ರಯಮ್ ।
ಅನಾದಿಮಧ್ಯಪರ್ಯಂತಂ ಕಿಂ ತಚ್ಚಂಸಿತುಮರ್ಹಸಿ ॥೬೩॥

ಎಲೈ ದೇವನೇ, ಭಗವಂತನೇ, ಭೂತ-ಭವ್ಯ-ಭವತ್ಪ್ರಭುವೇ, ನಿನಗೆ ನಮಸ್ಕಾರ. ಎಲೈ ದೇವನೇ, ನಿನಗೆ ಸಂಬಂಧಿಸಿದ ನಾನು ನೋಡಿದ ಆದಿಮಧ್ಯಾಂತರಹಿತವಾದ ಈ ಅದ್ಭುತವಾದ ದೃಶ್ಯವು ಏನೆಂದು ತಿಳಿಸುವವನಾಗು.

ಯದಿ ಜಾನಾಸಿ ಮಾಂ ಭಕ್ತಂ ಯದಿ ವಾऽನುಗ್ರಹೋ ಮಯಿ ।
ಶಂಸ ಸರ್ವಮಶೇಷೇಣ ಶ್ರೋತವ್ಯಂ ಯದಿ ಚೇನ್ಮಯಾ ॥೬೪॥

ನನ್ನನ್ನು ನೀನು ಭಕ್ತನೆಂದು ಭಾವಿಸಿದರೆ ಮತ್ತು ನನ್ನಲ್ಲಿ ನಿನ್ನ ಅನುಗ್ರಹವಿದ್ದರೆ ಮತ್ತು ನನಗೆ ಎಲ್ಲವನ್ನೂ ಪೂರ್ಣವಾಗಿ ಕೇಳುವ ಅರ್ಹತೆ ಇದ್ದರೆ ನನಗೆ ಹೇಳು.

ಸ್ವಭಾವಸ್ತವ ದುರ್ಜ್ಞೇಯಃ ಪ್ರಾದುರ್ಭಾವೋ ಭವಸ್ಯ ಚ ।
ಭವದ್ಭೂತಭವಿಷ್ಯೇಶ ಸರ್ವಥಾ ಗಹನಂ ಭವಾನ್ ॥೬೫॥

ನಿನ್ನ ಸ್ವಭಾವವಾಗಲೀ, ನಿನ್ನ ಸಂಪತ್ತಿನ ಪ್ರಾದುರ್ಭಾವವಾಗಲೀ ತಿಳಿಯಲು ಅಸಾಧ್ಯವಾದುದು. ಎಲೈ ವರ್ತಮಾನ-ಭೂತ-ಭವಿಷ್ಯತ್ ಪ್ರಭುವೇ, ನೀನು ಸರ್ವಥಾ ತಿಳಿಯಲು ಬಹಳ ಕಷ್ಟಸಾಧ್ಯನಾದವನು.

ಬ್ರೂಹಿ ಸರ್ವಮಶೇಷೇಣ ತದಾಶ್ಚರ್ಯಂ ಮಹಾಮುನೇ ।
ಕಿಂ ತದತ್ಯದ್ಭುತಂ ವೃತ್ತಂ ತೇಷ್ವಗ್ನಿಷು ಸಮಂತತಃ ॥೬೬॥

ಎಲೈ ಮಹಾಮುನಿಯೇ, ಆ ಅಗ್ನಿಗಳಲ್ಲಿ ಸುತ್ತಲೂ ನಡೆದ ಅದ್ಭುತವಾದ, ಆಶ್ಚರ್ಯಕರವಾದ ಘಟನೆಯು ಏನೆಂದು ಹೇಳು.

ಕಾನಿ ತಾನ್ಯಗ್ನಿಹೋತ್ರಾಣಿ ಕೇಷಾಂ ಶಬ್ದಃ ಶ್ರುತೋ ಮಯಾ ।
ಶೃಣ್ವತಾಂ ಬ್ರಹ್ಮ ಸತತಮದೃಶ್ಯಾನಾಂ ಮಹಾತ್ಮನಾಮ್ ॥೬೭॥

ಆ ಅಗ್ನಿಹೋತ್ರಗಳು ಯಾವುವು? ನಾನು ಕೇಳಿದ ಶಬ್ದವು ಯಾವುದು? ಸತತವಾಗಿ ಅದೃಶ್ಯರಾಗಿ ವೇದವನ್ನು ಪಠಿಸಿದ ಆ ಮುನಿಗಳು ಯಾರು?

ಏತನ್ಮೇ ಭಗವನ್ ಕೃಷ್ಣ ಬ್ರೂಹಿ ಸರ್ವಮಶೇಷತಃ ।
ಗೃಣಂತ್ಯಗ್ನಿಸಮೀಪೇಷು ಕೇ ಚ ತೇ ಬ್ರಹ್ಮರಾಶಯಃ ॥೬೮॥

ಎಲೈ ಭಗವಂತನಾದ ಕೃಷ್ಣನೇ, ನನಗೆ ಎಲ್ಲವನ್ನೂ ವಿಸ್ತಾರವಾಗಿ ಹೇಳು. ಅಗ್ನಿ ಸಮೀಪದಲ್ಲಿ ವೇದರಾಶಿಯಂತೆ ಕುಳಿತು ವೇದವನ್ನು ಉಚ್ಚಾರ ಮಾಡಿದ ಆ ಮುನಿಗಳು ಯಾರು?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ
ಶ್ರೀನಾರಾಯಣಸ್ತುತಿರ್ನಾಮ ಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೊಂದನೆಯ ಅಧ್ಯಾಯ

ನಾರಾಯಣನಿಂದ ಗರುಡನಿಗೆ ತನ್ನ ಸ್ವರೂಪದ ಉಪದೇಶ

ಶ್ರೀಭಗವಾನ್

ಮಾಂ ನ ದೇವಾ ನ ಗಂಧರ್ವಾ ನ ಪಿಶಾಚಾ ನ ರಾಕ್ಷಸಾಃ ।
ವಿದುಸ್ತತ್ತ್ವೇನ ತತ್ತ್ವಸ್ಥಂ ಸೂಕ್ಷ್ಮಾತ್ಮಾನಮವಸ್ಥಿತಮ್ ॥೧॥

ಶ್ರೀಭಗವಾನ್– ಎಲ್ಲ ತತ್ತ್ವಗಳಲ್ಲಿ ಸೂಕ್ಷ್ಮರೂಪದಲ್ಲಿರುವ ನನ್ನನ್ನು ದೇವತೆಗಳಾಗಲೀ, ಗಂಧರ್ವರಾಗಲೀ, ಪಿಶಾಚಿಗಳಾಗಲೀ, ರಾಕ್ಷಸರಾಗಲೀ ಸರಿಯಾಗಿ ತಿಳಿದಿರುವುದಿಲ್ಲ.

ಚತುರ್ಧಾಽಹಂ ವಿಭಕ್ತಾತ್ಮಾ ಲೋಕಾನಾಂ ಹಿತಕಾಮ್ಯಯಾ ।
ಭೂತಭವ್ಯಭವಿಷ್ಯಾದಿರನಾದಿರ್ವಿಶ್ವತ್ತಮಃ ॥೨॥

ಭೂತ-ಭವ್ಯ-ಭವಿಷ್ಯ ವಸ್ತುಗಳಿಗೆ ಕಾರಣನಾದ, ಸ್ವತಃ ಅನಾದಿಯಾದ, ಜಗತ್ಸೃಷ್ಟಿ ಕಾರಣಗಳಲ್ಲಿ ಶ್ರೇಷ್ಠನಾದ ನಾನು ಲೋಕಕ್ಕೆ ಹಿತವನ್ನು ಬಯಸಿ ನಾಲ್ಕು ರೂಪಗಳನ್ನು ಧರಿಸಿದ್ದೇನೆ.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ।
ಮನೋ ಬುದ್ಧಿಶ್ಚ ತೇಜಶ್ಚ ತಮಃ ಸತ್ತ್ವಂ ರಜಸ್ತಥಾ ॥೩॥

ಪ್ರಕೃತಿರ್ವಿಕೃತಿಶ್ಚೇತಿ ವಿದ್ಯಾವಿದ್ಯೇ ಶುಭಾಶುಭೇ ।
ಮತ್ತ ಏತಾನಿ ಜಾಯಂತೇ ನಾಹಮೇಭ್ಯಃ ಕಥಂಚನ ॥೪॥

ಭೂಮಿ, ವಾಯು, ಆಕಾಶ, ಜಲ, ಜ್ಯೋತಿ, ಮನಸ್ಸು, ಬುದ್ಧಿ, ತೇಜಸ್ಸು, ಸತ್ವ-ರಜಸ್-ತಮೋ ಗುಣಗಳು, ಪ್ರಕೃತಿ, ವಿಕಾರ, ಜ್ಞಾನ, ಅಜ್ಞಾನ, ಶುಭ, ಅಶುಭ - ಇವೆಲ್ಲವೂ ನನ್ನಿಂದಲೇ ಜನಿಸುತ್ತವೆ. ನಾನು ಇವುಗಳಿಂದ ಯಾವ ರೀತಿಯಿಂದಲೂ ಜನಿಸುವುದಿಲ್ಲ.

ಸ ಕಿಂಚಿಚ್ಛ್ರೇಯಸಾ ಯುಕ್ತಃ ಶ್ರೇಷ್ಠಭಾವಂ ವ್ಯವಸ್ಯತಿ ।
ಧರ್ಮಯುಕ್ತಂ ಚ ಪುಣ್ಯಂ ಚ ಸೋಽಹಮಸ್ಮಿ ನಿರಾಮಯಃ ॥೫॥

ಯಾವ ವಸ್ತುವು ಗುಣಗಳನ್ನು ಹೊಂದಿ ಶ್ರೇಷ್ಠವಾಗಿರುತ್ತದೆಯೋ, ಧರ್ಮಯುಕ್ತವೂ ಮತ್ತು ಪವಿತ್ರವೂ ಆಗಿರುತ್ತದೆಯೋ ಅಂತಹ ವಸ್ತುವಿನಲ್ಲಿ ನಿರ್ದೋಷನಾದ ನಾನು ಇರುತ್ತೇನೆ.

ಯತ್ ಸ್ವಭಾವಾತ್ಮತತ್ತ್ವಜ್ಞೈಃ ಕಾರಣೈರುಪಲಕ್ಷ್ಯತೇ ।
ಅನಾದಿಮಧ್ಯನಿಧನಃ ಸೋಽಂತರಾತ್ಮಾಽಸ್ಮಿ ಶಾಶ್ವತಃ ॥೬॥

ಸ್ವತಂತ್ರವಸ್ತುವನ್ನು, ಆತ್ಮತತ್ತ್ವವನ್ನು ತಿಳಿದವರು ಕಾರಣಗಳಿಂದ (ಹೇತುಗಳಿಂದ) ಯಾರನ್ನು ತಿಳಿಯುತ್ತಾರೆಯೋ ಅಂತಹ ಆದಿ-ಮಧ್ಯ-ಅಂತಶೂನ್ಯನಾದ, ಶಾಶ್ವತನಾದ ಅಂತರಾತ್ಮನು ನಾನಾಗಿದ್ದೇನೆ.

ಯತ್ತು ಮೇ ಪರಮಂ ಗುಹ್ಯಂ ರೂಪಂ ಸೂಕ್ಷ್ಮಾರ್ಥದರ್ಶಿಭಿಃ ।
ಗೃಹ್ಯತೇ ಸೂಕ್ಷ್ಮಭಾವಜ್ಞೈಃ ಸೋಽವಿಭಾವ್ಯೋಽಸ್ಮಿ ಶಾಶ್ವತಃ ॥೭॥

ಸೂಕ್ಷ್ಮದರ್ಶಿಗಳಾದ ಜ್ಞಾನಿಗಳಿಂದ ಯಾವ ನನ್ನ ಅತ್ಯಂತ ಶ್ರೇಷ್ಠವಾದ ಮತ್ತು ರಹಸ್ಯವಾದ ರೂಪವು ತಿಳಿಯಲ್ಪಡುತ್ತದೆಯೋ ಅಂತಹ ಶಾಶ್ವತನಾದ ನಾನು ಧ್ಯಾನಿಸಲ್ಪಡಬೇಕು.

ಯತ್ತು ಮೇ ಪರಮಂ ಗುಹ್ಯಂ ಯೇ(ತೇ)ನ ವ್ಯಾಪ್ತಮಿದಂ ಜಗತ್ ।
ಸೋಽಹಂ ಗತಃ ಸರ್ವಸತ್ತ್ವಃ ಸರ್ವಸ್ಯ ಪ್ರಭವೋಽವ್ಯಯಃ ॥೮॥

ನನ್ನ ಪರಮಮುಖ್ಯವಾದ ರೂಪವೇನಿದೆಯೋ ಅದರಿಂದ ಈ ಜಗತ್ತು ವ್ಯಾಪ್ತವಾಗಿದೆ. ಸರ್ವಗುಣಪೂರ್ಣನಾದ, ಸರ್ವ ವಸ್ತುಗಳ ಉತ್ಪತ್ತಿ-ವಿನಾಶಗಳಿಗೆ ಕಾರಣನಾದ ನಾನು ಈ ರೀತಿ ಇದ್ದೇನೆ.

ಮತ್ತೋ ಜಾತಾನಿ ಭೂತಾನಿ ಮಯಾ ಧಾರ್ಯಂತ್ಯಹರ್ನಿಶಮ್ ।
ಮಯ್ಯೇವ ವಿಲಯಂ ಯಾಂತಿ ಪ್ರಲಯೇ ಪನ್ನಗಾಶನ ॥೯॥

ನನ್ನಿಂದ ಜನಿಸಿದ ಎಲ್ಲ ಭೂತಗಳು ಹಗಲೂ-ರಾತ್ರಿಯೂ ನನ್ನಿಂದಲೇ ಧರಿಸಲ್ಪಡುತ್ತವೆ. ಎಲೈ ಪನ್ನಗಾಶನನಾದ ಗರುಡನೇ, ಪ್ರಳಯ ಕಾಲದಲ್ಲಿ ನನ್ನಲ್ಲೇ ವಿಲಯವನ್ನು ಹೊಂದುತ್ತವೆ.

ಯೋ ಮಾಂ ಯಥಾ ವೇದಯತಿ ತಸ್ಯ ತಸ್ಯಾಸ್ಮಿ ಕಾಶ್ಯಪ ।
ಮನೋಬುದ್ಧಿಗತಃ ಶ್ರೇಯೋ ವಿದಧಾಮಿ ವಿಹಂಗಮ ॥೧೦॥

ಎಲೈ ಕಶ್ಯಪಪುತ್ರನೇ, ಯಾರು ನನ್ನನ್ನು ಹೇಗೆ ಉಪಾಸನೆ ಮಾಡುತ್ತಾರೆಯೋ ಅವರವರಿಗೆ ನಾನು ಹಾಗೆಯೇ ಇರುತ್ತೇನೆ (ಕಾಣಿಸುತ್ತೇನೆ). ಎಲೈ ಪಕ್ಷಿಯೇ, ನಾನು ಮನಸ್ಸು, ಬುದ್ಧಿಗಳಲ್ಲಿದ್ದು ಅವರಿಗೆ ಶ್ರೇಯಸ್ಸನ್ನುಂಟು ಮಾಡುತ್ತೇನೆ.

ಮಾಂ ತು ಜ್ಞಾತುಂ ಕೃತಾ ಬುದ್ಧಿರ್ಭವತಾ ಪಕ್ಷಿಸತ್ತಮ ।
ಶೃಣು ಯೋಽಹಂ ಯತಶ್ಚಾಹಂ ಯದರ್ಥಶ್ಚಾಹಮುದ್ಯತಃ ॥೧೧॥

ಎಲೈ ಪಕ್ಷಿಶ್ರೇಷ್ಠನೇ, ನನ್ನನ್ನು ತಿಳಿಯಲು ನೀನು ನಿಶ್ಚಯಿಸಿದೆ. ನಾನು ಯಾರು? ಎಲ್ಲಿಂದ ಬಂದೆ? ಏನು ಮಾಡಲು ಉದ್ಯುಕ್ತನಾಗಿದ್ದೇನೆ ಎಂಬುದನ್ನು ಕೇಳು.

ಯೇ ಕೇಚಿನ್ನಿಯತಾತ್ಮಾನಸ್ತ್ರೇತಾಗ್ನಿಪರಮಾರ್ಚಿತಾಃ ।
ಅಗ್ನಿಕಾರ್ಯಪರಾ ನಿತ್ಯಂ ಜಪಹೋಮಪರಾಯಣಾಃ ॥೧೨॥

ಆತ್ಮನ್ಯಗ್ನೀನ್ ಸಮಾಧಾಯ ನಿಯತಾ ನಿಯತೇಂದ್ರಿಯಾಃ ।
ಅನನ್ಯಮನಸಸ್ತೇ ಮಾಂ ಸರ್ವೇ ವೈ ಸಮುಪಾಸತೇ ॥೧೩॥

ಯಾವ ದ್ವಿಜರು ಮನೋನಿಗ್ರಹವನ್ನು ಹೊಂದಿ, ತ್ರೇತಾಗ್ನಿಯ ಉಪಾಸನೆಯನ್ನು ಮಾಡಿ, ನಿತ್ಯವೂ ಅಗ್ನಿಕಾರ್ಯವನ್ನು ಮಾಡಿ, ಜಪಹೋಮ-ಪಾರಾಯಣಗಳನ್ನು ಮಾಡಿ, ತಮ್ಮಲ್ಲಿಯೇ ಅಗ್ನಿಯನ್ನು ಆರೋಪ ಮಾಡಿಕೊಂಡು, ಇಂದ್ರಿಯಜಯವನ್ನು ಹೊಂದಿ ಬೇರೆ ವಿಷಯವನ್ನು ಚಿಂತಿಸುವುದಿಲ್ಲವೋ ಅವರೆಲ್ಲರೂ ನನ್ನನ್ನು ಉಪಾಸನೆ ಮಾಡುತ್ತಾರೆ.

ಯಜಂತೋ ಜಪಯಜ್ಞೈರ್ಮಾಂ ಮಾನಸೈಶ್ಚ ಸುಸಂಯತಾಃ ।
ಅಗ್ನೀನಭ್ಯುದ್ಯಯುಃ ಶಶ್ವದ್ ಅಗ್ನಿಷ್ವೇವಾಭಿಸಂಸ್ಥಿತಾಃ ॥೧೪॥

ಒಳ್ಳೆಯ ಸಂಯಮದಿಂದ ಕೂಡಿ, ಮಾನಸ ಯಜ್ಞಗಳಿಂದಲೂ, ಜಪ ಯಜ್ಞಗಳಿಂದಲೂ ನನ್ನನ್ನು ಪೂಜಿಸುತ್ತಾ, ಅಗ್ನಿಯಲ್ಲಿ ಉದ್ಯುಕ್ತರಾದ ಅವರು ಯಾವಾಗಲೂ ಅಗ್ನಿಯಲ್ಲಿರುವ ನನ್ನನ್ನೇ ಉಪಾಸನೆ ಮಾಡಿ ಹೊಂದುತ್ತಾರೆ.

ಅನನ್ಯಕಾರ್ಯಾಃ ಶುಚಯೋ ನಿತ್ಯಮಗ್ನಿಪರಾಯಣಾಃ ।
ಯ ಏವಂಬುದ್ಧಯೋ ಧೀರಾಸ್ತೇ ಮಾಂ ಗಚ್ಛಂತಿ ತಾದೃಶಾಃ ॥೧೫॥

ನನ್ನ ಪೂಜೆಯನ್ನು ಬಿಟ್ಟು ಬೇರೆ ಕಾರ್ಯವನ್ನು ಮಾಡದೆ, ಶುದ್ಧರಾಗಿ ನಿತ್ಯವೂ ಅಗ್ನಿಪರಾಯಣರಾಗಿ, ಇಂತಹ ಬುದ್ಧಿಯನ್ನು ಹೊಂದಿದ ಧೀರರು ನನ್ನನ್ನು ಹೊಂದುತ್ತಾರೆ.

ಅಕಾಮಹತಸಂಕಲ್ಪಾ ಜ್ಞಾನೇ ನಿತ್ಯಂ ಸಮಾಹಿತಾಃ ।
ಆತ್ಮನ್ಯಗ್ನೀನ್ ಸಮಾಧಾಯ ನಿರಾಹಾರಾ ನಿರಾಶಿಷಃ ॥೧೬॥

ವಿಷಯೇಷು ನಿರಾರಂಭಾ ವಿಮುಕ್ತಾ ಜ್ಞಾನಚಕ್ಷುಷಃ ।
ಅನನ್ಯಮನಸೋ ಧೀರಾಃ ಸ್ವಭಾವನಿಯಮಾನ್ವಿತಾಃ ॥೧೭॥

ಯಾರ ಒಳ್ಳೆಯ ಸಂಕಲ್ಪಗಳು ಕಾಮದಿಂದ ಹತವಾಗುವುದಿಲ್ಲವೋ, ಯಾರು ಯಾವಾಗಲೂ ಜ್ಞಾನದಲ್ಲಿ ನಿಷ್ಠೆಯನ್ನು ಹೊಂದಿರುತ್ತಾರೆಯೋ, ತಮ್ಮಲ್ಲಿಯೇ ಅಗ್ನಿಯನ್ನು

ಆರೋಪ ಮಾಡಿಕೊಂಡು, ಅಲ್ಪಾಹಾರರಾಗಿ, ಆಸೆಗಳನ್ನು ತೊರೆದು, ವಿಷಯಗಳಲ್ಲಿ ಪ್ರಸಕ್ತರಾಗದೆ ಜ್ಞಾನಚಕ್ಷುಸ್ಸನ್ನು ಹೊಂದಿ, ಅನನ್ಯ ಮನಸ್ಕರಾಗಿ ಸ್ವಾಭಾವಿಕವಾದ ನಿಯಮಗಳಿಂದ ಕೂಡಿರುತ್ತಾರೆಯೋ ಅಂತಹ ಧೀರರು ವಿಮುಕ್ತರಾಗುತ್ತಾರೆ.

ಯತ್ತದ್ ವಿಯತಿ ದೃಷ್ಟಂ ತತ್ ಸರಃ ಪದ್ಮೋತ್ಪಲಾಯುತಮ್ ।
ತತ್ರಾಗ್ನಯಃ ಸನ್ನಿಹಿತಾ ದೀಪ್ಯಂತೇ ಸ್ಮ ನಿರಿಂಧನಾಃ ॥೧೮॥

ನೀನು ಆಕಾಶದಲ್ಲಿ ಪದ್ಮೋತ್ಪಲ ಪುಷ್ಪಗಳಿಂದ ಕೂಡಿದ ಸರೋವರವನ್ನು ನೋಡಿದೆಯಷ್ಟೆ? ಅಲ್ಲಿ ಅಗ್ನಿಗಳು ಸನ್ನಿಹಿತವಾಗಿವೆ. ಇಂಧನವಿಲ್ಲದೆಯೇ ಅವು ಉರಿಯುತ್ತವೆ.

ಜ್ಞಾನಾಮಲಾಶಯಾಸ್ತಸ್ಮಿನ್ ಯೇ ಚ ಚಂದ್ರಾಂಶುನಿರ್ಮಲಾಃ ।
ಉಪಾಸೀನಾ ಗೃಣಂತೋऽಗ್ನಿಂ ಪ್ರಸ್ಪಷ್ಟಾಕ್ಷರಭಾಷಿಣಃ ।
ಆಕಾಂಕ್ಷಮಾಣಾಃ ಶುಚಯಸ್ತೇಷ್ವಗ್ನಿಷು ವಿಹಂಗಮ ॥೧೯॥

ಎಲೈ ಪಕ್ಷಿಯೇ, ಆ ಅಗ್ನಿಯ ಸಮೀಪದಲ್ಲಿ ಕುಳಿತಿದ್ದ ಚಂದ್ರಕಿರಣಗಳಂತೆ ನಿರ್ಮಲವಾದ, ಜ್ಞಾನದಿಂದ ಪವಿತ್ರವಾದ ಮನಸ್ಸುಳ್ಳ, ಅಸ್ಪಷ್ಟವಾದ ಅಕ್ಷರದಿಂದ ಸ್ತೋತ್ರ ಮಾಡುತ್ತಿದ್ದ ಶುಚಿಗಳಾದ ಪುರುಷರು ಆ ಅಗ್ನಿಯಲ್ಲಿ ಇರುವ ನನ್ನನ್ನೇ ಬಯಸುವವರು.

ಯೇ ಮಯಾ ಭಾವಿತಾತ್ಮಾನೋ ಮಯ್ಯೇವಾಭಿರತಾಃ ಸದಾ ।
ಉಪಾಸತೇ ಚ ಮಾಮೇವ ಜ್ಯೋತಿರ್ಭೂತಾ ನಿರಾಮಯಾಃ ॥೨೦॥

ತೈರ್ಹಿ ತತ್ರೈವ ವಸ್ತವ್ಯಂ ನೀರಾಗಾತ್ಮಭಿರಚ್ಯುತೈಃ ॥೨೧॥

ಯಾರ ಮನಸ್ಸನ್ನು ನಾನು ಪವಿತ್ರೀಕರಿಸಿದ ನಂತರ ಅವರು ನನ್ನಲ್ಲೇ ರತರಾಗಿ, ನಿರ್ದುಷ್ಟರಾಗಿ, ಜ್ಯೋತೀರೂಪವನ್ನು ಧರಿಸಿದ ನನ್ನನ್ನೇ ಉಪಾಸನೆ ಮಾಡುತ್ತಾರೆಯೋ ಅಂತಹ ವಿರಾಗಿಗಳಾದ ಅಚ್ಯುತವಾದ ಮನಸ್ಸಿನಿಂದ ಕೂಡಿದವರು ಅಲ್ಲಿಯೇ ವಾಸ ಮಾಡಬೇಕು.

ನಿರಾಹಾರಾ ಹ್ಯನಿಷ್ಯಂದಾಃ ಚಂದ್ರಾಂಶುಸದೃಶಪ್ರಭಾಃ ।
ನಿರ್ಮಲಾ ನಿರಹಂಕಾರಾ ನಿರಾಲಂಬಾ ನಿರಾಶಿಷಃ ।
ಮದ್ಭಕ್ತಾಃ ಸತತಂ ತೇ ವೈ ಭಕ್ತಸ್ತಾನಪಿ ಚಾಪ್ಯಹಮ್ ॥೨೨॥

ಅಲ್ಪಾಹಾರವನ್ನು ಹೊಂದಿ, ಸ್ವೇದ ಮೊದಲಾದ ದೋಷಗಳಿಂದ ರಹಿತರಾಗಿ, ಚಂದ್ರಕಿರಣಗಳ ಕಾಂತಿಯನ್ನು ಹೊಂದಿ ನಿರ್ಮಲರಾಗಿ, ನಿರಹಂಕಾರರಾಗಿ, ನನ್ನನ್ನು ಬಿಟ್ಟು ಬೇರೆಯವರನ್ನು ಆಶ್ರಯಿಸದೆ, ಎಲ್ಲ ಆಸೆಗಳನ್ನು ತೊರೆದ ನನ್ನ ಭಕ್ತರು ಯಾರಿದ್ದಾರೆಯೋ ಅವರಲ್ಲಿ ನಾನು ಪ್ರೀತಿಯನ್ನು ಹೊಂದಿದ್ದೇನೆ.

ಚತುರ್ಧಾऽಹಂ ವಿಭಕ್ತಾತ್ಮಾ ಚರಾಮಿ ಜಗತೋ ಹಿತಃ ।
ಲೋಕಾನಾಂ ಧಾರಣಾರ್ಥಾಯ ವಿಧಾನಂ ವಿದಧಾಮಿ ಚ ॥೨೩॥

ಯಥಾವತ್ ತದಶೇಷೇಣ ಶ್ರೋತುಮರ್ಹತಿ ಮೇ ಭವಾನ್ ॥೨೪॥

ನಾನು ನಾಲ್ಕು ರೂಪಗಳನ್ನು ಧರಿಸಿ ಜಗತ್ತಿಗೆ ಹಿತವನ್ನು ಮಾಡಲು ಸಂಚರಿಸುತ್ತೇನೆ. ಲೋಕವನ್ನು ಧಾರಣೆ ಮಾಡುವ ಪ್ರಕಾರವನ್ನು ರೂಪಿಸುತ್ತೇನೆ. ನೀನು ಅದೆಲ್ಲವನ್ನೂ ಸರಿಯಾಗಿ ಕೇಳಬೇಕು.

ಏಕಾ ಮೂರ್ತಿರ್ನಿರ್ಗುಣಾತ್ಮಾ ಯೋಗಂ ಪರಮಮಾಸ್ಥಿತಾ ।
ದ್ವಿತೀಯಾ ಸೃಜತೇ ತಾತ ಭೂತಗ್ರಾಮಂ ಚರಾಚರಮ್ ॥೨೫॥

ಒಂದು ರೂಪವು ಗುಣಗಳನ್ನು ಮೀರಿದ ಸ್ವರೂಪವುಳ್ಳದ್ದಾಗಿ ಪರಮಯೋಗವನ್ನು ಮಾಡುತ್ತದೆ. ಎಲೈ ಪ್ರೀತಿಪಾತ್ರನೇ, ದ್ವಿತೀಯಮೂರ್ತಿಯು ಚರಾಚರವಾದ ಜಗತ್ತನ್ನು ಸೃಷ್ಟಿಸುತ್ತದೆ.

ಸೃಷ್ಟಂ ಸಂಹರತೇ ಚೈಕಾ ಜಗತ್ ಸ್ಥಾವರಜಂಗಮಮ್ ।
ಜಾತಾತ್ಮನಿಷ್ಠಾ ಕ್ಷಪಯನ್ ಮೋಹಯನ್ನಿವ ಮಾಯಯಾ ।
ಕ್ಷಿಪಂತೀ ಮೋಹಯಂತೀ ಚ ಹ್ಯಾತ್ಮನಿಷ್ಠಾ ಸ್ವಮಾಯಯಾ ॥೨೬॥

ಇನ್ನೊಂದು ಮೂರ್ತಿಯು ಸೃಷ್ಟವಾದ ಸ್ಥಾವರ-ಜಂಗಮಾತ್ಮಕವಾದ ಜಗತ್ತನ್ನು ಸಂಹರಿಸುತ್ತದೆ. ತನ್ನಲ್ಲೇ ನಿಷ್ಠೆಯನ್ನು ಹೊಂದಿದ ಆ ಮೂರ್ತಿಯು ತನ್ನ ಸಾಮರ್ಥ್ಯದಿಂದ ಜಗತ್ತನ್ನು ಮೋಹಗೊಳಿಸಿ ನಾಶಪಡಿಸುತ್ತದೆ. ತನ್ನ ಮಹಿಮೆಯಲ್ಲಿಯೇ ನಿಷ್ಠೆಯನ್ನು ಹೊಂದಿ ತನ್ನ ಸಾಮರ್ಥ್ಯದಿಂದಲೇ ಜಗತ್ತನ್ನು ಮೋಹಿಸುತ್ತದೆ ಮತ್ತು ನಾಶಗೊಳಿಸುತ್ತದೆ.

ಚತುರ್ಥೀ ಮೇ ಮಹಾಮೂರ್ತಿರ್ಜಗದ್ವೃದ್ಧಿಂ ದದಾತಿ ಸಾ ।
ರಕ್ಷತೇ ಚಾಪಿ ನಿಯತಾ ಸೋಽಹಮಸ್ಮಿ ನಭಶ್ಚರಃ ॥೨೭॥

ನನ್ನ ನಾಲ್ಕನೆಯ ರೂಪವು ಜಗತ್ತಿಗೆ ಅಭಿವೃದ್ಧಿಯನ್ನು ಕೊಡುತ್ತದೆ. ಜಗತ್ತಿನ ರಕ್ಷಣೆಯನ್ನು ಮಾಡುತ್ತದೆ. ಅಂತಹ ನಾನು ಆಕಾಶದಲ್ಲಿ ಸಂಚರಿಸುತ್ತೇನೆ.

ಮಯಾ ಸರ್ವಮಿದಂ ವ್ಯಾಪ್ತಂ ಮಯಿ ಸರ್ವಂ ಪ್ರತಿಷ್ಠಿತಮ್ ।
ಅಹಂ ಸರ್ವಜಗದ್ಬೀಜಂ ಸರ್ವತ್ರ ಗತಿರವ್ಯಯಃ ॥೨೮॥

ನನ್ನಿಂದ ಎಲ್ಲವೂ ವ್ಯಾಪ್ತವಾಗಿದೆ. ಎಲ್ಲವೂ ನನ್ನಲ್ಲಿ ಪ್ರತಿಷ್ಠಿತವಾಗಿದೆ. ಎಲ್ಲ ಜಗತ್ತಿಗೆ ನಾನು ಬೀಜದಂತೆ ಪ್ರಧಾನಕಾರಣನು. ನನಗೆ ಸರ್ವತ್ರ ಗತಿ ಇದೆ. ನಾನು ಅವ್ಯಯನಾದವನು.

ಯಾನಿ ತಾನ್ಯಗ್ನಿಹೋತ್ರಾಣಿ ಯೇ ಚ ಚಂದ್ರಾಂಶುರಾಶಯಃ ।
ಗೃಣಂತಿ ವೇದಂ ಸತತಂ ತೇಷ್ವಗ್ನಿಷು ವಿಹಂಗಮ ॥೨೯॥

ಕ್ರಮೇಣ ಮಾಂ ಸಮಾಯಾಂತಿ ಸುಖಿನೋ ಜ್ಞಾನಸಂಯುತಾಃ ।
ತೇಷಾಮಹಂ ತಪೋ ದೀಪ್ತಂ ತೇಜಃ ಸಮ್ಯಕ್ ಸಮಾಹಿತಮ್ ।
ನಿತ್ಯಂ ತೇ ಮಯಿ ವರ್ತಂತೇ ತೇಷು ಚಾಹಮತಂದ್ರಿತಃ ॥೩೦॥

ಅಲ್ಲಿ ಯಾವ ಅಗ್ನಿಹೋತ್ರಗಳಿದ್ದವೋ ಚಂದ್ರಕಿರಣಗಳಂತೆ ಶುಭ್ರವಾಗಿ ಇದ್ದು ಆ ಅಗ್ನಿಗಳಲ್ಲಿ ಇರುವ ನನ್ನನ್ನು ಯಾರು ಸತತವಾಗಿ ವೇದಗಳಿಂದ ಸ್ತೋತ್ರ ಮಾಡುತ್ತಿದ್ದರೋ ಎಲೈ ಪಕ್ಷಿಯೇ, ಅವರೆಲ್ಲರೂ ಜ್ಞಾನಸಂಯುಕ್ತರಾಗಿ ಸುಖವನ್ನು ಹೊಂದಿ ಕ್ರಮವಾಗಿ ನನ್ನನ್ನು ಹೊಂದುತ್ತಾರೆ. ನಾನು ಅವರಿಗೆ ದೀಪ್ತವಾದ ತಪಸ್ಸನ್ನೂ, ಒಳ್ಳೆಯ ತೇಜಸ್ಸನ್ನೂ ದಯಪಾಲಿಸುತ್ತೇನೆ. ಅವರು ಯಾವಾಗಲೂ ಮನಸ್ಸಿನಿಂದ ನನ್ನಲ್ಲೇ ಇರುತ್ತಾರೆ. ನಾನೂ ಸಹ ಆಲಸ್ಯವಿಲ್ಲದೆ ಅವರಲ್ಲಿ ಇರುತ್ತೇನೆ.

ಸರ್ವತೋ ಮುಕ್ತಸಂಗೇನ ಮಯ್ಯನನ್ಯಸಮಾಧಿನಾ ।
ಶಕ್ಯಃ ಸಮಾಸಾದಯಿತುಮಹಂ ವೈ ಜ್ಞಾನಚಕ್ಷುಷಾ ॥೩೧॥

ಎಲ್ಲ ಕಡೆಗಳಲ್ಲಿಯೂ ಎಲ್ಲ ವಸ್ತುಗಳಲ್ಲಿಯೂ ಆಸೆಯನ್ನು ತೊರೆದು ಅಚಲವಾದ ಸಮಾಧಿಯಿಂದ ಮತ್ತು ಜ್ಞಾನದೃಷ್ಟಿಯಿಂದ ನನ್ನನ್ನು ಉಪಾಸನೆ ಮಾಡುವ ಪುರುಷನಿಂದ ನಾನು ಹೊಂದಲ್ಪಡುತ್ತೇನೆ.

ಮಾಂ ಸ್ಥೂಲದರ್ಶನಂ ವಿದ್ಧಿ ಜಗತಃ ಕಾರ್ಯಕಾರಣಮ್ ।
ಮತ್ತಶ್ಚ ಸಂಪ್ರಸೂತಾನ್ ವೈ ವಿದ್ಧಿ ಲೋಕಾನ್ ಸದೈವತಾನ್ ॥೩೨॥

ಜಗತ್ತಿನ ಎಲ್ಲ ಕಾರ್ಯಗಳಿಗೂ ಕಾರಣನಾದ ನನ್ನನ್ನು ಸ್ಥೂಲರೂಪವನ್ನು ಧರಿಸಿದವನೆಂದು ತಿಳಿ. ದೇವತೆಗಳಿಂದ ಸಹಿತವಾದ ಲೋಕಗಳು ನನ್ನಿಂದಲೇ ಜನಿಸಿವೆ ಎಂದು ತಿಳಿ.

ಮಯಾ ಚಾಪಿ ಚತುರ್ಧಾऽऽತ್ಮಾ ವಿಭಕ್ತಃ ಪ್ರಾಣಿಷು ಸ್ಥಿತಃ ।
ಆತ್ಮಭೂತೋ ವಾಸುದೇವೋ ಹ್ಯನಿರುದ್ಧೋ ಮತೌ ಸ್ಥಿತಃ ॥೩೩॥

ನಾನು ನನ್ನ ರೂಪವನ್ನು ನಾಲ್ಕು ವಿಭಾಗವನ್ನಾಗಿ ಮಾಡಿ ಜೀವರಲ್ಲಿ ಇದ್ದೇನೆ. ಜೀವರ ಆತ್ಮದಲ್ಲಿ ವಾಸುದೇವನಾಗಿದ್ದೇನೆ. ಬುದ್ಧಿಯಲ್ಲಿ ಅನಿರುದ್ಧನಾಗಿದ್ದೇನೆ.

ಸಂಕರ್ಷಣೋऽಹಂಕಾರೇ ಚ ಪ್ರದ್ಯುಮ್ನೋ ಮನಸಿ ಸ್ಥಿತಃ ।
ಅನ್ಯಥಾ ಚ ಚತುರ್ಧಾ ಯತ್ ಸಮ್ಯಕ್ ತ್ವಂ ಶ್ರೋತುಮರ್ಹಸಿ ॥೩೪॥

ಅಹಂಕಾರದಲ್ಲಿ ಸಂಕರ್ಷಣರೂಪದಿಂದಿದ್ದೇನೆ. ಮನಸ್ಸಿನಲ್ಲಿ ಪ್ರದ್ಯುಮ್ನ ರೂಪದಿಂದಿದ್ದೇನೆ. ನಾನು ಬೇರೆ ರೀತಿಯಲ್ಲಿಯೂ ನಾಲ್ಕು ವಿಭಾಗದಿಂದ ಇರುವುದನ್ನು ನೀನು ಸರಿಯಾಗಿ ಕೇಳು.

ಹಿರಣ್ಯಗರ್ಭಃ ಪದ್ಮಾಖ್ಯೋ ಯತ್ರ ಬ್ರಹ್ಮಾ ವ್ಯಜಾಯತ ।
ಬ್ರಹ್ಮಣಶ್ಚಾಪಿ ಸಂಭೂತಃ ಶಿವ ಇತ್ಯವಧಾರ್ಯತಾಮ್ ॥೩೫॥

ಶಿವಾತ್ ಸ್ಕಂದಃ ಸಂಬಭೂವ ಏತತ್ ಸೃಷ್ಟಿಚತುಷ್ಟಯಮ್ ।
ದೈತ್ಯದಾನವದರ್ಪಘ್ನಮೇವಂ ಮಾಂ ವಿದ್ಧಿ ನಿತ್ಯಶಃ ॥೩೬॥

ನನ್ನಿಂದ ಪದ್ಮವು ಉದಯಿಸಿತು. ಆ ಪದ್ಮದಲ್ಲಿ ಹಿರಣ್ಯಗರ್ಭನೆಂದೂ, ಪದ್ಮನೆಂದೂ ಕರೆಸಿಕೊಳ್ಳುವ ಬ್ರಹ್ಮನು ಜನಿಸಿದನು. ಬ್ರಹ್ಮನಿಂದ ಶಿವನು ಜನಿಸಿದನೆಂದು ತಿಳಿ. ಶಿವನಿಂದ ಸ್ಕಂದನು ಜನಿಸಿದನು. ಇದು ನಾಲ್ಕು ವಸ್ತುಗಳ ಸೃಷ್ಟಿ. ದೈತ್ಯ-ದಾನವ ದರ್ಪನಾಶನನಾದ ನನ್ನನ್ನು ಈ ನಾಲ್ಕು ಸೃಷ್ಟಿಗೆ ಕಾರಣನೆಂದು ಯಾವಾಗಲೂ ತಿಳಿ (ಈ ನಾಲ್ಕರಲ್ಲಿ ನಾನು ನಾಲ್ಕು ರೂಪಗಳಿಂದ ಇರುತ್ತೇನೆ).

ದೈತ್ಯದಾನವರಕ್ಷೋಭಿರ್ಯದಾ ಧರ್ಮಃ ಪ್ರಪೀಡ್ಯತೇ ।
ತದಾऽಹಂ ಧರ್ಮವೃದ್ಧ್ಯರ್ಥಂ ಮೂರ್ತಿಮಾನ್ ಭವಿತಾऽऽಶುಗ ॥

ಎಲೈ ಶೀಘ್ರಗಾಮಿಯೇ, ದೈತ-ದಾನವ-ರಾಕ್ಷಸರಿಂದ ಧರ್ಮವು ಪೀಡಿಸಲ್ಪಟ್ಟಾಗ ಧರ್ಮದ ಸಂಸ್ಥಾಪನೆಗಾಗಿ ನಾನು ಶರೀರವನ್ನು ಧರಿಸಿ ಬರುತ್ತೇನೆ.

ವೇದವ್ರತಪರಾ ಯೇ ತು ಧೀರಾ ನಿಶ್ಚಿತಬುದ್ಧಯಃ ।
ಯೋಗಿನೋ ಯೋಗಯುಕ್ತಾಶ್ಚ ತೇ ಮಾಂ ಪಶ್ಯಂತಿ ನಾನ್ಯಥಾ ॥೩೮॥

ವೇದವ್ರತನಿಷ್ಠರಾದ, ನಿಶ್ಚಿತ ಬುದ್ಧಿಯುಳ್ಳ, ಯಾವಾಗಲೂ ನನ್ನ ಮನೋಯೋಗವನ್ನು ಹೊಂದಿದ ಧೀರರಾದ ಯೋಗಿಗಳು ನನ್ನನ್ನು ನೋಡುತ್ತಾರೆ. ನನ್ನನ್ನು ಬೇರೆ ರೀತಿಯಲ್ಲಿ ನೋಡಲು ಸಾಧ್ಯವಿಲ್ಲ.

ಪಂಚಭಿಃ ಸಂಪ್ರಯುಕ್ತೋऽಹಂ ವಿಪ್ರಯುಕ್ತಶ್ಚ ಪಂಚಭಿಃ ।
ವರ್ತಮಾನಶ್ಚ ತೇಷ್ವೇವಂ ನಿವೃತ್ತಶ್ಚೈವ ತೇಷ್ವಹಮ್ ॥೩೯॥

ನಾನು ಪಂಚಭೂತಗಳ ಸಂಯೋಗವನ್ನು ಹೊಂದಿದ್ದೇನೆ. ಆದರೂ ಪಂಚಭೂತಗಳ ವಿಯೋಗವನ್ನು ಹೊಂದಿದ್ದೇನೆ. ನಾನು ಈ ರೀತಿ ಅವುಗಳಲ್ಲಿದ್ದರೂ ಅವುಗಳ ದೋಷದಿಂದ ಸಂಯುಕ್ತನಾಗದಿರುವುದರಿಂದ ನಾನು ಅವುಗಳಿಂದ ನಿವೃತ್ತನಾಗಿದ್ದೇನೆ.

ಯೇ ವಿದುರ್ಜಾತಸಂಕಲ್ಪಾಸ್ತೇ ಮಾಂ ಪಶ್ಯಂತಿ ತಾದೃಶಾಃ ।
ಖಂ ವಾಯುರಾಪೋ ಜ್ಯೋತಿಶ್ಚ ಪೃಥಿವೀ ಚೇತಿ ಪಂಚಮಮ್ ।
ತದಾತ್ಮಕೋऽಸ್ಮಿ ವಿಜ್ಞೇಯೋ ನ ಚಾನ್ಯೋऽಸ್ಮೀತಿ ನಿಶ್ಚಿತಮ್ ॥೪೦॥

ಯಾರು ಒಳ್ಳೆಯ ಸಂಕಲ್ಪವನ್ನು ಮಾಡಿ ಅನುಷ್ಠಾನ ಮಾಡುತ್ತಾರೆಯೋ ಅಂತಹವರು ನನ್ನನ್ನು ನೋಡುತ್ತಾರೆ. ನಾನು ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ ಇವುಗಳಲ್ಲಿ ವ್ಯಾಪ್ತನಾಗಿದ್ದೇನೆಂದು ತಿಳಿ. ನಾನು ವ್ಯಾಪ್ತನಾಗದೆ ಇರುವುದಿಲ್ಲವೆಂಬುದು ನಿಶ್ಚಿತವಾದುದು.

ವರ್ತಮಾನಮತೀತಂ ಚ ಪಂಚವರ್ಗೇಷು ನಿಶ್ಚಲಮ್ ।
ಶಬ್ದಸ್ಪರ್ಶೇಷು ರೂಪೇಷು ರಸಗಂಧೇಷು ಚಾಪ್ಯಹಮ್ ॥೪೧॥

ವರ್ತಮಾನವಾದ ಮತ್ತು ಅತೀತವಾದ, ಶಬ್ದ-ಸ್ಪರ್ಶ-ರೂಪ-ರಸ-ಗಂಧ ಈ ಪಂಚಸಮೂಹದಲ್ಲಿ ನಿಶ್ಚಲನಾದ ನಾನು ಇರುತ್ತೇನೆ.

ರಜಸ್ತಮೋಭ್ಯಾಮಾವಿಷ್ಟಾ ಯೇಷಾಂ ಬುದ್ಧಿರನಿಶ್ಚಿತಾ ।
ತೇ ನ ಪಶ್ಯಂತಿ ಮೇ ತತ್ತ್ವಂ ತಪಸಾ ಮಹತಾ ಹ್ಯಪಿ ॥೪೨॥

ಯಾರ ಬುದ್ಧಿಯು ರಜೋಗುಣ, ತಮೋಗುಣದಿಂದ ಪ್ರಭಾವಿತವಾಗಿ ಅನಿಶ್ಚಿತವಾಗಿರುತ್ತದೆಯೋ ಅಂತಹವರು ದೊಡ್ಡ ತಪಸ್ಸನ್ನು ಮಾಡಿದರೂ ನನ್ನನ್ನು ನೋಡುವುದಿಲ್ಲ.

ನೋಪವಾಸೈರ್ನ ನಿಯಮೈರ್ನ ವ್ರತೈರ್ವಿವಿಧೈರಪಿ ।
ದ್ರಷ್ಟುಂ ವಾ ವೇದಿತುಂ ವಾऽಪಿ ನ ಶಕ್ಯಾ ಪರಮಾ ಗತಿಃ ॥೪೩॥

ಉಪವಾಸಗಳಿಂದಾಗಲೀ, ನಿಯಮಗಳಿಂದಾಗಲೀ, ವಿವಿಧವಾದ ವ್ರತಗಳಿಂದಾಗಲೀ ನನ್ನ ನಿರ್ದಿಷ್ಟವಾದ ರೂಪವನ್ನು ನೋಡಲು ಅಥವಾ ತಿಳಿಯಲು ಸಾಧ್ಯವಿಲ್ಲ.

ಮಹಾಮೋಹೋತ್ಥಪಂಕೇ ತು ನಿಮಗ್ನಾನಾಂ ಗತಿರ್ಹರಿಃ ।
ಏಕಾಂತಿನೋ ಧ್ಯಾನಪರಾ ಯತಿಭಾವಾದ್ ವ್ರಜಂತಿ ಮಾಮ್ ॥೪೪॥

ಮಹಾಮೋಹವೆಂಬ ಕೆಸರಿನಲ್ಲಿ ಮುಳುಗಿದವರಿಗೆ ಹರಿಯೆ ಗತಿ. ಏಕಾಂತಿಗಳು, ಧ್ಯಾನಪರರು, ಯತ್ನಶೀಲರು ನನ್ನನ್ನು ಹೊಂದುತ್ತಾರೆ.

ಸತ್ತ್ವಯುಕ್ತಾ ಮತಿರ್ಯೇಷಾಂ ಕೇವಲಾऽऽತ್ಮವಿನಿಶ್ಚಿತಾ ।
ತೇ ಪಶ್ಯಂತಿ ಸ್ವಮಾತ್ಮಾನಂ ಪರಮಾತ್ಮಾನಮವ್ಯಯಮ್ ॥೪೫॥

ಯಾರ ಮನಸ್ಸು ಸತ್ತ್ವಗುಣದಿಂದ ಯುಕ್ತವಾಗಿ, ನಿಶ್ಚಿತಜ್ಞಾನವನ್ನು ಹೊಂದಿ ನನ್ನಲ್ಲೇ ನೆಲೆ ಹೊಂದಿರುತ್ತದೆಯೋ ಅಂತಹವರು ತಮಗೆ ಸ್ವಾಮಿಯಾದ, ಅವ್ಯಯನಾದ, ಪರಮಾತ್ಮನಾದ ನನ್ನನ್ನು ನೋಡುತ್ತಾರೆ.

ಅಹಿಂಸಾ ಸರ್ವಭೂತೇಷು ತೇಷ್ವವಸ್ಥಿತಮಾರ್ಜವಮ್ ।
ತೇಷ್ವೇವ ಚ ಸಮಾಧಾಯ ಸಮ್ಯಗೇತಿ ಸ ಮಾಮಜಮ್ ॥೪೬॥

ಸರ್ವಭೂತಗಳಲ್ಲಿ ಅಹಿಂಸೆ ಮತ್ತು ಆರ್ಜವಗಳು ಇರುತ್ತವೆ. ಅವರಲ್ಲಿಯೇ ಸಮಾಧಿಯು ಇರುತ್ತದೆ. ಅಂತಹವರು ಜನ್ಮರಹಿತನಾದ ನನ್ನನ್ನು ಚೆನ್ನಾಗಿ ಹೊಂದುತ್ತಾರೆ.

ಯದೇತತ್ ಪರಮಂ ಗುಹ್ಯಮಾಖ್ಯಾನಂ ಪರಮಾದ್ಭುತಮ್ ।
ಯತ್ನೇನ ತದಶೇಷೇಣ ಯಥಾವಚ್ಛ್ರೋತುಮರ್ಹಸಿ ॥೪೭॥

ಪರಮಾದ್ಭುತವಾದ, ಪರಮರಹಸ್ಯವಾದ ಈ ನನ್ನ ಆಖ್ಯಾನವೇನಿದೆಯೋ ಅದನ್ನು ಪ್ರಯತ್ನಪೂರ್ವಕವಾಗಿ, ಸಮಗ್ರವಾಗಿ, ಸರಿಯಾಗಿ ಕೇಳುವವನಾಗು.

ಯೇ ತ್ವಗ್ನಿಹೋತ್ರನಿಯಮಾ ಜಪಯಜ್ಞಪರಾಯಣಾಃ ।
ತೇ ಮಾಮುಪಾಸತೇ ಶಶ್ವದ್ ಏತಾಂಸ್ತ್ವಂ ದೃಷ್ಟವಾನಸಿ ॥೪೮॥

ಯಾರು ನಿಯತವಾಗಿ ಅಗ್ನಿಹೋತ್ರನಿಷ್ಠರಾಗಿ, ಜಪ-ಯಜ್ಞಪರಾಯಣರಾಗಿ ಯಾವಾಗಲೂ ನನ್ನನ್ನು ಉಪಾಸನೆ ಮಾಡುತ್ತಾರೆಯೋ ಅಂತಹವರನ್ನು ನೀನು ನೋಡಿದೆ.

ಶಾಸ್ತ್ರದೃಷ್ಟವಿಧಾನಜ್ಞಾ ಅಸಕ್ತಾಃ ಕ್ವಚಿದನ್ಯಥಾ ।
ಶಕ್ಯೋಽಹಂ ವೇದಿತುಂ ತೈಸ್ತು ಯನ್ಮೇ ಪರಮಮವ್ಯಯಮ್ ॥೪೯॥

ಶಾಸ್ತ್ರದಲ್ಲಿ ವಿಧಿಸಿದ ವಿಧಾನಗಳನ್ನು ತಿಳಿದು ಬೇರೆ ವಿಷಯಗಳಲ್ಲಿ ಆಸಕ್ತರಾಗದೆ ಯಾರು ಇರುತ್ತಾರೆಯೋ ಅಂತಹವರು ನನ್ನ ಶ್ರೇಷ್ಠವಾದ ಅವ್ಯಯವಾದ ಸ್ವರೂಪವನ್ನು ತಿಳಿಯಲು ಸಾಧ್ಯವಾಗುತ್ತದೆ.

ಯೇ ತು ಸಾಂಖ್ಯಂ ಚ ಯೋಗಂ ಚ ಜ್ಞಾತ್ವಾಽಪ್ಯದೃತನಿಶ್ಚಯಾಃ ।
ನ ತೇ ಗಚ್ಛಂತ್ಯಕುಶಲಾಃ ಪರಾಂ ಗತಿಮನುತ್ತಮಾಮ್ ॥೫೦॥

ಯಾರು ಸಾಂಖ್ಯಯೋಗಗಳನ್ನು ಚೆನ್ನಾಗಿ ತಿಳಿದಿದ್ದರೂ ನನ್ನ ವಿಷಯದಲ್ಲಿ ದೃಢವಾದ ನಿಶ್ಚಯವನ್ನು ಹೊಂದುವುದಿಲ್ಲವೋ ಅಂತಹ ಅಕುಶಲರು ಶ್ರೇಷ್ಠವಾದ ಪರಗತಿಯನ್ನು ಹೊಂದುವುದಿಲ್ಲ.

ತಸ್ಮಾಜ್ಜ್ಞಾನೇನ ಶುದ್ಧೇನ ಪ್ರಸನ್ನಾತ್ಮಾಽಽತ್ಮವಿಚ್ಛುಚಿಃ ।
ಆಸಾದಯತಿ ತದ್ ಬ್ರಹ್ಮ ಯತ್ರ ಗತ್ವಾ ನ ಶೋಚತಿ ॥೫೧॥

ಆದ್ದರಿಂದ ಪ್ರಸನ್ನವಾದ ಮನಸ್ಸನ್ನು ಹೊಂದಿ, ಪರಮಾತ್ಮನನ್ನು ತಿಳಿದು, ಶುಚಿಯಾಗಿ ಶುದ್ಧವಾದ ಜ್ಞಾನವನ್ನು ಹೊಂದಿದವನು ಯಾವನನ್ನು ಹೊಂದಿದರೆ ಶೋಕರಹಿತನಾಗುತ್ತಾನೆಯೋ ಅಂತಹ ಪರಬ್ರಹ್ಮನನ್ನು ಹೊಂದುತ್ತಾನೆ.

ಶುದ್ಧಾಭಿಜನಸಂಪನ್ನಾಃ ಶ್ರದ್ಧಾಯುಕ್ತೇನ ಚೇತಸಾ ।
ಮದ್ಭಕ್ತ್ಯಾ ಚ ದ್ವಿಜಶ್ರೇಷ್ಠಾ ಗಚ್ಛಂತಿ ಪರಮಾಂ ಗತಿಮ್ ॥೫೨॥

ಶುದ್ಧವಾದ ಕುಲಗಳಲ್ಲಿ ಜನಿಸಿ, ಶ್ರದ್ಧೆಯಿಂದ ಕೂಡಿದ ಮನಸ್ಸನ್ನು ಹೊಂದಿದ ದ್ವಿಜಶ್ರೇಷ್ಠರು ನನ್ನ ಭಕ್ತಿಯಿಂದ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾರೆ.

ಯದ್ಗುಹ್ಯಂ ಪರಮಂ ಬುದ್ಧೇರಲಿಂಗಗ್ರಹಣಂ ಚ ಯತ್ ।
ತತ್ ಸೂಕ್ಷ್ಮಂ ಗೃಹ್ಯತೇ ವಿಪ್ರೈರ್ಯತಿಭಿಸ್ತತ್ತ್ವದರ್ಶಿಭಿಃ ॥೫೩॥

ಯಾವುದು ಅತ್ಯಂತ ರಹಸ್ಯವೋ, ಬುದ್ಧಿಯನ್ನು ಮೀರಿದುದೋ, ಅನುಮಾನಗಳಿಂದ ತಿಳಿಯಲ್ಪಡುವುದಿಲ್ಲವೋ ಅಂತಹ ಸೂಕ್ಷ್ಮವಾದ ತತ್ತ್ವವಾದ ನನ್ನನ್ನು ತತ್ತ್ವದರ್ಶಿಗಳಾದ, ಪ್ರಯತ್ನಶೀಲರಾದ ವಿಪ್ರರು ತಿಳಿಯುತ್ತಾರೆ.

ನ ವಾಯುಃ ಪವತೇ ತತ್ರ ನ ತಸ್ಮಿನ್ ಜ್ಯೋತಿಷಾಂ ಗತಿಃ ।
ನ ಚಾಪಃ ಪೃಥಿವೀ ನೈವ ನಾಕಾಶಂ ನ ಮನೋಗತಿಃ ॥೫೪॥

ಅಲ್ಲಿ ವಾಯುವು ಸಂಚರಿಸುವುದಿಲ್ಲ. ಜ್ಯೋತಿಸ್ಸುಗಳಿಗೆ ಅಲ್ಲಿ ಗತಿ ಇಲ್ಲ. ಅಲ್ಲಿ ಆಕಾಶವಾಗಲೀ, ಜಲವಾಗಲೀ, ಪೃಥಿವಿಯಾಗಲೀ ಇಲ್ಲ. ಮನೋಗತಿಯೂ ಇಲ್ಲ.

ತಸ್ಮಾಚ್ಚೈತಾನಿ ಸರ್ವಾಣಿ ಪ್ರಜಾಯಂತೇ ವಿಹಂಗಮ ।
ಸರ್ವೇಭ್ಯಶ್ಚ ಸ ತೇಭ್ಯಶ್ಚ ಪ್ರಭವತ್ಯಮಲೋ ವಿಭುಃ ॥೫೫॥

ಎಲೈ ಪಕ್ಷಿಯೇ, ಅಂತಹ ಸೂಕ್ಷ್ಮತತ್ತ್ವದಿಂದ ಇವೆಲ್ಲವೂ ಜನಿಸುತ್ತವೆ. ನಿರ್ಮಲನಾದ, ವ್ಯಾಪ್ತನಾದ ಅವನು ಇವೆಲ್ಲವುಗಳಿಗೂ ಪ್ರಭುವಾಗಿದ್ದಾನೆ.

ಸ್ಥೂಲದರ್ಶನಮೇತನ್ಮೇ ಯದ್ದೃಷ್ಟಂ ಭವತಾऽನಘ ।
ಏತತ್ಸೂಕ್ಷ್ಮಸ್ಯ ಚ ದ್ವಾರಂ ಕಾರ್ಯಾಣಾಂ ಕಾರಣಂ ತ್ವಹಮ್ ॥೫೬॥

ಎಲೈ ಅನಘನೇ, ನೀನು ನೋಡಿದುದು ನನ್ನ ಸ್ಥೂಲವಾದ ರೂಪ. ಇದು ಸೂಕ್ಷ್ಮರೂಪದ ದರ್ಶನಕ್ಕೆ ದ್ವಾರವಾಗುದು. ಸ್ಥೂಲರೂಪವು ಕಾರ್ಯಗಳಲ್ಲಿರುವ ರೂಪ. ಎಲ್ಲಕಾರ್ಯಗಳಿಗೂ ಕಾರಣನಾದ ಸೂಕ್ಷ್ಮರೂಪಧಾರಿಯಾದವನು ನಾನು.

ದೃಷ್ಟೋ ವೈ ಭವತಾ ತಸ್ಮಾತ್ ಸರಸ್ಯಮಿತವಿಕ್ರಮ ।
ಬ್ರಹ್ಮಣೋ ಯದಹೋರಾತ್ರಂ ಸಂಖ್ಯಾನಜ್ಞೈರ್ವಿಭಾವ್ಯತೇ ।
ಏಷ ಕಾಲಸ್ತ್ವಯಾ ತತ್ರ ಸರಸ್ಯಹಮುಪಾಗತಃ ॥೫೭॥

ಎಲೈ ಅಮಿತವಿಕ್ರಮನೇ, ಆದ್ದರಿಂದ ನೀನು ಅಲ್ಲಿ ಸರೋವರದಲ್ಲಿ ನಾನು ಇದ್ದುದನ್ನು ನೋಡಿದೆ. ಎಣಿಸಲು ತಿಳಿಯುವವರು ಬ್ರಹ್ಮದೇವರ ಹಗಲು ಮತ್ತು ರಾತ್ರಿ ಎಂದು ಏನು ಹೇಳುತ್ತಾರೆಯೋ ಅಂತಹ ಸಾವಿರ ಚತುರ್ಯುಗದಷ್ಟು ಕಾಲ (ಚತುರ್ಯುಗದ ಸಾವಿರವು ಬ್ರಹ್ಮನ ಹಗಲು, ಅಷ್ಟೇ ಕಾಲ ಬ್ರಹ್ಮನ ರಾತ್ರಿ) ಅಲ್ಲಿ ಸರೋವರದಲ್ಲಿನಾನು ಸನ್ನಿಹಿತನಾಗಿದ್ದೆನು.

ಮಾಂ ಯಜ್ಞಮಾಹುರ್ಯಜ್ಞಜ್ಞಾ ವೇದಂ ವೇದವಿದೋ ಜನಾಃ ।
ಮುನಯಶ್ಚಾಪಿ ಮಾಮೇವ ಜಪಯಜ್ಞಂ ಪ್ರಚಕ್ಷತೇ ॥೫೮॥

ಯಜ್ಞವನ್ನು ತಿಳಿದವರು ನನ್ನನ್ನು ಯಜ್ಞನೆಂದೂ (ಯಜನೀಯನೆಂದು) ಹೇಳುತ್ತಾರೆ. ವೇದವನ್ನು ತಿಳಿದ ಪುರುಷರು ನನ್ನನ್ನು ವೇದವೆಂದೂ (ಜ್ಞಾನರೂಪನೆಂದು) ಹೇಳುತ್ತಾರೆ. ಮುನಿಗಳು ನನ್ನನ್ನೇ ಜಪಯಜ್ಞನೆಂದೂ (ಜನ್ಮದಿಂದ ರಕ್ಷಿಸುವವನೆಂದು ಮತ್ತು ಯಜನೀಯನೆಂದೂ) ಹೇಳುತ್ತಾರೆ.

ವಕ್ತಾ ಮಂತಾ ರಸಯಿತಾ ಘ್ರಾತಾ ದ್ರಷ್ಟಾ ಪ್ರದರ್ಶಕಃ ।
ಬೋದ್ಧಾ ಬೋಧಯಿತಾ ಚಾಹಂ ಗಂತಾ ಶ್ರೋತಾ ಚಿದಾತ್ಮಕಃ ॥೫೯॥

ಚೈತನ್ಯರೂಪನಾದ ನಾನೇ ಮಾತನಾಡುವವನು, ಮನಸ್ಸಿನಲ್ಲಿ ಯೋಚನೆ ಮಾಡುವವನು, ಜಿಹ್ವೆಯಿಂದ ರಸವನ್ನು ಅನುಭವಿಸುವವನು, ನಾಸಿಕದಿಂದ ಗಂಧವನ್ನು ಅನುಭವಿಸುವವನು, ಚಕ್ಷುಸ್ಸಿನಿಂದ ನೋಡುವವನು, ಜೀವನಿಗೆ ತೋರಿಸುವವನು, ಬುದ್ಧಿಯಿಂದ ತಿಳಿಸುವವನು, ನಾನೇ ನಡೆಯುವವನು ಮತ್ತು ಕೇಳುವವನು.

ಮಾಮಿಷ್ಟ್ವಾ ಸ್ವರ್ಗಮಾಯಾಂತಿ ತಥಾ ಚಾಪ್ನುವತೇ ಮಹತ್ ।
ಜ್ಞಾತ್ವಾ ಮಾಮೇವ ಚೈವಂ ತೇ ನಿಸ್ಸಂಗೇನಾಂತರಾತ್ಮನಾ ॥೬೦॥

ನಿಸ್ಸಂಗವಾದ ಮನಸ್ಸಿನಿಂದ ನನ್ನನ್ನು ಈ ರೀತಿಯಾಗಿ ತಿಳಿದು ನನ್ನನ್ನು ಪೂಜಿಸಿ ಸ್ವರ್ಗವನ್ನು ಹೊಂದುತ್ತಾರೆ ಮತ್ತು ಮಹತ್ತಾದ ಮೋಕ್ಷವನ್ನೂ ಹೊಂದುತ್ತಾರೆ.

ಅಹಂ ತೇಜೋ ದ್ವಿಜಾತೀನಾಂ ಮಮ ತೇಜೋ ದ್ವಿಜಾತಯಃ ।
ಮಮ ಯಸ್ತೇಜಸಾ ದೇಹಃ ಸೋಽಗ್ನಿರಿತ್ಯವಗಮ್ಯತಾಮ್ ॥೬೧॥

ನಾನು ದ್ವಿಜರ ತೇಜಸ್ಸಾಗಿದ್ದೇನೆ. ದ್ವಿಜರೂ ಸಹ ನನ್ನ ತೇಜಸ್ಸಾಗಿದ್ದಾರೆ. ನನ್ನ ತೇಜಸ್ಸೇ ರೂಪವನ್ನು ಧರಿಸಿ ಅಗ್ನಿ ಎಂದು ಕರೆಯಲ್ಪಡುತ್ತದೆ ಎಂದು ತಿಳಿ.

ಪ್ರಾಣಪಾಲಃ ಶರೀರೇಽಹಂ ಯೋಗಿನಾಮಹಮೀಶ್ವರಃ ।
ಸಾಂಖ್ಯಾನಾಮಿದಮೇವಾಗ್ರೇ ಮಯಿ ಸರ್ವಮಿದಂ ಜಗತ್ ॥೬೨॥

ಧರ್ಮಮರ್ಥಂ ಚ ಕಾಮಂ ಚ ಮೋಕ್ಷಂ ಚೈವಾರ್ಜವಂ ಜಪಮ್ ।
ತಮಃ ಸತ್ತ್ವಂ ರಜಶ್ಚೈವ ಕರ್ಮಜಂ ಚ ಭವಾಪ್ಯಯಮ್ ॥೬೩॥

ನಾನು ಶರೀರಗಳಲ್ಲಿ ಇಂದ್ರಿಯಗಳನ್ನು ರಕ್ಷಿಸುವವನು. ಯೋಗಿಗಳಿಗೆ ನಾನು ಈಶ್ವರನಾದವನು. ಸಾಂಖ್ಯರಿಗೆ ಜಗತ್ತಿನ ಸೃಷ್ಟಿಗೆ ಕಾರಣನಾದವನು. ನನ್ನಲ್ಲಿ ಈ ಜಗತ್ತೆಲ್ಲವೂ ಇದೆ. ಇವೆಲ್ಲವೂ ಎಂದರೆ ಧರ್ಮ, ಅರ್ಥ, ಕಾಮ, ಮೋಕ್ಷಗಳು, ಆರ್ಜವ, ಜಪ, ಸತ್ತ್ವ-ರಜಸ್-ತಮೋ ಗುಣಗಳು ಕರ್ಮದಿಂದ ಉಂಟಾದ ಅಭಿವೃದ್ಧಿ ಮತ್ತು ವಿನಾಶಗಳು.

ಸ ತದಾಽಹಂ ತಥಾರೂಪಸ್ತ್ವಯಾ ದೃಷ್ಟಃ ಸನಾತನಃ ।
ತತಸ್ತ್ವಹಂ ಪರತರಃ ಶಕ್ಯಃ ಕಾಲೇನ ವೇದಿತುಮ್ ॥೬೪॥

ಸನಾತನನಾದ ನಾನು ಆಗ ಅಂತಹ ರೂಪದಿಂದ ನೋಡಲ್ಪಟ್ಟೆನು. ಅದಕ್ಕಿಂತಲೂ ಶ್ರೇಷ್ಠವಾದ ನನ್ನ ರೂಪವನ್ನು ಕಾಲಕ್ರಮದಲ್ಲಿ ಉಪಾಸನೆಯಿಂದ ನೋಡಲು ಸಾಧ್ಯ.

ಮಮ ಯತ್ ಪರಮಂ ಗುಹ್ಯಂ ಶಾಶ್ವತಂ ಧ್ರುವಮವ್ಯಯಮ್ ।
ತದೇವಂ ಪರಮೋ ಗುಹ್ಯೋ ದೇವೋ ನಾರಾಯಣೋ ಹರಿಃ ।
ನ ತಚ್ಛಕ್ಯಂ ಭುಜಂಗಾರೇ ವೇತ್ತುಮಭ್ಯುದಯಾನ್ವಿತೈಃ ॥೬೫॥

ನನ್ನ ಪರಮಗುಹ್ಯವಾದ, ಶಾಶ್ವತವಾದ, ಸ್ಥಿರವಾದ, ನಾಶರಹಿತವಾದ ರೂಪವೇನಿದೆಯೋ ಅದನ್ನೇ ಹರಿ ಎಂದೂ ದೇವನೆಂದೂ, ನಾರಾಯಣನೆಂದೂ ಹೇಳುತ್ತಾರೆ. ಎಲೈ ಸರ್ಪಶತ್ರುವೇ, ಸಾಂಸಾರಿಕ ಅಭಿವೃದ್ಧಿಯಲ್ಲಿ ನಿರತರಾದವರು ಅದನ್ನು ತಿಳಿಯಲಾರರು.

ನಿರಾರಂಭನಮಸ್ಕಾರಾ ನಿರಾಶೀರ್ಬಂಧನಾಸ್ತಥಾ ।
ಗಚ್ಛಂತಿ ತಂ ಮಹಾತ್ಮಾನಂ ಪರಂ ಬ್ರಹ್ಮ ಸನಾತನಮ್ ॥೬೬॥

ಕಾಮ್ಯಕರ್ಮಗಳನ್ನು ಆರಂಭಿಸದೆ, ಅದಕ್ಕಾಗಿ ನಮಸ್ಕರಿಸದೆ, ಆಶಾಬಂಧನಗಳನ್ನು ತೊರೆದ ಪುರುಷರು ಮಹಾತ್ಮನೂ, ಸನಾತನನೂ ಆದ ಆ ಪರಬ್ರಹ್ಮನನ್ನು ಹೊಂದುತ್ತಾರೆ.

ಸ್ಥೂಲೋಽಹಮೇವಂ ವಿಹಗ ತ್ವಯಾ ದೃಷ್ಟಸ್ತಥಾಽನಘ ।
ಏತಚ್ಚಾಪಿ ನ ವೇತ್ತ್ಯನ್ಯಸ್ತ್ವಾಮೃತೇ ಪನ್ನಗಾಶನ ॥೬೭॥

ಎಲೈ ಅನಘನೇ, ಪಕ್ಷಿಯೇ, ನೀನು ನೋಡಿದುದು ನನ್ನ ಸ್ಥೂಲರೂಪ. ಎಲೈ ಪನ್ನಗಾಶನನೇ, ಇದನ್ನೂ ಸಹ ನಿನ್ನನ್ನು ಬಿಟ್ಟು ಬೇರೆಯವರು ನೋಡಲಾರರು.

ಮಾ ಮತಿಸ್ತವ ಗಾನ್ನಾಶಮೇಷಾ ಗತಿರನುತ್ತಮಾ ।
ಮದ್ಭಕ್ತೋ ಭವ ನಿತ್ಯಂ ತ್ವಂ ತತೋ ವೇತ್ಸ್ಯಸಿ ಮೇ ಪದಮ್ ॥೬೮॥

ನಿನಗೆ ಉಂಟಾದ ಈ ಶ್ರೇಷ್ಠವಾದ ಜ್ಞಾನವು ನಾಶ ಹೊಂದದಿರಲಿ. ಯಾವಾಗಲೂ ನನ್ನಲ್ಲಿ ಭಕ್ತಿಯನ್ನು ಹೊಂದು. ಅದರಿಂದ ನನ್ನ ಶ್ರೇಷ್ಠವಾದ ಸ್ಥಾನವನ್ನು ಹೊಂದುವಿ.

ಏತತ್ ತೇ ಸರ್ವಮಾಖ್ಯಾತಂ ರಹಸ್ಯಂ ದಿವ್ಯಮಾನುಷಮ್ ।
ಏತಚ್ಛ್ರೇಯಃ ಪರಂ ಚೈತತ್ ಪಂಥಾನಂ ವಿದ್ಧಿ ಮೋಕ್ಷಿಣಾಮ್ ॥೬೯॥

ದಿವ್ಯಪುರುಷರಿಗೆ ಸಂಬಂಧಿಸಿದ ರಹಸ್ಯವಾದ ಇವೆಲ್ಲವನ್ನೂ ನಿನಗೆ ಹೇಳಿದ್ದೇನೆ. ಇದು ಶ್ರೇಯಸ್ಸಾಧನ. ಇದು ಮೋಕ್ಷಮಾರ್ಗ ಎಂದು ತಿಳಿ.

ಸುಪರ್ಣಃ

ಏವಮುಕ್ತ್ವಾ ಸ ಭಗವಾಂಸ್ತತ್ರೈವಾಂತರಧೀಯತ ।
ಪಶ್ಯತೋ ಮೇ ಮಹಾಯೋಗೀ ಜಗಾಮಾತ್ಮಗತಿರ್ಗತಿಮ್ ॥೭೦॥

ಗರುಡ– ಹೀಗೆ ಹೇಳಿ ನಾನು ನೋಡುತ್ತಿರುವಂತೆಯೇ ಮಹಾಯೋಗಿಯೂ, ಆತ್ಮಗತಿಯೂ ಆದ ಭಗವಂತನು ಅಂತರ್ಧಾನವನ್ನು ಹೊಂದಿ ತನ್ನ ಸ್ವರೂಪವನ್ನು ತಲುಪಿದನು.

ಏತದೇವಂವಿಧಂ ತಸ್ಯ ಮಹಿಮಾನಂ ಮಹಾತ್ಮನಃ ।
ಅಚ್ಯುತಸ್ಯಾಪ್ರಮೇಯಸ್ಯ ದೃಷ್ಟವಾನಸ್ಮಿ ಯತ್ ಪುರಾ ॥೭೧॥

ನಾನು ಹಿಂದೆ ಅಚ್ಯುತನೂ, ಅಪ್ರಮೇಯನೂ, ಮಹಾತ್ಮನೂ ಆದ ಯಾವ ಮಹಿಮೆಯನ್ನು ನೋಡಿದೆನೋ ಅದು ಇಂತಹ ರೀತಿಯಾದುದು.

ಏತದ್ ವಃ ಸರ್ವಮಾಖ್ಯಾತಂ ಚೇಷ್ಟಿತಂ ತಸ್ಯ ಧೀಮತಃ ।
ಮಯಾऽನುಭೂತಂ ಪ್ರತ್ಯಕ್ಷಂ ದೃಷ್ಟ್ವಾ ಚಾದ್ಭುತಕರ್ಮಣಃ ॥೭೨॥

ಎಲೈ ಋಷಿಗಳೇ, ನಾನು ಮೇಧಾವಿಯಾದ, ಅದ್ಭುತಕಾರ್ಯವನ್ನು ಮಾಡುವ ಅವನ ವ್ಯಾಪಾರವನ್ನು ಪ್ರತ್ಯಕ್ಷವಾಗಿ ನೋಡಿ ಎಲ್ಲವನ್ನೂ ನಿಮಗೆ ಹೇಳಿದ್ದೇನೆ.

ಋಷಯಃ

ಅಹೋ ಶ್ರಾವಿತಮಾಖ್ಯಾನಂ ಭವತಾऽತ್ಯದ್ಭುತಂ ಮಹತ್ ।
ಪುಣ್ಯಂ ಯಶಸ್ಯಮಾಯುಷ್ಯಂ ಸ್ವರ್ಗ್ಯಂ ಸ್ವಸ್ತ್ಯಯನಂ ಮಹತ್ ॥೭೩॥

ಋಷಿಗಳು– ನೀನು ನಮಗೆ ಅತ್ಯದ್ಭುತವಾದ, ಶ್ರೇಷ್ಠವಾದ, ಪವಿತ್ರವಾದ, ಕೀರ್ತಿಪ್ರದವಾದ, ಆಯುಷ್ಯಪ್ರದವಾದ, ಸ್ವರ್ಗಪ್ರದವಾದ, ಮಂಗಳಕರವಾದ ಶ್ರೇಷ್ಠವಾದ ಆಖ್ಯಾನವನ್ನು ಹೇಳಿದ್ದೀಯೆ.

ಏತತ್ ಪವಿತ್ರಂ ದೇವಾನಾಮೇತದ್ ಗುಹ್ಯಂ ಪರಂತಪ ।
ಏತಜ್ಜ್ಞಾನವತಾಂ ಜ್ಞೇಯಮೇಷಾ ಗತಿರನುತ್ತಮಾ ॥೭೪॥

ಎಲೈ ಪರಂತಪನೇ, ಇದು ಪವಿತ್ರವಾದುದು ಮತ್ತು ದೇವರಹಸ್ಯರೂಪವಾದುದು. ಜ್ಞಾನವಂತರಾದವರು ತಿಳಿಯಬೇಕಾದ ವಿಷಯ. ಇದೇ ಶ್ರೇಷ್ಠವಾದ ಗತಿ.

ಯ ಇಮಾಂ ಶ್ರಾವಯೇದ್ ವಿದ್ವಾನ್ ಕಥಾಂ ಪರ್ವಸು ಪರ್ವಸು ।
ಸ ಲೋಕಾನ್ ಪ್ರಾಪ್ನುಯಾತ್ ಪುಣ್ಯಾನ್ ದೇವರ್ಷಿಭಿರಭಿಷ್ಟುತಾನ್ ॥

ಯಾವ ವಿದ್ವಾಂಸನು ಈ ಕಥೆಯನ್ನು ಪರ್ವಪರ್ವಗಳಲ್ಲಿ ಪ್ರವಚನ ಮಾಡುತ್ತಾನೆಯೋ ಅವನು ದೇವರ್ಷಿಗಳಿಂದ ಸೂಚಿಸಲ್ಪಟ್ಟ ಪುಣ್ಯಲೋಕಗಳನ್ನು ಹೊಂದುವನು.

ಶ್ರಾದ್ಧಕಾಲೇ ಚ ವಿಪ್ರಾಣಾಂ ಯ ಇಮಾಂ ಶ್ರಾವಯೇಚ್ಛುಚಿಃ ।
ನ ತತ್ರ ರಕ್ಷಸಾಂ ಭಾಗೋ ನಾಸುರಾಣಾಂ ಚ ವಿದ್ಯತೇ ॥೭೬॥

ಶ್ರಾದ್ಧಕಾಲದಲ್ಲಿ ಬ್ರಾಹ್ಮಣನಿಗೆ ಶುಚಿಯಾಗಿ ಈ ಮಹಿಮೆಯನ್ನು ಕೇಳಿಸಿದರೆ ಅಲ್ಲಿ ರಾಕ್ಷಸರಾಗಲೀ, ಅಸುರರಾಗಲೀ ಭಾಗವಹಿಸುವುದಿಲ್ಲ.

ಅನಸೂಯುರ್ಜಿತಕ್ರೋಧಃ ಸರ್ವಸತ್ತ್ವಹಿತೇ ರತಃ ।
ಯಃ ಪಠೇತ್ ಸತತಂ ಯುಕ್ತಃ ಸ ವ್ರಜೇತ್ ತತ್ಸಲೋಕತಾಮ್ ॥೭೭॥

ಅಸೂಯಾರಹಿತನಾಗಿ, ಕ್ರೋಧವನ್ನು ಜಯಿಸಿ, ಸರ್ವಭೂತಗಳ ಹಿತದಲ್ಲಿ ರತನಾಗಿ ಸತತವಾಗಿ ಭಗವಂತನನ್ನು ಧ್ಯಾನಿಸಿ ಯಾವನು ಇದನ್ನು ಪಠಿಸುತ್ತಾನೆಯೋ ಅವನು ಪರಮಾತ್ಮನ ಸಾನ್ನಿಧ್ಯವನ್ನು ಹೊಂದುತ್ತಾನೆ.

ವೇದಾನ್ ಪಾರಯತೇ ವಿಪ್ರೋ ರಾಜಾ ವಿಜಯವಾನ್ ಭವೇತ್ ।
ವೈಶ್ಯಸ್ತು ಧನಧಾನ್ಯಾಢ್ಯಃ ಶೂದ್ರಃ ಸುಖಮವಾಪ್ನುಯಾತ್ ॥೭೮॥

ವಿಪ್ರನು ವೇದಾಧ್ಯಯನವನ್ನು ಪೂರ್ಣಗೊಳಿಸುತ್ತಾನೆ. ರಾಜನು ವಿಜಯಶಾಲಿಯಾಗುತ್ತಾನೆ. ವೈಶ್ಯನು ಧನಧಾನ್ಯಾಢ್ಯನಾಗುತ್ತಾನೆ. ಶೂದ್ರನು ಸುಖವನ್ನು ಹೊಂದುತ್ತಾನೆ.

ಭೀಷ್ಮಃ

ತತಸ್ತೇ ಮುನಯಃ ಸರ್ವೇ ಸಂಪೂಜ್ಯ ವಿನತಾಸುತಮ್ ।
ಸ್ವಾನೇವ ಚಾಶ್ರಮಾನ್ ಜಗ್ಮುರ್ಬಭೂವುಃ ಶಾಂತಿತತ್ಪರಾಃ ॥೭೯॥

ಭೀಷ್ಮರು– ಅನಂತರ ಆ ಋಷಿಗಳೆಲ್ಲರೂ ವಿನತಾಪುತ್ರನಾದ ಗರುಡನನ್ನು ಪೂಜಿಸಿ ತಮ್ಮ ತಮ್ಮ ಆಶ್ರಮಗಳಿಗೆ ಹೋಗಿ ಶಾಂತಿತತ್ಪರರಾದರು.

ಸ್ಥೂಲದರ್ಶಿಭಿರಾಕೃಷ್ಟೋ ದುರ್ಜ್ಞೇಯೋ ಹ್ಯಕೃತಾತ್ಮಭಿಃ ।
ಏಷಾ ಶ್ರುತಿರ್ಮಹಾರಾಜ ಧರ್ಮ್ಯಾ ಧರ್ಮಭೃತಾಂವರ ॥೮೦॥

ಸುರಾಣಾಂ ಬ್ರಹ್ಮಣಾ ಪ್ರೋಕ್ತಾ ವಿಸ್ಮಿತಾನಾಂ ಪರಂತಪ ॥೮೧॥

ಎಲೈ ಧರ್ಮಿಷ್ಠರಲ್ಲಿ ಶ್ರೇಷ್ಠನೇ, ಸ್ಥೂಲದರ್ಶಿಗಳಿಗೆ ಆಕರ್ಷಕವಾದ ಈ ಮಹಿಮೆಯನ್ನು ಮನೋಜಯರಹಿತರಾದವರು ತಿಳಿಯಲು ಸಾಧ್ಯವಿಲ್ಲ. ಎಲೈ ಮಹಾರಾಜನೇ, ಈ ಆಖ್ಯಾನವು ಧರ್ಮಪ್ರದವಾದುದು. ಎಲೈ ಪರಂತಪನೇ, ವಿಸ್ಮಿತರಾದ ದೇವತೆಗಳಿಗೆ ಬ್ರಹ್ಮದೇವರಿಂದ ಹೇಳಲ್ಪಟ್ಟುದು.

ಮಮಾಪ್ಯೇಷಾ ಕಥಾ ತಾತ ಕಥಿತಾ ಮಾತುರಂತಿಕೇ ।
ವಸುಭಿಃ ಸತ್ತ್ವಸಂಪನ್ನೈಸ್ತವಾಪ್ಯೇಷಾ ಮಯೋಚ್ಯತೇ ॥೮೨॥

ಎಲೈ ಪ್ರೀತಿಪಾತ್ರನೇ, ನಾನೂ ಸಹ ತಾಯಿಯ ಸಮೀಪದಲ್ಲಿದ್ದಾಗ ಸತ್ವ ಸಂಪನ್ನರಾದ ವಸುಗಳಿಂದ ಈ ಕಥೆಯನ್ನು ಕೇಳಿದೆ. ಇದನ್ನು ನಿನಗೆ ಹೇಳುತ್ತಿದ್ದೇನೆ.

ತದಗ್ನಿಹೋತ್ರಪರಮಾ ಜಪಯಜ್ಞಪರಾಯಣಾಃ ।
ನಿರಾಶೀರ್ಬಂಧನಾಃ ಸಂತಃ ಪ್ರಯಾಂತ್ಯಕ್ಷರಸಾತ್ಮತಾಮ್ ॥೮೩॥

ಆದ್ದರಿಂದ ಅಗ್ನಿಹೋತ್ರಪರಾಯಣರಾದ, ಜಪಯಜ್ಞಪರಾಯಣರಾದ, ಆಶಾ ಬಂಧನ ನಿರ್ಮುಕ್ತರಾದ ಸಜ್ಜನರು ಅಕ್ಷರನಾದ ಪರಮಾತ್ಮನ ಸಾಲೋಕ್ಯಾದಿಗಳನ್ನು ಹೊಂದುತ್ತಾರೆ.

ಆರಂಭಯಜ್ಞಾನುತ್ಸೃಜ್ಯ ಜಪಹೋಮಪರಾಯಣಾಃ ।
ಧ್ಯಾಯಂತೋ ಮನಸಾ ವಿಷ್ಣುಂ ಗಚ್ಛಂತಿ ಪರಮಾಂ ಗತಿಮ್ ॥೮೪॥

ಕಾಮ್ಯಫಲಕ್ಕಾಗಿ ಮಾಡುವ ಯಜ್ಞಗಳನ್ನು ತ್ಯಜಿಸಿ, ಜಪಹೋಮಪರಾಯಣರಾಗಿ ಮನಸ್ಸಿನಿಂದ ಯಾವಾಗಲೂ ವಿಷ್ಣುವನ್ನು ಧ್ಯಾನ ಮಾಡುವವರು ಶ್ರೇಷ್ಠವಾದ ಗತಿಯನ್ನು ಹೊಂದುತ್ತಾರೆ.

ತದೇವ ಪರಮೋ ಮೋಕ್ಷೋ ಮೋಕ್ಷದ್ವಾರಂ ಚ ಭಾರತ ।
ಯದಾ ವಿನಿಶ್ಚಿತಾತ್ಮಾನೋ ಗಚ್ಛಂತಿ ಪರಮಾಂ ಗತಿಮ್ ॥೮೫॥

ಎಲೈ ಭಾರತನೇ, ಸರಿಯಾದ ಜ್ಞಾನವನ್ನು ಹೊಂದಿ, ಶ್ರೇಷ್ಠವಾದ ಗತಿಯನ್ನು ಹೊಂದುವುದೇ ಪರಮಮೋಕ್ಷ ಮತ್ತು ಮೋಕ್ಷಮಾರ್ಗ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗರುಡನಾರಾಯಣಸಂವಾದೇ
ನಾರಾಯಣಕಥಾನುವರ್ಣನಂ ನಾಮ ಏಕಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೆರಡನೆಯ ಅಧ್ಯಾಯ

ಅಷ್ಟಾವಕ್ರನೋಪಾಖ್ಯಾನ ಪ್ರಾರಂಭ. ಅಷ್ಟಾವಕ್ರ-ವದಾನ್ಯರ ಸಂವಾದ.

ಯುಧಿಷ್ಠಿರಃ

ಯದಿದಂ ಸಹಧರ್ಮೇತಿ ಪ್ರೋಚ್ಯತೇ ಭರತರ್ಷಭ ।
ಪಾಣಿಗ್ರಹಣಕಾಲೇ ತು ಸ್ತ್ರೀಣಾಮೇತತ್ಕಥಂ ಸ್ಮೃತಮ್ ॥೧॥

ಯುಧಿಷ್ಠಿರ– ಎಲೈ ಭರತಶ್ರೇಷ್ಠನೇ, ಪಾಣಿಗ್ರಹಣ ಕಾಲದಲ್ಲಿ ಸ್ತ್ರೀಯರಿಗೆ ಸಹಧರ್ಮವನ್ನು ಹೇಳುತ್ತಾರಷ್ಟೆ? ಇದು ಹೇಗೆ ಹೇಳಲ್ಪಡುತ್ತದೆ?

ಆರ್ಷ ಏಷ ಭವೇದ್ ಧರ್ಮಃ ಪ್ರಾಜಾಪತ್ಯೋಽಥ ವಾಽಽಸುರಃ ।
ಯದೇತತ್ಸಹಧರ್ಮೇತಿ ಪೂರ್ವಮುಕ್ತಂ ಮಹರ್ಷಿಭಿಃ ॥೨॥

ಹಿಂದೆ ಮಹರ್ಷಿಗಳು ಹೇಳಿದ ಸಹಧರ್ಮವೆಂಬ ಈ ಆಚರಣೆಯು ಋಷಿಗಳ ಪರಂಪರೆಯಿಂದ ಬಂದುದೋ? ಪ್ರಜಾಪತಿಯ ಪರಂಪರೆಯಿಂದ ಬಂದುದೋ? ಅಥವಾ ಅಸುರ ಪರಂಪರೆಯಿಂದ ಬಂದುದೋ?

ಸಂದೇಹಃ ಸುಮಹಾನೇಷ ವಿರುದ್ಧ ಇತಿ ಮೇ ಮತಿಃ ।
ಇಹ ಯಃ ಸಹಧರ್ಮೋ ವೈ ಪ್ರೇತ್ಯಾಯಂ ವಿಹಿತಃ ಕ್ವ ನು ॥೩॥

ಈ ವಿಷಯದಲ್ಲಿ ನನಗೆ ದೊಡ್ಡ ಸಂದೇಹವಿದೆ. ಸಹಧರ್ಮವು ವಿರುದ್ಧ ಎಂದು ನನ್ನ ಅಭಿಪ್ರಾಯ. ಇಲ್ಲಿ ಸಹಧರ್ಮವು ವಿಹಿತವಾಗುವುದಾದರೆ ಮರಣಾನಂತರದಲ್ಲಿ ಸಹಧರ್ಮವು ಹೇಗೆ ಉಂಟಾಗುತ್ತದೆ?

ಸ್ವರ್ಗೇ ಮೃತಾನಾಂ ಭವತಿ ಸಹಧರ್ಮಃ ಪಿತಾಮಹ ।
ಪೂರ್ವಮೇಕಸ್ತು ಮ್ರಿಯತೇ ಕ್ವ ಚೈಕಸ್ತಿಷ್ಠತೇ ವದ ॥೪॥

ಎಲೈ ಪಿತಾಮಹನೇ, ಸ್ವರ್ಗದಲ್ಲಿ ಮೃತರಿಗೆ ಸಹಧರ್ಮವು ಉಂಟಾಗಬೇಕು. ಆದರೆ ಮೊದಲು ಒಬ್ಬರು ಸಾಯುತ್ತಾರೆ. ಆಗ ಇನ್ನೊಬ್ಬ ವ್ಯಕ್ತಿಯು ಸಹಧರ್ಮದಿಂದ ಎಲ್ಲಿರುತ್ತಾನೆ ಎಂಬುದನ್ನು ಹೇಳು.

ನಾನಾಕರ್ಮಫಲೋಪೇತಾ ನಾನಾಕರ್ಮನಿವಾಸಿತಾಃ ।
ನಾನಾನಿರಯನಿಷ್ಠಾಂತಾ ಮಾನುಷಾ ಬಹವೋ ಯದಾ ॥೫॥

ನಾನಾ ಕರ್ಮಗಳ ಫಲಗಳನ್ನು ಹೊಂದಿದ, ನಾನಾ ಕರ್ಮ ವಾಸನೆಗಳಿಂದ ಕೂಡಿದ ಅನೇಕ ನರಕಗಾಮಿಗಳಾದ ಮನುಷ್ಯರು ಬಹಳ ಜನರಿರುತ್ತಾರೆ.

ಅನೃತಾಃ ಸ್ತ್ರಿಯ ಇತ್ಯೇವಂ ಸೂತ್ರಕಾರೋ ವ್ಯವಸ್ಯತಿ ।
ಯದಾऽನೃತಾಃ ಸ್ತ್ರಿಯಸ್ತಾತ ಸಹಧರ್ಮಃ ಕುತಃ ಸ್ಮೃತಃ ॥೬॥

ಸೂತ್ರಕಾರನೂ ಸಹ ಸ್ತ್ರೀಯರು ಅನೃತರು ಎಂದು ನಿರ್ಧರಿಸುತ್ತಾನೆ. ಪ್ರೀತಿಪಾತ್ರನೇ, ಸ್ತ್ರೀಯರು ಅನೃತರಾದರೆ ಸಹಧರ್ಮವನ್ನು ಏಕೆ ಹೇಳುತ್ತಾರೆ?

ಅನೃತಾಃ ಸ್ತ್ರಿಯ ಇತ್ಯೇವಂ ವೇದೇಷ್ವಪಿ ಹಿ ಪಠ್ಯತೇ ।
ಧರ್ಮೋऽಯಂ ಪೂರ್ವಿಕೋ ದೃಷ್ಟಃ ಉಪಚಾರಃ ಕ್ರಿಯಾವಿಧಿಃ ॥೭॥

ಸ್ತ್ರೀಯರು ಅನೃತರಾದವರು ಎಂಬ ವಿಷಯವು ವೇದಗಳಲ್ಲಿಯೂ ಹೇಳಲ್ಪಡುತ್ತದೆ. ಆದ್ದರಿಂದ ಪೂರ್ವಿಕರಿಂದ ಬಂದ ಈ ಸಹಧರ್ಮವು ದಂಪತಿಗಳು ಜೊತೆಯಿಂದ ಮಾಡುವ ಕಾರ್ಯಗಳಲ್ಲಿ ಅಮುಖ್ಯವಾದ ಪ್ರಯೋಗವನ್ನು ಹೊಂದುತ್ತದೆ.

ಗಹ್ವರಂ ಪ್ರತಿಭಾತ್ಯೇತನ್ಮಮ ಚಿಂತಯತೋऽನಿಶಮ್ ।
ನಿಃಸಂದೇಹಮಿದಂ ಸರ್ವಂ ಪಿತಾಮಹ ಯಥಾಶ್ರುತಿಃ ॥೮॥

ಯದೇತದ್ ಯಾದೃಶಂ ಚೈತದ್ ಯಥಾ ಚೈತತ್ತ್ವವರ್ತಿತಮ್ ।
ನಿಖಿಲೇನ ಮಹಾಪ್ರಾಜ್ಞ ಭವಾನೇತದ್ ಬ್ರವೀತು ಮೇ ॥೯॥

ಸತತವಾಗಿ ಚಿಂತನ ಮಾಡಿದರೂ ಇದು ನನಗೆ ಬಹಳ ಗೂಢವಾಗಿ ಕಾಣುತ್ತಿದೆ. ಎಲೈ ಪಿತಾಮಹನೇ, ಎಲೈ ಮಹಾಪ್ರಾಜ್ಞನೇ, ಎಲ್ಲವನ್ನೂ ಶ್ರುತಿಗೆ ಅನುಸಾರವಾಗಿ, ಸಂದೇಹಕ್ಕೆ ಎಡೆಯಿಲ್ಲದಂತೆ ಸಹಧರ್ಮವೆಂದರೆ ಏನು? ಅದು ಎಂತಹದು? ಅದು ಯಾವ ಪ್ರಕಾರವನ್ನು ಹೊಂದಿದೆ? ಅದು ಹೇಗೆ ಪ್ರವರ್ತಿತವಾಯಿತುಎಂಬುದನು ಸಮಗ್ರವಾಗಿ ನನಗೆ ಹೇಳು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಅಷ್ಟಾವಕ್ರಸ್ಯ ಸಂವಾದಂ ದಿಶಯಾ ಸಹ ಭಾರತ ॥೧೦॥

ಎಲೈ ಭಾರತನೇ, ಈ ವಿಷಯದಲ್ಲಿಯೂ ಸಹ ಅಷ್ಟಾವಕ್ರನಿಗೂ ಮತ್ತು ದಿಗ್‌ವನಿತೆಗೂ ನಡೆದ ಸಂವಾದರೂಪವಾದ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ನಿರ್ವೇಷ್ಟುಕಾಮಸ್ತು ಪುರಾ ಅಷ್ಟಾವಕ್ರೋ ಮಹಾತಪಾಃ ।
ಋಷೇರಥ ವದಾನ್ಯಸ್ಯ ಕನ್ಯಾಂ ವವ್ರೇ ಮಹಾತ್ಮನಃ ॥೧೧॥

ಮಹಾತಪಸ್ವಿಯಾದ ಅಷ್ಟಾವಕ್ರ ಋಷಿಯು ಹಿಂದೆ ಮದುವೆ ಮಾಡಿಕೊಳ್ಳಲು ಬಯಸಿ ಮಹಾತ್ಮನಾದ ವದಾನ್ಯ ಋಷಿಯ ಕನ್ಯೆಯನ್ನು ಬೇಡಿದನು.

ಸುಪ್ರಭಾಂ ನಾಮ ವೈ ನಾಮ್ನಾ ರೂಪೇಣಾಪ್ರತಿಮಾಂ ಭುವಿ ।
ಗುಣಪ್ರಭಾವಶೀಲೇನ ಸಾಧ್ವೀಂ ಚಾರಿತ್ರಶೋಭನಾಮ್ ॥೧೨॥

ಭೂಮಿಯಲ್ಲಿ ಅಪ್ರತಿಮ ಸುಂದರಿಯಾದ, ಗುಣ-ಪ್ರಭಾವ-ಶೀಲಗಳಿಂದ ಸಾಧ್ವಿಯಾದ, ಶುದ್ಧಚಾರಿತ್ರವುಳ್ಳ ಸುಪ್ರಭಾ ಎಂಬ ಕನ್ಯೆಯನ್ನು ಬೇಡಿದನು.

ಸಾ ತಸ್ಯ ದೃಷ್ಟ್ವೈವ ಮನೋ ಜಹಾರ ಶುಭಲೋಚನಾ ।
ವನರಾಜೀ ಯಥಾ ಚಿತ್ರಾ ವಸಂತೇ ಕುಸುಮಾಚಿತಾ ॥೧೩॥

ವಸಂತಕಾಲದಲ್ಲಿ ಕುಸುಮಭರಿತವಾದ ವನರಾಜಿಯು ನೋಡಿದ ತಕ್ಷಣವೇ ಮನಸ್ಸನ್ನು ಸೆಳೆಯುವಂತೆ ಶುಭಲೋಚನಳಾದ ಅವಳು ಋಷಿಯು ತನ್ನನ್ನು ನೋಡಿದ ತಕ್ಷಣವೇ ಅವನ ಮನಸ್ಸನ್ನು ಸೆಳೆದಳು.

ಅನನ್ಯಸ್ತ್ರೀಜನಃ ಪ್ರಾಜ್ಞೋ ಹ್ಯಪ್ರವಾಸೀ ಪ್ರಿಯಂವದಃ ।
ಸುರೂಪಃ ಸಮ್ಮತೋ ವೀರಃ ಶೀಲವಾನ್ ಭೋಗಭುಕ್ ಶುಚಿಃ ॥೧೪॥

ದಾರಾನುಮತಯಜ್ಞಶ್ಚ ಸುನಕ್ಷತ್ರಮಥೋದ್ವಹೇತ್ ।
ಸ್ವಭೃತ್ಯಸ್ವಜನೋಪೇತ ಇಹ ಪ್ರೇತ್ಯ ಚ ಮೋದತೇ ॥೧೫॥

ಮೊದಲು ಮದುವೆಯಾಗದಿದ್ದ ಪ್ರಾಜ್ಞನಾದ, ಬಹಳ ಪ್ರವಾಸವನ್ನು ಮಾಡದಿರುವ, ಪ್ರಿಯವಾಗಿ ಮಾತನಾಡುವ, ಒಳ್ಳೆಯ ರೂಪವನ್ನು ಹೊಂದಿದ, ಸ್ತ್ರೀಯರಿಗೆ ಸಮ್ಮತನಾಗುವ, ವೀರನಾದ, ಶೀಲವಂತನಾದ, ಭೋಗಿಯಾದ, ಶುಚಿಯಾದ, ಪತ್ನಿಯ ಜೊತೆಯಲ್ಲಿ ಯಜ್ಞವನ್ನು ಮಾಡುವ ಪುರುಷನು ತನ್ನ ಭೃತ್ಯರಿಂದ ಮತ್ತು ಸ್ವಜನರಿಂದ ಒಡಗೂಡಿ ಶುಭನಕ್ಷತ್ರದಲ್ಲಿ ವಿವಾಹವನ್ನು ಮಾಡಿಕೊಳ್ಳಬೇಕು. ಆಗ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸಂತೋಷಪಡುತ್ತಾನೆ.

ಋಷಿಸ್ತಮಾಹ ದೇಯಾ ಮೇ ಸುತಾ ತುಭ್ಯಂ ಶೃಣುಷ್ವ ಮೇ ।
ಗಚ್ಛ ತಾವದ್ ದಿಶಂ ಪುಣ್ಯಾಮುತ್ತರಾಂ ದ್ರಕ್ಷ್ಯಸೇ ತತಃ ॥೧೬॥

ವದಾನ್ಯ ಋಷಿಯು ಅಷ್ಟಾವಕ್ರನನ್ನು ಕುರಿತು ನಿನಗೆ ನನ್ನ ಮಗಳನ್ನು ಕೊಡಬೇಕು. ನನ್ನ ಮಾತನ್ನು ಕೇಳು. ಪವಿತ್ರವಾದ ಉತ್ತರದಿಕ್ಕಿಗೆ ಹೋಗು. ಅಲ್ಲಿ ನೋಡುವಿ ಎಂದು ಹೇಳಿದನು.

ಅಷ್ಟಾವಕ್ರಃ

ಕಿಂ ದ್ರಷ್ಟವ್ಯಂ ಮಯಾ ತತ್ರ ವಕ್ತುಮರ್ಹತಿ ಮೇ ಭವಾನ್ ।
ತಥೇದಾನೀಂ ಮಯಾ ಕಾರ್ಯಂ ಯಥಾ ವಕ್ಷ್ಯತಿ ಮಾಂ ಭವಾನ್ ॥

ಅಷ್ಟಾವಕ್ರ– ನಾನು ಅಲ್ಲಿ ಏನನ್ನು ನೋಡಬೇಕೆಂದು ನೀನು ನನಗೆ ಹೇಳಬೇಕು. ನೀನು ಹೇಗೆ ಹೇಳುತ್ತೀಯೋ ಅದರಂತೆ ನಾನೀಗ ಕಾರ್ಯವನ್ನು ಮಾಡಬೇಕಾಗಿದೆ.

ವದಾನ್ಯಃ

ಧನದಂ ಸಮತಿಕ್ರಮ್ಯ ಹಿಮವಂತಂ ತಥೈವ ಚ ।
ರುದ್ರಸ್ಯಾಯತನಂ ದೃಷ್ಟ್ವಾ ಸಿದ್ಧಚಾರಣಸೇವಿತಮ್ ॥೧೮॥

ವದಾನ್ಯ– ಕುಬೇರನ ವಾಸಸ್ಥಾನವನ್ನು ದಾಟಿ, ಹಾಗೆಯೇ ಹಿಮಾಲಯ ಪರ್ವತವನ್ನೂ ದಾಟಿ, ಸಿದ್ಧ-ಚಾರಣ ಸಹಿತವಾದ, ಶಿವನ ನಿವಾಸಸ್ಥಾನಕ್ಕೆ ಹೋಗಿ ನೋಡು.

ಸಂಹೃಷ್ಟೈಃ ಪಾರ್ಷದೈರ್ಜುಷ್ಟಂ ನೃತ್ಯದ್ಭಿರ್ವಿವಿಧಾನನೈಃ ।
ದಿವ್ಯಾಂಗರಾಗೈಃ ಪೈಶಾಚೈರ್ವನ್ಯೈ ರ್ನಾನಾವಿಧೈಸ್ತಥಾ ॥೧೯॥

ಪಾಣಿತಾಳಸತಾಳೈಶ್ಚ ಶಮ್ಯಾತಾಳೈಃ ಸಮೈಸ್ತಥಾ ।
ಸಂಪ್ರಹೃಷ್ಟೈಃ ಪ್ರನೃತ್ಯದ್ಭಿಃ ಶರ್ವಸ್ತತ್ರ ನಿಷೇವ್ಯತೇ ॥೨೦॥

ವಿವಿಧವಾದ ಮುಖಗಳನ್ನು ಹೊಂದಿದ, ನಾನಾ ವಿಧವಾದ ವನರಸಗಳಿಂದ ದಿವ್ಯಾಂಗರಾಗದಿಂದ ಭೂಷಿತರಾದ, ಪಿಶಾಚಿಗಳಾದ ಪಾರ್ಷದರು ಸಂತೋಷದಿಂದ ಅಲ್ಲಿರುತ್ತಾರೆ. ಕಂಚಿನ ತಾಳಗಳ ಜೊತೆಯಲ್ಲಿ ಅವರಿಗೆ ಸಮಾನವಾಗಿ ಚಪ್ಪಾಳೆಯನ್ನು ತಟ್ಟುತ್ತಾ , ಸಂತೋಷದಿಂದ ನರ್ತನವನ್ನು ಮಾಡುತ್ತಾ ಅಲ್ಲಿ ಶಿವನನ್ನು ಸೇವಿಸುತ್ತಾರೆ.

ಇಷ್ಟಂ ಕಿಲ ಗಿರೌ ಸ್ಥಾನಂ ತದ್ ದಿವ್ಯಮನುಶುಶ್ರುಮ ।
ನಿತ್ಯಂ ಸನ್ನಿಹಿತೋ ದೇವಸ್ತಥಾ ಪಾರಿಷದಾಃ ಶುಭಾಃ ॥೨೧॥

ಆ ದಿವ್ಯಸ್ಥಾನವು ಶಿವನಿಗೆ ಇಷ್ಟವಾದುದು ಎಂದು ನಾವು ಕೇಳಿದ್ದೇವೆ. ಅಲ್ಲಿ ದೇವನಾದ ಶಿವನೂ ಮತ್ತು ಅವನ ಶುಭ ಪಾರ್ಷದರೂ ಯಾವಾಗಲೂ ಸನ್ನಿಹಿತರಾಗಿರುತ್ತಾರೆ.

ತತ್ರ ದೇವ್ಯಾ ತಪಸ್ತಪ್ತಂ ಶಂಕರಾರ್ಥಂ ಸುದುಶ್ಚರಮ್ ।
ಅತಸ್ತದಿಷ್ಟಂ ದೇವಸ್ಯ ತಥೋಮಾಯಾ ಇತಿ ಶ್ರುತಿಃ ॥೨೨॥

ಅಲ್ಲಿ ಪಾರ್ವತಿಯು ಶಂಕರನನ್ನು ಪತಿಯಾಗಿ ಪಡೆಯಲು ಸುದುಶ್ಚರವಾದ ತಪಸ್ಸನ್ನು ಮಾಡಿದಳು. ಆ ಕಾರಣದಿಂದ ಆ ಸ್ಥಾನವು ದೇವನಿಗೂ ಮತ್ತು ಪಾರ್ವತಿಗೂ ಇಷ್ಟವಾದುದು ಎಂದು ನಾವು ಕೇಳಿದ್ದೇವೆ.

ಪೂರ್ವೇ ತತ್ರ ಮಹಾನ್ ಪಾರ್ಶ್ವೇ ದೇವಸ್ಯೋತ್ತರತಸ್ತಥಾ ।
ಋತವಃ ಕಾಳರಾತ್ರಿಶ್ಚ ಯೇ ದಿವ್ಯಾ ಯೇ ಚ ಮಾನುಷಾಃ ॥೨೩॥

ಸರ್ವೇ ದೇವಮುಪಾಸಂತೇ ರೂಪಿಣಃ ಕಿಲ ತತ್ರ ಹ ।
ತದತಿಕ್ರಮ್ಯ ಭವನಂ ತ್ವಯಾ ಯಾತವ್ಯಮೇವ ಹಿ ॥೨೪॥

ಅಲ್ಲಿ ಆ ದೇವನ ಪೂರ್ವ ಮತ್ತು ಉತ್ತರ ಪಾರ್ಶ್ವಗಳಲ್ಲಿ ಋತುಗಳು, ಕಾಳರಾತ್ರಿ, ದಿವ್ಯಪುರುಷರು ಎಲ್ಲರೂ ಒಳ್ಳೆಯ ರೂಪವನ್ನು ಧರಿಸಿ ದೇವನನ್ನು ಉಪಾಸನೆ ಮಾಡುತ್ತಾರೆ. ನೀನು ಆ ಸ್ಥಾನವನ್ನು ದಾಟಿ ಮುಂದೆ ಹೋಗಬೇಕು.

ತತೋ ನೀಲಂ ವನೋದ್ದೇಶಂ ದ್ರಕ್ಷ್ಯಸೇ ಮೇಘಸನ್ನಿಭಮ್ ।
ರಮಣೀಯಂ ಮನೋಗ್ರಾಹಿ ತತ್ರ ದ್ರಕ್ಷ್ಯಸಿ ವೈ ಸ್ತ್ರಿಯಮ್ ॥೨೫॥

ಅನಂತರ ನೀನು ರಮಣೀಯವಾದ, ಮನೋಹರವಾದ, ಮೇಘ ಕಾಂತಿಯನ್ನು ಹೊಂದಿದ ಕಪ್ಪಾದ ವನಪ್ರದೇಶವನ್ನು ನೋಡುವಿ. ಅಲ್ಲಿ ಸ್ತ್ರೀಯನ್ನು ನೋಡುವಿ.

ತಪಸ್ವಿನೀಂ ಮಹಾಭಾಗಾಂ ವೃದ್ಧಾಂ ದೀಕ್ಷಾಮನುಷ್ಠಿತಾಮ್ ।
ದ್ರಷ್ಟವ್ಯಾ ಸಾ ತ್ವಯಾ ತತ್ರ ಸಂಪೂಜ್ಯಾ ಚೈವ ಯತ್ನತಃ ॥೨೬॥

ಅವಳು ತಪಸ್ವಿನಿ, ಮಹಾನುಭಾವಳು, ವೃದ್ಧಳು ಮತ್ತು ದೀಕ್ಷಾನಿರತಳು. ನೀನು ಅವಳನ್ನು ಅಲ್ಲಿ ನೋಡಿ ಪ್ರಯತ್ನಪೂರ್ವಕವಾಗಿ ಅವಳನ್ನು ಪೂಜಿಸಬೇಕು.

ತಾಂ ದೃಷ್ಟ್ವಾ ವಿನಿವೃತ್ತಸ್ತ್ವಂ ತತಃ ಪಾಣಿಂ ಗ್ರಹೀಷ್ಯಸಿ ।
ಯದ್ಯೇಷ ಸಮಯಃ ಸತ್ಯಃ ಸಾಧ್ಯತಾಂ ತತ್ರ ಗಮ್ಯತಾಮ್ ॥೨೭॥

ಅವಳನ್ನು ನೋಡಿ ಹಿಂದಿರುಗಿದ ಮೇಲೆ ನೀನು ಪಾಣಿಗ್ರಹಣವನ್ನು ಮಾಡಿಕೊಳ್ಳುವಿ. ಈ ನಿಬಂಧನೆ ನಿನಗೆ ಸತ್ಯವೆನಿಸಿದರೆ (ಒಪ್ಪಿಗೆಯಾದರೆ) ಅಲ್ಲಿಗೆ ಹೊರಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಅಷ್ಟಾವಕ್ರವದಾನ್ಯಸಂವಾದೇ
ಕನ್ಯಾವರಣಂ ನಾಮ ದ್ವಿಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ಮೂರನೆಯ ಅಧ್ಯಾಯ

ಅಷ್ಟಾವಕ್ರ ದಿಕ್‌ಸಂವಾದ

ಅಷ್ಟಾವಕ್ರಃ

ತಥಾಸ್ತು ಸಾಧಯಿಷ್ಯಾಮಿ ತತ್ರ ಯಾಸ್ಯಾಮ್ಯಸಂಶಯಮ್ ।
ಯತ್ರ ತ್ವಂ ವದಸೇ ಸಾಧೋ ಭವಾನ್ ಭವತು ಸತ್ಯವಾಕ್ ॥೧॥

ಅಷ್ಟಾವಕ್ರ– ಎಲೈ ಸಾಧುವೇ, ಹಾಗೆಯೇ ಆಗಲಿ. ನಿಸ್ಸಂಶಯವಾಗಿ ನೀನು ಎಲ್ಲಿಗೆ ಹೋಗಬೇಕೆಂದು ಹೇಳುತ್ತೀಯೋ ಅಲ್ಲಿಗೇ ಹೊರಡುವೆನು. ನಿನ್ನ ವಚನವು ಸತ್ಯವಾಗಲಿ.

ಭೀಷ್ಮಃ

ತತೋಽಗಚ್ಛತ್ ಸ ಭಗವಾನುತ್ತರಾಮುತ್ತಮಾಂ ದಿಶಮ್ ।
ಹಿಮವಂತಂ ಗಿರಿಶ್ರೇಷ್ಠಂ ಸಿದ್ಧಚಾರಣಸೇವಿತಮ್ ॥೨॥

ಭೀಷ್ಮ– ಅನಂತರ ಆ ಪೂಜ್ಯನು ಶ್ರೇಷ್ಠವಾದ ಉತ್ತರ ದಿಕ್ಕಿಗೆ ಹೊರಟು ಸಿದ್ಧ-ಚಾರಣ ಸೇವಿತವಾದ ಶ್ರೇಷ್ಠಪರ್ವತವಾದ ಹಿಮಾಲಯಕ್ಕೆ ಹೋದನು.

ಸ ಗತ್ವಾ ದ್ವಿಜಶಾರ್ದೂಲೋ ಹಿಮವಂತಂ ಮಹಾಗಿರಿಮ್ ।
ಅಭ್ಯಗಚ್ಛನ್ನದೀಂ ಪುಣ್ಯಾಂ ಬಾಹುದಾಂ ಧರ್ಮದಾಯಿನೀಮ್ ॥೩॥

ಆ ದ್ವಿಜಶಾರ್ದೂಲನು ಹಿಮಾಲಯ ಪರ್ವತಕ್ಕೆ ಹೋಗಿ ಅಲ್ಲಿಂದ ಪವಿತ್ರವಾದ, ಧರ್ಮಪ್ರದವಾದ ಬಾಹುದಾ ನದಿಯನ್ನು ತಲುಪಿದನು.

ಅಶೋಕೇ ವಿಮಲೇ ತೀರ್ಥೇ ಸ್ನಾತ್ವಾ ತರ್ಪ್ಯ ಚ ದೇವತಾಃ ।
ತತ್ರ ವಾಸಾಯ ಶಯನೇ ಕೌಶ್ಯೇ ಸುಖಮುವಾಸ ಹ ॥೪॥

ಅಲ್ಲಿಂದ ಮುಂದೆ ವಿಮಲವಾದ ಅಶೋಕತೀರ್ಥಕ್ಕೆ ಹೋಗಿ ಸ್ನಾನವನ್ನು ಮಾಡಿ ದೇವತೆಗಳಿಗೆ ತರ್ಪಣವನ್ನು ನೀಡಿ ಅಲ್ಲಿಯೇ ರಾತ್ರಿಯನ್ನು ಕಳೆಯಲು ಒಂದು ದರ್ಭೆಯ ಹಾಸಿಗೆಯಲ್ಲಿ ಸುಖವಾಗಿ ಮಲಗಿದನು.

ತತೋ ರಾತ್ರ್ಯಾಂ ವ್ಯತೀತಾಯಾಂ ಪ್ರಾತರುತ್ಥಾಯ ಸ ದ್ವಿಜಃ ।
ಸ್ನಾತ್ವಾ ಪ್ರಾದುಶ್ಚಕಾರಾಗ್ನಿಂ ಹುತ್ವಾ ಚೈವ ವಿಧಾನತಃ ॥೫॥

ರಾತ್ರಿಯು ಕಳೆಯುತ್ತಿರಲು ಪ್ರಾತಃಕಾಲದಲ್ಲಿ ಆ ಬ್ರಾಹ್ಮಣನು ಎದ್ದು ಸ್ನಾನವನ್ನು ಮಾಡಿ ಅಗ್ನಿಯನ್ನು ಪ್ರಾದುರ್ಭಾವಗೊಳಿಸಿ ಹೋಮವನ್ನು ಮಾಡಿದನು.

ರುದ್ರಾಣೀಕೂಪಮಾಸಾದ್ಯ ಹ್ರದೇ ತತ್ರ ಸಮಾಶ್ವಸತ್ ।
ವಿಶ್ರಾಂತಶ್ಚ ಸಮುತ್ಥಾಯ ಕೈಲಾಸಮಭಿತೋ ಯಯೌ ॥೬॥

ಅಲ್ಲಿಂದ ಮುಂದೆ ಪಾರ್ವತೀ ತೀರ್ಥಕ್ಕೆ ಹೋಗಿ ಆ ಮಡುವಿನಲ್ಲಿ ವಿಶ್ರಮಿಸಿದನು. ವಿಶ್ರಾಂತಿಯನ್ನು ಪಡೆದ ಮೇಲೆ ಅಲ್ಲಿಂದ ಎದ್ದು ಕೈಲಾಸ ಪರ್ವತದ ಕಡೆ ಹೊರಟನು.

ಸೋಽಪಶ್ಯತ್ ಕಾಂಚನದ್ವಾರಂ ದೀಪ್ಯಮಾನಮಿವ ಶ್ರಿಯಾ ।
ಮಂದಾಕಿನೀಂ ಚ ನಳಿನೀಂ ಧನದಸ್ಯ ಮಹಾತ್ಮನಃ ॥೭॥

ಅವನು ಅಲ್ಲಿಂದ ಹೊರಟು ಮಂದಾಕಿನೀ ನದಿಯನ್ನೂ, ಸಂಪತ್ತಿನಿಂದ ಜ್ವಲಿಸುವ ಮಹಾತ್ಮನಾದ ಕುಬೇರನ ಸುವರ್ಣಮಯವಾದ ಬೃಹತ್ ದ್ವಾರವನ್ನೂ ನೋಡಿದನು.

ಅಥ ತೇ ರಾಕ್ಷಸಾಃ ಸರ್ವೇ ಯೇಽಭಿರಕ್ಷಂತಿ ಪದ್ಮಿನೀಮ್ ।
ಪ್ರತ್ಯುತ್ಥಿತಾ ಭಗವಂತಂ ಮಾಣಿಭದ್ರಪುರೋಗಮಾಃ ॥೮॥

ಆಗ ಆ ಸರೋವರ ರಕ್ಷಕರಾದ ಮಾಣಿಭದ್ರ ಮೊದಲಾದ ರಾಕ್ಷಸರೆಲ್ಲರೂ ಆ ಪೂಜ್ಯನನ್ನು ನೋಡಿ ಎದ್ದು ನಿಂತರು.

ಸ ತಾನ್ ಪ್ರತ್ಯರ್ಚಯಾಮಾಸ ರಾಕ್ಷಸಾನ್ ಭೀಮವಿಕ್ರಮಾನ್ ।
ನಿವೇದಯತ ಮಾಂ ಕ್ಷಿಪ್ರಂ ಧನದಾಯೇತಿ ಚಾಬ್ರವೀತ್ ॥೯॥

ಆ ಬ್ರಾಹ್ಮಣನು ಭಯಂಕರ ಪರಾಕ್ರಮವುಳ್ಳ ಆ ರಾಕ್ಷಸರನ್ನು ಪೂಜಿಸಿ, ಕುಬೇರನಿಗೆ ನಾನು ಬಂದಿದ್ದೇನೆಂದು ಶೀಘ್ರವಾಗಿ ತಿಳಿಸಿ ಎಂದು ಹೇಳಿದನು.

ತೇ ರಾಕ್ಷಸಾಸ್ತದಾ ರಾಜನ್ ಭಗವಂತಮಥಾಬ್ರುವನ್ ।
ಅಸೌ ವೈಶ್ರವಣೋ ರಾಜಾ ಸ್ವಯಮಾಯಾತಿ ತೇಽಂತಿಕಮ್ ॥೧೦॥

ವಿದಿತೋ ಭಗವಾನಸ್ಯ ಕಾರ್ಯಮಾಗಮನೇ ಚ ಯತ್ ।
ಪಶ್ಯೈನಂ ತ್ವಂ ಮಹಾಭಾಗಂ ಜ್ವಲಂತಮಿವ ತೇಜಸಾ ॥೧೧॥

ಎಲೈ ರಾಜನೇ, ಆಗ ಆ ರಾಕ್ಷಸರು ಪೂಜ್ಯನಾದ ಬ್ರಾಹ್ಮಣನನ್ನು ಕುರಿತು ನಮ್ಮ ರಾಜನಾದ ಕುಬೇರನು ನಿನ್ನ ಬಳಿಗೆ ಸ್ವತಃ ಬರುತ್ತಾನೆ. ನೀನು ಬಂದಿರುವುದು ಮತ್ತು ನಿನ್ನ ಆಗಮನದ ಉದ್ದೇಶವು ಅವನಿಗೆ ತಿಳಿದಿದೆ. ತೇಜಸ್ಸಿನಿಂದ ಬರುವ ಆ ಮಹಾನುಭಾವನನ್ನು ನೋಡು ಎಂದು ಹೇಳಿದರು.

ತತೋ ವೈಶ್ರವಣೋಽಭ್ಯೇತ್ಯ ಅಷ್ಟಾವಕ್ರಮನಿಂದಿತಮ್ ।
ವಿಧಿವತ್ ಕುಶಲಂ ಪೃಷ್ಟ್ವಾ ತತೋ ಬ್ರಹ್ಮರ್ಷಿಮಬ್ರವೀತ್ ॥೧೨॥

ಅನಂತರ ಕುಬೇರನು ಬಂದು ನಿರ್ದುಷ್ಟನಾದ ಅಷ್ಟಾವಕ್ರನನ್ನು ಶಾಸ್ತ್ರೋಕ್ತರೀತಿಯಲ್ಲಿ ಕುಶಲಪ್ರಶ್ನೆಯನ್ನು ಮಾಡಿ ಅನಂತರ ಬ್ರಹ್ಮರ್ಷಿಯನ್ನು ಕುರಿತು ಕೇಳಿದನು.

ಸುಖಂ ಪ್ರಾಪ್ತೋ ಭವಾನ್ ಕಚ್ಚಿತ್ ಕಿಂ ವಾ ಮತ್ತಶ್ಚಿಕೀರ್ಷಸಿ ।
ಬ್ರೂಹಿ ಸರ್ವಂ ಕರಿಷ್ಯಾಮಿ ಯನ್ಮಾಂ ತ್ವಂ ವಕ್ಷ್ಯಸಿ ದ್ವಿಜ ॥೧೩॥

ಭವನಂ ಪ್ರವಿಶ ತ್ವಂ ಮೇ ಯಥಾಕಾಮಂ ದ್ವಿಜೋತ್ತಮ ।
ಸತ್ಕೃತಃ ಕೃತಕಾರ್ಯಶ್ಚ ಭವಾನ್ ಯಾಸ್ಯತ್ಯವಿಘ್ನತಃ ॥೧೪॥

ನೀನು ಇಲ್ಲಿಗೆ ಸುಖವಾಗಿ ಬಂದೆಯಾ? ನನ್ನಿಂದ ನೀನು ಏನು ಬಯಸುತ್ತೀಯೆ? ಅದನ್ನು ಹೇಳು. ಎಲೈ ಬ್ರಾಹ್ಮಣನೇ, ನೀನು ಹೇಳಿದುದೆಲ್ಲವನ್ನೂ ಮಾಡುವೆನು. ಎಲೈ ದ್ವಿಜಶ್ರೇಷ್ಠನೇ, ನೀನು ನನ್ನ ಮನೆಯನ್ನು ಪ್ರವೇಶಿಸಿ ಅಲ್ಲಿ ಪೂಜಿತನಾಗಿ ಕೃತಕೃತ್ಯನಾಗಿ ನೀನು ನಿರ್ವಿಘ್ನವಾಗಿ ಮುಂದೆ ಹೋಗುವಿ (ಎಂದು ಹೇಳಿದನು).

ಪ್ರಾವಿಶದ್ ಭವನಂ ಸ್ವಂ ವೈ ಗೃಹೀತ್ವಾ ತಂ ದ್ವಿಜೋತ್ತಮಮ್ ।
ಆಸನಂ ಸ್ವಂ ದದೌ ಚೈವ ಪಾದ್ಯಮರ್ಘ್ಯಂ ತಥೈವ ಚ ॥೧೫॥

ಕುಬೇರನು ಆ ದ್ವಿಜೋತ್ತಮನ ಕೈಯನ್ನು ಹಿಡಿದು ತನ್ನ ಗೃಹವನ್ನು ಪ್ರವೇಶಿಸಿ ಆ ಬ್ರಾಹ್ಮಣನಿಗೆ ತನ್ನ ಆಸನವನ್ನು ನೀಡಿ ಅರ್ಘ್ಯ-ಪಾದ್ಯಗಳನ್ನು ನೀಡಿದನು.

ಅಥೋಪವಿಷ್ಟಯೋಸ್ತತ್ರ ಮಾಣಿಭದ್ರಪುರೋಗಮಾಃ ।
ನಿಷೇದುಸ್ತತ್ರ ಕೌಬೇರಾ ಯಕ್ಷಗಂಧರ್ವಕಿನ್ನರಾಃ ॥೧೬॥

ಅನಂತರ ಕುಬೇರ ಮತ್ತು ಅಷ್ಟಾವಕ್ರರು ಕುಳಿತಿರಲು ಮಾಣಿಭದ್ರನೇ ಮೊದಲಾದ ಕುಬೇರನ ಅನುಚರರಾದ ಯಕ್ಷ-ಗಂಧರ್ವ-ಕಿನ್ನರರು ಅಲ್ಲಿ ಕುಳಿತುಕೊಂಡರು.

ತತಸ್ತೇಷಾಂ ನಿಷಣ್ಣಾನಾಂ ಧನದೋ ವಾಕ್ಯಮಬ್ರವೀತ್ ।
ಭವಚ್ಛಂದಂ ಸಮಾಜ್ಞಾಯ ನೃತ್ಯೇರನ್ನಪ್ಸರೋಗಣಾಃ ॥೧೭॥

ಆತಿಥ್ಯಂ ಪರಮಂ ಕಾರ್ಯಂ ಶುಶ್ರೂಷಾ ಭವತಸ್ತಥಾ ।
ಸಂವರ್ತತಾಮಿತ್ಯುವಾಚ ಮುನಿರ್ಮಧುರಯಾ ಗಿರಾ ॥೧೮॥

ಎಲ್ಲರೂ ಕುಳಿತುಕೊಂಡ ಮೇಲೆ ಕುಬೇರನು ಬ್ರಾಹ್ಮಣನನ್ನು ಕುರಿತು ನಿನ್ನ ಅಭಿಪ್ರಾಯವನ್ನು ತಿಳಿದು ಅಪ್ಸರೆಯ ಸಮೂಹಗಳು ನೃತ್ಯವನ್ನು ಮಾಡುತ್ತವೆ. ನಿನಗೆ ನಾನು ಶ್ರೇಷ್ಠವಾದ ಆತಿಥ್ಯವನ್ನು ಮತ್ತು ಸೇವೆಯನ್ನು ಮಾಡಬೇಕು ಎಂದು ಹೇಳಿದನು. ಋಷಿಯು ಮಧುರವಾದ ಮಾತಿನಿಂದ ನೃತ್ಯವು ಜರುಗಲಿ ಎಂದು ಹೇಳಿದನು.

ಅಥೋರ್ವರಾ ಮಿಶ್ರಕೇಶೀ ರಂಭಾ ಚೈವೋರ್ವಶೀ ತಥಾ ।
ಅಲಂಬುಸಾ ಘೃತಾಚೀ ಚ ಚಿತ್ರಾ ಚಿತ್ರಾಂಗದಾ ರುಚಿಃ ॥೧೯॥

ಮನೋಹರಾ ಸುಕೇಶೀ ಚ ಸುಮುಖೀ ಹಾಸಿನೀ ಪ್ರಭಾ ।
ವಿದ್ಯುತಾ ಪ್ರಶಮೀ ದಾಂತಾ ವಿದ್ಯೋತಾ ರತಿರೇವ ಚ ॥೨೦॥

ಏತಾಶ್ಚಾನ್ಯಾಶ್ಚ ವೈ ಬಹ್ವ್ಯಃ ಪ್ರನೃತ್ತಾಪ್ಸರಸಃ ಶುಭಾಃ ।
ಅವಾದಯಂಶ್ಚ ಗಂಧರ್ವಾ ವಾದ್ಯಾನಿ ವಿವಿಧಾನಿ ಚ ॥೨೧॥

ಅನಂತರ ಊರ್ವರಾ, ಮಿಶ್ರಕೇಶೀ, ರಂಭಾ, ಊರ್ವಶೀ, ಅಲಂಬುಸಾ, ಘೃತಾಚೀ, ಚಿತ್ರಾ , ಚಿತ್ರಾಂಗದಾ, ರುಚಿ, ಮನೋಹರಾ, ಸುಕೇಶೀ, ಸುಮುಖೀ, ಹಾಸಿನೀ, ಪ್ರಭಾ, ವಿದ್ಯುತಾ, ಪ್ರಶಮೀ, ದಾಂತಾ, ವಿದ್ಯೋತಾ, ರತಿ ಇವರೂ ಮತ್ತು ಇನ್ನೂ ಅನೇಕ ಶುಭರಾದ ಅಪ್ಸರೆಯರೂ ನೃತ್ಯವನ್ನು ಮಾಡಿದರು. ಗಂಧರ್ವರು ವಿವಿಧವಾದ ವಾದ್ಯಗಳನ್ನು ನುಡಿಸಿದರು.

ಅಥ ಪ್ರವೃತ್ತೇ ಗಾಂಧರ್ವೇ ದಿವ್ಯೇ ಋಷಿರುಪಾವಸತ್ ।
ದಿವ್ಯಂ ಸಂವತ್ಸರಂ ತತ್ರ ರಮನ್ ವೈ ಸುಮಹಾತಪಾಃ ॥೨೨॥

ಹೀಗೆ ದಿವ್ಯವಾದ ನೃತ್ಯ-ಗಾನಗಳು ಜರುಗುತ್ತಿರಲು ಮಹಾತಪಸ್ವಿಯಾದ ಆ ಋಷಿಯು ಸಂತೋಷಪಡುತ್ತಾ ದಿವ್ಯವಾದ ಒಂದು ಸಂವತ್ಸರ ಕಾಲದವರೆಗೆ ಅಲ್ಲಿ ವಾಸ ಮಾಡಿದನು.

ತತೋ ವೈಶ್ರವಣೋ ರಾಜಾ ಭಗವಂತಮುವಾಚ ಹ ।
ಸಾಗ್ರಃ ಸಂವತ್ಸರೋ ಯಾತಸ್ತವ ವಿಪ್ರೇಹ ಪಶ್ಯತಃ ॥೨೩॥

ಹಾಯೋ೯ಽಯಂ ವಿಷಯೋ ಬ್ರಹ್ಮನ್ ಗಾಂಧರ್ವೋ೯ ನಾಮ ನಾಮತಃ ।
ಛಂದತೋ ವರ್ತತಾಂ ವಿಪ್ರ ಯಥಾ ವದತಿ ವಾ ಭವಾನ್ ॥೨೪॥

ಅತಿಥಿಃ ಪೂಜನೀಯಸ್ತ್ವಮಿದಂ ಚ ಭವತೋ ಗೃಹಮ್ ।
ಸರ್ವಮಾಜ್ಞಾಪ್ಯತಾಮಾಶು ಪರವಂತೋ ವಯಂ ತ್ವಯಿ ॥೨೫॥

ಅನಂತರ ರಾಜನಾದ ವೈಶ್ರವಣನು ಪೂಜ್ಯನಾದ ಆ ಬ್ರಾಹ್ಮಣನನ್ನು ಕುರಿತು 'ಎಲೈ ಬ್ರಾಹ್ಮಣನೇ, ಇಲ್ಲಿ ನೃತ್ಯಾದಿಗಳನ್ನು ನೋಡುವ ನಿನಗೆ ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲವು ಕಳೆದಿದೆ. ಎಲೈ ಬ್ರಾಹ್ಮಣನೇ, ಈ ದೇಶಕ್ಕೆ ಗಾಂಧರ್ವ ಎಂದು ಹೆಸರು. ನಾವು ಇದನ್ನು ಬಿಡಬೇಕು. ಎಲೈ ಬ್ರಾಹ್ಮಣನೇ, ನಿನ್ನ ಅಭಿಪ್ರಾಯದಂತೆ ನೀನು ಇಲ್ಲಿ ಇರಬಹುದು ಅಥವಾ ನೀನು ಹೇಳಿದಂತೆ ನಾನು ಕೇಳುತ್ತೇನೆ. ನೀನು ನಮಗೆ ಪೂಜ್ಯನಾದ ಅತಿಥಿ. ಇದು ನಿನ್ನ ಗೃಹ. ನಾವು ಏನು ಮಾಡಬೇಕೆಂದು ಶೀಘ್ರವಾಗಿ ಆಜ್ಞೆಯನ್ನು ಮಾಡು. ನಾವು ನಿನಗೆ ಅಧೀನರಾದವರು' ಎಂದು ಹೇಳಿದನು.

ಅಥ ವೈಶ್ರವಣಂ ಪ್ರೀತೋ ಭಗವಾನ್ ಪ್ರತ್ಯಭಾಷತ ।
ಅರ್ಚಿತೋಽಸ್ಮಿ ಯಥಾನ್ಯಾಯಂ ಗಮಿಷ್ಯಾಮಿ ಧನೇಶ್ವರ ॥೨೬॥

ಪ್ರೀತೋಽಸ್ಮಿ ಸದೃಶಂ ಚೈವ ತವ ಸರ್ವಂ ಧನಾಧಿಪ ।
ತವ ಪ್ರಸಾದಾದ್ ಭಗವನ್ ಮಹರ್ಷೇಶ್ಚ ಮಹಾತ್ಮನಃ ।
ನಿಯೋಗಾದದ್ಯ ಯಾಸ್ಯಾಮಿ ವೃದ್ಧಿಮಾನ್ ಋದ್ಧಿಮಾನ್ ಭವ ॥೨೭॥

ಆಗ ಪೂಜ್ಯನಾದ ಋಷಿಯು ಸಂತೋಷದಿಂದ ವೈಶ್ರವಣನನ್ನು ಕುರಿತು 'ಎಲೈ ಧನೇಶ್ವರನೇ, ನಾನು ಶಾಸ್ತ್ರೋಕ್ತ ರೀತಿಯಲ್ಲಿ ಪೂಜಿತನಾಗಿದ್ದೇನೆ. ಇನ್ನು ಹೊರಡುವೆನು. ನಾನು ಬಹಳ ಪ್ರಸನ್ನನಾಗಿದ್ದೇನೆ. ಎಲೈ ಜನೇಶ್ವರನೇ, ನೀನು ಮಾಡಿದುದೆಲ್ಲವೂ ನಿನ್ನ

ಯೋಗ್ಯತೆಗೆ ಉಚಿತವಾಗಿದೆ. ಎಲೈ ಪೂಜ್ಯನೇ, ನಿನ್ನ ಅನುಗ್ರಹದಿಂದ ಮಹಾತ್ಮನಾದ ಮಹರ್ಷಿಯಾದ ವದಾನ್ಯನ ಆಜ್ಞೆಯಂತೆ ಈ ದಿನ ನಾನು ಹೊರಡುವೆನು. ನೀನು ಸಂಪತ್ತನ್ನೂ ಅಭಿವೃದ್ಧಿಯನ್ನೂ ಹೊಂದುವವನಾಗು' ಎಂದು ಹೇಳಿದನು.

ಅಥ ನಿಷ್ಕ್ರಮ್ಯ ಭಗವಾನ್ ಪ್ರಯಯಾವುತ್ತರಾಮುಖಃ ।
ಕೈಲಾಸೇ ಶಂಕರಾವಾಸಮಭಿವೀಕ್ಷ್ಯ ಪ್ರಣಮ್ಯ ಚ ॥೨೮॥

ಗೌರೀಶಂ ಶಂಕರಂ ದಾಂತಂ ಶರಣಾಗತವತ್ಸಲಮ್ ।
ಗಂಗಾಧರಂ ಗೋಪತಿಗಂ ಗಣಾವೃತಮಕಲ್ಮಷಮ್ ।
ಕೈಲಾಸಂ ಮಂದರಂ ಹೈಮಂ ಸರ್ವಾನನುಚಚಾರ ಹ ॥೨೯॥

ಆಗ ಪೂಜ್ಯನಾದ ಋಷಿಯು ಅನಂತರ ಅಲ್ಲಿಂದ ಉತ್ತರಾಭಿಮುಖವಾಗಿ ಹೊರಟನು. ಶಂಕರನ ವಾಸಸ್ಥಾನವಾದ ಕೈಲಾಸ ಪರ್ವತವನ್ನು ನೋಡಿ ನಮಸ್ಕರಿಸಿ ಗೌರೀಪತಿಯೂ, ಶಂಕರನೂ, ಶರಣಾಗತವತ್ಸಲನೂ, ದಾಂತನೂ, ಗಂಗಾಧರನೂ, ಪಶುಪತಿಯೂ, ತನ್ನ ಗಣಗಳಿಂದ ಆವೃತನಾದವನೂ, ಕಲ್ಮಷರಹಿತನಾದವನೂ ಆದ ಶಿವನ ವಾಸಸ್ಥಾನವಾದ ಸುವರ್ಣಮಯವಾದ ಕೈಲಾಸ ಮತ್ತು ಮಂದರ ಪರ್ವತಗಳಲ್ಲಿ ಎಲ್ಲ ಕಡೆಗಳಲ್ಲಿಯೂ ಸಂಚರಿಸಿದನು.

ತಾನತೀತ್ಯ ಮಹಾಶೈಲಾನ್ ಕೈರಾತಂ ಸ್ಥಾನಮುತ್ತಮಮ್ ।
ಪ್ರದಕ್ಷಿಣಂ ತತಶ್ಚಕ್ರೇ ಪ್ರಯತಃ ಶಿರಸಾ ನಮನ್ ।
ಧರಣೀಮವತೀರ್ಯಾಥ ಪೂತಾತ್ಮಾಽಸೌ ತದಾಽಭವತ್ ॥೩೦॥

ಆ ಮಹಾಪರ್ವತಗಳನ್ನು ದಾಟಿ ಕಿರಾತರ ಶ್ರೇಷ್ಠವಾದ ಸ್ಥಾನಕ್ಕೆ ಪ್ರದಕ್ಷಿಣೆಯನ್ನು ಮಾಡಿ ಶಿರಸಾ ನಮಸ್ಕಾರವನ್ನು ಮಾಡಿ ಅಲ್ಲಿಂದ ಭೂಮಿಗೆ ಇಳಿದು ಆಗ ಪವಿತ್ರನಾದನು.

ಸ ತಂ ಪ್ರದಕ್ಷಿಣಂ ಕೃತ್ವಾ ತ್ರಿಃ ಶೈಲಂ ಚೋತ್ತರಾಮುಖಃ ।
ಸಮೇನ ಭೂಮಿಭಾಗೇನ ಯಯೌ ಪ್ರೀತಿಪುರಸ್ಕೃತಃ ॥೩೧॥

ಅವನು ಮೂರು ಬಾರಿ ಆ ಪರ್ವತಕ್ಕೆ ಪ್ರದಕ್ಷಿಣೆಯನ್ನು ಮಾಡಿ ಉತ್ತರಾಭಿಮುಖವಾಗಿ ಸಮತಟ್ಟಾದ ಭೂಮಿಭಾಗದಲ್ಲಿ ಸಂತೋಷದಿಂದ ಹೊರಟನು.

ತತೋऽಪರಂ ವನೋದ್ದೇಶಂ ರಮಣೀಯಮಪಶ್ಯತ ।
ಸರ್ವರ್ತುಭಿರ್ಮೂಲಫಲೈಃ ಪಕ್ಷಿಭಿಶ್ಚ ಸಮನ್ವಿತಮ್ ।
ರಮಣೀಯೈರ್ವನೋದ್ದೇಶೈಸ್ತತ್ರ ತತ್ರ ವಿಭೂಷಿತಮ್ ॥೩೨॥

ಅನಂತರ ರಮಣೀಯವಾದ, ಸರ್ವಋತುಗಳಲ್ಲಿಯೂ ಮೂಲಫಲಗಳನ್ನು ನೀಡುವ ವೃಕ್ಷಗಳಿಂದ ಕೂಡಿದ, ಪಕ್ಷಿಗಳಿಂದ ಕೂಡಿದ, ರಮಣೀಯವಾದ ವನ ಪ್ರದೇಶದಿಂದ ವಿಭೂಷಿತವಾದ ಇನ್ನೊಂದು ವನವನ್ನು ತಲುಪಿದನು.

ತತ್ರಾಶ್ರಮಪದಂ ದಿವ್ಯಂ ದದರ್ಶ ಭಗವಾನಥ ।
ಶೈಲಾಂಶ್ಚ ವಿವಿಧಾಕಾರಾನ್ ಕಾಂಚನಾನ್ ರತ್ನಭೂಷಿತಾನ್ ।
ಮಣಿಭೂಮೌ ನಿವಿಷ್ಟಾಶ್ಚ ಪುಷ್ಕರಿಣ್ಯಸ್ತಥೈವ ಚ ॥೩೩॥

ಪೂಜ್ಯನಾದ ಅವನು ಇನ್ನೊಂದು ದಿವ್ಯವಾದ ಆಶ್ರಮಸ್ಥಾನವನ್ನು ನೋಡಿದನು. ವಿವಿಧಾಕಾರದ, ರತ್ನಭೂಷಿತವಾದ, ಸುವರ್ಣಮಯವಾದ ಪರ್ವತವನ್ನೂ, ಮಣಿಭೂಮಿಯಲ್ಲಿ ನಿರ್ಮಿಸಿದ ಸರೋವರಗಳನ್ನೂ ನೋಡಿದನು.

ಅನ್ಯಾನ್ಯಪಿ ಸುರಮ್ಯಾಣಿ ದದರ್ಶ ಸುಬಹೂನ್ಯಥ ।
ಭೃಶಂ ತಸ್ಯ ಮನೋ ರೇಮೇ ಮಹರ್ಷೇರ್ಭಾವಿತಾತ್ಮನಃ ॥೩೪॥

ಬೇರೆ ಬೇರೆ ಅನೇಕ ಸುಂದರ ಪದಾರ್ಥಗಳನ್ನು ಅಲ್ಲಿ ನೋಡಿದನು. ಶುದ್ಧವಾದ ಮನಸ್ಸುಳ್ಳ ಆ ಮಹರ್ಷಿಯ ಮನಸ್ಸು ಬಹಳ ಸಂತೋಷಗೊಂಡಿತು.

ಸ ತತ್ರ ಕಾಂಚನಂ ದಿವ್ಯಂ ಸರ್ವರತ್ನಮಯಂ ಗೃಹಮ್ ।
ದದರ್ಶಾದ್ಭುತಸಂಕಾಶಂ ಧನದಸ್ಯ ಗೃಹಾದ್ ವರಮ್ ॥೩೫॥

ಅವನು ಅಲ್ಲಿ ಕುಬೇರನ ಮನೆಗಿಂತಲೂ ಶ್ರೇಷ್ಠವಾದ, ಸರ್ವರತ್ನಮಯವಾದ, ಸುವರ್ಣನಿರ್ಮಿತವಾದ, ಅದ್ಭುತವಾದ ದಿವ್ಯವಾದ ಇನ್ನೊಂದು ಗೃಹವನ್ನು ನೋಡಿದನು.

ಮಹಾಂತೋ ಯತ್ರ ವಿವಿಧಾಃ ಮಣಿಕಾಂಚನಪರ್ವತಾಃ ।
ವಿಮಾನಾನಿ ಚ ರಮ್ಯಾಣಿ ರತ್ನಾನಿ ವಿವಿಧಾನಿ ಚ ॥೩೬॥

ಅಲ್ಲಿ ದೊಡ್ಡದಾದ ವಿವಿಧವಾದ ಮಣಿ-ಕಾಂಚನಪರ್ವತಗಳೂ ಮನೋಹರವಾದ ಉಪ್ಪರಿಗೆಗಳೂ, ವಿವಿಧವಾದ ರತ್ನಗಳೂ ಇದ್ದವು.

ಮಂದಾರಪುಷ್ಪೈಃ ಸಂಕೀರ್ಣಾ ತಥಾ ಮಂದಾಕಿನೀ ನದೀ ।
ಸ್ವಯಂಪ್ರಭಾಶ್ಚ ಮಣಯೋ ವಜ್ರೈರ್ಭೂಮಿಶ್ಚ ಭೂಷಿತಾ ॥೩೭॥

ಮಂದಾರಪುಷ್ಪಗಳಿಂದ ಭರಿತವಾದ ಮಂದಾಕಿನೀ ನದಿ ಇದ್ದಿತು. ಸ್ವಯಂಪ್ರಭೆಯುಳ್ಳ ಮಣಿಗಳು, ವಜ್ರಖಚಿತವಾದ ಭೂಮಿಯು ಅಲ್ಲಿ ಅಲಂಕಾರಪ್ರದವಾಗಿದ್ದಿತು.

ನಾನಾವಿಧೈಶ್ಚ ಭವನೈರ್ವಿಚಿತ್ರಮಣಿತೋರಣೈಃ ।
ಮುಕ್ತಾಜಾಲಪರಿಕ್ಷಿಪ್ತೈರ್ಮಣಿರತ್ನವಿಭೂಷಿತೈಃ ।
ಮನೋದೃಷ್ಟಿಹರೈ ರಮ್ಯೈಃ ಸರ್ವತಃ ಸಂವೃತಂ ಶುಭೈಃ ॥೩೮॥

ಆ ಗೃಹದ ಸುತ್ತಲೂ ನಾನಾ ವಿಧವಾದ ವಿಚಿತ್ರ ಮಂಟಪಗಳನ್ನು ಹೊಂದಿದ, ಮುತ್ತಿನ ಜಾಲಗಳಿಂದ ಸುತ್ತುವರಿಯಲ್ಪಟ್ಟ, ಮಣಿರತ್ನವಿಭೂಷಿತವಾದ, ಮನಸ್ಸಿಗೂ ಕಣ್ಣಿಗೂ ಸಂತೋಷವನ್ನು ಕೊಡುವ ಅನೇಕ ಗೃಹಗಳಿದ್ದವು.

ಋಷಿಃ ಸಮಂತತೋಽಪಶ್ಯತ್ ತತ್ರ ತತ್ರ ಮನೋರಮಮ್ ।
ತತೋಽಭವತ್ ತಸ್ಯ ಚಿಂತಾ ಕ್ವ ಮೇ ವಾಸೋ ಭವೇದಿತಿ ॥೩೯॥

ಋಷಿಯು ಸುತ್ತಲೂ ಮನೋಹರವಾದ ಅವುಗಳನ್ನು ನೋಡಿ ನಾನು ಎಲ್ಲಿವಾಸ ಮಾಡಬೇಕು ಎಂದು ಚಿಂತಾಕ್ರಾಂತನಾದನು.

ಅಥ ದ್ವಾರಂ ಸಮಭಿತೋ ಗತ್ವಾ ಸ್ಥಿತ್ವಾ ತತೋಽಬ್ರವೀತ್ ।
ಅತಿಥಿಂ ಮಾಮನುಪ್ರಾಪ್ತಮನುಜಾನಂತು ಯೇಽತ್ರ ವೈ ॥೪೦॥

ಆಗ ಆ ಪ್ರಧಾನವಾದ ಮನೆಯ ದ್ವಾರಕ್ಕೆ ಹೋಗಿ ನಿಂತು 'ನಾನು ಅತಿಥಿಯಾಗಿ ಬಂದಿದ್ದೇನೆ. ಒಳಗೆ ಯಾರಿದ್ದೀರೋ ಅವರು ನನಗೆ ಅನುಮತಿಯನ್ನು ಕೊಡಿ' ಎಂದು ಹೇಳಿದನು.

ಅಥ ಕನ್ಯಾಪರಿವೃತಾ ಗೃಹಾತ್ ತಸ್ಮಾದ್ ವಿನಿಃಸೃತಾಃ ।
ನಾನಾರೂಪಾಃ ಸಪ್ತ ವಿಭೋ ಕನ್ಯಾಃ ಸರ್ವಾ ಮನೋಹರಾಃ ॥೪೧॥

ಆಗ ಎಲೈ ವಿಭುವೇ, ಮನೋಹರವಾದ ನಾನಾ ರೂಪವನ್ನು ಧರಿಸಿದ ಸಪ್ತಕನ್ಯೆಯರು ಆ ಗೃಹದಿಂದ ಒಟ್ಟಿಗೆ ಹೊರಬಂದರು.

ಯಾಂ ಯಾಮಪಶ್ಯತ್ ಕನ್ಯಾಂ ಸ ಸಾ ಸಾ ತಸ್ಯ ಮನೋಽಹರತ್ ।
ನ ಚ ಶಕ್ತೋ ನಿವಾರಯಿತುಂ ಮನೋಽಥಾಸ್ಯಾವಸೀದತಿ ॥೪೨॥

ಆ ಋಷಿಯು ಯಾವ ಯಾವ ಕನ್ಯೆಯನ್ನು ನೋಡಿದನೋ ಅವರವರು ಅವನ ಮನಸ್ಸನ್ನು ಅಪಹರಿಸಿದರು. ಅವನು ತನ್ನ ಮನಸ್ಸನ್ನು ಚಾಂಚಲ್ಯದಿಂದ ನಿವಾರಿಸಲು ಸಮರ್ಥನಾಗಲಿಲ್ಲ. ಆಗ ಅವನ ಮನಸ್ಸು ಕುಸಿಯಿತು.

ತತೋ ಧೃತಿಃ ಸಮುತ್ಪನ್ನಾ ತಸ್ಯ ವಿಪ್ರಸ್ಯ ಧೀಮತಃ ।
ಅಥ ತಂ ಪ್ರಮದಾಃ ಪ್ರಾಹುರ್ಭಗವಾನ್ ಪ್ರವಿಶತ್ವಿತಿ ॥೪೩॥

ಅನಂತರ ಮೇಧಾವಿಯಾದ ಆ ಬ್ರಾಹ್ಮಣನು ಮನಸ್ಸಿಗೆ ಧೈರ್ಯವನ್ನು ತಂದುಕೊಂಡನು. ಆಗ ಆ ಕನ್ಯೆಯರು 'ಪೂಜ್ಯನೇ, ಒಳಗೆ ಪ್ರವೇಶಿಸಬೇಕು' ಎಂದು ಹೇಳಿದರು.

ಸ ಚ ತಾಸಾಂ ಸುರೂಪಾಣಾಂ ತಸ್ಯೈವ ಭವನಸ್ಯ ಚ ।
ಕೌತೂಹಲಸಮಾವಿಷ್ಟಃ ಪ್ರವಿವೇಶ ಗೃಹಂ ದ್ವಿಜಃ ॥೪೪॥

ಆ ಬ್ರಾಹ್ಮಣನು ಅವರ ಸೌಂದರ್ಯದಿಂದಲೂ, ಆ ಮನೆಯ ಸೌಂದರ್ಯದಿಂದಲೂ ಕುತೂಹಲಭರಿತನಾಗಿ ಗೃಹವನ್ನು ಪ್ರವೇಶಿಸಿದನು.

ತತ್ರಾಪಶ್ಯಜ್ಜರಾಯುಕ್ತಾಮರಜೋಂಬರಧಾರಿಣೀಮ್ ।
ವೃದ್ಧಾಂ ಪರ್ಯಂಕಮಾಸೀನಾಂ ಸರ್ವಾಭರಣಭೂಷಿತಾಮ್ ॥೪೫॥

ಅಲ್ಲಿ ಜರೆಯಿಂದ ಕೂಡಿದ, ಶುದ್ಧವಾದ ವಸ್ತ್ರವನ್ನು ಧರಿಸಿದ, ಸರ್ವಾಭರಣ ಭೂಷಿತಳಾದ, ಮಂಚದ ಮೇಲೆ ಕುಳಿತ ಒಬ್ಬ ವೃದ್ಧಳನ್ನು ನೋಡಿದನು.

ಸ್ವಸ್ತೀತಿ ಚಾಥ ತೇನೋಕ್ತಾ ಸಾ ಸ್ತ್ರೀ ಪ್ರತ್ಯವದತ್ ತದಾ ।
ಪ್ರತ್ಯುತ್ಥಾಯ ಚ ತಂ ವಿಪ್ರಮಾಸ್ಯತಾಮಿತ್ಯುವಾಚ ಹ ॥೪೬॥

'ನಿನಗೆ ಕ್ಷೇಮವಾಗಲಿ' ಎಂದು ಋಷಿಯಿಂದ ಹೇಳಲ್ಪಟ್ಟ ಆ ವನಿತೆಯು ಎದ್ದು ನಿಂತು ಆ ಬ್ರಾಹ್ಮಣನನ್ನು ಕುರಿತು 'ಕುಳಿತುಕೊಳ್ಳಿ' ಎಂದು ಹೇಳಿದಳು.

ಅಷ್ಟಾವಕ್ರಃ

ಸರ್ವಾಃ ಸ್ವಾನಾಲಯಾನ್ ಯಾಂತು ಏಕಾ ಮಾಮುಪತಿಷ್ಠತು ।
ಸುಪ್ರಜ್ಞಾತಾ ಸುಪ್ರಶಾಂತಾ ಶೇಷಾ ಗಚ್ಛಂತು ಚ್ಛಂದತಃ ॥೪೭॥

ಅಷ್ಟಾವಕ್ರ– ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋಗಲಿ, ಸ್ಪಷ್ಟವಾದ ಜ್ಞಾನವಿರುವ ಪ್ರಶಾಂತಳಾದ ಒಬ್ಬಳು ಮಾತ್ರ ಉಳಿಯಲಿ, ಅವಳು ಮಾತ್ರ ನನ್ನ ಸಮೀಪದಲ್ಲಿರಲಿ ಎಂದು ಹೇಳಿದನು.

ತತಃ ಪ್ರದಕ್ಷಿಣೀಕೃತ್ಯ ಕನ್ಯಾಸ್ತಾಸ್ತಮೃಷಿಂ ತದಾ ।
ನಿರಾಕ್ರಾಮನ್ ಗೃಹಾತ್ ತಸ್ಮಾತ್ತಾ ವೃದ್ಧಾಥ ವ್ಯತಿಷ್ಠತ ।
ತಯಾ ಸಂಪೂಜಿತಸ್ತತ್ರ ಶಯನೇ ಚಾತಿನಿರ್ಮಲೇ ॥೪೮॥

ಆಗ ಆ ಕನ್ಯೆಯರೆಲ್ಲರೂ ಆ ಋಷಿಗೆ ಪ್ರದಕ್ಷಿಣೆಯನ್ನು ಮಾಡಿ, ಆ ಗೃಹದಿಂದ ಹೊರಗೆ ಹೋದರು. ಆ ವೃದ್ಧೆಯೊಬ್ಬಳು ಮಾತ್ರ ಅಲ್ಲಿ ಉಳಿದಳು. ಅವಳಿಂದ ಆ ಋಷಿಯು ಅತಿ ನಿರ್ಮಲವಾದ ಹಾಸಿಗೆಯಲ್ಲಿ ಚೆನ್ನಾಗಿ ಪೂಜಿಸಲ್ಪಟ್ಟನು.

ಅಥ ತಾಂ ಸಂವಿಶನ್ ಪ್ರಾಹ ಶಯನೇ ಭಾಸ್ವರೇ ತದಾ ।
ತ್ವಯಾಽಪಿ ಸುಪ್ಯತಾಂ ಭದ್ರೇ ರಜನೀ ಹ್ಯತಿವರ್ತತೇ ॥೪೯॥

ತನ್ನ ಶುಭ್ರವಾದ ಹಾಸಿಗೆಯಲ್ಲಿ ಮಲಗುತ್ತಾ ಅವನು ಆ ವೃದ್ಧೆಯನ್ನು ಕುರಿತು- 'ಶುಭಸ್ವರೂಪಳೇ, ನೀನೂ ಸಹ ಮಲಗು. ರಾತ್ರಿಯು ಮೀರುತ್ತಿದೆ' ಎಂದು ಹೇಳಿದನು.

ಸಂಲಾಪಾತ್ ತೇನ ವಿಪ್ರೇಣ ತಥಾ ಸಾ ತತ್ರ ಭಾಷಿತಾ ।
ದ್ವಿತೀಯೇ ಶಯನೇ ದಿವ್ಯೇ ಸಂವಿವೇಶ ಮಹಾಪ್ರಭೇ ॥೫೦॥

ಆ ಬ್ರಾಹ್ಮಣನ ಜೊತೆಯಲ್ಲಿ ಸಲ್ಲಾಪವನ್ನು ಮಾಡುತ್ತಾ, ಅವಳು ಇನ್ನೊಂದು ದಿವ್ಯವಾದ ಮಹಾಪ್ರಭೆಯುಳ್ಳ ಹಾಸಿಗೆಯಲ್ಲಿ ಮಲಗಿದಳು.

ಅಥ ಸಾ ವೇಪಮಾನಾಂಗೀ ನಿಮಿತ್ತಂ ಶೀತಜಂ ತದಾ ।
ವ್ಯಪದಿಶ್ಯ ಮಹರ್ಷೇರ್ವೈ ಶಯನಂ ವ್ಯವರೋಹತ ॥೫೧॥

ಅವಳು ಅಲ್ಲಿ ನಡುಗುತ್ತಾ ಮಹರ್ಷಿಯನ್ನು ಕುರಿತು ಶೈತ್ಯದ ಕಾರಣವನ್ನು ಹೇಳಿ ಮಹರ್ಷಿಯ ಹಾಸಿಗೆಯನ್ನೇ ಏರಿದಳು.

ಸ್ವಾಗತೇನಾಗತಾಂ ತಾಂ ತು ಭಗವಾಂಸ್ತಾಮಭಾಷತ ।
ಸಾ ಜುಗೂಹ ಭುಜಾಭ್ಯಾಂ ತು ಋಷಿಂ ಪ್ರೀತ್ಯಾ ನರರ್ಷಭ ॥೫೨॥

ಆ ಪೂಜ್ಯನು ಅವಳನ್ನು ಸ್ವಾಗತ ವಚನದಿಂದ ಅಭಿನಂದಿಸಿದನು. ಎಲೈ ನರರ್ಷಭನೇ, ಅವಳು ಆ ಋಷಿಯನ್ನು ತನ್ನ ಭುಜಗಳಿಂದ ಪ್ರೀತಿಯಿಂದ ಅಪ್ಪಿಕೊಂಡಳು.

ನಿರ್ವಿಕಾರಮೃಷಿಂ ಚಾಪಿ ಕಾಷ್ಠಕುಡ್ಯೋಪಮಂ ತದಾ ।
ದುಃಖಿತಾ ಪ್ರೇಕ್ಷ್ಯ ಸಂಜಲ್ಪಮಕಾರ್ಷೀದೃಷಿಣಾ ಸಹ ॥೫೩॥

ಆ ಋಷಿಯು ಕಲ್ಲಿನಂತೆ ಅಥವಾ ಕಟ್ಟಿಗೆಯಂತೆ ನಿರ್ವಿಕಾರವಾಗಿರುವುದನ್ನು ಗಮನಿಸಿ ದುಃಖಿತಳಾಗಿ ಋಷಿಯ ಜೊತೆಯಲ್ಲಿ ಸಂಭಾಷಣೆಯನ್ನು ಮಾಡಿದಳು.

ಬ್ರಹ್ಮನ್ನ ಕಾಮಕಾರೋಽಸ್ತಿ ಸ್ತ್ರೀಣಾಂ ಪುರುಷತೋಽಧೃತಿಃ ।
ಕಾಮೇನ ಮೋಹಿತಾ ಚಾಹಂ ತ್ವಾಂ ಭಜಂತೀಂ ಭಜಸ್ವ ಮಾಮ್ ॥೫೪॥

ಪೂಜ್ಯನೇ, ಇದು ಕಾಮಾಚಾರವಲ್ಲ. ಸ್ತ್ರೀಯರಿಗೆ ಪುರುಷರಿಗಿರುವಷ್ಟು ಸ್ಥೈರ್ಯವಿರುವುದಿಲ್ಲ. ನಾನು ಕಾಮದಿಂದ ಮೋಹಿತಳಾಗಿದ್ದೇನೆ. ನಿನ್ನನ್ನು ಬೇಡುತ್ತಿರುವ ನನ್ನನ್ನು ಭಜಿಸು.

ಪ್ರಹೃಷ್ಟೋ ಭವ ವಿಪ್ರರ್ಷೇ ಸಮಾಗಚ್ಛ ಮಯಾ ಸಹ ।
ಉಪಗೂಹ ಚ ಮಾಂ ವಿಪ್ರ ಕಾಮಾರ್ತಾಽಹಂ ಭೃಶಂ ತ್ವಯಿ ॥೫೫॥

ವಿಪ್ರರ್ಷಿಯೇ, ಸಂತೋಷದಿಂದ ನನ್ನ ಜೊತೆಯಲ್ಲಿ ಸಮಾಗಮವನ್ನು ಹೊಂದು. ಎಲೈ ಬ್ರಾಹ್ಮಣನೇ, ನನ್ನನ್ನು ಆಲಿಂಗಿಸು. ನನಗೆ ನಿನ್ನಲ್ಲಿ ಉಂಟಾದ ಕಾಮದಿಂದ ಬಳಲುತ್ತಿದ್ದೇನೆ.

ಏತದ್ಧಿ ತವ ಧರ್ಮಾತ್ಮಂಸ್ತಪಸಃ ಪೂಜ್ಯತೇ ಫಲಮ್ ।
ಪ್ರಾರ್ಥಿತಂ ದರ್ಶನಾದೇವ ಭಜಮಾನಾಂ ಭಜಸ್ವ ಮಾಮ್ ॥೫೬॥

ಎಲೈ ಧರ್ಮಾತ್ಮನೇ, ಇದು ನಿನ್ನ ತಪಸ್ಸಿನ ಫಲವಾದುದು. ಆದ್ದರಿಂದ ಪೂಜಿಸಲ್ಪಡುತ್ತದೆ ಮತ್ತು ಇಂತಹ ಫಲವು ಪ್ರಾರ್ಥಿಸಲ್ಪಡುತ್ತದೆ. ನಿನ್ನ ದರ್ಶನದಿಂದಲೇ ನಿನ್ನಲ್ಲಿ ಅನುರಕ್ತಳಾದ ನನ್ನನ್ನು ಸ್ವೀಕರಿಸುವವನಾಗು.

ಸದ್ಮ ಚೇದಂ ಧನಂ ಸರ್ವಂ ಯಚ್ಚಾನ್ಯದಪಿ ಪಶ್ಯಸಿ ।
ಪ್ರಭುತ್ವಂ ತವ ಸರ್ವತ್ರ ಮಯಿ ಚೈವ ನ ಸಂಶಯಃ ॥೫೭॥

ಈ ನನ್ನ ಗೃಹ, ಧನ ಮತ್ತು ನೀನು ನೋಡುತ್ತಿರುವ ಎಲ್ಲ ವಸ್ತುಗಳು ಇವೆಲ್ಲದಕ್ಕೂ ನೀನೇ ಒಡೆಯನಾದವನು. ನನಗೂ ನೀನೇ ಒಡೆಯನಾದವನು. ಇದರಲ್ಲಿ ಸಂಶಯವಿಲ್ಲ.

ಸರ್ವಾನ್ ಕಾಮಾನ್ ವಿಧಾಸ್ಯಾಮಿ ರಮಸ್ವ ಸಹಿತೋ ಮಯಾ ।
ರಮಣೀಯೇ ವನೇ ವಿಪ್ರ ಸರ್ವಕಾಮಫಲಪ್ರದೇ ॥೫೮॥

ನಿನ್ನ ಎಲ್ಲಾ ಇಚ್ಛೆಗಳನ್ನೂ ಪೂರೈಸುವೆನು. ಎಲೈ ವಿಪ್ರನೇ, ಸರ್ವಕಾಮ ಫಲಪ್ರದವಾದ ಮನೋಹರವಾದ ಈ ವನದಲ್ಲಿ ನನ್ನ ಜೊತೆಯಲ್ಲಿ ವಿಹರಿಸು.

ತ್ವದ್ವಶಾऽಹಂ ಭವಿಷ್ಯಾಮಿ ರಂಸ್ಯಸೇ ಚ ಮಯಾ ಸಹ ।
ಸರ್ವಾನ್ ಕಾಮಾನುಪಾಶ್ನಾನೋ ಯೇ ದಿವ್ಯಾ ಯೇ ಚ ಮಾನುಷಾಃ ॥

ನಾನು ನಿನ್ನ ವಶಳಾಗುವೆನು. ದಿವ್ಯ ಮತ್ತು ಮಾನುಷವಾದ ಎಲ್ಲ ಭೋಗಗಳನ್ನೂ ಭೋಗಿಸುತ್ತಾ ನೀನು ನನ್ನ ಜೊತೆಯಲ್ಲಿ ಸುಖವನ್ನು ಅನುಭವಿಸು.

ನಾತಃ ಪರಂ ಹಿ ನಾರೀಣಾಂ ವಿದ್ಯತೇ ಚ ಕದಾಚನ ।
ಯಥಾ ಪುರುಷಸಂಸರ್ಗಃ ಪರಮೇತದ್ಧಿ ನಃ ಫಲಮ್ ॥೬೦॥

ಸ್ತ್ರೀಯರಿಗೆ ಪುರುಷಸಮಾಗಮಕ್ಕಿಂತಲೂ ಶ್ರೇಷ್ಠವಾದುದು ಯಾವುದೂ ಇರುವುದಿಲ್ಲ. ಅದು ನಾವು ಆಶಿಸುವ ಶ್ರೇಷ್ಠವಾದ ಫಲ.

ಆತ್ಮಚ್ಛಂದೇನ ವರ್ತಂತೇ ನಾರ್ಯೋ ಮನ್ಮಥಚೋದಿತಾಃ ।
ನ ಚ ದಹ್ಯಂತಿ ಗಚ್ಛಂತ್ಯಃ ಸುತಪ್ತೈರಪಿ ಪಾಂಸುಭಿಃ ॥೬೧॥

ಕಾಮಾವಿಷ್ಟರಾದ ಸ್ತ್ರೀಯರು ತಮ್ಮ ಮನಸ್ಸಿಗೆ ಇಷ್ಟವಾದಂತೆ ನಡೆಯುತ್ತಾರೆ. ಆಗ ಬಿಸಿಯಾದ ಧೂಳಿನ ಮೇಲೆ ನಡೆದರೂ ಅವರಿಗೆ ದಾಹವುಂಟಾಗುವುದಿಲ್ಲ (ಎಂದು ಹೇಳಿದಳು).

ಅಷ್ಟಾವಕ್ರಃ

ಪರದಾರಾನಹಂ ಭದ್ರೇ ನ ಗಚ್ಛೇಯಂ ಕಥಂಚನ ।
ದೂಷಿತಂ ಧರ್ಮಶಾಸ್ತ್ರೇಷು ಪರದಾರಾಭಿಮರ್ಶನಮ್ ॥೬೨॥

ಅಷ್ಟಾವಕ್ರ– ಎಲೌ ಶುಭಸ್ವರೂಪಳೇ, ಇನ್ನೊಬ್ಬರ ಪತ್ನಿಯನ್ನು ನಾನು ಎಂದೂ ಸ್ಪರ್ಶ ಮಾಡುವುದಿಲ್ಲ. ಇನ್ನೊಬ್ಬರ ಪತ್ನಿಯ ಸ್ಪರ್ಶವು ಧರ್ಮಶಾಸ್ತ್ರಗಳಲ್ಲಿ ದೂಷಿತವಾದುದು.

ಶುದ್ಧಕ್ಷೇತ್ರೇ ಬ್ರಹ್ಮಹತ್ಯಾ ಪ್ರಾಯಶ್ಚಿತ್ತಮಥೋಚ್ಯತೇ ।
ಪುನಶ್ಚ ಪಾತಕಂ ದೃಷ್ಟಂ ವಿಪ್ರಕ್ಷೇತ್ರೇ ವಿಶೇಷತಃ ॥೬೩॥

ಪರಪತ್ನಿಯಾಗದೆ ಶುದ್ಧಕ್ಷೇತ್ರಳಾದರೆ ಅಂತಹವಳ ಜೊತೆಯಲ್ಲಿ ಗಮನವು ಬ್ರಹ್ಮಹತ್ಯಾ ದೋಷವನ್ನು ತಂದುಕೊಡುತ್ತದೆ. ಅದಕ್ಕೆ ಪ್ರಾಯಶ್ಚಿತ್ತವು ವಿಧಿಸಲ್ಪಟ್ಟಿದೆ. ಆ ಕ್ಷೇತ್ರವು ಬ್ರಾಹ್ಮಣಕ್ಷೇತ್ರವಾದರೆ ಇನ್ನೂ ವಿಶೇಷವಾದ ಪಾತಕವಿದೆ.

ಭದ್ರೇ ನಿವೇಷ್ಟುಕಾಮಂ ಮಾಂ ವಿದ್ಧಿ ಸತ್ಯೇನ ವೈ ಶಪೇ ।
ಪ್ರಾಯಶ್ಚಿತ್ತಂ ಮಹದತೋ ದಾರಗ್ರಹಣಪೂರ್ವಕಮ್ ॥೬೪॥

ಶುಭಳೇ, ನಾನು ವಿವಾಹ ಮಾಡಿಕೊಳ್ಳಲು ಬಯಸುತ್ತೇನೆ ಎಂದು ತಿಳಿ. ಇದನ್ನು ಶಪಥ ಮಾಡಿ ಹೇಳುತ್ತಿದ್ದೇನೆ. ವಿವಾಹಕ್ಕಿಂತಲೂ ಮೊದಲು ಮಾಡಿದ ಸ್ತ್ರೀ ಸಂಗಕ್ಕೆ ದೊಡ್ಡ ಪ್ರಾಯಶ್ಚಿತ್ತವು ವಿಧಿಸಲ್ಪಡುತ್ತದೆ.

ಬೀಜಂ ನ ಶುದ್ಧ್ಯತೇ ವೋಢುರನ್ಯಥಾऽಕೃತನಿಷ್ಕೃತೇ ।
ಮಾತೃತಃ ಪಿತೃತಃ ಶುದ್ಧೋ ಜ್ಞೇಯಃ ಪುತ್ರೋ ಯಥಾರ್ಥತಃ ।
ವಿಷಯೇಷ್ವನಭಿಜ್ಞೋऽಹಂ ಧರ್ಮಾರ್ಥಂ ಕಿಲ ಸಂತತಿಃ ॥೬೫॥

ಹಾಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ ವಿವಾಹ ಮಾಡಿಕೊಳ್ಳುವವನ ವೀರ್ಯವು ಅಶುದ್ಧವಾಗುತ್ತದೆ. ಜನಿಸುವ ಪುತ್ರನು ತಾಯಿಯಿಂದಲೂ,

ತಂದೆಯಿಂದಲೂ ಶುದ್ಧನಾಗಿ ಜನಿಸಬೇಕಷ್ಟೆ? ನಾನು ಈ ವಿಷಯವನ್ನು ತಿಳಿಯದವನು. ಸಂತತಿಯು ಧರ್ಮದ ಉದ್ದೇಶದಿಂದಷ್ಟೆ?

ಏವಂ ಲೋಕಾನ್ ಗಮಿಷ್ಯಾಮಿ ಪುತ್ರೈರಿತಿ ನ ಸಂಶಯಃ ।
ಭದ್ರೇ ಧರ್ಮಂ ವಿಜಾನೀಷ್ವ ಜ್ಞಾತ್ವಾ ಚೋಪರಮಸ್ವ ಹ ॥೬೬॥

ನಾನು ಅಂತಹ ಪುತ್ರರಿಂದ ಒಳ್ಳೆಯ ಲೋಕಗಳನ್ನು ಪಡೆಯುವೆನು ಎಂಬ ಅಭಿಪ್ರಾಯವನ್ನು ಹೊಂದಿದ್ದೇನೆ. ಇದರಲ್ಲಿ ಸಂಶಯವಿಲ್ಲ. ಶುಭಳೇ, ಧರ್ಮವನ್ನು ನೋಡು, ನೋಡಿ ಶಾಂತಳಾಗು.

ಸ್ತ್ರೀ

ನಾನಿಲೋಽಗ್ನಿರ್ನ ವರುಣೋ ನ ಚಾನ್ಯೇ ತ್ರಿದಶಾ ದ್ವಿಜ ।
ಪ್ರಿಯಾಃ ಸ್ತ್ರೀಣಾಂ ಯಥಾ ಕಾಮೋ ರತಿಶೀಲಾ ಹಿ ಯೋಷಿತಃ ॥೬೭॥

ಸ್ತ್ರೀ– ಎಲೈ ಬ್ರಾಹ್ಮಣನೇ, ವಾಯುವಾಗಲೀ, ವರುಣನಾಗಲೀ ಅಥವಾ ಬೇರೆ ದೇವತೆಯಾಗಲೀ ಸ್ತ್ರೀಯರಿಗೆ ಕಾಮದಷ್ಟು ಪ್ರಿಯರಲ್ಲ. ಸ್ತ್ರೀಯರು ರತಿಶೀಲರಾದವರು.

ಸಹಸ್ರೈಕಾ ಯಥಾ ನಾರೀ ಪ್ರಾಪ್ನೋತೀಹ ಕದಾಚನ ।
ತಥಾ ಶತಸಹಸ್ರೇಷು ಯದಿ ಕಾಚಿತ್ ಪತಿವ್ರತಾ ॥೬೮॥

ಸಾವಿರ ಸ್ತ್ರೀಯರಲ್ಲಿ ಯಾವಾಗಲಾದರೂ ಒಬ್ಬಳು ಸಂಯಮವಿದ್ದವಳು ದೊರೆಯುತ್ತಾಳೆ. ಹಾಗೆಯೇ ಲಕ್ಷಸ್ತ್ರೀಯರಲ್ಲಿ ಒಬ್ಬಳು ಪತಿವ್ರತೆಯಾಗಿರುತ್ತಾಳೆ.

ನೈತಾ ಜಾನಂತಿ ಪಿತರಂ ನ ಕುಲಂ ನ ಚ ಮಾತರಮ್ ।
ನ ಭ್ರಾತೄನ್ನ ಚ ಭರ್ತಾರಂ ನ ಪುತ್ರಾನ್ನ ಚ ದೇವರಾನ್ ॥೬೯॥

ಸ್ತ್ರೀಯರು ತಂದೆಯನ್ನಾಗಲೀ, ತಾಯಿಯನ್ನಾಗಲೀ, ಕುಲವನ್ನಾಗಲೀ, ಸಹೋದರರನ್ನಾಗಲೀ, ಪತಿಯನ್ನಾಗಲೀ, ಪುತ್ರರನ್ನಾಗಲೀ, ಮೈದುನರನ್ನಾಗಲೀ ಗಮನಿಸುವುದಿಲ್ಲ.

ಲೀಲಾಯಂತ್ಯಃ ಕುಲಂ ಘ್ನಂತಿ ಕೂಲಾನಿವ ಸರಿದ್ವರಾಃ ।
ದೋಷಾಂಶ್ಚ ಮಂದಾನ್ ಮಂದಾಸು ಪ್ರಜಾಪತಿರಭಾಷತ ॥೭೦॥

ದೊಡ್ಡ ನದಿಗಳು ದಡವನ್ನು ಕೊಚ್ಚಿಕೊಂಡು ಹರಿಯುವಂತೆ ಅವರು ಕಾಮಲೀಲೆಯಿಂದ ಕುಲವನ್ನು ನಾಶಮಾಡುತ್ತಾರೆ. ಅಂತಹ ಮಂದರಾದ ಸ್ತ್ರೀಯರಲ್ಲಿ ಪ್ರಜಾಪತಿಯು ಬಹಳ ದೋಷಗಳನ್ನು ಹೇಳಿದ್ದಾನೆ.

ಭೀಷ್ಮಃ

ತತಃ ಸ ಋಷಿರೇಕಾಗ್ರಸ್ತಾಂ ಸ್ತ್ರಿಯಂ ಪ್ರತ್ಯಭಾಷತ ।
ಆಸ್ಯತಾಂ ರುಚಿರಂ ಛಂದಃ ಕಿಂ ವಾ ಕಾರ್ಯಂ ಬ್ರವೀಹಿ ಮೇ ॥೭೧॥

ಭೀಷ್ಮ– ಆಗ ಆ ಋಷಿಯು ಸ್ಥಿರನಾಗಿ ಆ ಸ್ತ್ರೀಯನ್ನು ಕುರಿತು- 'ಬಾ, ನಿನ್ನ ಮನಸ್ಸಿಗೆ ಬಂದಂತೆ ಕುಳಿತುಕೊ. ಏನು ಮಾಡಬೇಕೆಂದು ನನಗೆ ಹೇಳು' ಎಂದು ಹೇಳಿದನು.

ಸಾ ಸ್ತ್ರೀ ಪ್ರೋವಾಚ ಭಗವನ್ ಜ್ಞಾಸ್ಯಸೇ ದೇಶಕಾಲತಃ ।
ವಸ ತಾವನ್ಮಹಾಪ್ರಾಜ್ಞ ಕೃತಕೃತ್ಯೋ ಗಮಿಷ್ಯಸಿ ॥೭೨॥

ಆ ವನಿತೆಯು ಅವನನ್ನು ಕುರಿತು- 'ಪೂಜ್ಯನೇ, ಯೋಗ್ಯವಾದ ದೇಶದಲ್ಲಿ ಮತ್ತು ಕಾಲದಲ್ಲಿ ಏನು ಮಾಡಬೇಕೆಂದು ತಿಳಿಯುವಿ. ಮಹಾಪ್ರಾಜ್ಞನೇ, ಸದ್ಯದಲ್ಲಿ ಇಲ್ಲಿ ವಾಸ ಮಾಡು. ನೀನು ಕೃತ್ಯಕೃತ್ಯನಾಗುವಿ' ಎಂದು ಹೇಳಿದಳು.

ಬ್ರಹ್ಮರ್ಷಿಸ್ತಾಮಥೋವಾಚ ಸ ತಥೇತಿ ಯುಧಿಷ್ಠಿರ ।
ವತ್ಸ್ಯೇಽಹಂ ಯಾವದುತ್ಸಾಹೋ ಭವತ್ಯಾ ನಾತ್ರ ಸಂಶಯಃ ॥೭೩॥

ಎಲೈ ಯುಧಿಷ್ಠಿರನೇ, ಬ್ರಹ್ಮರ್ಷಿಯು ಅವಳನ್ನು ಕುರಿತು- 'ಹಾಗೆಯೇ ಆಗಲಿ. ನನ್ನ ಇಚ್ಛೆ ಇರುವವರೆಗೂ ನಿನ್ನ ಜೊತೆಯಲ್ಲಿ ವಾಸ ಮಾಡುವೆನು. ಇದರಲ್ಲಿ ಸಂಶಯವಿಲ್ಲ' ಎಂದು ಹೇಳಿದನು.

ಅಥರ್ಷಿರಭಿಸಂಪ್ರೇಕ್ಷ್ಯ ಸ್ತ್ರಿಯಂ ತಾಂ ಜರಯಾಽನ್ವಿತಾಮ್ ।
ಚಿಂತಾಂ ಪರಮಿಕಾಂ ಭೇಜೇ ಸಂತಪ್ತ ಇವ ಚಾಭವತ್ ॥೭೪॥

ಅನಂತರ ಆ ಋಷಿಯು ಮುಪ್ಪಿನಿಂದ ಗ್ರಸ್ತಳಾದ ಆ ಸ್ತ್ರೀಯನ್ನು ನೋಡಿ ಚಿಂತಾಕ್ರಾಂತನಾಗಿ ಸಂತಾಪವನ್ನು ಹೊಂದಿದನು.

ಯದ್ಯದಂಗಂ ಹಿ ಸೋಽಪಶ್ಯತ್ ತಸ್ಯಾ ವಿಪ್ರರ್ಷಭಸ್ತದಾ ।
ನಾರಮತ್ ತತ್ರ ತತ್ರಾಸ್ಯ ದೃಷ್ಟೀ ರೂಪಪರಾಜಿತಾ ॥೭೫॥

ಆ ವಿಪ್ರಶ್ರೇಷ್ಠನು ಅವಳ ಯಾವ ಯಾವ ಅಂಗವನ್ನು ನೋಡಿದರೂ ಅಲ್ಲಿರುವ ರೂಪವಿಕಾರವನ್ನು ನೋಡಿ ಅವನ ದೃಷ್ಟಿಯು ಸಂತೋಷಗೊಳ್ಳಲಿಲ್ಲ.

ದೇವತೇಯಂ ಗೃಹಸ್ಯಾಸ್ಯ ಶಾಪಾನ್ನೂನಂ ವಿರೂಪತಾ ।
ಅಸ್ಯಾಶ್ಚ ಕಾರಣಂ ವೇತ್ತುಂ ನ ಯುಕ್ತಂ ಸಹಸಾ ಮಯಾ ॥೭೬॥

ಇವಳು ಈ ಗೃಹದ ದೇವತೆ. ಶಾಪದಿಂದ ವಿರೂಪಳಾಗಿದ್ದಾಳೆ. ಇದಕ್ಕೆ ತಕ್ಷಣ ನಾನು ಕಾರಣವನ್ನು ತಿಳಿಯುವುದು ಯೋಗ್ಯವಲ್ಲ.

ಇತಿ ಚಿಂತಾವಿಷಕ್ತಸ್ಯ ತಮರ್ಥಂ ಜ್ಞಾತುಮಿಚ್ಛತಃ ।
ವ್ಯಗಮತ್ ತದಹಃಶೇಷಂ ಮನಸಾ ವ್ಯಾಕುಲೇನ ತು ॥೭೭॥

ಹೀಗೆ ಚಿಂತಾಕ್ರಾಂತನಾಗಿ ಆ ವಿಷಯವನ್ನು ತಿಳಿಯಲು ಬಯಸಿದ ವ್ಯಾಕುಲವಾದ ಮನಸ್ಸುಳ್ಳ ಅವನಿಗೆ ಆ ದಿನದ ಉಳಿದ ಭಾಗವು ಕಳೆಯಿತು.

ಅಥ ಸಾ ಸ್ತ್ರೀ ತದೋವಾಚ ಭಗವನ್ ಪಶ್ಯ ವೈ ರವಿಮ್ ।
ರೂಪಂ ಸಂಧ್ಯಾಭ್ರಸಂಯುಕ್ತಂ ಕಿಮುಪಸ್ಥಾಪ್ಯತಾಂ ತವ ॥೭೮॥

ಅನಂತರ ಆ ವನಿತೆಯು ಅವನನ್ನು ಕುರಿತು- 'ಪೂಜ್ಯನೇ, ಸೂರ್ಯನನ್ನು ನೋಡು. ಸಂಧ್ಯಾಕಾಲದ ಮೇಘಸಂಯುಕ್ತನಾದ ಅವನ ರೂಪವನ್ನು ನೋಡು. ನಿನಗೆ ಏನು ಒದಗಿಸಬೇಕು' ಎಂದು ಕೇಳಿದಳು.

ಸ ಉವಾಚ ತದಾ ತಾಂ ಸ್ತ್ರೀಂ ಸ್ನಾನೋದಕಮಿಹಾನಯ ।
ಉಪಾಸಿಷ್ಯೇ ತತಃ ಸಂಧ್ಯಾಂ ವಾಗ್ಯತೋ ನಿಯತೇಂದ್ರಿಯಃ ॥೭೯॥

ಆಗ ಅವನು ಆ ಸ್ತ್ರೀಯನ್ನು ಕುರಿತು- 'ನನಗೆ ಸ್ನಾನೋದಕವನ್ನು ತೆಗೆದುಕೊಂಡು ಬಾ. ಅನಂತರ ನಾನು ಮೌನದಿಂದ ಮತ್ತು ಇಂದ್ರಿಯಜಯದಿಂದ ಕೂಡಿ ಸಂಧ್ಯೋಪಾಸನೆಯನ್ನು ಮಾಡುವೆನು' ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ
ಅಷ್ಟಾವಕ್ರ-ದಿಕ್‌ಸಂವಾದೋ ನಾಮ ತ್ರಿಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ನಾಲ್ಕನೆಯ ಅಧ್ಯಾಯ

ವೃದ್ಧೆಯಿಂದ ಕನ್ಯಾರೂಪದ ಸ್ವೀಕಾರ

ಭೀಷ್ಮಃ

ಅಥ ಸಾ ಸ್ತ್ರೀ ತಮುಕ್ತ್ವಾ ತು ವಿಪ್ರಮೇವಂ ಭವತ್ವಿತಿ ।
ತೈಲಂ ದಿವ್ಯಮುಪಾದಾಯ ಸ್ನಾನಶಾಟೀಮುಪಾನಯತ್ ॥೧॥

ಭೀಷ್ಮ– ಅನಂತರ ಆ ವನಿತೆಯು ಬ್ರಾಹ್ಮಣನನ್ನು ಕುರಿತು ಹಾಗೆಯೇ ಆಗಲೆಂದು ಹೇಳಿ, ದಿವ್ಯವಾದ ತೈಲವನ್ನು ಮತ್ತು ಸ್ನಾನ ವಸ್ತ್ರಗಳನ್ನು ತಂದಳು.

ಅನುಜ್ಞಾತಾ ಚ ಮುನಿನಾ ಸಾ ಸ್ತ್ರೀ ತೇನ ಮಹಾತ್ಮನಾ ।
ಅಥಾಸ್ಯ ತೈಲೇನಾಂಗಾನಿ ಸರ್ವಾಣ್ಯೇವಾಭ್ಯಮೃಕ್ಷಯತ್ ॥೨॥

ಮಹಾತ್ಮನಾದ ಆ ಋಷಿಯಿಂದ ಅನುಮತಿಯನ್ನು ಪಡೆದ ಆ ವನಿತೆಯು ಅವನ ಎಲ್ಲಾ ಅಂಗಗಳನ್ನು ತೈಲದಿಂದ ಹಚ್ಚಿದಳು.

ಶನೈಶ್ಚಾಚ್ಛಾದಿತಸ್ತತ್ರ ಸ್ನಾನಶಾಲಾಮುಪಾಗಮತ್ ।
ಭದ್ರಾಸನಂ ತತಶ್ಚಿತ್ರಂ ಋಷಿರನ್ವಾವಿಶನ್ನವಮ್ ॥೩॥

ಅಲ್ಪವಸ್ತ್ರವನ್ನು ಧರಿಸಿದ ಋಷಿಯು ಸ್ನಾನಶಾಲೆಗೆ ಬಂದು ಸುಂದರವಾದ ಮತ್ತು ಹೊಸದಾದ ಒಂದು ಭದ್ರಾಸನದ ಮೇಲೆ ಕುಳಿತನು.

ಅಥೋಪವಿಷ್ಟಶ್ಚ ಯದಾ ತಸ್ಮಿನ್ ಭದ್ರಾಸನೇ ತದಾ ।
ಸ್ನಾಪಯಾಮಾಸ ಶನಕೈಸ್ತಮೃಷಿಂ ಸುಖಹಸ್ತವತ್ ।
ಜಲೇನ ಸುಸುಖೋಷ್ಣೇನ ತಸ್ಯಾ ಹಸ್ತಸುಖೇನ ಚ ॥೪॥

ಭದ್ರಾಸನದಲ್ಲಿ ಕುಳಿತ ಆ ಋಷಿಗೆ ಅವಳು ಮೆಲ್ಲನೆ ತನ್ನ ಸುಖಹಸ್ತದಿಂದ ಸುಖೋಷ್ಣವಾದ ಜಲದಿಂದ ಸ್ನಾನವನ್ನು ಮಾಡಿಸಿದಳು.

ದಿವ್ಯಂ ಚ ವಿಧಿವಚ್ಚಕ್ರೇ ಸೋಪಚಾರಂ ಮುನೇಸ್ತದಾ ।
ವ್ಯತೀತಾಂ ರಜನೀಂ ಕೃತ್ಸ್ನಾಂ ನಾಜಾನಾತ್ಸ ಮಹಾವ್ರತಃ ॥೫॥

ಆ ಋಷಿಗೆ ಶಾಸ್ತ್ರೋಕ್ತವಾದ ದಿವ್ಯವಾದ ಉಪಚಾರಗಳನ್ನು ಮಾಡಿದಳು. ಮಹಾವ್ರತನಾದ ಆ ಋಷಿಯು ಕಳೆದ ಆ ರಾತ್ರಿಯನ್ನು ಸ್ಮರಿಸಲೇ ಇಲ್ಲ.

ತತ ಉತ್ಥಾಯ ಸ ಮುನಿಸ್ತದಾ ಪರಮವಿಸ್ಮಿತಃ ।
ಪೂರ್ವಸ್ಯಾಂ ದಿಶಿ ಸೂರ್ಯಂ ಚ ಸೋಽಪಶ್ಯದುದಿತಂ ದಿವಿ ॥೬॥

ಅನಂತರ ಪರಮವಿಸ್ಮಿತನಾದ ಆ ಮುನಿಯು ಎದ್ದು ಪೂರ್ವದಿಕ್ಕಿನಲ್ಲಿ ಆಕಾಶದಲ್ಲಿ ಉದಯಿಸಿದ ಸೂರ್ಯನನ್ನು ನೋಡಿದನು.

ತಸ್ಯ ಬುದ್ಧಿರಿಯಂ ಕಿಂ ನು ಮೋಹಸ್ತತ್ತ್ವಮಿದಂ ಭವೇತ್ ।
ಅಥೋಪಾಸ್ಯ ಸಹಸ್ರಾಂಶುಂ ಕಿಂ ಕರೋಮೀತ್ಯುವಾಚ ತಾಮ್ ॥೭॥

ಅವನಿಗೆ ಇದೇನು ಭ್ರಾಂತಿಯೋ ಅಥವಾ ಸತ್ಯವಾದುದೋ ಎಂಬ ಸಂಶಯ ಬುದ್ಧಿಯುಂಟಾಯಿತು. ಅನಂತರ ಅವನು ಸೂರ್ಯೋಪಾಸನೆಯನ್ನು ಮಾಡಿ, ಮುಂದೇನು ಮಾಡಲಿ ಎಂದು ಅವಳನ್ನು ಕೇಳಿದನು.

ಸಾ ಚಾಮೃತರಸಪ್ರಖ್ಯಮೃಷೇರನ್ನಮುಪಾಹರತ್ ।
ತಸ್ಯ ಸ್ವಾದುತಯಾಽನ್ನಸ್ಯ ನ ಪ್ರಭೂತಂ ಚಕಾರ ಸಃ ।
ವ್ಯಗಮಚ್ಚಾಪ್ಯಹಃಶೇಷಂ ತತಃ ಸಂಧ್ಯಾಽಗಮತ್ ಪುನಃ ॥೮॥

ಅವಳು ಋಷಿಗೆ ಅಮೃತ ಸಮಾನವಾದ ಅನ್ನವನ್ನು ತಂದಳು. ಅನ್ನವು ಬಹಳ ರುಚಿಕರವಾಗಿದ್ದ ಕಾರಣದಿಂದ ಋಷಿಯು ಬಹಳವಾಗಿ ಸ್ವೀಕರಿಸಲಿಲ್ಲ. ಹಗಲು ಕಳೆದು ಪುನಃ ರಾತ್ರಿಯು ಬಂದಿತು.

ಅಥ ಸ್ತ್ರೀ ಭಗವಂತಂ ಸಾ ಸುಪ್ಯತಾಮಿತ್ಯಚೋದಯತ್ ।
ತತ್ರ ವೈ ಶಯನೇ ದಿವ್ಯೇ ತಸ್ಯ ತಸ್ಯಾಶ್ಚ ಕಲ್ಪಿತೇ ॥೯॥

ಆಗ ಆ ವನಿತೆಯು ಪೂಜ್ಯನಾದ ಋಷಿಯನ್ನು ಕುರಿತು ಮಲಗಿಕೊ ಎಂದು ಒತ್ತಾಯವನ್ನು ಮಾಡಿದಳು. ಅಲ್ಲಿ ಋಷಿಗೂ ಮತ್ತು ಅವಳಿಗೂ ಸೇರಿ ಒಂದು ಶಯನವು ಸಿದ್ಧವಾಗಿದ್ದಿತು.

ಅಷ್ಟಾವಕ್ರಃ

ನ ಭದ್ರೇ ಪರದಾರೇಷು ಮನೋ ಮೇ ಸಂಪ್ರಸಜ್ಜತಿ ।
ಉತ್ತಿಷ್ಠ ಭದ್ರೇ ಭದ್ರಂ ತೇ ಸ್ವಪ ವೈ ವಿರಮಸ್ವ ಚ ॥೧೦॥

ಅಷ್ಟಾವಕ್ರ– ಶುಭಳೇ, ಪರಸ್ತ್ರೀಯರಲ್ಲಿ ನನ್ನ ಮನಸ್ಸು ಸ್ನೇಹವನ್ನು ಹೊಂದುವುದಿಲ್ಲ. ನೀನು ಇಲ್ಲಿಂದ ಎದ್ದು ಬೇರೆ ಮಲಗು. ವಿಶ್ರಾಂತಿಯನ್ನು ಪಡೆ.

ಭೀಷ್ಮಃ

ಸಾ ತದಾ ತೇನ ವಿಪ್ರೇಣ ತಥಾ ಧೃತ್ಯಾ ನಿವರ್ತಿತಾ ।
ಸ್ವತಂತ್ರಾಸ್ಮೀತ್ಯುವಾಚರ್ಷಿಂ ನ ಧರ್ಮಚ್ಛಲಮಸ್ತಿ ತೇ ॥೧೧॥

ಭೀಷ್ಮರು– ಆಗ ಬ್ರಾಹ್ಮಣನಿಂದ ಧೈರ್ಯದಿಂದ ಹೀಗೆ ನಿರಾಕರಿಸಲ್ಪಟ್ಟ ಅವಳು ಋಷಿಯನ್ನು ಕುರಿತು ನಾನು ಸ್ವತಂತ್ರಳಾದವಳು. ನಿನಗೆ ಇದರಿಂದ ಪಾಪ ಉಂಟಾಗುವುದಿಲ್ಲ ಎಂದು ಹೇಳಿದಳು.

ಅಷ್ಟಾವಕ್ರಃ

ನಾಸ್ತಿ ಸ್ವತಂತ್ರತಾ ಸ್ತ್ರೀಣಾಮಸ್ವತಂತ್ರಾ ಹಿ ಯೋಷಿತಃ ।
ಪ್ರಜಾಪತಿಮತಂ ಹ್ಯೇತನ್ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ॥೧೨॥

ಅಷ್ಟಾವಕ್ರ– ಸ್ತ್ರೀಗೆ ಸ್ವಾತಂತ್ರ್ಯವಿಲ್ಲ. ಸ್ತ್ರೀಯರು ಅಸ್ವತಂತ್ರರಾದವರು. ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲವೆಂಬುದು ಪ್ರಜಾಪತಿಗಳಾದ ಬ್ರಹ್ಮದೇವರ ಅಭಿಪ್ರಾಯ.

ಸ್ತ್ರೀ

ಬಾಧತೇ ಮೈಥುನಂ ವಿಪ್ರ ಮಮ ಭಕ್ತಿಂ ಚ ಪಶ್ಯ ವೈ ।
ಅಧರ್ಮಂ ಪ್ರಾಪ್ಸ್ಯಸೇ ವಿಪ್ರ ಯನ್ಮಾಂ ತ್ವಂ ನಾಭಿನಂದಸಿ ॥೧೩॥

ಸ್ತ್ರೀ– ಎಲೈ ಬ್ರಾಹ್ಮಣನೇ, ಮೈಥುನದ ಆಸೆಯು ನನ್ನನ್ನು ಬಾಧಿಸುತ್ತಿದೆ. ನನ್ನ ಪ್ರೀತಿಯನ್ನು ಗಮನಿಸು. ಎಲೈ ಬ್ರಾಹ್ಮಣನೇ, ನನ್ನನ್ನು ನಿರಾಕರಿಸಿದರೆ ನಿನಗೆ ಅಧರ್ಮವುಂಟಾಗುವುದು.

ಅಷ್ಟಾವಕ್ರಃ

ಹರಂತಿ ದೋಷಜಾತಾನಿ ನರಮಿಂದ್ರಿಯಕಿಂಕರಮ್ ।
ಪ್ರಭವಾಮಿ ಸದಾ ಧೃತ್ಯಾ ಭದ್ರೇ ಸ್ವಂ ಶಯನಂ ವ್ರಜ ॥೧೪॥

ಅಷ್ಟಾವಕ್ರ– ಇಂದ್ರಿಯಗಳಿಗೆ ವಶನಾದ ಮನುಷ್ಯನನ್ನು ದೋಷಗಳು ಅಧಃಪತನಕ್ಕೆ ಕಂಡೊಯ್ಯುತ್ತವೆ. ನಾನು ಧೈರ್ಯದಿಂದ ಕೂಡಿ ಯಾವಾಗಲು ಅಚಲನಾಗಿದ್ದೇನೆ. ಶುಭಳೇ, ನಿನ್ನ ಹಾಸಿಗೆಗೆ ಹೋಗು.

ಸ್ತ್ರೀ

ಶಿರಸಾ ಪ್ರಣಮೇ ವಿಪ್ರ ಪ್ರಸಾದಂ ಕರ್ತುಮರ್ಹಸಿ ।
ಭೂಮೌ ನಿಪತಮಾನಾಯಾಃ ಶರಣಂ ಭವ ಮೇಽನಘ ॥೧೫॥

ಸ್ತ್ರೀ– ಬ್ರಾಹ್ಮಣನೇ, ನಿನಗೆ ಶಿರಸಾ ನಮಸ್ಕಾರವನ್ನು ಮಾಡುತ್ತೇನೆ. ನನಗೆ ಅನುಗ್ರಹವನ್ನು ಮಾಡು. ಎಲೈ ಅನಘನೇ, ಕಾಮತಪ್ತಳಾಗಿ ಭೂಮಿಯ ಮೇಲೆ ಬೀಳುತ್ತಿರುವ ನನಗೆ ಆಶ್ರಯನಾಗು.

ಯದಿ ವಾ ದೋಷಜಾತಂ ತ್ವಂ ಪರದಾರೇಷು ಪಶ್ಯಸಿ ।
ಆತ್ಮಾನಂ ಸ್ಪರ್ಶಯಾಮ್ಯದ್ಯ ಪಾಣಿಂ ಗೃಹ್ಣೀಷ್ವ ಮೇ ದ್ವಿಜ ॥೧೬॥

ಒಂದು ಪಕ್ಷ ನೀನು ಪರಸ್ತ್ರೀ ಎಂದು ದೋಷಸಮೂಹವನ್ನು ಭಾವಿಸುವಿಯಾದರೆ ನಾನೇ ನನ್ನನ್ನು ನಿನಗೆ ದಾನ ಮಾಡಿಕೊಳ್ಳುತ್ತೇನೆ. ಎಲೈ ಬ್ರಾಹ್ಮಣನೇ, ನನ್ನ ಪಾಣಿಗ್ರಹಣವನ್ನು ಮಾಡಿಕೊ.

ನ ದೋಷೋ ಭವಿತಾ ಚೈವ ಸತ್ಯೇನೈತದ್ ಬ್ರವೀಮ್ಯಹಮ್ ।
ಸ್ವತಂತ್ರಾಂ ಮಾಂ ವಿಜಾನೀಹಿ ಯೋಽಧರ್ಮಃ ಸೋಽಸ್ತು ವೈ ಮಯಿ ॥

ನಿನಗೆ ಯಾವ ದೋಷವೂ ಬರುವುದಿಲ್ಲ. ಇದನ್ನು ಸತ್ಯವಾಗಿ ಹೇಳುತ್ತಿದ್ದೇನೆ. ನನ್ನನ್ನು ಸ್ವತಂತ್ರಳೆಂದು ತಿಳಿ. ಪಾಪವೇನಾದರೂ ಬರುವುದಾದರೆ ಅದು ನನಗೇ ಬರಲಿ.

ಅಷ್ಟಾವಕ್ರಃ

ಸ್ವತಂತ್ರಾ ತ್ವಂ ಕಥಂ ಭದ್ರೇ ಬ್ರೂಹಿ ಕಾರಣಮತ್ರ ವೈ ।
ನಾಸ್ತಿ ಲೋಕೇ ಹಿ ಕಾಚಿತ್‌ಸ್ತ್ರೀ ಯಾ ವೈ ಸ್ವಾತಂತ್ರ್ಯಮರ್ಹತಿ ॥೧೮॥

ಅಷ್ಟಾವಕ್ರ– ಶುಭಳೇ, ನೀನು ಹೇಗೆ ಸ್ವತಂತ್ರಳು? ಅದಕ್ಕೆ ಕಾರಣವನ್ನು ಹೇಳು. ಲೋಕದಲ್ಲಿ ಸ್ವತಂತ್ರಳಾದ ಯಾವ ಸ್ತ್ರೀಯೂ ಇಲ್ಲ.

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ।
ಪುತ್ರಸ್ತು ಸ್ಥವಿರೇಭಾವೇ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ।
ನ ವೃದ್ಧಾಮಕ್ಷಮಾಂ ಮನ್ಯೇ ನ ಚೇಚ್ಛಾ ತ್ವಯಿ ಮೇಽನಘೇ ॥೧೯॥

ಬಾಲ್ಯದಲ್ಲಿ ತಂದೆಯು ರಕ್ಷಿಸುತ್ತಾನೆ, ಯೌವನದಲ್ಲಿ ಪತಿಯು ರಕ್ಷಿಸುತ್ತಾನೆ, ವೃದ್ಧಾಪ್ಯದಲ್ಲಿ ಪುತ್ರನು ರಕ್ಷಿಸುತ್ತಾನೆ. ಸ್ತ್ರೀಯರಿಗೆ ಸ್ವಾತಂತ್ರ್ಯವಿರುವುದಿಲ್ಲ. ವೃದ್ಧಳಾದವಳು ರತಿಸಮರ್ಥಳಲ್ಲ ಎಂದು ನಾನು ತಿಳಿಯುವುದಿಲ್ಲ. ಆದರೆ ಅನಘಳೇ, ನನಗೆ ನಿನ್ನಲ್ಲಿ ಇಚ್ಛೆಯಿಲ್ಲ.

ಸ್ತ್ರೀ

ಕೌಮಾರಂ ಬ್ರಹ್ಮಚರ್ಯಂ ಮೇ ಕನ್ಯೈವಾಸ್ಮಿ ನ ಸಂಶಯಃ ।
ಪತ್ನಿಂ ಕುರುಷ್ವ ಮಾಂ ವಿಪ್ರ ಶ್ರದ್ಧಾಂ ವಿಜಹಿ ಮಾ ಮಮ ॥೨೦॥

ಸ್ತ್ರೀ– ನಾನು ಬಾಲ್ಯದಿಂದಲೂ ಬ್ರಹ್ಮಚಾರಿಣಿಯಾಗಿದ್ದೇನೆ. ನಾನು ಇನ್ನೂ ಕನ್ಯೆಯೇ ಆಗಿದ್ದೇನೆ, ಇದರಲ್ಲಿ ಸಂಶಯವಿಲ್ಲ. ಎಲೈ ಬ್ರಾಹ್ಮಣನೇ, ನನ್ನನ್ನು ಪತ್ನಿಯಾಗಿ ಸ್ವೀಕರಿಸು. ನನ್ನ ಆಸೆಯನ್ನು ಭಗ್ನಗೊಳಿಸಬೇಡ.

ಅಷ್ಟಾವಕ್ರಃ

ಯಥಾ ಮಮ ತಥಾ ತುಭ್ಯಂ ಯಥಾ ತವ ತಥಾ ಮಮ ।
ಜಿಜ್ಞಾಸೇಯಮೃಷೇಸ್ತಸ್ಯ ವಿಘ್ನಃ ಸತ್ಯಂ ನು ಕಿಂ ಭವೇತ್ ॥೨೧॥

ಅಷ್ಟಾವಕ್ರ– ನನಗೆ ಹೇಗೆ ವಿವಾಹದ ಆಸೆ ಇದೆಯೋ, ನಿನಗೂ ಹಾಗೆ ವಿವಾಹದ ಆಸೆ ಇದೆ. ಇದೇನು ವದಾನ್ಯ ಋಷಿಯ ಪರೀಕ್ಷೆಯೋ ಅಥವಾ ನನ್ನ ವಿವಾಹ ಪ್ರಯತ್ನಕ್ಕೆ ಒದಗಿದ ವಿಘ್ನವೋ? ಯಾವುದು ಸತ್ಯವೆಂದು ತಿಳಿಯದು.

ಆಶ್ಚರ್ಯಂ ಪರಮಂ ಹೀದಂ ಕಿಂ ನು ಶ್ರೇಯೋ ಹಿ ಮೇ ಭವೇತ್ ।
ದಿವ್ಯಾಭರಣವಸ್ತ್ರಾ ಹಿ ಕನ್ಯೇಯಂ ಮಾಮುಪಸ್ಥಿತಾ ॥೨೨॥

ಇದು ಪರಮಾಶ್ಚರ್ಯಕರವಾದುದು. ಏನು ಮಾಡಿದರೆ ನನಗೆ ಶ್ರೇಯಸ್ಸಾದೀತು? ದಿವ್ಯವಸ್ತ್ರಾಭರಣಗಳನ್ನು ಧರಿಸಿದ ಇವಳು ಕನ್ಯೆಯ ರೂಪವನ್ನು ಧರಿಸಿ ನನ್ನ ಬಳಿಗೆ ಬಂದಿದ್ದಾಳೆ.

ಕಿಂ ತ್ವಸ್ಯಾಃ ಪರಮಂ ರೂಪಂ ಜೀರ್ಣಮಾಸೀತ್ ಕಥಂ ಪುನಃ ।
ಕನ್ಯಾರೂಪಮಿಹಾದ್ಯೈವ ಕಿಮಿಹಾತ್ಯೋತ್ತರಂ ಭವೇತ್ ॥೨೩॥

ಅವಳ ಹಿಂದಿನ ವೃದ್ಧ ರೂಪವು ಹೇಗೆ ಹೊರಟು ಹೋಯಿತು? ಇಲ್ಲಿ ಈಗಲೇ ಇವಳಿಗೆ ಕನ್ಯಾರೂಪವು ಹೇಗೆ ಬಂದಿತು? ಈ ಪ್ರಶ್ನೆಗೆ ಏನು ಉತ್ತರ?

ಯಥಾ ಪರಂ ಶಕ್ತಿಧೃತೇರ್ನ ವ್ಯುತ್ಥಾಸ್ಯೇ ಕಥಂಚನ ।
ನ ರೋಚಯೇ ಹಿ ವ್ಯುತ್ಥಾನಂ ಧೃತ್ಯೈವಂ ಸಾಧಯಾಮ್ಯಹಮ್ ॥೨೪॥

ಆದರೂ ನಾನು ನನ್ನ ಶಕ್ತಿ ಮತ್ತು ಧೈರ್ಯಗಳಿಂದ ಕೂಡಿದವನಾಗಿ ನನ್ನ ಧರ್ಮವ್ರತವನ್ನು ಬಿಡುವುದಿಲ್ಲ. ನನ್ನ ವ್ರತವನ್ನು ತ್ಯಜಿಸುವುದು ನನಗೆ ಇಷ್ಟವೂ ಅಲ್ಲ. ಧೈರ್ಯದಿಂದಲೇ ಅದನ್ನು ಸಾಧಿಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ
ಅಷ್ಟಾವಕ್ರೀಯೇ ದಿಕ್‌ಸಂವಾದೇ ಚತುಶ್ಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನಲವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೈದನೆಯ ಅಧ್ಯಾಯ

ಅಷ್ಟಾವಕ್ರರ ವಿವಾಹ

ಯುಧಿಷ್ಠಿರಃ

ನ ಬಿಭೇತಿ ಕಥಂ ಸಾ ಸ್ತ್ರೀ ಶಾಪಸ್ಯ ಪರಮದ್ಯುತೇಃ ।
ಕಥಂ ನಿವೃತ್ತೋ ಭಗವಾಂಸ್ತದ್ ಭವಾನ್ ಪ್ರಬ್ರವೀತು ಮೇ ॥೧॥

ಯುಧಿಷ್ಠಿರ– ಆ ವನಿತೆಯು ಪರಮತೇಜಸ್ವಿಯಾದ ಆ ಋಷಿಯ ಶಾಪಕ್ಕೆ ಹೇಗೆ

ಹೆದರುವುದಿಲ್ಲ? ಆ ಪೂಜ್ಯನು ಅಲ್ಲಿಂದ ಹೇಗೆ ಹಿಂದಿರುಗಿದನು ಎಂದು ನನಗೆ ಹೇಳು.

ಭೀಷ್ಮಃ

ಅಷ್ಟಾವಕ್ರೋಽನ್ವಪೃಚ್ಛತ್ ತಾಂ ರೂಪಂ ವಿಕುರುಷೇ ಕಥಮ್ ।
ನ ಚಾನೃತಂ ತೇ ವಕ್ತವ್ಯಂ ಬ್ರೂಹಿ ಬ್ರಾಹ್ಮಣಕಾಮ್ಯಯಾ ॥೨॥

ಭೀಷ್ಮ– ಅಷ್ಟಾವಕ್ರನು ಅವಳನ್ನು ಕುರಿತು ಹೇಗೆ ನೀನು ರೂಪವನ್ನು ಬದಲಾಯಿಸುತ್ತೀಯೆ? ಬ್ರಾಹ್ಮಣನಾದ ನಾನು ಕೇಳುವಾಗ ಸುಳ್ಳನ್ನು ಹೇಳಬಾರದು, ಸತ್ಯವನ್ನು ನುಡಿ ಎಂದು ಹೇಳಿದನು.

ಸ್ತ್ರೀ

ದ್ಯಾವಾಪೃಥಿವೀಮಾತ್ಮೈಷಾ ಕಾಮ್ಯಾ ಬ್ರಾಹ್ಮಣಸತ್ತಮ ।
ಶೃಣುಷ್ವಾವಹಿತಃ ಸರ್ವಂ ಯದಿದಂ ಸತ್ಯವಿಕ್ರಮ ॥೩॥

ಸ್ತ್ರೀ– ಎಲೈ ಬ್ರಾಹ್ಮಣಶ್ರೇಷ್ಠನೇ, ಭೂಮಿಯಲ್ಲಾಗಲೀ, ಅಂತರಿಕ್ಷದಲ್ಲಾಗಲೀ ಸ್ತ್ರೀ-ಪುರುಷರ ಈ ಕಾಮನೆಯು ಇದ್ದೇ ಇದೆ. ಎಲೈ ಸತ್ಯವಿಕ್ರಮನೇ, ನೀನು ಕೇಳಿದ ಎಲ್ಲ ಪ್ರಶ್ನೆಗೆ ಸಾವಧಾನವಾಗಿ ಉತ್ತರವನ್ನು ಕೇಳು.

ಉತ್ತರಾಂ ಮಾಂ ದಿಶಂ ವಿದ್ಧಿ ದೃಷ್ಟಂ ಸ್ತ್ರೀಚಾಪಲಂ ಚ ತೇ ।
ಅವ್ಯುತ್ಥಾನೇನ ತೇ ಲೋಕಾ ಜಿತಾಃ ಸತ್ಯಪರಾಕ್ರಮ ॥೪॥

ನನ್ನನ್ನು ಉತ್ತರದಿಕ್ಕಿನ ದೇವತೆ ಎಂದು ತಿಳಿ. ಸ್ತ್ರೀಯರ ಚಾಂಚಲ್ಯವನ್ನು ನೀನು ನೋಡಿದ್ದೀಯೆ. ಎಲೈ ಸತ್ಯಪರಾಕ್ರಮನೇ, ನಿನ್ನ ನಿಯಮವನ್ನು ಬಿಡದೆ ನೀನು ಪುಣ್ಯಲೋಕಗಳನ್ನು ಜಯಿಸಿದ್ದೀಯೆ.

ಜಿಜ್ಞಾಸೇಯಂ ಪ್ರಯುಕ್ತಾ ಮೇ ಸ್ಥಿರೀಕರ್ತುಂ ತವಾನಘ ।
ಸ್ಥವಿರಾಣಾಮಪಿ ಸ್ತ್ರೀಣಾಂ ಬಾಧತೇ ಮೈಥುನಜ್ವರಃ ॥೫॥

ಎಲೈ ಅನಘನೇ, ನಿನ್ನ ದಾಢ್ರ್ಯವನ್ನು ನೋಡಲು ನಾನು ಈ ಪರೀಕ್ಷೆಯನ್ನು ಮಾಡಿದೆ. ಮೈಥುನದ ಆಸೆಯು ವೃದ್ಧರಾದ ಸ್ತ್ರೀಯರನ್ನೂ ಬಾಧಿಸುತ್ತದೆ.

ಅವಿಶ್ವಾಸೋ ನವ್ಯಸನೀ ನಾತಿಸಕ್ತೋಽಪ್ರವಾಸಕಃ ।
ವಿದ್ವಾನ್ ಸುಶೀಲಃ ಪುರುಷಃ ಸದಾರಃ ಸುಖಮಶ್ನುತೇ ॥೬॥

ದೇವರಲ್ಲಿ ವಿಶ್ವಾಸವನ್ನು ಹೊಂದಿ, ಚಟಗಳಿಂದ ದೂರನಾಗಿ, ವಿಷಯದಲ್ಲಿ ಬಹಳವಾಗಿ ಆಸಕ್ತನಾಗದೆ, ಬಹಳ ಪ್ರವಾಸವನ್ನು ಮಾಡದಿರುವ ವಿದ್ವಾಂಸನೂ, ಸುಶೀಲನೂ ಆದ ಪುರುಷನು ಪತ್ನಿಯನ್ನು ಹೊಂದಿ ಸುಖವನ್ನು ಹೊಂದುತ್ತಾನೆ.

ತುಷ್ಟಃ ಪಿತಾಮಹಸ್ತೇಽದ್ಯ ತಥಾ ದೇವಾಃ ಸವಾಸವಾಃ ।
ಸ ತ್ವಂ ಯೇನ ಚ ಕಾರ್ಯೇಣ ಸಂಪ್ರಾಪ್ತೋ ಭಗವಾನಿಹ ॥೭॥

ನಿನಗೆ ಈ ದಿನ ಪಿತಾಮಹನೂ, ಇಂದ್ರಾದಿ ದೇವತೆಗಳೂ ಪ್ರಸನ್ನರಾಗಿದ್ದಾರೆ. ಪೂಜ್ಯನಾದ ನೀನು ಯಾವ ಉದ್ದೇಶದಿಂದ ಇಲ್ಲಿಗೆ ಬಂದಿದ್ದೀಯೋ (ಆ ವಿಷಯದಲ್ಲಿ ಪ್ರಸನ್ನರಾಗಿದ್ದಾರೆ).

ಪ್ರೇಷಿತಸ್ತೇನ ವಿಪ್ರೇಣ ಕನ್ಯಾಪಿತ್ರಾ ದ್ವಿಜರ್ಷಭ ।
ನಿಕೃತಿಃ ಸ್ತ್ರೀ ಭೋಗಪರಾ ಪ್ರಿಯವಾದಾಪ್ರವಾಸನಾತ್ ।
ರಕ್ಷ್ಯತೇ ಚ ಕುಚೇಲಾದ್ಯೈರಪ್ರಸಂಗಾನುವರ್ತನೈಃ ॥೮॥

ಎಲೈ ದ್ವಿಜಶ್ರೇಷ್ಠನೇ, ನೀನು ಕನ್ಯಾಪಿತೃವಾದ ಆ ಬ್ರಾಹ್ಮಣನಿಂದ (ವದಾನ್ಯ ಋಷಿಯಿಂದ) ಕಳುಹಿಸಲ್ಪಟ್ಟಿದ್ದೀಯಷ್ಟೆ? ವಂಚನಾಶೀಲಳಾದ, ಭೋಗಪರಳಾದ ಸ್ತ್ರೀಯನ್ನು ಪ್ರಿಯನುಡಿಗಳಿಂದ, ಅವಳನ್ನು ಬಿಟ್ಟು ದೂರ ಹೋಗದಿರುವುದರಿಂದ, ಅವಳನ್ನು ಅನುಸರಿಸುವುದರಿಂದ, ಸಾಧಾರಣ ವಸ್ತ್ರಗಳಿಂದ ರಕ್ಷಿಸಬೇಕು.

ಅಪರ್ವಾಸ್ವನಿಷಿದ್ಧಾಸು ರಾತ್ರಿಷ್ವಪ್ಯನೃತೌ ವ್ರಜೇತ್ ।
ರಾತ್ರೌ ಚ ನಾತಿನಿಯಮೋ ನ ವೈ ಹ್ಯನಿಯಮೋ ಭವೇತ್ ।
ತವೋಪದೇಶಂ ಕರ್ತುಂ ವೈ ತಚ್ಚ ಸರ್ವಂ ಕೃತಂ ಮಯಾ ॥೯॥

ನಿಷಿದ್ಧವಲ್ಲದ, ಪರ್ವಕಾಲವಲ್ಲದ ರಾತ್ರಿಗಳಲ್ಲಿ ಋತುಕಾಲವಲ್ಲದಿದ್ದರೂ ಸ್ತ್ರೀ ಸಂಗವನ್ನು ಮಾಡಬಹುದು. ರಾತ್ರಿಯ ಕಾಲದಲ್ಲಿ ಬಹಳ ನಿಯಮಗಳಿರುವುದಿಲ್ಲ. ಆದರೆ ನಿಯಮವೇ ಇಲ್ಲದೆ ನಡೆದುಕೊಳ್ಳಬಾರದು. ನಿನಗೆ ಉಪದೇಶವನ್ನು ಮಾಡಲು ನಾನು ಇದೆಲ್ಲವನ್ನು ಮಾಡಿದೆ.

ಹೆದರುವುದಿಲ್ಲ? ಆ ಪೂಜ್ಯನು ಅಲ್ಲಿಂದ ಹೇಗೆ ಹಿಂದಿರುಗಿದನು ಎಂದು ನನಗೆ ಹೇಳು.

ಭೀಷ್ಮಃ

ಅಷ್ಟಾವಕ್ರೋಽನ್ವಪೃಚ್ಛತ್ ತಾಂ ರೂಪಂ ವಿಕುರುಷೇ ಕಥಮ್ ।
ನ ಚಾನೃತಂ ತೇ ವಕ್ತವ್ಯಂ ಬ್ರೂಹಿ ಬ್ರಾಹ್ಮಣಕಾಮ್ಯಯಾ ॥೨॥

ಭೀಷ್ಮ– ಅಷ್ಟಾವಕ್ರನು ಅವಳನ್ನು ಕುರಿತು ಹೇಗೆ ನೀನು ರೂಪವನ್ನು ಬದಲಾಯಿಸುತ್ತೀಯೆ? ಬ್ರಾಹ್ಮಣನಾದ ನಾನು ಕೇಳುವಾಗ ಸುಳ್ಳನ್ನು ಹೇಳಬಾರದು, ಸತ್ಯವನ್ನು ನುಡಿ ಎಂದು ಹೇಳಿದನು.

ಸ್ತ್ರೀ

ದ್ಯಾವಾಪೃಥಿವೀಮಾತ್ಮೈಷಾ ಕಾಮ್ಯಾ ಬ್ರಾಹ್ಮಣಸತ್ತಮ ।
ಶೃಣುಷ್ವಾವಹಿತಃ ಸರ್ವಂ ಯದಿದಂ ಸತ್ಯವಿಕ್ರಮ ॥೩॥

ಸ್ತ್ರೀ– ಎಲೈ ಬ್ರಾಹ್ಮಣಶ್ರೇಷ್ಠನೇ, ಭೂಮಿಯಲ್ಲಾಗಲೀ, ಅಂತರಿಕ್ಷದಲ್ಲಾಗಲೀ ಸ್ತ್ರೀ-ಪುರುಷರ ಈ ಕಾಮನೆಯು ಇದ್ದೇ ಇದೆ. ಎಲೈ ಸತ್ಯವಿಕ್ರಮನೇ, ನೀನು ಕೇಳಿದ ಎಲ್ಲ ಪ್ರಶ್ನೆಗೆ ಸಾವಧಾನವಾಗಿ ಉತ್ತರವನ್ನು ಕೇಳು.

ಉತ್ತರಾಂ ಮಾಂ ದಿಶಂ ವಿದ್ಧಿ ದೃಷ್ಟಂ ಸ್ತ್ರೀಚಾಪಲಂ ಚ ತೇ ।
ಅವ್ಯುತ್ಥಾನೇನ ತೇ ಲೋಕಾ ಜಿತಾಃ ಸತ್ಯಪರಾಕ್ರಮ ॥೪॥

ನನ್ನನ್ನು ಉತ್ತರದಿಕ್ಕಿನ ದೇವತೆ ಎಂದು ತಿಳಿ. ಸ್ತ್ರೀಯರ ಚಾಂಚಲ್ಯವನ್ನು ನೀನು ನೋಡಿದ್ದೀಯೆ. ಎಲೈ ಸತ್ಯಪರಾಕ್ರಮನೇ, ನಿನ್ನ ನಿಯಮವನ್ನು ಬಿಡದೆ ನೀನು ಪುಣ್ಯಲೋಕಗಳನ್ನು ಜಯಿಸಿದ್ದೀಯೆ.

ಜಿಜ್ಞಾಸೇಯಂ ಪ್ರಯುಕ್ತಾ ಮೇ ಸ್ಥಿರೀಕರ್ತುಂ ತವಾನಘ ।
ಸ್ಥವಿರಾಣಾಮಪಿ ಸ್ತ್ರೀಣಾಂ ಬಾಧತೇ ಮೈಥುನಜ್ವರಃ ॥೫॥

ಎಲೈ ಅನಘನೇ, ನಿನ್ನ ದಾಢ್ರ್ಯವನ್ನು ನೋಡಲು ನಾನು ಈ ಪರೀಕ್ಷೆಯನ್ನು ಮಾಡಿದೆ. ಮೈಥುನದ ಆಸೆಯು ವೃದ್ಧರಾದ ಸ್ತ್ರೀಯರನ್ನೂ ಬಾಧಿಸುತ್ತದೆ.

ಅವಿಶ್ವಾಸೋ ನವ್ಯಸನೀ ನಾತಿಸಕ್ತೋಽಪ್ರವಾಸಕಃ ।
ವಿದ್ವಾನ್ ಸುಶೀಲಃ ಪುರುಷಃ ಸದಾರಃ ಸುಖಮಶ್ನುತೇ ॥೬॥

ದೇವರಲ್ಲಿ ವಿಶ್ವಾಸವನ್ನು ಹೊಂದಿ, ಚಟಗಳಿಂದ ದೂರನಾಗಿ, ವಿಷಯದಲ್ಲಿ ಬಹಳವಾಗಿ ಆಸಕ್ತನಾಗದೆ, ಬಹಳ ಪ್ರವಾಸವನ್ನು ಮಾಡದಿರುವ ವಿದ್ವಾಂಸನೂ, ಸುಶೀಲನೂ ಆದ ಪುರುಷನು ಪತ್ನಿಯನ್ನು ಹೊಂದಿ ಸುಖವನ್ನು ಹೊಂದುತ್ತಾನೆ.

ತುಷ್ಟಃ ಪಿತಾಮಹಸ್ತೇಽದ್ಯ ತಥಾ ದೇವಾಃ ಸವಾಸವಾಃ ।
ಸ ತ್ವಂ ಯೇನ ಚ ಕಾರ್ಯೇಣ ಸಂಪ್ರಾಪ್ತೋ ಭಗವಾನಿಹ ॥೭॥

ನಿನಗೆ ಈ ದಿನ ಪಿತಾಮಹನೂ, ಇಂದ್ರಾದಿ ದೇವತೆಗಳೂ ಪ್ರಸನ್ನರಾಗಿದ್ದಾರೆ. ಪೂಜ್ಯನಾದ ನೀನು ಯಾವ ಉದ್ದೇಶದಿಂದ ಇಲ್ಲಿಗೆ ಬಂದಿದ್ದೀಯೋ (ಆ ವಿಷಯದಲ್ಲಿ ಪ್ರಸನ್ನರಾಗಿದ್ದಾರೆ).

ಪ್ರೇಷಿತಸ್ತೇನ ವಿಪ್ರೇಣ ಕನ್ಯಾಪಿತ್ರಾ ದ್ವಿಜರ್ಷಭ ।
ನಿಕೃತಿಃ ಸ್ತ್ರೀ ಭೋಗಪರಾ ಪ್ರಿಯವಾದಾಪ್ರವಾಸನಾತ್ ।
ರಕ್ಷ್ಯತೇ ಚ ಕುಚೇಲಾದ್ಯೈರಪ್ರಸಂಗಾನುವರ್ತನೈಃ ॥೮॥

ಎಲೈ ದ್ವಿಜಶ್ರೇಷ್ಠನೇ, ನೀನು ಕನ್ಯಾಪಿತೃವಾದ ಆ ಬ್ರಾಹ್ಮಣನಿಂದ (ವದಾನ್ಯ ಋಷಿಯಿಂದ) ಕಳುಹಿಸಲ್ಪಟ್ಟಿದ್ದೀಯಷ್ಟೆ? ವಂಚನಾಶೀಲಳಾದ, ಭೋಗಪರಳಾದ ಸ್ತ್ರೀಯನ್ನು ಪ್ರಿಯನುಡಿಗಳಿಂದ, ಅವಳನ್ನು ಬಿಟ್ಟು ದೂರ ಹೋಗದಿರುವುದರಿಂದ, ಅವಳನ್ನು ಅನುಸರಿಸುವುದರಿಂದ, ಸಾಧಾರಣ ವಸ್ತ್ರಗಳಿಂದ ರಕ್ಷಿಸಬೇಕು.

ಅಪರ್ವಾಸ್ವನಿಷಿದ್ಧಾಸು ರಾತ್ರಿಷ್ವಪ್ಯನೃತೌ ವ್ರಜೇತ್ ।
ರಾತ್ರೌ ಚ ನಾತಿನಿಯಮೋ ನ ವೈ ಹ್ಯನಿಯಮೋ ಭವೇತ್ ।
ತವೋಪದೇಶಂ ಕರ್ತುಂ ವೈ ತಚ್ಚ ಸರ್ವಂ ಕೃತಂ ಮಯಾ ॥೯॥

ನಿಷಿದ್ಧವಲ್ಲದ, ಪರ್ವಕಾಲವಲ್ಲದ ರಾತ್ರಿಗಳಲ್ಲಿ ಋತುಕಾಲವಲ್ಲದಿದ್ದರೂ ಸ್ತ್ರೀ ಸಂಗವನ್ನು ಮಾಡಬಹುದು. ರಾತ್ರಿಯ ಕಾಲದಲ್ಲಿ ಬಹಳ ನಿಯಮಗಳಿರುವುದಿಲ್ಲ. ಆದರೆ ನಿಯಮವೇ ಇಲ್ಲದೆ ನಡೆದುಕೊಳ್ಳಬಾರದು. ನಿನಗೆ ಉಪದೇಶವನ್ನು ಮಾಡಲು ನಾನು ಇದೆಲ್ಲವನ್ನು ಮಾಡಿದೆ.

ಕ್ಷೇಮೀ ಗಮಿಷ್ಯಸಿ ಗೃಹಾನ್ ಶ್ರಮಶ್ಚ ನ ಭವಿಷ್ಯತಿ ।
ಕನ್ಯಾಂ ಪ್ರಾಪ್ಸ್ಯಸಿ ತಾಂ ವಿಪ್ರ ಪುತ್ರಿಣೀ ಚ ಭವಿಷ್ಯತಿ ॥೧೦॥

ನೀನು ಕ್ಷೇಮದಿಂದ ಮನೆಗೆ ಹಿಂದಿರುಗುವಿ. ಶ್ರಮವಾಗುವುದಿಲ್ಲ. ನೀನು ಬಯಸಿದ ಕನ್ಯೆಯನ್ನೇ ಪಡೆಯುವಿ. ಎಲೈ ಬ್ರಾಹ್ಮಣನೇ, ಅವಳು ನಿನಗೆ ಪುತ್ರರನ್ನೂ ಕೊಡುವಳು.

ಕಾಮ್ಯಯಾ ಪೃಷ್ಟವಾಂಸ್ತ್ವಂ ಮಾಂ ತತೋ ವ್ಯಾಹೃತಮುತ್ತರಮ್ ।
ಅನತಿಕ್ರಮಣೀಯೈಷಾ ಕೃತ್ಸ್ನಲೋಕೈಸ್ತ್ರಿಭಿಃ ಸದಾ ॥೧೧॥

ನೀನು ನನ್ನನ್ನು ತಿಳಿಯುವ ಆಸೆಯಿಂದ ಪ್ರಶ್ನೆಯನ್ನು ಮಾಡಿದೆ. ಅದಕ್ಕೆ ನಾನು ಉತ್ತರವನ್ನು ಹೇಳಿದ್ದೇನೆ. ಬ್ರಾಹ್ಮಣನ ಆಸೆಯು ಮೂರು ಲೋಕಗಳಲ್ಲಿಯೂ ಕೂಡ ಯಾವಾಗಲೂ ಮೀರಬಾರದಂತಹುದು.

ಗಚ್ಛಸ್ವ ಸುಕೃತಂ ಕೃತ್ವಾ ಕಿಂ ವಾನ್ಯಚ್ಛ್ರೋತುಮಿಚ್ಛಸಿ ।
ಯಾವದ್ ಬ್ರವೀಮಿ ವಿಪ್ರರ್ಷೇ ಅಷ್ಟಾವಕ್ರ ಯಥಾತಥಮ್ ॥೧೨॥

ಎಲೈ ಅಷ್ಟಾವಕ್ರ ವಿಪ್ರರ್ಷಿಯೇ, ನೀನು ಒಳ್ಳೆಯ ಕಾರ್ಯವನ್ನು ಮಾಡಿದ್ದೀಯೆ. ಅಥವಾ ಬೇರೆ ಏನಾದರೂ ಕೇಳಿದರೆ ನಾನು ಯಥಾರ್ಥವಾಗಿ ಉತ್ತರವನ್ನು ಹೇಳುತ್ತೇನೆ. ಹೋಗಿ ಬಾ.

ಋಷಿಣಾ ಪ್ರಸಾದಿತಾ ಚಾಸ್ಮಿ ತವ ಹೇತೋರ್ದ್ವಿಜರ್ಷಭ ।
ತಸ್ಯ ಸಮ್ಮಾನನಾರ್ಥಂ ಮೇ ತ್ವಯಿ ವಾಕ್ಯಂ ಪ್ರಭಾಷಿತಮ್ ॥೧೩॥

ಎಲೈ ದ್ವಿಜಶ್ರೇಷ್ಠನೇ, ಋಷಿಯಾದ ವದಾನ್ಯನು ನಿನ್ನ ಸಲುವಾಗಿ ನನ್ನನ್ನು ಸೃಷ್ಟಿಸಿದ್ದಾನೆ. ಅವನನ್ನು ಗೌರವಿಸುವ ಉದ್ದೇಶದಿಂದ ನಾನು ನಿನ್ನ ಜೊತೆಯಲ್ಲಿ ಮಾತನಾಡಿದೆ.

ಭೀಷ್ಮಃ

ಶ್ರುತ್ವಾ ತು ವಚನಂ ತಸ್ಯಾಃ ಸ ವಿಪ್ರಃ ಪ್ರಾಂಜಲಿಃ ಸ್ಥಿತಃ ।
ಅನುಜ್ಞಾತಸ್ತಯಾ ಚಾಪಿ ಸ್ವಗೃಹಂ ಪುನರಾವ್ರಜತ್ ॥೧೪॥

ಭೀಷ್ಮ- ಅವಳ ಮಾತನ್ನು ಕೇಳಿ ಆ ಬ್ರಾಹ್ಮಣನು ಅವಳಿಗೆ ಕೈಗಳನ್ನು ಮುಗಿದನು. ಅವಳ ಅನುಮತಿಯನ್ನು ಪಡೆದು ಪುನಃ ತನ್ನ ಮನೆಗೆ ಹಿಂದಿರುಗಿದನು.

ಗೃಹಮಾಗತ್ಯ ವಿಶ್ರಾಂತಃ ಸ್ವಜನಂ ಪ್ರತಿಪೂಜ್ಯ ಚ ।
ಅಭ್ಯಗಚ್ಛತ ತಂ ವಿಪ್ರಂ ನ್ಯಾಯತಃ ಕುರುನಂದನ ॥೧೫॥

ಎಲೈ ಕುರುನಂದನನೇ, ಮನೆಗೆ ಹಿಂದಿರುಗಿ ವಿಶ್ರಾಂತಿಯನ್ನು ಪಡೆದು, ಸ್ವಜನರನ್ನು ಪೂಜಿಸಿ ಆ ವದಾನ್ಯ ಋಷಿಯ ಬಳಿಗೆ ಹೋದನು.

ಪೃಷ್ಟಶ್ಚ ತೇನ ವಿಪ್ರೇಣ ದೃಷ್ಟಂ ತ್ವೇತನ್ನಿದರ್ಶನಮ್ ।
ಪ್ರಾಹ ವಿಪ್ರಂ ತದಾ ವಿಪ್ರಃ ಸುಪ್ರೀತೇನಾಂತರಾತ್ಮನಾ ॥೧೬॥

ಆ ಬ್ರಾಹ್ಮಣನಿಂದ ಕೇಳಲ್ಪಟ್ಟು ತಾನು ನೋಡಿದುದನ್ನೆಲ್ಲ ಆ ವಿಪ್ರನಿಗೆ ಹೇಳಿದನು. ಆಗ ಸಂತೋಷಗೊಂಡ ಮನಸ್ಸಿನಿಂದ ಅಷ್ಟಾವಕ್ರನು ವದಾನ್ಯ ಋಷಿಯನ್ನು ಕುರಿತು ಮಾತನಾಡಿದನು.

ಭವತಾಹಮನುಜ್ಞಾತಃ ಪ್ರಸ್ಥಿತೋ ಗಂಧಮಾದನಮ್ ।
ತಸ್ಯ ಚೋತ್ತರತೋ ದೇಶೇ ದೃಷ್ಟಂ ತದ್ದೈವತಂ ಮಹತ್ ॥೧೭॥

ನಿನ್ನ ಅನುಮತಿಯನ್ನು ಪಡೆದು ನಾನು ಗಂಧಮಾದನ ಪರ್ವತಕ್ಕೆ ಹೋಗಿ ಅಲ್ಲಿಂದ ಉತ್ತರದಿಕ್ಕಿನಲ್ಲಿ ಆ ದೊಡ್ಡ ದೇವತೆಯನ್ನು ನೋಡಿದೆನು.

ತಯಾ ಚಾಹಮನುಜ್ಞಾತೋ ಭವಾಂಶ್ಚಾಪಿ ಪ್ರಕೀರ್ತಿತಃ ।
ಶ್ರಾವಿತಶ್ಚಾಪಿ ತದಾಖ್ಯಂ ಗೃಹಮಭ್ಯಾಗತಃ ಪ್ರಭೋ ॥೧೮॥

ನಿನ್ನ ಹೆಸರನ್ನು ಹೇಳಿ ಅನುಮತಿಯನ್ನು ನೀಡಿದಳು. ಎಲೈ ಪ್ರಭುವೇ, ಅವಳ ಮಾತುಗಳನ್ನು ಕೇಳಿ ಮನೆಗೆ ಹಿಂದಿರುಗಿ ನಿನ್ನ ಬಳಿ ಬಂದಿದ್ದೇನೆ (ಎಂದು ಹೇಳಿದನು).

ತಮುವಾಚ ತತೋ ವಿಪ್ರಃ ಪ್ರತಿಗೃಹ್ಣೀಷ್ವ ಮೇ ಸುತಾಮ್ ।
ನಕ್ಷತ್ರತಿಥಿಸಂಯೋಗೇ ಪಾತ್ರಂ ಹಿ ಪರಮಂ ಭವಾನ್ ॥೧೯॥

ಆಗ ಆ ಬ್ರಾಹ್ಮಣನು ಒಳ್ಳೆಯ ತಿಥಿ, ನಕ್ಷತ್ರ , ಯೋಗ ಇರುವಾಗ ನನ್ನ ಪುತ್ರಿಯನ್ನು ಸ್ವೀಕರಿಸು. ಕನ್ಯಾದಾನಕ್ಕೆ ನೀನು ಶ್ರೇಷ್ಠನಾದ ಪಾತ್ರ ಎಂದು ಹೇಳಿದನು.

ಅಷ್ಟಾವಕ್ರಸ್ತಥೇತ್ಯುಕ್ತ್ವಾ ಪ್ರತಿಗೃಹ್ಯ ಚ ತಾಂ ಪ್ರಭೋ ।
ಕನ್ಯಾಂ ಪರಮಧರ್ಮಾತ್ಮಾ ಪ್ರೀತಿಮಾಂಶ್ಚಾಭವತ್ತದಾ ॥೨೦॥

ಎಲೈ ಪ್ರಭುವೇ, ಅಷ್ಟಾವಕ್ರನು ಆ ಕನ್ಯೆಯನ್ನು ಸ್ವೀಕರಿಸಿ ಪರಮಧರ್ಮಾತ್ಮನಾದ ಅವನು ಸಂತೋಷವನ್ನು ಹೊಂದಿದನು.

ಕನ್ಯಾಂ ತಾಂ ಪ್ರತಿಗೃಹ್ಯೈವ ಭಾರ್ಯಾಂ ಪರಮಶೋಭನಾಮ್ ।
ಉವಾಸ ಮುದಿತಸ್ತತ್ರ ಆಶ್ರಮೇ ವಿಗತಜ್ವರಃ ॥೨೧॥

ಪರಮಶೋಭನಳಾದ ಆ ಕನ್ಯೆಯನ್ನು ಭಾರ್ಯೆಯಾಗಿ ಸ್ವೀಕರಿಸಿ ತನ್ನ ಆಶ್ರಮದಲ್ಲಿ ಚಿಂತಾರಹಿತನಾಗಿ ಸುಖದಿಂದ ವಾಸ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ
ಅಷ್ಟಾವಕ್ರವಿವಾಹೋನಾಮ ಪಂಚಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತಾರನೆಯ ಅಧ್ಯಾಯ

ಅನ್ಯಜಾತಿಯಲ್ಲಿ ಉತ್ಪನ್ನರಾದ ಋಷಿಗಳ ಮಹಿಮೆ

ಯುಧಿಷ್ಠಿರಃ

ವೈಶ್ಯಯೋನ್ಯಾಂ ಸಮುತ್ಪನ್ನಾಃ ಶೂದ್ರಯೋನ್ಯಾಂ ತಥೈವ ಚ ।
ಬ್ರಹ್ಮರ್ಷಯ ಇತಿ ಪ್ರೋಕ್ತಾಃ ಪುರಾಣಾ ದ್ವಿಜಸತ್ತಮಾಃ ॥೧॥

ಕಥಮೇತನ್ಮಹಾರಾಜ ತತ್ತ್ವಂ ಶಂಸಿತುಮರ್ಹಸಿ ।
ವಿರುದ್ಧಮಿಹ ಪಶ್ಯಾಮಿ ವಿಯೋನೌ ಬ್ರಾಹ್ಮಣೋ ಭವೇತ್ ॥೨॥

ಯುಧಿಷ್ಠಿರ– ಎಲೈ ಮಹಾರಾಜನೇ, ದ್ವಿಜಶ್ರೇಷ್ಠರೂ ಪ್ರಾಚೀನರಾದ ಬ್ರಹ್ಮರ್ಷಿಗಳೂ ವೈಶ್ಯಯೋನಿಯಲ್ಲಿಯೂ, ಶೂದ್ರಯೋನಿಯಲ್ಲಿಯೂ ಜನಿಸಿದ್ದಾರೆಂದು ಹೇಳಲ್ಪಡುತ್ತದೆ. ಇದು ಹೇಗೆ ಆಗುತ್ತದೆ? ಇದರ ತತ್ತ್ವವನ್ನು

ಹೇಳಬೇಕು. ಬೇರೆ ಯೋನಿಯಲ್ಲಿ ಹುಟ್ಟಿದವರು ಬ್ರಾಹ್ಮಣರಾಗುವುದು ವಿರುದ್ಧವಾದುದು ಎಂದು ಭಾವಿಸುತ್ತೇನೆ.

ಭೀಷ್ಮಃ

ಅಲಂ ಕೌತೂಹಲೇನಾತ್ರ ನಿಬೋಧ ತ್ವಂ ಯುಧಿಷ್ಠಿರ ।
ಶುಭೇತರಂ ಶುಭಂ ವಾಽಪಿ ನ ಚಿಂತಯಿತುಮರ್ಹಸಿ ॥೩॥

ಭೀಷ್ಮ– ಎಲೈ ಯುಧಿಷ್ಠಿರನೇ, ಕುತೂಹಲವನ್ನು ಪಡಬೇಕಾದುದಿಲ್ಲ. ನಾನು ಹೇಳುವುದನ್ನು ಕೇಳು. ಋಷಿಗಳ ವಿಷಯದಲ್ಲಿ ಅದು ಶುಭವಾಗಲಿ ಅಥವಾ ಅಶುಭವಾಗಲಿ ಅದನ್ನು ಚಿಂತಿಸುವುದು ಯೋಗ್ಯವಲ್ಲ.

ಈಶಂತ್ಯಾತ್ಮನ ಇತ್ಯೇತದ್ ಗತಿಶ್ಚೈಷಾಂ ನ ಸಜ್ಜತೇ ।
ಬ್ರಹ್ಮಭೂಯಾಂಸ ಇತ್ಯೇವ ಋಷಯಃ ಶ್ರುತಿಚೋದಿತಾಃ ॥೪॥

ಅವರು ತಮ್ಮ ಮೇಲೆಯೇ ತಮ್ಮ ಪ್ರಭುತ್ವವನ್ನು ಹೊಂದಿರುತ್ತಾರೆ. ಅವರು ಏನು ಮಾಡಿದರೂ ಅವರ ಸದ್ಗತಿಯಲ್ಲಿ ವ್ಯತ್ಯಾಸವಾಗುವುದಿಲ್ಲ. ಜೀವನ್ಮುಕ್ತರಾದವರು ಎಂದೇ ಋಷಿಗಳು ಶ್ರುತಿಗಳಲ್ಲಿ ಹೇಳಲ್ಪಡುತ್ತಾರೆ.

ನಿಂದ್ಯಾ ನ ಚೈತೇ ರಾಜೇಂದ್ರ ಪ್ರಮಾಣಂ ಹಿ ಪ್ರಮಾಣಿನಾಮ್ ।
ಲೋಕೋಽನುಮನ್ಯತೇ ಚೈತಾನ್ ಪ್ರಮಾಣಂ ಹ್ಯತ್ರ ವೈ ತಪಃ ॥೫॥

ಎಲೈ ರಾಜೇಂದ್ರನೇ, ಅವರು ನಿಂದನೀಯರಲ್ಲ. ಪ್ರಮಾಣಕ್ಕೆ ಅನುಗುಣವಾಗಿ ಕಾರ್ಯವನ್ನು ಮಾಡುವ ಅವರ ನಡತೆಯು ಅವರಿಗೆ ಪ್ರಮಾಣವಾಗುತ್ತದೆ. ಲೋಕವು ಅವರನ್ನು ಅಂಗೀಕರಿಸುತ್ತದೆ. ಅದಕ್ಕೆ ಮುಖ್ಯಕಾರಣವೆಂದರೆ ಅವರ ತಪಸ್ಸು.

ಏವಂ ಮಹಾತ್ಮಭಿಸ್ತಾತ ತಪೋಜ್ಞಾನಸಮನ್ವಿತೈಃ ।
ಪ್ರವರ್ತಿತಾನಿ ಕಾರ್ಯಾಣಿ ಪ್ರಮಾಣಾನ್ಯೇವ ಸತ್ತಮ ॥೬॥

ಎಲೈ ಪ್ರೀತಿಪಾತ್ರನೇ, ಸಜ್ಜನರಲ್ಲಿ ಶ್ರೇಷ್ಠನೇ, ಈ ರೀತಿಯಲ್ಲಿ ತಪೋ-ಜ್ಞಾನ ಸಮನ್ವಿತರಾದ ಅಂತಹವರು ಮಾಡಿದ ಕಾರ್ಯಗಳು ಪ್ರಮಾಣಗಳೇ (ಪ್ರಾಮಾಣಿಕವೇ) ಆಗುತ್ತವೆ.

ಭಾರ್ಯಾಶ್ಚತಸ್ರೋ ರಾಜೇಂದ್ರ ಬ್ರಾಹ್ಮಣಸ್ಯ ಸ್ವಧರ್ಮತಃ ।
ಬ್ರಾಹ್ಮಣೇ ಕ್ಷತ್ರಿಯಾ ವೈಶ್ಯಾ ಶೂದ್ರಾ ಚ ಭರತರ್ಷಭ ॥೭॥

ರಾಜ್ಞಾಂ ತು ಕ್ಷತ್ರಿಯಾ ವೈಶ್ಯಾ ಶೂದ್ರಾ ಚ ಭರತರ್ಷಭ ।
ವೈಶ್ಯಸ್ಯ ವೈಶ್ಯಾ ವಿಹಿತಾ ಶೂದ್ರಾ ಚ ಭರತರ್ಷಭ ॥೮॥

ಎಲೈ ರಾಜೇಂದ್ರನೇ, ಬ್ರಾಹ್ಮಣರಿಗೆ ತನ್ನ ಧರ್ಮಕ್ಕೆ ಅನುಸಾರವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರಸ್ತ್ರೀಯರು ನಾಲ್ವರೂ ಭಾರ್ಯೆಯರಾಗುತ್ತಾರೆ. ಎಲೈ ಭರತಶ್ರೇಷ್ಠನೇ, ರಾಜನಿಗೆ ಕ್ಷತ್ರಿಯ, ವೈಶ್ಯ, ಶೂದ್ರ ಸ್ತ್ರೀಯರೂ; ವೈಶ್ಯರಿಗೆ ವೈಶ್ಯ ಮತ್ತು ಶೂದ್ರರು ಭಾರ್ಯೆಯರಾಗುತ್ತಾರೆಂದು ವಿಹಿತವಾಗಿದೆ.

ಶೂದ್ರಸ್ಯೈಕಾ ಸ್ಮೃತಾ ಭಾರ್ಯಾ ಪ್ರತಿಲೋಮೇ ತು ಸಂಕರಃ ।
ಶೂದ್ರಾಯಾಸ್ತು ನರಶ್ರೇಷ್ಠ ಚತ್ವಾರಃ ಪತಯಃ ಸ್ಮೃತಾಃ ॥೯॥

ಶೂದ್ರರಿಗೆ ಮಾತ್ರ ಶೂದ್ರಳಾದವಳು ಒಬ್ಬಳೇ ಭಾರ್ಯೆ. ಇದು ವಿರುದ್ಧವಾದರೆ (ಕೆಳಗಿನ ಜಾತಿಯ ಪುರುಷನು ಮೇಲಿನ ಜಾತಿಯ ಸ್ತ್ರೀಯನ್ನು ವಿವಾಹವಾದರೆ ಅದನ್ನು ಸಂಕರವೆಂದು ಕರೆಯುತ್ತಾರೆ). ಎಲೈ ನರಶ್ರೇಷ್ಠನೇ, ಶೂದ್ರಳಿಗೆ ನಾಲ್ಕುವರ್ಣದವರೂ ಪತಿಯಾಗಬಹುದೆಂದು ಹೇಳಲ್ಪಡುತ್ತದೆ.

ವರ್ಣೋತ್ತಮಾಯಾಸ್ತು ಪತಿಃ ಸವರ್ಣಸ್ತ್ವೇಕ ಏವ ಸಃ ।
ದ್ವೌ ಕ್ಷತ್ರಿಯಾಯಾ ವಿಹಿತೌ ಬ್ರಾಹ್ಮಣಃ ಕ್ಷತ್ರಿಯಸ್ತಥಾ ॥೧೦॥

ಶ್ರೇಷ್ಠವರ್ಣವಾದ ಬ್ರಾಹ್ಮಣವರ್ಣದಲ್ಲಿ ಜನಿಸಿದ ಸ್ತ್ರೀಗೆ ಮಾತ್ರ ಬ್ರಾಹ್ಮಣವರ್ಣದವನೊಬ್ಬನೇ ಪತಿಯಾಗುತ್ತಾನೆ. ಕ್ಷತ್ರಿಯ ಸ್ತ್ರೀಗೆ ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ ಪತಿಯು ವಿಹಿತನಾಗಿದ್ದಾನೆ.

ವೈಶ್ಯಾಯಾಸ್ತು ನರಶ್ರೇಷ್ಠ ವಿಹಿತಾಃ ಪತಯಸ್ತ್ರಯಃ ।
ಸವರ್ಣಃ ಕ್ಷತ್ರಿಯಶ್ಚೈವ ಬ್ರಾಹ್ಮಣಶ್ಚ ವಿಶಾಂಪತೇ ॥೧೧॥

ಎಲೈ ರಾಜನೇ, ವೈಶ್ಯ ಸ್ತ್ರೀಗೆ ವೈಶ್ಯನೂ, ಕ್ಷತ್ರಿಯನೂ, ಬ್ರಾಹ್ಮಣನೂ ಪತಿಯಾಗಿ ವಿಹಿತವಾಗಿದ್ದಾರೆ.

ಏವಂವಿಧಿಮನುಸೃತ್ಯ ತತಸ್ತೇ ಋಷಿಭಿಃ ಪುರಾ ।
ಉತ್ಪಾದಿತಾ ಮಹಾತ್ಮಾನಃ ಪುತ್ರಾ ಬ್ರಹ್ಮರ್ಷಯಃ ಪುರಾ ॥೧೨॥

ಇಂತಹ ವಿಧಿಯನ್ನು ಅನುಸರಿಸಿ ಹಿಂದೆ ಋಷಿಗಳಿಂದ ಮಹಾತ್ಮರೂ, ಬ್ರಹ್ಮರ್ಷಿಗಳೂ ಆದ ಪುತ್ರರು ಜನ್ಮವನ್ನು ಪಡೆದಿದ್ದಾರೆ.

ಪುರಾಣಾಭ್ಯಾಮೃಷಿಭ್ಯಾಂ ತು ಮಿತ್ರೇಣ ವರುಣೇನ ಚ ।
ವಸಿಷ್ಠೋಽಥ ತಥಾಽಗಸ್ತ್ಯೋ ಬರ್ಹಿಷದ್ಭಿಸ್ತಥೈವ ಚ ॥೧೩॥

ಪ್ರಾಚೀನ ಋಷಿಗಳಿಂದ ಹಾಗೂ ಮಿತ್ರಾವರುಣರಿಂದ ವಸಿಷ್ಠರೂ, ಅಗಸ್ತ್ಯರೂ ಮತ್ತು ಬರ್ಹಿಷದರಿಂದ ಬೇರೆ ಪುತ್ರರೂ ಜನಿಸಿದ್ದಾರೆ.

ಕಕ್ಷೀವಾನರ್ಷಿಷೇಣಶ್ಚ ಪುರುಷಃ ಕಕ್ಷ ಏವ ಚ ।
ಮಾಮತೇಯಸ್ಯ ವೈ ಪುತ್ರಾ ಗೌತಮಸ್ಯಾತ್ಮಜಾಃ ಸ್ಮೃತಾಃ ॥೧೪॥

ಕಕ್ಷೀವಾನ್, ಋಷ್ಟಿಷೇಣ, ಪುರುಷ, ಕಕ್ಷ ಇವರೆಲ್ಲರೂ ಮಮತೆಯಲ್ಲಿ ಗೌತಮರಿಗೆ ಜನಿಸಿದ ಪುತ್ರರು.

ವತ್ಸಪ್ರಿಯಶ್ಚ ಭಗವಾನ್ ಸ್ಥೂಲರಶ್ಮಿಸ್ತಥಾಕ್ಷಣಿಃ ।
ಗೌತಮಸ್ಯೈವ ತನಯಾ ಯೇ ದಾಸ್ಯಾಂ ಜನಿತಾ ಹ್ಯುತ ॥೧೫॥

ವತ್ಸಪ್ರಿಯ, ಭಗವಾನ್, ಸ್ಥೂಲರಶ್ಮಿ, ಅಕ್ಷಣಿ ಇವರೆಲ್ಲರೂ ಗೌತಮರಿಗೆ ದಾಸಿಯಲ್ಲಿ ಜನಿಸಿದ ಪುತ್ರರು.

ಕಪಿಂಜಲಾದೋ ಬ್ರಹ್ಮರ್ಷಿಶ್ಚಾಂಡಾಲ್ಯಾಮುದಪದ್ಯತ ।
ವೈನತೇಯಸ್ತಥಾ ಪಕ್ಷೀ ತುರ್ಯಾಯಾಂ ಚ ವಸಿಷ್ಠತಃ ॥೧೬॥

ಬ್ರಹ್ಮರ್ಷಿಗಳಾದ ಕಪಿಂಜಲಾದರು ಚಂಡಾಲ ಸ್ತ್ರೀಯಲ್ಲಿ ಜನಿಸಿದವರು. ಪಕ್ಷಿಯಾದ ಗರುಡನು ವಸಿಷ್ಠರಿಂದ ಶೂದ್ರ ಸ್ತ್ರೀಯಲ್ಲಿ ಜನಿಸಿದವನು (ಈ ವಸಿಷ್ಠರೂ ಮತ್ತು ವೈನತೇಯನೂ ಬೇರೆಯವರು).

ಪ್ರಸಾದಾಚ್ಚ ವಸಿಷ್ಠಸ್ಯ ಶುಕ್ಲಾಭ್ಯುಪಗಮೇನ ಚ ।
ಅದೃಶ್ಯಂತ್ಯಾಃ ಪಿತಾ ವೈಶ್ಯೋ ನಾಮ್ನಾ ಚಿತ್ರಮುಖಃ ಪುರಾ ।
ಬ್ರಾಹ್ಮಣತ್ವಮನುಪ್ರಾಪ್ತೋ ಬ್ರಹ್ಮರ್ಷಿತ್ವಂ ಚ ಕೌರವ ॥೧೭॥

ವಸಿಷ್ಠರ ಅನುಗ್ರಹದಿಂದ ಮತ್ತು ಶುದ್ಧ ಚಾರಿತ್ರ್ಯದಿಂದ ಅದೃಶ್ಯಂತಿಯ ತಂದೆಯಾದ ಜಾತಿಯಲ್ಲಿ ವೈಶ್ಯನಾದ ಚಿತ್ರಮುಖನೆಂಬುವನು ಎಲೈ ಕೌರವ್ಯನೇ, ಬ್ರಾಹ್ಮಣ್ಯವನ್ನು ಮತ್ತು ಬ್ರಹ್ಮರ್ಷಿತ್ವವನ್ನು ಪಡೆದನು.

ವೈಶ್ಯಶ್ಚಿತ್ರಮುಖಃ ಕನ್ಯಾಂ ವಸಿಷ್ಠತನಯಸ್ಯ ವೈ ।
ಶುಭಾಂ ಪ್ರಾದಾದ್ ಯತೋ ಜಾತೋ ಬ್ರಹ್ಮರ್ಷಿಸ್ತು ಪರಾಶರಃ ॥೧೮॥

ವೈಶ್ಯನಾದ ಚಿತ್ರಮುಖನು ತನ್ನ ಮಗಳಾದ ಶುಭಳಾದ ಅದೃಶ್ಯಂತಿಯನ್ನು ವಸಿಷ್ಠರ ತನಯನಾದ ಶಕ್ತಿಗೆ ಕೊಟ್ಟನು. ಅವರಲ್ಲಿ ಬ್ರಹ್ಮರ್ಷಿಗಳಾದ ಪರಾಶರರು ಜನಿಸಿದರು.

ತಥೈವ ದಾಶಕನ್ಯಾಯಾಂ ಸತ್ಯವತ್ಯಾಂ ಮಹಾನೃಷಿಃ ।
ಪರಾಶರಾತ್ ಪ್ರಸೂತಶ್ಚ ವ್ಯಾಸೋ ಯೋಗಮಯೋ ಮುನಿಃ ॥೧೯॥

ಹಾಗೆಯೇ ಪರಾಶರರಿಂದ ದಾಶಕನ್ಯೆಯಾದ ಸತ್ಯವತಿಯಲ್ಲಿ ದೊಡ್ಡ ಋಷಿಗಳೂ, ಯೋಗಾತ್ಮಕರೂ ಆದ ವ್ಯಾಸರು ಜನಿಸಿದರು.

ವಿಭಾಂಡಕಸ್ಯ ಮೃಗ್ಯಾಂ ಚ ತಪೋಯೋಗಾತ್ಮಕೋ ಮುನಿಃ ।
ಋಷ್ಯಶೃಂಗಃ ಸಮುತ್ಪನ್ನೋ ಬ್ರಹ್ಮಚಾರೀ ಮಹಾಯಶಾಃ ॥೨೦॥

ವಿಭಾಂಡಕಋಷಿಗಳಿಗೆ ಹೆಣ್ಣು ಜಿಂಕೆಯಲ್ಲಿ ತಪೋಯೋಗಾತ್ಮಕನೂ, ಬ್ರಹ್ಮಚಾರಿಯೂ, ಮಹಾಕೀರ್ತಿವಂತನೂ ಆದ ಋಷ್ಯಶೃಂಗನು ಜನಿಸಿದನು.

ಶಾರ್ಙ್ಗ್ಯಾಂ ಚ ಮಂದಪಾಲಸ್ಯ ಚತ್ವಾರೋ ಬ್ರಹ್ಮವಾದಿನಃ ।
ಜಾತಾ ಬ್ರಹ್ಮರ್ಷಯಃ ಪುಣ್ಯಾ ಯೈಃ ಸ್ತುತೋ ಹವ್ಯವಾಹನಃ ॥೨೧॥

ದ್ರೋಣಶ್ಚ ಸ್ತಂಬಮಿತ್ರಶ್ಚ ಸಾ(ಶಾ)ರಿಸೃಕ್ವಶ್ಚ ಬುದ್ಧಿಮಾನ್ ।
ಜರಿತಾರಿಶ್ಚ ವಿಖ್ಯಾತಾಶ್ಚತ್ವಾರಃ ಸೂರ್ಯಸನ್ನಿಭಾಃ ॥೨೨॥

ಮಂದಪಾಲನಿಗೆ ಶಾರ್ಙ್ಗ ಪಕ್ಷಿಯಲ್ಲಿ ಬ್ರಹ್ಮವಾದಿಗಳಾದ ನಾಲ್ವರು ಪವಿತ್ರರಾದ ಬ್ರಹ್ಮರ್ಷಿಗಳು ಜನಿಸಿ, ಅವರು ಖಾಂಡವ ದಹನ ಕಾಲದಲ್ಲಿ ಅಗ್ನಿಯನ್ನು ಸ್ತೋತ್ರ ಮಾಡಿದರು. ಅವರು ಸೂರ್ಯಸನ್ನಿಭರಾದ ದ್ರೋಣ, ಸ್ತಂಬಮಿತ್ರ, ಸಾರಿಸೃಕ್ವ ಮತ್ತು ಜರಿತಾರಿ ಎಂದು ಪ್ರಖ್ಯಾತರಾದ ನಾಲ್ವರು.

ಮಹರ್ಷೇಃ ತಾಳವೃಕ್ಷಸ್ಯ ಶಕುಂತ್ಯಾಮೇವ ಜಜ್ಞಿವಾನ್ ।
ಹಿರಣ್ಯಹಸ್ತೋ ಭಗವಾನ್ ಮಹರ್ಷಿಃ ಕಾಂಚನಪ್ರಭಃ ॥೨೩॥

ತಾಳವೃಕ್ಷ ಎಂಬ ಮಹರ್ಷಿಗೆ ಶಕುಂತ ಪಕ್ಷಿಯಲ್ಲಿ ಪೂಜ್ಯನೂ, ಮಹರ್ಷಿಯೂ, ಕಾಂಚನ ಪ್ರಭೆಯುಳ್ಳವನೂ ಆದ ಹಿರಣ್ಯಹಸ್ತನು ಜನಿಸಿದನು.

ಪಾವಕಾತ್ ತಾತ ಸಂಭೂತಾ ಮನಸಾ ಚ ಮಹರ್ಷಯಃ ।
ಪಿತಾಮಹಸ್ಯ ರಾಜೇಂದ್ರ ಪುಲಸ್ತ್ಯಪುಲಹಾದಯಃ ॥೨೪॥

ಎಲೈ ರಾಜೇಂದ್ರನೇ, ಪಿತಾಮಹನಾದ ಬ್ರಹ್ಮನ ಆದೇಶದಂತೆ ಪುಲಸ್ತ್ಯ, ಪುಲಹ ಮೊದಲಾದವರು ಅಗ್ನಿಯಿಂದ ಜನಿಸಿದರು. ಹಾಗೆಯೇ ಕೆಲವು ಮಹರ್ಷಿಗಳು ಮನಸ್ಸಿನಿಂದಲೂ (ಸ್ತ್ರೀ ಸಂಯೋಗವಿಲ್ಲದೆ) ಜನಿಸಿದ್ದಾರೆ.

ಸವರ್ಣಶ್ಚಾಪಿ ರಾಜರ್ಷಿಃ ಸವರ್ಣಾಯಾಮಜಾಯತ ।
ಮೃನ್ಮಯ್ಯಾಂ ಭರತಶ್ರೇಷ್ಠ ಆದಿತ್ಯೇನ ವಿವಸ್ವತಾ ॥೨೫॥

ಎಲೈ ಭರತಶ್ರೇಷ್ಠನೇ, ವಿವಸ್ವಾನ್ ನಾಮಕ ಆದಿತ್ಯನಿಂದ ಸವರ್ಣಾ ಎಂಬ ವನಿತೆಯ ಮಣ್ಣಿನ ಪ್ರತಿಮೆಯಲ್ಲಿ ರಾಜರ್ಷಿಯಾದ ಸವರ್ಣನು ಜನಿಸಿದನು.

ಶಾಂಡಿಲ್ಯಶ್ಚಾಗ್ನಿತೋ ಜಾತಃ ಕಾಶ್ಯಪಸ್ಯಾತ್ಮಜಃ ಪ್ರಭುಃ ।
ಶರದ್ವತಃ ಶರಸ್ತಂಬಾತ್ ಕೃಪಶ್ಚ ಕೃಪಯಾ ಸಹ ॥೨೬॥

ಕಶ್ಯಪರ ಅಣ್ಣನಾದ ಪ್ರಭುವಾದ ಶಾಂಡಿಲ್ಯರು ಅಗ್ನಿಯಿಂದ ಜನಿಸಿದರು. ಶರದ್ವಾನ್ ಋಷಿಗಳಿಂದ ಶರಸ್ತಂಬದಲ್ಲಿ ಕೃಪ ಮತ್ತು ಕೃಪಿಯರು ಜನಿಸಿದರು.

ಪದ್ಮಾಚ್ಚ ಜಜ್ಞೇ ರಾಜೇಂದ್ರ ಸೋಮಪಸ್ಯ ಮಹಾತ್ಮನಃ ।
ರೇಣುಶ್ಚ ರೇಣುಕಾ ಚೈವ ರಾಮಮಾತಾ ಯಶಸ್ವಿನೀ ॥೨೭॥

ಎಲೈ ರಾಜೇಂದ್ರನೇ, ಮಹಾತ್ಮರಾದ ಸೋಮಪನಿಗೆ ಪದ್ಮದಲ್ಲಿ ರೇಣು ಎಂಬ ಪುತ್ರನೂ, ಪರಶುರಾಮನ ತಾಯಿಯಾದ ಕೀರ್ತಿವಂತಳಾದ ರೇಣುಕೆಯೂ ಜನಿಸಿದರು.

ಯಮುನಾಯಾಃ ಸಮುದ್ಭೂತಃ ಸೋಮಕೇನ ಮಹಾತ್ಮನಾ ।
ಅರ್ಕದತ್ತೋ ಮಹಾನೃಷಿಃ ಪ್ರಥಿತಃ ಪೃಥಿವೀತಳೇ ॥೨೮॥

ಭೂತಳದಲ್ಲಿ ವಿಖ್ಯಾತನಾದ ಅರ್ಕದತ್ತ ಎಂಬ ಮಹರ್ಷಿಯು ಮಹಾತ್ಮನಾದ ಸೋಮಕನಿಂದ ಯಮುನೆಯಲ್ಲಿ ಜನಿಸಿದನು.

ಅಗ್ನೇರಾಹವನೀಯಾಚ್ಚ ದ್ರುಪದಸ್ಯೇಂದ್ರವರ್ಚಸಃ ।
ಧೃಷ್ಟದ್ಯುಮ್ನಶ್ಚ ಸಂಭೂತೋ ವೇದ್ಯಾಂ ಕೃಷ್ಣಾ ಚ ಭಾರತ ॥೨೯॥

ಎಲೈ ಭಾರತನೇ, ಇಂದ್ರನಿಗೆ ಸಮಾನವಾದ ವರ್ಚಸ್ಸುಳ್ಳ ದ್ರುಪದನಿಗೆ ಆಹವನೀಯಾಗ್ನಿಯಿಂದ ಧೃಷ್ಟದ್ಯುಮ್ನನೂ, ವೇದಿಯಿಂದ ದ್ರೌಪದಿಯು ಜನಿಸಿದರು.

ವ್ಯಾಘ್ರ್ಯಯೋನ್ಯಾಂ ತತೋ ಜಾತಾ ವಸಿಷ್ಠಸ್ಯ ಮಹಾತ್ಮನಃ ।
ಏಕೋನವಿಂಶತಿಃ ಪುತ್ರಾ ಖ್ಯಾತಾ ವ್ಯಾಘ್ರಪದಾದಯಃ ॥೩೦॥

ಮಹಾತ್ಮರಾದ ವಸಿಷ್ಠರಿಗೆ ವ್ಯಾಘ್ರ್ಯಯೋನಿಯಲ್ಲಿ ಹತ್ತೊಂಬತ್ತು ಪುತ್ರರು ಜನಿಸಿದರು. ಅವರು ಪ್ರಖ್ಯಾತರಾದ ವ್ಯಾಘ್ರಪದ ಮೊದಲಾದವರು.

ಮಂಧಶ್ಚ ವಾದಲೋಮಶ್ಚ ಜಾಬಾಲಿಶ್ಚ ಮಹಾನೃಷಿಃ ।
ಮನ್ಯುಶ್ಚೈವೋಪಮನ್ಯುಶ್ಚ ಸೇತುಕರ್ಣಸ್ತಥೈವ ಚ ।
ಏತೇ ಚಾನ್ಯೇ ಚ ವಿಖ್ಯಾತಾಃ ಪೃಥಿವ್ಯಾಂ ಗೋತ್ರತಾಂ ಗತಾಃ ॥೩೧॥

ವ್ಯಾಘ್ರಪದ, ಮಂಧ, ವಾದಲೋಮ, ಜಾಬಾಲಿ, ಮನ್ಯು, ಉಪಮನ್ಯು, ಸೇತುಕರ್ಣ, ಇವರೇ ಮೊದಲಾದ ಪ್ರಖ್ಯಾತರಾದವರು ಭೂಮಿಯಲ್ಲಿ ವಸಿಷ್ಠ ಗೋತ್ರಕ್ಕೆ ಸೇರಿದವರು.

ವಿಶ್ವಕಾಶಸ್ಯ ರಾಜರ್ಷೇರೈಕ್ಷ್ವಾಕೋಸ್ತು ಮಹಾತ್ಮನಃ ।
ಬಾಲಾಶ್ವೋ ನಾಮ ಪುತ್ರೋಽಭೂಚ್ಛಿಖಾಂ ಭಿತ್ತ್ವಾ ವಿನಿಸ್ಸೃತಃ ॥೩೨॥

ಮಹಾತ್ಮನಾದ ಇಕ್ಷ್ವಾಕು ವಂಶದ ವಿಶ್ವಕಾಶ ಎಂಬ ರಾಜರ್ಷಿಗೆ ಬಾಲಾಶ್ವನೆಂಬ ಪುತ್ರನು ತಂದೆಯ ಶಿಖೆಯನ್ನು ಭೇದಿಸಿ ಹೊರಬಂದನು.

ಮಾಂಧಾತಾ ಚೈವ ರಾಜರ್ಷಿರ್ಯುವನಾಶ್ವೇನ ಧೀಮತಾ ।
ಸ್ವಯಂ ಧೃತೋಽಥ ಗರ್ಭೇಣ ದಿವ್ಯಾಸ್ತ್ರಬಲಸಂಯುತಃ ॥೩೩॥

ದಿವ್ಯಾಸ್ತ್ರ ಬಲಗಳಿಂದ ಸಂಯುಕ್ತನಾದ ರಾಜರ್ಷಿಯಾದ ಮಾಂಧಾತೃವು ಮೇಧಾವಿಯಾದ ಯುವನಾಶ್ವನಿಂದ ಸ್ವತಃ ಗರ್ಭದಲ್ಲಿ ಧರಿಸಲ್ಪಟ್ಟನು.

ಗೌರಿಕಶ್ಚಾಪಿ ರಾಜರ್ಷಿಶ್ಚಕ್ರವರ್ತೀ ಮಹಾಯಶಾಃ ।
ಬಾಹುದಾಯಾಂ ಸಮುತ್ಪನ್ನೋ ನದ್ಯಾಂ ರಾಜ್ಞಾ ಸುಬಾಹುನಾ ॥೩೪॥

ಮಹಾಕೀರ್ತಿವಂತನಾದ ರಾಜರ್ಷಿಯಾದ ಗೌರಿಕ ಚಕ್ರವರ್ತಿಯು ಸುಬಾಹುರಾಜನಿಂದ ಬಾಹುದಾ ನದಿಯಲ್ಲಿ ಜನಿಸಿದನು.

ಭೂಮೇಶ್ಚ ಪುತ್ರೋ ನರಕಃ ಸಂವರ್ತಶ್ಚೈವ ಪುಷ್ಕಲಃ ।
ಅದ್ಭಿಶ್ಚೈವ ಮಹಾತೇಜಾ ಋಷಿರ್ಗಾರ್ಗ್ಯೋ ಹ್ಯಜಾಯತ ॥೩೫॥

ಭೂಮಿಯ ಪುತ್ರರು ನರಕ, ಸಂವರ್ತ ಮತ್ತು ಪುಷ್ಕಲರು. ಮಹಾತೇಜಸ್ವಿಯಾದ ಗಾರ್ಗ್ಯ ಋಷಿಗಳು ಜಲದಿಂದ ಜನಿಸಿದರು.

ಏತೇ ಚಾನ್ಯೇ ಚ ಬಹವೋ ರಾಜನ್ಯಾ ಬ್ರಾಹ್ಮಣಾಸ್ತಥಾ ।
ಪ್ರಭಾವೇನಾಭಿಸಂಭೂತಾ ಮಹರ್ಷೀಣಾಂ ಮಹಾತ್ಮನಾಮ್ ।
ನಾಸಾಧ್ಯಂ ತಪಸಾ ತೇಷಾಂ ವಿದ್ಯಯಾಽಽತ್ಮಗುಣೈಃ ಪರೈಃ ॥೩೬॥

ಇವರು ಮತ್ತು ಇನ್ನೂ ಅನೇಕ ರಾಜರು ಮತ್ತು ಬ್ರಾಹ್ಮಣರು ಮಹಾತ್ಮರಾದ ಮಹರ್ಷಿಗಳ ಪ್ರಭಾವದಿಂದ ಜನಿಸಿದ್ದಾರೆ. ಶ್ರೇಷ್ಠವಾದ ಅವರ ಆತ್ಮಗುಣಗಳಿಗೆ ಮತ್ತು ತಪಸ್ಸಿಗೆ ಅಸಾಧ್ಯವಾದುದು ಯಾವುದೂ ಇಲ್ಲ.

ಅಸ್ಮಿನ್ನರ್ಥೇ ಚ ಮನುನಾ ಗೀತಃ ಶ್ಲೋಕೋ ನರಾಧಿಪ ।
ಧರ್ಮಂ ಪ್ರಣಯತಾ ರಾಜಂಸ್ತಂ ನಿಬೋಧ ಯುಧಿಷ್ಠಿರ ॥೩೭॥

ಎಲೈ ಯುಧಿಷ್ಠಿರನೇ, ನರಾಧಿಪನೇ, ಧರ್ಮಶಾಸ್ತ್ರವನ್ನು ರಚಿಸುತ್ತಾ ಈ ವಿಷಯದಲ್ಲಿ ಮನುವು ಹೇಳಿರುವ ಒಂದು ಶ್ಲೋಕವನ್ನು ಕೇಳು.

ಋಷೀಣಾಂ ಚ ನದೀನಾಂ ಚ ಸಾಧೂನಾಂ ಚ ಮಹಾತ್ಮನಾಮ್ ।
ಪ್ರಭವೋ ನಾಧಿಗಂತವ್ಯಃ ಸ್ತ್ರೀಣಾಂ ದುಶ್ಚರಿತಸ್ಯ ಚ ॥೩೮॥

ಋಷಿಗಳ, ನದಿಗಳ ಮತ್ತು ಮಹಾತ್ಮರಾದ ಸಾಧುಗಳ ಉತ್ಪತ್ತಿಯನ್ನು ವಿಚಾರ ಮಾಡಬಾರದು. ಹಾಗೆಯೇ ಸ್ತ್ರೀಯರ ದುಷ್ಪ ನಡತೆಗಳ ಮೂಲವನ್ನೂ ವಿಚಾರ ಮಾಡಬಾರದು.

ತನ್ನಾತ್ರ ಚಿಂತಾ ಕರ್ತವ್ಯಾ ಮಹರ್ಷೀಣಾಂ ಸಮುದ್ಭವೇ ।
ಯಥಾ ಸರ್ವಗತೋ ಹ್ಯಗ್ನಿಸ್ತಥಾ ತೇಜೋ ಮಹಾತ್ಮಸು ॥೩೯॥

ಆದ್ದರಿಂದ ಮಹರ್ಷಿಗಳ ಉತ್ಪತ್ತಿಯ ವಿಷಯದಲ್ಲಿ ಚಿಂತೆಯನ್ನು ಮಾಡಬಾರದು. ಸರ್ವಗತನಾದ ಅಗ್ನಿಯಂತೆ ಮಹಾತ್ಮರಲ್ಲಿ ತೇಜಸ್ಸಿರುತ್ತದೆ (ಅಗ್ನಿಯು ಸರ್ವವನ್ನೂ ದಹಿಸುವಂತೆ ಮಹಾತ್ಮರ ತೇಜಸ್ಸು ಸರ್ವದೋಷಗಳನ್ನೂ ದಹಿಸುತ್ತದೆ. ಅಗ್ನಿಯು ಯಾವಾಗಲೂ ಶುದ್ಧನಾಗಿರುವಂತೆ ಮಹಾತ್ಮರು ಏನು ಮಾಡಿದರೂ ಶುದ್ಧರಾಗಿರುತ್ತಾರೆ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ
ಋಷಿಮಾಹಾತ್ಮ್ಯಕಥನಂ ನಾಮ ಷಟ್‌ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೇಳನೆಯ ಅಧ್ಯಾಯ

ನಾರದ-ಮಾರ್ಕಂಡೇಯ ಸಂವಾದ. ಹವ್ಯ-ಕವ್ಯಾದಿ ಸ್ವೀಕಾರ ವಿಚಾರ.

ಯುಧಿಷ್ಠಿರಃ

ಪುತ್ರೈಃ ಕಥಂ ಮಹಾರಾಜ ಪುರುಷಸ್ತಾರಿತೋ ಭವೇತ್ ।
ಯಾವನ್ನ ಲಬ್ಧವಾನ್ ಪುತ್ರಮಫಲಃ ಪುರುಷೋ ನೃಪ ॥೧॥

ಯುಧಿಷ್ಠಿರ- ಎಲೈ ಮಹಾರಾಜನೇ, ಪುತ್ರನಿಂದ ಮನುಷ್ಯನು ಹೇಗೆ ಉದ್ಧರಿಸಲ್ಪಡುತ್ತಾನೆ? ಎಲೈ ರಾಜನೇ, ಪುತ್ರರನ್ನು ಪಡೆಯುವವರೆಗೆ ಮನುಷ್ಯ ಜನ್ಮವು ನಿಷ್ಫಲವೆಂದು ಹೇಳಲ್ಪಡುತ್ತದೆಯಷ್ಟೆ?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ನಾರದೇನ ಪುರಾ ಗೀತಂ ಮಾರ್ಕಂಡೇಯಾಯ ಪೃಚ್ಛತೇ ॥೨॥

ಭೀಷ್ಮ- ಈ ವಿಷಯದಲ್ಲಿಯೂ ಸಹ ಪ್ರಶ್ನೆ ಮಾಡಿದ ಮಾರ್ಕಂಡೇಯರಿಗೆ ನಾರದರು ಹೇಳಿದ ಉತ್ತರ ರೂಪವಾದ ಪುರಾತನವಾದ ಒಂದು ಇತಿಹಾಸವನ್ನು ಹೇಳುತ್ತಾರೆ.

ಪರ್ವತಂ ನಾರದಂ ಚೈವ ಅಸಿತಂ ದೇವಲಂ ಚ ತಮ್ ।
ಆರುಣೇಯಂ ಚ ರೈಭ್ಯಂ ಚ ಏತಾನತ್ರಾಗತಾನ್ ಪುರಾ ॥೩॥

ಗಂಗಾಯಮುನಯೋರ್ಮಧ್ಯೇ ಭೋಗವತ್ಯಾಃ ಸಮಾಗಮೇ ।
ದೃಷ್ಟ್ವಾ ಪೂರ್ವಂ ಸಮಾಸೀನಾನ್ ಮಾರ್ಕಂಡೇಯೋಽಭ್ಯಗಚ್ಛತ ॥೪॥

ಪರ್ವತ, ನಾರದ, ಅಸಿತ, ದೇವಲ, ಆರುಣೇಯ ಮತ್ತು ರೈಭ್ಯ - ಇವರು ಗಂಗಾ-ಯಮುನಾ ನದಿಗಳ ಮಧ್ಯದಲ್ಲಿ ಭೋಗವತಿ ನದಿಯ ಸಂಗಮದಲ್ಲಿ ಕುಳಿತಿರುವುದನ್ನು ನೋಡಿ ಮಾರ್ಕಂಡೇಯರು ಅವರನ್ನು ಸಮೀಪಿಸಿದರು.

ಋಷಯಸ್ತು ಮುನಿಂ ದೃಷ್ಟ್ವಾ ಸಮುತ್ಥಾಯೋನ್ಮುಖಾಃ ಸ್ಥಿತಾಃ ।
ಅರ್ಚಯಿತ್ವಾಽರ್ಹತೋ ವಿಪ್ರಂ ಕಿಂ ಕುರ್ಮ ಇತಿ ಚಾಬ್ರುವನ್ ॥೫॥

ಋಷಿಗಳು ಮಾರ್ಕಂಡೇಯರನ್ನು ನೋಡಿ ಎದ್ದು, ಅವರಿಗೆ ಅಭಿಮುಖವಾಗಿ ನಿಂತು, ಯಥಾಯೋಗ್ಯವಾಗಿ ಅರ್ಚಿಸಿ, ನಿಮಗೆ ನಮ್ಮಿಂದ ಏನಾಗಬೇಕು ಎಂದು ಕೇಳಿದರು.

ಮಾರ್ಕಂಡೇಯಃ

ಅಯಂ ಸಮಾಗಮಃ ಸದ್ಭಿರ್ಯತ್ನೇನಾಸಾದಿತೋ ಮಯಾ ।
ಅತ್ರ ಪ್ರಾಪ್ಸ್ಯಾಮಿ ಧರ್ಮಾಣಾಮಾಚಾರಸ್ಯ ಚ ನಿಶ್ಚಯಮ್ ॥೬॥

ಮಾರ್ಕಂಡೇಯ- ಸಜ್ಜನರಾದ ನಿಮ್ಮ ಸಮಾಗಮವನ್ನು ನಾನು ಪ್ರಯತ್ನಪೂರ್ವಕವಾಗಿ ಸಂಪಾದಿಸಿದ್ದೇನೆ. ಧರ್ಮ ಮತ್ತು ಆಚಾರ ವಿಷಯಗಳಲ್ಲಿ ನನಗಿರುವ ಸಂಶಯಗಳ ಪರಿಹಾರವನ್ನು ಇಲ್ಲಿ ಹೊಂದುವೆನು.

ಋಜುಃ ಕೃತಯುಗೇ ಧರ್ಮಸ್ತಸ್ಮಿನ್ ಕ್ಷೀಣೇ ವಿಮುಹ್ಯತಿ ।
ಯುಗೇಯುಗೇ ಮಹರ್ಷಿಭ್ಯೋ ಧರ್ಮಮಿಚ್ಛಾಮಿ ವೇದಿತುಮ್ ॥೭॥

ಕೃತಯುಗದಲ್ಲಿ ಪರಿಪೂರ್ಣವಾದ ಧರ್ಮವಿದ್ದಿತು. ಕೃತಯುಗ ಮುಗಿಯುತ್ತಾ ಬರುತ್ತಿರಲು ಧರ್ಮವು ಕ್ಷೀಣಿಸುತ್ತಾ ಯುಗ ಯುಗಗಳಲ್ಲಿ ಕಡಿಮೆಯಾಗುತ್ತದೆ. ಮಹರ್ಷಿಗಳಾದ ನಿಮ್ಮಿಂದ ಅಂತಹ ಧರ್ಮವನ್ನು ತಿಳಿಯಲು ಬಯಸುತ್ತೇನೆ.

ಋಷಿಭಿರ್ನಾರದಃ ಪ್ರೋಕ್ತೋ ಬ್ರೂಹಿ ಯತ್ತಾಸ್ಯ ಸಂಶಯಃ ।
ಧರ್ಮಾಧರ್ಮೇಷು ತತ್ತ್ವಜ್ಞ ತ್ವಂ ಹಿ ಚ್ಛೇತ್ತಾಸಿ ಸಂಶಯಾನ್ ॥೮॥

ಆಗ ಉಳಿದ ಋಷಿಗಳು ನಾರದರನ್ನು ಕುರಿತು ಎಲೈ ತತ್ತ್ವಜ್ಞರೇ, ನೀವು ಎಲ್ಲ ಸಂಶಯಗಳನ್ನು ಪರಿಹಾರ ಮಾಡಲು ಸಮರ್ಥರು. ಮಾರ್ಕಂಡೇಯರಿಗೆ ಯಾವ ಧರ್ಮಾಧರ್ಮಗಳ ವಿಷಯದಲ್ಲಿ ಸಂಶಯವಿದೆಯೋ ಅವೆಲ್ಲವನ್ನೂ ಸರಿಯಾಗಿ ತಿಳಿಸಿ ಎಂದು ಹೇಳಿದರು.

ಋಷಿಭ್ಯೋಽನುಮತಂ ವಾಕ್ಯಂ ನಿಯೋಗಾನ್ನಾರದೋಽಬ್ರವೀತ್ ।
ಸರ್ವಧರ್ಮಾರ್ಥತತ್ತ್ವಜ್ಞಂ ಮಾರ್ಕಂಡೇಯಂ ತತೋಽಬ್ರವೀತ್ ॥೯॥

ಆಗ ನಾರದರು ಋಷಿಗಳ ಅನುಮತಿಯನ್ನು ಪಡೆದು ಅವರ ಆದೇಶದಂತೆ ಸರ್ವಧರ್ಮಾರ್ಥವನ್ನು ತಿಳಿದ ಮಾರ್ಕಂಡೇಯರನ್ನು ಕುರಿತು ಹೇಳಿದರು.

ದೀರ್ಘಾಯೋ ತಪಸಾ ದೀಪ್ತ ವೇದವೇದಾಂಗತತ್ತ್ವವಿತ್ ।
ಯತ್ರ ತೇ ಸಂಶಯೋ ಬ್ರಹ್ಮನ್ ಸಮುತ್ಪನ್ನಃ ಸ ಉಚ್ಯತಾಮ್ ॥೧೦॥

ಧರ್ಮಂ ಲೋಕೋಪಕಾರಂ ವಾ ಯಚ್ಚಾನ್ಯಚ್ಛ್ರೋತುಮಿಚ್ಛಸಿ ।
ತದಹಂ ಕಥಯಿಷ್ಯಾಮಿ ಬ್ರೂಹಿ ತ್ವಂ ಸುಮಹಾತಪಃ ॥೧೧॥

ಎಲೈ ದೀರ್ಘಾಯುಷ್ಯವಂತರೇ, ತಪಸ್ಸಿನಿಂದ ಪ್ರಕಾಶಿಸುವವರೇ, ವೇದವೇದಾಂಗ ತತ್ತ್ವವನ್ನು ತಿಳಿದವರೆ, ಬ್ರಾಹ್ಮಣರೇ, ನಿಮಗೆ ಎಲ್ಲಿ ಸಂಶಯವುಂಟಾಗಿದೆಯೋ ಅದನ್ನು ಹೇಳಿ. ಧರ್ಮದ ವಿಷಯದಲ್ಲಾಗಲೀ, ಲೋಕೋಪಕಾರದ ವಿಷಯದಲ್ಲಾಗಲೀ ಅಥವಾ ಬೇರೆ ವಿಷಯದಲ್ಲಾಗಲೀ ಏನನ್ನು

ಕೇಳಲು ಬಯಸುತ್ತೀರೋ ಅದನ್ನು ನಾನು ಹೇಳುವೆನು. ಮಹಾತಪಸ್ವಿಗಳೇ, ನೀವು ಅದನ್ನು ಕೇಳಿ (ಎಂದು ಹೇಳಿದರು).

ಮಾರ್ಕಂಡೇಯಃ

ಯುಗೇಯುಗೇ ವ್ಯತೀತೇSಸ್ಮಿನ್ ಧರ್ಮಸೇತುಃ ಪ್ರಣಶ್ಯತಿ ।
ಕಥಂ ಧರ್ಮಚ್ಛಲೇನಾಹಂ ಪ್ರಾಪ್ನುಯಾಮಿತಿ ಮೇ ಮತಿಃ ॥೧೨॥

ಮಾರ್ಕಂಡೇಯರು– ಯುಗಗಳು ಕಳೆಕಳೆದಂತೆ ಧರ್ಮಸೇತುಗಳು ನಾಶವನ್ನು ಹೊಂದುತ್ತವೆ. ಧರ್ಮದ ಸೋಗಿನಲ್ಲಿ ಅಧರ್ಮಗಳು ಬೆಳೆಯುತ್ತವೆ. ಅಂತಹ ಅಧರ್ಮಗಳಿಂದ ನಾನು ಧರ್ಮವನ್ನು ಸಂಪಾದಿಸುವುದು ಹೇಗೆ ಎಂದು ನನ್ನ ಚಿಂತೆ.

ನಾರದಃ

ಆಸೀದ್ ಧರ್ಮಃ ಪುರಾ ವಿಪ್ರ ಚತುಷ್ಪಾದಃ ಕೃತೇ ಯುಗೇ ।
ತತೋ ಹ್ಯಧರ್ಮಃ ಕಾಲೇನ ಪ್ರಸೂತಃ ಕಿಂಚಿದೂನತಃ ॥೧೩॥

ತತಸ್ತ್ರೇತಾಯುಗಂ ನಾಮ ಪ್ರವೃತ್ತಂ ಧರ್ಮದೂಷಣಮ್ ॥೧೪॥

ನಾರದರು– ಎಲೈ ಬ್ರಾಹ್ಮಣರೇ, ಕೃತಯುಗದಲ್ಲಿ ಧರ್ಮವು ನಾಲ್ಕು ಪಾದಗಳಿಂದ ಕೂಡಿದ್ದಿತು. ಅನಂತರ ಕಾಲಕ್ರಮದಲ್ಲಿ ಆ ಧರ್ಮವು ಬೆಳೆದು ಆ ನಾಲ್ಕು ಪಾದಗಳಲ್ಲಿ ಊನತೆಯು ಉಂಟಾಯಿತು. ಆಗ ಧರ್ಮವನ್ನು ದೂಷಿಸುವ ತ್ರೇತಾಯುಗವು ಪ್ರವೃತ್ತವಾಯಿತು.

ತಸ್ಮಿನ್ ವ್ಯತೀತೇ ಸಂಪ್ರಾಪ್ತಂ ತೃತೀಯಂ ದ್ವಾಪರಂ ಸ್ಮೃತಮ್ ।
ತದಾ ಧರ್ಮಸ್ಯ ದ್ವೌ ಪಾದಾವಧರ್ಮೋ ನಾಶಯಿಷ್ಯತಿ ॥೧೫॥

ತ್ರೇತಾಯುಗವು ಕಳೆದ ಮೇಲೆ ಮೂರನೆಯದಾದ ದ್ವಾಪರ ಯುಗವು ಬಂದಿತು. ಆಗ ಅಧರ್ಮದ ಎರಡು ಪಾದಗಳು ಧರ್ಮದ ನಾಲ್ಕು ಪಾದಗಳಲ್ಲಿ ಎರಡು ಪಾದಗಳನ್ನು ನಾಶ ಮಾಡಿದವು.

ದ್ವಾಪರೇ ತು ಪರಿಕ್ಷೀಣೇ ನಂದಿಕೇ ಸಮುಪಸ್ಥಿತೇ ।
ಲೋಕವೃತ್ತಂ ಚ ಧರ್ಮಂ ಚ ಉಚ್ಯಮಾನಂ ನಿಬೋಧ ಮೇ ॥೧೬॥

ದ್ವಾಪರ ಯುಗವು ಕಳೆದು ಕಲಿಯುಗವು ಪ್ರಾಪ್ತವಾಗಿರುವಾಗ ಲೋಕದ ನಡತೆಯನ್ನು ಮತ್ತು ಧರ್ಮವನ್ನು ನಾನು ಹೇಳುತ್ತೇನೆ, ಅದನ್ನು ನನ್ನಿಂದ ಕೇಳಿ. ನಂದಿಕ ಎಂದರೆ ಕಲಿಯುಗದಲ್ಲಿ ಉಳಿದುಕೊಂಡಿರುವ ಧರ್ಮದ ನಾಲ್ಕನೆಯ ಪಾದವಾದ ಸತ್ಯ (ಲಕ್ಷಾಲಂಕಾರ).

ಚತುರ್ಥಂ ನಂದಿಕಂ ನಾಮ ಧರ್ಮಃ ಪಾದಾವಶೇಷಿತಃ ।
ತತಃ ಪ್ರಭೃತಿ ಜಾಯಂತೇ ಕ್ಷೀಣಪ್ರಜ್ಞಾಯುಷೋ ನರಾಃ ।
ಕ್ಷೀಣಪ್ರಾಣಧನಾ ಲೋಕೇ ಧರ್ಮಾಚಾರಬಹಿಷ್ಕೃತಾಃ ॥೧೭॥

ಚತುರ್ಥವಾದ ಕಲಿಯುಗದಲ್ಲಿ ಧರ್ಮವು ನಂದಿಕ ಎಂಬ ಧರ್ಮದ ಪಾದದಿಂದ ಮಾತ್ರ ಉಳಿದಿರುತ್ತದೆ. ಕಲಿಯುಗದ ಪ್ರಾರಂಭದಿಂದ ಮನುಷ್ಯರು ಅಲ್ಪಪ್ರಜ್ಞೆಯುಳ್ಳವರೂ, ಅಲ್ಪಾಯುಷ್ಯವುಳ್ಳವರೂ, ಅಲ್ಪಪ್ರಾಣ-ಧನಗಳನ್ನುಳ್ಳವರೂ, ಧರ್ಮಾಚಾರದಿಂದ ದೂರರೂ ಆಗುತ್ತಾರೆ.

ಮಾರ್ಕಂಡೇಯಃ

ಏವಂ ನಾಶ ಮಿತೇ ಧರ್ಮೇ ಲೋಕೇ ಚಾಧರ್ಮಸಂಯುತೇ ।
ಚಾತುರ್ವರ್ಣ್ಯಸ್ಯ ನಿಯತಂ ಹವ್ಯಂ ಕವ್ಯಂ ನ ನಶ್ಯತಿ ॥೧೮॥

ಮಾರ್ಕಂಡೇಯರು– ಹೀಗೆ ಧರ್ಮವು ಲೋಪವನ್ನು ಹೊಂದಿ ಅಧರ್ಮದಿಂದ ಕೂಡಿದಾಗ ಚಾತುರ್ವರ್ಣ್ಯದವರು ನಿಯತವಾಗಿ ಕೊಡುವ ಹವ್ಯ-ಕವ್ಯಗಳು ಕೆಟ್ಟು ಹೋಗುವುದಿಲ್ಲವೆ?

ನಾರದಃ

ಮಂತ್ರಪೂತಂ ಸದಾ ಹವ್ಯಂ ಕವ್ಯಂ ಚೈವ ನ ನಶ್ಯತಿ ।
ಪ್ರತಿಗೃಹ್ಣಂತಿ ತದ್ ದೇವಾ ದಾತುರ್ನ್ಯಾಯಾತ್ ಪ್ರಯಚ್ಛತಃ ॥೧೯॥

ನಾರದರು– ಮಂತ್ರಪುರಸ್ಸರವಾಗಿ ಕೊಡುವ ಹವ್ಯ-ಕವ್ಯಗಳು ಯಾವಾಗಲೂ ನಾಶವನ್ನು ಹೊಂದುವುದಿಲ್ಲ. ಯಜಮಾನನು ನ್ಯಾಯದಿಂದ ಕೊಡುವ ಹವ್ಯ-ಕವ್ಯಗಳನ್ನು ದೇವತೆಗಳು ಸ್ವೀಕರಿಸುತ್ತಾರೆ.

ಸತ್ವಯುಕ್ತಂ ಚ ದಾತಾ ಚ ಸರ್ವಾನ್ ಕಾಮಾನವಾಪ್ನುಯಾತ್ ।
ಅವಾಪ್ತಕಾಮಃ ಸ್ವರ್ಗೇ ಚ ಮಹೀಯೇತ ಯಥೇಪ್ಸಿತಮ್ ॥೨೦॥

ಸದ್ಗುಣಭರಿತನಾಗಿ ಹವ್ಯ-ಕವ್ಯಗಳನ್ನು ಕೊಡುವ ಪುರುಷನು ಎಲ್ಲ ಕಾಮಗಳನ್ನೂ ಹೊಂದುತ್ತಾನೆ. ಇಲ್ಲಿ ಎಲ್ಲ ಕಾಮಗಳನ್ನು ಹೊಂದಿ ಸ್ವರ್ಗದಲ್ಲಿ ತನಗೆ ಇಷ್ಟವಾದಂತೆ ವಿಹರಿಸುತ್ತಾನೆ.

ಮಾರ್ಕಂಡೇಯಃ

ಚತ್ವಾರೋ ಹ್ಯಥ ಯೇ ವರ್ಣಾ ಹವ್ಯಂ ಕವ್ಯಂ ಪ್ರದಾಸ್ಯತಿ ।
ಮಂತ್ರಹೀನಮಪನ್ಯಾಯಂ ತೇಷಾಂ ದಾನಂ ಕ್ವ ಗಚ್ಛತಿ ॥೨೧॥

ಮಾರ್ಕಂಡೇಯ– ನಾಲ್ಕು ವರ್ಣದವರು ಹವ್ಯ-ಕವ್ಯಗಳನ್ನು ಕೊಡುತ್ತಾರಷ್ಟೆ? ಅವನ್ನು ಮಂತ್ರಹೀನವಾಗಿ ನ್ಯಾಯವಿರುದ್ಧವಾಗಿ ಕೊಟ್ಟರೆ ಆ ಹವ್ಯ-ಕವ್ಯ-ದಾನವು ಎಲ್ಲಿ ಹೋಗುತ್ತದೆ?

ನಾರದಃ

ಅಸುರಾನ್ ಗಚ್ಛತೇ ದತ್ತಂ ವಿಪ್ರೈ ರಕ್ಷಾಂಸಿ ಕ್ಷತ್ರಿಯೈಃ ।
ವೈಶ್ಯೈ ಃ ಪ್ರೇತಾನಿ ವೈ ದತ್ತಂ ಶೂದ್ರೈರ್ಭೂತಾನಿ ಗಚ್ಛತಿ ॥೨೨॥

ನಾರದರು– ಬ್ರಾಹ್ಮಣರು ಕೊಟ್ಟ ದಾನವು ಅಸುರರಿಗೆ ಸೇರುತ್ತದೆ. ಕ್ಷತ್ರಿಯರ ದಾನವು ರಾಕ್ಷಸರಿಗೆ ಸೇರುತ್ತದೆ. ವೈಶ್ಯರ ದಾನವು ಪ್ರೇತಗಳಿಗೆ ಸೇರುತ್ತದೆ. ಶೂದ್ರರು ಕೊಟ್ಟ ದಾನವು ಭೂತಗಳಿಗೆ ಸೇರುತ್ತದೆ.

ಮಾರ್ಕಂಡೇಯಃ

ಅಥ ವರ್ಣಾವರೇ ಜಾತಾಶ್ಚಾತುರ್ವರ್ಣ್ಯಾಯದೇಶಿನಃ ।
ದಾಸ್ಯಂತಿ ಹವ್ಯಕವ್ಯಾನಿ ತೇಷಾಂ ದತ್ತಂ ಕ್ವ ಗಚ್ಛತಿ ॥೨೩॥

ಮಾರ್ಕಂಡೇಯ– ಹೀನವರ್ಣದಲ್ಲಿ ಜನಿಸಿದವರು ಯಾವ ಹವ್ಯಕವ್ಯಗಳನ್ನು ಕೊಡುತ್ತಾರೆಯೋ ಅವು ಎಲ್ಲಿಗೆ ಹೋಗುತ್ತವೆ?

ನಾರದಃ

ವರ್ಣಾವರಾಣಾಂ ಭೂತಾನಾಂ ಹವ್ಯಕವ್ಯಪ್ರದಾತೃಣಾಮ್ ।
ನೈವ ದೇವಾ ನ ಪಿತರಃ ಪ್ರತಿಗೃಹ್ಣಂತಿ ತತ್ಸ್ವಯಮ್ ॥೨೪॥

ನಾರದರು– ವರ್ಣಾವರರಾದವರು ಹವ್ಯ-ಕವ್ಯಗಳನ್ನು ಕೊಟ್ಟರೆ ಅದನ್ನು ದೇವತೆಗಳಾಗಲೀ, ಪಿತೃಗಳಾಗಲೀ ತಾವು ತೆಗೆದುಕೊಳ್ಳುವುದಿಲ್ಲ.

ಯಾತುಧಾನಾಃ ಪಿಶಾಚಾಶ್ಚ ಭೂತಾ ಯೇ ಚಾಪಿ ನೈರ್ಋತಾಃ ।
ತೇಷಾಂ ಸಾ ವಿಹಿತಾ ವೃತ್ತಿಃ ಪಿತೃದೈವತನಿರ್ಗತಾ ॥೨೫॥

ಪಿತೃದೇವತೆಗಳಿಂದ ತಿರಸ್ಕೃತವಾದ ಆ ಭಾಗವು ಯಾತುಧಾನರಿಗೆ, ಪಿಶಾಚಿಗಳಿಗೆ ಮತ್ತು ರಾಕ್ಷಸರಿಗೆ ವಿಹಿತವಾದ ಭಾಗವೆಂದು ಹೇಳಲ್ಪಡುತ್ತದೆ.

ತೇಷಾಂ ಸರ್ವಪ್ರದಾತೄಣಾಂ ಹವ್ಯಕವ್ಯಂ ಸಮಾಹಿತಾಃ ।
ಯತ್ಕಲ್ಪಯಚ್ಛಂತಿ ವಿಧಿವತ್ ತದ್ವೈ ಭುಂಜಂತಿ ದೇವತಾಃ ॥೨೬॥

ಆದರೆ ನ್ಯಾಯದಿಂದ ಶಾಸ್ತ್ರೋಕ್ತವಾಗಿ ಎಲ್ಲರೂ ಕೊಡುವ ಹವ್ಯ-ಕವ್ಯಗಳನ್ನು ದೇವತೆಗಳು ಸ್ವೀಕರಿಸುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ನಾರದ-ಮಾರ್ಕಂಡೇಯಸಂವಾದೇ
(ಮಂತ್ರಸಂಸ್ಕಾರಪ್ರಯೋಗೋ ನಾಮ) ಸಪ್ತಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೆಂಟನೆಯ ಅಧ್ಯಾಯ

ಕನ್ಯಾವಸ್ಥೆಯಲ್ಲಿ ಜನಿಸಿದ ಪುತ್ರರ ವಿಚಾರ.

ಮಾರ್ಕಂಡೇಯಃ

ಶ್ರುತಂ ವರ್ಣಾವರೇ ದತ್ತಂ ಹವ್ಯಂ ಕವ್ಯಂ ಚ ನಾರದ ।
ಸಂಪ್ರಯೋಗೇ ಚ ಪುತ್ರಾಣಾಂ ಕನ್ಯಾನಾಂ ಚ ಬ್ರವೀಹಿ ಮೇ ॥೧॥

ಮಾರ್ಕಂಡೇಯ– ನಾರದರೇ, ವರ್ಣಾವರರು ನೀಡಿದ ಹವ್ಯ-ಕವ್ಯಗಳ ವಿಷಯದಲ್ಲಿ ನಿಮ್ಮ ಉಪದೇಶವನ್ನು ಕೇಳಿದ್ದಾಯಿತು. ಸ್ತ್ರೀ-ಪುರುಷ ಸಂಯೋಗ ವಿಷಯದಲ್ಲಿಯೂ, ಕನ್ಯಾಪುತ್ರರ ವಿಷಯದಲ್ಲಿಯೂ ನನಗೆ ಹೇಳಿ.

ನಾರದಃ

ಕನ್ಯಾಪ್ರದಾನಂ ಪುತ್ರಾಣಾಂ ಸ್ತ್ರೀಣಾಂ ಸಂಯೋಗಮೇವ ಚ ।
ಆನುಪೂರ್ವ್ಯಾನ್ಮಯಾ ಸಮ್ಯಗುಚ್ಯಮಾನಂ ನಿಬೋಧ ಮೇ ॥೨॥

ನಾರದರು– ಪುತ್ರರಿಗೆ ಕನ್ಯಾಪ್ರದಾನ ಮಾಡುವ ವಿಷಯವನ್ನೂ ಮತ್ತು ಸ್ತ್ರೀ ಸಂಗದ ವಿಷಯವನ್ನೂ ಕ್ರಮವಾಗಿ ಹೇಳುತ್ತೇನೆ, ಕೇಳುವವನಾಗು.

ಜಾತಮಾತ್ರಾ ತು ದಾತವ್ಯಾ ಕನ್ಯಕಾ ಸದೃಶೇ ವರೇ ।
ಕಾಲೇ ದತ್ತಾಸು ಕನ್ಯಾಸು ಪಿತಾ ಧರ್ಮೇಣ ಯುಜ್ಯತೇ ॥೩॥

ಕನ್ಯೆಯು ಜನಿಸಿದ ಮೇಲೆ ಅವಳನ್ನು ಸದೃಶನಾದ ವರನಿಗೆ ಕೊಡಬೇಕು. ಸರಿಯಾದ ಕಾಲದಲ್ಲಿ ಕನ್ಯಾದಾನವನ್ನು ಮಾಡಿದರೆ ತಂದೆಯು ಧರ್ಮವನ್ನು ಸಂಪಾದಿಸುತ್ತಾನೆ.

ಯಸ್ತು ಪುಷ್ಪವತೀಂ ಕನ್ಯಾಂ ಬಾಂಧವೋ ನ ಪ್ರಯಚ್ಛತಿ ।
ಮಾಸಿಮಾಸಿ ಗತೇ ಬಂಧುಸ್ತಸ್ಯಾ ಭ್ರೂಣಘ್ನಮಾಪ್ನುತೇ ॥೪॥

ಪುಷ್ಪವತಿಯಾದ ಕನ್ಯೆಯನ್ನು ಅಧಿಕಾರಯುಕ್ತನಾದ ಯಾವ ಬಂಧುವು ಕೊಡುವುದಿಲ್ಲವೋ ಅವಳು ಪ್ರತಿ ತಿಂಗಳು ರಜಸ್ವಲೆಯಾದಾಗಲೆಲ್ಲ ಅವನಿಗೆ ಭ್ರೂಣ ಹತ್ಯಾ ದೋಷವು ಬರುತ್ತದೆ.

ಯಸ್ತು ಕನ್ಯಾಂ ಗೃಹೇ ರುಂಧ್ಯಾದ್ ಗ್ರಾಮ್ಯೈಭೋರ್ಗೈರ್ವಿವರ್ಜಿತಾಮ್ ।
ಅವಧ್ಯಾತಃ ಸ ಕನ್ಯಾಯಾ ಬಂಧುಃ ಪ್ರಾಪ್ನೋತಿ ಭ್ರೂಣಹಾಮ್ ॥೫॥

ಯಾವನು ಕನ್ಯೆಯನ್ನು ಅವಳ ಸುಖದಿಂದ ವಂಚಿತಳನ್ನಾಗಿ ಮಾಡಿ ಮನೆಯಲ್ಲಿಯೇ ಬಂಧನದಲ್ಲಿಡುತ್ತಾನೆಯೋ ಆ ಬಂಧುವು ಆ ಕನ್ಯೆಯ ತಿರಸ್ಕಾರಕ್ಕೆ ಪಾತ್ರನಾಗಿ ಭ್ರೂಣಹತ್ಯಾ ದೋಷವನ್ನು ಹೊಂದುತ್ತಾನೆ.

ದೂಷಿತಾ ಪಾಣಿಮಾತ್ರೇಣ ಮೃತೇ ಭರ್ತರಿ ದಾರಿಕಾ ।
ಸಂಸ್ಕಾರಂ ಲಭತೇ ನಾರೀ ದ್ವಿತೀಯೇ ಸಾ ಪುನಃ ಪತೌ ॥೬॥

ಕೇವಲ ಪಾಣಿಗ್ರಹಣವನ್ನು ಮಾಡಿಕೊಂಡ ತಕ್ಷಣ ಪತಿಯು ಮೃತನಾಗುವುದರಿಂದ ದೂಷಿತಳಾದ ಕನ್ಯೆಯು ಇನ್ನೊಬ್ಬ ಪತಿಯು ದೊರೆತರೆ ಪುನಃ ವಿವಾಹ ಸಂಸ್ಕಾರಕ್ಕೆ ಅರ್ಹಳಾಗುತ್ತಾಳೆ.

ಪುನರ್ಭೂರ್ನಾಮ ಸಾ ಕನ್ಯಾ ಸಪುತ್ರಾ ಹವ್ಯಕವ್ಯದಾ ।
ಅದೂಷ್ಯಾ ಸಾ ಪ್ರಸೂತೀಷು ಪ್ರಜಾನಾಂ ದಾರಕರ್ಮಣಿ ॥೭॥

ಅಂತಹ ಕನ್ಯೆಗೆ ಪುನರ್ಭೂ ಎಂದು ಹೆಸರು. ಅವಳು ಪುತ್ರರನ್ನು ಪಡೆದು ಹವ್ಯ-ಕವ್ಯ ದಾನಕ್ಕೆ ಅರ್ಹಳಾಗುತ್ತಾಳೆ. ಸಂತತಿಯ ವಿಷಯದಲ್ಲಿ ಮತ್ತು ವಿವಾಹದ ವಿಷಯದಲ್ಲಿ ಅವಳನ್ನು ದೂಷಿಸಬಾರದು.

ಮಾರ್ಕಂಡೇಯಃ

ಯಾ ತು ಕನ್ಯಾ ಪ್ರಸೂಯೇತ ಗರ್ಭಿಣೀ ಯಾ ತು ವಾ ಭವೇತ್ ।
ಕಥಂ ದಾರಕ್ರಿಯಾಂ ಭೂಯಃ ಸಾ ಭವೇದೃಷಿಸತ್ತಮ ॥೮॥

ಮಾರ್ಕಂಡೇಯ– ಎಲೈ ದ್ವಿಜೋತ್ತಮನೇ, ಯಾವಳು ಕನ್ಯೆಯಾಗಿಯೇ ಪ್ರಸವಿಸುತ್ತಾಳೆಯೋ ಅಥವಾ ಗರ್ಭಿಣಿಯಾಗುತ್ತಾಳೆಯೋ ಅವಳಿಗೆ ಪುನಃ ವಿವಾಹಕರ್ಮವು ಹೇಗೆ ಉಂಟಾಗುತ್ತದೆ?

ನಾರದಃ

ತತ್ಪಾರ್ಥನಿಶ್ಚಿತಂ ಶಬ್ದಂ ಕನ್ಯಕಾ ನಯತೇऽಗ್ನಯೇ ।
ತಸ್ಮಾತ್ ಕುರ್ವಂತಿ ವೈ ಭಾವಂ ಕುಮಾರ್ಯಸ್ತಾ ನ ಕನ್ಯಕಾಃ ॥೯॥

ನಾರದರು– ಅಂತಹ ಕನ್ಯೆಯು ಅಗ್ನಿಯ ಮುಂದೆ ನಡೆದ ಘಟನೆಯನ್ನು ಯಥಾರ್ಥವಾಗಿ ಹೇಳಬೇಕು. ಅನಂತರ ಬಂಧುಗಳು ಅವಳಲ್ಲಿ ಸ್ನೇಹವನ್ನು ಮಾಡುತ್ತಾರೆ. ಅವಳನ್ನು ಕುಮಾರಿ ಎಂದು ಕರೆಯುತ್ತಾರೆ. ಅವರು ಕನ್ಯೆಯರಲ್ಲ.

ಬ್ರಹ್ಮಹತ್ಯಾತ್ರಿಭಾಗೇನ ಗರ್ಭಾಧಾನವಿಶೋಧಿತಾಮ್ ।
ಗೃಹ್ಣೀಯಾತ್ ತಾಂ ಚತುರ್ಭಾಗಂ ವಿಶುದ್ಧಾಂ ಸರ್ಜನಾತ್ ಪುನಃ ॥

ಬ್ರಹ್ಮಹತ್ಯೆಗೆ ಹೇಳಿದ ಪ್ರಾಯಶ್ಚಿತ್ತದಲ್ಲಿ ಮೂರು ಭಾಗವನ್ನು ಮಾಡಿ ಅವಳ ಗರ್ಭಾಧಾನವನ್ನು ಶೋಧಿಸಬೇಕು ಮತ್ತು ನಾಲ್ಕನೆಯ ಭಾಗವನ್ನು ಮಾಡಿ ಅವಳ ಪ್ರಸವ ದೋಷವನ್ನು ಶೋಧಿಸಬೇಕು. ಅನಂತರ ಅವಳನ್ನು ಪರಿಗ್ರಹಿಸಬಹುದು.

ಮಾರ್ಕಂಡೇಯಃ

ಕಥಂ ಕನ್ಯಾಸು ಯೇ ಜಾತಾ ಬಂಧೂನಾಂ ದೂಷಿತಾಃ ಸದಾ ।
ಕಸ್ಯ ತೇ ಹವ್ಯಕವ್ಯಾನಿ ಪ್ರದಾಸ್ಯಂತಿ ಮಹಾಮುನೇ ॥೧೧॥

ಮಾರ್ಕಂಡೇಯ– ಕನ್ಯಾವಸ್ಥೆಯಲ್ಲಿ ಜನಿಸಿ, ಬಂಧುಗಳಿಂದ ಯಾವಾಗಲೂ ತಿರಸ್ಕೃತರಾದವರು ಎಲೈ ಮಹಾಮುನಿಯೇ, ಯಾರಿಗೆ ಹವ್ಯಕವ್ಯಗಳನ್ನು ಕೊಡುತ್ತಾರೆ?

ನಾರದಃ

ಕನ್ಯಾಯಾಸ್ತು ಪಿತುಃ ಪುತ್ರಾಃ ಕಾನೀನಾ ಹವ್ಯಕವ್ಯದಾಃ ।
ಅಂತರ್ವತ್ನ್ಯಾಸ್ತು ಯಃ ಪಾಣಿಂ ಗೃಹ್ಣೀಯಾತ್ ಸ ಸಹೋಢಜಃ ॥೧೨॥

ನಾರದರು– ಅಂತಹ ಪುತ್ರರು ಕಾನೀನರೆನಿಸುತ್ತಾರೆ. ಅವರು ಆ ಕನ್ಯೆಯ ತಂದೆಗೆ ಹವ್ಯ-ಕವ್ಯಗಳನ್ನು ನೀಡುತ್ತಾರೆ. ಗರ್ಭಿಣಿಯಾದವಳನ್ನು ಯಾವನು ಪಾಣಿಗ್ರಹಣ ಮಾಡಿಕೊಳ್ಳುತ್ತಾನೆಯೋ ಅವನು (ಅವಳಿಗೆ ಜನಿಸಿದ ಪುತ್ರನು) ಸಹೋಢಜ ಎನಿಸುತ್ತಾನೆ.

ಮಾರ್ಕಂಡೇಯಃ

ಅಥ ಯೇನಾಹಿತೋ ಗರ್ಭಃ ಕನ್ಯಾಯಾಂ ತತ್ರ ನಾರದ ।
ಕಥಂ ಪುತ್ರಫಲಂ ತಸ್ಯ ಭವೇದೇತತ್ ಪ್ರಚಕ್ಷ್ವ ಮೇ ॥೧೩॥

ಮಾರ್ಕಂಡೇಯ– ಎಲೈ ನಾರದರೇ, ಯಾವನು ಅಂತಹ ಕನ್ಯೆಯಲ್ಲಿ ಗರ್ಭಾಧಾನವನ್ನು ಮಾಡಿರುತ್ತಾನೆಯೋ ಅವನಿಗೆ ಅವಳಿಗೆ ಹುಟ್ಟಿದ ಪುತ್ರನಿಂದ ಯಾವ ಫಲವು ದೊರೆಯುತ್ತದೆ ಎಂದು ನನಗೆ ಹೇಳಿ.

ನಾರದಃ

ಧರ್ಮಾಚಾರೇಷು ತೇ ನಿತ್ಯಂ ದೂಷಕಾಃ ಕೃತಶೋಧನಾಃ ।
ಬೀಜಂ ಚ (ನ) ನಶ್ಯತೇ ತೇಷಾಂ ಮೋಘಚೇಷ್ಟಾ ಭವಂತಿ ತೇ ॥೧೪॥

ನಾರದರು– ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದ ಅಂತಹವರು ಧರ್ಮಾಚಾರರಲ್ಲಿ ಯಾವಾಗಲೂ ದೂಷಿತರಾದವರು. ಅವರ ಬೀಜವು ನಾಶವನ್ನು ಹೊಂದುತ್ತದೆ ಮತ್ತು ಅವರ ಗರ್ಭಾಧಾನ ಕ್ರಿಯೆಯು ನಿಷ್ಫಲವಾಗುತ್ತದೆ.

ಮಾರ್ಕಂಡೇಯಃ

ಅಥ ಕಾಚಿದ್ ಭವೇತ್ಕನ್ಯಾ ಕ್ರೀತಾ ದತ್ತಾ ಹೃತಾऽಪಿ ವಾ ।
ಕಥಂ ಪುತ್ರಕೃತಂ ತಸ್ಯಾಸ್ತದ್ ಭವೇದೃಷಿಸತ್ತಮ ॥೧೫॥

ಮಾರ್ಕಂಡೇಯ– ಎಲೈ ಋಷಿಶ್ರೇಷ್ಠರೇ, ಒಂದು ಪಕ್ಷ ಒಬ್ಬ ಕನ್ಯೆಯನ್ನು ಮಾರಿದರೆ ಅಥವಾ ಅಪಹರಿಸಿದರೆ ಅಥವಾ ಅವಿಧಿಪೂರ್ವಕವಾಗಿ ದಾನ ಮಾಡಿದರೆ ಅವಳಲ್ಲಿ ಜನಿಸಿದ ಪುತ್ರರಿಗೆ ಏನಾಗುತ್ತದೆ?

ನಾರದಃ

ಕ್ರೀತಾ ದತ್ತಾ ಹೃತಾ ಚೈವ ಯಾ ಕನ್ಯಾ ಪಾಣಿವರ್ಜಿತಾ ।
ಕೌಮಾರೀ ನಾಮ ಸಾ ಭಾರ್ಯಾ ಪ್ರಸವೇದೌರಸಾನ್ ಸುತಾನ್ ।
ನ ಪತ್ನ್ಯರ್ಥೇ ಶುಭಾ ಪ್ರೋಕ್ತಾ ತತ್ಕರ್ಮಣ್ಯಪರಾಜಿತೇ ॥೧೬॥

ನಾರದರು– ವಿಧಿಬದ್ಧವಾದ ಕ್ರಮವಿಲ್ಲದೆ ಯಾವ ಕನ್ಯೆಯು ಕೊಂಡೊಕೊಳ್ಳಲ್ಪಡುತ್ತಾಳೆಯೋ ಅಥವಾ ಹಾಗೆಯೇ ದಾನ ಮಾಡಲ್ಪಡುತ್ತಾಳೆಯೋ ಅಥವಾ ಅಪಹರಿಸಲ್ಪಡುತ್ತಾಳೆಯೋ ಅವಳಿಗೆ ಕೌಮಾರಿ ಎಂದು ಹೆಸರು. ಅವಳಲ್ಲಿ ಜನಿಸಿದ ಪುತ್ರರು ಔರಸ ಪುತ್ರರು. ವೇದೋಕ್ತವಾದ ಕರ್ಮವನ್ನು ಮಾಡುವಾಗ ಅವಳನ್ನು ಪತ್ನಿಯಾಗಿ ಭಾಗವಹಿಸುವಂತೆ ಮಾಡಲು ಅವಳು ಅರ್ಹಳಲ್ಲ.

ಮಾರ್ಕಂಡೇಯಃ

ಕೇನ ಮಂಗಲಕೃತ್ಯೇಷು ವಿನಿಯುಜ್ಯಂತಿ ಕನ್ಯಕಾಃ ।
ಏತದಿಚ್ಛಾಮಿ ವಿಜ್ಞಾತುಂ ತತ್ತ್ವೇನೇಹ ಮಹಾಮುನೇ ॥೧೭॥

ಮಾರ್ಕಂಡೇಯ– ಯಾವ ಕಾರಣದಿಂದ ಮಂಗಳಕಾರ್ಯಗಳಲ್ಲಿ ಕನ್ಯೆಯರನ್ನು ಬಳಸಿಕೊಳ್ಳುತ್ತಾರೆ. ಎಲೈ ಮಹಾಮುನಿಯೇ, ಇದನ್ನು ನಾನು ಸರಿಯಾಗಿ ತಿಳಿಯಲು ಬಯಸುತ್ತೇನೆ.

ನಾರದಃ

ನಿತ್ಯಂ ನಿವಸತೇ ಲಕ್ಷ್ಮೀಃ ಕನ್ಯಕಾಸು ಪ್ರತಿಷ್ಠಿತಾ ।
ಶೋಭನಾ ಶುಭಯೋಗ್ಯಾ ಚ ಪೂಜ್ಯಾ ಮಂಗಲಕರ್ಮಸು ॥೧೮॥

ಕನ್ನಿಕೆಯರಲ್ಲಿ ಲಕ್ಷ್ಮಿಯು ನಿತ್ಯವೂ ಸನ್ನಿಹಿತಳಾಗಿ ಪ್ರತಿಷ್ಠಿತಳಾಗಿರುತ್ತಾಳೆ. ಆದ್ದರಿಂದ ಕನ್ಯೆಯು ಮಂಗಳಳಾದವಳು, ಮಂಗಳ ಕಾರ್ಯಕ್ಕೆ ಯೋಗ್ಯಳಾದವಳು ಮತ್ತು ಮಂಗಳಕಾರ್ಯದಲ್ಲಿ ಪೂಜನೀಯಳಾದವಳು.

ಆಕರಸ್ಥಂ ಯಥಾ ರತ್ನಂ ಸರ್ವಕಾಮಫಲೋಪಗಮ್ ।
ತಥಾ ಕನ್ಯಾ ಮಹಾಲಕ್ಷ್ಮೀಃ ಸರ್ವಲೋಕಸ್ಯ ಮಂಗಲಮ್ ॥೧೯॥

ಮಣಿಯಲ್ಲಿರುವ ರತ್ನವು ಹೇಗೆ ಎಲ್ಲ ಕಾಮಗಳನ್ನು ಕೊಡಲು ಸಮರ್ಥವಾಗುತ್ತದೆಯೋ ಅದರಂತೆ ಮಹಾಲಕ್ಷ್ಮಿಯ ಸನ್ನಿಧಾನಕ್ಕೆ ಪಾತ್ರಳಾದ ಕನ್ಯೆಯು ಎಲ್ಲ ಲೋಕಗಳಲ್ಲಿಯೂ ಮಂಗಳವನ್ನು ಮಾಡುತ್ತಾಳೆ.

ಏವಂ ಕನ್ಯಾ ಪರಾ ಲಕ್ಷ್ಮೀ ರತಿಸ್ತೋಷಶ್ಚ ದೇಹಿನಾಮ್ ।
ಮಹಾಕುಲಾನಾಂ ಚಾರಿತ್ರವೃತ್ತೇನ ನಿಕಷೋಪಲಮ್ ॥೨೦॥

ಹೀಗೆ ಕನ್ಯೆಯು ಶ್ರೇಷ್ಠಳಾದ ಲಕ್ಷ್ಮೀ ಸನ್ನಿಧಾನ ಪಾತ್ರಳು. ಅವಳೇ ಮನುಷ್ಯರ ಸುಖ-ಸಂತೋಷಕ್ಕೆ ಕಾರಣಳಾದವಳು. ಅಂತಹ ಕನ್ಯೆಯ ಒಂದು ಚಾರಿತ್ರವೃತ್ತಗಳು ಒಂದು ಶ್ರೇಷ್ಠವಾದ ಚಾರಿತ್ರವೃತ್ತಗಳಿಗೆ ಒರೆಗಲ್ಲಾಗುತ್ತದೆ.

ಆನಯಿತ್ವಾ ಸ್ವಕಾದ್ ವರ್ಣಾತ್ ಕನ್ಯಕಾಂ ಯೋ ಭಜೇನ್ನರಃ ।
ದಾತಾರಂ ಹವ್ಯಕವ್ಯಾನಾಂ ಪುತ್ರಕಂ ಯಾ ಪ್ರಸೂಯತಿ ॥೨೧॥

ಮನುಷ್ಯನು ತನ್ನ ವರ್ಣದ ಕನ್ನಿಕೆಯನ್ನು ವಿವಾಹ ಮಾಡಿಕೊಂಡು ಮನೆಗೆ ತಂದರೆ ಅವಳು ಹವ್ಯ-ಕವ್ಯಗಳನ್ನು ನೀಡುವ ಪುತ್ರನನ್ನು ಪ್ರಸವಿಸುತ್ತಾಳೆ.

ಸಾಧ್ವೀ ಕುಲಂ ವರ್ಧಯತಿ ಸಾಧ್ವೀ ಪುಷ್ಟಿಗ್ರಹೇ ಪರಾ ।
ಸಾಧ್ವೀ ಲಕ್ಷ್ಮೀ ರತಿಃ ಸಾಕ್ಷಾತ್ ಪ್ರತಿಷ್ಠಾ ಶಾಶ್ವತೀಃ ಸಮಾಃ ॥೨೨॥

ಸಾಧ್ವಿಯಾದ ಅಂತಹವಳು ಕುಲವನ್ನು ಅಭಿವೃದ್ಧಿ ಪಡಿಸುತ್ತಾಳೆ. ಅಂತಹ ಸಾಧ್ವಿಯು ಕುಲದ ಪೋಷಣೆಯಲ್ಲಿ ನಿರತಳಾಗಿರುತ್ತಾಳೆ. ಅವಳಲ್ಲಿ ಸಾಕ್ಷಾತ್ ಲಕ್ಷ್ಮಿ ಮತ್ತು ರತಿಯರ ಸನ್ನಿಧಾನವಿರುತ್ತದೆ. ಅವಳು ಬಹುಕಾಲದವರೆಗೆ ಕುಲದ ಆಧಾರ ಸ್ತಂಭಳಾಗುತ್ತಾಳೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ನಾರದಮಾರ್ಕಂಡೇಯಸಂವಾದೇ
ಕನ್ಯಾಪ್ರಶಂಸಾ ನಾಮ ಅಷ್ಟಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೊಂಬತ್ತನೆಯ ಅಧ್ಯಾಯ

ವಿವಿಧ ಭಾರ್ಯೆಯರ ಪ್ರಕಾರಗಳು

ಮಾರ್ಕಂಡೇಯಃ

ಶ್ರುತಂ ಬಹುವಿಧಂ ವೃತ್ತಂ ಕನ್ಯಕಾನಾಂ ಮಹಾಮತೇ ।
ಇಚ್ಛಾಮಿ ಯೋಷಿತಾಂ ಶ್ರೋತುಂ ಧರ್ಮಾಧರ್ಮೌ ಪರಿಗ್ರಹೇ ॥೧॥

ಮಾರ್ಕಂಡೇಯ– ಎಲೈ ಮಹಾಮತಿಯೇ, ಕನ್ನಿಕೆಯರ ಬಹುವಿಧವಾದ ನಡತೆಯನ್ನು ಕೇಳಿದೆನು. ಪಾಣಿಗ್ರಹಣ ಮಾಡಿಕೊಳ್ಳುವ ಸ್ತ್ರೀಯರ ಧರ್ಮಾಧರ್ಮಗಳ ವಿಷಯದಲ್ಲಿ ಕೇಳಲು ಬಯಸುತ್ತೇನೆ.

ನಾರದಃ

ಅಷ್ಟೌ ಭಾರ್ಯಾಗಮಾ ಧರ್ಮ್ಯಾ ನರಾಣಾಂ ದಾರಕರ್ಮಣಿ ।
ಪ್ರೇತ್ಯೇಹ ಚ ಹಿತಾ ಯಾಸ್ತು ಸ್ವಪುತ್ರಾ ಹವ್ಯಕವ್ಯದಾಃ ॥೨॥

ನಾರದರು– ಮನುಷ್ಯರಿಗೆ ಪತ್ನಿಯನ್ನು ಸ್ವೀಕರಿಸುವಾಗ ಎಂಟು ವಿಧವಾದ ಪತ್ನಿಯರ ಪ್ರಾಪ್ತಿಯು ಧರ್ಮಪ್ರದವಾದುದು. ಅವರು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಹಿತರಾಗಿರುತ್ತಾರೆ. ಅವರಲ್ಲಿ ಹುಟ್ಟಿದ ಪುತ್ರರು ಹವ್ಯಕವ್ಯಗಳನ್ನು ಕೊಡಲು ಅರ್ಹರಾಗಿರುತ್ತಾರೆ.

ಸಾಧ್ವೀ ಪಾಣಿಗೃಹೀತಾ ಯಾ ಕೌಮಾರೀ ಪಾಣಿವರ್ಜಿತಾ ।
ಭ್ರಾತೃಭಾರ್ಯಾ ಸ್ವಭಾರ್ಯೇತಿ ಪ್ರಸೂಯೇತ್ ಪುತ್ರಮೌರಸಮ್ ॥೩॥

ವಿಧಿಪ್ರಕಾರವಾಗಿ ವಿವಾಹ ಮಾಡಿಕೊಂಡ ಸಾಧ್ವೀ, ಅಂತಹ ವಿಧಿಯಿಲ್ಲದ ಕೌಮಾರಿ, ಮೊದಲು ಭ್ರಾತೃಭಾರ್ಯೆಯಾಗಿದ್ದು ಅವನ ಮರಣದಿಂದ ತನ್ನ ಭಾರ್ಯೆಯಾದವಳು ಈ ಮೂವರು ಔರಸ ಪುತ್ರರನ್ನು ಪ್ರಸವಿಸುತ್ತಾಳೆ.

ಮಾರ್ಕಂಡೇಯಃ

ತ್ರಯೋ ಭಾರ್ಯಾಗಮಾ ಜ್ಞೇಯಾ ಯತ್ರ ಧರ್ಮೋ ನ ನಶ್ಯತಿ ।
ಪಂಚಾನ್ಯಾಃ ಪಶ್ಚಿಮಾ ಬ್ರೂಹಿ ಭಾರ್ಯಾಸ್ತಾಸಾಂ ಚ ಯೇ ಸುತಾಃ ॥೪॥

ಮಾರ್ಕಂಡೇಯ– ಧರ್ಮವು ನಾಶವಾಗದಿರುವಂತಹ ಮೂರು ವಿಧವಾದ ಭಾರ್ಯಾಪ್ರಾಪ್ತಿಯನ್ನು ಕೇಳಿದೆನು. ಅನಂತರ ಐದು ವಿಧವಾದ ಭಾರ್ಯಾ ಪ್ರಾಪ್ತಿಯನ್ನೂ, ಅವರಲ್ಲಿ ಜನಿಸಿದ ಪುತ್ರರ ಪರಿಸ್ಥಿತಿಯನ್ನೂ ಹೇಳಿ.

ನಾರದಃ

ಸಗೋತ್ರಭಾರ್ಯಾ ಕ್ರೀತಾ ಚ ಪರಭಾರ್ಯಾ ಚ ಕಾರಿತಾ ।
ಗತಾಗತಾ ಚ ಯಾ ಭಾರ್ಯಾ ಆಶ್ರಮಾದಾಹೃತಾ ಚ ಯಾ ॥೫॥

ಏತಾ ಭಾರ್ಯಾಗಮಾಃ ಪಂಚ ಪುನರ್ಭಾರ್ಯಾ ಭವಂತಿ ಯಾಃ ।
ಏತಾ ಭಾರ್ಯಾ ನೃಣಾಂ ಗಮ್ಯಾಸ್ತತ್ಸುತಾ ಹವ್ಯಕವ್ಯದಾಃ ॥೬॥

ನಾರದರು– ತನ್ನ ಗೋತ್ರದ ಭಾರ್ಯೆ, ಕ್ರಯವನ್ನು ಮಾಡಿ ತಂದ ಭಾರ್ಯೆ, ನಿಯೋಗ ಪದ್ಧತಿಯಂತೆ ಇನ್ನೊಬ್ಬನಿಗೆ ಭಾರ್ಯೆಯಾಗಿ ಮಾಡಲ್ಪಟ್ಟವಳು, ತನ್ನ ಬಳಿ ಯಾವಾಗಲೂ ಇರದೆ ಹೋಗಿ ಬರುವವಳು ಮತ್ತು ಆಶ್ರಮದಿಂದ ಹಾಗೆಯೇ ತರಲ್ಪಟ್ಟವಳು - ಇದು ಆ ಐದು ವಿಧವಾದ ಭಾರ್ಯಾಪ್ರಾಪ್ತಿ. ಇವರೆಲ್ಲರೂ ಪುನರ್ಭಾರ್ಯೆಯರು ಎಂದು ಹೇಳಲ್ಪಡುತ್ತಾರೆ. ಮನುಷ್ಯರು ಇಂತಹ ಭಾರ್ಯೆಯರ ಸಂಗವನ್ನು ಮಾಡಬಹುದು. ಅವರಲ್ಲಿ ಜನಿಸಿದ ಪುತ್ರರು ಹವ್ಯಕವ್ಯಗಳನ್ನು ಕೊಡಲು ಅರ್ಹರಾಗುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಭಾರ್ಯಾಗಮನಿರ್ಣಯೋ ನಾಮ
ಏಕೋನಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತನೆಯ ಅಧ್ಯಾಯ

ಪುರುಷಚಾಪಲ್ಯದ ಫಲಕಥನ.

ಮಾರ್ಕಂಡೇಯಃ

ಶ್ರುತಾ ಭಾರ್ಯಾಶ್ಚ ಪುತ್ರಾಶ್ಚ ವಿಸ್ತರೇಣ ಮಹಾಮುನೇ ।
ಆಶ್ರಮಸ್ಥಾಶ್ಚ ಯಾ ನಾರ್ಯೋ ನ ದುಷ್ಯಂತೀತಿ ಬ್ರೂಹಿ ಭೋ ॥೧॥

ಮಾರ್ಕಂಡೇಯ– ಎಲೈ ಮಹಾಮುನಿಯೇ, ಭಾರ್ಯೆಯರ ಮತ್ತು ಪುತ್ರರ ವಿಷಯದಲ್ಲಿ ವಿಸ್ತಾರವಾಗಿ ಕೇಳಿದೆನು. ಮೊದಲು ಇನ್ನೊಬ್ಬನ ಪತ್ನಿಯಾದವಳನ್ನು ತನ್ನ ಪತ್ನಿಯಾಗಿ ಕರೆತಂದರೆ ಅವಳು ಹೇಗೆ ದೂಷಿತಳಾಗುವುದಿಲ್ಲವೆಂದು ಹೇಳಿ. (ಲಕ್ಷಾಲಂಕಾರ).

ನಾರದಃ

ಆಶ್ರಮಸ್ಥಾಸು ನಾರೀಷು ಬಾಂಧವತ್ವಂ ಪ್ರಣಶ್ಯತಿ ।
ನಷ್ಟವಂಶ್ಯಾ ಭವಂತ್ಯೇತಾ ಬಂಧೂನಾಮಥ ಭರ್ತೃಣಾಮ್ ॥೨॥

ನಾರದರು– ಮೊದಲು ಇನ್ನೊಬ್ಬನ ಪತ್ನಿಯಾಗಿದ್ದವಳಲ್ಲಿ ಬಂಧುತ್ವವು ನಾಶವನ್ನು ಹೊಂದುತ್ತದೆ. ಅವಳು ಅವಳ ಜನಕ ವಂಶವನ್ನೂ ಈ ಇಬ್ಬರು ಭರ್ತೃಗಳ ವಂಶವನ್ನೂ ನಾಶಪಡಿಸುತ್ತಾಳೆ.

ಪರದಾರಾ ಮುಕ್ತದೋಷಾಸ್ತಾ ನಾರ್ಯೋಽಶ್ರಮಸಂಸ್ಥಿತಾಃ ।
ಸ್ವಯಮೀಶಾಃ ಸ್ವದೇಹಾನಾಂ ಕಾಮ್ಯಾಸ್ತದ್ಗತಮಾನಸಾಃ ॥೩॥

ಇನ್ನೊಬ್ಬನ ಪತ್ನಿಯಾಗದಿದ್ದವಳನ್ನು ತನ್ನ ಪತ್ನಿಯಾಗಿ ಕರೆತಂದರೆ ಅವಳಿಗೆ ದೋಷವಿಲ್ಲ. ಅವರು ತಮ್ಮ ದೇಹಕ್ಕೆ ತಾವೇ ಒಡೆಯರು. ಕರೆತಂದವನಲ್ಲಿ ಅವನಿಗೆ ಪ್ರೀತಿ ಇದ್ದರೆ ಅಂತಹವರನ್ನು ಸ್ವೀಕರಿಸಬಹುದು (ಲಕ್ಷಾಲಂಕಾರ).

ಏವಂ ನಾರ್ಯೋ ನ ದುಷ್ಯಂತಿ ನರಾಣಾಂ ತತ್ಪ್ರಸೂತಿಷು ।
ಧರ್ಮಪತ್ನ್ಯೋ ಭವಂತ್ಯೇತಾಃ ಸಪುತ್ರಾ ಹವ್ಯಕವ್ಯದಾಃ ॥೪॥

ಅಂತಹ ನಾರಿಯರು ಮತ್ತು ಅವರ ಸಂತತಿಯು ದೂಷಿತವಾಗುವುದಿಲ್ಲ. ಅವರು ಧರ್ಮಪತ್ನಿಯರೆನಿಸುತ್ತಾರೆ. ಅವರ ಪುತ್ರರು ಹವ್ಯ-ಕವ್ಯದಾನಕ್ಕೆ ಅರ್ಹರಾಗುತ್ತಾರೆ.

ಮಾರ್ಕಂಡೇಯಃ

ಪರಸ್ಯ ಭಾರ್ಯಾ ಯಾ ಪೂರ್ವಂ ಮೃತೇ ಭರ್ತರಿ ಯಾ ಪುನಃ ।
ಅನ್ಯಂ ಭಜತಿ ಭರ್ತಾರಂ ಸಸುತಾ ಅಸುತಾ ಕಥಮ್ ॥೫॥

ಮಾರ್ಕಂಡೇಯ– ಮೊದಲು ಇನ್ನೊಬ್ಬನ ಭಾರ್ಯೆಯಾಗಿದ್ದು, ಪುತ್ರರನ್ನು ಪಡೆದು ಅಥವಾ ಪಡೆಯದೆ ಅವನು ಮೃತನಾದ ಮೇಲೆ ಇನ್ನೊಬ್ಬನ ಬಳಿಗೆ ಹೋಗುವ ಮಕ್ಕಳಿರುವ ಅಥವಾ ಇಲ್ಲದಿರುವ ಸ್ತ್ರೀಯ ಪರಿಸ್ಥಿತಿ ಏನು?

ನಾರದಃ

ಅಸುತಾ ವಾ ಪ್ರಸೂತಾ ವಾ ಗೃಹಸ್ಥಾನಾಂ ಪರಸ್ತ್ರಿಯಃ ।
ಪರಾಮೃಷ್ಟೇತಿ ತಾ ವರ್ಜ್ಯಾ ಧರ್ಮಚಾರೇಷು ದೂಷಿತಾಃ ॥೬॥

ನ ಚಾಸಾಂ ಹವ್ಯಕವ್ಯಾನಿ ಪ್ರತಿಗೃಹ್ಣಂತಿ ದೇವತಾಃ ।
ಯಸ್ತಾಸು ಜನಯೇತ್ ಪುತ್ರಾನ್ನ ತೈಃ ಪುತ್ರಮವಾಪ್ನುಯಾತ್ ॥೭॥

ನಾರದರು– ಅಂತಹ ಪರಸ್ತ್ರೀಗೆ ಪುತ್ರನು ಇರಲಿ ಇಲ್ಲದಿರಲಿ, ಅವಳು ಇನ್ನೊಬ್ಬನಿಂದ ಸ್ಪರ್ಶಿಸಲ್ಪಟ್ಟವಳು ಎಂಬ ಕಾರಣದಿಂದ ಧರ್ಮಾಚಾರಗಳಲ್ಲಿ ದೂಷಿತಳಾಗುತ್ತಾಳೆ. ಅವಳ ಪುತ್ರರು ನೀಡಿದ ಹವ್ಯಕವ್ಯಗಳನ್ನು ದೇವತೆಗಳು ಸ್ವೀಕರಿಸುವುದಿಲ್ಲ. ಅವಳಲ್ಲಿ ಯಾವನು ಪುತ್ರನನ್ನು ಪಡೆಯುತ್ತಾನೆಯೋ ಅವನಿಗೆ ಪುತ್ರಫಲವು ದೊರೆಯುವುದಿಲ್ಲ.

ಮಾರ್ಕಂಡೇಯಃ

ಪರಕ್ಷೇತ್ರೇಷು ಯೋ ಬೀಜಂ ಚಾಪಲ್ಯಾದ್ ವಿಸೃಜೇನ್ನರಃ ।
ಕಥಂ ಪುತ್ರಫಲಂ ತಸ್ಯ ಭವೇತ್ ತದೃಷಿಸತ್ತಮ ॥೮॥

ಮಾರ್ಕಂಡೇಯ– ಯಾವ ಪುರುಷನು ಚಪಲತೆಗೆ ಒಳಗಾಗಿ ಪರಕ್ಷೇತ್ರದಲ್ಲಿ ತನ್ನ ಬೀಜವನ್ನು ಬಿತ್ತುತ್ತಾನೆಯೋ ಎಲೈ ಋಷಿಶ್ರೇಷ್ಠನೇ, ಅಂತಹವನಿಗೆ ಪುತ್ರಫಲವು ಉಂಟಾಗುತ್ತದೆಯೇ? ಇಲ್ಲವೆ?

ನಾರದಃ

ಅಸ್ವಾಮಿಕೇ ಪರಕ್ಷೇತ್ರೇ ಯೋ ನರೋ ಬೀಜಮುತ್ಸೃಜೇತ್ ।
ಸ್ವಯಂವೃತೋಶ್ರಮಸ್ಥಾಯಾಂ ತದ್ಬೀಜಂ ನ ವಿನಶ್ಯತಿ ॥೯॥

ನಾರದರು– ಸ್ವಾಮಿ ಇಲ್ಲದ ಪರಕ್ಷೇತ್ರದಲ್ಲಿ ಯಾವ ಪುರುಷನು ತನ್ನ ಬೀಜವನ್ನು ಬಿತ್ತುತ್ತಾನೆಯೋ ಅಥವಾ ಆಶ್ರಮದಲ್ಲಿದ್ದು ಪತ್ನಿ ಇಲ್ಲದವಳಿಂದಲೇ ಸ್ವತಃ ವರಿಸಲ್ಪಡುತ್ತಾನೆಯೋ ಅಂತಹವನ ಬೀಜವು ನಾಶವನ್ನು ಹೊಂದುವುದಿಲ್ಲ.

ಪರಕ್ಷೇತ್ರೇಷು ಯೋ ಬೀಜಂ ನರೋ ದರ್ಪಾತ್ ಸಮುತ್ಸೃಜೇತ್ ।
ಕ್ಷೇತ್ರಿಕಸ್ಯೈವ ತದ್ಬೀಜಂ ನ ಬೀಜೇ ಲಭತೇ ಫಲಮ್ ॥೧೦॥

ಯಾವ ಪುರುಷನು ದರ್ಪದಿಂದ ಪರಕ್ಷೇತ್ರದಲ್ಲಿ ತನ್ನ ಬೀಜವನ್ನು ಇಡುತ್ತಾನೆಯೋ ಅಲ್ಲಿ ಹುಟ್ಟಿದ ಪುತ್ರನು ಆ ಕ್ಷೇತ್ರದ ಸ್ವಾಮಿಗೇ ಸೇರುತ್ತಾನೆ ಹೊರತು ದರ್ಪದಿಂದ ಬೀಜವನ್ನು ಇಟ್ಟವನಿಗೆ ಅಲ್ಲ.

ನಾತಃ ಪರಮಧರ್ಮ್ಯಂ ಚಾಪ್ಯಯಶಸ್ಯಂ ತಥೋತ್ತರಮ್ ।
ಗರ್ಭಾದೀನಾಂ ಚ ಬಹುಭಿಸ್ತಾಶ್ಚ ತ್ಯಾಜ್ಯಾಃ ಸಮೇಷ್ವಪಿ ॥೧೧॥

ಆದರೆ ಬಹಳ ಪುರುಷರಿಂದ ಗರ್ಭವನ್ನು ಧರಿಸುವುದಕ್ಕಿಂತ ಹೆಚ್ಚು ಅಧಾರ್ಮಿಕವಾದುದು, ಹೆಚ್ಚು ಅಕೀರ್ತಿಕರವಾದುದು ಬೇರೆ ಯಾವುದೂ ಇಲ್ಲ. ಅಂತಹ ಸ್ತ್ರೀಯರು ತನ್ನ ವರ್ಣದವರೇ ಆಗಿದ್ದರೂ ಅವರನ್ನು ಪರಿತ್ಯಜಿಸಬೇಕು.

ಮಾರ್ಕಂಡೇಯಃ

ಅಥ ಯೇ ಪರದಾರೇಷು ಪುತ್ರಾ ಜಾಯಂತಿ ನಾರದ ।
ಕಸ್ಯ ತೇ ಬಂಧುದಾಯಾದಾ ಭವಂತಿ ಪರಮದ್ಯುತೇ ॥೧೨॥

ಮಾರ್ಕಂಡೇಯ– ಎಲೈ ನಾರದರೇ, ಪರಮದ್ಯುತಿಯನ್ನು ಹೊಂದಿದವರೇ, ಪರಪತ್ನಿಯರಲ್ಲಿ ಹುಟ್ಟಿದ ಪುತ್ರರು ಯಾರಿಗೆ ಬಂಧುಗಳು ಮತ್ತು ದಾಯಾದಿಗಳು ಆಗುತ್ತಾರೆ?

ನಾರದಃ

ಪರದಾರೇಷು ಜಾಯೇತೇ ದ್ವೌ ಪುತ್ರೌ ಕುಂಡಗೋಲಕೌ ।
ಜೀವತ್ಯಥ ಪತೌ ಕುಂಡೋ ಮೃತೇ ಭರ್ತರಿ ಗೋಲಕಃ ॥೧೩॥

ನಾರದರು– ಪರಸ್ತ್ರೀಯರಲ್ಲಿ ಕುಂಡ-ಗೋಲಕ ಎಂಬ ಎರಡು ಬಗೆಯ ಪುತ್ರರು ಜನಿಸುತ್ತಾರೆ. ಪತಿಯು ಬದುಕಿರುವಾಗಲೇ ಪರಪುರುಷನಿಂದ ಹುಟ್ಟಿದವನು ಕುಂಡ. ಪತಿಯು ಮೃತನಾದ ಮೇಲೆ ಪರಪುರುಷನಿಂದ ಹುಟ್ಟಿದವನು ಗೋಲಕ.

ತೇ ಚ ಜಾತಾಃ ಪರಕ್ಷೇತ್ರೇ ದೇಹಿನಾಂ ಪ್ರೇತ್ಯ ಚೇಹ ಚ ।
ದತ್ತಾನಿ ಹವ್ಯಕವ್ಯಾನಿ ನಾಶಯಂತ್ಯಥ ದಾತೃಣಾಮ್ ॥೧೪॥

ಪರಕ್ಷೇತ್ರದಲ್ಲಿ ಜನಿಸಿದ ಅಂತಹವರು ಆ ವಂಶದ ಪಿತೃಗಳಿಗೆ ದಾತೃಗಳು ಕೊಡುವ ಹವ್ಯ-ಕವ್ಯಗಳನ್ನು ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ನಾಶ ಮಾಡುತ್ತಾರೆ.

ಪಿತುರ್ಹಿ ನರಕಾಯೈತೇ ಗೋಲಕಸ್ತು ವಿಶೇಷತಃ ।
ಚಂಡಾಲತುಲ್ಯೌ ತಜ್ಜೌ ಹಿ ಪರತ್ರೇಹ ಚ ನಶ್ಯತಃ ॥೧೫॥

ಅವರಿಬ್ಬರೂ ತಂದೆಗೆ ನರಕವನ್ನುಂಟು ಮಾಡುವವರು. ಗೋಲಕನಾದವನು ವಿಶೇಷವಾಗಿ ನರಕವನ್ನುಂಟು ಮಾಡುತ್ತಾನೆ. ಅವರಿಂದ ಜನಿಸಿದ ಪುತ್ರರು ಚಂಡಾಲರಿಗೆ ಸಮಾನರಾದವರು. ಅವರು ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ನಾಶವನ್ನು ಹೊಂದುತ್ತಾರೆ.

ಮಾರ್ಕಂಡೇಯಃ

ಕಸ್ಯ ತೇ ಗರ್ಹಿತಾಃ ಪುತ್ರಾಃ ಪಿತೄಣಾಂ ಹವ್ಯಕವ್ಯದಾಃ ।
ಯಸ್ಯ ಕ್ಷೇತ್ರೇ ಪ್ರಸೂಯಂತೇ ಯೋ ವಾ ತಾನ್ ಜನಯೇತ್ ಸುತಾನ್ ॥

ಮಾರ್ಕಂಡೇಯ– ಅಂತಹ ದೂಷಿತರಾದ ಪುತ್ರರು ಯಾವ ಪಿತೃಗಳಿಗೆ ಹವ್ಯ-ಕವ್ಯಗಳನ್ನು ಕೊಡುತ್ತಾರೆ? ಪರಕ್ಷೇತ್ರದ ಸ್ವಾಮಿಗೋ ಅಥವಾ ತಮ್ಮನ್ನು ಹುಟ್ಟಿಸಿದ ಪಿತೃವಿಗೋ?

ನಾರದಃ

ಕ್ಷೇತ್ರಿಕಶ್ಚೈವ ಬೀಜೀ ಚ ದ್ಹಾವೇತೌ ನಿರಯಂ ಗತೌ ।
ನ ರಕ್ಷತಿ ಚ ಯೋ ದಾರಾನ್ ಪರದಾರಾಂಶ್ಚ ಗಚ್ಛತಿ ॥೧೭॥

ಗರ್ಹಿತಾಸ್ತೇ ನರಾ ನಿತ್ಯಂ ಧರ್ಮಾಚಾರಬಹಿಷ್ಕೃತಾಃ ।
ಕುಂಡೋ ಭೋಕ್ತಾ ಚ ಭೋಗೀ ಚ ಕುತ್ಸಿತಾಃ ಪಿತೃದೈವತೈಃ ॥೧೮॥

ನಾರದರು– ಕ್ಷೇತ್ರಸ್ವಾಮಿಯೂ, ಬೀಜವನ್ನಿಟ್ಟವನೂ ಇಬ್ಬರೂ ನರಕಕ್ಕೆ ಹೋಗುತ್ತಾರೆ. ಕ್ಷೇತ್ರಸ್ವಾಮಿಯು ತನ್ನ ಕ್ಷೇತ್ರವನ್ನು ರಕ್ಷಣೆ ಮಾಡದೆ ಇದ್ದ ದೋಷದಿಂದಲೂ, ಬೀಜವನ್ನು ಇಟ್ಟವನು ಪರಸ್ತ್ರೀಯನ್ನು ಸ್ಪರ್ಶ ಮಾಡಿದ ಕಾರಣದಿಂದಲೂ ನರಕಕ್ಕೆ ಹೋಗುತ್ತಾನೆ. ಅಂತಹ ಮೂವರು ಯಾವಾಗಲೂ ಧರ್ಮಾಚಾರದಿಂದ ಬಹಿಷ್ಕೃತರಾಗಿ ನಿಂದಿತರಾದವರು. ಕ್ಷೇತ್ರಸ್ವಾಮಿ, ಬೀಜವನ್ನಿಟ್ಟವನು ಮತ್ತು ಅಲ್ಲಿ ಜನಿಸಿದ ಪುತ್ರ - ಈ ಮೂವರೂ ಪಿತೃಗಳಿಂದಲೂ ಮತ್ತು ದೇವತೆಗಳಿಂದಲೂ ನಿಂದಿತರಾದವರು.

ಮಾರ್ಕಂಡೇಯಃ

ತಥೈತೇ ಗರ್ಹಿತಾಃ ಪುತ್ರಾ ಹವ್ಯಕವ್ಯಾನಿ ನಾರದ ।
ಕಸ್ಯ ನಿತ್ಯಂ ಪ್ರಯಚ್ಛಂತಿ ಧರ್ಮೋ ವಾ ತೇಷು ಕಿಂ ಫಲಮ್ ॥೧೯॥

ಮಾರ್ಕಂಡೇಯ– ಎಲೈ ನಾರದರೇ, ಹೀಗೆ ದೂಷಿತರಾದ ಪುತ್ರರು ಹವ್ಯ-ಕವ್ಯಗಳನ್ನು ಯಾರಿಗೆ ಕೊಡುತ್ತಾರೆ? ಧರ್ಮವಾದರೂ ಅವರಿಗೆ ಏನು ಫಲವನ್ನು ಕೊಡುತ್ತದೆ?

ನಾರದಃ

ಯಾತುಧಾನಾಃ ಪಿಶಾಚಾಶ್ಚ ಪ್ರತಿಗೃಹ್ಣಂತಿ ತೈರ್ಹುತಮ್ ।
ಹವ್ಯಂ ಕವ್ಯಂ ಚ ತೈರ್ದತ್ತಂ ಯೇ ಚ ಭೂತಾ ನಿಶಾಚರಾಃ ॥೨೦॥

ನಾರದರು– ಪಿಶಾಚಿಗಳು ಮತ್ತು ರಾಕ್ಷಸರು ಅವರು ಮಾಡಿದ ಹೋಮ ಮೊದಲಾದ ಧರ್ಮಗಳನ್ನು ಸ್ವೀಕರಿಸುತ್ತಾರೆ. ಅವರು ಕೊಡುವ ಹವ್ಯ-ಕವ್ಯಗಳನ್ನು ಭೂತಗಳು ಮತ್ತು ನಿಶಾಚರರಾದ ಅಸುರರು ಸ್ವೀಕರಿಸುತ್ತಾರೆ.

ಮಾರ್ಕಂಡೇಯಃ

ಅಥ ತೇ ರಾಕ್ಷಸಾಃ ಪ್ರೀತಾಃ ಕಿಂ ಪ್ರಯಚ್ಛಂತಿ ದಾತೃಣಾಮ್ ।
ಕಿಂ ವಾ ಧರ್ಮಫಲಂ ತೇಷಾಂ ಭವೇತ್ ತದೃಷಿಸತ್ತಮ ॥೨೧॥

ಮಾರ್ಕಂಡೇಯ– ಅಂತಹ ಪ್ರಸನ್ನರಾದ ರಾಕ್ಷಸಾದಿಗಳು ಹವ್ಯ-ಕವ್ಯವನ್ನು ಕೊಟ್ಟವರಿಗೆ ಯಾವ ಫಲವನ್ನು ಕೊಡುತ್ತಾರೆ? ಎಲೈ ಋಷಿಶ್ರೇಷ್ಠರೇ, ಅವರು ಮಾಡಿದ ಧರ್ಮಕ್ಕೆ ಫಲವಾದರೂ ಏನು?

ನಾರದಃ

ನ ದತ್ತಂ ನಶ್ಯತೇ ಕಿಂಚಿತ್ ಸರ್ವಭೂತೇಷು ದಾತೃಣಾಮ್ ।
ಪ್ರೇತ್ಯ ಚೇಹ ಚ ತಾಂ ಪುಷ್ಟಿಮುಪಾಶ್ನಂತಿ ಪ್ರದಾಯಿನಃ ॥೨೨॥

ನಾರದರು– ದಾತೃಗಳು ಸರ್ವಭೂತಗಳಲ್ಲಿ ಯಾರಿಗೇ ದಾನವನ್ನು ಮಾಡಿದರೂ ಅದು ನಾಶವನ್ನು ಹೊಂದುವುದಿಲ್ಲ. ಕೊಟ್ಟವರು ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಸ್ವೀಕರಿಸಿದವರಿಗೆ ಯೋಗ್ಯತೆಗೆ ಅನುಗುಣವಾದ ಪುಷ್ಟಿಯನ್ನು ಪಡೆಯುತ್ತಾರೆ.

ಮಾರ್ಕಂಡೇಯಃ

ಅಥ ಗೋಲಕಕುಂಡಾಭ್ಯಾಂ ಸಂತತಿರ್ಯಾ ಭವಿಷ್ಯತಿ ।
ತಯೋರ್ಯೇ ಬಾಂಧವಾಃ ಕೇಚಿತ್ ಪ್ರದಾಸ್ಯಂತಿ ಕಥಂ ನು ತಮ್ ॥

ಮಾರ್ಕಂಡೇಯ– ಇನ್ನು ಗೋಲಕ-ಕುಂಡರಿಂದ ಉಂಟಾಗುವ ಸಂತತಿ ಮತ್ತು ಗೋಲಕ-ಕುಂಡರಿಗೆ ಬಾಂಧವರು ಕೊಡುವ ಹವ್ಯ-ಕವ್ಯಾದಿಗಳ ಪರಿಸ್ಥಿತಿ ಏನು?

ನಾರದಃ

ಸಾಧ್ವೀಜಾತಾಃ ಸುತಾಸ್ತೇಷಾಂ ತಾಂ ವೃತ್ತಿಮನುತಿಷ್ಠತಾಮ್ ।
ಪ್ರೀಣಂತಿ ಪಿತೃದೈವತ್ಯಂ ಹವ್ಯಕವ್ಯಸಮಾಹಿತಾಃ ॥೨೪॥

ನಾರದರು– ಗೋಲಕ-ಕುಂಡರ ಪತ್ನಿಯರು ಸಾಧ್ವಿಯರಾದರೆ, ಅವರಲ್ಲಿ ಜನಿಸುವ ಪುತ್ರರು ಸನ್ಮಾರ್ಗದಲ್ಲಿ ನಡೆಯುವವರಾದರೆ ಅವರಿಗೆ ಹವ್ಯ-ಕವ್ಯಗಳ ಅಧಿಕಾರವಿದೆ. ಅದರಿಂದ ಪಿತೃದೇವತೆಗಳು ಸಂತೋಷಪಡುತ್ತಾರೆ.

ಏವಂ ಗೋಲಕಕುಂಡಾಭ್ಯಾಂ ಯೇ ಚ ವರ್ಣಾಪದೇಶಿನಃ ।
ಹವ್ಯಂ ಕವ್ಯಂ ಚ ಶುದ್ಧಾನಾಂ ಪ್ರತಿಗೃಹ್ಣಂತಿ ದೇವತಾಃ ॥೨೫॥

ಹೀಗೆ ನಾಲ್ಕು ವರ್ಣಗಳಿಗೂ ಸೇರಿದ (ಅಂತಹವರು ಶುದ್ಧವಾದ ವರ್ಣದಿಂದ ಕೂಡಿದವರಲ್ಲ) ಗೋಲಕ-ಕುಂಡರಿಂದ ಜನಿಸಿದ ಶುದ್ಧರಾದ ಪುತ್ರರಿಂದ ಕೊಡಲ್ಪಡುವ ಹವ್ಯಕವ್ಯಗಳನ್ನು ದೇವತೆಗಳು ಸ್ವೀಕರಿಸುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ನರಚಾಪಲ್ಯಕಥನಂ ನಾಮ ಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಐವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೊಂದನೆಯ ಅಧ್ಯಾಯ

ಸ್ತ್ರೀಯರ ಚಾಪಲ್ಯದ ಫಲಕಥನ.

ಮಾರ್ಕಂಡೇಯಃ

ಶ್ರುತಂ ನರಾಣಾಂ ಚಾಪಲ್ಯಂ ಪರಸ್ತ್ರೀಷು ಪ್ರಜಾಯತಾಮ್ ।
ಪ್ರಮದಾನಾಂ ತು ಚಾಪಲ್ಯೇ ದೋಷಮಿಚ್ಛಾಮಿ ವೇದಿತುಮ್ ॥೧॥

ಮಾರ್ಕಂಡೇಯ– ಪುರುಷರು ಚಪಲತೆಯಿಂದ ಪರಸ್ತ್ರೀಯರಲ್ಲಿ ಪುತ್ರರನ್ನು ಪಡೆದರೆ ಅದರ ವಿವರವನ್ನು ಕೇಳಿದ್ದಾಯಿತು. ಸ್ತ್ರೀಯರೇ ಚಪಲತೆಯಿಂದ ಪರ ಪುರುಷನ ಬಳಿಗೆ ಹೋದರೆ ಅದರ ದೋಷವನ್ನು ಕೇಳಲು ಬಯಸುತ್ತೇನೆ.

ನಾರದಃ

ಏಕವರ್ಣೋಽಪಿ ದೋಷಂ ತು ಗಮನಂ ಪೂರ್ವಕಾಲಿಕಮ್ ।
ಧಾತಾ ಚ ಸಮನುಜ್ಞಾತೋ ವಿಷ್ಣುನಾ ತತ್ತಥಾಽಕರೋತ್ ॥೨॥

ನಾರದರು– ಸ್ತ್ರೀಯು ಸಮಾನವರ್ಣದವನ ಬಳಿಗೆ ಹೋದರೆ ಅದರಲ್ಲಿ ದೋಷವಿಲ್ಲ. ವಿಷ್ಣುವಿನಿಂದ ಆದೇಶವನ್ನು ಪಡೆದ ಬ್ರಹ್ಮದೇವರು ಪೂರ್ವಕಾಲದಲ್ಲಿ ಅಂತಹ ವ್ಯವಸ್ಥೆಯನ್ನು ಮಾಡಿದರು.

ಭಗಲಿಂಗೇ ಮಹಾಪ್ರಾಜ್ಞ ಪೂರ್ವಮೇವ ಪ್ರಜಾಪತಿಃ ।
ಸಸರ್ಜ ತಾಭ್ಯಾಂ ಸಂಯೋಗಮನುಜ್ಞಾತಶ್ಚಕಾರ ಸಃ ॥೩॥

ಎಲೈ ಮಹಾಪ್ರಾಜ್ಞನೇ, ಪ್ರಜಾಪತಿಯಾದ ಬ್ರಹ್ಮನು ಮೊದಲೇ ಭಗ-ಲಿಂಗಗಳನ್ನು (ಸ್ತ್ರೀಯೋನಿ ಮತ್ತು ಪುರುಷಲಿಂಗಗಳನ್ನು) ಸೃಷ್ಟಿಮಾಡಿ, ಅವುಗಳ ಸಂಯೋಗವನ್ನು ಅನುಮೋದಿಸಿದನು.

ಅಥ ವಿಷ್ಣುಪ್ರಸಾದೇನ ಭಗೋ ದತ್ತವರಃ ಕಿಲ ।
ತೇನ ಚೈವ ಪ್ರಸಾದೇನ ಸರ್ವಾಂಲ್ಲೋಕಾನುಪಾಶ್ನುತೇ ॥೪॥

ಅನಂತರ ವಿಷ್ಣುವಿನ ಅನುಗ್ರಹದಿಂದ ಭಗವು ಪ್ರಬಲವಾಯಿತು. ಆ ಅನುಗ್ರಹದ ಕಾರಣದಿಂದಲೇ ಅದು ಎಲ್ಲ ಲೋಕವನ್ನೂ ಆಳುತ್ತದೆ.

ತಸ್ಮಾತ್ತು ಪುರುಷೇ ದೋಷೋ ಹ್ಯಧಿಕೋ ನಾತ್ರ ಸಂಶಯಃ ।
ವಿನಾ ಗರ್ಭಂ ಸವರ್ಣೇಷು ನ ತ್ಯಾಜ್ಯಾ ಗಮನಾತ್ ಸ್ತ್ರಿಯಃ ॥೫॥

ಆ ಕಾರಣದಿಂದ ಪುರುಷನಿಗೆ ಅಧಿಕ ದೋಷವಿರುತ್ತದೆ. ಇದರಲ್ಲಿ ಸಂಶಯವಿಲ್ಲ. ಪರಪುರುಷನ ಬಳಿಗೆ ಹೋದ ಸ್ತ್ರೀಯರು ಅವರಿಂದ ಗರ್ಭಧಾರಣೆಯನ್ನು ಮಾಡದಿದ್ದರೆ ಅವರನ್ನು ಪರಿತ್ಯಾಗ ಮಾಡಬಾರದು.

ಪ್ರಾಯಶ್ಚಿತ್ತಂ ಯಥಾನ್ಯಾಯಂ ದಂಡಂ ಕುರ್ಯಾತ್ ಸ ಪಂಡಿತಃ ।
ಶ್ವಭಿರ್ವಾ ದಂಶನಂ ಸ್ನಾನಂ ಸವನತ್ರಿತಯಂ ನಿಶಿ ॥೬॥

ಭೂಮೌ ಚ ಭಸ್ಮಶಯನಂ ದಾನಂ ಭೋಗವಿವರ್ಜಿತಮ್ ।
ದೋಷಗೌರವತಃ ಕಾಲೋ ದ್ರವ್ಯಗೌರವಮೇವ ಚ ।
ಮರ್ಯಾದಾ ಸ್ಥಾಪಿತಾ ಪೂರ್ವಮಿತಿ ತೀರ್ಥಾಂತರಂ ಗತೇ ॥೭॥

ವಿವೇಕಿಯಾದವನು ಶಾಸ್ತ್ರೋಕ್ತವಾಗಿ ಶಿಕ್ಷೆಯನ್ನು ಕೊಡಬೇಕು. ನಾಯಿಗಳಿಂದ ಕಚ್ಚಿಸುವುದು, ರಾತ್ರಿಯ ವೇಳೆಯಲ್ಲಿ ಮೂರು ಬಾರಿ ಸ್ನಾನವನ್ನು ಮಾಡಿಸುವುದು, ಭೂಮಿಯಲ್ಲಿ ಭಸ್ಮದ ಮೇಲೆ ಮಲಗಿಸುವುದು, ಬಹಳ ಭೋಗವಿಲ್ಲದಂತೆ ಅನ್ನ ವಸ್ತ್ರಗಳನ್ನು ಕೊಡುವುದು ಇವು ಶಿಕ್ಷೆಗಳು. ದೋಷವು ಹೆಚ್ಚಾದಂತೆ ಶಿಕ್ಷೆಯ ಕಾಲವೂ,

ಶಿಕ್ಷೆಯ ದ್ರವ್ಯ ಮತ್ತು ತೀವ್ರತೆಯೂ ಹೆಚ್ಚಾಗಬೇಕು. ಹೀಗೆ ಸ್ತ್ರೀಯರು ತಾವೇ ಪರಪುರುಷನ ಬಳಿಗೆ ಹೋದರೆ ಈ ಒಂದು ಪರಿಹಾರವು ಸ್ಥಾಪಿಸಲ್ಪಟ್ಟಿದ್ದಿತು.

ತದ್ಯೋಷಿತಾಂ ತು ದೀರ್ಘಾಯೋ ನಾಸ್ತಿ ದೋಷೋ ವ್ಯತಿಕ್ರಮೇ ।
ಭಗಸ್ತೀರ್ಥಾಂತರೇ ಶುದ್ಧೋ ವಿಷ್ಣೋಸ್ತು ವಚನಾದಿಹ ॥೮॥

ಎಲೈ ದೀರ್ಘಾಯುಷ್ಯವಂತನೇ, ಆದ್ದರಿಂದ ಪತಿಯನ್ನು ಅತಿಕ್ರಮಿಸಿದರೆ ಸ್ತ್ರೀಯರಿಗೆ ದೋಷವಿಲ್ಲ. ಪರಪುರುಷನ ಸಂಪರ್ಕವನ್ನು ಮಾಡಿದರೂ ವಿಷ್ಣುವಿನ ವಚನದಂತೆ ಯೋನಿಯು ಶುದ್ಧವಾಗುತ್ತದೆ.

ರಕ್ಷ್ಯಾಶ್ಚೈವಾನ್ಯಸಂವಾದೈರನ್ಯಗೇಹಾದ್ ವಿಚಕ್ಷಣೈಃ ।
ಆಸಾಂ ಶುದ್ಧೌ ವಿಶೇಷೇಣ ಕರ್ಮಣಾಂ ಫಲಮಶ್ನುತೇ ॥೯॥

ಆದರೆ ವಿವೇಕಿಗಳಾದವರು ಪರಪುರುಷರ ಜೊತೆಯಲ್ಲಿ ತನ್ನ ಪತ್ನಿಯು ಯಾವಾಗಲೂ ಸಂಭಾಷಣೆಯಲ್ಲಿ ತೊಡಗದಿರುವಂತೆ, ಇನ್ನೊಬ್ಬನ ಮನೆಗೆ ಪುನಃ ಪುನಃ ಹೋಗದಿರುವಂತೆ ರಕ್ಷಿಸಬೇಕು. ಸ್ತ್ರೀಯರು ಶುದ್ಧರಾಗಿದ್ದರೆ ಮಾತ್ರ ಕರ್ಮಗಳ ಫಲವು ವಿಶೇಷವಾಗಿ ದೊರೆಯುತ್ತದೆ.

ನೈತಾ ವಾಚ್ಯಾ ನ ವೈ ವಧ್ಯಾ ನ ಕ್ಲೇಶ್ಯಾಃ ಶುಭಮಿಚ್ಛತಾ ।
ವಿಷ್ಣುಪ್ರಸಾದಾದಿತ್ಯೇವ ಭಗಸ್ತೀರ್ಥಾಂತರಂ ಗತಃ ।
ಮಾಸಿಮಾಸಿ ರಜಸ್ತಾಸಾಂ ದುಷ್ಕೃತಾನಪಕರ್ಷತಿ ॥೧೦॥

ಶುಭವನ್ನು ಹೊಂದಲು ಇಚ್ಛಿಸುವವನು ಅವರನ್ನು ಹೊಡೆಯಬಾರದು, ನಿಂದಿಸಬಾರದು, ಬಹಳ ಕಷ್ಟಕ್ಕೆ ಈಡುಮಾಡಬಾರದು. ವಿಷ್ಣುವಿನ ಅನುಗ್ರಹದಿಂದಲೇ ಸ್ತ್ರೀಯೋನಿಯು ಪರಪುರುಷನ ಸಂಪರ್ಕವನ್ನು ಪಡೆದಿದ್ದರೂ ಅದು ಪ್ರತಿ ತಿಂಗಳೂ ಋತುಸ್ನಾತಳಾದ ಅವಳ ದೋಷವನ್ನು ಪರಿಹರಿಸುತ್ತದೆ.

ಸ್ತ್ರಿಯಸ್ತೋಷಕರಾ ನೃಣಾಂ ಸ್ತ್ರಿಯಸ್ತುಷ್ಟಿಪ್ರದಾಃ ಸದಾ ।
ಪುತ್ರಸೇತುಪ್ರತಿಷ್ಠಾಯ ಸ್ತ್ರಿಯೋ ಲೋಕೇ ಮಹಾದ್ಯುತೇ ॥೧೧॥

ಸ್ತ್ರೀಯರು ಪುರುಷರಿಗೆ ಯಾವಾಗಲೂ ಸಂತೋಷವನ್ನು ಮತ್ತು ಪುಷ್ಟಿಯನ್ನು ಉಂಟು ಮಾಡುವವರು. ಎಲೈ ಮಹಾದ್ಯುತಿಯೇ, ಪುತ್ರನೆಂಬ ವಂಶದ ಸೇತುವೆಯನ್ನು ಲೋಕದಲ್ಲಿ ನಿರ್ಮಾಣ ಮಾಡುವವರೂ ಅವರೇ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಯೋಷಿತ್ಪ್ರಭಾವಕಥನಂ ನಾಮ ಏಕಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೆರಡನೆಯ ಅಧ್ಯಾಯ

ಪತಿ-ಪತ್ನಿಯರ ಶುದ್ಧ್ಯಶುದ್ಧಿ ಕಥನ.

ಮಾರ್ಕಂಡೇಯಃ

ಶ್ರುತಂ ಬಲಂ ಪ್ರಭಾವಶ್ಚ ಯೋಷಿತಾಂ ಮುನಿಸತ್ತಮ ।
ಏಕಸ್ಯ ಬಹುಭಾರ್ಯಸ್ಯ ಧರ್ಮಮಿಚ್ಛಾಮಿ ವೇದಿತುಮ್ ॥೧॥

ಮಾರ್ಕಂಡೇಯ- ಎಲೈ ಮುನಿಶ್ರೇಷ್ಠರೇ, ಸ್ತ್ರೀಯರ ಬಲವನ್ನು ಮತ್ತು ಸಾಮರ್ಥ್ಯವನ್ನು ಕೇಳಿದೆನು. ಅನೇಕ ಪತ್ನಿಯರನ್ನು ಹೊಂದಿದ ಪುರುಷನ ಧರ್ಮವನ್ನು ತಿಳಿಯಲು ಬಯಸುತ್ತೇನೆ.

ನಾರದಃ

ಬಹುಭಾರ್ಯಾಸು ಸಕ್ತಸ್ಯ ನಾರೀಭೋಗೇಷು ಗೇಹಿನಃ ।
ಋತೌ ವಿಮುಚ್ಯಮಾನಸ್ಯ ಸಾನ್ನಿಧ್ಯೇ ಭ್ರೂಣಹಾ ಸ್ಮೃತಃ ॥೨॥

ನಾರದರು- ಗೃಹಸ್ಥನಾದವನು ಸ್ತ್ರೀಭೋಗದಲ್ಲಿ ಆಸಕ್ತನಾಗಿ, ಅನೇಕ ಭಾರ್ಯೆಯರನ್ನು ಹೊಂದಿ, ಋತುಕಾಲದಲ್ಲಿ ಸನ್ನಿಧಿಯಲ್ಲಿರುವ ಭಾರ್ಯೆಯ ಸಂಗವನ್ನು ಮಾಡದಿದ್ದರೆ ಭ್ರೂಣಹತ್ಯಾ ದೋಷವನ್ನು ಹೊಂದುವನು.

ವೃದ್ಧಾಂ ವಂಧ್ಯಾಂ ಸುವ್ರತಾಂ ಚ ಮೃತಾಪತ್ಯಾಮಪುಷ್ಪಿಣೀಮ್ ।
ಕನ್ಯಾಂ ಚ ಬಹುಪುತ್ರಾಂ ಚ ವರ್ಜಯನ್ಮುಚ್ಯತೇ ಭಯಾತ್ ॥೩॥

ವೃದ್ಧಳಾದ, ವಂಧ್ಯೆಯಾದ, ವ್ರತಧಾರಿಣಿಯಾದ, ಪುನಃ ಪುನಃ ಮಕ್ಕಳನ್ನು ಕಳೆದುಕೊಳ್ಳುವ, ಪ್ರೌಢೆಯಾಗದ, ಬಹುಪುತ್ರರನ್ನು ಪಡೆದಿರುವ ಸ್ತ್ರೀಯನ್ನು ಋತುಕಾಲದಲ್ಲಿ ಪರಿತ್ಯಜಿಸಿದರೂ ದೋಷಕ್ಕೆ ಗುರಿಯಾಗುವುದಿಲ್ಲ.

ವ್ಯಾಧಿತೋ ಬಂಧನಸ್ಥೋ ವಾ ಪ್ರವಾಸೇಷ್ವಥ ಪರ್ವಸು ।
ಋತುಕಾಲೇಷು ನಾರೀಣಾಂ ಭ್ರೂಣಹತ್ಯಾಂ ಪ್ರಮುಂಚತಿ ॥೪॥

ವ್ಯಾಧಿಗ್ರಸ್ತನಾದವನು, ಬಂಧನಕ್ಕೆ ಒಳಗಾದವನು, ಪ್ರವಾಸದಲ್ಲಿರುವವನು ಋತುಕಾಲದಲ್ಲಿ ಪತ್ನಿಗಮನವನ್ನು ಮಾಡದಿದ್ದರೂ ಭ್ರೂಣಹತ್ಯೆಗೆ ಗುರಿಯಾಗುವುದಿಲ್ಲ. ಪರ್ವಕಾಲಗಳಲ್ಲಿಯೂ ಹಾಗೆಯೇ.

ಮಾರ್ಕಂಡೇಯಃ

ವೇಶ್ಯನಾರೀಷು ವೈ ಜಾತಾಃ ಪರಪ್ರೇಷ್ಯಾಸು ವಾ ಸುತಾಃ ।
ಕಸ್ಯ ತೇ ಬಂಧುದಾಯಾದಾ ಭವಂತಿ ಹಿ ಮಹಾಮುನೇ ॥೫॥

ಮಾರ್ಕಂಡೇಯ– ಎಲೈ ಮಹಾಮುನಿಯೇ, ವೇಶ್ಯೆಯರಲ್ಲಿ ಮತ್ತು ಇಟ್ಟುಕೊಂಡವಳಲ್ಲಿ ಜನಿಸಿದ ಪುತ್ರರು ಯಾರಿಗೆ ಬಂಧು-ದಾಯಾದಿಗಳಾಗುತ್ತಾರೆ?

ನಾರದಃ

ಪಣ್ಯಸ್ತ್ರೀಷು ಪ್ರಸೂತಾ ಯೇ ಯಸ್ಯ ಸ್ತ್ರೀ ತಸ್ಯ ತೇ ಸುತಾಃ ।
ಕ್ರಯಾಚ್ಚ ಕೃತ್ರಿಮಾಃ ಪುತ್ರಾಃ ಪ್ರದಾನಾಚ್ಚೈವ ದತ್ರಿಮಾಃ ॥೬॥

ನಾರದರು– ವೇಶ್ಯಾಸ್ತ್ರೀಯರಲ್ಲಿ ಜನಿಸಿದ ಪುತ್ರರು ಯಾವ ಪುರುಷನಿಗೆ ಜನಿಸಿರುತ್ತಾರೆಯೋ ಅವನಿಗೆ ಪುತ್ರರಾಗುತ್ತಾರೆ. ಕ್ರಯದಿಂದ ಪಡೆದವರು ಕೃತ್ರಿಮ ಪುತ್ರರೆಂದೂ, ದಾನದಿಂದ ಪಡೆದವರು ದತ್ತಪುತ್ರರೆಂದೂ ಕರೆಯಲ್ಪಡುತ್ತಾರೆ.

ಮಾರ್ಕಂಡೇಯಃ

ಪಣ್ಯನಾರೀಷ್ವನಿಯತಃ ಪುಂಸೋಽರ್ಥೋ ವರ್ತತೇ ಧ್ರುವಮ್ ।
ಅತ್ರ ಚಾಹಿತಗರ್ಭಾಯಾಃ ಕಸ್ಯ ಪುತ್ರಂ ವದಂತಿ ತಮ್ ॥೭॥

ಮಾರ್ಕಂಡೇಯ– ವೇಶ್ಯೆಯರಲ್ಲಿ ನಿಯತವಾದ ಸಂಬಂಧವಿರುವುದಿಲ್ಲ ಎಂಬುದು

ಪ್ರಸಿದ್ಧವಾದುದು. ಅಂತಹವಳಲ್ಲಿ ಹುಟ್ಟಿದ ಪುತ್ರನನ್ನು ಯಾರ ಪುತ್ರನೆಂದು ಕರೆಯಬೇಕು?

ನಾರದಃ

ತೀರ್ಥಭೂತಾಸು ನಾರೀಷು ಜ್ಞಾಯತೇ ಯೋಽಭಿಗಚ್ಛತಿ ।
ಋತೌ ತಸ್ಯ ಭವೇದ್ ಗರ್ಭೋ ಯಂ ವಾ ನಾರೀ ನ ಶಂಕತೇ ॥೮॥

ನಾರದರು– ಋತುಕಾಲದಲ್ಲಿ ಶುದ್ಧಳಾದ ನಾರಿಯನ್ನು ಯಾವ ಪುರುಷನು ಸಂಪರ್ಕಿಸುತ್ತಾನೆಯೋ ಅವಳಲ್ಲಿ ಜನಿಸುವ ಆ ಗರ್ಭವು ಅವನಿಗೆ ಸೇರಿದುದು ಅಥವಾ ಆ ವೇಶ್ಯೆಯು ನಿಶ್ಚಿತವಾಗಿ ಯಾರ ಪುತ್ರನೆಂದು ಹೇಳುತ್ತಾಳೆಯೋ ಅವನಿಗೆ ಸೇರಿದುದು.

ಮಾರ್ಕಂಡೇಯಃ

ನರಾಣಾಂ ತ್ಯಜತಾಂ ಭಾರ್ಯಾಂ ಕಾಮಕ್ರೋಧಾದ್ ಗುಣಾನ್ವಿತಾಮ್।
ಅಪ್ರಸೂತಾಂ ಪ್ರಸೂತಾಂ ವಾ ತೇಷಾಂ ಪೃಚ್ಛಾಮಿ ನಿಷ್ಕೃತಿಮ್ ॥೯॥

ಮಾರ್ಕಂಡೇಯ– ಪುರುಷರು ಕಾಮ-ಕ್ರೋಧದಿಂದ ಮಕ್ಕಳನ್ನು ಪಡೆದ ಅಥವಾ ಪಡೆಯದ ಗುಣಾನ್ವಿತರಾದ ಭಾರ್ಯೆಯನ್ನು ತ್ಯಜಿಸಿದರೆ ಅವರಿಗೆ ಪ್ರಾಯಶ್ಚಿತ್ತವೇನು ಎಂದು ಕೇಳುತ್ತಿದ್ದೇನೆ.

ನಾರದಃ

ಅಪಾಪಾಂ ತ್ಯಜಮಾನಸ್ಯ ಸಾಧ್ವೀಂ ಮತ್ವೈವಮಾದಿತಃ ।
ಆತ್ಮವಂಶಃ ಸ್ವಧರ್ಮೋ ವಾ ತ್ಯಜತೋ ನಿಷ್ಕೃತಿರ್ನ ತು ॥೧೦॥

ನಾರದರು– ತನ್ನ ಪತ್ನಿ ಸಾಧ್ವಿ ಎಂದು ತಿಳಿದು ಅವಳು ಪಾಪರಹಿತಳಾಗಿದ್ದರೂ ಅವಳನ್ನು ಪರಿತ್ಯಾಗ ಮಾಡುವವನಿಗೆ ಆತ್ಮವಂಶವಾಗಲೀ, ತನ್ನ ಧರ್ಮವಾಗಲೀ ಅಥವಾ ಪ್ರಾಯಶ್ಚಿತ್ತವಾಗಲೀ ಇರುವುದಿಲ್ಲ.

ಯೋ ನರಸ್ಯಜತೇ ಭಾರ್ಯಾಂ ಪುಷ್ಪಿಣೀಮಪ್ರಸೂತಿಕಾಮ್ ।
ಸ ನಷ್ಟವಂಶಃ ಪಿತೃಭಿರ್ಯುಕ್ತಸ್ಯಜ್ಯೇತ ದೈವತೈಃ ॥೧೧॥

ಯಾವ ಪುರುಷನು ಮಕ್ಕಳಿಲ್ಲದ, ಋತುಸ್ನಾತಳಾದ ತನ್ನ ಭಾರ್ಯೆಯನ್ನು ತ್ಯಜಿಸುತ್ತಾನೆಯೋ ಅವನು ತನ್ನ ಪಿತೃಗಳ ಜೊತೆಯಲ್ಲಿ ವಂಶನಾಶವನ್ನು ಹೊಂದಿ ದೇವತೆಗಳಿಂದ ಪರಿತ್ಯಜಿಸಲ್ಪಡುತ್ತಾನೆ.

ಭಾರ್ಯಾಮಪತ್ಯಸಂಜಾತಾಂ ಪ್ರಸೂತಾಂ ಪುತ್ರಪೌತ್ರಿಣೀಮ್ ।
ಪುತ್ರದಾರಪರಿತ್ಯಾಗೀ ನ ಸ ಪ್ರಾಪ್ನೋತಿ ನಿಷ್ಕೃತಿಮ್ ॥೧೨॥

ಮಕ್ಕಳನ್ನು ಪಡೆದ ಪುತ್ರ-ಪೌತ್ರ ಸಹಿತಳಾದ ಭಾರ್ಯೆಯನ್ನು ಮತ್ತು ಪುತ್ರರನ್ನು ಪರಿತ್ಯಾಗ ಮಾಡುವವನಿಗೆ ಯಾವ ಪ್ರಾಯಶ್ಚಿತ್ತವೂ ಇಲ್ಲ.

ಏವಂ ಹಿ ಭಾರ್ಯಾಂ ತ್ಯಜತಾಂ ನರಾಣಾಂ ನಾಸ್ತಿ ನಿಷ್ಕೃತಿಃ ।
ನಾರ್ಹಂತಿ ಪ್ರಮದಾಸ್ತ್ಯಕ್ತುಂ ಪುತ್ರಪೌತ್ರಪ್ರತಿಷ್ಠಿತಾಃ ॥೧೩॥

ಹೀಗೆ ಭಾರ್ಯೆಯನ್ನು ತ್ಯಜಿಸುವ ಪುರುಷರಿಗೆ ಪ್ರಾಯಶ್ಚಿತ್ತವಿಲ್ಲ ಮತ್ತು ಪುತ್ರ-ಪೌತ್ರರ ಪ್ರತಿಷ್ಠೆಗೆ ಕಾರಣರಾದ ಸ್ತ್ರೀಯರು ಪರಿತ್ಯಾಗಕ್ಕೆ ಅರ್ಹರಲ್ಲ.

ಮಾರ್ಕಂಡೇಯಃ

ಕೀದೃಶೀಂ ಸಂತ್ಯಜನ್ ಭಾರ್ಯಾಂ ನರೋ ದೋಷೈರ್ನ ಲಿಪ್ಯತೇ ।
ಏತದಿಚ್ಛಾಮಿ ತತ್ತ್ವೇನ ವಿಜ್ಞಾತುಮೃಷಿಸತ್ತಮ ॥೧೪॥

ಮಾರ್ಕಂಡೇಯ– ಎಲೈ ಋಷಿಶ್ರೇಷ್ಠರೇ, ಎಂತಹ ಭಾರ್ಯೆಯನ್ನು ಪರಿತ್ಯಜಿಸಿದರೆ ದೋಷವು ಉಂಟಾಗುವುದಿಲ್ಲವೆಂದು ಕೇಳಲು ನಾನು ಇಚ್ಛಿಸುತ್ತೇನೆ.

ನಾರದಃ

ಮೋಕ್ಷಧರ್ಮಸ್ಥಿತಾನಾಂ ತು ಅನ್ಯೋನ್ಯಮನುಜಾನತಾಮ್ ।
ಭಾರ್ಯಾಪತೀನಾಂ ಮುಕ್ತಾನಾಮಧರ್ಮೋ ನ ವಿಧೀಯತೇ ॥೧೫॥

ನಾರದರು– ಮೋಕ್ಷಧರ್ಮನಿರತರಾಗಿ ಪರಸ್ಪರ ಅನುಮತಿಯಿಂದ ಭಾರ್ಯಾ-ಪತಿಗಳು ಮೈಥುನವನ್ನು ಮಾಡದಿದ್ದರೆ ಅವರಿಗೆ ಅಧರ್ಮವುಂಟಾಗುವುದಿಲ್ಲ.

ಅನ್ಯಸಂಗಾಂ ಗತಾಪತ್ಯಾಂ ಶೂದ್ರಗಾಂ ಪರಭಾಗಿನೀಮ್ ।
ಪರೀಕ್ಷ್ಯ ತ್ಯಜಮಾನಾನಾಂ ನರಾಣಾಂ ನಾಸ್ತಿ ಪಾತಕಮ್ ॥೧೬॥

ಪಾತಕೇಽಪಿ ತು ಭರ್ತವ್ಯೌ ದ್ವೌ ತು ಮಾತಾ ಪಿತಾ ತಥಾ ॥೧೭॥

ಇನ್ನೊಬ್ಬನ ಬಳಿಗೆ ಹೋಗುವವಳನ್ನು, ಪುನಃ ಪುನಃ ಮಕ್ಕಳನ್ನು ಕಳೆದುಕೊಳ್ಳುವವಳನ್ನು, ಶೂದ್ರನ ಬಳಿಗೆ ಹೋಗುವವಳನ್ನು, ವ್ಯಭಿಚಾರಿಣಿಯನ್ನು ಪರೀಕ್ಷೆಗಳಿಂದ ಅವರ ದೋಷಗಳನ್ನು ನಿಶ್ಚಯಿಸಿ ಪರಿತ್ಯಜಿಸುವ ಪುರುಷನಿಗೆ ಪಾಪವು ಬರುವುದಿಲ್ಲ. ಪಾತಕವನ್ನು ಮಾಡಿದ್ದರೂ ತಂದೆ-ತಾಯಿಗಳನ್ನು ಪೋಷಿಸಲೇಬೇಕು.

ಮಾರ್ಕಂಡೇಯಃ

ಭಾರ್ಯಾಯಾಂ ವ್ಯಭಿಚಾರಿಣ್ಯಾಂ ನರಸ್ಯ ತ್ಯಜತೋ ರುಷಾ ।
ಕಥಂ ಧರ್ಮೋಽಪ್ಯಧರ್ಮೋ ವಾ ಭವತೀಹ ಮಹಾಮತೇ ॥೧೮॥

ಮಾರ್ಕಂಡೇಯ– ಎಲೈ ಮಹಾಮತಿಯೇ, ಭಾರ್ಯೆಯು ವ್ಯಭಿಚಾರಿಣಿಯಾದಾಗ ರೋಷದಿಂದ ಅವಳನ್ನು ತ್ಯಜಿಸುವ ಪುರುಷನಿಗೆ ಧರ್ಮಾಧರ್ಮಗಳು ಹೇಗೆ ಉಂಟಾಗುತ್ತವೆ?

ನಾರದಃ

ಅನೃತೇಽಪಿ ಹಿ ಸತ್ಯೇ ವಾ ಯೋ ನಾರೀಂ ದೂಷಿತಾಂ ತ್ಯಜೇತ್ ।
ಅರಕ್ಷಮಾಣಃ ಸ್ವಾಂ ಭಾರ್ಯಾಂ ನರೋ ಭವತಿ ಭ್ರೂಣಹಾ ॥೧೯॥

ನಾರದರು– ಪತ್ನಿಯ ಮೇಲೆ ದೋಷಾರೋಪಣವನ್ನು ಮಾಡಿ, ಆ ಆರೋಪವು ನಿಜವಾಗಿರಲಿ ಅಥವಾ ಸುಳ್ಳಾಗಿರಲಿ ಅಂತಹವಳನ್ನು ರಕ್ಷಿಸದೆ ಪರಿತ್ಯಾಗ ಮಾಡಿದರೆ ಅವನಿಗೆ ಭ್ರೂಣ ಹತ್ಯಾ ದೋಷವು ಬರುತ್ತದೆ.

ಅಪತ್ಯಹೇತೋರ್ಯಾ ನಾರೀ ಭರ್ತಾರಮತಿಲಂಘಯೇತ್ ।
ಲೋಲೇಂದ್ರಿಯೇತಿ ಸಾ ರಕ್ಷ್ಯಾ ನ ಸಂತ್ಯಾಜ್ಯಾ ಕಥಂಚನ ॥೨೦॥

ಮಕ್ಕಳಿಲ್ಲದ ಯಾವ ನಾರಿಯು ಪತಿಯನ್ನು ಬಿಟ್ಟು ಬೇರೆಯವನ ಕಡೆಗೆ ಹೋಗುತ್ತಾಳೆಯೋ ಅವಳನ್ನು ಇಂದ್ರಿಯಲೋಲಳು ಎಂದು ತಿಳಿದು ರಕ್ಷಿಸಬೇಕು ಹೊರತು ಯಾವ ಕಾರಣದಿಂದಲೂ ಪರಿತ್ಯಜಿಸಬಾರದು.

ನದ್ಯಶ್ಚ ನಾರ್ಯಶ್ಚ ಸಮಸ್ವಭಾವಾ
ನೈತಾ ನ ದುಷ್ಯಂತಿ ನರಾವಗಾಢಾಃ ।

ಸ್ರೋತಾಂಸಿ ನದ್ಯೋ ವಹತೇ ನಿಪಾತಂ
ನಾರೀ ರಜೋಭಿಃ ಪುನರೇತಿ ಶೌಚಮ್ ॥೨೧॥

ನದಿಗಳು ಮತ್ತು ನಾರಿಯರು ಒಂದೇ ಸ್ವಭಾವವುಳ್ಳವರು. ಪುರುಷರ ಸಂಬಂಧವಾದರೂ ಅವರು ತಮ್ಮ ಶುದ್ಧಿಯನ್ನು ಕಳೆದುಕೊಳ್ಳುವುದಿಲ್ಲ. ನದಿಗಳು ತಮ್ಮ ಪ್ರವಾಹದಿಂದ ಶುದ್ಧವಾಗುತ್ತವೆ (ಶವಾದಿಗಳು ಬಿದ್ದರೂ ಪ್ರವಾಹದಿಂದ ಶುದ್ಧಿಯನ್ನು ಹೊಂದುತ್ತವೆ). ನಾರಿಯು ಪ್ರತಿ ಮಾಸದ ರಜೋದರ್ಶನದಿಂದ ಶುದ್ಧಿಯನ್ನು ಹೊಂದುತ್ತಾಳೆ.

ಏವಂ ನಾರ್ಯೋ ನ ದುಷ್ಯಂತಿ ವ್ಯಭಿಚಾರೇಽಪಿ ಭರ್ತೃಣಾಮ್ ।
ಮಾಸಿಮಾಸಿ ಭವೇತ್ ತ್ಯಾಗಸ್ತತಃ ಶುದ್ಧಾ ಭವಂತ್ಯುತ ॥೨೨॥

ಹೀಗೆ ನಾರಿಯರು ಪತಿಗಳನ್ನು ಮೀರಿ ವ್ಯಭಿಚಾರವನ್ನು ಮಾಡಿದರೂ ದೂಷಿತರಾಗುವುದಿಲ್ಲ. ಅವರಿಗೆ ಪ್ರತಿ ಮಾಸವೂ ಅವರಲ್ಲಿ ಶೋಣಿತತ್ಯಾಗ ಉಂಟಾಗುತ್ತದೆ. ಅದರಿಂದ ಅವರು ಶುದ್ಧರಾಗುತ್ತಾರೆ.

ಮಾರ್ಕಂಡೇಯಃ

ಕಾನಿ ತೀರ್ಥಾನಿ ಭಗವನ್ ನೃಣಾಂ ದೇಹಾಶ್ರಿತಾನಿ ವೈ ।
ತಾನಿ ವೈ ಶಂಸ ಭಗವನ್ ಯಾಥಾತಥ್ಯೇನ ಪೃಚ್ಛತಃ ॥೨೩॥

ಮಾರ್ಕಂಡೇಯ– ಪೂಜ್ಯರೇ, ಯಾವ ತೀರ್ಥಗಳು ಪುರುಷರ ಹಸ್ತದಲ್ಲಿ ಇರುತ್ತವೆ? ಪೂಜ್ಯರೇ, ನನ್ನ ಪ್ರಶ್ನೆಗೆ ಉತ್ತರವಾಗಿ ಅವನ್ನು ನನಗೆ ಸರಿಯಾಗಿ ತಿಳಿಸಿ.

ಸರ್ವತೀರ್ಥೇಷು ತೀರ್ಥಜ್ಞ ಕಿಂ ತೀರ್ಥಂ ಪರಮಂ ನೃಣಾಮ್ ।
ಯತ್ರೋಪಸ್ಪೃಶ್ಯ ಪೂತಾತ್ಮಾ ನರೋ ಭವತಿ ನಿತ್ಯಶಃ ॥೨೪॥

ಎಲೈ ಸರ್ವಜ್ಞರೇ, ಎಲ್ಲತೀರ್ಥಗಳಲ್ಲಿಯೂ ಪುರುಷರಲ್ಲಿಶ್ರೇಷ್ಠವಾದ ತೀರ್ಥಗಳು ಯಾವುದು? ಎಲ್ಲಿಸ್ಪರ್ಶವನ್ನು ಮಾಡಿ ಮನುಷ್ಯನು ನಿತ್ಯವೂ ಪವಿತ್ರನಾಗುತ್ತಾನೆ?

ನಾರದಃ

ದೇವರ್ಷಿಪಿತೃತೀರ್ಥಾನಿ ಬ್ರಾಹ್ಮಂ ಮಧ್ಯೇಽಥ ವೈಷ್ಣವಮ್ ।
ನೃಣಾಂ ತೀರ್ಥಾನಿ ಪಂಚಾಹುಃ ಪಾಣೌ ಸನ್ನಿಹಿತಾನಿ ವೈ ॥೨೫॥

ನಾರದರು– ದೇವತೀರ್ಥ, ಋಷಿತೀರ್ಥ, ಪಿತೃತೀರ್ಥ, ಬ್ರಹ್ಮತೀರ್ಥ ಮತ್ತು ವಿಷ್ಣುತೀರ್ಥ - ಈ ಐದು ತೀರ್ಥಗಳು ಪುರುಷನ ಹಸ್ತದಲ್ಲಿ ಸನ್ನಿಹಿತವಾಗಿರುತ್ತವೆ ಎಂದು ಜ್ಞಾನಿಗಳು ಹೇಳುತ್ತಾರೆ.

ಆದ್ಯತೀರ್ಥಂ ತು ತೀರ್ಥಾನಾಂ ವೈಷ್ಣವೋ ಭಾಗ ಉಚ್ಯತೇ ।
ಯತ್ರೋಪಸ್ಪೃಶ್ಯ ವರ್ಣಾನಾಂ ಚತುರ್ಣಾಂ ವರ್ಧತೇ ಕುಲಮ್ ।
ಪಿತೃದೈವತಕಾರ್ಯಾಣಿ ವರ್ಧಂತೇ ಪ್ರೇತ್ಯ ಚೇಹ ಚ ॥೨೬॥

ಅವುಗಳಲ್ಲಿ ಶ್ರೇಷ್ಠವಾದ ತೀರ್ಥವೆಂದರೆ ಹಸ್ತಮಧ್ಯದಲ್ಲಿರುವ ವಿಷ್ಣುತೀರ್ಥ. ಅಲ್ಲಿ ಸ್ಪರ್ಶವನ್ನು ಮಾಡಿದರೆ ನಾಲ್ಕು ವರ್ಣದವರಿಗೂ ಕುಲವೃದ್ಧಿಯಾಗುತ್ತದೆ. ದೇವ-ಪಿತೃಕಾರ್ಯಗಳು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತವೆ.

ಮಾರ್ಕಂಡೇಯಃ

ನರಾಣಾಂ ಕಾಮವೃತ್ತಾನಾಂ ಯಾ ನಾರ್ಯೋ ನಿರವಗ್ರಹಾಃ ।
ಯಾಸಾಮಭಿಗ್ರಹೋ ನಾಸ್ತಿ ತಾ ಮೇ ಕಥಯ ನಾರದ ॥೨೭॥

ಮಾರ್ಕಂಡೇಯ– ಕಾಮಾಸಕ್ತರಾದ ಪುರುಷರು ಯಾವ ನಾರಿಯರ ಬಳಿಗೆ ಹೋದರೆ ನಿರ್ಬಂಧವಿಲ್ಲ? ಹಾಗೆಯೇ ಯಾವ ಸ್ತ್ರೀಯರಿಗೆ ಪುರುಷರ ಬಳಿಗೆ ಹೋದರೆ ನಿರ್ಬಂಧವಿಲ್ಲವೆಂದು ತಿಳಿಸಿ.

ನಾರದಃ

ವಾಗುರ್ವೇಶ್ಯಾ ನಟೀ ಗೋಪೀ ತಾಂತುಕೀ ತುನ್ನವಾಯಿಕೀ ।
ನಾರೀ ಕಿರಾತೀ ಶಬರೀ ನರ್ತಕೀ ಚಾನವಗ್ರಹಾ ॥೨೮॥

ನಾರದರು– ವ್ಯಭಿಚಾರಿಣಿ, ಸ್ವತಂತ್ರಳಾದವಳು, ಗೋಪಾಲಕಿ, ನೇಯ್ಗೆಯವಳು, ಜಿಪ್ಪಿಗರವಳು, ಕಿರಾತ, ಶಬರ ಮೊದಲಾದ ಮ್ಲೇಚ್ಛಜಾತಿಗೆ ಸೇರಿದವಳು, ನರ್ತಕಿಯಾದವಳು- ಇವರ ಬಳಿ ಹೋಗಲು ನಿರ್ಬಂಧವಿಲ್ಲ.

ಮಾರ್ಕಂಡೇಯಃ

ಏತಾಸು ಜಾತಾ ನಾರೀಷು ಸರ್ವವರ್ಣೇಷು ಯೇ ಸುತಾಃ ।
ತೇಷು ಕೇ ಬಂಧುದಾಯಾದಾ ಭವಂತಿ ಋಷಿಸತ್ತಮ ॥೨೯॥

ಮಾರ್ಕಂಡೇಯ– ಎಲೈ ಋಷಿಶ್ರೇಷ್ಠರೇ, ಇಂತಹ ಸ್ತ್ರೀಯರಲ್ಲಿ ನಾಲ್ಕು ವರ್ಣದವರಿಗೆ ಜನಿಸಿದ ಪುತ್ರರು ಯಾರಿಗೆ ಬಂಧು-ದಾಯಾದಿಗಳಾಗುತ್ತಾರೆ? (ಪುತ್ರರಾಗುತ್ತಾರೆ)

ನಾರದಃ

ಯ ಏತಾಃ ಪರಿಗೃಹ್ಣಂತಿ ತೇಷಾಮೇವ ಹಿ ತೇ ಸುತಾಃ ।
ಸರ್ವತ್ರ ತು ಪ್ರವೃತ್ತಾಸು ಬೀಜಂ ನಶ್ಯತಿ ದೇಹಿನಾಮ್ ॥೩೦॥

ನಾರದರು– ಯಾವ ಪುರುಷರು ಅಂತಹ ಸ್ತ್ರೀಯರನ್ನು ಸ್ವೀಕರಿಸುತ್ತಾರೆಯೋ ಅವರಿಗೇ ಅವರು ಪುತ್ರರಾಗುತ್ತಾರೆ. ಪುರುಷರು ಮನಸ್ಸಿಗೆ ಬಂದಂತೆ ಎಲ್ಲ ಪುರುಷರ ಜೊತೆಯಲ್ಲೂ ಸಂಬಂಧವನ್ನು ಮಾಡುವ ಸ್ತ್ರೀ ಬಳಿಗೆ ಹೋದರೆ ಅವನ ಬೀಜವು ನಾಶವನ್ನು ಹೊಂದುತ್ತದೆ.

ಮಾರ್ಕಂಡೇಯಃ

ಸರ್ವಸ್ತ್ರೀಷು ಪ್ರವೃತ್ತಾಸ್ತು ಸಾಧುವೇದವಿವರ್ಜಿತಾಃ ।
ಮಾನವಾಃ ಕಾಂಡಪೃಷ್ಠಾಶ್ಚ ವೇದಮಂತ್ರಬಹಿಷ್ಕೃತಾಃ ।
ನಿಯುಕ್ತಾ ಹವ್ಯಕವ್ಯೇಷು ತೇಷಾಂ ದತ್ತಂ ಕಥಂ ಭವೇತ್ ॥೩೧॥

ಮಾರ್ಕಂಡೇಯ– ಸರ್ವಸ್ತ್ರೀಯರಲ್ಲಿ ಪ್ರವೃತ್ತರಾಗುವವರು, ವೇದಬಾಹಿರರಾದವರು, ಆಯುಧಧಾರಿಗಳಾಗಿ ವೇದಮಂತ್ರಗಳಿಂದ ಬಹಿಷ್ಕೃತರಾದವರು ಹವ್ಯ-ಕವ್ಯಗಳಲ್ಲಿ ಆಹ್ವಾನಿಸಲ್ಪಟ್ಟರೆ ಅವರಿಗೆ ದಾನ ಮಾಡಲ್ಪಟ್ಟುದು ಏನಾಗುತ್ತದೆ?

ನಾರದಃ

ನಾರ್ಹಂತಿ ಹವ್ಯಕವ್ಯಾನಿ ಸಾವಿತ್ರೀವರ್ಜಿತಾ ದ್ವಿಜಾಃ ।
ವ್ರಾತ್ಯೇಷ್ವನ್ನಪ್ರದಾನಂ ತದ್ ಯಥಾ ಶೂದ್ರೇಷು ವೈ ತಥಾ ॥೩೨॥

ನಾರದರು– ಗಾಯತ್ರೀಮಂತ್ರವನ್ನು ಜಪ ಮಾಡದ ದ್ವಿಜರು ಹವ್ಯ-ಕವ್ಯಗಳಿಗೆ ಅರ್ಹರಾಗುವುದಿಲ್ಲ. ವ್ರತಹೀನರಲ್ಲಿ ನೀಡಿದ ಅನ್ನವು ಶೂದ್ರರಿಗೆ ನೀಡಿದ ಅನ್ನದಂತೆ ಹವ್ಯ-ಕವ್ಯಗಳಲ್ಲಿ ವ್ಯರ್ಥವಾಗುತ್ತದೆ.

ಮಾರ್ಕಂಡೇಯಃ

ಧರ್ಮೇಷ್ವಧಿಕೃತಾನಾಂ ತು ನರಾಣಾಂ ಮುಹ್ಯತೇ ಮನಃ ।
ಕಥಂ ನ ವಿಘ್ನೋ ಭವತಿ ಏತದಿಚ್ಛಾಮಿ ವೇದಿತುಮ್ ॥೩೩॥

ಮಾರ್ಕಂಡೇಯ– ಧರ್ಮಗಳನ್ನು ಆಚರಿಸಲು ಹೊರಟ ಮನುಷ್ಯರ ಮನಸ್ಸಿನಲ್ಲಿ ಧರ್ಮಾಚರಣೆಗೆ ಹೇಗೆ ವಿಘ್ನವು ಬರದೇ ಇದ್ದೀತು ಎಂಬ ಶಂಕೆ ಉಂಟಾಗುತ್ತದೆ. ನಾನು ಅದನ್ನು ತಿಳಿಯಲು ಬಯಸುತ್ತೇನೆ.

ನಾರದಃ

ಅರ್ಥಾಶ್ಚ ನಾರ್ಯಶ್ಚ ಸಮಾನಮೇತತ್
ಶ್ರೇಯಾಂಸಿ ಪುಂಸಾಮಿಹ ಮೋಹಯಂತಿ ।
ರತಿಪ್ರಮೋದಾತ್ ಪ್ರಮದಾ ಹರಂತಿ
ಭೋಗೈರ್ಧನಂ ಚಾಪ್ಯುಪಹಂತಿ ಧರ್ಮಾನ್ ॥೩೪॥

ನಾರದರು– ಧನ ಮತ್ತು ನಾರಿಯರು ಇಬ್ಬರೂ ಸಮಾನರು. ಅವರು ಪುರುಷರಿಗೆ ಶ್ರೇಯಸ್ಸನ್ನೂ, ಗೌರವವನ್ನೂ ಉಂಟುಮಾಡುವವರು. ರತಿಯನ್ನು ಕೊಟ್ಟು ನಾರಿಯರು ಪುರುಷರನ್ನು ಧರ್ಮದಿಂದ ದೂರವಿಡುತ್ತಾರೆ. ಧನವು ಭೋಗವನ್ನು ಕೊಟ್ಟು ಪುರುಷನನ್ನು ಧರ್ಮದಿಂದ ದೂರ ಎಳೆಯುತ್ತದೆ.

ಹವ್ಯಂ ಕವ್ಯಂ ಚ ಧರ್ಮಾತ್ಮಾ ಸರ್ವಂ ತಚ್ಛ್ರೋತ್ರಿಯೋऽರ್ಹತಿ ।
ದತ್ತಂ ಹಿ ಶ್ರೋತ್ರಿಯೇ ಸಾಧೌ ಜ್ವಲಿತಾಗ್ನಾವಿವಾಹುತಿಃ ॥೩೫॥

ಹವ್ಯ-ಕವ್ಯಗಳೆಲ್ಲದಕ್ಕೂ ಧರ್ಮಾತ್ಮನಾದ ಶ್ರೋತ್ರಿಯನೇ ಅರ್ಹನಾದವನು. ಸಜ್ಜನನಾದ ಶ್ರೋತ್ರಿಯನಲ್ಲಿ ಕೊಟ್ಟ ದಾನವು ಜ್ವಲಿಸುವ ಅಗ್ನಿಯಲ್ಲಿ ಕೊಟ್ಟ ಆಹುತಿಯಂತೆ.

ಮಾರ್ಕಂಡೇಯಃ

ಶ್ರೋತ್ರಿಯಾಣಾಂ ಕುಲೇ ಜಾತಾ ವೇದಾರ್ಥವಿದಿತಾತ್ಮನಾಮ್ ।
ಹಿತ್ವಾ ಕಸ್ಮಾತ್ತ್ರಯೀಂ ವಿದ್ಯಾಂ ವಾರ್ತಾಂ ವೃತ್ತಿಮುಪಾಶ್ರಿತಾಃ ॥೩೬॥

ಮಾರ್ಕಂಡೇಯ– ವೇದಾರ್ಥವನ್ನು ತಿಳಿದ ಶ್ರೋತ್ರಿಯರ ಕುಲದಲ್ಲಿ ಜನಿಸಿದವರು ಏತಕ್ಕಾಗಿ ವೇದವಿದ್ಯೆಯ ಮಾರ್ಗವನ್ನು ಬಿಟ್ಟು ವ್ಯಾಪಾರಾದಿ ಜೀವನೋಪಾಯಗಳನ್ನು ಆಶ್ರಯಿಸುತ್ತಾರೆ?

ನಾರದಃ

ಚಾತುರ್ವರ್ಣ್ಯಂ ಪುರಾ ನ್ಯಸ್ತಂ ಸುವಿದ್ವತ್ಸು ದ್ವಿಜಾತಿಷು ।
ತಸ್ಮಾದ್ ವರ್ಣ್ಯೈಃ ಸಂವಿಭಜ್ಯಾ ವೃತ್ತಿಃ ಸಂಕರವರ್ಜಿತಾ ॥೩೭॥

ನಾರದರು– ಒಳ್ಳೆಯ ಜ್ಞಾನವನ್ನು ಹೊಂದಿದ ದ್ವಿಜಾತಿಗಳಲ್ಲಿ ಹಿಂದೆ ನಾಲ್ಕು ವರ್ಣಗಳೂ ಒಪ್ಪಿಸಲ್ಪಟ್ಟಿದ್ದವು. ಆದ್ದರಿಂದ ಆ ವರ್ಣದವರಲ್ಲಿ ಪರಸ್ಪರ ಸಾಂಕರ್ಯ ಉಂಟಾಗದಂತೆ ಜೀವನೋಪಾಯಗಳನ್ನು ವಿಭಾಗಿಸಬೇಕು.

ಯೇ ಚಾನ್ಯೇ ಶ್ರೋತ್ರಿಯಾ ಜಾತಾಃ ಸಂಸ್ಕೃತಾಃ ಪುತ್ರಗೃಧ್ನುಭಿಃ ।
ಪೂರ್ವನಿರ್ವಾಣನಿವೃತ್ತಾಂ ಜಾತಾಂ ವೃತ್ತಿಮುಪಾಶ್ರಿತಾಃ ॥೩೮॥

ಪುತ್ರರನ್ನು ಬಯಸುವ ಶ್ರೋತ್ರಿಯರಾದ ಪುರುಷರು ಪುತ್ರರನ್ನು ಪಡೆದು ಅವನಿಗೆ ಎಲ್ಲ ಸಂಸ್ಕಾರವನ್ನು ಮಾಡಿದರೆ ಆ ಪುತ್ರರು ತಮ್ಮ ಸಂಸ್ಕಾರಕ್ಕೆ ಅನುಗುಣವಾಗಿ ಪೂರ್ವಿಕರು ಅನುಸರಿಸಿದ ವೃತ್ತಿಯನ್ನೇ ಅನುಸರಿಸುತ್ತಾರೆ.

ಮಾರ್ಕಂಡೇಯಃ

ಅಸಂಸ್ಕೃತಾಃ ಶ್ರೋತ್ರಿಯಜಾಃ ಸಂಸ್ಕೃತಾ ಜ್ಞಾನಿಜಾಃ ಕಥಮ್ ॥೩೯॥

ಮಾರ್ಕಂಡೇಯ– ಅಸಂಸ್ಕೃತರಾದ ಶ್ರೋತ್ರಿಯ ಪುತ್ರರು ಸಂಸ್ಕಾರ ಹೊಂದಿದ ಜ್ಞಾನಿಗಳ ಪುತ್ರರು ಎಂದು ಹೇಗಾಗುತ್ತದೆ?

ನಾರದಃ

ಅಸಂಸ್ಕಾರೋ ವೈದಿಕಶ್ಚ ಸ ಮಾನ್ಯಃ ಶ್ರೋತ್ರಿಯಾತ್ಮಜಃ ।
ಶುದ್ಧಾನ್ವಯಃ ಶ್ರೋತ್ರಿಯಸ್ತು ಸವಿದ್ವದ್ಭಿಃ ಸಮೋऽನ್ಯಥಾ ॥೪೦॥

ಮಾರ್ಕಂಡೇಯ– ಸಂಸ್ಕಾರವಿಲ್ಲದ, ವೈದಿಕನಾದ ಶ್ರೋತ್ರಿಯಪುತ್ರನು ಮಾನ್ಯನಾಗುತ್ತಾನೆ. ವಂಶಶುದ್ಧಿಯನ್ನು ಹೊಂದಿದ (ಸಂಸ್ಕಾರವನ್ನು ಹೊಂದಿದ) ಶ್ರೋತ್ರಿಯನು ಮಾತ್ರ ಎಲ್ಲ ವಿದ್ವಾಂಸರಿಗೂ ಸಮಾನನಾಗುತ್ತಾನೆ.

ಅನಧೀಯಾನಪುತ್ರಾಶ್ಚ ವೇದಸಂಸ್ಕಾರವರ್ಜಿತಾಃ ।
ತಸ್ಮಾತ್ ತೇ ವೇದವಿಜ್ಞಾಽಪಿ ವಿಪ್ರಾಃ ಶ್ರುತಿನಿಕಾರಿಣಃ ॥೪೧॥

ಅಧ್ಯಯನವನ್ನು ಮಾಡದೆ ಪುತ್ರರನ್ನು ಹೊಂದಿದವರು, ವೇದಸಂಸ್ಕಾರ ರಹಿತರಾದವರು, ಅಂತಹ ಬ್ರಾಹ್ಮಣರು ವೇದವನ್ನು ತಿಳಿದವರಾದರೂ ಅವರು ವೇದಕ್ಕೆ ಅಪಚಾರವನ್ನು ಮಾಡಿದವರು.

ಬ್ರಹ್ಮರಾಶೌ ಪುರಾ ಸೃಷ್ಟಾ ವೇದಸಂಸ್ಕಾರಸಂಸ್ಕೃತಾಃ ।
ತಸ್ಮಾತ್ ತೇಷ್ವೇವ ತೇ ಜಾತಾಃ ಸಾಧವಃ ಕುಲಧಾರಿಣಃ ॥೪೨॥

ಹಿಂದೆ ವೇದಸಂಸ್ಕಾರದಿಂದ ಕೂಡಿದವರು ಬ್ರಾಹ್ಮಣಸಮೂಹದಲ್ಲಿದ್ದರು. ಆದ್ದರಿಂದ ಅಂತಹವರಿಂದ ಜನಿಸಿದ ಸಜ್ಜನರು ವೇದಾಧಿಕಾರಿಗಳೂ, ಕುಲಪ್ರವರ್ತಕರೂ ಆಗುವರು.

ಮಾರ್ಕಂಡೇಯಃ

ಸ್ವಯಂ ಕ್ರೀತಾಸು ಪ್ರೇಷ್ಯಾಸು ಪ್ರಸೂಯಂತೇ ತು ಯೇ ನರಾಃ ।
ಕಸ್ಯ ನಾರ್ಯಃ ಸುತಾಶ್ಚೈವ ಭವಂತಿ ಋಷಿಸತ್ತಮ ॥೪೩॥

ಮಾರ್ಕಂಡೇಯ– ತಾನೇ ಕ್ರಯಕ್ಕೆ ಪಡೆದವಳಲ್ಲಿ ಅಥವಾ ದಾಸಿಯಲ್ಲಿ ಪುರುಷರು ಮಕ್ಕಳನ್ನು ಪಡೆಯುತ್ತಾರೆ. ಎಲೈ ಋಷಿಶ್ರೇಷ್ಠರೇ, ಅಂತಹ ನಾರಿಯರು ಮತ್ತು ಪುತ್ರರು ಯಾರಿಗೆ ಸೇರುತ್ತಾರೆ?

ನಾರದಃ

ಸ್ವದಾಸ್ಯಾಂ ಯೋ ನರೋ ಮೋಹಾತ್ ಪ್ರಸೂಯೇತ ಸ ಪಾಪಕೃತ್ ।
ಇಹಾಪಿ ನಿಂದಿತಃ ಪ್ರೇತ್ಯ ಅಪತ್ಯಂ ಪ್ರೇಷ್ಯತಾಂ ನಯೇತ್ ॥೪೪॥

ನಾರದರು– ತನ್ನ ದಾಸಿಯಲ್ಲಿ ಯಾವನು ಪುತ್ರೋತ್ಪತ್ತಿಯನ್ನು ಮಾಡುವನೋ ಅವನು ಪಾಪವನ್ನು ಆಚರಿಸುತ್ತಾನೆ. ಅವನು ಇಲ್ಲಿ ನಿಂದಿತನಾಗುತ್ತಾನೆ ಮತ್ತು ಮರಣವನ್ನು ಹೊಂದಿದ ಮೇಲೆ ತನ್ನ ಪುತ್ರನನ್ನೂ ದಾಸನನ್ನಾಗಿಯೇ ಮಾಡುತ್ತಾನೆ.

ಸಾ ತಸ್ಯ ಭಾರ್ಯಾ ಪುತ್ರಾ ಯೇ ಹವ್ಯಕವ್ಯಪ್ರದಾಸ್ತು ತೇ ।
ತಸ್ಯಾ ಯೇ ಬಾಂಧವಾಃ ಕೇಚಿದ್ವಿಷಕ್ತಾಃ ಪ್ರೇಷ್ಯತಾಂ ಗತಾಃ ।
ಸರ್ವೇ ತಸ್ಯಾಸ್ತು ಸಂಬಂಧಾ ಮುಚ್ಯಂತೇ ಪ್ರೇಷ್ಯಕರ್ಮಸು ॥೪೫॥

ಅವನ ಭಾರ್ಯೆ, ಹವ್ಯ-ಕವ್ಯಗಳನ್ನು ಕೊಡುವ ಅವನ ಪುತ್ರರು, ಅವನ ಬಾಂಧವರು ಮತ್ತು ಅವನಲ್ಲಿ ಆಸಕ್ತರಾದ ಎಲ್ಲರೂ ದಾಸರಾಗುತ್ತಾರೆ. ಅವನ ಸಂಬಂಧಿಕರೆಲ್ಲರೂ ದಾಸಕರ್ಮಗಳಲ್ಲಿಯೇ ನಿಯೋಗಿಸಲ್ಪಡುತ್ತಾರೆ.

ಏತತ್ ತೇ ಕಥಿತಂ ಸರ್ವಂ ಯದಭಿವ್ಯಾಹೃತಂ ತ್ವಯಾ ।
ಅಥವಾ ಸಂಶಯಃ ಕಶ್ಚಿದ್ ಭೂಯಃ ಸಂಪ್ರಷ್ಟುಮರ್ಹಸಿ ॥೪೬॥

ನೀನು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರವನ್ನು ಹೇಳಿದ್ದೇನೆ. ಇನ್ನೂ ಏನಾದರೂ ಸಂಶಯವಿದ್ದರೆ ಪ್ರಶ್ನೆಯನ್ನು ಮಾಡಬಹುದು.

ಮಾರ್ಕಂಡೇಯಃ

ಅಮಿಥ್ಯಾದರ್ಶನೋ ಲೋಕೇ ನಾರದಃ ಸರ್ವಕೋವಿದಃ ।
ಪ್ರತ್ಯಕ್ಷದರ್ಶೀ ಲೋಕಾನಾಂ ಸ್ವಯಂಭೂರಿವ ಸತ್ತಮಃ ॥೪೭॥

ಮಾರ್ಕಂಡೇಯ– ಲೋಕದಲ್ಲಿ ನಾರದರು ಭ್ರಾಂತಿ ಇಲ್ಲದವರು ಮತ್ತು ಸರ್ವವನ್ನೂ ತಿಳಿದವರು. ಲೋಕಗಳಲ್ಲಿ ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿದವರು. ಬ್ರಹ್ಮದೇವರಂತೆ ಅತ್ಯಂತ ಶ್ರೇಷ್ಠರಾದವರು.

ಭೀಷ್ಮಃ

ಇತಿ ಸಂಭಾಷ್ಯ ಋಷಿಭಿರ್ಮಾರ್ಕಂಡೇಯೋ ಮಹಾತಪಾಃ ।
ನಾರದಂ ಚಾಪಿ ಸತ್ಕೃತ್ಯ ತೇನ ಚೈವಾಭಿಸತ್ಕೃತಃ ।
ಆಮಂತ್ರಯಿತ್ವಾ ಋಷಿಭಿಃ ಪ್ರಯಯಾವಾಶ್ರಮಂ ಮುನಿಃ ॥೪೮॥

ಋಷಯಶ್ಚಾಪಿ ತೀರ್ಥಾನಾಂ ಪರಿಚರ್ಯಾಂ ಪ್ರಚಕ್ರಮುಃ ॥೪೯॥

ಭೀಷ್ಮ– ಹೀಗೆ ಋಷಿಗಳ ಜೊತೆಯಲ್ಲಿ ಮಹಾತಪಸ್ವಿಗಳಾದ ಮಾರ್ಕಂಡೇಯರು ನಾರದರ ಜೊತೆಯಲ್ಲಿ ಮಾತನಾಡಿ, ಅವರನ್ನು ಸತ್ಕರಿಸಿ, ಅವರಿಂದ ಸತ್ಕರಿಸಲ್ಪಟ್ಟು,

ಅವರ ಅನುಮತಿಯನ್ನು ಪಡೆದು ಋಷಿಗಳ ಜೊತೆಯಲ್ಲಿ ತಮ್ಮ ಆಶ್ರಮಕ್ಕೆ ತೆರಳಿದರು. ಋಷಿಗಳೂ ಸಹ ತಮ್ಮ ತೀರ್ಥಯಾತ್ರೆಯನ್ನು ಮುಂದುವರಿಸಿದರು.

ಸುಕ್ಷೇತ್ರಬೀಜಸಂಸ್ಕಾರವಿಶುದ್ಧೋ ಬ್ರಹ್ಮಚರ್ಯಾಯಾ ।
ನಿತ್ಯನೈಮಿತ್ತಿಕಾತ್ ಸ್ನಾತೋ ಮನಃಶುದ್ಧ್ಯಾ ಚ ಶುದ್ಧ್ಯತಿ ॥೫೦॥

ಒಳ್ಳೆಯ ಕ್ಷೇತ್ರ, ಒಳ್ಳೆಯ ಬೀಜ ಮತ್ತು ಒಳ್ಳೆಯ ಸಂಸ್ಕಾರದಿಂದಲೂ ಮತ್ತು ಬ್ರಹ್ಮಚರ್ಯದಿಂದಲೂ, ನಿತ್ಯನೈಮಿತ್ತಿಕ ಕರ್ಮಾಚರಣೆಗಳಿಂದಲೂ, ಸ್ನಾನದಿಂದಲೂ, ಮನಶ್ಶುದ್ಧಿಯಿಂದಲೂ ಪುರುಷನು ಶುದ್ಧನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ನಾರದ-ಮಾರ್ಕಂಡೇಯಸಂವಾದೋ
ನಾಮ ದ್ವಿಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ಮೂರನೆಯ ಅಧ್ಯಾಯ

ದಾನಗಳಲ್ಲಿ ಪಾತ್ರಪರೀಕ್ಷೆ

ಯುಧಿಷ್ಠಿರಃ

ಕಿಮಾಹುರ್ಭರತಶ್ರೇಷ್ಠ ಪಾತ್ರಂ ವಿಪ್ರಾಃ ಸನಾತನಮ್ ।
ಬ್ರಾಹ್ಮಣಂ ಲಿಂಗಿನಂ ಚೈವ ಬ್ರಾಹ್ಮಣಂ ವಾಪ್ಯಲಿಂಗಿನಮ್ ॥೧॥

ಯುಧಿಷ್ಠಿರ– ಎಲೈ ಭರತಶ್ರೇಷ್ಠನೇ, ವೇದಸಮ್ಮತನಾದ ಪಾತ್ರವು ಯಾವುದೆಂದು ಬ್ರಾಹ್ಮಣರು ಹೇಳುತ್ತಾರೆ? ಆಶ್ರಮ ಚಿಹ್ನೆಯನ್ನು ಧರಿಸಿದ ಬ್ರಹ್ಮಚಾರಿ, ಗೃಹಸ್ಥರೋ? ಅಥವಾ ಆಶ್ರಮ ಚಿಹ್ನೆಯನ್ನು ಧರಿಸದ ಸಂನ್ಯಾಸಿ ಬ್ರಾಹ್ಮಣನೋ?

ಭೀಷ್ಮಃ

ಸ್ವವೃತ್ತಿಮಭಿಪನ್ನಾಯ ಲಿಂಗಿನೇ ವೇತರಾಯ ವಾ ।
ದೇಯಮಾಹುರ್ಮಹಾರಾಜ ಉಭಾವೇತೌ ತಪಸ್ವಿನೌ ॥೨॥

ಭೀಷ್ಮ– ಎಲೈ ಮಹಾರಾಜನೇ, ತನಗೆ ಉಚಿತವಾದ ಧರ್ಮವನ್ನು ಆಚರಿಸುವ ಆಶ್ರಮ ಚಿಹ್ನೆಯನ್ನು ಧರಿಸಿದವನಿಗೆ ಅಥವಾ ಇತರರಿಗೆ ದಾನವನ್ನು ಕೊಡಬೇಕೆಂದು ಹೇಳುತ್ತಾರೆ. ಅವರಿಬ್ಬರೂ ತಪಸ್ವಿಗಳು.

ಯುಧಿಷ್ಠಿರಃ

ಶ್ರದ್ಧಯಾ ಪರಯಾ ಪೂತೋ ಯಃ ಪ್ರಯಚ್ಛೇದ್ ದ್ವಿಜಾತಯೇ ।
ಹವ್ಯಂ ಕವ್ಯಂ ತಥಾ ದಾನಂ ಕೋ ದೋಷಃ ಸ್ಯಾತ್ ಪಿತಾಮಹ ॥೩॥

ಯುಧಿಷ್ಠಿರ– ಎಲೈ ಪಿತಾಮಹನೇ, ಬಹಳ ಶ್ರದ್ಧೆಯಿಂದ ಕೂಡಿದವನಾಗಿ (ಮತ್ತು ಬಹಳ ಆಚಾರವಿಲ್ಲದೆ) ಬ್ರಾಹ್ಮಣನಿಗೆ ಹವ್ಯಕವ್ಯವನ್ನು ಕೊಡುವವನಿಗೆ ಯಾವ ದೋಷ ಉಂಟಾಗುತ್ತದೆ?

ಭೀಷ್ಮಃ

ಶ್ರದ್ಧಾಪೂತೋ ನರಸ್ತಾತ ದುರ್ದಾಂತೋಽಪಿ ನ ಸಂಶಯಃ ।
ಪೂತೋ ಭವತಿ ಸರ್ವತ್ರ ಕಿಂ ಪುನಸ್ತ್ವಂ ಮಹೀಪತೇ ॥೪॥

ಭೀಷ್ಮ– ಪ್ರೀತಿಪಾತ್ರನೇ, ಶ್ರದ್ಧೆಯಿಂದ ಪವಿತ್ರನಾದ ಮನುಷ್ಯನು ಒಳ್ಳೆಯ ಇಂದ್ರಿಯ ನಿಗ್ರಹವನ್ನು ಹೊಂದಿರದಿದ್ದರೂ ಅವನು ಅಂತಹ ದಾನದಿಂದ ಯಾವಾಗಲೂ ಪವಿತ್ರನಾಗುತ್ತಾನೆ. ಎಲೈ ರಾಜನೇ, ಇನ್ನು ನಿನ್ನ ವಿಷಯದಲ್ಲಿ ಹೇಳುವುದೇನು?

ಯುಧಿಷ್ಠಿರಃ

ನ ಬ್ರಾಹ್ಮಣಂ ಪರೀಕ್ಷೇತ ದೈವೇಷು ಸತತಂ ನರಃ ।
ಕವ್ಯಪ್ರದಾನೇ ತು ಬುಧಾಃ ಪರೀಕ್ಷ್ಯಂ ಬ್ರಾಹ್ಮಣಂ ವಿದುಃ ॥೫॥

ಯುಧಿಷ್ಠಿರ– ಮನುಷ್ಯನು ದೈವಕಾರ್ಯಗಳಲ್ಲಿ ದಾನವನ್ನು ಮಾಡುವಾಗ ಬ್ರಾಹ್ಮಣನನ್ನು ಪರೀಕ್ಷೆ ಮಾಡಬಾರದು. ಕವ್ಯಪ್ರದಾನವನ್ನು ಮಾಡುವಾಗ ಬ್ರಾಹ್ಮಣನನ್ನು ಪರೀಕ್ಷೆ ಮಾಡಬೇಕೆಂದು ಜ್ಞಾನಿಗಳು ಹೇಳುತ್ತಾರೆ.

ಭೀಷ್ಮಃ

ನ ಬ್ರಾಹ್ಮಣಃ ಸಾಧಯತೇ ಹವ್ಯಂ ದೈವಾತ್ ಪ್ರಸಿಧ್ಯತಿ ।
ದೇವಪ್ರಸಾದಾದಿಜ್ಯಂತೇ ಯಜಮಾನಾ ನ ಸಂಶಯಃ ॥೬॥

ಭೀಷ್ಮ– ಅದು ನಿಜ. ದೇವತೆಗಳಿಗೆ ಕೊಡುವ ಹವ್ಯವು ದೇವತೆಗಳಿಂದಲೇ ಸಿದ್ಧಿಸುತ್ತದೆ. ಅದನ್ನು ಬ್ರಾಹ್ಮಣನು ಸಾಧಿಸುವುದಿಲ್ಲ. ಯಜಮಾನರು ದೇವತಾನುಗ್ರಹದಿಂದಲೇ ಯಾಗವನ್ನು ಮಾಡುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಬ್ರಾಹ್ಮಣಾ ಭರತಶ್ರೇಷ್ಠ ಸತತಂ ಬ್ರಹ್ಮವಾದಿನಃ ।
ಮಾರ್ಕಂಡೇಯಃ ಪುರಾ ಪ್ರಾಹ ಇಹ ಲೋಕೇಷು ಬುದ್ಧಿಮಾನ್ ॥೭॥

ಎಲೈ ಭರತಶ್ರೇಷ್ಠನೇ, ಮೇಧಾವಿಗಳಾದ ಮಾರ್ಕಂಡೇಯರು ಹಿಂದೆ ಈ ಲೋಕದಲ್ಲಿ ಬ್ರಾಹ್ಮಣರು ಯಾವಾಗಲೂ ಬ್ರಹ್ಮವಾದಿಗಳಾಗಿರುತ್ತಾರೆ ಎಂದು ಹೇಳಿದ್ದಾರೆ.

ಯುಧಿಷ್ಠಿರಃ

ಅಪೂರ್ವೋಽಪ್ಯಥ ವಾ ವಿದ್ವಾನ್ ಸಂಬಂಧೀ ವಾಽಥ ಯೋ ಭವೇತ್ ।
ತಪಸ್ವೀ ಯಜ್ಞಶೀಲೋ ವಾ ಕಥಂ ಪಾತ್ರಂ ಭವೇತ್ತು ಸಃ ॥೮॥

ಯುಧಿಷ್ಠಿರ– ಅಪರಿಚಿತನಾದ ವಿದ್ವಾಂಸ ಅಥವಾ ತಪಸ್ವಿಯೂ, ಯಜ್ಞಶೀಲನೂ ಆದ ಸಂಬಂಧಿ ಇವರಲ್ಲಿ ಯಾರು ಒಳ್ಳೆಯ ಪಾತ್ರರಾಗುತ್ತಾರೆ.

ಭೀಷ್ಮಃ

ಕುಲೀನಃ ಕರ್ಮಕೃದ್ ವೈದ್ಯಸ್ತಥಾ ಚಾಪ್ಯಾನೃಶಂಸ್ಯವಾನ್ ।
ಹ್ರೀಮಾನೃಜುಃ ಸತ್ಯವಾದೀ ಪಾತ್ರಂ ಪೂರ್ವೇ ಚ ತೇ ತ್ರಯಃ ॥೯॥

ಭೀಷ್ಮ– ಸತ್ಕುಲಪ್ರಸೂತನಾಗಿ, ವೇದಜ್ಞಾನವನ್ನು ಹೊಂದಿ, ಸದ್ಧರ್ಮಾಚರಣೆಯನ್ನು ಮಾಡುವವನು, ದಯಾಪರನಾದವನು, ಆರ್ಜವವನ್ನೂ ನಾಚಿಕೆಯನ್ನೂ ಹೊಂದಿ ಸತ್ಯವನ್ನು ನುಡಿಯುವವನು-ಈ ಮೂವರು ಪಾತ್ರರೆನಿಸುವರು.

ತತ್ರೇದಂ ಶೃಣು ಮೇ ಪಾರ್ಥ ಚತುರ್ಣಾಂ ತೇಜಸಾಂ ಮತಮ್ ।
ಪೃಥಿವ್ಯಾಃ ಕಾಶ್ಯಪಸ್ಯಾಗ್ನೇರ್ಮಾರ್ಕಂಡೇಯಸ್ಯ ಚೈವ ಹಿ ॥೧೦॥

ಎಲೈ ಪಾರ್ಥನೇ, ಆ ವಿಷಯದಲ್ಲಿ ತೇಜಸ್ವಿಗಳಾದ ಪೃಥಿವೀ, ಕಾಶ್ಯಪರು, ಅಗ್ನಿ ಮತ್ತು ಮಾರ್ಕಂಡೇಯರಿಗೆ ಸಮ್ಮತವಾದ ಅಭಿಪ್ರಾಯವನ್ನು ಕೇಳು.

ಪೃಥಿವೀ

ಯಥಾ ಮಹಾರ್ಣವೇ ಕ್ಷಿಪ್ತಃ ಕ್ಷಿಪ್ರಂ ನೇಷ್ಟಃ ವಿನಶ್ಯತಿ ।
ತಥಾ ದುಶ್ಚರಿತಂ ಸರ್ವಂ ತ್ರಯ್ಯಾವೃತ್ತ್ಯಾ ವಿನಶ್ಯತಿ ॥೧೧॥

ಪೃಥಿವೀ– ಹೇಗೆ ದೊಡ್ಡ ಸಮುದ್ರಕ್ಕೆ ಎಸೆದ ಮಣ್ಣಿನ ಹೆಂಟೆಯು ಶೀಘ್ರವಾಗಿ ನಾಶವನ್ನು ಹೊಂದುತ್ತದೆಯೋ ಅದರಂತೆ ವೇದವನ್ನು ಆವೃತ್ತಿಯನ್ನು ಮಾಡುವುದರಿಂದ ಮಾಡಿದ ದುಷ್ಕರ್ಮವೆಲ್ಲವೂ ನಾಶವನ್ನು ಹೊಂದುತ್ತದೆ.

ಕಾಶ್ಯಪಃ

ಸರ್ವೇ ಚ ವೇದಾಃ ಸಹ ಷಡ್‌ಭಿರಂಗೈಃ
ಸಾಂಖ್ಯಂ ಪುರಾಣಂ ಚ ಕುಲೇ ಚ ಜನ್ಮ ।
ನೈತಾನಿ ಸರ್ವಾಣಿ ಗತಿರ್ಭವಂತಿ
ಶೀಲವ್ಯಪೇತಸ್ಯ ನೃಪ ದ್ವಿಜಸ್ಯ ॥೧೨॥

ಕಾಶ್ಯಪರು– ಎಲೈ ರಾಜನೇ, ಶೀಲರಹಿತನಾದ ದ್ವಿಜನಿಗೆ ಷಡಂಗ ಸಹಿತವಾದ ಎಲ್ಲ ವೇದಗಳೂ, ಸಾಂಖ್ಯಶಾಸ್ತ್ರ ಮತ್ತು ಪುರಾಣಗಳೂ, ಸತ್ಕುಲದಲ್ಲಿ ಜನ್ಮವೂ ಇವೆಲ್ಲವೂ ಸೇರಿದರೂ ಸದ್ಗತಿಯನ್ನು ಉಂಟುಮಾಡುವುದಿಲ್ಲ.

ಅಗ್ನಿಃ

ಅಧೀಯಾನಃ ಪಂಡಿತಮ್ಮನ್ಯಮಾನೋ
ಯೋ ವಿದ್ಯಯಾ ಹಂತಿ ಯಶಃ ಪರೇಷಾಮ್ ।
ಬ್ರಹ್ಮನ್ ಸ ತೇನಾಚರತೇ ಬ್ರಹ್ಮವಧ್ಯಾಂ
ಲೋಕಾಸ್ತಸ್ಯ ಹ್ಯಂತವಂತೋ ಭವಂತಿ ॥೧೩॥

ಅಗ್ನಿ– ವೇದಾಧ್ಯಯನ ಮಾಡುತ್ತಾ ತನ್ನನ್ನು ಪಂಡಿತನೆಂದು ತಿಳಿದು, ಯಾವನು ತನ್ನ ವಿದ್ಯೆಯಿಂದ ಇನ್ನೊಬ್ಬರ ಕೀರ್ತಿಯನ್ನು ಹಾನಿಗೊಳಿಸುತ್ತಾನೆಯೋ ಅವನು ಬ್ರಹ್ಮಹತ್ಯಾ ದೋಷವನ್ನು ಸಂಪಾದಿಸುತ್ತಾನೆ. ಅವನು ಪಡೆದ ಲೋಕಗಳು ಕ್ಷಿಪ್ರವಾಗಿ ನಾಶವನ್ನು ಹೊಂದುತ್ತವೆ.

ಮಾರ್ಕಂಡೇಯಃ

ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾ ಧೃತಮ್ ।
ನಾಭಿಜಾನಾಮಿ ಯಜ್ಞಂ ತು ಸತ್ಯಸ್ಯಾರ್ಧಮವಾಪ್ನುಯಾತ್ ॥೧೪॥

ಮಾರ್ಕಂಡೇಯ– ಸಹಸ್ರ ಅಶ್ವಮೇಧಗಳು ಮತ್ತು ಸತ್ಯವಚನ ಎರಡನ್ನೂ ತಕ್ಕಡಿಯಲ್ಲಿಟ್ಟು ತೂಗಿದರೆ ಸಹಸ್ರ ಅಶ್ವಮೇಧಗಳು ಸತ್ಯದ ಅರ್ಧಭಾಗಕ್ಕಾದರೂ ಬರುತ್ತವೆಯೋ ಎಂದು ನಾನು ತಿಳಿಯಲಾರೆ.

ಭೀಷ್ಮಃ

ಇತ್ಯುಕ್ತ್ವಾ ತೇ ಜಗ್ಮುರಾಶು ಚತ್ವಾರೋಽಮಿತತೇಜಸಃ ।
ಪೃಥಿವೀ ಕಾಶ್ಯಪೋಽಗ್ನಿಶ್ಚ ಪ್ರಕೃಷ್ಟಾಯುಶ್ಚ ಭಾರ್ಗವಃ ॥೧೫॥

ಭೀಷ್ಮ– ಹೀಗೆ ಹೇಳಿ ಅಮಿತ ತೇಜಸ್ವಿಗಳಾದ ಪೃಥಿವೀ, ಕಾಶ್ಯಪ, ಅಗ್ನಿ ಮತ್ತು ಭಾರ್ಗವರಾದ ಮಾರ್ಕಂಡೇಯರು ನಾಲ್ವರೂ ಶೀಘ್ರವಾಗಿ ಹೊರಟು ಹೋದರು.

ಯುಧಿಷ್ಠಿರಃ

ಯದಿ ತೇ ಬ್ರಾಹ್ಮಣಾ ಲೋಕೇ ವ್ರತಿನೋ ಭುಂಜತೇ ಹವಿಃ ।
ದತ್ತಂ ಬ್ರಾಹ್ಮಣಕಾಮಾಯ ಕಥಂ ತತ್ ಸುಕೃತಂ ಭವೇತ್ ॥೧೬॥

ಯುಧಿಷ್ಠಿರ– ವ್ರತವನ್ನು ಧರಿಸಿದ ಬ್ರಾಹ್ಮಣರು ಬ್ರಾಹ್ಮಣರಿಗೇ ಭೋಜನವನ್ನು ಕೊಡಬೇಕೆಂಬ ನಿಯಮವಿರುವವನಿಂದ ಒತ್ತಾಯದಿಂದ ಕೊಡಲ್ಪಟ್ಟ ಹವ್ಯ ರೂಪವಾದ ಭೋಜನವನ್ನು ಸ್ವೀಕರಿಸಿದರೆ ಅದು ಹೇಗೆ ಒಳ್ಳೆಯದಾಗುತ್ತದೆ?

ಭೀಷ್ಮಃ

ಆದಿಷ್ಟಿನೋ ಯೇ ರಾಜೇಂದ್ರ ಬ್ರಾಹ್ಮಣಾ ವೇದಪಾರಗಾಃ ।
ಭುಂಜತೇ ಬ್ರಹ್ಮಕಾಮಾಯ ವ್ರತುಲುಪ್ತಾ ಭವಂತಿ ತೇ ॥೧೭॥

ಭೀಷ್ಮ– ಎಲೈ ರಾಜೇಂದ್ರನೇ, ವೇದಪಾರಂಗತರಾದ ಬ್ರಾಹ್ಮಣರು ಇನ್ನೊಬ್ಬ ಬ್ರಾಹ್ಮಣನ ಉದ್ದೇಶಕ್ಕೆ ಅನುಗುಣವಾಗಿ ಅವನಿಂದ ಒತ್ತಾಯ ಪಡಿಸಲ್ಪಟ್ಟು ಭುಂಜಿಸಿದರೂ ಸಹ ಅವರ ವ್ರತಕ್ಕೆ ಲೋಪವುಂಟಾಗುತ್ತದೆ.

ಯುಧಿಷ್ಠಿರಃ

ಅನೇಕಾಂತಂ ಬಹುದ್ವಾರಂ ಧರ್ಮಮಾಹುರ್ಮನೀಷಿಣಃ ।
ಕಿಂ ನಿಶ್ಚಿತಂ ಭವೇತ್ತತ್ರ ತನ್ಮೇ ಬ್ರೂಹಿ ಪಿತಾಮಹ ॥೧೮॥

ಯುಧಿಷ್ಠಿರ– ಎಲೈ ಪಿತಾಮಹನೇ, ವಿವೇಕಿಗಳು ಧರ್ಮಕ್ಕೆ ಅನೇಕ ಮಾರ್ಗಗಳಿವೆ ಎಂದು ಹೇಳುತ್ತಾರೆ. ಅವುಗಳಲ್ಲಿ ಯಾವುದು ನಿಶ್ಚಿತವಾಗಿದೆ ಎಂದು ನನಗೆ ಹೇಳಿ.

ಭೀಷ್ಮಃ

ಅಹಿಂಸಾ ಸತ್ಯಮಕ್ರೋಧ ಆನೃಶಂಸ್ಯಂ ದಮಸ್ತಥಾ ।
ಆರ್ಜವಂ ಚೈವ ರಾಜೇಂದ್ರ ನಿಶ್ಚಿತಂ ಧರ್ಮಲಕ್ಷಣಮ್ ॥೧೯॥

ಭೀಷ್ಮ– ಎಲೈ ರಾಜೇಂದ್ರನೇ, ಅಹಿಂಸೆ, ಸತ್ಯ, ಅಕ್ರೋಧ, ದಯೆ, ಇಂದ್ರಿಯನಿಗ್ರಹ, ಆರ್ಜವ ಇವು ನಿಶ್ಚಿತವಾದ ಧರ್ಮದ ಲಕ್ಷಣಗಳು (ಧರ್ಮವನ್ನು ಸಂಪಾದಿಸುವ ಮಾರ್ಗಗಳು).

ಯೇ ತು ಧರ್ಮಂ ಪ್ರಶಂಸಂತಶ್ಚರಂತಿ ಪೃಥಿವೀಮಿಮಾಮ್ ।
ಅನಾಚರಂತಸ್ತದ್ಧರ್ಮಂ ಸಂಕರೇ ನಿರತಾಃ ಪ್ರಭೋ ॥೨೦॥

ಎಲೈ ಪ್ರಭುವೇ, ಯಾರು ಧರ್ಮವನ್ನು ಪ್ರಶಂಸೆ ಮಾಡುತ್ತಾ, ತಾವು ಅಧರ್ಮವನ್ನು ಆಚರಿಸುತ್ತಾ ಭೂಮಿಯಲ್ಲಿ ಸಂಚರಿಸುತ್ತಾರೆಯೋ ಅವರು ಧರ್ಮಸಂಕರಕಾರಕರು.

ತೇಭ್ಯೋ ರತ್ನಂ ಹಿರಣ್ಯಂ ವಾ ಗಾಮಶ್ವಾನ್ ವಾ ದದಾತಿ ಯಃ ।
ದಶ ವರ್ಷಾಣಿ ವಿಷ್ಠಾಂ ಸ ಭುಂಕ್ತೇ ನಿರಯಮಾಶ್ರಿತಃ ॥೨೧॥

ಯಾವನು ಅಂತಹವರಿಗೆ ರತ್ನವನ್ನಾಗಲೀ, ಹಿರಣ್ಯವನ್ನಾಗಲೀ, ಗೋವನ್ನಾಗಲೀ ಅಶ್ವವನ್ನಾಗಲೀ ದಾನ ಮಾಡುತ್ತಾನೆಯೋ ಅವನು ಹತ್ತು ವರ್ಷಗಳ ಕಾಲ ನೀಚ ಯೋನಿಯಲ್ಲಿ ಜನಿಸಿ ಅಮೇಧ್ಯವನ್ನು ಭುಂಜಿಸುತ್ತಾನೆ.

ಧನೇನ ಪುಲ್ಕಸಾನಾಂ ಚ ತಥೈವಾಂತಾವಸಾಯಿನಾಮ್ ।
ಕೃತಂ ಕರ್ಮಾಕೃತಂ ಚಾಪಿ ರಾಗಮೋಹೇನ ಜಲ್ಪತಾಮ್ ॥೨೨॥

ಧನದ ನಿಮಿತ್ತದಿಂದಾಗಿ ಪುಲ್ಕಸರಿಗೆ, ಚಂಡಾಲರಿಗೆ ಮತ್ತು ರಾಗ-ಮೋಹಗಳಿಂದ ಜಂಭದ ಮಾತುಗಳನ್ನು ಆಡಿದವರಿಗೆ ಮಾಡಿಸಿದ ಕರ್ಮವು ಮಾಡಿಸದಂತೆಯೇ ಸರಿ.

ವೈಶ್ವದೇವಂ ಚ ಯೇ ಮೂಢಾ ವಿಪ್ರಾಯ ಬ್ರಹ್ಮಚಾರಿಣೇ ।
ದದತೀಹ ನ ರಾಜೇಂದ್ರ ತೇ ಲೋಕಾನ್ ಭುಂಜತೇಽಶುಭಾನ್ ॥೨೩॥

ಎಲೈ ರಾಜೇಂದ್ರನೇ, ಯಾವ ಮೂಢರು ಬ್ರಹ್ಮನಿಷ್ಠರಾದ ಬ್ರಾಹ್ಮಣರಿಗೆ ವೈಶ್ವದೇವಾದಿ ಹವಿಸ್ಸುಗಳನ್ನು ಕೊಡುವುದಿಲ್ಲವೋ ಅವರು ಅಶುಭಲೋಕಗಳನ್ನು ಹೊಂದುತ್ತಾರೆ.

ಯುಧಿಷ್ಠಿರಃ

ಕಿಂ ಪರಂ ಬ್ರಹ್ಮಚರ್ಯಸ್ಯ ಕಿಂ ಪರಂ ಧರ್ಮಲಕ್ಷಣಮ್ ।
ಕಿಂ ಚ ಶ್ರೇಷ್ಠತಮಂ ಶೌಚಂ ತನ್ಮೇ ಬ್ರೂಹಿ ಪಿತಾಮಹ ॥೨೪॥

ಯುಧಿಷ್ಠಿರ– ಬ್ರಹ್ಮಚರ್ಯದಲ್ಲಿ ಯಾವುದು ಶ್ರೇಷ್ಠವಾದುದು? ಶ್ರೇಷ್ಠವಾದ ಧರ್ಮಲಕ್ಷಣವೇನು? ಅತ್ಯಂತ ಶ್ರೇಷ್ಠವಾದ ಶೌಚ ಯಾವುದು? ಎಲೈ ಪಿತಾಮಹರೇ, ಅದನ್ನು ನನಗೆ ಹೇಳಿ.

ಭೀಷ್ಮಃ

ಬ್ರಹ್ಮಚರ್ಯಂ ಪರಂ ತಾತ ಮಧುಮಾಂಸಸ್ಯ ವರ್ಜನಮ್ ।
ಮರ್ಯಾದಾಯಾಂ ಸ್ಥಿತೋ ಧರ್ಮಃ ಶಮಃ ಶೌಚಸ್ಯ ಲಕ್ಷಣಮ್ ॥೨೫॥

ಭೀಷ್ಮ– ಎಲೈ ಪ್ರೀತಿಪಾತ್ರನೇ, ಶ್ರೇಷ್ಠವಾದ ಬ್ರಹ್ಮಚರ್ಯವೆಂದರೆ ಮಧು-ಮಾಂಸಗಳನ್ನು ಪರಿತ್ಯಾಗ ಮಾಡುವುದು. ವಿಧಿಯ ಕಟ್ಟುಪಾಡಿನಲ್ಲಿರುವುದು ಧರ್ಮ. ಶಾಂತತೆಯು ಶೌಚದ (ಶುದ್ಧಿ) ಲಕ್ಷಣ.

ಯುಧಿಷ್ಠಿರಃ

ಕಸ್ಮಿನ್ಕಾಲೇ ಚರೇದ್ ಧರ್ಮಂ ಕಸ್ಮಿನ್ಕಾಲೇರ್ಥಮಾಚರೇತ್ ।
ಕಸ್ಮಿನ್ಕಾಲೇ ಸುಖೀ ಚ ಸ್ಯಾತ್ತನ್ಮೇ ಬ್ರೂಹಿ ಪಿತಾಮಹ ॥೨೬॥

ಯುಧಿಷ್ಠಿರ– ಯಾವ ಕಾಲದಲ್ಲಿ ಧರ್ಮವನ್ನು ಆಚರಿಸಬೇಕು? ಯಾವ ಕಾಲದಲ್ಲಿ ಅರ್ಥಾರ್ಜನೆಯನ್ನು ಮಾಡಬೇಕು? ಯಾವ ಕಾಲದಲ್ಲಿ ಭೋಗವನ್ನು ಮಾಡಬೇಕು? ಎಲೈ ಪಿತಾಮಹರೇ, ಇದನ್ನು ನನಗೆ ಹೇಳಿ.

ಭೀಷ್ಮಃ

ಕಾಲ್ಯಮರ್ಥಂ ನಿಷೇವೇತ ತತೋ ಧರ್ಮಮನಂತರಮ್ ।
ಪಶ್ಚಾತ್ ಕಾಮಂ ನಿಷೇವೇತ ನ ಚ ಗಚ್ಛೇತ್ ಪ್ರಸಂಗತಾಮ್ ॥೨೭॥

ಭೀಷ್ಮ– ಪ್ರಾತಃಕಾಲದಲ್ಲಿ ಮೊದಲು ಅರ್ಥವನ್ನು ಸೇವಿಸಬೇಕು. ಅನಂತರ ಧರ್ಮವನ್ನು ಆಚರಿಸಬೇಕು. ಅನಂತರ ಕಾಮವನ್ನು ಸೇವಿಸಬೇಕು. ಯಾವುದರಲ್ಲೂ ಹೆಚ್ಚು ಆಸಕ್ತನಾಗಬಾರದು.

ಬ್ರಾಹ್ಮಣಾಂಶ್ಚಾಭಿಮನ್ಯೇತ ಗುರೂಂಶ್ಚಾಪ್ಯಭಿಪೂಜಯೇತ್ ।
ಸರ್ವಭೂತಾನುಲೋಮಶ್ಚ ಮೃದುಶೀಲಃ ಪ್ರಿಯಂವದಃ ॥೨೮॥

ಬ್ರಾಹ್ಮಣರನ್ನು ಗೌರವಿಸಬೇಕು. ಗುರುಗಳನ್ನು ಪೂಜಿಸಬೇಕು. ಸರ್ವಪ್ರಾಣಿಗಳಲ್ಲಿ ಹಿತನಾಗಿರಬೇಕು. ಮೃದುವಾದ ನಡತೆಯನ್ನು ಹೊಂದಿ ಪ್ರಿಯವಾಗಿ ಮಾತನಾಡಬೇಕು.

ಅಧಿಕಾರೇ ಯದನೃತಂ ಯಚ್ಚ ರಾಜಸು ಪೈಶುನಮ್ ।
ಗುರೋಶ್ಚಾಲೀಕನಿರ್ಬಂಧಃ ಸಮಂ ತದ್ ಬ್ರಹ್ಮಹತ್ಯಯಾ ॥೨೯॥

ಅಧಿಕಾರದಲ್ಲಿದ್ದು ಸುಳ್ಳು ಹೇಳುವುದು, ರಾಜರಿಗೆ ಚಾಡಿಯನ್ನು ಹೇಳುವುದು ಮತ್ತು ಗುರುವನ್ನು ವ್ಯರ್ಥವಾಗಿ ಒತ್ತಾಯ ಪಡಿಸುವುದು - ಈ ಮೂರೂ ಬ್ರಹ್ಮಹತ್ಯೆಗೆ ಸಮವಾದವುಗಳು.

ಪ್ರಹರೇನ್ನ ನರೇಂದ್ರೇಷು ನ ಗಾಂ ಹನ್ಯಾತ್ ತಥೈವ ಚ ।
ಭ್ರೂಣಹತ್ಯಾಸಮಂ ಚೈತದುಭಯಂ ಯೋ ನಿಷೇವತೇ ॥೩೦॥

ರಾಜರಿಗೆ ಹೊಡೆಯಬಾರದು, ಹಾಗೆಯೇ ಗೋವನ್ನೂ ಹೊಡೆಯಬಾರದು. ಇವುಗಳನ್ನು ಮಾಡುವವನು ಭ್ರೂಣಹತ್ಯೆಗೆ ಸಮವಾದ ಪಾಪವನ್ನು ಹೊಂದುತ್ತಾನೆ.

ನಾಗ್ನಿಂ ಪರಿತ್ಯಜೇಜ್ಜಾತು ನ ಚ ವೇದಾನ್ ಪರಿತ್ಯಜೇತ್ ।
ನ ಚ ಬ್ರಾಹ್ಮಣಮಾಕ್ರೋಶೇತ್ ಸಮಂ ತದ್ ಬ್ರಹ್ಮಹತ್ಯಯಾ ॥೩೧॥

ಅಗ್ನಿಯನ್ನು ಎಂದೂ ಪರಿತ್ಯಾಗ ಮಾಡಬಾರದು. ವೇದವನ್ನೂ ಪರಿತ್ಯಾಗ ಮಾಡಬಾರದು. ಬ್ರಾಹ್ಮಣನನ್ನು ಕಿರುಚಿ ನಿಂದಿಸಬಾರದು. ಅವು ಬ್ರಹ್ಮಹತ್ಯೆಗೆ ಸಮವಾದ ದೋಷಗಳು.

ಯುಧಿಷ್ಠಿರಃ

ಕೀದೃಶಾಃ ಸಾಧವೋ ವಿಪ್ರಾಃ ಕೇಭ್ಯೋ ದತ್ತಂ ಮಹಾಫಲಮ್ ।
ಕೀದೃಶಾನಾಂ ಚ ಭೋಕ್ತವ್ಯಂ ತನ್ಮೇ ಬ್ರೂಹಿ ಪಿತಾಮಹ ॥೩॥

ಯುಧಿಷ್ಠಿರ– ಎಲೈ ಪಿತಾಮಹನೇ, ಸಾಧುಗಳಾದ ವಿಪ್ರರು ಹೇಗಿರುತ್ತಾರೆ? ಯಾರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ? ಯಾರ ಅನ್ನವನ್ನು ಭುಂಜಿಸಬಹುದು ಎಂದು ನನಗೆ ಹೇಳು.

ಭೀಷ್ಮಃ

ಅಕ್ರೋಧನಾ ಧರ್ಮಪರಾಃ ಸತ್ಯನಿತ್ಯಾ ದಮೇ ರತಾಃ ।
ತಾದೃಶಾಃ ಸಾಧವೋ ವಿಪ್ರಾಸ್ತೇಭ್ಯೋ ದತ್ತಂ ಮಹಾಫಲಮ್ ॥೩॥

ಭೀಷ್ಮ– ಕೋಪರಹಿತರಾಗಿ, ಧರ್ಮಪರರಾಗಿ, ಸತ್ಯನಿಷ್ಠರಾಗಿ, ಇಂದ್ರಿಯನಿಗ್ರಹದಲ್ಲಿ ರತರಾದ ಬ್ರಾಹ್ಮಣರು ಸಾಧುಗಳು. ಅವರಿಗೆ ಮಾಡಿದ ದಾನಗಳು ಮಹಾಫಲವನ್ನು ಕೊಡುತ್ತವೆ.

ಅಮಾನಿನಃ ಸರ್ವಸಹಾ ದೃಷ್ಟಾರ್ಥಾ ವಿಜಿತೇಂದ್ರಿಯಾಃ ।
ಸರ್ವಭೂತಹಿತಾ ಮೈತ್ರಾಸ್ತೇಭ್ಯೋ ದತ್ತಂ ಮಹಾಫಲಮ್ ॥೪॥

ಅಹಂಕಾರರಹಿತರಾಗಿ, ಶೀತೋಷ್ಣಗಳನ್ನು ಸಹಿಸಿಕೊಂಡು ಪ್ರಪಂಚದ ಅಸಾರತ್ವವನ್ನು ತಿಳಿದವರಾಗಿ, ಇಂದ್ರಿಯಜಯವುಳ್ಳವರಾಗಿ, ಸರ್ವಭೂತಹಿತರಾಗಿ, ಸ್ನೇಹಶೀಲರಾಗಿರುವ ಬ್ರಾಹ್ಮಣರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ.

ಅಲುಬ್ಧಾಃ ಶುಚಯೋ ವೈದ್ಯಾ ಹ್ರೀಮಂತಃ ಸತ್ಯವಾದಿನಃ ।
ಸ್ವಕರ್ಮನಿರತಾ ಯೇ ಚ ತೇಭ್ಯೋ ದತ್ತಂ ಮಹಾಫಲಮ್ ॥೫॥

ಯುಧಿಷ್ಠಿರ– ಯಾವ ಕಾಲದಲ್ಲಿ ಧರ್ಮವನ್ನು ಆಚರಿಸಬೇಕು? ಯಾವ ಕಾಲದಲ್ಲಿ ಅರ್ಥಾರ್ಜನೆಯನ್ನು ಮಾಡಬೇಕು? ಯಾವ ಕಾಲದಲ್ಲಿ ಭೋಗವನ್ನು ಮಾಡಬೇಕು? ಎಲೈ ಪಿತಾಮಹರೇ, ಇದನ್ನು ನನಗೆ ಹೇಳಿ.

ಭೀಷ್ಮಃ

ಕಾಲ್ಯಮರ್ಥಂ ನಿಷೇವೇತ ತತೋ ಧರ್ಮಮನಂತರಮ್ ।
ಪಶ್ಚಾತ್ ಕಾಮಂ ನಿಷೇವೇತ ನ ಚ ಗಚ್ಛೇತ್ ಪ್ರಸಂಗತಾಮ್ ॥೨೭॥

ಭೀಷ್ಮ– ಪ್ರಾತಃಕಾಲದಲ್ಲಿ ಮೊದಲು ಅರ್ಥವನ್ನು ಸೇವಿಸಬೇಕು. ಅನಂತರ ಧರ್ಮವನ್ನು ಆಚರಿಸಬೇಕು. ಅನಂತರ ಕಾಮವನ್ನು ಸೇವಿಸಬೇಕು. ಯಾವುದರಲ್ಲೂ ಹೆಚ್ಚು ಆಸಕ್ತನಾಗಬಾರದು.

ಬ್ರಾಹ್ಮಣಾಂಶ್ಚಾಭಿಮನ್ಯೇತ ಗುರೂಂಶ್ಚಾಪ್ಯಭಿಪೂಜಯೇತ್ ।
ಸರ್ವಭೂತಾನುಲೋಮಶ್ಚ ಮೃದುಶೀಲಃ ಪ್ರಿಯಂವದಃ ॥೨೮॥

ಬ್ರಾಹ್ಮಣರನ್ನು ಗೌರವಿಸಬೇಕು. ಗುರುಗಳನ್ನು ಪೂಜಿಸಬೇಕು. ಸರ್ವಪ್ರಾಣಿಗಳಲ್ಲಿ ಹಿತನಾಗಿರಬೇಕು. ಮೃದುವಾದ ನಡತೆಯನ್ನು ಹೊಂದಿ ಪ್ರಿಯವಾಗಿ ಮಾತನಾಡಬೇಕು.

ಅಧಿಕಾರೇ ಯದನೃತಂ ಯಚ್ಚ ರಾಜಸು ಪೈಶುನಮ್ ।
ಗುರೋಶ್ಚಾಲೀಕನಿರ್ಬಂಧಃ ಸಮಂ ತದ್ ಬ್ರಹ್ಮಹತ್ಯಯಾ ॥೨೯॥

ಅಧಿಕಾರದಲ್ಲಿದ್ದು ಸುಳ್ಳು ಹೇಳುವುದು, ರಾಜರಿಗೆ ಚಾಡಿಯನ್ನು ಹೇಳುವುದು ಮತ್ತು ಗುರುವನ್ನು ವ್ಯರ್ಥವಾಗಿ ಒತ್ತಾಯ ಪಡಿಸುವುದು - ಈ ಮೂರೂ ಬ್ರಹ್ಮಹತ್ಯೆಗೆ ಸಮವಾದವುಗಳು.

ಪ್ರಹರೇನ್ನ ನರೇಂದ್ರೇಷು ನ ಗಾಂ ಹನ್ಯಾತ್ ತಥೈವ ಚ ।
ಭ್ರೂಣಹತ್ಯಾಸಮಂ ಚೈತದುಭಯಂ ಯೋ ನಿಷೇವತೇ ॥೩೦॥

ರಾಜರಿಗೆ ಹೊಡೆಯಬಾರದು, ಹಾಗೆಯೇ ಗೋವನ್ನೂ ಹೊಡೆಯಬಾರದು. ಇವುಗಳನ್ನು ಮಾಡುವವನು ಭ್ರೂಣಹತ್ಯೆಗೆ ಸಮವಾದ ಪಾಪವನ್ನು ಹೊಂದುತ್ತಾನೆ.

ನಾಗ್ನಿಂ ಪರಿತ್ಯಜೇಜ್ಜಾತು ನ ಚ ವೇದಾನ್ ಪರಿತ್ಯಜೇತ್ ।
ನ ಚ ಬ್ರಾಹ್ಮಣಮಾಕ್ರೋಶೇತ್ ಸಮಂ ತದ್ ಬ್ರಹ್ಮಹತ್ಯಯಾ ॥೩೧॥

ಅಗ್ನಿಯನ್ನು ಎಂದೂ ಪರಿತ್ಯಾಗ ಮಾಡಬಾರದು. ವೇದವನ್ನೂ ಪರಿತ್ಯಾಗ ಮಾಡಬಾರದು. ಬ್ರಾಹ್ಮಣನನ್ನು ಕಿರುಚಿ ನಿಂದಿಸಬಾರದು. ಅವು ಬ್ರಹ್ಮಹತ್ಯೆಗೆ ಸಮವಾದ ದೋಷಗಳು.

ಯುಧಿಷ್ಠಿರಃ

ಕೀದೃಶಾಃ ಸಾಧವೋ ವಿಪ್ರಾಃ ಕೇಭ್ಯೋ ದತ್ತಂ ಮಹಾಫಲಮ್ ।
ಕೀದೃಶಾನಾಂ ಚ ಭೋಕ್ತವ್ಯಂ ತನ್ಮೇ ಬ್ರೂಹಿ ಪಿತಾಮಹ ॥೩॥

ಯುಧಿಷ್ಠಿರ– ಎಲೈ ಪಿತಾಮಹನೇ, ಸಾಧುಗಳಾದ ವಿಪ್ರರು ಹೇಗಿರುತ್ತಾರೆ? ಯಾರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ? ಯಾರ ಅನ್ನವನ್ನು ಭುಂಜಿಸಬಹುದು ಎಂದು ನನಗೆ ಹೇಳು.

ಭೀಷ್ಮಃ

ಅಕ್ರೋಧನಾ ಧರ್ಮಪರಾಃ ಸತ್ಯನಿತ್ಯಾ ದಮೇ ರತಾಃ ।
ತಾದೃಶಾಃ ಸಾಧವೋ ವಿಪ್ರಾಸ್ತೇಭ್ಯೋ ದತ್ತಂ ಮಹಾಫಲಮ್ ॥೩॥

ಭೀಷ್ಮ– ಕೋಪರಹಿತರಾಗಿ, ಧರ್ಮಪರರಾಗಿ, ಸತ್ಯನಿಷ್ಠರಾಗಿ, ಇಂದ್ರಿಯನಿಗ್ರಹದಲ್ಲಿ ರತರಾದ ಬ್ರಾಹ್ಮಣರು ಸಾಧುಗಳು. ಅವರಿಗೆ ಮಾಡಿದ ದಾನಗಳು ಮಹಾಫಲವನ್ನು ಕೊಡುತ್ತವೆ.

ಅಮಾನಿನಃ ಸರ್ವಸಹಾ ದೃಷ್ಟಾರ್ಥಾ ವಿಜಿತೇಂದ್ರಿಯಾಃ ।
ಸರ್ವಭೂತಹಿತಾ ಮೈತ್ರಾಸ್ತೇಭ್ಯೋ ದತ್ತಂ ಮಹಾಫಲಮ್ ॥೪॥

ಅಹಂಕಾರರಹಿತರಾಗಿ, ಶೀತೋಷ್ಣಗಳನ್ನು ಸಹಿಸಿಕೊಂಡು ಪ್ರಪಂಚದ ಅಸಾರತ್ವವನ್ನು ತಿಳಿದವರಾಗಿ, ಇಂದ್ರಿಯಜಯವುಳ್ಳವರಾಗಿ, ಸರ್ವಭೂತಹಿತರಾಗಿ, ಸ್ನೇಹಶೀಲರಾಗಿರುವ ಬ್ರಾಹ್ಮಣರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ.

ಅಲುಬ್ಧಾಃ ಶುಚಯೋ ವೈದ್ಯಾ ಹ್ರೀಮಂತಃ ಸತ್ಯವಾದಿನಃ ।
ಸ್ವಕರ್ಮನಿರತಾ ಯೇ ಚ ತೇಭ್ಯೋ ದತ್ತಂ ಮಹಾಫಲಮ್ ॥೫॥

ಲೋಭರಹಿತರಾಗಿ, ಶುದ್ಧರಾಗಿ, ವೇದವಿದ್ಯಾಸಂಪನ್ನರಾಗಿ, ದುಷ್ಕರ್ಮವನ್ನು ಮಾಡಲು ನಾಚುವವರಾಗಿ, ಸತ್ಯವಾದಿಗಳಾಗಿ, ಸ್ವಕರ್ಮನಿರತರಾಗಿ ಇರುವ ಅಂತಹವರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ.

ಸಾಂಗಾಂಶ್ಚ ಚತುರೋ ವೇದಾನ್ ಯೋಽಧೀಯೀತ ದ್ವಿಜರ್ಷಭಃ ।
ಷಡ್‌ಭ್ಯೋ ಪ್ರವೃತ್ತಃ ಕರ್ಮಭ್ಯಸ್ತಂ ಪಾತ್ರಮೃಷಯೋ ವಿದುಃ ॥೩೬॥

ಯಾವ ದ್ವಿಜಶ್ರೇಷ್ಠನು ಅಂಗಸಹಿತವಾಗಿ ನಾಲ್ಕು ವೇದಗಳನ್ನು ಅಧ್ಯಯನ ಮಾಡಿ, ಷಟ್ಕರ್ಮನಿರತನಾಗಿರುತ್ತಾನೆಯೋ (ಯಜನ-ಯಾಜನ, ದಾನ-ಪ್ರತಿಗ್ರಹ, ಅಧ್ಯಯನ-ಅಧ್ಯಾಪನ - ಇವು ಆರು ಕರ್ಮಗಳು) ಅವನನ್ನು ಋಷಿಗಳು ಪಾತ್ರನೆಂದು ತಿಳಿಯುತ್ತಾರೆ.

ಯೇ ತ್ವೇವಂಗುಣಜಾತೀಯಾಸ್ತೇಭ್ಯೋ ದತ್ತಂ ಮಹಾಫಲಮ್ ।
ಸಹಸ್ರಗುಣಮಾಪ್ನೋತಿ ಗುಣಾರ್ಹಾಯ ಪ್ರದಾಯಕಃ ॥೩೭॥

ಇಂತಹ ಗುಣಗಳು ಯಾರಲ್ಲಿ ಇವೆಯೋ ಅಂತಹವರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ. ಗುಣಗಳಿಂದ ಅರ್ಹನಾದ ಬ್ರಾಹ್ಮಣನಿಗೆ ದಾನವನ್ನು ಮಾಡುವ ಯಜಮಾನನು ಸಹಸ್ರ ಗುಣಿತವಾದ ಫಲವನ್ನು ಹೊಂದುತ್ತಾನೆ.

ಪ್ರಜ್ಞಾಶ್ರುತಾಭ್ಯಾಂ ವೃತ್ತೇನ ಶೀಲೇನ ಚ ಸಮನ್ವಿತಃ ।
ತಾರಯೇತ ಕುಲಂ ಕೃತ್ಸ್ನಮೇಕೋಽಪೀಹ ದ್ವಿಜರ್ಷಭಃ ।
ತೃಪ್ತೇ ತೃಪ್ತಾಃ ಸರ್ವದೇವಾಃ ಪಿತರೋ ಮುನಯೋಽಪಿ ಚ ॥೩೮॥

ತನ್ನ ಪ್ರಜ್ಞೆ-ವಿದ್ಯೆಗಳಿಂದ, ಶೀಲ-ನಡತೆಗಳಿಂದ ಕೂಡಿದ ಒಬ್ಬ ಬ್ರಾಹ್ಮಣ ಶ್ರೇಷ್ಠನೂ ಸಹ (ದಾನವನ್ನು ಸ್ವೀಕಾರ ಮಾಡಿದರೆ) ಸಮಗ್ರವಾದ ಕುಲವನ್ನು ಸಂಕಟದಿಂದ ಪಾರು ಮಾಡುತ್ತಾನೆ. ರಾಜನು ತೃಪ್ತನಾದರೆ ಎಲ್ಲ ದೇವತೆಗಳು, ಪಿತೃಗಳು ಮತ್ತು ಋಷಿಗಳು ತೃಪ್ತರಾಗುತ್ತಾರೆ.

ಗಾಮಶ್ವಂ ವಿತ್ತಮನ್ನಂ ವಾ ತದ್ವಿಧೇ ಪ್ರತಿಪಾದಯೇತ್ ।
ದ್ರವ್ಯಾಣಿ ಚಾನ್ಯಾನಿ ತಥಾ ಪ್ರೇತ್ಯಭಾವೇ ನ ಶೋಚತಿ ॥೩೯॥

ಗೋದಾನವನ್ನಾಗಲೀ, ಅಶ್ವದಾನವನ್ನಾಗಲೀ, ಧನದಾನವನ್ನಾಗಲೀ, ಅನ್ನದಾನವನ್ನಾಗಲೀ ಅಂತಹ ಬ್ರಾಹ್ಮಣನಿಗೆ ಮಾಡಬೇಕು. ಅಥವಾ ಬೇರೆ ದ್ರವ್ಯವನ್ನಾಗಲೀ ಅಂತಹವರಿಗೆ ಕೊಡಬೇಕು. ಹಾಗೆ ದಾನ ಮಾಡಿದವನು ಮರಣವನ್ನು ಹೊಂದಿದ ಮೇಲೆ ಶೋಕಪಡುವುದಿಲ್ಲ.

ತಾರಯೇತ ಕುಲಂ ಕೃತ್ಸ್ನಮೇಕೋऽಪೀಹ ದ್ವಿಜೋತ್ತಮಃ ।
ಕಿಮಂಗ ಪುನರೇವೈತೇ ತಸ್ಮಾತ್ ಪಾತ್ರಂ ಸಮಾಚರೇತ್ ॥೪೦॥

ಒಬ್ಬ ದ್ವಿಜಶ್ರೇಷ್ಠನು ಸಮಗ್ರವಾದ ಕುಲವನ್ನು ಸಂಕಟ ಮತ್ತು ಪಾಪಗಳಿಂದ ಪಾರು ಮಾಡುವನು. ಹೀಗಿರುವಾಗ ಇಷ್ಟೊಂದು ಬ್ರಾಹ್ಮಣರಿರುವಾಗ (ನಿನಗೆ ಏನು ಚಿಂತೆ?) ಆದ್ದರಿಂದ ಪಾತ್ರವನ್ನು ವಿಚಾರ ಮಾಡಿ ದಾನವನ್ನು ಮಾಡಬೇಕು.

ನಿಶಮ್ಯ ಚ ಗುಣೋಪೇತಂ ಬ್ರಾಹ್ಮಣಂ ಸಾಧುಸಮ್ಮತಮ್ ।
ದೂರಾದಾನಾಯಯೇತ್ ಕೃತ್ಯೇ ಸರ್ವತಶ್ಚಾಭಿಪೂಜಯೇತ್ ॥೪೧॥

ಸಾಧುಸಮ್ಮತನೂ, ಗುಣವಂತನೂ ಆದ ಬ್ರಾಹ್ಮಣನನ್ನು ಕೇಳಿ, ದೂರದಿಂದಲಾದರೂ ಅವನನ್ನು ಕರೆಸಿ, ಹವ್ಯ-ಕವ್ಯಾದಿ ಕೃತ್ಯಗಳಲ್ಲಿ ಅವನನ್ನು ಸರ್ವವಿಧದಿಂದಲೂ ಪೂಜಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಬಹುಪ್ರಶ್ನಿಕೋನಾಮ ತ್ರಿಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಐವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ನಾಲ್ಕನೆಯ ಅಧ್ಯಾಯ

ದೈವ-ಪಿತೃಕರ್ಮಗಳಲ್ಲಿ ಮಾಡಿದ ದಾನದ ಫಲಕಥನ.

ಯುಧಿಷ್ಠಿರಃ

ಶ್ರಾದ್ಧಕಾಲೇ ಚ ದೈವೇ ಚ ಧರ್ಮೇ ಚಾಪಿ ಪಿತಾಮಹ ।
ಇಚ್ಛಾಮೀಹ ತ್ವಯಾऽऽಖ್ಯಾತಂ ವಿಹಿತಂ ಯತ್ ಸುರರ್ಷಿಭಿಃ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಶ್ರಾದ್ಧಕಾಲದ ವಿಷಯದಲ್ಲಿಯೂ ದೇವಕಾರ್ಯಗಳ ವಿಷಯದಲ್ಲಿಯೂ ದೇವತೆಗಳಿಂದಲೂ ಮತ್ತು ಋಷಿಗಳಿಂದಲೂ ಹೇಳಲ್ಪಟ್ಟ ವಿಧಾನವನ್ನು ನಾನು ತಿಳಿಯಲು ಅಪೇಕ್ಷಿಸುತ್ತೇನೆ.

ಭೀಷ್ಮಃ

ದೈವಂ ಪೂರ್ವಾಹ್ಣಿಕೇ ಕುರ್ಯಾದಪರಾಹ್ಣೇ ತು ಪೈತೃಕಮ್ ।
ಮಂಗಲಾಚಾರಸಂಪನ್ನಃ ಕೃತಶೌಚಃ ಪ್ರಯತ್ನವಾನ್ ॥೨॥

ಭೀಷ್ಮ– ಮಂಗಳಾಚಾರಸಂಪನ್ನನಾಗಿ, ಶುಚಿಯಾಗಿ, ಪ್ರಯತ್ನಶೀಲನಾಗಿ ಪೂರ್ವಾಹ್ಣದಲ್ಲಿ ದೈವಕಾರ್ಯವನ್ನು ಮಾಡಬೇಕು. ಅಪರಾಹ್ಣದಲ್ಲಿ ಪಿತೃಕಾರ್ಯವನ್ನು ಮಾಡಬೇಕು.

ಮನುಷ್ಯಾಣಾಂ ತು ಮಧ್ಯಾಹ್ನೇ ಪ್ರದದ್ಯಾದುಪಪತ್ತಿಭಿಃ ।
ಕಾಲಹೀನಂ ತು ಯದ್ದಾನಂ ತಂ ಭಾಗಂ ರಕ್ಷಸಾಂ ವಿದುಃ ॥೩॥

ಮಧ್ಯಾಹ್ನ ಕಾಲದಲ್ಲಿ ಮನುಷ್ಯರಿಗೆ ಯೋಗ್ಯತವಾದ ಉಪಚಾರವನ್ನು ಮಾಡಬೇಕು. ಕಾಲಹೀನವಾದ ದಾನವನ್ನು ರಾಕ್ಷಸರ ಭಾಗವೆಂದು ತಿಳಿಯುತ್ತಾರೆ.

ಲಂಘಿತಂ ಚಾವಲೀಢಂ ಚ ಕಾಲಪೂರ್ವಂ ಚ ಯತ್ಕೃತಮ್ ।
ರಜಸ್ವಲಾಭಿರ್ದೃಷ್ಟಂ ಚ ತಂ ಭಾಗಂ ರಕ್ಷಸಾಂ ವಿದುಃ ॥೪॥

ದಾಟಿದ ಅನ್ನ, ನೆಕ್ಕಲ್ಪಟ್ಟ ಅನ್ನ, ಹಿಂದಿನ ದಿನ ಮಾಡಿದ ಅನ್ನ, ರಜಸ್ವಲೆಯಿಂದ ದೃಷ್ಟವಾದ ಅನ್ನ - ಇವು ರಾಕ್ಷಸರ ಭಾಗಗಳು.

ಅವಘುಷ್ಟಂ ಚ ಯದ್ಭುಕ್ತಮವ್ರತೇನ ಚ ಭಾರತ ।
ಪರಾಮೃಷ್ಟಂ ಶುನಾ ಚೈವ ತಂ ಭಾಗಂ ರಕ್ಷಸಾಂ ವಿದುಃ ॥೫॥

ಎಲೈ ಭಾರತನೇ, ನಿಂದಿಸುತ್ತಾ ಭುಂಜಿಸಿದ ಅನ್ನ, ವ್ರತಹೀನರು ಭಕ್ಷಿಸಿದ ಅನ್ನ, ನಾಯಿಯು ಸ್ಪರ್ಶ ಮಾಡಿದ ಅನ್ನ ಇವೆಲ್ಲವೂ ರಾಕ್ಷಸ ಭಾಗಗಳೆಂದು ತಿಳಿಯುತ್ತಾರೆ.

ಕೇಶಕೀಟಾವಪತಿತಂ ಕ್ಷುತಂ ಶ್ವಭಿರವೇಕ್ಷಿತಮ್ ।
ರುದಿತಂ ಚಾವಧೂತಂ ಚ ತಂ ಭಾಗಂ ರಕ್ಷಸಾಂ ವಿದುಃ ॥೬॥

ಕೀಟಗಳು ಮತ್ತು ಕೂದಲು ಇದ್ದ ಅನ್ನ, ಕುತ್ತವಾದ (ಸೀನಲ್ಪಟ್ಟ) ಅನ್ನ, ನಾಯಿಗಳಿಂದ ನೋಡಲ್ಪಟ್ಟ ಅನ್ನ, ರೋದನ ಸಹಿತವಾದ ಅನ್ನ ಮತ್ತು ಎಸೆದ ಅನ್ನ ಇವುಗಳು ರಾಕ್ಷಸರ ಭಾಗಗಳು.

ನಿರೋಂಕಾರೇಣ ಯದ್ ಭುಕ್ತಂ ಸಶಸ್ತ್ರೇಣ ಚ ಭಾರತ ।
ದುರಾತ್ಮನಾ ಚ ಯದ್ ಭುಕ್ತಂ ತಂ ಭಾಗಂ ರಕ್ಷಸಾಂ ವಿದುಃ ॥೭॥

ಎಲೈ ಭಾರತನೇ, ಓಂಕಾರವಿಲ್ಲದೆ ಭುಂಜಿಸಿದ ಅನ್ನ, ಶಸ್ತ್ರಧಾರಿಯಾಗಿ ಭುಂಜಿಸಿದ ಅನ್ನ, ದುಷ್ಟರು ಭುಂಜಿಸಿದ ಅನ್ನ - ಇವು ರಾಕ್ಷಸರ ಭಾಗಗಳು.

ಪರೋಚ್ಛಿಷ್ಟಂ ಚ ಯದ್ ಭುಕ್ತಂ ಪರಿಭುಕ್ತಂ ಚ ಯದ್ ಭವೇತ್ ।
ದೈವೇ ಪಿತ್ರ್ಯೇ ಚ ಸತತಂ ತಂ ಭಾಗಂ ರಕ್ಷಸಾಂ ವಿದುಃ ॥೮॥

ದೇವಕಾರ್ಯದಲ್ಲಾಗಲೀ, ಪಿತೃಕಾರ್ಯದಲ್ಲಾಗಲೀ ಇನ್ನೊಬ್ಬನಿಂದ ಉಚ್ಛಿಷ್ಟವಾದ ಅನ್ನ, ಸುತ್ತಲೂ ಕುಳಿತು ಭುಂಜಿಸಿದ ಅನ್ನ - ಇದನ್ನು ರಾಕ್ಷಸರ ಭಾಗವೆಂದು ಸತತವಾಗಿ ಹೇಳುತ್ತಾರೆ.

ಗರ್ಹಿತಂ ನಿಂದಿತಂ ಚೈವ ಪರಿವಿಷ್ಟಂ ಸಮನ್ಯುನಾ ।
ದೈವಂ ವಾಪ್ಯಥ ವಾ ಪೈತ್ರ್ಯಂ ತಂ ಭಾಗಂ ರಕ್ಷಸಾಂ ವಿದುಃ ॥೯॥

ಬೈಯ್ಯುತ್ತಾ ಬಡಿಸಿದ ಅನ್ನ, ನಿಂದಿತವಾದ ಅನ್ನ, ಕೋಪದಿಂದ ಬಡಿಸಿದ ಅನ್ನ ಇವನ್ನು ದೇವಕಾರ್ಯದಲ್ಲಿಯೂ, ಪಿತೃಕಾರ್ಯದಲ್ಲಿಯೂ ರಾಕ್ಷಸರ ಭಾಗವೆಂದು ತಿಳಿಯುತ್ತಾರೆ.

ಮಂತ್ರಹೀನಂ ಕ್ರಿಯಾಹೀನಂ ಯಚ್ಛ್ರಾದ್ಧಂ ಪರಿವಿಶ್ಯತೇ ।
ತ್ರಿಭಿರ್ವರ್ಣೈರ್ನರಶ್ರೇಷ್ಠ ತಂ ಭಾಗಂ ರಕ್ಷಸಾಂ ವಿದುಃ ॥೧೦॥

ಎಲೈ ನರಶ್ರೇಷ್ಠನೇ, ಮಂತ್ರವಿಲ್ಲದೆ, ಕ್ರಿಯಾವಿಧಾನವಿಲ್ಲದೆ ಯಾವ ಶ್ರಾದ್ಧ ಭೋಜನವು ಮೂರು ವರ್ಣದವರಿಂದ ಬಡಿಸಲ್ಪಡುತ್ತದೆಯೋ ಅದು ರಾಕ್ಷಸರ ಭಾಗ.

ಆಜ್ಯಾಹುತಿಂ ವಿನಾ ಚೈವ ಯತ್ ಕಿಂಚಿತ್ ಪರಿವಿಶ್ಯತೇ ।
ದುರಾಚಾರೈಶ್ಚ ಯದ್ ಭುಕ್ತಂ ತಂ ಭಾಗಂ ರಕ್ಷಸಾಂ ವಿದುಃ ॥೧೧॥

ಅಗ್ನಿಯಲ್ಲಿ ವೈಶ್ವದೇವ ಹೋಮವನ್ನು ಮಾಡದೆ ಬಡಿಸಿದ ಅನ್ನ, ದುರಾಚಾರಿಗಳು ಭುಂಜಿಸಿದ ಅನ್ನ ಇವು ರಾಕ್ಷಸರ ಭಾಗವೆಂದು ತಿಳಿಯುತ್ತಾರೆ.

ಯೇ ಭಾಗಾ ರಕ್ಷಸಾಂ ಪ್ರೋಕ್ತಾಸ್ತ ಉಕ್ತಾ ಭರತರ್ಷಭ ।
ಅತ ಊರ್ಧ್ವಂ ವಿಸರ್ಗಸ್ಯ ಪರೀಕ್ಷಾಂ ಬ್ರಾಹ್ಮಣೇ ಶೃಣು ॥೧೨॥

ಎಲೈ ಭರತಶ್ರೇಷ್ಠನೇ, ರಾಕ್ಷಸರಿಗೆ ಹೇಳಲ್ಪಟ್ಟ ಭಾಗಗಳನ್ನು ಹಿಂದೆ ತಿಳಿಸಿದ್ದೇನೆ. ಇಲ್ಲಿಂದ ಮುಂದೆ ದಾನ ಮಾಡುವ ಕಾಲದಲ್ಲಿ ಮಾಡಬೇಕಾದ ಬ್ರಾಹ್ಮಣನ ಪರೀಕ್ಷೆಯನ್ನು ಕೇಳು.

ಯಾವಂತಃ ಪತಿತಾ ವಿಪ್ರಾ ಜಡೋನ್ಮತ್ತಾಸ್ತಥೈವ ಚ ।
ದೈವೇ ವಾಪ್ಯಥ ವಾ ಪಿತ್ರ್ಯೇ ರಾಜನ್ ನಾರ್ಹಂತಿ ಕೇತನಮ್ ॥೧೩॥

ಪತಿತರಾದ ಬ್ರಾಹ್ಮಣರು, ಜಡರು, ಉನ್ಮತ್ತರಾದ ಬ್ರಾಹ್ಮಣರು ದೈವಕಾರ್ಯದಲ್ಲಾಗಲೀ, ಪಿತೃಕಾರ್ಯದಲ್ಲಾಗಲೀ 'ಪಿತುಃ ಸ್ಥಾನೇ ಕ್ಷಣಃ ಕ್ರಿಯತಾಮ್' ಪಿತೃಗಳ ಸ್ಥಾನದಲ್ಲಿ ಕುಳಿತುಕೊಳ್ಳಿ ಅಥವಾ ದೇವಸ್ಥಾನದಲ್ಲಿ ಕುಳಿತುಕೊಳ್ಳಿ ಎಂದು ಹೇಳಿ ಸ್ಥಾನವನ್ನು ಕೊಡಲು ಅರ್ಹರಲ್ಲ.

ಶ್ವಿತ್ರೀ ಕುಷ್ಠೀ ಚ ಕ್ಲೀಬಶ್ಚ ತಥಾ ಯಕ್ಷ್ಮಹತಶ್ಚ ಯಃ ।
ಅಪಸ್ಮಾರೀ ಚ ಯಶ್ಚಾಂಧೋ ರಾಜನ್ ನಾರ್ಹಂತಿ ಸತ್ಕೃತಿಮ್ ॥೧೪॥

ಎಲೈ ರಾಜನೇ, ತೊನ್ನುರೋಗದವನು, ಕುಷ್ಠರೋಗದವನು, ನಪುಂಸಕನು, ಯಕ್ಷ್ಮರೋಗಿ, ಅಪಸ್ಮಾರಿ, ಕುರುಡ ಇವರು ಯಾರೂ ಸತ್ಕಾರಕ್ಕೆ ಯೋಗ್ಯರಲ್ಲ.

ಚಿಕಿತ್ಸಕಾ ದೇವಲಕಾ ವೃಥಾನಿಯಮಧಾರಿಣಃ ।
ಸೋಮವಿಕ್ರಯಿಣಶ್ಚೈವ ಶ್ರಾದ್ಧೇ ನಾರ್ಹಂತಿ ಕೇತನಮ್ ॥೧೫॥

ವೈದ್ಯರು, ಸಂಬಳಕ್ಕಾಗಿ ದೇವಸ್ಥಾನದಲ್ಲಿ ಪೂಜೆಯನ್ನು ಮಾಡುವವರು, ವ್ಯರ್ಥವಾದ ನಿಯಮವನ್ನು ಪಾಲಿಸುವವರು, ಸೋಮರಸವನ್ನು ಮಾರುವವರು ಶ್ರಾದ್ಧದಲ್ಲಿ ಸ್ಥಾನಕ್ಕೆ ಅರ್ಹರಲ್ಲ.

ಗಾಯನಾ ನರ್ತಕಾಶ್ಚೈವ ಪ್ಲವಕಾ ವಾದಕಾಸ್ತಥಾ ।
ಕಥಕಾ ಯೋಧಕಾಶ್ಚೈವ ರಾಜನ್ ನಾರ್ಹಂತಿ ಕೇತನಮ್ ॥೧೬॥

ಎಲೈ ರಾಜನೇ, ಸಂಗೀತಗಾರರು, ನರ್ತಕರು, ನಾಪಿತರು, ಸಂಗೀತ ವಾದ್ಯ ವಾದಕರು, ಕಥೆಯನ್ನು ಹೇಳಿ ಜೀವಿಸುವವರು, ಸೈನಿಕರು ಸ್ಥಾನಕ್ಕೆ ಅರ್ಹರಲ್ಲ.

ಹೋತಾರೋ ವೃಷಲಾನಾಂ ಚ ವೃಷಲಾಧ್ಯಾಪಕಾಸ್ತಥಾ ।
ತಥಾ ವೃಷಲಶಿಷ್ಯಾಶ್ಚ ರಾಜನ್ ನಾರ್ಹಂತಿ ಕೇತನಮ್ ॥೧೭॥

ಶೂದ್ರನಿಗೆ ಹೋಮವನ್ನು ಮಾಡಿಸುವವರು, ಶೂದ್ರನಿಗೆ ಅಧ್ಯಯನವನ್ನು ಮಾಡಿಸುವವರು ಮತ್ತು ಶೂದ್ರನ ಶಿಷ್ಯರು ಎಲೈ ರಾಜನೇ, ಸ್ಥಾನಕ್ಕೆ ಅರ್ಹರಲ್ಲ.

ಅನುಯೋಕ್ತಾ ಚ ಯೋ ವಿಪ್ರೋ ಅನುಯುಕ್ತಶ್ಚ ಭಾರತ ।
ನಾರ್ಹತಸ್ತಾವಪಿ ಶ್ರಾದ್ಧಂ ಬ್ರಹ್ಮವಿಕ್ರಯಿಣೌ ಹಿ ತೌ ॥೧೮॥

ಇಷ್ಟು ಧನವನ್ನು ಕೊಟ್ಟರೆ ಅಧ್ಯಯನವನ್ನು ಮಾಡಿಸುತ್ತೇನೆ, ಇಲ್ಲದಿದ್ದರೆ ಇಲ್ಲ ಎಂದು ಹೇಳು ಎಂದು ಬ್ರಾಹ್ಮಣರಿಗೆ ಆದೇಶವನ್ನು ಮಾಡುವವನು, ಅಂತಹ ಆದಿಷ್ಟನಾದ ಬ್ರಾಹ್ಮಣನೂ ಸಹ ಎಲೈ ಭಾರತನೇ, ಶ್ರಾದ್ಧದಲ್ಲಿ ಅರ್ಹರಲ್ಲ. ಅವರಿಬ್ಬರೂ ವೇದವನ್ನು ಮಾರಿದವರು.

ಅಗ್ರಣೀರ್ಯಃ ಕೃತಃ ಪೂರ್ವಂ ವರ್ಣಾಚಾರಪರಿಗ್ರಹಃ ।
ಬ್ರಾಹ್ಮಣಃ ಸರ್ವವಿದ್ಯೋಽಪಿ ರಾಜನ್ ನಾರ್ಹತಿ ಕೇತನಮ್ ॥೧೯॥

ಮೊದಲು ಸೇನಾನಾಯಕನಾಗಿದ್ದು ಅನಂತರ ವರ್ಣಾಚಾರಗಳನ್ನು ಅನುಸರಿಸುವ ಬ್ರಾಹ್ಮಣನು ಎಲೈ ರಾಜನೇ, ಸರ್ವರೀತಿ ಸಂಪನ್ನನಾಗಿದ್ದರೂ ಸ್ಥಾನಕ್ಕೆ ಅರ್ಹನಲ್ಲ.

ಅನಗ್ನಯಶ್ಚ ಯೇ ವಿಪ್ರಾ ಮೃತನಿರ್ಯಾತಕಾಶ್ಚ ಯೇ ।
ಸ್ತೇನಾಶ್ಚ ಪತಿತಾಶ್ಚೈವ ರಾಜನ್ ನಾರ್ಹಂತಿ ಕೇತನಮ್ ॥೨೦॥

ಎಲೈ ರಾಜನೇ, ಅಗ್ನಿಯಿಲ್ಲದ ಬ್ರಾಹ್ಮಣರು, ಶವವಾಹಕರು, ಕಳ್ಳರು, ಪತಿತರು ಸ್ಥಾನಕ್ಕೆ ಅರ್ಹರಲ್ಲ.

ಅಪರಿಜ್ಞಾತಪೂರ್ವಾಶ್ಚ ಗಣಪೂರ್ವಾಶ್ಚ ಭಾರತ ।
ಪುತ್ರಿಕಾಪೂರ್ವಪುತ್ರಾಶ್ಚ ಶ್ರಾದ್ಧೇ ನಾರ್ಹಂತಿ ಕೇತನಮ್ ॥೨೧॥

ಎಲೈ ಭಾರತನೇ, ಅಪರಿಚಿತರಾದವರು, ಒಂದು ಗುಂಪಿಗೆ ಒಡೆಯರಾದವರು, ಪುತ್ರಿಕಾಪುತ್ರರು (ಪುತ್ರಿಯನ್ನು ಮದುವೆ ಮಾಡಿಕೊಡುವುದಾದರೆ ಇವಳಲ್ಲಿ ಹುಟ್ಟುವ ಪುತ್ರನು ನನ್ನ ಪುತ್ರ ಎಂದು ಕನ್ಯಾ ಪಿತೃವಿನಿಂದ ಸ್ವೀಕರಿಸಲ್ಪಟ್ಟ ಪುತ್ರನು ಪುತ್ರಿಕಾ ಪುತ್ರನೆನಿಸುತ್ತಾನೆ) ಸ್ಥಾನಕ್ಕೆ ಅರ್ಹನಲ್ಲ.

ಋಣಕರ್ತಾ ಚ ಯೋ ರಾಜನ್ ಯಶ್ಚ ವಾರ್ಧುಷಿಕೋ ದ್ವಿಜಃ ।
ಪ್ರಾಣವಿಕ್ರಯವೃತ್ತಿಶ್ಚ ರಾಜನ್ ನಾರ್ಹಂತಿ ಕೇತನಮ್ ॥೨೨॥

ಎಲೈ ರಾಜನೇ, ಸಾಲವನ್ನು ಮಾಡುವ ಬ್ರಾಹ್ಮಣನೂ ಮತ್ತು ಬಡ್ಡಿಗಾಗಿ ಹಣವನ್ನು ಕೊಡುವ ಬ್ರಾಹ್ಮಣನೂ, ಪ್ರಾಣಿಯನ್ನು ಮಾರುವ ಬ್ರಾಹ್ಮಣನೂ ಸ್ಥಾನಕ್ಕೆ ಅರ್ಹರಲ್ಲ.

ಸ್ತ್ರೀಪೂರ್ವಾಃ ಕಾಂಡಪೃಷ್ಠಾಶ್ಚ ಯಾವಂತೋ ಭರತರ್ಷಭ ।
ಅಜಪಾ ಬ್ರಾಹ್ಮಣಾಶ್ಚೈವ ಶ್ರಾದ್ಧೇ ನಾರ್ಹಂತಿ ಕೇತನಮ್ ॥೨೩॥

ಎಲೈ ಭರತಶ್ರೇಷ್ಠನೇ, ಮೊದಲು ಸ್ತ್ರೀಯಾಗಿದ್ದು ಅನಂತರ ಪುರುಷನಾದವನು, ಬೆನ್ನಿನಲ್ಲಿ ಆಯುಧವನ್ನು ಧರಿಸಿದವನು ಮತ್ತು ಜಪವನ್ನು ಮಾಡದ ಬ್ರಾಹ್ಮಣನು ಶ್ರಾದ್ಧದಲ್ಲಿ ಸ್ಥಾನಕ್ಕೆ ಅರ್ಹನಾಗುವುದಿಲ್ಲ.

ಶ್ರಾದ್ಧೇ ದೈವೇ ಚ ನಿರ್ದಿಷ್ಟಾ ಬ್ರಾಹ್ಮಣಾ ಭರತರ್ಷಭ ।
ದಾತುಃ ಪ್ರತಿಗ್ರಹೀತುಶ್ಚ ಶೃಣುಷ್ವಾನುಗ್ರಹಂ ಪುನಃ ॥೨೪॥

ಎಲೈ ಭರತಶ್ರೇಷ್ಠನೇ, ಶ್ರಾದ್ಧಕರ್ಮದಲ್ಲಿಯೂ ದೇವಕಾರ್ಯದಲ್ಲಿಯೂ ಪಾತ್ರರಾದ ಬ್ರಾಹ್ಮಣರನ್ನು (ಅಪಾತ್ರರಾದ ಬ್ರಾಹ್ಮಣರನ್ನು) ತಿಳಿಸಿದ್ದೇನೆ. ದಾನ-ಪ್ರತಿಗ್ರಹ ವಿಷಯದಲ್ಲಿ ಸ್ವೀಕಾರ ಮಾಡಬೇಕಾದ ರೀತಿಯನ್ನು ಕೇಳು.

ಚೀರ್ಣವ್ರತಾ ಗುಣೈರ್ಯುಕ್ತಾ ಭವೇಯುರ್ಯೇಽಪಿ ಕರ್ಷಕಾಃ ।
ಸಾವಿತ್ರೀಜ್ಞಾಃ ಕ್ರಿಯಾವಂತಸ್ತೇ ರಾಜನ್ ಕೇತನಕ್ಷಮಾಃ ॥೨೫॥

ವ್ರತಗಳನ್ನು ಮಾಡಿ ಸದ್ಗುಣದಿಂದ ಕೂಡಿದ ಬ್ರಾಹ್ಮಣನು ಭೂಮಿಯಲ್ಲಿ ವ್ಯವಸಾಯ ಮಾಡುವವರಾಗಿದ್ದರೂ ಗಾಯತ್ರೀ ಮಂತ್ರವನ್ನು ಜಪಿಸಿ ಸತ್ಕ್ರಿಯೆಗಳನ್ನು ಮಾಡುವವರು ಸ್ಥಾನಕ್ಕೆ ಅರ್ಹರಾಗುತ್ತಾರೆ.

ಕ್ಷಾತ್ರಧರ್ಮಿಣಮಪ್ಯಾಜೌ ಕೇತಯೇತ್ ಕುಲಜಂ ದ್ವಿಜಮ್ ।
ನ ತ್ವೇವ ವಣಿಜಂ ತಾತ ಶ್ರಾದ್ಧೇಷು ಪರಿಕಲ್ಪಯೇತ್ ॥೨೬॥

ಕ್ಷತ್ರಿಯ ಧರ್ಮವನ್ನು ಅನುಸರಿಸುವ ಸತ್ಕುಲೀನನಾದ ಬ್ರಾಹ್ಮಣನೂ ಸಹ ಸ್ಥಾನಕ್ಕೆ ಅರ್ಹನಾಗುತ್ತಾನೆ. ಎಲೈ ಪ್ರೀತಿಪಾತ್ರನೇ, ವೈಶ್ಯನನ್ನು ಮಾತ್ರ ಶ್ರಾದ್ಧದಲ್ಲಿ ಕುಳ್ಳಿರಿಸಬಾರದು.

ಅಗ್ನಿಹೋತ್ರೀ ಚ ಯೋ ವಿಪ್ರೋ ಗ್ರಾಮವಾಸೀ ಚ ಯೋ ಭವೇತ್ ।
ಅಸ್ತೇನಶ್ಚಾತಿಥಿಪ್ರಿಯಶ್ಚ ಸ ರಾಜನ್ ಕೇತನಕ್ಷಮಃ ॥೨೭॥

ಎಲೈ ರಾಜನೇ, ಯಾವ ಬ್ರಾಹ್ಮಣನು ಅಗ್ನಿಹೋತ್ರಿಯಾಗಿ, ಗ್ರಾಮವಾಸಿಯಾಗಿ ಚೋರನಾಗದೆ ಅತಿಥಿ ಪ್ರಿಯನಾಗಿರುತ್ತಾನೋ ಅಂತಹವನು ಸ್ಥಾನಕ್ಕೆ ಅರ್ಹನಾಗುತ್ತಾನೆ.

ಸಾವಿತ್ರೀಜಪಕೋ ಯಶ್ಚ ತ್ರಿಕಾಲಂ ಭರತರ್ಷಭ ।
ಭಿಕ್ಷಾವೃತ್ತಿಃ ಕ್ರಿಯಾವಾಂಶ್ಚ ಸ ರಾಜನ್ ಕೇತನಕ್ಷಮಃ ॥೨೮॥

ಎಲೈ ರಾಜನೇ, ಭರತಶ್ರೇಷ್ಠನೇ, ಮೂರು ಕಾಲದಲ್ಲಿಯೂ ಗಾಯತ್ರಿಯನ್ನು ಜಪಿಸಿ, ಭಿಕ್ಷಾವೃತ್ತಿಯನ್ನು ಮಾಡಿ, ಸತ್ಕರ್ಮವನ್ನು ಮಾಡುವ ಬ್ರಾಹ್ಮಣನು ಸ್ಥಾನಕ್ಕೆ ಯೋಗ್ಯನಾಗುತ್ತಾನೆ.

ಉದಿತಾಸ್ತಮಿತೋ ಯಶ್ಚ ತಥೈವಾಸ್ತಮಿತೋದಿತಃ ।
ಅಹಿಂಸ್ರಶ್ಚಾಲ್ಪದೋಷಶ್ಚ ಸ ರಾಜನ್ ಕೇತನಕ್ಷಮಃ ॥೨೯॥

ಮೊದಲು ಶ್ರೀಮಂತನಾಗಿ ಅನಂತರ ದರಿದ್ರನಾದವನು ಮತ್ತು ಮೊದಲು ದರಿದ್ರನಾಗಿ ಅನಂತರ ಶ್ರೀಮಂತನಾದವನು, ಇನ್ನೊಬ್ಬರಿಗೆ ಹಿಂಸೆಯನ್ನು ಮಾಡದೆ ಅಲ್ಪದೋಷದಿಂದ ಕೂಡಿದ್ದರೆ ಅವನು ಸ್ಥಾನಕ್ಕೆ ಅರ್ಹನಾಗುತ್ತಾನೆ.

ಅಕಲ್ಕಕೋ ಹ್ಯತರ್ಕಶ್ಚ ಬ್ರಾಹ್ಮಣೋ ಭರತರ್ಷಭ ।
ಸಸಂಜ್ಞೋ ಭೈಕ್ಷ್ಯವೃತ್ತಿಶ್ಚ ಸ ರಾಜನ್ ಕೇತನಕ್ಷಮಃ ॥೩೦॥

ಎಲೈ ರಾಜನೇ, ಭರತಶ್ರೇಷ್ಠನೇ, ವಂಚನೆಯನ್ನು ಮಾಡದವನು, ವಿತಂಡ ವಾದವನ್ನು ಮಾಡದವನು, ಯೋಗ್ಯವಾದ ಜ್ಞಾನವನ್ನು ಹೊಂದಿ ಭೈಕ್ಷ್ಯವೃತ್ತಿಯನ್ನು ಆಚರಿಸುವವನು ಸ್ಥಾನಕ್ಕೆ ಯೋಗ್ಯನಾಗುತ್ತಾನೆ.

ಅವ್ರತೀ ಕಿತವಃ ಸ್ತೇನಃ ಪ್ರಾಣೈವಿಕ್ರಯ್ಯಥೋ ವಣಿಕ್ ।
ಪಶ್ಚಾಚ್ಚ ಪೀತವಾನ್ ಸೋಮಂ ಸ ರಾಜನ್ ಕೇತನಕ್ಷಮಃ ॥೩೧॥

ಮೊದಲು ವ್ರತಹೀನನಾಗಿ, ಮೋಸಗಾರನಾಗಿ, ಕಳ್ಳನಾಗಿ, ಪ್ರಾಣವಿಕ್ರಯವನ್ನು ಮಾಡಿ ವರ್ತಕನಾಗಿದ್ದ ಬ್ರಾಹ್ಮಣನೂ ಸಹ ಅನಂತರ ಪಶ್ಚಾತ್ತಾಪವನ್ನು ಪಟ್ಟು, ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಸೋಮಪಾನವನ್ನು ಮಾಡಿದರೆ, ಎಲೈ ರಾಜನೇ, ಅವನು ಸ್ಥಾನಕ್ಕೆ ಯೋಗ್ಯನಾಗುತ್ತಾನೆ.

ಆರ್ಜಯಿತ್ವಾ ಧನಂ ಪೂರ್ವಂ ದಾರುಣೈಃ ಕೃಷಿಕರ್ಮಭಿಃ ।
ಭವೇತ್ಸರ್ವಾತಿಥಿಃ ಪಶ್ಚಾತ್ಸ ರಾಜನ್ ಕೇತನಕ್ಷಮಃ ॥೩೨॥

ಎಲೈ ರಾಜನೇ, ಯಾವನು ಮೊದಲು ದಾರುಣವಾದ ಕೃಷಿಕರ್ಮಗಳಿಂದ ಧನಾರ್ಜನೆಯನ್ನು ಮಾಡಿ ಅನಂತರ ಸರ್ವಾತಿಥಿಯಾಗುತ್ತಾನೆಯೋ ಅವನು ಸ್ಥಾನಕ್ಕೆ ಅರ್ಹನಾಗುತ್ತಾನೆ.

ಬ್ರಹ್ಮವಿಕ್ರಯನಿರ್ದಿಷ್ಟಂ ಸ್ತ್ರಿಯಾ ಯಚ್ಚಾರ್ಜಿತಂ ಧನಮ್ ।
ಅದೇಯಂ ಪಿತೃದೇವೇಭ್ಯೋ ಯಚ್ಚ ಕ್ಲೈಬ್ಯಾದುಪಾರ್ಜಿತಮ್ ॥೩೩॥

ವೇದವನ್ನು ಮಾರಿ ಸಂಪಾದಿಸಿದ ಧನ, ಸ್ತ್ರೀಯು ಸಂಪಾದಿಸಿದ ಧನ, ನಪುಂಸಕನು ಗಳಿಸಿದ ಧನ - ಇವುಗಳನ್ನು ಪಿತೃಕಾರ್ಯದಲ್ಲಿ ಕೊಡಬಾರದು.

ಕ್ರಿಯಮಾಣೇऽಪವರ್ಗೇ ತು ಯೋ ದ್ವಿಜೋ ಭರತರ್ಷಭ ।
ನ ವ್ಯಾಹರತಿ ಯದ್ಯುಕ್ತಂ ತಸ್ಯಾಧರ್ಮೋ ಗವಾನೃತಮ್ ॥೩೪॥

ಎಲೈ ಭರತಶ್ರೇಷ್ಠನೇ, ದಾನವನ್ನು ಮಾಡುವಾಗ ಸ್ವೀಕರಿಸುವ ಬ್ರಾಹ್ಮಣನು ಯೋಗ್ಯವಾದ ಮಾತನ್ನು (ಆಶೀರ್ವಾದ ರೂಪವಾದ ಮಾತನ್ನು) ಆಡದಿದ್ದರೆ ಅವನಿಗೆ ಉಂಟಾಗುವ ಅಧರ್ಮವು ಗವಾನೃತಕ್ಕೆ ಸಮವಾಗುತ್ತದೆ. ಗವಾನೃತವೆಂದರೆ ಬ್ರಾಹ್ಮಣನಿಗೆ ಗೋವನ್ನು ಕೊಡುತ್ತೇನೆ ಎಂದು ಮೊದಲು ಹೇಳಿ ಅನಂತರ ಇಲ್ಲ ಎಂದು ಹೇಳುವ ಅನೃತ. ಅಥವಾ ಗೋವಿಗೆ ತೃಣಾದಿಗಳನ್ನು ತೋರಿಸಿ ಕೊಡದೆ ಹಿಂದಕ್ಕೆ ತೆಗೆದುಕೊಂಡು ಹೋಗುವ ವಂಚನೆ - ಲಕ್ಷಾಲಂಕಾರ.

ಶ್ರಾದ್ಧಸ್ಯ ಬ್ರಾಹ್ಮಣಃ ಕಾಲಃ ಪ್ರಾಪ್ತಂ ದಧಿ ಘೃತಂ ತಥಾ ।
ಸೋಮಕ್ಷಯಶ್ಚ ಮಾಸಶ್ಚ ಯದಾರಣ್ಯಂ ಯುಧಿಷ್ಠಿರ ॥೩೫॥

ಎಲೈ ಯುಧಿಷ್ಠಿರನೇ, ಶ್ರಾದ್ಧಕ್ಕೆ ಬ್ರಾಹ್ಮಣ, ಕಾಲ, ಒದಗಿದ ಘೃತಗಳು, ಅಮಾವಾಸ್ಯೆ ಮತ್ತು ಪೌರ್ಣಮಿಗಳು ಮತ್ತು ತಪೋವನ ಇವು ಮುಖ್ಯವಾದವು.

ಮುಹೂರ್ತಾನಾಂ ತ್ರಯಂ ಪೂರ್ವಮಹ್ನಃ ಪ್ರಾತರಿತಿ ಸ್ಮೃತಮ್ ।
ಜಪಧ್ಯಾನಾದಿಭಿಸ್ತಸ್ಮಿನ್ ವಿಪ್ರೈಃ ಕಾರ್ಯಂ ಶುಭವ್ರತಮ್ ॥೩೬॥

ಹಗಲಿನ ಮೊದಲಿನ ಮೂರು ಮುಹೂರ್ತಗಳು ಪ್ರಾತಃಕಾಲ ಎಂದು ಕರೆಯಲ್ಪಡುತ್ತವೆ. ಬ್ರಾಹ್ಮಣರು ಆ ಕಾಲದಲ್ಲಿ ಜಪ-ಧ್ಯಾನಾದಿ ಶುಭವ್ರತಗಳನ್ನು ಮಾಡಬೇಕು.

ಸಂಗವಾಖ್ಯಂ ತ್ರಿಭಾಗಂ ತು ಮಧ್ಯಾಹ್ನಸ್ತ್ರಿಮುಹೂರ್ತಕಃ ।
ಲೌಕಿಕಂ ಸಂಗವೇಽರ್ಧಂ ಚ ಸ್ನಾನಾದಿ ಹ್ಯಥ ಮಧ್ಯಮೇ ॥೩೭॥

ಸಂಗವು ಮೂರು ಮುಹೂರ್ತಗಳು ಮತ್ತು ಮಧ್ಯಾಹ್ನಕಾಲವು ಮೂರು ಮುಹೂರ್ತಗಳು. ಸಂಗವದ ಮೊದಲಿನ ಅರ್ಧದಲ್ಲಿ ಲೋಕಹಿತಕಾರ್ಯವನ್ನು ಮಾಡಿ ಅನಂತರದ ಅರ್ಧದಲ್ಲಿ ದ್ವಿತೀಯ ಸ್ನಾನಾದಿ ಕಾರ್ಯಗಳನ್ನು ಮಾಡಬೇಕು.

ಚತುರ್ಥಮಪರಾಹ್ಣಂ ತು ತ್ರಿಮುಹೂರ್ತಂ ತು ಪಿತ್ರ್ಯಕಮ್ ।
ಸಾಯಾಹ್ನಸ್ತ್ರಿಮುಹೂರ್ತಂ ಚ ಮಧ್ಯಮಂ ಕವಿಭಿಃ ಸ್ಮೃತಮ್ ॥೩೮॥

ಚತುರ್ಥೇ ತ್ವಪರಾಹ್ಣಾಖ್ಯೇ ಶ್ರಾದ್ಧಂ ಕುರ್ಯಾತ್ ಸದಾ ನೃಪ ॥೩೯॥

ನಾಲ್ಕನೆಯ ಮೂರು ಮುಹೂರ್ತಕ್ಕೆ ಅಪರಾಹ್ಣವೆಂದು ಹೆಸರು. ಆಗ ಪಿತೃ ಕರ್ಮವನ್ನು ಮಾಡಬೇಕು. ಸಾಯಾಹ್ನವು ಮೂರು ಮುಹೂರ್ತವು ಪಿತೃಕಾರ್ಯಕ್ಕೆ ಅದು ಮಧ್ಯಮ ಕಾಲವೆಂದು ಜ್ಞಾನಿಗಳ ಅಭಿಪ್ರಾಯ. ಎಲೈ ರಾಜನೇ, ಹಗಲಿನ ನಾಲ್ಕನೆಯ ಭಾಗವಾದ ಅಪರಾಹ್ಣದಲ್ಲಿ ಯಾವಾಗಲೂ ಶ್ರಾದ್ಧವನ್ನು ಮಾಡಬೇಕು.

ಪ್ರಾಗುದೀಚೀಮುಖಾ ವಿಪ್ರಾಃ ವಿಶ್ವೇದೇವೇ ಚ ದಕ್ಷಿಣಾಃ ।
ಶ್ರಾವಿತೇಷು ಸುತೃಪ್ತೇಷು ಪಿಂಡಂ ದದ್ಯಾತ್ ಸದಕ್ಷಿಣಮ್ ॥೪೦॥

ಬ್ರಾಹ್ಮಣರನ್ನು ಈಶಾನ್ಯಾಭಿಮುಖವಾಗಿಯೂ ವಿಶ್ವೇದೇವತೆಗಳನ್ನು ದಕ್ಷಿಣದಲ್ಲಿಯೂ ಕುಳ್ಳಿರಿಸಿ, ಬ್ರಾಹ್ಮಣರು ಭೋಜನವನ್ನು ಮಾಡಿ, ನಾವು ತೃಪ್ತರಾಗಿದ್ದೇವೆಂದು ಹೇಳಿದ ಮೇಲೆ ಅವರಿಗೆ ದಕ್ಷಿಣೆಯನ್ನು ನೀಡಿ ಪಿಂಡಪ್ರದಾನವನ್ನು ಮಾಡಬೇಕು.

ಶ್ರಾದ್ಧಾಪವರ್ಗೇ ವಿಪ್ರಸ್ಯ ಸ್ವಧಾ ವೈ ಸ್ವಧಿತಾ ಭವೇತ್ ।
ಕ್ಷತ್ರಿಯಸ್ಯಾಪ್ಯಥೋ ಬ್ರೂಯಾತ್ ಪ್ರೀಯಂತಾಂ ಪಿತರಸ್ತಿ ತಿ ॥೪೧॥

ಬ್ರಾಹ್ಮಣನಿಗೆ ಪಿಂಡಪ್ರದಾನವನ್ನು ಮಾಡುವಾಗ ಅಧಿಕಾರಿಯು 'ಸ್ವಧಾ ಸ್ವಧಾ ಸ್ವಧಾ ಸಂಪದ್ಯಂತಾಮ್' ಎಂದು ಹೇಳಿ ದಾನವನ್ನು ಮಾಡಿದರೆ ಆ ದಾನವು ಸಮ್ಯಗಧೀತವಾಗುತ್ತದೆ (ಶುಭವಾಗುತ್ತದೆ). ಕ್ಷತ್ರಿಯನಿಗೆ ದಾನ ಮಾಡುವಾಗ 'ಪ್ರೀಯಂತಾಂ ತರಃ' ಪಿತೃಗಳು ಪ್ರಸನ್ನರಾಗಲಿ ಎಂದು ಹೇಳಬೇಕು.

ಅಪವರ್ಗೇ ತು ವೈಶ್ಯಸ್ಯ ಶ್ರಾದ್ಧಕರ್ಮಣಿ ಭಾರತ ।
ಅಕ್ಷಯ್ಯಮಭಿಧಾತವ್ಯಂ ಸ್ವಸ್ತಿ ಶೂದ್ರಸ್ಯ ಭಾರತ ॥೪೨॥

ಎಲೈ ಭಾರತನೇ, ವೈಶ್ಯರಿಗೆ ಅವರು ಶ್ರಾದ್ಧಕರ್ಮವನ್ನು ಮಾಡುವಾಗ ಅಕ್ಷಯವಾಗಲಿ ಎಂದು ಹೇಳಬೇಕು. ಶೂದ್ರರಿಗೆ ಅವರು ಶ್ರಾದ್ಧಕರ್ಮವನ್ನು ಮಾಡುವಾಗ ಸ್ವಸ್ತಿ (ಒಳ್ಳೆಯದಾಗಲಿ) ಎಂದು ಹೇಳಬೇಕು.

ಪುಣ್ಯಾಹವಾಚನಂ ದೈವೇ ಬ್ರಾಹ್ಮಣಸ್ಯ ವಿಧೀಯತೇ ।
ಏತದೇವ ನಿರೋಂಕಾರಂ ಕ್ಷತ್ರಿಯಸ್ಯ ವಿಧೀಯತೇ ।
ವೈಶ್ಯಸ್ಯ ಚೈವ ವಕ್ತವ್ಯಂ ಪ್ರೀಯಂತಾಂ ದೇವತಾ ಇತಿ ॥೪೩॥

ದೈವಕಾರ್ಯದಲ್ಲಿ ಬ್ರಾಹ್ಮಣರಿಗೆ ಪುಣ್ಯಾಹವಾಚನವು ವಿಧಿಸಲ್ಪಡುತ್ತದೆ. ಕ್ಷತ್ರಿಯನಿಗಾದರೆ ಓಂಕಾರ ರಹಿತವಾಗಿ ಅದೇ ಪುಣ್ಯಾಹವಾಚನವು ವಿಧಿಸಲ್ಪಡುತ್ತದೆ. ವೈಶ್ಯನಿಗಾದರೆ 'ಪ್ರೀಯಂತಾಂ ದೇವತಾಃ' ದೇವತೆಗಳು ಪ್ರಸನ್ನರಾಗಲಿ ಎಂದಿಷ್ಟೇ ಹೇಳಬೇಕು.

ಗೋಹಿಂಸಾಯಾಂ ಚತುರ್ಭಾಗಂ ಪೂರ್ವವಿಪ್ರಾತಿಕೇತನಃ ।
ವರ್ಣಾವರೇಷು ಭುಂಜಾನಂ ಕ್ರಮಾಚ್ಛೂದ್ರೇ ಚತುರ್ಗುಣಮ್ ।
ನಾನ್ಯತ್ರ ಬ್ರಾಹ್ಮಣೋ ಬ್ರೂಯಾತ್ ಪೂರ್ವಂ ವಿಪ್ರೇಣ ಕೇತಿತಃ ॥೪೪॥

ಮೊದಲು ಬ್ರಾಹ್ಮಣನಿಂದ ಶ್ರಾದ್ಧ ಭೋಜನಕ್ಕಾಗಿ ನಿಮಂತ್ರಿಸಲ್ಪಟ್ಟು ಅವನನ್ನು ಉಲ್ಲಂಘಿಸಿದರೆ ಗೋಹತ್ಯೆಯ ನಾಲ್ಕನೆಯ ಒಂದು ಭಾಗದ ಪಾಪವು ಬರುತ್ತದೆ. ಅವನನ್ನು ಉಲ್ಲಂಘಿಸಿ ಕ್ಷತ್ರಿಯನ ಮನೆಯಲ್ಲಿ, ವೈಶ್ಯನ ಮನೆಯಲ್ಲಿ, ಶೂದ್ರನ ಮನೆಯಲ್ಲಿ ಭೋಜನವನ್ನು ಮಾಡಿದರೆ ಕ್ರಮವಾಗಿ ಒಂದೊಂದು ಪಾದವು ಹೆಚ್ಚಾಗಿ ಶೂದ್ರನ ಭೋಜನದಿಂದ ಪೂರ್ಣವಾದ ಗೋಹತ್ಯಾ ದೋಷವು ಬರುತ್ತದೆ. ಮೊದಲು ಬ್ರಾಹ್ಮಣನಿಂದ ನಿಮಂತ್ರಿಸಲ್ಪಟ್ಟವನು ಬೇರೆಯ ಕಡೆಯಲ್ಲಿ ಒಪ್ಪಬಾರದು.

ಅಭೋಜನೇ ಚ ದೋಷಃ ಸ್ಯಾದ್ ವರ್ಜಯೇತ್ ಶೂದ್ರಕೇತನಮ್ ।
ಶೂದ್ರಾನ್ನರಸಪುಷ್ಟಾಂಗೋ ದ್ವಿಜೋ ನೋರ್ಧ್ವಗತಿಂ ಲಭೇತ್ ॥೪೫॥

ನಿಮಂತ್ರಣವನ್ನು ಸ್ವೀಕರಿಸಿ ಭೋಜನಕ್ಕೆ ಹೋಗದಿದ್ದರೆ ದೋಷವಿದೆ. ಶೂದ್ರ ಶ್ರಾದ್ಧದ ಭೋಜನವನ್ನು ವರ್ಜಿಸಬೇಕು. ಶೂದ್ರನ ಅನ್ನರಸದಿಂದ ಪುಷ್ಟನಾದ ದ್ವಿಜನು ಊರ್ಧ್ವಗತಿಯನ್ನು ಹೊಂದುವುದಿಲ್ಲ.

ಅಶುಚಿರ್ನೈವ ಚಾಶ್ನೀಯಾನ್ನಾಸ್ತಿಕೋ ಮಾನವರ್ಜಿತಃ ।
ನ ಪೂರ್ವಂ ಲಂಘಯೇಲ್ಲೋಭಾದೇಕವರ್ಣೋಽಪಿ ಪಾರ್ಥಿವ ।
ವಿಪ್ರಾಃ ಸ್ಮೃತಾ ಭೂಮಿದೇವಾ ಉಪಕುರ್ವಾಣವರ್ಜಿತಾಃ ॥೪೬॥

ಎಲೈ ರಾಜನೇ, ಅಶುಚಿಯಾದವನಿಗೂ, ನಾಸ್ತಿಕನಿಗೂ, ಮರ್ಯಾದಾರಹಿತನಿಗೂ ನಿಮಂತ್ರಣವನ್ನು ಕೊಡಬಾರದು. ಮೊದಲು ನಿಮಂತ್ರಣವನ್ನು ತೆಗೆದುಕೊಂಡು ಅದೇ ವರ್ಣದ ಎರಡನೆಯವನು ನಿಮಂತ್ರಣವನ್ನು ನೀಡಿದರೆ ಮೊದಲನೆಯ ನಿಮಂತ್ರಣವನ್ನು ಮೀರಬಾರದು. ತನಗೆ ಉಪಕಾರವನ್ನು ಮಾಡುವ ಬ್ರಾಹ್ಮಣರನ್ನು ಬಿಟ್ಟು ಉಳಿದ ಬ್ರಾಹ್ಮಣರು ಭೂದೇವತೆಗಳೆನಿಸುತ್ತಾರೆ.

ಕರ್ಮಣಾಮಾನುಪೂರ್ವ್ಯಂ ಚ ವಿಧಿಪೂರ್ವಕೃತಂ ಶೃಣು ।
ಜಾತಕರ್ಮಾದಿಕಾನ್ ಸರ್ವಾಂಸ್ತ್ರಿಷು ವರ್ಣೇಷು ಭಾರತ ।
ಬ್ರಹ್ಮಕ್ಷತ್ರೇ ಹಿ ಮಂತ್ರೋಕ್ತಾ ವೈಶ್ಯಸ್ಯ ಚ ಯುಧಿಷ್ಠಿರ ॥೪೭॥

ದ್ವಿಜರಿಗೆ ವಿಧಿಪೂರ್ವಕವಾಗಿ ಮಾಡಬೇಕಾದ ಕರ್ಮವನ್ನು ಹೇಳುತ್ತೇನೆ ಕೇಳು. ಎಲೈ ಭಾರತನೇ, ಜಾತಕರ್ಮಾದಿ ಸರ್ವಕರ್ಮಗಳನ್ನು ಮೂರು ವರ್ಣದವರೂ

ಮಾಡಬೇಕು. ಎಲೈ ಯುಧಿಷ್ಠಿರನೇ, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗೆ ಮಂತ್ರಪೂರ್ವಕವಾಗಿ ಮಾಡಬೇಕು.

ವಿಪ್ರಸ್ಯ ರಶನಾ ಮೌಂಜೀ ಮೌರ್ವೀ ರಾಜನ್ಯಗಾಮಿನೀ ।
ಬಾಲ್ವಜೀ ಚೈವ ವೈಶ್ಯಸ್ಯ ಧರ್ಮ ಏಷ ಯುಧಿಷ್ಠಿರ ॥೪೮॥

ಉಪನಯನದಲ್ಲಿ ಬ್ರಾಹ್ಮಣರಿಗೆ ಸೊಂಟಕ್ಕೆ ಕಟ್ಟುವ ಬಂಧನವು ಮೌಂಜೀ ಎಂಬ ದರ್ಭವಿಶೇಷಾತ್ಮಕವಾದುದು. ರಾಜಕುಮಾರರಿಗೆ ಬಿಲ್ಲಿನ ಹೆದೆಯ ರೂಪವಾದುದು. ವೈಶ್ಯರಿಗೆ ಬಲ್ವ ಎಂಬ ದರ್ಭದಿಂದ ಮಾಡಲ್ಪಟ್ಟದ್ದು. ಎಲೈ ಯುಧಿಷ್ಠಿರನೇ, ಇದು ಧರ್ಮ.

ಪಾಲಾಶೋ ದ್ವಿಜದಂಡಃ ಸ್ಯಾದಶ್ವತ್ಥಃ ಕ್ಷತ್ರಿಯಸ್ಯ ತು ।
ಔದುಂಬರಶ್ಚ ವೈಶ್ಯಸ್ಯ ಧರ್ಮ ಏಷ ಯುಧಿಷ್ಠಿರ ॥೪೯॥

ಬ್ರಾಹ್ಮಣರಿಗೆ ಉಪನಯನದಲ್ಲಿ ಮುತ್ತುಗದ ದಂಡ ದಂಡವಾಗುತ್ತದೆ. ಕ್ಷತ್ರಿಯನಿಗೆ ಅಶ್ವತ್ಥ ದಂಡ. ವೈಶ್ಯನಿಗೆ ಅತ್ತಿಯ ದಂಡ. ಯುಧಿಷ್ಠಿರನೇ, ಇದು ಧರ್ಮ.

ದಾತುಃ ಪ್ರತಿಗ್ರಹೀತುಶ್ಚ ಧರ್ಮಾಧರ್ಮಾವಿಮೌ ಶೃಣು ।
ಬ್ರಾಹ್ಮಣಸ್ಯಾನೃತೇಽಧರ್ಮಃ ಪ್ರೋಕ್ತಃ ಪಾತಕಸಂಜ್ಞಿತಃ ।
ಚತುರ್ಗುಣಃ ಕ್ಷತ್ರಿಯಸ್ಯ ವೈಶ್ಯಸ್ಯಾಷ್ಟಗುಣಃ ಸ್ಮೃತಃ ॥೫೦॥

ದಾನವನ್ನು ಕೊಡುವವನಿಗೆ ಮತ್ತು ಪ್ರತಿಗ್ರಹವನ್ನು ಮಾಡುವವನಿಗೆ ಉಂಟಾಗುವ ಈ ಧರ್ಮಾಧರ್ಮಗಳನ್ನು ಕೇಳು. ಬ್ರಾಹ್ಮಣನಿಗೆ ಸುಳ್ಳು ಹೇಳಿದರೆ ಉಂಟಾಗುವ ಅಧರ್ಮಕ್ಕೆ ಪಾತಕ ಎಂದು ಹೆಸರು. ಕ್ಷತ್ರಿಯನು ಬ್ರಾಹ್ಮಣನಿಗೆ ಸುಳ್ಳನ್ನು ಹೇಳಿದರೆ ಅದರ ನಾಲ್ಕು ಪಟ್ಟು ಮತ್ತು ವೈಶ್ಯನು ಸುಳ್ಳನ್ನು ಹೇಳಿದರೆ ಅದಕ್ಕೆ ಎಂಟು ಪಟ್ಟು ಪಾತಕ ಉಂಟಾಗುತ್ತದೆ.

ನಾನ್ಯತ್ರ ಬ್ರಾಹ್ಮಣೋಽಶ್ನೀಯಾತ್ ಪೂರ್ವಂ ವಿಪ್ರೇಣ ಕೇತಿತಃ ।
ಯವೀಯಾನ್ ಪಶುಹಿಂಸಾಯಾಂ ತುಲ್ಯಧರ್ಮೋ ಭವೇತ್ಸ ಹಿ ॥೫೧॥

ಮೊದಲು ಬ್ರಾಹ್ಮಣನಿಂದ ನಿಮಂತ್ರಿಸಲ್ಪಟ್ಟ ಬ್ರಾಹ್ಮಣನು ಬೇರೆ ಕಡೆಯಲ್ಲಿ ಭೋಜನ ಮಾಡಬಾರದು. ಮೊದಲು ನಿಮಂತ್ರಿತನಾಗಿರುವುದನ್ನು ತಿಳಿದು ಅನಂತರ ನಿಮಂತ್ರಣ ಮಾಡುವವನು ಪಶುಹಿಂಸೆಯನ್ನು ಮಾಡಿದ ಪಾಪವನ್ನು ಹೊಂದುತ್ತಾನೆ.

ಅಥ ರಾಜನ್ಯವೈಶ್ಯಾಭ್ಯಾಂ ಯದ್ಯಶ್ನೀಯಾತ್ತು ಕೇತಿತಃ ।
ಯವೀಯಾನ್ ಪಶುಹಿಂಸಾಯಾಂ ಭಾಗಾರ್ಧಂ ಸಮವಾಪ್ನುಯಾತ್ ॥

ಬ್ರಾಹ್ಮಣನಿಮಂತ್ರಣವನ್ನು ಪಡೆದು, ಅನಂತರ ರಾಜ ಅಥವಾ ವೈಶ್ಯರ ನಿಮಂತ್ರಣವನ್ನು ಒಪ್ಪಿದರೆ ಅಲ್ಪನಾದ ಅಂತಹವನು ಪಶುಹಿಂಸೆಯ ಅರ್ಧದಷ್ಟು ಪಾಪವನ್ನು ಹೊಂದುತ್ತಾನೆ.

ದೈವಂ ವಾಪ್ಯಥ ವಾ ಪಿತ್ರ್ಯಂ ಯೋಽಶ್ನೀಯಾದ್ ಬ್ರಾಹ್ಮಣಾದಿಷು ।
ಅಸ್ನಾತೋ ಬ್ರಾಹ್ಮಣೋ ರಾಜಂಸ್ತಸ್ಯಾಧರ್ಮೋ ಗವಾನೃತಮ್ ॥೫೩॥

ದೈವಕಾರ್ಯದಲ್ಲಾಗಲೀ ಅಥವಾ ಪಿತೃಕಾರ್ಯದಲ್ಲಾಗಲೀ ಬ್ರಾಹ್ಮಣಾದಿಗಳ ಮನೆಗೆ ಹೋಗಿ ಸ್ನಾನವಿಲ್ಲದೆ ಭೋಜನವನ್ನು ಮಾಡುವ ಬ್ರಾಹ್ಮಣನಿಗೆ ಎಲೈ ರಾಜನೇ, ಗವಾನೃತ ಪಾಪವು ಬರುತ್ತದೆ.

ಅಶೌಚೋ ಬ್ರಾಹ್ಮಣೋ ರಾಜನ್ ಯೋಽಶ್ನೀಯಾದ್ ಬ್ರಾಹ್ಮಣಾದಿಷು ।
ಜ್ಞಾನಪೂರ್ವಮಥೋ ಲೋಭಾತ್ ತಸ್ಯಾಧರ್ಮೋ ಗವಾನೃತಮ್ ॥

ಎಲೈ ರಾಜನೇ, ಅಶುಚಿಯಾದ (ಸೂತಕ ಮತ್ತು ಮೃತಕಗಳನ್ನು ಹೊಂದಿರುವ) ಬ್ರಾಹ್ಮಣನು ಅಶೌಚವನ್ನು ತಿಳಿಯದೆ ಬ್ರಾಹ್ಮಣಾದಿಗಳಲ್ಲಿ ಭೋಜನವನ್ನು ಮಾಡಿದರೆ ಅಥವಾ ಅಶೌಚವನ್ನು ತಿಳಿದು, ಲೋಭದಿಂದ ಭೋಜನವನ್ನು ಮಾಡಿದರೆ ಅವನ ಪಾಪವು ಗವಾನೃತಕ್ಕೆ ಸಮವಾಗುತ್ತದೆ.

ಅನ್ನೇನಾನ್ನಂ ಚ ಯೋ ಲಿಪ್ಸೇತ್ ಕರ್ಮಾರ್ಥಂ ಚೈವ ಭಾರತ ।
ಆಮಂತ್ರಯತಿ ರಾಜೇಂದ್ರ ತಸ್ಯಾಧರ್ಮೋಽನೃತಂ ಸ್ಮೃತಮ್ ॥೫೫॥

ಎಲೈ ಭಾರತನೇ, ಯಾವನು ಅನ್ನವನ್ನು ನೀಡಿ ಅನ್ನವನ್ನು ಪಡೆಯಲು ಇಚ್ಛಿಸುತ್ತಾನೆಯೋ (ತಾನು ಆಹ್ವಾನ ಮಾಡಿದರೆ ಅವರೂ ಆಹ್ವಾನ ಮಾಡುತ್ತಾರೆಂದು ಬಯಸುತ್ತಾನೆಯೋ) ದೈವ- ಪಿತೃಕಾರ್ಯಾರ್ಥವಾಗಿ ಧನವನ್ನು ಸಂಗ್ರಹಿಸಿ ಆಹ್ವಾನ ಮಾಡುತ್ತಾನೆಯೋ, ಎಲೈ ರಾಜೇಂದ್ರನೇ, ಅವನ ಪಾಪವು ಅನೃತವಚನದ ಪಾಪಕ್ಕೆ ಸಮವಾಗುತ್ತದೆ.

ಅವೇದವ್ರತಚಾರಿತ್ರಾಸ್ತ್ರಿಭ್ಯೋ ವರ್ಣೇಭ್ಯೋ ಧಿಷ್ಠಿರ ।
ಮಂತ್ರವತ್ಪರಿವಿಷ್ಯಂತೇ ತೇಷ್ವಧರ್ಮೋ ಗವಾನೃತಮ್ ॥೫೬॥

ಎಲೈ ಯುಧಿಷ್ಠಿರನೇ, ವೇದ, ವ್ರತ ಮತ್ತು ಚಾರಿತ್ರ್ಯವಿಲ್ಲದವರಿಗೆ ಮೂರು ವರ್ಣದವರು ಮಂತ್ರಜ್ಞನೆಂದು ತಿಳಿದು ಶ್ರಾದ್ಧಭೋಜನವನ್ನು ನೀಡಿದರೆ ಅವರಿಗೆ ಗವಾನೃತ ದೋಷವು ಬರುತ್ತದೆ.

ಯುಧಿಷ್ಠಿರಃ

ಪಿತ್ರ್ಯಂ ವಾಪ್ಯಥ ವಾ ದೈವಂ ದೀಯತೇ ಯತ್ತ್ವಾಮಹ ।
ಏತದಿಚ್ಛಾಮ್ಯಹಂ ಶ್ರೋತುಂ ದತ್ತಂ ಯೇಷು ಮಹಾಫಲಮ್ ॥೫೭॥

ಯುಧಿಷ್ಠಿರ– ಪಿತಾಮಹನೇ, ದೈವಕಾರ್ಯದಲ್ಲಾಗಲೀ ಅಥವಾ ಪಿತೃಕಾರ್ಯದಲ್ಲಾಗಲೀ ಯಾರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ ಎಂದು ತಿಳಿಯಲು ಬಯಸುತ್ತೇನೆ.

ಭೀಷ್ಮಃ

ಯೇಷಾಂ ದಾರಾಃ ಪ್ರತೀಕ್ಷಂತೇ ಸುವೃಷ್ಟಿಮಿವ ಕರ್ಷಕಾಃ ।
ಉಚ್ಛೇಷಪರಿಶೇಷಂ ಹಿ ತಾನ್ ಭೋಜಯ ಯುಧಿಷ್ಠಿರ ॥೫೮॥

ಭೀಷ್ಮ– ಕೃಷೀವಲನು ಒಳ್ಳೆಯ ಮಳೆಯನ್ನು ನಿರೀಕ್ಷಿಸುವಂತೆ ಯಾವ ಪತ್ನಿಯು ಪತಿಯ ಉಚ್ಛಿಷ್ಟವನ್ನು ನಿರೀಕ್ಷಿಸುತ್ತಾಳೆಯೋ ಎಲೈ ಯುಧಿಷ್ಠಿರನೇ, ಅಂತಹವರಿಗೆ ಭೋಜನವನ್ನು ನೀಡು.

ಚಾರಿತ್ರನಿಯತಾ ರಾಜನ್ ಯೇ ಕೃಶಾಃ ಕೃಶವೃತ್ತಯಃ ।
ಅರ್ಥಿನಶ್ಚೋಪಗಚ್ಛಂತಿ ತೇಷು ದತ್ತಂ ಮಹಾಫಲಮ್ ॥೫೯॥

ಎಲೈ ರಾಜನೇ, ಚಾರಿತ್ರಸಂಪನ್ನರಾಗಿ, ಕೃಶರಾಗಿ, ದುರ್ಬಲವಾದ ಜೀವನೋಪಾಯವನ್ನು ಹೊಂದಿ ಪ್ರಾರ್ಥಿಸಿ ಸಮೀಪಕ್ಕೆ ಬರುತ್ತಾರೆಯೋ ಅಂತಹವರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ.

ತದ್ಭಕ್ತಾಸ್ತದ್ಗೃಹಾ ರಾಜಂಸ್ತದ್ಧನಾಸ್ತದಪಾಶ್ರಯಾಃ ।
ಅರ್ಥಿನಶ್ಚ ಭವಂತ್ಯರ್ಥೇ ತೇಷು ದತ್ತಂ ಮಹಾಫಲಮ್ ॥೬೦॥

ಎಲೈ ರಾಜನೇ, ತನ್ನ ಭಕ್ತರು, ತನ್ನ ಗೃಹದಲ್ಲಿ ವಾಸಿಸುವವರು, ತನ್ನ ಧನದಲ್ಲೇ ಜೀವಿಸುವವರು, ತನ್ನನ್ನೇ ಆಶ್ರಯಿಸಿಕೊಂಡಿರುವವರು, ತಮ್ಮ ಕಾರ್ಯಕ್ಕಾಗಿ ತನ್ನನ್ನೇ ಪ್ರಾರ್ಥಿಸುವವರು ಅಂತಹವರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ.

ತಸ್ಕರೇಭ್ಯಃ ಪರೇಭ್ಯೋ ವಾ ಯೇ ಭಯಾರ್ತಾ ಯುಧಿಷ್ಠಿರ ।
ಅರ್ಥಿನೋ ಭೋಕ್ತುಮಿಚ್ಛಂತಿ ತೇಷು ದತ್ತಂ ಮಹಾಫಲಮ್ ॥೬೧॥

ಎಲೈ ಯುಧಿಷ್ಠಿರನೇ, ಕಳ್ಳರಿಗೋ ಅಥವಾ ಬೇರೆಯವರಿಗೋ ಹೆದರಿ ಅರ್ಥಿಗಳಾಗಿ ಯಾರು ಭೋಜನಕ್ಕೆ ಬರುತ್ತಾರೆಯೋ ಅಂತಹವರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುವುದು.

ಅಕಲ್ಕಸ್ಯಾಪಿ ವಿಪ್ರಸ್ಯ ಭೈಕ್ಷೋತ್ಕರಕೃತಾತ್ಮನಃ ।
ಬಟವೋ ಯಸ್ಯ ಭಿಕ್ಷಂತಿ ತೇಭ್ಯೋ ದತ್ತಂ ಮಹಾಫಲಮ್ ॥೬೨॥

ನಿರ್ವಂಚನೆಯಿಂದ ಜೀವಿಸಿ (ವೈದ್ಯವೃತ್ತಿಯನ್ನು ಮಾಡದ) ಭಿಕ್ಷಾವೃತ್ತಿಯಿಂದ ದೇಹವನ್ನು ಪೋಷಿಸುವ ಬ್ರಾಹ್ಮಣನ ಭಿಕ್ಷೆಯನ್ನು ಬೇಡುವ ವಟುಗಳಿಗೆ ಕೊಟ್ಟುದುದು ಮಹಾಫಲವನ್ನು ಕೊಡುತ್ತದೆ.

ಹೃತಸ್ವಾ ಹೃತದಾರಾಶ್ಚ ಯೇ ವಿಪ್ರಾ ದೇಶಸಂಪ್ಲವೇ ।
ಅರ್ಥಾರ್ಥಮಭಿಗಚ್ಛಂತಿ ತೇಭ್ಯೋ ದತ್ತಂ ಮಹಾಫಲಮ್ ॥೬೩॥

ದೇಶಕ್ಕೆ ಕ್ಷೋಭೆಯುಂಟಾಗಿ ಯಾವ ಬ್ರಾಹ್ಮಣರು ಪತ್ನಿಯನ್ನೂ, ಸರ್ವಸ್ವವನ್ನೂ ಕಳೆದುಕೊಂಡು, ಜೀವನವನ್ನು ಸಾಗಿಸುವ ಧನಕ್ಕಾಗಿ ತನ್ನ ಬಳಿಗೆ ಬರುತ್ತಾರೆಯೋ ಅವರಿಗೆ ನೀಡಿದುದು ಮಹಾಫಲವನ್ನು ಕೊಡುತ್ತದೆ.

ವ್ರತಿನೋ ನಿಯಮಸ್ಥಾಶ್ಚ ಯೇ ವಿಪ್ರಾಃ ಶ್ರುತಸಮ್ಮತಾಃ ।
ತತ್ಸಮಾಪ್ತ್ಯರ್ಥಮಿಚ್ಛಂತಿ ತೇಷು ದತ್ತಂ ಮಹಾಫಲಮ್ ॥೬೪॥

ವಿದ್ಯೆಯಿಂದ ಸಮ್ಮತರಾದ ಯಾವ ಬ್ರಾಹ್ಮಣರು ವ್ರತ-ನೇಮನಿಷ್ಠರಾಗಿ ಅವುಗಳನ್ನು ಸಮಾಪ್ತಿಗೊಳಿಸಲು ಬಯಸಿ ಸಮೀಪಿಸುತ್ತಾರೆಯೋ ಅವರಿಗೆ ನೀಡಿದುದು ಮಹಾಫಲವನ್ನು ಕೊಡುತ್ತದೆ.

ಅವ್ಯುತ್ಕ್ರಾಂತಾಶ್ಚ ಧರ್ಮೇಷು ಪಾಷಂಡಸಮಯೇಷು ಚ ।
ಕೃಶಪ್ರಾಣಾಃ ಕೃಶಧನಾಸ್ತೇಷು ದತ್ತಂ ಮಹಾಫಲಮ್ ॥೬೫॥

ಧರ್ಮಮಾರ್ಗವನ್ನು ಬಿಡದೆ, ಪಾಷಂಡಮಾರ್ಗವನ್ನು ಹಿಡಿಯದೆ ಯಾರು ಅಲ್ಪಪ್ರಮಾಣದ ಧನವನ್ನು ಬೇಡುತ್ತಾರೆಯೋ ಅವರಿಗೆ ನೀಡಿದುದು ಮಹಾಫಲವನ್ನು ಕೊಡುತ್ತದೆ.

ಕೃತಸರ್ವಸ್ವಹರಣಾ ನಿರ್ದೋಷಾಃ ಪ್ರಭವಿಷ್ಣುಭಿಃ ।
ಸ್ಪೃಹಯಂತಿ ಚ ಭುಕ್ತಾನ್ನಂ ತೇಷು ದತ್ತಂ ಮಹಾಫಲಮ್ ॥೬೬॥

ರಾಜರಿಂದ ಅಥವಾ ಪ್ರಬಲರಿಂದ ತಮ್ಮ ಸರ್ವಸ್ವವೂ ಅಪಹರಿಸಲ್ಪಟ್ಟು ನಿರ್ದೋಷರಾದ ಯಾರು ಅನ್ನವನ್ನು ಬಯಸುತ್ತಾರೆಯೋ ಅವರಿಗೆ ನೀಡಿದುದು ಮಹಾಫಲವನ್ನು ಕೊಡುತ್ತದೆ.

ತಪಸ್ವಿನಸ್ತಪೋನಿಷ್ಠಾಸ್ತೇಷಾಂ ಭೈಕ್ಷಚರಾಶ್ಚ ಯೇ ।
ಅರ್ಥಿನಃ ಕಿಂಚಿದಿಚ್ಛಂತಿ ತೇಷು ದತ್ತಂ ಮಹಾಫಲಮ್ ॥೬೭॥

ತಪಸ್ಸಿನಲ್ಲಿ ನಿರತರಾದ ತಪಸ್ವಿಗಳು ಮತ್ತು ಅವರ ಸಲುವಾಗಿ ಭಿಕ್ಷೆಯನ್ನು ಬೇಡುವವರು ಅರ್ಥಿಗಳಾಗಿ ಏನಾದರೂ ಬಯಸಿದರೆ ಅವರಿಗೆ ಕೊಟ್ಟುದುದು ಮಹಾಫಲವನ್ನು ಕೊಡುತ್ತದೆ.

ವ್ರತಾನಾಂ ಪಾರಣಾರ್ಥಾಯ ಗುರ್ವರ್ಥೇ ಯಜ್ಞದಕ್ಷಿಣಾಮ್ ।
ನಿವೇಶಾರ್ಥಂ ಚ ವಿದ್ವಾಂಸಸ್ತೇಷಾಂ ದತ್ತಂ ಮಹಾಫಲಮ್ ॥೬೮॥

ವ್ರತಗಳನ್ನು ಸಮಾಪ್ತಿಗೊಳಿಸುವುದಕ್ಕಾಗಿ, ಗುರುದಕ್ಷಿಣೆಯನ್ನು ಕೊಡುವುದಕ್ಕಾಗಿ, ಯಜ್ಞದಕ್ಷಿಣೆಯನ್ನು ಕೊಡುವುದಕ್ಕಾಗಿ, ಗೃಹಸ್ಥಾಶ್ರಮವನ್ನು ಸ್ವೀಕರಿಸುವುದಕ್ಕಾಗಿ ವಿದ್ವಾಂಸರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ.

ಪಿತ್ರೋಶ್ಚ ರಕ್ಷಣಾರ್ಥಾಯ ಪುತ್ರದಾರಾರ್ಥಮೇವ ವಾ ।
ಮಹಾವ್ಯಾಧಿವಿಮೋಕ್ಷಾರ್ಥಂ ತೇಷು ದತ್ತಂ ಮಹಾಫಲಮ್ ॥೬೯॥

ತಂದೆ-ತಾಯಿಗಳ ರಕ್ಷಣೆಗಾಗಿ, ಪತ್ನೀ-ಪುತ್ರರ ರಕ್ಷಣೆಗಾಗಿ, ಮಹಾವ್ಯಾಧಿಗಳಿಂದ ಬಿಡುಗಡೆ ಹೊಂದುವುದಕ್ಕಾಗಿ ನೀಡಿದುದು ಮಹಾಫಲವನ್ನು ಕೊಡುತ್ತದೆ.

ಮಹಾಫಲವಿಧಿರ್ದಾನೇ ಶ್ರುತಸ್ತೇ ಭರತರ್ಷಭ ।
ನಿರಯಂ ಯೇನ ಗಚ್ಛಂತಿ ಸ್ವರ್ಗಂ ಚೈವ ಹಿ ತಚ್ಛೃಣು ॥೭೦॥

ಎಲೈ ಭರತಶ್ರೇಷ್ಠನೇ, ಧನದ ವಿಷಯದಲ್ಲಿ ಮಹಾಫಲವನ್ನು ಗಳಿಸುವ ವಿಧಾನವನ್ನು ನಿನಗೆ ಹೇಳಿದ್ದೇನೆ. ಯಾವ ಕರ್ಮಗಳಿಂದ ನರಕಕ್ಕೆ ಹೋಗುತ್ತಾರೆ ಅಥವಾ ಸ್ವರ್ಗಕ್ಕೆ ಹೋಗುತ್ತಾರೆ ಎಂದು ಹೇಳುತ್ತೇನೆ, ಅದನ್ನು ಕೇಳು.

ಬಾಲಾಃ ಸ್ತ್ರಿಯಶ್ಚ ವಾಂಛಂತಿ ಸುಭಕ್ತಂ ಚಾಪ್ಯಸಾಧನಾಃ ।
ಸ್ವರ್ಗಮಾಯಾಂತಿ ದತ್ತ್ವೈಷಾಂ ನಿರಯಾನ್ ನೋಪಯಾಂತಿ ತೇ ॥

ಜೀವನೋಪಾಯ ರಹಿತರಾದ ಯಾರ ಸ್ತ್ರೀಯರು ಮತ್ತು ಬಾಲಕರು ಅನ್ನವನ್ನು ಬಯಸುತ್ತಾರೆಯೋ ಅವರಿಗೆ ಅನ್ನವನ್ನು ನೀಡಿದವರು ಸ್ವರ್ಗಕ್ಕೆ ಹೋಗುತ್ತಾರೆ. ನರಕಕ್ಕೆ ಹೋಗುವುದಿಲ್ಲ.

ಗುರ್ವರ್ಥಂ ವಾऽಭಯಾರ್ಥಂ ವಾ ವರ್ಜಯಿತ್ವಾ ಯುಧಿಷ್ಠಿರ ।
ಯೇऽನೃತಂ ಕಥಯಂತಿ ಸ್ಮ ತೇ ವೈ ನಿರಯಗಾಮಿನಃ ॥೭೨॥

ಎಲೈ ಯುಧಿಷ್ಠಿರನೇ, ಯಾರು ಗುರುಗಳ ಸಲುವಾಗಿ ಅಥವಾ ಅಭಯವನ್ನು ಕೊಡುವ ಸಲುವಾಗಿ ಬಿಟ್ಟು ಬೇರೆಯ ಕಾರಣಕ್ಕಾಗಿ ಸುಳ್ಳನ್ನು ಹೇಳುತ್ತಾರೆಯೋ ಅವರು ನರಕಕ್ಕೆ ಹೋಗುತ್ತಾರೆ.

ಪರದಾರಾಭಿಹರ್ತಾರಃ ಪರದಾರಾಭಿಮರ್ಶಿನಃ ।
ಪರದಾರಪ್ರಯೋಕ್ತಾರಸ್ತೇ ವೈ ನಿರಯಗಾಮಿನಃ ॥೭೩॥

ಇನ್ನೊಬ್ಬರ ಪತ್ನಿಯನ್ನು ಅಪಹರಿಸುವವರು, ಇನ್ನೊಬ್ಬರ ಪತ್ನಿಯನ್ನು ಭೋಗಿಸುವವರು, ಇನ್ನೊಬ್ಬರ ಪತ್ನಿಯನ್ನು ಮತ್ತೊಬ್ಬನೆಡೆಗೆ ಕಳುಹಿಸುವವರು ನರಕಕ್ಕೆ ಹೋಗುತ್ತಾರೆ.

ಯೇ ಪರಸ್ವಾಪಹರ್ತಾರಃ ಪರಸ್ವಾನಾಂ ಚ ನಾಶಕಾಃ ।
ಸೂಚಕಾಶ್ಚ ಪರೇಷಾಂ ಯೇ ತೇ ವೈ ನಿರಯಗಾಮಿನಃ ॥೭೪॥

ಪರಸ್ವತ್ತನ್ನು ಅಪಹರಿಸುವವರು, ಪರಸ್ವತ್ತನ್ನು ನಾಶಪಡಿಸುವವರು, ಚಾಡಿಯನ್ನು ಹೇಳುವವರು ನರಕಕ್ಕೆ ಹೋಗುತ್ತಾರೆ.

ಅವ್ಯುತ್ಕ್ರಾಂತಾಶ್ಚ ಧರ್ಮೇಷು ಪಾಷಂಡಸಮಯೇಷು ಚ ।
ಕೃಶಪ್ರಾಣಾಃ ಕೃಶಧನಾಸ್ತೇಷು ದತ್ತಂ ಮಹಾಫಲಮ್ ॥೬೫॥

ಧರ್ಮಮಾರ್ಗವನ್ನು ಬಿಡದೆ, ಪಾಷಂಡಮಾರ್ಗವನ್ನು ಹಿಡಿಯದೆ ಯಾರು ಅಲ್ಪಪ್ರಮಾಣದ ಧನವನ್ನು ಬೇಡುತ್ತಾರೆಯೋ ಅವರಿಗೆ ನೀಡಿದುದು ಮಹಾಫಲವನ್ನು ಕೊಡುತ್ತದೆ.

ಕೃತಸರ್ವಸ್ವಹರಣಾ ನಿರ್ದೋಷಾಃ ಪ್ರಭವಿಷ್ಣುಭಿಃ ।
ಸ್ಪೃಹಯಂತಿ ಚ ಭುಕ್ತಾನ್ನಂ ತೇಷು ದತ್ತಂ ಮಹಾಫಲಮ್ ॥೬೬॥

ರಾಜರಿಂದ ಅಥವಾ ಪ್ರಬಲರಿಂದ ತಮ್ಮ ಸರ್ವಸ್ವವೂ ಅಪಹರಿಸಲ್ಪಟ್ಟು ನಿರ್ದೋಷರಾದ ಯಾರು ಅನ್ನವನ್ನು ಬಯಸುತ್ತಾರೆಯೋ ಅವರಿಗೆ ನೀಡಿದುದು ಮಹಾಫಲವನ್ನು ಕೊಡುತ್ತದೆ.

ತಪಸ್ವಿನಸ್ತಪೋನಿಷ್ಠಾಸ್ತೇಷಾಂ ಭೈಕ್ಷಚರಾಶ್ಚ ಯೇ ।
ಅರ್ಥಿನಃ ಕಿಂಚಿದಿಚ್ಛಂತಿ ತೇಷು ದತ್ತಂ ಮಹಾಫಲಮ್ ॥೬೭॥

ತಪಸ್ಸಿನಲ್ಲಿ ನಿರತರಾದ ತಪಸ್ವಿಗಳು ಮತ್ತು ಅವರ ಸಲುವಾಗಿ ಭಿಕ್ಷೆಯನ್ನು ಬೇಡುವವರು ಅರ್ಥಿಗಳಾಗಿ ಏನಾದರೂ ಬಯಸಿದರೆ ಅವರಿಗೆ ಕೊಟ್ಟುದುದು ಮಹಾಫಲವನ್ನು ಕೊಡುತ್ತದೆ.

ವ್ರತಾನಾಂ ಪಾರಣಾರ್ಥಾಯ ಗುರ್ವರ್ಥೇ ಯಜ್ಞದಕ್ಷಿಣಾಮ್ ।
ನಿವೇಶಾರ್ಥಂ ಚ ವಿದ್ವಾಂಸಸ್ತೇಷಾಂ ದತ್ತಂ ಮಹಾಫಲಮ್ ॥೬೮॥

ವ್ರತಗಳನ್ನು ಸಮಾಪ್ತಿಗೊಳಿಸುವುದಕ್ಕಾಗಿ, ಗುರುದಕ್ಷಿಣೆಯನ್ನು ಕೊಡುವುದಕ್ಕಾಗಿ, ಯಜ್ಞದಕ್ಷಿಣೆಯನ್ನು ಕೊಡುವುದಕ್ಕಾಗಿ, ಗೃಹಸ್ಥಾಶ್ರಮವನ್ನು ಸ್ವೀಕರಿಸುವುದಕ್ಕಾಗಿ ವಿದ್ವಾಂಸರಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ.

ಪಿತ್ರೋಶ್ಚ ರಕ್ಷಣಾರ್ಥಾಯ ಪುತ್ರದಾರಾರ್ಥಮೇವ ವಾ ।
ಮಹಾವ್ಯಾಧಿವಿಮೋಕ್ಷಾರ್ಥಂ ತೇಷು ದತ್ತಂ ಮಹಾಫಲಮ್ ॥೬೯॥

ತಂದೆ-ತಾಯಿಗಳ ರಕ್ಷಣೆಗಾಗಿ, ಪತ್ನೀ-ಪುತ್ರರ ರಕ್ಷಣೆಗಾಗಿ, ಮಹಾವ್ಯಾಧಿಗಳಿಂದ ಬಿಡುಗಡೆ ಹೊಂದುವುದಕ್ಕಾಗಿ ನೀಡಿದುದು ಮಹಾಫಲವನ್ನು ಕೊಡುತ್ತದೆ.

ಮಹಾಫಲವಿಧಿರ್ದಾನೇ ಶ್ರುತಸ್ತೇ ಭರತರ್ಷಭ ।
ನಿರಯಂ ಯೇನ ಗಚ್ಛಂತಿ ಸ್ವರ್ಗಂ ಚೈವ ಹಿ ತಚ್ಛೃಣು ॥೭೦॥

ಎಲೈ ಭರತಶ್ರೇಷ್ಠನೇ, ಧನದ ವಿಷಯದಲ್ಲಿ ಮಹಾಫಲವನ್ನು ಗಳಿಸುವ ವಿಧಾನವನ್ನು ನಿನಗೆ ಹೇಳಿದ್ದೇನೆ. ಯಾವ ಕರ್ಮಗಳಿಂದ ನರಕಕ್ಕೆ ಹೋಗುತ್ತಾರೆ ಅಥವಾ ಸ್ವರ್ಗಕ್ಕೆ ಹೋಗುತ್ತಾರೆ ಎಂದು ಹೇಳುತ್ತೇನೆ, ಅದನ್ನು ಕೇಳು.

ಬಾಲಾಃ ಸ್ತ್ರಿಯಶ್ಚ ವಾಂಛಂತಿ ಸುಭಕ್ತಂ ಚಾಪ್ಯಸಾಧನಾಃ ।
ಸ್ವರ್ಗಮಾಯಾಂತಿ ದತ್ತ್ವೈಷಾಂ ನಿರಯಾನ್ ನೋಪಯಾಂತಿ ತೇ ॥

ಜೀವನೋಪಾಯ ರಹಿತರಾದ ಯಾರ ಸ್ತ್ರೀಯರು ಮತ್ತು ಬಾಲಕರು ಅನ್ನವನ್ನು ಬಯಸುತ್ತಾರೆಯೋ ಅವರಿಗೆ ಅನ್ನವನ್ನು ನೀಡಿದವರು ಸ್ವರ್ಗಕ್ಕೆ ಹೋಗುತ್ತಾರೆ. ನರಕಕ್ಕೆ ಹೋಗುವುದಿಲ್ಲ.

ಗುರ್ವರ್ಥಂ ವಾऽಭಯಾರ್ಥಂ ವಾ ವರ್ಜಯಿತ್ವಾ ಯುಧಿಷ್ಠಿರ ।
ಯೇऽನೃತಂ ಕಥಯಂತಿ ಸ್ಮ ತೇ ವೈ ನಿರಯಗಾಮಿನಃ ॥೭೨॥

ಎಲೈ ಯುಧಿಷ್ಠಿರನೇ, ಯಾರು ಗುರುಗಳ ಸಲುವಾಗಿ ಅಥವಾ ಅಭಯವನ್ನು ಕೊಡುವ ಸಲುವಾಗಿ ಬಿಟ್ಟುಬೇರೆಯ ಕಾರಣಕ್ಕಾಗಿ ಸುಳ್ಳನ್ನು ಹೇಳುತ್ತಾರೆಯೋ ಅವರು ನರಕಕ್ಕೆ ಹೋಗುತ್ತಾರೆ.

ಪರದಾರಾಭಿಹರ್ತಾರಃ ಪರದಾರಾಭಿಮರ್ಶಿನಃ ।
ಪರದಾರಪ್ರಯೋಕ್ತಾರಸ್ತೇ ವೈ ನಿರಯಗಾಮಿನಃ ॥೭೩॥

ಇನ್ನೊಬ್ಬರ ಪತ್ನಿಯನ್ನು ಅಪಹರಿಸುವವರು, ಇನ್ನೊಬ್ಬರ ಪತ್ನಿಯನ್ನು ಭೋಗಿಸುವವರು, ಇನ್ನೊಬ್ಬರ ಪತ್ನಿಯನ್ನು ಮತ್ತೊಬ್ಬನೆಡೆಗೆ ಕಳುಹಿಸುವವರು ನರಕಕ್ಕೆ ಹೋಗುತ್ತಾರೆ.

ಯೇ ಪರಸ್ವಾಪಹರ್ತಾರಃ ಪರಸ್ವಾನಾಂ ಚ ನಾಶಕಾಃ ।
ಸೂಚಕಾಶ್ಚ ಪರೇಷಾಂ ಯೇ ತೇ ವೈ ನಿರಯಗಾಮಿನಃ ॥೭೪॥

ಪರಸ್ವತ್ತನ್ನು ಅಪಹರಿಸುವವರು, ಪರಸ್ವತ್ತನ್ನು ನಾಶಪಡಿಸುವವರು, ಚಾಡಿಯನ್ನು ಹೇಳುವವರು ನರಕಕ್ಕೆ ಹೋಗುತ್ತಾರೆ.

ಪ್ರಪಾಣಾಂ ಚ ಸಭಾನಾಂ ಚ ಸಂಕ್ರಮಾಣಾಂ ಚ ಭಾರತ ।
ಆಗಾರಾಣಾಂ ಚ ಭೇತ್ತಾರೋ ನರಾ ನಿರಯಗಾಮಿನಃ ॥೭೫॥

ಎಲೈ ಭಾರತನೇ, ಅರವಟ್ಟಿಗೆಗಳು, ಸಭಾಮಂದಿರಗಳು, ಸೇತುವೆಗಳು, ಮನೆಗಳು ಇವುಗಳನ್ನು ಒಡೆಯುವ ಮನುಷ್ಯರು ನರಕಕ್ಕೆ ಹೋಗುತ್ತಾರೆ.

ಅನಾಥಾಂ ಪ್ರಮದಾಂ ಬಾಲಾಂ ವೃದ್ಧಾಂ ಭೀತಾಂ ತಪಸ್ವಿನೀಮ್ ।
ವಂಚಯಂತಿ ನರಾ ಯೇ ಚ ತೇ ವೈ ನಿರಯಗಾಮಿನಃ ॥೭೬॥

ಅನಾಥಳೂ ಅಥವಾ ಚಿಕ್ಕವಳೂ ಅಥವಾ ಬಾಲಕಿಯೂ ಅಥವಾ ವೃದ್ಧಳೂ ಅಥವಾ ಭೀತಳೂ ಅಥವಾ ದರಿದ್ರಳೂ ಆದ ಸ್ತ್ರೀಯನ್ನು ವಂಚಿಸುವವರು ನರಕಕ್ಕೆ ಹೋಗುತ್ತಾರೆ.

ವೃತ್ತಿಚ್ಛೇದಂ ಗೃಹಚ್ಛೇದಂ ದಾರಚ್ಛೇದಂ ಚ ಭಾರತ ।
ಮಿತ್ರಚ್ಛೇದಂ ತಥಾಶಾಯಾಸ್ತೇ ವೈ ನಿರಯಗಾಮಿನಃ ॥೭೭॥

ಎಲೈ ಭಾರತನೇ, ವೃತ್ತಿಚ್ಛೇದವನ್ನು ಮಾಡುವವರು, ಮನೆಯನ್ನು ಒಡೆಯುವವರು, ದಾಂಪತ್ಯವನ್ನು ಒಡೆಯುವವರು, ಮಿತ್ರಚ್ಛೇದವನ್ನು ಮಾಡುವವರು, ಆಶಾಭಂಗವನ್ನು ಮಾಡುವವರು ನರಕಕ್ಕೆ ಹೋಗುತ್ತಾರೆ.

ಸೂಚಕಾಃ ಸಂಧಿಭೇತ್ತಾರಃ ಪರವೃತ್ತ್ಯುಪಜೀವಿನಃ ।
ಅಕೃತಜ್ಞಾಶ್ಚ ಮಿತ್ರಾಣಾಂ ತೇ ವೈ ನಿರಯಗಾಮಿನಃ ॥೭೮॥

ಚಾಡಿಕೋರರು, ಸ್ನೇಹವನ್ನು ಭೇದಿಸುವವರು, ಇನ್ನೊಬ್ಬರಿಂದ ದುಡಿಸಿ ಜೀವಿಸುವವರು, ಮಿತ್ರರಲ್ಲಿ ಕೃತಜ್ಞತೆ ಇಲ್ಲದವರು ನರಕಕ್ಕೆ ಹೋಗುತ್ತಾರೆ.

ಪಾಷಂಡಾ ದೂಷಕಾಶ್ಚೈವ ಸಮಯಾನಾಂ ಚ ದೂಷಕಾಃ ।
ಯೇ ಪ್ರತ್ಯವಸಿತಾಶ್ಚೈವ ತೇ ವೈ ನಿರಯಗಾಮಿನಃ ॥೭೯॥

ಪಾಷಂಡರು, ಎಲ್ಲರನ್ನೂ ದೂಷಿಸುವವರು, ಧರ್ಮದ ವಿಧಿಗಳನ್ನು ದೂಷಿಸುವವರು, ಸಂನ್ಯಾಸವನ್ನು ಸ್ವೀಕರಿಸಿ ಪುನಃ ಗೃಹಸ್ಥಾಶ್ರಮವನ್ನು ಸ್ವೀಕರಿಸುವವರು ಎಲ್ಲರೂ ನರಕಕ್ಕೆ ಹೋಗುತ್ತಾರೆ.

ವಿಷಮವ್ಯವಹಾರಾಶ್ಚ ವಿಷಮಾಶ್ಚೈವ ವೃದ್ಧಿಷು ।
ಲಾಭೇಷು ವಿಷಮಾಶ್ಚೈವ ತೇ ವೈ ನಿರಯಗಾಮಿನಃ ॥೮೦॥

ವ್ಯವಹಾರಗಳಲ್ಲಿ ವಿಷಮರಾದವರು, ಬಡ್ಡಿಯ ವಿಷಯದಲ್ಲಿ ವಿಷಮರಾದವರು, ಲಾಭಗಳ ವಿಷಯದಲ್ಲಿ ವಿಷಮರಾದವರು ನರಕಕ್ಕೆ ಹೋಗುತ್ತಾರೆ.

ದ್ಯೂತಸಂವ್ಯವಹಾರಾಶ್ಚ ನಿಷ್ಪರೀಕ್ಷಾಶ್ಚ ಮಾನವಾಃ ।
ಪ್ರಾಣಿಹಿಂಸಾಪ್ರವೃತ್ತಾಶ್ಚ ತೇ ವೈ ನಿರಯಗಾಮಿನಃ ॥೮೧॥

ದ್ಯೂತವ್ಯವಹಾರವನ್ನು ಮಾಡುವವರು, ಗುಣ-ದೋಷಗಳ ಪರೀಕ್ಷೆಯನ್ನು ತಿಳಿಯದವರು, ಪ್ರಾಣಿಹಿಂಸೆಯಲ್ಲಿ ಪ್ರವೃತ್ತರಾದವರು ನರಕಕ್ಕೆ ಹೋಗುತ್ತಾರೆ.

ಕೃತಾಶಂ ಕೃತನಿರ್ವೇಶಂ ಕೃತಭಕ್ತಂ ಕೃತಶ್ರಮಮ್ ।
ಭೇದೈರ್ಯೇ ವ್ಯಪಕರ್ಷಂತಿ ತೇ ವೈ ನಿರಯಗಾಮಿನಃ ॥೮೨॥

ಒಬ್ಬ ಸ್ವಾಮಿಯ ಬಳಿಯಲ್ಲಿ ಅವನಿಗೆ ಕಷ್ಟಪಟ್ಟು ಕೆಲಸ ಮಾಡಿ, ಅವನಲ್ಲಿ ನಿಷ್ಠೆಯನ್ನು ಹೊಂದಿ, ವಿವಾಹವನ್ನು ಮಾಡಿಕೊಂಡು, ಅವನಲ್ಲಿ ಆಸೆ ಇಟ್ಟುಕೊಂಡಿರುವ ಭೃತ್ಯನನ್ನು ಭೇದೋಪಾಯಗಳಿಂದ ಯಾರು ಸ್ವಾಮಿಯಿಂದ ಬೇರ್ಪಡಿಸುತ್ತಾರೆಯೋ ಅವರು ನರಕಕ್ಕೆ ಹೋಗುತ್ತಾರೆ.

ಪರ್ಯಶ್ನಂತಿ ಚ ಯೇ ದಾರಾನಗ್ನಿಭೃತ್ಯಾತಿಥೀಂಸ್ತಥಾ ।
ಉತ್ಸನ್ನಪಿತೃದೇವೇಜ್ಯಾಸ್ತೇ ವೈ ನಿರಯಗಾಮಿನಃ ॥೮೩॥

ಪತ್ನಿಯನ್ನೂ, ಭೃತ್ಯರನ್ನೂ, ಅತಿಥಿಗಳನ್ನು ಬಿಟ್ಟು ಅಗ್ನಿಯನ್ನು ಪೂಜಿಸದೆ ಯಾರು ಮೊದಲು ಭೋಜನವನ್ನು ಮಾಡುತ್ತಾರೆಯೋ, ಪಿತೃಗಳನ್ನೂ ದೇವತೆಗಳನ್ನೂ ಯಾರು ಪೂಜಿಸುವುದಿಲ್ಲವೋ ಅವರು ನರಕಕ್ಕೆ ಹೋಗುತ್ತಾರೆ.

ವೇದವಿಕ್ರಯಿಣಶ್ಚೈವ ವೇದಾನಾಂ ಚೈವ ದೂಷಕಾಃ ।
ವೇದಾನಾಂ ಲೇಖಕಾಶ್ಚೈವ ತೇ ವೈ ನಿರಯಗಾಮಿನಃ ॥೮೪॥

ವೇದವಿಕ್ರಯವನ್ನು ಮಾಡುವವರು, ವೇದಗಳನ್ನು ದೂಷಿಸುವವರು, ವೇದವನ್ನು ಬರೆಯುವವರು ನರಕಕ್ಕೆ ಹೋಗುತ್ತಾರೆ.

ಚಾತುರಾಶ್ರಮ್ಯಬಾಹ್ಯಾಶ್ಚ ಶ್ರುತಿಬಾಹ್ಯಾಶ್ಚ ಯೇ ನರಾಃ ।
ವಿಕರ್ಮಭಿಶ್ಚ ಜೀವಂತಿ ತೇ ವೈ ನಿರಯಗಾಮಿನಃ ॥೮೫॥

ನಾಲ್ಕು ಆಶ್ರಮಗಳ ಧರ್ಮವನ್ನು ಪಾಲಿಸದೆ, ವೇದಬಾಹ್ಯರಾಗಿ ವಿಕರ್ಮದಿಂದ ಜೀವಿಸುವವರು ನರಕಕ್ಕೆ ಹೋಗುತ್ತಾರೆ.

ಕೇಶವಿಕ್ರಯಿಕಾ ರಾಜನ್ ವಿಷವಿಕ್ರಯಿಕಾಶ್ಚ ಯೇ ।
ಕ್ಷೀರವಿಕ್ರಯಿಕಾಶ್ಚೈವ ತೇ ವೈ ನಿರಯಗಾಮಿನಃ ॥೮೬॥

ಎಲೈ ರಾಜನೇ, ಕೂದಲನ್ನು ಮಾರುವವರು, ವಿಷವನ್ನು ಮಾರುವವರು, ಕ್ಷೀರವನ್ನು ಮಾರುವವರು ನರಕಕ್ಕೆ ಹೋಗುತ್ತಾರೆ.

ಬ್ರಾಹ್ಮಣಾನಾಂ ಗವಾಂ ಚೈವ ಕನ್ಯಾನಾಂ ಚ ಯುಧಿಷ್ಠಿರ ।
ಯೇಽಂತರಂ ಯಾಂತಿ ಕಾರ್ಯೇಷು ತೇ ವೈ ನಿರಯಗಾಮಿನಃ ॥೮೭॥

ಎಲೈ ಯುಧಿಷ್ಠಿರನೇ, ಬ್ರಾಹ್ಮಣರ ಮಧ್ಯದಲ್ಲಿ, ಗೋವುಗಳ ಮಧ್ಯದಲ್ಲಿ, ಕನ್ಯೆಯರ ಮಧ್ಯದಲ್ಲಿ ತಮ್ಮ ಕಾರ್ಯಕ್ಕಾಗಿ ಯಾರು ಹೋಗುತ್ತಾರೆಯೋ ಅವರು ನರಕಕ್ಕೆ ಹೋಗುತ್ತಾರೆ.

ಶಸ್ತ್ರವಿಕ್ರಯಕಾಶ್ಚೈವ ಕರ್ತಾರಶ್ಚ ಯುಧಿಷ್ಠಿರ ।
ಶಲ್ಯಾನಾಂ ಧನುಷಾಂ ಚೈವ ತೇ ವೈ ನಿರಯಗಾಮಿನಃ ॥೮೮॥

ಎಲೈ ಯುಧಿಷ್ಠಿರನೇ, ಶಸ್ತ್ರಗಳನ್ನು ಮಾಡುವವರು, ಮಾರುವವರು, ಈಟಿ ಮತ್ತು ಧನುಸ್ಸುಗಳನ್ನು ಮಾರುವವರು ನರಕಕ್ಕೆ ಹೋಗುತ್ತಾರೆ.

ಶಲ್ಯೈರ್ವಾ ಶಂಕುಭಿರ್ವಾಪಿ ಶ್ವಭ್ರೈರ್ವಾ ಭರತರ್ಷಭ ।
ಯೇ ಮಾರ್ಗಮನುರುಂಧಂತಿ ತೇ ವೈ ನಿರಯಗಾಮಿನಃ ॥೮೯॥

ಎಲೈ ಭರತಶ್ರೇಷ್ಠನೇ, ಹರಿತವಾದ ಗೂಟಗಳಿಂದಾಗಲೀ, ಆಯುಧಗಳಿಂದಾಗಲೀ ಅಥವಾ ರಂಧ್ರಗಳಿಂದಾಗಲೀ ಅಥವಾ ಹಳ್ಳದಿಂದಾಗಲೀ ನಡೆಯುವ ಮಾರ್ಗವನ್ನು ತಡೆಯುವವರು ನರಕಕ್ಕೆ ಹೋಗುತ್ತಾರೆ.

ಉಪಾಧ್ಯಾಯಾಂಶ್ಚ ಭೃತ್ಯಾಂಶ್ಚ ಭಕ್ತಾಂಶ್ಚ ಭರತರ್ಷಭ ।
ಯೇ ತ್ಯಜಂತ್ಯಸಮರ್ಥಾಂಸ್ತಾಂಸ್ತೇ ವೈ ನಿರಯಗಾಮಿನಃ ॥೯೦॥

ಎಲೈ ಭರತಶ್ರೇಷ್ಠನೇ, ಅಶಕ್ತರಾದ ಉಪಾಧ್ಯಾಯರನ್ನು, ಭೃತ್ಯರನ್ನು ಮತ್ತು ಭಕ್ತರನ್ನು ತೊರೆಯುವವರು ನರಕಕ್ಕೆ ಹೋಗುತ್ತಾರೆ.

ಅಪ್ರಾಪ್ತದಮಕಾಶ್ಚೈವ ನಾಸಾನಾಂ ವೇಧಕಾಸ್ತಥಾ ।
ಬಂಧಕಾಶ್ಚ ಪಶೂನಾಂ ಯೇ ತೇ ವೈ ನಿರಯಗಾಮಿನಃ ॥೯೧॥

ಹೋರಿಗಳಿಗೆ ಅಪ್ರಾಪ್ತಕಾಲದಲ್ಲಿ ಬೀಜಗಳನ್ನು ಒಡೆಯುವವರು, ಮೂಗು ದಾರವನ್ನು ಹಾಕುವವರು, ಪಶುಗಳನ್ನು ಬಂಧಿಸಿ ಹಿಂಸೆಯನ್ನು ಕೊಡುವವರು ನರಕಕ್ಕೆ ಹೋಗುತ್ತಾರೆ.

ಅಗೋಪ್ತಾರಶ್ಚಲದ್ರವ್ಯಾ ಬಲಿಷಡ್ಭಾಗತತ್ಪರಾಃ ।
ಸಮರ್ಥಾಶ್ಚಾಪ್ಯದಾತಾರಸ್ತೇ ವೈ ನಿರಯಗಾಮಿನಃ ॥೯೨॥

ಪ್ರಜೆಗಳನ್ನು ರಕ್ಷಿಸದೆ ಛಲದಿಂದ ಅವರ ದ್ರವ್ಯವನ್ನು ಸಂಪಾದಿಸಿ, ಅವರ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ಕರವಾಗಿ ಸ್ವೀಕರಿಸಿ ಸಮರ್ಥರಾದರೂ ದಾನ ಮಾಡದಿರುವ ರಾಜರು ನರಕಕ್ಕೆ ಹೋಗುತ್ತಾರೆ.

ಕ್ಷಾಂತಾನ್ ದಾಂತಾಂಸ್ತಥಾ ಪ್ರಾಜ್ಞಾನ್ ದೀರ್ಘಕಾಲಂ ಸಹೋಷಿತಾನ್।
ತ್ಯಜಂತಿ ಕೃತಕೃತ್ಯಾ ಯೇ ತೇ ವೈ ನಿರಯಗಾಮಿನಃ ॥೯೩॥

ಕ್ಷಮಾವಂತರು, ಇಂದ್ರಿಯನಿಗ್ರಹವುಳ್ಳವರು, ಪ್ರಾಜ್ಞರು, ಬಹುಕಾಲ ತನ್ನ ಜೊತೆಯಲ್ಲಿ ಇದ್ದವರು ಆದವರಿಂದ ತಮ್ಮ ಕಾರ್ಯವನ್ನು ಮಾಡಿಸಿಕೊಂಡು ಅನಂತರ ಪರಿತ್ಯಜಿಸುವವರು ನರಕಕ್ಕೆ ಹೋಗುತ್ತಾರೆ.

ಬಾಲಾನಾಮಥ ವೃದ್ಧಾನಾಂ ದಾಸಾನಾಂ ಚೈವ ಯೇ ನರಾಃ ।
ಅದತ್ತ್ವಾ ಭಕ್ಷಯಂತ್ಯಗ್ರೇ ತೇ ವೈ ನಿರಯಗಾಮಿನಃ ॥೯೪॥

ಬಾಲಕರಿಗೆ, ವೃದ್ಧರಿಗೆ, ದಾಸರಿಗೆ ಅನ್ನವನ್ನು ನೀಡದೆ ತಾವು ಮೊದಲು ಊಟವನ್ನು ಮಾಡುವವರು ನರಕಕ್ಕೆ ಹೋಗುತ್ತಾರೆ.

ಚಾತುರಾಶ್ರಮ್ಯಬಾಹ್ಯಾಶ್ಚ ಶ್ರುತಿಬಾಹ್ಯಾಶ್ಚ ಯೇ ನರಾಃ ।
ವಿಕರ್ಮಭಿಶ್ಚ ಜೀವಂತಿ ತೇ ವೈ ನಿರಯಗಾಮಿನಃ ॥೮೫॥

ನಾಲ್ಕು ಆಶ್ರಮಗಳ ಧರ್ಮವನ್ನು ಪಾಲಿಸದೆ, ವೇದಬಾಹ್ಯರಾಗಿ ವಿಕರ್ಮದಿಂದ ಜೀವಿಸುವವರು ನರಕಕ್ಕೆ ಹೋಗುತ್ತಾರೆ.

ಕೇಶವಿಕ್ರಯಿಕಾ ರಾಜನ್ ವಿಷವಿಕ್ರಯಿಕಾಶ್ಚ ಯೇ ।
ಕ್ಷೀರವಿಕ್ರಯಿಕಾಶ್ಚೈವ ತೇ ವೈ ನಿರಯಗಾಮಿನಃ ॥೮೬॥

ಎಲೈ ರಾಜನೇ, ಕೂದಲನ್ನು ಮಾರುವವರು, ವಿಷವನ್ನು ಮಾರುವವರು, ಕ್ಷೀರವನ್ನು ಮಾರುವವರು ನರಕಕ್ಕೆ ಹೋಗುತ್ತಾರೆ.

ಬ್ರಾಹ್ಮಣಾನಾಂ ಗವಾಂ ಚೈವ ಕನ್ಯಾನಾಂ ಚ ಯುಧಿಷ್ಠಿರ ।
ಯೇಽಂತರಂ ಯಾಂತಿ ಕಾರ್ಯೇಷು ತೇ ವೈ ನಿರಯಗಾಮಿನಃ ॥೮೭॥

ಎಲೈ ಯುಧಿಷ್ಠಿರನೇ, ಬ್ರಾಹ್ಮಣರ ಮಧ್ಯದಲ್ಲಿ, ಗೋವುಗಳ ಮಧ್ಯದಲ್ಲಿ, ಕನ್ಯೆಯರ ಮಧ್ಯದಲ್ಲಿ ತಮ್ಮ ಕಾರ್ಯಕ್ಕಾಗಿ ಯಾರು ಹೋಗುತ್ತಾರೆಯೋ ಅವರು ನರಕಕ್ಕೆ ಹೋಗುತ್ತಾರೆ.

ಶಸ್ತ್ರವಿಕ್ರಯಕಾಶ್ಚೈವ ಕರ್ತಾರಶ್ಚ ಯುಧಿಷ್ಠಿರ ।
ಶಲ್ಯಾನಾಂ ಧನುಷಾಂ ಚೈವ ತೇ ವೈ ನಿರಯಗಾಮಿನಃ ॥೮೮॥

ಎಲೈ ಯುಧಿಷ್ಠಿರನೇ, ಶಸ್ತ್ರಗಳನ್ನು ಮಾಡುವವರು, ಮಾರುವವರು, ಈಟಿ ಮತ್ತು ಧನುಸ್ಸುಗಳನ್ನು ಮಾರುವವರು ನರಕಕ್ಕೆ ಹೋಗುತ್ತಾರೆ.

ಶಲ್ಯೈರ್ವಾ ಶಂಕುಭಿರ್ವಾಪಿ ಶ್ವಭ್ರೈರ್ವಾ ಭರತರ್ಷಭ ।
ಯೇ ಮಾರ್ಗಮನುರುಂಧಂತಿ ತೇ ವೈ ನಿರಯಗಾಮಿನಃ ॥೮೯॥

ಎಲೈ ಭರತಶ್ರೇಷ್ಠನೇ, ಹರಿತವಾದ ಗೂಟಗಳಿಂದಾಗಲೀ, ಆಯುಧಗಳಿಂದಾಗಲೀ ಅಥವಾ ರಂಧ್ರಗಳಿಂದಾಗಲೀ ಅಥವಾ ಹಳ್ಳದಿಂದಾಗಲೀ ನಡೆಯುವ ಮಾರ್ಗವನ್ನು ತಡೆಯುವವರು ನರಕಕ್ಕೆ ಹೋಗುತ್ತಾರೆ.

ಉಪಾಧ್ಯಾಯಾಂಶ್ಚ ಭೃತ್ಯಾಂಶ್ಚ ಭಕ್ತಾಂಶ್ಚ ಭರತರ್ಷಭ ।
ಯೇ ತ್ಯಜಂತ್ಯಸಮರ್ಥಾಂಸ್ತಾಂಸ್ತೇ ವೈ ನಿರಯಗಾಮಿನಃ ॥೯೦॥

ಎಲೈ ಭರತಶ್ರೇಷ್ಠನೇ, ಅಶಕ್ತರಾದ ಉಪಾಧ್ಯಾಯರನ್ನು, ಭೃತ್ಯರನ್ನು ಮತ್ತು ಭಕ್ತರನ್ನು ತೊರೆಯುವವರು ನರಕಕ್ಕೆ ಹೋಗುತ್ತಾರೆ.

ಅಪ್ರಾಪ್ತದಮಕಾಶ್ಚೈವ ನಾಸಾನಾಂ ವೇಧಕಾಸ್ತಥಾ ।
ಬಂಧಕಾಶ್ಚ ಪಶೂನಾಂ ಯೇ ತೇ ವೈ ನಿರಯಗಾಮಿನಃ ॥೯೧॥

ಹೋರಿಗಳಿಗೆ ಅಪ್ರಾಪ್ತಕಾಲದಲ್ಲಿ ಬೀಜಗಳನ್ನು ಒಡೆಯುವವರು, ಮೂಗು ದಾರವನ್ನು ಹಾಕುವವರು, ಪಶುಗಳನ್ನು ಬಂಧಿಸಿ ಹಿಂಸೆಯನ್ನು ಕೊಡುವವರು ನರಕಕ್ಕೆ ಹೋಗುತ್ತಾರೆ.

ಅಗೋಪ್ತಾರಶ್ಛಲದ್ರವ್ಯಾ ಬಲಿಷಡ್ಭಾಗತತ್ಪರಾಃ ।
ಸಮರ್ಥಾಶ್ಚಾಪ್ಯದಾತಾರಸ್ತೇ ವೈ ನಿರಯಗಾಮಿನಃ ॥೯೨॥

ಪ್ರಜೆಗಳನ್ನು ರಕ್ಷಿಸದೆ ಛಲದಿಂದ ಅವರ ದ್ರವ್ಯವನ್ನು ಸಂಪಾದಿಸಿ, ಅವರ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ಕರವಾಗಿ ಸ್ವೀಕರಿಸಿ ಸಮರ್ಥರಾದರೂ ದಾನ ಮಾಡದಿರುವ ರಾಜರು ನರಕಕ್ಕೆ ಹೋಗುತ್ತಾರೆ.

ಕ್ಷಾಂತಾನ್ ದಾಂತಾಂಸ್ತಥಾ ಪ್ರಾಜ್ಞಾನ್ ದೀರ್ಘಕಾಲಂ ಸಹೋಷಿತಾನ್।
ತ್ಯಜಂತಿ ಕೃತಕೃತ್ಯಾ ಯೇ ತೇ ವೈ ನಿರಯಗಾಮಿನಃ ॥೯೩॥

ಕ್ಷಮಾವಂತರು, ಇಂದ್ರಿಯನಿಗ್ರಹವುಳ್ಳವರು, ಪ್ರಾಜ್ಞರು, ಬಹುಕಾಲ ತನ್ನ ಜೊತೆಯಲ್ಲಿ ಇದ್ದವರು ಆದವರಿಂದ ತಮ್ಮ ಕಾರ್ಯವನ್ನು ಮಾಡಿಸಿಕೊಂಡು ಅನಂತರ ಪರಿತ್ಯಜಿಸುವವರು ನರಕಕ್ಕೆ ಹೋಗುತ್ತಾರೆ.

ಬಾಲಾನಾಮಥ ವೃದ್ಧಾನಾಂ ದಾಸಾನಾಂ ಚೈವ ಯೇ ನರಾಃ ।
ಅದತ್ತ್ವಾ ಭಕ್ಷಯಂತ್ಯಗ್ರೇ ತೇ ವೈ ನಿರಯಗಾಮಿನಃ ॥೯೪॥

ಬಾಲಕರಿಗೆ, ವೃದ್ಧರಿಗೆ, ದಾಸರಿಗೆ ಅನ್ನವನ್ನು ನೀಡದೆ ತಾವು ಮೊದಲು ಊಟವನ್ನು ಮಾಡುವವರು ನರಕಕ್ಕೆ ಹೋಗುತ್ತಾರೆ.

ಸರ್ವೇಷ್ವೇವ ತು ಕಾರ್ಯೇಷು ದೈವಪೂರ್ವೇಷು ಭಾರತ ।
ಹಂತಿ ಪುತ್ರಾನ್ ಪಶೂನ್ ಕೃತ್ವಾನ್ ಬ್ರಾಹ್ಮಣಾತಿಕ್ರಮಃ ಕೃತಃ ॥೯೫॥

ಎಲೈ ಭಾರತನೇ, ದೇವಕಾರ್ಯ, ಪಿತೃಕಾರ್ಯ ಮುಂತಾದ ಎಲ್ಲ ಕಾರ್ಯಗಳಲ್ಲಿಯೂ ಯಾರು ಮಕ್ಕಳನ್ನು, ಪಶುಗಳನ್ನು ಹೊಡೆಯುತ್ತಾರೆಯೋ, ಬ್ರಾಹ್ಮಣಾತಿಕ್ರಮವನ್ನು ಮಾಡುತ್ತಾರೆಯೋ ಅಂತಹವರು ನರಕಕ್ಕೆ ಹೋಗುತ್ತಾರೆ.

ಏತೇ ಪೂರ್ವರ್ಷಿಭಿರ್ದೃಷ್ಟಾಃ ಪ್ರೋಕ್ತಾ ನಿರಯಗಾಮಿನಃ ।
ಭಾಗಿನಃ ಸ್ವರ್ಗಲೋಕಸ್ಯ ವಕ್ಷ್ಯಾಮಿ ಭರತರ್ಷಭ ॥೯೬॥

ಎಲೈ ಭರತಶ್ರೇಷ್ಠನೇ, ಹೀಗೆ ಪೂರ್ವರ್ಷಿಗಳು ಹೇಳಿದಂತೆ ನರಕಕ್ಕೆ ಹೋಗುವವರನ್ನು ನಿನಗೆ ಹೇಳಿದ್ದೇನೆ. ಸ್ವರ್ಗಲೋಕಕ್ಕೆ ಹೋಗುವವರನ್ನು ಹೇಳುವೆನು.

ದಾನೇನ ತಪಸಾ ಚೈವ ಸತ್ಯೇನ ಚ ಯುಧಿಷ್ಠಿರ ।
ಯೇ ಧರ್ಮಮನುವರ್ತಂತೇ ತೇ ನರಾಃ ಸ್ವರ್ಗಗಾಮಿನಃ ॥೯೭॥

ಎಲೈ ಯುಧಿಷ್ಠಿರನೇ, ದಾನವನ್ನು ಮಾಡಿ, ತಪಸ್ಸನ್ನು ಮಾಡಿ, ಸತ್ಯದಿಂದ ಯಾರು ಧರ್ಮವನ್ನು ಅನುಸರಿಸುತ್ತಾರೆಯೋ ಅಂತಹ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ಶು(ಶಿ)ಶ್ರೂಷಾಭಿಸ್ತಪೋಭಿಶ್ಚ ಶ್ರುತಮಾದಾಯ ಭಾರತ ।
ಯೇ ಪ್ರತಿಗ್ರಹನಿಃಸ್ನೇಹಾಸ್ತೇ ನರಾಃ ಸ್ವರ್ಗಗಾಮಿನಃ ॥೯೮॥

ಎಲೈ ಭಾರತನೇ, ಯಾರು ಗುರುಶುಶ್ರೂಷೆಯಿಂದಲೂ ಮತ್ತು ತಪಸ್ಸಿನಿಂದಲೂ ವಿದ್ಯೆಯನ್ನು ಸಂಪಾದಿಸಿ, ಪ್ರತಿಗ್ರಹವನ್ನು ಮಾಡದೆ ಜೀವಿಸುತ್ತಾರೆಯೋ ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಭಯಾತ್ ಪಾಪಾತ್ ತಥಾ ಬಾಧಾದ್ ದಾರಿದ್ರ್ಯಾದ್ ವ್ಯಾಧಿಧರ್ಷಣಾತ್ ।
ಯತ್ಕೃತೇ ಪ್ರತಿಮುಚ್ಯಂತೇ ತೇ ನರಾಃ ಸ್ವರ್ಗಗಾಮಿನಃ ॥೯೯॥

ಭಯದಿಂದ, ದುಷ್ಕರ್ಮದಿಂದ, ಬಾಧೆಯಿಂದ, ದಾರಿದ್ರ್ಯದಿಂದ, ವ್ಯಾಧಿಯ ಉಪದ್ರವದಿಂದ ಏನನ್ನು ಮಾಡಿದರೆ ಅವುಗಳಿಂದ ಬಿಡುಗಡೆಯನ್ನು ಹೊಂದುತ್ತಾರೆಯೋ ಅಂತಹ ಕಾರ್ಯವನ್ನು ಮಾಡಿ, ಸಂಕಟದಿಂದ ಬಿಡುಗಡೆಗೊಳಿಸುವ ಮಾನವರು ಸ್ವರ್ಗಕ್ಕೆ ಹೋಗುತ್ತಾರೆ.

ಕ್ಷಮಾವಂತಶ್ಚ ಧೀರಾಶ್ಚ ಧರ್ಮಕಾರ್ಯೇಷು ಚೋತ್ಥಿತಾಃ ।
ಮಂಗಲಾಚಾರಯುಕ್ತಾಶ್ಚ ತೇ ನರಾಃ ಸ್ವರ್ಗಗಾಮಿನಃ ॥೧೦೦॥

ಕ್ಷಮಾವಂತರು, ಧೈರ್ಯಶಾಲಿಗಳು, ಧರ್ಮಕಾರ್ಯದಲ್ಲಿ ಉದ್ಯುಕ್ತರಾದವರು, ಶುಭಾಚಾರವುಳ್ಳವರು ಆದ ನರರು ಸ್ವರ್ಗಕ್ಕೆ ಹೋಗುತ್ತಾರೆ.

ನಿವೃತ್ತಾ ಮಧುಮಾಂಸೇಭ್ಯಃ ಪರದಾರೇಭ್ಯ ಏವ ಚ ।
ನಿವೃತ್ತಾಶ್ಚೈವ ಮದ್ಯೇಭ್ಯಸ್ತೇ ನರಾಃ ಸ್ವರ್ಗಗಾಮಿನಃ ॥೧೦೧॥

ಮಧು-ಮಾಂಸಗಳಿಂದ ನಿವೃತ್ತರಾದ, ಪರಪತ್ನಿಯರಿಂದ ನಿವೃತ್ತರಾದ, ಮದ್ಯದಿಂದ ನಿವೃತ್ತರಾದ ಮಾನವರು ಸ್ವರ್ಗಕ್ಕೆ ಹೋಗುತ್ತಾರೆ.

ಆಶ್ರಮಾಣಾಂ ಚ ಕರ್ತಾರಃ ಕುಲಾನಾಂ ಚೈವ ಭಾರತ ।
ದೇಶಾನಾಂ ನಗರಾಣಾಂ ಚ ತೇ ನರಾಃ ಸ್ವರ್ಗಗಾಮಿನಃ ॥೧೦೨॥

ಎಲೈ ಭಾರತನೇ, ಆಶ್ರಮವನ್ನು ಕಟ್ಟಿಸುವವರು, ಕುಲಗಳನ್ನು ನಿರ್ಮಿಸುವವರು, ದೇಶಗಳನ್ನು ಮತ್ತು ನಗರಗಳನ್ನು ನಿರ್ಮಿಸುವವರು ಸ್ವರ್ಗಕ್ಕೆ ಹೋಗುತ್ತಾರೆ.

ವಸ್ತ್ರಾಭರಣದಾತಾರೋ ಭಕ್ಷಪಾನಾನ್ನದಾಸ್ತಥಾ ।
ಕುಟುಂಬಾನಾಂ ಚ ದಾತಾರಸ್ತೇ ನರಾಃ ಸ್ವರ್ಗಗಾಮಿನಃ ॥೧೦೩॥

ವಸ್ತ್ರಾಭರಣಗಳನ್ನು ದಾನ ಮಾಡುವವರು, ಭಕ್ಷ-ಪಾನ-ಅನ್ನಗಳನ್ನು ದಾನ ಮಾಡುವವರು, ಕುಟುಂಬವನ್ನು ದಾನ ಮಾಡುವವರು ಸ್ವರ್ಗಕ್ಕೆ ಹೋಗುತ್ತಾರೆ.

ಸರ್ವಹಿಂಸಾನಿವೃತ್ತಾಶ್ಚ ನರಾಃ ಸರ್ವಸಹಾಶ್ಚ ಯೇ ।
ಸರ್ವಸ್ಯಾಶ್ರಯಭೂತಾಶ್ಚ ತೇ ನರಾಃ ಸ್ವರ್ಗಗಾಮಿನಃ ॥೧೦೪॥

ಎಲ್ಲ ರೀತಿಯ ಹಿಂಸೆಗಳಿಂದಲೂ ಹಿಂದೆ ಸರಿದು, ಶೀತೋಷ್ಣಾದಿ ಎಲ್ಲವನ್ನೂ ಸಹಿಸಿಕೊಂಡು, ಎಲ್ಲರಿಗೂ ಆಶ್ರಯವನ್ನು ನೀಡುವವರು ಸ್ವರ್ಗಕ್ಕೆ ಹೋಗುತ್ತಾರೆ.

ಮಾತರಂ ಪಿತರಂ ಚೈವ ಶಿ(ಶು)ಶ್ರೂಷಂತಿ ಜಿತೇಂದ್ರಿಯಾಃ ।
ಭ್ರಾತೄಣಾಂ ಚೈವ ಸಸ್ನೇಹಾಸ್ತೇ ನರಾಃ ಸ್ವರ್ಗಗಾಮಿನಃ ॥೧೦೫॥

ಮಾತಾ-ಪಿತೃಗಳ ಸೇವೆಯನ್ನು ಮಾಡಿ ಜಿತೇಂದ್ರಿಯರಾಗಿ ಸಹೋದರರಲ್ಲಿ ಸ್ನೇಹವನ್ನು ಹೊಂದಿದವರು ಸ್ವರ್ಗಕ್ಕೆ ಹೋಗುತ್ತಾರೆ.

ಆಢ್ಯಾಶ್ಚ ಬಲವಂತಶ್ಚ ಯೌವನಸ್ಥಾಶ್ಚ ಭಾರತ ।
ಯೇ ವೈ ಜಿತೇಂದ್ರಿಯಾ ಧೀರಾಸ್ತೇ ನರಾಃ ಸ್ವರ್ಗಗಾಮಿನಃ ॥೧೦೬॥

ಎಲೈ ಭಾರತನೇ, ಧನಾಢ್ಯರೂ, ಬಲಿಷ್ಠರೂ, ಯುವಕರೂ ಆಗಿ ಯಾರು ಧೀರರಾಗಿ ಜಿತೇಂದ್ರಿಯರಾಗಿರುತ್ತಾರೆಯೋ ಅವರು ಸ್ವರ್ಗಕ್ಕೆ ಹೋಗುತ್ತಾರೆ.

ಅಪರಾದ್ಧೇಷು ಸಸ್ನೇಹಾ ಮೃದವೋ ಮಿತ್ರವತ್ಸಲಾಃ ।
ಆರಾಧನಸುಖಾಶ್ಚಾಪಿ ತೇ ನರಾಃ ಸ್ವರ್ಗಗಾಮಿನಃ ॥೧೦೭॥

ಅಪರಾಧ ಮಾಡಿದವರಲ್ಲಿ ಸ್ನೇಹವನ್ನು ಹೊಂದಿದವರು, ಮೃದು ಸ್ವಭಾವದವರು, ಮಿತ್ರರಲ್ಲಿ ವಾತ್ಸಲ್ಯವುಳ್ಳವರು, ಇನ್ನೊಬ್ಬರನ್ನು ಆರಾಧಿಸಿ ಸಂತೋಷ ಪಡುವವರು ಸ್ವರ್ಗಕ್ಕೆ ಹೋಗುತ್ತಾರೆ.

ಸಹಸ್ರಪರಿವೇಷ್ಟಾರಸ್ತಥೈವ ಚ ಸಹಸ್ರದಾಃ ।
ತ್ರಾತಾರಶ್ಚ ಸಹಸ್ರಾಣಾಂ ಪುರುಷಾಃ ಸ್ವರ್ಗಗಾಮಿನಃ ॥೧೦೮॥

ಸಹಸ್ರಜನಗೆ ಅನೇಕ ಬಾರಿ ಭೋಜನವನ್ನು ಬಡಿಸುವವರು, ಸಹಸ್ರ ಜನರನ್ನು ರಕ್ಷಿಸುವವರು ಸ್ವರ್ಗಕ್ಕೆ ಹೋಗುತ್ತಾರೆ.

ಸುವರ್ಣಸ್ಯ ಚ ದಾತಾರೋ ಗವಾಂ ಚ ಭರತರ್ಷಭ ।
ಯಾನಾನಾಂ ವಾಹನಾನಾಂ ಚ ತೇ ನರಾಃ ಸ್ವರ್ಗಗಾಮಿನಃ ॥೧೦೯॥

ಎಲೈ ಭರತಶ್ರೇಷ್ಠನೇ, ಸುವರ್ಣದಾನವನ್ನು ಮಾಡುವವರು, ಗೋದಾನವನ್ನು ಮಾಡುವವರು, ಯಾನಗಳ ಮತ್ತು ವಾಹನಗಳ ದಾನವನ್ನು ಮಾಡುವವರು ಸ್ವರ್ಗಕ್ಕೆ ಹೋಗುತ್ತಾರೆ.

ವೈವಾಹಿಕಾನಾಂ ಕನ್ಯಾನಾಂ ಪ್ರೇಷ್ಯಾಣಾಂ ಚ ಯುಧಿಷ್ಠಿರ ।
ದಾತಾರೋ ವಾಸಸಾಂ ಚೈವ ತೇ ನರಾಃ ಸ್ವರ್ಗಗಾಮಿನಃ ॥೧೧೦॥

ಎಲೈ ಯುಧಿಷ್ಠಿರನೇ, ವಿವಾಹ ಯೋಗ್ಯರಾದ ತನ್ನ ಭೃತ್ಯರ ಕನ್ಯೆಯರಿಗೆ ವಸ್ತ್ರಗಳನ್ನು ಕೊಡುವವರು ಸ್ವರ್ಗಕ್ಕೆ ಹೋಗುತ್ತಾರೆ.

ವಿಹಾರಾವಸಥೋದ್ಯಾನಕೂಪಾರಾಮಸಭಾಪ್ರದಾಃ ।
ವಪ್ರಾಣಾಂ ಚೈವ ಕರ್ತಾರಸ್ತೇ ನರಾಃ ಸ್ವರ್ಗಗಾಮಿನಃ ॥೧೧೧॥

ವಿಹಾರಸ್ಥಾನ, ಮನೆಗಳು, ಉದ್ಯಾನ, ಬಾವಿ, ತೋಟ, ಸಭೆ- ಇವುಗಳನ್ನು ದಾನ ಮಾಡಿ ಕೋಟೆಗಳನ್ನು ಕಟ್ಟುವವರು ಸ್ವರ್ಗಕ್ಕೆ ಹೋಗುತ್ತಾರೆ.

ನಿವೇಶನಾನಾಂ ಕ್ಷೇತ್ರಾಣಾಂ ವಸತೀನಾಂ ಚ ಭಾರತ ।
ದಾತಾರಃ ಪ್ರಾರ್ಥಿತಾನಾಂ ಚ ತೇ ನರಾಃ ಸ್ವರ್ಗಗಾಮಿನಃ ॥೧೧೨॥

ಎಲೈ ಭಾರತನೇ, ಮನೆಯನ್ನು ಕಟ್ಟಲು ಯೋಗ್ಯವಾದ ನಿವೇಶನಗಳನ್ನು, ಹೊಲಗಳನ್ನು, ಮನೆಗಳನ್ನು ಪ್ರಾರ್ಥನೆ ಮಾಡುವವರಿಗೆ ಕೊಡುವವರು ಸ್ವರ್ಗಕ್ಕೆ ಹೋಗುತ್ತಾರೆ.

ರಸಾನಾಮಥ ಬೀಜಾನಾಂ ಧಾನ್ಯಾನಾಂ ಚ ಯುಧಿಷ್ಠಿರ ।
ಸ್ವಯಮುತ್ಪಾದ್ಯ ದಾತಾರಃ ಪುರುಷಾಃ ಸ್ವರ್ಗಗಾಮಿನಃ ॥೧೧೩॥

ಎಲೈ ಯುಧಿಷ್ಠಿರನೇ, ರಸಪದಾರ್ಥಗಳನ್ನು, ಧಾನ್ಯಬೀಜಗಳನ್ನು ಮತ್ತು ಧಾನ್ಯಗಳನ್ನು ಸ್ವತಃ ಉತ್ಪಾದಿಸಿ ದಾನ ಮಾಡುವವರು ಸ್ವರ್ಗಕ್ಕೆ ಹೋಗುತ್ತಾರೆ.

ಯಸ್ಮಿನ್ ಕಸ್ಮಿನ್ ಕುಲೇ ಜಾತಾ ಬಹುಪುತ್ರಾಃ ಶತಾಯುಷಃ ।
ಸಾನುಕ್ರೋಶಾ ಜಿತಕ್ರೋಧಾಃ ಪುರುಷಾಃ ಸ್ವರ್ಗಗಾಮಿನಃ ॥೧೧೪॥

ಯಾವ ಕುಲದಲ್ಲಿ ಹುಟ್ಟಿದರೂ ಅನೇಕ ಪುತ್ರರನ್ನು ಹೊಂದಿ ಪೂರ್ಣಾಯುಷ್ಯವನ್ನು ಹೊಂದಿ, ಕ್ರೋಧವನ್ನು ಜಯಿಸಿ, ದಯಾಪರರಾದವರು ಸ್ವರ್ಗಕ್ಕೆ ಹೋಗುತ್ತಾರೆ.

ಏತದುಕ್ತಮಮುತ್ರಾರ್ಥಂ ದೈವಂ ಪಿತ್ರ್ಯಂ ಚ ಭಾರತ ।
ಧರ್ಮಾಧರ್ಮೌ ಚ ದಾನಸ್ಯ ಯಥಾ ಪೂರ್ವರ್ಷಿಭಿಃ ಕೃತೌ ॥೧೧೫॥

ಎಲೈ ಭಾರತನೇ, ನಾನು ನಿನಗೆ ಪರಲೋಕದ ವಿಷಯವನ್ನೂ, ದೇವ-ಪಿತೃ ಕಾರ್ಯಗಳ ಪ್ರಕಾರಗಳನ್ನೂ,. ಧರ್ಮಾಧರ್ಮಗಳನ್ನೂ, ದಾನಫಲಗಳನ್ನೂ ಪೂರ್ವರ್ಷಿಗಳು ಹೇಳಿದಂತೆ ತಿಳಿಸಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಸ್ವರ್ಗನರಕಗಾಮೀಜನಕಥನಂ
ನಾಮ ಚತುಃಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೈದನೆಯ ಅಧ್ಯಾಯ

ಹಿಂಸೆ ಮಾಡದೆ ಬ್ರಹ್ಮಹತ್ಯಾದೋಷದ ಘಟನೆಯ ಪ್ರಕಾರ.

ಯುಧಿಷ್ಠಿರಃ

ಇದಂ ಮೇ ತತ್ತ್ವತೋ ರಾಜನ್ ವಕ್ತುಮರ್ಹಸಿ ಭಾರತ ।
ಅಹಿಂಸಯಿತ್ವಾ ಕೇನೇಹ ಬ್ರಹ್ಮಹತ್ಯಾ ವಿಧೀಯತೇ ॥೧॥

ಯುಧಿಷ್ಠಿರ– ಎಲೈ ಭಾರತನೇ, ರಾಜನೇ, ಹಿಂಸೆ ಮಾಡದೆ ಬ್ರಹ್ಮಹತ್ಯೆಯ ಸಂಘಟನೆಯು ಹೇಗೆ ಆಗುತ್ತದೆ ಎಂಬ ವಿಷಯವನ್ನು ಚೆನ್ನಾಗಿ ಹೇಳುವವನಾಗು.

ಭೀಷ್ಮಃ

ವ್ಯಾಸಮಾಮಂತ್ರ್ಯ ರಾಜೇಂದ್ರ ಪುರಾ ಯತ್ಪೃಷ್ಟವಾನಹಮ್ ।
ತತ್ತೇಽಹಂ ಸಂಪ್ರವಕ್ಷ್ಯಾಮಿ ತದಿಹೈಕಮನಾಃ ಶೃಣು ॥೨॥

ಭೀಷ್ಮ– ಎಲೈ ರಾಜೇಂದ್ರನೇ, ವೇದವ್ಯಾಸರನ್ನು ಕರೆದು ಹಿಂದೆ ನಾನು ನೀನು ಮಾಡಿದ ಪ್ರಶ್ನೆಗೆ ಅವರು ಕೊಟ್ಟ ಉತ್ತರವನ್ನು ನಿನಗೆ ಹೇಳುವೆನು. ಅದನ್ನು ಒಂದೇ ಮನಸ್ಸಿನಿಂದ ಕೇಳು.

ಚತುರ್ಥಸ್ತ್ವಂ ವಸಿಷ್ಠಸ್ಯ ತತ್ತ್ವಮಾಖ್ಯಾಹಿ ಮೇ ಮುನೇ ।
ಅಹಿಂಸಯಿತ್ವಾ ಕೇನೇಹ ಬ್ರಹ್ಮಹತ್ಯಾ ವಿಧೀಯತೇ ॥೩॥

ಎಲೈ ಮಹರ್ಷಿಯೇ, ನೀವು ವಸಿಷ್ಠರಿಂದ ನಾಲ್ಕನೆಯವರು (ವಸಿಷ್ಠ-ಶಕ್ತಿ-ಪರಾಶರ-ವೇದವ್ಯಾಸ) ಹಿಂಸೆಯನ್ನು ಮಾಡದೆ ಹೇಗೆ ಬ್ರಹ್ಮಹತ್ಯಾ ಪಾಪವು ಸಂಘಟಿಸುತ್ತದೆ?

ಇತಿ ಪೃಷ್ಟೋ ಮಹಾರಾಜ ಪರಾಶರಶರೀರಜಃ ।
ಅಬ್ರವೀನ್ನಿಪುಣೋ ಧರ್ಮೇ ನಿಃಸಂಶಯಮನುತ್ತಮಮ್ ॥೪॥

ಎಲೈ ಮಹಾರಾಜನೇ, ಹೀಗೆ ಪ್ರಶ್ನೆ ಮಾಡಲ್ಪಟ್ಟ ಪರಾಶರಪುತ್ರರಾದ ಧರ್ಮದಲ್ಲಿ ನಿಪುಣರಾದ ವ್ಯಾಸರು ಸಂಶಯವಿಲ್ಲದಂತೆ ಶ್ರೇಷ್ಠವಾದ ಉತ್ತರವನ್ನು ಕೊಟ್ಟರು.

ಬ್ರಾಹ್ಮಣಂ ಸ್ವಯಮಾಹೂಯ ಭಿಕ್ಷಾರ್ಥೇ ಕೃಶವೃತ್ತಿನಮ್ ।
ಬ್ರೂಯಾನ್ನಾಸ್ತೀತಿ ಯಃ ಪಶ್ಚಾತ್ ತಂ ವಿದ್ಯಾದ್ ಬ್ರಹ್ಮಘಾತಿನಮ್ ॥೫॥

ದರಿದ್ರನಾದ ಬ್ರಾಹ್ಮಣನನ್ನು ಸ್ವತಃ ಭಿಕ್ಷಾರ್ಥಕ್ಕಾಗಿ ಕರೆದು ಅನಂತರ ಇಲ್ಲ ಎಂದು ಹೇಳುವವನು ಬ್ರಹ್ಮಘಾತಕನೆಂದು ತಿಳಿಯಬೇಕು.

ಮಧ್ಯಸ್ಥಸ್ಯೇಹ ವಿಪ್ರಸ್ಯ ಯೋಽನೂಚಾನಸ್ಯ ಭಾರತ ।
ವೃತ್ತಿಂ ಹರತಿ ದುರ್ಬುದ್ಧಿಸ್ತಂ ವಿದ್ಯಾದ್ ಬ್ರಹ್ಮಘಾತಿನಮ್ ॥೬॥

ಎಲೈ ಭಾರತನೇ, ಸಂಪ್ರದಾಯ ನಿಷ್ಠನಾದ ನಿರುಪದ್ರವಿಯಾದ ಬ್ರಾಹ್ಮಣನ ಜೀವನೋಪಾಯವನ್ನು ಯಾವ ದುರ್ಬುದ್ಧಿಯುಳ್ಳ ಪುರುಷನು ನಾಶ ಮಾಡುತ್ತಾನೆಯೋ ಅವನನ್ನು ಬ್ರಹ್ಮಘಾತಕನೆಂದು ತಿಳಿಯಬೇಕು.

ಗೋಕುಲಸ್ಯ ತೃಷಾರ್ತಸ್ಯ ಜಲಾರ್ಥೇ ವಸುಧಾಧಿಪ ।
ಉತ್ಪಾದಯತಿ ಯೋ ವಿಘ್ನಂ ತಂ ವಿದ್ಯಾದ್ ಬ್ರಹ್ಮಘಾತಿನಮ್ ॥೭॥

ಎಲೈ ವಸುಧಾಧಿಪನೇ, ಬಾಯಾರಿಕೆಯಿಂದ ಬಳಲಿ ನೀರಿನ ಬಳಿಗೆ ಹೋಗುವ ಗೋವುಗಳ ಸಮೂಹಕ್ಕೆ ವಿಘ್ನವನ್ನು ಮಾಡುವವನನ್ನು ಬ್ರಹ್ಮಘಾತಕನೆಂದು ತಿಳಿಯಬೇಕು.

ಯಃ ಪ್ರವೃತ್ತಾಂ ಶ್ರುತಿಂ ಸಮ್ಯಕ್ ಶಾಸ್ತ್ರಂ ವಾ ಮುನಿಭಿಃ ಕೃತಮ್ ।
ದೂಷಯತ್ಯನಭಿಜ್ಞಾಯ ತಂ ವಿದ್ಯಾದ್ ಬ್ರಹ್ಮಘಾತಿನಮ್ ॥೮॥

ಯಾವನು ಜ್ಞಾನವಿಲ್ಲದಿದ್ದರೂ ಅನಾದಿಕಾಲದಿಂದ ಬಂದ ವೇದವನ್ನು ಮತ್ತು ಋಷಿಗಳು ಮಾಡಿದ ಯಥಾರ್ಥವಾದ ಶಾಸ್ತ್ರವನ್ನು ದೂಷಿಸುತ್ತಾನೆಯೋ ಅವನನ್ನು ಬ್ರಹ್ಮಘಾತಕನೆಂದು ತಿಳಿಯಬೇಕು.

ಆತ್ಮಜಾಂ ರೂಪಸಂಪನ್ನಾಂ ಮಹತೀಂ ಸದೃಶೇ ವರೇ ।
ನ ಪ್ರಯಚ್ಛತಿ ಯಃ ಕನ್ಯಾಂ ತಂ ವಿದ್ಯಾದ್ ಬ್ರಹ್ಮಘಾತಿನಮ್ ॥೯॥

ರೂಪಸಂಪನ್ನಳೂ, ಪ್ರೌಢಳೂ ಆದ ಪುತ್ರಿಯನ್ನು ಯಾವನು ಯೋಗ್ಯನಾದ ವರನಿಗೆ ಕೊಡುವುದಿಲ್ಲವೋ ಅವನನ್ನು ಬ್ರಹ್ಮಘಾತಕನೆಂದು ತಿಳಿಯಬೇಕು.

ಅಧರ್ಮನಿರತೋ ಮೂಢೋ ಮಿಥ್ಯಾ ಯೋ ವೈ ದ್ವಿಜಾತಿಷು ।
ದದ್ಯಾನ್ಮರ್ಮಾತಿಗಂ ಶೋಕಂ ತಂ ವಿದ್ಯಾದ್ ಬ್ರಹ್ಮಘಾತಿನಮ್ ॥೧೦॥

ಅಧರ್ಮನಿರತನಾದವನನ್ನೂ, ಮೂಢನಾದವನನ್ನೂ ಬ್ರಾಹ್ಮಣರಿಗೆ ಸುಳ್ಳಿನಿಂದ ನಡೆದುಕೊಳ್ಳುವವನನ್ನೂ, ಮರ್ಮಭೇದಕ ಶೋಕವನ್ನು ಉಂಟು ಮಾಡುವವನನ್ನೂ ಬ್ರಹ್ಮಘಾತಕನೆಂದು ತಿಳಿಯಬೇಕು.

ಚಕ್ಷುಷಾ ವಿಪ್ರಹೀನಸ್ಯ ಪಂಗುಲಸ್ಯ ಜಡಸ್ಯ ವಾ ।
ಹರೇತ ಯೋ ವೈ ಸರ್ವಸ್ವಂ ತಂ ವಿದ್ಯಾದ್ ಬ್ರಹ್ಮಘಾತಿನಮ್ ॥೧೧॥

ಯಾವನು ಅಂಧನ, ದರಿದ್ರನ, ಕುಂಟನ ಅಥವಾ ಬುದ್ಧಿಹೀನನ ಸರ್ವಸ್ವವನ್ನು ಅಪಹರಿಸುತ್ತಾನೆಯೋ ಅವನನ್ನು ಬ್ರಹ್ಮಘಾತಕನೆಂದು ತಿಳಿಯಬೇಕು.

ಆಶ್ರಮೇ ವಾ ವನೇ ವಾ ಯೋ ಗ್ರಾಮೇ ವಾ ಯದಿ ವಾ ಪುರೇ ।
ಅಗ್ನಿಂ ಸಮುತ್ಸೃಜೇನ್ಮೋಹಾತ್ ತಂ ವಿದ್ಯಾದ್ ಬ್ರಹ್ಮಘಾತಿನಮ್॥೧೨॥

ಯಾವನು ಆಶ್ರಮದಲ್ಲಾಗಲೀ, ಕಾಡಿನಲ್ಲಾಗಲೀ, ಗ್ರಾಮದಲ್ಲಾಗಲೀ ಅಥವಾ ಪಟ್ಟಣದಲ್ಲಾಗಲೀ ಮೋಹದಿಂದ ಅಗ್ನಿಯನ್ನು ಹಚ್ಚುತ್ತಾನೆಯೋ ಅವನನ್ನು ಬ್ರಹ್ಮಘಾತಕನೆಂದು ತಿಳಿಯಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಬ್ರಹ್ಮಹತ್ಯಾಕಥನಂ
ನಾಮ ಪಂಚಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಐವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತಾರನೆಯ ಅಧ್ಯಾಯ

ತೀರ್ಥಪ್ರಶಂಸಾ

ಯುಧಿಷ್ಠಿರಃ

ತೀರ್ಥಾನಾಂ ದರ್ಶನಂ ಶ್ರೇಯಃ ಸ್ನಾನಂ ಚ ಭರತರ್ಷಭ ।
ಶ್ರವಣಂ ಚ ಮಹಾಪ್ರಾಜ್ಞ ಶ್ರೋತುಮಿಚ್ಛಾಮಿ ತತ್ತ್ವತಃ ॥೧॥

ಯುಧಿಷ್ಠಿರ– ಎಲೈ ಭರತರ್ಷಭನೇ, ತೀರ್ಥಗಳ ದರ್ಶನವು ಮತ್ತು ಸ್ನಾನವು ಶ್ರೇಯಸ್ಕರವಾದುದು. ಎಲೈ ಮಹಾಪ್ರಾಜ್ಞನೇ, ಅವುಗಳ ಮಹಿಮೆಯ ಶ್ರವಣವೂ ಶ್ರೇಯಸ್ಕರವಾದುದು. ನಾನು ಅದನ್ನು ಯಥಾರ್ಥವಾಗಿ ತಿಳಿಯಲು ಬಯಸುತ್ತೇನೆ.

ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನಿ ಭರತರ್ಷಭ ।
ವಕ್ತುಮರ್ಹಸಿ ಮೇ ತಾನಿ ಶ್ರೋತಾಸ್ಮಿ ನಿಯತಃ ಪ್ರಭೋ ॥೨॥

ಎಲೈ ಭರತರ್ಷಭನೇ, ಪೃಥಿವಿಯಲ್ಲಿ ಯಾವ ಪವಿತ್ರವಾದ ತೀರ್ಥಗಳಿವೆಯೋ ಎಲೈ ಪ್ರಭುವೇ, ಅವುಗಳನ್ನು ನನಗೆ ಹೇಳು. ನಾನು ನಿಯಮಬದ್ಧನಾಗಿ ಕೇಳುತ್ತೇನೆ.

ಭೀಷ್ಮಃ

ಇಮಮಂಗಿರಸಾ ಪ್ರೋಕ್ತಂ ತೀರ್ಥವಂಶಂ ಮಹಾದ್ಯುತೇ ।
ಶ್ರೋತುಮರ್ಹಸಿ ಭದ್ರಂ ತೇ ಪ್ರಾಪ್ಸ್ಯಸೇ ಧರ್ಮಮುತ್ತಮಮ್ ॥೩॥

ಭೀಷ್ಮ– ಎಲೈ ಮಹಾದ್ಯುತಿಯೇ, ನಿನಗೆ ಮಂಗಳವಾಗಲಿ. ಇದು ಅಂಗಿರಸರು ಹೇಳಿದ ತೀರ್ಥವಂಶ. ಇದನ್ನು ಕೇಳು. ಇದರಿಂದ ಶ್ರೇಷ್ಠವಾದ ಧರ್ಮವನ್ನು ಪಡೆಯುವಿ.

ತಪೋವನಗತಂ ವಿಪ್ರಮಭಿಗಮ್ಯ ಮಹಾಮುನಿಮ್ ।
ಪಪ್ರಚ್ಛಾಂಗಿರಸಂ ವೀರ ಗೌತಮಃ ಸಂಶಿತವ್ರತಃ ॥೪॥

ಎಲೈ ವೀರನೇ, ಒಳ್ಳೆಯ ವ್ರತಧಾರಿಗಳಾದ ಗೌತಮರು ತಪೋವನದಲ್ಲಿ ಇದ್ದ ಅಂಗಿರಸ ಮಹರ್ಷಿಗಳನ್ನು ಸಮೀಪಿಸಿ ಪ್ರಶ್ನೆಯನ್ನು ಮಾಡಿದರು.

ಅಸ್ತಿ ಮೇ ಭಗವನ್ ಕಶ್ಚಿತ್ ತೀರ್ಥೇಭ್ಯೋ ಧರ್ಮಸಂಶಯಃ ।
ತತ್ಸರ್ವಂ ಶ್ರೋತುಮಿಚ್ಛಾಮಿ ತನ್ಮೇ ಶಂಸ ಮಹಾಮುನೇ ॥೫॥

ಪೂಜ್ಯರೇ, ನನಗೆ ತೀರ್ಥಗಳ ವಿಷಯದಲ್ಲಿ ಸ್ವಲ್ಪ ಧರ್ಮಸಂಶಯವಿದೆ. ಅದೆಲ್ಲವನ್ನೂ ನಿಮ್ಮನ್ನು ಕೇಳಲು ಬಯಸುತ್ತೇನೆ. ಮಹರ್ಷಿಗಳೇ ಅದನ್ನು ನನಗೆ ಹೇಳಿ.

ಉಪಸ್ಪೃಶ್ಯ ಫಲಂ ಕಿಂ ಸ್ಯಾತ್ತೇಷು ತೀರ್ಥೇಷು ವೈ ಮುನೇ ।
ಪ್ರೇತ್ಯಭಾವೇ ಮಹಾಪ್ರಾಜ್ಞ ತದ್ ಯಥಾऽಸ್ತಿ ತಥಾ ವದ ॥೬॥

ಎಲೈ ಋಷಿಗಳೇ, ಆ ತೀರ್ಥಗಳಲ್ಲಿ ಸ್ನಾನವನ್ನು ಮಾಡಿದರೆ ಏನಾಗುತ್ತದೆ? ಮಹಾಪ್ರಾಜ್ಞರೇ, ಮರಣವನ್ನು ಹೊಂದಿದ ಮೇಲೆ ಉಂಟಾಗುವ ಫಲವನ್ನು ನನಗೆ ತಿಳಿಸಿ.

ಅಂಗಿರಾಃ

ಸಪ್ತಾಹಂ ಚಂದ್ರಭಾಗಾಂ ವೈ ವಿತಸ್ತಾಮೂರ್ಮಿಮಾಲಿನೀಮ್ ।
ವಿಗಾಹ್ಯ ವೈ ನಿರಾಹಾರೋ ನಿರ್ಮಮೋ ಮುನಿವದ್ಭವೇತ್ ॥೭॥

ಅಂಗಿರಸ– ಏಳು ದಿವಸಗಳ ಕಾಲ ಚಂದ್ರಭಾಗಾ ನದಿಯಲ್ಲಿಯೂ, ಊರ್ಮಿಮಾಲೆಗಳನ್ನುಳ್ಳ ವಿತಸ್ತಾ ನದಿಯಲ್ಲಿಯೂ ನಿರಾಹಾರನಾಗಿ ಸ್ನಾನವನ್ನು ಮಾಡಿದರೆ ಮಮಕಾರವನ್ನು ತ್ಯಜಿಸಿ ಮುನಿಯಂತೆ ಆಗುವನು.

ಕಾಶ್ಮೀರಮಂಡಲೇ ನದ್ಯೋ ಯಾಃ ಪತಂತಿ ಮಹಾನದಮ್ ।
ತಾ ನದೀಃ ಸಿಂಧುಮಾಸಾದ್ಯ ಶೀಲವಾನ್ ಸ್ವರ್ಗಮಾಪ್ನುಯಾತ್ ॥೮॥

ಕಾಶ್ಮೀರಮಂಡಲದಲ್ಲಿ ಮಹಾನದವಾದ ಸಿಂಧುವಿಗೆ ಹೋಗಿ ಸೇರುವ ನದಿಗಳಲ್ಲಿ ಮತ್ತು ಸಿಂಧು ನದದಲ್ಲಿ ಸ್ನಾನವನ್ನು ಮಾಡುವವನು ಒಳ್ಳೆಯ ಶೀಲವನ್ನು ಹೊಂದಿ ಸ್ವರ್ಗವನ್ನು ಪಡೆಯುವನು.

ಪುಷ್ಕರಂ ಚ ಪ್ರಭಾಸಂ ಚ ನೈಮಿಶಂ ಸಾಗರೋದಕಮ್ ।
ದೇವಿಕಾಮಿಂದ್ರಮಾರ್ಗಂ ಚ ಸ್ವರ್ಣಬಿಂದುಂ ವಿಗಾಹ್ಯ ಚ ।
ವಿಬೋಧ್ಯತೇ ವಿಮಾನಸ್ಥಃ ಸೋऽಪ್ಸರೋಭಿರಭಿಷ್ಟುತಃ ॥೯॥

ಪುಷ್ಕರ, ಪ್ರಭಾಸ, ನೈಮಿಶ, ಸಾಗರ, ದೇವಿಕಾ, ಇಂದ್ರಮಾರ್ಗ, ಸ್ವರ್ಣಬಿಂದು ಈ ತೀರ್ಥಗಳಲ್ಲಿ ಸ್ನಾನವನ್ನು ಮಾಡಿದವನು ಉಪ್ಪರಿಗೆ ಮನೆಯಲ್ಲಿದ್ದೂ ಎಚ್ಚರಿಸಲ್ಪಡುತ್ತಾನೆ. ಅಪ್ಸರೆಯರಿಂದ ಸ್ತೋತ್ರ ಮಾಡಲ್ಪಡುತ್ತಾನೆ.

ಹಿರಣ್ಯಬಿಂದುಂ ವಿಕ್ಷೋಭ್ಯ ಪ್ರಯತಶ್ಚಾಭಿವಾದ್ಯ ತಮ್ ।
ಕುಶೇಶಯೇ ಚ ದೇವತ್ವಂ ಪೂಯತೇ ತಸ್ಯ ಕಿಲ್ಬಿಷಮ್ ॥೧೦॥

ಹಿರಣ್ಯಬಿಂದು ತೀರ್ಥವನ್ನು ನೋಡಿ ಅಲ್ಲಿ ನಮಸ್ಕರಿಸಿ ಕುಶೇಶಯ ತೀರ್ಥದಲ್ಲಿ ಸ್ನಾನವನ್ನು ಮಾಡುವವನು ಪಾಪಗಳಿಂದ ನಿರ್ಮುಕ್ತನಾಗಿ ದೇವತ್ವವನ್ನು ಹೊಂದುತ್ತಾನೆ.

ಇಂದ್ರತೋಯಾಂ ಸಮಾಸಾದ್ಯ ಗಂಧಮಾದನಸನ್ನಿಧೌ ।
ಕರತೋಯಾಂ ಕುರಂಗೇಷು ತ್ರಿರಾತ್ರೋಪೋಷಿತೋ ನರಃ ।
ಅಶ್ವಮೇಧಮವಾಪ್ನೋತಿ ವಿಗಾಹ್ಯ ನಿಯತಃ ಶುಚಿಃ ॥೧೧॥

ಗಂಧಮಾದನ ಸನ್ನಿಧಿಯಲ್ಲಿರುವ ಇಂದ್ರತೋಯಾ ನದಿಯನ್ನೂ, ಕುರಂಗ ದೇಶದಲ್ಲಿರುವ ಕರತೋಯಾ ನದಿಯನ್ನು ಸಮೀಪಿಸಿ ಮೂರು ರಾತ್ರಿ ಉಪವಾಸವನ್ನು ಮಾಡಿ, ನಿಯಮದಿಂದ ಶುಚಿಯಾಗಿ ಸ್ನಾನವನ್ನು ಮಾಡುವವನು ಅಶ್ವಮೇಧ ಫಲವನ್ನು ಹೊಂದುತ್ತಾನೆ.

ಗಂಗಾದ್ವಾರೇ ಕುಶಾವರ್ತೇ ಬಿಲ್ವಕೇ ನೇಮಿಪರ್ವತೇ ।
ತಥಾ ಕನಖಲೇ ಸ್ನಾತ್ವಾ ಧೂತಪಾಪ್ಮಾ ದಿವಂ ವ್ರಜೇತ್ ॥೧೨॥

ಗಂಗಾದ್ವಾರ, ಕುಶಾವರ್ತ, ಬಿಲ್ವಕ, ನೇಮಿಪರ್ವತ, ಕನಖಲ ಈ ಪ್ರದೇಶಗಳಲ್ಲಿ ಸ್ನಾನವನ್ನು ಮಾಡಿ ಪಾಪಗಳನ್ನು ಕಳೆದುಕೊಂಡು ಸ್ವರ್ಗಕ್ಕೆ ಹೋಗುತ್ತಾನೆ.

ಅಪಾಂ ಹ್ರದ ಉಪಸ್ಪೃಶ್ಯ ವಾಜಪೇಯಫಲಂ ಲಭೇತ್ ।
ಬ್ರಹ್ಮಚಾರೀ ಜಿತಕ್ರೋಧಃ ಸತ್ಯಸಂಧಸ್ತ್ವಹಿಂಸಕಃ ॥೧೩॥

ಬ್ರಹ್ಮಚಾರಿಯೂ, ಕ್ರೋಧವನ್ನು ಜಯಿಸಿದವನೂ, ಸತ್ಯಸಂಧನೂ, ಅಹಿಂಸಾ ಪರನೂ ಆಗಿ ಜಲಹ್ರದದಲ್ಲಿ ಸ್ನಾನವನ್ನು ಮಾಡುವವನು ವಾಜಪೇಯ ಯಾಗದ ಫಲವನ್ನು ಪಡೆಯುತ್ತಾನೆ.

ಯತ್ರ ಭಾಗೀರಥೀ ಗಂಗಾ ಭಜತೇ ದಿಶಮುತ್ತರಾಮ್ ।
ಮಹೇಶ್ವರಸ್ಯ ನಿಷ್ಠಾನೇ ಯೋ ನರಸ್ತ್ವಭಿಷಿಚ್ಯತೇ ।
ಏಕಮಾಸಂ ನಿರಾಹಾರಃ ಸ್ವಯಂ ಪಶ್ಯತಿ ದೇವತಾಃ ॥೧೪॥

ಭಾಗೀರಥಿಯಾದ ಗಂಗೆಯು ಉತ್ತರಾಭಿಮುಖವಾಗಿ ಹರಿಯುವ ಮಹೇಶ್ವರ ಸ್ಥಾನದಲ್ಲಿ ಯಾವ ಮನುಷ್ಯನು ನಿರಾಹಾರನಾಗಿ ಒಂದು ತಿಂಗಳು ಸ್ನಾನವನ್ನು ಮಾಡುತ್ತಾನೆಯೋ ಅವನು ಸ್ವತಃ ದೇವತೆಗಳನ್ನು ನೋಡುತ್ತಾನೆ.

ಸಪ್ತಗಂಗೇ ತ್ರಿಗಂಗೇ ಚ ಇಂದ್ರಮಾರ್ಗೇ ಚ ತರ್ಪಯನ್ ।
ಸುಧಾಂ ವೈ ಲಭತೇ ಭೋಕ್ತುಂ ಯೋ ನರೋ ಜಾಯತೇ ಪುನಃ ॥೧೫॥

ಸಪ್ತಗಂಗಾ, ತ್ರಿಗಂಗಾ ಮತ್ತು ಇಂದ್ರಮಾರ್ಗಗಳಲ್ಲಿ ಸ್ನಾನ ಮಾಡಿ, ದೇವಾದಿಗಳಿಗೆ ತರ್ಪಣವನ್ನು ಕೊಡುವವನು ಪುನಃ ಜನಿಸಿ ಅಮೃತಭೋಜನನಾಗುತ್ತಾನೆ.

ಮಹಾಶ್ರಮ ಉಪಸ್ಪೃಶ್ಯ ಯೋಽಗ್ನಿಹೋತ್ರಪರಃ ಶುಚಿಃ ।
ಏಕಮಾಸಂ ನಿರಾಹಾರಃ ಸಿದ್ಧಿಂ ಮಾಸೇನ ಸ ವ್ರಜೇತ್ ॥೧೬॥

ಮಹಾಶ್ರಮದಲ್ಲಿ ಸ್ನಾನವನ್ನು ಮಾಡಿ ಶುಚಿಯಾಗಿ, ನಿರಾಹಾರನಾಗಿ ಒಂದು ತಿಂಗಳ ಕಾಲ ಅಗ್ನಿಹೋತ್ರಪರನಾದವನು ಒಂದು ತಿಂಗಳಿನಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ.

ಮಹಾಹ್ರದ ಉಪಸ್ಪೃಶ್ಯ ಭೃಗುತುಂಗೇ ತ್ವಲೋಲುಪಃ ।
ತ್ರಿರಾತ್ರೋಪೋಷಿತೋ ಭೂತ್ವಾ ಮುಚ್ಯತೇ ಬ್ರಹ್ಮಹತ್ಯಯಾ ॥೧೭॥

ಇಂದ್ರಿಯಲೋಲುಪತೆಯನ್ನು ಬಿಟ್ಟು ಮಹಾಹ್ರದದಲ್ಲಿ ಮತ್ತು ಭೃಗುತುಂಗದಲ್ಲಿ ಮೂರು ರಾತ್ರಿ ಉಪವಾಸವನ್ನು ಮಾಡಿ ಸ್ನಾನವನ್ನು ಮಾಡುವವನು ಬ್ರಹ್ಮಹತ್ಯಾ ದೋಷದಿಂದ ನಿರ್ಮುಕ್ತನಾಗುತ್ತಾನೆ.

ಕನ್ಯಾಕೂಪ ಉಪಸ್ಪೃಶ್ಯ ಬಲಾಕಾಯಾಂ ಕೃತೋದಕಃ ।
ದೇವೇಷು ಕೀರ್ತಿಂ ಲಭತೇ ಯಶಸಾ ಚ ವಿರಾಜತೇ ॥೧೮॥

ಕನ್ಯಾಕೂಪದಲ್ಲಿ ಸ್ನಾನವನ್ನು ಮಾಡಿ, ಬಲಾಕಾ ತೀರ್ಥದಲ್ಲಿ ತರ್ಪಣವನ್ನು ಕೊಡುವ ಮನುಷ್ಯನು ದೇವತೆಗಳಲ್ಲಿ ಕೀರ್ತಿಯನ್ನು ಹೊಂದುತ್ತಾನೆ ಮತ್ತು ಈ ಲೋಕದಲ್ಲಿ ಯಶಸ್ಸಿನಿಂದ ಶೋಭಿಸುತ್ತಾನೆ.

ದೇಶಕಾಲ ಉಪಸ್ಪೃಶ್ಯ ತಥಾ ಸುಂದರಿಕಾಹ್ರದೇ ।
ಅಶ್ವಿಭ್ಯಾಂ ರೂಪವರ್ಚಸ್ಯಂ ಪ್ರೇತ್ಯ ವೈ ಲಭತೇ ನರಃ ॥೧೯॥

ದೇಶಕಾಲ ತೀರ್ಥದಲ್ಲಿಯೂ, ಸುಂದರಿಕಾ ಸರೋವರದಲ್ಲಿಯೂ ಸ್ನಾನವನ್ನು ಮಾಡುವವನು ಅಶ್ವಿನೀದೇವತೆಗಳ ಅನುಗ್ರಹದಿಂದ ಮರಣವನ್ನು ಹೊಂದಿದ ಮೇಲೆ ಒಳ್ಳೆಯ ರೂಪವನ್ನು ಮತ್ತು ಕಾಂತಿಯನ್ನು ಹೊಂದುತ್ತಾನೆ.

ಮಹಾಗಂಗಾಮುಪಸ್ಪೃಶ್ಯ ಕೃತ್ತಿಕಾಂಗಾರಕೇ ತಥಾ ।
ಪಕ್ಷಮೇಕಂ ನಿರಾಹಾರಃ ಸ್ವರ್ಗಮಾಪ್ನೋತಿ ನಿರ್ಮಲಃ ॥೨೦॥

ಮಹಾಗಂಗಾ ತೀರ್ಥದಲ್ಲಿಯೂ, ಕೃತ್ತಿಕಾಂಗಾರಕ ತೀರ್ಥದಲ್ಲಿಯೂ ಒಂದು ಪಕ್ಷದ ಕಾಲ ನಿರಾಹಾರನಾಗಿ, ನಿರ್ಮಲನಾಗಿ ಸ್ನಾನವನ್ನು ಮಾಡುವವನು ಸ್ವರ್ಗವನ್ನು ಪಡೆಯುತ್ತಾನೆ.

ವೈಮಾನಿಕ ಉಪಸ್ಪೃಶ್ಯ ಕಿಂಕಿಣೀಕಾಶ್ರಮೇ ತಥಾ ।
ನಿವಾಸೇಽಪ್ಸರಸಾಂ ದಿವ್ಯೇ ಕಾಮಚಾರೀ ಮಹೀಯತೇ ॥೨೧॥

ವೈಮಾನಿಕ ತೀರ್ಥದಲ್ಲಿಯೂ, ಕಿಂಕಿಣೀಕಾಶ್ರಮ ತೀರ್ಥದಲ್ಲಿಯೂ ಸ್ನಾನವನ್ನು ಮಾಡುವವನು ಅಪ್ಸರೆಯರ ದಿವ್ಯನಿವಾಸದಲ್ಲಿ ಕಾಮಚಾರಿಯಾಗಿ ಪೂಜಿಸಲ್ಪಡುತ್ತಾನೆ.

ಕಾಳಿಕಾಶ್ರಮಮಾಸಾದ್ಯ ವಿಪಾಶಾಯಾಂ ಕೃತೋದಕಃ ।
ಬ್ರಹ್ಮಚಾರೀ ಜಿತಕ್ರೋಧಸ್ತ್ರಿರಾತ್ರಾನ್ಮುಚ್ಯತೇ ಭವಾತ್ ॥೨೨॥

ಕಾಳಿಕಾಶ್ರಮಕ್ಕೆ ಹೋಗಿ ವಿಪಾಶಾ ನದಿಯಲ್ಲಿ ಸ್ನಾನ-ತರ್ಪಣವನ್ನು ಮಾಡಿ ಬ್ರಹ್ಮಚಾರಿಯೂ, ಜಿತಕ್ರೋಧನೂ ಆಗಿದ್ದರೆ ಮೂರು ರಾತ್ರಿಗಳಲ್ಲಿ ಸಂಸಾರದಿಂದ ಮುಕ್ತನಾಗುತ್ತಾನೆ.

ಆಶ್ರಮೇ ಕೃತ್ತಿಕಾನಾಂ ತು ಸ್ನಾತ್ವಾ ಯಸ್ತರ್ಪಯೇತ್ಪಿತೄನ್ ।
ತೋಷಯಿತ್ವಾ ಮಹಾದೇವಂ ನಿರ್ಮಲಃ ಸ್ವರ್ಗಮಾಪ್ನುಯಾತ್ ॥೨೩॥

ಕೃತ್ತಿಕಾಶ್ರಮದಲ್ಲಿ ಸ್ನಾನವನ್ನು ಮಾಡಿ ಪಿತೃಗಳಿಗೆ ತರ್ಪಣವನ್ನು ಕೊಡುವವನು ಈಶ್ವರನನ್ನು ಸಂತೋಷಪಡಿಸಿ ನಿರ್ಮಲನಾಗಿ ಸ್ವರ್ಗವನ್ನು ಹೊಂದುತ್ತಾನೆ.

ಮಹಾಪುರ ಉಪಸ್ಪೃಶ್ಯ ತ್ರಿರಾತ್ರೋಪೋಷಿತೋ ನರಃ ।
ತ್ರಸಾನಾಂ ಸ್ಥಾವರಾಣಾಂ ಚ ದ್ವಿಪದಾನಾಂ ಭಯಂ ತ್ಯಜೇತ್ ॥೨೪॥

ಮಹಾಪುರ ತೀರ್ಥದಲ್ಲಿ ಮೂರು ರಾತ್ರಿ ಉಪವಾಸವಿದ್ದು ಸ್ನಾನವನ್ನು ಮಾಡುವ ಮನುಷ್ಯನು ಸ್ಥಾವರ-ಜಂಗಮ ಪ್ರಾಣಿಗಳಿಂದಲೂ, ದ್ವಿಪದ ಪ್ರಾಣಿಗಳಿಂದಲೂ ಉಂಟಾಗುವ ಭಯವನ್ನು ತ್ಯಜಿಸುತ್ತಾನೆ.

ದೇವದಾರುವನೇ ಸ್ನಾತ್ವಾ ಧೂತಪಾಪ್ಮಾ ಕೃತೋದಕಃ ।
ದೇವಲೋಕಮವಾಪ್ನೋತಿ ಸಪ್ತರಾತ್ರೋಷಿತಃ ಶುಚಿಃ ॥೨೫॥

ದೇವದಾರುವನದಲ್ಲಿ ಶುಚಿಯಾಗಿ ಏಳು ರಾತ್ರಿಗಳ ಕಾಲ ವಾಸವನ್ನು ಮಾಡಿ ಸ್ನಾನ-ತರ್ಪಣಗಳನ್ನು ಮಾಡುವವನು ಪಾಪಗಳನ್ನು ಕಳೆದುಕೊಂಡು ದೇವಲೋಕವನ್ನು ಪಡೆಯುತ್ತಾನೆ.

ಕೌಶಂತೇ ಚ ಕುಶಸ್ತಂಭೇ ದ್ರೋಣಶರ್ಮಪದೇ ತಥಾ ।
ಆಪಃಪ್ರಪತನೇ ಸ್ನಾತಃ ಸೇವ್ಯತೇ ಸೋಽಪ್ಸರೋಗಣೈಃ ॥೨೬॥

ಕೌಶಂತ ತೀರ್ಥದಲ್ಲಿ, ಕುಶಸ್ತಂಭ ತೀರ್ಥದಲ್ಲಿ, ದ್ರೋಣಶರ್ಮ ತೀರ್ಥದಲ್ಲಿ, ಜಲಪ್ರಪತನ ತೀರ್ಥದಲ್ಲಿ ಸ್ನಾನವನ್ನು ಮಾಡುವವನು ಅಪ್ಸರೆಯರ ಸಮೂಹದಿಂದ ಸೇವಿಸಲ್ಪಡುತ್ತಾನೆ.

ಚಿತ್ರಕೂಟೇ ಜನಸ್ಥಾನೇ ತಥಾ ಮಂದಾಕಿನೀಜಲೇ ।
ವಿಗಾಹ್ಯ ವೈ ನಿರಾಹಾರೋ ರಾಜಲಕ್ಷ್ಮೀಂ ನಿಗಚ್ಛತಿ ॥೨೭॥

ಚಿತ್ರಕೂಟ ಪರ್ವತದಲ್ಲಿಯೂ, ಜನಸ್ಥಾನದಲ್ಲಿಯೂ, ಮಂದಾಕಿನೀ ನದಿಯಲ್ಲಿಯೂ ನಿರಾಹಾರನಾಗಿ ಸ್ನಾನವನ್ನು ಮಾಡುವವನು ರಾಜಸಂಪತ್ತನ್ನು ಪಡೆಯುತ್ತಾನೆ.

ಶ್ಯಾಮಾಯಾಸ್ತಾ ಶ್ರಮಂ ಗತ್ವಾ ಉಷ್ಯ ಚೈವಾಭಿಷಿಚ್ಯ ಚ ।
ತ್ರೀಂಸ್ತ್ರಿರಾತ್ರಾನ್ ಸ ಸಂಧಾಯ ಗಂಧರ್ವನಗರೇ ವಸೇತ್ ॥೨೮॥

ಶ್ಯಾಮಾಶ್ರಮಕ್ಕೆ ಹೋಗಿ, ಅಲ್ಲಿ ಒಂಬತ್ತು ದಿನಗಳ ಕಾಲ ವಾಸ ಮಾಡಿ, ಸ್ನಾನವನ್ನು ಮಾಡಿ, ಮನಸ್ಸನ್ನು ತೀರ್ಥಗಳಲ್ಲಿ ಇಡುವವನು ಗಂಧರ್ವನಗರದಲ್ಲಿ ವಾಸ ಮಾಡುತ್ತಾನೆ.

ರಮಣ್ಯಾಂ ಚ ಉಪಸ್ಪೃಶ್ಯ ತಥಾ ವೈ ಗಂಧತಾರಿಕೇ ।
ಏಕಮಾಸಂ ನಿರಾಹಾರಸ್ತ್ವಂತರ್ಧಾನಫಲಂ ಲಭೇತ್ ॥೨೯॥

ಒಂದು ತಿಂಗಳ ಕಾಲ ನಿರಾಹಾರನಾಗಿ ರಮಣೀ ತೀರ್ಥದಲ್ಲಿಯೂ, ಗಂಧತಾರಿಕ ತೀರ್ಥದಲ್ಲಿಯೂ ಸ್ನಾನವನ್ನು ಮಾಡುವವನು ಅಂತರ್ಧಾನ ಶಕ್ತಿಯನ್ನು ಪಡೆಯುತ್ತಾನೆ.

ಕೌಶಿಕೀದ್ವಾರಮಾಸಾದ್ಯ ವಾಯುಭಕ್ಷಸ್ತ್ವಲೋಲುಪಃ ।
ಏಕವಿಂಶತಿರಾತ್ರೇಣ ಸ್ವರ್ಗಮಾರೋಹತೇ ನರಃ ॥೩೦॥

ವಾಯುಭಕ್ಷನಾಗಿ, ಇಂದ್ರಿಯಲೋಲುಪತೆಯನ್ನು ಬಿಟ್ಟು ಕೌಶಿಕೀದ್ವಾರಕ್ಕೆ ಹೋಗಿ ಇಪ್ಪತ್ತೊಂದು ರಾತ್ರಿಗಳ ಕಾಲ ವಾಸ ಮಾಡಿ ಸ್ನಾನ ಮಾಡುವವನು ಸ್ವರ್ಗಕ್ಕೆ ಹೋಗುತ್ತಾನೆ.

ಮತಂಗವಾಪ್ಯಾಂ ಯಃ ಸ್ನಾಯಾದೇಕರಾತ್ರೇಣ ಸಿಧ್ಯತಿ ।
ವಿಗಾಹತಿ ಹ್ಯನಾಲಂಬಮಂಧಕಂ ವೈ ಸನಾತನಮ್ ॥೩೧॥

ಮಂತಗವಾಪಿಯಲ್ಲಿ ಸನಾತನತೀರ್ಥದಲ್ಲಿ ಮತ್ತು ಅಂಧಕತೀರ್ಥದಲ್ಲಿ ಸ್ನಾನವನ್ನು ಮಾಡುವವನು ಒಂದು ರಾತ್ರಿಯಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ.

ನೈಮಿಶೇ ಸ್ವರ್ಗತೀರ್ಥೇ ಚ ಉಪಸ್ಪೃಶ್ಯ ಜಿತೇಂದ್ರಿಯಃ ।
ಫಲಂ ಪುರುಷಮೇಧಸ್ಯ ಲಭೇನ್ಮಾಸಂ ಕೃತೋದಕಃ ॥೩೨॥

ಜಿತೇಂದ್ರಿಯನಾಗಿ ಒಂದು ತಿಂಗಳ ಕಾಲ ನೈಮಿಶದಲ್ಲಿಯೂ ಮತ್ತು ಸ್ವರ್ಗತೀರ್ಥದಲ್ಲಿಯೂ ಸ್ನಾನವನ್ನು ಮಾಡಿ ತರ್ಪಣವನ್ನು ಕೊಡುವವನು ಪುರುಷಮೇಧ ಯಜ್ಞದ ಫಲವನ್ನು ಹೊಂದುತ್ತಾನೆ.

ಗಂಗಾಹ್ರದ ಉಪಸ್ಪೃಶ್ಯ ತಥಾ ಚೈವೋತ್ಪಲಾವನೇ ।
ಅಶ್ವಮೇಧಮವಾಪ್ನೋತಿ ತತ್ರ ಮಾಸಂ ಕೃತೋದಕಃ ॥೩೩॥

ಗಂಗಾಹ್ರದದಲ್ಲಿ ಹಾಗೆಯೇ ಉತ್ಪಲಾವನದಲ್ಲಿ ಸ್ನಾನವನ್ನು ಮಾಡಿ ಒಂದು ತಿಂಗಳ ಕಾಲ ತರ್ಪಣವನ್ನು ಕೊಡುವವನು ಅಶ್ವಮೇಧ ಫಲವನ್ನು ಪಡೆಯುತ್ತಾನೆ.

ಗಂಗಾಯಮುನಯೋಸ್ತೀರ್ಥೇ ತಥಾ ಕಾಲಂಜರೇ ಗಿರೌ ।
ಷಷ್ಟಿಹ್ರದ ಉಪಸ್ಪೃಶ್ಯ ದಾನಂ ನಾನ್ಯದ್ ವಿಶಿಷ್ಯತೇ ॥೩೪॥

ಗಂಗಾ-ಯಮುನತೀರ್ಥದಲ್ಲಿಯೂ, ಕಾಲಂಜರ ಪರ್ವತದಲ್ಲಿಯೂ, ಷಷ್ಟಿಹ್ರದದಲ್ಲಿಯೂ ಸ್ನಾನವನ್ನು ಮಾಡಿದರೆ ಅದಕ್ಕಿಂತ ಯಾವ ದಾನವೂ ಶ್ರೇಷ್ಠವಾದುದಲ್ಲ.

ದಶ ತೀರ್ಥಸಹಸ್ರಾಣಿ ತಿಸ್ರಃ ಕೋಟ್ಯಸ್ತಥಾಪರಾಃ ।
ಸಮಾಗಚ್ಛಂತಿ ಮಾಘ್ಯಾಂ ತು ಪ್ರಯಾಗೇ ಭರತರ್ಷಭ ॥೩೫॥

ಎಲೈ ಭರತರ್ಷಭನೇ, ಮಾಘಮಾಸದಲ್ಲಿ ಪ್ರಯಾಗದಲ್ಲಿ ಹತ್ತು ಸಹಸ್ರ ತೀರ್ಥಗಳು ಮತ್ತು ಬೇರೆ ಮೂರುಕೋಟಿ ತೀರ್ಥಗಳು ಬಂದು ಸೇರುತ್ತವೆ.

ಮಾಘಮಾಸಂ ಪ್ರಯಾಗೇ ತು ನಿಯತಃ ಸಂಶಿತವ್ರತಃ ।
ಸ್ನಾತ್ವಾ ತು ಭರತಶ್ರೇಷ್ಠ ನಿರ್ಮಲಃ ಸ್ವರ್ಗಮಾಪ್ನುಯಾತ್ ॥೩೬॥

ಎಲೈ ಭರತಶ್ರೇಷ್ಠನೇ, ಮಾಘಮಾಸದಲ್ಲಿ ಪ್ರಯಾಗದಲ್ಲಿ ವಾಸ ಮಾಡಿ ನಿಯಮಬದ್ಧನಾಗಿ, ವ್ರತವನ್ನು ಧರಿಸಿ ನಿರ್ಮಲವಾಗಿ ಸ್ನಾನ ಮಾಡುವವನು ಸ್ವರ್ಗವನ್ನು ಹೊಂದುತ್ತಾನೆ.

ಮರುದ್ಗಣ ಉಪಸ್ಪೃಶ್ಯ ಪಿತೄಣಾಮಾಶ್ರಮೇ ಶುಚಿಃ ।
ವೈವಸ್ವತಸ್ಯ ತೀರ್ಥೇ ಚ ತೀರ್ಥಭೂತೋ ಭವೇನ್ನರಃ ॥೩೭॥

ಮರುದ್ಗಣ ತೀರ್ಥದಲ್ಲಿಯೂ, ಪಿತೃಗಳ ಆಶ್ರಮದಲ್ಲಿಯೂ, ವೈವಸ್ವತ ತೀರ್ಥದಲ್ಲಿಯೂ ಶುಚಿಯಾಗಿ ಸ್ನಾನವನ್ನು ಮಾಡುವವನು ಸ್ವತಃ ತೀರ್ಥನಾಗುತ್ತಾನೆ (ಇನ್ನೊಬ್ಬರನ್ನು ಪವಿತ್ರೀಕರಿಸುವ ಸಾಮರ್ಥ್ಯವನ್ನು ಹೊಂದುತ್ತಾನೆ).

ತಥಾ ಬ್ರಹ್ಮಶಿರೋ ಗತ್ವಾ ಭಾಗೀರಥ್ಯಾಂ ಕೃತೋದಕಃ ।
ಏಕಮಾಸಂ ನಿರಾಹಾರಃ ಸೋಮಲೋಕಮವಾಪ್ನುಯಾತ್ ॥೩೮॥

ಹಾಗೆಯೇ ಬ್ರಹ್ಮಶಿರ ಕ್ಷೇತ್ರಕ್ಕೆ ಹೋಗಿ ಭಾಗೀರಥಿಯಲ್ಲಿ ನಿರಾಹಾರನಾಗಿ ಒಂದು ತಿಂಗಳ ಕಾಲ ಸ್ನಾನ-ತರ್ಪಣವನ್ನು ಮಾಡುವವನು ಚಂದ್ರಲೋಕಕ್ಕೆ ಹೋಗುತ್ತಾನೆ.

ಕಪೋತಕೇ ನರಃ ಸ್ನಾತ್ವಾ ಅಷ್ಟಾವಕ್ರೇ ಕೃತೋದಕಃ ।
ದ್ವಾದಶಾಹಂ ನಿರಾಹಾರೋ ನರಮೇಧಫಲಂ ಲಭೇತ್ ॥೩೯॥

ಕಪೋತಕ ತೀರ್ಥದಲ್ಲಿ ಸ್ನಾನವನ್ನು ಮಾಡಿ, ಅಷ್ಟಾವಕ್ರತೀರ್ಥದಲ್ಲಿ ನಿರಾಹಾರನಾಗಿ ಹನ್ನೆರಡು ದಿವಸ ತರ್ಪಣವನ್ನು ಕೊಡುವ ನರನು ನರಮೇಧಫಲವನ್ನು ಹೊಂದುತ್ತಾನೆ.

ಮುಂಜಪೃಷ್ಠಂ ಗಯಾಂ ಚೈವ ನಿರ್ಋತಿಂ ದೇವಪರ್ವತಮ್ ।
ತೃತೀಯಾಂ ಕ್ರೌಂಚಪಾದೀಂ ಚ ಬ್ರಹ್ಮಹತ್ಯಾ ವಿಶುಧ್ಯತಿ ॥೪೦॥

ಮುಂಜಪೃಷ್ಠದಲ್ಲಿ, ಗಯಾದಲ್ಲಿ, ನಿರ್ಋತಿತೀರ್ಥದಲ್ಲಿ, ದೇವಪರ್ವತದಲ್ಲಿ, ಕ್ರೌಂಚಪಾದಿಯಲ್ಲಿ ಸ್ನಾನವನ್ನು ಮಾಡುವವನು ಬ್ರಹ್ಮಹತ್ಯಾ ದೋಷದಿಂದ ರಹಿತನಾಗಿ ಶುದ್ಧನಾಗುತ್ತಾನೆ.

ಕಲಶ್ಯಾಂ ವಾಪ್ಯುಪಸ್ಪೃಶ್ಯ ವೇದ್ಯಾಂ ಚ ಬಹುಶೋಜಲಾಮ್ ।
ಅಗ್ನೇಃ ಪುರೇ ನರಃ ಸ್ನಾತ್ವಾ ವಿಶಾಲಾಯಾಂ ಕೃತೋದಕಃ ।
ದೇವಹ್ರದ ಉಪಸ್ಪೃಶ್ಯ ಬ್ರಹ್ಮಭೂತೋ ವಿರಾಜತೇ ॥೪೧॥

ಕಲಶೀತೀರ್ಥದಲ್ಲಿ ಅಥವಾ ಬಹುಜಲವಿರುವ ವೇದ್ಯತೀರ್ಥದಲ್ಲಿ, ಹಾಗೆಯೇ ಅಗ್ನಿಪುರದಲ್ಲಿರುವ ತೀರ್ಥದಲ್ಲಿ, ವಿಶಾಲಾ ಕ್ಷೇತ್ರದಲ್ಲಿ (ಬದರಿ) ಮತ್ತು ದೇವವ್ರತದಲ್ಲಿ ಸ್ನಾನವನ್ನು ಮಾಡಿ, ತರ್ಪಣವನ್ನು ಕೊಡುವವನು ಬ್ರಹ್ಮನಲ್ಲಿಯೇ ಇರುವವನಾಗಿ ಶೋಭಿಸುತ್ತಾನೆ (ಬಹಳ ಪವಿತ್ರನಾಗುತ್ತಾನೆ).

ಪುರಾಪವರ್ತನಂ ನಂದಾಂ ಮಹಾನಂದಾಂ ಚ ಸೇವ್ಯ ವೈ ।
ನಂದನೇ ಸೇವ್ಯತೇ ದಾಂತಸ್ತ್ವಪ್ಸರೋಭಿರಹಿಂಸಕಃ ॥೪೨॥

ಇಂದ್ರಿಯನಿಗ್ರಹವನ್ನು ಹೊಂದಿ, ಪ್ರಾಣಹಿಂಸೆ ಮಾಡದೆ ಪುರಾಪರ್ತನ ತೀರ್ಥದಲ್ಲಿ, ನಂದಾ-ಮಹಾನಂದಾ ತೀರ್ಥದಲ್ಲಿ ಸ್ನಾನವನ್ನು ಮಾಡುವವನು ಸಂತೋಷ ಪಡುತ್ತಾನೆ ಮತ್ತು ಅಪ್ಸರೆಯರಿಂದ ಸೇವಿಸಲ್ಪಡುತ್ತಾನೆ.

ಉರ್ವಶೀಕೃತ್ತಿಕಾಯೋಗೇ ಗತ್ವಾ ಯಃ ಸುಸಮಾಹಿತಃ ।
ಲೌಹಿತ್ಯೇ ವಿಧಿವತ್ಸ್ನಾತ್ವಾ ಪುಂಡರೀಕಫಲಂ ಲಭೇತ್ ॥೪೩॥

ಉರ್ವಶೀ-ಕೃತ್ತಿಕಾಸಮಾಗಮ ಕ್ಷೇತ್ರದಲ್ಲಿ ಮತ್ತು ಲೌಹಿತ್ಯಕ್ಷೇತ್ರದಲ್ಲಿ ವಿಧಿ ಪೂರ್ವಕವಾಗಿ ಸ್ನಾನವನ್ನು ಮಾಡುವವನು ಪುಂಡರೀಕಯಾಗದ ಫಲವನ್ನು ಪಡೆಯುತ್ತಾನೆ.

ರಾಮಹ್ರದ ಉಪಸ್ಪೃಶ್ಯ ವಿಶಾಲಾಯಾಂ ಕೃತೋದಕಃ ।
ದ್ವಾದಶಾಹಂ ನಿರಾಹಾರಃ ಕಲ್ಮಷಾದ್ ವಿಪ್ರಮುಚ್ಯತೇ ॥೪೪॥

ಹನ್ನೆರಡು ದಿವಸಗಳ ಕಾಲ ನಿರಾಹಾರನಾಗಿ ರಾಮಹ್ರದದಲ್ಲಿ ಸ್ನಾನವನ್ನು ಮಾಡಿ ವಿಶಾಲಾ ಕ್ಷೇತ್ರದಲ್ಲಿ ತರ್ಪಣವನ್ನು ಕೊಡುವವನು ದೋಷದಿಂದ ರಹಿತನಾಗುತ್ತಾನೆ.

ಮಹಾಹ್ರದ ಉಪಸ್ಪೃಶ್ಯ ಶುದ್ಧೇನ ಮನಸಾ ನರಃ ।
ಏಕಮಾಸಂ ನಿರಾಹಾರೋ ಜಮದಗ್ನಿಗತಿಂ ಲಭೇತ್ ॥೪೫॥

ಶುದ್ಧವಾದ ಮನಸ್ಸಿನಿಂದ ಒಂದು ತಿಂಗಳ ಕಾಲ ನಿರಾಹಾರನಾಗಿ ಮಹಾಹ್ರದದಲ್ಲಿ ಸ್ನಾನ ಮಾಡುವ ಮನುಷ್ಯನು ಜಮದಗ್ನಿಗಳ ಗತಿಯನ್ನು ಹೊಂದುತ್ತಾನೆ.

ವಿಂಧ್ಯೇ ಸಂತಾಪ್ಯ ಚಾತ್ಮಾನಂ ಸತ್ಯಸಂಧಸ್ತ್ವಹಿಂಸಕಃ ।
ಷಣ್ಮಾಸಂ ಪದಮಾಸ್ಥಾಯ ಮಾಸೇನೈಕೇನ ಶುಧ್ಯತಿ ॥೪೬॥

ವಿಂಧ್ಯಪರ್ವತದಲ್ಲಿ ತನ್ನನ್ನು ತಪಸ್ಸಿನಿಂದ ಸಂತಾಪಗೊಳಿಸಿ ಸತ್ಯಸಂಧನೂ, ಹಿಂಸಾ ರಹಿತನೂ ಆಗಿ ಆರು ತಿಂಗಳುಗಳ ಕಾಲ ವಾಸಿಸುವವನು ಒಂದೇ ತಿಂಗಳಿನಲ್ಲಿ ಶುದ್ಧನಾಗುತ್ತಾನೆ.

ನರ್ಮದಾಯಾಮುಪಸ್ಪೃಶ್ಯ ತಥಾ ಶೂರ್ಪಾರಕೋದಕೇ ।
ಏಕಪಕ್ಷಂ ನಿರಾಹಾರೋ ರಾಜಪುತ್ರೋ ವಿಧೀಯತೇ ॥೪೭॥

ನರ್ಮದಾ ನದಿಯಲ್ಲಿ ಹಾಗೆಯೇ ಶೂರ್ಪಾರಕ ತೀರ್ಥದಲ್ಲಿ (ಕೃಷ್ಣಾನದಿ) ಒಂದು ಪಕ್ಷದ ಕಾಲ ನಿರಾಹಾರನಾಗಿ ಸ್ನಾನ ಮಾಡುವವನು ರಾಜಪುತ್ರನಾಗಿ ಜನಿಸುತ್ತಾನೆ.

ಜಂಬೂಮಾರ್ಗೇ ತ್ರಿಭಿರ್ಮಾಸೈಃ ಸಂಯತಃ ಸುಸಮಾಹಿತಃ ।
ಅಹೋರಾತ್ರೇಣ ಚೈಕೇನ ಸಿದ್ಧಿಂ ಸಮಧಿಗಚ್ಛತಿ ॥೪೮॥

ಜಂಬೂಮಾರ್ಗದಲ್ಲಿ ಮೂರು ತಿಂಗಳ ಕಾಲ ಸಮಾಧಾನದಿಂದ ಸಂಯಮದಿಂದ ಕೂಡಿ ವಾಸಿಸುವವನು ಒಂದೇ ಹಗಲು ಮತ್ತು ರಾತ್ರಿಯಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ.

ಕೋಕಾಮುಖೇ ವಿಗಾಹ್ಯಾಪೋ ಗತ್ವಾ ಚಂಡಾಲಿಕಾಶ್ರಮಮ್ ।
ಶಾಕಭಕ್ಷಶ್ಚೀರವಾಸಾಃ ಕುಮಾರೀರ್ವಿಂದತೇ ದಶ ॥೪೯॥

ಕೋಕಾಮುಖ ತೀರ್ಥದಲ್ಲಿ ಸ್ನಾನವನ್ನು ಮಾಡಿ, ಚಂಡಾಲಿಕಾಶ್ರಮಕ್ಕೆ ಹೋಗಿ ಶಾಕಭಕ್ಷನಾಗಿ ನಾರು ಮಡಿಯನ್ನು ಉಡುವವನು ಹತ್ತು ಹೆಣ್ಣುಮಕ್ಕಳನ್ನು ಪಡೆಯುತ್ತಾನೆ.

ವೈವಸ್ವತಸ್ಯ ಸದನಂ ನ ಸ ಗಚ್ಛೇತ್ಕದಾಚನ ।
ಯಸ್ಯ ಕನ್ಯಾಹ್ರದೇ ವಾಸೋ ದೇವಲೋಕಂ ಸ ಗಚ್ಛತಿ ॥೫೦॥

ಯಾವನು ಕನ್ಯಾಹ್ರದದಲ್ಲಿ ವಾಸ ಮಾಡುತ್ತಾನೆಯೋ ಅವನು ಎಂದೂ ಯಮ ಪಟ್ಟಣಕ್ಕೆ ಹೋಗುವುದಿಲ್ಲ. ದೇವಲೋಕಕ್ಕೆ ಹೋಗುತ್ತಾನೆ.

ಪ್ರಭಾಸೇ ತ್ವೇಕರಾತ್ರೇಣ ಅಮಾವಾಸ್ಯಾಂ ಸಮಾಹಿತಃ ।
ಸಿಧ್ಯತೇಽತ್ರ ಮಹಾಬಾಹೋ ಯೋ ನರೋ ಜಾಯತೇ ಪುನಃ ॥೫೧॥

ಎಲೈ ಮಹಾಬಾಹುವೇ, ಪ್ರಭಾಸ ಕ್ಷೇತ್ರದಲ್ಲಿ ಅಮಾವಾಸ್ಯೆ ದಿವಸ ಸಮಾಧಾನದಿಂದ ಸ್ನಾನವನ್ನು ಮಾಡುವವನು ಪುನಃ ಮನುಷ್ಯನಾಗಿ ಜನಿಸಿದರೆ ಒಂದೇ ರಾತ್ರಿಯಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ.

ಉಜ್ಜಾನಕ ಉಪಸ್ಪೃಶ್ಯ ಆರ್ಷ್ಟಿಷೇಣಸ್ಯ ಚಾಶ್ರಮೇ ।
ಪಿಂಗಾಯಾಶ್ಚಾಶ್ರಮೇ ಸ್ನಾತ್ವಾ ಸರ್ವಪಾಪೈಃ ಪ್ರಮುಚ್ಯತೇ ॥೫೨॥

ಉಜ್ಜಾನಕರ ಆಶ್ರಮದಲ್ಲಿಯೂ, ಆರ್ಷ್ಟಿಷೇಣರ ಆಶ್ರಮದಲ್ಲಿಯೂ, ಪಿಂಗೆಯರ ಆಶ್ರಮದಲ್ಲಿಯೂ ಸ್ನಾನವನ್ನು ಮಾಡಿದರೆ ಸರ್ವಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

ಕುಲ್ಯಾಯಾಂ ಸಮುಪಸ್ಪೃಶ್ಯ ಜಪ್ತ್ವಾ ಚೈವಾಘಮರ್ಷಣಮ್ ।
ಅಶ್ವಮೇಧಮವಾಪ್ನೋತಿ ತ್ರಿರಾತ್ರೋಪೋಷಿತಃ ಶುಚಿಃ ॥೫೩॥

ಕುಲ್ಯಾತೀರ್ಥದಲ್ಲಿ ಮೂರು ರಾತ್ರಿ ಉಪವಾಸದಿಂದ ವಾಸವನ್ನು ಮಾಡಿ, ಶುಚಿಯಾಗಿ ಅಘಮರ್ಷಣ ಸೂಕ್ತವನ್ನು ಜಪ ಮಾಡಿ ಸ್ನಾನವನ್ನು ಮಾಡುವವನು ಅಶ್ವಮೇಧಫಲವನ್ನು ಪಡೆಯುತ್ತಾನೆ.

ಪಿಂಡಾರಕ ಉಪಸ್ಪೃಶ್ಯ ಏಕರಾತ್ರೋಷಿತೋ ನರಃ ।
ಅಗ್ನಿಷ್ಟೋಮಮವಾಪ್ನೋತಿ ಪ್ರಭಾತಾಂ ಶರ್ವರೀಂ ಶುಚಿಃ ॥೫೪॥

ಪಿಂಡಾರಕ ಕ್ಷೇತ್ರದಲ್ಲಿ ಒಂದು ದಿವಸ ವಾಸಿಸಿ ಸ್ನಾನವನ್ನು ಮಾಡುವ ಮನುಷ್ಯನು ರಾತ್ರಿಯು ಕಳೆಯುವಷ್ಟರಲ್ಲಿ ಶುಚಿಯಾಗಿ ಅಗ್ನಿಷ್ಟೋಮ ಫಲವನ್ನು ಪಡೆಯುತ್ತಾನೆ.

ತಥಾ ಬ್ರಹ್ಮಸರೋ ಗತ್ವಾ ಧರ್ಮಾರಣ್ಯೋಪಶೋಭಿತಮ್ ।
ಪುಂಡರೀಕಮವಾಪ್ನೋತಿ ಪ್ರಭಾತಾಂ ಶರ್ವರೀಂ ಶುಚಿಃ ॥೫೫॥

ಹಾಗೆಯೇ ಧರ್ಮಾರಣ್ಯದಿಂದ ಶೋಭಿಸುವ ಬ್ರಹ್ಮಸರೋವರಕ್ಕೆ ಹೋಗಿ ಸ್ನಾನವನ್ನು ಮಾಡುವವನು ಒಂದು ರಾತ್ರಿಯು ಕಳೆಯುವಷ್ಟರಲ್ಲಿ ಶುಚಿಯಾಗಿ ಪುಂಡರೀಕ ಯಾಗದ ಫಲವನ್ನು ಹೊಂದುತ್ತಾನೆ.

ಮೈನಾಕೇ ಪರ್ವತೇ ಸ್ನಾತ್ವಾ ತಥಾ ಸಂಧ್ಯಾಮುಪಾಸ್ಯ ಚ ।
ಕಾಮಂ ಜಿತ್ವಾ ಚ ವೈ ಮಾಸಂ ಸರ್ವಮೇಧಫಲಂ ಲಭೇತ್ ॥೫೬॥

ಮೈನಾಕ ಪರ್ವತದಲ್ಲಿ ಒಂದು ತಿಂಗಳ ಕಾಲ ಸ್ನಾನವನ್ನು ಮಾಡಿ ಸಂಧ್ಯೋಪಾಸನೆಯನ್ನು ಮಾಡುವವನು ಕಾಮವನ್ನು ಗೆದ್ದು ಸರ್ವಮೇಧ ಫಲವನ್ನು ಹೊಂದುತ್ತಾನೆ.

ಕಾಲೋದಕಂ ನಂದಿಕುಂಡಂ ತಥೈವೋತ್ತರಮಾನಸಮ್ ।
ಅಭ್ಯೇತ್ಯ ಯೋಜನಶತಾದ್ ಭ್ರೂಣಹಾ ವಿಪ್ರಮುಚ್ಯತೇ ॥೫೭॥

ಕಾಲೋದಕ, ನಂದಿಕುಂಡ, ಉತ್ತರಮಾನಸ ತೀರ್ಥಗಳಿಗೆ ಹೋಗುವವನು ನೂರು ಯೋಜನ ದೂರದಲ್ಲಿಯೇ ಭ್ರೂಣಹತ್ಯಾ ಪಾಪದಿಂದ ನಿರ್ಮುಕ್ತನಾಗುತ್ತಾನೆ.

ನಂದೀಶ್ವರಸ್ಯ ಮೂರ್ತಿಂ ತು ದೃಷ್ಟ್ವಾ ಮುಚ್ಯೇತ ಕಿಲ್ಬಿಷೈಃ ।
ಸ್ವರ್ಗಮಾರ್ಗೇ ನರಃ ಸ್ನಾತ್ವಾ ಬ್ರಹ್ಮಲೋಕಂ ಸ ಗಚ್ಛತಿ ॥೫೮॥

ನಂದೀಶ್ವರನನ್ನು ನೋಡಿ ದೋಷಗಳಿಂದ ರಹಿತನಾಗುತ್ತಾನೆ. ಸ್ವರ್ಗಮಾರ್ಗದಲ್ಲಿ ಸ್ನಾನ ಮಾಡಿದ ಮನುಷ್ಯನು ಬ್ರಹ್ಮಲೋಕಕ್ಕೆ ಹೋಗುತ್ತಾನೆ.

ವಿಖ್ಯಾತೋ ಹಿಮವಾನ್ಪುಣ್ಯಃ ಶಂಕರಶ್ವಶುರೋ ಗಿರಿಃ ।
ಆಕರಃ ಸರ್ವರತ್ನಾನಾಂ ಸಿದ್ಧಚಾರಣಸೇವಿತಃ ॥೫೯॥

ಶಂಕರನ ಮಾವನಾದ ಹಿಮಾಲಯ ಪರ್ವತವು ಪ್ರಖ್ಯಾತವಾದುದು ಮತ್ತು ಪವಿತ್ರವಾದುದು. ಅದು ಸರ್ವರತ್ನಗಳಿಗೆ ಆಕರವಾಗಿ ಸಿದ್ಧ-ಚಾರಣರಿಂದ ಸೇವಿತವಾದುದು.

ಶರೀರಮುತ್ಸೃಜೇತ್ ತತ್ರ ವಿಧಿಪೂರ್ವಮನಾಶಕೇ ।
ಅಧ್ರುವಂ ಜೀವಿತಂ ಜ್ಞಾತ್ವಾ ಯೋ ವೈ ವೇದಾಂತಗೋ ದ್ವಿಜಃ ॥೬೦॥

ಅಭ್ಯರ್ಚ್ಯ ದೇವತಾಸ್ತತ್ರ ನಮಸ್ಕೃತ್ಯ ಮುನೀಂಸ್ತಥಾ ।
ತತಃ ಸಿದ್ಧೋ ದಿವಂ ಗಚ್ಛೇದ್ ಬ್ರಹ್ಮಲೋಕಂ ಸನಾತನಮ್ ॥೬೧॥

ಯಾವನು ಅಲ್ಲಿ ನಿರಶನವ್ರತವನ್ನು ಮಾಡಿ, ವೇದಾಂತವನ್ನು ಅಧ್ಯಯನ ಮಾಡಿ, ಜೀವನವು ಅಸ್ಥಿರವೆಂದು ತಿಳಿದು, ದೇವತೆಗಳನ್ನು ಪೂಜಿಸಿ, ಅಲ್ಲಿರುವ ಋಷಿಗಳಿಗೆ ನಮಸ್ಕರಿಸಿ ವಿಧಿವತ್ತಾಗಿ ದೇಹವನ್ನು ತ್ಯಜಿಸುತ್ತಾನೆಯೋ ಅವನು ಸಿದ್ಧನಾಗಿ ಸ್ವರ್ಗಕ್ಕೆ ಹೋಗಿ ಅಲ್ಲಿಂದ ಸನಾತನವಾದ ಬ್ರಹ್ಮಲೋಕಕ್ಕೆ ಹೋಗುತ್ತಾನೆ.

ಕಾಮಂ ಕ್ರೋಧಂ ಚ ಲೋಭಂ ಚ ಯೋ ಜಿತ್ವಾ ತೀರ್ಥಮಾವಸೇತ್ ।
ನ ತೇನ ಕಿಂಚಿನ್ನ ಪ್ರಾಪ್ತಂ ತೀರ್ಥಾಭಿಗಮನಾದ್ ಭವೇತ್ ॥೬೨॥

ಕಾಮ-ಕ್ರೋಧ-ಲೋಭಗಳನ್ನು ವರ್ಜಿಸಿ ಯಾವನು ತೀರ್ಥಯಾತ್ರೆಯನ್ನು ಮಾಡುತ್ತಾನೆಯೋ ಅವನಿಗೆ ತೀರ್ಥಯಾತ್ರೆಯಿಂದ ಅಲಭ್ಯವಾದ ಫಲವು ಯಾವುದೂ ಇಲ್ಲ.

ಯಾನ್ಯಗಮ್ಯಾನಿ ತೀರ್ಥಾನಿ ದುರ್ಗಾಣಿ ವಿಷಮಾಣಿ ಚ ।
ಮನಸಾ ತಾನಿ ಗಮ್ಯಾನಿ ಸರ್ವತೀರ್ಥಸಮಾಸತಃ ॥೬೩॥

ಯಾವ ತೀರ್ಥಗಳು ಅಗಮ್ಯವೋ ಅಥವಾ ಹೋಗಲು ಬಹಳ ಕಷ್ಟಸಾಧ್ಯವೋ, ವಿಷಮ ಮಾರ್ಗದಿಂದ ಕೂಡಿರುತ್ತವೆಯೋ ಅಂತಹ ಸರ್ವತೀರ್ಥಗಳಿಗೆ ಮನಸ್ಸಿನಿಂದಲೇ ಹೋಗಬೇಕು.

ಇದಂ ಮೇಧ್ಯಮಿದಂ ಧನ್ಯಮಿದಂ ಸ್ವರ್ಗ್ಯಮಿದಂ ಸುಖಮ್ ।
ಇದಂ ರಹಸ್ಯಂ ದೇವಾನಾಮಾಪ್ಲಾವ್ಯಾನಾಂ ಚ ಪಾವನಮ್ ॥೬೪॥

ಈ ತೀರ್ಥಮಹಿಮೆಯು ಸ್ವೀಕಾರಕ್ಕೆ ಯೋಗ್ಯವಾದುದು, ಧನಪ್ರದವಾದುದು, ಸ್ವರ್ಗಪ್ರದವಾದುದು, ಸುಖಪ್ರದವಾದುದು, ರಹಸ್ಯವಾದುದು. ದೇವತೆಗಳನ್ನೂ ಮತ್ತು ಸ್ನಾನ ಮಾಡುವವರನ್ನೂ ಶುದ್ಧಗೊಳಿಸುವಂತಹದು.

ಇದಂ ದದ್ಯಾದ್ ದ್ವಿಜಾತೀನಾಂ ಸಾಧೂನಾಮಾತ್ಮಜಸ್ಯ ವಾ ।
ಸುಹೃದಾಂ ಚ ಜಪೇತ್ಕರ್ಣೇ ಶಿಷ್ಯಸ್ಯಾನುಗತಸ್ಯ ವಾ ॥೬೫॥

ಇದನ್ನು ಬ್ರಾಹ್ಮಣರಿಗೆ, ಸಜ್ಜನರಿಗೆ ಮತ್ತು ಪುತ್ರನಿಗೆ ಹೇಳಬೇಕು. ಸುಹೃದರ ಅಥವಾ ಶಿಷ್ಯನ ಕಿವಿಯಲ್ಲಿ ಅಥವಾ ಅನುಸರಿಸಿದವನ ಕಿವಿಯಲ್ಲಿ ಜಪಿಸಬೇಕು.

ದತ್ತವಾನ್ ಗೌತಮಸ್ಯೇದಮಂಗಿರಾ ವೈ ಮಹಾತಪಾಃ ।
ಗುರುಭಿಃ ಸಮನುಜ್ಞಾತಃ ಕಾಶ್ಯಪೇನ ಚ ಧೀಮತಾ ॥೬೬॥

ಈ ವಿದ್ಯೆಯನ್ನು ಮಹಾತಪಸ್ವಿಗಳಾದ ಅಂಗಿರಸರು ಗುರುಗಳ ಅನುಮತಿಯನ್ನು ಪಡೆದು, ಮೇಧಾವಿಯಾದ ಕಾಶ್ಯಪರ ಅನುಮತಿಯನ್ನು ಪಡೆದು ಗೌತಮರಿಗೆ ಕೊಟ್ಟರು.

ಮಹರ್ಷೀಣಾಮಿದಂ ಜಪ್ಯಂ ಪಾವನಾನಾಂ ತಥೋತ್ತಮಮ್ ।
ಜಪಂಶ್ಚಾಭ್ಯುತ್ಥಿತಃ ಶಶ್ವನ್ನಿರ್ಮಲಃ ಸ್ವರ್ಗಮಾಪ್ನುಯಾತ್ ॥೬೭॥

ಇದು ಮಹರ್ಷಿಗಳು ಜಪಿಸಲು ಯೋಗ್ಯವಾದುದು. ಪವಿತ್ರವಾದುದರಲ್ಲಿ ಅತ್ಯಂತ ಪವಿತ್ರವಾದುದು. ಇದನ್ನು ಪ್ರಾತಃಕಾಲದಲ್ಲಿ ಯಾವಾಗಲೂ ಜಪಿಸುವವನು ನಿರ್ಮಲನಾಗಿ ಸ್ವರ್ಗವನ್ನು ಹೊಂದುತ್ತಾನೆ.

ಇದಂ ಯಶ್ಚಾಪಿ ಶೃಣುಯಾದ್ ರಹಸ್ಯಂ ತ್ವಂಗಿರೋಮತಮ್ ।
ಉತ್ತಮೇ ಚ ಕುಲೇ ಜನ್ಮ ಲಭೇಜ್ಜಾತಿಂ ಚ ಸಂಸ್ಮರೇತ್ ॥೬೮॥

ಅಂಗಿರಸರಿಗೆ ಅಭಿಪ್ರೇತವಾದ ಈ ರಹಸ್ಯವನ್ನು ಯಾವನು ಕೇಳುತ್ತಾನೆಯೋ ಅವನು ಉತ್ತಮ ಕುಲದಲ್ಲಿ ಜನ್ಮವನ್ನು ಪಡೆದು ಪೂರ್ವಜನ್ಮದ ಸ್ಮರಣೆಯನ್ನು ಹೊಂದುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನ-ಧರ್ಮೇ ಅಂಗಿರಸತೀರ್ಥಯಾತ್ರಾವರ್ಣನಂ ನಾಮ ಷಟ್‌ಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಐವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ವಿಷ್ಣುರ್ಯಜ್ಞಸ್ತಿ ಜ್ಯತೇ ಚಾಪಿ ವಿಷ್ಣುಃ
ಕೃಷ್ಣೋ ವಿಷ್ಣುರ್ಯಶ್ಚಕೃತ್ಸ್ನಃ ಪ್ರಭುಶ್ಚ
ಕೃಷ್ಣೋ ವೇದಾಂಗಂ ವೇದವಾದಾಶ್ಚ ಕೃಷ್ಣ
ಏವಂ ಜಾನನ್ ಬ್ರಾಹ್ಮಣೋ ಬ್ರಹ್ಮವಿತಿ ॥

ಯಜ್ಞವೆಂದರೆ ವಿಷ್ಣುವೇ (ಯಜ್ಞವೆಂಬುದು ವಿಷ್ಣುವಿನ ನಾಮ) ಯಜ್ಞದಲ್ಲಿ ಪೂಜಿಸಲ್ಪಡುವವನೂ ವಿಷ್ಣುವೇ. ಕೃಷ್ಣನೇ ವಿಷ್ಣು. ಅವನೇ ಪೂರ್ಣನಾದವನು ಮತ್ತು ಪ್ರಭುವಾದವನು. ವೇದ–ವೇದಾಂಗಗಳು ವೇದವಾದಗಳು ಎಲ್ಲವೂ ಕೃಷ್ಣನೇ (ಎಲ್ಲವೂ ಕೃಷ್ಣನನ್ನೇ ಪ್ರತಿಪಾದಿಸುತ್ತವೆ). ಹೀಗೆ ತಿಳಿದ ಬ್ರಾಹ್ಮಣನು ಪರಬ್ರಹ್ಮನನ್ನು ಹೊಂದುತ್ತಾನೆ.

ISBN: 978-93-88813-35-8